ಕರ್ನಾಟಕ ವಿಧಾನ ಪರಿಷತ್ತು

# ಸರ್ಕಾರಿ ಭರವಸೆಗಳ ಸಮಿತಿ

(2018-2019)

# ನಲವತ್ತೇಳನೆಯ ವರದಿ

ವಿಧಾನ ಪರಿಷತ್ತಿಗೆ ಒಪ್ಪಿಸಿದ ದಿನಾಂಕ: 16.07.2019

ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯ

ವಿಧಾನ ಸೌಧ, ಬೆಂಗಳೂರು – 560 001

**ಪರಿವಿಡಿ**


| | | |
|---|---|---|
| 01 | ಸಮಿತಿಯ ರಚನೆ | I |
| 02 | ಪೀಠಿಕೆ | II |
| 03 | ಮುನ್ನುಡಿ | III |
| 04 | ವರದಿ | 1 ರಿಂದ 642 |

# ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯ

**ವಿಧಾನ ಸೌಧ, ಬೆಂಗಳೂರು-560 001.**

## ಸರ್ಕಾರಿ ಭರವಸೆಗಳ ಸಮಿತಿ
## (2018-2019)

2018-19ನೇ ಸಾಲಿನ ಕರ್ನಾಟಕ ವಿಧಾನ ಪರಿಷತ್ತಿನ ಸರ್ಕಾರಿ ಭರವಸೆಗಳ ಸಮಿತಿಯ ಅಧ್ಯಕ್ಷರು ಹಾಗೂ ಸದಸ್ಯರುಗಳ ವಿವರ ಕೆಳಕಂಡಂತಿದೆ :

### ಸಮಿತಿಯ ರಚನೆ

### ಅಧ್ಯಕ್ಷರು

**ಶ್ರೀ ಬಸವರಾಜ ಹೊರಟ್ಟಿ**
**(01.06.2018ರವರೆಗೆ)**

ಸದಸ್ಯರುಗಳು
ಶ್ರೀಯುತರುಗಳಾದ:

| | | | |
|---|---|---|---|
| 01 | ಕೆ.ಸಿ. ಕೊಂಡಯ್ಯ | 05 | ರಘುನಾಥರಾವ್ ಮಲ್ಕಾಪೂರೆ |
| 02 | ಬಸವರಾಜ ಪಾಟೀಲ್ ಇಟಗಿ | 06 | ಶರಣಪ್ಪ ಮಟ್ಟೂರ |
| 03 | ಕೆ.ಟಿ. ಶ್ರೀಕಂಠೇಗೌಡ | 07 | ಟಿ.ಎ. ಶರವಣ |
| 04 | ಭಾನುಪ್ರಕಾಶ | 08 | ಬಿ.ಎಸ್. ಸುರೇಶ್ |

**ವಿಧಾನ ಪರಿಷತ್ತಿನ ಅಧಿಕಾರಿಗಳು:**
**ಶ್ರೀಮತಿ / ಶ್ರೀಯುತರುಗಳಾದ:**

| | | | |
|---|---|---|---|
| 1. | ಕೆ.ಆರ್. ಮಹಾಲಕ್ಷ್ಮಿ | : | ಕಾರ್ಯದರ್ಶಿ (ಪ್ರ) |
| 2. | ಎಸ್. ನಿರ್ಮಲ | : | ಉಪ ಕಾರ್ಯದರ್ಶಿ |
| 3. | ಮೋಹನ್ ಕೆ. ಮುಗಳಿ | : | ಅಧೀನ ಕಾರ್ಯದರ್ಶಿ |

**ಸಮಿತಿಯ ರಚನೆ**

**ಅಧ್ಯಕ್ಷರು**

**ಶ್ರೀ ಕೆ.ಸಿ.ಕೊಂಡಯ್ಯ**

**(೦9.೦8.2018 ರಿಂದ)**

ಸದಸ್ಯರುಗಳು

**ಶ್ರೀಮತಿ / ಶ್ರೀಯುತರುಗಳಾದ:**

| | | | |
|---|---|---|---|
| ೦1 | ಡಾ.ತೇಜಸ್ವಿನಿಗೌಡ | ೦5 | ಅರುಣ ಶಹಾಪುರ |
| ೦2 | ಎಸ್.ರವಿ | ೦6 | ಶರಣಪ್ಪ ಮಟ್ಟೂರ |
| ೦3 | ಕೆ.ಟಿ. ಶ್ರೀಕಂಠೇಗೌಡ | ೦7 | ಎಂ.ಎ.ಗೋಪಾಲಸ್ವಾಮಿ |
| ೦4 | ಕೆ.ವಿ.ನಾರಾಯಣಸ್ವಾಮಿ | ೦8 | ಕೆ.ಹರೀಶ್ ಕುಮಾರ್ |

9. ಯು.ಬಿ.ವೆಂಕಟೇಶ್(ದಿನಾಂಕ 10.05.2019 ರಿಂದ)

**ವಿಧಾನ ಪರಿಷತ್ತಿನ ಅಧಿಕಾರಿಗಳು:**

**ಶ್ರೀಮತಿ / ಶ್ರೀಯುತರುಗಳಾದ:**

| | | | |
|---|---|---|---|
| 1. | ಕೆ.ಆರ್. ಮಹಾಲಕ್ಷ್ಮಿ | : | ಕಾರ್ಯದರ್ಶಿ (ಪ್ರ) |
| 2. | ಎಸ್.ನಿರ್ಮಲ | : | ಜಂಟಿ ಕಾರ್ಯದರ್ಶಿ |
| 2. | ಸಿ.ಶಿವಮೂರ್ತಿ | : | ಉಪ ಕಾರ್ಯದರ್ಶಿ |
| 3. | ಮೋಹನ್ ಕೆ. ಮುಗಳಿ | : | ಅಧೀನ ಕಾರ್ಯದರ್ಶಿ |

# ಪೀಠಿಕೆ

ಕರ್ನಾಟಕ ವಿಧಾನ ಪರಿಷತ್ತಿನ ಸರ್ಕಾರಿ ಭರವಸೆಗಳ ಸಮಿತಿಯ ಅಧ್ಯಕ್ಷನಾದ ನಾನು ಸಮಿತಿಯ ಪರವಾಗಿ 2018-2019ನೇ ಸಾಲಿನ ಸಮಿತಿಯ 47ನೆಯ ವರದಿಯನ್ನು ಮಂಡಿಸಲು ಹರ್ಷಿಸುತ್ತೇನೆ.

2018-19ನೇ ಸಾಲಿನಲ್ಲಿ ರಚಿಸಲಾದ ವಿಧಾನ ಪರಿಷತ್ತಿನ ಭರವಸೆಗಳ ಸಮಿತಿಯು ತನ್ನ ಪ್ರಾರಂಭಿಕ ಸಭೆಯನ್ನು ದಿನಾಂಕ: 09.08.2018ರಂದು ನಡೆಸಿ ದಿನಾಂಕ 16.8.2018 ರಿಂದ 04.07.2019ರವರೆಗೆ ಹಾಗೂ ಈ ಹಿಂದಿನ ಸಮಿತಿಯು ದಿನಾಂಕ 01.01.2018ರಿಂದ 01.06.2018ರವರೆಗೆ ಪರಿಶೀಲಿಸಿದ ಭರವಸೆಗಳ ವಿವರ ಈ ಕೆಳಕಂಡಂತಿದೆ.

## ಸಮಿತಿ ಸಭೆಗಳ ವಿವರ ಕೆಳಕಂಡಂತಿದೆ

| ಕ್ರಮ ಸಂಖ್ಯೆ | ಇಲಾಖೆಗಳ ಹೆಸರು | ದಿನಾಂಕ | ಸಮಿತಿ ಸಭೆಯಲ್ಲಿ ಚರ್ಚಿಸಲಾದ ಬಾಕಿ ಭರವಸೆಗಳು | ಮುಕ್ತಾಯಗೊಂಡ ಭರವಸೆ | ಪುಟ ಸಂಖ್ಯೆ |
|---|---|---|---|---|---|
| 1 | ಪಶುಸಂಗೋಪನೆ ಮತ್ತು ಮೀನುಗಾರಿಕೆ | 02.01.2018<br>30.08.2018 | 14<br>11 | 13<br>09 | 1-23 |
| 2 | ನಗರಾಭಿವೃದ್ಧಿ | 16.01.2018<br>01.06.2018<br>16.10.2018<br>07.03.2019 | 30<br>34<br>50 | 27<br>21<br>07<br>07 | 24-109 |
| 3 | ವಾರ್ತಾ ಮತ್ತು ಪ್ರಚಾರ | 23.01.2018 | 09 | 02 | 110-113 |
| 4 | ಕನ್ನಡ ಮತ್ತು ಸಂಸ್ಕೃತಿ, | 09.03.2018 | 08 | 05 | 114-119 |
| 5 | ಅರಣ್ಯ ಜೀವಿ ಶಾಸ್ತ್ರ ಮತ್ತು ಪರಿಸರ | 02.03.2018<br>24.03.2018<br>22.11.2018 | 21<br>01<br>09 | 18<br>-<br>08 | 120-149 |

| | | | | | |
|---|---|---|---|---|---|
| 6 | ಸಣ್ಣ ನೀರಾವರಿ | 06.06.2019 | 17 | 07 | 150-156 |
| 7 | ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ | 16.03.2018<br>01.10.2018<br>20.06.2019 | 08<br>17<br>17 | 01<br>08<br>15 | 157-189 |
| 8 | ಜಲ ಸಂಪನ್ಮೂಲ | 29.11.2018 | 27 | 18 | 190-214 |
| 9 | ಸಹಕಾರ | 23.08.2018 | 14 | 07 | 215-221 |
| 10 | ಆರೋಗ್ಯ ಮತ್ತು ಕುಟುಂಬ ಕಲ್ಯಾಣ | 16.08.2018 | 91 | 33 | 222-256 |
| 11 | ತೋಟಗಾರಿಕೆ | 23.08.2018 | 11 | 04 | 257-260 |
| 12 | ಆಹಾರ ಮತ್ತು ನಾಗರೀಕ ಸರಬರಾಜು ಹಾಗೂ ಗ್ರಾಹಕ ವ್ಯವಹಾರಗಳು | 30.08.2018 | 09 | 08 | 261-272 |
| 13 | ಕಾನೂನು | 06.09.2018 | 06 | 06 | 273-277 |
| 14 | ವೈದ್ಯಕೀಯ ಶಿಕ್ಷಣ | 17.09.2018 | 29 | 20 | 278-306 |
| 15 | ಲೋಕೋಪಯೋಗಿ | 09.10.2018<br>28.02.2019 | 31<br>46 | 24<br>40 | 307-366 |
| 16 | ಕಂದಾಯ | 23.10.2018 | 28 | 26 | 367-393 |
| 17 | ಯುವ ಸಬಲೀಕರಣ ಮತ್ತು ಕ್ರೀಡೆ | 30.10.2018<br>18.01.2019 | 09<br>07 | 02<br>02 | 394-397 |
| 18 | ಕೃಷಿ | 07.11.2018 | 24 | 18+3 | 398-416 |
| 19 | ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ತಂತ್ರಜ್ಞಾನ | 22.11.2018 | 04 | 04 | 417-421 |
| 20 | ಗೃಹ | 04.01.2019 | 28 | 25 | 422-441 |
| 21 | ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ | 11.01.2019 | 06 | 06 | 442-446 |

| | | | | | |
|---|---|---|---|---|---|
| 22 | ಇಂಧನ | 11.01.2019 | 12 | 12 | 447-462 |
| 23 | ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ | 18.01.2019 | 09 | 03 | 463-465 |
| 24 | ಉನ್ನತ ಶಿಕ್ಷಣ | 25.01.2019<br>06.05.2019 | 22<br>31 | 13<br>28 | 466-513 |
| 25 | ಸಾರಿಗೆ | 21.02.2019 | 32 | 30 | 514-538 |
| 26 | ಕಾರ್ಮಿಕ | 06.06.2019 | 10 | 08 | 539-545 |
| 27 | ಸಮಾಜ ಕಲ್ಯಾಣ | 24.09.2018<br>13.05.2019 | 21<br>54 | 18<br>45 | 546-601 |
| 28 | ಪ್ರವಾಸೋದ್ಯಮ | 27.06.2019 | 36 | 31 | 602-623 |
| 29 | ಹಿಂದುಳಿದ ವರ್ಗಗಳ ಕಲ್ಯಾಣ | 09.01.2018 | 01 | - | - |
| 30 | ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ | 29.05.2019 | 19 | 14 | 624-638 |
| **ಚರ್ಚಿಸಲಾದ ಬಾಕಿ ಭರವಸೆಗಳು** | | | 863 | | |
| ಒಟ್ಟು ಮುಕ್ತಾಯಗೊಂಡ ಭರವಸೆಗಳು | | | | 596 | |

ಹಿಂದಿನ ಸಮಿತಿ ಸಭೆಯಲ್ಲಿ ಪರಿಶೀಲಿಸಿ ಮುಕ್ತಾಯಗೊಳಿಸಿದ ಒಟ್ಟು 86 ಭರವಸೆಗಳು ಸೇರಿದಂತೆ 2018-2019ನೇ ಸಾಲಿನಲ್ಲಿ ಸಮಿತಿಯು ದಿನಾಂಕ: 01.01.2018 ರಿಂದ 04.07.2019ರವರೆಗೆ ಒಟ್ಟು 863 ಭರವಸೆಗಳನ್ನು ಪರಿಶೀಲಿಸಿ ಆ ಪೈಕಿ ಒಟ್ಟು 43 ಸಭೆಗಳನ್ನು ನಡೆಸಿ, 30 ಇಲಾಖೆಯ 596 ಭರವಸೆಗಳನ್ನು ಮುಕ್ತಾಯಗೊಳಿಸಲಾಗಿರುತ್ತದೆ. ಅಲ್ಲದೆ ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ತಂತ್ರಜ್ಞಾನ ಇಲಾಖೆ, ಕಾನೂನು, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ ಹಾಗೂ ಇಂಧನ ಇಲಾಖೆಯ ಭರವಸೆಗಳನ್ನು ಸರ್ಕಾರವು ಈಡೇರಿಸಿರುವ ಹಿನ್ನಲೆಯಲ್ಲಿ ಸದರಿ ಇಲಾಖೆಯ ಎಲ್ಲಾ ಬಾಕಿ ಭರವಸೆಗಳು ಮುಕ್ತಾಯಗೊಂಡು ಬಾಕಿ ಭರವಸೆಗಳು ಶೂನ್ಯಗೊಂಡಿರುತ್ತದೆ.

ಮೇಲ್ಕಂಡ ದಿನಾಂಕಗಳಲ್ಲಿ ನಡೆದ ಸಮಿತಿಯ ಸಭೆಗಳಿಗೆ ಹಾಜರಾಗಿ ಸಮಿತಿಗೆ ಬೇಕಾದಂತಹ ಅವಶ್ಯಕ ಮಾಹಿತಿಗಳನ್ನು ಒದಗಿಸಿದ ಸರ್ಕಾರದ ಎಲ್ಲಾ ಇಲಾಖೆಗಳ ಅಧಿಕಾರಿಗಳಿಗೆ ಹಾಗೂ ಸಮಿತಿಯ ಸಭೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಿ ಸಹಕರಿಸಿದ ಸಮಿತಿಯ ಎಲ್ಲಾ ಸದಸ್ಯರುಗಳಿಗೂ ಮತ್ತು ವಿಧಾನ ಪರಿಷತ್ತಿನ ಕಾರ್ಯಾಲಯದ ಅಧಿಕಾರಿ ಮತ್ತು ಸಿಬ್ಬಂದಿ ವರ್ಗದವರಿಗೂ ಸಮಿತಿಯು ತನ್ನ ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತದೆ.

ಬೆಂಗಳೂರು,
ದಿನಾಂಕ: 16.7.2019

**ಕೆ.ಸಿ.ಕೊಂಡಯ್ಯ**
ಅಧ್ಯಕ್ಷರು
ಸರ್ಕಾರಿ ಭರವಸೆಗಳ ಸಮಿತಿ
ಕರ್ನಾಟಕ ವಿಧಾನ ಪರಿಷತ್ತು

## ಮುನ್ನುಡಿ

ಕರ್ನಾಟಕ ವಿಧಾನ ಪರಿಷತ್ತಿನಲ್ಲಿ ಮಾನ್ಯ ಸದಸ್ಯರುಗಳು ರಾಜ್ಯದ ಅಭಿವೃದ್ಧಿ ಕಾರ್ಯಗಳ ಬಗ್ಗೆ, ಸರ್ಕಾರದ ಯೋಜನೆಗಳ ಅನುಷ್ಠಾನ ಹಾಗೂ ಪ್ರಗತಿಯ ಬಗ್ಗೆ, ಕಾರ್ಯಾಂಗದಲ್ಲಿನ ವೈಫಲ್ಯತೆ ಹೀಗೆ ಹತ್ತು ಹಲವಾರು ಸಾರ್ವಜನಿಕ ಮಹತ್ವದ ವಿಷಯಗಳ ಬಗ್ಗೆ ಸರ್ಕಾರದೊಂದಿಗೆ ಚರ್ಚಿಸಲು ಹಾಗೂ ಮಾಹಿತಿ ಪಡೆಯಲು ಸದನದಲ್ಲಿ ಪ್ರಶ್ನೆಗಳು/ಸೂಚನೆಗಳು/ನಿಯಮ-72/ನಿಯಮ-330/ವಿಧೇಯಕದ ಮೇಲೆ ಚರ್ಚೆ/ಶೂನ್ಯವೇಳೆ ಪ್ರಸ್ತಾವದ ಮೂಲಕ ಪ್ರಸ್ತಾಪಿಸುವ ವಿಷಯಗಳಿಗೆ ಸದನದಲ್ಲಿ ಮಂತ್ರಿಗಳು ಉತ್ತರವನ್ನು ನೀಡುವಾಗ ಭರವಸೆ/ಆಶ್ವಾಸನೆ/ವಾಗ್ದಾನಗಳನ್ನು ನೀಡುವುದು ರೂಢಿಯಲ್ಲಿರುತ್ತದೆ. ಅಂತಹ ಭರವಸೆ/ಆಶ್ವಾಸನೆ/ವಾಗ್ದಾನಗಳು ಎಷ್ಟರ ಮಟ್ಟಿಗೆ ಸರ್ಕಾರದಿಂದ ಕಾರ್ಯಗತವಾಗಿದೆ, ಕಾರ್ಯಗತವಾಗಿಲ್ಲದಿದ್ದಲ್ಲಿ ಅದಕ್ಕೆ ಕಾರಣ/ನ್ಯೂನತೆ/ಕಾನೂನಿನ ಚೌಕಟ್ಟಿನಡಿಯಲ್ಲಿ ಬರುವ ತೊಡಕುಗಳನ್ನು ಪರಿಹರಿಸಿಕೊಳ್ಳಲು ಕ್ರಮಕೈಗೊಳ್ಳಲಾಗಿದೆಯೇ ಎಂಬುದನ್ನು ಪರಿಶೀಲಿಸಿ ಕಾರ್ಯಾಂಗಕ್ಕೆ ಸೂಕ್ತ ಮಾರ್ಗದರ್ಶನ ನಿರ್ದೇಶನಗಳನ್ನು ನೀಡುತ್ತಾ, ಭರವಸೆಗಳು ಈಡೇರಿದೆಯೇ ಎಂಬುದನ್ನು ಪರಿಶೀಲಿಸಿ ಸದನಕ್ಕೆ ವರದಿ ನೀಡಲು ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯ ವಿಧಾನ ಹಾಗೂ ನಡವಳಿಕೆ ನಿಯಮ 260ರ ಮೇರೆಗೆ ವಿಧಾನ ಪರಿಷತ್ತಿನ ಸರ್ಕಾರಿ ಭರವಸೆಗಳ ಸಮಿತಿಯು ರಚನೆಗೊಂಡಿರುತ್ತದೆ.

ಸದನದಲ್ಲಿ ನೀಡಲಾಗಿರುವ ಭರವಸೆಗಳನ್ನು ಕಾರ್ಯಗತಗೊಳಿಸಲು ಸಮಿತಿಯು ಆಗಿಂದಾಗ್ಗೆ ಸಂಬಂಧಪಟ್ಟ ಇಲಾಖೆಗಳಿಗೆ ರವಾನಿಸಿ ಕ್ರಮ ಕೈಗೊಂಡು ಕೈಗೊಂಡ ಕ್ರಮದ ಮಾಹಿತಿಗಳನ್ನು ಸಮಿತಿಗೆ ಒದಗಿಸಲು ಮೂರು ತಿಂಗಳ ಕಾಲಾವಧಿಯನ್ನು ಗೊತ್ತುಪಡಿಸಿರುತ್ತದೆ. ಆದರೆ, ಈವರೆಗೂ ಯಾವುದೇ ಭರವಸೆಗಳು ನಿಗದಿತ ಮೂರು ತಿಂಗಳ ಅವಧಿಯಲ್ಲಿ ಈಡೇರಿಸಿದ ನಿದರ್ಶನಗಳಿರುವುದಿಲ್ಲ. **ಸದನದಲ್ಲಿ ಮಾನ್ಯ ಮಂತ್ರಿಗಳು ಉತ್ತರಿಸುವಾಗ ನೀಡುವ ಆಶ್ವಾಸನೆಗಳನ್ನು ಆಯಾಯ ದಿನ ಸದನದಲ್ಲಿ ಹಾಜರಿರುವ ಇಲಾಖಾಧಿಕಾರಿಗಳು ಸಚಿವರು ನೀಡುವ ಭರವಸೆಗಳನ್ನು ಗುರುತುಮಾಡಿಕೊಂಡು ಸದರಿ ಭರವಸೆಗಳ ಕಾರ್ಯಗತಕ್ಕಾಗಿ ಪ್ರಾಮಾಣಿಕ ಪ್ರಯತ್ನ ಮಾಡಿರುವ ಯಾವುದೇ ಒಂದೂ ನಿದರ್ಶನವಿಲ್ಲ. ಇದನ್ನು ಕಡ್ಡಾಯವಾಗಿ ಎಲ್ಲಾ ಇಲಾಖೆಗಳು ಪಾಲಿಸಲು ಸಮಿತಿಯು ಈ ಮೂಲಕ ಶಿಫಾರಸ್ಸು ಮಾಡುತ್ತದೆ.** ಇದರಿಂದ ನಿಗದಿತ ಅವಧಿಯೊಳಗೆ ನೀಡಿರುವ ಭರವಸೆಗಳನ್ನು ಕಾರ್ಯಗತಗೊಳಿಸಲು ಸಾಧ್ಯವಾಗುತ್ತದೆ. ಆದರೆ, ನನ್ನ ಅನುಭವದಲ್ಲಿ ಹೇಳುವುದಾದರೆ ಸಮಿತಿಯು ಸಭೆ ಕರೆದಾಗ ಮಾತ್ರ ಭರವಸೆಗಳ ಕಡೆಗೆ ಇಲಾಖಾಧಿಕಾರಿಗಳು ಗಮನಹರಿಸುತ್ತಿದ್ದಾರೆ. ಈ ಪ್ರವೃತ್ತಿಯಿಂದ ಕೆಲವೊಂದು ಭರವಸೆಗಳು ಹತ್ತು-ಹದಿನೈದು ವರ್ಷಗಳಾದರೂ ಸಹ ಈಡೇರದೆ ಭರವಸೆಗಳಾಗಿಯೇ ಉಳಿಯಲು ಕಾರಣವಾಗಿದೆ. ಧೀರ್ಘಕಾಲ ಭರವಸೆಗಳು ಬಾಕಿ ಉಳಿಯುವುದರಿಂದ, ಆಶ್ವಾಸನೆ ನೀಡುವ ಸರ್ಕಾರ ಮತ್ತು ಜಾರಿಗೊಳಿಸುವ ಸರ್ಕಾರಗಳು ಬೇರೆ ಬೇರೆಯಾಗಿ ಅವುಗಳ ನಿಲುವುಗಳು ಸಹ ಬೇರೆ ಬೇರೆಯಾಗುವುದರಿಂದ ಭರವಸೆಗಳನ್ನು ಈಡೇರಿಸಲು ಹಿನ್ನಡೆಯಾಗುತ್ತದೆ. ಯೋಜನೆಗಳನ್ನು ಅನುಷ್ಠಾನಗೊಳಿಸಲು ಧೀರ್ಘ ಕಾಲ ತೆಗೆದುಕೊಂಡಲ್ಲಿ ಸದರಿ ಯೋಜನೆಗೆ ಮೀಸಲಿಟ್ಟ ಅನುದಾನದ ವೆಚ್ಚವು ನಾಲ್ಕು ಪಟ್ಟು ಹೆಚ್ಚಾಗಿರುವುದನ್ನು ಸಹ ಸಮಿತಿಯು ಗಮನಿಸಿರುತ್ತದೆ.

ಭರವಸೆಗಳ ಸಮಿತಿಯ ಇಲಾಖಾವಾರು ಬಾಕಿ ಇರುವ ಭರವಸೆಗಳನ್ನು ಆಯಾ ಇಲಾಖೆಯವರು ವಾರಕ್ಕೊಮ್ಮೆ ಸಭೆಯನ್ನು ಏರ್ಪಡಿಸಿ ಸಿದ್ಧತೆ ಮಾಡಿಕೊಳ್ಳಲು ಅನುಕೂಲವಾಗುವಂತೆ ಪೂರ್ವಭಾವಿಯಾಗಿ ಒಂದು ತಿಂಗಳವರೆಗೆ ಸಮಯಾವಕಾಶವನ್ನು ನೀಡಲಾಗುತ್ತಿದೆ. ತದನಂತರ ಇಲಾಖಾ ಪ್ರಧಾನ ಕಾರ್ಯದರ್ಶಿಗಳಿಗೆ ನಿಗದಿತ ಅವಧಿಯಲ್ಲಿ ಉತ್ತರವನ್ನು ಒದಗಿಸುವಂತೆ ಕೋರಿ, ಅರೆ ಸರ್ಕಾರಿ ಪತ್ರಗಳನ್ನು ಬರೆಯಲಾಗುತ್ತಿದೆ. ಇದರಿಂದ ಸಂಬಂಧಪಟ್ಟ ಭರವಸೆಗಳ ಪ್ರಗತಿ ಕಾರ್ಯ ಯಾವ ಹಂತದಲ್ಲಿದೆ ಎಂಬ ಬಗ್ಗೆ ಪರಾಮರ್ಶಿಸಿಕೊಂಡು ಹಿಂದಿನ ಸಭೆಗಳಲ್ಲಿ ನಡೆದ ಚರ್ಚೆಯ ಆಧಾರದ ಮೇಲೆ

ಕೈಗೊಳ್ಳಬೇಕಾಗಿರುವ ಕ್ರಮಗಳ ಬಗ್ಗೆ ಪರಿಶೀಲಿಸಿ ಸಮಿತಿಗೆ ಉತ್ತರವನ್ನು ಒದಗಿಸಲು ಇಲಾಖೆಯವರಿಗೂ ಸಹ ಸಾಕಷ್ಟು ಸಮಯಾವಕಾಶವನ್ನು ನೀಡಲಾಗುತ್ತಿದೆ.

ರಾಜ್ಯದ ಸರ್ವತೋಮುಖ ಅಭಿವೃದ್ಧಿಗಾಗಿ ಕಾರ್ಯಾಂಗ ಮತ್ತು ಶಾಸಕಾಂಗವು ಪರಸ್ಪರ ಸಹಕಾರ ಮತ್ತು ಗೌರವದೊಂದಿಗೆ ಕಾರ್ಯನಿರ್ವಹಿಸಬೇಕಾಗಿರುತ್ತದೆ. ಈ ನಿಟ್ಟಿನಲ್ಲಿ ಸಮಿತಿ ಸಭೆಯ ಕಾರ್ಯ ಕಲಾಪಗಳು ನಡೆದಲ್ಲಿ ಸರ್ಕಾರದ ಯೋಜನೆಗಳು ಅನುಷ್ಠಾನಗೊಂಡು ರಾಜ್ಯದ ಪ್ರಗತಿಗೆ ಸಹಕಾರಿಯಾಗುತ್ತದೆ ಎಂಬುದನ್ನು ಮನಗಾಣಬೇಕು.

ಕರ್ನಾಟಕ ವಿಧಾನ ಮಂಡಲದ ಸಮಿತಿಗಳು ಸದನದ ಮುಂದುವರೆದ ಭಾಗವಾಗಿರುವುದರಿಂದ, ರಾಜ್ಯದ ಹಿತದೃಷ್ಟಿ ಹಾಗೂ ಸಾರ್ವಜನಿಕ ಮಹತ್ವವುಳ್ಳ ವಿಷಯಗಳನ್ನು ಚರ್ಚಿಸಲು ಸದನದಷ್ಟೇ ಗಾಂಭೀರ್ಯತೆ ಸಮಿತಿ ಸಭೆಗಳಿಗಿರುತ್ತದೆ. ಒಂದು ಸಭೆ ನಡೆಸಲು ಸರ್ಕಾರಕ್ಕೆ ಸುಮಾರು 5 ಲಕ್ಷ ರೂಪಾಯಿಗಳಷ್ಟು ಖರ್ಚು ಬರುತ್ತದೆ. ಸಮಿತಿಯ ಸಭೆಗಳು ಸರಿಯಾಗಿ ನಡೆಯದೆ ಮುಂದೂಡಿದಲ್ಲಿ ಇದರಿಂದ ಸರ್ಕಾರದ ಬೊಕ್ಕಸಕ್ಕೆ ಅಪಾರವಾದ ನಷ್ಟವುಂಟಾಗುತ್ತದೆ ಈ ಬಗ್ಗೆ ಇಲಾಖಾಧಿಕಾರಿಗಳು ಕಾಳಜಿವಹಿಸಿ ತಮ್ಮ ಕರ್ತವ್ಯಗಳನ್ನು ನಿರ್ವಹಿಸಬೇಕೆಂಬುದು ಸಮಿತಿಯ ಅನಿಸಿಕೆ.

ಸರ್ಕಾರದ ವಿವಿಧ ಇಲಾಖೆಗಳಲ್ಲಿ ನಡೆದಿರುವ ಭ್ರಷ್ಟಾಚಾರ/ಅವ್ಯವಹಾರ/ಹಣ ದುರ್ಬಳಕೆ ಪ್ರಕರಣಗಳಿಗೆ ಸಂಬಂಧಿಸಿದ ಭರವಸೆಗಳನ್ನು ಅವಲೋಕಿಸಿದಾಗ ಪ್ರತಿಯೊಂದು ಇಲಾಖೆಗಳಲ್ಲಿಯೂ ಸಹ ಕೋಟಿ ಕೋಟಿ ರೂಪಾಯಿಗಳಷ್ಟು ಭ್ರಷ್ಟಾಚಾರ/ಅವ್ಯವಹಾರ/ಹಣ ದುರ್ಬಳಕೆ ಪ್ರಕರಣಗಳು ನಡೆದಿದ್ದು, ಸದನದಲ್ಲಿ ಪ್ರಸ್ತಾಪಿಸುವವರೆಗೂ ಇಲಾಖಾಧಿಕಾರಿಗಳು ಇದನ್ನು ಗಮನಿಸಿ ತನಿಖೆಯನ್ನು ಕೈಗೊಳ್ಳದಿರುವುದು ಪ್ರಮುಖ ಅಂಶವಾಗಿರುತ್ತದೆ. ಸದರಿ ಪ್ರಕರಣಗಳನ್ನು ನಿಯಮಾವಳಿಗಳ ರೀತ್ಯಾ ಸಕಾಲದಲ್ಲಿ ನಿರ್ವಹಿಸದೆ ವಿಚಾರಣಾ ಹಂತದಲ್ಲಿಯೆ ವಿಳಂಬ ನೀತಿಯನ್ನು ಅನುಸರಿಸುತ್ತಿರುವುದು ಪ್ರಕರಣಗಳ ತನಿಖೆಗೆ ಬೇಕಾದಂತಹ ಮೂಲ ಕಡತ/ದಾಖಲೆಗಳು ನಾಪತ್ತೆಯಾಗಿರುವುದು, ಕೆಲವೊಂದು ಇಲಾಖೆಯಲ್ಲಿ ಕಂಡುಬರುತ್ತದೆ. ಉದಾಹರಣೆಗೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ವ್ಯಾಪ್ತಿಗೆ ಒಳಪಡುವ ಭರವಸೆ ಸಂಖ್ಯೆ 1761– ರಾಜ್ಯದಲ್ಲಿರುವ ನಗರಸಭೆ ಮತ್ತು ಪುರಸಭೆಗಳಲ್ಲಿ ನಡೆದ ಅವ್ಯವಹಾರಗಳ ಹಗರಣಕ್ಕೆ ಸಂಬಂಧಪಟ್ಟ ಕಡತ ಸಂಖ್ಯೆ ಯುಡಿಡಿ 21 ಡಿಎಂಕೆ 2012(ಪಿ) ಕಡತ ಲಭ್ಯವಿಲ್ಲದಿರುವ ಬಗ್ಗೆ ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಗೆ ಸಂಬಂಧಿಸಿದ ಭರವಸೆ ಸಂಖ್ಯೆ 3366 ಮತ್ತು 3674– ಬೆಂಗಳೂರು ನಗರದ ಜಕ್ಕೂರಿನ ಸರ್ಕಾರಿ ವೈಮಾನಿಕ ತರಬೇತಿ ಶಾಲೆಯಲ್ಲಿ ಹಾರಾಟ ಹಾಗೂ ನಿರ್ವಹಣೆಯ ಹೊರಗುತ್ತಿಗೆ ನೀಡುವ ಕಡತದ ಮೂಲ ದಾಖಲೆಗಳನ್ನು ನಾಶಪಡಿಸಿರುವುದು. ಇಲ್ಲಿ ಆಯಾ ಸಂದರ್ಭದಲ್ಲಿ ಕಡತಗಳನ್ನು ನಿರ್ವಹಿಸುವ ಕಾರ್ಯನಿರ್ವಾಹಕರನ್ನು ಜವಾಬ್ಧಾರರನ್ನಾಗಿ ಮಾಡಿ ಕಠಿಣ ಕ್ರಮ ಜರುಗಿಸಿದ್ದರೆ ಕಡತ ಆ ಹಂತದಲ್ಲೇ ಪತ್ತೆ ಹಚ್ಚಬಹುದಿತ್ತು ಅಥವಾ ಕಡತಗಳ ಚಲನವಲನ ವಹಿಯಿಂದ ಸ್ಪಷ್ಟ ಮಾಹಿತಿ ಪಡೆದು ಕಡತ ಎಲ್ಲಿ ಯಾರ ಹಂತದಲ್ಲಿ ಮಾಯವಾಗಿದೆ ಎಂಬುದನ್ನು ಪತ್ತೆ ಹಚ್ಚಬಹುದಿತ್ತು ಆದರೆ ಇಂತಹ ಯಾವುದೇ ಪ್ರಯತ್ನಗಳನ್ನು ಮಾಡದೆ 2009ರ ಭರವಸೆಗಳು ಭರವಸೆಯಾಗಿಯೇ ಉಳಿಯುವಂತಾಗಿದೆ. ಇಂತಹ ಪ್ರಕರಣಗಳಲ್ಲಿ ತನಿಖೆ ಕೈಗೊಳ್ಳಲು ವಿಳಂಬ ಮಾಡಿದ ಅಧಿಕಾರಿ ನೌಕರರ ಮೇಲೂ ಸಹ ಶಿಸ್ತು ಕ್ರಮ ಜರುಗಿಸಲು ಸಮಿತಿ ಶಿಫಾರಸ್ಸು ಮಾಡುತ್ತದೆ. ಈ ಹಿಂದಿನ ವರದಿಯಲ್ಲೂ ಸಹ ಇಂತಹ **ವಿಚಾರ ಸಮಿತಿಯ ಗಮನಕ್ಕೆ ಬಂದಾಗ ಈ ಬಗ್ಗೆ ಕ್ರಮ ಕೈಗೊಳ್ಳಲು ತಿಳಿಸಿದ್ದು, ಇದುವರೆವಿಗೂ ಕ್ರಮ ಕೈಗೊಂಡಿರುವುದಿಲ್ಲ**. ಕೆಲವೊಂದು ಪ್ರಕರಣಗಳಲ್ಲಿ ಲೋಕಾಯುಕ್ತಕ್ಕೆ ವಹಿಸಿ ಇಲಾಖೆಯಿಂದ ಯಾವುದೇ ಕ್ರಮ ಕೈಗೊಳ್ಳದೆ ಪ್ರಕರಣಗಳನ್ನು ವರ್ಷಾನುಗಟ್ಟಲೆ ತಳ್ಳಿರುವುದು. ಇದಲ್ಲದೇ ತಪ್ಪಿತಸ್ಥ ಅಧಿಕಾರಿ/ನೌಕರರ ಮೇಲೆ

ಯಾವುದೇ ಶಿಸ್ತು ಕ್ರಮಕೈಗೊಳ್ಳದೆ ಭ್ರಷ್ಟರು ಬಡ್ತಿ ಹಾಗೂ ನಿವೃತ್ತಿ ಸೇವಾ ಸೌಲಭ್ಯಗಳನ್ನು ಪಡೆದುಕೊಳ್ಳುವ ಹಂತದವರೆಗೆ ಪ್ರಕರಣಗಳನ್ನು ಮುಂದೂಡಲು ಸಹಕರಿಸಿರುವಂತಹ ಪ್ರಕರಣಗಳು ಶೇಕಡ 99% ರಷ್ಟು ಇವೆ. ಇಂತಹ ಪ್ರಕರಣಗಳನ್ನು ನಿಭಾಯಿಸಲು ಸರ್ಕಾರಿ ನೌಕರನ ದುರ್ನಡತೆ ಇಲಾಖಾ ನಿಯೊಮವಳಿಗಳ ಅಡಿ ದುರ್ನಡತೆಯಾಗಿ ಕ್ರಿಮಿನಲ್ ಕಾನೂನಿನಡಿ ಅಪರಾಧವಾದರೆ ಇಲಾಖಾ ಶಿಸ್ತು ಕ್ರಮ ಮತ್ತು ಕ್ರಿಮಿನಲ್ ನಡವಳಿಗಳನ್ನು ಒಟ್ಟೊಟ್ಟಿಗೆ ನಡೆಸುವುದು ಅವಶ್ಯಕ. ನಿವೃತ್ತ ನೌಕರರ ವಿರುದ್ಧ ಕೆ.ಸಿ.ಎಸ್.ಆರ್. ನಿಯಮ 214(2) (ಬಿ) (2)ರ ಅನ್ವಯ ಇಲಾಖಾ ವಿಚಾರಣೆಗಳನ್ನು ನೌಕರರು ಸೇವೆಯಲ್ಲಿದ್ದಾಗ ಹೂಡದಿದ್ದರೆ, ನಿವೃತ್ತಿ ಹೊಂದಿದ ನಾಲ್ಕು ವರ್ಷಗಳ ತರುವಾಯ ಹೂಡತಕ್ಕದ್ದಲ್ಲ ಎಂಬುದಾಗಿರುತ್ತದೆ. ಕೆ.ಸಿ.ಎಸ್.ಆರ್. ನಿಯಮ 214(ಎ) ಪ್ರಕಾರ ನಿವೃತ್ತಿ ನೌಕರನ ವಿರುದ್ಧ ಶಿಸ್ತು/ನ್ಯಾಯಿಕ ನಡವಳಿಕೆಗಳು ಅಂತ್ಯವಾಗುವವರೆಗೆ ನಿವೃತ್ತಿ ಉಪಧಾನವನ್ನು ಸಂದಾಯ ಮಾಡತಕ್ಕದ್ದಲ್ಲ, ಕೆ.ಸಿ.ಎಸ್.ಆರ್.ನ 376(7)ರ ಪ್ರಕಾರ ನಿವೃತ್ತಿ ಸರ್ಕಾರಿ ನೌಕರನ ವಿರುದ್ಧ ಶಿಸ್ತು/ನ್ಯಾಯಾಂಗ ಕ್ರಮದಲ್ಲಿ ಅಂತಿಮ ತೀರ್ಮಾನವಾಗಿ, ಅಂತಿಮವಾಗಿ ನಿವೃತ್ತಿ ವೇತನ ಮಂಜೂರು ಆಗುವವರೆಗೆ ನಿವೃತ್ತಿ ವೇತನದ ಪರಿವರ್ತಿತ ಮೌಲ್ಯವನ್ನು ಮಂಜೂರು ಮಾಡುವಂತಿಲ್ಲ. ಇದಕ್ಕೆ ಸಂಬಂಧಿಸಿದಂತೆ ಆಗಸ್ಟ್, 2013ರಲ್ಲಿ ಸರ್ವೋಚ್ಚ ನ್ಯಾಯಾಲಯ ಜಾರ್ಖಂಡ್ ರಾಜ್ಯದ ವಿರುದ್ಧ ಜಿತೇಂದರ್ ಕುಮಾರ್ ಶ್ರೀವಾತ್ಸವ ಪ್ರಕರಣದ ತೀರ್ಪಿನಲ್ಲಿ ನಿವೃತ್ತಿ ವೇತನ ಸೇವಾವಧಿಯಲ್ಲಿ ನೌಕರ ಗಳಿಸಿದ ಆಸ್ತಿ, ಅದರಿಂದ, ಶಿಸ್ತು/ಕ್ರಿಮಿನಲ್ ನಡವಳಿಗಳು ಬಾಕಿ ಇದೆ ಎಂಬ ಕಾರಣಕ್ಕೆ ನಿವೃತ್ತಿ ವೇತನ ತಡೆಯುವಂತಿಲ್ಲ. ಆದರೆ, ಸಂಬಂಧಪಟ್ಟ ಸೇವಾ ನಿಯಮದಲ್ಲಿ ಅವಕಾಶವಿದ್ದರೆ "ನಿವೃತ್ತಿ ಸೌಲಭ್ಯಗಳನ್ನು ಶಿಸ್ತು/ಕ್ರಿಮಿನಲ್ ನಡವಳಿಗಳ ಫಲಿತಾಂಶಕ್ಕೆ ಒಳಪಟ್ಟು ತಡೆಹಿಡಿಯಬಹುದೆಂದು ಹೇಳಲಾಗಿದೆ". [ಕೆ.ಸಿ.ಎಸ್.ಆರ್. ನಿಯಮ 118ಎ(4), 214ಎ ಮತ್ತು 376(7)]

ಇಂತಹ ಪ್ರಕರಣಗಳನ್ನು ಒಟ್ಟಾರೆ ವಿಳಂಬ ಮಾಡುವುದರಿಂದ ಭ್ರಷ್ಟ ಅಧಿಕಾರಿಗಳು ಎಸಗಿರುವ ಆರೋಪ ಸಾಬೀತಾಗಿದ್ದರೂ ಸಹ ಕ್ರಮ ಕೈಗೊಳ್ಳದಿರುವಂತಹ ಸಂದರ್ಭಗಳನ್ನು ತಂದೊಡ್ಡಿರುತ್ತಾರೆ. ಕೆಸಿಎಸ್‌ಆರ್ ನಿಯಮ (214)(3)ರಲ್ಲಿ ಹಾಗೂ ಸಿಆರ್‌ಪಿಸಿ ಕಲಂ 368 ರಲ್ಲಿ ಆರೋಪಿತ ನೌಕರನು ನಿವೃತ್ತಿ ನಂತರವೂ ಸಹ ಆರೋಪ ಸಾಬೀತಾದ ಸಂದರ್ಭದಲ್ಲಿ ನಷ್ಟದ ಹಣವನ್ನು ವಸೂಲು (recovery) ಮಾಡಬಹುದೆಂದು ಸರ್ವೋಚ್ಚ ನ್ಯಾಯಾಲಯದ ಆದೇಶವಿರುತ್ತದೆ. ಅಲ್ಲದೆ ಲೋಕಾಯುಕ್ತಕ್ಕೆ ವಹಿಸಲಾದ ಪ್ರಕರಣಗಳು ಸುಮಾರು 15-20 ವರ್ಷಗಳಾದರೂ ಸಹ ತನಿಖೆ ಪೂರ್ಣಗೊಳ್ಳದೆ ಬಾಕಿಯಿರುತ್ತದೆ. ಇಲಾಖೆಯಲ್ಲಿನ ಭ್ರಷ್ಟಾಚಾರದ ಪ್ರಕರಣಗಳನ್ನು ಲೋಕಾಯುಕ್ತ ತನಿಖೆಗೆ ವಹಿಸುತ್ತಿರುವುದೇ ಭ್ರಷ್ಟ ಅಧಿಕಾರಿ/ನೌಕರರುಗಳಿಗೆ ಇದೊಂದು ವರದಾನವಾಗಿದೆ ಆದ್ದರಿಂದ ಈ ಬಗ್ಗೆ ಲೋಕಾಯುಕ್ತ ನಿಯಮಗಳಿಗೂ ಸೂಕ್ತ ತಿದ್ದುಪಡಿ ತರಲು ಸಮಿತಿ ತನ್ನ ಈ ಹಿಂದಿನ ವರದಿಯಲ್ಲಿ ಶಿಫಾರಸ್ಸು ಮಾಡಿರುತ್ತದೆ. ಆದರೆ ಈವರೆಗೆ ಸರ್ಕಾರ ಕ್ರಮ ಜರುಗಿಸದಿರುವುದಕ್ಕೆ ಸಮಿತಿಯು ತನ್ನ ಅಸಮಾಧಾನವನ್ನು ವ್ಯಕ್ತಪಡಿಸುತ್ತದೆ. ಉದಾಹರಣೆಗೆ: ಉಡುಪಿ ನಗರಸಭೆಯಲ್ಲಿ ಕನಿಷ್ಟ ಟೆಂಡರ್ ಹೆಸರಿನಲ್ಲಿ ಮಾರುಕಟ್ಟೆ ಬೆಲೆಗಿಂತ 3 ರಿಂದ 6 ಪಟ್ಟು ಪಾಲು ಹೆಚ್ಚು ಬೆಲೆ ನೀಡಿ ಸರಕು ಖರೀದಿಯಲ್ಲಿ ನಡೆದ ಭ್ರಷ್ಟಾಚಾರ (ಭರವಸೆ ಸಂಖ್ಯೆ 1267).

ಕೆಲವೊಂದು ಪ್ರಕರಣಗಳಲ್ಲಿ ಪ್ರಥಮ ತನಿಖಾ ವರದಿಯಲ್ಲಿ ಭ್ರಷ್ಟಾಚಾರ ಎಸಗಿರುವ ಆರೋಪ ಸಾಬೀತಾಗಿದ್ದರೂ ತದನಂತರ, ಲೋಕಾಯುಕ್ತ/ನ್ಯಾಯಾಲಯದಲ್ಲಿ ಬಾಕಿಯಿರುವಂತಹ ಪ್ರಕರಣಗಳಿಗೆ ಸಂಬಂಧಪಟ್ಟಂತೆ ಇಲಾಖೆಯಿಂದ ಕಾಲಕಾಲಕ್ಕೆ ತನಿಖೆಗೆ ಬೇಕಾದ ದಾಖಲೆ/ಮಾಹಿತಿಗಳನ್ನು ಒದಗಿಸದೆ ವಿಳಂಬ ನೀತಿಯನ್ನು ಅನುಸರಿಸುತ್ತಿರುವುದು ಮತ್ತು ನ್ಯಾಯಾಲಯದ ಮೊರೆ ಹೋಗಿ ತಡೆಯಾಜ್ಞೆ

ತಂದಂತಹ ಪ್ರಕರಣಗಳಲ್ಲಿ ತಡೆಯಾಜ್ಞೆಯನ್ನು ತೆರವುಗೊಳಿಸಲು ಸೂಕ್ತ ಸಮಯದಲ್ಲಿ ಸೂಕ್ತ ಕ್ರಮಕೈಗೊಳ್ಳದೆ ಇರುವುದರಿಂದ ಆರೋಪಿತ ಅಧಿಕಾರಿ/ನೌಕರರುಗಳು ನಿರ್ದೋಷಿತರೆಂದು ಪರಿಗಣಿಸಲ್ಪಟ್ಟಿದ್ದು, ಕಾಲಕಾಲಕ್ಕೆ ಬಡ್ತಿ ಹಾಗೂ ನಿವೃತ್ತಿ ಹಾಗೂ ಸೇವಾ ಸೌಲಭ್ಯಗಳನ್ನು ಪಡೆದಿರುವುದನ್ನು ಸಮಿತಿಯು ಗಂಭೀರವಾಗಿ ಪರಿಗಣಿಸಿದೆ. ಸೂಕ್ತ ಸಮಯದಲ್ಲಿ ಸೂಕ್ತ ಕ್ರಮಕೈಗೊಳ್ಳದೆ ಇರುವ ಅಧಿಕಾರಿ ನೌಕರರನ್ನು ಸಹ ಶಿಸ್ತು ಕ್ರಮಕ್ಕೆ ಗುರಿಪಡಿಸಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.

ವಿಧಾನ ಪರಿಷತ್ತಿನ ಭರವಸೆಗಳ ಸಮಿತಿಯು ಈ ಹಿಂದೆ ನಡೆದ ಸಮಿತಿ ಸಭೆಗಳಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಗೆ ಸಂಬಂಧಿಸಿದ ಬಾಕಿ ಭರವಸೆ ಸಂಖ್ಯೆ 20/1998 "ಬೀದರ್ ಜಿಲ್ಲಾ ಪಂಚಾಯತ್‌ನಲ್ಲಿ ಕೋಟ್ಯಾಂತರ ರೂಪಾಯಿ ಹಣ ದುರುಪಯೋಗವಾಗಿರುವ ಬಗ್ಗೆ" ಚರ್ಚಿಸಿದ ಸಂದರ್ಭದಲ್ಲಿ, ಸದನದಲ್ಲಿ ಚರ್ಚೆಯಾಗಿ, ಸಚಿವರು ಸದನದಲ್ಲಿ ಭರವಸೆ ನೀಡಿ 20 ವರ್ಷಗಳಾದರೂ, ಅವ್ಯವಹಾರದಲ್ಲಿ ಭಾಗಿಯಾಗಿರುವ ಅಧಿಕಾರಿಗಳ ವಿರುದ್ಧ ಕ್ರಮ ಜರುಗಿಸಿ ಅವರಿಂದ ಆಗಿರುವ ಆರ್ಥಿಕ ನಷ್ಟ ಭರಿಸುವ ಕಾರ್ಯ ಆಗದಿರುವ ಅಂಶವನ್ನು ಸಮಿತಿಯು ಗಂಭೀರವಾಗಿ ಪರಿಗಣಿಸಿ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಸೂಚಿಸಿರುತ್ತದೆ. ಈ ಪ್ರಕರಣದಲ್ಲಿ ಎರವಲು ಸೇವೆಯ ಮೇಲೆ ಬಂದಿರುವ ಲೋಕೋಪಯೋಗಿ ಇಲಾಖೆಯ 3 ಹಾಗೂ ಆರ್ಥಿಕ ಇಲಾಖೆಯ ಇಬ್ಬರು ಅಧಿಕಾರಿಗಳು ಭಾಗಿಯಾಗಿರುತ್ತಾರೆ. ಇಲಾಖಾ ವಿಚಾರಣೆಯಲ್ಲಿನ ವಿಳಂಭ ಹಾಗೂ ನ್ಯೂನ್ಯತೆಗಳಿಂದಾಗಿ ತಪ್ಪಿತಸ್ಥರು ಕಾನೂನಿನ ಹಿಡಿತದಿಂದ ಪಾರಾಗಲು ಪ್ರಯತ್ನಿಸಿರುತ್ತಾರೆ. ಇದಲ್ಲದೆ ಎರವಲು/ನಿಯೋಜನೆ ಮೇಲೆ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ/ನೌಕರರ ವಿರುದ್ಧ ಪಾಲಿಸಬೇಕಾದ ನಿಯಮಗಳನ್ನು ಉಲ್ಲಂಘಿಸಿರುವ ಹಿನ್ನಲೆಯಲ್ಲಿ ತಪ್ಪಿತಸ್ಥರು ನಿರಾಯಾಸವಾಗಿ ಕಾನೂನಿನ ಚೌಕಟ್ಟಿನಲ್ಲಿ ಶಿಕ್ಷೆಗೆ ಒಳಗಾಗದೆ ಪಾರಾಗುತ್ತಿರುವುದನ್ನು ಸಮಿತಿಯು ಗಂಭೀರವಾಗಿ ಪರಿಗಣಿಸಿರುತ್ತದೆ. ಮುಂದುವರೆದಂತೆ, ಆರ್ಥಿಕ ಇಲಾಖೆಯು ಅವರ ಇಲಾಖೆಗೆ ಸಂಬಂಧಿಸಿದ ಪ್ರತ್ಯೇಕವಾದ ಆದೇಶವನ್ನು ಹೊರಡಿಸಿ ಆರೋಪ ಮುಕ್ತಗೊಳಿಸಿರುವುದನ್ನು ಸಮಿತಿಯು ಗಂಭೀರವಾಗಿ ಪರಿಗಣಿಸಿರುತ್ತದೆ. ಈ ಅಂಶಗಳ ಬಗ್ಗೆ ಸರ್ಕಾರದ ಮುಖ್ಯ ಕಾರ್ಯದರ್ಶಿಯವರಿಗೆ ಪತ್ರವನ್ನು ಬರೆದು ಇಲಾಖಾವಾರು ರಿವ್ಯೂ ಮಾಡುವ ಸಭೆಯಲ್ಲಿ ಈ ಅಂಶಗಳನ್ನು ಪರಿಶೀಲಿಸಿ ತಪ್ಪಿತಸ್ಥರ ವಿರುದ್ಧ ಅಗತ್ಯ ಕ್ರಮಗಳನ್ನು ಜರುಗಿಸಬೇಕೆಂದು ಪತ್ರ ಬರೆಯಲಾಗಿರುತ್ತದೆ. **(ಅನುಬಂಧ-I)**

ಸರ್ಕಾರಿ ನೌಕರನ ವಿರುದ್ಧ ಸಾಬೀತಾದ ಆರೋಪಗಳಿಗೆ ಅನುಗುಣವಾಗಿ ವಿಧಿಸಬಹುದಾದಂತಹ ದಂಡನೆಗಳ ಕುರಿತು ಕರ್ನಾಟಕ ಸಿವಿಲ್ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) 1957ರ ನಿಯಮ 8ರಲ್ಲಿ ನಿರ್ದಿಷ್ಟಪಡಿಸಲಾಗಿದೆ. ಕರ್ನಾಟಕ ಆರ್ಥಿಕ ಸಂಹಿತೆ ಅನುಚ್ಛೇದ 383, 386 ಮತ್ತು 392ರಿಂದ 394ರ ಪ್ರಕಾರ ಸರ್ಕಾರಿ ನೌಕರ ಸರ್ಕಾರದ ಹಣ ದುರುಪಯೋಗ ಮಾಡಿದ ಅಥವಾ ಸರ್ಕಾರವನ್ನು ವಂಚಿಸಿದ ಪ್ರಕರಣಗಳಲ್ಲಿ ಕ್ರಿಮಿನಲ್ ಮೊಕದ್ದಮೆ ಕಡ್ಡಾಯ. ಅನುಚ್ಛೇದ 392ರ ಪ್ರಕಾರ ಕ್ರಿಮಿನಲ್ ಅಪರಾಧ ಶಂಕಿಸಿದ ಪ್ರಕರಣಗಳಲ್ಲಿ ತಕ್ಷಣ ಪೋಲೀಸರಿಗೆ ವರದಿ ಮಾಡತಕ್ಕದ್ದು ಎಂಬುದಾಗಿರುತ್ತದೆ. ಆದಾಗ್ಯೂ ಇದನ್ನು ಪಾಲಿಸದೆ ಇರುವುದನ್ನು ಸಮಿತಿಯು ಬಹುತೇಕ ಪ್ರಕರಣಗಳಲ್ಲಿ ಗಮನಿಸಿದೆ.

ಕರ್ನಾಟಕ ವಿಧಾನ ಪರಿಷತ್ತಿನ ಭರವಸೆಗಳ ಸಮಿತಿಯು ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಸಂಬಂಧಿಸಿದ ಭರವಸೆಗಳ ಸಂಖ್ಯೆ: 919 ಹಾಗೂ 2541 ಅಲಕ್ಷಿತಗೊಂಡಿರುವ ಗಡಿ ಪ್ರದೇಶದ ಗ್ರಾಮಗಳಿಗೆ ಹಾಗೂ ಕನ್ನಡ ಭಾಷೆಯ ರಕ್ಷಣೆಯ ಅಧ್ಯಯನ ಮಾಡಲು ನೇಮಿಸಿದ ಆಯೋಗದ ವರದಿಯನ್ನು ಅನುಷ್ಠಾನಗೊಳಿಸುವ ಬಗ್ಗೆ ಹಾಗೂ ರಾಜ್ಯದಲ್ಲಿ ನಿರ್ಮಿಸಲು ಉದ್ದೇಶಿಸಿರುವ ಕನ್ನಡ ಭವನದ ಬಗ್ಗೆ ಚರ್ಚಿಸುವಾಗ ಸರ್ಕಾರವು ಆದ್ಯತೆ ಮೇರೆಗೆ ಗಡಿ ಭಾಗದ

ಹಿಂದುಳಿದ ಜಿಲ್ಲೆ/ತಾಲ್ಲೂಕುಗಳ ಅಭಿವೃದ್ಧಿಗಾಗಿ ಸಾಕಷ್ಟು ಅನುದಾನವನ್ನು ಒದಗಿಸಿದ್ದರೂ ಸದ್ಬಳಕೆ ಮಾಡದೇ ನಕಲಿ ದಾಖಲೆಗಳ ಆಧಾರದ ಮೇಲೆ ಹಣ ದುರುಪಯೋಗವಾಗಿರುವ ಬಗ್ಗೆ ಮತ್ತು ಅನುದಾನವನ್ನು ಒದಗಿಸಿರುವ ಎಲ್ಲಾ ಪ್ರಕರಣಗಳಲ್ಲಿಯೂ ಸಮಗ್ರವಾದ ತನಿಖೆಯನ್ನು ನಡೆಸಲು ದಿನಾಂಕ: 19.11.2016ರಂದು ಮುಖ್ಯ ಕಾರ್ಯದರ್ಶಿಯವರಿಗೆ ಪತ್ರ ಬರೆದು ಸಮಿತಿಗೆ ವರದಿ ನೀಡಲು ಈ ಹಿಂದಿನ ವರದಿಯಲ್ಲಿ ಸೂಚಿಸಲಾಗಿರುತ್ತದೆ. ಈ ಬಗ್ಗೆ ಪ್ರಸಕ್ತ ಸಾಲಿನ ಸಮಿತಿಯು ಸಭೆ ಕರೆದಾಗ ಕಾಲಾವಕಾಶ ಕೋರಲಾಗಿತ್ತು ಆದರೆ, ಕೈಕೊಂಡ ಕ್ರಮದ ಬಗ್ಗೆ ಈವರೆವಿಗೂ ಯಾವುದೇ ಮಾಹಿತಿ ಸ್ವೀಕೃತವಾಗಿರುವುದಿಲ್ಲ. ಇದರಿಂದ ಪರೋಕ್ಷವಾಗಿ ಭ್ರಷ್ಠರನ್ನು ರಕ್ಷಣೆ ಮಾಡಿದಂತಾಗುತ್ತದೆಯೆಂದು ಸಮಿತಿ ಅಭಿಪ್ರಾಯಪಡುತ್ತದೆ.

ಭರವಸೆ ಸಂಖ್ಯೆ 4503/2013 ಮತ್ತು 4509/2013– ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಂಡೋಸಲ್ಫಾನ್ ಸಂತ್ರಸ್ತರಿಗೆ ಪರಿಹಾರ ಒದಗಿಸುವ ಬಗ್ಗೆ ವಿಧಾನ ಪರಿಷತ್ತಿನ ಸರ್ಕಾರಿ ಭರವಸೆಗಳ ಸಮಿತಿಯು ದಿನಾಂಕ 14.11.2018ರ ಬುಧವಾರದಂದು ದಕ್ಷಿಣ ಕನ್ನಡ ಜಿಲ್ಲೆಯ ಕೊಕ್ಕಡ ಮತ್ತು ಕೊಯಿಲದಲ್ಲಿ ಸೇವಾ ಭಾರತಿ (ರಿ), ಮಂಗಳೂರು ಇವರು ನಡೆಸುತ್ತಿರುವ ಪಾಲನಾ ಕೇಂದ್ರ ಹಾಗೂ ಬೆಳ್ತಂಗಡಿ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿರುವ ಎಂಡೋಪೀಡಿತರ ಚಿಕಿತ್ಸಾ ಘಟಕಕ್ಕೆ ಭೇಟಿ ನೀಡಿ ಸ್ಥಳ ಪರಿವೀಕ್ಷಣೆ ನಡೆಸಿ ದಕ್ಷಿಣ ಕನ್ನಡ ಜಿಲ್ಲೆಯ ಜಿಲ್ಲಾಧಿಕಾರಿಯವರ ಕಛೇರಿಯಲ್ಲಿ ಸಭೆ ನಡೆಸಿತು.

ಇಲಾಖಾ ವಿಚಾರಣೆಯಲ್ಲಿ ಪರಿಣಾಮಕಾರಿಯಾದ ಕಾರ್ಯಕ್ರಮ ರೂಪಿತವಾಗಬೇಕೆಂದು ಭಾವಿಸಿದ ಸಮಿತಿಯು ದಿನಾಂಕ: 29.11.2018ರಂದು ಜಲ ಸಂಪನ್ಮೂಲ ಇಲಾಖೆಗೆ ಸಂಬಂಧಿಸಿದ ಬಾಕಿ ಭರವಸೆ ಬಗ್ಗೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ ಕಾರ್ಯದರ್ಶಿಯವರನ್ನು ಸಹ ಆಹ್ವಾನಿಸಿತು. ಅಂದು ಹಾಜರಿದ್ದ ಕಾರ್ಯದರ್ಶಿಯವರು e-Governance ಮೂಲಕ Complete Disciplinary Enquiry Monitoring System Software ಅಭಿವೃದ್ಧಿ ಪಡಿಸಲಾಗಿರುವ ಅಂಶವನ್ನು ಸಮಿತಿಯ ಗಮನಕ್ಕೆ ತಂದಿರುತ್ತಾರೆ ಹಾಗೂ ಇದನ್ನು ಇಷ್ಟರಲ್ಲೇ ಅಳವಡಿಸಿಕೊಳ್ಳಲಾಗುತ್ತಿದೆ ಎಂಬ ಅಂಶವನ್ನು ಸಮಿತಿಯ ಗಮನಕ್ಕೆ ತಂದಿರುವುದನ್ನು ಸಮಿತಿಯು ಸ್ವಾಗತಿಸಿರುತ್ತದೆ. ಸರ್ಕಾರದಲ್ಲಿ ಅಭಿವೃದ್ಧಿ ಎಷ್ಟು ಮುಖ್ಯವೋ ಹಾಗೆಯೇ ಸಾರ್ವಜನಿಕರ ತೆರಿಗೆ ಹಣವನ್ನು ದುರುಪಯೋಗಪಡಿಸಿಕೊಳ್ಳುವುದು/ಸಾರ್ವಜನಿಕರ ಅಭಿವೃದ್ಧಿ ಕೆಲಸಕ್ಕಾಗಿ ಅವ್ಯವಹಾರ/ಲಂಚ ಪಡೆಯುವಂತಹ ಪ್ರಕರಣಗಳನ್ನು ತಡೆಯುವುದು/ನಿಗ್ರಹಿಸುವುದು ಸಹ ಅಷ್ಟೇ ಪ್ರಮುಖವಾದ ಮಹತ್ವದ ಕೆಲಸವಾಗಿರುತ್ತದೆ. ಭ್ರಷ್ಠಾಚಾರ, ಅವ್ಯವಹಾರದ ಪ್ರಕರಣಗಳಲ್ಲಿ ತ್ವರಿತವಾಗಿ ತನಿಖೆ ಪೂರ್ಣಗೊಳಿಸಿ, ತಪ್ಪಿತಸ್ಥರ ವಿರುದ್ಧ ಶಿಸ್ತು ಕ್ರಮ ಜರುಗಿಸುವಂತಾಗಲು ಎಲ್ಲಾ ಇಲಾಖಾ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿಯವರುಗಳು ಪ್ರತಿ ತಿಂಗಳಿಗೊಂದು ಸಭೆಯನ್ನು ನಡೆಸಿ ಪ್ರಕರಣಗಳ ಪ್ರಗತಿಯನ್ನು ಪರಿಶೀಲಿಸಬೇಕು ಹಾಗೂ ಮುಖ್ಯ ಕಾರ್ಯದರ್ಶಿಯವರು ಪ್ರತಿ ಎರಡು ತಿಂಗಳಿಗೊಮ್ಮೆ ಇಲಾಖಾ ಮುಖ್ಯಸ್ಥರನ್ನು ಕರೆದು ವಿಳಂಬಕ್ಕೆ ಇರುವ ತಾಂತ್ರಿಕ ಕಾರಣಗಳನ್ನು ತಿಳಿದು ಅದಕ್ಕೆ ಪರಿಹಾರವನ್ನು ಕಂಡುಕೊಳ್ಳುವುದಕ್ಕೆ ಈ ಮೂಲಕ ಸಮಿತಿಯು ಶಿಫಾರಸ್ಸು ಮಾಡುತ್ತದೆ. ಇಂತಹ ಪ್ರಕರಣಗಳು ಮರುಕಳಿಸದಿರಲು ಈ ಸಂಬಂಧದಲ್ಲಿನ ತಂತ್ರಾಂಶವನ್ನು ಅಭಿವೃದ್ಧಿಪಡಿಸಿ ಅಳವಡಿಸಲು ಹೊರಟಿರುವುದಕ್ಕೆ ದಿನಾಂಕ 18.01.2019 ರಂದು ಮುಖ್ಯ ಕಾರ್ಯದರ್ಶಿಯವರಿಗೆ ಪತ್ರವೊಂದನ್ನು ಬರೆದು ಸಮಿತಿಯು ಶ್ಲಾಘನೆಯನ್ನು ವ್ಯಕ್ತಪಡಿಸಿರುತ್ತದೆ. **(ಅನುಬಂಧ–II)**

ಕರ್ನಾಟಕ ವಿಧಾನ ಪರಿಷತ್ತಿನ ಸರ್ಕಾರಿ ಭರವಸೆಗಳ ಸಮಿತಿ ಸಭೆಯು ದಿನಾಂಕ: 25.01.2019ರಂದು ನಡೆದ ಉನ್ನತ ಶಿಕ್ಷಣ ಇಲಾಖೆಗೆ ಸಂಬಂಧಿಸಿದ ಭರವಸೆ ಸಂಖ್ಯೆ: 4834/2014–**''ರಾಜ್ಯದ ಪದವಿ ಕಾಲೇಜುಗಳಲ್ಲಿ ನಿವೃತ್ತಿ, ಮರಣ, ರಾಜೀನಾಮೆ ಇತ್ಯಾದಿ ಕಾರಣಕ್ಕಾಗಿ ತೆರವಾಗುವ ಕನ್ನಡ ಉಪನ್ಯಾಸಕರ ಹುದ್ದೆಗಳನ್ನು ಬೇರೆ ರಾಜ್ಯಗಳ ರೀತಿಯಲ್ಲಿ ವಿಶೇಷ ಕ್ರಮವಹಿಸಿ ತಕ್ಷಣ ಭರ್ತಿ ಮಾಡಿಕೊಳ್ಳಲು ಸರ್ಕಾರ ಕ್ರಮ ಕೈಗೊಳ್ಳುವ ಬಗ್ಗೆ''** ಚರ್ಚಿಸುವ ಸಂದರ್ಭದಲ್ಲಿ ಉನ್ನತ

ಶಿಕ್ಷಣ ಇಲಾಖೆಯ ಅಧಿಕಾರಿಗಳ ಉಪಸ್ಥಿತಿಯಲ್ಲಿ ಸಮಿತಿ ನಿರ್ಣಯವನ್ನು ಈ ಮುಂದಿನಂತೆ ಕೈಗೊಂಡಿರುತ್ತದೆ. ''ನಮ್ಮ ನೆರೆಯ ರಾಜ್ಯಗಳಾದ ಆಂಧ್ರಪ್ರದೇಶ ಮತ್ತು ತಮಿಳುನಾಡುಗಳಲ್ಲಿ ಕ್ರಮವಾಗಿ ತೆಲುಗು ಮತ್ತು ತಮಿಳು ವಿಷಯದ ಬೋಧಕ ಹುದ್ದೆ ಖಾಲಿಯಾದಂತಹ ಸಂದರ್ಭದಲ್ಲಿ ಹಣಕಾಸು ಇಲಾಖೆಯ ಅನುಮತಿಯನ್ನು ಪಡೆಯುವ ಅಗತ್ಯವಿಲ್ಲದೆ, ಹುದ್ದೆಯು ಖಾಲಿ ಆದ ತಕ್ಷಣ ಅದನ್ನು ಭರ್ತಿ ಮಾಡಿಕೊಳ್ಳುವುದಕ್ಕೆ ಅವಕಾಶವನ್ನು ಕಲ್ಪಿಸಲಾಗಿದೆ. ಅಂತೆಯೇ ಕರ್ನಾಟಕದಲ್ಲಿ ಕನ್ನಡ ಭಾಷೆ, ನೆಲ-ಜಲವನ್ನು ಉಳಿಸಲು ಹಾಗೂ ಬೆಳೆಸಲು ಕನ್ನಡ ವಿಷಯದ ಬೋಧಕರ ಹುದ್ದೆಯು ಅವಶ್ಯಕವಾಗಿರುತ್ತದೆ. ಆದುದರಿಂದ ಕರ್ನಾಟಕ ರಾಜ್ಯದಲ್ಲಿಯೂ ಕನ್ನಡ ವಿಷಯದ ಬೋಧಕ ಹುದ್ದೆ ಖಾಲಿ ಆದ ತಕ್ಷಣ ಭರ್ತಿ ಮಾಡಿಕೊಳ್ಳಲು ಹಣಕಾಸು ಇಲಾಖೆಯ ಯಾವುದೇ ಪೂರ್ವಾನುಮತಿಯ ಅಗತ್ಯವಿಲ್ಲವೆಂದು ತೀರ್ಮಾನಿಸಿ, ಕನ್ನಡ ಬೋಧನೆಯಲ್ಲಿ ಯಾವುದೇ ವ್ಯತ್ಯಯವಾಗದಂತೆ ನಿರಂತರತೆಯನ್ನು ಕಾಯ್ದುಕೊಳ್ಳಲು ಬೋಧಕ ಹುದ್ದೆಯ ನೇಮಕಾತಿಗೆ ಅವಕಾಶ ಕಲ್ಪಿಸಬೇಕೆಂದು ಇಂದಿನ ಸಭೆಯು ನಿರ್ಣಯಿಸಿ, ಕೈಗೊಂಡಿರುವ ನಿರ್ಣಯವನ್ನು ಕಾರ್ಯರೂಪಕ್ಕೆ ತರಲು ಆರ್ಥಿಕ ಇಲಾಖೆಗೆ ಶಿಫಾರಸ್ಸು ಮಾಡಲಾಗಿರುತ್ತದೆ. **(ಅನುಬಂಧ-III)**

ದಿನಾಂಕ 21.02.2019 ರಂದು ನಡೆದ ವಿಧಾನ ಪರಿಷತ್ತಿನ ಭರವಸೆಗಳ ಸಮಿತಿ ಸಭೆಯಲ್ಲಿ ಸಾರಿಗೆ ಇಲಾಖೆಗೆ ಸಂಬಂಧಿಸಿದ ಭರವಸೆ ಸಂಖ್ಯೆ 5578 '' ರಾಜ್ಯದಲ್ಲಿ ಖಾಸಗಿ ಬಸ್ಸಿನ ಮಾಲೀಕರು ಹಬ್ಬದ ಸಂದರ್ಭಗಳಲ್ಲಿ ಪ್ರಯಾಣಿಕರಿಂದ ದುಬಾರಿ ದರವನ್ನು ಪಡೆದುಕೊಳ್ಳುತ್ತಿರುವ ಬಗ್ಗೆ'' ಚರ್ಚಿಸುವ ಸಂದರ್ಭದಲ್ಲಿ ಹಬ್ಬ ಹರಿದಿನಗಳು ಮತ್ತು ಜಾತ್ರೆ ಸಮಯದಲ್ಲಿ ಒಂದೂವರೆ ಪಟ್ಟು ಹೆಚ್ಚಿನ ಅವೈಜ್ಞಾನಿಕವಾದ ಪ್ರಯಾಣ ದರ ವಿಧಿಸುತ್ತಿರುವುದರ ಬಗ್ಗೆ, ಒಂದೇ ಪರ್ಮಿಟ್‌ನಲ್ಲಿ ಹಲವು ಬಸ್ಸುಗಳನ್ನು ಓಡಿಸುತ್ತಿರುವ ಬಗ್ಗೆ ಹಾಗೂ ಸಾರಿಗೆ ಸಂಸ್ಥೆಗಳ ಬಸ್ ನಿಲ್ದಾಣದಿಂದ ಗ್ರಾಮೀಣ ಭಾಗದಲ್ಲಿ 200 ಮೀ ವ್ಯಾಪ್ತಿಯ ಒಳಗೆ ಹಾಗೂ ನಗರ ಪ್ರದೇಶಗಳಲ್ಲಿ ಖಾಸಗಿ ಬಸ್ಸುಗಳಿಗೆ ನಿಷೇಧವಿದ್ದರೂ ಇದರ ಪಾಲನೆಯಾಗುತ್ತಿಲ್ಲದಿರುವುದರ ಬಗ್ಗೆ, ಅಟೋ ರಿಕ್ಷಾಗಳು ಪ್ರಯಾಣಿಕರು ಕೋರಿದೆಡೆ ಬಾರದಿರುವ ಮತ್ತು ಮೀಟರ್ ಇದ್ದರೂ ಉಪಯೋಗಿಸದಿರುವ ಹಾಗೂ ದುಪ್ಪಟ್ಟು ದರ ವಸೂಲು ಮಾಡುತ್ತಿರುವ ಘಟನೆ ದಿನದಿಂದ ದಿನಕ್ಕೆ ಹೆಚ್ಚುತ್ತಲಿದ್ದು ಅವರ ಮೇಲೆ ಕಡಿವಾಣವಿಲ್ಲದಂತಾಗಿರುವ ಬಗ್ಗೆ ಅನೇಕ ಮಾನ್ಯ ಸದಸ್ಯರು ಸಮಿತಿಯ ಗಮನಕ್ಕೆ ತಂದಿರುತ್ತಾರೆ. ಈ ಘಟನೆಗಳನ್ನು ನಿಯಂತ್ರಿಸಲು ಸೂಕ್ತ ನಿಯಮಾವಳಿ ರೂಪಿಸುವ ಮತ್ತು ಹಬ್ಬ ಹರಿದಿನಗಳಲ್ಲಿ ಕೆ.ಎಸ್. ಆರ್.ಟಿ.ಸಿ. ಯವರು ಹೆಚ್ಚಿನ ದರವನ್ನು ಯಾವ ಮಾನದಂಡವನ್ನು ಅನುಸರಿಸಿ ವಿಧಿಸಲಾಗುತ್ತಿದೆಯೋ ಅದೇ ರೀತಿ ಖಾಸಗಿ ಬಸ್‌ಗಳೂ ಸಹ ದರವನ್ನು ಪ್ರಯಾಣಿಕರಿಂದ ಪಡೆಯಬೇಕು ತಪ್ಪಿದ್ದಲ್ಲಿ, ಅದು ಕಾನೂನು ರೀತ್ಯ ಅಪರಾಧವೆಂದು ಪರಿಗಣಿಸಿ ಹೆಚ್ಚಿನ ಮೊತ್ತದ ದಂಡ ವಸೂಲಿ/ರಹದಾರಿಯನ್ನು ರದ್ದುಪಡಿಸುವ ನಿಯಮಾವಳಿಗಳನ್ನು ಅನುಷ್ಠಾನಕ್ಕೆ ತರಲು ಸಮಿತಿಯು ಶಿಫಾರಸ್ಸು ಮಾಡುತ್ತದೆ **(ಅನುಬಂಧ- IV)**

ದಿನಾಂಕ 21.02.2019 ರಂದು ನಡೆದ ವಿಧಾನ ಪರಿಷತ್ತಿನ ಭರವಸೆಗಳ ಸಮಿತಿ ಸಭೆಯಲ್ಲಿ ಸಾರಿಗೆ ಇಲಾಖೆಗೆ ಸಂಬಂದಿಸಿದ ಭರವಸೆ ಸಂಖ್ಯೆ 5856 '' ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳ ಗ್ರಾಮೀಣ ಪ್ರದೇಶಗಳಿಗೆ ಸರ್ಕಾರಿ ಬಸ್ ಸೌಲಭ್ಯ ಒದಗಿಸುವಲ್ಲಿ ವಿಳಂಬವಾಗುತ್ತಿರುವ ಬಗ್ಗೆ ಮತ್ತು ಭರವಸೆ ಸಂಖ್ಯೆ: 5863 '' ಮೈಸೂರು-ಚಾಮರಾಜನಗರ ಜಿಲ್ಲೆಯಲ್ಲಿ ಬಸ್ ಸೌಕರ್ಯಗಳಿಂದ ವಂಚಿತರಾಗಿರುವ ಗ್ರಾಮಗಳಿಗೆ ಕಾಲಮಿತಿಯಲ್ಲಿ ಬಸ್ ಸೌಕರ್ಯ ಒದಗಿಸುವ ಬಗ್ಗೆ'' ಚರ್ಚಿಸಿದ ಸಂದರ್ಭದಲ್ಲಿ ಕಲಬುರಗಿ ಜಿಲ್ಲೆಯಲ್ಲಿ 37 ಗ್ರಾಮಗಳ ಪೈಕಿ 16 ಗ್ರಾಮಗಳು ಹಾಗೂ ಯಾದಗಿರಿ ಜಿಲ್ಲೆಯಲ್ಲಿ 10 ಗ್ರಾಮಗಳ ಪೈಕಿ 7 ಗ್ರಾಮಗಳು ಇದೇ ರೀತಿ ಮೈಸೂರು ಜಿಲ್ಲೆಯಲ್ಲಿ 1225 ಗ್ರಾಮಗಳ ಪೈಕಿ 41 ಗ್ರಾಮಗಳು ಸಾರಿಗೆ ಸೌಲಭ್ಯದಿಂದ ವಂಚಿತವಾಗಿರುವ ಬಗ್ಗೆ ಹಾಗೂ ಚಾಮರಾಜನಗರ ಜಿಲ್ಲೆಯಲ್ಲಿ ಒಟ್ಟು 582 ಗ್ರಾಮಗಳ ಪೈಕಿ ಇನ್ನೂ 29 ಹಳ್ಳಿಗಳು ಯೋಗ್ಯ ರಸ್ತೆ ಸಂಪರ್ಕ ಇಲ್ಲದ ಕಾರಣ ಸಾರಿಗೆ ಸೌಲಭ್ಯವನ್ನು

ಒದಗಿಸಲಾಗಿಲ್ಲವೆಂಬ ಅಂಶವನ್ನು ಗಮನಿಸಿದ ಸಮಿತಿಯು ಸ್ವಾತಂತ್ರ್ಯ ಬಂದು 70 ವರ್ಷಗಳಾಗಿದ್ದರೂ ಸಹ ಇನ್ನೂ ಕೆಲವು ಹಳ್ಳಿಗಳಿಗೆ ರಸ್ತೆ ಸಂಪರ್ಕ ಕಲ್ಪಿಸದಿರುವುದರ ಬಗ್ಗೆ ತನ್ನ ವಿಷಾಧವನ್ನು ವ್ಯಕ್ತಪಡಿಸುತ್ತಾ ಸರ್ಕಾರದ ಯೋಜನೆಗಳು/ಮೂಲ ಸೌಕರ್ಯಗಳು/ಸೌಲಭ್ಯಗಳು ಹಳ್ಳಿಯ ಮೂಲೆ ಮೂಲೆಗಳಲ್ಲಿರುವ ಪ್ರತಿಯೊಬ್ಬ ನಾಗರೀಕರಿಗೂ ದೊರಕಬೇಕೆನ್ನುವುದೇ ನಮ್ಮ ಮೂಲ ಉದ್ದೇಶ. ಯಾವ ಯಾವ ಹಳ್ಳಿ/ಗ್ರಾಮಗಳಿಗೆ ಯಾವ ಯಾವ ಕಾರಣದಿಂದ ರಸ್ತೆ ಸಂಪರ್ಕವನ್ನು ನೀಡಿಲ್ಲ ಎಂಬುದನ್ನು ಪ್ರಥಮವಾಗಿ ತಿಳಿದುಕೊಳ್ಳಬೇಕಾಗಿರುವುದರಿಂದ ಸಂಬಂಧಪಟ್ಟ ಜಿಲ್ಲಾಧಿಕಾರಿಯವರೊಂದಿಗೆ ಸಭೆ ಕರೆದು ಹೆಚ್.ಕೆ.ಡಿ.ಬಿ. ಮತ್ತು ಗಡಿ ಅಭಿವೃದ್ಧಿ ಪ್ರಾಧಿಕಾರಗಳಿಂದ ವಿಶೇಷ ಅನುದಾನವನ್ನು ಪಡೆದು ತುರ್ತಾಗಿ ರಸ್ತೆ ಸಂಪರ್ಕಗಳನ್ನು ನಿರ್ಮಿಸುವುದರ ಜೊತೆಗೆ ಪ್ರತಿ ಹಳ್ಳಿಗೂ ತ್ವರಿತವಾಗಿ ಸಾರಿಗೆ ಸೌಲಭ್ಯವನ್ನು ಒದಗಿಸುವ ನಿಟ್ಟಿನಲ್ಲಿ ಕ್ರಮ ವಹಿಸಲು ಸರ್ಕಾರದ ಮುಖ್ಯ ಕಾರ್ಯದರ್ಶಿಯವರಿಗೆ ಶಿಫಾರಸ್ಸು ಮಾಡಿ ಪತ್ರ ಬರೆಯಲಾಗಿರುತ್ತದೆ. **(ಅನುಬಂಧ– V)**

ದಿನಾಂಕ 06.06.2019 ರಂದು ನಡೆದ ವಿಧಾನ ಪರಿಷತ್ತಿನ ಸರ್ಕಾರಿ ಭರವಸೆಗಳ ಸಮಿತಿ ಸಭೆಯಲ್ಲಿ ಸಣ್ಣ ನೀರಾವರಿ ಇಲಾಖೆಯ ಭರವಸೆ ಸಂಖ್ಯೆ: 6292/2017 ಧಾರವಾಡ, ಗದಗ ಹಾಗೂ ಹಾವೇರಿ ಜಿಲ್ಲೆಗಳ ವ್ಯಾಪ್ತಿಯ ಕೆರೆಗಳಿಗೆ ನೀರುಣಿಸುವ ಯೋಜನೆಯನ್ನು ಪೂರ್ಣಗೊಳಿಸುವ ವಿಷಯಕ್ಕೆ ಸಂಬಂಧಿಸಿದಂತೆ ಚರ್ಚಿಸಿದ ಸಂದರ್ಭದಲ್ಲಿ ಏತ ನೀರಾವರಿ ಯೊಜನೆ ಅಡಿಯಲ್ಲಿ ಬಾಕಿ ಇರುವ ಎಲ್ಲ ಕಾಮಗಾರಿಗಳನ್ನು ನಿಗದಿತ ಅವಧಿಯೊಳಗೆ ಕೈಗೆತ್ತಿಕೊಂಡು ಮುಕ್ತಾಯಗೊಳಿಸುವುದರ ಜೊತೆಗೆ ಗುಣಮಟ್ಟದ ಕೆಲಸ ನಡೆಯುವಂತಾಗಬೇಕೆಂದು ಹಾಗೂ ಇಡೀ ರಾಜ್ಯದಲ್ಲಿರುವ ಎಲ್ಲ ಸಣ್ಣ ನೀರಾವರಿ ಕೆರೆಗಳನ್ನು ತುಂಬಿಸಿ ಅಂತರ್ಜಲ ವೃದ್ಧಿಸುವ ನಿಟ್ಟಿನಲ್ಲಿ ಸಣ್ಣ ಕೆರೆಗಳಿಗೆ ಮರುಜೀವ ನೀಡಲು ಆದ್ಯತೆ ಮೇರೆಗೆ ಅವಶ್ಯಕ ಕ್ರಮಗಳನ್ನು ಜರುಗಿಸಲು ಸಮಿತಿಯು ದಿನಾಂಕ 15.06.2019ರಂದು ಸರ್ಕಾರದ ಮುಖ್ಯ ಕಾರ್ಯದರ್ಶಿಯವರಿಗೆ ಪತ್ರ ಬರೆದು ಶಿಫಾರಸ್ಸು ಮಾಡಿರುತ್ತದೆ. **(ಅನುಬಂಧ – VI)**

ದಿನಾಂಕ 06.05.2019 ರಂದು ನಡೆದ ವಿಧಾನ ಪರಿಷತ್ತಿನ ಸರ್ಕಾರಿ ಭರವಸೆಗಳ ಸಮಿತಿ ಸಭೆಯಲ್ಲಿ ಉನ್ನತ ಶಿಕ್ಷಣ ಇಲಾಖೆಗೆ ಸಂಬಂಧಿಸಿದ ಭರವಸೆ ಸಂಖ್ಯೆ: 6207/2015– ರಾಜ್ಯದ ಶಾಲಾ ಕಾಲೇಜುಗಳಲ್ಲಿ ಎನ್‌ಸಿಸಿ ಅಧಿಕಾರಿಯಾಗಿ ಸೇವೆ ಸಲ್ಲಿಸುತ್ತಿರುವ ಶಿಕ್ಷಕ ಹಾಗೂ ಉಪನ್ಯಾಸಕರುಗಳಿಗೆ ನೀಡುವ ಗೌರವ ಧನದ ಮೊತ್ತವನ್ನು ಪರಿಷ್ಕರಿಸುವ ಬಗ್ಗೆ ಚರ್ಚಿಸಿದ ಸಂದರ್ಭದಲ್ಲಿ ಆಯಾಯ ಕಾಲೇಜುಗಳಲ್ಲಿ ಮತ್ತು ಎಲ್ಲಾ ವಿಶ್ವವಿದ್ಯಾಲಯಗಳಲ್ಲಿ ಎನ್‌ಸಿಸಿ ಮತ್ತು ಎನ್‌ಎಸ್‌ಎಸ್ ಘಟಕಗಳನ್ನು ಪ್ರಾರಂಭ ಮಾಡುವ ಬಗ್ಗೆ ದಿನಾಂಕ 24.06.2019 ರಂದು ಮುಖ್ಯ ಕಾರ್ಯದರ್ಶಿಯವರಿಗೆ ಪತ್ರವೊಂದನ್ನು ಬರೆದು ಶಿಫಾರಸ್ಸು ಮಾಡಿರುತ್ತದೆ. **(ಅನುಬಂಧ – VII)**

ದಿನಾಂಕ 20.06.2019 ರಂದು ನಡೆದ ಕರ್ನಾಟಕ ವಿಧಾನ ಪರಿಷತ್ತಿನ ಸರ್ಕಾರಿ ಭರವಸೆಗಳ ಸಮಿತಿ ಸಭೆಯಲ್ಲಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆಗೆ ಸಂಬಂಧಿಸಿದ ಭರವಸೆ ಸಂಖ್ಯೆ: 5560/2014 ''ಶೈಕ್ಷಣಿಕ ವರ್ಷದ ಮಧ್ಯದಲ್ಲಿ ನಿವೃತ್ತರಾಗುವ ಅನುದಾನಿತ ಶಾಲಾ ಶಿಕ್ಷಕರನ್ನು ಮುಂದುವರೆಸುವ ಬಗ್ಗೆ'' ಚರ್ಚಿಸಿದ ಸಂದರ್ಭದಲ್ಲಿ ಖಾಸಗಿ ಅನುದಾನಿತ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಶೈಕ್ಷಣಿಕ ವರ್ಷದ ಮಧ್ಯದಲ್ಲಿ ನಿವೃತ್ತರಾಗುವ ಶಿಕ್ಷಕರನ್ನು ಮಾತ್ರ ಮುಂದುವರೆಸುವ ಬಗ್ಗೆ ಅನುಮತಿ ನೀಡಿರುವಂತೆ ಅನುದಾನಿತ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಶೈಕ್ಷಣಿಕ ವರ್ಷದ ಮಧ್ಯದಲ್ಲಿ ನಿವೃತ್ತರಾಗುವ ಶಿಕ್ಷಕರನ್ನೂ ಮುಂದುವರೆಸಬೇಕೆಂದು ಹಾಗೂ ಒಂದೇ ಗ್ರಾಮದಲ್ಲಿ ಅಗತ್ಯಕ್ಕಿಂತ ಹೆಚ್ಚು ಇರುವ ಶಾಲೆಗಳನ್ನು ಒಂದುಗೂಡಿಸಿ(ಅಮಲ್ಗಮೇಷನ್ ಆಫ್

ಸ್ಕೂಲ್ಸ್) ಒಂದೆಡೆ ವಿಲೀನಗೊಳಿಸುವ ಬಗ್ಗೆ ರಾಜ್ಯವ್ಯಾಪ್ತಿ ಕಾರ್ಯಕ್ರಮ ರೂಪಿಸಿ ತನ್ಮೂಲಕ ಶಿಕ್ಷಣದ ಗುಣಮಟ್ಟ ಮತ್ತು ಸರ್ಕಾರಿ ಶಾಲೆಗಳ ಮೂಲ ಸೌಕರ್ಯಗಳನ್ನು ಉತ್ತಮಪಡಿಸುವ ಬಗ್ಗೆ ದಿನಾಂಕ 4.7.2019 ರಂದು ಸರ್ಕಾರದ ಪ್ರಧಾನ ಕಾರ್ಯದರ್ಶಿಯವರು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ ಇವರಿಗೆ ಪ್ರತ್ಯೇಕ ಎರಡು ಪತ್ರಗಳನ್ನು ಬರೆದು ಶಿಫಾರಸ್ಸು ಮಾಡಿರುತ್ತದೆ. **(ಅನುಬಂಧ-VIII)**

2018-19ನೇ ಸಾಲಿನಲ್ಲಿ ರಚಿಸಲಾದ ಭರವಸೆಗಳ ಸಮಿತಿಯು ಒಟ್ಟಾರೆ 29 ಇಲಾಖೆಗಳಿಗೆ ಸಂಬಂಧಿಸಿದಂತೆ ಒಟ್ಟು 42 ಸಭೆಗಳನ್ನು ನಡೆಸಿ, 864 ಭರವಸೆಗಳನ್ನು ಸರ್ಕಾರದಿಂದ ನೀಡಲಾದ ಉತ್ತರದ ಮೇರೆಗೆ ಇಲಾಖಾಧಿಕಾರಿಗಳೊಂದಿಗೆ ಸಮಗ್ರವಾಗಿ ಚರ್ಚಿಸಿ 582 ಭರವಸೆಗಳನ್ನು ಮುಕ್ತಾಯಗೊಳಿಸಿರುತ್ತದೆ. ಅಲ್ಲದೆ, 04 ಇಲಾಖೆಗಳ ಭರವಸೆಗಳು ಸಂಪೂರ್ಣವಾಗಿ ಮುಕ್ತಾಯಗೊಂಡಿರುತ್ತದೆ. ಇಲಾಖಾ ವತಿಯಿಂದ ಭರವಸೆಗಳನ್ನು ತೀವ್ರಗತಿಯಲ್ಲಿ ಈಡೇರಿಸಲು ಸಮಿತಿಯು ಆಗಿಂದಾಗ್ಗೆ ಸೂಕ್ತ ನಿರ್ದೇಶನಗಳನ್ನು ನೀಡುತ್ತಾ, ಸದರಿ ಭರವಸೆಗಳು ಈಡೇರಿದ ನಂತರ ಮುಕ್ತಾಯಗೊಳಿಸಲಾಗಿರುತ್ತದೆ.

ಇಲ್ಲಿ ನಾನು ಪ್ರಮುಖವಾಗಿ ಹೆಮ್ಮೆಯಿಂದ ಹೇಳಲೇಬೇಕಾದ ಮತ್ತೊಂದು ಅಂಶವೇನೆಂದರೆ ಸಮಿತಿಯ ಸಭೆಗಳಿಗೆ ಮಾನ್ಯ ಸದಸ್ಯರುಗಳು ಹಾಜರಾಗುವ ಮುನ್ನವೇ ಎಲ್ಲರಿಗೂ ಲಿಖಿತ ಉತ್ತರದ ಮಾಹಿತಿಯನ್ನು ಅಧ್ಯಯನ ಮಾಡಿಕೊಂಡು ಬರಲು ಅನುವಾಗುವಂತೆ ಒದಗಿಸಲಾಗುತ್ತಿತ್ತು. ಎಲ್ಲಾ ಮಾನ್ಯ ಸದಸ್ಯರುಗಳು ಸಹ ಅತ್ಯಂತ ಆಸಕ್ತಿ/ಶ್ರದ್ಧೆ ವಹಿಸಿ ಎಲ್ಲಾ ವಿಷಯಗಳನ್ನು ಅಧ್ಯಯನ ಮಾಡಿಕೊಂಡು ಬಂದು ಉತ್ತಮ ಮಟ್ಟದ ಚರ್ಚೆಗಳನ್ನು ಮಾಡಿ, ಸಹಕಾರಗಳನ್ನು ನೀಡುವ ಮೂಲಕ ಸಭೆಯ ಗಾಂಭೀರ್ಯವನ್ನು ಉತ್ತಮ ಮಟ್ಟಕ್ಕೆ ಕೊಂಡೊಯ್ಯಲು ಸಹಕರಿಸಿರುವ ಅವರೆಲ್ಲರಿಗೂ ನಾನು ಚಿರಋಣಿಯಾಗಿರುತ್ತೇನೆ. ನಾವು ಸರ್ಕಾರದ ಅಂಗವಾಗಿ ನಮ್ಮ ಕರ್ತವ್ಯಗಳನ್ನು ನಿಸ್ವಾರ್ಥತೆಯಿಂದ ನಿರ್ವಹಿಸಿರುತ್ತೇವೆಂಬ ಸಮಾಧಾನ ನಮಗಿದೆ. ಸಮಿತಿ ಸಭೆಗಳಲ್ಲಿ ಭಾಗವಹಿಸಿ ಸಹಕರಿಸಿದಂತಹ ಎಲ್ಲಾ ಇಲಾಖೆಗಳ ಅಪರ ಮುಖ್ಯ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿಗಳಿಗೆ ಹಾಗೂ ವಿಧಾನ ಪರಿಷತ್ತಿನ ಅಧಿಕಾರಿಗಳಿಗೂ ಸಮಿತಿಯು ಅಭಿನಂದಿಸುತ್ತದೆ.

47ನೇ ಕರಡು ವರದಿಯನ್ನು ದಿನಾಂಕ: 4.7.2019 ರಂದು ನಡೆದ ಸಮಿತಿ ಸಭೆಯಲ್ಲಿ ಅಂಗೀಕರಿಸಲಾಗಿರುತ್ತದೆ.

ಬೆಂಗಳೂರು
ದಿನಾಂಕ: 16.7.2019

**ಕೆ.ಸಿ.ಕೊಂಡಯ್ಯ**
ಅಧ್ಯಕ್ಷರು
ಸರ್ಕಾರಿ ಭರವಸೆಗಳ ಸಮಿತಿ

## ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ

| ಕ್ರ. ಸಂ. | ಆಶ್ವಾಸನೆ ಸಂಖ್ಯೆ | ಆಧಾರ ಮತ್ತು ದಿನಾಂಕ | ವಿಷಯ | ಆಶ್ವಾಸನೆ | ತೆಗೆದುಕೊಂಡ ಕ್ರಮ |
|---|---|---|---|---|---|
| 1 | 5012 | ಚು.ಗು.ಪ್ರ. : 335 ಕ್ಯಾಪ್ಟನ್ ಗಣೇಶ್ ಕಾರ್ಣಿಕ್ ವಿಪನದಿ:05.02.2015 | ರಾಜ್ಯದ ಪಶು ಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ | ಖಾಲಿ ಇರುವ ಸಹಾಯಕ ನಿರ್ದೇಶಕರ ಹುದ್ದೆಗಳನ್ನು ಹಂತ ಹಂತವಾಗಿ ಭರ್ತಿ ಮಾಡಲು ಕ್ರಮ ವಹಿಸ ಲಾಗುವುದು, ಇತರೆ ವೃಂದಗಳಾದ ಜಾನುವಾರು ಅಧಿಕಾರಿ, ಹಿರಿಯ ಪಶು ವೈದ್ಯಕೀಯ ಪರೀಕ್ಷಕರು, ಅಧೀಕ್ಷಕರುಗಳ, ಪಶು ವೈದ್ಯಕೀಯ ಸಹಾಯಕರು, ಪ್ರಥಮ ದರ್ಜೆ ಸಹಾಯಕರು, ದ್ವಿತೀಯ ದರ್ಜೆ ಸಹಾಯಕರು, ವಾರ್ಡ್ ಚಾಲಕರು, ಬೆರಳಚ್ಚುಗಾರರು, 'ಡಿ' ದರ್ಜೆ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಹಾಗೂ ಮುಂಬಡ್ತಿ ಮೂಲಕ ಆದ್ಯತೆ ಮೇಲೆ ಭರ್ತಿ ಮಾಡಲು ಕ್ರಮ ವಹಿಸಲಾಗುವುದು ಎಂದು ಕಾನೂನು ಸಂಸದೀಯ ವ್ಯವಹಾರಗಳು, | ದಿನಾಂಕ: 02.01.2018ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ: ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯಲ್ಲಿ ಖಾಲಿ ಇರುವ 550 ಪಶುವೈದ್ಯಾಧಿಕಾರಿಗಳ ಹುದ್ದೆಗಳಿಗೆ ನೇಮಕಾತಿಗಾಗಿ ಅಧಿಸೂಚನೆ ಹೊರಡಿಸಿದ್ದು, 477 ಅಭ್ಯರ್ಥಿಗಳನ್ನು ಪಶುವೈದ್ಯಾಧಿಕಾರಿಗಳ ಹುದ್ದೆಗಳಿಗೆ ಆಯ್ಕೆ ಮಾಡಿ ಅಂತಿಮ ಆಯ್ಕೆಪಟ್ಟಿಯನ್ನು ಹೊರಡಿಸಲಾಗಿರುತ್ತದೆ ಹಾಗೂ ಹೈದರಾಬಾದ್-ಕರ್ನಾಟಕ ಪ್ರದೇಶದ ಸ್ಥಳೀಯ ವೃಂದದ 126 ಪಶು ವೈದ್ಯಾಧಿಕಾರಿಗಳ ನೇಮಕಾತಿಗೆ ವಿಶೇಷ ನೇಮಕಾತಿ ನಿಯಮಗಳು, 2017 ಅನ್ನು ರಚಿಸಲಾಗಿದ್ದು, ನೇಮಕಾತಿ ಅಧಿಸೂಚನೆ ಹೊರಡಿಸಲು ಕ್ರಮವಹಿಸಲಾಗುತ್ತಿದೆ.<br><br>ಇಲಾಖೆಯಲ್ಲಿ ಖಾಲಿ ಇರುವ ಸಹಾಯಕ ನಿರ್ದೇಶಕರ ಹುದ್ದೆಗಳಿಗೆ ಮುಂಬಡ್ತಿ ನೀಡಲು ಕ್ರಮವಹಿಸಲಾಗುತ್ತಿದೆ.<br><br>170 ಜಾನುವಾರು ಅಧಿಕಾರಿ ಹುದ್ದೆಯಿಂದ ಜಾನುವಾರು ಅಭಿವೃದ್ಧಿ ಅಧಿಕಾರಿ ಹುದ್ದೆಗೆ ಮುಂಬಡ್ತಿ ನೀಡಲು ಕ್ರಮವಹಿಸಲಾಗಿದ್ದು, ಹಿರಿಯ ಪಶುವೈದ್ಯಕೀಯ ಪರೀಕ್ಷಕರು ಹಾಗೂ ಅಧೀಕ್ಷಕರುಗಳ, ಹುದ್ದೆಗಳನ್ನು ಮುಂಬಡ್ತಿ ಮೂಲಕ ತುಂಬಲು ಈಗಾಗಲೇ ಕ್ರಮ ವಹಿಸಲಾಗುತ್ತಿದೆ.<br><br>ಪ್ರಥಮ ದರ್ಜೆ ಸಹಾಯಕರು, ದ್ವಿತೀಯ ದರ್ಜೆ ಸಹಾಯಕರು, ಪಶುವೈದ್ಯಕೀಯ ಸಹಾಯಕರುಗಳ ಹುದ್ದೆಗಳನ್ನು ಅನುಕಂಪದ |

| | | | | | |
|---|---|---|---|---|---|
| | | | | ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು ಲಿಖಿತ ಉತ್ತರದಲ್ಲಿ ತಿಳಿಸಿರುತ್ತಾರೆ. | ಆಧಾರದ/ನೇರ ನೇಮಕಾತಿ ಹಾಗೂ ಮುಂಬಡ್ತಿ ಮೂಲಕ ತುಂಬಲು ಕ್ರಮ ವಹಿಸಲಾಗುವುದು ಹಾಗೂ ಬೆರಳಚ್ಚುಗಾರರು / ವಾಹನ ಚಾಲಕರ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ತುಂಬಲು ಕ್ರಮ ಕೈಗೊಳ್ಳಲಾಗುವುದು.<br><br>ಪಶುಪಾಲನಾ ಇಲಾಖೆಯ ಆಯುಕ್ತಾಲಯದ ಆದೇಶ ಸಂ. ಆಪಸಂ ಸಿಬ್ಬಂದಿ-10 ವಿವ-8 2015-16, ದಿನಾಂಕ 5-10-2016ರ ಅನ್ವಯ ರಾಜ್ಯದ 30 ಜಿಲ್ಲೆಗಳಲ್ಲಿನ ಇಲಾಖೆಯ ಪಶುವೈದ್ಯಕೀಯ ಸಂಸ್ಥೆಗಳಲ್ಲಿ ಖಾಲಿ ಇರುವ 1500 ಡಿ-ದರ್ಜೆ ಹುದ್ದೆಗಳಿಗೆ ಹೊರಗುತ್ತಿಗೆ ಆಧಾರದ ಮೇಲೆ ಸೇವೆ ಪಡೆಯಲಾಗುತ್ತಿದೆ ಹಾಗೂ ಇಲಾಖೆಯಲ್ಲಿ ಖಾಲಿ ಇರುವ 4,000 ಡಿ-ದರ್ಜೆ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ ಪ್ರಸ್ತಾವನೆ ಸರ್ಕಾರದ ಹಂತದಲ್ಲಿ ಪರಿಶೀಲನೆಯಲ್ಲಿದೆ.<br><br>ಮೀನುಗಾರಿಕೆ ಇಲಾಖೆಗೆ ಸಂಬಂಧಿಸಿದಂತೆ ನೇರ ನೇಮಕಾತಿ, ಪದೋನ್ನತಿ ಹಾಗೂ ಅನುಕಂಪದ ಆಧಾರದ ಮೇಲೆ ಭರ್ತಿ ಮಾಡಲಾದ ಹುದ್ದೆಗಳ ವಿವರ ಈ ಕೆಳಕಂಡತಿದೆ:<br><br>1) ಪ್ರಥಮ ದರ್ಜೆ ಸಹಾಯಕರು – 19 ಹುದ್ದೆ<br>2) ದ್ವಿತೀಯ ದರ್ಜೆ ಸಹಾಯಕರು – 07 ಹುದ್ದೆ<br>3) ಮೀನುಗಾರಿಕೆ ಹಿರಿಯ ಮೇಲ್ವಿಚಾರಕರು – 19 ಹುದ್ದೆ<br>4) ಮೀನುಗಾರಿಕೆ ಕ್ಷೇತ್ರಪಾಲಕರು – 63 ಹುದ್ದೆ<br>5) ವಾಹನ ಚಾಲಕ – 01 ಹುದ್ದೆ<br>6) 'ಡಿ' ಗ್ರೂಪ್ ನೌಕರರು – 05 ಹುದ್ದೆ.<br>7) ಮೀನುಗಾರಿಕೆ ಸಹಾಯಕ ನಿರ್ದೇಶಕರು (ಶ್ರೇಣಿ-2) – 44 – ಅಂತಿಮ ಹಂತದಲ್ಲಿದೆ. |

<table>
<tr><td></td><td></td><td></td><td></td><td></td><td>8) ಮೀನುಗಾರಿಕೆ ಹಿರಿಯ ಸಹಾಯಕ ನಿರ್ದೇಶಕರು – 05 ಅಂತಿಮ ಹಂತದಲ್ಲಿ – 07 ಹುದ್ದೆಗಳಿಗೆ ಈಗಾಗಲೇ ಪದೋನ್ನತಿ ನೀಡಲಾಗಿದೆ.<br>9) ಮೀನುಗಾರಿಕೆ ಸಹಾಯಕ ನಿರ್ದೇಶಕರು (ಶ್ರೇಣಿ–1) – 19 ಹುದ್ದೆಗಳಿಗೆ ಪದೋನ್ನತಿ ನೀಡಲಾಗಿದೆ.<br>10) ಮೀನುಗಾರಿಕೆ ಕ್ಷೇತ್ರಪಾಲಕರು – 05 ಹುದ್ದೆಗಳ ಪ್ರಕ್ರಿಯೆಯು ಅಂತಿಮ ಹಂತದಲ್ಲಿಯೆಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ಸಮಿತಿಯು ತೀರ್ಮಾನಿಸಿತು.</td></tr>
<tr><td>2</td><td>5245</td><td>ಚು.ರ.ಪ್ರ. 1937<br>ಶ್ರೀ ಕೋಟ ಶ್ರೀನಿವಾಸ ಪೂಜಾರಿ<br>ವಿಪನದಿ:<br>24–07–2014</td><td>ಚಿಕ್ಕಮಗಳೂರು ಜಿಲ್ಲೆಯ ಹಲವು ತಾಲ್ಲೂಕುಗಳಲ್ಲಿ ಹಾಲು ಸಾಗಾಟದ ವ್ಯವಸ್ಥೆ ಸರಿಯಾಗಿ ಇಲ್ಲದಿರುವ ಕಾರಣ ಮಲೆನಾಡು ಜಿಲ್ಲೆಗಳಲ್ಲಿ ಸಮರ್ಪಕವಾಗಿ ಹಾಲು ಸಾಗಿಸಲು ಸರ್ಕಾರ ಕೈಗೊಂಡಿರುವ</td><td>ಹಾಸನ ಜಿಲ್ಲೆಯಲ್ಲಿ 74, ಚಿಕ್ಕಮಗಳೂರು ಜಿಲ್ಲೆಯಲ್ಲಿ 10, ಕೊಡಗು ಜಿಲ್ಲೆಯಲ್ಲಿ 2, ಶಿವಮೊಗ್ಗ ಜಿಲ್ಲೆಯಲ್ಲಿ 35 ಮತ್ತು ಉತ್ತರ ಕನ್ನಡ ಜಿಲ್ಲೆಯಲ್ಲಿ 17 ಹಾಲು ಸಾಗಾಣಿಕೆ ಮಾರ್ಗಗಳು ಇರುತ್ತವೆ. ಹಂತ ಹಂತವಾಗಿ ಇನ್ನೂ ಹೆಚ್ಚಿನ ಹಾಲು ಸಾಗಾಣಿಕೆ ಮಾರ್ಗಗಳನ್ನು ಒದಗಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಮಾನ್ಯ ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ</td><td>ದಿನಾಂಕ: 02.01.2018ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ಸಂಬಂಧಪಟ್ಟ ಒಕ್ಕೂಟಗಳ ಮುಖೇನ ಸಮಗ್ರ ವ್ಯಾಪಾರ ಗುರಿ ಯೋಜನೆಯಂತೆ ನೂತನ ಹಾಲು ಉತ್ಪಾದಕರ ಸಹಕಾರ ಸಂಘಗಳನ್ನು ಹಾಲಿನ ಲಭ್ಯತೆಗನುಗುಣವಾಗಿ ಪ್ರಾರಂಭಿಸಲು ಕ್ರಿಯಾ ಯೋಜನೆಯನ್ನು ರೂಪಿಸಲಾಗಿದ್ದು, ಅದರಂತೆ ಮಲೆನಾಡು ಜಿಲ್ಲೆಗಳಲ್ಲಿ ಸಂಘಗಳ ರಚನೆಯನ್ನಾಧರಿಸಿ ಹೆಚ್ಚುವರಿ ಹಾಲನ್ನು ಸಂಗ್ರಹಿಸಲು ಸಾಗಾಣಿಕ ವ್ಯವಸ್ಥೆಯನ್ನು ಒಕ್ಕೂಟಗಳ ಮೂಲಕ ಕೈಗೊಳ್ಳಲು ಕ್ರಮಇಡಲಾಗಿರುತ್ತದೆ. ಅದರಂತೆ, 2013–14ನೇ ಸಾಲಿನ ಹಾಗು ಪ್ರಸ್ತುತ ಸಾಲಿಗೆ ಮಲೆನಾಡು ಭಾಗದ ಜಿಲ್ಲೆಗಳ ಪ್ರಗತಿಯ ವರದಿಯು ಈ ಕೆಳಕಂಡಂತಿರುತ್ತದೆ.
<table>
<tr><th>ಜಿಲ್ಲೆ</th><th>2013–14ನೇ ಸಾಲಿನಲ್ಲಿ ಕಾರ್ಯಾಚರಣೆಯಲ್ಲಿರುವ ಸಂಘಗಳ ಸಂಖ್ಯೆ</th><th>ಪ್ರಸ್ತುತ ಸಾಲಿನಲ್ಲಿ ಕಾರ್ಯಾಚರಣೆಯಲ್ಲಿರುವ ಸಂಘಗಳ ಸಂಖ್ಯೆ</th><th>2013–14ನೇ ಸಾಲಿನಲ್ಲಿ ದಿನವಹಿ ಹಾಲು ಸಂಗ್ರಹಣೆ( ಕೆ.ಜಿ.ಗಳಲ್ಲಿ)</th><th>ಪ್ರಸ್ತುತ ಸಾಲಿನಲ್ಲಿ ದಿನವಹಿ ಹಾಲು ಸಂಗ್ರಹಣೆ(ಕೆ.ಜಿ.ಗಳಲ್ಲಿ)</th><th>13–14ನೇ ಸಾಲಿನಲ್ಲಿ ಹಾಲು ಶೇಖರಣಾ ಮಾರ್ಗಗಳ ಸಂಖ್ಯೆ</th><th>ಪ್ರಸ್ತುತ ಸಾಲಿನಲ್ಲಿರುವ ಹಾಲು ಶೇಖರಣಾ ಮಾರ್ಗಗಳ ಸಂಖ್ಯೆ</th></tr>
<tr><td>ಚಿಕ್ಕಮಗಳೂರು</td><td>160</td><td>198</td><td>54124</td><td>80667</td><td>13</td><td>15</td></tr>
<tr><td>ಹಾಸನ</td><td>1089</td><td>1174</td><td>481053</td><td>656863</td><td>67</td><td>103</td></tr>
</table></td></tr>
</table>

<table>
<tr>
<td></td>
<td></td>
<td></td>
<td>ಕ್ರಮದ ಕುರಿತು.</td>
<td>ಮತ್ತು ಪಶು ಸಂಗೋಪನಾ ಸಚಿವರು ತಿಳಿಸಿದರು.</td>
<td>
<table>
<tr><td>ಕೊಡಗು</td><td>29</td><td>32</td><td>9779</td><td>13428</td><td>9</td><td>11</td></tr>
<tr><td>ಶಿವಮೊಗ್ಗ</td><td>407</td><td>480</td><td>146738</td><td>215100</td><td>31</td><td>50</td></tr>
<tr><td>ಉ.ಕನ್ನಡ</td><td>158</td><td>214</td><td>29151</td><td>49048</td><td>16</td><td>28</td></tr>
</table>
ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ಸಮಿತಿಯು ತೀರ್ಮಾನಿಸಿತು.
</td>
</tr>
<tr>
<td>3</td>
<td>5246</td>
<td>ಚು.ರ.ಪ್ರ. 1869<br>ಶ್ರೀ ಕೋಟ ಶ್ರೀನಿವಾಸ ಪೂಜಾರಿ<br>ವಿಪನದಿ:<br>24–07–2014</td>
<td>ರಾಜ್ಯದ ಎಲ್ಲಾ ಪಶು ಚಿಕಿತ್ಸಾಲಯಗಳಲ್ಲಿ ಖಾಲಿ ಇರುವ “ಡಿ” ದರ್ಜೆ ನೌಕರರ ಕೊರತೆಯನ್ನು ತುಂಬಲು ಸರ್ಕಾರ ಕೈಗೊಂಡ ಕ್ರಮದ ಬಗ್ಗೆ.</td>
<td>ರಾಜ್ಯಾದ್ಯಂತ ಪಶುವೈದ್ಯ ಸಂಸ್ಥೆಗಳಲ್ಲಿ ಖಾಲಿ ಇರುವ ಡಿ–ದರ್ಜೆ ಹುದ್ದೆಗಳನ್ನು ಭರ್ತಿ ಮಾಡುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ ಎಂದು ಮಾನ್ಯ ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಮತ್ತು ಪಶು ಸಂಗೋಪನಾ ಸಚಿವರು ತಿಳಿಸಿದರು.</td>
<td>ದಿನಾಂಕ: 02.01.2018ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ಪಶುಪಾಲನಾ ಇಲಾಖೆಯ ಆಯುಕ್ತಾಲಯದ ಆದೇಶ ಸಂಖ್ಯೆ. ಆಪಸಂ ಸಿಬ್ಬಂದಿ–10 ವಿವ–8 2015–16, ದಿನಾಂಕ: 5–10–2016ರ ಅನ್ವಯ ರಾಜ್ಯದ 30 ಜಿಲ್ಲೆಗಳಲ್ಲಿನ ಇಲಾಖೆಯ ಪಶುವೈದ್ಯಕೀಯ ಸಂಸ್ಥೆಗಳಲ್ಲಿ ಖಾಲಿ ಇರುವ 1500 ಡಿ–ದರ್ಜೆ ಹುದ್ದೆಗಳಿಗೆ ಹೊರಗುತ್ತಿಗೆ ಆಧಾರದ ಮೇಲೆ ಸೇವೆ ಪಡೆಯಲಾಗುತ್ತಿದೆ ಹಾಗೂ ಇಲಾಖೆಯಲ್ಲಿ ಖಾಲಿ ಇರುವ 4,000 ಡಿ–ದರ್ಜೆ ಹುದ್ದೆಗಳನ್ನು ಭರ್ತಿ ಮಾಡುವ ಕುರಿತು ಪ್ರಸ್ತಾವನೆ ಸರ್ಕಾರದ ಹಂತದಲ್ಲಿ ಪರಿಶೀಲನೆಯಲ್ಲಿದೆ. ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ಸಮಿತಿಯು ತೀರ್ಮಾನಿಸಿತು.</td>
</tr>
<tr>
<td>4</td>
<td>5247</td>
<td>ಚು.ರ.ಪ್ರ. 1897<br>ಶ್ರೀ ಮಹಂತೇಶ ಶಿವಾನಂದ ಕೌಜಲಗಿ<br>ವಿಪನದಿ:<br>24–07–2014</td>
<td>ಬೆಳಗಾವಿ ಜಿಲ್ಲೆ, ಬೈಲಹೊಂಗಲ ತಾಲ್ಲೂಕಿನ ಬೈಲವಾಡ ಹಾಗೂ ದೇವಲಾಪೂರ ಗ್ರಾಮಗಳಲ್ಲಿ ಪ್ರಾಥಮಿಕ ಪಶು ಚಿಕಿತ್ಸಾಲಯ ಪ್ರಾರಂಭಿಸಲು ಕ್ರಮ ಕೈಗೊಳ್ಳುವ ಬಗ್ಗೆ.</td>
<td>ರಾಷ್ಟ್ರೀಯ ಕೃಷಿ ಆಯೋಗದ ಶಿಫಾರಸ್ಸಿನಂತೆ ಪ್ರತಿ 5000 ಜಾನುವಾರು ಘಟಕಗಳಿಗೆ ಕನಿಷ್ಠ ಒಂದು ಪಶುವೈದ್ಯ ಸಂಸ್ಥೆ ಇರಬೇಕಾಗಿದ್ದು, ಇದರ ಅನ್ವಯ ಹೊಸ ಪಶು ಚಿಕಿತ್ಸಾಲಯಗಳನ್ನು ತೆರೆಯಲು ಉದ್ದೇಶಿಸಲಾಗಿದ್ದು, ಗ್ರಾಮಗಳನ್ನು ಗುರುತಿಸುವ ಕಾರ್ಯ ಪರಿಶೀಲನೆಯಲ್ಲಿದೆ.</td>
<td>ದಿನಾಂಕ: 02.01.2018ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು, ರಾಷ್ಟ್ರೀಯ ಕೃಷಿ ಆಯೋಗದ ಶಿಫಾರಸ್ಸಿನಂತೆ ಪ್ರತಿ 5000 ಜಾನುವಾರು ಘಟಕಗಳಿಗೆ ಕನಿಷ್ಠ ಒಂದು ಪಶುವೈದ್ಯ ಸಂಸ್ಥೆ ಇರಬೇಕಾಗಿದ್ದು, ಬೈಲಹೊಂಗಲ ತಾಲ್ಲೂಕಿನಲ್ಲಿ 2012ರ ಜಾನುವಾರು ಗಣತಿಯಂತೆ ಒಟ್ಟು 1,24,978 ಜಾನುವಾರು ಘಟಕಗಳಿದ್ದು, ಆ ಮೇರೆಗೆ 25 ಪಶುವೈದ್ಯಕೀಯ ಸಂಸ್ಥೆಗಳು ಕಾರ್ಯನಿರ್ವಹಿಸ ಬೇಕಾಗಿರುತ್ತದೆ; ಬೈಲಹೊಂಗಲ ತಾಲ್ಲೂಕಿನಲ್ಲಿ ಹಾಲಿ 35 ವಿವಿಧ ಹಂತದ ಪಶುವೈದ್ಯಕೀಯ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿವೆ.</td>
</tr>
</table>

| | | | | | |
|---|---|---|---|---|---|
| | | | | ಅರ್ಹತೆ ಆಧಾರದ ಮೇಲೆ ಪರಿಶೀಲಿಸಲಾಗುವುದು ಎಂದು ಮಾನ್ಯ ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಮತ್ತು ಪಶು ಸಂಗೋಪನಾ ಸಚಿವರು ತಿಳಿಸಿದರು. | 2014–15ನೇ ಸಾಲಿನಲ್ಲಿ ಸರ್ಕಾರದ ಆದೇಶ ಸಂಖ್ಯೆ. ಪಸಂಮೀ 73 ಪಸಸೇ 2014, ದಿನಾಂಕ 24–12–2014 ರಲ್ಲಿ ರಾಜ್ಯದಲ್ಲಿ 100 ಹೊಸ ಪಶುಚಿಕಿತ್ಸಾಲಯಗಳನ್ನು ತೆರೆಯಲಾಗಿದೆ ಹಾಗೂ 100 ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರಗಳನ್ನು ಪಶು ಚಿಕಿತ್ಸಾಲಯಗಳನ್ನಾಗಿ ಮೇಲ್ದರ್ಜೆಗೇರಿಸಲಾಗಿದೆ.<br><br>ಬೈಲಹೊಂಗಲ ತಾಲ್ಲೂಕಿನ ದೇವಲಾಪುರ ಗ್ರಾಮದಲ್ಲಿ ಈಗಾಗಲೇ ಪ್ರಾಥಮಿಕ ಪಶು ಚಿಕಿತ್ಸಾಲಯ ಕಾರ್ಯನಿರ್ವಹಿಸುತ್ತಿದೆ.<br><br>ರಾಜ್ಯದ ಎಲ್ಲ ಹಳ್ಳಿಗಳಲ್ಲಿ ಪರಿಣಿತ ಹಾಗೂ ಸುಧಾರಿತ ಪಶುವೈದ್ಯಕೀಯ ಸೇವೆಗಳನ್ನು ವಿಸ್ತರಿಸುವ ಗುರಿಯೊಂದಿಗೆ, ಹಂತ ಹಂತವಾಗಿ ಎಲ್ಲಾ 1,512 ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರಗಳನ್ನು ಪಶು ಚಿಕಿತ್ಸಾಲಯಗಳನ್ನಾಗಿ ಮೇಲ್ದರ್ಜೆಗೇರಿಸಲು ಉದ್ದೇಶಿಸಲಾಗಿದ್ದು, 2017–18ನೇ ಸಾಲಿನಲ್ಲಿ ಇಂತಹ 302 ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರಗಳನ್ನು ಪಶು ಚಿಕಿತ್ಸಾಲಯಗಳನ್ನಾಗಿ ಮೇಲ್ದರ್ಜೆಗೇರಿಸಲಾಗಿದ್ದು, ಸ್ಥಳ ಗುರುತಿಸಲಾಗಿರುತ್ತದೆ.<br><br>ಇಲಾಖೆಯಲ್ಲಿ ಹೊಸದಾಗಿ ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರಗಳು ಪ್ರಾರಂಭಿಸುವ ಯೋಜನೆ ಇರುವುದಿಲ್ಲ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ಸಮಿತಿಯು ತೀರ್ಮಾನಿಸಿತು. |

| | | | | | |
|---|---|---|---|---|---|
| 5 | 5248 | ಚು.ರ.ಪ್ರ. 1944<br>ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ<br>ವಿಪನದಿ:<br>24–07–2014 | ಸಾಕು ಪ್ರಾಣಿಗಳ ಶಸ್ತ್ರ ಚಿಕಿತ್ಸೆಗೆ ಅನುಕೂಲಕರ ಎಕ್ಸ್‌ರೇ ಪ್ಲಾಂಟ್ / ಸ್ಕಾನಿಂಗ್ ವ್ಯವಸ್ಥೆಯನ್ನು ಹೊಂದಿಲ್ಲದ ಜಿಲ್ಲೆಗಳಲ್ಲಿ ಸಾಕು ಪ್ರಾಣಿಗಳ ಶಸ್ತ್ರ ಚಿಕಿತ್ಸೆಗೆ ಕನಿಷ್ಠ ವ್ಯವಸ್ಥೆಗಳನ್ನು ಕಲ್ಪಿಸುವ ಬಗ್ಗೆ | ಜಿಲ್ಲಾ ಮಟ್ಟದ ಪಶು ಆಸ್ಪತ್ರೆಗಳನ್ನು ಪಾಲಿ ಕ್ಲಿನಿಕ್‌ಗಳಾಗಿ ಮೇಲ್ದರ್ಜೆಗೇರಿಸಿದ್ದು, ಎಕ್ಸ್‌ರೇ ಪ್ಲಾಂಟ್/ಸ್ಕ್ಯಾನಿಂಗ್ ವ್ಯವಸ್ಥೆಗಳು ಇಲ್ಲದ ಜಿಲ್ಲೆಗಳಲ್ಲಿ ಹಂತ ಹಂತವಾಗಿ<br>ಈ ಸೌಲಭ್ಯವನ್ನು ಒದಗಿಸಲು ಕ್ರಮವಹಿಸಲಾಗುವುದು ಎಂದು ಮಾನ್ಯ ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಮತ್ತು ಪಶು ಸಂಗೋಪನಾ ಸಚಿವರು ತಿಳಿಸಿದರು. | ದಿನಾಂಕ: 02.01.2018ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, 2017–18ನೇ ಸಾಲಿನಲ್ಲಿ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ ಅಡಿಯಲ್ಲಿ 30 ಪಾಲಿಕ್ಲಿನಿಕ್‌ಗಳಿಗೆ ಅಗತ್ಯವಿರುವ ಸ್ಕ್ಯಾನಿಂಗ್ ಸೌಲಭ್ಯಗಳನ್ನು ಒದಗಿಸಲು ಕ್ರಮವಹಿಸಲಾಗಿದೆ. ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ಸಮಿತಿಯು ತೀರ್ಮಾನಿಸಿತು. |
| 6 | 5249 | ಚು.ರ.ಪ್ರ. ಸಂಖ್ಯೆ: 2158, ಶ್ರೀ ಐವನ್ ಡಿ.ಸೋಜಾ ವಿ.ಪ್ರ.ನ ದಿ:30.07.2014 | ದಕ್ಷಿಣ ಕನ್ನಡ ಜಿಲ್ಲೆಯ ಹಳೇ ಬಂದರಿನಲ್ಲಿರುವ ಮೀನುಗಾರಿಕಾ ಬಂದರಿನಲ್ಲಿ ಒಣ ಮೀನು ಮಾರಾಟ ಮಾಡುವ ಮಹಿಳೆಯರಿಗಾಗಿ ಭೂಮಿಯ ಸ್ಥಳವನ್ನು ಗುರುತಿಸಿ ನೀಡುವ ಬಗ್ಗೆ | ಒಟ್ಟು 1,64,961 ಚ.ಮೀ. ಬಂದರು ಭೂಮಿಯನ್ನು ಬಂದರು ಇಲಾಖೆಯಿಂದ ಮೀನುಗಾರಿಕೆ ಇಳಾಖೆಗೆ ನೀಡಲಾಗಿದ್ದು, ಸದರಿ ಬಂದರು ಭೂಮಿಗಳಲ್ಲಿ ಮೀನುಗಾರರಿಗೆ ವಿವಿಧ ಉದ್ದೇಶಗಳಿಗೆ ಭೂಮಿ ಹಂಚಿಕೆಯನ್ನು ಮೀನುಗಾರಿಕೆ ಇಲಾಖೆಯ ವತಿಯಿಂದ ಮಾಡಲಾಗುತ್ತಿದೆ ಎಂದು ಮಾನ್ಯ ಜವಳಿ ಬಂದರು ಮತ್ತು | ದಿನಾಂಕ: 02.01.2018ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ:<br><br>ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ಮೀನುಗಾರಿಕೆ ಬಂದರಿಗೆ ಬಂದರು ಇಲಾಖೆಯಿಂದ ಗುತ್ತಿಗೆ ಮೇಲೆ ನೀಡಿರುವ ಜಮೀನಿನಲ್ಲಿ ಮೀನುಗಾರರಿಗೆ ಮೀನುಗಾರಿಕೆಗೆ ಅನುಕೂಲವಾಗುವಂತೆ ಜೆಟ್ಟಿ ನಿರ್ಮಾಣ, ಹರಾಜು ಮಳಿಗೆ, ಮೀನು ಲೋಡ್ ಮಾಡುವ ಪ್ರದೇಶ, ಮೀನು ಸಾಗಾಟಕ್ಕೆ ರಸ್ತೆ, ಮಂಜುಗಡ್ಡೆ ಕಾರ್ಖಾನೆ, ಡೀಸಲ್ ಬಂಕ್, ವರ್ಕ್‌ಶಾಪ್ ಮೊದಲಾದ ಪೂರಕ ಸೌಲಭ್ಯಗಳ ನಿರ್ಮಾಣಕ್ಕೆ ಸಂಘ ಸಂಸ್ಥೆಗಳಿಗೆ ನಿವೇಶನವನ್ನು ಈಗಾಗಲೇ ಮಂಜೂರು ಮಾಡಲಾಗಿದೆ. |

| | | | | | |
|---|---|---|---|---|---|
| | | | | ಒಳನಾಡು ಜಲಸಾರಿಗೆ ಸಚಿವರು ತಿಳಿಸಿದರು. | ಸರ್ಕಾರದ ಆದೇಶ ಸಂಖ್ಯೆ: ಪಸಂಮೀ/219/ಮೀಇಯೋ 2016 ದಿ: 17-02-2017 ರಲ್ಲಿ ಮಂಗಳೂರು ಮೀನುಗಾರಿಕೆ ಬಂದರಿನ 3ನೇ ಹಂತದ ಯೋಜನೆಯ ಬೆಂಗ್ರೆ ಪ್ರದೇಶದಲ್ಲಿ ಮೀನು ಒಣಗಿಸುವ ಕಾರ್ಯದಲ್ಲಿ ತೊಡಗಿರುವ ಮೀನುಗಾರರ ಮಹಿಳೆಯರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ರೂ.47.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಒಟ್ಟು 24 ಶೆಡ್‌ಗಳನ್ನು ನಿರ್ಮಿಸಲು ಸರ್ಕಾರದಿಂದ ಆಡಳಿತಾತ್ಮಕ ಮಂಜೂರಾತಿಯನ್ನು ನೀಡಲಾಗಿದೆ.<br><br>ಈ ಪ್ರದೇಶದಲ್ಲಿ ಉದ್ದೇಶಿತ ಕಟ್ಟಡ ನಿರ್ಮಾಣಕ್ಕೆ ಕಾರ್ಯಪಾಲಕ ಅಭಿಯಂತರರು, ಬಂದರು ಮತ್ತು ಮೀನುಗಾರಿಕೆ ವಿಭಾಗ, ಉಡುಪಿರವರು ಟೆಂಡರ್ ಕರೆದು ಕಾಮಗಾರಿಗೆ ಆದೇಶವನ್ನು ನೀಡಲಾಗಿದ್ದು, ಕಾಮಗಾರಿ ಪ್ರಾರಂಭಿಸಲಾಗಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ಸಮಿತಿಯು ತೀರ್ಮಾನಿಸಿತು. |
| 7 | 5250 | ಚು.ಗು.ಪ್ರ: 651<br>ಶ್ರೀ ಮರಿತಿಬ್ಬೇಗೌಡ<br>ವಿಪನದಿ:<br>03-07-2014 | ರಾಜ್ಯದಲ್ಲಿನ ಹಾಲು ಉತ್ಪಾದಕರು ಸರಬರಾಜು ಮಾಡುವ ಹಾಲಿಗೆ ಸರ್ಕಾರದಿಂದ ನೀಡಲಾಗುವ ಪ್ರೋತ್ಸಾಹ ಧನವನ್ನು ಪರಿಷ್ಕರಿಸುವ ಬಗ್ಗೆ. | ಹಾಲನ್ನು ಸರಬರಾಜು ಮಾಡುವ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡಗಳ ಸದಸ್ಯರಿಗೆ ಮಾತ್ರ ಪ್ರತಿ ಲೀಟರ್‌ಗೆ ರೂ. 2/-ರಂತೆ ಹೆಚ್ಚುವರಿಯಾಗಿ ಪ್ರೋತ್ಸಾಹ ಧನ ನೀಡುವ ಬಗ್ಗೆ ಸರ್ಕಾರದ ಪರಿಶೀಲನೆಯಲ್ಲಿದೆ ಎಂದು ಮಾನ್ಯ ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು ಹಾಗೂ ಶಾಸನ | ದಿನಾಂಕ: 02.01.2018ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ದಿನಾಂಕ 8-7-2014ರಂದು ಮಾನ್ಯ ಕಾನೂನು ಸಚಿವರು ಹಾಗೂ ಸಮಾಜ ಕಲ್ಯಾಣ ಸಚಿವರ ಉಪಸ್ಥಿತಿಯಲ್ಲಿ ಕರ್ನಾಟಕ ಅನುಸೂಚಿತ ಜಾತಿಗಳ ಉಪ ಯೋಜನೆ ಮತ್ತು ಬುಡಕಟ್ಟು ಉಪ ಯೋಜನೆ ಅಧಿನಿಯಮ 2013ರ ಅಡಿಯಲ್ಲಿ ಹಾಲು ಉತ್ಪಾದಕರಿಗೆ ಹೆಚ್ಚಿನ ಪ್ರೋತ್ಸಾಹಧನ ನೀಡುವ ಕುರಿತು ನಡೆದ ಸಭೆಯ ನಡವಳಿಯಲ್ಲಿ ಹಾಲು ಉತ್ಪಾದಕರ ಸಹಕಾರ ಸಂಘಗಳಿಗೆ ಹಾಲು ಪೂರೈಕೆ ಮಾಡುತ್ತಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಹೈನುಗಾರರಿಗೆ ಹಾಲಿ ಇರುವ ಪ್ರತಿ ಲೀಟರಿಗೆ ರೂ. 4/-ರಂತೆ ಪ್ರೋತ್ಸಾಹ ಧನ ನೀಡುವುದು, ಹಾಲು |

| | | | | | |
|---|---|---|---|---|---|
| | | | | ರಚನೆ ಮತ್ತು ಪಶು ಸಂಗೋಪನಾ ಸಚಿವರು ತಿಳಿಸಿದರು. | ಉತ್ಪಾದಕರಿಗೆ ಪ್ರೋತ್ಸಾಹಧನ ನೀಡುವ ಯೋಜನೆ ಅಡಿಯಲ್ಲಿ ಉಳಿಕೆಯಾಗುವ ಅನುದಾನವನ್ನು ಅದೇ ವರ್ಗದ ಅಂದರೆ ಪರಿಶಿಷ್ಟ ಜಾತಿ/ಪಂಗಡದ ಜನರಿಗೆ ಹೈನುರಾಸುಗಳನ್ನು ಕೊಡಿಸುವ ಮೂಲಕ ಹಾಲು ಉತ್ಪಾದನೆಯನ್ನು ಹೆಚ್ಚಿಸುವುದು ಹಾಗೂ ಅವರ ಆರ್ಥಿಕ ಮಟ್ಟವನ್ನು ಹೆಚ್ಚಿಸಲು ಕ್ರಮ ಕೈಗೊಳ್ಳುವುದು ಎಂಬ ತೀರ್ಮಾನದಂತೆ ಹಾಗೂ ದಿನಾಂಕ 10-10-2014ರಂದು ಸನ್ಮಾನ್ಯ ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ಕರ್ನಾಟಕ ಅನುಸೂಚಿತ ಜಾತಿಗಳ ಉಪ ಯೋಜನೆ ಮತ್ತು ಬುಡಕಟ್ಟು ಉಪ ಯೋಜನೆ [ಯೋಜನೆ ರೂಪಿಸುವುದು, ಆರ್ಥಿಕ ಸಂಪನ್ಮೂಲಗಳ ಹಂಚಿಕೆ ಮತ್ತು ಬಳಕೆ] ಅಧಿನಿಯಮ, 2013ರ ಪ್ರಕಾರ ರಾಜ್ಯ ಅನುಸೂಚಿತ ಜಾತಿಗಳು/ ಅನುಸೂಚಿತ ಪಂಗಡಗಳ ಅಭಿವೃದ್ಧಿ ಪರಿಷತ್ತಿನ 2ನೇ ಸಭೆಯ ನಡವಳಿಗಳಲ್ಲಿ ಕೈಗೊಂಡ ತೀರ್ಮಾನದಂತೆ 2014-15ನೇ ಸಾಲಿನಲ್ಲಿ ವಿಶೇಷ ಘಟಕ ಯೋಜನೆ ಅಡಿಯಲ್ಲಿ ರೂ. 82.38 ಕೋಟಿಗಳ ಅನುದಾನವನ್ನು 10,000 ಪರಿಶಿಷ್ಟ ಜಾತಿ ಫಲಾನುಭವಿಗಳಿಗೆ ಶೇ. 75ರ ಸಹಾಯ ಧನ ಹಾಗೂ ಶೇ. 25ರ ಬ್ಯಾಂಕ್ ಸಾಲ/ಫಲಾನುಭವಿ ವಂತಿಕೆಯೊಂದಿಗೆ ರೂ. 1.00 ಲಕ್ಷಗಳ ಘಟಕ ವೆಚ್ಚದಲ್ಲಿ ಹೈನು ರಾಸುಗಳನ್ನು ನೀಡುವ ಕಾರ್ಯಕ್ರಮ ಹಾಗೂ ಗಿರಿಜನ ಉಪ ಯೋಜನೆ ಅಡಿಯಲ್ಲಿ ರೂ. 21.83 ಕೋಟಿಗಳ ಅನುದಾನವನ್ನು 3,000 ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ಶೇ. 75ರ ಸಹಾಯಧನ ಹಾಗೂ ಶೇ.25ರ ಬ್ಯಾಂಕ್ ಸಾಲ/ಫಲಾನುಭವಿ ವಂತಿಕೆಯೊಂದಿಗೆ ರೂ. 1.00 ಲಕ್ಷಗಳ ಘಟಕ ವೆಚ್ಚದಲ್ಲಿ ಹೈನು ರಾಸುಗಳನ್ನು ನೀಡುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಪ್ರೋತ್ಸಾಹ ಧನವು ಹೆಚ್ಚಿಗೆ ಮಾಡುವುದಕ್ಕೆ ಕ್ರಮ ವಹಿಸಲು ಸೂಚಿಸಿ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ಸಮಿತಿಯು ತೀರ್ಮಾನಿಸಿತು. |

<table>
<tr>
<td>8</td>
<td>5251</td>
<td>ಚು.ರ.ಪ್ರ. 667<br>ಶ್ರೀ ಆಚಾರ್ ಹಾಲಪ್ಪ ಬಸಪ್ಪ<br>ವಿಪನದಿ: 3–7–2014</td>
<td>ಕೊಪ್ಪಳ ಜಿಲ್ಲೆಯಲ್ಲಿರುವ ಸ್ಪೆಷಾಲಿಟಿ ಪಶು ಚಿಕಿತ್ಸಾಲಯಗಳಲ್ಲಿ ಖಾಲಿ ಇರುವ ವಿವಿಧ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ.</td>
<td>ಖಾಲಿ ಇರುವ ಹುದ್ದೆಗಳನ್ನು ನೇರ ನೇಮಕಾತಿ / ಮುಂಬಡ್ತಿ ಮೂಲಕ ಭರ್ತಿ ಮಾಡಲು ಕ್ರಮ ವಹಿಸಲಾಗುವುದು ಎಂದು ಮಾನ್ಯ ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಮತ್ತು ಪಶು ಸಂಗೋಪನಾ ಸಚಿವರು ತಿಳಿಸಿದರು.</td>
<td>ದಿನಾಂಕ: 02.01.2018ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ಕೊಪ್ಪಳ ಜಿಲ್ಲೆಯಲ್ಲಿ ಒಂದು ಪಶುವೈದ್ಯಕೀಯ ಪಾಲಿಕ್ಲಿನಿಕ್ ಕಾರ್ಯನಿರ್ವಹಿಸುತ್ತಿದ್ದು, ಇಲ್ಲಿಯ ಹುದ್ದೆಗಳ ವಿವರ ಈ ಕೆಳಕಂಡಂತಿದೆ:–
<table>
<tr><th>ಕ್ರ. ಸಂ.</th><th>ಪದನಾಮ</th><th>ಮಂ</th><th>ಭ</th><th>ಖಾ</th></tr>
<tr><td>1</td><td>ಉಪ ನಿರ್ದೇಶಕರು</td><td>1</td><td>0</td><td>1</td></tr>
<tr><td>2</td><td>ವಿಷಯ ತಜ್ಞರು [ಮುಖ್ಯ [ಆಡಳಿತ] / ಮುಖ್ಯ / ಹಿರಿಯ ಪಶುವೈದ್ಯಾಧಿಕಾರಿ]</td><td>1</td><td>0</td><td>1</td></tr>
<tr><td>3</td><td>ಎಕ್ಸ್–ರೇ / ಲ್ಯಾಬ್ ಟೆಕ್ನಿಷಿಯನ್</td><td>1</td><td>0</td><td>1</td></tr>
<tr><td>4</td><td>ಪಶುವೈದ್ಯಕೀಯ ಪರೀಕ್ಷಕರು</td><td>1</td><td>1</td><td>0</td></tr>
<tr><td>5</td><td>ಪ್ರಥಮ ದರ್ಜೆ ಸಹಾಯಕರು</td><td>1</td><td>1</td><td>0</td></tr>
<tr><td>6</td><td>ವಾಹನ ಚಾಲಕರು</td><td>1</td><td>0</td><td>1</td></tr>
<tr><td>7</td><td>ಡಿ–ದರ್ಜೆ ನೌಕರರು</td><td>2</td><td>0</td><td>2</td></tr>
</table>
ಉಪ ನಿರ್ದೇಶಕರು/ವಿಷಯ ತಜ್ಞರು [ಮುಖ್ಯ [ಆಡಳಿತ] /ಮುಖ್ಯ/ಹಿರಿಯ ಪಶುವೈದ್ಯಾಧಿಕಾರಿ] ಹುದ್ದೆಗಳು ಮುಂಬಡ್ತಿ ಹುದ್ದೆಗಳಾಗಿದ್ದು, ಭಾರತ ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ಹಿನ್ನೆಲೆಯಲ್ಲಿ ಸರ್ಕಾರವು ಮುಂಬಡ್ತಿ ಪ್ರಕ್ರಿಯೆಯನ್ನು ತಡೆಹಿಡಿದಿದ್ದು, ಸರ್ಕಾರದ ಮುಂದಿನ ಆದೇಶದ ನಂತರ ಖಾಲಿ ಹುದ್ದೆಗಳನ್ನು ಮುಂಬಡ್ತಿ ಮುಖಾಂತರ ಭರ್ತಿ ಮಾಡಲು ಕ್ರಮವಹಿಸಲಾಗುವುದು.</td>
</tr>
</table>

| | | | | | |
|---|---|---|---|---|---|
| | | | | | ಎಕ್ಸ್–ರೇ/ಲ್ಯಾಬ್ ಟೆಕ್ನಿಷಿಯನ್ ಹುದ್ದೆಯು ಹೊಸದಾಗಿ ಸೃಜನೆಯಾಗಿದ್ದು, ಇಲಾಖಾ ವೃಂದ ಮತ್ತು ನೇಮಕಾತಿ ನಿಯಮಾವಳಿ ಅಂತಿಮಗೊಂಡಿದ್ದು, ನೇಮಕಾತಿಗಾಗಿ ಕ್ರಮವಹಿಸಲಾಗುವುದು.<br><br>ಪ್ರಸ್ತುತ ಖಾಲಿ ಇರುವ 2 ಡಿ–ದರ್ಜೆ ಹುದ್ದೆಗಳಿಗೆ ಹೊರಗುತ್ತಿಗೆ ಆಧಾರದಲ್ಲಿ ಸೇವೆಯನ್ನು ಪಡೆಯಲಾಗುತ್ತಿದೆ. ಇಲಾಖೆಯಲ್ಲಿ ಖಾಲಿ ಇರುವ 4,000 ಡಿ–ದರ್ಜೆ ಹುದ್ದೆಗಳನ್ನು ಭರ್ತಿ ಮಾಡುವ ಕುರಿತ ಪ್ರಸ್ತಾವನೆ ಸರ್ಕಾರದ ಹಂತದಲ್ಲಿ ಪರಿಶೀಲನೆಯಲ್ಲಿದೆ.<br><br>ಪಾಲಿಕ್ಲಿನಿಕ್‌ನಲ್ಲಿ ಖಾಲಿ ಇರುವ ಪಶುವೈದ್ಯರ ಹುದ್ದೆಗಳಿಗೆ ಹೆಚ್ಚುವರಿ ಕಾರ್ಯಭಾರದ ಪರ್ಯಾಯ ವ್ಯವಸ್ಥೆ ಮಾಡುವ ಮೂಲಕ ರಾಸುಗಳ ಚಿಕಿತ್ಸೆಗೆ ಸೂಕ್ತ ಕ್ರಮ ವಹಿಸಲಾಗಿದೆ. ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಪಶುವೈದ್ಯರುಗಳು ಡೆಪ್ಯೂಟೇಶನ್ ಮೇಲೆ ತಾಲ್ಲೂಕು ಪಂಚಾಯತಿ, ಜಿಲ್ಲಾ ಪಂಚಾಯತಿಗಳಲ್ಲಿ ಉಪಕಾರ್ಯದರ್ಶಿಯಾಗಿ ಹೋಗುತ್ತಿರುವುದಕ್ಕೆ ಕಡಿವಾಣ ಹಾಕಲು ಸೂಚಿಸಿ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ಸಮಿತಿಯು ತೀರ್ಮಾನಿಸಿತು. |
| 9 | 5252 | ಚು.ರ.ಪ್ರ. 654<br>ಶ್ರೀ ವೈ. ಎ. ನಾರಾಯಣಸ್ವಾಮಿ<br>ವಿಪನದಿ: 3–7–2014 | ಪಶು ವೈದ್ಯಕೀಯ ವಿಶ್ವವಿದ್ಯಾಲಯಗಳಲ್ಲಿ ಪಶು ವೈದ್ಯಕೀಯ ವಿದ್ಯಾರ್ಥಿಗಳ ಪ್ರವೇಶ ಮಿತಿಯನ್ನು ಹೆಚ್ಚಿಸುವ ಬಗ್ಗೆ. | ಕರ್ನಾಟಕ ಪಶು ವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬೀದರ್, ಅಡಿಯಲ್ಲಿ 4 ಪಶು ವೈದ್ಯಕೀಯ ಕಾಲೇಜುಗಳು ಕಾರ್ಯನಿರ್ವಹಿಸುತ್ತಿದ್ದು, ಈ ಕಾಲೇಜುಗಳ ಪ್ರವೇಶ ಮಿತಿಯನ್ನು ಭಾರತೀಯ ಪಶು | ದಿನಾಂಕ: 02.01.2018ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ಕರ್ನಾಟಕ ಪಶು ವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬೀದರಿನ ಅಡಿಯಲ್ಲಿ ಬರುವ 4 ಪಶುವೈದ್ಯಕೀಯ ಕಾಲೇಜುಗಳಲ್ಲಿ ಪ್ರವೇಶ ಮಿತಿಯನ್ನು ಹೆಚ್ಚಿಸುವ ಬಗ್ಗೆ ಈ ಹಿಂದೆ ತಜ್ಞರ ಸಮಿತಿಯನ್ನು ಸರ್ಕಾರದ ಮಟ್ಟದಲ್ಲಿ ರಚಿಸಲಾಗಿತ್ತು. ಸದರಿ ಸಮಿತಿಯು ಪ್ರವೇಶ ಮಿತಿಯನ್ನು ಹೆಚ್ಚಿಸಲು ಶಿಫಾರಸ್ಸು ಮಾಡಲಾಗಿರುತ್ತದೆ. ಅದರಂತೆ ಭಾರತೀಯ ಪಶುವೈದ್ಯಕೀಯ ಪರಿಷತ್ತು, ನವದೆಹಲಿಯು ಈ ಕೆಳಕಂಡಂತೆ |

<table>
<tr>
<td></td>
<td></td>
<td></td>
<td></td>
<td>ವೈದ್ಯಕೀಯ ಪರಿಷತ್ತು ನಿಗದಿದಪಡಿಸಿದ್ದು, ಸದರಿ ಪ್ರವೇಶ ಮಿತಿಯನ್ನು ಹೆಚ್ಚಿಸಲು ಭಾರತೀಯ ಪಶು ವೈದ್ಯಕೀಯ ಪರಿಷತ್ತಿನ ಅನುಮತಿ ಪಡೆಯಬೇಕಾಗುತ್ತದೆ.<br>ಸರ್ಕಾರವು ತಜ್ಞರ ಸಮಿತಿಯನ್ನು ರಚಿಸಿದ್ದು, ಈ ಕಾಲೇಜುಗಳ ಪ್ರವೇಶ ಸಾಮರ್ಥ್ಯವನ್ನು ಹೆಚ್ಚಿಸುವ ಬಗ್ಗೆ ಸಲಹೆಗಳನ್ನು ನೀಡಲಿದ್ದು, ಅದರಂತೆ ಕ್ರಮವಹಿಸಲಾಗುವುದು ಎಂದು ಮಾನ್ಯ ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಮತ್ತು ಪಶು ಸಂಗೋಪನಾ ಸಚಿವರು ತಿಳಿಸಿದರು.</td>
<td>ಪ್ರವೇಶ ಮಿತಿಯನ್ನು ಹೆಚ್ಚಿಸಲು ಅನುಮತಿ ನೀಡಲಾಗಿದ್ದು, ಅದರಂತೆ 2015–16 ಮತ್ತು 2016–17ನೇ ಸಾಲಿಗೆ ಪ್ರವೇಶವನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಮುಖೇನ ನೀಡಲಾಗಿದೆ.
<table>
<tr><th>ಕ್ರ. ಸಂ</th><th>ಕಾಲೇಜು</th><th>ಹಿಂದೆ ಇರುವ ಪ್ರವೇಶ ಮಿತಿ</th><th>ಹೆಚ್ಚಿಸಿರುವ ಪ್ರವೇಶ ಸಂಖ್ಯೆ</th></tr>
<tr><td>1.</td><td>ಪಶುವೈದ್ಯಕೀಯ ಮಹಾವಿದ್ಯಾಲಯ, ಬೆಂಗಳೂರು.</td><td>60</td><td>75</td></tr>
<tr><td>2.</td><td>ಪಶುವೈದ್ಯಕೀಯ ಮಹಾವಿದ್ಯಾಲಯ, ಬೀದರ್.</td><td>60</td><td>60</td></tr>
<tr><td>3.</td><td>ಪಶುವೈದ್ಯಕೀಯ ಮಹಾವಿದ್ಯಾಲಯ, ಹಾಸನ.</td><td>60</td><td>75</td></tr>
<tr><td>4.</td><td>ಪಶುವೈದ್ಯಕೀಯ ಮಹಾವಿದ್ಯಾಲಯ, ಶಿವಮೊಗ್ಗ.</td><td>60</td><td>80</td></tr>
</table>
ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ಸಮಿತಿಯು ತೀರ್ಮಾನಿಸಿತು.</td>
</tr>
</table>

| | | | | | |
|---|---|---|---|---|---|
| 10 | 5253 | ಚು.ರ.ಪ್ರ. 670<br>ಶ್ರೀ ಕೋಟ ಶ್ರೀನಿವಾಸ ಪೂಜಾರಿ<br>ವಿಪನದಿ: 3–7–2014 | ರಾಜ್ಯದಲ್ಲಿರುವ ಪಶು ಆಸ್ಪತ್ರೆಗಳನ್ನು ಮೇಲ್ದರ್ಜೆಗೇರಿಸುವ ನಿಟ್ಟಿನಲ್ಲಿ ಸರ್ಕಾರ ತೆಗೆದುಕೊಂಡಿರುವ ಕ್ರಮದ ಬಗ್ಗೆ. | ರಾಜ್ಯದಲ್ಲಿ ಹೊಸದಾಗಿ 100 ಪಶು ಚಿಕಿತ್ಸಾ ಕೇಂದ್ರಗಳನ್ನು ಪ್ರಾರಂಭಿಸಲು ಹಾಗೂ 100 ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರಗಳನ್ನು ಮೇಲ್ದರ್ಜೆಗೇರಿಸಲು ಉದ್ದೇಶಿಸಲಾಗಿದ್ದು, ಪ್ರಸ್ತಾವನೆ ಪರಿಶೀಲನೆಯಲ್ಲಿದೆ ಎಂದು ಮಾನ್ಯ ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಮತ್ತು ಪಶು ಸಂಗೋಪನಾ ಸಚಿವರು ತಿಳಿಸಿದರು. | ದಿನಾಂಕ: 02.01.2018ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, 2014–15 ನೇ ಸಾಲಿನಲ್ಲಿ ಸರ್ಕಾರದ ಆದೇಶ ಸಂ. ಪಸಂಮೀ 73 ಪಸಸೇ 2014 ಬೆಂಗಳೂರು ದಿನಾಂಕ: 24–12–2014 ರಲ್ಲಿ 100 ಹೊಸ ಪಶು ಚಿಕಿತ್ಸಾಲಯಗಳನ್ನು ತೆರೆಯಲು ಹಾಗೂ 100 ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರಗಳನ್ನು ಪಶು ಚಿಕಿತ್ಸಾಲಯಗಳನ್ನಾಗಿ ಮೇಲ್ದರ್ಜೆಗೇರಿಸಲಾಗಿದೆ.<br>ರಾಜ್ಯದ ಎಲ್ಲ ಹಳ್ಳಿಗಳಲ್ಲಿ ಪರಿಣಿತ ಹಾಗೂ ಸುಧಾರಿತ ಪಶುವೈದ್ಯಕೀಯ ಸೇವೆಗಳನ್ನು ವಿಸ್ತರಿಸುವ ಗುರಿಯೊಂದಿಗೆ, ಹಂತ ಹಂತವಾಗಿ 1,512 ಪ್ರಾಥಮಿಕ ಪಶುವೈದ್ಯಕೀಯ ಕೇಂದ್ರಗಳನ್ನು ಪಶುಚಿಕಿತ್ಸಾಲಯಗಳನ್ನಾಗಿ ಮೇಲ್ದರ್ಜೆಗೇರಿಸಲು ಆಯವ್ಯಯದಲ್ಲಿ ಘೋಷಣೆಯಾಗಿದ್ದು, ಅದರಂತೆ, 2017–18ನೇ ಸಾಲಿನಲ್ಲಿ ಇಂತಹ 302 ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರಗಳನ್ನು ಪಶು ಚಿಕಿತ್ಸಾಲಯಗಳನ್ನಾಗಿ ಮೇಲ್ದರ್ಜೆಗೇರಿಸಲಾಗಿದ್ದು, ಸ್ಥಳ ಗುರುತಿಸುವ ಪ್ರಕ್ರಿಯೆ ಚಾಲನೆಯಲ್ಲಿರುತ್ತದೆಯೆಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ಸಮಿತಿಯು ತೀರ್ಮಾನಿಸಿತು. |
| 11 | 5254 | ಚು.ರ.ಪ್ರ. 1069<br>ಶ್ರೀ ಮಹಂತೇಶ ಶಿವಾನಂದ ಕೌಜಲಗಿ<br>ವಿಪನದಿ:<br>10–7–2014 | ಬಾಗಲಕೋಟೆ ಜಿಲ್ಲೆಯ ಬಾದಾಮಿ ತಾಲ್ಲೂಕಿನ ಶಿವಯೋಗ ಮಂದಿರದ ಪಶು ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸುವ ಬಗ್ಗೆ. | ಸದರಿ ವಿಷಯವು ಪರಿಶೀಲನೆಯಲ್ಲಿದೆ ಎಂದು ಮಾನ್ಯ ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಮತ್ತು ಪಶು ಸಂಗೋಪನಾ ಸಚಿವರು ತಿಳಿಸಿದರು. | ದಿನಾಂಕ: 02.01.2018ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ಬಾಗಲಕೋಟೆ ಜಿಲ್ಲೆಯ ಬಾದಾಮಿ ತಾಲ್ಲೂಕಿನ ಶಿವಯೋಗಮಂದಿರದಲ್ಲಿ ಪಶು ಚಿಕಿತ್ಸಾಲಯ ಕಾರ್ಯನಿರ್ವಹಿಸುತ್ತಿದೆ. 2014–15ನೇ ಸಾಲಿನಿಂದ 2017–18ನೇ ಸಾಲಿನವರೆಗೆ ಪಶು ಚಿಕಿತ್ಸಾಲಯಗಳನ್ನು ಪಶು ಆಸ್ಪತ್ರೆಯನ್ನಾಗಿ ಮೇಲ್ದರ್ಜೆಗೇರಿಸುವ ಯಾವುದೇ ಯೋಜನೆ ಇರುವುದಿಲ್ಲ. ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ಸಮಿತಿಯು ತೀರ್ಮಾನಿಸಿತು. |

| | | | | | |
|---|---|---|---|---|---|
| 12 | 5255 | ಚು.ರ.ಪ್ರ. 1100<br>ಶ್ರೀ ಇ. ಕೃಷ್ಣಪ್ಪ<br>ವಿಪನದಿ:<br>10–7–2014 | ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಪಶುವೈದ್ಯಕೀಯ ಆಸ್ಪತ್ರೆಗಳ ಸಂಖ್ಯೆಯನ್ನು ಹೆಚ್ಚಿಸುವ ಬಗ್ಗೆ. | ರಾಜ್ಯದಲ್ಲಿ ಹೊಸದಾಗಿ 100 ಪಶು ಚಿಕಿತ್ಸಾ ಕೇಂದ್ರಗಳನ್ನು ತೆರೆಯಲು ಉದ್ದೇಶಿಸಲಾಗಿದ್ದು, ಅವಶ್ಯಕತೆಗನುಗುಣವಾಗಿ ಆದ್ಯತೆ ಮೇಲೆ ಪರಿಶೀಲಿಸಲಾಗುವುದು ಎಂದು ಮಾನ್ಯ ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಮತ್ತು ಪಶು ಸಂಗೋಪನಾ ಸಚಿವರು ತಿಳಿಸಿದರು. | ದಿನಾಂಕ: 02.01.2018ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ರಾಷ್ಟ್ರೀಯ ಕೃಷಿ ಆಯೋಗದ ಶಿಫಾರಸ್ಸಿನಂತೆ ಪ್ರತಿ 5000 ಜಾನುವಾರು ಘಟಕಗಳಿಗೆ ಕನಿಷ್ಠ ಒಂದು ಪಶುವೈದ್ಯ ಸಂಸ್ಥೆ ಇರಬೇಕಾಗಿದ್ದು, 2014–15 ನೇ ಸಾಲಿನಲ್ಲಿ ಸರ್ಕಾರದ ಆದೇಶ ಸಂಖ್ಯೆ:ಪಸಂಮೀ 73 ಪಸಸೇ 2014, ದಿನಾಂಕ 24–12–2014 ರಲ್ಲಿ ನೆಲಮಂಗಲ ತಾಲ್ಲೂಕಿನ ಶಿವಗಂಗೆ ಹಾಗೂ ದೇವನಹಳ್ಳಿ ತಾಲ್ಲೂಕಿನ ಬೈರಾಪುರ ಗ್ರಾಮಗಳಲ್ಲಿ ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರಗಳನ್ನು ಪಶು ಚಿಕಿತ್ಸಾಲಯಗಳನ್ನಾಗಿ ಮೇಲ್ದರ್ಜೆಗೇರಿಸಲಾಗಿದೆ.<br><br>2012ರ ಜಾನುವಾರು ಗಣತಿಯಂತೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಒಟ್ಟು 2,87,389 ಜಾನುವಾರು ಘಟಕಗಳಿದ್ದು, ರಾಷ್ಟ್ರೀಯ ಕೃಷಿ ಆಯೋಗದ ಶಿಫಾರಸ್ಸಿನಂತೆ ಪ್ರತಿ 5000 ಜಾನುವಾರು ಘಟಕಗಳಿಗೆ ಕನಿಷ್ಠ ಒಂದು ಪಶುವೈದ್ಯ ಸಂಸ್ಥೆ ಇರಬೇಕಾಗಿದ್ದು, ಒಟ್ಟು 58 ಪಶುವೈದ್ಯಕೀಯ ಸಂಸ್ಥೆಗಳ ಅವಶ್ಯಕತೆ ಇರುತ್ತದೆ. ಹಾಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಒಟ್ಟು 101 ವಿವಿಧ ಪಶುವೈದ್ಯ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿರುತ್ತವೆ. [ಪಾಲಿಕ್ಲಿನಿಕ್–1, ಪಶು ಆಸ್ಪತ್ರೆ–13, ಪಶುಚಿಕಿತ್ಸಾಲಯಗಳು–38, ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರಗಳು–45, ಸಂಚಾರಿ ಪಶು ಚಿಕಿತ್ಸಾಲಯಗಳು–4]. ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ಸಮಿತಿಯು ತೀರ್ಮಾನಿಸಿತು. |
| 13 | 5256 | ಚು.ರ.ಪ್ರ. 1145<br>ಶ್ರೀ ಕೋಟ ಶ್ರೀನಿವಾಸ ಪೂಜಾರಿ | ರಾಜ್ಯದಲ್ಲಿ ಪ್ರತಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲೊಂದು | ರಾಜ್ಯದಲ್ಲಿ ವಿವಿಧ ರೀತಿಯ 4112 ಪಶು ವೈದ್ಯಕೀಯ ಸಂಸ್ಥೆಗಳಿರುತ್ತವೆ. ರಾಜ್ಯದಲ್ಲಿ | ದಿನಾಂಕ: 02.01.2018ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ರಾಜ್ಯದಲ್ಲಿ ಒಟ್ಟು 6,692 ಗ್ರಾಮ ಪಂಚಾಯತಿಗಳು ಇರುತ್ತವೆ ಹಾಗೂ ವಿವಿಧ ಹಂತದಲ್ಲಿ 4215 |

| | | | | | |
|---|---|---|---|---|---|
| | | ವಿಪನದಿ: 10–7–2014 | ಪಶು ಸಂಗೋಪನಾ ಆಸ್ಪತ್ರೆ ತೆರೆಯುವ ನಿಟ್ಟಿನಲ್ಲಿ ಸರ್ಕಾರ ಕೈಗೊಂಡ ಕ್ರಮದ ಕುರಿತು. | 100 ಹೊಸ ಪಶು ಚಿಕಿತ್ಸಾ ಕೇಂದ್ರಗಳನ್ನು ತೆರೆಯಲು ಪರಿಶೀಲಿಸಲಾಗುತ್ತಿದೆ. ತತ್ಸಂಬಂಧ ಅರ್ಹ ಗ್ರಾಮಗಳನ್ನು ಗುರುತಿಸುವ ಕಾರ್ಯ ಪರಿಶೀಲನೆಯಲ್ಲಿದೆ ಎಂದು ಮಾನ್ಯ ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಮತ್ತು ಪಶು ಸಂಗೋಪನಾ ಸಚಿವರು ತಿಳಿಸಿದರು. | ಪಶುವೈದ್ಯಕೀಯ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿದ್ದು, 2014–15ನೇ ಸಾಲಿನಲ್ಲಿ 100 ಹೊಸ ಪಶುಚಿಕಿತ್ಸಾಲಯಗಳು ತೆರೆಯಲಾಗಿದ್ದು, 100 ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರಗಳನ್ನು ಪಶು ಚಿಕಿತ್ಸಾಲಯಗಳನ್ನಾಗಿ ಮೇಲ್ದರ್ಜೆಗೇರಿಸಲಾಗಿರುತ್ತದೆ.<br><br>2017–18ನೇ ಸಾಲಿನ ಆಯವ್ಯಯದಲ್ಲಿ ರಾಜ್ಯದಲ್ಲಿ ಇರುವ ಒಟ್ಟು 1512 ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರಗಳನ್ನು ಪಶು ಚಿಕಿತ್ಸಾಲಯಗಳನ್ನಾಗಿ ಮೇಲ್ದರ್ಜೆಗೇರಿಸಲಾಗುವುದು ಎಂದು ಘೋಷಿಸಲಾಗಿದ್ದು, ಅದರಂತೆ, 2017–18ನೇ ಸಾಲಿನಲ್ಲಿ ಇಂತಹ 302 ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರಗಳನ್ನು ಪಶು ಚಿಕಿತ್ಸಾಲಯಗಳನ್ನಾಗಿ ಮೇಲ್ದರ್ಜೆಗೇರಿಸಲಾಗಿದ್ದು, ಸ್ಥಳ ಗುರುತಿಸುವ ಪ್ರಕ್ರಿಯೆ ಚಾಲನೆಯಲ್ಲಿರುತ್ತದೆ. ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ಸಮಿತಿಯು ತೀರ್ಮಾನಿಸಿತು. |
| 14 | 5888 | ಚು.ಗು.ಪ್ರ:2875 ಸೋಮಣ್ಣ ಮ. ಬೇವಿನಮರದ<br>ವಿಪನದಿ:13.06.2017<br>(ತೋಟಗಾರಿಕೆ ಇಲಾಖೆಯಿಂದ ವರ್ಗಾವಣೆ) | ಪಶುಭಾಗ್ಯ ಯೋಜನೆಯಡಿ ಆಯ್ಕೆಯಾದ ಫಲಾನುಭವಿಗಳಿಗೆ ಬ್ಯಾಂಕ್ ಸಾಲದ ಬಗ್ಗೆ. | ಯಾವುದೇ ಜಿಲ್ಲೆಯಲ್ಲಿ ಫಲಾನುಭವಿಗೆ ಬ್ಯಾಂಕ್ ಸಾಲ ನೀಡಲು ನಿರಾಕರಿಸಿದಲ್ಲಿ ರಾಜ್ಯ ಮಟ್ಟದ ಬ್ಯಾಂಕರ್‌ಗಳ ಸಮಿತಿಯಲ್ಲಿ ಚರ್ಚಿಸಿ ಸಾಲ ನೀಡಲು ಸಂಬಂಧಿಸಿದ ಬ್ಯಾಂಕ್‌ಗಳಿಗೆ ನಿರ್ದೇಶನ ನೀಡಿ ಯೋಜನೆ ಅನುಷ್ಠಾನಗೊಳಿಸಲು ಕ್ರಮವಹಿಸಲಾಗುವುದು ಎಂದು ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು ತಿಳಿಸಿದರು. | ದಿನಾಂಕ: 30.08.2018ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು, ಇಲಾಖೆಯಲ್ಲಿನ ಫಲಾನುಭವಿಗಳ ಕಾರ್ಯಕ್ರಮಗಳಿಗೆ ಮಾನ್ಯ ಇಲಾಖಾ ಸಚಿವರು ನೀಡಿದ ಭರವಸೆಯಂತೆ ಕ್ರಮವಹಿಸಲು ಎಲ್ಲಾ 30 ಜಿಲ್ಲೆಯ ಉಪ ನಿರ್ದೇಶಕರುಗಳಿಗೆ ಸುತ್ತೋಲೆ ಹೊರಡಿಸಲಾಗಿದೆ.<br><br>ಪಶುಭಾಗ್ಯ ಯೋಜನೆಯಡಿ 2017–18ನೇ ಸಾಲಿನಲ್ಲಿ ವಿವಿಧ ಬ್ಯಾಂಕ್‌ಗಳನ್ನು ಉತ್ತಮ ಸಹಕಾರ ನೀಡಿದ್ದು, 2017–18ನೇ ಸಾಲಿನಲ್ಲಿ ರೂ. 60.156 ಕೋಟಿ ಹಾಗೂ 26327 ಭೌತಿಕ ಗುರಿಯನ್ನು ನಿಗದಿಪಡಿಸಿದ್ದು, ಇದಕ್ಕೆ ರೂ. 58.99 ಕೋಟಿಗಳಲ್ಲಿ 25791 ಭೌತಿಕ ಗುರಿಗಳನ್ನು ಸಾಧಿಸಲಾಗಿದೆ ಎಂದು |

<table>
<tr>
<td></td>
<td></td>
<td></td>
<td></td>
<td></td>
<td>ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಹಾಗೂ ಈ ಯೋಜನೆ ಎಲ್ಲ ಗ್ರಾಮ ಪಂಚಾಯತಿಗಳಿಗೆ ಸಮಾನವಾಗಿ ಹಂಚಿಕೆ ಮಾಡಲು ಗೈಡ್‌ಲೈನ್ಸ್ ರಚನೆ ಮಾಡಲು ಸೂಚಿಸಿ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ಸಮಿತಿಯು ತೀರ್ಮಾನಿಸಿತು.</td>
</tr>
<tr>
<td>15</td>
<td>5892</td>
<td>ಚು.ಗು.ಪ್ರ:2908<br>ಶ್ರೀ ವಿಜಯ ಸಿಂಗ್<br>ವಿಪನದಿ:13.06.2017<br>(ತೋಟಗಾರಿಕೆ ಇಲಾಖೆಯಿಂದ ವರ್ಗಾವಣೆ)</td>
<td>ಬೀದರ ಜಿಲ್ಲೆಯಲ್ಲಿ ಪಶು ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳ ಬಗ್ಗೆ.</td>
<td>ಲಿಪಿಕ ನೌಕರರ ಹುದ್ದೆಗಳನ್ನು, ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮದ ಅಂತಿಮ ಅಧಿಸೂಚನೆ ಹೊರಡಿಸಿದ ನಂತರ ನೇಮಕಾತಿ/ಬಡ್ತಿ ಮೂಲಕ ತುಂಬಲು ಕ್ರಮವಹಿಸಲಾಗುವುದು ಎಂದು ಮಾನ್ಯ ತೋಗಾರಿಕೆ ಮತ್ತು ಕೃಷಿ ಸಚಿವರು ತಿಳಿಸಿದರು.</td>
<td>ದಿನಾಂಕ: 30.08.2018ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆಯ ಬೀದರ್ ಜಿಲ್ಲೆಯಲ್ಲಿ ದಿ: 13.06.2017ರಂದು ವಿವಿಧ ವೃಂದಗಳಲ್ಲಿ ಖಾಲಿ ಇರುವ 80 ಹುದ್ದೆಗಳ ಪೈಕಿ 21 ಹುದ್ದೆಗಳನ್ನು ಈ ಕೆಳಗೆ ಕಾಣಿಸಿರುವಂತೆ ಮುಂಬಡ್ತಿ ಹಾಗೂ ನೇಮಕಾತಿ ಮೂಲಕ ಭರ್ತಿ ಮಾಡಲಾಗಿದೆ.
<table>
<tr><th>ಹುದ್ದೆಯ ಹೆಸರು</th><th>ಭರ್ತಿ ಮಾಡಿದ ದಿನಾಂಕ</th><th>ಷರಾ</th></tr>
<tr><td>ಮುಖ್ಯ ಪಶುವೈದ್ಯಾಧಿಕಾರಿಗಳು</td><td>01 ಹುದ್ದೆ ಫೆಬ್ರವರಿ 2018ರಲ್ಲಿ</td><td>ವರ್ಗಾವಣೆ ಮೂಲಕ</td></tr>
<tr><td>ಪಶು ವೈದ್ಯಾಧಿಕಾರಿಗಳು</td><td>10 ಹುದ್ದೆ ಮೇ 2018ರಲ್ಲಿ</td><td>ನೇರ ನೇಮಕಾತಿ</td></tr>
<tr><td>ಜಾನುವಾರು ಅಭಿವೃದ್ಧಿ ಅಧಿಕಾರಿ</td><td>05 ಹುದ್ದೆ ಮೇ 2018ರಲ್ಲಿ</td><td>ಮುಂಬಡ್ತಿ ಮೂಲಕ</td></tr>
<tr><td>ಸಹಾಯಕ ಆಡಳಿತ ಅಧಿಕಾರಿ</td><td>01 ಹುದ್ದೆ ಮೇ 2018ರಲ್ಲಿ</td><td>ಮುಂಬಡ್ತಿ ಮೂಲಕ</td></tr>
<tr><td>ಪ್ರಥಮ ದರ್ಜೆ ಸಹಾಯಕರು</td><td>02 ಹುದ್ದೆ ಮೇ 2018ರಲ್ಲಿ</td><td>ಮುಂಬಡ್ತಿ ಮೂಲಕ</td></tr>
<tr><td>“ಡಿ”ದರ್ಜೆ ನೌಕರರು</td><td>02 ಹುದ್ದೆ</td><td>ಅನುಕಂಪದ ಆಧಾರದ ಮೇಲೆ</td></tr>
</table>
</td>
</tr>
</table>

| | | | | | |
|---|---|---|---|---|---|
| | | | | | ಪಶು ವೈದ್ಯಕೀಯ ಪರೀಕ್ಷಕರು ಹಾಗೂ ಹಿರಿಯ ಪಶು ವೈದ್ಯಕೀಯ ಪರೀಕ್ಷಕರ ಹುದ್ದೆಗಳು ಖಾಲಿ ಇರುವುದಿಲ್ಲ.<br><br>ಉಳಿದ ಖಾಲಿ ಹುದ್ದೆಗಳನ್ನು ಹೈದ್ರಾಬಾದ್–ಕರ್ನಾಟಕ ಸ್ಥಳೀಯ ವೃಂದದ ಹುದ್ದೆಗಳನ್ನು ತುಂಬುವ ಸಂದರ್ಭದಲ್ಲಿ ಭರ್ತಿ ಮಾಡಲು ಕ್ರಮ ವಹಿಸಲಾಗುತ್ತಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ಸಮಿತಿಯು ತೀರ್ಮಾನಿಸಿತು. |
| 16 | 6186 | ಚು.ರ.ಪ್ರ: 1796<br>ಶ್ರೀ ಡಾ॥ ಮತ್ತಿಕಟ್ಟಿ ವೀರಣ್ಣ<br>ವಿಪನದಿ:<br>16.07.2015 | ರಾಜ್ಯದಲ್ಲಿರುವ ಪಶುವೈದ್ಯ ಸಂಸ್ಥೆಗಳ ನೇರ ಸಂಪರ್ಕ ಜಾಲವನ್ನು ಕಲ್ಪಿಸುವ ಬಗ್ಗೆ. | 2014–15ನೇ ಸಾಲಿನ ವಿದ್ಯುನ್ಮಾನ ಆಡಳಿತ ಯೋಜನೆಯಡಿಯಲ್ಲಿ ರಾಜ್ಯದಲ್ಲಿರುವ 4,212 ಪಶುವೈದ್ಯ ಸಂಸ್ಥೆಗಳಿಗೆ ನೇರ ಸಂಪರ್ಕ ಕಲ್ಪಿಸಲು ಅವಶ್ಯವಿರುವ ತಂತ್ರಾಂಶ ICT ಅಭಿವೃದ್ಧಿ ಪಡಿಸಲು ಮೆ: ಕಿಯೋನಿಕ್ಸ್ ಸಂಸ್ಥೆಯಿಂದ ವಿಸ್ತೃತವಾದ ಯೋಜನಾ ವರದಿಯನ್ನು ಪಡೆಯಲಾಗಿದ್ದು, ಆಯುಕ್ತಾಲಯದಲ್ಲಿ ಪರಿಶೀಲನೆಯಲ್ಲಿದೆ ಎಂದು ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು, ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು ತಿಳಿಸಿದರು. | ದಿನಾಂಕ: 30.08.2018ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು, ಕಿಯೋನಿಕ್ಸ್ ಸಂಸ್ಥೆ ವತಿಯಿಂದ ದಿ: 10.09.2015ರಲ್ಲಿ ಐ.ಸಿ.ಟಿ. ಬಗ್ಗೆ ರೂ. 57.48 ಕೋಟಿಗಳಿಗೆ ಪರಿಷ್ಕೃತ ವಿಸ್ತೃತ ಕ್ರಿಯಾ ಯೋಜನೆ ಪಡೆದಿದ್ದು, ಸದರಿ ಯೋಜನೆಯನ್ನು ಮೂರು ಹಂತಗಳಲ್ಲಿ ಅನುಷ್ಠಾನಗೊಳಿಸಲು ಯೋಜಿಸಲಾಗಿತ್ತು. ಆದರೆ, 2015–16 ಮತ್ತು 2016–17 ಸಾಲಿನಲ್ಲಿ ಅನುದಾನದ ಕೊರತೆಯಿಂದ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಸಾಧ್ಯವಾಗಿರುವುದಿಲ್ಲ. 2017–18ನೇ ಸಾಲಿನಲ್ಲಿ ರಾಜ್ಯದಲ್ಲಿನ 809 ವಿವಿಧ ಹಂತದ ಪಶು ವೈದ್ಯಕೀಯ ಸಂಸ್ಥೆಗಳಿಗೆ ಜಿ.ಪಿ.ಎಸ್. ಮೊಬೈಲ್ ಫೋನ್‌ನ್ನು ರೂ. 89.58 ಲಕ್ಷಗಳ ಅನುದಾನದಲ್ಲಿ ವಿತರಿಸಲಾಗಿದೆ, ಹಾಗೂ ಕೇಂದ್ರ ಕಚೇರಿಯ ಶಾಖೆಗಳು ಮತ್ತು 2017–18ನೇ ಸಾಲಿನಲ್ಲಿ ಘೋಷಣೆಯಾದ 49 ಹೊಸ ತಾಲ್ಲೂಕು ಕೇಂದ್ರಗಳ ಪಶು ವೈದ್ಯಕೀಯ ಸಂಸ್ಥೆಗಳಿಗೆ ರೂ.88.50 ಲಕ್ಷಗಳ ಅನುದಾನದಲ್ಲಿ 110 ಕಂಪ್ಯೂಟರ್‌ಗಳನ್ನು ವಿತರಿಸಲಾಗಿದೆ. ರಾಜ್ಯದಲ್ಲಿನ ಉಳಿದ ಎಲ್ಲಾ ಪಶು ವೈದ್ಯಕೀಯ ಸಂಸ್ಥೆಗಳಿಗೆ ಹಂತಹಂತವಾಗಿ ಅನುದಾನದ ಲಭ್ಯತೆಗೆ ಅನುಸಾರವಾಗಿ ವಿದ್ಯುನ್ಮಾನ ಆಡಳಿತವನ್ನು ಅಳವಡಿಸಿಕೊಳ್ಳಲು ಸಹಕಾರಿಯಾಗುವಂತೆ ಕ್ರಮ ವಹಿಸಲಾಗುತ್ತಿದೆ |

| | | | | | |
|---|---|---|---|---|---|
| | | | | | ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ಸಮಿತಿಯು ತೀರ್ಮಾನಿಸಿತು. |
| 17 | 6187 | ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಶ್ರೀ ರಘುನಾಥರಾವ್ ಮಲ್ಕಾಪೂರೆ<br>ವಿಪನದಿ:20.03.2017 | ಹೈದ್ರಾಬಾದ್-ಕರ್ನಾಟಕ ಪ್ರದೇಶದಲ್ಲಿ ಪಶು ವೈದ್ಯಾಧಿಕಾರಿಗಳ ನೇಮಕಾತಿಯಲ್ಲಿ ವಿಳಂಬವಾಗಿರುವ ಬಗ್ಗೆ. | ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವೆಗಳ ಇಲಾಖೆಯಲ್ಲಿ ಪಶುವೈದ್ಯಾಧಿಕಾರಿಗಳ ಹೈದರಾಬಾದ್-ಕರ್ನಾಟಕ ಪ್ರದೇಶದ 110 ಸ್ಥಳೀಯ ವೃಂದದ ಹುದ್ದೆಗಳನ್ನು ಭರ್ತಿ ಮಾಡಲು ದಿನಾಂಕ: 28.07.2015ರಲ್ಲಿ ಕರ್ನಾಟಕ ಲೋಕ ಸೇವಾ ಆಯೋಗಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿರುತ್ತದೆ. ಕರ್ನಾಟಕ ಲೋಕ ಸೇವಾ ಆಯೋಗದಲ್ಲಿ ನೇಮಕಾತಿ ಪ್ರಕ್ರಿಯೆಯಲ್ಲಿ ವಿಳಂಬವಾಗುತ್ತಿರು ವುದರಿಂದ ಸ್ಥಳೀಯ ವೃಂದದ 110 ಹುದ್ದೆಗಳ ನೇಮಕಾತಿ ಪ್ರಸ್ತಾವನೆಯನ್ನು ಕರ್ನಾಟಕ ಲೋಕ ಸೇವಾ ಆಯೋಗದಿಂದ ಹಿಂಪಡೆದು, ಪ್ರಸ್ತುತ 550 ಪಶು ವೈದ್ಯ ಅಧಿಕಾರಿಗಳ (100 ಬ್ಯಾಕ್‌ಲಾಗ್ ಸೇರಿದಂತೆ ನೇರ ನೇಮಕಾತಿ ಪ್ರಕ್ರಿಯೆ ನಡೆಯುತ್ತಿದ್ದು, ಇದರ | ದಿನಾಂಕ: 30.08.2018ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆಯಲ್ಲಿ ಖಾಲಿ ಇದ್ದ ಪಶುವೈದ್ಯಾಧಿಕಾರಿಗಳ ಹುದ್ದೆಯನ್ನು ಭರ್ತಿ ಮಾಡುವ ಬಗ್ಗೆ (ವಿಶೇಷ ನೇಮಕಾತಿ) ನಿಯಮಗಳು 2016ರಡಿಯಲ್ಲಿ ದಿ: 23.10.2017ರಂದು 476 ಅರ್ಹ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗಿದ್ದು, ಅದರಂತೆ, 434 ಅನರ್ಹ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶಗಳನ್ನು ಹೊರಡಿಸಲಾಗಿದೆ ಹಾಗೂ ಉಳಿದ ಅಭ್ಯರ್ಥಿಗಳ ಸಿಂಧುತ್ವ ಪ್ರಮಾಣ ಪತ್ರ ಬಂದ ನಂತರ ನೇಮಕಾತಿ ಆದೇಶಗಳನ್ನು ಹೊರಡಿಸಲಾಗುವುದು.<br><br>ಪ್ರಸ್ತುತ 434 ಅಭ್ಯರ್ಥಿಗಳಲ್ಲಿ 403 ಅಭ್ಯರ್ಥಿಗಳು ಕರ್ತವ್ಯಕ್ಕೆ ವರದಿ ಮಾಡಿಕೊಂಡಿರುತ್ತಾರೆ. ಹೈದ್ರಾಬಾದ್-ಕರ್ನಾಟಕ ಪ್ರದೇಶದಲ್ಲಿನ ಪಶುವೈದ್ಯಾಧಿಕಾರಿಗಳ ಹುದ್ದೆಗಳನ್ನು ಭರ್ತಿ ಮಾಡುವ ಸಂಬಂಧ 126 ಪಶು ವೈದ್ಯಾಧಿಕಾರಿಗಳ ನೇಮಕಾತಿಗೆ ಸಂಬಂಧಿಸಿದಂತೆ ಕರ್ನಾಟಕ ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವೆಗಳು (ಪಶು ವೈದ್ಯಾಧಿಕಾರಿಗಳ ನೇಮಕಾತಿ ಹೈದ್ರಾಬಾದ್-ಕರ್ನಾಟಕ ಸ್ಥಳೀಯ ವೃಂದ)(ವಿಶೇಷ) ನಿಯಮಗಳು, 2017ನ್ನು ರಚಿಸಿ ಅದರಂತೆ ಆಯುಕ್ತರು ಪಶುಪಾಲನಾ ಮತ್ತು ಪಶು ವೈದ್ಯ ಸೇವಾ ಇಲಾಖೆ ಇವರು ದಿ: 02.07.2018ರಂದು ಅರ್ಹ 75 ಅಭ್ಯರ್ಥಿಗಳನ್ನು ಆಯ್ಕೆ ಮಾಡಿ, ನೇಮಕಾತಿ ಆದೇಶ ನೀಡುವಂತೆ ಕೋರಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಸದರಿ 75 ಅರ್ಹ ಅಭ್ಯರ್ಥಿಗಳ ಪೈಕಿ ನೇಮಕಾತಿ ಪ್ರಾಧಿಕಾರವಾದ ಸರ್ಕಾರದಲ್ಲಿ ಮೂಲ |

| | | | | | |
|---|---|---|---|---|---|
| | | | | ಜೊತೆಯಲ್ಲಿಯೇ ಹೈದ್ರಾಬಾದ್–ಕನಾಟಕ ಪ್ರದೇಶದ 110 ಸ್ಥಳೀಯ ವೃಂದದ ಪಶುವೈದ್ಯಾಧಿಕಾರಿ ಹುದ್ದೆಗಳನ್ನು ಸಹ ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಸಚಿವ ಸಂಪುಟದ ಅನುಮೋದನೆ ಪಡೆದು ಭರ್ತಿ ಮಾಡಲು ಕ್ರಮವಹಿಸಲಾಗುವುದು. ಪ್ರಸ್ತುತ ನೇಮಕಾತಿ ಅಧಿಸೂಚನೆ ಹೊರಡಿಸಿರುವ 550 ಪಶುವೈದ್ಯಾಧಿಕಾರಿಗಳ ಹುದ್ದೆಗಳಲ್ಲಿ ಹೈದ್ರಾಬಾದ್–ಕನಾಟಕ ಪ್ರದೇಶದ 60 ಸ್ಥಳೀಯ ವೃಂದದ ಹುದ್ದೆಗಳು ಸೇರಿರುತ್ತವೆ. ಹೀಗೆ ಒಟ್ಟು ಹೈದ್ರಾಬಾದ್–ಕನಾಟಕ ಪ್ರದೇಶದ ವ್ಯಾಪ್ತಿಯಲ್ಲಿ ಒಟ್ಟು 60+110=170 ಹುದ್ದೆಗಳನ್ನು ತುಂಬಲು ಕ್ರಮ ಜರುಗಿಸಲಾಗುವುದು ಎಂದು ಮಾನ್ಯ ಪಶುಸಂಗೋಪನೆ ಹಾಗೂ ಮೀನುಗಾರಿಕೆ ಸಚಿವರು ತಿಳಿಸಿದರು. | ದಾಖಲೆಗಳ ಪರಿಶೀಲನೆಗೆ ಹಾಜರಾಗಿರುವ 63 ಅಭ್ಯರ್ಥಿಗಳ ವ್ಯಕ್ತಿತ್ವ ಹಾಗೂ ಮೀಸಲಾತಿಗೆ ಸಂಬಂಧಿಸಿದಂತೆ ವರದಿ ನೀಡುವಂತೆ ಕೋರಿ, ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರಗಳಿಗೆ ದಿನಾಂಕ: 02.08.2018ರಂದು ಸರ್ಕಾರದಿಂದ ಪತ್ರ ಬರೆಯಲಾಗಿರುತ್ತದೆ. ಸಕ್ಷಮ ಪ್ರಾಧಿಕಾರಗಳಿಂದ ವರದಿ ನಿರೀಕ್ಷಣೆಯಲ್ಲಿರುತ್ತದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ಸಮಿತಿಯು ತೀರ್ಮಾನಿಸಿತು. |
| 18 | 6189 | ಚು.ಗು.ಪ್ರ:2823<br>ಶ್ರೀ ಟಿ.ಎ. ಶರವಣ<br>ವಿಪನದಿ: 13.06.2017 | ಹಾಲು ಉತ್ಪಾದಕರಿಗೆ ಪ್ರೋತ್ಸಾಹಧನ ನೀಡುವಲ್ಲಿ ವಿಳಂಭ ವಾಗಿರುವ ಬಗ್ಗೆ. | ರಾಜ್ಯದ ಹಾಲು ಉತ್ಪಾದಕರು ಪ್ರೋತ್ಸಾಹಧನ ಪಡೆಯಬೇಕಾದಲ್ಲಿ ಆಧಾರ್ ಸೀಡಿಂಗ್ ಮಾಡುವುದು | ದಿನಾಂಕ: 30.08.2018ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು, ಸರ್ಕಾರದ ಆದೇಶನ್ವಯ ಅನುದಾನ ಬಿಡುಗಡೆ ಲಭ್ಯತೆ ಮೇರೆಗೆ 2017–18ನೇ ಸಾಲಿನವರೆಗೆ ಹಾಲು ಒಕ್ಕೂಟಗಳಿಂದ ಆಧಾರ ಸೀಡಿಂಗ್ ಆದ ಫಲಾನುಭವಿಗಳಿಗೆ |

| | | | | | |
|---|---|---|---|---|---|
| | | | | ಕಡ್ಡಾಯವಾಗಿದ್ದು, ಒಂದು ವೇಳೆ ಆಧಾರ್ ಸೀಡಿಂಗ್ ಮಾಡದಿದ್ದ ಪಕ್ಷದಲ್ಲಿ ಅಂತಹವರಿಗೆ ತಾತ್ಕಾಲಿಕವಾಗಿ ಪ್ರೋತ್ಸಾಹಧನ ತಡೆಹಿಡಿದು ಆಧಾರ್ ಸೀಡಿಂಗ್ ಆದ ನಂತರ ಹಾಲು ಒಕ್ಕೂಟಗಳು ಪ್ರೋತ್ಸಾಹ ಧನವನ್ನು ಫಲಾನುಭವಿಗಳಿಗೆ ಬಿಡುಗಡೆಗೊಳಿಸಲು ಕ್ರಮವಹಿಸಲಾಗುವುದು ಎಂದು ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು ತಿಳಿಸಿದರು. | ಪ್ರೋತ್ಸಾಹ ಧನ ಪಾವತಿಯಾಗಿರುತ್ತದೆ. ಎಲ್ಲಾ 14 ಹಾಲು ಒಕ್ಕೂಟಗಳಲ್ಲಿ ಬ್ಯಾಂಕ್ ಖಾತೆಗೆ ಆಧಾರ ಸೀಡಿಂಗ್ ಪ್ರಕ್ರಿಯೆ ಅಂತಿಮ ಹಂತದಲ್ಲಿರುತ್ತದೆ. ಬೆಂಗಳೂರು ಜಿಲ್ಲಾ ಹಾಲು ಒಕ್ಕೂಟದ 101 ಹಾಲು ಉತ್ಪಾದಕರಿಗೆ ಮತ್ತು ಮೈಸೂರು ಜಿಲ್ಲಾ ಹಾಲು ಒಕ್ಕೂಟದ 101 ಹಾಲು ಉತ್ಪಾದಕರಿಗೆ ಒಟ್ಟು 202 ಹಾಲು ಉತ್ಪಾದಕರಿಗೆ ಜುಲೈ 2018ರಲ್ಲಿ ಡಿ.ಬಿ.ಟಿ. ಮುಖಾಂತರ ಪ್ರೋತ್ಸಾಹಧನ ಪಾವತಿಸಲಾಗಿದೆ. ಆಗಸ್ಟ್ 2018ರಲ್ಲಿ 477 ಹಾಲು ಉತ್ಪಾದಕರಿಗೆ ಪ್ರೋತ್ಸಾಹಧನ ಪಾವತಿಸಲು ಕ್ರಮ ವಹಿಸಲಾಗಿದೆ. ಇದು ಯಶಸ್ವಿಯಾದ ನಂತರ ಉಳಿದ ಹಾಲು ಉತ್ಪಾದಕರಿಗೆ ಡಿ.ಬಿ.ಟಿ ಮುಖಾಂತರ ಪ್ರೋತ್ಸಾಹ ಧನ ಪಾವತಿಸಲು ಕ್ರಮವಹಿಸಲಾಗುವುದು ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ಸಮಿತಿಯು ತೀರ್ಮಾನಿಸಿತು. |
| 19 | 6190 | ಚು.ಗು.ಪ್ರ:2794<br>ಶ್ರೀ ಐವನ್ ಡಿ'ಸೋಜಾ<br>ವಿಪನದಿ:13.06.2017 | ರಾಜ್ಯದಲ್ಲಿ ಪ್ರಸ್ತುತ ಪಶು ವೈದ್ಯರ ಕೊರತೆ ಇರುವ ಬಗ್ಗೆ. | ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆಯಲ್ಲಿ 695 ಪಶುವೈದ್ಯಾಧಿಕಾರಿ ಹುದ್ದೆಗಳು ಖಾಲಿ ಇದ್ದು, 550 ಪಶು ವೈದ್ಯಾಧಿಕಾರಿಗಳ ಹುದ್ದೆಗಳನ್ನು (100 ಬ್ಯಾಕ್‌ಲಾಗ್ ಹುದ್ದೆಗಳು ಸೇರಿದಂತೆ) ಭರ್ತಿ ಮಾಡಲು ದಿನಾಂಕ: 06.03.2017 ರಂದು ನೇಮಕಾತಿ ಅಧಿಸೂಚನೆ ಹೊರಡಿಸಲಾಗಿದೆ. ನೇಮಕಾತಿ ಪ್ರಕ್ರಿಯೆ ಚಾಲನೆಯಲ್ಲಿದೆ. ಉಳಿದಂತೆ, ಹೈದ್ರಾಬಾದ್–ಕರ್ನಾಟಕ ಪ್ರದೇಶದ ಸ್ಥಳೀಯ ವೃಂದದ 126 ಹುದ್ದೆಗಳನ್ನು | ದಿನಾಂಕ: 30.08.2018ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆಯಲ್ಲಿ ಖಾಲಿ ಇದ್ದ ಪಶು ವೈದ್ಯಾಧಿಕಾರಿಗಳ ಹುದ್ದೆಯನ್ನು ಭರ್ತಿ ಮಾಡುವ ಬಗ್ಗೆ (ವಿಶೇಷ ನೇಮಕಾತಿ) ನಿಯಮಗಳು 2016ರಡಿಯಲ್ಲಿ ದಿ: 23.10.2017ರಂದು 476 ಅರ್ಹ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗಿದ್ದು, ಅದರಂತೆ, 434 ಅರ್ಹ ಅಭ್ಯರ್ಥಿಳಿಗೆ ನೇಮಕಾತಿ ಆದೇಶಗಳನ್ನು ಹೊರಡಿಸಲಾಗಿದೆ ಹಾಗೂ ಉಳಿದ ಅಭ್ಯರ್ಥಿಗಳ ಸಿಂಧುತ್ವ ಪ್ರಮಾಣ ಪತ್ರ ಬಂದ ನಂತರ ನೇಮಕಾತಿ ಆದೇಶಗಳನ್ನು ಹೊರಡಿಸಲಾಗುವುದು.<br><br>ಪ್ರಸ್ತುತ 434 ಅಭ್ಯರ್ಥಿಗಳಲ್ಲಿ 403 ಅಭ್ಯರ್ಥಿಗಳು ಕರ್ತವ್ಯಕ್ಕೆ ವರದಿ ಮಾಡಿಕೊಂಡಿರುತ್ತಾರೆ. |

| | | | | | |
|---|---|---|---|---|---|
| | | | | ಭರ್ತಿ ಮಾಡಲು ವಿಶೇಷ ನೇಮಕಾತಿ ನಿಯಮಗಳನ್ನು ರಚಿಸುವ ಪ್ರಕ್ರಿಯೆ ಕೈಗೊಳ್ಳಲಾಗಿದೆ. ಪ್ರಕ್ರಿಯೆ ಪೂರ್ಣಗೊಂಡ ಕೂಡಲೇ ರಾಜ್ಯದಲ್ಲಿ ಖಾಲಿ ಇರುವ ಎಲ್ಲಾ ಪಶು ವೈದ್ಯಾಧಿಕಾರಿಗಳ ಹುದೆಗಳನ್ನು ಭರ್ತಿ ಮಾಡಲು ಕ್ರಮವಹಿಸಲಾಗುವುದು ಎಂದು ಮಾನ್ಯ ಪಶು ಸಂಗೋಪನೆ ಮತ್ತು ರೇಷ್ಮೆ ಸಚಿವರು ತಿಳಿಸಿದರು. | ಹೈದ್ರಾಬಾದ್–ಕರ್ನಾಟಕ ಪ್ರದೇಶದಲ್ಲಿನ ಪಶು ವೈದ್ಯಾಧಿಕಾರಿಗಳ ಹುದ್ದೆಗಳನ್ನು ಭರ್ತಿ ಮಾಡುವ ಸಂಬಂಧ 126 ಪಶು ವೈದ್ಯಾಧಿಕಾರಿಗಳ ನೇಮಕಾತಿಗೆ ಸಂಬಂಧಿಸಿದಂತೆ ಕರ್ನಾಟಕ ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವೆಗಳು (ಪಶು ವೈದ್ಯಾಧಿಕಾರಿಗಳ ನೇಮಕಾತಿ ಹೈದ್ರಾಬಾದ್–ಕರ್ನಾಟಕ ಸ್ಥಳೀಯ ವೃಂದ) (ವಿಶೇಷ) ನಿಯಮಗಳು, 2017ನ್ನು ರಚಿಸಿ ಅದರಂತೆ ಆಯುಕ್ತರು ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ ಇವರು ದಿ: 02.07.2018ರಂದು ಅರ್ಹ 75 ಅಭ್ಯರ್ಥಿಗಳನ್ನು ಆಯ್ಕೆ ಮಾಡಿ, ನೇಮಕಾತಿ ಆದೇಶ ನೀಡುವಂತೆ ಕೋರಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಸದರಿ 75 ಅರ್ಹ ಅಭ್ಯರ್ಥಿಗಳ ಪೈಕಿ ನೇಮಕಾತಿ ಪ್ರಾಧಿಕಾರವಾದ ಸರ್ಕಾರದಲ್ಲಿ ಮೂಲಕ ದಾಖಲೆಗಳ ಪರಿಶೀಲನೆಗೆ ಹಾಜರಾಗಿರುವ 63 ಅಭ್ಯರ್ಥಿಗಳ ವ್ಯಕ್ತಿತ್ವ ಹಾಗೂ ಮೀಸಲಾತಿಗೆ ಸಂಬಂಧಿಸಿದಂತೆ ವರದಿ ನೀಡುವಂತೆ ಕೋರಿ, ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರಗಳಿಗೆ ದಿನಾಂಕ: 02.08.2018ರಂದು ಸರ್ಕಾರದಿಂದ ಪತ್ರ ಬರೆಯಲಾಗಿರುತ್ತದೆ. ಸಕ್ಷಮ ಪ್ರಾಧಿಕಾರಗಳಿಂದ ವರದಿ ನಿರೀಕ್ಷಣೆಯಲ್ಲಿರುತ್ತದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ಸಮಿತಿಯು ತೀರ್ಮಾನಿಸಿತು. |
| 20 | 6191 | ಚು.ರ.ಪ್ರ. 1840<br>ಶ್ರೀ ಬಿ. ರಾಮಕೃಷ್ಣ<br>ವಿಪನದಿ:19.03.2015 | ರಾಜ್ಯದಲ್ಲಿರುವ ಪಶು ಚಿಕಿತ್ಸಾ ಕೇಂದ್ರಗಳಲ್ಲಿ ಖಾಲಿ ಇರುವ ಪಶು ವೈದ್ಯಾಧಿಕಾರಿಗಳು ಮತ್ತು ಸಿಬ್ಬಂದಿಗಳನ್ನು ನೇಮಕ ಮಾಡುವ ಬಗ್ಗೆ. | ಇಲಾಖೆಯಲ್ಲಿ 350 ಪಶು ವೈದ್ಯಾಧಿಕಾರಿ ಹುದ್ದೆಗಳನ್ನು ವಿಶೇಷ ನೇಮಕಾತಿ ಅಡಿಯಲ್ಲಿ ನೇಮಕಾತಿ ಮಾಡುವ ಪ್ರಕ್ರಿಯೆ ಪ್ರಗತಿಯಲ್ಲಿದೆ. ಇಲಾಖೆಯಲ್ಲಿ ಖಾಲಿ ಇರುವ ಸಿಬ್ಬಂದಿ ವರ್ಗದ ಹುದ್ದೆಗಳನ್ನು ನೇರ ನೇಮಕಾತಿ/ಮುಂಬಡ್ತಿ ಮೂಲಕ | ದಿನಾಂಕ: 30.08.2018ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು, ಪಶು ಪಾಲನಾ ಮತ್ತು ಪಶು ವೈದ್ಯ ಸೇವಾ ಇಲಾಖೆಯಲ್ಲಿ ಖಾಲಿ ಇದ್ದ ಪಶು ವೈದ್ಯಾಧಿಕಾರಿಗಳ ಹುದ್ದೆಯನ್ನು ಭರ್ತಿ ಮಾಡುವ ಬಗ್ಗೆ (ವಿಶೇಷ ನೇಮಕಾತಿ) ನಿಯಮಗಳು 2016ರಡಿಯಲ್ಲಿ ದಿ: 23.10.2017 ರಂದು 476 ಅರ್ಹ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗಿದ್ದು, ಅದರಂತೆ, 434 ಅರ್ಹ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶಗಳನ್ನು ಹೊರಡಿಸಲಾಗಿದೆ |

| | | | | | |
|---|---|---|---|---|---|
| | | | | ಹಂತ ಹಂತವಾಗಿ ಭರ್ತಿ ಮಾಡಲು ಕ್ರಮವಹಿಸ ಲಾಗುವುದು ಎಂದು ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು, ಪಶು ಸಂಗೋಪನಾ ಮತ್ತು ಮುಜರಾಯಿ ಸಚಿವರು ತಿಳಿಸಿದರು. | ಹಾಗೂ ಉಳಿದ ಅಭ್ಯರ್ಥಿಗಳ ಸಿಂಧುತ್ವ ಪ್ರಮಾಣ ಪತ್ರ ಬಂದ ನಂತರ ನೇಮಕಾತಿ ಆದೇಶಗಳನ್ನು ಹೊರಡಿಸಲಾಗುವುದು.<br><br>ಪ್ರಸ್ತುತ 434 ಅಭ್ಯರ್ಥಿಗಳಲ್ಲಿ 402 ಅಭ್ಯರ್ಥಿಗಳು ಕರ್ತವ್ಯಕ್ಕೆ ವರದಿ ಮಾಡಿಕೊಂಡಿರುತ್ತಾರೆ.<br><br>**ಡಿ–ದರ್ಜೆ :– 1500 ಡಿ** ದರ್ಜೆ ಹುದ್ದೆಗಳಿಗೆ ಹೊರಗುತ್ತಿಗೆ ಮುಖಾಂತರ ಸೇವೆ ಪಡೆಯಲಾಗಿದೆ. ಉಳಿದಂತೆ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ದಿ: 15.11.2017ರಂದು ಪ್ರಸ್ತಾವನೆ ಸಲ್ಲಿಕೆಯಾಗಿದ್ದು, ಪರಿಶೀಲಿಸಲಾಗುತ್ತಿದೆ.<br><br>ಹೈದ್ರಾಬಾದ್–ಕರ್ನಾಟಕ ಪ್ರದೇಶದಲ್ಲಿನ ಪಶು ವೈದ್ಯಾಧಿಕಾರಿಗಳ ಹುದ್ದೆಗಳನ್ನು ಭರ್ತಿ ಮಾಡುವ ಸಂಬಂಧ 126 ಪಶು ವೈದ್ಯಾಧಿಕಾರಿಗಳ ನೇಮಕಾತಿಗೆ ಸಂಬಂಧಿಸಿದಂತೆ ಕರ್ನಾಟಕ ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವೆಗಳು (ಪಶು ವೈದ್ಯಾಧಿಕಾರಿಗಳ ನೇಮಕಾತಿ ಹೈದ್ರಾಬಾದ್–ಕರ್ನಾಟಕ ಸ್ಥಳೀಯ ವೃಂದ) (ವಿಶೇಶ) ನಿಯಮಗಳು, 2017ನ್ನು ರಚಿಸಿ ಅದರಂತೆ ಆಯುಕ್ತರು, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ ಇವರು ದಿ: 2.7.2018ರಂದು ಅರ್ಹ 75 ಅಭ್ಯರ್ಥಿಗಳನ್ನು ಆಯ್ಕೆ ಮಾಡಿ, ನೇಮಕಾತಿ ಆದೇಶ ನೀಡುವಂತೆ ಕೋರಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಸದರಿ 75 ಅರ್ಹ ಅಭ್ಯರ್ಥಿಗಳ ಪೈಕಿ ನೇಮಕಾತಿ ಪ್ರಾಧಿಕಾರವಾದ ಸರ್ಕಾರದಲ್ಲಿ ಮೂಲ ದಾಖಲೆಗಳ ಪರಿಶೀಲನೆಗೆ ಹಾಜರಾಗಿರುವ 63 ಅಭ್ಯರ್ಥಿಗಳ ವ್ಯಕ್ತಿತ್ವ ಹಾಗೂ ಮೀಸಲಾತಿಗೆ ಸಂಬಂಧಿಸಿದಂತೆ ವರದಿ ನೀಡುವಂತೆ ಕೋರಿ ಸಂಬಂಧಪಟ್ಟ ಸಕ್ರಮ ಪ್ರಾಧಿಕಾರಿಗಳಿಗೆ ದಿ: 02.08.2018ರಂದು ಸರ್ಕಾರದಿಂದ ಪತ್ರ ಬರೆಯಲಾಗಿರುತ್ತದೆ. ಸಕ್ಷಮ ಪ್ರಾಧಿಕಾರಗಳಿಂದ ವರದಿ ನಿರೀಕ್ಷಣೆಯಲ್ಲಿರುತ್ತದೆ. |

<table>
<tr><td></td><td></td><td></td><td></td><td></td><td>ಮುಂದುವರೆದಂತೆ, ಹೈದ್ರಾಬಾದ್–ಕರ್ನಾಟಕ ಪ್ರದೇಶದ ಅಭ್ಯರ್ಥಿಗಳಿಗೆ ಮೀಸಲಿರಿಸಲಾದ, ಈ ಕೆಳಕಂಡ ವೃಂದದ ಹುದ್ದೆಗಳಿಗೆ ನೇಮಕಾತಿ ಮಾಡಲು ಸೂಕ್ತ ಆದೇಶ ನೀಡುವಂತೆ ದಿ: 29.5.2018ರಂದು ಪ್ರಸ್ತಾವನೆ ಸಲ್ಲಿಕೆಯಾಗಿದ್ದು, ಸದರಿ ಹುದ್ದೆಗಳನ್ನು ವಿಶೇಷ ನೇಮಕಾತಿ ನಿಯಮಗಳ ಮುಖಾಂತರ ಭರ್ತಿ ಮಾಡಲು ಅನುವಾಗುವಂತೆ ಕರಡು ವಿಶೇಷ ನೇಮಕಾತಿ ನಿಯಮಗಳನ್ನು ರಚಿಸಿ ಸರ್ಕಾರಕ್ಕೆ ಸಲ್ಲಿಸುವಂತೆ ಆಯುಕ್ತರು, ಪಶುಪಾಲನಾ ಮತ್ತು ಪಶು ವೈದ್ಯ ಸೇವಾ ಇಲಾಖೆ, ಇವರಿಗೆ ಪತ್ರ ಬರೆಯಲಾಗಿರುತ್ತದೆ (ಪ್ರತಿ ಲಗತ್ತಿಸಿದೆ)
<table>
<tr><th>ಕ್ರ. ಸಂ</th><th>ವೃಂದ</th><th>ನೇಮಕಾತಿಗಾಗಿ ಅನುಮತಿ ನೀಡಲು ಕೋರಲಾದ ಹುದ್ದೆಗಳ ಸಂಖ್ಯೆ</th></tr>
<tr><td>1</td><td>ಪಶು ವೈದ್ಯಕೀಯ ಪರೀಕ್ಷಕರು</td><td>32</td></tr>
<tr><td>2</td><td>ಪಶು ವೈದ್ಯಕೀಯ ಸಹಾಯಕರು</td><td>83</td></tr>
<tr><td>3</td><td>ಬೆರಳಚ್ಚುಗಾರರು</td><td>04</td></tr>
<tr><td>4</td><td>ವಾಹನ ಚಾಲಕರು</td><td>15</td></tr>
<tr><td>5</td><td>ವೆಟರನರಿ ಅಟೆಂಡೆಂಟ್ (ಡಿ ದರ್ಜೆ)</td><td>466</td></tr>
</table>
ಮೇಲ್ಕಂಡಂತೆ ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ಸಮಿತಿಯು ತೀರ್ಮಾನಿಸಿತು.</td></tr>
<tr><td>21</td><td>6192</td><td>ಚು.ರ.ಪ್ರ.<br>485<br>ಶ್ರೀ ಅಲ್ಲಮಪ್ರಭು ಪಾಟೀಲ್<br>ವಿಪನದಿ:02.07.2015</td><td>ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಯಲ್ಲಿ ಪಶು ವೈದ್ಯಕೀಯ ಆಸ್ಪತ್ರೆಗಳಲ್ಲಿ ವೈದ್ಯ ಕೊರತೆ ಇರುವ ಬಗ್ಗೆ.</td><td>ಕಲಬುರಗಿ ಜಿಲ್ಲೆಯಲ್ಲಿ ಮಂಜೂರಾದ ಒಟ್ಟು 132 ಹುದ್ದೆಗಳನ್ನು 68 ಪಶು ವೈದ್ಯರುಗಳ (8 ಸಹಾಯಕ ನಿರ್ದೇಶಕರುಗಳು ಮತ್ತು 60 ಪಶು ವೈದ್ಯಾಧಿಕಾರಿಗಳು)</td><td>ದಿನಾಂಕ: 30.08.2018ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು, ಪಶುಪಾಲನಾ ಮತ್ತು ಪಶು ವೈದ್ಯ ಸೇವಾ ಇಲಾಖೆಯಲ್ಲಿ ಖಾಲಿ ಇದ್ದ ಪಶು ವೈದ್ಯಾಧಿಕಾರಿಗಳ ಹುದ್ದೆಯನ್ನು ಭರ್ತಿ ಮಾಡುವ ಬಗ್ಗೆ (ವಿಶೇಷ ನೇಮಕಾತಿ) ನಿಯಮಗಳು 2016ರಡಿ ದಿ: 23.10.2017ರಂದು 476 ಅರ್ಹ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗಿದ್ದು, ಅದರಂತೆ, 434 ಅರ್ಹ ಅಭ್ಯರ್ಥಿಗಳಿಗೆ</td></tr>
</table>

<table>
<tr><td></td><td></td><td></td><td></td><td>ಹುದ್ದೆಗಳು ಹಾಗೂ ಯಾದಗಿರಿ ಜಿಲ್ಲೆಯಲ್ಲಿ ಮಂಜೂರಾದ ಒಟ್ಟು 62 ಹುದ್ದೆಗಳಲ್ಲಿ 40 ಪಶು ವೈದ್ಯರುಗಳ (7 ಸಹಾಯಕ ನಿರ್ದೇಶಕರುಗಳು ಮತ್ತು 33 ಪಶು ವೈದ್ಯಾಧಿಕಾರಿಗಳು) ಹುದ್ದೆಗಳು ಖಾಲಿ ಇರುತ್ತವೆ. ಖಾಲಿ ಇರುವ ಸಹಾಯಕ ನಿರ್ದೇಶಕರು ಹುದ್ದೆಗಳನ್ನು ಪಶು ವೈದ್ಯಾಧಿಕಾರಿಗಳ ಹುದ್ದೆಯಿಂದ ಮುಂಬಡ್ತಿ ನೀಡುವಾಗ ಹಂತಹಂತವಾಗಿ ಭರ್ತಿ ಮಾಡಲು ಕ್ರಮ ವಹಿಸಲಾಗುತ್ತದೆ ಎಂದು ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು, ಪಶು ಸಂಗೋಪನೆ ಹಾಗೂ ಮುಜರಾಯಿ ಸಚಿವರು ತಿಳಿಸಿದರು</td><td>ನೇಮಕಾತಿ ಆದೇಶಗಳನ್ನು ಹೊರಡಿಸಲಾಗಿದೆ, ಹಾಗೂ ಉಳಿದ ಅಭ್ಯರ್ಥಿಗಳ ಸಿಂಧುತ್ವ ಪ್ರಮಾಣ ಪತ್ರ ಬಂದ ನಂತರ ನೇಮಕಾತಿ ಆದೇಶಗಳನ್ನು ಹೊರಡಿಸಲಾಗುವುದು.
<table>
<tr><th>ಕ್ರ. ಸಂ</th><th>ಜಿಲ್ಲೆ</th><th>ಭರ್ತಿ ಮಾಡಲಾದ ಪಶು ವೈದ್ಯಾಧಿಕಾರಿಗಳ ಸಂಖ್ಯೆ</th></tr>
<tr><td>1</td><td>ಕಲಬುರಗಿ</td><td>09</td></tr>
<tr><td>2</td><td>ಯಾದಗಿರಿ</td><td>05</td></tr>
</table>
ಉಳಿದಂತೆ ಹೈದ್ರಾಬಾದ್-ಕರ್ನಾಟಕ ಪ್ರದೇಶದಲ್ಲಿನ ಪಶು ವೈದ್ಯಾಧಿಕಾರಿಗಳ ಹುದ್ದೆಗಳನ್ನು ಭರ್ತಿ ಮಾಡುವ ಸಂಬಂಧ ದಿನಾಂಕ: 2.7.2018ರಂದು ಅರ್ಹ 75 ಅಭ್ಯರ್ಥಿಗಳನ್ನು ಆಯ್ಕೆ ಮಾಡಿ ಪಟ್ಟಿ ಮಾಡಲಾಗಿದ್ದು, ಇದರಲ್ಲಿ ಸದರಿ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಹಾಗೂ ಸಹಾಯಕ ನಿರ್ದೇಶಕರ ಹುದ್ದೆಗಳನ್ನು ಮುಂಬಡ್ತಿ ಮೂಲಕ ತುಂಬಲು ಕ್ರಮವಹಿಸಲಾಗುತ್ತದ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ಸಮಿತಿಯು ತೀರ್ಮಾನಿಸಿತು.</td></tr>
<tr><td>22</td><td>6193</td><td>ಚು.ಗು.ಪ್ರ.<br>1075<br>ಶ್ರೀ ಇ. ಕೃಷ್ಣಪ್ಪ<br>ವಿಪನದಿ:12.02.2015</td><td>ಬಾಗೇಪಲ್ಲಿ ವಿಧಾನ ಸಭಾ ಕ್ಷೇತ್ರದ ಎರಡು ತಾಲ್ಲೂಕುಗಳಲ್ಲಿ ಪಶುವೈದ್ಯಾಧಿಕಾರಿಗಳ ಕೊರತೆ ನಿವಾರಣೆ ಬಗ್ಗೆ</td><td>ಬಾಗೇಪಲ್ಲಿ ವಿಧಾನ ಸಭಾ ಕ್ಷೇತ್ರದ ಎರಡು ತಾಲ್ಲೂಕುಗಳಲ್ಲಿ ಪಶುವೈದ್ಯಾಧಿಕಾರಿಗಳ ಕೊರತೆ ಇರುವುದಿಲ್ಲ. ಆದರೆ, ಪಶು ಆಸ್ಪತ್ರೆ, ಚೇಳೂರು, ಬಾಗೇಪಲ್ಲಿ ತಾಲ್ಲೂಕು ಮತ್ತು ಪಶು ಆಸ್ಪತ್ರೆ, ಎಲ್ಲೋಡು, ಗುಡಿಬಂಡೆ ತಾಲ್ಲೂಕುಗಳಲ್ಲಿ ಸಹಾಯಕ ನಿರ್ದೇಶಕರ ಹುದ್ದೆ ಖಾಲಿ ಇದೆ. ಈ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ವಹಿಸಲಾಗುವುದು.</td><td>ದಿನಾಂಕ: 30.08.2018ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು, ಪಶು ಆಸ್ಪತ್ರೆ, ಚೇಳೂರು, ಬಾಗೇಪಲ್ಲಿ ತಾಲ್ಲೂಕು ಮತ್ತು ಪಶು ಆಸ್ಪತ್ರೆ, ಎಲ್ಲೋಡ, ಗುಡಿಬಂಡೆ ತಾಲ್ಲೂಕುಗಳಲ್ಲಿ ಸಹಾಯ ನಿರ್ದೇಶಕರ ಹುದ್ದೆ ಖಾಲಿ ಇದೆ. ಈ ಹುದ್ದೆಗಳನ್ನು ಮುಂಬಡ್ತಿ ಅಥವಾ ವರ್ಗಾವಣೆ ಮೂಲಕ ಭರ್ತಿ ಮಾಡಲು ಪ್ರಸ್ತಾವನೆ ಸಲ್ಲಿಕೆಯಾಗಿರುತ್ತದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ಸಮಿತಿಯು ತೀರ್ಮಾನಿಸಿತು.</td></tr>
</table>

# ನಗರಾಭಿವೃದ್ಧಿ ಇಲಾಖೆ

| ಕ್ರಮ ಸಂಖ್ಯೆ | ಆಶ್ವಾಸನೆ ಸಂಖ್ಯೆ ಆಧಾರ ಮತ್ತು ದಿನಾಂಕ | ವಿಷಯ | ಆಶ್ವಾಸನೆ | ತಗೆದುಕೊಂಡ ಕ್ರಮ |
|---|---|---|---|---|
| 1 | 4430<br>ಚು.ರ.ಪ್ರ: 662<br>ಶ್ರೀ ಅಶ್ವತ್ಥ್‌ನಾರಾಯಣ<br>ವಿಪನದಿ: 30.01.2014 | ಪೆರಿಫೆರಲ್ ರಿಂಗ್ ರಸ್ತೆ ಮೈಸೂರು ರಸ್ತೆ ಮತ್ತು ತುಮಕೂರು ರಸ್ತೆ ರಿಂಗ್ ರೋಡ್ ರಸ್ತೆಗಾಗಿ ಜಮೀನನ್ನು ಸ್ವಾಧೀನಪಡಿಸಿಕೊಂಡಿರುವ ಬಗ್ಗೆ. | ದಿನಾಂಕ: 12.12.2005 ರಲ್ಲಿ 1862 ಎಕರೆ 10 ಗುಂಟೆ ಮತ್ತು ದಿ: 15.11.2006ರಲ್ಲಿ 854 ಎಕರೆ ಒಟ್ಟು 2716 ಎಕರೆ 10 ಗುಂಟೆ ಜಮೀನಿನ ಪ್ರಾರಂಭಿಕ ಅಧಿಸೂಚನೆಯನ್ನು ಹಿಂದಕ್ಕೆ ಪಡೆಯಬೇಕೇ ಎಂಬ ಬಗ್ಗೆ ಪರಿಶೀಲನೆಯಲ್ಲಿದೆ ಎಂದು ಮಾನ್ಯ ಮುಖ್ಯಮಂತ್ರಿ ಯವರು ತಿಳಿಸಿದರು. | ದಿನಾಂಕ: 16.01.2018ರಂದು ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ಪ್ರಾಧಿಕಾರದ ಸಭೆಯ ದಿನಾಂಕ: 24.10.2011ರಲ್ಲಿ ವಿಷಯ ಸಂಖ್ಯೆ: 338/11ರಲ್ಲಿ ಈ ಕೆಳಕಂಡಂತೆ ನಿರ್ಣಯ ಕೈಗೊಳ್ಳಲಾಗಿರುತ್ತದೆ :-<br><br>ಪೆರಿಪೆರಲ್ ವರ್ತುಲ ರಸ್ತೆ ಭಾಗ-2ರ ಯೋಜನೆಗೆ ಪ್ರಾಧಿಕಾರದಿಂದ ಹೊರಡಿಸಲಾದ ದಿನಾಂಕ: 12.12.2005 ಮತ್ತು 15.11.2006ರ ಪ್ರಾರಂಭಿಕ ಅಧಿಸೂಚನೆಯ ಪೈಕಿ ಮಾಗಡಿ ರಸ್ತೆಯಿಂದ ಮೈಸೂರು ರಸ್ತೆವರಗಿನ ಪೆರಿಫೆರಲ್ ವರ್ತುಲ ರಸ್ತೆಗೆ ಅವಶ್ಯಕವಾದ 321 ಎಕರೆ 10 ಗುಂಟೆ ಜಮೀನಿನ ಭೂಸ್ವಾಧಿನಕ್ಕೆ ಸರ್ಕಾರವು ಈಗಾಗಲೇ ದಿನಾಂಕ: 27.07.2011ರಂದು ಅಂತಿಮ ಅಧಿಸೂಚನೆಯನ್ನು ಹೊರಡಿಸಿರುವುದರಿಂದ ಈ ವಿಸ್ತೀರ್ಣವನ್ನು ಉಳಿಸಿಕೊಂಡು ಉಳಿಕೆ ಪೆರಿಫೆರಲ್ ವರ್ತುಲ ರಸ್ತೆ ಭಾಗ-2ರಲ್ಲಿ ತುಮಕೂರು ರಸ್ತೆಯಿಂದ ಮಾಗಡಿ ರಸ್ತೆವರೆಗೆ ಮತ್ತು ಮೈಸೂರು ರಸ್ತೆಯಿಂದ ಕನಕಪುರ ರಸ್ತೆ ಬನ್ನೇರುಘಟ್ಟ ರಸ್ತೆ ಮಾರ್ಗವಾಗಿ ಹೊಸೂರು ರಸ್ತೆಯವರೆಗೆ ಒಳಪಡುವ ಗ್ರಾಮಗಳ ಜಮೀನುಗಳ ವಿಸ್ತೀರ್ಣಕ್ಕೆ ಸಂಬಂಧಪಟ್ಟಂತೆ ಈಗಾಗಲೇ ದಿನಾಂಕ: 12.12.2005 ಮತ್ತು 15.11.2006ರಂದು ಹೊರಡಿಸಿರುವ ಪ್ರಾರಂಭಿಕ ಅಧಿಸೂಚನೆಗಳನ್ನು ಹಿಂದಕ್ಕೆ ಪಡೆಯುವ ಬಗ್ಗೆ ಸರ್ಕಾರದ ಅನುಮೋದನೆಯನ್ನು ಕೋರಲು ನಿರ್ಣಯಿಸಲಾಯಿತು.<br><br>ಸರ್ಕಾರದ ಆದೇಶ ಸಂಖ್ಯೆ: ಕಂಇ 89 ಭೂಸ್ವಾಹಾ 2012 ದಿನಾಂಕ: 20.12.2012ರಲ್ಲಿ ಭೂಸ್ವಾಧೀನ ಕೈಬಿಡುವ ಸಂಬಂಧ ಕ್ರಮ ಜರುಗಿಸುವ ಪ್ರಸ್ತಾವನೆಗಳ ಬಗ್ಗೆ ಸಲಹೆಗಳನ್ನು ನೀಡಲು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಈ ಕೆಳಕಂಡ ಅಧಿಕಾರಿಗಳನ್ನೊಳಗೊಂಡ ಸಮಿತಿಯನ್ನು ರಚಿಸಲಾಗಿರುತ್ತದೆ. |

| | | | | |
|---|---|---|---|---|
| | | | | |

| | |
|---|---|
| 1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು | ಅಧ್ಯಕ್ಷರು |
| 2. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ | ಸದಸ್ಯ ಕಾರ್ಯದರ್ಶಿ |
| 3. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ | ಸದಸ್ಯರು |
| 4. ಭೂಸ್ವಾಧೀನ ಪ್ರಕ್ರಿಯೆ ಸಂಸ್ಥೆಯ ಆಡಳಿತ ಇಲಾಖೆಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ ಕಾರ್ಯದರ್ಶಿಗಳು | ಸದಸ್ಯರು |
| 5. ಭೂಸ್ವಾಧೀನ ಪ್ರಕ್ರಿಯೆ ಸಂಸ್ಥೆ/ ಪ್ರಾಧಿಕಾರ/ ಮಂಡಳಿಯ ವ್ಯವಸ್ಥಾಪಕ ನಿರ್ದೇಶಕರು/ ಆಯುಕ್ತರು/ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು | ಸದಸ್ಯರು |

ಅದರಂತೆ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಪಿ.ಆರ್.ಆರ್.–2ಗಾಗಿ ಪ್ರಾರಂಭಿಕ ಅಧಿಸೂಚನೆಗಳನ್ನು ಹಿಂಪಡೆಯುವ ಪ್ರಸ್ತಾವನೆಯ ಬಗ್ಗೆ ಸಲಹೆಗಳನ್ನು ಪಡೆಯಲು ಮೇಲ್ಕಂಡ ಸಮಿತಿಯ ಮುಂದೆ ಮಂಡಿಸುವ ಸಲುವಾಗಿ ಕಡತವನ್ನು ಕಂದಾಯ ಇಲಾಖೆಗೆ ಕಳುಹಿಸಲಾಗಿದ್ದು, ಪ್ರಸ್ತಾವನೆಯು ಕಂದಾಯ ಇಲಾಖೆಯ ಪರಿಶೀಲನೆಯಲ್ಲಿರುತ್ತದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿದ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು.

| | | | | |
|---|---|---|---|---|
| 2 | 4608<br>ಚು.ಗು.ಪ್ರ. 1251<br>ಶ್ರೀ ಎಸ್. ನಾಗರಾಜ್ (ಸಂದೇಶ್ ನಾಗರಾಜ್)<br>ವಿಪನದಿ:21.02.2014<br>(ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ವರ್ಗಾವಣೆ ದಿ:05.05.2015 ಸಮಿತಿಯ ಸಭೆಯಲ್ಲಿ ತೀರ್ಮಾನಿಸಿದಂತೆ) | ಬೆಂಗಳೂರಿನ ಪುಟ್ಟಣ್ಣ ಕಣಗಾಲ್ ಚಿತ್ರಮಂದಿರ ಮತ್ತು ಪಬ್ಲಿಕ್ ಯುಟಿಲಿಟಿ ಕಟ್ಟಡದಲ್ಲಿರುವ ಶಂಕರ್‌ನಾಗ್ ಚಿತ್ರಮಂದಿರಗಳನ್ನು ಸುಸಜ್ಜಿತಗೊಳಿಸಿ ಕೇವಲ ಕನ್ನಡ ಚಲನಚಿತ್ರ ಪ್ರದರ್ಶನಕ್ಕೆ ಮೀಸಲಿಡಲು ಕ್ರಮಕೈಗೊಳ್ಳುವುದು ಹಾಗೂ ರಾಜ್ಯದ ನಗರಸಭೆ/ ನಗರಾಭಿವೃದ್ಧಿ ಪ್ರಾಧಿಕಾರಗಳು ನಿರ್ಮಿಸುವ ವಾಣಿಜ್ಯ ಸಂಕೀರ್ಣದಲ್ಲಿ ಒಂದೊಂದು ಚಿತ್ರಮಂದಿರ ನಿರ್ಮಿಸಿ ಅದನ್ನು ಕನ್ನಡ ಚಲನಚಿತ್ರ ಪ್ರದರ್ಶನಕ್ಕೆ ಮೀಸಲಿಡುವ ಬಗ್ಗೆ. | ಈ ಬಗ್ಗೆ ಪರಿಶೀಲಿಸಲಾಗುವುದು ಎಂದು ಮಾನ್ಯ ಮೂಲ ಸೌಲಭ್ಯ ಅಭಿವೃದ್ಧಿ, ವಾರ್ತಾ ಹಾಗೂ ಹಜ್ ಸಚಿವರು ತಿಳಿಸಿದರು. | ದಿನಾಂಕ: 16.01.2018ರಂದು ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ಜಯನಗರ 4ನೇ ಬ್ಲಾಕ್‌ನಲ್ಲಿರುವ ಮಹಾನಗರ ಪಾಲಿಕೆಯ ಸ್ವತ್ತಾಗಿದ್ದು, ಸದರಿ ಪ್ರದೇಶದಲ್ಲಿ ಪುಟ್ಟಣ್ಣ ಕಣಗಾಲ್ ಚಿತ್ರಮಂದಿರ ಕಟ್ಟಡದ ಭಾಗದಲ್ಲಿ ಬಿ.ಡಿ.ಎ. ಸಹಭಾಗಿತ್ವದಲ್ಲಿ ಪುನರ್ ನಿರ್ಮಾಣ ಮಾಡುವ ಉದ್ದೇಶಕ್ಕಾಗಿ ದಿನಾಂಕ: 16.07.2012ರಂದು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಭೌತಿಕವಾಗಿ ಹಸ್ತಾಂತರಗೊಳಿಸಲಾಗಿದೆ. ತದನಂತರ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ಸದರಿ ಜಾಗದಲ್ಲಿ ವಾಣಿಜ್ಯ ಸಂಕೀರ್ಣದಲ್ಲಿ ಟಿ-ಬ್ಲಾಕ್ ಅನ್ನು (ಬಹುಮಹಡಿ ಕಟ್ಟಡ) ಹೊರತುಪಡಿಸಿ ಉಳಿದ ಪ್ರದೇಶದಲ್ಲಿರುವ ಕಟ್ಟಡಗಳನ್ನು ನೆಲಸಮಗೊಳಿಸಿ ಒಟ್ಟಾರೆ 04 ಬ್ಲಾಕ್‌ಗಳನ್ನು ನಿರ್ಮಿಸುವ ಯೋಜನೆಯನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಹಾಗೂ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಸಹಭಾಗಿತ್ವದೊಂದಿಗೆ ತೆಗೆದುಕೊಳ್ಳಲಾಗಿತ್ತು. ಸದರಿ 4 ಬ್ಲಾಕ್‌ಗಳ ಪೈಕಿ ಮೊದಲನೆಯ ಹಂತದಲ್ಲಿ ಪುಟ್ಟಣ್ಣ ಕಣಗಾಲ್ ಚಿತ್ರ ಮಂದಿರವಿದ್ದ ಜಾಗದಲ್ಲಿ ಬ್ಲಾಕ್-1ರ ಕಟ್ಟಡವನ್ನು ಬೇಸ್‌ಮೆಂಟ್-1, ಬೇಸ್‌ಮೆಂಟ್-2, ನೆಲಮಹಡಿ ಮತ್ತು 6 ಮಹಡಿಗಳನ್ನು ಒಳಗೊಂಡಂತೆ, ಕಛೇರಿಗಳು, ಬ್ಯಾಂಕ್ ಮತ್ತು ವಾಣಿಜ್ಯ ಮಳಿಗೆಗಳಿಗೆ ಮೀಸಲಿರಿಸಿ ನಿರ್ಮಿಸಲಾಗಿದೆ.<br>ಮಾನ್ಯ ಲೋಕಾಯುಕ್ತರ ದಿನಾಂಕ: 10.10.2017ರ ನಿರ್ದೇಶನದಂತೆ ಹಾಗೂ ದಿನಾಂಕ: 19.12.2017ರಂದು ಭರವಸೆ ಸಮಿತಿಯಲ್ಲಿ ಚರ್ಚಿಸಿ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ತೆಗೆದುಕೊಂಡಿರುವ ನಿರ್ಣಯದಂತೆ ಈಗಾಗಲೇ ನಿರ್ಮಿಸಿರುವ ಬ್ಲಾಕ್ ನಂ: 1ರ ಕಟ್ಟಡಕ್ಕೆ ಖರ್ಚಾಗಿರುವ ಮೊತ್ತ ರೂ. 56.63 ಕೋಟಿಗಳನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಹಿಂದಿರುಗಿಸಿ ಉಳಿದ ಬ್ಲಾಕ್ 2, 3 ಮತ್ತು 4 ಕಟ್ಟಡಗಳ ನಿರ್ಮಾಣ ಕಾರ್ಯವನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ಕೈಗೊಳ್ಳಲು ಹಾಗೂ ಸದರಿ ಎಲ್ಲಾ ವಾಣಿಜ್ಯ ಸಂಕೀರ್ಣಗಳ ಜಾಗ ಮತ್ತು ಕಟ್ಟಡವನ್ನು ಮಹಾನಗರ ಪಾಲಿಕೆಗೆ ಹಸ್ತಾಂತರಿಸಿಕೊಳ್ಳುವ ಬಗ್ಗೆ ಆಯುಕ್ತರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಇವರು ಸರ್ಕಾರಕ್ಕೆ ಪ್ರಸ್ತುತ ಪತ್ರ ಬರೆದಿರುತ್ತಾರೆ. ಈ ಬಗ್ಗೆ ಪೂರ್ಣ ಪ್ರಮಾಣದ ಪ್ರಸ್ತಾವನೆಯನ್ನು ಆಯುಕ್ತರು ಬಿ.ಬಿ.ಎಂ.ಪಿ ಇವರಿಂದ ಪಡೆದು ನಿಯಮಾನುಸಾರ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು. |

| | | | | |
|---|---|---|---|---|
| | | | | ಎಂ.ಜಿ. ರಸ್ತೆಯ, ಪಿ.ಯು.ಬಿ. ಕಟ್ಟಡದಲ್ಲಿರುವ ಶಂಕರ್‌ನಾಗ್ ಚಿತ್ರಮಂದಿರವನ್ನು ಸುಸಜ್ಜಿತಗೊಳಿಸಿ ಕೇವಲ ಕನ್ನಡ ಚಲನಚಿತ್ರ ಪ್ರದರ್ಶನಕ್ಕೆ ಮೀಸಲಿಡುವ ಬಗ್ಗೆ 10 ವರ್ಷಗಳ ಗುತ್ತಿಗೆ ಅವಧಿಗೆ ದಿನಾಂಕ: 27.12.2017ರಂದು ಸಾರ್ವಜನಿಕ ದಿನಪತ್ರಿಕೆಗಳ ಮೂಲಕ ಕಾರ್ಯ ಪಾಲಕ ಅಭಿಯಂತರರು (ಯೋಜನೆ–ಪೂರ್ವ) ರವರ ಕಛೇರಿಯಿಂದ ಟೆಂಡರ್ ಕರೆಯಲಾಗಿರುತ್ತದೆ. ಈ ಬಗ್ಗೆ ಅಂತಿಮ ತೀರ್ಮಾನ ಆದ ನಂತರ ಪೂರ್ಣ ಮಾಹಿತಿಯನ್ನು ಒದಗಿಸಲಾಗುವುದು ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿದ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |
| 3 | 5329<br>ಚು.ಗು.ಪ್ರ. 1104<br>ಶ್ರೀ ರಘುನಾಥ್‌ರಾವ್ ಮಲ್ಕಾಪೂರೆ<br>ವಿಪನದಿ:10.07.2014 | ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ ಅನೇಕ ವರ್ಷಗಳಿಂದ ನಿಯೋಜನೆ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿ/ ನೌಕರರುಗಳನ್ನು ಬೇರೆಡೆಗೆ ವರ್ಗಾಯಿಸುವ ಬಗ್ಗೆ. | ಒಟ್ಟು 233 ಜನ ಬೇರೆ ಬೇರೆ ಇಲಾಖೆಯಿಂದ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ ನಿಯೋಜನೆ ಮೇರೆಗೆ ಕೆಲಸ ನಿರ್ವಹಿಸುತ್ತಿರುತ್ತಾರೆ. ಒಬ್ಬರು ಮಾತ್ರ 10 ವರ್ಷಗಳಾದರೂ ಕೂಡ ನಿಯೋಜನೆ ಮೇರೆಗೆ ಇದ್ದಾರೆ, 34 ಜನ 5 ವರ್ಷಗಳಿಂದ 10 ವರ್ಷದವರೆಗೆ ನಿಯೋಜನೆ ಮೇಲೆ ಇದ್ದಾರೆ, ಮೂರು ವರ್ಷಗಳಿಂದ ಐದು ವರ್ಷಗಳವರೆಗೆ 74 ಜನ ನಿಯೋಜನೆ ಮೇರೆಗೆ ಕಾರ್ಯ ನಿರ್ವಹಿಸುತ್ತಿದ್ದಾರೆ. ಅದಕ್ಕಾಗಿ ಒಂದು ತೀರ್ಮಾನವನ್ನು ತೆಗೆದು ಕೊಳ್ಳಲಾಗಿದ್ದು, ಅದರಂತೆ | ದಿನಾಂಕ: 16.01.2018ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ ಐದು ವರ್ಷಗಳಿಗೆ ಮೇಲ್ಪಟ್ಟು ನಿಯೋಜನೆ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ಒಟ್ಟು 19 ಅಧಿಕಾರಿ/ನೌಕರರುಗಳನ್ನು ಮಾತ್ರ ಇಲಾಖೆಗೆ ಹಿಂದಿರುಗಿಸಲು ಕ್ರಮ ತೆಗೆದುಕೊಳ್ಳಲಾಗುತ್ತದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿದ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |

| | | | | |
|---|---|---|---|---|
| | | | ಒಂದು ಬಾರಿ ಡೆಪ್ಯೂಟೇಷನ್ ಮಾಡಿದರೆ ಐದು ವರ್ಷಗಳವರೆಗೆ ಇರಬಹುದೆಂದು ಇದೆ. ಆದುದರಿಂದ, ಯಾರ್‍ಯಾರು ಐದು ವರ್ಷಗಳಿಗಿಂತಲೂ ಹೆಚ್ಚಾಗಿ ಅಲ್ಲಿ ನಿಯೋಜನೆ ಮೇರೆಗೆ ಬಂದು ಕೆಲಸ ಮಾಡುತ್ತಿರುವಂತಹ ಎಲ್ಲಾ ನೌಕರರನ್ನು ಅವರವರ ಇಲಾಖೆಗೆ ಕಳುಹಿಸಿಕೊಡಲಾಗುವುದು. ಒಬ್ಬರನ್ನೂ ಕೂಡ ಅಲ್ಲಿ ಇರುವುದಕ್ಕೆ ಬಿಡುವುದಿಲ್ಲ. ಅವರುಗಳು ಯಾವ್ಯಾವ ಹುದ್ದೆಯಲ್ಲಿದ್ದರೂ ಪರವಾಗಿಲ್ಲ ಐದು ವರ್ಷಗಳ ಮೇಲೆ ಯಾರನ್ನೂ ಅಲ್ಲಿ ನಿಯೋಜನೆ ಮೇರೆಗೆ ಕೆಲಸ ಮಾಡುವುದಕ್ಕೆ ಬಿಡುವುದಿಲ್ಲ ಹಾಗೂ ಯಾರ್‍ಯಾರ ಮೇಲೆ ಈಗ ಲೋಕಾಯುಕ್ತರವರು ದಾಳಿ ಮಾಡಿದಾಗ ಸಿಕ್ಕಿ ಹಾಕಿಕೊಂಡಿದ್ದಾರೆ ಅವರನ್ನು ಸಸ್ಪೆಂಡ್ ಮಾಡುವಂತಹ ಕೆಲಸವನ್ನು ಮಾಡಿದ್ದೇವೆ. ಕೆಲವರು ಜೈಲಿಗೆ ಕೂಡ | |

| | | | | |
|---|---|---|---|---|
| | | | ಹೋಗಿದ್ದಾರೆ. ಆದುದರಿಂದ, ಭ್ರಷ್ಟಾಚಾರವನ್ನು ತಡೆಗಟ್ಟುವುದಕ್ಕೆ ಏನೇನು ಮಾಡಬೇಕೋ ಎಲ್ಲಾ ರೀತಿಯ ಪ್ರಯತ್ನವನ್ನು ಮಾಡುತ್ತೇವೆ ಎಂದು ಮುಖ್ಯಮಂತ್ರಿಯವರು ತಿಳಿಸಿದರು. | |
| 4 | 4987<br>ಚು,ರ,ಪ್ರ; 157<br>ಶ್ರೀಮತಿ, ಭಾರತಿ ಶೆಟ್ಟಿ<br>ದಿ.26.06.2014<br>ಉಪ ಪ್ರಶ್ನೆ | ಬೆಂಗಳೂರು ಜಲಮಂಡಳಿಯು ನಾಗರೀಕರಿಗೆ ಸರಬರಾಜು ಮಾಡುತ್ತಿರುವ ನೀರಿಗೆ ವಿಧಿಸುತ್ತಿರುವ ದರದ ಬಗ್ಗೆ ಹಾಗೂ ಕೊಳಗೇರಿ ನಿವಾಸಿಗಳು ಅಧಿಕೃತ ವಾಗಿ ಇದರ ಉಪಯೋಗ ಮಾಡಿಕೊಳ್ಳಲು ಸರ್ಕಾರ ದಿಂದ ರಿಯಾಯಿತಿ ಕೊಡುವ ಬಗ್ಗೆ. | ಜಲಮಂಡಳಿಯಲ್ಲಿ 52% ನೀರಿಗೆ ಮಾತ್ರ ಬಿಲ್ ಆಗುತ್ತಿದ್ದು, ಉಳಿದ 48% ಯಾವುದೇ ಬಿಲ್ ಇಲ್ಲ ಇದನ್ನೆಲ್ಲ ಪತ್ತೆ ಹಚ್ಚಲು ಕ್ರಮಗಳನ್ನು ಕೈಗೊಳ್ಳುತ್ತಿದ್ದೇವೆ ಅದನ್ನು ಪರಿಶೀಲನೆ ಮಾಡುತ್ತೇನೆ. ಎಂದು ಮಾನ್ಯ ಮುಖ್ಯ ಮಂತ್ರಿಗಳು ತಿಳಿಸಿದರು. | ದಿನಾಂಕ: 16.01.2018ರಂದು ಸಮಿತಿ ಸಭೆಯಲ್ಲಿ ಚರ್ಚಿಸಿದಾಗ: ಬೆಂಗಳೂರು ನಗರದ ಕೊಳಚೆ ಪ್ರದೇಶದ ನಿವಾಸಿಗಳಿಗೆ ಪ್ರತಿ ತಿಂಗಳು 10,000 ಲೀಟರ್ ನೀರನ್ನು ಉಚಿತವಾಗಿ ಸರಬರಾಜು ಮಾಡಲಾಗುತ್ತಿದ್ದು ಹಾಗೂ ಸದರಿ ಸಂಪರ್ಕಗಳ ಬಾಕಿಯಿರುವ ನೀರಿನ ಬಿಲ್ಲಿನ ಅಸಲು ಹಾಗೂ ಬಡ್ಡಿ ಮನ್ನಾ ಮಾಡಲಾಗಿದೆ.<br><br>ಈ ವಿಧಾನವು ಬಿ.ಬಿ.ಎಂ.ಪಿ. ವ್ಯಾಪ್ತಿಯ ಎಲ್ಲಾ ಕೊಳಚೆ ಪ್ರದೇಶದಲ್ಲಿ 20 x 30 ಅಡಿ ಮತ್ತು ಇದಕ್ಕಿಂತ ಕೆಳಪಟ್ಟು ವಿಸ್ತೀರ್ಣದ ನಿವೇಶನದಲ್ಲಿ ನಿರ್ಮಿಸಿರುವ ಗೃಹಗಳಿಗೆ ಮಾತ್ರ ಅನ್ವಯಿಸುತ್ತದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿದ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |
| 5 | 4981<br>ನಿ. 56ರ ಅಡಿಯಲ್ಲಿ ಅಲ್ಪಕಾಲಾವಧಿ ಪ್ರಶ್ನೆ<br>ಶ್ರೀ ಟಿ.ಎ. ಶರವಣ<br>ವಿಪನದಿ: 05.02.2015 | ಬೆಂಗಳೂರು ಜಲಮಂಡಳಿಯ ಅನೇಕ ಅಧಿಕಾರಿ/ ನೌಕರರುಗಳು ನಾಗರೀಕರ ಕೋಟ್ಯಾಂತರ ರೂ. ವಾಟರ್ ಠೇವಣಿ | ಜಲಮಂಡಳಿಯ ಅಧಿಕಾರಿ ಹಾಗೂ ನೌಕರರುಗಳು ಯಾವುದೇ ಠೇವಣಿ ಮೊತ್ತವನ್ನು ದುರುಪಯೋಗಪಡಿಸಿಕೊಂಡಿ | ದಿನಾಂಕ: 16.01.2018ರಂದು ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ಬೆಂಗಳೂರು ಜಲ ಮಂಡಳಿಯ ಅಧಿಕಾರಿಗಳು ಹಾಗೂ ನೌಕರರುಗಳು ಯಾವುದೇ ಠೇವಣಿಯನ್ನು ದುರಪಯೋಗಪಡಿಸಿಕೊಂಡಿರುವ ಬಗ್ಗೆ ನಿರ್ದಿಷ್ಟ ದೂರು ಬಂದಿರುವುದಿಲ್ಲ. ಒಂದು ವೇಳೆ ನಿರ್ದಿಷ್ಟ ದೂರು ಬಂದಲ್ಲಿ ಅಂತಹ ಅಧಿಕಾರಿ ಹಾಗೂ ನೌಕರರುಗಳ ವಿರುದ್ಧ ಕಾನೂನು ರೀತಿ ಶಿಸ್ತು ಕ್ರಮ ಕೈಗೊಳ್ಳಲಾಗುವುದು. |

| | | | | |
|---|---|---|---|---|
| 6 | 5000<br>ನಿ. 56ರ ಅಡಿಯಲ್ಲಿ ಅಲ್ಪಕಾಲಾವಧಿ ಪ್ರಶ್ನೆ<br>ಶ್ರೀ ಟಿ.ಎ. ಶರವಣ<br>ವಿಪನದಿ: 05.02.2015 | ಮೊತ್ತವನ್ನು ದುರುಪಯೋಗಪಡಿಸಿ ಕೊಂಡಿರುವ ಬಗ್ಗೆ ಹಾಗೂ ಕಾನೂನು ಬಾಹಿರವಾಗಿ ಹೆಚ್ಚೆಚ್ಚು ಮೊತ್ತದ ಬಿಲ್ ನೀಡಿ ಜನ ಸಾಮಾನ್ಯರನ್ನು ಶೋಷಣೆ ಮಾಡುತ್ತಿರುವ ಬಗ್ಗೆ. | ರುವ ಬಗ್ಗೆ ನಿರ್ದಿಷ್ಟ ದೂರುಗಳು ಬಂದಿರುವುದಿಲ್ಲ. ಒಂದು ವೇಳೆ ನಿರ್ದಿಷ್ಟ ದೂರು ಬಂದಲ್ಲಿ ಅಂತಹ ಅಧಿಕಾರಿ / ನೌಕರರುಗಳ ವಿರುದ್ಧ ಕಾನೂನು ರೀತ್ಯಾ ಶಿಸ್ತು ಕ್ರಮ ಕೈಗೊಳ್ಳಲಾಗುವುದು. ನೀರು ಸೋರುವಿಕೆಯನ್ನು ತಡೆಗಟ್ಟಲು ಅಪಾರ್ಟ್‌ಮೆಂಟ್‌ಗಳಲ್ಲಿ ಅನಧಿಕೃತವಾಗಿ ಕನೆಕ್ಷನ್ ತೆಗೆದುಕೊಂಡಿದ್ದರೆ ಅದನ್ನೆಲ್ಲಾ ರದ್ದುಗೊಳಿಸುತ್ತೇವೆ. ಮನಬಂದಂತೆ ಬಿಲ್ಲು ನೀಡಿ ಮಂಡಳಿಯಿಂದ ಸಾರ್ವಜನಿಕರಿಗೆ ಕಿರುಕುಳ ಆಗುತ್ತಿದ್ದಲ್ಲಿ ನನ್ನ ಗಮನಕ್ಕೆ ತಂದಲ್ಲಿ ನಾನು ಕ್ರಮ ಕೈಗೊಳ್ಳುತ್ತೇನೆ ಎಂದು ಮಾನ್ಯ ಮುಖ್ಯಮಂತ್ರಿಗಳು ತಿಳಿಸಿದರು. | ಹೊಸ ತಂತ್ರಜ್ಞಾನದ ಸ್ಪಾಟ್ ಬಿಲ್ಲಿಂಗ್ ಯಂತ್ರ ಬಳಸಿ ಜಲಮಾಪಕದಲ್ಲಿರುವ ರೀಡಿಂಗ್ ಪಡೆದು ನೀರಿನ ಬಳಕೆಗನುಗುಣವಾಗಿ ಹಾಗೂ ನಿಗದಿತ ದರದಂತೆ ಬಿಲ್ಲನ್ನು ವಿತರಿಸಲಾಗುತ್ತಿದೆ. ಆದುದರಿಂದ ಯಾವುದೇ ಕಾನೂನು ಬಾಹಿರವಾಗಿ ಹೆಚ್ಚೆಚ್ಚು ಮೊತ್ತದ ಬಿಲ್ ನೀಡಲಾಗುತ್ತಿರುವುದಿಲ್ಲ.<br><br>ಬೆಂಗಳೂರು ಜಲಮಂಡಳಿಗೆ ಅಧಿಕ ಮೊತ್ತದ ಬಿಲ್ ನೀಡಿದ ದೂರು ಬಂದಲ್ಲಿ, ಅವುಗಳನ್ನು ವಾಟರ್ ಅದಾಲತ್ ಸಭೆ ಹಾಗೂ ಮೇಲ್ಮನವಿ ಸಭೆಯಲ್ಲಿ ಮಂಡಿಸಿ ನಿರ್ಣಯ ತೆಗೆದುಕೊಳ್ಳಲಾಗುತ್ತಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿದ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |
| 7 | 3954<br>ಚ.ಗು.ಪ್ರ: 417<br>ಶ್ರೀ ಮನೋಹರ ಮಸ್ಕಿ<br>ವಿಪನದಿ: 09.02.2012 | ಬೆಂಗಳೂರು ನಗರದ ಆರ್.ಎಂ.ವಿ (ರಾಜಮಹಲ್ ವಿಲಾಸ್) ಬಡಾವಣೆಯ 2ನೇ ಹಂತದ ಪೂಜಾರಿ | ಬೆಂಗಳೂರು ಜಲಮಂಡಳಿಯು ಹೆಚ್ಚುವರಿಯಾಗಿ 500 ದಶಲಕ್ಷ ನೀರು ತರುವ ಕಾವೇರಿ ನಾಲ್ಕನೇ ಹಂತದ | ದಿನಾಂಕ: 16.01.2018ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ಬೆಂಗಳೂರು ನಗರದ ಆರ್.ಎಂ.ವಿ. (ಜಯಮಹಲ್ ವಿಲಾಸ್) ಬಡಾವಣೆಯ 2ನೇ ಹಂತದ ಪೂಜಾರಿ ಬಡಾವಣೆಯಲ್ಲಿ ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆಯ ಸೌಲಭ್ಯಗಳನ್ನು ಈಗಾಗಲೇ ಒದಗಿಸಲಾಗಿದೆ. ಸದರಿ ಪ್ರದೇಶದಲ್ಲಿ 70 ಸಂಪರ್ಕಗಳನ್ನು ಮಂಜೂರಾತಿ ಮಾಡಲಾಗಿದ್ದು, ದಿನ ಬಿಟ್ಟು |

| | | | | |
|---|---|---|---|---|
| | | ಲೇಔಟ್‌ನ ಜನಸಂಖ್ಯೆಗೆ ಸಾಕಾಗುವಷ್ಟು ನೀರು ಪೂರೈಕೆ ಮತ್ತು ಒಳಚರಂಡಿ ವ್ಯವಸ್ಥೆ ಕಲ್ಪಿಸುವ ಬಗ್ಗೆ. | 2ನೇ ಫೇಸ್ ಯೋಜನೆಯ ಕಾರ್ಯವನ್ನು ಕೈಗೆತ್ತಿಕೊಂಡಿದ್ದು, ಇದು ತ್ವರಿತಗತಿಯಲ್ಲಿ ಪ್ರಗತಿಯಲ್ಲಿದ್ದು, ಈ ಯೋಜನೆ ಪೂರ್ಣಗೊಂಡ ನಂತರ ಮೇಲ್ಕಂಡ ಬಡಾವಣೆಗೆ ನೀರಿನ ವ್ಯವಸ್ಥೆ ಉತ್ತಮ ಪಡಿಸಲಾಗುವುದು ಎಂದು ಮಾನ್ಯ ಮುಖ್ಯಮಂತ್ರಿಗಳು ತಿಳಿಸಿದರು. | ದಿನ ನೀರು ಸರಬರಾಜು ಮಾಡಲಾಗುತ್ತದೆ ಹಾಗೂ ಒಳಚರಂಡಿ ಸೌಲಭ್ಯವನ್ನೂ ಸಹ ಕಲ್ಪಿಸಲಾಗಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿದ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |
| 8 | 4429<br>ಚು.ರ.ಪ್ರ: 673<br>ಡಾ: ಎ.ಹೆಚ್. ಶಿವಯೋಗಿಸ್ವಾಮಿ<br>ವಿಪನದಿ: 30.01.2014 | ದಾವಣಗೆರೆ ನಗರಸಭೆ ಮಹಾನಗರ ಪಾಲಿಕೆಯಾಗಿ ಘೋಷಣೆಯಾದ ನಂತರ ವಿವಿಧ ವೃಂದದ ಹುದ್ದೆ ಖಾಲಿ ಇರುವ ಕಾರಣದಿಂದಾಗಿ ನಗರದಲ್ಲಿ ನಾಗರೀಕ ಸೇವೆಗೆ ತೊಂದರೆಯಾಗಿರುವ ಬಗ್ಗೆ. | ರಾಜ್ಯದ ಮಹಾನಗರ ಪಾಲಿಕೆಗಳಲ್ಲಿ ಖಾಲಿ ಇರುವ ಹುದ್ದೆಗಳಲ್ಲಿ "ಡಿ" ವರ್ಗದ 990 ಹುದ್ದೆಗಳನ್ನು ತುಂಬಲು ಅನುಮತಿ ನೀಡಲಾಗಿದ್ದು ಉಳಿದ ವೃಂದದ ಹುದ್ದೆಗಳನ್ನು ಸಹ ತುಂಬುವುದರ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ ಎಂದು ಮಾನ್ಯ ನಗರಾಭಿವೃದ್ಧಿ ಸಚಿವರು ತಿಳಿಸಿದರು. | ದಿನಾಂಕ: 16.01.2018ರಂದು ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ದಾವಣಗೆರೆ ಮಹಾನಗರ ಪಾಲಿಕೆಯ ಖಾಲಿ ಹುದ್ದೆಗಳ ವಿವರವನ್ನು ಅನುಬಂಧ–IXರಲ್ಲಿ ಲಗತ್ತಿಸಿದೆ. ರಾಜ್ಯದ 10 ಮಹಾನಗರ ಪಾಲಿಕೆಗಳಲ್ಲಿ ಖಾಲಿ ಇರುವ ನೇರ ನೇಮಕಾತಿ ಕೋಟಾದಡಿಯಲ್ಲಿನ ಒಟ್ಟು 1793 ಹುದ್ದೆಗಳನ್ನು ಭರ್ತಿ ಮಾಡುವ ಕುರಿತಂತೆ ಕರ್ನಾಟಕ ಲೋಕಸೇವಾ ಆಯೋಗಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದ್ದು ಲೋಕಸೇವಾ ಆಯೋಗದ ವತಿಯಿಂದ ನಿಯಮಾನುಸಾರ ಆಯ್ಕೆ ಮಾಡಿ, ದಾವಣಗೆರೆ ಮಹಾನಗರಪಾಲಿಕೆಯ ವಿವಿಧ ವೃಂದದ ಈ ಕೆಳಕಂಡ ಹುದ್ದೆಗಳನ್ನು ಭರ್ತಿ ಮಾಡಲಾಗಿರುತ್ತದೆ. |

| ಕ್ರ ಸಂ. | ಹುದ್ದೆಯ ಹೆಸರು | ಹುದ್ದೆಗಳ ಸಂಖ್ಯೆ |
|---|---|---|
| 1. | ಸಹಾಯಕ ಅಭಿಯಂತರರು (ಸಿವಿಲ್) | 04 |
| 2. | ಸಹಾಯಕ ಅಭಿಯಂತರರು (ವಿದ್ಯುತ್) | 04 |

<table>
<tr><td></td><td></td><td></td><td></td><td><table><tr><td>3.</td><td>ಪರಿಸರ ಅಭಿಯಂತರರು</td><td>01</td></tr><tr><td>4.</td><td>ಕಿರಿಯ ಅಭಿಯಂತರರು (ಸಿವಿಲ್)</td><td>12</td></tr><tr><td>5.</td><td>ಕಿರಿಯ ಅಭಿಯಂತರರು (ವಿದ್ಯುತ್)</td><td>03</td></tr><tr><td>6.</td><td>ಲೆಕ್ಕಿಗರು</td><td>01</td></tr><tr><td>7.</td><td>ಪ್ರಥಮ ದರ್ಜೆ ಸಹಾಯಕರು</td><td>11</td></tr></table><br>ಮೇಲ್ಕಂಡಂತೆ ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿದ ಸಮಿತಿಯು ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು.</td></tr>
<tr><td>9</td><td>4431<br>ಚು.ರ.ಪ್ರ: 614+615<br>ಡಾ॥ ಎಂ.ಆರ್. ಹುಲಿನಾಯ್ಕರ್<br>ವಿಪನದಿ: 30.01.2014</td><td>ತುಮಕೂರು, ಶಿವಮೊಗ್ಗ ಮತ್ತು ಬಿಜಾಪುರ ನಗರ ಸಭೆಗಳು, ಮಹಾನಗರ ಪಾಲಿಕೆಗಳಾಗಿರುವುದರಿಂದ ಚುನಾಯಿತ ಸದಸ್ಯರುಗಳ ಅವಧಿಯ ಬಗ್ಗೆ.</td><td>ತುಮಕೂರು, ಶಿವಮೊಗ್ಗ ಮತ್ತು ಬಿಜಾಪುರ ನಗರಸಭೆಗಳು ದಿ:20.12.13ರಲ್ಲಿ ಮಹಾನಗರ ಪಾಲಿಕೆಗಳಾಗಿ ಉನ್ನತೀಕರಣ ಗೊಂಡಿರುತ್ತವೆ ಪ್ರಸ್ತುತ ಇರುವ ಚುನಾಯಿತ ಸದಸ್ಯರುಗಳ ಅವಧಿಯನ್ನು ಕರ್ನಾಟಕ ಪೌರನಿಗಮಗಳ ಕಾಯ್ದೆ 1976ರ ಕಲಂ 503ರಲ್ಲಿ ಸ್ಪಷ್ಟಪಡಿಸಿ ರುವಂತೆ ಪರಿಶೀಲಿಸಿ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದು ಎಂದು ಮಾನ್ಯ ನಗರಾಭಿವೃದ್ಧಿ ಸಚಿವರು ತಿಳಿಸಿದರು.</td><td>ದಿನಾಂಕ: 16.01.2018ರಂದು ಸಮಿತಿ ಸಭೆಯಲ್ಲಿ ಚರ್ಚಿಸಿದಾಗ: ಶಿವಮೊಗ್ಗ, ಬಿಜಾಪುರ ಮತ್ತು ತುಮಕೂರು ನಗರಸಭೆಗಳನ್ನು ದಿನಾಂಕ: 20.12.2013 ರಿಂದ ಮಹಾನಗರ ಪಾಲಿಕೆಗಳಾಗಿ ಮೇಲ್ದರ್ಜೆಗೇರಿಸಿದ್ದು ಅವುಗಳ ಸದಸ್ಯರನ್ನೆ ಮುಂದಿನ 5 ವರ್ಷ ಅವಧಿಗೆ ನಗರಪಾಲಿಕೆ ಸದಸ್ಯರಾಗಿ ಮುಂದುವರಿಸುವ ಬಗ್ಗೆ ಕರ್ನಾಟಕ ಪೌರನಿಗಮಗಳ (ತಿದ್ದುಪಡಿ) ವಿಧೇಯಕಕ್ಕೆ ವಿಧಾನಸಭೆ ಅನುಮೋದನೆಗೆ ನೀಡಿದ್ದು, ಅದರಂತೆ ಸರ್ಕಾರದ ಅಧಿಸೂಚನೆ ಸಂಖ್ಯೆ:ಸಂವ್ಯಶಾಇ 15 ಶಾಸನ 2014, ಬೆಂಗಳೂರು ದಿನಾಂಕ: 28.02.2014ರನ್ವಯ (ಕರ್ನಾಟಕ ಮುನ್ಸಿಪಲ್ ಕಾರ್ಪೋರೇಷನ್ (ತಿದ್ದುಪಡಿ) ಆ್ಯಕ್ಟ್ 2014) ( ಸೆಕ್ಷನ್ 503ಕ್ಕೆ ತಿದ್ದುಪಡಿ) ಹೊರಡಿಸಲಾಗಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿದ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು.</td></tr>
</table>

| | | | | |
|---|---|---|---|---|
| 10 | 4432<br>ಚು.ರ.ಪ್ರ: 629<br>ಶ್ರೀ ಗೋ. ಮಧುಸೂದನ್<br>ವಿಪನದಿ: 30.01.2014 | ಮೈಸೂರು ನಗರದಲ್ಲಿ ಸಿ.ಡಿ.ಪಿ ಪರಿಷ್ಕರಣೆ ಮಾಡುವ ಬಗ್ಗೆ. | ಮೈಸೂರು–ನಂಜನಗೂಡು ಸ್ಥಳೀಯ ಯೋಜನಾ ಪ್ರದೇಶದ ಮಹಾ ಯೋಜನೆ ಯನ್ನು ಪರಿಷ್ಕರಣೆ ಮಾಡಲಾಗಿದ್ದು, ದಿನಾಂಕ: 01.08.2012ರಂದು ಸರ್ಕಾರದಿಂದ ತಾತ್ಕಾಲಿಕ ಅನುಮೋದನೆ ದೊರೆತಿದೆ. ಸದರಿ ಮಹಾಯೋಜನೆ ಯನ್ನು ಅಂತಿಮಗೊಳಿಸುವ ಪ್ರಕ್ರಿಯೆ ಸರ್ಕಾರದ ಪರಿಶೀಲನೆಯಲ್ಲಿದೆ ಎಂದು ಮಾನ್ಯ ನಗರಾಭಿವೃದ್ಧಿ ಸಚಿವರು ತಿಳಿಸಿದರು. | ದಿನಾಂಕ: 16.01.2018ರಂದು ಸಮಿತಿ ಸಭೆಯಲ್ಲಿ ಚರ್ಚಿಸಿದಾಗ: ಮೈಸೂರು ನಂಜನಗೂಡು ಸ್ಥಳೀಯ ಯೋಜನಾ ಪ್ರದೇಶಕ್ಕೆ ಮಹಾಯೋಜನೆ (ಪರಿಷ್ಕೃತ–2)– 2031ಕ್ಕೆ ಸರ್ಕಾರದ ಆದೇಶ ಸಂಖ್ಯೆ: ನಾಇ 597 ಮೈಅಪ್ರಾ 2011 (ಭಾ–2) ದಿನಾಂಕ: 12.01.2016ರಂದು ಅಂತಿಮ ಅನುಮೋದನೆ ನೀಡಲಾಗಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿದ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |
| 11 | 4434<br>ಚು.ಗು.ಪ್ರ: 672<br>ಶ್ರೀ ಬಿ. ರಾಮಕೃಷ್ಣ<br>ವಿಪನದಿ: 18.02.2014 | ಮಂಡ್ಯ ನಗರದಲ್ಲಿ ಮುಖ್ಯಮಂತ್ರಿಗಳ ನಗರ ಯೋಜನೆಯಡಿ ರಸ್ತೆಗಳು ಚರಂಡಿ ಹಾಗೂ ಇನ್ನಿತರ ಅಭಿವೃದ್ಧಿ ಕಾಮಗಾರಿಗಳ ಬಗ್ಗೆ. | ನಾನು ಖುದ್ದಾಗಿ ಹೋಗಿ ಅಲ್ಲಿಗೆ ಭೇಟಿ ಕೊಡುತ್ತೇನೆ ಅವರು ನನ್ನ ಜೊತೆಯಲ್ಲಿ ಬರಲಿ ನಾನು ಪರಿಶೀಲನೆ ಮಾಡುತ್ತೇನೆ ಅವರ ಮಾಹಿತಿ ಪ್ರಕಾರ ಕೆಲಸ ಆಗಿಲ್ಲ ನಮ್ಮ ಮಾಹಿತಿ ಪ್ರಕಾರ ಆಗಿದೆ ನಾನು ಖುದ್ದಾಗಿ ಅಲ್ಲಿಗೆ ಹೋಗುತ್ತಿದ್ದೇನೆ ಅವರು ನನ್ನ ಜೊತೆ ಬರಲಿ ಕೇಳೋಣ ಎಂದು ಮಾನ್ಯ ಪೌರಾಡಳಿತ, | ದಿನಾಂಕ: 16.01.2018ರಂದು ಸಮಿತಿ ಸಭೆಯಲ್ಲಿ ಚರ್ಚಿಸಿದಾಗ ಮಾನ್ಯ ಅಧ್ಯಕ್ಷರು ಹಾಗೂ ಪೌರಾಡಳಿತ ಮತ್ತು ಸಾರ್ವಜನಿಕ ಉದ್ದಿಮೆಗಳು ಮತ್ತು ಅಲ್ಪಸಂಖ್ಯಾತರ ಕಲ್ಯಾಣ ವಕ್ಫ್ ಸಚಿವರು ಸದನದಲ್ಲಿ ಭರವಸೆ ನೀಡಿದಂತೆ ದಿನಾಂಕ: 09.06.2014 ರಂದು ಮಂಡ್ಯ ಜಿಲ್ಲೆಗೆ ನೀಡಿ ಪ್ರಗತಿ ಪರಿಶೀಲನಾ ಸಭೆಯನ್ನು ನಡೆಸಿ ಕಾಮಗಾರಿಗಳ ಪರಿವೀಕ್ಷಣೆ ಮಾಡಿರುತ್ತಾರೆ.<br><br>ಸಿಎಂಎಸ್‌ಎಂಟಿಡಿಪಿ ನಗರೋತ್ಥಾನ–2ನೇ ಹಂತದ ಯೋಜನೆಯಡಿ ಮಂಡ್ಯ ನಗರಸಭೆಗೆ ಹಂಚಿಕೆಯಾದ ರೂ. 30.00 ಕೋಟಿಗಳ ಪೈಕಿ ರೂ. 24.00 ಕೋಟಿಗಳ ರಸ್ತೆ ಅಭಿವೃದ್ಧಿ ಕಾಮಗಾರಿಗಳಿಗೆ ಸರ್ಕಾರದ ಅನುಮೋದನೆ ಪಡೆದು 17 ಪ್ಯಾಕೇಜ್‌ಗಳಲ್ಲಿ ಅನುಷ್ಠಾನಗೊಳಿಸಲಾಗಿರುತ್ತದೆ. ಬಾಕಿ ಉಳಿದ 01 ಪ್ಯಾಕೇಜ್ ಚರಂಡಿ ಕಾಮಗಾರಿಗಳಿಗೆ ರೂ. 6.00 ಕೋಟಿಗಳ ಅನುದಾನವನ್ನು |

| | | | | |
|---|---|---|---|---|
| | | | ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳು ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು ತಿಳಿಸಿದರು. | ಹಂಚಿಕೆ ಮಾಡಲಾಗಿದ್ದು, ಅದನ್ನು ಅಮೃತ್ ಯೋಜನೆಯಡಿ ನಗರಸಭೆ ವಂತಿಕೆಯಾಗಿ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಮಂಡ್ಯ ಇವರಿಗೆ ದಿನಾಂಕ:22.09.2017ರಂದು ಪಾವತಿಸಲಾಗಿದೆ. ಪ್ರಸ್ತುತ ಈ ಕಾಮಗಾರಿಯು ಮುಕ್ತಾಯದ ಹಂತದಲ್ಲಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿದ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |
| 12 | 4435<br>ಚು.ಗು.ಪ್ರ: 845<br>ಶ್ರೀಮತಿ ಎ.ವಿ.ಗಾಯತ್ರಿ ಶಾಂತೇಗೌಡ<br>ವಿಪನದಿ: 18.02.2014 | ಚಿಕ್ಕಮಗಳೂರು ನಗರದಲ್ಲಿ ಹೊಸದಾಗಿ ಒಳಚರಂಡಿ (ಯುಜಿಡಿ) ನಗರಸಭೆ ವ್ಯಾಪ್ತಿಗೆ ಒಳಪಡುವ ಕೆಲವೊಂದು ಬಡಾವಣೆಗಳನ್ನು ಯು.ಜಿ.ಡಿ ಕಾಮಗಾರಿಯಿಂದ ಕೈಬಿಟ್ಟಿರುವ ಬಗ್ಗೆ. | ನಗರ ಪ್ರದೇಶದಿಂದ ಹೊರವಲಯದಲ್ಲಿರುವ ಕಲ್ಲುದೊಡ್ಡಿ ಪ್ರದೇಶದಲ್ಲಿ ಸುಮಾರು 200 ಮನೆಗಳು ಲಕ್ಷ್ಮಿನಗರ ಪ್ರದೇಶದಲ್ಲಿ ಸುಮಾರು 20 ಮನೆಗಳಿರುತ್ತವೆ ಕಲ್ಲಿದೊಡ್ಡಿ ಪ್ರದೇಶವು ಹಾಸುಗಲ್ಲು ಇರುತ್ತದೆ (sheet rock area) ಮೇಲ್ಕಂಡ 2 ಪ್ರದೇಶಗಳಿಗೆ ಒಳಚರಂಡಿ ವ್ಯವಸ್ಥೆಯನ್ನು ಒದಗಿಸಲು ಸೂಕ್ತವಾದ ಯೋಜನೆ ಯನ್ನು ಕೈಗೊಳ್ಳುವ ಬಗ್ಗೆ ಪರಿಶೀಲಿಸಲಾಗುವುದು ಎಂದು ಮಾನ್ಯ ನಗರಾಭಿವೃದ್ಧಿ ಸಚಿವರು ತಿಳಿಸಿದರು. | ದಿನಾಂಕ: 16.01.2018ರಂದು ಸಮಿತಿ ಸಭೆಯಲ್ಲಿ ಚರ್ಚಿಸಿದಾಗ ಚಿಕ್ಕಮಗಳೂರು ನಗರಕ್ಕೆ ಒಳಚರಂಡಿ ಯೋಜನೆ ಕಲ್ಪಿಸುವ ಅಂದಾಜಿಗೆ ಸರ್ಕಾರಿ ಆದೇಶ ಸಂಖ್ಯೆ: ಸಅಇ 04 ಯುಡಿಎಸ್ 2010 ದಿನಾಂಕ: 01.12.2010ರಲ್ಲಿ ರೂ. 57.00 ಕೋಟಿಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. ಪ್ರಸಕ್ತ, ಕಾಮಗಾರಿಯ ವೆಚ್ಚ ಅನುಮೋದಿತ ಅಂದಾಜನ್ನು ಮೀರಿದ್ದು ಪರಿಷ್ಕೃತ ಅಂದಾಜನ್ನು ರೂ. 82.00 ಕೋಟಿಗಳಿಗೆ ಅನುಮೋದನೆಗಾಗಿ ಸರ್ಕಾರಕ್ಕೆ ಸಲ್ಲಿಸಲಾಗಿದ್ದು, ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿರುತ್ತದೆ.<br><br>ಸದರಿ, ಬಡಾವಣೆಗಳಾದ ಕಲ್ಲುದೊಡ್ಡಿ ಹಾಗೂ ಲಕ್ಷ್ಮಿಪುರ ಪ್ರದೇಶಗಳಿಗೆ ಒಳಚರಂಡಿ ಯೋಜನೆಯನ್ನು ಕಲ್ಪಿಸಲು ಅನುಮೋದಿತ ಅಂದಾಜಿನಲ್ಲಿ ಅನುವು ಮಾಡಿರುವುದಿಲ್ಲ. ಈ ಪ್ರದೇಶಗಳಲ್ಲಿ ಒಳಚರಂಡಿ ವ್ಯವಸ್ಥೆ ಕಲ್ಪಿಸಲು ಪ್ರತ್ಯೇಕ 2 ಮಲಿನ ನೀರು ಶುದ್ಧೀಕರಣ ಘಟಕ ನಿರ್ಮಿಸಬೇಕಾಗಿರುವುದರಿಂದ ಒಂದು ಕಡೆಗೆ 10 ಗುಂಟೆ ಜಾಗದ ಅವಶ್ಯಕತೆ ಇರುತ್ತದೆ. ಸದರಿ ಅವಶ್ಯಕ ಜಾಗಗಳನ್ನು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಗೆ ಹಸ್ತಾಂತರಿಸಲು ಸ್ಥಳೀಯ ಸಂಸ್ಥೆಯವರಿಗೆ ಕೋರಲಾಗಿದ್ದು, ಸ್ಥಳೀಯ ಸಂಸ್ಥೆಯ ವತಿಯಿಂದ ಅವಶ್ಯಕ ಜಾಗವನ್ನು ಮಂಡಳಿಗೆ ಹಸ್ತಾಂತರ ಮಾಡಿದ ನಂತರ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ವತಿಯಿಂದ ಅಂದಾಜು ಪಟ್ಟಿಯನ್ನು ತಯಾರಿಸಿ ಸರ್ಕಾರಕ್ಕೆ ಸಲ್ಲಿಸಿದಲ್ಲಿ ಅನುದಾನ ಲಭ್ಯತೆಯ ಆಧಾರದ ಮೇಲೆ ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿದ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |

| | | | | |
|---|---|---|---|---|
| 13 | 5008<br>ಚು.ರ.ಪ್ರ 143<br>ಶ್ರೀ ಎಸ್. ನಾಗರಾಜ್ (ಸಂದೇಶ್ ನಾಗರಾಜ್)<br>ದಿ:26.06.2014 | ಚಾಮರಾಜನಗರಕ್ಕೆ ವಾರಕ್ಕೊಮ್ಮೆ ಕುಡಿಯುವ ನೀರು ಸರಬರಾಜಾಗುತ್ತಿರುವ ಬಗ್ಗೆ, | ಕರ್ನಾಟಕ ನಗರ ವಲಯ ಬಂಡವಾಳ ಹೂಡಿಕಾ ಕಾರ್ಯಕ್ರಮದಡಿಯಲ್ಲಿ ರೂ.10.90 ಕೋಟಿ ವೆಚ್ಚದಲ್ಲಿ ಕುಡಿಯುವ ನೀರಿನ ಯೋಜನೆ ಕೈಗೊಳ್ಳಲಾಗುತ್ತಿದೆ ಮತ್ತು ಈ ಯೋಜನೆಯನ್ನು ಜುಲೈ ತಿಂಗಳಿನಲ್ಲಿ ಚಾಲನೆ ನೀಡಲು ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಮಾನ್ಯ ಪೌರಾಡಳಿತ ಮತ್ತು ಸ್ಥಳೀಯ ಸಂಸ್ಥೆಗಳು ಸಾರ್ವಜನಿಕ ಉದ್ದಿಮೆಗಳು ಅಲ್ಪಸಂಖ್ಯಾತರ ಕಲ್ಯಾಣ ಹಾಗೂ ವಕ್ಫ್ ಸಚಿವರು ತಿಳಿಸಿದರು. | ದಿನಾಂಕ: 16.01.2018ರಂದು ಸಮಿತಿ ಸಭೆಯಲ್ಲಿ ಚರ್ಚಿಸಿದಾಗ: ಚಾಮರಾಜನಗರದಲ್ಲಿ ಏಷಿಯನ್ ಅಭಿವೃದ್ಧಿ ಬ್ಯಾಂಕ್ ನೆರವಿನ ಉತ್ತರ ಕರ್ನಾಟಕ ನಗರ ವಲಯ ಬಂಡವಾಳ ಹೂಡಿಕಾ ಕಾರ್ಯಕ್ರಮದಡಿಯಲ್ಲಿ ರೂ. 11.07 ಕೋಟಿ ವೆಚ್ಚದಲ್ಲಿ ಕುಡಿಯುವ ನೀರಿನ ಕಾಮಗಾರಿ ಪೂರ್ಣಗೊಳಿಸಲಾಗಿದೆ. ಸದರಿ ಯೋಜನೆಯಡಿ ಕೆಳಕಂಡ ಕಾಮಗಾರಿಗಳು ಸೇರಿರುತ್ತದೆ.<br><br>ಫೀಡರ್ ಮೈನ್ – 2.06 ಕಿ.ಮೀ<br>ವಿತರಣಾ ಜಾಲ – 52 ಕಿ. ಮೀ<br>ರೈಸಿಂಗ್ ಮೈನ್ – 1.25 ಕಿ. ಮೀ<br><br>500 ಎಂ.ಎಂ. ವ್ಯಾಸದ ಎಂ.ಎಸ್. ಕೊಳವೆ ಮಾರ್ಗ ಪುನ:ಸ್ಥಾಪಿಸುವುದು– 725ಮೀ<br>ಮೇಲ್ಮಟ್ಟದ ಜಲ ಸಂಗ್ರಹಗಾರ – 10 ಲಕ್ಷ ಲೀ<br><br>ಇದಲ್ಲದೇ, ರೂ. 4.31 ಕೋಟಿ ವೆಚ್ಚದಲ್ಲಿ 5976 ಮನೆ ಸಂಪರ್ಕ ನೀರಿನ ಯೋಜನೆಯನ್ನು ಪೂರ್ಣಗೊಳಿಸಲಾಗಿರುತ್ತದೆ. ಈ ಯೋಜನೆ ಯಲ್ಲಿ ಅಳವಡಿಸಿಕೊಂಡಿರುವ ಅಂಶಗಳನ್ನು ಪೂರ್ಣಗೊಳಿಸಿರುವುದರಿಂದ ಮತ್ತು ಎ.ಡಿ.ಬಿ. ಸಾಲದ ಅವಧಿಯು ಮುಕ್ತಾಯಗೊಂಡಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿದ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |
| 14 | 4955<br>ಚು.ಗು.ಪ್ರ: 1504<br>ಶ್ರೀ ಕೆ. ಪ್ರತಾಪಚಂದ್ರಶೆಟ್ಟಿ<br>ವಿಪನದಿ: 17/07/2014 | ಉಡುಪಿ ಜಿಲ್ಲೆಯ ಕುಂದಾಪುರ ಪುರಸಭೆಗೆ ಒಳಚರಂಡಿ ಯೋಜನೆಯನ್ನು ರೂಪಿಸುವ ಬಗ್ಗೆ. | ಕೇಂದ್ರ ಪುರಸ್ಕೃತ UIDSSMT ಯೋಜನೆ ಯಡಿ ರೂ.4814.15 ಲಕ್ಷಗಳ ವೆಚ್ಚದಲ್ಲಿ | ದಿನಾಂಕ: 16.01.2018ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ ಕುಂದಾಪುರ ಒಳಚರಂಡಿ ಯೋಜನೆಗೆ ಸರ್ಕಾರದ ಆದೇಶ ಸಂಖ್ಯೆ: ನಅಇ 85 ಸಿ.ಎಸ್.ಎಸ್. 2014, ಬೆಂಗಳೂರು, ದಿನಾಂಕ: 17.10.2014 ರಲ್ಲಿ ರೂ. 4814.15 ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆ ದೊರೆತಿರುತ್ತದೆ. ಸದರಿ ಯೋಜನೆಯ ಕಾಮಗಾರಿಗಳನ್ನು ರೂ. 4211.83 ಲಕ್ಷಗಳಿಗೆ ಗುತ್ತಿಗೆದಾರರಿಗೆ ವಹಿಸಲಾಗಿದ್ದು, |

| | | | | |
|---|---|---|---|---|
| | | | ಕುಂದಾಪುರ ಪಟ್ಟಣದ ಒಳಚರಂಡಿ ಯೋಜನೆ ಯನ್ನು ಕೈಗೊಳ್ಳಲು ದಿ: 14.05.2014ರ ಆದೇಶದಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. ಈ ಯೋಜನೆಗೆ 7.25 ಎಕರೆ ಜಾಗವನ್ನು ಭೂಸ್ವಾಧೀನ ಪಡಿಸಿಕೊಳ್ಳಲು 4 ನೋಟಿಫೀಕೆಷನ್ ಪ್ರಾರಂಭ ಮಾಡಿದ್ದೇವೆ. ಆದಷ್ಟು ಶೀಘ್ರವಾಗಿ ಅನುಷ್ಠಾನಕ್ಕೆ ತರುವ ವಿಚಾರವನ್ನು ಮಾಡುತ್ತೇನೆ ಎಂದು ನಗರಾಭಿವೃದ್ಧಿ ಸಚಿವರು ತಿಳಿಸಿದರು. | ಕಾಮಗಾರಿಗಳು ಪ್ರಗತಿಯಲ್ಲಿವೆ. ಈ ಯೋಜನೆಯಡಿ ಅನುವು ಮಾಡಲಾಗಿರುವ 5 ವೆಟ್‌ವೆಲ್, 2 ಮಲಿನ ನೀರು ಶುದ್ಧೀಕರಣಗಾರ ಮತ್ತು ಕೊಳವೆ ಮಾರ್ಗ ಅಳವಡಿಸಲು ಅವಶ್ಯವಿರುವ ಬಾಕಿ 5.45 ಎಕರೆ ಖಾಸಗಿ ಜಮೀನಿನ ಭೂಸ್ವಾಧೀನಕ್ಕಾಗಿ ಸರ್ವೆ ಕಾರ್ಯ ಕಂದಾಯ ಇಲಾಖೆ ವತಿಯಿಂದ ಪೂರ್ಣಗೊಂಡಿದ್ದು, 4(1) ನೋಟಿಫಿಕೇಷನ್ ನೀಡುವ ಸಲುವಾಗಿ ಕುಂದಾಪುರ ಪುರಸಭೆ ವತಿಯಿಂದ ಕ್ರಮವಹಿಸಲಾಗಿರುತ್ತದೆ. ಸದರಿ ಭೂಸ್ವಾಧೀನ ಪ್ರಕ್ರಿಯೆ ತ್ವರಿತವಾಗಿ ಪೂರೈಸಲು ಕ್ರಮವಹಿಸಲಾಗಿರುತ್ತದೆ. ಈ ಯೋಜನೆಗೆ ಬೇಕಾಗಿರುವ ಜಮೀನನ್ನು ಹಸ್ತಾಂತರಗೊಳಿಸಿದ ಒಂದು ವರ್ಷದಲ್ಲಿ ಯೋಜನೆಯ ಕಾಮಗಾರಿಗಳನ್ನು ಪೂರ್ಣಗೊಳಿಸಲು ಕ್ರಮವಹಿಸಲಾಗುವುದು ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿದ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |
| 15 | 5002<br>ಚು.ಗು.ಪ್ರ: 1528<br>ಶ್ರೀ ಮೃತ್ಯಂಜಯ ಜಿನಗಾ<br>ವಿಪನದಿ: 17/07/2014 | ಕಳೆದ 3 ವರ್ಷಗಳಲ್ಲಿ ಬಳ್ಳಾರಿ ಮಹಾನಗರಪಾಲಿಕೆಯಲ್ಲಿ "ನಗರೋತ್ಥಾನ ಯೋಜನೆಯಡಿ" ಬಿಡುಗಡೆಯಾದ ಹಣವನ್ನು ಅನುಷ್ಠಾನಕ್ಕೆ ತರುವ ಬಗ್ಗೆ. | ಬಳ್ಳಾರಿ ಮಹಾನಗರ ಪಾಲಿಕೆಗೆ "ನಗರೋತ್ಥಾನ ಯೋಜನೆಯಡಿ" ನಗರೋತ್ಥಾನ ಮೊದಲನೇ ಹಂತ, ಎರಡನೇ ಹಂತ ಮತ್ತು ಮೂರನೇ ಹಂತಕ್ಕೆ ಮಾನ್ಯ ಮುಖ್ಯಮಂತ್ರಿಗಳು ರೂ. 100.00 ಗಳನ್ನು ಮಹಾನಗರ ಪಾಲಿಕೆಗೆ ಕ್ರಿಯಾ ಯೋಜನೆ ಅಡಿಯಲ್ಲಿ ಕೊಟ್ಟಿದ್ದು. ಆದಷ್ಟು | ದಿನಾಂಕ: 16.01.2018ರಂದು ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ನಗರೋತ್ಥಾನ ಯೋಜನೆ ಹಂತ–1, 2 & 3ರ ಅಡಿಯಲ್ಲಿ ಬಳ್ಳಾರಿ ಮಹಾನಗರಪಾಲಿಕೆಯಲ್ಲಿ ಕೈಗೊಂಡ ಕಾಮಗಾರಿಗಳ ಪ್ರಗತಿ ವಿವರಗಳನ್ನು ಈ ಕೆಳಕಂಡಂತೆ ನೀಡಿದೆ.<br><br>1. **<u>ನಗರೋತ್ಥಾನ ಹಂತ–1</u>**<br><br>ನಗರೋತ್ಥಾನ ಮೊದಲನೇ ಹಂತದ ಯೋಜನೆಯಡಿ ಕೈಗೊಳ್ಳಲಾದ ರೂ.100.00 ಕೋಟಿ ವೆಚ್ಚದ ಎಲ್ಲಾ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿರುತ್ತದೆ. ವಿವರಗಳನ್ನು ಅನುಬಂಧ–1ರಲ್ಲಿ ನೀಡಿದೆ. |

| | | | | |
|---|---|---|---|---|
| | | | ಶೀಘ್ರವಾಗಿ ಅನುಷ್ಠಾನಕ್ಕೆ ತರುತ್ತೇವೆಂದು ಮಾನ್ಯ ನಗರಾಭಿವೃದ್ಧಿ ಸಚಿವರು ತಿಳಿಸಿದರು. | **2. ನಗರೋತ್ಥಾನ ಹಂತ-2**<br>ನಗರೋತ್ಥಾನ ಎರಡನೇ ಹಂತದ ಯೋಜನೆಯಡಿ ರೂ.100 ಕೋಟಿಗಳನ್ನು ಮಂಜೂರು ಮಾಡಲಾಗಿದ್ದು, ಈ ಯೋಜನೆಡಿ ಒಟ್ಟು 133 ಕಾಮಗಾರಿಗಳನ್ನು ಕೈಗೊಳ್ಳಲಾಗಿದ್ದು, ಇವುಗಳಲ್ಲಿ 122 ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದ್ದು ರೂ.8591.73 ಲಕ್ಷಗಳನ್ನು ವೆಚ್ಚ ಮಾಡಲಾಗಿರುತ್ತದೆ. ಬಾಕಿ ಉಳಿದ 11 ಕಾಮಗಾರಿಗಳ ಪೈಕಿ 4 ಕಾಮಗಾರಿಗಳು ಪ್ರಗತಿಯಲ್ಲಿದ್ದು, ಜನವರಿ 2018ರ ಅಂತ್ಯದೊಳಗೆ ಪೂರ್ಣಗೊಳಿಸಲಾಗುವುದು ಹಾಗೂ 5 13ಂಡರ್ ಪ್ರಕ್ರಿಯೆ ಪೂರ್ಣಗೊಳಿಸಿ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗುವುದು ಹಾಗೂ 2 ಸ್ಲಾಟರ್ ಹೌಸ್ ನಿರ್ಮಾಣ ಕಾಮಗಾರಿಗಳ ಡಿ.ಪಿ.ಆರ್. ತಯಾರಿಕೆಗಾಗಿ ಟೆಂಡರ್ ಕರೆಯಲಾಗಿರುತ್ತದೆ.<br>**3. ನಗರೋತ್ಥಾನ ಹಂತ-3**<br>ನಗರೋತ್ಥಾನ ಮೂರನೇ ಹಂತದ ಯೋಜನೆಯಡಿ ರೂ.100.00 ಕೋಟಿಗಳನ್ನು ಮಂಜೂರು ಮಾಡಲಾಗಿದ್ದು, ಈ ಅನುದಾನದಡಿ ಒಟ್ಟು 115 ಕಾಮಗಾರಿಗಳು ಅನುಮೋದನೆಯಾಗಿರುತ್ತವೆ. ಅವುಗಳ ಪೈಕಿ 60 ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದ್ದು, 43 ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ. ಅವುಗಳನ್ನು ಜನವರಿ 2018ರ ಅಂತ್ಯದೊಳಗೆ ಪೂರ್ಣಗೊಳಿಸಲಾಗುವುದು. ಉಳಿದ 12 ಕಾಮಗಾರಿಗಳ ಪೈಕಿ 5 ಕಾಮಗಾರಿಗಳ ಟೆಂಡರ್ ಪ್ರಕ್ರಿಯೆಯಲ್ಲಿದ್ದು, ಶೀಘ್ರವಾಗಿ ಟೆಂಡರ್ ಪ್ರಕ್ರಿಯೆ ಪೂರ್ಣಗೊಳಿಸಿ ಕಾಮಗಾರಿಗಳನ್ನು ಪ್ರಾರಂಭಿಸಲಾಗುವುದು.<br>ಬಾಕಿ 7 ಕಾಮಗಾರಿಗಳಲ್ಲಿ 6 ಕಾಮಗಾರಿಗಳಿಗೆ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು ವಿಸ್ತೃತ ಯೋಜನಾ ವರದಿಗಳನ್ನು (ಡಿ.ಪಿ.ಆರ್) ತಯಾರಿಸುತ್ತಿದೆ. ಉಳಿದ ಒಂದು ಸೈಂಟಿಫಿಕ್ ಸ್ಲಾಟರ್ ಹೌಸ್ ನಿರ್ಮಾಣ ಕಾಮಗಾರಿಯ ಯೋಜನಾ ವರದಿ<br>(ಡಿ.ಪಿ.ಆರ್) ತಯಾರಿಕೆಗಾಗಿ ಟೆಂಡರ್ ಕರೆಯಲಾಗಿರುತ್ತದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿದ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |

| | | | | |
|---|---|---|---|---|
| 16 | 5004<br>ಚು.ಗು.ಪ್ರ: 1463<br>ಶ್ರೀ ರಾಮಚಂದ್ರಗೌಡ<br>ವಿಪನದಿ: 17/07/2014 | ಸಿಂಧಗಿ ಪಟ್ಟಣಕ್ಕೆ ಒಳಚರಂಡಿ ನಿರ್ಮಾಣದ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸುವ ಬಗ್ಗೆ. | ಸಿಂಧಗಿ ಪಟ್ಟಣಕ್ಕೆ ಒಳಚರಂಡಿ ವ್ಯವಸ್ಥೆ ಒದಗಿಸುವ ಯೋಜನೆಯನ್ನು ತಯಾರಿಸಲಾಗಿದ್ದು, 2014–15ನೇ ಸಾಲಿನ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಕಾರ್ಯಯೋಜನೆಯಲ್ಲಿ ಈ ಯೋಜನೆಯನ್ನು ಸೇರಿಸಲಾಗಿದ್ದು, ಅನುದಾನದ ಲಭ್ಯತೆಯ ಆಧಾದರದ ಮೇಲೆ ಯೋಜನೆಯನ್ನು ಕಾರ್ಯಗತಗೊಳಿಸ ಲಾಗುವುದು ಎಂದು ಮಾನ್ಯ ನಗರಾಭಿವೃದ್ಧಿ ಸಚಿವರು ತಿಳಿಸಿದರು. | ದಿನಾಂಕ: 16.01.2018ರಂದು ಸಮಿತಿ ಸಭೆಯಲ್ಲಿ ಚರ್ಚಿಸಿದಾಗ: ಸಿಂಧಗಿ ಪಟ್ಟಣದ ಒಳಚರಂಡಿ ಯೋಜನೆಯ ವಿವರವಾದ ಅಂದಾಜು ಪಟ್ಟಿಯನ್ನು ರೂ. 66.68 ಕೋಟಿಗಳಿಗೆ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯಿಂದ ತಯಾರಿಸಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.<br><br>ಅನುದಾನ ಲಭ್ಯತೆಯ ಆಧಾರದ ಮೇಲೆ ಪರಿಶೀಲಿಸಿ ನಿಯಮಾನುಸಾರ ಸೂಕ್ತ ಕ್ರಮವಹಿಸಲಾಗುವುದು ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿದ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |
| 17 | 5005<br>ಚು.ಗು.ಪ್ರ: 1467<br>ಶ್ರೀ ಸೈಯದ್ ಮುದೀರಾ ಆಗಾ<br>ವಿಪನದಿ: 17/07/2014 | ರಾಮನಗರ, ಬಿಡದಿ ಹಾಗೂ ಚನ್ನಪಟ್ಟಣ ಸೇರಿ ರಾಮನಗರ ಮಹಾನಗರ ಪಾಲಿಕೆಯನ್ನು ರಚಿಸುವ ಬಗ್ಗೆ. | ಜಿಲ್ಲಾಧಿಕಾರಿಗಳಿಂದ ಪ್ರಸ್ತಾವನೆಯನ್ನು ಪಡೆದು ಕರ್ನಾಟಕ ಮುನಿಸಿಪಲ್ ಕಾರ್ಪೊರೇಷನ್ ಅಧಿನಿಯಮ 1976ರ ನಿಯಮ 3(1)ರ ಅನ್ವಯ ಪರಿಶೀಲಿಸಲಾಗುವುದು ಎಂದು ಮಾನ್ಯ | ದಿನಾಂಕ: 16.01.2018ರಂದು ಸಮಿತಿ ಸಭೆಯಲ್ಲಿ ಚರ್ಚಿಸಿದಾಗ 2011ರ ಜನಗಣತಿಯನುಸಾರ ರಾಮನಗರ ನಗರಸಭೆ ವ್ಯಾಪ್ತಿಯ ಜನಸಂಖ್ಯೆಯು 95167 ಮತ್ತು ಚನ್ನಪಟ್ಟಣ ನಗರಸಭೆ ವ್ಯಾಪ್ತಿಯ ಜನಸಂಖ್ಯೆಯು 71942 ಇರುತ್ತದೆ. ರಾಮನಗರ ಮತ್ತು ಚನ್ನಪಟ್ಟಣ ನಗರಸಭೆಗಳಿಗೆ ಹೊಂದಿಕೊಂಡಿರುವ ಗ್ರಾಮ ಪಂಚಾಯತಿಗಳ ಒಟ್ಟು ಜನಸಂಖ್ಯೆ 25923 ಆಗಿದ್ದು, ಒಟ್ಟಾರೆಯಾಗಿ ಜನಸಂಖ್ಯೆಯು 1,92,402 ಆಗುತ್ತದೆ. ಆದರೆ ಕರ್ನಾಟಕ ಮಹಾನಗರಪಾಲಿಕೆಗಳ ಕಾಯ್ದೆ 1976 ಕಲಂ 3 ರನ್ವಯ ಮಹಾನಗರಪಾಲಿಕೆಯನ್ನಾಗಿ ಪರಿವರ್ತಿಸಲು ನಿಗದಿಪಡಿಸಿದ ಮಾನದಂಡಗಳಲ್ಲಿ ಜನಸಂಖ್ಯೆಯ ಮಿತಿಯು 3 ಲಕ್ಷಕ್ಕಿಂತ ಕಡಿಮೆ |

<table>
<tr>
<td></td>
<td></td>
<td></td>
<td>ನಗರಾಭಿವೃದ್ಧಿ ಸಚಿವರು ತಿಳಿಸಿದರು.</td>
<td>ಇರುವಂತಿಲ್ಲ. ಆದ್ದರಿಂದ ಮಹಾನಗರಪಾಲಿಕೆಯನ್ನಾಗಿ ಪರಿವರ್ತಿಸಲು ನಿಗದಿತ ಜನಸಂಖ್ಯೆ ಹೊಂದಿರುವುದಿಲ್ಲ.<br><br>ಸರ್ಕಾರದ ಅಧಿಸೂಚನೆ ಸಂಖ್ಯೆ ನಅಇ 29 ಎಂಎಲ್ಆರ್ 2015 ದಿನಾಂಕ: 05.08.2015 ರಲ್ಲಿ ಬಿಡದಿ ಗ್ರಾಮ ಪಂಚಾಯತಿ ಮತ್ತು ಬನ್ನಿಕುಪ್ಪೆ (ಬಿ) ಗ್ರಾಮ ಪಂಚಾಯತಿ, ಕೆಂಚನಕುಪ್ಪೆ ಗ್ರಾಮ ಪಂಚಾಯಿತಿ ಹಾಗೂ ಇಟ್ಟುಮಡು ಗ್ರಾಮ ಪಂಚಾಯಿತಿಯ ಕೆಲವು ಪ್ರದೇಶಗಳನ್ನು ಸೇರಿಸಿ ಬಿಡದಿ ಪುರಸಭೆಯನ್ನಾಗಿ ಮೇಲ್ದರ್ಜೆಗೇರಿಸಿರುವುದರಿಂದ ರಾಮನಗರ, ಬಿಡದಿ ಹಾಗೂ ಚನ್ನಪಟ್ಟಣ ಸೇರಿ ರಾಮನಗರ ಮಹಾನಗರಪಾಲಿಕೆಯನ್ನಾಗಿ ರಚಿಸಲು ಅವಕಾಶವಿರುವುದಿಲ್ಲ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿದ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು.</td>
</tr>
<tr>
<td>18<br><br><br><br><br><br><br><br><br>19</td>
<td>4977<br>ಚು.ಗು.ಪ್ರ: 303<br>ಶ್ರೀ ಕೆ.ಬಿ. ಶಾಣಪ್ಪ<br>ವಿಪನದಿ: 05.02.2015<br><br><br><br><br><br>4996<br>ಚು.ಗು.ಪ್ರ: 303<br>ಶ್ರೀ ಕೆ.ಬಿ. ಶಾಣಪ್ಪ<br>ವಿಪನದಿ: 05.02.2015</td>
<td>ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯಲ್ಲಿ ಅನುಕಂಪದ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲು ಬಾಕಿ ಇರುವ ಪ್ರಕರಣಗಳ ಬಗ್ಗೆ.<br><br>ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯಲ್ಲಿ ಅನುಕಂಪದ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲು ಬಾಕಿ</td>
<td>ಅನುಕಂಪದ ಆಧಾರದ ಮೇಲೆ ನೇಮಕಾತಿ ಮಾಡುವಾಗ ಸಿ ಮತ್ತು ಡಿ ಗ್ರೇಡ್‌ಗೆ ಮಾತ್ರ ನೇಮಕಾತಿ ಮಾಡಿಕೊಳ್ಳಲು ಅವಕಾಶವಿದೆ. ಅವರೆ ಕ್ವಾಲಿಫಿಕೇಶನ್‌ಗೆ ಹೊಂದಿಕೊಂಡು ಅವರು ಅರ್ಜಿ ಕೊಡುವಂಥ ಸಂದರ್ಭದಲ್ಲಿ ಅವರ ಕ್ವಾಲಿಫಿಕೇಷನ್ ಏನಿತ್ತು ಅದಕ್ಕನುಗುಣವಾಗಿ ನೇಮಕಾತಿ ಮಾಡಿಕೊಳ್ಳುತ್ತೇವೆ, 226 ಮಂದಿಯನ್ನು ಆದಷ್ಟು ಶೀಘ್ರವಾಗಿ ಮೂರು</td>
<td>ದಿನಾಂಕ: 16.01.2018ರಂದು ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯಲ್ಲಿ 1998 ರಿಂದ ಸ್ಥಗಿತಗೊಳಿಸಲಾಗಿದ್ದ ಅನುಕಂಪ ಆಧಾರದ ಮೇಲೆ ನೇಮಕಾತಿ ಪ್ರಕ್ರಿಯೆಗೆ ಸಂಬಂಧಿಸಿದಂತೆ 2014 ರಿಂದ ಈಚೆಗೆ ನೇರ ನೇಮಕಾತಿಯಡಿಯಲ್ಲಿ 'ಸಿ' ಮತ್ತು ' ಡಿ' ದರ್ಜೆ ಹುದ್ದೆಗಳು ಲಭ್ಯವಾದಂತೆ ಮಂಡಳಿಯಲ್ಲಿ ಅನುಕಂಪದ ಆಧಾರದ ನೇಮಕಾತಿ ಕೋರಿ ಸ್ವೀಕೃತವಾಗಿರುವ ಒಟ್ಟು 300 ಅರ್ಜಿಗಳನ್ನು ಮಂಡಳಿಯು ಅನುಕಂಪದ ಆಧಾರದ ನೇಮಕಾತಿ ನಿಯಮಗಳನ್ವಯ ಪರಿಶೀಲಿಸಿ ಒಟ್ಟು ಅರ್ಹ 179 ಅಭ್ಯರ್ಥಿಗಳಿಗೆ 'ಸಿ' ಮತ್ತು 'ಡಿ' ಹುದ್ದೆಗಳಿಗೆ ನೇಮಕ ಮಾಡಲಾಗಿದೆ. ವಿವರಗಳು ಈ ಕೆಳಕಂಡಂತಿದೆ.:
<table>
<tr><th>ವರ್ಷ</th><th>ಸ್ವೀಕೃತವಾದ ಅರ್ಜಿಗಳ ಸಂಖ್ಯೆ</th><th>ನೇಮಕ ಮಾಡಲಾದ ಅರ್ಹ ಅಭ್ಯರ್ಥಿಗಳ ಸಂಖ್ಯೆ ಮತ್ತು ದಿನಾಂಕ</th></tr>
<tr><td>1998 ರಿಂದ 2000 ರವರೆಗೆ</td><td>200</td><td>105<br>29.09.2014</td></tr>
</table>
</td>
</tr>
</table>

<table>
<tr>
<td></td>
<td></td>
<td>ಇರುವ ಪ್ರಕರಣಗಳ ಬಗ್ಗೆ.</td>
<td>ತಿಂಗಳೊಳಗೆ ನೇಮಕಾತಿ ಮಾಡಿಕೊಳ್ಳಬೇಕೆನ್ನುವಂಥ ರೀತಿಯಲ್ಲಿ ತೀರ್ಮಾನ ಮಾಡಿಕೊಂಡಿದ್ದೇನೆ ಎಂದು ಮಾನ್ಯ ನಗರಾಭಿವೃದ್ಧಿ ಸಚಿವರು ತಿಳಿಸಿದರು.</td>
<td>
<table>
<tr><td>2006 ರಿಂದ 2009ರವರೆಗೆ</td><td>56</td><td>48<br>30.03.2015</td></tr>
<tr><td>2009 ರಿಂದ 2011ರವರೆಗೆ</td><td>44</td><td>26<br>07.11.2015</td></tr>
</table>
ಪ್ರಸ್ತುತ 2011 ರಿಂದ 2016ರವರೆಗೆ ಅನುಕಂಪದ ನೇಮಕಾತಿ ಕೋರಿ ಸ್ವೀಕೃತವಾಗಿರುವ 160 ಅರ್ಜಿಗಳ ಪರಿಶೀಲನೆ ಬಗ್ಗೆ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳ ಚರಂಡಿ ಮಂಡಳಿಯಲ್ಲಿ ಪರಿಶೀಲನಾ ಹಂತದಲ್ಲಿರುತ್ತದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿದ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು.
</td>
</tr>
<tr>
<td>20<br><br><br><br><br><br><br><br><br>21</td>
<td>4978<br>ಗ.ಸೆ.ಸೂ<br>ಶ್ರೀ ಐವನ್ ಡಿ'ಸೋಜಾ<br>ವಿಪನದಿ: 05.02.2015<br><br><br><br><br><br>4997<br>ಗ.ಸೆ.ಸೂ<br>ಶ್ರೀ ಐವನ್ ಡಿ'ಸೋಜಾ<br>ವಿಪನದಿ: 05.02.2015</td>
<td>ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಅತ್ತಾವರ ವಾರ್ಡಿನ ಮಹಾಕಾಳಿ ಪಡ್ಪುನಲ್ಲಿರುವ ಪೌರ ಕಾರ್ಮಿಕರ ವಸತಿ ಗೃಹಗಳು ಸಂಪೂರ್ಣವಾಗಿ ಶಿಥಿಲಾವಸ್ಥೆಯಲ್ಲಿದ್ದು, ಇವರನ್ನು ಬೇರೆಡೆ ಸ್ಥಳಾಂತರಿಸಿ, ಹೊಸದಾಗಿ ವಸತಿ ಗೃಹಗಳನ್ನು ನಿರ್ಮಾಣ ಮಾಡುವ ಬಗ್ಗೆ.</td>
<td>ಸದರಿ ಅಂದಾಜು ಪಟ್ಟಿಗಳಿಗೆ ಮಂಜೂರಾತಿ ಪಡೆದು ದುರಸ್ಥಿಗೊಳಿಸಲು ಕ್ರಮ ಕೈಗೊಳ್ಳಲಾಗುವುದು ಇದು ತಾತ್ಕಾಲಿಕ ಕ್ರಮವಾಗಿದ್ದು, ಶಾಶ್ವತ ಪರಿಹಾರವಾಗಿ ಹೊಸ ಕಟ್ಟಡ ಕಟ್ಟಲು ಈ ಕೆಳಗಿನಂತೆ ಕ್ರಮ ಕೈಗೊಳ್ಳಲಾಗುವುದು.<br>ಅತ್ತಾವರ ವಾರ್ಡಿನ ಮಹಾಕಾಳಿಪಡ್ಪುನಲ್ಲಿ ಪೌರಕಾರ್ಮಿಕರ ವಸತಿ ಗೃಹ ಬ್ಲಾಕ್ 'ಎ' ಕಟ್ಟಡ ಕಟ್ಟುವ ಜಾಗ ಖಾಲಿ ಇದ್ದು ಹೊಸದಾಗಿ ಪ್ರತಿ</td>
<td>ದಿನಾಂಕ: 16.01.2018ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ಮಂಗಳೂರು ಮಹಾನಗರಪಾಲಿಕೆಯ ವ್ಯಾಪ್ತಿಯ ಅತ್ತಾವರ ವಾರ್ಡಿನ ಮಹಾಕಾಳಿ ಪಡ್ಪುವಿನಲ್ಲಿ ಶಿಥಿಲಗೊಂಡಿರುವ ಪೌರ ಕಾರ್ಮಿಕರ ವಸತಿ ಗೃಹಗಳನ್ನು ಸಣ್ಣಪುಟ್ಟ ದುರಸ್ಥಿ ಮಾಡಲು ಕ್ರಮ ಕೈಗೊಳ್ಳಲಾಗಿದೆ.ಇದು ತಾತ್ಕಾಲಿಕ ಕ್ರಮವಾಗಿರುತ್ತದೆ. ಈಗಾಗಲೇ ಶಾಶ್ವತ ಪರಿಹಾರವಾಗಿ ಹೊಸ ಕಟ್ಟಡ ಕಟ್ಟಲು ಪೌರಕಾರ್ಮಿಕರ ಗೃಹ ಭಾಗ್ಯ ಯೋಜನೆಯಡಿಯಲ್ಲಿ 32 ಮನೆಗಳ ವಸತಿ ಸಂಕೀರ್ಣ ನಿರ್ಮಿಸಲು ರೂ. 240.00 ಲಕ್ಷಗಳಿಗೆ ದಿನಾಂಕ: 13.01.2016ರಲ್ಲಿ ನಡೆದ ಪೌರಕಾರ್ಮಿಕರ ಗೃಹ ಭಾಗ್ಯ ಯೋಜನೆ 3ನೇ ರಾಜ್ಯ ಮಟ್ಟದ ಸಮಿತಿಯ ಸಭೆ ನಡವಳಿಯಲ್ಲಿ ಅನುಮೋದನೆ ಪಡೆದುಕೊಂಡು ಟೆಂಡರ್</td>
</tr>
</table>

| | | | | |
|---|---|---|---|---|
| | | | ಮನೆಯನ್ನು 300 ಚ.ಅಡಿ ವಿಸ್ತೀರ್ಣದಲ್ಲಿ ನಿರ್ಮಿಸಲು ಉದ್ದೇಶಿಸಿದ್ದು, ಪ್ರತಿ ಬ್ಲಾಕ್‌ಗೆ ರೂ. 99.80 ಲಕ್ಷಗಳಂತೆ ಒಟ್ಟು 3 ಬ್ಲಾಕ್‌ಗಳಿಗೆ ಒಟ್ಟು ರೂ. 299.40 ಲಕ್ಷ ಅಂದಾಜು ಮೊತ್ತದ ಅಗತ್ಯವಿದ್ದು ಅನುದಾನದ ಲಭ್ಯತೆಯ ಮೇಲೆ ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂದು ಮಾನ್ಯ ನಗರಾಭಿವೃದ್ಧಿ ಸಚಿವರು ತಿಳಿಸಿದರು. | ಕರೆದು ದಿನಾಂಕ: 03.03.2017ರಂದು ಕಾರ್ಯಾದೇಶ ನೀಡಲಾಗಿದ್ದು, ಈಗಾಗಲೇ (ಜಿ+3) ಮಾದರಿಯ ಒಟ್ಟು 32 ಮನೆಗಳನ್ನು ಹೊಂದಿರುವ ಪ್ರಥಮ ಬ್ಲಾಕಿನ ಕಾಮಗಾರಿಯು ಪ್ರಗತಿಯಲ್ಲಿದೆ ಸದರಿ ಕಟ್ಟಡ 3ನೇ ಹಾಗೂ ಅಂತಿಮ ಮಹಡಿಯ ಆರ್.ಸಿ.ಸಿ. ಛಾವಣಿ ಕೆಲಸ ಪ್ರಗತಿಯಲ್ಲಿದೆ. ಟೆಂಡರ್ ಕರಾರಿನ ಅವಧಿಯಂತೆ ಜೂನ್ 2018ರ ಒಳಗೆ ಸದರಿ ವಸತಿ ಸಂಕೀರ್ಣ ಈಗಾಗಲೇ ಆಯ್ಕೆ ಮಾಡಲಾದ ಅರ್ಹ ಫಲಾನುಭವಿಗಳನ್ನು ಸದರಿ ಕಟ್ಟಡಕ್ಕೆ ಸ್ಥಳಾಂತರಿಸಲಾಗುವುದು ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿದ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |
| 22<br><br><br><br><br><br><br>23 | 4979<br>ಚು.ರ.ಪ್ರ: 269<br>ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ)<br>ವಿಪನದಿ:05.02.2015<br><br>4998<br>ಚು.ರ.ಪ್ರ: 269<br>ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ)<br>ವಿಪನದಿ:05.02.2015 | ರಾಜ್ಯದ ಎಲ್ಲಾ ನಗರ ಪ್ರದೇಶ ಹಾಗೂ ವಸತಿ ಪ್ರದೇಶದಲ್ಲಿ ನೇಕಾರರಿಗೆ ವಿದ್ಯುತ್ ಮಗ್ಗ ಹಾಕಲು ಅನುಮತಿ ನೀಡದಿರುವ ಬಗ್ಗೆ ಹಾಗೂ ಕೂಡಲೇ ಝೋನಲ್ (Zonal) ರೆಗ್ಯುಲೇಷನ್ ಅನ್ನು ಸರಳೀಕರಿಸಿ ಆದೇಶ ಮಾಡಿ ನೇಕಾರರಿಗೆ ಅನುಕೂಲ ಮಾಡಿಕೊಡುವ ಬಗ್ಗೆ. | ವಾಣಿಜ್ಯ ವಲಯಗಳಲ್ಲಿ ವಿದ್ಯುತ್‌ಚಾಲಿತ ಕೈಮಗ್ಗ ನಡೆಸಲು ಅವಕಾಶ ಕಲ್ಪಿಸಲಾಗಿದ್ದು, ವಸತಿ ವಲಯದಲ್ಲಿ ಅನುಮತಿ ಕಲ್ಪಿಸಬೇಕಾದಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 13–ಇ ರಡಿ ವಲಯ ನಿಯಮಾವಳಿಗಳನ್ನು ಅಳವಡಿಸಿಕೊಳ್ಳಲು ಸಂಬಂಧಪಟ್ಟ ಪ್ರಾಧಿಕಾರ ಗಳಿಗೆ ಅವಕಾಶವನ್ನು ಕಲ್ಪಿಸ | ದಿನಾಂಕ: 16.01.2018ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ಸರ್ಕಾರವು ದಿನಾಂಕ: 01.07.2017ರಂದು ಹೊರಡಿಸಿರುವ ಕರಡು ಸಾಮಾನ್ಯ ವಲಯ ನಿಯಮಾವಳಿಗಳಲ್ಲಿ 9 ಮೀ. ಅಗಲದ ರಸ್ತೆ ಸೌಲಭ್ಯವಿರುವ ವಸತಿ ವಲಯಗಳಲ್ಲಿ "House hold Industries" ಗೆ ಅವಕಾಶ ಕಲ್ಪಿಸಲು ಹಾಗೂ "Hand Looms" ಅಂತಹ ಕೈಗಾರಿಕೆಗಳನ್ನು ಅನುಮತಿಸಲು ಅವಕಾಶ ಕಲ್ಪಿಸಲಾಗಿದೆ. ಸದರಿ ಅಧಿಸೂಚನೆಯ ವಿರುದ್ಧ ರಿಟ್ ಅರ್ಜಿ ಸಂಖ್ಯೆ: 38165/2017 ದಾಖಲಾಗಿದ್ದು, ಸದರಿ ರಿಟ್ ಅರ್ಜಿಯಲ್ಲಿ ಮಾನ್ಯ ಉಚ್ಛ ನ್ಯಾಯಾಲಯವು ದಿನಾಂಕ: 07.09.2017ರಂದು ದಿನಾಂಕ: |

| | | | | |
|---|---|---|---|---|
| | | | ಲಾಗಿದೆ. ವಲಯ ನಿಯಮಾವಳಿಗಳನ್ನು ಅಳವಡಿಸಿಕೊಳ್ಳುವ ಬಗ್ಗೆ ರಾಜ್ಯದ ಎಲ್ಲಾ ನಗರಾಭಿವೃದ್ಧಿ ಪ್ರಾಧಿಕಾರಗಳಿಂದ ಪ್ರಸ್ತಾವನೆಯನ್ನು ಪಡೆದು ಪರಿಶೀಲಿಸಿ ಸಲ್ಲಿಸುವಂತೆ ಸರ್ಕಾರದ ಕಡತ ಸಂಖ್ಯೆ: ನಅಇ/39/ಬೆಮಪ್ರಾ/2015 ರಲ್ಲಿ ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ ಯವರಿಂದ ಪ್ರಸ್ತಾವನೆ ಪಡೆದು ನಿಯಮಾನುಸಾರ ಸೂಕ್ತ ಕ್ರಮ ಕೈಗೊಳ್ಳಲಾಗುವುದೆಂದು ಮಾನ್ಯ ನಗರಾಭಿವೃದ್ಧಿ ಸಚಿವರು ತಿಳಿಸಿದರು. | 01.07.2017ರ ಕರಡು ಅಧಿಸೂಚನೆಯನ್ನು ಅಂತಿಮಗೊಳಿಸಲು ತಡೆಯಾಜ್ಞೆ ನೀಡಿರುತ್ತದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿದ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |
| 24 | 4990<br>ಚು.ಗು.ಪ್ರ: 691<br>ಶ್ರೀ ಕೋಟ ಶ್ರೀನಿವಾಸ ಪೂಜಾರಿ<br>ವಿಪನದಿ: 10/02/2015 | ರಾಜ್ಯದಲ್ಲಿ ಗ್ರಾಮ ಪಂಚಾಯತಿಗಳನ್ನು ಮತ್ತು ಪಟ್ಟಣ ಪಂಚಾಯತಿಗಳನ್ನಾಗಿ ಮೇಲ್ದರ್ಜೆಗೇರಿಸುವ ಬಗ್ಗೆ. | 2011ರ ಜನಗಣತಿಯನ್ನು ಮತ್ತು ಪುರಸಭೆಗಳ ಕಾಯ್ದೆ 1964 ರಲ್ಲಿ ನಿಗದಿಪಡಿಸಲಾದ ಮಾನದಂಡಗಳನ್ವಯ ಅರ್ಹವಿರುವ ಗ್ರಾಮ ಪಂಚಾಯತಿಗಳನ್ನು ಪಟ್ಟಣ ಪಂಚಾಯತಿಗಳನ್ನಾಗಿ ಮೇಲ್ದರ್ಜೆಗೇರಿಸಲು ಸಂಬಂಧಿಸಿದ ಜಿಲ್ಲಾಧಿಕಾರಿಗಳಿಂದ | ದಿನಾಂಕ: 16.01.2018ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, 2011ರ ಜನಗಣತಿಯನ್ವಯ ಹಾಗೂ ಕರ್ನಾಟಕ ಪೌರಸಭೆಗಳ ಕಾಯ್ದೆ 1964 ರಲ್ಲಿ ನಿಗದಿಪಡಿಸಿರುವ ಮಾನದಂಡಗಳ ಅನ್ವಯ ಅರ್ಹ ಗ್ರಾಮ ಪಂಚಾಯತಿಗಳನ್ನು 40 ಪಟ್ಟಣ ಪಂಚಾಯಿತಿಗಳನ್ನಾಗಿ, 19 ಪುರಸಭೆಗಳನ್ನಾಗಿ ಹಾಗೂ 1 ನಗರಸಭೆಯನ್ನಾಗಿ ಮೇಲ್ದರ್ಜೆಗೇರಿಸಲಾಗಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿದ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |

| | | | | |
|---|---|---|---|---|
| | | | ಪ್ರಸ್ತಾವನೆಗಳನ್ನು ಪಡೆಯಲಾಗುತ್ತಿದ್ದು, ನಿಯಮಾನುಸಾರ ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದೆಂದು ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು ತಿಳಿಸಿದರು. | |
| 25 | 4995<br>ಚು.ರ.ಪ್ರ: 800<br>ಶ್ರೀ ಐವನ್ ಡಿ'ಸೋಜಾ<br>ವಿಪನದಿ: 10.02.2015 | ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿರುವ ಸುಮಾರು 15,000 ಕ್ಕಿಂತಲೂ ಮೇಲ್ಪಟ್ಟ ಗ್ರಾಮ ಪಂಚಾಯತಿಗಳನ್ನು ಮೇಲ್ದರ್ಜೆಗೇರಿಸುವ ಪ್ರಸ್ತಾವನೆಯನ್ನು ಪರಿಗಣಿಸದೇ ಇರುವ ಬಗ್ಗೆ. | 2011 ಜನಗಣತಿಯನ್ವಯ ಮತ್ತು ಕರ್ನಾಟಕ ಪುರಸಭೆಗಳ ಕಾಯ್ದೆ 1964ರನ್ವಯ ರಾಜ್ಯದಲ್ಲಿನ ಅರ್ಹವಿರುವ ಗ್ರಾಮ / ಗ್ರಾಮ ಪಂಚಾಯತ್‌ಗಳನ್ನು ಮೇಲ್ದರ್ಜೆಗೇರಿಸಲು ಪರಿಶೀಲಿಸಲಾಗುತ್ತಿದೆ ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು ತಿಳಿಸಿದರು | ದಿನಾಂಕ: 16.01.2018ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬರುವ ವಿಟ್ಲ ಗ್ರಾಮ ಪಂಚಾಯಿತಿಯನ್ನು ಸರ್ಕಾರದ ಅಧಿಸೂಚನೆ ಸಂಖ್ಯೆ:ಆಇ/71/ಎಂಎಲಾರ್/2015 ದಿನಾಂಕ: 24.06.2015 ರಂತೆ ಹಾಗೂ ಕೋಟೆಕಾರು ಗ್ರಾಮ ಪಂಚಾಯತಿಯನ್ನು ಸರ್ಕಾರದ ಅಧಿಸೂಚನೆ ಸಂಖ್ಯೆ:ನಇ/75/ಎಂಎಲ್‌ಆರ್/2015, ದಿನಾಂಕ: 22.06.2015ರಂತೆ ಪಟ್ಟಣ ಪಂಚಾಯತಿಗಳನ್ನಾಗಿ ಮೇಲ್ದರ್ಜೆಗೇರಿಸಲಾಗಿದೆ.<br><br>ದಕ್ಷಿಣ ಕನ್ನಡ ಜಿಲ್ಲೆ ಸೋಮೇಶ್ವರ ಗ್ರಾಮ ಪಂಚಾಯತಿಯನ್ನು ಮೇಲ್ದರ್ಜೆಗೇರಿಸುವ ಬಗ್ಗೆ ಆರ್ಥಿಕ ಇಲಾಖೆಯು ಸಹಮತಿ ನೀಡಿದ್ದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯ ಅಭಿಪ್ರಾಯ ಸಹಮತಿ ನೀಡುವಂತೆ ಕೋರಲಾಗಿದೆ.<br><br>2011ರ ಜನಗಣತಿಯನ್ವಯ ದಕ್ಷಿಣ ಕನ್ನಡ ಜಿಲ್ಲೆಯ ಪುದು ಗ್ರಾಮ ಪಂಚಾಯಿತಿಯ ಜನಸಂಖ್ಯೆಯು 13,533 ಮತ್ತು ಮಂಜನಾಡಿ ಗ್ರಾಮ ಪಂಚಾಯತಿಯ ಜನಸಂಖ್ಯೆಯು 10,401 ಇರುವುದರಿಂದ ಈ ಗ್ರಾಮ ಪಂಚಾಯತಿಗಳನ್ನು ಪಟ್ಟಣ ಪಂಚಾಯತಿಗಳನ್ನಾಗಿ ಮೇಲ್ದರ್ಜೆಗೇರಿಸಲು ಅವಕಾಶವಿರುವುದಿಲ್ಲ. |

| | | | | |
|---|---|---|---|---|
| | | | | ದಕ್ಷಿಣ ಕನ್ನಡ ಜಿಲ್ಲೆಯ ಕಡಬ ಗ್ರಾಮವನ್ನು ತಾಲ್ಲೂಕು ಪ್ರದೇಶವೆಂದು ಘೋಷಿಸಿರುವ ಹಿನ್ನಲೆಯಲ್ಲಿ ಕಡಬ ಗ್ರಾಮ ಪಂಚಾಯತಿಯನ್ನು ಪಟ್ಟಣ ಪಂಚಾಯತಿಯನ್ನಾಗಿ ಪರಿವರ್ತಿಸುವ ಕುರಿತು ಸೂಕ್ತ ಪ್ರಸ್ತಾವನೆ ಸಲ್ಲಿಸುವಂತೆ ಜಿಲ್ಲಾಧಿಕಾರಿಗಳು, ದಕ್ಷಿಣ ಕನ್ನಡ ಜಿಲ್ಲೆ ಇವರನ್ನು ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು ರವರು ದಿನಾಂಕ: 20.09.2017 ಮತ್ತು 14.12.2017ರ ಪತ್ರಗಳಲ್ಲಿ ಕೋರಿರುತ್ತಾರೆ.<br><br>ಉಡುಪಿ ಜಿಲ್ಲೆಯ ಕಾಪು, ಉಳಿಯಾರುಗೋಳಿ ಮತ್ತು ಮಲ್ಲಾರ್ ಗ್ರಾಮ ಪಂಚಾಯತಿಗಳನ್ನು ಸೇರಿಸಿ ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ/100/ಎಂಎಲ್‌ಆರ್/2015, ದಿನಾಂಕ: 22.06.2015ರಂತೆ ಕಾಪು ಪುರಸಭೆಯನ್ನಾಗಿ ಮೇಲ್ದರ್ಜೆಗೇರಿಸಲಾಗಿದೆ.<br><br>ಉಡುಪಿ ಜಿಲ್ಲೆ ಬ್ರಹ್ಮಾವರ ಪರಿಸರದ ಎರಡು ಗ್ರಾಮ ಪಂಚಾಯಿತಿಗಳನ್ನು (ಚಾಂತಾರು ಮತ್ತು ವಾರಂಬಳ್ಳಿ) ಪಟ್ಟಣ ಪಂಚಾಯಿತಿಯನ್ನಾಗಿ ಮೇಲ್ದರ್ಜೆಗೇರಿಸುವ ಪ್ರಸ್ತಾವನೆಗೆ ಸಂಬಂಧಿಸಿದಂತೆ ಮೇಲ್ದರ್ಜೆಗೇರಿಸಿದಲ್ಲಿ ಉಂಟಾಗಬಹುದಾದ ಯೋಜನೆ ಮತ್ತು ಯೋಜನೆಯೇತರ ಮಾಹಿತಿ ಒದಗಿಸಲು ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು ಹಾಗೂ ಜಿಲ್ಲಾಧಿಕಾರಿಗಳು, ಉಡುಪಿ ಜಿಲ್ಲೆ ಇವರನ್ನು ದಿನಾಂಕ: 10.11.2017 ರ ಪತ್ರದಲ್ಲಿ ಕೋರಲಾಗಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿದ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |
| 26 | 5327<br>ಚು.ಗು.ಪ್ರ. 1065<br>ಶ್ರೀ ಬಸವರಾಜ ಹೊರಟ್ಟಿ<br>ವಿಪನದಿ:10.07.2014 | ಹುಬ್ಬಳಿ–ಧಾರವಾಡ ಮಹಾನಗರ ಪಾಲಿಕೆಯಲ್ಲಿ ಖಾಲಿ ಇರುವ ವಿವಿಧ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ | ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆಗೆ 169 ಹುದ್ದೆಗಳನ್ನು ತುಂಬಲಿಕ್ಕೆ ಕಾರ್ಯಕ್ರಮಗಳನ್ನು ಈಗಾಗಲೇ ಪ್ರಾರಂಭ | ದಿನಾಂಕ: 16.01.2018ರಂದು ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ರಾಜ್ಯದ 10 ಮಹಾನಗರಪಾಲಿಕೆಗಳಲ್ಲಿ ಖಾಲಿ ಇರುವ ನೇರ ನೇಮಕಾತಿ ಕೋಟಾದಡಿಯಲ್ಲಿನ ಒಟ್ಟು 1793 ಹುದ್ದೆಗಳನ್ನು ಭರ್ತಿ ಮಾಡುವ ಕುರಿತಂತೆ ಕರ್ನಾಟಕ ಲೋಕಸೇವಾ ಆಯೋಗಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದ್ದು ಲೋಕಸೇವಾ ಆಯೋಗದ ವತಿಯಿಂದ ನಿಯಮಾನುಸಾರ ಆಯ್ಕೆ ಮಾಡಿ, ಹುಬ್ಬಳ್ಳಿ–ಧಾರವಾಡ |

<table>
<tr>
<td></td>
<td></td>
<td></td>
<td>ಮಾಡಿದ್ದೇವೆ. ಉಳಿದಂತಹ ಹುದ್ದೆಗಳು ಅಂದರೆ ನಮ್ಮಲ್ಲಿ 7 ಮಹಾನಗರ ಪಾಲಿಕೆಗಳಿಗೆ 3811 ಹುದ್ದೆಗಳನ್ನು ತುಂಬ ಬೇಕಾಗಿದೆ. ಅದರ ಜೊತೆಗೆ 3 ಹೊಸ ಮಹಾನಗರ ಪಾಲಿಕೆಗಳನ್ನು ಪ್ರಾರಂಭ ಮಾಡಿದ್ದೇವೆ. ಅದಕ್ಕೆ 1989 ಹುದ್ದೆಗಳನ್ನು ತುಂಬಲಿಕ್ಕೆ ಆರ್ಥಿಕ ಇಲಾಖೆಯವರಿಗೆ ಒಂದು ಪ್ರಸ್ತಾವನೆಯನ್ನು ಸಲ್ಲಿಕೆ ಮಾಡಿದ್ದೇವೆ. ಮೊನ್ನೆ ಈ ಸಂಬಂಧವಾಗಿ ಒಂದು ಸಭೆಯನ್ನು ಸಹ ಮಾಡಿದ್ದೇವೆ. ಮುಂದಿನ ವಾರದಲ್ಲಿ ಅದಕ್ಕೆ ಅನುಮತಿಯನ್ನು ಕೊಡುತ್ತೇವೆ ಎನ್ನುವಂತಹ ತಿಳುವಳಿಕೆ ನಮಗೆ ಬಂದಿದೆ. ಆದಷ್ಟು ಶೀಘ್ರವಾಗಿ ಆರ್ಥಿಕ ಇಲಾಖೆಯ ಅನುಮತಿ ಯನ್ನು ಪಡೆದುಕೊಂಡು ಶೀಘ್ರವಾಗಿ ಈ ಹುದ್ದೆಗಳನ್ನು ಹಂತ-ಹಂತವಾಗಿ ತುಂಬುವಂತಹ ಕಾರ್ಯ ಕ್ರಮವನ್ನು ಹಮ್ಮಿಕೊಳ್ಳುತ್ತೇವೆ ಎಂದು ಮಾನ್ಯ ನಗರಾಭಿವೃದ್ಧಿ ಸಚಿವರು ತಿಳಿಸಿದರು.</td>
<td>ಮಹಾನಗರಪಾಲಿಕೆಯ ವಿವಿಧ ವೃಂದದ ಈ ಕೆಳಕಂಡ ಹುದ್ದೆಗಳನ್ನು ಭರ್ತಿ ಮಾಡಲಾಗಿರುತ್ತದೆ.
<table>
<tr><th>ಕ್ರ ಸಂ.</th><th>ಹುದ್ದೆಯ ಹೆಸರು</th><th>ಹುದ್ದೆಗಳ ಸಂಖ್ಯೆ</th></tr>
<tr><td>01.</td><td>ಸಹಾಯಕ ಅಭಿಯಂತರರು (ಸಿವಿಲ್)</td><td>08</td></tr>
<tr><td>02.</td><td>ಸಹಾಯಕ ಅಭಿಯಂತರರು (ವಿದ್ಯುತ್)</td><td>08</td></tr>
<tr><td>03.</td><td>ಪರಿಸರ ಅಭಿಯಂತರರು</td><td>02</td></tr>
<tr><td>04.</td><td>ಕಿರಿಯ ಅಭಿಯಂತರರು (ಸಿವಿಲ್)</td><td>14</td></tr>
<tr><td>05.</td><td>ಕಿರಿಯ ಅಭಿಯಂತರರು (ವಿದ್ಯುತ್)</td><td>04</td></tr>
<tr><td>06.</td><td>ಪ್ರಥಮ ದರ್ಜೆ ಸಹಾಯಕರು</td><td>25</td></tr>
<tr><td>07.</td><td>ಪ್ರಥಮ ದರ್ಜೆ ಕಂದಾಯ ನಿರೀಕ್ಷಕರು</td><td>1</td></tr>
<tr><td>08.</td><td>ಕರವಸೂಲಿಗಾರರು</td><td>2</td></tr>
<tr><td>09</td><td>ತೋಟಗಾರಿಕಾ ನಿರೀಕ್ಷಕರು</td><td>04</td></tr>
<tr><td>10</td><td>ತೋಟಗರಿಕಾ ಸಹಾಯಕರು</td><td>04</td></tr>
<tr><td></td><td>ಒಟ್ಟು</td><td>72</td></tr>
</table>
ಉಳಿದ ಹುದ್ದೆಗಳ ನೇಮಕಾತಿ ಪ್ರಕ್ರಿಯೆಯು ಚಾಲನೆಯಲ್ಲಿರುತ್ತದೆ. ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗಳ 'ಡಿ' ವೃಂದದ ನೇಮಕಾತಿ ಪ್ರಾಧಿಕಾರಿಯಾಗಿದ್ದು, ಹುಬ್ಬಳ್ಳಿ-ಧಾರವಾಡ ಮಹಾನಗರಪಾಲಿಕೆಯಲ್ಲಿನ 181 ಗ್ರೂಪ್ 'ಡಿ' ಹುದ್ದೆಗಳನ್ನು ಭರ್ತಿ ಮಾಡಲು ಜಿಲ್ಲಾಧಿಕಾರಿಯವರಿಗೆ ಪತ್ರ ಬರೆಯಲಾಗಿದೆ.<br><br>
ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಸೇವೆ ಸಲ್ಲಿಸುತ್ತಿರುವ ಪೌರಕಾರ್ಮಿಕರನ್ನು ಖಾಯಂ ನೇಮಕಾತಿ ಮಾಡಿಕೊಳ್ಳಲು ಪೌರಕಾರ್ಮಿಕರ ವಿಶೇಷ ನೇಮಕಾತಿ ನಿಯಮದ ಅಧಿಸೂಚನೆ ಸಂಖ್ಯೆ:ನಅಇ 129/ಎಂಎನ್ಇ/2017, ದಿನಾಂಕ: 05.12.2017ರನ್ವಯ ಸರ್ಕಾರ ಅಧಿಸೂಚನೆ ಹೊರಡಿಸಿದ್ದು, ಸದರಿ ಅಧಿಸೂಚನೆಯನ್ವಯ ಬೆಳಗಾವಿ ಮಹಾನಗರಪಾಲಿಕೆಯಲ್ಲಿ</td>
</tr>
</table>

| | | | | |
|---|---|---|---|---|
| | | | | ಪೌರಕಾರ್ಮಿಕರ ವಿಶೇಷ ನೇಮಕಾತಿ ಕೋಟಾದಡಿ ಒಟ್ಟು 113 ಹುದ್ದೆಗಳನ್ನು ಭರ್ತಿ ಮಾಡುವ ಸಲುವಾಗಿ ನೇಮಕಾತಿ ಪ್ರಾಧಿಕಾರಿಗಳಾದ ಬೆಳಗಾವಿ ಜಿಲ್ಲಾಧಿಕಾರಿಗಳಿಗೆ ಕೋರಲಾಗಿದೆ.<br><br>ಕರ್ನಾಟಕ ಲೋಕಸೇವಾ ಆಯೋಗದ ಮೂಲಕ ಮಹಾನಗರಪಾಲಿಕೆಯಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡುವ ಪ್ರಕ್ರಿಯೆ ಜಾರಿಯಲ್ಲಿದ್ದು, ಕರ್ನಾಟಕ ಲೋಕ ಸೇವಾ ಆಯೋಗದಿಂದ ಅಂತಿಮ ಆಯ್ಕೆ ಪಟ್ಟಿ ಸಲ್ಲಿಕೆಯಾದ ಕೂಡಲೆ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮವಹಿಸಲಾಗುವುದು ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿದ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |
| 27 | 5328<br>ಚು.ಗು.ಪ್ರ. 1128<br>ಶ್ರೀ ಆರ್. ಧರ್ಮಸೇನ<br>ವಿಪನದಿ:10.07.2014 | ನರ್ಮ್ ಯೋಜನೆಯಡಿ ಮೈಸೂರು ಮಹಾನಗರ ಪಾಲಿಕೆಯ ಮೂಲ ಸೌಕರ್ಯ ಅಭಿವೃದ್ಧಿಗೆ ಅನುಮೋದನೆ ದೊರಕಿರುವ ಕಾಮಗಾರಿಗಳನ್ನು ಪ್ರಾರಂಭಗೊಳಿಸದೆ ಇರುವ ಬಗ್ಗೆ | 2013–14ನೇ ಸಾಲಿಗೆ 755.19 ಕೋಟಿ ಮೊತ್ತದ ಸುಮಾರು 8 ಯೋಜನೆಗಳಿಗೆ ಮಂಜೂರಾಗಿರುತ್ತದೆ. ಇದರಲ್ಲಿ ಕೆ.ಎಸ್.ಆರ್.ಟಿ.ಸಿ. ವತಿಯಿಂದ 2 ಯೋಜನೆಗಳನ್ನು ಅಂದರೆ, 93 ಬಸ್‌ಗಳ ಖರೀದಿಗೆ ಲೆಟರ್ ಆಫ್ ಅವಾರ್ಡ್ ಅನ್ನು ಈಗಾಗಲೇ ಕೊಟ್ಟಿದ್ದೇವೆ. ಉಳಿದ 6 ಕಾಮಗಾರಿ ಟೆಂಡರ್ ಹಂತದಲ್ಲಿ ಇದೆ. ಆದಷ್ಟು ಶೀಘ್ರವಾಗಿ ಪ್ರಾರಂಭ ಮಾಡುತ್ತೇವೆ. 4 ಕಾಮಗಾರಿಗಳು ಗುರಿ | ದಿನಾಂಕ: 16.01.2018ರಂದು ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ಜೆಎನ್‌ನರ್ಮ್ ಯೋಜನೆ ಸ್ಥಿತ್ಯಂತರ ಹಂತದಡಿಯಲ್ಲಿ ಮೈಸೂರು ಮಹಾನಗರ ಪಾಲಿಕೆಯ ಮೂಲ ಸೌಕರ್ಯ ಅಭಿವೃದ್ಧಿಗೆ ಈ ಮೊದಲು ರೂ. 755, 19 ಕೋಟಿ ಮೊತ್ತದ ಸುಮಾರು 8 ಯೋಜನೆಗಳಿಗೆ ಮಂಜೂರಾತಿ ನೀಡಲಾಗಿತ್ತು.<br><br>ಆದರೆ, ಮೈಸೂರು ನಗರಕ್ಕೆ ರೂ. 408.00 ಕೋಟಿ ಮೊತ್ತದ ಒಳಚರಂಡಿ ಯೋಜನೆ ಅನುಷ್ಠಾನಕ್ಕೆ ನೀಡಲಾಗಿದ್ದ ಅನುಮೋದನೆಯನ್ನು ಕೇಂದ್ರ ನಗರಾಭಿವೃದ್ಧಿ ಇಲಾಖೆಯ ಸರ್ಕಾರಿ ಅದೇಶ ಸಂಖ್ಯೆ ನಂ: ಕೆ–14027/4/ನರ್ಮ್–2015 ರಲ್ಲಿ ರದ್ದುಗೊಳಿಸಲಾಗಿದೆ. ಆದಕಾರಣ ರೂ. 316.98 ಕೋಟಿ ಮೊತ್ತದ 7 ಯೋಜನೆಗಳಿಗೆ ಮಾತ್ರ ಅನುಮೋದನೆ ನೀಡಲಾಗಿದ್ದು ಮೊದಲನೇ ಕಂತಿನ ಅನುದಾನ ಬಿಡುಗಡೆ ಮಾಡಲಾಗಿದೆ.<br><br>ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ (ಕೆಎಸ್.ಆರ್.ಟಿಸಿ) ಯಿಂದ 2 ಯೋಜನೆಗಳನ್ನು ಈಗಾಗಲೇ ಪೂರ್ಣಗೊಳಿಸಲಾಗಿರುತ್ತದೆ. ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ (ಕೆಯುಡಬ್ಲ್ಯುಎಸ್‌ಡಿಬಿ) ಅನುಷ್ಠಾನಗೊಳಿಸುತ್ತಿದ್ದು, ಯೋಜನೆ ಪ್ರಗತಿಯಲ್ಲಿದೆ. |

| | | | | |
|---|---|---|---|---|
| | | | ಮುಟ್ಟುವಂತಹ ಅವಶ್ಯಕತೆ ಇದೆ. ಆದಷ್ಟು ಶೀಘ್ರವಾಗಿ ಅದನ್ನು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ ಎಂದು ಮಾನ್ಯ ನಗರಾಭಿವೃದ್ಧಿ ಸಚಿವರು ತಿಳಿಸಿದರು. | ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರಕ್ಕೆ (ಮುಡಾ) 4 ಯೋಜನೆಗಳು ಮಂಜೂರಾಗಿದ್ದು, ಅದರಲ್ಲಿ 1 ಯೋಜನೆ ಮೈಸೂರಿನ ಹುಣಸೂರು ರಸ್ತೆ ಮತ್ತು ನಂಜನಗೂಡು ಹೊರ ವರ್ತುಲ ಜಂಕ್ಷನ್‌ನಲ್ಲಿ ಗ್ರೇಡ್ ಸಪರೇಟರ್ ನಿರ್ಮಾಣ ಪ್ರಗತಿಯಲ್ಲಿರುತ್ತದೆ.<br><br>3 ಯೋಜನೆಗಳನ್ನು ತಾಂತ್ರಿಕ ಕಾರಣದಿಂದ ಪ್ರಾರಂಭಿಸಲು ವಿಳಂಬವಾಗಿರುವ ಹಿನ್ನಲೆಯಲ್ಲಿ ಮತ್ತು ಜೆ.ಎನ್.ನರ್ಮ್ ಯೋಜನೆಯ ಅವಧಿ ಮುಕ್ತಾಯಗೊಂಡಿರುವುದರಿಂದ, ಈ ಕೆಳಕಂಡ ಯೋಜನೆಗಳನ್ನು ರದ್ದುಪಡಿಸಲಾಗಿರುತ್ತದೆ.<br><br>1. ಮೈಸೂರಿನ ಜೆಎಸ್‌ಎಸ್ ಮತ್ತು ನಂಜನಗೂಡು ಹೊರ ವರ್ತುಲ ರಸ್ತೆ ಜಂಕ್ಷನ್‌ನಲ್ಲಿ ಗ್ರೇಡ್ ಸಪರೇಟರ್ ನಿರ್ಮಾಣದ ಅನುಮೋದಿತ ಮೊತ್ತ ರೂ. 26.99<br>2. ಮೈಸೂರಿನ ಕೆಆರ್.ಎಸ್. ರಸ್ತೆ ಮತ್ತು ಹೊರ ವರ್ತುಲ ರಸ್ತೆ ಜಂಕ್ಷನ್‌ನಲ್ಲಿ ಗ್ರೇಡ್ ಸಪರೇಟರ್ ನಿರ್ಮಾಣದ ಅನುಮೋದಿತ ಮೊತ್ತ ರೂ. 9.83<br>3. ಮೈಸೂರಿನ ಹುಣಸೂರು ರಸ್ತೆ ಮತ್ತು ನಂಜನಗೂಡು ಹೊರ ವರ್ತುಲ ಜಂಕ್ಷನ್‌ನಲ್ಲಿ ಗ್ರೇಡ್ ಸಪರೇಟರ್ ನಿರ್ಮಾಣದ ಅನುಮೋದಿತ ಮೊತ್ತ ರೂ. 15.18.<br><br>ಮೇಲ್ಕಂಡಂತೆ ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿದ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |
| 28 | 2027<br>**ಚು.ರ.ಪ್ರ: 1843** | ರಾಜ್ಯದ ಆಯ್ದ ಕೆಲವು ಪಟ್ಟಣಗಳಿಗೆ ಒಳಚರಂಡಿ ಯೋಜನೆಗೆ ಮೂರು ಸಾವಿರ ಕೋಟಿ | ಪರಿಶೀಲನೆಯಲ್ಲಿದೆ ಎಂದು ಮಾನ್ಯ ಪೌರಾಡಳಿತ ಸಚಿವರು ತಿಳಿಸಿದರು. | ದಿನಾಂಕ: 01.06.2018ರ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ: 1999–2000ನೇ ಸಾಲಿನಲ್ಲಿ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿ ಹೊರತುಪಡಿಸಿ, ಕರ್ನಾಟಕದ 208 ಪಟ್ಟಣಗಳಿಗೆ ಒಳಚರಂಡಿ ವ್ಯವಸ್ಥೆ ಕಲ್ಪಿಸಲು 10 ವರ್ಷಗಳ ಅವಧಿಯಲ್ಲಿ ರೂ. 2973.00 ಕೋಟಿಗಳ ಯೋಜನೆಯನ್ನು ಕರ್ನಾಟಕ ನಗರ |

<table>
<tr>
<td></td>
<td>ಶ್ರೀ ರಾಮಚಂದ್ರಗೌಡ<br>ವಿಪನದಿ: 24.03.2005</td>
<td>ರೂಪಾಯಿಗಳ ಪ್ರಸ್ತಾವನೆ ಸಲ್ಲಿಸಿರುವ ಬಗ್ಗೆ</td>
<td></td>
<td>ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ವತಿಯಿಂದ ಪ್ರಸ್ತಾವಿಸಲಾಗಿತ್ತು.<br><br>ಪ್ರಸ್ತುತ ರಾಜ್ಯದಲ್ಲಿ ಬಿಬಿಎಂಪಿ ಹೊರತು ಪಡಿಸಿ ಒಟ್ಟು 278 ನಗರ ಸ್ಥಳೀಯ ಸಂಸ್ಥೆಗಳಿದ್ದು ಈವರೆಗೆ 140 ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಭಾಗಶ: ಒಳಚರಂಡಿ ವ್ಯವಸ್ಥೆಗಳನ್ನು ಲಭ್ಯ ಆರ್ಥಿಕ ಸಂಪನ್ಮೂಲವನ್ನಾಧರಿಸಿ ವಿವಿಧ ಅನುಷ್ಠಾನ ಸಂಸ್ಥೆಗಳ ಮೂಲಕ ಕೈಗೆತ್ತಿಕೊಂಡ ವಿವರಗಳು ಈ ಕೆಳಕಂಡಂತಿದೆ:–<br><br>(ರೂ. ಕೋಟಿಗಳಲ್ಲಿ)
<table>
<tr><th>ಅನುಷ್ಠಾನ ಸಂಸ್ಥೆ</th><th>ಯೋಜನೆ</th><th>ಪಟ್ಟಣಗಳ ಸಂಖ್ಯೆ</th><th>ಅಂದಾಜು</th><th>ವೆಚ್ಚ</th><th>ಪೂರ್ಣಗೊಂಡ ಸಂಖ್ಯೆ</th><th>ಬಾಕಿ</th></tr>
<tr><td rowspan="3">KUIDFC</td><td>KMRP</td><td>8</td><td>185.54</td><td>151.13</td><td>5</td><td>3</td></tr>
<tr><td>NKUSIP</td><td>17</td><td>998.64</td><td>850.00</td><td>7</td><td>10</td></tr>
<tr><td>KIUWMIP</td><td>6</td><td>542.69</td><td>157.00</td><td>0</td><td>6</td></tr>
<tr><td>KUWS & DB</td><td>UIDSSMT/<br>State Plan/<br>UIDST/<br>AMRUT</td><td>109</td><td>4693.78</td><td>2561.32</td><td>68</td><td>41</td></tr>
<tr><td colspan="2">ಒಟ್ಟು</td><td>140</td><td>6420.65</td><td>3719.45</td><td>80</td><td>60</td></tr>
</table>
<br>ಮೇಲ್ಕಂಡಂತೆ ಒಳಚರಂಡಿ ವ್ಯವಸ್ಥೆಯನ್ನು ಕಲ್ಪಿಸಲು ರೂ. 6420.65 ಕೋಟಿಗಳನ್ನು ಬೃಹತ್ ಮೊತ್ತವನ್ನು ಹೂಡಿಕೆ ಮಾಡಲಾಗಿರುತ್ತದೆ. ಆದಾಗ್ಯೂ ಸಹ ಆರ್ಥಿಕ ಸಂಪನ್ಮೂಲಗಳನ್ನು ಆಧರಿಸಿ, ರಾಜ್ಯದ ಇತರೆ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಗೂ ವಿಸ್ತರಿಸಲು ಕ್ರಮವಹಿಸಲಾಗಿದೆ.</td>
</tr>
</table>

| | | | | |
|---|---|---|---|---|
| | | | | ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಒಳಚರಂಡಿ ವ್ಯವಸ್ಥೆಯನ್ನು ಒಂದು ಬಾರಿಗೆ ಪೂರ್ಣ ಪ್ರಮಾಣದಲ್ಲಿ ಅನುಷ್ಠಾನಗೊಳಿಸಲು ಪ್ರಸಕ್ತ ದರದಲ್ಲಿ ಸೂಮಾರು ರೂ. 15000.00 ಕೋಟಿಗೂ ಹೆಚ್ಚು ಅನುದಾನದ ಅವಶ್ಯಕತೆ ಇರುತ್ತದೆ.<br><br>ಈ ಹಿನ್ನೆಲೆಯಲ್ಲಿ 2017–19ನೇ ಸಾಲಿನಲ್ಲಿ ಕಲ್ಮಷಗಳ ತ್ಯಾಜ್ಯ ಸಂಸ್ಕರಣೆ ಮತ್ತು ನಿರ್ವಹಣೆಯ ಬಗ್ಗೆ ರಾಜ್ಯದ ನೀತಿ (State Faecal Sludge and Septage Management (SFSSM) ಜಾರಿಗೆ ತರಲಾಗಿದ್ದು, 2018–19ನೇ ಸಾಲಿನಲ್ಲಿ 50 ಪಟ್ಟಣಗಳಲ್ಲಿ ಮಾನವ ತ್ಯಾಜ್ಯ ಕಲ್ಮಶಗಳ ಸಂಸ್ಕರಣೆ ಮಾಡಲು ಯೋಜನೆಯನ್ನು ರೂಪಿಸಲಾಗಿದ್ದು ಅನುದಾನ ಲಭ್ಯತೆ ಅನುಸಾರವಾಗಿ ರಾಜ್ಯದ ಎಲ್ಲಾ ಪಟ್ಟಣಗಳಲ್ಲಿ ಹಂತ ಹಂತವಾಗಿ ಸದರಿ ವ್ಯವಸ್ಥೆಯನ್ನು ವಿಸ್ತರಿಸಲಾಗುವುದು ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿದ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |
| 29 | 3935<br>ಚು.ರ.ಪ್ರ: 11<br>ಶ್ರೀ ಬಸವರಾಜ ಹೊರಟ್ಟಿ<br>ವಿಪನದಿ: 08.12.2011 | ಹುಬ್ಬಳ್ಳಿ–ಧಾರವಾಡ ನಡುವೆ ಬಸ್ ಕಾರಿಡಾರ್ (ಬಿ.ಆರ್.ಟಿ.ಎಸ್ ತ್ವರಿತ ಬಸ್ ಸಂಚಾರ ವ್ಯವಸ್ಥೆ) ಯೋಜನೆ ಕಾರ್ಯಗತಗೊಳಿಸುವ ಬಗ್ಗೆ. | ಹುಬ್ಬಳ್ಳಿ–ಧಾರವಾಡ ನಡುವೆ ತ್ವರಿತ ಬಸ್ ಸಂಚಾರ ಯೋಜನೆಯ (ಬಿ.ಆರ್.ಟಿ.ಎಸ್) ಕುರಿತಂತೆ ಸಿದ್ಧಪಡಿಸ ಲಾಗಿರುವ ವಿಸ್ತೃತ ಯೋಜನಾ ವರದಿಯು ಸರ್ಕಾರದ ಪರಿಶೀಲನೆಯಲ್ಲಿದೆ ಎಂದು ಮಾನ್ಯ ನಗರಾಭಿವೃದ್ಧಿ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು ತಿಳಿಸಿದರು. | ದಿನಾಂಕ: 01.06.2018ರ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ತ್ವರಿತ ಬಸ್ ಸಾರಿಗೆ (ಬಿ.ಆರ್.ಟಿ.ಎಸ್) ಯೋಜನೆಯನ್ನು ಸರ್ಕಾರವು 2012ರಲ್ಲಿ ಅನುಮೋದಿಸಿದೆ. ಹುಬ್ಬಳ್ಳಿಯ ಸಿ.ಬಿ.ಟಿ. ಯಿಂದ ಧಾರವಾಡದ ಸಿ.ಬಿ.ಟಿ. ವರೆಗೆ 22.25 ಕಿ.ಮೀ. ನಷ್ಟು ಉದ್ದದ ಬಿ.ಆರ್.ಟಿ.ಎಸ್. ಕಾರಿಡಾರನ್ನು ಪೂರ್ಣಗೊಳಿಸಲು ಯೋಜಿಸಲಾಗಿದೆ. ಯೋಜನೆಯನ್ನು ಅನುಷ್ಠಾನಗೊಳಿಸಲು ಬಿ.ಆರ್.ಟಿ.ಎಸ್. ಸೇವೆಗಳನ್ನು ಒದಗಿಸಲು ವಿಶೇಷ ಉದ್ದೇಶಿತ ವಾಹನ (ಎಸ್‌ಪಿವಿ) "ಹುಬ್ಬಳ್ಳಿ–ಧಾರವಾಡ ಬಿ.ಆರ್.ಟಿ.ಎಸ್. ಕಂಪನಿ ನಿಯಮಿತ" ವನ್ನು ಸರ್ಕಾರವು ಕಂಪನಿಗಳ ಕಾಯ್ದೆಯಡಿಯಲ್ಲಿ ಸ್ಥಾಪಿಸಿದ್ದು, ಅದು ಕಾರ್ಯನಿರತವಾಗಿದೆ. |

| | | | | |
|---|---|---|---|---|
| | | | | ಯೋಜನೆಯನ್ನು ವಿಶ್ವಬ್ಯಾಂಕ್ ಗ್ಲೋಬಲ್ ಎನ್ವಿರಾನ್ಮೆಂಟ್ ಫೆಸಿಲಿಟಿ (ಜಿಇಎಫ್) ನೆರವಿನ ಸುಸ್ಥಿರ ನಗರ ಸಾರಿಗೆ ಯೋಜನೆಯಡಿಯಲ್ಲಿ ಅನುಷ್ಠಾನಗೊಳಿಸಲಾಗುತ್ತದೆ. |

ಯೋಜನೆಯ ಒಟ್ಟಾರೆ ಅಂದಾಜು ಮೊತ್ತ ರೂ. 929.00 ಕೋಟಿಗಳಾಗಿದ್ದು, ಇದರಲ್ಲಿ 55.45 ಮಿಲಿಯನ್ ಅಮೆರಿಕನ್ ಡಾಲರ್ ಸಾಲ ವಿಶ್ವ ಬ್ಯಾಂಕಿನಿಂದ ಲಭ್ಯವಿದೆ ಅಡಿಯಲ್ಲಿ ಬಸ್ಸುಗಳ ಖರೀದಿಗಾಗಿ ರೂ. 44.82 ಕೋಟಿಗಳು ಲಭ್ಯವಿರುತ್ತದೆ. ಉಳಿದ ಯೋಜನೆಯ ಮೊತ್ತವನ್ನು ರಾಜ್ಯ ಸರ್ಕಾರದಿಂದ ಭರಿಸಲಾಗುವುದು.

ಇದರ ಜೊತೆಗೆ ತಾಂತ್ರಿಕ ಸಮಾಲೋಚನೆ ಆಧ್ಯಯನಗಳಿಗಾಗಿ ರೂ. 3.2 ಮಿಲಿಯನ್ ಅಮೆರಿಕನ್ ಡಾಲರ್ ಜಿಇಎಫ್ ನೆರವು ಲಭ್ಯವಿದೆ 2017–18ನೇ ಅರ್ಥಿಕ ಸಾಲಿನಲ್ಲಿ ರೂ. 329.00 ಕೋಟಿಯನ್ನು ಈ ಯೋಜನೆಗಾಗಿ ಸರ್ಕಾರವು ಬಿಡುಗಡೆ ಮಾಡಿದೆ.

ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ ಸಂಸ್ಥೆಯ ಪ್ರಸ್ತುತ ಎರಡು ಪಥಗಳ ರಸ್ತೆಗಳನ್ನು ಚತುಷ್ಪಥ ರಸ್ತೆಯನ್ನಾಗಿ ಅಭಿವೃದ್ಧಿಗೊಳಿಸಲು ರಸ್ತೆ ಅಗಲೀಕರಣಗೊಳಿಸುವ ಕಾರ್ಯ ಕೈಗೊಂಡಿದೆ. ರಸ್ತೆ ಆಗಲೀಕರಣ ಕಾರ್ಯವು ಪ್ರಗತಿಯಲ್ಲಿದ್ದು, ಪ್ರಸ್ತುತ ನಿರ್ಮಿಸುತ್ತಿರುವ ನಾಲ್ಕು ಪಥಗಳು ಮುಕ್ತಾಯವಾದ ನಂತರ ಮಧ್ಯಂತರ ಬಿ.ಆರ್.ಟಿ. ಪಥಗಳಾಗುವುವು ಬಿ.ಆರ್.ಟಿ. ಲೇನ್‌ಗಳು ಪಾದಚಾರಿ ಮಾರ್ಗಗಳು ಮತ್ತು ಯುಟಿಲಿಟಿ ಲೇನ್‌ಗಳಿಗೆ ಅನುಕೂಲವಾಗುವಂತೆ ರಚಿಸಲಾಗಿದೆ.

ಕ್ರಮವಾಗಿ ನಗರದ ಒಳ ಮತ್ತು ಹೊರ ಭಾಗಗಳಲ್ಲಿ ರೈಟ್ ಆಫ್ ವೇ ಯ ಮಿತಿಯು 35 ಮೀ. (7 ಪಥಗಳೂ) ಮತ್ತು 44 ಮೀ (8 ಪಥಗಳು) ಗಳಾಗಿರುತ್ತದೆ. ಯೋಜನೆಯಡಿಯಲ್ಲಿ ಮಿಶ್ರ ಸಂಚಾರ ಪಥಗಳ ನಿರ್ಮಾಣ ಬಿ.ಆರ್.ಟಿ. ಕೇಂದ್ರ ನಿಲ್ದಾಣ, ಡಿಪೋಗಳ ಟರ್ಮಿನಲ್ ಮತ್ತು ಕಾರ್ಯಾಗಾರಗಳ ನಿರ್ಮಾಣ,ಮುಂತಾದ ಅಭಿವೃದ್ಧಿ ಕಾರ್ಯಗಳನ್ನು ಒಳಗೊಂಡಿದೆ. ಯೋಜನೆಗಾಗಿ 72ಎ–29 ಗುಂಟೆ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಬೇಕಾಗಿದೆ. ಭೂಸ್ವಾಧೀನ ಪ್ರಕ್ರಿಯೆಯನ್ನು ಕರ್ನಾಟಕ ಹೆದ್ದಾರಿ ಕಾಯ್ದೆ 1964ರ ಅಡಿಯಲ್ಲಿ ನಡೆಸಲಾಗುತ್ತಿದೆ. ಮುಖ್ಯ ಅಭಿಯಂತರರು, ಕರ್ನಾಟಕ ರಸ್ತೆ ಅಭಿವೃದ್ಧಿ ನಿಯಯಮಿತ ಇವರನ್ನು ಹೆದ್ದಾರಿ ಪ್ರಾಧಿಕಾರವನ್ನಾಗಿ ನಿಯೋಜಿಸಲಾಗಿದೆ. ಯೋಜನಾ ಬಾದಿತಾ ವ್ಯಕ್ತಿಗಳ ಸಮ್ಮತಿಯ ಅನುಸಾರ ಜಮೀನಿಗೆ ಬೆಲೆಯನ್ನು ನಿಗದಿಪಡಿಸಲು ಸರ್ಕಾರವು ಜಿಲ್ಲಾಧಿಕಾರಿ, ಧಾರವಾಡ ಇವರ ಅಧ್ಯಕ್ಷತೆಯಲ್ಲಿ ಸಂಧಾನ ಸಮಿತಿಯನ್ನು ರಚಿಸಿದೆ. ಸಮಿತಿಯು ಯೋಜನಾ ಬಾಧಿತರೊಂದಿಗೆ ಸ್ವಾಧೀನಪಡಿಸಿಕೊಳ್ಳುವ ಜಮೀನಿಗೆ ಬೆಲೆ ನಿರ್ಧರಿಸಲು ಜಲವಾರು ಸಭೆಗಳನ್ನು ನಡೆಸಿದೆ. ದರ ನಿರ್ಧರಣ ಸಮಿತಿ ಧಾರವಾಡ ಇವರ ಶಿಫಾರಸ್ಸಿನಂತೆ ಎಲ್ಲಾ ಗ್ರಾಮಗಳು ಮತ್ತು ಹುಬ್ಬಳ್ಳಿ–ಧಾರವಾಡ ನಗರಗಳ ಪರಿಹಾರ ಧನಕ್ಕೆ ಸರ್ಕಾರ ಅನುಮೋದನೆ ನೀಡಿರುತ್ತದೆ. ಅದರಂತೆ ಈಗಾಗಲೇ 72 ಎಕರೆ 29ಗುಂಟೆ ಭೂಸ್ವಾಧೀನ ಪ್ರಕ್ರಿಯೆ ಪೂರ್ಣಗೊಂಡಿರುತ್ತದೆ.

ಹುಬ್ಬಳ್ಳಿ–ಧಾರವಾಡ ತ್ವರಿತ ಸಾರಿಗೆ ವ್ಯವಸ್ತೆ ಯೋಜನೆಯ ಅನುಷ್ಠಾನದ ಕುರಿತಂತೆ ಈ ದಿನಾಂಕದವರೆಗೆ ಆದ ಪ್ರಗತಿ ಈ ಕೆಳಕಂಡಂತಿದೆ:

ಎ) ವಿಶ್ವ ಬ್ಯಾಂಕ್ – ಕಾಮಗಾರಿಗಳು

(ರೂ.ಕೋಟಿಗಳಲ್ಲಿ)

| ಪ್ಯಾಕೇಜ್ ಕಾಮಗಾರಿ ಸಂಖ್ಯೆ | ಕಾಮಗಾರಿಯ ಹೆಸರು | ಯೋಜನೆಯ ವೆಚ್ಚ (ಬದಲಾವಣೆಗಳು ಸೇರಿದಂತೆ) | ಈ ದಿನಾಂಕ ದವರೆಗಿನ ವೆಚ್ಚ | ಪ್ರಗತಿಯ ಪ್ರತಿಶತ (ಆರ್ಥಿಕ) | ಭೌತಿಕ ಪ್ರಗತಿ |
|---|---|---|---|---|---|
| ವಿಶ್ವ ಬ್ಯಾಂಕ್ – ವರ್ಕ್ಸ್ | | | | | |
| ಪಿಡಬ್ಲೂ–1 | ಹುಬ್ಬಳ್ಳಿ ರೈಲ್ವೆ ನಿಲಾಣದಿಂದ ಹೊಸೂರುಗಳ ಮಧ್ಯೆ ತ್ವರಿತ ಬಸ್ ಸಾರಿಗೆ ವ್ಯವಸ್ಥೆಯ ಬಸ್ ನಿಲ್ದಾಣದ ನಿರ್ಮಾಣ ಮತ್ತು ಪಾದಚಾರಿಗಳ ಮೂಲ ಸೌಕರ್ಯ ರಚನೆ | 10.05 | 7.77 | 77.31 % | 85 % |
| ಪಿಡಬ್ಲೂ–2 | ಬಸ್ ಟರ್ಮಿನಲ್ (ಧಾರವಾಡದ ಮಿತ್ರ ಸಮಾಜದ ಹತ್ತಿರ) | 14.46 | 12.13 | 83.89 % | 89 % |
| ಪಿಡಬ್ಲೂ–3ಎ | ಪಾದಚಾರಿ (ಒಸಿಬಿಎಸ್ ನಿಂದ ಉಣಕಲ್ ಕರೆಯವರೆಗೆ) | 11.89 | 10.76 | 90.50 % | 97 % |
| ಪಿಡಬ್ಲೂ–3ಬಿ | ಪಾದಚಾರಿ (ನವನಗರದಿಂದ ಧಾರವಾಡ ಕೋರ್ಟ್‌ವರೆಗೆ) | 15.14 | 13.88 | 91.67 % | 99 % |
| ಪಿಡಬ್ಲೂ–4 | ನವನಗರದಲ್ಲಿ ಪಾದಚಾರಿಗಳ ಪಾದಚಾರಿ ಮಾರ್ಗದ ಅಭಿವೃದ್ಧಿ ಮತ್ತು ಯಂತ್ರ ರಹಿತ ವಾಹನಸಂಚಾರಚ ಮೂಲಭೂತ ಸೌಕರ್ಯಗಳ ಅಭಿವೃದ್ಧಿ | 11.16 | 10.77 | 96.50 % | 100 % |
| ಪಿಡಬ್ಲೂ–5 | ತ್ವರಿತ ಬಸ್ ಸರಿಗೆಯ ಬಸ್ ನಿಲ್ದಾಣಗಳು | 17.13 | 15.64 | 91.30 % | 100 % |
| ಪಿಡಬ್ಲೂ–6 | ತ್ವರಿತ ಬಸ್ ಸರಿಗೆಯ ಬಸ್ ನಿಲ್ದಾಣಗಳು | 16.86 | 16.59 | 98.40 % | 100 % |
| ಪಿಡಬ್ಲೂ–8 | ಹುಬ್ಬಳ್ಳಿ ಮತ್ತು ಧಾರವಾಡ ಡಿಪೋ ಮತ್ತು ವಿಭಾಗೀಯ ಕಾರ್ಯಾಗಾರ ಹುಬ್ಬಳ್ಳಿ | 68.06 | 64.55 | 94.85 % | 97 % |
| ಪಿಡಬ್ಲೂ–9ಎ | ಒಸಿಬಿಎಸ್ ಧಾರವಾಡ– ತೆಗೆದುಹಾಕಲಾಗಿದೆ. | 3.26 | 2.98 | 91.41 % | 100 % |
| ಪಿಡಬ್ಲೂ–9 ಬಿ | ಒಸಿಬಿಎಸ್ ಧಾರವಾಡ | 19.99 | 10.75 | 53.78 % | 68 % |
| ಪಿಡಬ್ಲೂ–10 | ಹುಬ್ಬಳ್ಳಿ–ಹೊಸೂರು ಟರ್ಮಿನಲ್ | 64.57 | 60.35 | 93.46 | 94% |
| ಪಿಡಬ್ಲೂ–15 | ತ್ವರಿತ ಬಸ್ ಸಾರಿಗೆ ವ್ಯವಸ್ಥೆ ಮತ್ತು ಮಿಶ್ರ ಸಾರಿಗೆ ಲೇನ್‌ಗಳ ಮಾರ್ಗದಲ್ಲಿ MS Railing ನ್ನು ಒದಗಿಸಿ ಸ್ಥಾಪಿಸುವುದು | 9.48 | 4.25 | 44.83 | 45% |
| | ಒಟ್ಟು | 260.00 | 231.10 | 88.58 | 92% |

ವಿಶ್ವ ಬ್ಯಾಂಕ್ – ಸಾಮಾಗ್ರಿಗಳು

| ಪ್ಯಾಕೇಜ್ ಸಂಖ್ಯೆ | ಸ್ಥಾವರ/ಸಾಮಗ್ರಿಗಳ ವಿವರಗಳು | ಯೋಜನೆಯ ವೆಚ್ಚ | ಈ ದಿನಾಂಕ ದವರೆಗಿನ ವೆಚ್ಚ | ಆರ್ಥಿಕ ವೆಚ್ಚ |
|---|---|---|---|---|
| ಪಿಡಬ್ಲ್ಯೂ–7ಎ | ಬಿಆರ್‌ಟಿಎಸ್ ಡಿಪೋ ಮತ್ತು ಕಾರ್ಯಾಗಾರಗಳಿಗೆ ಸ್ಥಾವರಗಳನ್ನು ಮತ್ತು ಉಪಕರಣಗಳನ್ನು ಸರಬರಾಜು ಮಾಡುವುದು | 8.00 | 6.11 | 76.38% |
| ಪಿಡಬ್ಲ್ಯೂ–7ಬಿ | ಟೈರ್ ರಿಟ್ರೇಡಿಂಗ್ ಸ್ಥಾವರಗಳಿಗೆ ಸ್ಥಾವರ ಮತ್ತು ಉಪಕರಗಳನ್ನು ಸರಬರಾಜು ಮಾಡುವುದು | 1.43 | 0.91 | 63.64% |
| ಪಿಡಬ್ಲ್ಯೂ–7ಸಿ | ಬಿಆರ್‌ಟಿಎಸ್ ಡಿಪೋಗಳಿಗೆ ಸ್ಥಾವರ ಮತ್ತು ಕಾರ್ಯಾಗಾರಗಳಿಗೆ ಹೆಚ್ಚುವರಿ ಸ್ಥಾವರಗಳನ್ನು ಮತ್ತು ಉಪಕರಣಗಳನ್ನು ಸರಬರಾಜು ಮಾಡುವುದು | 4.73 | 2.84 | 60.04% |
| ಪಿಡಬ್ಲ್ಯೂ–7ಡಿ | ಬಿಆರ್‌ಟಿಎಸ್ ಡಿಪೋಗಳಿಗೆ ಸ್ಥಾವರ ಮತ್ತು ಕಾರ್ಯಾಗಾರಗಳಿಗೆ ಹೆಚ್ಚುವರಿ ಸ್ಥಾವರಗಳನ್ನು ಮತ್ತು ಉಪಕರಣಗಳನ್ನು ಸರಬರಾಜು ಮಾಡುವುದು | 1.48 | 0.91 | 61.49% |
| ಪಿಡಬ್ಲ್ಯೂ–11ಎ | ಚತುರ ಸಾರಿಗೆ ವ್ಯವಸ್ಥೆಗಳನ್ನು ಸರಬರಾಜು ಮಾಡಿ ಅಳವಡಿಸುವುದು | 69,93 | 26.81 | 38.34% |
| ಪಿಡಬ್ಲ್ಯೂ–11ಬಿ | ಪ್ಲಾಟ್ ಫಾರಂ ಪರದೆಗಳುಳ್ಳ ಬಾಗಿಲುಗಳನ್ನು ಸರಬರಾಜು ಮಾಡಿ ಅಳವಡಿಸುವುದು | 14.29 | 10.55 | 73.83% |
| ಪಿಡಬ್ಲ್ಯೂ–12 | ಚಾಲನಾ ತರಬೇತಿಯ Simulatorಗಳನ್ನು ಸರಬರಾಜು ಮಾಡಿ ಅಳವಡಿಸುವುದು | 1.73 | 1.44 | 83.24% |
| ಪಿಡಬ್ಲ್ಯೂ–13 | ಬಿಆರ್.ಟಿಎಸ್ ಡಿಪೋಗಳಿಗೆ ಮತ್ತು ಕಾರ್ಯಾಗಾರಗಳಿಗೆ ಪೀಠೋಪಕರಣಗಳು ಮತ್ತು ಸಾರಿಗೆ ಅನುಕೂಲಗಳನ್ನು ಸರಬರಾಜು ಮಾಡುವುದು | 1.80 | 1.01 | 56.11% |
| | ಒಟ್ಟು | 103.39 | 51.82 | 50.12% |

ಬಿ) ಬಿಆರ್‌ಟಿಎಸ್ ವ್ಯವಸ್ಥೆಯಡಿ ತೆಗೆದುಕೊಳ್ಳಲಾದ ಇತರೆ ಕಾಮಗಾರಿಗಳು:

| ಘಟಕಗಳು | ಇದುವರೆಗಿನ ಪ್ರಗತಿ |
|---|---|
| ಮಿಶ್ರ ಸಂಚಾರ ಲೇನ್‌ಗಳು: ಕೆ.ಆರ್.ಡಿ.ಸಿ.ಎಲ್ ನಿಂದ ಅನುಷ್ಠಾನಗೊಳಿಸಲ್ಪಡುವುದು. | 2 ಲೇನ್‌ಗಳ ಒಟ್ಟು 35.04 ಕಿ.ಮೀ ಉದ್ದಳತೆಯಲ್ಲಿ 30.65 ಕಿ.ಮೀ. ಉದ್ದಳತೆಯವರೆಗೆ ಡಾಂಬರೀಕರಣ ಕಾಮಗಾರಿ ಮುಕ್ತಾಯವಾಗಿದೆ.<br>ಇನ್ನುಳಿದ 4.39 ಕಿ.ಮೀ. ರಸ್ತೆಯ ಕಾಮಗಾರಿ ಪ್ರಗತಿಯಲ್ಲಿದೆ. |

| | |
|---|---|
| ಗ್ರೇಡ್ ಸೆಪರೇಟರ್‌ಗಳು:<br>ಕೆ.ಆರ್.ಡಿ.ಸಿ.ಎಲ್ ನಿಂದ ಅನುಷ್ಠಾನಗೊಳಿಸಲ್ಪಡುವುದು | ನವನಗರ: ಕಾಮಗಾರಿ ಮುಕ್ತಾಯವಾಗಿದೆ.<br>ಉಣಕಲ್ ಕ್ರಾಸ್ ಮತ್ತು ಉಣಕಲ್ ಕೆರೆ: ಸಮೀಪದ ರಸ್ತೆ ನಿರ್ಮಾಣ ಕಾಮಗಾರಿ ಮುಕ್ತಾಯವಾಗಿದೆ. ಇನ್ನಿತರೆ ಕಾಮಗಾರಿಗಳು ಪ್ರಗತಿಯಲ್ಲಿವೆ. |
| ಉಳಿದ ಕಾಮಗಾರಿಗಳು – ಬಿಆರ್.ಟಿಎಸ್ ಕಾರಿಡಾರ್. ಕೆ.ಆರ್.ಡಿ.ಸಿ.ಎಲ್ ನಿಂದ ಅನುಷ್ಠಾನಗೊಳಿಸಲ್ಪಡುವುದು. | ಒಟ್ಟು 7.55 ಕಿಮೀ ಉದ್ದದ ರಸ್ತೆಯಲ್ಲಿ 3.45 ಕಿ.ಮೀ ಉದ್ದದ ರಸ್ತೆಗೆ ಡಾಂಬರೀಕರಣ ಕಾಮಗಾರಿ ಮುಕ್ತಾಯವಾಗಿದೆ. 1.65 ಕಿ.ಮೀ. ಗೆ ಕಠಿಣ ಪಾದಚಾರಿ ಕಾಮಗಾರಿಗಳು ಮುಕ್ತಾಯವಾಗಿದೆ ಮತ್ತು ಉಳಿದ 2.45 8.ಮೀ. ಬಿ.ಆರ್.ಟಿ.ಎಸ್. ಕಾರಿಡಾರ್ ಕಾಮಗಾರಿಯು ವಿವಿಧ ಹಂತದಲ್ಲಿರುತ್ತದೆ. |
| ಮೇಲ್ಸೇತುವೆ:<br>ನವಲೂರಿನಲ್ಲಿ 2 ಮೇಲ್ಸೇತುವೆಗಳ ನಿರ್ಮಾಣ ಕೆ.ಆರ್.ಡಿ.ಸಿ.ಎಲ್. ನಿಂದ ಅನುಷ್ಠಾನಗೊಳಿಸಲ್ಪಡವುದು. | ಬಲ ಭಾಗ: ಒಟ್ಟು 1310 ಮೀ. ಉದ್ದವು ಮುಕ್ತಾಯವಾಗಿದೆ.<br>ಎಡ ಭಾಗ: ಉದ್ದಳತೆ 1320 ಮೀ ಜಿ.ಎಸ್.ಬಿ ಡಿಬಿಎಂ 120 ಮೀ., ಕಾಮಗಾರಿಯು ಮುಕ್ತಾಯವಾಗಿದೆ. ಉಳಿದ ಕಾಮಗಾರಿಯ ಪ್ರಗತಿಯು ಹಂತದಲ್ಲಿದೆ |
| ಹೊಂದಾಣಿಕೆ ಮಾಡಿಕೊಳ್ಳುವ ಸಂಚಾರ ನಿಯಂತ್ರ ವ್ಯವಸ್ಥೆ ಸಿ.ಡಿಎಸಿ ನಿಂದ ಅನುಷ್ಠಾನಗೊಳಿಸಲ್ಪಡುವುದು. | ಸಿಗ್ನಲ್‌ಗಳನ್ನು ಅಳವಡಿಸುವ ಕಾರ್ಯ ಪ್ರಗತಿಯಲ್ಲಿದೆ. |

ಸಲಹೆಗಾರರ ಸೇವೆಗಳು:–
ರೂ. 904.51 ಕೋಟಿ ಜಿ.ಇ.ಎಫ್ ನೆರವಿನೊಂದಿಗೆ 8 ಸಮಾಲೋಚನಾ ಅಧ್ಯಯನಗಳನ್ನು ಕೈಗೆತ್ತಿಕೊಳ್ಳಲಾಗಿದೆ.

ಬಿ.ಆರ್.ಟಿ. ಸೇವೆಗಾಗಿ ಬಸ್‌ಗಳ ಖರೀದಿ:–

ಬಿ.ಆರ್.ಟಿ. ಸೇವೆಗಾಗಿ 12 ಮೀ. ಉದ್ದದ 100 ಸ್ಟ್ಯಾಂಡರ್ಡ್ ಪ್ರಿಮಿಯಂ ಹವಾನಿಯಂತ್ರಿತ ಬಸ್ಸುಗಳು ಮತ್ತು 30 ಆರ್ಟಿಕ್ಯೂಲೇಟೆಡ್ ಹವಾನಿಯಂತ್ರಿತ ಬಸ್ಸುಗಳ ಅವಶ್ಯಕತೆ ಇದ್ದು, ಅವುಗಳನ್ನು ಖರೀದಿಸಲು ಇ–ಟೆಂಡರ್ ಮೂಲಕ ಕರೆದು ಅನುಕ್ರಮವಾಗಿ ಮೆ: ವೋಲ್ವೋ ಪ್ರೈವೇಟ್ ಲಿಮಿಟೆಡ್ ಮತ್ತು ಮೆ: ಟಾಟಾಮೋಟಾರ್ಸ್ ಪ್ರೈವೇಟ್ ಲಿಮಿಟೆಡ್ ಇವರಿಂದ ಖರೀದಿಸಲಾಗಿದೆ. ಬಿ.ಆರ್‌ಟಿಎಸ್ ಸೇವೆಗಳ ವ್ಯವಸ್ಥೆಯನ್ನು ಅಂತಿಮಗೊಳಿಸಲು ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯೊಡನೆ ಚರ್ಚೆಗಳನ್ನು ನಡೆಸಲಾಗಿದೆ. ಎಲ್ಲಾ ಕಾಮಗಾರಿಗಳನ್ನು ಜುಲೈ, 2018 ರೊಳಗಾಗಿ ಮುಕ್ತಾಯಗೊಳಿಸಿ ಮತ್ತು ಬಿಆರ್‌ಟಿಎಸ್ ಸೇವೆಗಳನ್ನು ಆಗಸ್ಟ್ 2018 ರಿಂದ ಪ್ರಾರಂಭಿಸಲು ಉದ್ದೇಶಿಸಲಾಗಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿದ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು.

| | | | | |
|---|---|---|---|---|
| 30 | 3957<br>ಚು.ರ.ಪ್ರ: 507<br>ಶ್ರೀ ಎಸ್. ನಾಗರಾಜ್ (ಸಂದೇಶ್ ನಾಗರಾಜ್)<br>ವಿಪನದಿ: 09.02.2012 | ಚಾಮರಾಜನಗರ ನಗರಸಭೆಯ ಹತ್ತನೇ ವಾರ್ಡಿನ ಸಿದ್ಧಾರ್ಥ ನಗರ ವ್ಯಾಪ್ತಿಯಲ್ಲಿ ಬೋರ್‌ವೆಲ್ ಹಾಕಿ ನೀರಿನ ತೊಟ್ಟಿ (ಸಿಮೆಂಟ್ ಟ್ಯಾಂಕ್) ನಿರ್ಮಿಸಿ ಕುಡಿಯುವ ನೀರಿಗೆ ಅನುಕೂಲ ಮಾಡಿಕೊಡುವ ಬಗ್ಗೆ | ಚಾಮರಾಜನಗರ ನಗರಸಭೆಗೆ ಲಭ್ಯವಿರುವ ಅನುದಾನದಲ್ಲಿ ಅಗತ್ಯಕ್ಕೆ ತಕ್ಕಂತೆ ಅಂದಾಜು ತಯಾರಿಸಿ ಕೌನ್ಸಿಲ್ ಅನುಮೋದನೆ ಹಾಗೂ ಸಕ್ಷಮ ಪ್ರಾಧಿಕಾರದಿಂದ ಮಂಜೂರಾತಿ ಪಡೆದು 10ನೇ ವಾರ್ಡಿನ ಸಿದ್ಧಾರ್ಥನಗರ ವ್ಯಾಪ್ತಿಯಲ್ಲಿ ಬೋರ್‌ವೆಲ್ ಹಾಕಿ ನೀರಿನ ತೊಟ್ಟಿ (ಸಿಮೆಂಟ್ ಟ್ಯಾಂಕ್) ನಿರ್ಮಾಣ ಮಾಡಿ ಕುಡಿಯುವ ನೀರಿನ ಅನುಕೂಲಮಾಡಿಕೊಡಲಾಗುವುದು ಎಂದು ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು ತಿಳಿಸಿದರು. | ದಿನಾಂಕ: 01.06.2018ರ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ: ಚಾಮರಾಜನಗರ ನಗರಸಭೆಯ 10ನೇ ವಾರ್ಡಿನ ಸಿದ್ಧಾರ್ಥ ನಗರದ ವ್ಯಾಪ್ತಿಯಲ್ಲಿ ಸಾರ್ವಜನಿಕರಿಗೆ ಕುಡಿಯುವ ನೀರಿನ ಸೌಲಭ್ಯವನ್ನು ಕೊಳವೆ ಬಾವಿಯಿಂದ ಹಾಗೂ ಶುದ್ಧೀಕರಿಸಿದ ಕಬಿನಿ ನೀರನ್ನು ಸರಬರಾಜು ಮಾಡಲಾಗುತ್ತದೆ. ಹೆಚ್ಚುವರಿಯಾಗಿ 10ನೇ ವಾರ್ಡಿನಲ್ಲಿ 3 ಕೊಳವೆ ಬಾವಿಗಳನ್ನು ಕೊರೆಯಿಸಿ, ಪೈಪ್ ಮತ್ತು ಪಂಪ್ ಮೋಟಾರುಗಳನ್ನು ಅಳವಡಿಸಿ, ನೀರು ಸರಬರಾಜು ಮಾಡುತ್ತಿರುವುದರಿಂದ ಸಿಮೆಂಟ್ ಟ್ಯಾಂಕ್ ನಿರ್ಮಾಣ ಮಾಡುವ ಅವಶ್ಯಕತೆ ಕಂಡು ಬಂದಿರುವುದಿಲ್ಲ. ಬೋರ್‌ವೆಲ್ ನೀರನ್ನು ಪ್ರತಿದಿನ ಸರಬರಾಜು ಮಾಡಲಾಗುತ್ತಿದ್ದು, ಕಬಿನಿ ನೀರನ್ನು 2 ದಿನಕ್ಕೊಮ್ಮೆ ಸರಬರಾಜು ಮಾಡಲಾಗುತ್ತದೆ. ಕುಡಿಯುವ ನೀರಿಗೆ ಯಾವುದೇ ತೊಂದರೆಯಾಗಿರುವುದಿಲ್ಲ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿದ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |
| 31 | 3961<br>ಚು.ರ.ಪ್ರ: 413<br>ಶ್ರೀ ಗಣೇಶ್ ಕಾರ್ಣಿಕ್<br>ವಿಪನದಿ: 09.02.2012 | ರಾಜ್ಯದ ನಗರಗಳಲ್ಲಿ ನಾಗರೀಕ ಸೌಲಭ್ಯಗಳಲ್ಲಿ ಅತ್ಯಂತ ಪ್ರಮುಖ ಸೌಲಭ್ಯವಾದ ಒಳಚರಂಡಿ ವ್ಯವಸ್ಥೆಯನ್ನು ಒದಗಿಸಲು ಕೈಗೊಂಡ ಕ್ರಮ ಮತ್ತು ಇದಕ್ಕೆ ಅಗತ್ಯವಿರುವ | ಹಣಕಾಸಿನ ಸೌಲಭ್ಯದ ಆಧಾರದ ಮೇಲೆ ಹಂತ ಹಂತವಾಗಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಉದ್ದೇಶಿಸಲಾಗಿದೆ ಎಂದು ಮಾನ್ಯ ನಗರಾಭಿವೃದ್ಧಿ, ಕಾನೂನು ನ್ಯಾಯ ಮತ್ತು | ದಿನಾಂಕ: 01.06.2018ರ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ರಾಜ್ಯದ ನಗರಗಳಲ್ಲಿ ಒಳಚರಂಡಿ ವ್ಯವಸ್ಥೆಯನ್ನು ಒದಗಿಸಲು ತೆಗೆದುಕೊಂಡ ಕ್ರಮ ಹಾಗೂ ಅಗತ್ಯವಿರುವ ಸಂಪನ್ಮೂಲ ಒದಗಿಸುವ ಬಗ್ಗೆ ಸರ್ಕಾರ ಕೆಳಕಂಡಂತೆ ಹಲವು ಯೋಜನೆಗಳನ್ನು ರೂಪಿಸಿದೆ :-<br><br>ಪ್ರಸ್ತುತ ರಾಜ್ಯದಲ್ಲಿ ಬಿಬಿಎಂಪಿ ಹೊರತುಪಡಿಸಿ ಒಟ್ಟು 278 ನಗರ ಸ್ಥಳೀಯ ಸಂಸ್ಥೆಗಳಿದ್ದು ಈವರೆಗೆ 140 ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ |

<table>
<tr>
<td></td>
<td></td>
<td>ಸಂಪನ್ಮೂಲ ಒದಗಿಸಲು ಸರ್ಕಾರದ ಮುಂದಿರುವ ಯೋಜನೆಗಳ ಕುರಿತು.</td>
<td>ಮಾನವ ಹಕ್ಕುಗಳು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ತಿಳಿಸಿದರು.</td>
<td>ಭಾಗಶ: ಒಳಚರಂಡಿ ವ್ಯವಸ್ಥೆಗಳನ್ನು ಲಭ್ಯ ಆರ್ಥಿಕ ಸಂಪನ್ಮೂಲವನ್ನಾಧರಿಸಿ ವಿವಿಧ ಅನುಷ್ಠಾನ ಸಂಸ್ಥೆಗಳ ಮೂಲಕ ಕೈಗೆತ್ತಿಕೊಂಡ ವಿವರಗಳು ಈ ಕೆಳಕಂಡಂತಿದೆ.<br>
(ರೂ. ಕೋಟಿಗಳಲ್ಲಿ)
<table>
<tr><th>ಅನುಷ್ಠಾನ ಸಂಸ್ಥೆ</th><th>ಯೋಜನೆ</th><th>ಪಟ್ಟಣಗಳ ಸಂಖ್ಯೆ</th><th>ಅಂದಾಜು</th><th>ವೆಚ್ಚ</th><th>ಪೂರ್ಣಗೊಂಡ ಸಂಖ್ಯೆ</th><th>ಬಾಕಿ</th></tr>
<tr><td rowspan="3">KUID FC</td><td>KMRP</td><td>8</td><td>185.54</td><td>151.13</td><td>5</td><td>3</td></tr>
<tr><td>NKUSIP</td><td>17</td><td>998.64</td><td>850.00</td><td>7</td><td>10</td></tr>
<tr><td>KIUWMIP</td><td>6</td><td>542.69</td><td>157.00</td><td>0</td><td>6</td></tr>
<tr><td>KUWS & DB</td><td>UIDSSMT/ State Plan/ UIDST/ AMRUT</td><td>109</td><td>4693.78</td><td>2561.32</td><td>68</td><td>41</td></tr>
<tr><td colspan="2">ಒಟ್ಟು</td><td>140</td><td>6420.65</td><td>3719.45</td><td>80</td><td>60</td></tr>
</table>
ಮೇಲ್ಕಂಡಂತೆ ಒಳಚರಂಡಿ ವ್ಯವಸ್ಥೆಯನ್ನು ಕಲ್ಪಿಸಲು ರೂ. 6420.65 ಕೋಟಿಗಳನ್ನು ಬೃಹತ್ ಮೊತ್ತವನ್ನು ಹೂಡಿಕೆ ಮಾಡಲಾಗಿರುತ್ತದೆ. ಆದಾಗ್ಯೂ ಸಹ ಆರ್ಥಿಕ ಸಂಪನ್ಮೂಲಗಳನ್ನು ಆಧರಿಸಿ, ರಾಜ್ಯದ ಇತರೆ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಗೂ ವಿಸ್ತರಿಸಲು ಕ್ರಮವಹಿಸಲಾಗಿದೆ.<br>
ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಒಳಚರಂಡಿ ವ್ಯವಸ್ಥೆಯನ್ನು ಒಂದು ಬಾರಿಗೆ ಪೂರ್ಣ ಪ್ರಮಾಣದಲ್ಲಿ ಅನುಷ್ಠಾನಗೊಳಿಸಲು ಪ್ರಸಕ್ತ ದರದಲ್ಲಿ ಸೂಮಾರು ರೂ. 15000.00 ಕೋಟಿಗೂ ಹೆಚ್ಚು ಅನುದಾನದ ಅವಶ್ಯಕತೆ ಇರುತ್ತದೆ.<br><br>
ಈ ಹಿನ್ನೆಲೆಯಲ್ಲಿ 2017–19ನೇ ಸಾಲಿನಲ್ಲಿ ಕಲ್ಮಷಗಳ ತ್ಯಾಜ್ಯ ಸಂಸ್ಕರಣೆ ಮತ್ತು ನಿರ್ವಹಣೆಯ ಬಗ್ಗೆ ರಾಜ್ಯದ ನೀತಿ (State Faecal Sludge and</td>
</tr>
</table>

<table>
<tr><td></td><td></td><td></td><td></td><td>Septage Management (SFSSM) ಜಾರಿಗೆ ತರಲಾಗಿದ್ದು, 2018–19ನೇ ಸಾಲಿನಲ್ಲಿ 50 ಪಟ್ಟಣಗಳಲ್ಲಿ ಮಾನವ ತ್ಯಾಜ್ಯ ಕಲ್ಮಷಗಳ ಸಂಸ್ಕರಣೆ ಮಾಡಲು ಯೋಜನೆಯನ್ನು ರೂಪಿಸಲಾಗಿದ್ದು ಅನುದಾನ ಲಭ್ಯತೆಯನುಸಾರವಾಗಿ ರಾಜ್ಯದ ಎಲ್ಲಾ ಪಟ್ಟಣಗಳಲ್ಲಿ ಹಂತ ಹಂತವಾಗಿ ಸದರಿ ವ್ಯವಸ್ಥೆಯನ್ನು ವಿಸ್ತರಿಸಲಾಗುವುದು ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿದ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು.</td></tr>
<tr><td>32</td><td>4139<br>ಚು.ಗು.ಪ್ರ: 102<br>ಶ್ರೀ ರಘುನಾಥ್‌ರಾವ್ ಮಲ್ಕಾಪೂರೆ<br>ವಿಪನದಿ: 31.07.2012</td><td>ಬೀದರ್ ಜಿಲ್ಲೆಯ ಸ್ಥಳೀಯ ಸಂಸ್ಥೆಗಳಲ್ಲಿ ಖಾಲಿಯಿರುವ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ.</td><td>ಒಟ್ಟು 4956 ಹುದ್ದೆಗಳು ಖಾಲಿ ಇದ್ದು, 23 ಚೀಫ್ ಆಫೀಸರ್‌ಗಳನ್ನು ಕೆಪಿಎಸ್‌ಸಿ ಮುಖಾಂತರ ಭರ್ತಿ ಮಾಡಲಾಗಿದ್ದು, 1000 ಹುದ್ದೆಗಳನ್ನು Karnataka Examination Authority ಮುಖಾಂತರ ಭರ್ತಿ ಮಾಡಿ ಅಭಿವೃದ್ಧಿ ಕಾಮಗಾರಿಗಳನ್ನು ಮಾಡುವ ನಿಟ್ಟಿನಲ್ಲಿ ಮುಂದುವರೆಯುತ್ತೇವೆ ಎಂದು ಭರವಸೆ ಕೊಡುತ್ತೇನೆಂದು ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು ತಿಳಿಸಿದರು.</td><td>ದಿನಾಂಕ: 01.06.2018ರ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ,<br><br>1) ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಬೀದರ್ ಇವರು ದಿನಾಂಕ: 25.05.2018ರಂದು ಸಲ್ಲಿಸಿರುವ ಮಾಹಿತಿಯನ್ವಯ ಬೀದರ್ ಜಿಲ್ಲೆಯಲ್ಲಿ ಭರ್ತಿಯಾದ ಹಾಗೂ ಖಾಲಿ ಇರುವ ಹುದ್ದೆಗಳ ವಿವರ ಈ ಕೆಳಗಿನಂತಿದೆ:–<br><br>
<table>
<tr><th>ಕ್ರ.ಸಂ.</th><th>ವೃಂದ</th><th>ಮಂಜೂರಾದ ಹುದ್ದೆ</th><th>ಭರ್ತಿಯಾದ ಹುದ್ದೆ</th><th>ಖಾಲಿ ಹುದ್ದೆಗಳು</th><th>ಷರಾ</th></tr>
<tr><td>1</td><td>ಎ</td><td>06</td><td>04</td><td>02</td><td></td></tr>
<tr><td>2</td><td>ಬಿ</td><td>20</td><td>10</td><td>10</td><td></td></tr>
<tr><td>3</td><td>ಸಿ</td><td>330</td><td>88</td><td>242</td><td></td></tr>
<tr><td>4</td><td>ಡಿ</td><td>732</td><td>366</td><td>366</td><td></td></tr>
<tr><td colspan="2">ಒಟ್ಟು</td><td>1088</td><td>468</td><td>620</td><td></td></tr>
</table>
<br>ಗ್ರೂಪ್–‘ಎ’ ಹುದ್ದೆಗೆ ಸಂಬಂಧಿಸಿದಂತೆ 02 ಸೀನಿಯರ್ ಪ್ರೋಗ್ರಾಮರ್ ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇಲೆ ಜಿಲ್ಲಾಧಿಕಾರಿಗಳ ಕಛೇರಿಯಿಂದ ಭರ್ತಿ ಮಾಡಿಕೊಳ್ಳಲು ಕ್ರಮವಹಿಸಲಾಗಿದೆ.</td></tr>
</table>

| | | | | |
|---|---|---|---|---|
| | | | | ಹೈದ್ರಾಬಾದ್–ಕರ್ನಾಟಕದ ಪ್ರದೇಶದಲ್ಲಿನ ನೇರ ನೇಮಕಾತಿ ವಿಭಾಗದಲ್ಲಿನ ಗ್ರೂಪ್–ಸಿ ವೃಂದದ ಒಟ್ಟು 271 ಹುದ್ದೆಗಳನ್ನು ಭರ್ತಿ ಮಾಡಲು ಕರ್ನಾಟಕ ಲೋಕಸೇವಾ ಆಯೋಗಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿತ್ತು. ಕರ್ನಾಟಕ ಲೋಕಸೇವಾ ಆಯೋಗದಿಂದ ಈ ಪೈಕಿ ಈಗಾಗಲೇ 106 ಹುದ್ದೆಗಳನ್ನು ಭರ್ತಿ ಮಾಡಲಾಗಿದೆ. ಅವುಗಳಲ್ಲಿ 2 ಜನ ಕಿರಿಯ ಅಭಿಯಂತರರು, 1 ಲೆಕ್ಕಿಗರು, 1 ಪರಿಸರ ಅಭಿಯಂತರರು, 4 ಶೀಘ್ರಲಿಪಿಗಾರರು, 1 ಎಲೆಕ್ಟ್ರೀಷಿಯನ್ ಶ್ರೇಣಿ–1, ಕಿರಿಯ ಆರೋಗ್ಯ ನಿರೀಕ್ಷಕರು–4 ಒಟ್ಟು 13 ಹುದ್ದೆಗಳು ಬೀದರ್ ಜಿಲ್ಲೆಗೆ ಸೇರಿರುತ್ತವೆ ಉಳಿದ 165 ಹುದ್ದೆಗಳಿಗೆ ಕೆ.ಪಿ.ಎಸ್.ಸಿ. ಯಿಂದ ಆಯ್ದೆ ಪಟ್ಟಿ ಬಂದ ಕೂಡಲೇ ಬೀದರ್ ಜಿಲ್ಲೆ ಸೇರಿದಂತ ಹೈ–ಕ ವಿಭಾಗದಿಂದ ಹುದ್ದೆಗಳ ಭರ್ತಿ ಮಾಡಲು ಕ್ರಮವಹಿಸಲಾಗುವುದು.<br><br>ಗ್ರೂಪ್–'ಬಿ' ವೃಂದದ ಹುದ್ದೆಗಳನ್ನು ಭರ್ತಿ ಮಾಡಲು ಹುದ್ದೆಗಳಾದ ಸಹಾಯಕ ಅಭಿಯಂತರರು–2, ಪರಿಸರ ಅಭಿಯಂತರರು 10, ಮುಖ್ಯಾಧಿಕಾರಿ ಶ್ರೇಣಿ–1ರ–7 ಒಟ್ಟು 19 ಹುದ್ದೆಗಳ ಪ್ರಸ್ತವಾನೆ ಲೋಕಸೇವಾ ಆಯೋಗದಲ್ಲಿ ಬಾಕಿ ಇದ್ದು, ಅಯ್ದೆ ಪಟ್ಟಿ ಬಂದ ಕೂಡಲೇ ಹುದ್ದೆಗಳನ್ನು ಭರ್ತಿ ಮಾಡಲಾಗುವುದು ಹಾಗೂ ಬೀದರ್ ಜಿಲ್ಲೆಯಲ್ಲೂ ಖಾಲಿ ಇರುವ 03 ಸಿ.ಎ.ಓ ಹುದ್ದೆಗಳನ್ನು ಕೌಶಲ್ಯಾಭಿವೃದ್ಧಿ ಇಲಾಖೆಗೆ ಹಸ್ತಾಂತರಿಸಲು ಆದೇಶವಾಗಿದ್ದು, ಸದರಿ ಹುದ್ದೆಯನ್ನು ಭರ್ತಿ ಮಾಡಲು ಅವಕಾಶವಿರುವುದಿಲ್ಲ. ಉಳಿದ ಹುದ್ದೆಗಳನ್ನು ಮುಂಬಡ್ತಿ ಮೂಲಕ ಭರ್ತಿ ಮಾಡಲು ಕ್ರಮ ವಹಿಸಲಾಗುವುದು.<br><br>ಗ್ರೂಪ್ 'ಸಿ' ಹುದ್ದೆಗಳಾದ ಮುಖ್ಯಾಧಿಕಾರಿ ಶ್ರೇಣಿ–2ರ–7, ಲೆಕ್ಕಿಗರು–18, ಕಿರಿಯ ಅಭಿಯಂತರರು–39, ಪ್ರ.ದ.ಸ–15, ಪ್ರ.ದ.ಕಂ.ನಿ–21, ಕಿ.ಆ.ನಿ–32, ಎಲೆಕ್ಟ್ರೀಷಿಯನ್ ಶ್ರೇಣಿ–1ರ–2, ದ್ವಿ.ದ.ಸ–14, ಕರವಸೂಲಿಗಾರ–08, ಹುದ್ದೆಗಳ ಒಟ್ಟು 156 ಹುದ್ದೆಗಳ ಪ್ರಸ್ತಾವನೆ ಲೋಕಸೇವಾ ಆಯೋಗದಲ್ಲಿ ಬಾಕಿ ಇದ್ದು ಆಯ್ಕೆ ಪಟ್ಟಿ ಬಂದ ಕೂಡಲೇ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ವಹಿಸಲಾಗುವುದು ಹಾಗೂ ಸಮುದಾಯ ಸಂಘಟಕರು ಹುದ್ದೆಯನ್ನು ಕೌಶಲ್ಯಾಭಿವೃದ್ಧಿ ಇಲಾಖೆಗೆ ಹಸ್ತಾಂತರಿಸಲು ಆದೇಶವಾಗಿದ್ದು, ಬೀದರ್ ಜಿಲ್ಲೆಯಲ್ಲಿ ಖಾಲಿ ಇರುವ 06 ಹುದ್ದೆಗಳನ್ನು ಭರ್ತಿ ಮಾಡಲು |

| | | | | |
|---|---|---|---|---|
| | | | | ಅವಕಾಶವಾಗಿರುವುದಿಲ್ಲ ಮತ್ತು ಆರ್ಥಿಕ ಇಲಾಖೆಯ ನಿರ್ದೇಶನದಂತೆ ನೀರು ಸರಬರಾಜು ಶಾಖೆಗೆ ಸಂಬಂಧಿಸಿದ ಹುದ್ದೆಗಳು ಹಾಗೂ ವಾಹನ ಚಾಲಕರ ಹುದ್ದೆಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ಪಡೆಯಲು ಸೂಚಿಸಲಾಗಿದೆ. ಅದರಂತೆ ಬೀದರ್ ಜಿಲ್ಲೆಯಲ್ಲಿ ಖಾಲಿ ಇರುವ ವಾಟರ್ ಸಪ್ಲೈ ಆಪರೇಟರ್–27, ವಾಹನ ಚಾಲಕರು–19, ಪ್ಲಂಬರ್ಸ್–06 ಮತ್ತು ಲ್ಯಾಬ್ ಟೆಕ್ನೀಷಿಯನ್–02 ಒಟ್ಟು 54 ಹುದ್ದೆಗಳನ್ನು ಹೊರಗುತ್ತಿಗೆ ಆಧಾರದಲ್ಲಿ ಪಡೆಯಲಾಗಿದೆ ಹಾಗೂ ಉಳಿದ ಹುದ್ದೆಗಳನ್ನು ಮುಂಬಡ್ತಿ ಮೂಲಕ ಭರ್ತಿ ಮಾಡಲಾಗುವುದು.<br>ಬೀದರ್ ಜಿಲ್ಲೆಯ ಗ್ರೂಪ್–"ಡಿ" ಹುದ್ದೆಗಳಾದ ಪೌರಕಾರ್ಮಿಕರ ಹುದ್ದೆಗಳನ್ನು 700.01 ಜನಸಂಖ್ಯೆ ಮತ್ತು ಪೌರಕಾರ್ಮಿಕರ ಅನುಪಾತದಂತೆ ಪೌರಕಾರ್ಮಿಕರ 311 ಹುದ್ದೆಗಳನ್ನು ಪೌರಕಾರ್ಮಿಕರ ವಿಶೇಷ ನೇಮಕಾತಿ ನಿಯಮಗಳು 2018ರ ನಿಯಮಗಳ ರೀತ್ಯಾ ಭರ್ತಿ ಮಾಡಲು ಜಿಲ್ಲಾಧಿಕಾರಿಗಳ ಹಂತದಲ್ಲಿ ಅಧಿಸೂಚನೆ ಹೊರಡಿಸಲಾಗಿದೆ. ಉಳಿದ ಹುದ್ದೆಗಳನ್ನು ಜಿಲ್ಲಾಧಿಕಾರಿಗಳ ಹಂತದಲ್ಲಿ ಭರ್ತಿಗೆ ಕ್ರಮವಹಿಸಲಾಗುತ್ತದೆ ಎಂದು ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯರವರು ತಿಳಿಸಿರುತ್ತಾರೆ.<br>ಸರ್ಕಾರದ ಆದೇಶ ಸಂಖ್ಯೆ:ನಅಇ 106 ಎಂಎಲ್ಆರ್ 2016, ದಿನಾಂಕ: 28.10.2016ರಲ್ಲಿ ಖಾಲಿ ಇರುವ ಕಿರಿಯ ಅಭಿಯಂತರರ ಹುದ್ದೆಗಳನ್ನು ಯೋಜನಾ ನಿರ್ವಹಣಾ ಸಮಾಲೋಚಕರ (ಪಿಎಂಸಿ) ಮುಖಾಂತರ ಅಥವಾ ನಿವೃತ್ತ ಅಭಿಯಂತರರ ಮುಖಾಂತರ ತಾತ್ಕಾಲಿಕವಾಗಿ ನೇಮಿಸಿಕೊಳ್ಳಲು ಜಿಲ್ಲಾಧಿಕಾರಿಗಳಿಗೆ ನಿರ್ದೇಶಿಸಲಾಗಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿದ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |
| 33 | 4409<br>ಚು.ರ.ಪ್ರ: 255<br>ಶ್ರೀ ಮಹಾಂತೇಶ್ ಶಿವಾನಂದ ಕೌಜಲಗಿ<br>ವಿಪನದಿ: 16.07.2013 | ಬೆಳಗಾವಿ ಜಿಲ್ಲೆ, ಬೈಲಹೊಂಗಲ ನಗರದಲ್ಲಿ ಒಳಚರಂಡಿ ಕಾಮಗಾರಿಗಳನ್ನು ಕೈಗೊಳ್ಳುವ ಬಗ್ಗೆ. | ಈ ಕಾಮಗಾರಿ ನಿರ್ವಹಿಸಲು ಎರಡನೇ ಬಾರಿಗೆ ದಿ:04.06.2013 ರಲ್ಲಿ ಟೆಂಡರ್ ಆಹ್ವಾನಿಸಲಾಗಿದ್ದು, ಟೆಂಡರ್ ಸಲ್ಲಿಸುವ ದಿ:13.8.2013 ಅಗಿರುತ್ತದೆ. | ದಿನಾಂಕ: 01.06.2018ರ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ: ಬೈಲಹೊಂಗಲ ಪಟ್ಟಣದ ಒಳಚರಂಡಿ ಯೋಜನೆಯ ಕಾಮಗಾರಿಯನ್ನು ಮೆ: ಇ.ಪಿ.ಐ.ಎಲ್. ಚೆನ್ನೈ ಇವರಿಗೆ ಗುತ್ತಿಗೆ ಕರಾರು ಸಂಖ್ಯೆ: 21/2014–15 ದಿನಾಂಕ: 25.06.2014 ರಂದು 24 ತಿಂಗಳ ಕಾಲಾವಧಿ ನೀಡಿ ವಹಿಸಿಕೊಡಲಾಗಿರುತ್ತದೆ. ಸದರಿ ಗುತ್ತಿಗೆಯ ಸಮಯವು ದಿನಾಂಕ: 24.06.2016ಕ್ಕೆ ಪೂರ್ಣಗೊಂಡಿದ ಯೋಜನೆಯನ್ನು ದಿನಾಂಕ: 18.07.2017 ರಂದು ಭಾಗಶ: ಚಾಲನೆ |

| | | | | |
|---|---|---|---|---|
| | | | ಗುತ್ತಿಗೆದಾರರನ್ನು ನೇಮಿಸಿದ 24 ತಿಂಗಳಲ್ಲಿ ಈ ಯೋಜನೆಯನ್ನು ಪೂರ್ಣಗೊಳಿಸಲಾಗುವುದು ಎಂದು ಮಾನ್ಯ ನಗರಾಭಿವೃದ್ಧಿ ಸಚಿವರು ತಿಳಿಸಿದರು. | ಮಾಡಲಾಗಿದೆ. ಸ್ಥಳೀಯ ಸಂಸ್ಥೆಯು ವೆಟ್‌ವೆಲ್‌ಗಳ ಸ್ಥಳವನ್ನು ವಿಳಂಬವಾಗಿ ಹಸ್ತಾಂತರಿಸಿರುವುದರಿಂದ ಹಾಗೂ ಔಟ್ ಫಾಲ್ ಸಿವರ್ ಪೈಪ್ ಹಾಕುವ ಮಾರ್ಗದಲ್ಲಿ ಸ್ಥಳೀಯ ರೈತರು ಒತ್ತುವರಿ ಮಾಡಿ, ಅಡ್ಡಪಡಿಸಿದ್ದ ಕಾರಣ, ಔಟ್‌ಫಾಲ್, ಸೀವರ್ ಪೈಪ್‌ನ್ನು ಅಳವಡಿಸುವ ಕಾಮಗಾರಿ ವಿಳಂಬವಾಗಿದ್ದು, ಜನವರಿ, 2018 ರ ಅಂತ್ಯದವರೆಗೆ ಕಾಮಗಾರಿಯನ್ನು ಸಂಪೂರ್ಣವಾಗಿ ಮುಗಿಸಿ, ಚಾಲನೆಗೊಳಿಸಲಾಗಿದೆ ಎಂದು ದಿನಾಂಕ: 24.05.2018ರ ಪತ್ರದಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿರವರು ವರದಿ ಸಲ್ಲಿಸಿರುತ್ತಾರೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿದ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |
| 34 | 4410<br>ಚು.ರ.ಪ್ರ: 279<br>ಶ್ರೀ ಬಿ. ರಾಮಕೃಷ್ಣ<br>ವಿಪನದಿ: 16.07.2013 | ಮಂಡ್ಯ ನಗರಸಭೆಗೆ ಸೇರ್ಪಡೆ ಯಾಗಿರುವ ಪ್ರದೇಶಗಳಲ್ಲಿ ಯು.ಜಿ.ಡಿ ಕಾಮಗಾರಿಗಳ ಬಗ್ಗೆ. | ಎರಡನೇ ಹಂತದ ಒಳಚರಂಡಿ ಯೋಜನೆಯಡಿ ಮಂಡ್ಯ ನಗರಸಭೆ ವ್ಯಾಪ್ತಿಯಲ್ಲಿ ಒಳಚರಂಡಿ ವ್ಯವಸ್ಥೆ ಕಲ್ಪಿಸಲು ಯೋಜಿಸಲಾಗಿದೆ. ಕಾಮಗಾರಿ ಪ್ರಗತಿಯಲ್ಲಿದೆ. ಡಿಸೆಂಬರ್ 2013ರ ಅಂತ್ಯಕ್ಕೆ ಯೋಜನೆ ಪೂರ್ಣಗೊಳಿಸಲಾಗುವುದು ಎಂದು ಮಾನ್ಯ ನಗರಾಭಿವೃದ್ಧಿ ಸಚಿವರು ತಿಳಿಸಿದರು. | ದಿನಾಂಕ: 01.06.2018ರ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ಎರಡನೇ ಹಂತದ ಒಳಚರಂಡಿ ಯೋಜನೆಯಡಿ ಮಂಡ್ಯ ನಗರಸಭೆ ವ್ಯಾಪ್ತಿಯಲ್ಲಿ 92 ಕಿ.ಮೀ. ಉದ್ದದ ಸೀವರ್ ಕೊಳವೆ ಮಾರ್ಗ ಅಳವಡಿಸಿ, ಚಿಕ್ಕೇಗೌಡನ ದೊಡ್ಡಿ ಹಾಗೂ ಗುತ್ತಲು ಪ್ರದೇಶಗಳಲ್ಲಿ 9.62 ಮತ್ತು 8.9 ಎಂ.ಎಲ್.ಡಿ. ಸಾಮರ್ಥ್ಯದ ಮಲಿನ ನೀರು ಶುದ್ಧೀಕರಣ ಘಟಕಗಳನ್ನು ನಿರ್ಮಿಸಿ ಬಳಕೆಗೆ ತರಲಾಗಿದೆ. ಮಂಡ್ಯ ನಗರದ ಬಿಟ್ಟು ಹೋದ ಪ್ರದೇಶಗಳಿಗೆ ಒಳಚರಂಡಿ ವ್ಯವಸ್ಥೆ ಕಲ್ಪಿಸುವುದು. ಮೈಷುಗರ್ ವ್ಯಾಪ್ತಿಯಲ್ಲಿ ಒಂದು ವೆಟ್‌ವೆಲ್ ನಿರ್ಮಿಸುವುದು. ಮಾರುತಿನಗರದಲ್ಲಿನ ವೆಟ್‌ವೆಲ್ ಬಳಿ ಜನರೇಟರ್ ರೂಂ ನಿರ್ಮಿಸುವುದು ಹಾಗೂ ಮರಿಗೌಡ ಬಡಾವಣೆ ಬಳಿಯ ಟ್ರಂಕ್‌ಸೀವರ್ ಲಿಂಕ್ ಲೈನ್ ಅಳವಡಿಸುವ ಕಾಮಗಾರಿಗಳಿಗೆ ಟೆಂಡರ್ ಅವಧಿಯೊಳಗೆ ಜಾಗವನ್ನು ಹಸ್ತಾಂತರಿಸದ ಕಾರಣ ಎರಡನೇ ಹಂತದ ಯೋಜನೆಯಡಿ ಕಾಮಗಾಗಿ ಕೈಗೊಳ್ಳಲಾಗಲಿಲ್ಲ.<br><br>ಆದ್ದರಿಂದ ಪ್ರಸ್ತುತ ಅಮೃತ್ ಯೋಜನೆಯಡಿ ಅನುಮೋದನೆಯಾಗಿರುವ ರೂ. 6.00 ಕೋಟಿಗಳ ಅಂದಾಜಿನಲ್ಲಿ ಮಂಡ್ಯ ನಗರದಲ್ಲಿ ಬಿಟ್ಟು ಹೋದ ಪ್ರದೇಶಗಳಲ್ಲಿ ಹಾಗೂ ಹೊಸ ಬಡಾವಣೆಗಳಲ್ಲಿ ಒಳಚರಂಡಿ ಕೊಳವೆಗಳನ್ನು |

| | | | | |
|---|---|---|---|---|
| | | | | ಅಳವಡಿವುದು ಹಾಗೂ ಎರಡನೇ ಹಂತದ ಒಳಚರಂಡಿ ಯೋಜನೆಯಡಿ ಬಿಟ್ಟು ಹೋದ ಕಾಮಗಾರಿಗಳಾದ ಮೈಷುಗರ್ ವ್ಯಾಪ್ತಿಯಲ್ಲಿ ಒಂದು ವೆಟ್‌ವೆಲ್ ನಿರ್ಮಿಸುವುದು, ಮಾರುತಿನಗರದಲ್ಲಿ ಇರುವ ವೆಟ್‌ವೆಲ್ ಬಳಿ ಜನರೇಟರ್ ರೂಂ ನಿರ್ಮಿಸುವುದು. ಔಟ್ ಫಾಲ್ ಕೊಳವೆ ಮಾರ್ಗಗಳ ದುರಸ್ಥಿ ಪಡಿಸುವುದು. ಹಾಗೂ ವೆಟ್‌ವೆಲ್‌ಗಳಿಗೆ ಪಂಪುಗಳನ್ನು ಅಳವಡಿಸಲು ಅನುವು ಮಾಡಲಾಗಿದೆ. ಹಾಗೂ ಮೈಷುಗರ್ ಕಾರ್ಖಾನೆಯ ವ್ಯಾಪ್ತಿಯಲ್ಲಿ ಬರುವ ಕರಾಬ್ ಜಾಗದಲ್ಲಿ ಒಂದು ವೆಟ್‌ವೆಲ್ ನಿರ್ಮಿಸುವುದು, ಮಾರುತಿನಗರದಲ್ಲಿ ಹಾಲಿಯಿರುವ ವೆಟ್‌ವೆಲ್ ಬಳಿ ಜನರೇಟರ್ ರೂಂ ನಿರ್ಮಿಸಲು ನಗರಸಭೆಯವರು ಸ್ಥಳವನ್ನು ಹಸ್ತಾಂತರಿಸುತ್ತಾರೆ ಹಾಗೂ ಮರಿಗೌಡ ಬಡಾವಣೆ ಬಳಿಯ ಟ್ರಂಕ್‌ಸೀವರ್ ಲಿಂಕ್ ಲೈನ್ ಅಳವಡಿಸುವ ಸಮಯದಲ್ಲಿ ರೆವಿನ್ಯೂ ಇಲಾಖೆಯವರು ಬೌಂಡರಿ ಅಳವಡಿಕೊಡಲಾಗುವುದೆಂದು ತಿಳಿಸಿರುತ್ತಾರೆ.. ಸದರಿ ಯೋಜನೆಯಡಿ ಕಾಮಗಾರಿಗಳನ್ನು ಕೈಗೊಳ್ಳಲು ಈಗಾಗಲೇ ಟೆಂಡರ್ ಕರೆಯಲಾಗಿದ್ದು, ಡಿಸೆಂಬರ್, 2018 ರ ಒಳಗೆ ಪೂರ್ಣಗೊಳಿಸಲಾಗುವುದು ಎಂದು ದಿನಾಂಕ: 24.05.2018ರ ಪತ್ರದಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ರವರು ವರದಿ ಸಲ್ಲಿಸಿರುತ್ತಾರೆಯೆಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿದ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |
| 35. | 4413<br>ಚು.ರ.ಪ್ರ. 757<br>ಶ್ರೀ ಎಂ.ಆರ್. ಹುಲಿನಾಯ್ಕರ್<br>ವಿಪನದಿ: 25.07.2013 | ತುಮಕೂರು ನಗರದ 1, 2 ಮತ್ತು 3ನೇ ವಾರ್ಡ್‌ನಲ್ಲಿ ಯಾವುದೇ ಸಾರ್ವಜನಿಕ ಬಸ್ ತಂಗುದಾಣ ನಿರ್ಮಿಸದಿರುವ ಬಗ್ಗೆ. | ಮೊದಲ ಹಂತದಲ್ಲಿ ತುಮಕೂರು ನಗರದ ಬಿ.ಹೆಚ್. ರಸ್ತೆ ಮತ್ತು ಇತರೆ ಪ್ರಮುಖ ರಸ್ತೆಗಳಲ್ಲಿ ಪ್ರಯಾಣಿಕರ ತಂಗುದಾಣಗಳನ್ನು ನಿರ್ಮಿಸಲಾಗಿದೆ. ಪ್ರಸ್ತುತ ನಗರದ ಇತರೆ ಭಾಗಗಳಲ್ಲಿಯೂ ಪ್ರಯಾಣಿಕರ ತಂಗುದಾಣಗಳ | ದಿನಾಂಕ: 01.06.2018ರ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ತುಮಕೂರು ನಗರದ ಬಿ.ಹೆಚ್.ರಸ್ತೆ ಮತ್ತು ಇತರೆ ಪ್ರಮುಖ ರಸ್ತೆಗಳಲ್ಲಿ ಪ್ರಯಾಣಿಕರ ತಂಗುದಾಣಗಳನ್ನು ನಿರ್ಮಿಸಲಾಗಿದೆ. ಪ್ರಸ್ತುತ ನಗರದ ಇತರೆ ಭಾಗಗಳಲ್ಲಿಯೂ ಪ್ರಯಾಣಿಕರ ತಂಗುದಾಣಗಳ ನಿರ್ಮಾಣಕ್ಕೆ ಕ್ರಮ ಕೈಗೊಳ್ಳಲಾಗಿರುತ್ತದೆ.<br><br>ಅದರಂತೆ 1ನೇ ವಾರ್ಡ್‌ನಲ್ಲಿ ಶ್ರೀದೇವಿ ಕಾಲೇಜು ಮುಂಭಾಗ ಹಾಗೂ 2ನೇ ವಾರ್ಡ್‌ನಲ್ಲಿ ಶಿರಾ ಗೇಟ್ ಕನಕ ವೃತ್ತದ ಬಳಿ ಮಧುಗಿರಿಗೆ ಹೋಗುವ ರಸ್ತೆಯಲ್ಲಿ ಬಸ್ ತಂಗುದಾಣ ನಿರ್ಮಿಸಲಾಗಿದೆ. |

| | | | | |
|---|---|---|---|---|
| | | | ನಿರ್ಮಾಣಕ್ಕೆ ಕ್ರಮ ಕೈಗೊಳ್ಳಲಾಗಿರುತ್ತದೆ. ಅದರಂತೆ 1ನೇ ವಾರ್ಡ್‌ನಲ್ಲಿ ಶ್ರೀದೇವಿ ಕಾಲೇಜು ಮುಂಭಾಗ ಹಾಗೂ 3ನೇ ವಾರ್ಡ್‌ನಲ್ಲಿ ಶಿರಾ ಗೇಟ್ ಕನಕ ವೃತ್ತದ ಬಳಿ ಬಸ್ ತಂಗುದಾಣ ನಿರ್ಮಿಸುವ ವಿಷಯವು ತುಮಕೂರು ನಗರಾಭಿವೃದ್ಧಿ ಪ್ರಾಧಿಕಾರದ ಪರಿಶೀಲನೆಯಲ್ಲಿದೆ ಎಂದು ಮಾನ್ಯ ನಗರಾಭಿವೃದ್ಧಿ ಸಚಿವರು ತಿಳಿಸಿದರು. | 3ನೇ ವಾರ್ಡ್‌ನ ಶಿರಾಗೇಟ್ ಕನಕ ವೃತ್ತದ ಬಳಿ ಶಿರಾಗೆ ಹೋಗುವ ರಸ್ತೆ (ಹಳೆ ಎನ್ ಹೆಚ್–4 ರಸ್ತೆ)ಯನ್ನು ರಾಷ್ಟ್ರೀಯ ಹೆದ್ದಾರಿ ಉಪವಿಭಾಗ, ತುಮಕೂರುರವರು ರಸ್ತೆ ಆಗಲೀಕರಣ ಮಾಡಿ ರಸ್ತೆ ಅಭಿವೃದ್ಧಿಪಡಿಸುವುದರಿಂದ, ಈ ಕಾಮಗಾರಿಯು ಪೂರ್ಣಗೊಂಡ ನಂತರ ಬಸ್ ತಂಗುದಾಣವನ್ನು ನಿರ್ಮಿಸಲು ಕ್ರಮಕೈಗೊಳ್ಳಲಾವುದು ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿದ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |
| 36 | 4414<br>ಚು.ಗು.ಪ್ರ. 33<br>ಶ್ರೀ<br>ಕೆ.ವಿ.ನಾರಾಯಣಸ್ವಾಮಿ<br>ವಿಪನದಿ: 26.11.2013 | ಹಾಸನ ಜಿಲ್ಲೆ, ಅರಕಲಗೂಡು ತಾಲ್ಲೂಕು, ಕೊಣನೂರು ಗ್ರಾಮ ಪಂಚಾಯಿತಿಯನ್ನು ಪಟ್ಟಣ ಪಂಚಾಯತಿಯನ್ನಾಗಿ ಮೇಲ್ದರ್ಜೇಗೇರಿಸುವ ಬಗ್ಗೆ | ನಮ್ಮ ಮಾಹಿತಿಯ ಪ್ರಕಾರ ಕೊಣನೂರು ಗ್ರಾಮದ ಜನಸಂಖ್ಯೆ ಹತ್ತು ಸಾವಿರ ಇಲ್ಲ. ಈ ಕಂಡಿಷನ್ ಕಡ್ಡಾಯ ಇದೆ. ತಾವು ಹೇಳುತ್ತಿರುವುದರಿಂದ ಇನ್ನೊಮ್ಮೆ ನಾನು ಪರಿಶೀಲಿಸುತ್ತೇನೆ ಎಂದು ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ, ಹಜ್ ಮತ್ತು ವಕ್ಫ್ ಸಚಿವರು ತಿಳಿಸಿದರು. | ದಿನಾಂಕ: 01.06.2018ರ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ: 2011ರ ಜನಗಣತಿಯನುಸಾರ ಹಾಸನ ಜಿಲ್ಲೆ ಅರಕಲಗೂಡು ತಾಲ್ಲೂಕು ಕೊಣನೂರು ಗ್ರಾಮದ ಜನಸಂಖ್ಯೆಯು 10000ಕ್ಕಿಂತ ಕಡಿಮೆ ಅಂದರೆ 8032 ಇರುತ್ತದೆ. ಆದುದರಿಂದ ಸದರಿ ಗ್ರಾಮಕ್ಕೆ ಕರ್ನಾಟಕ ಪೌರಸಭೆಗಳ ಕಾಯ್ದೆ, 1964ರನ್ವಯ ಪಟ್ಟಣ ಪಂಚಾಯತಿಯನ್ನು ಸ್ಥಾಪಿಸಲು ಅವಕಾಶವಿರುವುದಿಲ್ಲ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿದ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |

<table>
<tr>
<td>37</td>
<td>4415<br>ಚು.ರ.ಪ್ರ. 32<br>ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ<br>ವಿಪನದಿ 26.11.2013</td>
<td>ಬೆಳಗಾವಿ ಜಿಲ್ಲೆಯ ದೊಡ್ಡ ಗ್ರಾಮ ಪಂಚಾಯತ್‌ಗಳಾದ ಹಾರುಗೇರಿ, ಕಟಕೋಳ, ಮುನವಳ್ಳಿ ಹಾಗೂ ಇನ್ನಿತರ ದೊಡ್ಡ ಪಂಚಾಯತ್ ಗಳನ್ನು ಪಟ್ಟಣ ಪಂಚಾಯತಿಗಳನ್ನಾಗಿ ಮೇಲ್ದರ್ಜೆಗೇರಿಸುವ ಬಗ್ಗೆ.</td>
<td>ಪಟ್ಟಣ ಪಂಚಾಯಿತಿಯನ್ನು ರಚಿಸಲು ಜಿಲ್ಲಾಧಿಕಾರಿಗಳಿಂದ ಪ್ರಸ್ತಾವನೆ ಪಡೆಯಲಾಗುತ್ತಿದ್ದು, ಕರ್ನಾಟಕ ಪುರಸಭೆಗಳ ಕಾಯ್ದೆ 1964ರ ಕಲಂ 349, 350, 351 ಹಾಗೂ 352 ರನ್ವಯ ಪರಿಶೀಲಿಸಿ ಸೂಕ್ತ ಕ್ರಮ ಜರುಗಿಸಲಾಗುವುದು ಎಂದು ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳು ಹಾಗೂ ಅಲ್ಪಸಂಖ್ಯಾತರ ಕಲ್ಯಾಣ, ಹಜ್ ಮತ್ತು ವಕ್ಫ್ ಸಚಿವರು ತಿಳಿಸಿದರು.</td>
<td>ದಿನಾಂಕ: 01.06.2018ರ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, 2011ರ ಜನಗಣತಿಯನ್ವಯ ಹಾಗೂ ಕರ್ನಾಟಕ ಪುರಸಭೆಗಳ ಕಾಯ್ದೆ 1964 ರ ಕಲಂ 349, 351 ಹಾಗೂ 355 (ಬಿ) ರನ್ವಯ ಪರಿಶೀಲಿಸಿ (ಅರ್ಹವಿರುವ 15000ಕ್ಕಿಂತ ಹೆಚ್ಚು ಜನಸಂಖ್ಯೆಯನ್ನು ಹೊಂದಿರುವ ಗ್ರಾಮ ಪಂಚಾಯಿತಿಗಳನ್ನು) ಮೇಲ್ದರ್ಜೆಗೇರಿಸಲು ದಿನಾಂಕ: 19.03.2015ರಂದು ನಡೆದ ಸಚಿವ ಸಂಪುಟ ಅನುಮೋದನೆ ನೀಡಲಾಗಿರುತ್ತದೆ.<br><br>ಮೇಲ್ಕಂಡಂತೆ ಬೆಳಗಾವಿ ಜಿಲ್ಲೆಯಲ್ಲಿ ಈ ಕೆಳಕಂಡ ಗ್ರಾಮ ಪಂಚಾಯಿತಿಗಳನ್ನು ಪಟ್ಟಣ ಪಂಚಾಯಿತಿಗಳನ್ನಾಗಿ ಮೇಲ್ದರ್ಜೆಗೇರಿಸಲಾಗಿದೆ.
<table>
<tr><th>ಕ್ರಮ ಸಂಖ್ಯೆ</th><th>ಹೆಸರು</th><th>ಮೇಲ್ದರ್ಜೆಗೇರಿಸಲಾದ ದಿನಾಂಕ</th></tr>
<tr><td>01</td><td>ಹಾರೂಗೇರಿ</td><td>13.08.2015</td></tr>
<tr><td>02</td><td>ಕಂಕನವಾಡಿ</td><td>22.06.2015</td></tr>
<tr><td>03</td><td>ಎಂ.ಕೆ. ಹುಬ್ಬಳ್ಳಿ</td><td>23.06.2015</td></tr>
<tr><td>04</td><td>ನಾಗನೂರ</td><td>24.06.2015</td></tr>
<tr><td>05</td><td>ಚಿಂಚಲಿ</td><td>20.06.2015</td></tr>
<tr><td>06</td><td>ಮಲ್ಲಾಪುರ ಪಿ.ಜಿ.</td><td>23.06.2015</td></tr>
<tr><td>07</td><td>ಯಕ್ಸಾಂಬ</td><td>22.06.2015</td></tr>
<tr><td>08</td><td>ಚೆನ್ನಮ್ಮನ ಕಿತ್ತೂರ</td><td>23.06.2015</td></tr>
<tr><td>09</td><td>ಕಲ್ಲೋಳಿ</td><td>23.06.2015</td></tr>
<tr><td>10</td><td>ಐನಾಪುರ</td><td>20.06.2015</td></tr>
<tr><td>11</td><td>ಶೇಡಬಾಳ</td><td>22.06.2015</td></tr>
<tr><td>12</td><td>ಕಬ್ಬೂರ</td><td>07.07.2015</td></tr>
<tr><td>13</td><td>ಅರಂಭಾವಿ</td><td>03.10.2015</td></tr>
<tr><td>14</td><td>ಬೋರಗಾಂವ</td><td>05.10.2015</td></tr>
</table>
</td>
</tr>
</table>

<table>
<tr><td></td><td></td><td></td><td></td><td>ಹಾಗೂ ಈ ಕೆಳಕಂಡ ಗ್ರಾಮಗಳನ್ನು ಪುರಸಭೆಗಳನ್ನಾಗಿ ಮೇಲ್ದರ್ಜೆಗೇರಿಸಲಾಗಿದೆ.<br><br><table><tr><th>ಕ್ರಮ ಸಂಖ್ಯೆ</th><th>ಹೆಸರು</th><th>ಮೇಲ್ದರ್ಜೆಗೇರಿಸಲಾದ ದಿನಾಂಕ</th></tr><tr><td>01</td><td>ಮುಗಳಖೋಡ</td><td>23.06.2015</td></tr><tr><td>02</td><td>ಮುನವಳ್ಳಿ</td><td>25.06.2015</td></tr><tr><td>03</td><td>ಉಗಾರ ಖುರ್ದಾ</td><td>25.06.2015</td></tr></table><br>ಮೇಲ್ಕಂಡಂತೆ ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿದ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು.</td></tr>
<tr><td>38</td><td>4416<br>ಚು.ರ.ಪ್ರ. 86<br>ಶ್ರೀಮತಿ ತಾರಾಅನುರಾಧ<br>ವಿಪನದಿ 26.11.2013</td><td>ಕುಷ್ಟಗಿ ಸಾರ್ವಜನಿಕ ಆಸ್ಪತ್ರೆ ಮುಂಭಾಗದ ಲೋಕೋಪಯೋಗಿ ಜಾಗದಲ್ಲಿ ಅನಧಿಕೃತ ಮಳಿಗೆ ನಿರ್ಮಾಣಗೊಂಡಿರುವುದ ರಿಂದ ಆಸ್ಪತ್ರೆಯ ಸುತ್ತಮುತ್ತಲಿನ ಪರಿಸರವು ಕಲುಷಿತಗೊಂಡು ರೋಗರುಜಿನಗಳು ಹೆಚ್ಚಾಗಿರುವ ಬಗ್ಗೆ</td><td>ಅನಧಿಕೃತ ಶೆಡ್ಡುಗಳನ್ನು ತೆರವುಗೊಳಿಸಲು ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದು ಎಂದು ಮಾನ್ಯ ಪೌರಾಡಳಿತ ಮತ್ತು ಸ್ಥಳೀಯ ಸಂಸ್ಥೆಗಳು ಸಾರ್ವಜನಿಕ ಉದ್ದಿಮೆಗಳು, ಅಲ್ಪಸಂಖ್ಯಾತರ ಕಲ್ಯಾಣ ಹಾಗೂ ಹಜ್ ಮತ್ತು ವಕ್ಫ್ ಸಚಿವರು ತಿಳಿಸಿದರು.</td><td>ದಿನಾಂಕ: 01.06.2018ರ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ಕುಷ್ಟಗಿ ಪಟ್ಟಣದ ಸಾರ್ವಜನಿಕ ಆಸ್ಪತ್ರೆ ಮುಂಭಾಗ ಲೋಕೋಪಯೋಗಿ ಇಲಾಖೆಗೆ ಸಂಬಂಧಿಸಿದ ಜಾಗದಲ್ಲಿ ಅನಧಿಕೃತವಾಗಿ ಮಳಿಗೆ ನಿರ್ಮಾಣಗೊಂಡಿರುತ್ತದೆ.<br><br>2016–17ನೇ ಸಾಲಿನಲ್ಲಿ 14ನೇ ಹಣಕಾಸು ಜನರಲ್ ಬೇಸಿಕ್ ಗ್ರ್ಯಾಂಟ್‌ನಲ್ಲಿ ರೂ. 10.82 ಲಕ್ಷಗಳಿಗೆ ಪಾದಚಾರಿ ರಸ್ತೆ ನಿರ್ಮಾಣಕ್ಕಾಗಿ ಟೆಂಡರ್ ಕರೆಯಲಾಗಿದ್ದು, ಸದರಿ ಕಾಮಗಾರಿ ಪ್ರಾರಂಭಿಸಲು ಅನಧಿಕೃತವಾಗಿ ನಿರ್ಮಿಸಿದ್ದ ಮಳಿಗೆಗಳನ್ನು ತೆರವುಗೊಳಿಸಲಾಗಿರುತ್ತದೆ. ಆಸ್ಪತ್ರೆಯ ಸುತ್ತಮುತ್ತಲಿನ ಪರಿಸರವು ಕಲುಷಿತವಾಗದಂತೆ ಹಾಗೂ ರೋಗರುಜಿನಗಳು ಹರಡದಂತೆ ಕ್ರಮವಹಿಸಲಾಗಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿದ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು.</td></tr>
</table>

| | | | | |
|---|---|---|---|---|
| 39 | 4420<br>ಚು.ಗು.ಪ್ರ: 1066<br>ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ)<br>ವಿಪನದಿ: 05.12.2013 | ರಾಜ್ಯದಲ್ಲಿರುವ ಕೆಲವು ಮಹಾನಗರ ಪಾಲಿಕೆಗಳು ಮೇಯರ್/ ಉಪ ಮೇಯರ್ ಸ್ಥಾನಗಳಿಗೆ ಚುನಾವಣೆ ನಡೆಸಲು ಕ್ರಮ ಕೈಗೊಳ್ಳುವ ಕುರಿತು. | ಮಾನ್ಯ ನ್ಯಾಯಾಲಯದ ಅಂತಿಮ ಆದೇಶದನ್ವಯ ನಂತರ ಬಾಕಿ ಉಳಿದಿರುವ ಮಹಾನಗರಪಾಲಿಕೆಗಳ ಮೇಯರ್/ಉಪಮೇಯರ್ ಸ್ಥಾನಗಳಿಗೆ ಚುನಾವಣೆ ನಡೆಸಲು ಸೂಕ್ತ ಕ್ರಮ ಕೈಗೊಳ್ಳಲಾಗುವುದೆಂದು ಮಾನ್ಯ ನಗರಾಭಿವೃದ್ಧಿ ಸಚಿವರು ತಿಳಿಸಿದರು. | ದಿನಾಂಕ: 01.06.2018ರ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ: ಈಗಾಗಲೇ ರಾಜ್ಯದಲ್ಲಿರುವ ಮಹಾನಗರಪಾಲಿಕೆಗಳ ಮೇಯರ್ ಹಾಗೂ ಉಪಮೇಯರ್ ಸ್ಥಾನಗಳಿಗೆ 2013–14ನೇ ಸಾಲಿನಿಂದ ಜಾರಿಯಲ್ಲಿರುವಂತೆ ನಿಯಮಾನುಸಾರ ಚುನಾವಣೆ ನಡೆಸಲಾಗಿರುತ್ತದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿದ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು.<br>. |
| 40. | 4424<br>ಚು.ಗು.ಪ್ರ: 313<br>ಶ್ರೀ ಮಹಾಂತೇಶ್ ಶಿವಾನಂದ ಕೌಜಲಗಿ<br>ವಿಪನದಿ: 28.01.2014 | ಬೆಳಗಾವಿ ಜಿಲ್ಲೆಯ ಕಿತ್ತೂರು ಹಾಗೂ ಹಾರುಗೇರಿ ಗ್ರಾಮ ಪಂಚಾಯತಿಗಳು ಅತೀ ದೊಡ್ಡ ಜನಸಂಖ್ಯೆಯುಳ್ಳ ಪಂಚಾಯತ್ ಗಳಾಗಿದ್ದು, ಇವುಗಳನ್ನು ಪಟ್ಟಣ ಪಂಚಾಯತ್‌ಗಳಾಗಿ ಪರಿವರ್ತಿಸುವ ಕುರಿತು. | 2011ರ ಜನಗಣತಿ ಆದ ಮೇಲೆ ಮೇಲ್ದರ್ಜೆಗೇರಿಸುವುದು ಸರ್ಕಾರದ ಕರ್ತವ್ಯ. ಗ್ರಾಮ ಪಂಚಾಯಿತಿಯಿಂದ ಪಟ್ಟಣ ಪಂಚಾಯಿತಿ ಮಾಡುವುದಕ್ಕೆ ಚದರ ಕಿಲೋಮೀಟರ್‌ಗೆ ಎಷ್ಟು ಜನಸಂಖ್ಯೆ ಮತ್ತು ಎಷ್ಟು ಕೈಗಾರಿಕೆಗಳಿವೆ ಎಂಬುದನ್ನು ಗಣನೆಗೆ ತೆದುಕೊಂಡು ಸೆಕ್ಷನ್ 351, 352 ಮತ್ತು 353 ರಡಿಯಲ್ಲಿ ಬರುವ ಷರತ್ತುಗಳನ್ನು ಪೂರ್ಣವಾಗಿ ಪರಿಶೀಲಿಸಿದ ಮೇಲೆ ಈ ಬಗ್ಗೆ ಸೂಕ್ತ | ದಿನಾಂಕ: 01.06.2018ರ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ ಬೆಳಗಾವಿ ಜಿಲ್ಲೆಯ ಕಿತ್ತೂರು ಗ್ರಾಮ ಪಂಚಾಯತಿಯನ್ನು ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 67 ಎಂಎಲ್‌ಆರ್ 2015, ದಿನಾಂಕ: 23.06.2015ರಂತೆ ಪಟ್ಟಣ ಪಂಚಾಯಿತಿಯನ್ನಾಗಿ ಮೇಲ್ದರ್ಜೆಗೇರಿಸಲಾಗಿದೆ.<br><br>ಬೆಳಗಾವಿ ಜಿಲ್ಲೆಯ ಹಾರೂಗೇರಿ ಗ್ರಾಮ ಪಂಚಾಯಿತಿಯನ್ನು ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 09 ಎಂಎಲ್‌ಆರ್ 2015, ದಿನಾಂಕ: 13.08.2015ರಂತೆ ಪುರಸಭೆಯನ್ನಾಗಿ ಮೇಲ್ದರ್ಜೆಗೇರಿಸಲಾಗಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿದ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |

| | | | | |
|---|---|---|---|---|
| | | | ಕ್ರಮವನ್ನು ತೆಗೆದುಕೊಳ್ಳುತ್ತೇನೆಂದು ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ತಿಳಿಸಿದರು. | |
| 41 | 4428<br>ಚು.ರ.ಪ್ರ: 191<br>ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ<br>ವಿಪನದಿ: 30.01.2014 | ರಾಜ್ಯದ ಪ್ರಮುಖ ನಗರವಾಗಿ ಬೆಳೆಯುತ್ತಿರುವ ಬೆಳಗಾವಿ ನಗರದ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ರಿಂಗ್ ರಸ್ತೆಗಳನ್ನು ಮತ್ತು ಹೆಚ್ಚಿನ ಫ್ಲೈ ಓವರ್‌ಗಳನ್ನು ನಿರ್ಮಿಸುವ ಬಗ್ಗೆ. | ಬೆಳಗಾವಿ ಮಹಾನಗರದ ವರ್ತುಲ ರಸ್ತೆ ನಿರ್ಮಾಣ ಮತ್ತು ರೈಲ್ವೆ ಮೇಲುಸೇತುವೆ ನಿರ್ಮಾಣ ಇವುಗಳಿಗೆ ಸಂಬಂಧಿಸಿದ ಪ್ರಸ್ತಾವನೆಗಳು ಸರ್ಕಾರದ ಪರಿಶೀಲನೆಯಲ್ಲಿವೆ ಎಂದು ಮಾನ್ಯ ನಗರಾಭಿವೃದ್ಧಿ ಸಚಿವರು ತಿಳಿಸಿದರು. | ದಿನಾಂಕ: 01.06.2018ರ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ಬೆಳಗಾವಿ ಮಹಾನಗರದಲ್ಲಿ ಸಂಚಾರ ನಿಯಂತ್ರಣ ಮತ್ತು ನಿರ್ವಹಣೆಯನ್ನು ಮಾಡಲು ಬೆಳಗಾವಿ ಮಹಾಯೋಜನೆಯ (ಪರಿಷ್ಕೃತ–2) ವರ್ತುಲ ರಸ್ತೆಯನ್ನು ಅಳವಡಿಸಲಾಗಿರುತ್ತದೆ. ಸದರಿ ವರ್ತುಲ ರಸ್ತೆಯನ್ನು ಕಾರ್ಯಗತಗೊಳಿಸುವ ಸಂಬಂಧ ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರದ ವತಿಯಿಂದ ಕಾರ್ಯಸಾಧ್ಯತೆ (Prefeasibility Report) ವರದಿಯನ್ನು ತಯಾರಿಸಲಾಗಿರುತ್ತದೆ. ಅದರಂತೆ 42.48 ಕಿ.ಮಿ. ಉದ್ದ 30.00 ಮಿ. ಅಗಲದ ರಸ್ತೆಯನ್ನು ನಿರ್ಮಾಣ ಮಾಡಲು ಸುಮಾರು 192.08 ಕೋಟಿಗಳೆಂದು ಅಂದಾಜಿಸಲಾಗಿದೆ. ದಿನಾಂಕ: 22.02.2017 ರಂದು ಮಾನ್ಯ ಸಚಿವರು ಭೂಸಾರಿಗೆ ಹಾಗೂ ರಾಷ್ಟ್ರೀಯ ಹೆದ್ದಾರಿ, ಕೇಂದ್ರ ಸರ್ಕಾರ ಇವರ ಅಧ್ಯಕ್ಷತೆಯಲ್ಲಿ ಜರುಗಿದ ಸಭೆಯಲ್ಲಿ ಅನುಮೋದನೆ ನೀಡಿದನ್ವಯ ಸದರಿ ವರ್ತುಲ ರಸ್ತೆಯನ್ನು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ತಮ್ಮ ವತಿಯಿಂದ ಅನುಷ್ಠಾನಗೊಳಿಸಲಾಗುವುದೆಂದು ತಿಳಿಸಿರುತ್ತಾರೆ. ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ಸದರಿ ಕುರಿತು ವಿಸ್ತೃತ ಯೋಜನಾ ವರದಿ ಸಲ್ಲಿಸಿದ ನಂತರ ಅದರ ಪ್ರಕಾರ ತಗಲುವ ಅಂದಾಜು ವೆಚ್ಚವು ತಿಳಿದು ಬರುತ್ತದೆ. ಸದರಿ ವಿಷಯವನ್ನು ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ) ಹಾಗೂ ಯೋಜನಾ ನಿರ್ದೇಶಕರು, ಯೋಜನಾ ಅನುಷ್ಠಾನ ಘಟಕ (ಪಿಐಯು) ಧಾರವಾಡ ರವರು ತಿಳಿಸಿರುತ್ತಾರೆ ಹಾಗೂ ವಿಸ್ತೃತ ಯೋಜನಾ ವರದಿ ತಯಾರಿಸಲು 9 ತಿಂಗಳ ಕಾಲಾವಕಾಶಬೇಕಾಗಿರುತ್ತದೆ ಎಂದು ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ) ಹಾಗೂ |

| | | | | |
|---|---|---|---|---|
| | | | | ಯೋಜನಾ ನಿರ್ದೇಶಕರು, ಯೋಜನಾ ಅನುಷ್ಠಾನ ಘಟಕ (ಪಿಐಯು) ಧಾರವಾಡ ರವರು ತಿಳಿಸಿರುತ್ತಾರೆ. ಈ ಹಿನ್ನಲೆಯಲ್ಲಿ ವಿಸ್ತೃತ ಯೋಜನಾ ವರದಿಯನ್ವಯ ನಿಯಮಾನುಸಾರ ಕಾಮಗಾರಿಯನ್ನು ಕೈಗೊಂಡು ಪೂರ್ಣಗೊಳಿಸಬೇಕಾಗುತ್ತದೆ ಎಂದು ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರ ಬೆಳಗಾವಿ ರವರು ವರದಿ ಮಾಡಿರುವುದಾಗಿ ಆಯುಕ್ತರು, ಬೆಳಗಾವಿ ಮಹಾನಗರಪಾಲಿಕೆ ರವರು ವರದಿಸಿರುತ್ತಾರೆ. ಬೆಳಗಾವಿ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಈ ಕೆಳಕಂಡ ಫ್ಲೈ ಓವರ್ ನಿರ್ಮಾಣ ಕಾಮಗಾರಿಗಳಿಗೆ ರೂ. 100.00 ಕೋಟಿ ವಿಶೇಷ ಅನುದಾನದಡಿ ಸರ್ಕಾರದ ಆದೇಶ ಸಂಖ್ಯೆ: ನಅಇ/21/ಎಸ್‌ಎಫ್‌ಸಿ/2015, ದಿನಾಂಕ: 25.02.2016ರಲ್ಲಿ ಈ ಕೆಳಗಿನ ಕಾಮಗಾರಿಗಳನ್ನು ಕೈಗೊಳ್ಳಲು ಅನುಮೋದನೆಯನ್ನು ನೀಡಲಾಗಿತ್ತು.<br><br>1) ಬಸ್ ನಿಲ್ದಾಣ ಎನ್ ಎಚ್ 4 ರವರೆಗೆ (ವಾಯು ಅಶೋಕ ವೃತ್ತ) ಫ್ಲೈ ಓವರ್ ನಿರ್ಮಾಣ ರೂ. 4500.00 ಲಕ್ಷ.<br>2) ಸಮಾದೇವಿ ಸಿಗ್ನಲ್ ಸರ್ಕಲ್‌ದಿಂದ ಸಂಚಯಿನಿ ಸರ್ಕಲ್‌ವರೆಗೆ (ವಾಯಾ ಬೋಗಾರವೇಸ್) ಫ್ಲೈ ಓವರ್ ನಿರ್ಮಾಣ ರೂ.4500.00 ಲಕ್ಷ.<br><br>ಆದರೆ, ದಿನಾಂಕ: 28.10.2016ರಂದು ಜಿಲ್ಲಾ ಕ್ರಿಯಾ ಸಮಿತಿ ಹಾಗೂ ಬೆಳಗಾವಿ ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಸಣ್ಣ ಕೈಗಾರಿಕಾ ಸಚಿವರು ಇವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಈ ಬಗ್ಗೆ ಸುದೀರ್ಘವಾಗಿ ಚರ್ಚಿಸಿ ಬಸ್ ನಿಲ್ದಾಣದಿಂದ ಎನ್ ಎಚ್ 4 ರವರೆಗೆ (ವಾಯಾ ಅಶೋಕ ವೃತ್ತ) ಫ್ಲಾಯ್ ಓವರ್ ನಿರ್ಮಾಣ ಕಾಮಗಾರಿಯ "ಸ್ಮಾರ್ಟ್ ಸಿಟಿ ಏರಿಯಾ ಡೆವಲಪ್‌ಮೆಂಟ್‌ದಲ್ಲಿ" ಬರುವುದರಿಂದ ಸಂಬಂಧಪಟ್ಟ ಕಾಮಗಾರಿಗಳನ್ನು ಸ್ಮಾರ್ಟ್ ಸಿಟಿಯಲ್ಲಿ ಕೈಗೊಳ್ಳಲಾಗುವುದು. ಅದೇ ರೀತಿ ಸಮಾದೇವಿ ಸಿಗ್ನಲ್ ಸರ್ಕಲ್‌ದಿಂದ ಸಂಚಯಿನಿ ಸರ್ಕಲ್‌ವರೆಗೆ (ವಾಯಾ ಬೋಗಾರವೇಸ್) ಫ್ಲಾಯ್ ಓವರ್ ನಿರ್ಮಾಣ ಕಾಮಗಾರಿಯು ಸಹ ಸ್ಮಾರ್ಟ್ ಸಿಟಿ ಯೋಜನೆಯಡಿಯಲ್ಲಿ ಕೈಗೊಳ್ಳಲು ಹಾಗೂ ಅದರ ಬದಲಾಗಿ ನಗರಕ್ಕೆ ತುರ್ತಾಗಿ ಸಾರ್ವಜನಿಕರ ಹಿತದೃಷ್ಟಿಯಿಂದ ಅವಶ್ಯಕ ಇರುವ ಅಭಿವೃದ್ಧಿ ಕಾಮಗಾರಿಗಳನ್ನು ತೆಗೆದುಕೊಳ್ಳಲು |

ತೀರ್ಮಾನಿಸಲಾಗಿದ್ದು, ಅದರಂತೆ, ಸದರಿ ಫ್ಲೈ ಓವರ್ ಕಾಮಗಾರಿಗಳನ್ನು ಕೈ ಬಿಟ್ಟು ಬೇರೆ (67) ಬದಲಿ ಕಾಮಗಾರಿಗಳ ಕ್ರಿಯಾ ಯೋಜನೆಗೆ ಅನುಮೋದನೆ ಪಡೆದು ಟೆಂಡರ್ ಕರೆಯಲಾಗಿದ್ದು, ಕಾಮಗಾರಿಗಳು ಪ್ರಗತಿ ಹಂತದಲ್ಲಿರುತ್ತವೆ. ಬೆಳಗಾವಿ ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಬರುವ ರೇಲ್ವೆ ಮೇಲು ಸೇತುವೆಗಳ ವಿವರ ಈ ಕೆಳಗಿನಂತಿದೆ ಎಂದು ಆಯುಕ್ತರು, ಬೆಳಗಾವಿ ಮಹಾನಗರ ಪಾಲಿಕೆ ಇವರು ವರದಿಸಿರುತ್ತಾರೆ.

| LC No | Section | PB Item No. | Cost (Rs. In Crs) | Cost of Utility (Rs. In Crs) | Re-marks |
|---|---|---|---|---|---|
| 388 A | ROB on Old Pune Bangalore NH Road | 77 | Rly-9.18<br>Gok-14.87<br>Total 24.05<br>Gok Deposited 4.00 | HESCOM /BGM 2.00<br>KUWS & DB/ BGM.0.56<br>Total-2.81 | Work Completed |
| 381 | ROB on Belagavi Panji Road | 143 | Rly-10.91<br>Gok-11.41<br>Total 22.32 | | Tender Under Finalization |
| 382 | ROB on Tilakwadi Gate | 94 | Rly-6.33<br>GoK-6.33<br>Total 12.66 | | General Arrange-ment Drawing under Screutiny |
| 383 | ROB on Tilakwadi Gate No.1 | 95 | Rly-6.35<br>GoK-6.35<br>Total 12.70 | | |

ಮೇಲ್ಕಂಡಂತೆ ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿದ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು.

| | | | | |
|---|---|---|---|---|
| 42 | 2872<br>ಚು.ರ.ಪ್ರ: 557<br>ಶ್ರೀ ಅರವಿಂದ ಲಿಂಬಾವಳಿ ವಿಪನದಿ: 19.07.2007 | ಬೆಂಗಳೂರಿನ ಮಹಾನಗರದ ಮೂಲ ಸೌಕರ್ಯ ಅಭಿವೃದ್ಧಿಗೆ ವಿಶ್ವಬ್ಯಾಂಕ್ ನೀಡಿದ ಅನುದಾನದಲ್ಲಿ 2 ವರ್ಷದ ಹಿಂದೆ ಸರ್ಕಾರದ ಸೂಚನೆಯನ್ನು ಉಲ್ಲಂಘಿಸಿ ಕಂಪ್ಯೂಟರ್ ಹಾಗೂ ಅಗತ್ಯ ಸಾಫ್ಟ್‌ವೇರ್ ಕೊಳ್ಳುವಲ್ಲಿ ಅವ್ಯವಹಾರ ನಡೆದಿದ್ದು, ಅದರಲ್ಲಿ ಭಾಗಿಯಾಗಿರುವ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳುವ ಕುರಿತು | ಪಾವತಿಪೂರ್ವ ಲೆಕ್ಕಪರಿಶೋಧನೆಯ ಸಂದರ್ಭದಲ್ಲಿ ಈ ಸರಬರಾಜು ಆದೇಶವನ್ನು ನೀಡುವಾಗ ಆಗಿನ ಅಪರ ಆಯುಕ್ತರು (ಹಣಕಾಸು) ಹಾಗೂ ಮಾಹಿತಿ ಹಾಗೂ ತಂತ್ರಜ್ಞಾನ ಸಲಹೆಗಾರರ ಹುದ್ದೆಯಲ್ಲಿ ನಿಯೋಜನೆ ಮೇಲೆ ಕಾರ್ಯ ನಿರ್ವಹಿಸುತ್ತಿದ್ದವರು, ಕಾರ್ಯಲೋಪ ಮಾಡಿರುವ ಬಗ್ಗೆ ಮುಖ್ಯ ಲೆಕ್ಕಪರಿಶೋಧಕರು ವರದಿ ನೀಡಿದ್ದು, ಪ್ರಾಥಮಿಕವಾಗಿ ಸದರಿ ಅಧಿಕಾರಿಗಳಿಗೆ ಸ್ವಾಭಾವಿಕ ನ್ಯಾಯತತ್ವದ ಅನುಸಾರ ಹೇಳಿಕೆ ನೀಡಲು ಅವಕಾಶ ನೀಡಲಾಗಿದ್ದು, ಅವರುಗಳಿಂದ ಉತ್ತರ ಬಂದ ನಂತರ ಅಗತ್ಯ ಕಂಡುಬಂದಲ್ಲಿ ಕಾನೂನು ಚೌಕಟ್ಟಿನಲ್ಲಿ ಕ್ರಮ ಕೈಗೊಳ್ಳಲಾಗುವುದು ಎಂದು ಮಾನ್ಯ ಮುಖ್ಯಮಂತ್ರಿಯವರು ತಿಳಿಸಿದರು. | ದಿನಾಂಕ: 01.06.2018ರ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ಬೆಂಗಳೂರು ಮಹಾನಗರ ಪಾಲಿಕೆಯ ಮುಖ್ಯ ಲೆಕ್ಕ ಪರಿಶೋಧಕರು ಪಾಲಿಕೆಯಲ್ಲಿ ಒರಾಕಲ್ ತಂತ್ರಾಂಶ (ಸಾಪ್ಟ್‌ವೇರ್) ಖರೀದಿಯಲ್ಲಿ ಅಕ್ರಮ ನಡೆದಿದೆ ಎಂದು ತಿಳಿಸುತ್ತಾ, ಶ್ರೀ ಪಿ.ಕೆ. ಶ್ರೀಹರಿ, ಅಂದಿನ ಅಪರ ಆಯುಕ್ತರು (ಹಣಕಾಸು) (ಇವರ ಮಾತೃ ಇಲಾಖೆ–Director of Income Tax (Vig) South, Chennari) ಮತ್ತು ಡಾ: ಎಸ್. ರಮಣಿ, ಮಾಹಿತಿ ತಂತ್ರಜ್ಞಾನ ಸಲಹೆಗಾರರು (ಇವರ ಮಾತೃ ಇಲಾಖೆ–Deputy Driector (INSES), ISRO Head Quarters, Bengaluru) ಇವರ ವಿರುದ್ಧ ಕ್ರಮ ಜರುಗಿಸುವಂತೆ ಆಯುಕ್ತರಿಗೆ ವರದಿ ಸಲ್ಲಿಸಿದ್ದರು.<br><br>ಸದರಿ ಅಧಿಕಾರಿಗಳು ಚಾಲ್ತಿಯಲ್ಲಿರುವ ಕರ್ನಾಟಕ ಆರ್ಥಿಕ ಸಂಹಿತೆ 1958ರ ಅನುಚ್ಛೇದ 14 ಮತ್ತು 15, ಕೆ.ಟಿ.ಪಿ.ಪಿ. ಕಾಯ್ದೆ 1999ರ ನಿಯಮ 3, 4ಬಿ ಹಾಗೂ 4ಸಿ ಗಳ ಉಲ್ಲಂಘನೆ ಹಾಗೂ ಕೆ.ಎಂ.ಸಿ. ಕಾಯ್ದೆಯ ವಿವಿಧ ಅಧಿನಿಯಮಗಳ ಉಲ್ಲಂಘನೆ ಹಾಗೂ ಕರ್ನಾಟಕ ಆರ್ಥಿಕ ಸಂಹಿತೆ 1958ರ ಅನುಚ್ಛೇದ 349ರ ಉಲ್ಲಂಘನೆ ಹಾಗೂ ಆಡಳಿತ ನಿಯಮಗಳ ಹಾಗೂ ವಿವಿಧ ಕಾಯ್ದೆಗಳ ಆರ್ಥಿಕ ನಿಯಮಗಳ ಉಲ್ಲಂಘನೆ ಮಾಡಿರುವುದು ಕಂಡು ಬಂದ ಕಾರಣ ಶ್ರೀ ಪಿ. ಕೆ. ಶ್ರೀಹರಿ, ಐ.ಆರ್.ಎಸ್. ಹಾಗೂ ಡಾ: ಎಸ್. ರಮಣಿ ಇವರುಗಳ ವಿರುದ್ಧ ಚಾಲ್ತಿ ನಿಯಮಾವಳಿಗಳ ಕೇಂದ್ರ ಸರ್ಕಾರದ ಸೇವಾ ನಿಯಮಾವಳಿಗೆ ಅನ್ವಯ ಶಿಸ್ತು ಕ್ರಮ ಜರುಗಿಸಲು ಕೋರಿ ಆಯುಕ್ತರು ಪ್ರಸ್ತಾವನೆಯನ್ನು ಸಲ್ಲಿಸಿದ್ದರು.<br><br>ನಂತರ, ಅಪರ ಆಯುಕ್ತರು (ಆಡಳಿತ), ಬಿ.ಬಿ.ಎಂ.ಪಿ. ರವರು ದಿನಾಂಕ: 23.06.2011ರ ಪತ್ರದಲ್ಲಿ ಕರ್ನಾಟಕ ವಿಧಾನ ಪರಿಷತ್ತಿನ ಭರವಸೆ ಸಂಖ್ಯೆ 2872ರಲ್ಲಿ ಈ ವಿಷಯವು ಪ್ರಸ್ತಾಪವಾಗಿದ್ದು, ಈ ಬಗ್ಗೆ ದಿನಾಂಕ: 02.08.2010ರಂದು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರೊಂದಿಗೆ ನಡೆದ ಸಭೆಯಲ್ಲಿ ಆಯುಕ್ತರು ಚರ್ಚಿಸಿದ್ದು, ಸದರಿ ಪ್ರಕರಣದ ಎಲ್ಲಾ ಮೂಲ |

| | | | | |
|---|---|---|---|---|
| | | | | ಸಾಫ್ಟ್‌ವೇರ್‌ಗಳನ್ನು ತಂತ್ರಾಂಶ ಸರಬರಾಜು ಸಂಸ್ಥೆಗೆ ದಿನಾಂಕ: 25.02.2009ರಂದು ಹಿಂದಿರುಗಿಸಲಾಗಿರುವುದರಿಂದ ಮತ್ತು ಪಾಲಿಕೆಗೆ ಯಾವುದೇ ಆರ್ಥಿಕ ನಷ್ಟವುಂಟಾಗದೇ ಇರುವುದರಿಂದ ಸದರಿ ಪ್ರಕರಣವನ್ನು ಮುಕ್ತಾಯಗೊಳಿಸಬಹುದೆಂದು ಬಿ.ಬಿ.ಎಂ.ಪಿ. ಆಯುಕ್ತರು ಅಭಿಪ್ರಾಯ ಪಟ್ಟಿರುವುದನ್ನು ಸರ್ಕಾರದ ಗಮನಕ್ಕೆ ತಂದಿರುತ್ತಾರೆ.<br><br>ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಆದೇಶವನ್ನು ಕೋರಲಾಗಿ, ಮಾನ್ಯ ಮುಖ್ಯಮಂತ್ರಿಯವರು "ಒಂದು ಪಕ್ಷ ಅರ್ಥಿಕ ನಷ್ಟ ಉಂಟಾಗಿದಿದ್ದರೂ, ಮುಖ್ಯ ಲೆಕ್ಕಪರಿಶೋಧಕರು ಮಾಡಿರುವ ಆರೋಪಗಳು ಗಂಭೀರ ಸ್ವರೂಪದ್ದಾಗಿರುವುದರಿಂದ ಯಾವುದೇ ದಂಡನೆ ವಿಧಿಸದೇ ಪ್ರಕರಣ ಮುಕ್ತಾಯಗೊಳಿಸಲು ಶಿಫಾರಸ್ಸು ಮಾಡಿರುವುದನ್ನು ಪುನರ್ ಪರಿಶೀಲಿಸಲು ಆದೇಶಿಸಿರುತ್ತಾರೆ.<br><br>ಅದರಂತೆ ಪ್ರಕರಣದ ಬಗ್ಗೆ ಪುನರ್ ಪರಿಶೀಲಿಸಿ ಪ್ರಸ್ತಾವನೆಯನ್ನು ಸಲ್ಲಿಸುವಂತೆ ಬಿ.ಬಿ.ಎಂ.ಪಿ ಆಯುಕ್ತರನ್ನು ಕೋರಲಾಗಿ, ಆಯುಕ್ತರು ಸೊನಾಟಾ ಸಾಫ್ಟ್‌ವೇರ್ ಸಂಸ್ಥೆಯು ಒಟ್ಟು 07 ತಂತ್ರಾಂಶಗಳನ್ನು ಪಾಲಿಕೆಗೆ ಸರಬರಾಜು ಮಾಡಿದ್ದು, ಸದರಿ ಸಂಸ್ಥೆಗೆ ಪಾಲಿಕೆಯ ವತಿಯಿಂದ ಯಾವುದೇ ಹಣವನ್ನು ಪಾವತಿಯಾಗದ ಕಾರಣ ಮೇಲ್ಕಂಡ ಸಂಸ್ಥೆಯು ಸರಬರಾಜು ಮಾಡಲಾದ ಎಲ್ಲಾ 07 ತಂತ್ರಾಂಶಗಳನ್ನು ಹಿಂದಿರುಗಿಸುವಂತೆಯೂ,ಮೂಲ ತಂತ್ರಾಂಶಗಳನ್ನು ಹಿಂದಿರುಗಿಸಿದ್ದಲ್ಲಿ ಪಾಲಿಕೆಯಿಂದ ಹಣ ಪಾವತಿಸಬೇಕಾಗಿರುವುದಿಲ್ಲವೆಂದು ತಿಳಿಸಲಾದ ಹಿನ್ನೆಲೆಯಲ್ಲಿ ಪಾಲಿಕೆಯ ವತಿಯಿಂದ ಯಾವುದೇ ಹಣ ಪಾವತಿಯಗಿರುವುದಿಲ್ಲವೆಂದು ತಿಳಿಸಿ, ವಿಷಯದಲ್ಲಿ ಸರ್ಕಾರವು ಸೂಕ್ತ ತೀರ್ಮಾನವನ್ನು ತೆಗೆದುಕೊಳ್ಳುವಂತೆ ಕೋರಿರುತ್ತಾರೆ.<br><br>ಪಾಲಿಕೆಯ ಮುಖ್ಯ ಲೆಕ್ಕಪರಿಶೋಧಕರ ವರದಿಯಮತೆ ಶ್ರೀ ಪಿ.ಕೆ. ಹರಿ, ಹಿಂದಿನ ಅಪರ ಆಯುಕ್ತರು ಮತ್ತು ಡಾ: ಎಸ್.ರಮಣಿ, ಹಿಂದಿನ ಮಾಹಿತಿ ತಂತ್ರಜ್ಞಾನ ಸಲಹೆಗಾರರುಗಳ ವಿರುದ್ಧ ಕ್ರಮ ಕೈಗೊಳ್ಳಲು ಆರೋಪ ಪಟ್ಟಿಯನ್ನು ಜಾರಿ ಮಾಡಲು ಮಾನ್ಯ ಬೆಂಗಳೂರು ಅಭಿವೃದ್ಧಿ ಹಾಗೂ ನಗರ ಯೋಜನಾ |

| | | | | |
|---|---|---|---|---|
| | | | | ಸಚಿವರ ಮೂಲಕ ಮಾನ್ಯ ಮುಖ್ಯಮಂತ್ರಿಯವರ ಅನುಮೋದನೆಗೆ ಸಲ್ಲಿಸಲಾಗಿತ್ತು.<br><br>ಮಾನ್ಯ ಬೆಂಗಳೂರು ಅಭಿವೃದ್ಧಿ ಹಾಗೂ ನಗರ ಯೋಜನಾ ಸಚಿವರು World Bank Procurement Consultant ರವರ ಜೊತೆ ಚರ್ಚಿಸಲಾಗಿ, ಸದರಿ ತಂತ್ರಾಂಶವನ್ನು ನೇರವಾಗಿ M/s Oracle ಸಂಸ್ಥೆಯಿಂದ ಖರೀದಿಸಲು ಸಲಹೆ ನೀಡಿರುವುದಾಗಿ ಉಲ್ಲೇಖಿಸಲಾಗಿದೆ ಹಾಗೂ ಕೆ.ಟಿ.ಪಿ.ಪಿ. ಕಾಯ್ದೆಯ ಕಲಂ4(ಸಿ)ರನ್ವಯ Existing Software Compatibility ಗೋಸ್ಕರ ಹಾಗೂ ಸದರಿ Procurement ಅವಶ್ಯಕತೆ ಇರುವುದಾಗಿ ಉಲ್ಲೇಖಿಸಲಾಗಿದೆ.<br><br>ಜಾಗತಿಕ ಬ್ಯಾಂಕ್ (World Bank)ನಿಂದ ಸದರಿ ಯೋಜನೆಗೆ ಅನುದಾನ ಬಿಡುಗಡೆಯಾಗದ ಕಾರಣ ಸದರಿ ಖರೀದಿಯನ್ನು ಕೈಬಿಟ್ಟು ಸಂಬಂಧಿಸಿದ ತಂತ್ರಾಂಶವನ್ನು M/s Oracle World Bank ಸಂಸ್ಥೆಗೆ ಹಿತಿರುಗಿಸಲಾಗಿರುವುದನ್ನು ಗಮನಿಸಿ, ಸದರಿ ತಂತ್ರಾಂಶದ ಖರೀದಿಯನ್ನು World Bank Procurement ಮಾರ್ಗಸೂಚಿಗಳನ್ನು ಗಮನದಲ್ಲಿಟ್ಟುಕೊಂಡು ಖರೀದಿಗೆ ಆದೇಶ ನೀಡಿರುವ ಬಗ್ಗೆ ಕಡತದ ದಾಖಲೆಗಳ ಪರಿಶೀಲನೆಯಿಂದ ಕಂಡುಬರುತ್ತದೆ ಹಾಗೂ ಸದರಿ ತಂತ್ರಾಂಶವನ್ನು ಉಪಯೋಗಿಸದೇ ಸರಬರಾಜು ಮಾಡಿದ ಸಂಸ್ಥೆಗೆ ವಾಪಸ್ ನೀಡಿರುವುದರಿಂದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಯಾವುದೇ ಆರ್ಥಿಕ ನಷ್ಟವಾಗಿಲ್ಲದಿರುವುದನ್ನು ಗಮನಿಸಿ, ಮಾಹಿತಿ ತಂತ್ರಜ್ಞಾನ ಸಲಹೆಗಾರರಾದ ಡಾ: ಎನ್. ರಮಣಿ ಮತ್ತು ಅಪರ ಆಯುಕ್ತರು (ಹಣಕಾಸು) ಶ್ರೀ ಪಿ.ಕೆ. ಶ್ರೀಹರಿ ರವರುಗಳು ಓರಾಕಲ್ ತಂತ್ರಾಂಶ ಖರೀದಿಯಲ್ಲಿ ಲೋಪ ಎಸಗಿರುವುದು ಕಂಡು ಬರುವುದಿಲ್ಲ ಹಾಗೂ ಈ ಪ್ರಕ್ರಿಯೆಯು 2005–06ನೇ ಸಾಲಿನಲ್ಲಿ ನಡೆದಿದ್ದು, ಈಗಾಗಲೇ 12 ವರ್ಷಗಳು ಕಳೆದಿದ್ದು, ಡಾ: ಎಸ್. ರಮಣಿರವರು 2014ರಲ್ಲಿ ಸೇವೆಯಿಂದ ನಿವೃತ್ತಿ ಹೊಂದಿದ್ದು, ಈ ಹಂತದಲ್ಲಿ ಸಂಬಂಧಿಸಿದ ಅಧಿಕಾರಿಗಳ |

| | | | | |
|---|---|---|---|---|
| | | | | ಮೇಲೆ ಶಿಸ್ತು ಕ್ರಮವನ್ನು ಕೈಬಿಡುವುದು ಸೂಕ್ತ ಎಂದು ಸರ್ಕಾರ ತೀರ್ಮಾನಿಸಿರುತ್ತದೆ.<br><br>ಅದರನ್ವಯ ಶ್ರೀ ಪಿ.ಕೆ. ಶ್ರೀಹರಿ, ಹಿಂದಿನ ಅಪರ ಆಯುಕ್ತರು ಮತ್ತು ಡಾ: ಎಸ್. ರಮಣಿ, ಮಾಹಿತಿ ತಂತ್ರಜ್ಞಾನ ಸಲಹೆಗಾರರು ಇವರುಗಳಿಂದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಯಾವುದೇ ಆರ್ಥಿಕ ನಷ್ಟ ಉಂಟಾಗಿರುವುದಿಲ್ಲವಾದ್ದರಿಂದ, ಸದರಿಯವರುಗಳನ್ನು ಆರೋಪದಿಂದ ಮುಕ್ತಗೊಳಿಸಲಾಗಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿದ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |
| 43 | 3355<br>ಸಭಾಪತಿಯವರ ಅಪ್ಪಣೆ ಮೇರೆಗೆ<br>ಶೂನ್ಯವೇಳೆ ಪ್ರಸ್ತಾವ<br>ಶ್ರೀ ಎಂ.ಸಿ. ನಾಣಯ್ಯ<br>ವಿಪನದಿ: 23.12.2009 | ವಿಧಾನಸೌಧ, ಶಾಸಕರ ಭವನ, ಉಚ್ಚ ನ್ಯಾಯಾಲಯದ ಮುಂಭಾಗದಲ್ಲಿ ಫ್ಲೆಕ್ಸ್ ಬ್ಯಾನರ್ ಮತ್ತು ಹೋಲ್ಡಿಂಗ್ ಬೋರ್ಡ್ ಗಳನ್ನು ಪ್ರದರ್ಶಿಸುತ್ತಿರುವ ಬಗ್ಗೆ | ಬಿ.ಬಿ.ಎಂ.ಪಿ., ಬಿ.ಡಿ.ಎ., ಪಿ.ಡಬ್ಲ್ಯೂ.ಡಿ. ಮತ್ತು ಬೆಂಗಳೂರು ಸಿಟಿ ಪೊಲೀಸ್‌ನವರು ಒಂದು ಸ್ಪೆಷಲ್ ಸ್ಕ್ವಾಡ್ ಮಾಡಿ ಇಡೀ ಬೆಂಗಳೂರಿನಲ್ಲಿ ಎಲ್ಲಿಯೇ ಹಾಕಿದರೂ ಸಹ ಇದನ್ನು ತೆಗೆಯುವುದಕ್ಕೆ ಸರ್ಕಾರ ಕಟ್ಟುನಿಟ್ಟಾದ ಕ್ರಮ ತೆಗೆದುಕೊಳ್ಳುತ್ತದೆ. ಜೊತೆಗೆ ಯಾರು ಹಾಕುತ್ತಾರೋ ಅವರ ವಿರುದ್ಧ ಕ್ರಿಮಿನಲ್ ಮೊಕದ್ದಮೆಯನ್ನು ಹೂಡುತ್ತದೆ. ಅಂತಹವರ ಮೇಲೆ ಕೇಸ್ ಹಾಕುತ್ತೇವೆ ಎಂದು ಮಾನ್ಯ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಸಂಸದೀಯ | ದಿನಾಂಕ: 01.06.2018ರ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಜಾಹೀರಾತು ಬೈಲಾ 2006 ಉಪವಿಧಿ 3ಐ(7)ರಲ್ಲಿ ಇದರಂತೆ ವಿಧಾನ ಸೌಧ ಸುತ್ತಮುತ್ತ 500 ಮೀಟರ್ ಅಂತರದಲ್ಲಿ ಹಾಗೂ ಎಂ.ಜಿ. ರಸ್ತೆ, ಏರ್‌ಪೋರ್ಟ್ ರಸ್ತೆ, ಬ್ರಿಗೇಡ್ ರಸ್ತೆ, ಕಬ್ಬನ್ ರಸ್ತೆ, ಕಾಮರಾಜ ರಸ್ತೆ ಮತ್ತು ಡಿಕೆನ್ಸನ್ ರಸ್ತೆ ಜಂಕ್ಷನ್ ಪಾಲಿಕೆಯ ಕೇಂದ್ರ ಕಛೇರಿ ಎದುರು ಕೆ.ಆರ್.ರಸ್ತೆ, ಹಡ್ಸನ್‌ವೃತ್ತ, ಬಸವೇಶ್ವರ ವೃತ್ತ, ಕೆ.ಜಿ. ವೃತ್ತ ಸರ್ಕಾರಿ ಕಛೇರಿಗಳ ಆವರಣಗಳಲ್ಲಿ ಫ್ಲೆಕ್ಸ್ ಬ್ಯಾನರ್‌ಗಳ ಪ್ರದರ್ಶನಗಳನ್ನು ನಿಷೇಧಿಸಲಾಗಿದೆ ಮತ್ತು ಎ. ವಲಯಗಳಾದ ಈ ಕೆಳಕಂಡ ರಸ್ತೆಗಳಲ್ಲಿಯೂ ಸಹ ಫ್ಲೆಕ್ಸ್ ಬ್ಯಾನರ್ ಪ್ರದರ್ಶನವನ್ನು ನಿಷೇಧಿಸಲಾಗಿದೆ.<br><br>1. ಕುಮಾರಕೃಪ ರಸ್ತೆ, ವಿಂಡ್ಸರ್ ಮ್ಯಾನರ್ ಜಂಕ್ಷನ್‌ನಿಂದ ಶಿವಾನಂದ ವೃತ್ತದವರೆಗೆ<br>2. ರಾಜಭವನ ರಸ್ತೆ ಹೈಗ್ರೌಂಡ್ಸ್‌ನಿಂದ ಮಿನ್ಕ್ಸ್ ವೃತ್ತದವರೆಗೆ<br>3. ಅಂಬೇಡ್ಕರ್ ವೀದಿ – ಕೆ.ಆರ್. ಸರ್ಕಲ್‌ನಿಂದ ಇನ್‌ಫೆಂಟ್ರಿ ರಸ್ತೆ ಜಂಕ್ಷನ್ ವರೆಗೆ<br>4. ಪೋಸ್ಟ್ ಆಫೀಸ್ ರಸ್ತೆ – ಕೆ.ಆರ್. ಸರ್ಕಲ್‌ನಿಂದ ಎಸ್.ಬಿ.ಎಂ. ಸರ್ಕಲ್‌ವರೆಗೆ (ಕೆ.ಜಿ.ರಸ್ತೆ)<br>5. ಬಸವೇಶ್ವರ ವೃತ್ತದ ಸುತ್ತಲೂ (ಹೋಟೆಲ್ ಚಾಲುಕ್ಯ) |

| | | | | |
|---|---|---|---|---|
| | | | ವ್ಯವಹಾರಗಳು ಮತ್ತು ಶಾಸನ ರಚನೆ, ಪೌರಾಡಳಿತ ಮತ್ತು ಸ್ಥಳೀಯ ಸಂಸ್ಥೆಗಳ ಸಚಿವರು ತಿಳಿಸಿದರು. | 6. ಮಹಾರಾಣಿ ಕಾಲೇಜು ರಸ್ತೆ<br>7. ಕೆ.ಆರ್.ವೃತ್ತ<br>8. ಕಬ್ಬನ್‌ಪಾರ್ಕ್ ಮತ್ತು ಲಾಲ್‌ಬಾಗ್ ಸುತ್ತಮುತ್ತಲೂ<br>9. ನೃಪತುಂಗ ರಸ್ತೆ – ಕೆ.ಆರ್.ಸರ್ಕಲ್‌ನಿಂದ ಪೊಲೀಸ್ ಕಾರ್ನರ್ ಜಂಕ್ಷನ್‌ವರೆಗೆ<br>10. ಪ್ಯಾಲೇಸ್ ರಸ್ತೆ ಎಸ್.ಬಿ.ಎಂ. ಸರ್ಕಲ್‌ನಿಂದ ಬಸವೇಶ್ವರ ವೃತ್ತ (ಹೋಟೆಲ್ ಚಾಲುಕ್ಯ)<br>11. ಚಾಲುಕ್ಯ ವೃತ್ತದಿಂದ ಬಸವೇಶ್ವರ ವೃತ್ತದವರೆಗೆ<br>12. ಹಳೇ ಹೈಗ್ರೌಂಡ್ ಪೊಲೀಸ್ ವೃತ್ತ ಬಾಲಬ್ರೂಹಿ ಅಥಿತಿ ಗೃಹ ಮತ್ತು ಗಾಲ್ಫ್ ಕ್ಲಬ್ ಮೂಲಕ ಸಂಚರಿಸುವ ರಸ್ತೆ ವಿಂಡ್ಸರ್ ಮ್ಯಾನರ್ ಜಂಕ್ಷನ್‌ವರೆಗೆ ಪಾಲಿಕೆಯ ವ್ಯಾಪ್ತಿಯಲ್ಲಿ ಸಾರ್ವಜನಿಕ ಸ್ಥಳಗಳಲ್ಲಿ ಅನಧಿಕೃತವಾಗಿ ಫ್ಲೆಕ್ಸ್ ಬ್ಯಾನರ್‌ಗಳನ್ನು ಅಳವಡಿಸುವವರ ವಿರುದ್ಧ ಸೆಕ್ಷನ್ 3ರ ಕರ್ನಾಟಕ ಓಪನ್ ಪ್ಲೇಸಸ್ (ಪ್ರಿವೆನ್ಷನ್ ಆಫ್ ಡಿಸ್‌ಫಿಗರ್‌ಮೆಂಟ್) ಆಕ್ಟ್ 1951ರ ರೀತ್ಯಾ ಸ್ಥಳೀಯ ಪೊಲೀಸ್ ಠಾಣೆಗಳಲ್ಲಿ ದೂರು ದಾಖಲಿಸಿ ದಂಡವನ್ನು ವಿಧಿಸಲಾಗುತ್ತಿದೆ.<br><br>ಮೇಲ್ಕಂಡ ನಿಷೇದಿತ ಪ್ರದೇಶಗಳನ್ನು ಒಳಗೊಂಡಂತೆ ಪಾಲಿಕೆ ವ್ಯಾಪ್ತಿಯ ಎಲ್ಲಾ ಪ್ರಮುಖ ರಸ್ತೆಗಳಲ್ಲಿ ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ಅನಧಿಕೃತ ಫ್ಲೆಕ್ಸ್ ಮತ್ತು ಬ್ಯಾನರ್‌ಗಳನ್ನು ತೆರವುಗೊಳಿಸಲು ಈ ಕೆಳಕಂಡಂತೆ ಕ್ರಮಗಳನ್ನು ಕೈಗೊಳ್ಳಲಾಗುತ್ತದೆ.<br><br>**ಅ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಅನಧಿಕೃತ ಪ್ಲೆಕ್ಸ್ ಮತ್ತು ಬ್ಯಾನರ್‌ಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ಸತತವಾಗಿ ಪ್ರತಿ ದಿನ ರಾತ್ರಿ ಪಾಳಿಯಲ್ಲಿ ಸಹಾಯಕ ಕಾರ್ಯಪಾಲಕ ಅಭಿಯಂತರರ ನೇತೃತ್ವದಲ್ಲಿ ಪ್ರಹರಿ ತಂಡಗಳನ್ನು ರಚಿಸಿ, ಪೋಲಿಸ್ ಭದ್ರತೆಯೊಂದಿಗೆ ಪ್ರಹರಿ ವಾಹನಗಳ ಮೂಲಕ ಹೆಚ್ಚಿನ ಸಂಖ್ಯೆಯಲ್ಲಿ ಬ್ಯಾನರ್ಸ್ ಮತ್ತು ಪ್ಲೆಕ್ಸ್ ಅಳವಡಿಸುವ ಪ್ರದೇಶಗಳಲ್ಲಿ ಬೀಟ್ ರೂಟ್ ಅನ್ನು ಹಾಕಿಕೊಂಡು ವಲಯವಾರು ಕಾರ್ಯಚಾರಣೆ ನಡೆಸಲಾಗುತ್ತಿದೆ.** |

| | | | | |
|---|---|---|---|---|
| | | | | ಸೂಕ್ಷ್ಮವಾದ ಸ್ಥಳಗಳಲ್ಲಿ ಬೆಳಗ್ಗೆ 6.00 ರಿಂದ 8.00ರವರೆಗೆ ಸಹ ತೆರವು ಕಾರ್ಯಾಚರಣೆ ನಡೆಲಾಗುತ್ತಿದೆ. ಅನಧಿಕೃತ ಫ್ಲೆಕ್ಸ್ ಮತ್ತು ಬ್ಯಾನರ್ ಹಾವಳಿಯನ್ನು ತಡೆಗಟ್ಟಲು ಹಾಗೂ ತೆರವು ಕಾರ್ಯಾಚರಣೆ ನಡೆಸಲು ಎಲ್ಲಾ ವಲಯದ ಅಪರ ಜಂಟಿ ಆಯುಕ್ತರಿಗೆ ಸೂಚಿಸಲಾಗಿದೆ.<br><br>ಆ. ಪ್ರತಿ ಶನಿವಾರ ವಿಶೇಷ ಸ್ವಚ್ಛತಾ ಆಂದೋಲನದ ಅಡಿಯಲ್ಲಿ ಸಹ ವಾರ್ಡ್‌ವಾರು ಅನಧಿಕೃತ ಫ್ಲೆಕ್ಸ್ ಮತ್ತು ಬ್ಯಾನರ್‌ಗಳ ತೆರವು ಕಾರ್ಯಾಚರೆಣೆಯನ್ನು ನಡೆಸಲಾಗುತ್ತದೆ.<br>ಇ. ವಲಯವಾರು ಜಂಟಿ ಆಯುಕ್ತರ ಹಂತದಲ್ಲಿ ಪ್ರಿಂಟಿಂಗ್ ಪ್ರೆಸ್ ಮಾಲೀಕರ ಹಾಗೂ ಜಾಹೀರಾತು ಏಜೆನ್ಸಿದಾರರ ಸಭೆಗಳನ್ನು ಕರೆದು ಪಾಲಿಕೆಯಿಂದ ಪೂರ್ವಾನುಮತಿ ಪಡೆಯದೇ ಅನಧಿಕೃತ ಪ್ಯಾಂಪ್ಲೆಟ್ಸ್, ಫ್ಲೆಕ್ಸ್ ಮತ್ತು ಬ್ಯಾನರ್ಸ್‌ಗಳನ್ನು ಮುದ್ರಿಸಬಾರದೆಂದು ಎಚ್ಚರಿಕೆಯನ್ನು ನೀಡಲಾಗಿರುತ್ತದೆ.<br><br>ಸಾರ್ವಜನಿಕ ವಲಯದಲ್ಲಿ ಫ್ಲೆಕ್ಸ್ ಮತ್ತು ಬ್ಯಾನರ್ಸ್‌ಗಳ ಹಾವಳಿ ಬಗ್ಗೆ ಹೆಚ್ಚು ಅರಿವು ಮೂಡಿಸಲು ಸ್ಥಳೀಯ ಚುನಾಯಿತ ಪ್ರತಿನಿಧಿಗಳು, ರೆಸಿಡೆನ್ಸಿಯಲ್ ವೆಲ್ಫೇರ್ ಅಸೋಸಿಯೇಷನ್ ಹಾಗೂ ಸಂಘ ಸಂಸ್ಥೆಗಳ ಒಡನಾಟದಲ್ಲಿ ತೆರವು ಕಾರ್ಯಕ್ರಮಗಳನ್ನು ಎಲ್ಲಾ ವಲಯದ ಅಪರ/ಜಂಟಿ ಆಯುಕ್ತರು ನಿರಂತರವಾಗಿ ಕೈಗೊಳ್ಳುತ್ತಿದ್ದಾರೆ.<br><br>ಆಯುಕ್ತರ ನೇತೃತ್ವದಲ್ಲಿ ಈಗಾಗಲೇ ಎಲ್ಲಾ ವಲಯದ ಜಂಟಿ ಆಯುಕ್ತರುಗಳಿಗೆ ಅನಧಿಕೃತ ಫ್ಲೆಕ್ಸ್ ಬ್ಯಾನರ್ಸ್ ಅಳವಡಿಸಿರುವವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಲು ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ಫ್ಲೆಕ್ಸ್ ಮತ್ತು ಬ್ಯಾನರ್‌ಗಳನ್ನು ಅಳವಡಿಸುತ್ತಿರುವವರ ವಿರುದ್ಧ ಕರ್ನಾಟಕ ಮುಕ್ತ ಸ್ಥಳಗಳು (ವಿರೂಪಗೊಳಿಸುವಿಕೆ ತಡೆ) ಕಾಯ್ದೆ 1981ರ ಅಡಿಯಲ್ಲಿ ಪ್ರಕರಣಗಳನ್ನು ದಾಖಲಿಸುವಂತೆ ಸೂಚಿಸಲಾಗಿದೆ. ಸದರಿ ಸೂಚನೆಯಂತೆ ವಲಯ ಮಟ್ಟದಲ್ಲಿ ಸ್ಥಳೀಯ ಪೋಲೀಸ್ ಠಾಣೆ/ಬಿ.ಎಂ.ಟಿ.ಎಫ್ ಠಾಣೆಯಲ್ಲಿ ಪ್ರಕರಣಗಳನ್ನು ದಾಖಲಿಸಲಾಗುತ್ತಿದ್ದು, ತನಿಖೆ ಹಂತದಲ್ಲಿರುತ್ತದೆ. |

| | | | | |
|---|---|---|---|---|
| | | | | ಪಾಲಿಕೆಯಲ್ಲಿ ಹೊಸ ಜಾಹೀರಾತು ನೀತಿಯನ್ನು ರೂಪಿಸಲಾಗುತ್ತಿದ್ದು, ಸದರಿ ಜಾಹೀರಾತು ನೀತಿ ಜಾರಿಗೆ ಬಂದ ನಂತರ ನೀತಿಯಲ್ಲಿ ಶಿಫಾರಸ್ಸು ಮಾಡಲಾದ ವಿವಿಧ ವಿಷಯಗಳಿಗೆ ಅನುಸಾರವಾಗಿ ಆರ್ಥಿಕ ಮತ್ತು ಆಡಳಿತದಲ್ಲಿ ಗುಣಮಟ್ಟ ಹಾಗೂ ಪಾರದರ್ಶಕತೆ ಕಾಯ್ದುಕೊಳ್ಳುವ ನಿಟ್ಟಿನಲ್ಲಿ ಕಾನೂನು ಕ್ರಮಗಳನ್ನು ಅಳವಡಿಸಿಕೊಂಡು ಅದರಂತೆ, ಮುಂದಿನ ದಿನಗಳಲ್ಲಿ ಅನಧಿಕೃತ ಫ್ಲೆಕ್ಸ್ ಮತ್ತು ಬ್ಯಾನರ್‌ಗಳನ್ನು ಅಳವಡಿಸುವವರ ವಿರುದ್ಧ ನಿಯಮಾನುಸಾರ ಕ್ರಮಕೈಗೊಳ್ಳಲಾಗುತ್ತದೆಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿದ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |
| 44 | 3662<br>ಚು.ಗು.ಪ್ರ:374<br>ಶ್ರೀ ಡಿ.ಎಸ್. ವೀರಯ್ಯ<br>ವಿಪನದಿ: 08.07.2010 | ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಕಳೆದ 03 ವರ್ಷಗಳಿಂದ ವಿಶೇಷ ಘಟಕ ಯೋಜನೆಯಡಿಯಲ್ಲಿ ಪರಿಶಿಷ್ಟರ ಕಲ್ಯಾಣಕ್ಕೆ ಮೀಸಲಿಟ್ಟಿರುವ ಹಣವನ್ನು ಹಿಂಬಾಕಿ ಎಂದು ಪರಿಗಣಿಸಿ 2010–2011ನೇ ಸಾಲಿನಲ್ಲಿ ಖರ್ಚು ಮಾಡಲು ಕಾರ್ಯಸೂಚಿ ರೂಪಿಸಿರುವ ಬಗ್ಗೆ | ಉಳಿಕೆಯಾಗಿರುವ ಮೊತ್ತವನ್ನು ಮುಂದುವರಿಸಿಕೊಂಡು 2010–11ನೇ ಸಾಲಿನ ಪಾಲಿಕೆಯ ಆಯವ್ಯಯ ಅಂದಾಜುಗಳು ಅನುಮೋದನೆಯಾದ ನಂತರ ಖರ್ಚು ಮಾಡಲು ಕ್ರಿಯಾ ಯೋಜನೆಯನ್ನು ರೂಪಿಸಲಾಗುವುದು ಎಂದು ಮಾನ್ಯ ಮುಖ್ಯಮಂತ್ರಿಯವರು ತಿಳಿಸಿದರು. | ದಿನಾಂಕ: 01.06.2018ರ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ಬೆಂಗಳೂರು ಮಹಾನಗರ ಪಾಲಿಕೆಯ ಕಲ್ಯಾಣ ವಿಭಾಗದಿಂದ 2007–08 ರಿಂದ 2010–11ನೇ ಸಾಲಿನವರೆಗೆ ಪರಿಶಿಷ್ಟರ ಕಲ್ಯಾಣಕ್ಕೆ ಮೀಸಲಿಟ್ಟಿರುವ ಅನುದಾನದ ವಿವರಗಳನ್ನು ಅನುಬಂಧದಲ್ಲಿ ನೀಡಿದೆ. |

**ಅನುಬಂಧ**

| ಕ್ರಮ ಸಂಖ್ಯೆ | ವಿವರ | 2007–08 (ರೂ. ಲಕ್ಷಗಳಲ್ಲಿ) | 2008–09 (ರೂ. ಲಕ್ಷಗಳಲ್ಲಿ) | 2009–10 (ರೂ. ಲಕ್ಷಗಳಲ್ಲಿ) | 2010–11 (ರೂ. ಲಕ್ಷಗಳಲ್ಲಿ) |
|---|---|---|---|---|---|
| 01. | ಹಿಂದಿನ ವರ್ಷದ ಹಿಂಬಾಕಿ ಮೊತ್ತ | 131.88 | 4059.62 | 2428.91 | ಇರುವುದಿಲ್ಲ. |
| 02. | ಪ್ರಸಕ್ತ ಸಾಲಿನ ಅನುದಾನದ ಮೊತ್ತ | 5519.13 | 4675.35 | 2086.97 | 3025.28 |
| 03. | ಹಿಂಬಾಕಿ ಒಳಗೊಂಡಂತೆ ಒಟ್ಟು ಅನುದಾನದ ಮೊತ್ತ | 5651.01 | 8734.97 | 4515.88 | 3025.28 |

| | | | | | |
|---|---|---|---|---|---|
| 04. | ಸದರಿ ಸಾಲಿನಲ್ಲಿ ಖರ್ಚಾಗಿರುವ ಅನುದಾನ ಮೊತ್ತ | 1591.39 | 6306.06 | 11756.96 | 18699.94 |
| 05. | ಸದರಿ ಸಾಲಿನಲ್ಲಿ ಉಳಕೆಯಾಗಿರುವ ಅನುದಾನ | 4059.62 | 2424.91 | 7241.08 | 15674.66 |
| 06. | ಷರಾ | 2007–08ನೇ ಸಾಲಿನ ಹಿಂಬಾಕಿ ಮೊತ್ತ ರೂ. 131.88 ಲಕ್ಷಗಳನ್ನು ಸದರಿ ಸಾಲಿನ ಅನುದಾನದಲ್ಲಿ ಸೇರಿಸಲಾಗಿದೆ. | 2008–09ನೇ ಸಾಲಿನ ಹಿಂಬಾಕಿ ಮೊತ್ತ ರೂ. 4059.62 ಲಕ್ಷಗಳನ್ನು ಸದರಿ ಸಾಲಿನ ಅನುದಾನದಲ್ಲಿ ಸೇರಿಸಲಾಗಿದೆ. | 2009–10ನೇ ಸಾಲಿನ ಹಿಂಬಾಕಿ ಮೊತ್ತ ರೂ. 2428.91 ಲಕ್ಷಗಳನ್ನು ಸದರಿ ಸಾಲಿನ ಅನುದಾನದಲ್ಲಿ ಸೇರಿಸಲಾಗಿದೆ. ಹಾಗೂ ರೂ. 7241.08 ಲಕ್ಷಗಳನ್ನು ಹೆಚ್ಚುವರಿಯಾಗಿ ಖರ್ಚು ಮಾಡಲಾಗಿದೆ. | 2010–11ನೇ ಸಾಲಿನ ಹಿಂಬಾಕಿ ಮೊತ್ತ ಇರುವುದಿಲ್ಲ. ಹಾಗೂ ರೂ. 15674.66 ಲಕ್ಷಗಳನ್ನು ಹೆಚ್ಚುವರಿಯಾಗಿ ಖರ್ಚು ಮಾಡಲಾಗಿದೆ. |

ಮೇಲ್ಕಂಡಂತೆ ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿದ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು.

| | | | | |
|---|---|---|---|---|
| 45 | 3943<br>ಚು.ಗು.ಪ್ರ 362<br>ಶ್ರೀ ಆರ್.ವಿ. ವೆಂಕಟೇಶ್<br>ವಿಪನದಿ: 15.12.2011 | ಬೆಂಗಳೂರು ಮಹಾನಗರದಲ್ಲಿ ಆಧುನಿಕ ಕಸಾಯಿಖಾನೆಗಳನ್ನು ಸ್ಥಾಪಿಸುವ ಬಗ್ಗೆ | ಒಂದೇ ಕಡೆಯಲ್ಲಿ 40–50 ಎಕರೆ ಪ್ರದೇಶದಲ್ಲಿ ಮಾಡುವುದಕ್ಕೆ ಜಾಗ ಸಿಗುವುದಿಲ್ಲ. ಚಿಕ್ಕ ಚಿಕ್ಕದಾಗಿ ನಾಲ್ಕೈದು ಕಡೆಗಳಲ್ಲಿ ಮಾಡಬಹುದು ಎಂದು ಹೇಳುವಂತಹ ಸಂಗತಿ ಯನ್ನು ಹೇಳಿದ್ದಾರೆ. ಇದರ ಸಾಧ್ಯತೆಗಳನ್ನು ನಾವು ಪರಿಶೀಲನೆ ಮಾಡುತ್ತೇವೆ ಎಂದು ಮಾನ್ಯ ಮುಖ್ಯಮಂತ್ರಿಯವರು ತಿಳಿಸಿದರು. | ದಿನಾಂಕ: 01.06.2018ರ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ: ಬಿ.ಬಿ.ಎಂ.ಪಿಯ ವ್ಯಾಪ್ತಿಯಲ್ಲಿ ಪ್ರಸ್ತುತ 3 ಕಸಾಯಿಖಾನೆಗಳು ಕಾರ್ಯನಿರ್ವಹಿಸುತ್ತಿದ್ದು ಅವುಗಳ ವಿವರ ಈ ಕೆಳಗಿನಂತಿದೆ.<br><br>1) ನಾಗರಿಕ ಮಾಂಸ ಉತ್ಪಾದನೆ ಮತ್ತು ಸಂಸ್ಕರಣ ಕೇಂದ್ರ, ಟ್ಯಾನರಿ ರಸ್ತೆ ಫ್ರೇಜರ್ ಟೌನ್, ಬೆಂಗಳೂರು.<br>2) ನಗರ ಮಾಸ ಉತ್ಪಾದನೆ ಮತ್ತು ಸಂಸ್ಕರಣ ಕೇಂದ್ರ ಉಸ್ಮಾನ್ ಖಾನ್ ರಸ್ತೆ, ಬೆಂಗಳೂರು.<br>3) ಹಂದಿ ಮಾಸ ಉತ್ಪಾದನೆ ಮತ್ತು ಸಂಸ್ಕರಣ ಕೇಂದ್ರ ಪಾಟರಿ ರಸ್ತೆ ಫ್ರೇಜರ್ ಟೌನ್ ಬೆಂಗಳೂರು. |

| | | | | |
|---|---|---|---|---|
| | | | | ಈ ಮೂರು ಕಸಾಯಿಖಾನೆಗಳು ಬಹಳ ಹಳೆಯ ಕಟ್ಟಡಗಳಾಗಿದ್ದು, ಸದರಿ ಕಸಾಯಿಖಾನೆಗಳ ದುರಸ್ತಿ ಮತ್ತು ಅಭಿವೃದ್ಧಿ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.<br><br>ಮುಂದುವರೆದು, ಹಾರೋಹಳ್ಳಿ ಗ್ರಾಮ, ಕನಕಪುರ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಇಲ್ಲಿ ಪಾಲಿಕೆಯ ವತಿಯಿಂದ ಹೊಸದಾಗಿ ಆಧುನಿಕ ಕಸಾಯಿಖಾನೆ ನಿರ್ಮಾಣ ಮಾಡಲು ಕೆ.ಐ.ಎ.ಡಿ.ಬಿ. ರವರು ರೈತರಿಂದ ಸ್ವಾಧೀನಪಡಿಸಿಕೊಂಡ ಜಮೀನನ್ನು ಪಾಲಿಕೆಗೆ ಹಸ್ತಾಂತರಮಾಡಿರುತ್ತರೆ. ಆಧುನಿಕ ಕಸಾಯಿಖಾನೆ ನಿರ್ಮಾಣ ಮಾಡಲು ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡಿದ್ದು ಪಾಲಿಕೆಯ ವತಿಯಿಂದ ತಡೆಗೋಡೆ (ಕಾಂಪೌಂಡ್ ವಾಲ್) ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿದ್ದು ಡಿಸೆಂಬರ್ 2018ರೊಳಗೆ ಪೂರ್ಣಗೊಳಿಸಲಾಗುತ್ತದೆ ಎಂದು ಬಿ.ಬಿ.ಎಂ.ಪಿ ಆಯುಕ್ತರು ಸರ್ಕಾರಕ್ಕೆ ವರದಿ ಮಾಡಿರುತ್ತಾರೆಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ಸಮಿತಿಯು ತೀರ್ಮಾನಿಸಿತು. |
| 46 | 3945<br>ಚು.ಗು.ಪ್ರ.321<br>ಡಾ: ಶ್ರೀನಾಥ್<br>ವಿಪನದಿ: 15.12.2011 | ದಿನಾಂಕ: 1.4.2008 ರಿಂದ ಬಿ.ಬಿ.ಎಂ.ಪಿ ತೆಗೆದುಕೊಂಡಿರುವ ಬೃಹತ್ ಅಭಿವೃದ್ಧಿ ಯೋಜನೆಗಳಲ್ಲಿ ಕಾಮಗಾರಿಗಳನ್ನು ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸದಿರುವ ಬಗ್ಗೆ | ಭೂಸ್ವಾಧೀನ ಪ್ರಕ್ರಿಯೆ, ಉಪಯುಕ್ತ ನಾಗರೀಕ ಸೌಲಭ್ಯಗಳನ್ನು ಸ್ಥಳಾಂತರಿಸುವುದು ಮತ್ತು ನ್ಯಾಯಾಲಯ ಪ್ರಕರಣಗಳಿಂದಾಗಿ ಯೋಜನೆಗಳನ್ನು ನಿಗದಿತ ಅವಧಿಯೊಳಗೆ ಪೂರ್ಣಗೊಳಿಸಲು ವಿಳಂಬವಾಗುತ್ತದೆ. ಈ ತೊಂದರೆಗಳನ್ನು ನಿವಾರಿಸಲು ಅಗತ್ಯ ಕ್ರಮ ಕೈಗೊಂಡು ಯೋಜನೆಗಳನ್ನು ಆದಷ್ಟು ಶೀಘ್ರವಾಗಿ | ದಿನಾಂಕ: 01.06.2018ರ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸ್ವಂತ ನಿಧಿಯಿಂದ ಮತ್ತು ಸರ್ಕಾರದ ಅನುದಾನಗಳಲ್ಲಿ ಹಲವಾರು ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದ್ದು, ಕಾಮಗಾರಿ ಪ್ರಗತಿಯಲ್ಲಿದ್ದು, ಕಳೆದ 2 ವರ್ಷಗಳ ಅವಧಿಯಲ್ಲಿ ರಸ್ತೆ, ಅಗಲೀಕರಣ, ಗ್ರೇಡ್ ಸೆಪರೇಟರ್‌ಗಳ ನಿರ್ಮಾಣ ಮತ್ತು ರೈಲ್ವೆ ಕೆಳಸೇತುವೆ/ಮೇಲುಸೇತುವೆಗಳನ್ನು ನಿರ್ಮಿಸುತ್ತಿದ್ದು, ಯೋಜನೆಗಳನ್ನು ಪೂರ್ಣಗೊಳಿಸಲು ನಿಗಧಿತ ಅವಧಿಯನ್ನು ನಿಗಧಿಪಡಿಸಲಾಗಿದ್ದು, ಕೆಲವೊಂದು ಕೆಳಕಂಡ ಸಂದರ್ಭಗಳ ಅಡಚಣೆಯಿಂದಾಗಿ ನಿಗದಿತ ಸಮಯದಲ್ಲಿ ಬೃಹತ್ ಕಾಮಗಾರಿಗಳನ್ನು ಪೂರ್ಣಗೊಳಿಸಲು ಸಾಧ್ಯವಾಗುತ್ತಿರುವುದಿಲ್ಲ. ಕಾಮಗಾರಿ ವಿಳಂಬಕ್ಕೆ ಕೆಲವೊಂದು ಪ್ರಮುಖ ಕಾರಣಗಳು ಕೆಳಕಂಡಂತಿರುತ್ತವೆ.<br><br>ರಕ್ಷಣಾ ಇಲಾಖೆ, ರೈಲ್ವೆ ಇಲಾಖೆ ಮತ್ತು ಖಾಸಗಿ ಸ್ವತ್ತುಗಳ ಭೂಸ್ವಾಧೀನ ಮತ್ತು ಟಿ.ಡಿ.ಆರ್. ಅನ್ವಯ ಖಾಸಗಿ ಸ್ವತ್ತುಗಳ ಭೂಸ್ವಾಧೀನಕ್ಕೆ ಭೂ ಮಾಲೀಕರು |

| | | | | |
|---|---|---|---|---|
| | | | ಅನುಷ್ಠಾನಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಮಾನ್ಯ ಮುಖ್ಯಮಂತ್ರಿಯವರು ತಿಳಿಸಿದರು. | ಒಪ್ಪಿಗೆ ನೀಡದಿರುವುದರಿಂದ, ಮೂಲಭೂತ ಸೌಕರ್ಯಗಳಾದ ವಿದ್ಯುತ್ ಕೇಬಲ್ ಮತ್ತು ಕಂಬಗಳು, ನೀರು ಸರಬರಾಜು ಮತ್ತು ಒಳಚರಂಡಿ ಕೊಳವೆಗಳು, ದೂರವಾಣಿ ಹಾಗೂ ಇತರೆ ಕೇಬಲ್‌ಗಳು ಮತ್ತು ಇತರೆ ಅನುಸಾಧನಗಳ ಸ್ಥಳಾಂತರಿಸುವ ಪ್ರಕ್ರಿಯೆಯಿಂದ, ಕೆಲವೊಂದು ಪ್ರಕರಣಗಳಲ್ಲಿ ನ್ಯಾಯಾಲಯದ ತಡೆಯಾಜ್ಞೆಯಿಂದಾಗಿ ಕೆಲವೊಂದು ಪ್ರಕರಣಗಳಲ್ಲಿ ಸಾರ್ವಜನಿಕರು ವಿರೋಧ ವ್ಯಕ್ತಪಡಿಸುವುದರಿಂದ ಪ್ರಗತಿಗೆ ಕುಂಠಿತವಾಗುವ ಈ ತರಹದ ಅಡಚಣೆಗಳನ್ನು ನಿವಾರಿಸಲು ಆಗಿಂದಾಗ್ಗೆ ಯೋಜನೆಯ ಕಾರ್ಯವೈಖರಿ ಮತ್ತು ಅನುಷ್ಠಾನವನ್ನು ಪರಿಶೀಲಿಸಿ, ಈ ಕುರಿತು ಪಾಲಿಕೆ ಮತ್ತು ಸರ್ಕಾರದ ಮಟ್ಟದಲ್ಲಿ ಸಮನ್ವಯ ಸಭೆಗಳನ್ನು ನಡೆಸುತ್ತಿದ್ದು, ಸ್ಥಳಕ್ಕೆ ಅನುಗುಣವಾಗಿರುವ ತೊಂದರೆಗಳನ್ನು ನಿವಾರಿಸಲು ಸಂಬಂಧಪಟ್ಟ ಇಲಾಖೆಯವರಿಗೆ ಸೂಚನೆಗಳನ್ನು ನೀಡಿ ಕಾಲ ವಿಳಂಬವಾಗದಂತೆ ಅಗತ್ಯ ಕ್ರಮಗಳು ಕೈಗೆತ್ತಿಕೊಳ್ಳಲಾಗುತ್ತಿದೆ ಹಾಗೂ ಈ ಕಾರ್ಯಗಳಿಂದ ಕಾಮಗಾರಿಗಳನ್ನು ಶೀಘ್ರದಲ್ಲಿ ಪೂರ್ಣಗೊಳಿಸಲು ತುರ್ತು ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿದ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |
| 47 | 3950<br>ಚು.ರ.ಪ್ರ. 107<br>ಕೆ.ಪ್ರತಾಪಚಂದ್ರ ಶೆಟ್ಟಿ<br>ವಿಪನದಿ: 02.02.2012 | ಬೆಂಗಳೂರು ನಗರದ ಇಂಟರ್ ಮಿಡಿಯೇಟ್ ರಿಂಗ್ ರಸ್ತೆ, ದೊಮ್ಮಲೂರು–ಈ ರಸ್ತೆಯಲ್ಲಿ ವಾಹನ ಸಂಚಾರ ದಟ್ಟವಾಗಿದ್ದು ಪಾದಚಾರಿಗಳಿಗೆ ತೊಂದರೆಯಾಗಿದ್ದು, ಈ ಸಮಸ್ಯೆ ಪರಿಹರಿಸುವ ಬಗ್ಗೆ. | ಈ ಸಮಸ್ಯೆಯನ್ನು ಪರಿಹರಿಸಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಿಂದ ಸದರಿ ಸ್ಥಳದಲ್ಲಿ ಅಂದರೆ, ಎಂಬೆಸಿ ಸ್ಕ್ವೆರ್ ಹತ್ತಿರ ಪಾದಚಾರಿ ಮೇಲು ಸೇತುವೆಯನ್ನು ನಿರ್ಮಿಸಲು ಯೋಜನೆಯನ್ನು ರೂಪಿಸಲಾಗಿದೆ. ಈ ಯೋಜನೆಯನ್ನು ಪಿ.ಪಿ.ಸಿ ಮಾದರಿ ಅಡಿಯಲ್ಲಿ ನಿರ್ಮಿಸಲು | ದಿನಾಂಕ: 01.06.2018ರ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಎಂಬೆಸ್ಸಿ ಸ್ಕ್ವೆರ್ ಹತ್ತಿರ ಪಾದಚಾರಿ ಮೇಲು ಸೇತುವೆಯನ್ನು ಪಿ.ಪಿ.ಸಿ. ಮಾದರಿ ಅಡಿಯಲ್ಲಿ ನಿರ್ಮಿಸಲು ಯೋಜನೆ ರೂಪಿಸಿ ಟೆಂಡರ್ ಆಧಾರದ ಮೇಲೆ ಮೆ: ಪ್ರಕಾಶ್ ಆರ್ಟ್ಸ್ ರವರಿಗೆ ದಿನಾಂಕ: 15.12.2013 ರಂದು ಕಾರ್ಯದೇಶವನ್ನು ನೀಡಿದ್ದು, ಕಾಮಗಾರಿಯನ್ನು ನಿರ್ವಹಿಸುವ ಸಂದರ್ಭದಲ್ಲಿ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ: 1692/2015, 55758/2014 ಅನ್ನು ದಾಖಲಿಸಿದ್ದು ಈ ಬಗ್ಗೆ ಮಾನ್ಯ ನ್ಯಾಯಾಲಯವು ತಡೆಯಾಜ್ಞೆಯನ್ನು ನೀಡಿದ ಕಾರಣ ಕಾಮಗಾರಿಯನ್ನು ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸಲು ಸಾಧ್ಯವಾಗಿರಲಿಲ್ಲ.<br><br>ತದನಂತರ, ದಿನಾಂಕ: 24.06.2016ರಂದು ಮಾನ್ಯ ನ್ಯಾಯಾಲಯವು ಸದರಿ ತಡೆಯಾಜ್ಞೆಯನ್ನು ತೆರವುಗೊಳಿಸಿದ ನಂತರ ಪಾದಚಾರಿ ಮೇಲ್ |

| | | | | |
|---|---|---|---|---|
| | | | ತೀರ್ಮಾನಿಸಿದ್ದು, ಸದ್ಯದಲ್ಲಿಯೇ ಟೆಂಡರ್ ಕರೆಯಲು ಕ್ರಮ ವಹಿಸ ಲಾಗಿದೆ ಎಂದು ಮಾನ್ಯ ಮುಖ್ಯಮಂತ್ರಿಗಳು ತಿಳಿಸಿದರು. | ಸೇತುವೆಯನ್ನು ಪ್ರಾರಂಭಿಸಿ ಪೂರ್ಣಗೊಳಿಸಿ, ಮಾರ್ಚ್–2018ರಲ್ಲಿ ಉದ್ಘಾಟನೆ ಮಾಡಿ ಸಾರ್ವಜನಿಕ ಉಪಯೋಗಕ್ಕೆ ಮುಕ್ತಗೊಳಿಸಲಾಗಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿದ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |
| 48 | 3951<br>ಚು.ರ.ಪ್ರ. 233<br>ಡಾ: ಶ್ರೀನಾಥ್<br>ವಿಪನದಿ : 02.02.2012 | ಬಿ.ಬಿ.ಎಂ.ಪಿ.ಯಲ್ಲಿ ದಿನಾಂಕ: 01.04.2008 ರಿಂದ ನಡೆದಿರುವ ಭ್ರಷ್ಟಾಚಾರದ ಪ್ರಕರಣಗಳ ಬಗ್ಗೆ ಸರ್ಕಾರ ಕೈಗೊಂಡ ಕ್ರಮದ ಕುರಿತು. | ಗಾಂಧೀನಗರ, ಮಲ್ಲೇಶ್ವರಂ ಮತ್ತು ರಾಜರಾಜೇಶ್ವರಿ ನಗರ ಇಂಜನಿಯರಿಂಗ್ ವಿಭಾಗಗಳ ವ್ಯಾಪ್ತಿಯಲ್ಲಿ ನಡೆದಿದೆ ಎನ್ನಲಾದ ಕಾಮಗಾರಿಗಳಲ್ಲಿನ ಅಕ್ರಮ ಪ್ರಕರಣವನ್ನು ಸರ್ಕಾರ ದಿ: 07.12.2011 ರಲ್ಲಿ ಸಿ.ಐ.ಡಿ.ಗೆ ವಹಿಸಲಾಗಿದೆ ಹಾಗೂ ಮಾನ್ಯ ಲೋಕಾಯುಕ್ತರು ಮತ್ತು ವಿಚಾರಣಾಧಿಕಾರಿಗಳು ನೀಡುವ ವರದಿಯನ್ವಯ ಕ್ರಮ ಕೈಗೊಳ್ಳಲಾಗುವುದು ಎಂದು ಮಾನ್ಯ ಮುಖ್ಯ ಮಂತ್ರಿಗಳು ತಿಳಿಸಿದರು. | ದಿನಾಂಕ: 01.06.2018ರ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ ಸರ್ಕಾರದ ಆದೇಶ ಸಂಖ್ಯೆ ಒಇ 130 ಸಿಐಡಿ 2011ರಲ್ಲಿ ಬಿ.ಬಿಎಂ.ಪಿ. ಆಯುಕ್ತರು, ಬೆಂಗಳೂರು ಮಹಾನಗರ ಕಾರ್ಯಾಚರಣೆ ಪಡೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ಸಂಖ್ಯೆ: 04/2011 ರನ್ವಯ ದಾಖಲಿಸಿದ್ದ ಪ್ರಕರಣವನ್ನು ಹಿಂದಕ್ಕೆ ಪಡೆದು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಗಾಂಧಿನಗರ, ಮಲ್ಲೇಶ್ವರಂ, ಮತ್ತು ರಾಜರಾಜೇಶ್ವರಿನಗರ ವಿಭಾಗಗಳಲ್ಲಿ ಅಕ್ರಮ ಹಾಗೂ ಅವ್ಯವಹಾರಗಳ ಬಗ್ಗೆ ಮತ್ತು ಮಹಾನಗರ ಪಾಲಿಕೆಯ ಇಂಜಿನಿಯರಿಂಗ್ ವಿಭಾಗಗಳಲ್ಲಿ 2005–06ನೇ ಸಾಲಿನ ಆರ್ಥಿಕ ವರ್ಷದಿಂದ ಕೈಗೊಂಡಿರುವ ಕಾಮಗಾರಿಗಳ/ಅಕ್ರಮಗಳ ಬಗ್ಗೆ ಸಮಗ್ರ ತನಿಖೆಯನ್ನು ನಡೆಸಲು ಸಿ.ಐ.ಡಿ.ಗೆ ವಹಿಸಿ ಆದೇಶಿಸಲಾಗಿತ್ತು.<br><br>ನಂತರ, ಸರ್ಕಾರದ ಆದೇಶ ಸಂಖ್ಯೆ ಒಇ 130 ಸಿಐಡಿ 2011, ದಿನಾಂಕ: 07.12.2011ರಲ್ಲಿ ದಿನಾಂಕ: 28.11.2011ರ ಆದೇಶವನ್ನು ಹಿಂಪಡೆದು, ಬೆಂಗಳೂರು ಮಹಾನಗರ ಕಾರ್ಯಾಚರಣೆ ಪಡೆ ಪೊಲೀಸ್ ಠಾಣೆಯಲ್ಲಿ ದಾಖಲಿಸಿರುವ ಪ್ರಕರಣ ಸಂಖ್ಯೆ: 04/2011ರನ್ವಯ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಗಾಂಧಿನಗರ, ಮಲ್ಲೇಶ್ವರಂ ಮತ್ತು ರಾಜರಾಜೇಶ್ವರಿನಗರ ವಿಭಾಗಗಳಲ್ಲಿ ಡಾಂಬರೀಕರಣ ಕಾಮಗಾರಿಗಳಲ್ಲಿ ಅಕ್ರಮ ಮತ್ತು ಅವ್ಯವಹಾರಗಳ ಬಗ್ಗೆ ತನಿಖೆಯನ್ನು ಸಿ.ಐ.ಡಿಗೆ ವಹಿಸಿ ಆದೇಶಿಲಾಗಿತ್ತು.<br><br>ಸರ್ಕಾರದ ತಿದ್ದುಪಡಿ ಆದೇಶ ಸಂಖ್ಯೆ ಒಇ 130 ಸಿಐಡಿ 2011, ದಿನಾಂಕ: 01.02.2012ರಲ್ಲಿ ದಿನಾಂಕ: 07.12.2011ರ ಆದೇಶದ ಭಾಗದ 4ನೇ ಸಾಲಿನ ನಂತರ ಡಾಂಬರೀಕರಣಕ್ಕೆ ಸೀಮಿತಗೊಳಿಸಿ ಆದೇಶ ಹೊರಡಿಸಿರುವುದನ್ನು ಮಾರ್ಪಡಿಸಿ ಬಿ.ಎಂ.ಟಿ.ಎಫ್. ಗೆ (ಕ್ರಿಮಿನಲ್ ಮೊಕದ್ದಮೆ ಸಂಖ್ಯೆ: 4/11) |

| | | | | |
|---|---|---|---|---|
| | | | | ವಹಿಸಿರುವ ಪ್ರಕರಣದಲ್ಲಿ ಒಳಗೊಂಡಿರುವ ಗಾಂಧಿನಗರ, ಮಲ್ಲೇಶ್ವರಂ ಮತ್ತು ರಾಜರಾಜೇಶ್ವರಿ ನಗರ ವಿಭಾಗಗಳಲ್ಲಿ ನಡೆದಿರುವ ಕಾಮಗಾರಿಗಳ ಅವ್ಯವಹಾರಗಳ ತನಿಖೆಯನ್ನು ಸಿಐಡಿಗೆ ವಹಿಸಿ ಆದೇಶಿಸಲಾಗಿತ್ತು.<br><br>ಪ್ರಕರಣವನ್ನು ತನಿಖೆಗಾಗಿ ಸಿ.ಐ.ಡಿ.ಗೆ ವಹಿಸಿ ಸುಮಾರು ಮೂರುವರೆ ವರ್ಷಗಳು ಕಳೆದಿವೆ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಗಾಂಧಿನಗರ, ಮಲ್ಲೇಶ್ವರ ಮತ್ತು ರಾಜರಾಜೇಶ್ವರಿನಗರ ಇಂಜಿನಿಯರಿಂಗ್ ವಿಭಾಗದ ಕಾಮಗಾರಿಗಳಲ್ಲಿ ನಡೆದಿರುವ ಅವ್ಯವಹಾರಗಳ ಬಗ್ಗೆ ಸಂಪೂರ್ಣವಾಗಿ ತನಿಖೆ ನಡೆಸಲು ಸಿ.ಐ.ಡಿ. ಸಂಸ್ಥೆಯು ಅಸಹಾಯಕತೆ ವ್ಯಕ್ತಪಡಿಸಿ, ಆಯಾ ಪ್ರದೇಶದ ಸರಹದ್ದಿನ ಪೊಲೀಸ್ ಠಾಣೆಗಳಿಗೆ ವಹಿಸುವಂತೆ ಕೋರಿರುವುದರಿಂದ ಪ್ರಕರಣದ ತನಿಖೆಯು ಸುಸೂತ್ರವಾಗಿ ಹಾಗೂ ಕ್ಲುಪ್ತ ಸಮಯದಲ್ಲಿ ಪೂರ್ಣಗೊಳಿಸಲು ಬೇರೆ ಪರ್ಯಾಯ ಕ್ರಮ ಕೈಗೊಳ್ಳುವುದು ಸೂಕ್ತವೆಂದು ಕಂಡುಬಂದಿದ್ದು, ಈ ಬಗ್ಗೆ ಸಚಿವ ಸಂಪುಟವು ದಿನಾಂಕ: 31.08.2015ರಂದು ಕೆಳಕಂಡ ಅಂಶಗಳಿಗೆ ಅನುಮೋದನೆ ನೀಡಿರುತ್ತದೆ.<br><br>ಈಗಾಗಲೇ ಸಿ.ಐ.ಡಿ.ಯ ತನಿಖೆ ನಡೆಸುತ್ತಿರುವ 3 ವಿಭಾಗಗಳು ಅಂದರೆ, ಗಾಂಧಿನಗರ, ಮಲ್ಲೇಶ್ವರಂ ಮತ್ತು ರಾಜರಾಜೇಶ್ವರಿನಗರ ವಿಭಾಗಗಳಿಗೆ ಸಂಬಂಧಿಸಿದಂತೆ 6.188 ಕಾಮಗಾರಿಗಳ ಪೈಕಿ ತನಿಖೆ ಮುಕ್ತಾಯಗೊಂಡಿರುವ 78 ಕಾಮಗಾರಿಗಳು ಸೇರಿದಂತೆ ತನಿಖೆಯು ವಿವಿಧ ಹಂತಗಳಲ್ಲಿರುವ 285 ಕಾಮಗಾರಿಗಳ ತನಿಖೆಯನ್ನು ಸಿ.ಓ.ಡಿ. ವತಿಯಿಂದ ತನಿಖೆ ನಡೆಸಲು;<br><br>ಉಳಿದ 5,903 ಕಾಮಗಾರಿಗಳ ತನಿಖೆಯನ್ನು ಸಿ.ಐ.ಡಿ. ಯಿಂದ ಹಿಂಪಡೆದು, ಅವುಗಳನ್ನು ಒಳಗೊಂಡಂತೆ ಬಿ.ಬಿ.ಎಂ.ಪಿ.ಗೆ ಸೇರಿದ ಇನ್ನಿತರೆ 25 ಇಂಜಿನಿಯರಿಂಗ್ ವಿಭಾಗಗಳಲ್ಲಿ 2005–06ನೇ ಸಾಲಿನಿಂದ 2011–12ನೇ ಸಾಲಿನವರೆಗೆ ನಡೆದಿರುವ ಡಾಂಬರೀಕರಣ ಕಾಮಗಾರಿಗಳಲ್ಲಿನ ಅಕ್ರಮ ಮತ್ತು ಅವ್ಯವಹಾರಗಳ ಬಗ್ಗೆ ತನಿಖೆಯನ್ನು ನಡೆಸಿ, ತಪ್ಪಿತಸ್ಥ ಅಧಿಕಾರಿ/ನೌಕರರ ವಿರುದ್ಧ ಶಿಸ್ತುಕ್ರಮ ಜರುಗಿಸಲು ಅನುವಾಗುವಂತೆ ಕಾಲಮಿತಿಯನ್ನು ವಿಧಿಸಿ, ರಾಜ್ಯ ಉಚ್ಚ |

| | | | | |
|---|---|---|---|---|
| | | | | ನ್ಯಾಯಾಲಯದ ನಿವೃತ್ತ ನ್ಯಾಯಾಧೀಶರ ನೇತೃತ್ವದಲ್ಲಿ ಇಬ್ಬರು ಅಥವಾ ಮೂರು ಜನ ನಿವೃತ್ತ ಮುಖ್ಯ ಇಂಜಿನಿಯರ್ ವೃಂದದ ತಾಂತ್ರಿಕ ಪರಿಣಿತರನ್ನೊಳಗೊಂಡ ತನಿಖಾ ತಂಡವನ್ನು ರಚಿಸಿ ವಿಚಾರಣೆ ನಡೆಸಲು;<br><br>ಸರ್ಕಾರದ ಆದೇಶ ಸಂಖ್ಯೆ: ನಅಇ 117 ಎಂಎನ್‌ಯು 2015, ದಿನಾಂಕ: 19.02.2015ರಲ್ಲಿ ಬಿ.ಬಿ.ಎಂ.ಪಿ.ಯಲ್ಲಿ ಅನೇಕ ಅಕ್ರಮ–ಅವ್ಯವಹಾರಗಳು ನಡೆಯುತ್ತಿರುವುದಾಗಿ ಗಂಭೀರ ಸ್ವರೂಪದ ಆರೋಪಗಳು ಮೇಲ್ನೋಟಕ್ಕೆ ಕಂಡು ಬಂದಿರುವುದರಿಂದ ಪಾಲಿಕೆಯಲ್ಲಿ 2008 ರಿಂದಲೂ 198 ವಾರ್ಡ್‌ಗಳಲ್ಲಿ 28 ವಿಧಾನ ಸಭಾ ಕ್ಷೇತ್ರಗಳನ್ನು ಒಳಗೊಂಡಂತೆ ನಡೆದಿದೆಯೆನ್ನಲಾದ ಲೋಪದೋಷಗಳು ಹಾಗೂ ಇನ್ನಿತರೆ ಎಲ್ಲಾ ಅವ್ಯವಹಾರಗಳಲ್ಲಿನ ಸತ್ಯಾಸತ್ಯತೆಯನ್ನು ಕಂಡುಕೊಳ್ಳುವ ಸಲುವಾಗಿ ತನಿಖೆ ನಡೆಸಿ ವರದಿಯನ್ನು ಸಲ್ಲಿಸಲು ಶ್ರೀ ರಾಜೇಂದ್ರ ಕುಮಾರ್ ಕಟಾರಿಯಾ, ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ ಮತ್ತು ಶ್ರೀ ಶಿವರುದ್ರಪ್ಪ, ಜಂಟಿ ನಿಯಂತ್ರಕರು, ಖಜಾನೆ–2 ರವರುಗಳನ್ನೊಳಗೊಂಡ ತನಿಖಾ ತಂಡವನ್ನು ರಚಿಸಲಾಗಿತ್ತು.<br><br>ಶ್ರೀ ರಾಜೇಂದ್ರ ಕುಮಾರ್ ಕಟಾರಿಯಾ, ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ ಇವರ ನೇತೃತ್ವದ ತನಿಖಾ ತಂಡವು ದಿನಾಂಕ: 05.03.2015ರಂದು ಸಲ್ಲಿಸಿರುವ ತನಿಖಾ ವರದಿಯಲ್ಲಿ ಈ ಕೆಳಕಂಡಂತೆ ತಿಳಿಸಿರುತ್ತದೆ.<br><br>ಪಾಲಿಕೆಯಲ್ಲಿ ಕಾಮಗಾರಿಗಳಿಗೆ ಸಂಕೇತ ನೀಡುವ ಸಂದರ್ಭದಲ್ಲಿ ಕಾಮಗಾರಿಗಳ ಸಂಖ್ಯೆ ಮತ್ತು ಮೊತ್ತದಲ್ಲಿ ಅಂಕಿ ಅಂಶಗಳ ವ್ಯತ್ಯಾಸ ಇರುವುದು, ಮರುಹೊಂದಾಣಿಕೆ ಇಲ್ಲದೇ ಹೆಚ್ಚುವರಿ ಕಾಮಗಾರಿ ಸಂಕೇತ ನೀಡಿರುವುದು, ಆಯುಕ್ತರ ಅನುಮೋದನೆ ಅಲ್ಲದೇ ಪಿ.ಓ.ಡಬ್ಲ್ಯೂ. ಮಿಸ್ಸಿಂಗ್ ಎಂದು ನಮೂದಿಸಿ ಕಾಮಗಾರಿ ಸಂಖ್ಯೆ ನೀಡಿರುವುದು, ಕಾಮಗಾರಿಗಳ ಹೆಸರುಗಳನ್ನು ಬದಲಾಯಿಸಿರುವುದು, ಒಂದೇ ಕಾಮಗಾರಿಗೆ ಎರಡು ಕಾಮಗಾರಿ ಸಂಕೇತ |

| | | | | |
|---|---|---|---|---|
| | | | | ನೀಡಿರುವುದು, ಇತ್ಯಾದಿ ಲೋಪದೋಷಗಳನ್ನು ಲೆಕ್ಕ ಪರೀಶೋಧಕರು ಅವಲೋಕಿಸಿರುವುದನ್ನು ತನಿಖಾ ತಂಡವು ತನ್ನ ವರದಿಯಲ್ಲಿ ಪ್ರತಿಬಿಂಬಿಸಿದೆ. ಇದಲ್ಲದೇ; ತ್ಯಾಜ್ಯ ವಿಲೇವಾರಿ ನಿರ್ವಹಣೆಯನ್ನು ಅಸಮರ್ಪಕವಾಗಿ ನಿರ್ವಹಿಸುತ್ತಿರುವುದು, ಜಾಹೀರಾತು ವಿಭಾಗದಲ್ಲಿ ಸಾವಿರಾರು ಕೋಟಿಗಳ ಶುಲ್ಕ ವಸೂಲಿ ಮಾಡದೇ ಆರ್ಥಿಕ ನಷ್ಟವನ್ನುಂಟು ಮಾಡಿರುವುದು ಹಾಗೆಯೇ, ಸುಮಾರು 20,000 ಅನಧಿಕೃತ ಜಾಹೀರಾತು ಫಲಕಗಳನ್ನು ಅಳವಡಿಸಿಕೊಂಡಿದ್ದು, ಆ ಬಗ್ಗೆ ಮಾನ್ಯ ಉಪ ಲೋಕಾಯುಕ್ತರು ತೀವ್ರ ಅಸಮಾಧಾನ ವ್ಯಕ್ತಪಡಿಸಿರುವುದು, ಓ.ಎಫ್.ಸಿ. ಕೇಬಲ್ ಅಳವಡಿಸುವಲ್ಲಿ ಸಾವಿರಾರು ಕೋಟಿ ಅರ್ಥಿಕ ನಷ್ಟ ಉಂಟಾಗುವಂತೆ ಮಾಡಿರುವುದು, ಇತ್ಯಾದಿ ಅಂಶಗಳನ್ನೊಳಗೊಂಡಂತೆ ಪಾಲಿಕೆಯು ಆರ್ಥಿಕ ಸಂಕಷ್ಟದಲ್ಲಿದ್ದು, ವ್ಯವಸ್ಥಿತವಾದ ಆರ್ಥಿಕ ನಿರ್ವಹಣೆ ನಡೆಸದೇ ಇರುವುದರ ಬಗ್ಗೆ ತಿಳಿಸಿದೆ.<br><br>ಮೇಲೆ ವಿವರಿಸಿರುವ ಎಲ್ಲಾ ಅಂಶಗಳನ್ನು ಪರಿಶೀಲಿಸಿದ ಸರ್ಕಾರ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಗಾಂಧಿನಗರ, ಮೆಲ್ಲೇಶ್ವರ ಹಾಗೂ ರಾಜರಾಜೇಶ್ವರಿನಗರ ವಲಯಗಳ ಇಂಜಿನಿಯರಿಂಗ್ ವಿಭಾಗಗಳಲ್ಲಿ ನಡೆದಿರುವ ಅವ್ಯವಹಾರಗಳು ಸೇರಿದಂತೆ ಶ್ರೀ ರಾಜೇಂದ್ರ ಕಟಾರಿಯಾ ಸಮಿತಿಯ ವರದಿಯಲ್ಲಿ ಬಿ.ಬಿ.ಎಂ.ಪಿಯ 198 ವಾರ್ಡ್‌ಗಳಲ್ಲಿ 2008 ರಿಂದ ನಡೆದಿದೆ ಎನ್ನಲಾದ ಕೋಟ್ಯಾಂತರ ರೂ. ಗಳ ಅಕ್ರಮ ಮತ್ತು ಅವ್ಯವಹಾರಗಳ ಕುರಿತು ನೀಡಿರುವ ವಿವರವಾದ ವರದಿಯಲ್ಲಿನ ಅಂಶಗಳಂತೆ ಒಟ್ಟು 6,188 ಕಾಮಗಾರಿಗಳ ಪೈಕಿ 285 ಕಾಮಗಾರಿಗಳನ್ನು ಸಿ.ಐ.ಡಿ. ವತಿಯಿಂದ ನಡೆಸಲು ಹಾಗೂ ಉಳಿದ 5,903 ಕಾಮಗಾರಿಗಳ ತನಿಖೆಯನ್ನು ಸ್ವತಂತ್ರ, ತಜ್ಞ ತನಿಖಾ ಸಂಸ್ಥೆಯ ಮೂಲಕ ಮಾಡಿಸುವುದು ಹಾಗೂ ಬಿ.ಬಿ.ಎಂ.ಪಿ.ಯ ಆಡಳಿತವನ್ನು ಉತ್ತಮಗೊಳಿಸುವ ನಿಟ್ಟಿನಲ್ಲಿ ಮತ್ತು ಹಣ ದುರುಪಯೋಗವನ್ನು ತಡೆಗಟ್ಟಲು ಕೆಲವು ಕ್ರಮಗಳನ್ನು ಕೈಗೊಳ್ಳುವುದು ಅವಶ್ಯಕವೆಂಬುದನ್ನು ದೃಷ್ಟಿಯಲ್ಲಿಟ್ಟುಕೊಂಡು ವಿವರವಾದ ತನಿಖೆಯನ್ನು ನಡೆಸುವುದು ಸೂಕ್ತವೆಂದು ಪರಿಗಣಿಸಿ ಕರ್ನಾಟಕ ಉಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಾಮೂರ್ತಿಗಳ ಅಧ್ಯಕ್ಷತೆಯಲ್ಲಿ ಹಾಗೂ ನಿವೃತ್ತ ಪ್ರಧಾನ/ಮುಖ್ಯ ಅಭಿಯಂತರರುಗಳನ್ನೊಳಗೊಂಡ ಸಮಿತಿಯನ್ನು ರಚಿಸಲು ಸರ್ಕಾರವು ತೀರ್ಮಾನಿಸಿ, ಸರ್ಕಾರದ ಆದೇಶ ಸಂಖ್ಯೆ: ನಅಇ 479 |

| | | | | |
|---|---|---|---|---|
| | | | | ಎಂಎನ್‌ಯು 2011, ದಿನಾಂಕ: 16.06.2016ರಲ್ಲಿ ಶ್ರೀ ಹೆಚ್.ಎನ್. ನಾಗಮೋಹನ್‌ದಾಸ್ ನಿವೃತ್ತ ನ್ಯಾಯಮೂರ್ತಿಗಳು ಇವರ ನೇತೃತ್ವದಲ್ಲಿ ತನಿಖಾ ಸಮಿತಿಯನ್ನು ರಚಿಸಿದ್ದು, ತನಿಖೆ ಕೈಗೊಂಡು ಸರ್ಕಾರಕ್ಕೆ ವರದಿ ಸಲ್ಲಿಸುವಂತೆ ಆದೇಶಿಸಲಾಗಿದೆ.<br><br>ಸದರಿ ತನಿಖಾ ಸಮಿತಿಯು ದಿನಾಂಕ: 29.11.2017ರಲ್ಲಿ ಒಟ್ಟು 6188 ಕಾಮಗಾರಿಗಳಲ್ಲಿ ರಾಜರಾಜೇಶ್ವರಿ ನಗರದ 1227 ಮತ್ತು ಮಲ್ಲೇಶ್ವರಂ ವಿಭಾಗದ 700 ಕಾಮಗಾರಿಗಳ ಕಡತ ಪರಿಶೀಲನೆ ಮುಗಿದಿದ್ದು, ಈ ಪೈಕಿ ರಾಜರಾಜೇಶ್ವರಿ ನಗರದ 20 ಮತ್ತು ಮಲ್ಲೇಶ್ವರಂ ವಿಭಾಗದ 20 ಕಾಮಗಾರಿಗಳ ಸ್ಥಳ ಪರಿಶೀಲನೆ ಪೂರ್ಣಗೊಂಡಿರುತ್ತದೆ ಎಂದು ತಿಳಿಸಿ ರಾಜರಾಜೇಶ್ವರಿ ನಗರ ಮತ್ತು ಮಲ್ಲೇಶ್ವರಂ ವಿಭಾಗಗಳಿಗೆ ಸಂಬಂಧಿಸಿದಂತೆ 2008 ರಿಂದ 2012 ರವರೆಗೆ ಕೈಗೊಂಡ ಕಾಮಗಾರಿಗಳಲ್ಲಿ ನಡೆದಿರುವ ಅವ್ಯವಹಾರಗಳ ಬಗ್ಗೆ ಮಧ್ಯಂತರ ತನಿಖಾ ವರದಿಯನ್ನು ಸಲ್ಲಿಸಿರುತ್ತಾರೆ.<br><br>ತನಿಖಾ ಸಮಿತಿಯ ಮಧ್ಯಂತರ ವರದಿಯನ್ನು ಸರ್ಕಾರವು ಪರಿಶೀಲಿಸಿ, ಸರ್ಕಾರದ ಆದೇಶ ಸಂಖ್ಯೆ: ನಅಇ 479 ಎಂಎನ್‌ಯು 2011 (ಭಾಗ–3), ದಿನಾಂಕ: 22.01.2018ರಲ್ಲಿ ಈ ಕೆಳಕಂಡಂತೆ ಆದೇಶಿಸಿದೆ :–<br><br>1. ಮಾನ್ಯ ನ್ಯಾಯಮೂರ್ತಿ ಶ್ರೀ ನಾಗಮೋಹನ್ ದಾಸ್ ರವರು ಕೈಗೊಂಡಿರುವ ತನಿಖೆಗೆ ಪಾಲಿಕೆ ಅಧಿಕಾರಿಗಳು ಸೂಕ್ತ ಸಹಕಾರ ನೀಡುವುದು ಮತ್ತು ಸಮಿತಿಯು ಕೇಳುವ ದಾಖಲೆಗಳನ್ನು ನಿಗದಿತ ಸಮಯದೊಳಗೆ ಒದಗಿಸಲು ವಿಶೇಷ ಆಯುಕ್ತರು (ಆಡಳಿತ)ರವರನ್ನು ನೋಡಲ್ ಅಧಿಕಾರಿಯನ್ನಾಗಿ ನೇಮಿಸಿದೆ.<br><br>2. ಸಮಿತಿಯ ವರದಿಯಂತೆ ಶಾಸನಾಪೇಕ್ಷಿತ ಕಡಿತಗಳನ್ನು ಸೂಕ್ತವಾಗಿ ಮಾಡದಿರುವ ಸಂದರ್ಭಗಳಲ್ಲಿ ವಸೂಲಾತಿಯನ್ನು ಈ ಕೂಡಲೇ ಕೈಗೊಂಡು ಮಾರ್ಚ್ ಅಂತ್ಯದೊಳಗಾಗಿ ಪೂರ್ಣಗೊಳಿಸುವುದು. |

| | | | | |
|---|---|---|---|---|
| | | | | 3. ಸದರಿ ಅವ್ಯವಹಾರಗಳಲ್ಲಿ ಸರ್ಕಾರದ ಬೊಕ್ಕಸಕ್ಕೆ ಆಗಿರುವ ನಷ್ಟವನ್ನು ನಿಖರವಾಗಿ ಅಂದಾಜು ಮಾಡಲು ನಗರಾಭಿವೃದ್ಧಿ ಇಲಾಖೆಯ ಅಧೀನದಲ್ಲಿ ಬರುವ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅರ್ಥಿಕ ಸದಸ್ಯರು, ಮುಖ್ಯ ಲೆಕ್ಕಾಧಿಕಾರಿ ಮತ್ತು ಲೆಕ್ಕ ಪರಿಶೋಧನಾ ಅಧಿಕಾರಿ ಇವರನ್ನೊಳಗೊಂಡ ಒಂದು ತಂಡವನ್ನು ರಚಿಸಿ 3 ತಿಂಗಳೊಳಗೆ ಪರಿಶೀಲಿಸಿ ನಷ್ಟದ ಅಂದಾಜು ಮೊತ್ತವನ್ನು ತಿಳಿಸುವುದು.<br><br>4. ಸದರಿ ಅವ್ಯವಹಾರಗಳಲ್ಲಿ ಗುತ್ತಿಗೆದಾರರು ಭಾಗಿಯಾಗಿರುವುದು ಮೇಲ್ನೋಟಕ್ಕೆ ವ್ಯಕ್ತವಾಗುತ್ತಿರುವ ಹಿನ್ನೆಲೆಯಲ್ಲಿ ಗುತ್ತಿಗೆದಾರರನ್ನು ಪಾಲಿಕೆಯ ಇತರ ಕಾಮಗಾರಿ ಇಲಾಖೆಗಳು ಕಪ್ಪುಪಟ್ಟಿಗೆ ಸೇರಿಸಲು ಕ್ರಮವಹಿಸುವುದು; ನಷ್ಟದ ಮೊತ್ತವನ್ನು ಸಂಬಂಧಿಸಿದ ಅಧಿಕಾರಿ/ಗುತ್ತಿಗೆದಾರರಿಂದ ವಸೂಲಾತಿ ಕೈಗೊಳ್ಳುವುದು.<br><br>5. ಸದರಿ ಅವ್ಯವಹಾರಗಳಲ್ಲಿ ಭಾಗಿಯಾಗಿರುವ ಅಧಿಕಾರಿಗಳ ಮೇಲೆ ಸಿ.ಆ.ಸು. ಇಲಾಖೆಯು ಹೊರಡಿಸಿರುವ ಸುತ್ತೋಲೆ ಸಂಖ್ಯೆ: ಸಿಆಸುಇ 01 ಸೇಇವಿ 2005, ದಿನಾಂಕ: 09.02.2005 ಹಾಗೂ ಸಿಆಸುಇ 55 ಕೆಇವಿ 2010, ದಿನಾಂಕ: 20.11.2010ರಲ್ಲಿನ ಮಾರ್ಗಸೂಚಿಯಂತೆ ಪರಿಶೀಲಿಸಿ ಚೆಕ್‌ಲಿಸ್ಟ್‌ನೊಂದಿಗೆ ದೋಷಾರೋಪಣಾ ಪಟ್ಟಿ (ಅನುಬಂಧ–1 ರಿಂದ 4) ಅನ್ನು ಸಲ್ಲಿಸುವಂತೆ ಬಿ.ಬಿ.ಎಂ.ಪಿ ಆಯುಕ್ತರಿಗೆ ಸೂಚಿಸಲಾಗಿದೆ.<br><br>ಮೇಲ್ಕಂಡ ಆದೇಶದ ಮೇಲೆ ಆಯುಕ್ತರು, ಬಿ.ಬಿ.ಎಂ.ಪಿ. ರವರು ಈ ಕೆಳಕಂಡಂತೆ ಕ್ರಮಗಳನ್ನು ಕೈಗೊಂಡಿರುವುದಾಗಿ ತಿಳಿಸಿರುತ್ತಾರೆ.<br><br>1) ಸರ್ಕಾರದ ಆದೇಶದಂತೆ ವಿಶೇಷ ಆಯುಕ್ತರು (ಆಡಳಿತ)ರವರನ್ನು ನೋಡಲ್ ಅಧಿಕಾರಿಯನ್ನಾಗಿ ನೇಮಿಸಲಾಯಿತು. ಆ ಸಮಯಕ್ಕೆ ಕರ್ನಾಟಕ ವಿಧಾನ ಸಭಾ ಚುನಾವಣೆ ಆರಂಭವಾದ ಕಾರಣ, ವಿಶೇಷ ಆಯುಕ್ತರು (ಆಡಳಿತ) ರವರು ಅಪರ ಜಿಲ್ಲಾ ಚುನಾವಣಾಧಿಕಾರಿಗಳಾದ್ದರಿಂದ ಚುನಾವಣಾ ಕೆಲಸ ಕಾರ್ಯಗಳ ಒತ್ತಡವಿದುದ್ದರಿಂದ ಕ್ರಮ ಜರುಗಿಸಲು ವಿಳಂಬವಾಗಿರುತ್ತದೆ. ಈ ಬಗ್ಗೆ ಕೂಡಲೇ ಕ್ರಮ ಜರುಗಿಸಲಾಗುವುದು. |

| | | | | |
|---|---|---|---|---|
| | | | | 2) ತನಿಖಾ ಸಮಿತಿಯು ಮಧ್ಯಂತರ ವರದಿ ನೀಡಿದ್ದು ಶಾಸನಾಪೇಕ್ಷಿತ ಕಡಿತಗಳ ತನಿಖೆಯು ಎನ್ನೂ ಪ್ರಗತಿಯಲ್ಲಿರುವುದರಿಂದ, ಸಮಿತಿಯು ಪೂರ್ಣ ವರದಿ ಸಲ್ಲಿಸಿದ ನಂತರ ಇವುಗಳ ವಸೂಲಾತಿಗೆ ಕ್ರಮ ಕೈಗೊಳ್ಳಲಾಗುವುದು.<br><br>3) ಆಯುಕ್ತರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ರವರಿಗೆ ಮಾನ್ಯ ತನಿಖಾ ಸಮಿತಿಯ ಮಧ್ಯಂತರ ವರದಿಯಂತೆ ಆರ್ಥಿಕ ಸದಸ್ಯರು, ಮುಖ್ಯ ಲೆಕ್ಕಾಧಿಕಾರಿ ಮತ್ತು ಲೆಕ್ಕ ಪರಿಶೋಧನಾ ಅಧಿಕಾರಿಗಳನ್ನು ಪಾಲಿಕೆಗೆ ನಿಯೋಜಿಸಲು ದಿನಾಂಕ: 26.05.2008 ರಂದು ಕೋರಲಾಗಿದ್ದು, ತಂಡ ನೇಮಕವಾದ ಕೂಡಲೇ ಕ್ರಮ ಜರುಗಿಸಲಾಗುವುದು.<br><br>ತನಿಖಾ ಸಮಿತಿಯು ಪೂರ್ಣ ವರದಿ ಸಲ್ಲಿಸಿದ ನಂತರ ಸದರಿ ಅವ್ಯವಹಾರಗಳಲ್ಲಿ ಭಾಗಿಯಾಗಿರುವ ಅಧಿಕಾರಿಗಳ ಮೇಲೆ ಸಿ.ಆ.ಸು. ಇಲಾಖೆಯು ಹೊರಡಿಸಿರುವ ಸುತ್ತೋಲೆ ಸಂಖ್ಯೆ: ಸಿಆಸುಇ 01 ಸೇಇವಿ 2005, ದಿನಾಂಕ: 09.02.2005 ಹಾಗೂ ಸಿಆಸುಇ 55 ಕೆಇವಿ 2010, ದಿನಾಂಕ: 20.11.2010ರಲ್ಲಿನ ಮಾರ್ಗಸೂಚಿಗಳಂತೆ ಪರಿಶೀಲಿಸಿ, ದೋಷಾರೋಪಣಾ ಪಟ್ಟಿ (ಅನುಬಂಧ–1 ರಿಂದ 4) ಅನ್ನು ಸಲ್ಲಿಸಲು ಕೂಡಲೇ ಕ್ರಮಕೈಗೊಂಡು ವಸೂಲಾತಿ ಕೈಗೊಳ್ಳಲಾಗುವುದು ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿದ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |
| 49 | 4426<br>ಚು.ಗು.ಪ್ರ: 598<br>ಶ್ರೀ ಅಶ್ವತ್ಥ್ ನಾರಾಯಣ<br>ವಿಪನದಿ: 30.01.2014 | 2007 ರಿಂದ 2014 ರವರೆವಿಗೂ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಸಂಘ ಸಂಸ್ಥೆಗಳಿಗೆ ನೀಡಿರುವ ಸಹಾಯಧನದ ಬಗ್ಗೆ. | ಮುಂದಿನ ದಿನಗಳಲ್ಲಿ ಈ ರೀತಿಯ duplication ಮತ್ತು triplication ಆಗದ ರೀತಿಯಲ್ಲಿ ವಿವಿಧ ಇಲಾಖೆಗಳ ಮೂಲಕ ಹಣ ಪಡೆಯುವುದನ್ನು ಒಂದು | ದಿನಾಂಕ: 16.10.2018ರಂದು ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಕಾರ್ಪೋರೇಟ್ ಸಂಸ್ಥೆಗಳ ಸಾಮಾಜಿಕ ಜವಾಬ್ದಾರಿಗಳನ್ನು ಪರಿಗಣಿಸಿ, ಅಂತಹ ಸಂಘ–ಸಂಸ್ಥೆಗಳಿಂದ ಬರುವ ಸಹಾಯಧನ ಕೋರಿಕೆ ಬಗ್ಗೆ ಆ ಸಂಸ್ಥೆ ನಿರ್ವಹಿಸುವ ಕಾರ್ಯಗಳಿಗೆ ಸಂಬಂಧಪಟ್ಟ ಇಲಾಖೆಗಳು ಸಹಾಯಧನವನ್ನು ನೀಡುವಂತೆ ಶಿಫಾರಸ್ಸು ಮಾಡಿದರೆ ಮಾತ್ರ ಕೋರಿಕೆಯನ್ನು ಪರಿಗಣಿಸಲಾಗುತ್ತದೆ. ಅಲ್ಲದೇ ಸದರಿ ಸಂಸ್ಥೆಗಳ ಅಸ್ತಿತ್ವ ಸಹಾಯಧನ ಪಡೆಯಲು ಅಗತ್ಯವಾದ ನಿಯಮಬದ್ಧ |

| | | | | |
|---|---|---|---|---|
| | | | Streamline ಮಾಡುವ ಸಲುವಾಗಿ ಹಣ ದುರುಪಯೋಗ ಆಗದ ಹಾಗೆ ಸರ್ಕಾರ ನಿಗಾ ಇಡುವ ನಿಟ್ಟಿನಲ್ಲಿ ನಿಶ್ಚಿತವಾಗಿ ನಾನು ಪರಿಶೀಲನೆಯನ್ನು ಮಾಡುತ್ತೇನೆ ಎಂದು ಮಾನ್ಯ ಮುಖ್ಯಮಂತ್ರಿಯವರ ಪರವಾಗಿ ಸಭಾನಾಯಕರು ತಿಳಿಸಿದರು. | ದಾಖಲೆಗಳನ್ನು ಆಯಾ ಇಲಾಖೆಗಳೇ ಪರಿಶೀಲಿಸಿ, ಶಿಫಾರಸ್ಸು ಮಾಡುವಂತೆ ಕೋರಲಾಗಿದೆ. 2007–08 ರಿಂದ 2014–15ನೇ ಸಾಲಿನಲ್ಲಿ ಸರ್ಕಾರದ ಸಂಸ್ಥೆಗಳಲ್ಲದೆ ಖಾಸಗಿ ಸಂಸ್ಥೆಗಳಿಗೂ ಸಹ ಸಹಾಯಧನವನ್ನು ನೀಡಲಾಗಿರುತ್ತದೆ. ಆದರೆ, 2015–16ರಿಂದ 2016–17ರವರೆಗೆ ಸರ್ಕಾರದ ಸಂಘ ಸಂಸ್ಥೆಗಳಿಗೆ ಮಾತ್ರ ಸಹಾಯಧನ ನೀಡಲಾಗಿರುತ್ತದೆ. 2017–08ರಲ್ಲಿ ಸಹಾಯಧವನ್ನು ಸಂಪೂರ್ಣವಾಗಿ ಸ್ಥಗಿತಗೊಳಿಸಲಾಗಿದೆ. ಮಾನ್ಯ ಮುಖ್ಯಮಂತ್ರಿಯವರ ಪರಿಹಾರ ನಿಧಿಗೆ ಸಹಾಯಧವನ್ನು ಹೊರತುಪಡಿಸಿ ಬೇರೆ ಸಂಸ್ಥೆಗಳಿಗೆ ಒಂದೇ ವರ್ಷದಲ್ಲಿ ಒಂದಕ್ಕಿಂತ ಹೆಚ್ಚಿನ ಸಲ ಸಹಾಯಧನ ನೀಡಲಾಗಿರುವುದಿಲ್ಲ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿದ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |
| 50 | 1935<br>ವಿಶೇಷ ಪ್ರಸ್ತಾವಗಳು<br>ಶ್ರೀ ವಿ.ಎಸ್. ಉಗ್ರಪ್ಪ<br>ವಿಪನದಿ: 05.02.2005 | ಬೆಂಗಳೂರು ನಗರ ಪಾಲಿಕೆಗೆ ಸೇರಿದ ಭೈರಸಂದ್ರ ಕೆರೆಯ ಅಂಗಳದ ಜಮೀನನ್ನು ಕಾನೂನು ಬಾಹಿರವಾಗಿ ಕೆಲವರು ಮಾರ್ಟ್‌ಗೇಜ್ ಮಾಡಿರುವ ಹಿನ್ನೆಲೆಯಲ್ಲಿ ಸದರಿ ಜಮೀನು ಹರಾಜಿಗೆ ಬಂದಿರುವುದರಿಂದ ನಗರ ಪಾಲಿಕೆಗೆ ಕೋಟ್ಯಾಂತರ ರೂಪಾಯಿ ನಷ್ಟವಾಗಿರುವ ಬಗ್ಗೆ | ಸರ್ಕಾರದ ವಿವಿಧ ಇಲಾಖೆಗಳ ವ್ಯಾಪ್ತಿಯಲ್ಲಿರುವಂತಹ ಭೂಮಿಯನ್ನು ಕಬಳಿಸುವಂತಹ ಒಂದು ದೊಡ್ಡ ಮಾಫಿಯಾ ಗ್ಯಾಂಗ್ ಬೆಂಗಳೂರಿನ ಸುತ್ತಮುತ್ತ ಇದೆ. ಖೊಟ್ಟಿ ದಾಖಲೆಗಳನ್ನು ಸೃಷ್ಠಿಸಿ ಸುಮಾರು 1,93,000–00 ಎಕರೆಗಳಷ್ಟು ಭೂಮಿ ಅನಧಿಕೃತವಾಗಿ ಅತಿಕ್ರಮಿಸಲಾಗಿದ್ದು, ಅದರಲ್ಲಿ ಕೆರೆಯ ಅಂಗಳ ಮತ್ತು ಕೆರೆ ಏರಿಯನ್ನು | ದಿನಾಂಕ: 16.10.2018ರಂದು ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ಬೈರಸಂದ್ರ ಗ್ರಾಮ ಸರ್ವೆ ನಂ.56ರಲ್ಲಿ 15 ಎಕರೆ 11 ಗುಂಟೆ ವಿಸ್ತೀರ್ಣದ ಭೈರಸಂದ್ರ ಕೆರೆ ಜಾಗವನ್ನು ಸಂರಕ್ಷಿಸಲು, ಅಭಿವೃದ್ಧಿಪಡಿಸಲು ಮತ್ತು ನಿರ್ವಹಣೆಗೋಸ್ಕರ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ದಿನಾಂಕ: 18.04.2012ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಿಂದ ಹಸ್ತಾಂತರವಾಗಿರುತ್ತದೆ.<br><br>ಈ ಹಿಂದೆ ಮೆ: ಶೀರಾ ಪ್ರಾಪರ್ಟಿ ಡೆವಲೆಪರ್ಸ್ ಪ್ರೈವೇಟ್ ಲಿಮಿಟೆಡ್ ಮತ್ತು ಇತರರು ಸದರಿ ಕೆರೆಯ ಜಾಗ ತಮ್ಮದೆಂದು ದಾಖಲೆ ಸಲ್ಲಿಸಿ, ಸಾರ್ವಜನಿಕ ವಲಯದಿಂದ ಪಡೆದಿದ್ದ ಸಾಲಕ್ಕೆ ಆಧಾರವಾಗಿಟ್ಟಿದ್ದ ಭೈರಸಂದ್ರ ಕೆರೆ ಪ್ರದೇಶವನ್ನು ಸಾರ್ವಜನಿಕವಾಗಿ ಹರಾಜು ಹಾಕಲು ಸಾಲ ವಸೂಲಿ ನ್ಯಾಯಾಧೀಕರಣವು 2005ರಲ್ಲಿ ಆದೇಶಿಸಿತ್ತು. ಸದರಿ ಆದೇಶವನ್ನು ಪ್ರಶ್ನಿಸಿ ಸ್ಥಳೀಯ ನಾಗರೀಕರು ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ: 4293/2005ನ್ನು ಸಲ್ಲಿಸಿದ್ದು, ಮಾನ್ಯ ಉಚ್ಚ ನ್ಯಾಯಾಲಯದ ವಿಭಾಗೀಯ ಪೀಠವು ದಿನಾಂಕ: 07.04.2011ರ ಆದೇಶದಲ್ಲಿ ಸಾಲ ವಸೂಲಾತಿ ನ್ಯಾಯಾಧೀಕರಣ ಮಾಡಿದ್ದ ಹರಾಜು ಪ್ರಕ್ರಿಯೆಯನ್ನು ರದ್ದುಪಡಿಸಿರುತ್ತದೆ. ಸದರಿ ಆದೇಶವನ್ನು ಪ್ರಶ್ನಿಸಿ |

| | | | | |
|---|---|---|---|---|
| | | | ಕಬಳಿಸಿರುವಂತಹ ಸುಮಾರು 40 ಪ್ರಕರಣಗಳು ಕಂದಾಯ ಇಲಾಖೆಯ ಗಮನಕ್ಕೆ ಬಂದಿರುತ್ತದೆ. ಈ ವಿಚಾರವನ್ನು ಪೌರಾಡಳಿತ ಸಚಿವರಿಗೆ ತಿಳಿಸಿ ಕೂಡಲೇ ಕ್ರಮ ಕೈಗೊಳ್ಳುವಂತಹ ಪ್ರಯತ್ನವನ್ನು ಮಾಡುತ್ತೇವೆ ಎಂದು ಮಾನ್ಯ ಕಂದಾಯ ಸಚಿವರು ತಿಳಿಸಿದರು. | ಇಂಡಿಯನ್ ಓವರ್‌ಸೀಸ್ ಬ್ಯಾಂಕ್ ಇವರು ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ಎಸ್‌ಎಲ್‌ಪಿ ಸಂಖ್ಯೆ: 15651/2011ಅನ್ನು ಸಲ್ಲಿಸಿದ್ದು, ಮಾನ್ಯ ಸರ್ವೋಚ್ಚ ನ್ಯಾಯಾಲಯವು ದಿ: 22.11.2011ರ ಆದೇಶದಲ್ಲಿ ಸದರಿ ಎಸ್‌ಎಲ್‌ಪಿ ಅನ್ನು ವಜಾಗೊಳಿಸಿರುತ್ತದೆ. ಮೇಲ್ಕಂಡ ಆದೇಶಗಳ ಹಿನ್ನಲೆಯಲ್ಲಿ, ಸದರಿ ಪ್ರದೇಶವು ಕೆರೆಯ ಪುನಶ್ಚೇತನ ಮತ್ತು ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಂಡಿರುತ್ತದೆ. ಪ್ರಾಧಿಕಾರವು ಸದರಿ ಕೆರೆಯ ಚೈನ್‌ಲಿಂಕ್ ಫೆನ್ಸಿಂಗ್, ಬಂಡ್ ನಿರ್ಮಾಣ ಕಾಮಗಾರಿ, ಪಾದಾಚಾರಿ ಮಾರ್ಗ, ವೆಟ್‌ಲ್ಯಾಂಡ್ ಡೆವೆಲೆಪ್‌ಮೆಂಟ್, ಸೆಕ್ಯೂರಿಟಿ ಬ್ಲಾಕ್, ಸಾರ್ವಜನಿಕ ಶೌಚಾಲಯ, ವಿದ್ಯುತ್ ದೀಪ ಕಾಮಗಾರಿ, ಬೆಂಚ್‌ಗಳು ಮುಂತಾದ ಪೂರ್ಣ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗಿರುತ್ತದೆ. ಮುಂದಿನ ನಿರ್ವಹಣೆಗಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಹಸ್ತಾಂತರಿಸಲು ಕ್ರಮವಹಿಸಲಾಗಿದೆಯೆಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿದ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |
| 51 | 4418<br>ಚು.ಗು.ಪ್ರ: 884<br>ಡಾ: ದೊಡ್ಡರಂಗೇಗೌಡ<br>ವಿಪನದಿ: 05.12.2013 | ಬೆಂಗಳೂರು ಮಹಾನಗರಕ್ಕೆ ಕುಡಿಯುವ ನೀರು ಸರಬರಾಜು ಮಾಡುವ ಕುರಿತು ಸರ್ಕಾರ ಶ್ರೀ ಬಿ.ಎನ್. ತ್ಯಾಗರಾಜ ರವರ ಅಧ್ಯಕ್ಷತೆಯಲ್ಲಿ ನೇಮಿಸಿದ್ದ ತಜ್ಞರ ಸಮಿತಿ ವರದಿಯನ್ನು ಆದಷ್ಟು ಬೇಗ ಅನುಷ್ಠಾನಗೊಳಿಸುವ ಕುರಿತು. | ನೀರಿನ ಮಿತ ಬಳಕೆ ಮತ್ತು ಸದ್ಬಳಕೆ ಮಾಡಿಕೊಂಡು ನೀರು ವ್ಯಯ ಆಗುವುದನ್ನು ತಪ್ಪಿಸುವುದು ಮತ್ತು recirculation of water ಎಲ್ಲಾ ಯೋಜನೆಗಳು ತ್ಯಾಗರಾಜ ಸಮಿತಿಯಲ್ಲಿ ಒಳಗೊಂಡು ಅದೇ ರೀತಿ ಕ್ರಮ ತೆಗೆದುಕೊಳ್ಳುವುದಕ್ಕೆ ಸರ್ಕಾರ ಪ್ರಾಮಾಣಿಕ ಪ್ರಯತ್ನ ಮಾಡುತ್ತದೆಂದು ಮಾನ್ಯ | ದಿನಾಂಕ: 01.06.2018ರ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ: ಶ್ರೀ ಬಿ.ಎನ್. ತ್ಯಾಗರಾಜರವರ ಅಧ್ಯಕ್ಷತೆಯ ತಜ್ಞರ ಸಮಿತಿ ವರದಿಯ ಶಿಫಾರಸ್ಸುಗಳಂತೆ ಈ ಕೆಳಗೆ ಸೂಚಿಸಿರುವಂತೆ ಕ್ರಮ ಕೈಗೊಳ್ಳಲಾಗಿದೆ.<br><br>**ನಗರದಲ್ಲಿ ಲೆಕ್ಕಕ್ಕೆ ಸಿಗದ ನೀರಿನ ಪ್ರಮಾಣವನ್ನು (ಯು.ಎಫ್.ಡಬ್ಲ್ಯೂ) ಕಡಿಮೆಗೊಳಿಸುವ ಯೋಜನೆಗಳು:**<br><br>ಬೆಂಗಳೂರು ಜಲಮಂಡಳಿಯು ಈಗಾಗಲೇ ಲೆಕ್ಕಕ್ಕೆ ಸಿಗದ ನೀರಿನ ಪ್ರಮಾಣವನ್ನು ಕಡಿಮೆಗೊಳಿಸುವ ಯೋಜನೆಯನ್ನು ರೂ. 654.24 ಕೋಟಿಗಳ ಅಂದಾಜು ವೆಚ್ಚದಲ್ಲಿ ನಗರದ ಕೇಂದ್ರ ದಕ್ಷಿಣ ಹಾಗೂ ಪಶ್ಚಿಮ ಭಾಗದಲ್ಲಿ ಕೈಗೊಂಡಿದ್ದು, ಕಾಮಗಾರಿಯು ಪೂರ್ಣಗೊಂಡು ನಿರ್ವಹಣಾ ಹಂತದಲ್ಲಿದ್ದು, ಲೆಕ್ಕಕ್ಕೆ ಸಿಗದ ನೀರಿನ ಪ್ರಮಾಣವನ್ನು ಕಡಿಮೆಗೊಳಿಸಲಾಗಿದೆ. ಅದರ ವಿವರಗಳು ಈ ಕೆಳಕಂಡಂತಿವೆ:– |

<table>
<tr>
<td></td>
<td></td>
<td></td>
<td>ಮುಖ್ಯ ಮಂತ್ರಿಗಳ ಪರವಾಗಿ ಮಾನ್ಯ ಲೋಕೋಪಯೋಗಿ ಸಚಿವರು ತಿಳಿಸಿದರು.</td>
<td>
<table>
<tr><th>ವಿಭಾಗ</th><th>ಕಾರ್ಯವ್ಯಾಪ್ತಿ ಪ್ರದೇಶ (ಚ.ಕಿ.ಮೀ)</th><th>ಹಿಂದಿನ ಯು.ಎಫ್. ಡಬ್ಲ್ಯೂ</th><th>ಪ್ರಸ್ತುತ ಯು.ಎಫ್ ಡಬ್ಲ್ಯೂ</th><th>ನೀರಿನ ಉಳಿತಾಯ ದಿನಂಪ್ರತಿ ದ.ಲ.ಲೀ. ಗಳಲ್ಲಿ</th></tr>
<tr><td>ದಕ್ಷಿಣ</td><td>52</td><td>49.70%</td><td>27.12%</td><td>62</td></tr>
<tr><td>ಪಶ್ಚಿಮ</td><td>54</td><td>51.50%</td><td>27.97%</td><td>49</td></tr>
<tr><td>ಕೇಂದ್ರ</td><td>26.5</td><td>51.96%</td><td>31.00%</td><td>32</td></tr>
<tr><td colspan="4">ಒಟ್ಟು</td><td>143</td></tr>
</table>
ಪ್ರಸ್ತುತ ಈ ಮೇಲಿನ ಕಾಮಗಾರಿಗಳು ಬೆಂಗಳೂರು ನಗರದ ಕೇಂದ್ರ ಭಾಗಕ್ಕೆ ಕೇಂದ್ರಿಕೃತವಾಗಿರುವುದರಿಂದ ಹೊಸದಾಗಿ ರೂ. 203.00 ಕೋಟಿಗಳಿಗೆ ಬೆಂಗಳೂರು ನಗರದ ಪೂರ್ವ, ಆಗ್ನೇಯ ಮತ್ತು ಉತ್ತರ ವಲಯಗಳಲ್ಲಿ ಬರುವ ಯಲಹಂಕ, ಬ್ಯಾರಾಯನಪುರ, ಸಿ.ವಿ.ರಾಮನ್ ನಗರ, ಕೆ.ಆರ್.ಪುರಂ, ಶಾಂತಿನಗರ, ಶಿವಾಜಿನಗರ ಮತ್ತು ಪುಲಕೇಶಿನಗರ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಕಾಮಗಾರಿಯನ್ನು ಕೈಗೊಂಡಿದ್ದು, ಪ್ರಸ್ತುತ ಸರ್ವೆ ಕಾರ್ಯ ಪ್ರಗತಿಯಲ್ಲಿರುತ್ತದೆ.
ಮಳೆ ನೀರು ಕೊಯ್ಲು ಪದ್ಧತಿ ಅಳವಡಿಕೆ ಮತ್ತು ನೀರಿನ ಸಂರಕ್ಷಣೆ ಹಾಗೂ ಅರಿವು ಮೂಡಿಸುವ ಬಗ್ಗೆ;
ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಕಾಯ್ದೆ, 1964ರ ಕಲಂ 72(ಎ)ರನ್ವಯ ಬಿ.ಬಿ.ಎಂ.ಪಿ. ವ್ಯಾಪ್ತಿಯಲ್ಲಿ ಬರುವ 60 X 40 ಚದರ ಅಡಿ ಹಾಗೂ ಅದಕ್ಕಿಂತ ಮೇಲ್ಪಟ್ಟು ವಿಸ್ತೀರ್ಣವುಳ್ಳ ನಿವೇಶನಗದಲ್ಲಿ ಈಗಾಗಲೇ ನಿರ್ಮಿಸಿದ ಕಟ್ಟಡಗಳಿಗೆ ಮತ್ತು ಹೊಸದಾಗಿ 30 X 40 ಮತ್ತು ಅದಕ್ಕಿಂತ ಮೇಲ್ಪಟ್ಟ ವಿಸ್ತೀರ್ಣದ ಕಟ್ಟಡಗಳಿಗೆ ಮಳೆ ನೀರು ಕೊಯ್ಲು ಅಳವಡಿಕೆ ಕಡ್ಡಾಯಗೊಳಿಸಲಾಗಿದೆ. ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ
</td>
</tr>
</table>

| | | | | |
|---|---|---|---|---|
| | | | | (ಮಳೆ ನೀರು ಕೊಯ್ಲು) (ತಿದ್ದುಪಡಿ) ನಿಯಮಗಳು, 2015ರಂತೆ ಇದುವರೆಗೂ ಮಳೆ ನೀರು ಕೊಯ್ಲು ಪದ್ದತಿ ಅಳವಡಿಸಿಕೊಳ್ಳದವರಿಗೆ ಜುಲೈ–2016 ರಿಂದ ಗೃಹ ಸಂಪರ್ಕದ ನೀರಿನ ಬಿಲ್ಲಿನ ಮೊತ್ತದಲ್ಲಿ ಶೇಕಡ 25ರಷ್ಟು ದಂಡವನ್ನು ಮೊದಲು ಮೂರು ತಿಂಗಳುಗಳಿಗೆ, ತದನಂತರ ಈ ದಂಡವನ್ನು ಶೇಕಡ 50 ರಷ್ಟು ದಂಡವನ್ನು ಮೊದಲು ಮೂರು ತಿಂಗಳುಗಳಿಗೆ, ತದನಂತರ ಈ ದಂಡವನ್ನು ಶೇಕಡ 50 ರಷ್ಟು ಹೆಚ್ಚುವರಿಯಾಗಿ ವಿಧಸಿಲು ಆದೇಶಿಸಲಾಗಿದೆ. ಇದಲ್ಲದೆ ಗೃಹೇತರ (ವಾಣಿಜ್ಯ ಕಟ್ಟಡಗಳು) ಸಂಪರ್ಕಗಳಿಗೆ ಮೊದಲ ಮೂರು ತಿಂಗಳಿಗೆ ಶೇಕಡ 50ರಷ್ಟು, ತದನಂತರ ಶೇಕಡ 100 ರಷ್ಟು ಹೆಚ್ಚುವರಿಯಾಗಿ ದಂಡ ವಿಧಿಸಲು ಆದೇಶಿಸಲಾಗಿದೆ.<br><br>ಮೇಲ್ಕಂಡ ಆದೇಶದನ್ವಯ ಮೇ 2018ರ ಅಂತ್ಯಕ್ಕೆ ಬೆಂಗಳೂರು ನಗರದಲ್ಲಿ 154328 ಕಟ್ಟಡಗಳಿಗೆ ಮಳೆ ನೀರು ಕೊಯ್ಲಿ ಪದ್ಧತಿಯನ್ನು ಅಳವಡಿಸಿಕೊಳ್ಳಬೇಕಾಗಿದ್ದು, ಅವುಗಳಲ್ಲಿ 95670 ಕಟ್ಟಡಗಳು ಮಳೆ ನೀರು ಕೊಯ್ಲು ಪದ್ದತಿಯನ್ನು ಅಳವಡಿಸಿಕೊಂಡಿರುತ್ತಾರೆ. ಈ ಪದ್ದತಿಯನ್ನು ಅಳವಡಿಸಿಕೊಳ್ಳದೆ ಇರುವ 58658 ಸಂಪರ್ಕಗಳ ಕಟ್ಟಡಗಳಿಗೆ ಮಾಹೆಯಾನ ಬಿಲ್ಲಿನಲ್ಲಿ ಹೆಚ್ಚುವರಿಯಾಗಿ ದಂಡವನ್ನು ವಿಧಿಸಲಾಗುತ್ತಿದೆ.<br><br>ಮಳೆನೀರು ಕೊಯ್ಲು ಪದ್ಧತಿಯನ್ನು ಅಳವಡಿಸಿಕೊಳ್ಳಲು ಹಾಗೂ ನೀರಿನ ಸಂರಕ್ಷಣೆ ಬಗ್ಗೆ ಅರಿವು ಮೂಡಿಸಲು ಮಾಹಿತಿಯನ್ನು ನೀಡಲು ಬೆಂಗಳೂರು ಜಲಮಂಡಳಿಯ ವತಿಯಿಂದ ಉತ್ತರ ಭಾಗದಲ್ಲಿ ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಸಂಸ್ಥೆಯು ಭಾರತೀಯ ವಿಜ್ಞಾನ ಮಂದಿರ ಆವರಣದಲ್ಲಿ ಸಹಾಯವಾಣಿ ಕೇಂದ್ರವನ್ನು ಸ್ಥಾಪಿಸಿದ್ದು, ಇದರ ಮೂಲಕ ಸಾರ್ವಜನಿಕರಿಗೆ ಮಾಹಿತಿಯನ್ನು ನೀಡಲಾಗುತ್ತಿದೆ.<br><br>ಸರ್.ಎಂ.ವಿಶ್ವೇಶ್ವರಯ್ಯ ಮಳೆ ನೀರು ಸುಗ್ಗಿ ಕೇಂದ್ರದಲ್ಲಿ 26 ಬಗೆಯ ಮಳೆನೀರು ಕೊಯ್ಲು ಪದ್ಧತಿಯ ಮಾದರಿಗಳನ್ನು ಅಳವಡಿಸಲಗಿದೆ. ಸದರಿ ಕೇಂದ್ರದಿಂದ ಬೆಂಗಳೂರು ಜಲ ಮಂಡಳಿಯು ಮಳೆ ನೀರು ಕೊಯ್ಲು ಪದ್ಧತಿಯನ್ನು ಅಳವಡಿಸಿಕೊಳ್ಳಲು ಹಾಗೂ ನೀರಿನ ಸಂರಕ್ಷಣೆ ಬಗ್ಗೆ ಅರಿವು ಮೂಡಿಸಲು |

| | | | | |
|---|---|---|---|---|
| | | | | ಮಾಹಿತಿಯನ್ನು ಸಾರ್ವಜನಿಕರಿಗೆ ತಲುಪಿಸುವಲ್ಲಿ ಯಶಸ್ವಿಯಾಗಿರುತ್ತದೆ ಹಾಗೂ ಮಾರ್ಚ್–2014ರಲ್ಲಿ ರಾಷ್ಟ್ರೀಯ ನಗರ ಪ್ರಶಸ್ತಿ ಪಡೆದುಕೊಂಡಿರುತ್ತದೆ.<br>**ತ್ಯಾಜ್ಯ ನೀರು ಸಂಸ್ಕರಣಾ ಘಟಕಗಳೊಂದಿಗೆ ಉಭಯ ಕೊಳವೆಗಳನ್ನು ಅಳವಡಿಸುವುದು:**<br>ಬೆಂಗಳೂರು ಜಲಮಂಡಳಿಯು ಅಧಿಸೂಚನೆ ಸಂಖ್ಯೆ: ಬೆಂಜಮಂ/ಮುಆಅ–ಕಾ/4138/2015–16, ದಿನಾಂಕ: 25.02.2016ರಂತೆ ಹಾಗೂ ಬೆಂಗಳೂರು ಒಳಚರಂಡಿ ವಿನಿಯಮಗಳು, 1974 "4ಎ" ಪ್ರಕಾರ ತ್ಯಾಜ್ಯ ನೀರು ಸಂಸ್ಕರಣಾ ಘಟಕಗಳನ್ನು ಉಭಯ ಕೊಳವೆ ವ್ಯವಸ್ಥೆಯೊಂದಿಗೆ ಈ ಕೆಳಕಂಡ ಕಟ್ಟಡಗಳಲ್ಲಿ ಅಳವಡಿಸಿಕೊಳ್ಳಲು ಕಡ್ಡಾಯ ಮಾಡಲಾಗಿರುತ್ತದೆ.<br>ಎ) 20 ಮತ್ತು ಮೇಲ್ಪಟ್ಟು ಅಥವಾ 2000 ಚದರ ಮೀಟರ್ ಮತ್ತು ಮೇಲ್ಪಟ್ಟು ನಿರ್ಮಾಣದ ಪ್ರದೇಶದ ಗೃಹ ಸಮುಚ್ಛಯ ಕಟ್ಟಡಗಳಿಗೆ<br>ಬಿ) 2000 ಚದರ ಮೀಟರ್ ಮತ್ತು ಮೇಲ್ಪಟ್ಟು ನಿರ್ಮಾಣದ ಪ್ರದೇಶದ ಗೃಹೇತರ ಕಟ್ಟಡಗಳಿಗೆ<br>ಸಿ) 5000 ಚದರ ಮೀಟರ್ ಮತ್ತು ಮೇಲ್ಪಟ್ಟು ನಿರ್ಮಾಣದ ಪ್ರದೇಶದ ವಿದ್ಯಾಸಂಸ್ಥೆ ಕಟ್ಟಡಗಳಿಗೆ<br>ಉಭಯ ಕೊಳವೆಗಳನ್ನು ಅಳವಡಿಸುವ (ಕುಡಿಯುವ ನೀರು ಹಾಗೂ ಸಂಸ್ಕರಿಸಿದ ನೀರು) ಕೆಲಸವನ್ನು ಈಗಾಗಲೇ ಹೊಸದಾಗಿ ಅಭಿವೃದ್ಧಿಪಡಿಸುತ್ತಿರುವ ಬಡಾವಣೆಗಳಲ್ಲಿ ಪರಿಚಯಿಸಲಾಗಿದೆ.<br>ಉದಾ: ಕೆಂಪೇಗೌಡ ಬಡಾವಣೆ<br>**ಕಾವೇರಿ ಜಲವಿವಾದ ನ್ಯಾಯಮಂಡಳಿಯ ತೀರ್ಪಿನಂತೆ ಕಾವೇರಿ ನದಿಯಿಂದ ಹೆಚ್ಚುವರಿ ನೀರನ್ನು ಅಲ್ಪಾವಧಿ ಮತ್ತು ದೀರ್ಘಾವಧಿಗಾರಿ ತಲಾ 6.44 ಟಿ.ಎಂ.ಸಿ ನೀರನ್ನು ಪಡೆಯುವ ಬಗ್ಗೆ.**<br>ಮಧ್ಯಂತರ ಪರಿಹಾರಾರ್ಥವಾಗಿ ಕರ್ನಾಟಕ ಸರ್ಕಾರವು 10 ಟಿ.ಎಂ.ಸಿ. ನೀರನ್ನು ಸರ್ಕಾರದ ಆದೇಶ ಸಂಖ್ಯೆ: ಜಸಂಇ 60 ಎಂಎಂಕೆ 2013, ದಿನಾಂಕ: 20.04.2016ರಲ್ಲಿ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಗೆ ಸೇರಿರುವ 110 |

| | | | | |
|---|---|---|---|---|
| | | | | ಹಳ್ಳಿಗಳಿಗೆ ಕುಡಿಯುವ ನೀರಿನ ಉದ್ದೇಶಕ್ಕಾಗಿ ಹಂಚಿಕೆ ಮಾಡಿದೆ. ಈ ಹೆಚ್ಚುವರಿ ನೀರಿನ ಹಂಚಿಕೆಯಿಂದ, ಬೆಂಗಳೂರು ಜಲಮಂಡಳಿಯು ಕಾವೇರಿ ನೀರು ಸರಬರಾಜು ಯೋಜನೆಯ 5ನೇ ಹಂತವನ್ನು (ದಿನಂಪ್ರತಿ 775 ದಶಲಕ್ಷ ಲೀಟರ್ ಸಾಮರ್ಥ್ಯ) ರೂ. 5550 ಕೋಟಿಗಳ ವೆಚ್ಚದಲ್ಲಿ ಜೈಕಾ ಸಂಸ್ಥೆಯ ಆರ್ಥಿಕ ನೆರವಿನೊಂದಿಗೆ ಕೈಗೆತ್ತಿಕೊಳ್ಳಲಾಗುತ್ತಿದೆ. ಈ ಯೋಜನೆಯ ಮೊದಲ ಭಾಗವಾಗಿ Project Management Consultancy ಸೇವೆ ನಿಯೋಜಿಸಲು ಟೆಂಡರ್ ಪ್ರಕ್ರಿಯೆಯು ಪ್ರಗತಿಯಲ್ಲಿರುತ್ತದೆ.<br><br>**ನಗರ ಪ್ರದೇಶದ ಶುದ್ಧೀಕರಿಸಿದ ತ್ಯಾಜ್ಯ ನೀರನ್ನು ಅರ್ಕಾವತಿ ಬಡಾವಣೆಯ ಪ್ರದೇಶಕ್ಕೆ ಹರಿಸುವುದು**<br><br>ಬೆಂಗಳೂರು ಜಲಮಂಡಳಿಯು ಪ್ರಸ್ತುತ 180 ಎಂ.ಎಲ್.ಡಿ. ಗಿಂತ ಹೆಚ್ಚು ತ್ಯಾಜ್ಯ ನೀರನ್ನು ಸಂಸ್ಕರಿಸಿ ಮೈಸೂರಿ ರಸ್ತೆಯಲ್ಲಿ ವೃಷಭಾವತಿ ನದಿಗೆ ಹರಿಸಲಾಗುತ್ತಿದೆ. ಹಾಗೂ 515 ಎಂ.ಎಲ್.ಡಿ. ತ್ಯಾಜ್ಯ ನೀರನ್ನು ಸಂಸ್ಕರಿಸಲು ನಗರದ ವಿವಿಧೆಡೆ ಹಲವು ತ್ಯಾಜ್ಯ ನೀರಿನ ಶುದ್ಧೀಕರಣ ಘಟಕಗಳನ್ನು ಸ್ಥಾಪಿಸಲಾಗುತ್ತಿದೆ. ಸಂಸ್ಕರಿಸಿದ ತ್ಯಾಜ್ಯ ನೀರು ತಾವರೆಕೆರೆ ಬಳಿ ಅರ್ಕಾವತಿ ಜಲಾನಯನ ಪ್ರದೇಶಕ್ಕೆ ಪಂಪ್ ಮಾಡಿ ಅರ್ಕಾವತಿ ನದಿಯ ನೀರಿನ ಜೊತೆ ಮಿಶ್ರಣಗೊಳಿಸಿ, ಈ ಮೂಲಕ ತಿಪ್ಪಗೊಂಡನಗಳಲ್ಲಿ ಜಲಾಶಯವನ್ನು ಸೇರಿಸಲು ಉದ್ದೇಶಿಸಲಾಗಿರುತ್ತದೆ.<br><br>ತಿಪ್ಪಗೊಂಡನಹಳ್ಳಿ ಜಲಾನಯನ ಪ್ರದೇಶದಲ್ಲಿ ಪೂರ್ಣಗೊಳಿಸಿರುವ ಚಿಕ್ಕಬಾಣಾವಾರ ಮತ್ತು ನಾಗಸಂದ್ರ ತ್ಯಾಜ್ಯ ನೀರು ಶುದ್ಧೀಕರಣ ಘಟಕಗಳಿಂದ ಉತ್ಪತ್ತಿಯಾಗುವ ಸುಮಾರು 46 ದ.ಲ.ಲೀ ಅತ್ಯುತ್ತಮವಾಗಿ ಸಂಸ್ಕರಿಸಿದ ನೀರನ್ನು ಮಾತ್ರ ತಿಪ್ಪಗೊಂಡನಹಳ್ಳಿ ಜಲಾಶಯಕ್ಕೆ ಹರಿಸಿ ಎತ್ತಿನಹೊಳೆ ಯೋಜನೆಯಿಂದ ಬರುವ ತಾಜಾ ನೀರಿನ ಜೊತೆಯಲ್ಲಿ ಮಿಶ್ರಣಗೊಂಡು ಪ್ರಸ್ತುತ ನಗರಕ್ಕೆ ಸರಬರಾಜು ಮಾಡುವ 150 ದ.ಲ.ಲೀ ಪಂಪಿಂಗ್ ಸಾಮರ್ಥ್ಯವನ್ನು ಉಪಯೋಗಿಸಿ, ಸರಬರಾಜು ಮಾಡಲಾಗುವುದು. ಇದರಿಂದ ಯಾವುದೇ ಅಡೆತಡೆಯಿಲ್ಲದೇ ಸಾಮರ್ಥ್ಯವನ್ನು ಉಪಯೋಗಿಸಿ ನೀರನ್ನು ಸರಬರಾಜು ಮಾಡಬಹುದಾಗಿರುತ್ತದೆ. |

| | | | | |
|---|---|---|---|---|
| | | | | ಇದಲ್ಲದೇ ಎತ್ತಿನಹೊಳೆ ಯೋಜನೆಯಿಂದ 0.8 ಟಿ.ಎಂ.ಸಿ. ನೀರನ್ನು ಹೆಸರುಘಟ್ಟ ಜಲಾಶಯಕ್ಕೆ ಹಂಚಿಕೆ ಮಾಡಲಾಗಿರುತ್ತದೆ. ಈ ನೀರನ್ನು ಶುದ್ಧೀಕರಿಸಿ ಬೆಂಗಳೂರು ನಗರಕ್ಕೆ ಸರಬರಾಜು ಮಾಡಲು ಉದ್ದೇಶಿಸಲಾಗಿದೆ ಎಂದು ಇಲಾಖಾಧಿಕಾರಿಗಳು ನೀಡಿರುವ ಉತ್ತರವನ್ನು ಒಪ್ಪಿ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ಸಮಿತಿಯು ತೀರ್ಮಾನಿಸಿತು. |
| 52 | 3939<br>ಚು.ಗು.ಪ್ರ: 90<br>ಶ್ರೀ ಹೆಚ್.ಸಿ. ನೀರಾವರಿ<br>ವಿಪನದಿ: 08.12.2011 | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಅಭಿವೃದ್ಧಿ ಹೆಸರಿನಲ್ಲಿ ಆಗಿರುವ ಬಹುಕೋಟಿ ಹಗರಣದ ಬಗ್ಗೆ ಹಾಗೂ ಅದರಲ್ಲಿ ಶಾಮೀಲು ಆಗಿರುವ ವ್ಯಕ್ತಿಗಳ ಬಗ್ಗೆ ತೆಗೆದುಕೊಂಡಿರುವ ಕ್ರಮಗಳ ಕುರಿತು. | ಪ್ರಕರಣವನ್ನು ಸಿ.ಐ.ಡಿ.ಗೆ ತನಿಖೆಗಾಗಿ ವಹಿಸಲಾಗಿದೆ. ಸಿ.ಐ.ಡಿ.ಯು ತನಿಖಾ ವರದಿ ಸಲ್ಲಿಸಿದ ನಂತರವೇ ಮಾಹಿತಿಯು ಲಭ್ಯವಾಗುವುದು ಎಂದು ಮಾನ್ಯ ಮುಖ್ಯ ಮಂತ್ರಿಗಳು ತಿಳಿಸಿದರು. | ದಿನಾಂಕ: 16.10.2018ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು, ಸರ್ಕಾರದ ಆದೇಶ ಸಂಖ್ಯೆ: ಒಇ 130 ಸಿಐಡಿ 2011, ದಿ: 28.11.2011ರಲ್ಲಿ ಬಿಬಿಎಂಪಿ ಆಯುಕ್ತರು, ಬೆಂಗಳೂರು ಮಹಾನಗರ ಕಾರ್ಯಾಚರಣೆ ಪಡೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ಸಂಖ್ಯೆ: 04/2011ರನ್ವಯ ದಾಖಲಿಸಿದ್ದ ಪ್ರಕರಣವನ್ನು ಹಿಂದಕ್ಕೆ ಪಡೆದು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಗಾಂಧಿನಗರ, ಮಲ್ಲೇಶ್ವರಂ ಮತ್ತು ರಾಜರಾಜೇಶ್ವರಿನಗರ ವಿಭಾಗಗಳಲ್ಲಿ ಅಕ್ರಮ ಹಾಗೂ ಅವ್ಯವಹಾರಗಳ ಬಗ್ಗೆ ಮತ್ತು ಮಹಾನಗರ ಪಾಲಿಕೆಯ ಇಂಜನಿಯರಿಂಗ್ ವಿಭಾಗಗಳಲ್ಲಿ **2005–06ನೇ ಸಾಲಿನ ಆರ್ಥಿಕ ವರ್ಷದಿಂದ ಕೈಗೊಂಡಿರುವ ಕಾಮಗಾರಿಗಳ/ ಅಕ್ರಮಗಳ ಬಗ್ಗೆ ಸಮಗ್ರ ತನಿಖೆಯ**ನ್ನು ನಡೆಸಲು ಸಿ.ಐ.ಡಿ.ಗೆ ವಹಿಸಿ ಆದೇಶಿಸಬೇಕಾಗಿತ್ತು.<br><br>ನಂತರ, ಸರ್ಕಾರದ ಆದೇಶ ಸಂಖ್ಯೆ: ಒಇ 130 ಸಿಐಡಿ 2011, ದಿನಾಂಕ: 07.12.2011ರಲ್ಲಿ ದಿ: 28.11.2011ರ ಆದೇಶವನ್ನು ಹಿಂಪಡೆದು, ಬೆಂಗಳೂರು ಮಹಾನಗರ ಕಾರ್ಯಾಚರಣೆ ಪಡೆ ಪೊಲೀಸ್ ಠಾಣೆಯಲ್ಲಿ ದಾಖಲಿಸಿರುವ ಪ್ರಕರಣ ಸಂಖ್ಯೆ: 04/2011ರನ್ವಯ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಗಾಂಧಿನಗರ, ಮಲ್ಲೇಶ್ವರಂ ಮತ್ತು ರಾಜರಾಜೇಶ್ವರಿನಗರ ವಿಭಾಗಗಳಲ್ಲಿ ಡಾಂಬರೀಕರಣ ಕಾಮಗಾರಿಗಳಲ್ಲಿನ ಅಕ್ರಮ ಮತ್ತು ಅವ್ಯವಹಾರಗಳ ಬಗ್ಗೆ ತನಿಖೆಯನ್ನು ಸಿ.ಐ.ಡಿ.ಗೆ ವಹಿಸಿ ಆದೇಶಿಸಲಾಗಿತ್ತು.<br><br>ಸರ್ಕಾರದ ತಿದ್ದುಪಡಿ ಆದೇಶ ಸಂಖ್ಯೆ: ಒಇ 130 ಸಿಐಡಿ 2011, ದಿನಾಂಕ: 01.–02–2012ರಲ್ಲಿ ದಿ: 07.12.2011ರ ಆದೇಶದ ಭಾಗದ 4ನೇ ಸಾಲಿನ ನಂತರ ಡಾಂಬರೀಕರಣಕ್ಕೆ ಸೀಮಿತಗೊಳಿಸಿ ಆದೇಶ |

| | | | | |
|---|---|---|---|---|
| | | | | ಹೊರಡಿಸಿರುವುದನ್ನು ಮಾರ್ಪಡಿಸಿ ಬಿ.ಎಂ.ಟಿ.ಎಫ್.ಗೆ (ಕ್ರಿಮಿನಲ್ ಮೊಕದ್ದಮೆ ಸಂಖ್ಯೆ: 4/11) ವಹಿಸಿರುವ ಪ್ರಕರಣದಲ್ಲಿ ಒಳಗೊಂಡಿರುವ ಗಾಂಧಿನಗರ, ಮಲ್ಲೇಶ್ವರಂ ಮತ್ತು ರಾಜರಾಜೇಶ್ವರಿ ನಗರ ವಿಭಾಗಗಳಲ್ಲಿ ನಡೆದಿರುವ ಕಾಮಗಾರಿಗಳ ಅವ್ಯವಹಾರಗಳ ತನಿಖೆಯನ್ನು ಸಿಐಡಿಗೆ ವಹಿಸಿ ಆದೇಶಿಸಲಾಗಿತ್ತು.<br><br>ಪ್ರಕಣವನ್ನು ತನಿಖೆಗಾಗಿ ಸಿ.ಐ.ಡಿ.ಗೆ ವಹಿಸಿ ಸುಮಾರು ಮೂರುವರೆ ವರ್ಷಗಳು ಕಳೆದಿವೆ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಗಾಂಧಿನಗರ, ಮಲ್ಲೇಶ್ವರ ಮತ್ತು ರಾಜರಾಜೇಶ್ವರಿನಗರ ಇಂಜನಿಯರಿಂಗ್ ವಿಭಾಗದ ಕಾಮಗಾರಿಗಳಲ್ಲಿ ನಡೆದಿರುವ ಅವ್ಯವಹಾರಗಳ ಬಗ್ಗೆ ಸಂಪೂರ್ಣವಾಗಿ ತನಿಖೆ ನಡೆಸಲು ಸಿ.ಐ.ಡಿ. ಸಂಸ್ಥೆಯು ಅಸಹಾಯಕತೆ ವ್ಯಕ್ತಪಡಿಸಿ, ಆಯಾ ಪ್ರದೇಶದ ಸರಹದ್ದಿನ ಪೊಲೀಸ್ ಠಾಣೆಗಳಿಗೆ ವಹಿಸುವಂತೆ ಕೋರಿರುವುದರಿಂದ ಪ್ರಕರಣದ ತನಿಖೆಯು ಸುಸೂತ್ರವಾಗಿ ಹಾಗೂ ಕ್ಲುಪ್ತ ಸಮಯದಲ್ಲಿ ಪೂರ್ಣಗೊಳಿಸಲು ಬೇರೆ ಪರ್ಯಾಯ ಕ್ರಮ ಕೈಗೊಳ್ಳುವುದು ಸೂಕ್ತವೆಂದು ಕಂಡುಬಂದಿದ್ದು, ಈ ಬಗ್ಗೆ ಸಚಿವರ ಸಂಪುಟವು ದಿನಾಂಕ: 31.08.2015ರಂದು ಕೆಳಕಂಡ ಅಂಶಗಳಿಗೆ ಅನುಮೋದನೆ ನೀಡಿರುತ್ತದೆ :<br><br>**ಈಗಾಗಲೇ ಸಿ.ಐ.ಡಿ.ಯ ತನಿಖೆ ನಡೆಸುತ್ತಿರುವ 3 ವಿಭಾಗಗಳು ಅಂದರೆ, ಗಾಂಧಿನಗರ, ಮಲ್ಲೇಶ್ವರಂ ಮತ್ತು ರಾಜರಾಜೇಶ್ವರಿನಗರ ವಿಭಾಗಗಳಿಗೆ ಸಂಬಂಧಿಸಿದಂತೆ 6,188 ಕಾಮಗಾರಿಗಳ ಪೈಕಿ ತನಿಖೆ ಮುಕ್ತಾಯಗೊಂಡಿರುವ 78 ಕಾಮಗಾರಿಗಳು ಸೇರಿದಂತೆ ತನಿಖೆಯ ವಿವಿಧ ಹಂತಗಳಲ್ಲಿರುವ 285 ಕಾಮಗಾರಿಗಳ ತನಿಖೆಯನ್ನು ಸಿ.ಓ.ಡಿ ವತಿಯಿಂದ ತನಿಖೆ ನಡೆಸಲು;**<br><br>**ಉಳಿದ 5,903 ಕಾಮಗಾರಿಗಳ ತನಿಖೆಯನ್ನು ಸಿ.ಐ.ಡಿ.ಯಿಂದ ಹಿಂಪಡೆದು, ಅವುಗಳನ್ನು ಒಳಗೊಂಡಂತೆ ಬಿ.ಬಿ.ಎಂ.ಪಿ. ಗೆ ಸೇರಿದ ಇನ್ನಿತರೆ 25 ಇಂಜನಿಯರಿಂಗ್ ವಿಭಾಗಗಳಲ್ಲಿ 2005–2006ನೇ ಸಾಲಿನಿಂದ 2011–12ನೇ ಸಾಲಿನವರೆಗೆ ನಡೆದಿರುವ ಡಾಂಬರೀಕರಣ** |

| | | | | |
|---|---|---|---|---|
| | | | | **ಕಾಮಗಾರಿಗಳಲ್ಲಿನ ಅಕ್ರಮ ಮತ್ತು ಅವ್ಯವಹಾರಗಳ ಬಗ್ಗೆ ತನಿಖೆಯನ್ನು ನಡೆಸಿ, ತಪ್ಪಿತಸ್ಥ ಅಧಿಕಾರಿ/ನೌಕರರ ವಿರುದ್ಧ ಶಿಸ್ತುಕ್ರಮ ಜರುಗಿಸಲು ಅನುವಾಗುವಂತೆ ಕಾಲಮಿತಿಯನ್ನು ವಿಧಿಸಿ, ರಾಜ್ಯ ಉಚ್ಛ ನ್ಯಾಯಾಲಯದ ನಿವೃತ್ತ ನ್ಯಾಯಾಧೀಶರ ನೇತೃತ್ವದಲ್ಲಿ ಇಬ್ಬರು ಅಥವಾ ಮೂರು ಜನ ನಿವೃತ್ತ ಮುಖ್ಯ ಇಂಜನಿಯರ್ ವೃಂದದ ತಾಂತ್ರಿಕ ಪರಿಣಿತರನ್ನೊಳಗೊಂಡ ತನಿಖಾ ತಂಡವನ್ನು ರಚಿಸಿ ವಿಚಾರಣೆ ನಡೆಸಲು;**<br><br>ಸರ್ಕಾರದ ಆದೇಶ ಸಂಖ್ಯೆ: ನಅಇ 117 ಎಂಎನ್‌ಯು, 2015, ದಿ: 19.02.2015ರಲ್ಲಿ ಬಿಬಿಎಂಪಿಯಲ್ಲಿ ಅನೇಕ ಅಕ್ರಮ–ಅವ್ಯವಹಾರಗಳು ನಡೆಯುತ್ತಿರುವುದಾಗಿ ಗಂಭೀರ ಸ್ವರೂಪದ ಆರೋಪಗಳು ಮೇಲ್ನೋಟಕ್ಕೆ ಕಂಡು ಬಂದಿರುವುದರಿಂದ ಪಾಲಿಕೆಯಲ್ಲಿ 2008ರಿಂದಲೂ 198 ವಾರ್ಡ್‌ಗಳಲ್ಲಿ 28 ವಿಧಾನಸಭಾ ಕ್ಷೇತ್ರಗಳನ್ನು ಒಳಗೊಂಡಂತೆ ನಡೆದಿದೆ ಎನ್ನಲಾದ ಲೋಪದೋಷಗಳು ಹಾಗೂ ಇನ್ನಿತರೆ ಎಲ್ಲಾ ಅವ್ಯವಹಾರಗಳಲ್ಲಿನ ಸತ್ಯಾಸತ್ಯತೆಯನ್ನು ಕಂಡುಕೊಳ್ಳುವ ಸಲುವಾಗಿ ತನಿಖೆ ನಡೆಸಿ ವರದಿಯಲ್ಲಿ ಸಲ್ಲಿಸಲು ಶ್ರೀ ರಾಜೇಂದ್ರ ಕುಮಾರ್ ಕಠಾರಿಯಾ, ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ ಮತ್ತು ಶ್ರೀ ಶಿವರುದ್ರಪ್ಪ, ಜಂಟಿ ನಿಯಂತ್ರಕರು, ಖಜಾನೆ–2 ರವರುಗಳನ್ನೊಳಗೊಂಡ ತನಿಖಾ ತಂಡವನ್ನು ರಚಿಸಲಾಗಿತ್ತು.<br><br>ಶ್ರೀ ರಾಜೇಂದ್ರ ಕುಮಾರ್ ಕಠಾರಿಯಾ, ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ ಇವರ ನೇತೃತ್ವದ ತನಿಖಾ ತಂಡವು ದಿ: 05.03.2015ರಂದು ಸಲ್ಲಿಸಿರುವ ತನಿಖಾ ವರದಿಯಲ್ಲಿ ಈ ಕೆಳಕಂಡಂತೆ ತಿಳಿಸಿರುತ್ತದೆ:<br><br>**“ ಪಾಲಿಕೆಯಲ್ಲಿ ಕಾಮಗಾರಿಗಳಿಗೆ ಸಂಕೇತ ನೀಡುವ ಸಂದರ್ಭದಲ್ಲಿ ಕಾಮಗಾರಿಗಳ ಸಂಖ್ಯೆ ಮತ್ತು ಮೊತ್ತದಲ್ಲಿ ಅಂಕಿ ಅಂಶಗಳ ವ್ಯತ್ಯಾಸ ಇರುವುದು, ಮರುಹೊಂದಾಣಿಕೆ ಇಲ್ಲದೇ ಹೆಚ್ಚುವರಿ ಕಾಮಗಾರಿ ಸಂಕೇತ ನೀಡಿರುವುದು, ಆಯುಕ್ತರ ಅನುಮೋದನೆ ಇಲ್ಲದೇ ಪಿ.ಓ.ಡಬ್ಲ್ಯೂ,** |

| | | | | |
|---|---|---|---|---|
| | | | | **ಮಿಸ್ಸಿಂಗ್ ಎಂದು ನಮೂದಿಸಿ ಕಾಮಗಾರಿ ಸಂಖ್ಯೆ ನೀಡಿರುವುದು, ಕಾಮಗಾರಿಗಳ ಹೆಸರುಗಳನ್ನು ಬದಲಾಯಿಸಿರುವುದು, ಒಂದೇ ಕಾಮಗಾರಿಗೆ ಎರಡು ಕಾಮಗಾರಿ ಸಂಕೇತ ನೀಡಿರುವುದು, ಇತ್ಯಾದಿ ಲೋಪದೋಷಗಳನ್ನು ಲೆಕ್ಕ ಪರಿಶೋಧಕರು ಅವಲೋಕಿಸಿರುವುದನ್ನು ತನಿಖಾ ತಂಡವು ತನ್ನ ವರದಿಯಲ್ಲಿ ಪ್ರತಿಬಿಂಬಿಸಿದೆ. ಇದಲ್ಲದೇ, ತ್ಯಾಜ್ಯ ವಿಲೇವಾರಿ ನಿರ್ವಹಣೆಯನ್ನು ಅಸಮರ್ಪಕವಾಗಿ ನಿರ್ವಹಿಸುತ್ತಿರುವುದು, ಜಾಹೀರಾತು ವಿಭಾಗದಲ್ಲಿ ಸಾವಿರಾರು ಕೋಟಿಗಳ ಶುಲ್ಕ ವಸೂಲಿ ಮಾಡದೇ ಅರ್ಥಿಕ ನಷ್ಟವನ್ನುಂಟು ಮಾಡಿರುವುದು, ಹಾಗೆಯೇ ಸುಮಾರು 20,000 ಅನಧಿಕೃತ ಜಾಹೀರಾತು ಫಲಕಗಳನ್ನು ಅಳವಡಿಸಿಕೊಂಡಿದ್ದು, ಆ ಬಗ್ಗೆ ಮಾನ್ಯ ಉಪ ಲೋಕಾಯುಕ್ತರು ತೀವ್ರ ಅಸಮಾಧಾನ ವ್ಯಕ್ತಪಡಿಸಿರುವುದು, ಓ.ಎಫ್.ಸಿ. ಕೇಬಲ್ ಅಳವಡಿಸುವಲ್ಲಿ ಸಾವಿರಾರು ಕೋಟಿ ಆರ್ಥಿಕ ನಷ್ಟ ಉಂಟಾಗುವಂತೆ ಮಾಡಿರುವುದು, ಇತ್ಯಾದಿ ಅಂಶಗಳನ್ನೊಳಗೊಂಡಂತೆ ಪಾಲಿಕೆಯು ಆರ್ಥಿಕ ಸಂಕಷ್ಟದಲ್ಲಿದ್ದು, ವ್ಯವಸ್ಥಿತವಾದ ಆರ್ಥಿಕ ನಿರ್ವಹಣೆ ನಡೆಸದೇ ಇರುವುದರ ಬಗ್ಗೆ ತಿಳಿಸಿದೆ.”**<br><br>ಮೇಲೆ ವಿವರಿಸಿರುವ ಎಲ್ಲಾ ಅಂಶಗಳನ್ನು ಪರಿಶೀಲಿಸದ ಸರ್ಕಾರ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಗಾಂಧಿನಗರ, ಮಲ್ಲೇಶ್ವರ ಹಾಗೂ ರಾಜರಾಜೇಶ್ವರಿನಗರ ವಲಯಗಳ ಇಂಜನಿಯರಿಂಗ್ ವಿಭಾಗಗಳಲ್ಲಿ ನಡೆದಿರುವ ಅವ್ಯವಹಾರಗಳು ಸೇರಿದಂತೆ ಶ್ರೀ ರಾಜೇಂದ್ರ ಕಠಾರಿಯಾ ಸಮಿತಿಯ ವರದಿಯಲ್ಲಿ ಬಿ.ಬಿ.ಎಂ.ಪಿ. 198 ವಾರ್ಡ್‌ಗಳಲ್ಲಿ 2008ರಿಂದ ನಡೆದಿದೆ ಎನ್ನಲಾದ ಕೋಟ್ಯಾಂತರ ರೂ.ಗಳ ಅಕ್ರಮ ಮತ್ತು ಅವ್ಯವಹಾರಗಳ ಕುರಿತು ನೀಡಿರುವ ವಿವರವಾದ ವರದಿಯಲ್ಲಿನ ಅಂಶಗಳಂತೆ ಒಟ್ಟು 6,188 ಕಾಮಗಾರಿಗಳ ಪೈಕಿ 288 ಕಾಮಗಾರಿಗಳನ್ನು ಸಿ.ಐ.ಡಿ. ವತಿಯಿಂದ ನಡೆಸಲು ಹಾಗೂ ಉಳಿದ 5,903 ಕಾಮಗಾರಿಗಳ ತನಿಖೆಯನ್ನು ಸ್ವತಂತ್ರ ತಜ್ಞ ತನಿಖಾ ಸಂಸ್ಥೆಯ ಮೂಲಕ ಮಾಡಿಸುವುದು ಹಾಗೂ ಬಿ.ಬಿ.ಎಂ.ಪಿ.ಯ ಆಡಳಿತವನ್ನು ಉತ್ತಮಗೊಳಿಸುವ ನಿಟ್ಟಿನಲ್ಲಿ ಮತ್ತು ಹಣ ದುರುಪಯೋಗವನ್ನು ತಡೆಗಟ್ಟಲು ಕೆಲವು ಕ್ರಮಗಳನ್ನು ಕೈಗೊಳ್ಳುವುದು ಅವಶ್ಯಕವೆಂಬುದನ್ನು ದೃಷ್ಟಿಯಲ್ಲಿಟ್ಟುಕೊಂಡು ವಿವರವಾದ ತನಿಖೆಯನ್ನು ನಡೆಸುವುದು ಸೂಕ್ತವೆಂದು ಪರಿಗಣಿಸಿ, ಕರ್ನಾಟಕ ಉಚ್ಚ |

| | | | | |
|---|---|---|---|---|
| | | | | ನ್ಯಾಯಾಲಯದ ನಿವೃತ್ತ ನ್ಯಾಯಮೂರ್ತಿಗಳ ಅಧ್ಯಕ್ಷತೆಯಲ್ಲಿ ಹಾಗೂ ನಿವೃತ್ತ ಪ್ರಧಾನ/ಮುಖ್ಯ ಅಭಿಯಂತರರುಗಳನ್ನೊಳಗೊಂಡ ಸಮಿತಿಯನ್ನು ರಚಿಸಲು ಸರ್ಕಾರವು ತೀರ್ಮಾನಿಸಿ, ಸರ್ಕಾರದ ಆದೇಶ ಸಂಖ್ಯೆ: ನಅಇ 479 ಎಂಎನ್‌ಯು 2011, ದಿ: 16.6.2016ರಲ್ಲಿ ಶ್ರೀ ಹೆಚ್.ಎನ್. ನಾಗಮೋಹನ್‌ದಾಸ್, ನಿವೃತ್ತ ನ್ಯಾಯಮೂರ್ತಿಗಳು ಇವರ ನೇತೃತ್ವದಲ್ಲಿ ತನಿಖಾ ಸಮಿತಿಯು ರಚಿಸಿದ್ದು, ತನಿಖೆ ಕೈಗೊಂಡು ಸರ್ಕಾರಕ್ಕೆ ವರದಿ ಸಲ್ಲಿಸುವಂತೆ ಆದೇಶಿಸಲಾಗಿದೆ.<br><br>ಸದರಿ ತನಿಖಾ ಸಮಿತಿಯು ದಿನಾಂಕ: 29.11.2017ರಲ್ಲಿ ಒಟ್ಟು 6188 ಕಾಮಗಾರಿಗಳಲ್ಲಿ ರಾಜರಾಜೇಶ್ವರಿ ನಗರದ 1227 ಮತ್ತು ಮಲ್ಲೇಶ್ವರಂ ವಿಭಾಗದ 700 ಕಾಮಗಾರಿಗಳ ಕಡತ ಪರಿಶೀಲನೆ ಮುಗಿದಿದ್ದು, ಈ ಪೈಕಿ ರಾಜರಾಜೇಶ್ವರಿ ನಗರದ 20 ಮತ್ತು ಮಲ್ಲೇಶ್ವರಂ ವಿಭಾಗದ 20 ಕಾಮಗಾರಿಗಳ ಸ್ಥಳ ಪರಿಶೀಲನೆ ಪೂರ್ಣಗೊಂಡಿರುತ್ತದೆ ಎಂದು ತಿಳಿಸಿ ರಾಜರಾಜೇಶ್ವರಿ ನಗರ ಮತ್ತು ಮಲ್ಲೇಶ್ವರಂ ವಿಭಾಗಗಳಿಗೆ, ಸಂಬಂಧಿಸಿದಂತೆ 2008ರಿಂದ 2012ರವರೆ ಕೈಗೊಂಡ ಕಾಮಗಾರಿಗಳಲ್ಲಿ ನಡೆದಿರುವ ಅವ್ಯವಹಾರಗಳ ಬಗ್ಗೆ ಮಧ್ಯಂತರ ತನಿಖಾ ವರದಿಯನ್ನು ಸಲ್ಲಿಸಿರುತ್ತಾರೆ.<br><br>ತನಿಖಾ ಸಮಿತಿಯ ಮಧ್ಯಂತರ ವರದಿಯನ್ನು ಸರ್ಕಾರವು ಪರಿಶೀಲಿಸಿ, ಸರ್ಕಾರದ ಆದೇಶ ಸಂಖ್ಯೆ: ನಅಇ 479 ಎಂಎನ್‌ಯು 2011(ಭಾಗ–3), ದಿ: 22.01.2018ರಲ್ಲಿ ಈ ಕೆಳಕಂಡಂತೆ ಆದೇಶಿಸಿದೆ.<br><br>1. ಮಾನ್ಯ ನ್ಯಾಯಮೂರ್ತಿ ಶ್ರೀ ನಾಗಮೋಹನ್ ದಾಸ್‌ರವರು ಕೈಗೊಂಡಿರುವ ತನಿಖೆಗೆ ಪಾಲಿಕೆ ಅಧಿಕಾರಿಗಳು ಸೂಕ್ತ ಸಹಕಾರ ನೀಡುವುದು ಮತ್ತು ಸಮಿತಿಯು ಕೇಳುವ ದಾಖಲೆಗಳನ್ನು ನಿಗದಿತ ಸಮಯದೊಳಗೆ ಒದಗಿಸಲು ವಿಶೇಷ ಆಯುಕ್ತರು (ಆಡಳಿತ)ರವರನ್ನು ನೋಡಲ್ ಅಧಿಕಾರಿಯನ್ನಾಗಿ ನೇಮಿಸಿದೆ. ದಾಖಲೆಗಳನ್ನು ಒದಗಿಸದ ಮತ್ತು ತನಿಖೆಗೆ ಅಡ್ಡಿಮಾಡುವ ಅಧಿಕಾರಿಗಳ ವಿರುದ್ಧ ನಿಯಮಾನುಸಾರ ಶಿಸ್ತು ಕ್ರಮ ಕೈಗೊಳ್ಳುವುದು. |

| | | | | |
|---|---|---|---|---|
| | | | | 2. ಸಮಿತಿಯ ವರದಿಯಂತೆ ಶಾಸನಾಪೇಕ್ಷಿತ ಕಡಿತಗಳನ್ನು ಸೂಕ್ತವಾಗಿ ಮಾಡದಿರುವ ಸಂದರ್ಭಗಳಲ್ಲಿ ವಸೂಲಾತಿಯನ್ನು ಈ ಕೂಡಲೇ ಕೈಗೊಂಡು ಮಾರ್ಚ್ ಅಂತ್ಯದೊಳಗಾಗಿ ಪೂರ್ಣಗೊಳಿಸುವುದು.<br><br>3. ಸದರಿ ಅವ್ಯವಹಾರಗಳಲ್ಲಿ ಸರ್ಕಾರದ ಬೊಕ್ಕಸಕ್ಕೆ ಆಗಿರುವ ನಷ್ಟವನ್ನು ನಿಖರವಾಗಿ ಅಂದಾಜು ಮಾಡಲು ನಗರಾಭಿವೃದ್ಧಿ ಇಲಾಖೆಯ ಅಧೀನದಲ್ಲಿ ಬರುವ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಆರ್ಥಿಕ ಸದಸ್ಯರು, ಮುಖ್ಯ ಲೆಕ್ಕಾಧಿಕಾರಿ ಮತ್ತು ಲೆಕ್ಕ ಪರಿಶೋಧನಾ ಅಧಿಕಾರಿ ಇವರನ್ನೊಳಗೊಂಡ ಒಂದು ತಂಡವನ್ನು ರಚಿಸಿ 3 ತಿಂಗಳೊಳಗೆ ಪರಿಶೀಲಿಸಿ ನಷ್ಟದ ಅಂದಾಜು ಮೊತ್ತವನ್ನು ತಿಳಿಸುವುದು.<br><br>4. ಸದರಿ ಅವ್ಯವಹಾರಗಳಲ್ಲಿ ಗುತ್ತಿಗೆದಾರರು ಭಾಗಿಯಾಗಿರುವುದು ಮೇಲ್ನೋಟಕ್ಕೆ ವ್ಯಕ್ತವಾಗುತ್ತಿರುವ ಹಿನ್ನಲೆಯಲ್ಲಿ ಗುತ್ತಿಗೆದಾರರನ್ನು ಪಾಲಿಕೆಯ ಇತರ ಕಾಮಗಾರಿ ಇಲಾಖೆಗಳು ಕಪ್ಪುಪಟ್ಟಿಗೆ ಸೇರಿಸಲು ಕ್ರಮವಹಿಸುವುದು; ನಷ್ಟದ ಮೊತ್ತವನ್ನು ಸಂಬಂಧಿಸಿದ ಅಧಿಕಾರಿ/ಗುತ್ತಿಗೆದಾರರಿಂದ ವಸೂಲಾತಿ ಕೈಗೊಳ್ಳುವುದು.<br><br>5. ಸದರಿ ಅವ್ಯವಹಾರಗಳಲ್ಲಿ ಭಾಗಿಯಾಗಿರುವ ಅಧಿಕಾರಿಗಳ ಮೇಲೆ ಸಿ.ಆ.ಸು. ಇಲಾಖೆಯು ಹೊರಡಿಸಿರುವ ಸುತ್ತೋಲೆ ಸಂಖ್ಯೆ: ಸಿ.ಆ.ಸು.ಇ.01 ಸೇಇವಿ 2005, ದಿ: 09.02.2005 ಹಾಗೂ ಸಿಆಸುಇ 55 ಕೆಇವಿ 2010, ದಿ: 20.11.2010ರಲ್ಲಿನ ಮಾರ್ಗಸೂಚಿಯಂತೆ ಪರಿಶೀಲಿಸಿ, ಚೆಕ್‌ಲೀಸ್ಟ್‌ನೊಂದಿಗೆ ದೋಷಾರೋಪಣಾ ಪಟ್ಟಿ (ಅನುಬಂಧ–1 ರಿಂದ 4) ಅನ್ನು ಸಲ್ಲಿಸುವಂತೆ ಬಿಬಿಎಂಪಿ ಆಯುಕ್ತರಿಗೆ ಸೂಚಿಸಲಾಗಿದೆ.<br><br>ಮೇಲ್ಕಂಡ ಆದೇಶದ ಮೇಲೆ ಆಯುಕ್ತರು, ಬಿಬಿಎಂಪಿ.ರವರು ಈ ಕೆಳಕಂಡಂತೆ ಕ್ರಮಗಳನ್ನು ಕೈಗೊಂಡಿರುವುದಾಗಿ ತಿಳಿಸಿರುತ್ತಾರೆ.<br><br>1. ಸರ್ಕಾರದ ಆದೇಶದಂತೆ ವಿಶೇಷ ಆಯುಕ್ತರು (ಆಡಳಿತ)ರವರನ್ನು ನೋಡಲ್ ಅಧಿಕಾರಿಯನ್ನಾಗಿ ನೇಮಿಸಲಾಯಿತು. ಆ ಸಮಯಕ್ಕೆ |

| | | | | |
|---|---|---|---|---|
| | | | | ಕರ್ನಾಟಕ ವಿಧಾನಸಭಾ ಚುನಾವಣೆ ಆರಂಭವಾದ ಕಾರಣ, ವಿಶೇಷ ಆಯುಕ್ತರು (ಆಡಳಿತ)ರವರು ಅಪರ ಜಿಲ್ಲಾ ಚುನಾವಣಾಧಿಕಾರಿಗಳಾದ್ದರಿಂದ ಚುನಾವಣಾ ಕೆಲಸ ಕಾರ್ಯಗಳ ಒತ್ತಡವಿದ್ದುದರಿಂದ ಕ್ರಮ ಜರುಗಿಸಲು ವಿಳಂಬವಾಗಿರುತ್ತದೆ. ಈ ಬಗ್ಗೆ ಕೂಡಲೇ ಕ್ರಮ ಜರುಗಿಸಲಾಗುವುದು.<br><br>2. ತನಿಖಾ ಸಮಿತಿಯು ಮಧ್ಯಂತರ ವರದಿ ನೀಡಿದ್ದು, ಶಾಸನಾಪೇಕ್ಷಿತ ಕಡಿತಗಳ ತನಿಖೆಯು ಇನ್ನೂ ಪ್ರಗತಿಯಲ್ಲಿರುವುದರಿಂದ, ಸಮಿತಿಯು ಪೂರ್ಣ ವರದಿ ಸಲ್ಲಿಸಿದ ನಂತರ ಇವುಗಳ ವಸೂಲಾತಿಗೆ ಕ್ರಮ ಕೈಗೊಳ್ಳಲಾಗುವುದು.<br><br>3. ಆಯುಕ್ತರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ರವರಿಗೆ ಮಾನ್ಯ ತನಿಖಾ ಸಮಿತಿಯ ಮಧ್ಯಂತರ ವರದಿಯಂತೆ ಆರ್ಥಿಕ ಸದಸ್ಯರು, ಮುಖ್ಯ ಲೆಕ್ಕಾಧಿಕಾರಿ ಮತ್ತು ಲೆಕ್ಕ ಪರಿಶೋಧನಾ ಅಧಿಕಾರಿಗಳನ್ನು ಪಾಲಿಕೆಗೆ ನಿಯೋಜಿಸಲು ದಿನಂಕ: 26.05.2018ರಂದು ಕೋರಲಾಗಿದ್ದು, ತಂಡ ನೇಮಕವಾದ ಕೂಡಲೇ ಕ್ರಮ ಜರುಗಿಸಲಾಗುವುದು.<br><br>4. ತನಿಖಾ ಸಮಿತಿಯು ಪೂರ್ಣ ವರದಿ ಸಲ್ಲಿಸಿದ ನಂತರ ಇವುಗಳ ವಸೂಲಾತಿಗೆ ಕ್ರಮ ಕೈಗೊಳ್ಳಲಾಗುವುದು.<br><br>ತನಿಖಾ ಸಮಿತಿಯು ಪೂರ್ಣ ವರದಿ ಸಲ್ಲಿಸಿದ ನಂತರ ಸದರಿ ಅವ್ಯವಹಾರಗಳಲ್ಲಿ ಭಾಗಿಯಾಗಿರುವ ಅಧಿಕಾರಿಗಳ ಮೇಲೆ ಸಿಆಸು. ಇಲಾಖೆಯು ಹೊರಡಿಸಿರುವ ಸುತ್ತೋಲೆ ಸಂಖ್ಯೆ: ಸಿಆಸುಇ 01 ಸೇಇವಿ 2005, ದಿ: 9.2.2005 ಹಾಗೂ ಸಿಆಸುಇ 55 ಕೆಇವಿ 2010, ದಿ: 20.11.2010ರಲ್ಲಿನ ಮಾರ್ಗಸೂಚಿಗಳಂತೆ ಪರಿಶಿಲಿಸಿ, ದೋಷಾರೋಪಣಾ ಪಟ್ಟಿ (ಅನುಬಂಧ–1 ರಿಂದ 4)ಅನ್ನು ಸಲ್ಲಿಸಲು ಕೂಡಲೇ ಕ್ರಮ ಕೈಗೊಂಡು ವಸೂಲಾತಿ ಕೈಗೊಳ್ಳಲಾಗುವುದು ಎಂದು ಇಲಾಖಾಧಿಕಾರಿಗಳು ನೀಡಿರುವ ಉತ್ತರವನ್ನು |

| | | | | |
|---|---|---|---|---|
| | | | | ಒಪ್ಪಿದ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |
| 53 | 3958<br>ಚು.ಗು.ಪ್ರ: 461<br>ಶ್ರೀ ಆರ್.ವಿ.ವೆಂಕಟೇಶ್<br>ವಿಪನದಿ: 09.02.2012 | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು 2011–12ನೇ ಸಾಲಿನ ಬಜೆಟ್‌ನಲ್ಲಿ ಆದಾಯ ಸಂಗ್ರಹಿಸುವ ಗುರಿ ಹೊಂದಿದ್ದು, ಉದ್ದೇಶಿತ ಆದಾಯ ಸಂಗ್ರಹದಲ್ಲಿ ಬೃಹತ್ ಬೆಂಗಳೂರು ಮಹಾನರ ಪಾಲಿಕೆ ವಿಫಲವಾದರೆ ನಿಗದಿತ ಯೋಜನೆಗಳನ್ನು ಕೈಗೊಳ್ಳಲು ಹಣ ಸಹಾಯ ಮಾಡುವ ಬಗ್ಗೆ. | ಪರಿಶೀಲಿಸಲಾಗುವುದು ಎಂದು ಮಾನ್ಯ ಮುಖ್ಯಮಂತ್ರಿಗಳು ತಿಳಿಸಿದರು. | ದಿನಾಂಕ: 16.10.2018ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು,<br>• 2011–12ನೇ ಸಾಲಿನಲ್ಲಿ ಸರ್ಕಾರದಿಂದ ನಿಗಧಿಪಡಿಸಿದ ಅನುದಾನ ಹಾಗೂ ಬಿಬಿಎಂಪಿಯ ರಾಜಸ್ವ ಸೇರಿ ಪಾಲಿಕೆಯು ರೂ.9197.55 ಕೋಟಿಗಳಿಗೆ ಆಯವ್ಯಯ ಸಿದ್ದಪಡಿಸಿತ್ತು.<br>• ಆದರೆ, 2011–12ನೇ ಸಾಲಿನ ಲೆಕ್ಕಪತ್ರಗಳ ಅನ್ವಯ ಒಟ್ಟು ಸ್ವೀಕರಿಸಲಾದ ಮೊತ್ತ ರೂ.4,216.90 ಕೋಟಿಗಳಲ್ಲಿ ಬಿ.ಬಿ.ಎಂ.ಪಿ.ಯ ತೆರಿಗೆ ಮತ್ತು ತೆರಿಗೇತರ ಮೂಲಗಳಿಂದ ಸ್ವೀಕರಿಸಲಾದ ಮೊತ್ತ ರೂ.2.133.16 ಕೋಟಿ ಒಳಗೊಂಡಿರುತ್ತದೆ.<br>• ಪಾಲಿಕೆಯ ರಾಜಸ್ವ ಸ್ವೀಕೃತಿ ಕಡಿಮೆ ಆದ ಸಂದರ್ಭದಲ್ಲಿ ಪ್ರಮುಖವಾಗಿ ಕೈಗೊಳ್ಳಲಾದ ಯೋಜನೆಗಳಿಗೆ ಮುಂದಿನ ಸಾಲುಗಳಲ್ಲಿ ಮುಂದುವರೆದ ಕಾಮಗಾರಿಗಳಿಗಾಗಿ ಪರಿಗಣಿಸಿ, ಅನುದಾನ ಒದಗಿಸಿಕೊಂಡು ಕಾಮಗಾರಿಯನ್ನು ಪೂರ್ಣಗೊಳಿಸಲಾಗುತ್ತಿರುತ್ತದೆ. |

| ಕ್ರ.ಸ | ಆರ್ಥಿಕ ಸಾಲು | ಆಯವ್ಯಯ ಅಂದಾಜು | ಲೆಕ್ಕಗಳು | ಶೇ. |
|---|---|---|---|---|
| 1 | 2010–11 | 8862.04 | 3626.18 | 40.91% |
| 2 | 2011–12 | 9398.54 | 3838.99 | 41% |
| **3** | 2012–13 | 9920.35 | 4358.05 | 44% |
| 4 | 2013–14 | 8497.48 | 3343.39 | 39% |
| 5 | 2014–15 | 6024.52 | 3777.80 | 63% |
| 6 | 2015–16 | 5409.68 | 5197.93 | 96% |
| 7 | 2016–17 | 9353.10 | 5309.61 | 56.76% |
| 8. | 2017–18 | 9994.54 | 7513.53 | 75% |

| | | | | |
|---|---|---|---|---|
| | | | | • ಸರ್ಕಾರದ ಆದೇಶ ಸಂಖ್ಯೆ: ನಅಇ 199 ಎಸ್‌ಎಫ್‌ಸಿ 2016 (ಭಾಗ–1), ದಿನಾಂಕ: 26.01.2016ರಲ್ಲಿ ನಗರೋತ್ಥಾನ ಯೋಜನೆ, ವಿಶೇಷ ಮೂಲಭೂತ ಸೌಕರ್ಯಕ್ಕೆ ಬಂಡವಾಳ ಬೆಂಬಲ ಮತ್ತು ಸರೋವರ ಅಭಿವೃದ್ಧಿ ಯೋಜನೆಯಡಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ 2016–17 ಮತ್ತು 2017–18ನೇ ಸಾಲಿಗಾಗಿ ಒಟ್ಟು ರೂ. 7300.00 ಕೋಟಿಗಳ ವೆಚ್ಚದಲ್ಲಿ ಕೈಗೊಳ್ಳುವ ಕಾಮಗಾರಿಗಳ ಕ್ರಿಯಾ ಯೋಜನೆಗೆ ಅನುಮೋದನೆಯನ್ನು ನೀಡಲಾಗಿರುತ್ತದೆ. ಎಲ್ಲಾ ಕಾಮಗಾರಿಗಳನ್ನು ಹಂತಹಂತವಾಗಿ ಪೂರ್ಣಗೊಳಿಸಲಾಗುತ್ತಿದ್ದು, ಪೂರ್ಣಗೊಂಡ ಕಾಮಗಾರಿಗಳಿಗೆ ಸರ್ಕಾರದಿಂದ ಬಿಡುಗಡೆಯಾದ ಅನುದಾನದಿಂದ ಬಿಲ್ಲುಗಳನ್ನು ಪಾವತಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.<br><br>• ಮುಂದುವರೆದು ಪಾಲಿಕೆಯ ಆಯವ್ಯಯ ಅಂದಾಜಿಗೆ ಅನುಗುಣವಾಗಿ ಸ್ವೀಕೃತಿಗಳು (ವೆಚ್ಚ–ಲೆಕ್ಕಗಳು) ಕಡಿಮೆಯಾಗುತ್ತಿರುವುದರಿಂದ ಕಳೆದ 1–1/2 ವರ್ಷಗಳ ಅವಧಿಯಲ್ಲಿ ಸುಮಾರು 1,500/– ಕೋಟಿಗಳನ್ನು ಗುತ್ತಿಗೆದಾರರಿಗೆ ಪಾವತಿಸಬೇಕಾಗಿದೆ ಎಂದು ಆಯುಕ್ತರು ತಿಳಿಸಿದ್ದು, ಈ ಬಾಕಿ ಬಿಲ್ಲುಗಳನ್ನು ಬಿ.ಬಿ.ಎಂ.ಪಿ.ಯೇ ತನ್ನ ಸಂಪನ್ಮೂಲದಿಂದ ಪಾವತಿಸಲು ಸರ್ಕಾರವು ನಿರ್ದೇಶನವನ್ನು ನೀಡಿರುತ್ತದೆ.<br><br>ಮೇಲ್ಕಂಡಂತೆ ಇಲಾಖಾಧಿಕಾರಿಗಳು ನೀಡಿರುವ ಉತ್ತರವನ್ನು ಒಪ್ಪಿದ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |
| 54 | 4135<br>ಚು.ಗು.ಪ್ರ: 494<br>ಡಾ: ಎಸ್.ಆರ್. ಲೀಲಾ<br>ವಿಪನದಿ: 26.07.2012 | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ರಚನೆಗೆ ಮುಂಚೆ ಗ್ರಾಮ ಪಂಚಾಯಿತಿಯಲ್ಲಿದ್ದ ನೌಕರರು ಮಹಾನಗರ | ಸರ್ಕಾರವು ನಿಯಮಾನುಸಾರ ಸೂಕ್ತ ಕ್ರಮ ಕೈಗೊಳ್ಳಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಸೂಚಿಸಲಾಗಿದೆ. | ದಿನಾಂಕ: 16.10.2018ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು, ಸರ್ಕಾರದ ಆದೇಶದಂತೆ ಬೆಂಗಳೂರು ಸುತ್ತಮುತ್ತಲಿನ 7 ನಗರಸಭೆಗಳು, 1 ಪುರಸಭೆ ಮತ್ತು 110 ಗ್ರಾಮ ಪಂಚಾಯಿತಿಗಳು ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ವಿಲೀನಗೊಂಡು ದಿನಾಂಕ: 16.01.2007ರಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರಚನೆಗೊಂಡಿರುತ್ತದೆ. ಈ ರೀತಿ 110 ಗ್ರಾಮ |

| | | | | |
|---|---|---|---|---|
| | | ಪಾಲಿಕೆಯ ರಚನೆಯ ನಂತರವೂ ಗ್ರಾಮ ಪಂಚಾಯಿತಿ ನೌಕರರಾಗಿಯೇ ಸೇವೆಯಲ್ಲಿ ಮುಂದುವರಿಯುತ್ತಿರುವ ಬಗ್ಗೆ | ಈ ವಿಷಯವನ್ನು ಪಾಲಿಕೆ ಸಭೆಯ ಮುಂದೆ ಸೂಕ್ತ ನಿರ್ಣಯಕ್ಕಾಗಿ ಆದಷ್ಟು ಜಾಗ್ರತೆ ಮಂಡಿಸುವಂತೆ ಪಾಲಿಕೆಗೆ ಸೂಚನೆ ನೀಡಲಾಗಿದೆ. ಈ ವಿಷಯವನ್ನು ಬಿ.ಬಿ.ಎಂ.ಪಿ. ಪರಿಶೀಲಿಸುತ್ತಿದೆ ಎಂದು ಮಾನ್ಯ ಮುಖ್ಯಮಂತ್ರಿಯವರು ತಿಳಿಸಿದರು. | ಪಂಚಾಯಿತಿಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದ ಗ್ರಾಮ ಪಂಚಾಯಿತಿ ನೌಕರರುಗಳನ್ನು ಪಾಲಿಕೆಯಲ್ಲಿ ವಿಲೀನಗೊಳಿಸುವ ಸಂಬಂಧ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದ್ದು ಪರಿಶೀಲಿಸಲಾಗುತ್ತಿದೆ.<br><br>(ಕ್ರ ಸಂ: 1 — ಗ್ರಾಮ ಪಂಚಾಯಿತಿ ನೌಕರರ ಸಂಖ್ಯೆ: 671 — ಪಾಲಿಕೆಗೆ ವಿಲೀನಾತಿ ಹೊಂದಿರುವ ಗ್ರಾಮ ಪಂಚಾಯಿತಿ ನೌಕರರ ಸಂಖ್ಯೆ: ಯಾರೂ ಇರುವುದಿಲ್ಲ — ವೇತನ (ಸಮಾನ ಕೆಲಸಕ್ಕೆ ಸಮಾನ ವೇತನ): ರೂ.9600+ಇತರ ಭತ್ಯೆಗಳು (ವಾರ್ಷಿಕ ವೇತನ ಬಡ್ತಿ ಇರುವುದಿಲ್ಲ))<br><br>ಮೇಲ್ಕಂಡಂತೆ ಇಲಾಖಾಧಿಕಾರಿಗಳು ನೀಡಿರುವ ಉತ್ತರವನ್ನು ಒಪ್ಪಿದ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |
| 55 | 4137<br>ಚು.ಗು.ಪ್ರ: 219<br>ಶ್ರೀ ಕೆ. ಗೋವಿಂದರಾಜ್<br>ವಿಪನದಿ: 26.07.2012 | ಬೆಂಗಳೂರು ನಗರದ ಸಾರ್ವಜನಿಕ ರಸ್ತೆಗಳಲ್ಲಿ ನೈರ್ಮಲ್ಯ ಕಾಪಾಡುವ ದೃಷ್ಟಿಯಿಂದ ಮೊಬೈಲ್ ಶೌಚಾಲಯಗಳನ್ನು ಆರಂಭಿಸುವ ಬಗ್ಗೆ. | ಪಾಲಿಕೆಯ (ಬಿ.ಬಿ.ಎಂ.ಪಿ) ವ್ಯಾಪ್ತಿಯಲ್ಲಿ ಮೊಬೈಲ್ ಶೌಚಾಲಯಗಳನ್ನು ಸ್ಥಾಪಿಸುವ ಬಗ್ಗೆ ಪರಿಶೀಲಿಸಲಾಗುತ್ತಿದೆ ಎಂದು ಮಾನ್ಯ ಮುಖ್ಯಮಂತ್ರಿಯವರು ತಿಳಿಸಿದರು. | ದಿನಾಂಕ: 16.10.2018ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು, ಹಾಲಿ ಸ್ವಚ್ಛ ಭಾರತ ಮಿಷನ್ ಅಡಿಯಲ್ಲಿ 2779 ಸಂಖ್ಯೆಯ ವೈಯಕ್ತಿಕ ಶೌಚಾಲಯಗಳು ಹಾಗೂ 444 ಸಾರ್ವಜನಿಕ ಶೌಚಾಲಯಗಳ ನಿರ್ಮಾಣವನ್ನು ಪ್ರಥಮ ಆದ್ಯತೆಯ ಮೇರೆಗೆ ಕೈಗೊಳ್ಳಲಾಗಿದ್ದು, ಮೊಬೈಲ್ ಶೌಚಾಲಯ ಸ್ಥಾಪಿಸುವ ಸಂಬಂಧ ರೂಪುರೇಷೆ ಸಿದ್ದಪಡಿಸಲು ಕ್ರಮವಹಿಸಲಾಗುತ್ತಿದೆಯೆಂದು ಇಲಾಖಾಧಿಕಾರಿಗಳು ನೀಡಿರುವ ಉತ್ತರವನ್ನು ಒಪ್ಪಿದ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |
| 56 | 5334<br>ಚು.ಗು.ಪ್ರ. 1874 | ಬೆಂಗಳೂರು ನಗರದಲ್ಲಿರುವ ಅಗರ | ಬೆಂಗಳೂರು ನಗರದಲ್ಲಿರುವ ಅಗರ ಕೆರೆಗೆ Sewage | ದಿನಾಂಕ: 07.03.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು, ಬೆಂಗಳೂರು ಜಲಮಂಡಳಿಯ ಅಗರ ಕೆರೆಗೆ ಹರಿಯುವ, ತ್ಯಾಜ್ಯ ನೀರನ್ನು |

Nested table within the first row's last column:

| ಕ್ರ ಸಂ | ಗ್ರಾಮ ಪಂಚಾಯಿತಿ ನೌಕರರ ಸಂಖ್ಯೆ | ಪಾಲಿಕೆಗೆ ವಿಲೀನಾತಿ ಹೊಂದಿರುವ ಗ್ರಾಮ ಪಂಚಾಯಿತಿ ನೌಕರರ ಸಂಖ್ಯೆ | ವೇತನ (ಸಮಾನ ಕೆಲಸಕ್ಕೆ ಸಮಾನ ವೇತನ) |
|---|---|---|---|
| 1 | 671 | ಯಾರೂ ಇರುವುದಿಲ್ಲ | ರೂ.9600+ಇತರ ಭತ್ಯೆಗಳು (ವಾರ್ಷಿಕ ವೇತನ ಬಡ್ತಿ ಇರುವುದಿಲ್ಲ) |

| | | | | |
|---|---|---|---|---|
| | ಶ್ರೀ ವಿ.ಎಸ್. ಉಗ್ರಪ್ಪ ವಿಪನದಿ:24.07.2014 | ಕೆರೆಗೆ ಎಸ್.ಟಿ.ಪಿ. ಯನ್ನು (Sewage Treatment plant) ಅಳವಡಿಸುವ ಬಗ್ಗೆ. | Treatment Plant ಅನ್ನು ಹಾಕಲು ಬಿ.ಡಬ್ಲ್ಯೂ.ಎಸ್. ಎಸ್.ಬಿ. ಯಿಂದ ಒಂದು ಟೆಂಡರ್ ಅನ್ನು ಕರೆದಿದ್ದಾರೆ. ಅದಕ್ಕೆ 25 ಕೋಟಿ ರೂಪಾಯಿಗಳಷ್ಟು ಖರ್ಚಾಗುತ್ತದೆ. ಪ್ರತಿ ದಿವಸ ಅದರ ನಿರ್ವಹಣೆಗೆ 38,000 ರೂಪಾಯಿಗಳನ್ನು ಖರ್ಚು ಮಾಡ ಬೇಕಾಗುತ್ತದೆ. ಈ ಕೆರೆಗೆ ಶುದ್ಧವಾದ ನೀರನ್ನು ಕೊಡಬೇಕಾದರೆ ಈ ಟ್ರೀಟ್‌ಮೆಂಟ್ ಪ್ಲಾಂಟ್ ಅನ್ನು ಹಾಕಲೇ ಬೇಕಾಗುತ್ತದೆ. ಈ ಹಿನ್ನಲೆಯಲ್ಲಿ ನಾನು ಬಿ.ಬಿ.ಎಂ.ಪಿ., ಬಿ.ಡಬ್ಲ್ಯೂ. ಎಸ್.ಎಸ್.ಬಿ. ಮತ್ತು ಬಿ.ಡಿ.ಎ.ನವರಿಗೂ ಸಹ ಇದನ್ನು ಮತ್ತೆ ರಿವ್ಯೂ ಮಾಡಬೇಕೆಂದು ಹೇಳುತ್ತೇನೆ, ಅಗತ್ಯ ಇದೆಯೋ ಇಲ್ಲವೋ ಎನ್ನುವುದನ್ನು ಮತ್ತೊಮ್ಮೆ ಪರಿಶೀಲಿಸಿ. ಈಗ ಮಂತ್ರಿ ಅಪಾರ್ಟ್‌ಮೆಂಟ್‌ನಿಂದ ಒಂದು ಲಕ್ಷ ಎಂಎಲ್‌ಡಿ ನೀರು ಸಿಗುತ್ತದೆ. ಅದೇ ನೀರು ಸಾಕು ಎನ್ನುವುದಾದರೆ | ತಡೆಯುವ ಅನೇಕ ಕಾಮಗಾರಿಗಳನ್ನು ಕೈಗೆತ್ತಿಕೊಂಡಿದೆ. ಅದರಲ್ಲಿ ತ್ಯಾಜ್ಯ ನೀರಿನ ಶುದ್ಧೀಕರಣ ಘಟಕವನ್ನು ಸ್ಥಾಪಿಸಿ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯು ನಿಗದಿಪಡಿಸಿರುವ ಗುಣಮಟ್ಟಕ್ಕೆ ತ್ಯಾಜ್ಯ ನೀರನ್ನು ಶುದ್ಧೀಕರಿಸಿ ಕೆರೆಗೆ ಹರಿಸಲಾಗುತ್ತದೆ.<br><br>ಮಂತ್ರಿ ಅಪಾರ್ಟ್‌ಮೆಂಟ್‌ನಲ್ಲಿ ಶುದ್ಧೀಕರಿಸಿದ ತ್ಯಾಜ್ಯ ನೀರನ್ನು ಅದೇ ಅಪಾರ್ಟ್‌ಮೆಂಟ್‌ನಲ್ಲಿ ಮರುಬಳಕೆಗೆ ಉಪಯೋಗಿಸ ಬೇಕಾಗಿರುವುದರಿಂದ ದಿನಂಪ್ರತಿ ಒಂದು ಲಕ್ಷ ಲೀಟರ್‌ನಷ್ಟು ಶುದ್ಧೀಕರಿಸಿ ತ್ಯಾಜ್ಯ ನೀರು ಮಳೆ ನೀರಿನ ಕಾಲುವೆಗೆ ಹರಿಯುವುದು ತಪ್ಪುತ್ತದೆ ಹಾಗೂ ಇಷ್ಟು ಪ್ರಮಾಣದ ನೀರು ಅಗರ ಕೆರೆಗೆ ಸೇರುವುದಿಲ್ಲ. ಆದರೆ, ಈ ಕೆರೆಯ ಮೇಲ್ಭಾಗದ ಇತರೆ ಪ್ರದೇಶಗಳಲ್ಲಿ ಉತ್ಪತ್ತಿಯಾಗುವ ತ್ಯಾಜ್ಯ ನೀರು ಕೆರೆಗೆ ಹರಿಯುವುದನ್ನು ತಪ್ಪಿಸಲು ಈ ಕೆರೆಯ ಅಂಚಿನಲ್ಲಿ ಒಂದು ತ್ಯಾಜ್ಯ ನೀರಿನ ಶುದ್ಧೀಕರಣ ಘಟಕವನ್ನು ನಿರ್ಮಾಣ ಮಾಡಲು ನಿರ್ಧಾರ ತೆಗೆದುಕೊಂಡು ಬೆಂಗಳೂರು ಜಲಮಂಡಳಿಯು ಅಮೃತ್ ಯೋಜನೆಯಡಿಯಲ್ಲಿ ಈ ಕೆರೆಯ ಬಳಿ 35 ದಶಲಕ್ಷ ಲೀಟರ್ ದಿನಂಪ್ರತಿ ಸಾಮರ್ಥ್ಯದ ತ್ಯಾಜ್ಯನೀರು ಸಂಸ್ಕರಣಾ ಘಟಕವನ್ನು ರೂ. 54.00 ಕೋಟಿ ಮೊತ್ತದಲ್ಲಿ ಸ್ಥಾಪಿಸುವ ಕಾಮಗಾರಿಯನ್ನು ಕೈಗೆತ್ತಿಕೊಂಡಿದೆ. ಈ ಘಟಕವನ್ನು 2019ರ ಅಂತ್ಯದಲ್ಲಿ ಪೂರ್ಣಗೊಳಿಸಲಾಗುವುದು. ಈ ಘಟಕದಿಂದ ಸಂಸ್ಕರಿಸಿದ ನೀರನ್ನು ಅಗರ ಕೆರೆಗೆ ಹರಿಯಬಿಡಲಾಗುವುದು. ಈ ಕ್ರಮದಿಂದ ಮುಂದಿನ ದಿನಗಳಲ್ಲಿ ಈ ಕೆರೆಗೆ ತ್ಯಾಜ್ಯ ನೀರು ಹರಿಯುವುದು ತಪ್ಪುತ್ತದೆ ಹಾಗೂ ಕೆರೆಯು ಪುನಶ್ಚೇತನಗೊಳ್ಳುವುದು ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿದ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |

| | | | | |
|---|---|---|---|---|
| | | | 25 ಕೋಟಿ ರೂಪಾಯಿಗಳನ್ನು ಖರ್ಚು ಮಾಡುವುದು ಬೇಡ. ಇದರ ಬಗ್ಗೆ ಅಧಿಕಾರಿಗಳು ರಿವ್ಯೂ ಮಾಡಿ ವರದಿಯನ್ನು ನೀಡಿದಲ್ಲಿ ಅದರ ಮೇಲೆ ಕ್ರಮ ಕೈಗೊಳ್ಳುತ್ತೇನೆ ಎಂದು ಮಾನ್ಯ ಮುಖ್ಯಮಂತ್ರಿಯವರು ತಿಳಿಸಿದರು. | |
| 57 | 3955<br>ಚು.ಗು.ಪ್ರ: 777<br>ಶ್ರೀ ಕೆ.ಸಿ.ಕೊಂಡಯ್ಯ<br>ವಿಪನದಿ: 09.02.2012 | ಬೆಂಗಳೂರು ಮಹಾನಗರದ ಚಿನ್ನಪ್ಪನಹಳ್ಳಿ ಗ್ರಾಮದ ರಾಜಕಾಲುವೆ ಹಳ್ಳಗಳ ಒತ್ತುವರಿ ಜಾಗವನ್ನು ತೆರವುಗೊಳಿಸಲು ಪಾಲಿಕೆ ತೆಗೆದುಕೊಂಡಿರುವ ಕ್ರಮಗಳ ಬಗ್ಗೆ. | ದಿನಾಂಕ:07.06.2010 ರಂದು ನಡೆದ ಸಭೆಯಲ್ಲಿ ಸರ್ವೆ ಕಾರ್ಯವನ್ನು ಒಂದು ವಾರದೊಳಗಾಗಿ ಪೂರ್ಣ ಗೊಳಿಸುವಂತೆ ಸೂಚಿಸಲಾಗಿದೆ. ಈ ರಾಜಕಾಲುವೆಯ ಸರ್ವೆ ಯನ್ನು ನಡೆಸುವ ಮುನ್ನ ಹೆಬ್ಬಾಳ ಕಣಿವೆಯ ದೊಡ್ಡ ಮೋರಿಗಳ ಸರಹದ್ದನ್ನು ಗುರುತಿಸಿದ ನಂತರ ಸರ್ವೆ ಮಾಡಬೇಕಾಗಿರುತ್ತದೆ. ಪ್ರಸ್ತುತ ಸರಹದ್ದುಗಳನ್ನು ಗುರುತಿಸುವ ರೆವಿನ್ಯೂ ಸರ್ವೆಕಾರ್ಯ ನಡೆಯುತ್ತಿರುತ್ತದೆ. ಈ ಕಾರ್ಯ ಮುಗಿದ ನಂತರ ಚಿನ್ನಪ್ಪನಹಳ್ಳಿಯಲ್ಲಿರುವ | ದಿನಾಂಕ: 07.03.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು, ಬೆಂಗಳೂರು ಮಹಾನಗರದ ಚಿನ್ನಪ್ಪನಹಳ್ಳಿ ಪ್ರದೇಶದ ರಾಜಕಾಲುವೆಗಳ ಸರ್ವೆಯನ್ನು ತಹಶೀಲ್ದಾರ್, ಕೆ.ಆರ್.ಪುರಂ ಹಾಗೂ ಬೃಹತ್ ನೀರುಗಾಲುವೆಗಳ ವಿಭಾಗದವರು ಗುರುತಿಸಿ, ಜಂಟಿ ಆಯುಕ್ತರ ಕಚೇರಿಗೆ ನಕ್ಷೆಗಳನ್ನು ಸಲ್ಲಿಸಿರುತ್ತಾರೆ. ಈ ಬಗ್ಗೆ ಮಾನ್ಯ ಉಪ ಲೋಕಾಯುಕ್ತರವರ ಮುಂದೆ, ಪ್ರಕರಣ ದಾಖಲಾಗಿ ವರದಿಯನ್ನು ಸಲ್ಲಿಸಲಾಗಿರುತ್ತದೆ. ಸದರಿ ವರದಿಯೊಂದಿಗೆ ಮಾನ್ಯ ಉಪ ಲೋಕಾಯುಕ್ತರು ಸ್ಥಳ ಪರಿವೀಕ್ಷಣೆ ಮಾಡಿದ್ದು, ವರದಿಯನ್ನು ನಿರೀಕ್ಷಿಸಲಾಗುತ್ತಿದೆ. ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ತೂಬು ಕಾಲುವೆಗಳ ಮೇಲೆ ನಿರ್ಮಾಣವಾಗಿರುವ ಕಟ್ಟಡದ ಮಾಲೀಕರು ಸಿಟಿ ಸಿವಿಲ್ ನ್ಯಾಯಾಲಯದಲ್ಲಿ ಈ ಕೆಳಕಂಡಂತೆ ದಾವೆಗಳನ್ನು ಹೂಡಿರುತ್ತಾರೆ.<br><br>• ಓ.ಎಸ್. ನಂ. 3745/2014,<br>• ಓ.ಎಸ್. ನಂ. 3746/2014, Evidence Dated: 20-11-2018<br>• ಓ.ಎಸ್. ನಂ. 3747/2014, Evidence Dated: 17-11-2018<br>• ಓ.ಎಸ್. ನಂ. 25170/2014,<br>• ಓ.ಎಸ್. ನಂ. 25147/2014, |

| | | | | |
|---|---|---|---|---|
| | | | ರಾಜಕಾಲುವೆಗಳ ರೆವಿನ್ಯೂ ಸರ್ವೆಯನ್ನು ಸಹ ಮಾಡಲಾಗುವುದು. ಸರ್ವೆ ಮಾಡಿದ ನಂತರ ಒತ್ತುವರಿ ಯನ್ನು ತೆರವುಗೊಳಿಸಲು ಕ್ರಮ ಜರುಗಿಸಲಾಗುವುದು ಎಂದು ಮಾನ್ಯ ಮುಖ್ಯಮಂತ್ರಿಯವರು ತಿಳಿಸಿದರು. | • ಓ.ಎಸ್. ನಂ. 25142 /2014,<br>• ಓ.ಎಸ್. ನಂ. 1244/2014,<br>• ಓ.ಎಸ್. ನಂ.1354/2015,Case disposed dated:23.11.2017<br>• ಓ.ಎಸ್. ನಂ. 598/2015, Evidence Dated: 20-11-2018<br>• ಓ.ಎಸ್. ನಂ. 599/2015, Evidence Dated: 20-11-2018<br>• ಓ.ಎಸ್. ನಂ. 1364/2015, Evidence Dated: 20-06-2018<br><br>ಸದರಿ ಪ್ರಕರಣಗಳಿಗೆ ಮಾನ್ಯ ಸಿಟಿ ಸಿವಿಲ್ ನ್ಯಾಯಾಲಯವು ಯಥಾಸ್ಥಿತಿಯನ್ನು ಮುಂದುವರೆಸಿ ತಡೆಯಾಜ್ಞೆಯನ್ನು ನೀಡಿರುತ್ತದೆ.<br><br>ಮೇಲ್ಕಂಡಂತೆ ಎರಡು ಪ್ರಕರಣಗಳು ಇತ್ಯರ್ಥವಾಗಿದ್ದು, ಉಳಿದ ಪ್ರಕರಣಗಳನ್ನು ತ್ವರಿತವಾಗಿ ವಿಲೇವಾರಿಗೊಳಿಸಲು ಪಾಲಿಕೆಯ ಕಾನೂನು ಶಾಖೆ ಹಾಗೂ ಮೊಕದ್ದಮೆಗೆ ಸಂಬಂಧಿಸಿದ ವಕೀಲರೊಂದಿಗೆ ವ್ಯವಹರಿಸುತ್ತಿದ್ದು ಶೀಘ್ರವಾಗಿ ಎಲ್ಲಾ ಪ್ರಕರಣಗಳನ್ನು ಇತ್ಯರ್ಥಗೊಳಿಸಿ ತೆರವು ಕಾರ್ಯಾಚರಣೆಗೊಳಿಸಲು ಕ್ರಮ ಕೈಗೊಳ್ಳಲಾಗುವುದು.<br><br>ಸದರಿ ತೂಬುಕಾಲುವೆಯ ಮೇಲೆ ನಿರ್ಮಿಸಿರುವ ಕಟ್ಟಡಗಳು ಸುಮಾರು 10 ರಿಂದ 15 ವರ್ಷಗಳ ಹಿಂದೆ ನಿರ್ಮಿಸಿರುವ ಕಟ್ಟಡಗಳಾಗಿದ್ದು, ಈಗಾಗಲೇ ಅವರಿಗೆ ವಿದ್ಯುತ್ ಸಂಪರ್ಕ, ರಸ್ತೆ ಹಾಗೂ ಸ್ವತ್ತಿಗೆ ಸಂಬಂಧಿಸಿದಂತೆ ಖಾತಾ ದಾಖಲಾತಿಗಳನ್ನು ನೀಡಲಾಗಿರುತ್ತದೆ. ಒತ್ತುವರಿ ಒಟ್ಟು ವಿಸ್ತೀರ್ಣ 0–33.31 ಗುಂಟೆ ಆಗಿರುತ್ತದೆ.<br><br>ಮಾನ್ಯ ನ್ಯಾಯಾಲಯವು ನೀಡಿರುವ ತಡೆಯಾಜ್ಞೆಯನ್ನು ತೆರುವುಗೊಳಿಸುವ ಬಗ್ಗೆ ಕ್ರಮ ಜರುಗಿಸಲಾಗುತ್ತಿದ್ದು, ಪ್ರಕರಣಗಳಲ್ಲಿ ಮಾನ್ಯ ನ್ಯಾಯಾಲಯವು ನೀಡುವ ಅಂತಿಮ ಆದೇಶದಂತೆ ನಿಯಮಾನುಸಾರ ಮುಂದಿನ ಕ್ರಮ ಜರುಗಿಸಲಾಗುವುದೆಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿದ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |

| | | | | |
|---|---|---|---|---|
| 58 | 4986<br>ಚು.ಗು.ಪ್ರ; 167<br>ಶ್ರೀ ರಾಮಚಂದ್ರಗೌಡ<br>ದಿ.26.06.2014 | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿನ ಪ್ರಾಥಮಿಕ, ಮಾಧ್ಯಮಿಕ ಮತ್ತು ಪ್ರೌಢಶಾಲೆಗಳಲ್ಲಿ ಗುತ್ತಿಗೆ ಆಧಾರದ ಮೇಲೆ ಕಾರ್ಯ ನಿರ್ವಹಿಸುತ್ತಿರುವ ಭೋಧಕ ಸಿಬ್ಬಂದಿಗಳಿಗೆ ಹಲವಾರು ತಿಂಗಳಿಂದ ವೇತನ ನೀಡುತ್ತಿಲ್ಲದಿರುವ ಬಗ್ಗೆ. | ಮಾನ್ಯ ಸದಸ್ಯರು ಕೊಟ್ಟಿರುವಂತಹ ಸಲಹೆಯನ್ನು ಗಮನದಲ್ಲಿಟ್ಟು ಕೊಂಡು ಅವರ ಸಂಬಳವನ್ನು ಹೆಚ್ಚು ಮಾಡುವುದಕ್ಕೆ ಸಾಧ್ಯವಾಗುತ್ತದೆಯೇ ಎನ್ನುವುದನ್ನು ಪರಿಶೀಲನೆ ಮಾಡಲಾಗುತ್ತದೆ ಎಂದು ಮಾನ್ಯ ಮುಖ್ಯಮಂತ್ರಿಗಳು ತಿಳಿಸಿದರು. | ದಿನಾಂಕ: 07.03.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಿದ್ಯಾ ಇಲಾಖೆಯಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಶಿಕ್ಷಕರುಗಳನ್ನು M/s Crystal Infosystem and Services ರವರಿಂದ ಪಡೆಯಲಾಗಿರುತ್ತದೆ. |

| ವರ್ಷ | ಒಟ್ಟು ಬೋಧಕರು | | | | | ವೇತನ ಪಾವತಿಸಿರುವ ಮೊತ್ತ |
|---|---|---|---|---|---|---|
| | ಶಿಶುವಿಹಾರ | ಪ್ರಾಥಮಿಕ | ಪ್ರೌಢಶಾಲೆ+ ಕಂಪ್ಯೂಟರ್ | ಪಿಯುಸಿ | ಪದವಿ ಪಿ.ಹೆಚ್.ಡಿ | |
| 2014–15 | 77 | 44 | 246+23 | 81 | 28+11 | 4336297 |
| 2015–16 | 81 | 50 | 249+24 | 88 | 30+16 | 4594653 |

### ಮಾಹೆಯಾನ ವೇತನದ ವಿವರ

| ವಿವರ | ಮಾಹೆಯಾನ | 2014–15 | 2015–16 |
|---|---|---|---|
| ಶಿಶುವಿವಾರ ಶಿಕ್ಷಕರಿಗೆ | 5966,00 | 459382.00 | 483246.00 |
| ಪ್ರಾಥಮಿಕ ಶಿಕ್ಷಕರಿಗೆ | 5966.00 | 262504.00 | 298300.00 |
| ಪ್ರೌಢಶಾಲೆ ಶಿಕ್ಷಕರಿಗೆ | 8695.00 | 2138970.00 | 2165055.00 |
| ಪ್ರೌಢಶಾಲೆ ಶಿಕ್ಷಕರಿಗೆ (ಕಂಪ್ಯೂಟರ್) | 7209.00 | 165807.00 | 173016.00 |
| ಪದವಿ ಪೂರ್ವ ಉಪನ್ಯಾಸಕರಿಗೆ | 10456.00 | 846936,00 | 920.128.00 |
| ಪದವಿ ಕಾಲೇಜು ಉಪನ್ಯಾಸಕರಿಗೆ | 11010.00 | 308280.00 | 330300.00 |
| ಪದವಿ ಕಾಲೇಜು ಉಪನ್ಯಾಸಕರಿಗೆ (ಪಿ.ಹೆಚ್.ಡಿ) | 14038.00 | 154418.00 | 224608.00 |
| | ಒಟ್ಟು | 4336297.00 | 4594653.00 |

ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರುಗಳ/ಉಪನ್ಯಾಸಕರುಗಳು ವಿವರಗಳು ಹಾಗೂ ಸದರಿಯವರುಗಳಿಗೆ ಮಾಹೆಯಾನ ಪಾವತಿಸುತ್ತಿರುವ ವೇತನದ ವಿವರಗಳು ಈ ಕೆಳಕಂಡಂತೆ ಇರುತ್ತದೆ:–

| ಕ್ರಮ ಸಂಖ್ಯೆ | ವಿವರಗಳು | ಕಾರ್ಯ ನಿರ್ವಹಿಸುತ್ತಿರುವ ಶಿಕ್ಷಕರು/ ಉಪನ್ಯಾಸಕರ ಸಂಖ್ಯೆ | ಪ್ರತಿಯೊಬ್ಬರಿಗೆ ಮಾಹೆಯಾನ ನೀಡುತ್ತಿರುವ ವೇತನ | ಎಲ್ಲರಿಗೂ ಮಾಹೆಯಾನ ನೀಡುತ್ತಿರುವ ವೇತನ |
|---|---|---|---|---|
| 1. | ಶಿಶುವಿಹಾರ | 89 | 13366.20 | 1189591.8 |
| 2. | ಪ್ರಾಥಮಿಕ ಶಾಲೆ | 85 | 13366.20 | 1136127 |
| 3. | ಪ್ರೌಢಶಾಲೆ | 250 | 16845.65 | 4211412.5 |
| 4. | ಕಂಪ್ಯೂಟರ್ ಶಿಕ್ಷಕರು | 24 | 16053.05 | 385273.2 |
| 5. | ಪದವಿ ಪೂರ್ವ ಕಾಲೇಜು | 126 | 19697.10 | 2481834.6 |
| 6. | ಪದವಿ ಕಾಲೇಜು | 50 | 21897.50 | 1094875 |
| 7. | ಸ್ನಾತಕೋತ್ತರ ಪದವಿ ಕಾಲೇಜು | 8 | 24897 | 199176 |
| ಒಟ್ಟು | | 632 | 1261227 | 106982901 |

ಹೊರಗುತ್ತಿಗೆ ಆಧಾರದ ಮೇಲೆ ಪಾಲಿಕೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರಿಗೆ ಈಗಾಗಲೇ ರೂ. 2000+3000= ರೂ. 5,000ಗಳನ್ನು 2018–19ನೇ ಸಾಲಿನಲ್ಲಿ ಹೆಚ್ಚಿಸಲಾಗಿರುತ್ತದೆ.

ಹೊರಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರುಗಳಿಗೆ ಜನವರಿ 2019ರವರೆಗೆ ವೇತನ ಪಾವತಿ ಮಾಡಲಾಗಿರುತ್ತದೆಯೆಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿದ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು.

| | | | | |
|---|---|---|---|---|
| 59 | 5003<br>ಚು.ಗು.ಪ್ರ: 1539<br>ಶ್ರೀ ರಾಮಚಂದ್ರಗೌಡ<br>ವಿಪನದಿ: 17/07/2014 | ಬಿ.ಬಿ.ಎಂ.ಪಿ. ವ್ಯಾಪ್ತಿಯ ಬೆಂಡಿಗಾನಹಳ್ಳಿ ವಾರ್ಡ್ ಹಳೆ ಬೈಯಪ್ಪನಹಳ್ಳಿಯಲ್ಲಿ ಹಳೆ ಮದ್ರಾಸು ರಸ್ತೆಯಿಂದ ಬಾಣಸವಾಡಿಗೆ ಹೋಗುವ ರೈಲ್ವೆ ಮೇಲ್ಸತುವೆಯ ಕಾಮಗಾರಿ ಸ್ಥಗಿತಗೊಂಡಿದ್ದು ಕೂಡಲೇ ಪೂರ್ಣಗೊಳಿಸುವ ಬಗ್ಗೆ. | ರಕ್ಷಣಾ ಇಲಾಖೆಯಿಂದ ಸದರಿ ಯೋಜನೆಗೆ ಬೇಡಿರುವ ಸ್ವತ್ತನ್ನು ಪಡೆದ ನಂತರ ಆರು ತಿಂಗಳ ಕಾಲಾವಧಿಯಲ್ಲಿ ಪೂರ್ಣ ಗೊಳಿಸಲಾಗುವುದು ಎಂದು ಮಾನ್ಯ ಮುಖ್ಯಮಂತ್ರಿಗಳು ತಿಳಿಸಿದರು. | ದಿನಾಂಕ: 07.03.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು, ಬಿ.ಬಿ.ಎಂ.ಪಿ. ವ್ಯಾಪ್ತಿಯ ಬೆನ್ನಿಗಾನಹಳ್ಳಿ ವಾರ್ಡ್‌ನಲ್ಲಿನ ಬಾಣಸವಾಡಿಗೆ ಹೋಗುವ ರೈಲ್ವೆ ಮೇಲ್ಸೇತುವೆಯ ಕಾಮಗಾರಿಯು ಜುಲೈ–2011ನೇ ಸಾಲಿನಲ್ಲಿ ಪ್ರಾರಂಭವಾಗಿ ಯೋಜನೆಯ ಮೇಲು ಸೇತುವೆಯ ಅರ್ಧ ಭಾಗ ಅಂದರೆ ರೈಲ್ವೆ ಹಳಿಯಿಂದ ಬೈಯಪ್ಪನಹಳ್ಳಿವರೆಗಿನ ಕಾಮಗಾರಿ ಪೂರ್ಣಗೊಂಡಿರುತ್ತದೆ.<br><br>ಇನ್ನುಳಿದ ಅರ್ಧಭಾಗದ ಅಪ್ರೋಚ್ ರಸ್ತೆ ರೈಲ್ವೆ ಹಳಿಯಿಂದ ಹಳೆ ಮದ್ರಾಸ್ ರಸ್ತೆ ಕಡೆಗಿನ ಅಪ್ರೋಚ್ ರಸ್ತೆಯ ಕಾಮಗಾರಿಯನ್ನು ನಿರ್ಮಾಣ ಮಾಡುವ ಸಮಯದಲ್ಲಿ ಸದರಿ ಸ್ವತ್ತು ರಕ್ಷಣಾ ಇಲಾಖೆಯ ಸ್ವತ್ತಾಗಿದ್ದರಿಂದ ಕಾಮಗಾರಿಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದ್ದು, ಸದರಿ ಭಾಗದ ಕಾಮಗಾರಿ ನಿರ್ವಹಿಸಲು 9991.00 ಚ.ಮೀ. ಜಾಗದ ಅವಶ್ಯಕತೆಯಿದ್ದು, ಸದರಿ ಸ್ವತ್ತನ್ನು ರಕ್ಷಣಾ ಇಲಾಖೆಯಿಂದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಪರಸ್ಪರ ವಿನಿಯಮ ಆಧಾರದ ಮೇಲೆ ರಕ್ಷಣಾ ಇಲಾಖೆಯ ಸ್ವತ್ತನ್ನು ಪಡೆಯಲು ಆದೇಶ ಸಂಖ್ಯೆ: ನಅಇ 834 ಎಂಎನ್‌ವೈ 2015, ದಿ: 14.7.2016ರಲ್ಲಿ ಆದೇಶ ಹೊರಡಿಸಲಾಗಿದೆ. ತದನಂತರ, ರಕ್ಷಣಾ ಇಲಾಖೆಯ ಅಧಿಕಾರಿಗಳೊಂದಿಗೆ ಸಭೆಗಳು ಮತ್ತು ದಿ: 4.8.2018ರಂದು ಮಾನ್ಯ ರಕ್ಷಣಾ ಸಚಿವರು, ಭಾರತ ಸರ್ಕಾರ ಮತ್ತು ಸನ್ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರರವರ ಜಂಟಿ ಅಧ್ಯಕ್ಷತೆಯಲ್ಲಿ ಜರುಗಿದ ಸಭೆಯಲ್ಲಿ ಯೋಜನೆಗೆ ಬೇಕಿರುವ ರಕ್ಷಣಾ ಇಲಾಖೆಯ ಸ್ವತ್ತನ್ನು ಲೀಸ್ ಆಧಾರದ ಮೇಲೆ ಪಡೆಯಲು ತೀರ್ಮಾನಿಸಲಾಗಿದ್ದು, ಕಾಮಗಾರಿ ಕೈಗೊಳ್ಳಲು ಅನುಮತಿ ನೀಡಲಾಗಿರುತ್ತದೆ. ಅದರಂತೆ, ನೈರುತ್ಯ ರೈಲ್ವೆ ಇಲಾಖೆಯು ಟೆಂಡರ್ ಆಹ್ವಾನಿಸಿದ್ದು, ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆಯೆಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿದ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |

| | | | | |
|---|---|---|---|---|
| 60 | 4984<br>ಗಮನ ಸೆಳೆಯುವ ಸೂಚನೆ<br>ಶ್ರೀ. ಅಶ್ವತ್ ನಾರಾಯಣ<br>ವಿಪನದಿ:16.03.2015 | ರಾಜರಾಜೇಶ್ವರಿನಗರ, ವಿಧಾನ ಸಭಾ ಕ್ಷೇತ್ರದ ಬಿ.ಬಿ.ಎಂ.ಪಿ ಕಡತಗಳು ಖಾಸಗಿ ಮನೆಯಲ್ಲಿ ಲೋಕಾಯುಕ್ತ ದಾಳಿಯ ಸಮಯದಲ್ಲಿ ಪತ್ತೆಯಾಗಿರುವುದು ಹಾಗೂ "ಟೆಂಡರ್ ಶ್ಯೂರ್" ಹೆಸರಿನಲ್ಲಿ ಅವೈಜ್ಞಾನಿಕವಾಗಿ ಕೋಟ್ಯಾಂತರ ರೂಪಾಯಿಗಳನ್ನು ವ್ಯಯ ಮಾಡುತ್ತಿರುವ ಬಗ್ಗೆ. | ಖಾಸಗಿ ಮನೆಯಲ್ಲಿ ಸಿಕ್ಕ ಸುಮಾರು 700 ಕಡತಗಳನ್ನು ಲೋಕಾಯುಕ್ತ ದವರು ಜಪ್ತಿ ಮಾಡಿದ್ದಾರೆ ಈಗಾಗಲೇ ಅಧಿಕಾರಿಗಳು ವಿರುದ್ಧ ಅಲ್ಲಿ ಇರಲಾರದವರು ಸಹ ಅಂದರೆ ಯಾರು ಇದಕ್ಕೆ abetment ಮಾಡಿದ್ದಾರೆ ಅವರಿಗೂ ಸಹ ಉದಾಹರಣೆಗಾಗಿ ಐ.ಕೆ.ವಿಶ್ವಾಸ್ ಆ ಸಂದರ್ಭದಲ್ಲಿ ಅಲ್ಲಿರಲಿಲ್ಲ ಕೇವಲ ಇಬ್ಬರು ಅಧಿಕಾರಿಗಳು ಮಾತ್ರ ಇದ್ದರು ಆದರೂ ಸಹ ಮೂರನೇ ವ್ಯಕ್ತಿಯ ಮೇಲೆಯು ಸಹ ಕ್ರಿಮಿನಲ್ ಮೊಕದ್ದಮೆಯನ್ನು ರಿಜಿಸ್ಟರ್ ಮಾಡಿದ್ದಾರೆ The investigation is in progress. ಯಾರು ತಪ್ಪಿತಸ್ಥರಿದ್ದಾರೋ ಅವರಿಗೆ ಶಿಕ್ಷೆ ನೀಡಲು ಸರ್ಕಾರ ತಯಾರಿಗೆ ಸಂಬಂಧ ಲೋಕಾಯುಕ್ತ ಕಛೇರಿಯವರು ಮೊಕದ್ದಮೆ ಸಂಖ್ಯೆ: 60/2014 ಕಲಂ 13(1) (ಸಿ) ಜೊತೆಗೆ 13(2) ಲಂಚ ನಿರೋಧ ಕಾಯ್ದೆ 1988ರಂತೆ ಶ್ರೀ | ದಿನಾಂಕ: 07.03.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು, ದಿನಾಂಕ: 27.12.2014ರಂದು ಮಾನ್ಯ ಲೋಕಾಯುಕ್ತರವರು ದಾಳಿ ನಡೆಸಿ ಖಾಸಗಿ ಮನೆಯಲ್ಲಿ ಸಿಕ್ಕ ಸುಮಾರು ಕಡತಗಳನ್ನು ಲೋಕಾಯುಕ್ತದವರು ಜಪ್ತಿ ಮಾಡಿರುತ್ತಾರೆ. ಈ ಸಂಬಂಧ ಲೋಕಾಯುಕ್ತ ಕಚೇರಿಯವರು ಮೊಕದ್ದಮೆ ಸಂಖ್ಯೆ: 60/2014 ಕಲಂ 13(1)(ಸಿ) ಜೊತೆಗೆ, 13(2) ಲಂಚ ನಿರೋಧ ಕಾಯ್ದೆ 1988ರಂತೆ ಶ್ರೀ ಇದೆಯಾ ವೆಂಡನ್, ಕಾರ್ಯಪಾಲಕ ಅಭಿಯಂತರರು, ಶ್ರೀ ಐ.ಕೆ.ವಿಶ್ವಾಸ್, ಸಹಾಯಕ ಅಭಿಯಂತರರು, ಶ್ರೀ ನಾಗರಾಜ್, ಶ್ರೀ ಪ್ರಸಾದ್ ಹಾಗೂ ಶ್ರೀಮತಿ ಶೈಲಜಾ ಎಸ್.ಎಂ. ಮತ್ತು ಇತರೆ ಬಿ.ಬಿ.ಎಂ.ಪಿ. ಅಧಿಕಾರಿಗಳ ವಿರುದ್ಧ ಪ್ರಕರಣ ದಾಖಲು ಮಾಡಿದ್ದು, ತನಿಖೆ ನಡೆಯುತ್ತಿದೆ. ಸದರಿ ಪ್ರಕರಣದ ಆರೋಪಿತರ ವಿರುದ್ಧ ಲೋಕಾಯುಕ್ತ ಸಂಸ್ಥೆಯು ದೋಷಾರೋಪಣಾ ಪಟ್ಟಿಗಳನ್ನು ಸಿದ್ದಪಡಿಸಿ, ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಲಾಗಿರುತ್ತದೆ. ಸದರಿ ಪ್ರಕರಣದಲ್ಲಿ ಮಾನ್ಯ ನ್ಯಾಯಾಲಯವು ತೆಗೆದುಕೊಳ್ಳುವ ಅಂತಿಮ ಆದೇಶದಂತೆ ನಿಯಮಾನುಸಾರ ಕ್ರಮವಹಿಸಲಾಗುವುದು ಹಾಗೂ ರಾಜರಾಜೇಶ್ವರಿ ವಲಯದ ವ್ಯಾಪ್ತಿಯಲ್ಲಿ "ಟೆಂಡರ್ ಶ್ಯೂರ್" ಅಡಿಯಲ್ಲಿ ಯಾವುದೇ ಕಾಮಗಾರಿಗಳನ್ನು ಕೈಗೊಳ್ಳಲಾಗಿರುವುದಿಲ್ಲವೆಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿದ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |

| | | | | |
|---|---|---|---|---|
| | | | ವೆಂಡನ್, ಕಾರ್ಯಪಾಲಕ ಅಭಿಯಂತರರು ಶ್ರೀ ಐ.ಕೆ. ವಿಶ್ವಾಸ್, ಸಹಾಯಕ ಅಭಿಯಂತರರು ಶ್ರೀ ನಾಗರಾಜ್, ಶ್ರೀ ಪ್ರಸಾದ್ ಹಾಗೂ ಶ್ರೀಮತಿ ಶೈಲಜಾ ಎಸ್.ಎಂ. ಮತ್ತು ಇತರೆ ಬಿ.ಬಿ.ಎಂ.ಪಿ. ಅಧಿಕಾರಿಗಳ ವಿರುದ್ಧ ಪ್ರಕರಣ ದಾಖಲು ಮಾಡಿದ್ದು, ತನಿಖೆ ನಡೆಯುತ್ತಿದೆ. ತನಿಖಾ ವರದಿ ಬಂದ ನಂತರ ನಿಯಮಾನುಸಾರ ಪರಿಶೀಲಿಸಿ, ಕ್ರಮ ಜರುಗಿಸಲಾಗುವುದು ಎಂದು ಮಾನ್ಯ ಮುಖ್ಯಮಂತ್ರಿ ಯವರು ತಿಳಿಸಿದರು. | |
| 61 | 5333<br>ಚು.ಗು.ಪ್ರ. 1916<br>ಶ್ರೀ ಬಿ.ಜೆ. ಪುಟ್ಟಸ್ವಾಮಿ<br>ವಿಪನದಿ:24.07.2014 | ಬೆಂಗಳೂರು ಮಹಾನಗರ ಪಾಲಿಕೆಯ ರಾಜಕಾಲುವೆ ಮತ್ತು ಇತರೆ ದೊಡ್ಡ ಮೋರಿಗಳಲ್ಲಿ ಹೂಳು ಎತ್ತುವುದು ಮತ್ತು ಮುಚ್ಚುವ ಕೆಲಸ ನಿರ್ವಹಿಸುವ ಬಗ್ಗೆ. | ಈಗಾಗಲೇ ಬಿ.ಬಿ.ಎಂ.ಪಿ. ಆಯುಕ್ತರಿಗೆ ನಿರ್ದೇಶನವನ್ನು ಕೊಟ್ಟಿದ್ದೇನೆ. ಹೊಸ ತಂತ್ರಜ್ಞಾನವನ್ನು ಬಳಸಿ ಇಂತಹ ಮೋರಿಗಳನ್ನು ಮುಚ್ಚುವ ಕಾರ್ಯವನ್ನು ಮಾಡಬೇಕಾಗುತ್ತದೆ. ಮಾನವ ಶಕ್ತಿಯನ್ನು ಬಳಸಿ ಈ ಕೆಲಸವನ್ನು ಮಾಡುವುದರಿಂದ ಪ್ರಾಣಾಪಾಯವಾಗುವ | ದಿನಾಂಕ: 07.03.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು, ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಬೃಹತ್ ಮಳೆನೀರು ಗಾಲುವೆಗಳಲ್ಲಿ 2016–17ನೇ ಸಾಲಿನ ಸರ್ಕಾರದ ನಗರೋತ್ಥಾನದ ಅಡಿಯಲ್ಲಿ ಹೂಳು ಎತ್ತುವ ಕಾಮಗಾರಿಗಳಿಗೆ ರೂ. 26.40 ಕೋಟಿಗಳ ಅನುದಾನವನ್ನು ಒದಗಿಸಲಾಗಿದ್ದು, ಕಾಮಗಾರಿಗಳು ಪೂರ್ಣಗೊಂಡಿರುತ್ತದೆ ಮತ್ತು 2017–18ನೇ ಸಾಲಿನ ಸರ್ಕಾರದ ನಗರೋತ್ಥಾನದಡಿಯಲ್ಲಿ ಹೂಳು ಎತ್ತುವ ಕಾಮಗಾರಿಗಳಿಗೆ ರೂ. 42.00 ಕೋಟಿಗಳ ಅನುದಾನ ಒದಗಿಸಲಾಗಿದ್ದು, ಕಾಮಗಾರಿಗಳು ಪ್ರಗತಿಯಲ್ಲಿದ್ದು ಅವುಗಳು ಪೂರ್ಣಗೊಳ್ಳುವ ಹಂತದಲ್ಲಿರುತ್ತದೆ. ರಾಜಕಾಲುವೆಯ ಕಷ್ಟಕರವಾದ ಸ್ಥಳಗಳಲ್ಲಿ ಹೂಳು ತೆಗೆಯುವ ಕಾರ್ಯವು Hiring of Robotic Excavators ನಿರ್ವಹಿಸಲಾಗಿರುತ್ತದೆ. |

| | | | | |
|---|---|---|---|---|
| | | | ಸಾಧ್ಯತೆಗಳು ಇವೆ. ಇವೆಲ್ಲವನ್ನು ಪರಿಶೀಲನೆ ಮಾಡಿ ಯಾವ ಕ್ರಮವನ್ನು ತೆಗೆದುಕೊಳ್ಳಬಹುದು ಅದನ್ನು ತೆಗೆದುಕೊಳ್ಳೋಣ ಎಂದು ಮಾನ್ಯ ಮುಖ್ಯಮಂತ್ರಿಯವರು ತಿಳಿಸಿದರು. | ಮುಂದುವರೆದು, 2018–19ರಿಂದ 2020–21ನೇ ಸಾಲಿನವರೆಗೆ ಕಾಲುವೆಗಳ ವಾರ್ಷಿಕ ನಿರ್ವಹಣೆಯ ಕಾಮಗಾರಿಗೆ ಟೆಂಡರ್ ಆಹ್ವಾನಿಸಲಾಗಿದ್ದು, ಪಾಲಿಕೆಯ ಆಯುಕ್ತರು ಟೆಂಡರ್ ಅನುಮೋದನೆಗೆ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿದ್ದು, ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿರುತ್ತದೆ.<br>ಬೃಹತ್ ಮಳೆ ನೀರುಗಾಲುವೆಗಳ ಮುಚ್ಚುವ ಕೆಲಸ ನಿರ್ವಹಿಸುವ ಬಗ್ಗೆ ಮಾನ್ಯ ರಾಷ್ಟ್ರೀಯ ಹಸಿರು ನ್ಯಾಯಮಂಡಳಿಯು (NGT)ಪ್ರಾಥಮಿಕ ಮತ್ತು ಸೆಕೆಂಡರಿ ಕಾಲುವೆಗಳ ಮೇಲೆ ಮುಚ್ಚಲು ಅನುಮತಿ ಇರುವುದಿಲ್ಲ ಎಂದು ಆದೇಶಿಸಲಾಗಿರುತ್ತದೆಯೆಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿದ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |
| 62 | 5340<br>ಚು.ಗು.ಪ್ರ. 155<br>ಶ್ರೀ ಎಂ. ಶ್ರೀನಿವಾಸ್<br>ವಿಪನದಿ: 11.12.2014 | ಬೆಂಗಳೂರು ನಗರದಲ್ಲಿ ತೆರೆದ ಚರಂಡಿಗಳು, ಮತ್ತು ಮ್ಯಾನ್‌ಹೋಲ್ ಗಳಿಂದಾಗುವ ಅನಾಹುತಗಳನ್ನು ತಡೆಗಟ್ಟಲು ಸರ್ಕಾರವು ಕೈಗೊಂಡಿರುವ ಯೋಜನೆಗಳ ಬಗ್ಗೆ. | ಬೃಹತ್ ಮಳೆನೀರು ಕಾಲುವೆ ಯೋಜನೆಯಡಿ ಮಳೆನೀರು ಕಾಲುವೆಗಳ ಸಮಗ್ರ ಅಭಿವೃದ್ಧಿಗೆ ಪ್ರಸ್ತಾವನೆಯನ್ನು ಈಗಾಗಲೇ ತಯಾರಿಸಿದ್ದು, ಅನುದಾನದ ಲಭ್ಯತೆಗೆ ಅನುಗುಣವಾಗಿ ಕಾಮಗಾರಿ ಗಳನ್ನು ಹಂತ ಹಂತವಾಗಿ ಕೈಗೊಂಡು ಪೂರ್ಣಗೊಳಿಸ ಲಾಗುವುದು ಎಂದು ಮಾನ್ಯ ಮುಖ್ಯಮಂತ್ರಿಯವರು ತಿಳಿಸಿದರು. | ದಿನಾಂಕ: 07.03.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು, ಬೃಹತ್ ಮಳೆನೀರು ಕಾಲುವೆ ಯೋಜನೆಯಡಿ ಕಾಲುವೆಯ ಸಮಗ್ರ ಅಭಿವೃದ್ಧಿಗೆ ಪ್ರಸ್ತಾವನೆಯನ್ನು ತಯಾರಿಸಲಾಗಿದೆ. ಒಟು 842.00 ಕಿ.ಮೀ. ಉದ್ದದ ಬೃಹತ್ ನೀರುಗಾಲುವೆ ಪೈಕಿ 440.00 ಕಿ.ಮೀ. ಉದ್ದ ತಡೆಗೋಡೆ ನಿರ್ಮಾಣ ಪೂರ್ಣಗೊಂಡಿರುತ್ತದೆ. ಸದರಿ ಕಾಲುವೆಗಳಲ್ಲಿ ಅನಾಹುತಗಳನ್ನು ತಡೆಗಟ್ಟುವ ಸಲುವಾಗಿ ತಡೆಗೋಡೆಯ ಮೇಲೆ ತಂತಿ ಬೇಲಿ ಅಳವಡಿಸಲಾಗಿರುತ್ತದೆ ಹಾಗೂ ತಗ್ಗು ಪ್ರದೇಶಗಳಲ್ಲಿರುವ ತಡೆಗೋಡೆಗಳನ್ನು ಎತ್ತರಿಸಲಾಗಿರುತ್ತದೆ. ಮುಂದುವರೆದು, 2018–19ನೇ ಸಾಲಿನಿಂದ 2010–21ನೇ ಸಾಲಿನವರೆಗಿನ (3 ವರ್ಷಗಳು) ಅವಧಿಯಲ್ಲಿ ಸುಮಾರು 150 ಕಿ.ಮೀ. ಉದ್ದದ ತಡೆಗೋಡೆ ನಿರ್ಮಾಣ ಕಾರ್ಯ ಕೈಗೆತ್ತಿಕೊಳ್ಳಲಾಗುವುದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿದ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |

# ವಾರ್ತಾ ಮತ್ತು ಪ್ರಚಾರ ಇಲಾಖೆ

| ಕ್ರಮ ಸಂಖ್ಯೆ | ಆಶ್ವಾಸನೆ ಸಂಖ್ಯೆ ಆಧಾರ ಮತ್ತು ದಿನಾಂಕ | ವಿಷಯ | ಆಶ್ವಾಸನೆ | ತೆಗೆದುಕೊಂಡ ಕ್ರಮ |
|---|---|---|---|---|
| 1 | 5147<br>ಚು.ರ.ಪ್ರ: 2056<br>ಶ್ರೀ ಆಚಾರ್ ಹಾಲಪ್ಪ ಬಸಪ್ಪ<br>ವಿಪನದಿ: 25/07/2014 | ಕಲಬುರಗಿಯಲ್ಲಿ ಕಳೆದ 6 ವರ್ಷಗಳಿಂದ ವಾರ್ತಾ ಇಲಾಖೆಯಲ್ಲಿ ಉಪನಿರ್ದೇಶಕರ ಹುದ್ದೆ ಖಾಲಿಯಿರುವ ಬಗ್ಗೆ ಹಾಗೂ ಜಾಹೀರಾತು ನೀತಿಯನ್ನು ಅನುಷ್ಠಾನಗೊಳಿಸುವ ಬಗ್ಗೆ | ಉಪ ನಿರ್ದೇಶಕರ ಹುದ್ದೆಯನ್ನು ಹಿರಿಯ ಸಹಾಯಕ ನಿರ್ದೇಶಕರ ಹುದ್ದೆಯಿಂದ ಮುಂಬಡ್ತಿ ಮೂಲಕ ಭರ್ತಿ ಮಾಡಬೇಕಾಗಿದ್ದು, ಅರ್ಹ ಅಧಿಕಾರಿಗಳು ಲಭ್ಯವಾದಾಗ ಭರ್ತಿ ಮಾಡಲಾಗುವುದು ಮತ್ತು ಜಾಹೀರಾತು ನೀತಿಯನ್ನು ಭಾಗಶ: ಅನುಷ್ಠಾನಗೊಳಿಸಲಾಗಿದ್ದು, ಪೂರ್ಣ ಪ್ರಮಾಣದ ಅನುಷ್ಠನಕ್ಕಾಗಿ ಮಾರ್ಗಸೂಚಿ ರೂಪಿಸುವ ಪ್ರಕ್ರಿಯೆ ಚಾಲನೆಯಲ್ಲಿರುತ್ತದೆ ಎಂದು ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ವಿಕಲಚೇತನರ, ಹಿರಿಯ ನಾಗರಿಕರ ಸಬಲೀಕರಣ ಹಾಗೂ ಕನ್ನಡ ಸಂಸ್ಕೃತಿ ಸಚಿವರು ತಿಳಿಸಿದರು. | ದಿನಾಂಕ: 23.01.2018ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ: ಉಪ ನಿರ್ದೇಶಕರು, ಕಲಬುರಗಿ ವಿಭಾಗ ಹುದ್ದೆಯು ಖಾಲಿ ಇದ್ದು, ಸದರಿ ಹುದ್ದೆಯನ್ನು ತುಂಬುವವರೆಗೆ ಪ್ರಭಾರ ವ್ಯವಸ್ಥೆ ಮಾಡಿ ಕಾರ್ಯ ನಿರ್ವಹಿಸಲಾಗುತ್ತಿದೆ.<br>ಪ್ರಸ್ತುತ ಜಾರಿಯಲ್ಲಿರುವ ವೃಂದ ಮತ್ತು ನೇಮಕಾತಿ ನಿಯಮಾವಳಿ ರೀತ್ಯಾ ಕನಿಷ್ಠ ಸೇವಾವಧಿಯನ್ನು ಪೂರೈಸಿದ ತಕ್ಷಣ ಮುಂಬಡ್ತಿ ನೀಡುವ ಮೂಲಕ ಸದರಿ ಹುದ್ದೆಯನ್ನು ತುಂಬಲು ಕ್ರಮವಹಿಸಲಾಗುವುದು.<br>ಸಣ್ಣ ಹಾಗೂ ಮಧ್ಯಮ ಪತ್ರಿಕೆಗಳ ಅಭಿಪ್ರಾಯ ಮತ್ತು ಸಲಹೆಯನ್ನು ಹಾಗೂ ಮಾಧ್ಯಮ ಸಲಹೆಗಾರರ ಅಭಿಪ್ರಾಯಗಳನ್ನು ಪಡೆದು ಸರ್ಕಾರವು "ಜಾಹೀರಾತು ನೀತಿ–2013" ನ್ನು ರೂಪಿಸಿ ಜಾರಿಗೊಳಿಸಿದೆ. ಇದರ ಮುಂದುವರೆದ ಭಾಗವಾಗಿ ಜಾಹೀರಾತು ನೀತಿ–2013 ಅನುಷ್ಠಾನ ನಿಯಮ 2014ನ್ನು ರೂಪಿಸಿ ದಿನಾಂಕ: 10.09.2014ರಂದು ಅಧಿಕೃತವಾಗಿ ಪ್ರಕಟಿಸಲಾಗಿದೆ.<br>ಸದರಿ ಆದೇಶಕ್ಕೆ ಸಂಬಂಧಿಸಿದಂತೆ ಈ ಕೆಳಕಂಡ ತಿದ್ದುಪಡಿಗಳನ್ನು ತರಲಾಗಿದೆ.<br>01.ತಿದ್ದುಪಡಿ ಆದೇಶ ಸಂಖ್ಯೆ: ಕಸಂವಾಪ್ರ 69 ವಾಪ್ರಜಾ 2013, ದಿ:08.05.2015<br>02.ಸೇರ್ಪಡೆ ಆದೇಶ ಸಂಖ್ಯೆ: ಕಸಂವಾಪ್ರ 64 ವಾಪ್ರಜಾ 2014, ದಿ:15.09.2015 |

| | | | | |
|---|---|---|---|---|
| | | | | 03.ತಿದ್ದುಪಡಿ ಆದೇಶ ಸಂಖ್ಯೆ: ಕಸಂವಾಪ್ರ 31 ವಾಪ್ರಜಾ 2015, ದಿ:25.11.2015<br>04.ತಿದ್ದುಪಡಿ ಆದೇಶ ಸಂಖ್ಯೆ: ಕಸಂವಾಪ್ರ 45 ವಾಪ್ರಜಾ 2017, ದಿ:10809.2017 ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ಸಮಿತಿಯು ತೀರ್ಮಾನಿಸಿತು. |
| 2 | 4887<br>ಚು.ಗು.ಪ್ರ:1615/2014<br>ಶ್ರೀ ಬಿ. ರಾಮಕೃಷ್ಣ<br>ವಿಪನದಿ: 18.07.2014 | ಸರ್ಕಾರವು ಪತ್ರಿಕೆಗಳಿಗೆ ನಿಗದಿಪಡಿಸಿರುವ ಪ್ರಕಟಣೆ ಅವಧಿಯ ವಿಸ್ತರಣೆಯ ಹೊಸ ನೀತಿಯಿಂದ ಸಣ್ಣ ಪತ್ರಿಕೆಗಳಿಗೆ ಮಾರಕ ವಾಗುತ್ತಿರುವುದರಿಂದ ಇದನ್ನು ಬದಲಾಯಿಸುವ ಬಗ್ಗೆ. | ವಿವಿಧ ವರ್ಗಗಳ ಪತ್ರಿಕೆಗಳಿಗೆ ಮಾರ್ಗಸೂಚಿ ನಿಯಮಾವಳಿಗಳಲ್ಲಿ ರಿಯಾಯಿತಿ ನೀಡುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ ಎಂದು ಮಾನ್ಯ ಮೂಲಸೌಲಭ್ಯ, ಅಭಿವೃದ್ಧಿ, ವಾರ್ತಾ ಮತ್ತು ಹಜ್ ಸಚಿವರು ತಿಳಿಸಿರುತ್ತಾರೆ | ದಿನಾಂಕ: 23.01.2018ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ಪತ್ರಿಕೆಗಳನ್ನು ಇಲಾಖೆಯ ಮಾಧ್ಯಮ ಪೆಟ್ಟಿಗೆ ಸೇರಿಸುವ ದಿಸೆಯಲ್ಲಿ ನಿಗದಿಪಡಿಸಲಾಗಿದ್ದ ಪ್ರಕಟಣಾ ಅವಧಿಯಲ್ಲಿ ಕೆಳಕಂಡ ವರ್ಗಗಳ ಪತ್ರಿಕೆಗಳಿಗೆ ಸರ್ಕಾರವು ಜಾಹಿರಾತು ನೀತಿ 2013 ಅನುಷ್ಠಾನ ನಿಯಮಗಳು 2014 ರ ನಿಯಮ 11ರ ವಿಶೇಷ ರಿಯಾಯಿತಿ ಶೀರ್ಷಿಕೆಯಡಿ ಎರಡು ವರ್ಷಗಳ ಬದಲಾಗಿ ಒಂದು ವರ್ಷ ನಿಗದಿಪಡಿಸಿದೆ.<br>1. ಹೈದ್ರಾಬಾದ್ ಕರ್ನಾಟಕ ಪ್ರದೇಶದ ಜಿಲ್ಲೆಗಳಾದ ಕಲಬುರಗಿ, ಬೀದರ್, ಯಾದಗಿರಿ, ರಾಯಚೂರು, ಕೊಪ್ಪಳ ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿ ಪ್ರಕಟವಾಗುತ್ತಿರುವ ಪತ್ರಿಕೆಗಳು.<br>2. ಗಡಿ ಅಭಿವೃದ್ಧಿ ಪ್ರಾಧಿಕಾರ ಗುರುತಿಸಿರುವ 52 ತಾಲ್ಲೂಕುಗಳಲ್ಲಿ ಪ್ರಕಟವಾಗುತ್ತಿರುವ ಪತ್ರಿಕೆಗಳು.<br>3. ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡಗಳ ಮಾಲೀಕತ್ವ ಮತ್ತು ಸಂಪಾದಕತ್ವದಲ್ಲಿ ಪ್ರಕಟವಾಗುತ್ತಿರುವ ಜಿಲ್ಲಾ ಪತ್ರಿಕೆಗಳು.<br>4. ರಾಜ್ಯದಲ್ಲಿನ ಅಲ್ಪಸಂಖ್ಯಾತರ (ಮುಸ್ಲಿಂ, ಕ್ರೈಸ್ತರು, ಬೌದ್ಧರು ಮತ್ತು ಜೈನರು) ಮಾಲೀಕತ್ವ ಮತ್ತು ಸಂಪಾದಕತ್ವದಲ್ಲಿ ಪ್ರಕಟವಾಗುತ್ತಿರುವ ಜಿಲ್ಲಾ ಪತ್ರಿಕೆಗಳು. |

| | | | | |
|---|---|---|---|---|
| | | | | 5. ಕರ್ನಾಟಕದ ಪ್ರಾದೇಶಿಕ ಭಾಷೆಗಳಾದ ಕೊಡುವ, ಕೊಂಕಣಿ, ತುಳು, ಬಂಜಾರ, ಬ್ಯಾರಿ ಹಾಗೂ ಉರ್ದು ಭಾಷೆಗಳಲ್ಲಿ ಪ್ರಕಟವಾಗುತ್ತಿರುವ ಜಿಲ್ಲಾ ಪತ್ರಿಕೆಗಳು (ಆದೇಶದ ಪ್ರತಿ ಲಗತ್ತಿಸಿದೆ.)<br><br>6. ಇಲಾಖೆಯ ಮಾಧ್ಯಮ ಪಟ್ಟಿಯಲ್ಲಿರುವ ಪ್ರಾದೇಶಿಕ ಪತ್ರಿಕೆಗಳು ಹಾಗೂ ಎಲ್ಲಾ ಜಿಲ್ಲಾ ಮಟ್ಟದ ಪತ್ರಿಕೆಗಳ ಹೆಸರು, ವಿಳಾಸ, ಪ್ರಕಟವಾಗುತ್ತಿರುವ ಜಿಲ್ಲಾ ಕೇಂದ್ರ / ತಾಲ್ಲೂಕು ಕೇಂದ್ರದ ಹೆಸರನ್ನು ಒಳಗೊಂಡ ಪಟ್ಟಿಯನ್ನು ಲಗತ್ತಿಸಲಾಗಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ಸಮಿತಿಯು ತೀರ್ಮಾನಿಸಿತು. |

**ಇಲಾಖೆಯ ಮಾಧ್ಯಮ ಪಟ್ಟಿಯಲ್ಲಿರುವ ಪತ್ರಿಕೆಗಳು ಪ್ರಕಟವಾಗುತ್ತಿರುವ ಜಿಲ್ಲಾ ಕೇಂದ್ರ /ತಾಲ್ಲೂಕು ಕೇಂದ್ರದ ಪಟ್ಟಿ**

| ಕ್ರಮ ಸಂಖ್ಯೆ | ಜಿಲ್ಲೆಗಳು | ಜಿಲ್ಲಾ ಕೇಂದ್ರದಲ್ಲಿ ಪ್ರಕಟವಾಗುತ್ತಿರುವ ಪತ್ರಿಕೆಗಳು | ತಾಲ್ಲೂಕು ಕೇಂದ್ರದಲ್ಲಿ ಪ್ರಕಟವಾಗುತ್ತಿರುವ ಪತ್ರಿಕೆಗಳು | ಒಟ್ಟು ಪತ್ರಿಕೆಗಳು |
|---|---|---|---|---|
| **I** | **II** | **III** | **IV** | **V** |
| 1. | ಬೆಂಗಳೂರು ನಗರ | 30 | – | 30 |
| 2. | ಬಾಗಲಕೋಟೆ | 32 | – | 32 |
| 3. | ಕಲಬುರಗಿ | 37 | – | 37 |
| 4. | ಬೆಳಗಾವಿ | 28 | – | 28 |
| 5. | ಶಿವಮೊಗ್ಗ | 32 | – | 32 |
| 6. | ಮೈಸೂರು | 14 | – | 14 |
| 7. | ವಿಜಯಪುರ | 23 | – | 23 |
| 8. | ಯಾದಗಿರಿ | 4 | – | 4 |
| 9. | ಹಾಸನ | 13 | – | 13 |

| ಕ್ರಮ ಸಂಖ್ಯೆ | ಜಿಲ್ಲೆಗಳು | ಜಿಲ್ಲಾ ಕೇಂದ್ರದಲ್ಲಿ ಪ್ರಕಟವಾಗುತ್ತಿರುವ ಪತ್ರಿಕೆಗಳು | ತಾಲ್ಲೂಕು ಕೇಂದ್ರದಲ್ಲಿ ಪ್ರಕಟವಾಗುತ್ತಿರುವ ಪತ್ರಿಕೆಗಳು | ಒಟ್ಟು ಪತ್ರಿಕೆಗಳು |
|---|---|---|---|---|
| **I** | **II** | **III** | **IV** | **V** |
| 10. | ಗದಗ | 3 | – | 3 |
| 11. | ಧಾರವಾಡ | – | 2 | 2 |
| 12. | ದಾವಣಗೆರೆ | 22 | 6 | 28 |
| 13. | ಚಿಕ್ಕಬಳ್ಳಾಪುರ | 8 | – | 8 |
| 14. | ಚಿತ್ರದುರ್ಗ | 9 | 2 | 11 |
| 15. | ಚಾಮರಾಜನಗರ | 3 | – | 3 |
| 16. | ಚಿಕ್ಕಮಗಳೂರು | 8 | – | 8 |
| 17. | ದಕ್ಷಿಣ ಕನ್ನಡ (ಮಂಗಳೂರು) | 6 | – | 6 |
| 18. | ಉತ್ತರ ಕನ್ನಡ (ಕಾರವಾರ) | 2 | 2 | 4 |
| 19. | ಕೋಲಾರ | 20 | 5 | 25 |
| 20. | ಕೊಪ್ಪಳ | 3 | 3 | 6 |
| 21. | ಮಂಡ್ಯ | 29 | – | 29 |
| 22. | ರಾಯಚೂರು | 14 | – | 14 |
| 23. | ರಾಮನಗರ | 5 | 5 | 10 |
| 24. | ತುಮಕೂರು | 9 | – | 9 |
| 25. | ಹಾವೇರಿ | 3 | – | 3 |
| 26. | ಬೆಂಗಳೂರು ಗ್ರಾಮಾಂತರ | 1 | – | 1 |
| 27 | ಬೀದರ್ | 22 | 1 | 23 |
| 28 | ಬಳ್ಳಾರಿ | 2 | 2 | 4 |
| 29 | ಕೊಡಗು | 2 | – | 2 |
| | **ಒಟ್ಟು:** | **384** | **28** | **412** |

# ಕನ್ನಡ, ಸಂಸ್ಕೃತಿ ಇಲಾಖೆ

| ಕ್ರಮ ಸಂಖ್ಯೆ | ಆಶ್ವಾಸನೆ ಸಂಖ್ಯೆ ಆಧಾರ ಮತ್ತು ದಿನಾಂಕ | ವಿಷಯ | ಆಶ್ವಾಸನೆ | ತೆಗೆದುಕೊಂಡ ಕ್ರಮ |
|---|---|---|---|---|
| 01. | 2541<br>ಚು.ಪ್ರ: 1886<br>ಶ್ರೀ ಮುಖ್ಯಮಂತ್ರಿ ಚಂದ್ರು<br>ವಿಪನದಿ:<br>29.03.2007 | ರಾಜ್ಯದಲ್ಲಿ ನಿರ್ಮಿಸಲು ಉದ್ದೇಶಿಸಿರುವ ಕನ್ನಡ ಭವನದ ಬಗ್ಗೆ | ಮಾನ್ಯ ಸದಸ್ಯರು 52 ಗಡಿ ತಾಲ್ಲೂಕು ಕೇಂದ್ರಗಳಲ್ಲಿ ಕನ್ನಡ ಭವನಗಳು ಆಗಬೇಕೆಂದು ಏನು ಕಳಕಳಿ ವ್ಯಕ್ತಪಡಿಸಿದ್ದಾರೆ, ಅವರ ಭಾವನೆಗಳಿಗೆ ಸರ್ಕಾರ ಸ್ಪಂದಿಸಿ ಈ ಕಾರ್ಯಕ್ರಮಗಳನ್ನು ಇದೇ ವರ್ಷ ಪ್ರಾರಂಭ ಮಾಡುತ್ತೇವೆಂದು ಮಾನ್ಯ ಮುಖ್ಯಮಂತ್ರಿಗಳು ತಿಳಿಸಿದರು. | ದಿನಾಂಕ:09.03.2018ರಂದು ಸಮಿತಿ ಸಭೆಯಲ್ಲಿ ಚರ್ಚಿಸಿದಾಗ: ಕನ್ನಡ ಮತ್ತು ಸಂಸ್ಕೃತಿ ಇಲಾಖಾ ವ್ಯಾಪ್ತಿಯಲ್ಲಿ ಗಡಿ ಜಿಲ್ಲೆಗಳ ತಾಲ್ಲೂಕುಗಳಿಗೆ ಮಂಜೂರಾಗಿರುವ ಸಾಂಸ್ಕೃತಿಕ ಭವನ / ಸಾಂಸ್ಕೃತಿಕ ಮಂದಿರ / ಬಯಲು ರಂಗಮಂದಿರಗಳ ವಿವರಗಳನ್ನು ಅನುಬಂಧ – 1 ರಲ್ಲಿ ಲಗತ್ತಿಸಿದೆ.<br><br>ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರವು 2010ರಿಂದ ಕಾರ್ಯಾರಂಭ ಮಾಡಿದ್ದು, ಇಲ್ಲಿಯವರೆಗೆ ಕನ್ನಡ ಭವನ ಎಂಬ ಹೆಸರಿನಲ್ಲಿ ನಿರ್ಮಿಸಲು ಅನುದಾನ ಬಿಡುಗಡೆ ಮಾಡಿರುವುದಿಲ್ಲ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ಸಮಿತಿಯು ತೀರ್ಮಾನಿಸಿತು. |
| 02. | 5144<br>ಚು.ರ.ಪ್ರ: 1976<br><br>ಶ್ರೀ ಅಲ್ಲಮ ಪ್ರಭುಪಾಟೀಲ್<br>ವಿಪನದಿ:<br>25/07/2014 | ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಇರುವ ಐತಿಹಾಸಿಕ ಕೋಟೆಗಳನ್ನು ಸಂರಕ್ಷಣೆ ಮಾಡಿ ಇವುಗಳನ್ನು ಪ್ರವಾಸಿ ತಾಣಗಳನ್ನಾಗಿ ಅಭಿವೃದ್ಧಿಪಡಿಸುವ ಬಗ್ಗೆ | ಕಲಬುರಗಿ ಜಿಲ್ಲೆ, ಸೇಡಂ ತಾಲ್ಲೂಕು, ಮಳಖೇಡದಲ್ಲಿರುವ ಮಳಖೇಡ ಕೋಟೆಯ ಸಂರಕ್ಷಣೆಯನ್ನು 13ನೇ ಹಣಕಾಸು ಯೋಜನೆಯಡಿ ರೂ.90.00 ಲಕ್ಷಗಳಲ್ಲಿ ಕೈಗೊಳ್ಳಲಾಗುತ್ತಿದ್ದು, ಕಾಮಗಾರಿಯು ಪೂರ್ಣಗೊಳ್ಳುವ ಹಂತದಲ್ಲಿದೆ. ಯಾದಗಿರಿ ಕೋಟೆಯ ನಿರ್ವಹಣೆಯನ್ನು ಜಿಲ್ಲಾಡಳಿತ ವತಿಯಿಂದ ಕೈಗೊಳ್ಳಲಾಗುತ್ತಿದೆ.<br>ಪ್ರವಾಸೋದ್ಯಮ ಇಲಾಖೆ ವತಿಯಿಂದ ಯಾದಗಿರಿ ಕೋಟೆ ಪ್ರದೇಶದಲ್ಲಿ | ದಿನಾಂಕ:09.03.2018ರಂದು ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ಕಲಬುರಗಿ ಜಿಲ್ಲೆ, ಸೇಡಂ ತಾಲ್ಲೂಕು, ಮಳಖೇಡದಲ್ಲಿರುವ ಮಳಖೇಡ ಕೋಟೆಯ (1ನೇ ಹಂತ) ಸಂರಕ್ಷಣೆಯನ್ನು 13ನೇ ಹಣಕಾಸು ಯೋಜನೆಯಡಿ 2013-14ನೇ ಸಾಲಿನಲ್ಲಿ ಪ್ರಾರಂಭಗೊಂಡು 2014-15ನೇ ಸಾಲಿಗೆ ರೂ.90.00 ಲಕ್ಷಗಳಲ್ಲಿ ಕೈಗೊಂಡು ಪೂರ್ಣಗೊಳಿಸಲಾಗಿದೆ.<br>2015-16ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ ಸಂಖ್ಯೆ:283ರ ಘೋಷಣೆಯಂತೆ ಕಲಬುರಗಿ ಜಿಲ್ಲೆ, ಸೇಡಂ ತಾಲ್ಲೂಕು, ಮಳಖೇಡದಲ್ಲಿರುವ ಮಳಖೇಡ ಕೋಟೆಯ |

| | | | | |
|---|---|---|---|---|
| | | | ರೂ.407.20 ಲಕ್ಷಗಳ ಅಂದಾಜು ವೆಚ್ಚದಲ್ಲಿ, ಕೋಟೆ ಸುತ್ತಮುತ್ತಲಿನ ಗಿಡ ಗಂಟೆಗಳನ್ನು ತೆಗೆಯುವುದು, ಕೋಟೆಯ ದುರಸ್ಥಿ, ಮೆಟ್ಟಿಲುಗಳ ನಿರ್ಮಾಣ, ಶೌಚಾಲಯ, ಕುಡಿಯುವ ನೀರಿನ ಸೌಲಭ್ಯ ಮುಂತಾದ ಅಭಿವೃದ್ಧಿ ಕಾಮಗಾರಿಗಳನ್ನು ಜಿಲ್ಲಾಧಿಕಾರಿಗಳು, ಯಾದಗಿರಿ ರವರ ಮೂಲಕ ಕೈಗೊಳ್ಳಲಾಗಿದೆ. ಈವರೆಗೆ ರೂ.200.00ಲಕ್ಷಗಳನ್ನು ಜಿಲ್ಲಾಡಳಿತಕ್ಕೆ ಬಿಡುಗಡೆ ಮಾಡಲಾಗಿದೆ. ಕಾಮಗಾರಿಗಳು ಪ್ರಗತಿಯಲ್ಲಿದೆ ಎಂದು ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ವಿಕಲಚೇತನರ, ಹಿರಿಯ ನಾಗರಿಕರ ಸಬಲೀಕರಣ ಹಾಗೂ ಕನ್ನಡ ಸಂಸ್ಕೃತಿ ಸಚಿವರು ತಿಳಿಸಿದರು. | ಸಂರಕ್ಷಣೆಯನ್ನು ರೂ.480.00ಲಕ್ಷಗಳ ಅಂದಾಜು ವೆಚ್ಚದಲ್ಲಿ (2ನೇ ಹಂತ) ಕೈಗೊಳ್ಳಲಾಗುತ್ತಿದ್ದು, 2016-17ರ ಅಂತ್ಯಕ್ಕೆ ರೂ.80.00 ಲಕ್ಷಗಳ ಅನುದಾನವನ್ನು ವೆಚ್ಚ ಮಾಡಲಾಗಿದೆ. 2017-18ನೇ ಸಾಲಿನಲ್ಲಿ ರೂ.135.00ಲಕ್ಷಗಳ ಅನುದಾನವನ್ನು ನಿಗದಿಪಡಿಸಿಕೊಳ್ಳಲಾಗಿದೆ. ಕಾಮಗಾರಿಯು ಪ್ರಗತಿಯಲ್ಲಿದ್ದು, ನಿಗಧಿತ ಅವಧಿಯೊಳಗೆ ಆರ್ಥಿಕ ಹಾಗೂ ಭೌತಿಕ ಪ್ರಗತಿಯನ್ನು ಕೈಗೊಂಡು ಕಾಮಗಾರಿಯನ್ನು ಪೂರ್ಣಗೊಳಿಸಲಾಗುವುದು.<br>ಪ್ರವಾಸೋದ್ಯಮ ಇಲಾಖೆಯ ವತಿಯಿಂದ ಯಾದಗಿರಿ ಕೋಟೆಯ ಅಭಿವೃದ್ಧಿಗಾಗಿ ರೂ.407.20ಲಕ್ಷಗಳ ಅನುದಾನವನ್ನು ಜಿಲ್ಲಾಧಿಕಾರಿಗಳು ಯಾದಗಿರಿ ಜಿಲ್ಲೆ, ಇವರಿಗೆ ಬಿಡುಗಡೆಗೊಳಿಸಿದ್ದು, ರೂ.200.00ಲಕ್ಷಗಳ ಅನುದಾನವು ವೆಚ್ಚವಾಗಿರುತ್ತದೆ ಎಂಬುದಾಗಿ ತಿಳಿಸಿರುತ್ತಾರೆ. ಕಲಬುರ್ಗಿ ಕೋಟೆಯ ಪ್ರದೇಶದಲ್ಲಿ ಪ್ರವಾಸಿ ಸೌಲಭ್ಯಗಳ ಅಭಿವೃದ್ಧಿಗೆ ಭಾರತೀಯ ಪುರಾತತ್ವ ಸರ್ವೇಕ್ಷಣೆ ಇಲಾಖೆಗೆ ರೂ.100.00ಲಕ್ಷಗಳನ್ನು ಹಾಗೂ ಜಿಲ್ಲಾಡಳಿತ, ಕಲಬುರ್ಗಿ ಇವರಿಗೆ ರೂ.42.00ಲಕ್ಷ ಅನುದಾನವನ್ನು ಬಿಡುಗಡೆ ಮಾಡಲಾಗಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ಸಮಿತಿಯು ತೀರ್ಮಾನಿಸಿತು. |
| 03. | 5145<br>ಚು.ರ.ಪ್ರ: 2018<br>ಶ್ರೀ ಎಸ್.ನಾಗರಾಜ್<br>ವಿಪನದಿ:<br>25/07/2014 | ಯಳಂದೂರಿನ ಶ್ರೀ ಗೌರೇಶ್ವರ ದೇವಾಲಯದ ಮತ್ತು ದಿವಾನ್ ಪೂರ್ಣಯ್ಯ ವಸ್ತು ಸಂಗ್ರಹಾಲಯಕ್ಕೆ ವಿಶಾಲವಾದ ಕಾಂಪೌಂಡ್ ಮತ್ತು ಉದ್ಯಾನವನ ನಿರ್ಮಿಸುವ ಬಗ್ಗೆ. | ದಿವಾನ್ ಪೂರ್ಣಯ್ಯನವರ ವಸ್ತುಸಂಗ್ರಹಾಲಯಕ್ಕೆ ಸೇರಿದ ಪ್ರದೇಶದಲ್ಲಿ ಕಾಂಪೌಂಡ್ ಹಾಗೂ ಉದ್ಯಾನವನ್ನು ನಿರ್ಮಿಸುವ ಕೆಲಸವು ಪ್ರಗತಿಯಲ್ಲಿದೆ ಎಂದು ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ವಿಕಲಚೇತನರ, ಹಿರಿಯ ನಾಗರಿಕರ ಸಬಲೀಕರಣ ಹಾಗೂ ಕನ್ನಡ ಸಂಸ್ಕೃತಿ ಸಚಿವರು ತಿಳಿಸಿದರು. | ದಿನಾಂಕ:09.03.2018ರಂದು ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ದಿವಾನ್ ಪೂರ್ಣಯ್ಯನವರ ಬಂಗಲೆಯು ರಾಜ್ಯ ಸಂರಕ್ಷಿತ ಸ್ಮಾರಕವೆಂದು ಘೋಷಿಸಲಾಗಿದ್ದು, ಇದು ಪೂರ್ಣಯ್ಯನವರ ವಂಶಸ್ಥರಿಗೆ ಸೇರಿದ ಖಾಸಗಿ ಆಸ್ತಿಯಾಗಿರುತ್ತದೆ.<br>ಶ್ರೀಮತಿ ಸುಕನ್ಯಾ ಪೂರ್ಣಯ್ಯ, ಮಾಲೀಕರು, ಇವರೊಡನೆ 33 ವರ್ಷಗಳ ಅವಧಿಗೆ ಒಡಂಬಡಿಕೆ ಮಾಡಿಕೊಂಡು ಇಲ್ಲಿ ದಿವಾನ್ ಪೂರ್ಣಯ್ಯನವರ ಸ್ಮರಣಾರ್ಥ ವಸ್ತು ಸಂಗ್ರಹಾಲಯವನ್ನು ಸ್ಥಾಪಿಸಲಾಗಿದೆ. |

| | | | | |
|---|---|---|---|---|
| | | | | ಈ ವಸ್ತುಸಂಗ್ರಹಾಲಯದ ಹೊರ ಆವರಣದಲ್ಲಿ ಉದ್ಯಾನವನ ಹಾಗೂ 200 ಮೀಟರ್‌ಗಳ ಕಾಂಪೌಂಡ್ ನಿರ್ಮಾಣ ಕಾಮಗಾರಿಯನ್ನು ಕೈಗೊಳ್ಳುವ ಸಂದರ್ಭದಲ್ಲಿ ಈ ಜಾಗದ ಕುರಿತಂತೆ ಯಳಂದೂರು ಸಿವಿಲ್ ನ್ಯಾಯಾಲಯದಲ್ಲಿ ಸಂಖ್ಯೆ:ಓಎಸ್ 86/2013 ಮತ್ತು ಒ.ಎಸ್.56/2013 ಎರಡು ಪ್ರಕರಣಗಳು ದಾಖಲಾಗಿದ್ದು, ಈ ಪ್ರಕರಣಗಳಲ್ಲಿ ಸಾಕ್ಷಿಗಳ ವಿಚಾರಣೆಯು ಪೂರ್ಣಗೊಂಡಿದ್ದು, ಆರ್ಗ್ಯುಮೆಂಟ್ ಹಂತದಲ್ಲಿದೆ. ಮುಂದಿನ ವಿಚಾರಣೆಯನ್ನು ಮಾನ್ಯ ನ್ಯಾಯಾಲಯವು ದಿನಾಂಕ:24.03.2018ಕ್ಕೆ ನಿಗದಿಪಡಿಸಿರುತ್ತದೆ.<br>ಇಲ್ಲಿ ಒಟ್ಟು 75 ಮೀಟರ್‌ಗಳ ಕಾಂಪೌಂಡ್ ಹಾಗೂ ಗೇಟ್‌ನ್ನು ಅಳವಡಿಸಿದ್ದು, ಇನ್ನೂ 125 ಮೀಟರ್‌ಗಳ ಕಾಂಪೌಂಡ್ ಮತ್ತು ಉದ್ಯಾನವನದ ನಿರ್ಮಾಣದ ಕಾಮಗಾರಿ ಬಾಕಿಯಿರುತ್ತದೆ.<br>ನ್ಯಾಯಾಲಯ ನೀಡುವ ತೀರ್ಪನ್ನು ಆಧರಿಸಿ, ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ಸಮಿತಿಯು ತೀರ್ಮಾನಿಸಿತು. |
| 04. | 5149<br>ಚು.ರ.ಪ್ರ:1340<br>ಶ್ರೀ ಮಹಾಂತೇಶ ಶಿವಾನಂದ ಕೌಜಲಗಿ<br>ವಿಪನದಿ:19.12.2014 | ಬೆಳಗಾವಿ ಜಿಲ್ಲೆ, ರಾಮದುರ್ಗ ತಾಲ್ಲೂಕಿನ ಹಿರೇಕೊಪ್ಪ ಕೆ.ಎಸ್.ಹಾಗೂ ಕಿಲ್ಲಾ ತೊರಗಲ್ ಊರುಗಳಲ್ಲಿ ಸಾಂಸ್ಕೃತಿಕ ಭವನ ಕಟ್ಟಲು ಕೈಗೊಂಡಿರುವ ಕ್ರಮಗಳ ಬಗ್ಗೆ. | ಈ ಬಗ್ಗೆ ಪರಿಶೀಲಿಸಲಾಗುವುದು ಎಂದು ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಹಾಗೂ ಕನ್ನಡ ಸಂಸ್ಕೃತಿ ಸಚಿವರು ತಿಳಿಸಿದರು. | ದಿನಾಂಕ:09.03.2018ರಂದು ಸಮಿತಿ ಸಭೆಯಲ್ಲಿ ಚರ್ಚಿಸಿದಾಗ<br>• ಬೆಳಗಾವಿ ಜಿಲ್ಲೆಯ ರಾಮದುರ್ಗ ತಾಲ್ಲೂಕು ಹಿರೇಕೊಪ್ಪ ಕೆ.ಎಸ್. ಗ್ರಾಮದಲ್ಲಿರುವ ಡಾ. ಎಸ್. ಕರ್ಕಿ ಇವರ ಹೆಸರಿನಲ್ಲಿ ಸಾಂಸ್ಕೃತಿಕ ಭವನವನ್ನು ಸರ್ಕಾರಿ ಆದೇಶ ಸಂಖ್ಯೆ: ಕಸಂವಾ 182 ಕಸಧ 2015, ದಿನಾಂಕ: 27.03.2015ರ ಆದೇಶದಂತೆ ಮಂಜೂರಾಗಿದ್ದು, ಆ ವರ್ಷದಲ್ಲಿ ಅನುದಾನದ ಕೊರತೆಯಿಂದ ಅನುದಾನ ಡ್ರಾ ಮಾಡಲು ಸಾಧ್ಯವಾಗದೇ ಇರುವುದರಿಂದ ಸರ್ಕಾರಿ ಆದೇಶ ಸಂಖ್ಯೆ: ಕಸಂವಾ 325 ಕಸಧ 2015, ದಿನಾಂಕ: 31.08.2015ರ ಆದೇಶದಲ್ಲಿ ನವೀಕರಿಸಿ ಮಂಜೂರಾದ ರೂ. 10.00 ಲಕ್ಷಗಳಲ್ಲಿ ಪ್ರಥಮ ಕಂತಿನಲ್ಲಿ ರೂ.5.00 |

| | | | | |
|---|---|---|---|---|
| | | | | ಲಕ್ಷಗಳನ್ನು ಜಿಲ್ಲಾಧಿಕಾರಿಗಳು, ಬೆಳಗಾವಿ ಜಿಲ್ಲೆ, ಬೆಳಗಾವಿ ಇವರಿಗೆ ಬಿಡುಗಡೆ ಮಾಡಲಾಗಿದೆ.<br>• ಜಿಲ್ಲಾಧಿಕಾರಿಗಳು, ಬೆಳಗಾವಿ ಜಿಲ್ಲೆ, ಬೆಳಗಾವಿ ಇವರಿಗೆ ಬಿಡುಗಡೆ ಮಾಡಿದ ರೂ. 5.00 ಲಕ್ಷಗಳಲ್ಲಿ ಜಿಲ್ಲಾಧಿಕಾರಿಯವರ ಕಛೇರಿ ಆದೇಶ ಸಂಖ್ಯೆ:ಕಸಂಇ/ಸಾಂಭ/2016-17, ದಿ:06.03.2017ರಲ್ಲಿ ರೂ.2.50 ಲಕ್ಷಗಳಿಗೆ ಮಾತ್ರ ಆಡಳಿತಾತ್ಮಕ ಅನುಮೋದನೆ ನೀಡಿರುತ್ತಾರೆ ಮುಂದುವರಿದು, ಸಹಾಯಕ ಕಾರ್ಯಪಾಲಕ ಅಭಿಯಂತರರು, ಪಿ.ಡಬ್ಲ್ಯೂ.ಡಿ., ರಾಮದುರ್ಗ, ಬೆಳಗಾವಿ ಜಿಲ್ಲೆ ಇವರು ಜಿಲ್ಲಾ ಸಹಾಯಕ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಳಗಾವಿ ಇವರಿಗೆ ದಿನಾಂಕ: 19.02.2018ರಲ್ಲಿ ಪತ್ರ ಬರೆದು, ಮಾನ್ಯ ಜಿಲ್ಲಾಧಿಕಾರಿಗಳು, ರೂ.5.00 ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡುವ ಬದಲು ರೂ.2.50 ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಿರುವುದರಿಂದ, ಸದರಿ ಆದೇಶವನ್ನು ರೂ.5.00 ಲಕ್ಷಗಳು ಎಂದು ಮಾರ್ಪಾಡು ಮಾಡಲು ಕೋರಿದ್ದಾರೆ ಆದ್ದರಿಂದ ಕಾಮಗಾರಿ ಪ್ರಾರಂಭಿಸಿರುವುದಿಲ್ಲ.<br><br>ಕಿಲ್ಲಾ ತೊರಗಲ್ ಊರಿನಲ್ಲಿ ಸಾಂಸ್ಕೃತಿಕ ಭವನ / ಬಯಲು ರಂಗಮಂದಿರ ನಿರ್ಮಾಣ ಮಾಡುವ ಯಾವುದೇ ಪ್ರಸ್ತಾವನೆಗಳು ಸರ್ಕಾರದ ಮುಂದೆ ಇರುವುದಿಲ್ಲ. ಒಂದು ವೇಳೆ ಈ ಸ್ಥಳದಲ್ಲಿ ಸಾಂಸ್ಕೃತಿಕ ಭವನ / ಬಯಲು ರಂಗಮಂದಿರ ನಿರ್ಮಾಣ ಮಾಡಲು ಪ್ರಸ್ತಾವನೆ ಬಂದಲ್ಲಿ ಪರಿಶೀಲಿಸಿ ಕ್ರಮ ವಹಿಸಲಾಗುವುದು ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ಸಮಿತಿಯು ತೀರ್ಮಾನಿಸಿತು. |

| | | | | |
|---|---|---|---|---|
| ೦5. | 5150<br>ಚು.ರ.ಪ್ರ: 591<br><br>ಶ್ರೀ ಬಿ. ರಾಮಕೃಷ್ಣ<br>ವಿಪನದಿ: 12/12/2014 | ಮಂಡ್ಯ ಜಿಲ್ಲೆಯ ಮದ್ದೂರು ತಾಲ್ಲೂಕಿನ ಆತಗೂರು ಗ್ರಾಮದಲ್ಲಿರುವ ಪ್ರಾಚೀನ ಚಲ್ಲೇಶ್ವರ ದೇವಾಲಯವನ್ನು ಅಭಿವೃದ್ಧಿಪಡಿಸಿ, ದೇವಾಲಯದ ಮುಂದಿರುವ ಕಲ್ಯಾಣಿಯನ್ನು ಜೀರ್ಣೋದ್ದಾರ ಮಾಡಲು ಕೈಗೊಂಡಿರುವ ಕ್ರಮದ ಬಗ್ಗೆ ಹಾಗೂ ಈ ದೇವಾಲಯದ ಬಳಿ ಇದ್ದ ಕ್ರಿ.ಶ.೮೦೦ರ ಶಿಲಾಶಾಸನದ ಪ್ರತಿಕೃತಿಯನ್ನು ಮರುಸ್ಥಾಪಿಸುವ ಬಗ್ಗೆ. | ಈ ದೇವಾಲಯ ಮತ್ತು ಕಲ್ಯಾಣಿಯ ಸ್ಥಳ ಪರಿಶೀಲನೆಯನ್ನು ಕೈಗೊಂಡು ಅಗತ್ಯ ಕಂಡುಬಂದಲ್ಲಿ ದೇವಾಲಯದ ಅಭಿವೃದ್ಧಿ ಕಾರ್ಯಗಳ ಕುರಿತಂತೆ ಸಮಗ್ರ ಅಭಿವೃದ್ಧಿಯ ಕಾರ್ಯ ಯೋಜನೆಯನ್ನು ಜಿಲ್ಲಾಡಳಿತದೊಡನೆ ಚರ್ಚಿಸಿ ಅಗತ್ಯ ಕ್ರಮವಹಿಸಲಾಗುವುದು.<br>ಶಾಸನದ ಪ್ರತಿಕೃತಿಯನ್ನು ದೇವಾಲಯದ ಮುಂದೆ ಸ್ಥಾಪಿಸುವ ಕುರಿತಂತೆ ಪರಿಶೀಲಿಸಿ ಕ್ರಮ ವಹಿಸಲಾಗುವುದು ಎಂದು ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ, ಹಿರಿಯ ನಾಗರೀಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ತಿಳಿಸಿದರು. | ದಿನಾಂಕ:09.03.2018ರಂದು ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ಮಂಡ್ಯ ಜಿಲ್ಲೆಯ ಮದ್ದೂರು ತಾಲ್ಲೂಕಿನ ಆತಗೂರು ಗ್ರಾಮದಲ್ಲಿರುವ ಪ್ರಾಚೀನ ಚಲ್ಲೇಶ್ವರ ದೇವಾಲಯದ ಸಂರಕ್ಷಣೆಯನ್ನು ಇಲಾಖೆಯ ವತಿಯಿಂದ ಕೈಗೊಳ್ಳಲಾಗಿದ್ದು, ದೇವಾಲಯವು ಸುಸ್ಥಿತಿಯಲ್ಲಿರುತ್ತದೆ<br><br>ದೇವಾಲಯದ ಬಳಿ ಇದ್ದ ಶಿಲಾಶಾಸನದ ಪ್ರತಿಕೃತಿಯನ್ನು ತಯಾರಿಸಿ ದೇವಾಲಯದ ಆವರಣದಲ್ಲಿ ಇಡಲಾಗಿದೆ.<br><br>ಕಲ್ಯಾಣಿಯ ಸಂರಕ್ಷಣೆ ಕೈಗೊಳ್ಳುವ ಸಂಬಂಧ ಇಲಾಖೆಯ ನಿರ್ದೇಶಕರು (ಪುರಾತತ್ವ) ಸ್ಥಳ ಪರಿಶೀಲನೆಯನ್ನು ಕೈಗೊಂಡು ನೀಡಿರುವ ವರದಿಯನ್ವಯ ವಾಸ್ತುಶೈಲಿಯ ದೃಷ್ಟಿಯಿಂದ ಅಷ್ಟೇನು ಪ್ರಾಮುಖ್ಯತೆಯನ್ನು ಹೊಂದಿರದ ಸಾಧಾರಣ ಶೈಲಿಯಲ್ಲಿ ಕಲ್ಲುಗಳನ್ನು ಜೋಡಿಸಿದ್ದು, ಕೆಳಭಾಗ ಮಣ್ಣಿನಿಂದ ಮುಚ್ಚಲ್ಪಟ್ಟಿರುತ್ತದೆ.<br><br>ಈ ಕಲ್ಯಾಣಿಯು ಖಾಸಗೀ ಜಮೀನಿನಲ್ಲಿದ್ದು, ಸದರಿ ಕಲ್ಯಾಣಿಯಿರುವ ಜಮೀನು ಶ್ರೀಮತಿ ಸ್ವರ್ಣಲತಾ ಕೋಂ ರಾಜಣ್ಣ, ಇವರಿಗೆ ಸೇರಿರುವುದಾಗಿ ತಿಳಿಸಿರುತ್ತಾರೆ.<br><br>ಸದರಿ ಜಮೀನಿನ ಮಾಲೀಕರು ಈ ಸ್ಥಳದಲ್ಲಿ ಯಾವುದೇ ರೀತಿಯ ಅಭಿವೃದ್ಧಿಯನ್ನು ಕೈಗೊಳ್ಳದಿರಲು ದಿನಾಂಕ 26/01/2018ರಂದು ಮನವಿಯನ್ನು ಸಲ್ಲಿಸಿರುತ್ತಾರೆಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ಸಮಿತಿಯು ತೀರ್ಮಾನಿಸಿತು. |

**ಅನುಬಂಧ – 1**

**(ಭರವಸೆ ಸಂಖ್ಯೆ: 2541)**

**ಗಡಿ ಜಿಲ್ಲೆಗಳ ತಾಲ್ಲೂಕುಗಳಿಗೆ ಸಾಂಸ್ಕೃತಿಕ ಭವನ / ಸಾಂಸ್ಕೃತಿಕ ಮಂದಿರ / ಬಯಲು ರಂಗಮಂದಿರಗಳಿಗೆ ಮಂಜೂರಾದ / ಬಿಡುಗಡೆಯಾದ ಅನುದಾನದ ವಿವರಗಳು.**

| ಕ್ರ. ಸಂ. | ಗಡಿ ಜಿಲ್ಲೆಗಳ ಹೆಸರು | ಗಡಿ ತಾಲ್ಲೂಕುಗಳ ಹೆಸರು | ಗ್ರಾಮ | ಸಾಂಸ್ಕೃತಿಕ ಭವನ / ಸಾಂಸ್ಕೃತಿಕ ಮಂದಿರ / ಬಯಲು ರಂಗಮಂದಿರ / ಕನ್ನಡ ಭವನ | ಬಿಡುಗಡೆಯಾದ ಅನುದಾನದ ಮೊತ್ತ |
|---|---|---|---|---|---|
| 1 | ಬೆಳಗಾವಿ | 1. ಬೆಳಗಾವಿ | ವಡಗಾಂವ್ ಗ್ರಾಮ | ಸುವರ್ಣ ಕರ್ನಾಟಕ ಗಡಿ ಭವನ | ರೂ. ೨೦.೦೦ ಲಕ್ಷ |
| | | 2. ಖಾನಾಪುರ | ಮಂಗ್ಯಾನ ಕೊಪ್ಪ,<br>ಬೀಡಿ | ಸಾಂಸ್ಕೃತಿಕ ಭವನ | ರೂ. ೧೦.೦೦ ಲಕ್ಷ<br>ರೂ. ೧೦.೦೦ ಲಕ್ಷ |
| 2 | ವಿಜಯಪುರ | 3. ಇಂಡಿ | ಇಂಚಿಗೇರಿ | ಸುವರ್ಣ ಕರ್ನಾಟಕ ಗಡಿ ಭವನ | ರೂ. ೩೦.೦೦ ಲಕ್ಷ |
| 3 | ಕೋಲಾರ | 4. ಮುಳಬಾಗಿಲು | ಮುಳಬಾಗಿಲು | ಸುವರ್ಣ ಕರ್ನಾಟಕ ಗಡಿ ಭವನ | ರೂ. ೬೫.೦೦ ಲಕ್ಷ |
| 4 | ದಕ್ಷಿಣ ಕನ್ನಡ | 5. ಮಂಗಳೂರು | ಉಲ್ಲಾಳ | ಸುವರ್ಣ ಕರ್ನಾಟಕ ಗಡಿ ಭವನ | ರೂ. ೨೦.೦೦ ಲಕ್ಷ |
| 5 | ಚಾಮರಾಜನಗರ | 6. ಗುಂಡ್ಲುಪೇಟೆ | ಗುಂಡ್ಲುಪೇಟೆ | ಸುವರ್ಣ ಕರ್ನಾಟಕ ಗಡಿ ಭವನ | ರೂ. ೩೬.೦೦ ಲಕ್ಷ |
| | | 7. ಕೊಳ್ಳೇಗಾಲ | ಕೊಳ್ಳೇಗಾಲ | ಸುವರ್ಣ ಕರ್ನಾಟಕ ಗಡಿ ಭವನ | ರೂ. ೫೦.೦೦ ಲಕ್ಷ |
| 6 | ಚಿತ್ರದುರ್ಗ | 8. ಮೊಳಕಾಲ್ಮೂರು | ಸಿದ್ದಯ್ಯನ ಕೋಟೆ | ಸಾಂಸ್ಕೃತಿಕ ಭವನ | ರೂ. ೧೦.೦೦ ಲಕ್ಷ |
| 7 | ಚಿಕ್ಕಬಳ್ಳಾಪುರ | 9. ಗೌರಿಬಿದನೂರು | ಮಂಚೇನಹಳ್ಳಿ | ಕನ್ನಡ ಭವನ | ರೂ. ೫.೦೦ ಲಕ್ಷ |
| 8 | ಕೊಡಗು | 10. ಮಡಿಕೇರಿ | ಪೊನ್ನಂಪೇಟೆ,<br>ಬೇಟೋಳಿ | ಸಾಂಸ್ಕೃತಿಕ ಭವನ | ರೂ. ೫.೦೦ ಲಕ್ಷ<br>ರೂ. ೧೦.೦೦ ಲಕ್ಷ |
| 9 | ಬಳ್ಳಾರಿ | 11. ಸಂಡೂರು | ಸಂಡೂರು,<br>ಏಳುಬೆಂಚಿ,<br>ಕುಡುತಿನಿ | ಸಾಂಸ್ಕೃತಿಕ ಭವನ | ರೂ. ೫.೦೦ ಲಕ್ಷ<br>ರೂ. ೫.೦೦ ಲಕ್ಷ<br>ರೂ. ೫.೦೦ ಲಕ್ಷ |
| 10 | ಕಲಬುರಗಿ | 12. ಸೇಡಂ | ಸೇಡಂ | ಸುವರ್ಣ ಕರ್ನಾಟಕ ಗಡಿ ಭವನ | ರೂ. ೧೨೫.೦೦ ಲಕ್ಷ |
| 11 | ಬೀದರ್ | 13. ಭಾಲ್ಕಿ | ಭಾಲ್ಕಿ | ಬಯಲು ರಂಗಮಂದಿರ, ಕನ್ನಡ ಭವನ | ರೂ. ೧೫.೫೦ ಲಕ್ಷ |
| | | 14. ಔರಾದ್ | ಬೋಂತಿ | ಸಾಂಸ್ಕೃತಿಕ ಭವನ | ರೂ. ೫.೦೦ ಲಕ್ಷ |
| | | 15. ಬೀದರ್ | ನಿಣಾ ಭೀಮಳಖೇಡ ಗ್ರಾಮ | ಸಾಂಸ್ಕೃತಿಕ ಭವನ | ರೂ. ೫.೦೦ ಲಕ್ಷ |
| | | 16. ಹುಮ್ನಾಬಾದ್ | ಚೀನಕೇರಾ ಗ್ರಾಮ | ಸಾಂಸ್ಕೃತಿಕ ಭವನ | ರೂ. ೨೦.೦೦ ಲಕ್ಷ |
| 12 | ಉತ್ತರ ಕನ್ನಡ | 17. ಜೋಯಿಡಾ | ಚಂದೇವಾಡಿ ಗ್ರಾಮ | ಸಾಂಸ್ಕೃತಿಕ ಭವನ | ರೂ. ೧೦.೦೦ ಲಕ್ಷ |

# ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ

| ಕ್ರಮ ಸಂಖ್ಯೆ | ಆಶ್ವಾಸನೆ ಸಂಖ್ಯೆ ಆಧಾರ ಮತ್ತು ದಿನಾಂಕ | ವಿಷಯ | ಆಶ್ವಾಸನೆ | ತೆಗೆದುಕೊಂಡ ಕ್ರಮ |
|---|---|---|---|---|
| 1. | 4119<br>ಚು.ರ.ಪ್ರ. 475<br>ಡಾ: ವೀರಣ್ಣ ಮತ್ತಿಕಟ್ಟಿ<br>ವಿಪನದಿ:<br>27.07.2012 | ರಾಜ್ಯ ಸಾರಿಗೆ ಮತ್ತು ಸರ್ಕಾರಿ ವಾಹನಗಳನ್ನೆಲ್ಲಾ ಮಾಲಿನ್ಯ ರಹಿತ ವಾಹನಗಳನ್ನಾಗಿ ಸುಸ್ಥಿತಿಯಲ್ಲಿ ಓಡಿಸುವ ಬಗ್ಗೆ. | ಸರ್ಕಾರವು ಜೈವಿಕ ಇಂಧನದ ಬಳಕೆಯನ್ನು ಪ್ರೋತ್ಸಾಹಿಸುತ್ತಿದೆ, ಮುಂಬರುವ ದಿನಗಳಲ್ಲಿ ಬೆಂಗಳೂರು ನಗರದಲ್ಲಿ ಸಿ.ಎನ್.ಜಿ. ಇಂಧನವು ಲಭ್ಯವಾಗಲಿದ್ದು, ಸದರಿ ಇಂಧನವನ್ನು ಸಾರ್ವಜನಿಕ ಸಾರಿಗೆ ಸೇವೆ ನೀಡುವ ವಾಹನಗಳಲ್ಲಿ ಬಳಸಿಕೊಳ್ಳಲು ಕ್ರಮ ವಹಿಸಲಾಗುವುದೆಂದು ಪರಿಸರ, ಜೀವಿಶಾಸ್ತ್ರ ಹಾಗೂ ಯೋಜನೆ ಮತ್ತು ಸಾಂಖ್ಯಿಕ ಸಚಿವರು ತಿಳಿಸಿದರು | ದಿನಾಂಕ: 02.03.2018ರಂದು ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ರಾಜ್ಯದಲ್ಲಿ ಜೈವಿಕ ಇಂಧನವನ್ನು ಸಾರ್ವಜನಿಕ ಸಾರಿಗೆ ಸೇವೆಯ ವಾಹನಗಳಲ್ಲಿ ಬಳಸುವ ಸಲುವಾಗಿ ಸಾರಿಗೆ ಇಲಾಖೆ ಕ್ರಮ ವಹಿಸಬೇಕಾಗಿರುತ್ತದೆ. ಈ ದಿಸೆಯಲ್ಲಿ ಬೆಂಗಳೂರು ನಗರದಲ್ಲಿ ಇತ್ತೀಚೆಗೆ ಕೇಂದ್ರ ಸರ್ಕಾರ ಸ್ವಾಮ್ಯದ ಗೇಲ್(GAIL) ಕಂಪನಿಯು ಸಿ.ಎನ್.ಜಿ. ಇಂಧನವನ್ನು ಬೆಂಗಳೂರಿಗೆ ಪೈಪ್ ಲೈನ್ ಮೂಲಕ ಸರಬರಾಜು ಮಾಡಲು ಕಾರ್ಯಕ್ರಮವನ್ನು ಹಾಕಿಕೊಂಡು ಪೂರ್ಣಗೊಳ್ಳುವ ಹಂತದಲ್ಲಿರುತ್ತದೆ. ಇದೇ ರೀತಿ ನಗರ ಸಾರಿಗೆ ಡಿಪೋಗಳಲ್ಲಿ ಸಿ.ಎನ್.ಜಿ. ಡಿಪೋ ಸ್ಥಾಪಿಸುವ ಸಲುವಾಗಿ ಕಾರ್ಯಗಳು ನಡೆಯುತ್ತಿವೆ. ಈ ಬಗ್ಗೆ ಸರ್ಕಾರದ ಮಟ್ಟದಲ್ಲಿ ಸಂಸ್ಥೆಯೊಂದಿಗೆ ವಿವಿಧ ಇಲಾಖೆಗಳ ಅಧಿಕಾರಿಗಳ ಸಭೆಗಳೂ ಸಹ ಆಗಿಂದಾಗ್ಗೆ ನಡೆಯುತ್ತಿವೆ.<br><br>ಸಾರಿಗೆ ಇಲಾಖೆಯ ಪ್ರಕಾರ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ವಾಹನಗಳಲ್ಲಿ ಪ್ರಸ್ತುತ ಸಿ.ಎನ್.ಜಿ. ಇಂಧನದ ಬಳಕೆಯಾಗುತ್ತಿರುವುದಿಲ್ಲ. ಮುಂಬರುವ ದಿನಗಳಲ್ಲಿ ಸಿ.ಎನ್.ಜಿ. ಇಂಧನವು ಸರಬರಾಜು ಆಗುವ ನಿಟ್ಟಿನಲ್ಲಿ ಕ.ರಾ.ರ.ಸಾ.ನಿಗಮದಲ್ಲಿ ವಿವರಣಾತ್ಮಕ ಅಧ್ಯಯನವು ನಡೆಯುತ್ತಿದೆ. ಕ.ರಾ.ರ.ಸಾ. ನಿಗಮದ ವಾಹನಗಳು ಬೆಂಗಳೂರಿನಿಂದ ರಾಜ್ಯದ ಹೊರ ಊರುಗಳಿಗೆ ಸಂಚರಿಸುವುದಾಗಿದ್ದು, ಬೇರೆ ಸ್ಥಳಗಳಲ್ಲಿ ಸಿ.ಎನ್.ಜಿ. ಲಭ್ಯವಿಲ್ಲದ ಕಾರಣ ಸಿ.ಎನ್.ಜಿ. ಇಂಧನದ ಬಳಕೆಯು ಪ್ರಸ್ತುತ ದಿನಗಳಲ್ಲಿ ಕ.ರಾ.ರ.ಸಾ. ನಿಗಮದ ಬಸ್ಸುಗಳಲ್ಲಿ ಕಷ್ಟಸಾಧ್ಯವಾಗಿರುತ್ತದೆ ಎಂದು ಸಾರಿಗೆ ಇಲಾಖೆ ವರದಿ ಮಾಡಿರುತ್ತದೆ.<br><br>ಮುಂದುವರೆದು, ಕರ್ನಾಟಕದ ಎಲ್ಲಾ ಸ್ಥಳಗಳಲ್ಲಿ ಸಿ.ಎನ್.ಜಿ. ಇಂಧನದ ಲಭ್ಯತೆಯ ಹಾಗೂ ಅಧ್ಯಯನದ ವರದಿಯ ಮೇರೆಗೆ ಕ.ರಾ.ರ.ಸಾ.ನಿಗಮದ |

| | | | | |
|---|---|---|---|---|
| | | | | ಬಸ್ಸುಗಳಲ್ಲಿ ಸಿ.ಎನ್.ಜಿ. ಇಂಧನ ಬಳಸಲು ಕ್ರಮ ಕೈಗೊಳ್ಳಬಹುದಾಗಿರುತ್ತದೆ ಎಂದು ಸಾರಿಗೆ ಇಲಾಖೆಯು ತಿಳಿಸಿದೆ.<br><br>ಮುಂದುವರೆದು, ಕ.ರಾ.ರ.ಸಾ.ನಿಗಮವು ಬಸ್ಸುಗಳಿಂದ ಹೊರಸೂಸುವ ಹಾನಿಕಾರಕವಾದ ಹೊಗೆಯಿಂದ ಪರಿಸರಕ್ಕೆ ಉಂಟಾಗುವ ದುಷ್ಪರಿಣಾಮಗಳನ್ನು ತಡೆಗಟ್ಟಲು ಸಾಮಾಜಿಕ ಬಾಧ್ಯತೆ ಹಾಗೂ ಜವಾಬ್ದಾರಿಯಿಂದ ಈಗಾಗಲೇ ಬಿಎಸ್–4 ತಂತ್ರಜ್ಞಾನ ಮಾದರಿಯ ಬಸ್ಸುಗಳನ್ನೇ ಖರೀದಿಸಲು ಮಾನ್ಯ ಸರ್ವೋಚ್ಚ ನ್ಯಾಯಾಲಯದ ತೀರ್ಪಿನಲ್ಲಿ ಕಡ್ಡಾಯಗೊಳಿಸಿದ್ದು, ಇದರಿಂದ ಹೊರಸೂಸುವ ಹೊಗೆಯ ಪ್ರಮಾಣ ಸಿಎನ್‌ಜಿ ಇಂಧನಕ್ಕೆ ಹೋಲಿಸಬಹುದಾಗಿರುತ್ತದೆ. ಅಲ್ಲದೇ ಪರ್ಯಾಯ ಇಂಧನಗಳಾದ ಬಯೋ ಡೀಸೆಲ್ ಬಳಕೆಯನ್ನು ಪ್ರಸ್ತುತ ಇರುವ ಇಂಜಿನ್ ತಂತ್ರಜ್ಞಾನಗಳಲ್ಲಿ ಅನುಷ್ಠಾನಗೊಳಿಸಲು ಅಧ್ಯಯನ ನಡೆಸಲಾಗುತ್ತಿದೆ ಎಂದು ಸಾರಿಗೆ ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ, ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ಸಮಿತಿಯು ತೀರ್ಮಾನಿಸಿತು. |
| 2. | 2932<br>ವಿಶೇಷ ಪ್ರಸ್ತಾವನೆ<br>ಡಾ:ಮಲ್ಲನಗೌಡ ನಾಡಗೌಡ<br>ವಿಪನದಿ:25.06.2008<br>(ನಗರಾಭಿವೃದ್ದಿ ಇಲಾಖೆಯಿಂದ ವರ್ಗಾವಣೆ) | ಬೆಂಗಳೂರು ನಗರದ ಕೆರೆಗಳನ್ನು ಖಾಸಗೀಕರಣ ಗೊಳಿಸುತ್ತಿರುವ ಬಗ್ಗೆ | ಖಾಸಗೀಕರಣ ಆಗಿರುವ ಕೆರೆಗಳನ್ನು ವಾಪಸ್ ತೆಗೆದುಕೊಳ್ಳುವ ಯೋಚನೆ ನಡೆಯುತ್ತಿದೆ. ಯಾವ ಕೆರೆಗಳನ್ನು ಸಹ ಖಾಸಗೀಕರಣ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿಲ್ಲ ಎಂದು ಮಾನ್ಯ ಅಬಕಾರಿ ಮತ್ತು ಬೆಂಗಳೂರು ಜಲಮಂಡಳಿ ಸಚಿವರು ತಿಳಿಸಿದರು. | ದಿನಾಂಕ: 02.03.2018ರಂದು ಸಮಿತಿ ಸಭೆಯಲ್ಲಿ ಚರ್ಚಿಸಿದಾಗ ಭರವಸೆಯ ಮೊದಲನೇ ಭಾಗದ ಬಗ್ಗೆ ವಿವರಣೆ:<br>ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆಯ ವ್ಯಾಪ್ತಿಯಲ್ಲಿ ಬೆಂಗಳೂರಿನ ಈ ಕೆಳಕಂಡ ಕೆರೆಗಳು ಬರುತ್ತವೆ.<br><br>ಅರಣ್ಯ ಇಲಾಖೆಯ ಸುಪರ್ದಿಯಲ್ಲಿರುವ ಕೆರೆಗಳು:<br>1.ಮಡಿವಾಳ ಕೆರೆ<br>2.ಹೆಣ್ಣೂರು ಕೆರೆ<br>3.ಜಾರಕಬಂಡೆಕಾವಲ್ ಕೆರೆ<br>4.ಮೈಲಸಂಸ್ರ ಕೆರೆ<br>5.ಪುಟ್ಟೇನಹಳ್ಳಿ ಕೆರೆ (ಯಲಹಂಕ) |

ಕರ್ನಾಟಕ ಸರೋವರ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರದ ಸುಪರ್ದಿಯಲ್ಲಿರುವ ಕೆರೆಗಳು:

1.ನಾಗವಾರ ಕೆರೆ
2.ವೆಂಗಯ್ಯನ ಕೆರೆ
3.ಹೆಬ್ಬಾಳ ಕೆರೆ
4.ಅಗರ ಕೆರೆ

ಅರಣ್ಯ ಇಲಾಖೆಯ ಸುಪರ್ದಿಯಲ್ಲಿನ ಕೆರೆಗಳಾದ ಮಡಿವಾಳ ಕೆರೆ, ಹೆಣ್ಣೂರು ಕೆರೆ, ಜಾರಕಬಂಡೆಕಾವಲ್ ಕೆರೆ, ಮೈಲಸಂದ್ರ ಕೆರೆ ಮತ್ತು ಪುಟ್ಟೇನಹಳ್ಳಿ ಕೆರೆ (ಯಲಹಂಕ) ಗಳನ್ನು ಖಾಸಗೀಕರಣಗೊಳಿಸಿರುವುದಿಲ್ಲ.

ಕರ್ನಾಟಕ ಸರೋವರ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿರುವ ಕೆರೆಗಳನ್ನು ಈ ಕೆಳಗೆ ನೀಡಿರುವ ಕೋಷ್ಠಕದಲ್ಲಿ ವಿವರಿಸಿರುವಂತೆ ಮಾನ್ಯ ಉಚ್ಚ ನ್ಯಾಯಾಲಯ ಡಬ್ಲ್ಯೂಪಿ. ನಂ: 817/2008 ರಲ್ಲಿ ದಿನಾಂಕ: 11.04.2012ರಂದು ನೀಡಿದ ಆದೇಶಕ್ಕಿಂತಲೂ ಮೊದಲೇ ಸಾರ್ವಜನಿಕ–ಖಾಸಗಿ–ಸಹಭಾಗಿತ್ವದಡಿಯಲ್ಲಿ ಖಾಸಗಿ ಸಂಸ್ಥೆಗಳಿಗೆ ವಹಿಸಲಾಗಿರುತ್ತದೆ.

| ಕ್ರ. ಸಂ | ಕೆರೆಗಳ ಹೆಸರು | ಖಾಸಗಿ ಸಂಸ್ಥೆಗೆ ವಹಿಸಿದ ದಿನಾಂಕ | ಖಾಸಗಿ ಸಂಸ್ಥೆಗಳ ಹೆಸರು |
|---|---|---|---|
| 1 | ನಾಗವಾರ ಕೆರೆ | 27.11.2004 | ಮೆ: ಲುಂಬಿನಿ ಗಾರ್ಡನ್ಸ್, ಬೆಂಗಳೂರು. |
| 2 | ವೆಂಗಯ್ಯನ ಕೆರೆ | 23.05.2005 | ಮೆ: ಪಾರ್ ಸಿ. ಬೆಂಗಳೂರು |
| 3 | ಹೆಬ್ಬಾಳ ಕೆರೆ | 19.05.2006 | ಮೆ: ಇ.ಐ.ಹೆಚ್. ಲಿಮಿಟೆಡ್, ಬೆಂಗಳೂರು |

<table>
<tr>
<td></td>
<td></td>
<td></td>
<td></td>
<td>
<table>
<tr><td>4</td><td>ಅಗರ ಕೆರೆ</td><td>10.04.2007</td><td>ಮೆ: ಬೈಯೋಟಾ ನ್ಯಾಚುರಲ್ ಸಿಸ್ಟಮ್ ಪ್ರೈ., ಲಿ., ಹೈದರಾಬಾದ್</td></tr>
</table>
ಈ ಮೇಲಿನ ನಾಲ್ಕು ಕೆರೆಗಳ ಪೈಕಿ ಎರಡು ಕೆರೆಗಳಾದ ಕ್ರಮ ಸಂಖ್ಯೆ: 2) ವೆಂಗಯ್ಯನ ಕೆರೆ ಮತ್ತು ಕ್ರಮ ಸಂಖ್ಯೆ 4) ಅಗರ ಕೆರೆಗಳ ಗುತ್ತಿಗೆ ಕರಾರನ್ನು ಕ್ರಮವಾಗಿ ದಿನಂಕ: 17.09.2009 ಮತ್ತು 09.05.2017ರಂದು ರದ್ದುಗೊಳಿಸಲಾಗಿದೆ ಹಾಗೂ ಈ ಎರಡೂ ಕೆರೆಗಳನ್ನು ಕರ್ನಾಟಕ ಸರೋವರ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರದ ಸುಪರ್ದಿಗೆ ತೆಗೆದುಕೊಂಡು ಸದ್ಯ ಪ್ರಾಧಿಕಾರವೇ ಈ ಕೆರೆಗಳ ನಿರ್ವಹಣೆ ಮಾಡುತ್ತಿರುತ್ತದೆ.
ಉಳಿದಂತೆ, ಕ್ರಮ ಸಂಖ್ಯೆ 1) ನಾಗವಾರ ಕೆರೆ ಮತ್ತು 3) ಹೆಬ್ಬಾಳ ಕೆರೆಗಳ ಗುತ್ತಿಗೆ ಅವಧಿಯು ಅನುಕ್ರಮವಾಗಿ ದಿನಾಂಕ: 26.11.2019 ಮತ್ತು 18.05.2021ರಂದು ಮುಕ್ತಾಯಗೊಳ್ಳಲಿದ್ದು, ಅವುಗಳನ್ನು ಹಿಂಪಡಯುವ ಬಗ್ಗೆ ಕರಾರು ಒಪ್ಪಂದದಂತೆ ನಿಯಮಾನುಸಾರ ಕ್ರಮವಹಿಸಲಾಗುವುದು.
ಭರವಸೆಯ ಎರಡನೇ ಭಾಗಕ್ಕೆ ಸಂಬಂಧಿಸಿದಂತೆ, ದಿನಾಂಕ: 25.06.2008 ರಂದು ಮಾನ್ಯ ವಿಧಾನ ಪರಿಷತ್ತಿನಲ್ಲಿ ನೀಡಿದ ನಿಯಮ 330ಎ – ವಿಶೇಷ ಪ್ರಸ್ತಾವದ ಮೇಲೆ ತೆಗೆದುಕೊಂಡ ನಿರ್ಣಯದಂತೆ ಕರ್ನಾಟಕ ರಾಜ್ಯದ ಯಾವುದೇ ಕೆರೆಗಳನ್ನು ಖಾಸಗೀಕರಣ ಗೊಳಿಸಬಾರದೆಂಬ ಸೂಚನೆಯನ್ನು ಸಂಬಂಧಪಟ್ಟವರಿಗೆ ಸರ್ಕಾರದ ಪತ್ರ ಸಂಖ್ಯೆ: ಅಪಜೀ 110 ಇಸಿಓ 2008, ದಿನಾಂಕ: 08.09.2008ರಂತೆ ಪತ್ರ ಬರೆಯಲಾಗಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ಸಮಿತಿಯು ತೀರ್ಮಾನಿಸಿತು.
</td>
</tr>
</table>

| | | | | |
|---|---|---|---|---|
| 3. | 4733 ಚು.ರ.ಪ್ರ: 242/2015 ಶ್ರೀ ಆರ್. ಧರ್ಮಸೇನಾ ವಿಪನದಿ: 04.02.2015 | ಕರ್ನಾಟಕ ಅರಣ್ಯ ಕೈಗಾರಿಕಾ ಅಭಿವೃದ್ಧಿ ನಿಗಮದಲ್ಲಿ ಮೈಸೂರು ಹಾಗೂ ಚಾಮರಾಜನಗರಕ್ಕೆ ಸಂಬಂಧಪಟ್ಟಂತೆ ಅನುಕಂಪ ಆಧಾರದ ಮೇಲೆ ನೇಮಕಾತಿಗಾಗಿ ಬಂದಿರುವ ಅರ್ಜಿಗಳು | ಕಳೆದ 03 ವರ್ಷಗಳಿಂದ 03 ಅರ್ಜಿಗಳನ್ನು ಸ್ವೀಕರಿಸಲಾಗಿದೆ. 03 ಅರ್ಜಿದಾರರಲ್ಲಿ ಇಬ್ಬರು ಪರಿಶಿಷ್ಟ ಜಾತಿಗೆ ಸೇರಿದವರಾಗಿರುತ್ತಾರೆ. ಅರ್ಜಿ ವಿಲೇವಾರಿ ಮಾಡುವ ಕ್ರಮ ಪರಿಶೀಲನೆಯಲ್ಲಿದೆ ಎಂದು ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ತಿಳಿಸಿದರು. | ದಿನಾಂಕ: 02.03.2018ರಂದು ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ಕರ್ನಾಟಕ ರಾಜ್ಯ ಅರಣ್ಯ ಕೈಗಾರಿಕಾ ಅಭಿವೃದ್ಧಿ ನಿಗಮದಲ್ಲಿ ಮೈಸೂರು ಘಟಕ ವ್ಯಾಪ್ತಿಗೆ ಸಂಬಂಧಿಸಿದಂತೆ ಅನುಕಂಪ ಆಧಾರದ ಮೇಲೆ ನೇಮಕ ಕೋರಿ ಸಲ್ಲಿಸಿರುವ 3 ಅರ್ಜಿಗಳನ್ನು ಪರಿಶೀಲಿಸಲಾಗಿದ್ದು, ಸದರಿ ನೇಮಕಾತಿಗೆ ಸರ್ಕಾರದ ಆದೇಶ ಸಂಖ್ಯೆ: ಅಪಜೀ 44 ಎಫ್‌ಪಿಸಿ 2017, ದಿನಾಂಕ: 31.10.2017ರಲ್ಲಿ ನೇಮಕಾತಿಗೆ ಅನುಮೋದನೆ ದೊರೆತಿರುತ್ತದೆ. ಸದರಿ 3 ಜನ 'ಡಿ' ದರ್ಜೆಯವರಾಗಿರುವುದರಿಂದ 'ಡಿ' ದರ್ಜೆ ಅನುಕಂಪದ ನೇಮಕಾತಿ ಬಗ್ಗೆ ದಿನಾಂಕ: 28.02.2018ರ ನಿರ್ದೇಶಕ ಮಂಡಳಿಯ ಸಭೆಯಲ್ಲಿ ತೀರ್ಮಾನಕ್ಕಾಗಿ ಮಂಡಿಸಲಾಗಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ಸಮಿತಿಯು ತೀರ್ಮಾನಿಸಿತು. |
| 4. | 2767 ಚು.ರ.ಪ್ರ: 822 ಶ್ರೀ ಮರಿತಿಬ್ಬೇಗೌಡ ವಿಪನದಿ: 25.07.2007 | ಸಾಮಾಜಿಕ ಅರಣ್ಯ ಅಭಿವೃದ್ಧಿ ಜಾರಿಗೊಳಿಸುವಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರ ಪ್ರಕರಣಗಳಲ್ಲಿನ ತಪ್ಪಿತಸ್ಥರ ಮೇಲೆ ಕೈಗೊಂಡಿರುವ ಶಿಸ್ತಿನ ಕ್ರಮದ ಬಗ್ಗೆ. | ಎರಡು ಅವ್ಯವಹಾರ ಪ್ರಕರಣಗಳು ತನಿಖೆಯ ಹಂತದಲ್ಲಿರುತ್ತವೆ. ತನಿಖೆಯ ವರದಿ ಆಧರಿಸಿ ಕಾನೂನು ಅನ್ವಯ ಶಿಸ್ತು ಕ್ರಮ ಕೈಗೊಳ್ಳಲಾಗುವುದೆಂದು ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ತಿಳಿಸಿದರು. | ದಿನಾಂಕ: 02.03.2018ರಂದು ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ಸಾಮಾಜಿಕ ಅರಣ್ಯ ಅಭಿವೃದ್ಧಿ ಯೋಜನೆಯನ್ನು ಜಾರಿಗೊಳಿಸುವಲ್ಲಿ ಅವ್ಯವಹಾರ ನಡೆದಿದೆ ಎನ್ನಲಾದ ಎರಡು ಪ್ರಕರಣಗಳ ಪೈಕಿ ಮೊದಲನೇ ಪ್ರಕರಣದಲ್ಲಿ ಭಾಗಿಯಾಗಿದ್ದಾರೆ ಎನ್ನಲಾದ ಶ್ರೀ ಆರ್.ಎನ್. ಕಾಡುಸಿದ್ದೇಶ್ವರ ಮಠ, ಹಿಂದಿನ ವಲಯ ಅರಣ್ಯಾಧಿಕಾರಿ, ಬಿಜಾಪುರ ಸಾಮಾಜಿಕ ಅರಣ್ಯ ವಿಭಾಗ, ಇಂಡಿ ವಲಯ ಇವರ ಮೇಲಿನ 9 ಆರೋಪಗಳ ಬಗ್ಗೆ ಸಕ್ರಮ ಶಿಸ್ತು ಪ್ರಾಧಿಕಾರಿಯಾಗಿ ಪ್ರ.ಮು.ಅ.ಸಂ.ರವರು ವಿವರವಾದ ಇಲಾಖಾ ವಿಚಾರಣೆಯನ್ನು ಜರುಗಿಸಿದ್ದರು. ವಿಚಾರಣಾ ಪ್ರಕ್ರಿಯೆಯಲ್ಲಿ 9 ಆರೋಪಗಳ ಪೈಕಿ 5 ಆರೋಪಗಳು ರುಜುವಾತಾಗಿಲ್ಲವೆಂದು ಹಾಗೂ 4 ಆರೋಪಗಳ ರುಜುವಾತಾಗಿದ್ದು, ಆರೋಪಿತರು ಆರ್ಥಿಕ ನಷ್ಟವನ್ನು ಅನಂತರ ಪಾವತಿಸಿದ್ದರಿಂದ, ಅವರಿಗೆ ಒಂದು ವಾರ್ಷಿಕ ಬಡ್ತಿಯನ್ನು ಸಂಚಿತ ಪರಿಣಾಮ ರಹಿತವಾಗಿ ತಡೆಹಿಡಿಯಲು ಪ್ರಮುಅಸಂರವರು ದಿನಾಂಕ: 15.06.2009ರಲ್ಲಿ ಆದೇಶಿಸಿದ್ದರು.<br><br>ಮುಂದುವರೆದು, ಸಾಮಾಜಿಕ ಅರಣ್ಯ ಅಭಿವೃದ್ಧಿ ಯೋಜನೆಯನ್ನು ಜಾರಿಗೊಳಿಸುವಲ್ಲಿ ಅವ್ಯವಹಾರ ನಡೆದಿದೆ ಎನ್ನಲಾದ ಎರಡು ಪ್ರಕರಣಗಳ ಪೈಕಿ ಎರಡನೇ ಪ್ರಕರಣದಲ್ಲಿ ಶ್ರೀ ಮುತ್ತಣ್ಣ ಟಿ. ದಾಂಗೆ, ವಲಯ |

| | | | | |
|---|---|---|---|---|
| | | | | ಅರಣ್ಯಾಧಿಕಾರಿ ಇವರ ವಿರುದ್ಧದ ಬಳ್ಳಾರಿ ಲೋಕಾಯುಕ್ತ ಪೊಲೀಸ್ ಠಾಣೆಯಲ್ಲಿನ ಮೊಕದ್ದಮೆ ಸಂಖ್ಯೆ: 2/2006ರ ಪ್ರಕರಣದಲ್ಲಿ ಬಳ್ಳಾರಿಯ ಪ್ರಧಾನ ಜಿಲ್ಲಾ ಮತ್ತು ಸತ್ರ ವಿಶೇಷ ನ್ಯಾಯಾಲಯವು ಆರೋಪಿತರನ್ನು ಖುಲಾಸೆ ಮಾಡಿದ ಬಾಬ್ತು ಒಳಾಡಳಿತ ಇಲಾಖೆಯು ದಿನಾಂಕ: 19.05.2014ರ ಪತ್ರದಲ್ಲಿ ಈ ಪ್ರಕರಣದಲ್ಲಿ ಮೇಲ್ಮನವಿ ಸಲ್ಲಿಸುವ ಅಗತ್ಯತೆ ಇಲ್ಲವೆಂದು ಸ್ಪಷ್ಟಪಡಿಸಿದ್ದರ ಹಿನ್ನೆಲೆಯಲ್ಲಿ ಲೋಕಾಯುಕ್ತ ಸಂಸ್ಥೆಯು ಯಾವುದೇ ಮುಂದಿನ ನ್ಯಾಯಿಕ ಪ್ರಕ್ರಿಯೆಯನ್ನು ಜರುಗಿಸಿರುವುದಿಲ್ಲ.<br><br>ದಿನಾಂಕ: 16.12.2016ರಂದು ನಡೆದಿದ್ದ ವಿಧಾನ ಪರಿಷತ್ತಿನ ಸರ್ಕಾರಿ ಭರವಸೆಗಳ ಸಮಿತಿ ಸಭೆಯಲ್ಲಿ ಮೊದಲ ಪ್ರಕರಣದಲ್ಲಿ ಆಗಿರುವ ಆರ್ಥಿಕ ನಷ್ಟವನ್ನು ಪರಿಗಣಿಸಿದಾಗ ವಿಧಿಸಿರುವ ದಂಡನೆಯು ಸಮರ್ಥನೀಯವಲ್ಲವೆಂದು ಅಭಿಪ್ರಾಯಿಸಿ, ದಂಡನಾದೇಶವನ್ನು ಪುನರ್ ಪರಿಶೀಲಿಸಲು ಸೂಚಿಸಿತು ಹಾಗೂ ಎರಡನೇ ಪ್ರಕರಣದಲ್ಲಿ ಅಬಿಯೋಜನೆ ವಿಭಾಗವು ಸಮರ್ಪಕವಾಗಿ ಕಾರ್ಯ ನಿರ್ವಹಿಸಲ್ಲವೆಂದು ಅಭಿಪ್ರಾಯಿಸಿ ಈ ಬಗ್ಗೆ ಸರ್ಕಾರದ ಉನ್ನತ ಹಂತದಲ್ಲಿ ವಿಮರ್ಶಿಸುವ ಅಗತ್ಯತೆಯನ್ನು ಸ್ಪಷ್ಟಪಡಿಸಿತ್ತು.<br>ಮೊದಲ ಪ್ರಕರಣಕ್ಕೆ ಸಂಬಂಧಿಸಿದಂತೆ ಸರ್ಕಾರವು ಸಿಸಿಎ ನಿಯಮಾವಳಿಯ ನಿಯಮ 26ರಡಿಯಲ್ಲಿ ಪುನರ್ ಪರಿಶೀಲನೆ ನಡೆಸಿ ಆಪಾದಿತರಿಂದಾದ ಹಣ ದುರುಪಯೋಗದ ಈ ವರ್ತನೆಯು 'ಭ್ರಷ್ಟಾಚಾರ' ಪರಿವ್ಯಾಪ್ತಿಯಲ್ಲಿ ವರ್ಗೀಕೃತವಾಗುತ್ತದೆ; ಹೀಗಾಗಿ, ಸಿಸಿಎ ನಿಯಮಾವಳಿಗಳ ನಿಯಮ 8ರ ಅಡಿಯಲ್ಲಿನ ವಿವರಣೆ 1 ರ ಪ್ರಕಾರ ಇದು 1988ರ ಭ್ರಷ್ಟಾಚಾರ ಪ್ರತಿಬಂಧಕ ಕಾಯ್ದೆಯ ಸೆಕ್ಷನ್ 13ಕ್ಕೆ ಸಮಾನವಾಗಿ ಗುರುತಿಸಲಾಗಿರುವುದರಿಂದ ಈ ಪ್ರಕರಣದಲ್ಲಿ ದುರ್ನಡತೆಯ ಸ್ವರೂಪ ಮತ್ತು ಗಂಭೀರತೆಯನ್ನು ಪರಿಗಣಿಸಿ ಸಿ. ಸಿ.ಎ. ನಿಯಮಾವಳಿಯ ನಿಯಮ 8 ಉಪ ನಿಯಮ (4) ರಿಂದ (7) ರಲ್ಲಿ ನಿರ್ದಿಷ್ಟಪಡಿಸಿದ ದಂಡನೆಗಳ ಪೈಕಿ ರುಜುವಾತಾದ ಆರೋಪದ ತೀವ್ರತೆಗೆ ತಕ್ಕಂತಹ ದಂಡನೆಯನ್ನು ವಿಧಿಸಲು ಸ್ವತಂತ್ರ ನಿರ್ಧಾರ ಕೈಗೊಂಡು ಪರಿಷ್ಕೃತ ದಂಡನಾದೇಶ ಹೊರಡಿಸಲು ಸದರಿ ನಿಯಮಾವಳಿಯ ನಿಯಮ 26(ಸಿ) ಅಡಿಯಲ್ಲಿ ಶಿಸ್ತು ಪ್ರಾಧಿಕಾರವಾದ |

| | | | | |
|---|---|---|---|---|
| | | | | ಪ್ರಮುಅಸಂರವರಿಗೆ ದಿನಾಂಕ: 20.04.2017ರಲ್ಲಿ ಆದೇಶಿಸಿತ್ತು. ಪ್ರಮುಅಸಂರವರು ಪ್ರಸ್ತುತ ದಿನಾಂಕ: 27.02.2018ರ ತಮ್ಮ ನಡವಳಿಯಲ್ಲಿ ಪುನರ್ ಪರಿಶೀಲನಾ ಪ್ರಾಧಿಕಾರವಾದ ಸರ್ಕಾರದ ಆದೇಶವನ್ನು, ಅದರ ಗಂಭೀರತೆಯನ್ನು ಪರಿಗಣನೆಗೆ ತೆಗೆದುಕೊಳ್ಳದೇ ಈ ಹಿಂದಿನ ದಿನಾಂಕ: 15.06.2009ರ ದಂಡನಾದೇಶವನ್ನೇ ಸ್ಥಿರೀಕರಿಸಿರುತ್ತಾರೆ.<br>ಎರಡನೇ ಪ್ರಕರಣಕ್ಕೆ ಸಂಬಂಧಿಸಿದಂತೆ, ಸರ್ಕಾರಿ ನೌಕರರ ಮೇಲೆ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಲು ಅಗತ್ಯ ದಾಖಲಾತಿಗಳನ್ನು ಪರಾಮರ್ಶಿಸಿ ಅನುಮತಿಸುವುದಷ್ಟೇ ಶಿಸ್ತು ಪ್ರಾಧಿಕಾರದ ಕರ್ತವ್ಯವಾಗಿರುತ್ತದೆ. ಮುಂದಿನ ನ್ಯಾಯಿಕ ಪ್ರಕ್ರಿಯೆಯನ್ನು ಜರುಗಿಸುವ ಜವಾಬ್ದಾರಿಯು ಅಭಿಯೋಜಕ ಪ್ರಾಧಿಕಾರದ್ದಾಗಿರುತ್ತದೆ. ಈ ಪ್ರಕರಣದಲ್ಲಿ ನ್ಯಾಯಿಕ ಪ್ರಕ್ರಿಯೆಯಲ್ಲಿ ಅಭಿಯೋಜಕ ಪ್ರಾಧಿಕಾರಕ್ಕೆ ಹಿನ್ನಡೆಯಾಗಿದ್ದು ಒಳಾಡಳಿತ ಇಲಾಖೆಯು ತತ್ಸಂಬಂಧ ಸಕ್ಷಮ ಪ್ರಾಧಿಕಾರವಾಗಿ ತೀರ್ಪಿನ ಮೇಲೆ ಮೇಲ್ಮನವಿ ಅಗತ್ಯವಿಲ್ಲವೆಂದು ತೀರ್ಮಾನವನ್ನು ತೆಗೆದುಕೊಂಡು ಅಭಿಯೋಜಕ ಪ್ರಾಧಿಕಾರವಾದ ಕರ್ನಾಟಕ ಲೋಕಾಯುಕ್ತ ಸಂಸ್ಥೆಗೆ ತಿಳಿಸಿರುತ್ತದೆ. ಹೀಗಾಗಿ, ಶಿಸ್ತು ಪ್ರಾಧಿಕಾರವಾದ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿರವರಾಗಲೀ ಅಥವಾ ತತ್ಸಂಬಂಧ ಸರ್ಕಾರದಲ್ಲಿನ ಆಡಳಿತ ಇಲಾಖೆಯಾದ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆಯಾಗಲೀ ಯಾವುದೇ ಪರ್ಯಾಯ ಕ್ರಮ ಜರುಗಿಸಲು ಅವಕಾಶವಿರುವುದಿಲ್ಲ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ಸಮಿತಿಯು ತೀರ್ಮಾನಿಸಿತು. |
| 5. | 4117<br>ಚು.ಗು.ಪ್ರ: 215<br>ಶ್ರೀ ಆರ್.ವಿ.ವೆಂಕಟೇಶ್<br>ವಿಪನದಿ:<br>28.03.2012 | ಪಶ್ಚಿಮ ಘಟ್ಟಗಳ ಸಮಗ್ರ ಸಂರಕ್ಷಣೆ ಮತ್ತು ಸುಸ್ಥಿತಿ ಅಭಿವೃದ್ಧಿಗೆ ಪಶ್ಚಿಮಘಟ್ಟ ಕಾರ್ಯಪಡೆ ಮಾಡಿರುವ ಶಿಫಾರಸ್ಸುಗಳನ್ನು ಅನುಷ್ಠಾನಕ್ಕೆ ತರುವ ಬಗ್ಗೆ. | ಸದರಿ ಶಿಫಾರಸ್ಸುಗಳು ಸರ್ಕಾರದ ಹಂತದಲ್ಲಿ ಪರಿಶೀಲನೆಯಲ್ಲಿದೆ ಎಂದು ಅರಣ್ಯ ಸಚಿವರು ತಿಳಿಸಿದರು. | ದಿನಾಂಕ: 02.03.2018ರಂದು ಸಮಿತಿ ಸಭೆಯಲ್ಲಿ ಚರ್ಚಿಸಿದಾಗ ಪಶ್ಚಿಮಘಟ್ಟ ಕಾರ್ಯಪಡೆಯ ಶಿಫಾರಸ್ಸುಗಳ ಮೇಲೆ ಕೈಗೊಂಡ ಕ್ರಮಗಳ ಮಾಹಿತಿಯನ್ನು ಒದಗಿಸುವಂತೆ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯ ಪಡೆ, ಮುಖ್ಯಸ್ಥರು) ರವರನ್ನು ಪತ್ರ ಸಂಖ್ಯೆ: ಅಪಜೀ 129 ಎಫ್‌ಎಸಿ 2009, ದಿನಾಂಕ: 14.02.2011ರಲ್ಲಿ ಕೋರಲಾಗಿ, ದಿನಾಂಕ: 26.02.2018ರಂದು ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಯವರು ಪಶ್ಚಿಮಘಟ್ಟ ಕಾರ್ಯಪಡೆಯ ಶಿಫಾರಸ್ಸುಗಳ ಮೇಲೆ ಕೈಗೊಂಡ ಕ್ರಮಗಳ ಮಾಹಿತಿಯನ್ನು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ. ಸರ್ಕಾರದ ಹಂತದಲ್ಲಿ |

| | | | | |
|---|---|---|---|---|
| | | | | ಪರಿಶೀಲನೆಯಲ್ಲಿರುತ್ತದೆ. ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ಸಮಿತಿಯು ತೀರ್ಮಾನಿಸಿತು. |
| 6. | 3118<br>ಗ.ಸೆ.ಸೂ.<br>ಶ್ರೀ ಎಂ.ಸಿ. ನಾಣಯ್ಯ<br>ವಿಪನದಿ:<br>20.01.2009 | ಕೊಡಗು ಜಿಲ್ಲೆಯ ವಿರಾಜಪೇಟೆ ತಾಲ್ಲೂಕಿನ ಕುಟ್ಟಿಯಾಲದಲ್ಲಿ ನಬಾರ್ಡ್ ವತಿಯಿಂದ ಲಕ್ಷಾಂತರ ರೂಪಾಯಿ ವೆಚ್ಚದಲ್ಲಿ ನಿರ್ಮಿಸಿರುವ ಸೇತುವೆಗೆ ಸಂಪರ್ಕ ರಸ್ತೆ ಒದಗಿಸಲು ಸಂಬಂಧಪಟ್ಟ ಇಲಾಖೆ ಆದೇಶ ಹೊರಡಿಸಿದ್ದರೂ ಸಹ ವನ್ಯ ಜೀವಿ ಉಪ ಸಂರಕ್ಷಣಾಧಿಕಾರಿಗಳು ತಡೆಯೊಡ್ಡುತ್ತಿರುವುದರಿಂದ ಆಗುತ್ತಿರುವ ತೊಂದರೆ ಬಗ್ಗೆ | ಶ್ರೀಮಂಗಲ ವಲಯ ವ್ಯಾಪ್ತಿಯ ಬಿಟ್ಟಂಗಲ–ಕುಟ್ಟಿಯಾಲ–ವಿಭಾಗಕ್ಕೆ (14.00 ಕಿ.ಮೀ.ದಿಂದ 15.39 ಕಿ.ಮೀ.) ರಸ್ತೆ ಸಂಪರ್ಕಕ್ಕೆ 0.72 ಹೆಕ್ಟೇರ್‌ಗಳಷ್ಟು ಬ್ರಹ್ಮಗಿರಿ ವನ್ಯಧಾಮದ ರಕ್ಷಿತ ಅರಣ್ಯ ಪ್ರದೇಶದ ಜಮೀನಿನ ಅವಶ್ಯಕತೆ ಇರುತ್ತದೆ ಎಂದು ತಿಳಿಸಿದ್ದು, ಸದರಿ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ ಎಂದು ಮಾನ್ಯ ಮುಖ್ಯಮಂತ್ರಿಗಳು ತಿಳಿಸಿದರು. | ದಿನಾಂಕ: 02.03.2018ರಂದು ಸಮಿತಿ ಸಭೆಯಲ್ಲಿ ಚರ್ಚಿಸಿದಾಗ ದಿನಾಂಕ: 13.01.2017ರಂದು ನಡೆದ ಕರ್ನಾಟಕ ವಿಧಾನ ಪರಿಷತ್ತಿನ ಭರವಸೆಗಳ ಸಮಿತಿಯಲ್ಲಿನ ನಿರ್ದೇಶನದನ್ವಯ ದಿನಾಂಕ: 06.02.2017ರಂದು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಅಪಜೀ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ಸಭೆ ನಡೆಸಲಾಗಿದ್ದು, ಪ್ರಸ್ತಾಪಿತ ಸೇತುವೆಗೆ ಕೂಡು ರಸ್ತೆ ನಿರ್ಮಾಣ ಮಾಡುವುದಕ್ಕೆ ಸಂಬಂಧಿಸಿದಂತೆ ಕಾಮಗಾರಿಯನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ನಿರ್ವಹಿಸಬೇಕಾದ್ದನ್ನು ತೀರ್ಮಾನಿಸಿದಂತೆ ದಿನಾಂಕ: 27.02.2017 ಹಾಗೂ 10.05.2017ರಂದು ಅರಣ್ಯ ಇಲಾಖಾ ವತಿಯಿಂದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಗೆ ಪತ್ರ ಬರೆಯಲಾಗಿದೆ. ತತ್ಸಂಬಂಧದಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು ದಿನಾಂಕ: 19.05.2017ರ ಪತ್ರದಲ್ಲಿ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್ ಕೊಡಗು ಇವರಿಗೆ ಸೇತುವೆ ಕಾಮಗಾರಿಯನ್ನು 2017–18ನೇ ಸಾಲಿಗೆ ಬಿಡುಗಡೆ ಮಾಡಿದ ಟಾಸ್ಕ್ ಫೋರ್ಸ್ ಅನುದಾನದಲ್ಲಿ ಆಧ್ಯತೆ ಮೇರೆಗೆ ಕೈಗೊಳ್ಳಲು ನಿರ್ದೇಶಿಸಿರುತ್ತದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ಸಮಿತಿಯು ತೀರ್ಮಾನಿಸಿತು. |
| 7. | 5410<br>ಚು.ಗು.ಪ್ರ. 2149<br>ಶ್ರೀ ಆರ್. ಧರ್ಮಸೇನ<br><br>(ಉಪ ಪ್ರಶ್ನೆ)<br>ಶ್ರೀ ಸಂದೇಶ್ ನಾಗರಾಜ್ | ಮೈಸೂರಿನಲ್ಲಿರುವ ಶ್ರೀ ಚಾಮರಾಜೇಂದ್ರ ಮೃಗಾಲಯದಲ್ಲಿ ಒಂದು ಗೇಟು ಇದ್ದು, ಮತ್ತೊಂದು ಗೇಟು ತೆರೆಯುವುದರ ಜೊತೆಗೆ ಮೃಗಾಲಯದ ಮುಂದಿರುವ ಅರಮನೆಗೆ ಸೇರಿದ 20 ಎಕರೆ | ಮೈಸೂರು ಮೃಗಾಲಯದಲ್ಲಿ ಪಾರ್ಕಿಂಗ್ ಬಗ್ಗೆ ಕೇಳಿರುವ ಉಪಪ್ರಶ್ನೆಯ ಬಗ್ಗೆ ಏನು ಕ್ರಮ ಕೈಗೊಳ್ಳಬಹುದೆಂದು ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ಮಾನ್ಯ ಅರಣ್ಯ ಸಚಿವರು ತಿಳಿಸಿದರು. | ದಿನಾಂಕ: 02.03.2018ರಂದು ಸಮಿತಿ ಸಭೆಯಲ್ಲಿ ಚರ್ಚಿಸಿದಾಗ ಶ್ರೀ ಚಾಮರಾಜೇಂದ್ರ ಮೃಗಾಲಯದ ಈಶಾನ್ಯ ಭಾಗದ ಜಾಗವು ಅರಮನೆಗೆ ಸೇರಿದ ಆಸ್ತಿಯಾಗಿದ್ದು, ಸದರಿ ಜಾಗದಲ್ಲಿ ಪಾರ್ಕಿಂಗ್ ವ್ಯವಸ್ಥೆ ಮಾಡಲು ಉದ್ದೇಶಿಸಿದ್ದು, ಅರಮನೆಯ ವಾರಸುದಾರರಿಗೆ ಸದರಿ ಜಾಗವನ್ನು ಪಾರ್ಕಿಂಗ್ ವ್ಯವಸ್ಥೆ ಕಲ್ಪಿಸಲು ಮೃಗಾಲಯಕ್ಕೆ ನೀಡಲು ಕೇಳಿಕೊಳ್ಳಲಾಯಿತು. ಆದರೆ ಅರಮನೆಯ ವಾರಸುದಾರರು ಈ ಪ್ರಸ್ತಾವನೆಗೆ ಒಪ್ಪಿಗೆ ನೀಡಿರುವುದಿಲ್ಲ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ಸಮಿತಿಯು ತೀರ್ಮಾನಿಸಿತು. |

| | | | | |
|---|---|---|---|---|
| | ವಿಪನದಿ: 30.07.2014 | ಭೂಮಿಯನ್ನು ವಶಪಡಿಸಿಕೊಂಡು ಅಲ್ಲಿ ಪಾರ್ಕಿಂಗ್ ವ್ಯವಸ್ಥೆ ಮಾಡಿ ಅಲ್ಲಿರುವ ಮನೆಯ ನಿವಾಸಿಗಳಿಗೆ ತೊಂದರೆ ತಪ್ಪಿಸುವ ಬಗ್ಗೆ. | | |
| 8. | 5412<br>ಚು.ಗು.ಪ್ರ. 2179<br>ಶ್ರೀ ಆಚಾರ್ ಹಾಲಪ್ಪ ಬಸಪ್ಪ (ಉಪ ಪ್ರಶ್ನೆ)<br>ಶ್ರೀ ಅಮರನಾಥ್ ಪಾಟಿಲ್<br>ವಿಪನದಿ:30.07.2014 | ಕೊಪ್ಪಳ ಜಿಲ್ಲೆಯಲ್ಲಿ ಜಿಂಕೆ ಹಾವಳಿಯಿಂದ ರೈತರು ಕಂಗಾಲಾಗಿದ್ದು, ಜಿಂಕೆಗಳಿಗೆ ಪ್ರತ್ಯೇಕವಾಗಿ ಜಿಂಕೆ ವಲಯಗಳನ್ನು ಸ್ಥಾಪಿಸಲು ಕ್ರಮ ಕೈಗೊಳ್ಳುವ ಬಗ್ಗೆ. | ಜಿಂಕೆಗಳಿಗೆ ಪ್ರತ್ಯೇಕವಾಗಿ ಜಿಂಕೆ ವಲಯಗಳನ್ನು ಹಾಗೂ ಅವುಗಳನ್ನು ಸ್ಥಳಾಂತರ ಮಾಡುವ ಬಗ್ಗೆ ಪರಿಶೀಲನೆ ಮಾಡುತ್ತೇನೆ. ನಾನು ಒಂದು ಸಾರಿ ಆ ಸ್ಥಳಗಳಿಗೆ ಭೇಟಿ ಕೊಡುತ್ತೇನೆ. ಇದು ನಾಲ್ಕೈದು ಜಿಲ್ಲೆಗಳಲ್ಲಿರುವ ಸಮಸ್ಯೆಯಾಗಿದೆ. ಇದರಿಂದ ರೈತರು ಆತಂಕ ಪಡುತ್ತಿರುವುದು ಸತ್ಯವಾಗಿದೆ. ಇದರ ಬಗ್ಗೆ ಪರಿಶೀಲನೆ ಮಾಡಿ ಕ್ರಮ ತೆಗೆದುಕೊಳ್ಳುತ್ತೇನೆ ಎಂದು ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ತಿಳಿಸಿದರು. | ದಿನಾಂಕ: 02.03.2018ರಂದು ಸಮಿತಿ ಸಭೆಯಲ್ಲಿ ಚರ್ಚಿಸಿದಾಗ ಕೊಪ್ಪಳ ಜಿಲ್ಲೆಯಲ್ಲಿ ಕೃಷ್ಣಮೃಗಗಳ ಹಾವಳಿ ವಿಪರೀತವಾಗಿದ್ದು, ರೈತರನ್ನು ಸಂಕಷ್ಟಕ್ಕೆ ಸಿಲುಕಿಸಿರುತ್ತವೆ. ಕೃಷ್ಣಮೃಗಗಳು ಯಾವುದೇ ಜಾಗದಲ್ಲಿ ನಿರ್ಧಿಷ್ಟವಾಗಿ ನಿಲ್ಲದೆ ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ಸಂಚರಿಸುತ್ತಿರುತ್ತವೆ. ಕೊಪ್ಪಳದಲ್ಲಿ ಹೆಚ್ಚು ವಿಸ್ತೀರ್ಣವುಳ್ಳ ಅರಣ್ಯ ಪ್ರದೇಶವಿಲ್ಲದ ಕಾರಣ ಕೃಷ್ಣಮೃಗಗಳಿಗೆ ನಿರ್ದಿಷ್ಟ ಜಾಗವನ್ನು ಕಲ್ಪಿಸಿ ವನ್ಯಧಾಮವನ್ನು ಮಾಡಲು ಸಾಧ್ಯವಾಗುತ್ತಿಲ್ಲ. ಬಹಳ ಹಿಂದೆ ಈ ಪ್ರಾಂತ್ಯದಲ್ಲಿ ಚೀತಾ ವನ್ಯ ಮೃಗವಿದ್ದು ಕೃಷ್ಣ ಮೃಗಗಳ ಸಂತತಿಯನ್ನು ನಿಯಂತ್ರಿಸುತ್ತಿತ್ತು. ಚೀತಾ ಈಗ ನಶಿಸಿಹೋಗಿರುವುದರಿಂದ ಕೃಷ್ಣಮೃಗಗಳ ಸಂತತಿ ಹೆಚ್ಚಾಗಿ ರೈತರಿಗೆ ಸಂಕಷ್ಟ ನೀಡುತ್ತಿರುವುದು ಸತ್ಯ ಸಂಗತಿ. ಈ ಪ್ರಾಣಿಗಳನ್ನು ನಿಯಂತ್ರಿಸಬೇಕಾದರೆ ಸಂತಾನ ಹರಣ ಚಿಕಿತ್ಸೆಯೊಂದು ಸುಲಭಸಾಧ್ಯವಾದ ಮಾರ್ಗವಾಗಿರುತ್ತದೆ. ಈ ನಿಟ್ಟಿನಲ್ಲಿ ಸೂಕ್ತ ಮಾರ್ಗೋಪಾಯ ಕಂಡುಕೊಳ್ಳಲು ಚಿಂತಿಸಲಾಗುತ್ತಿದೆ. ಕೃಷ್ಣಮೃಗಗಳ ದಾಳಿಯಿಂದ ಉಂಟಾದ ಬೆಳೆಹಾನಿಗೆ ಪ್ರಸ್ತುತ ಚಾಲ್ತಿಯಲ್ಲಿರುವ ಸರ್ಕಾರಿ ಆದೇಶದಂತೆ 2017–18ನೇ ಸಾಲಿನಲ್ಲಿ ಕೊಪ್ಪಳ ಜಿಲ್ಲೆಯಲ್ಲಿ 14 ಬೆಳೆ ಹಾನಿ ಪ್ರಕರಣಗಳು ಉಂಟಾಗಿದ್ದು, ಸದರಿ ಪ್ರಕರಣಗಳಿಗೆ ರೂ. 93,000/– ದಯಾತ್ಮಕ ಧನ ಪಾವತಿಸಲಾಗಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ಸಮಿತಿಯು ತೀರ್ಮಾನಿಸಿತು. |
| | | | | |

| | | | | |
|---|---|---|---|---|
| 9. | 5413<br>ಚು.ಗು.ಪ್ರ. 2194<br>ಶ್ರೀಮತಿ ವಿಮಲಾಗೌಡ<br>ವಿಪನದಿ:30.07.2014 | ಭದ್ರಾ ಜಲಾಶಯದಿಂದ ಚಿತ್ರದುರ್ಗಕ್ಕೆ ನೀರು ತರುವಲ್ಲಿ ನಿರ್ಮಿಸುತ್ತಿರುವ ಮುಖ್ಯ ಕಾಲುವೆ ನಿರ್ಮಾಣ ಕಾಮಗಾರಿಗೆ ಒಳಪಡುವ ಭೂಮಿ, ಅರಣ್ಯ ಇಲಾಖೆಗೆ ಒಳಪಟ್ಟಿದ್ದು, ಅದನ್ನು ನೀಡಬೇಕೆಂದು ಎರಡು ವರ್ಷಗಳ ಹಿಂದೆ ಪ್ರಸ್ತಾವನೆ ಸಲ್ಲಿಸಿದ್ದು, ಇದುವರೆವಿಗೂ ಅರಣ್ಯ ಇಲಾಖೆ ಪ್ರಸ್ತಾವನೆಗೆ ಅನುಮೋದನೆ ನೀಡದಿರುವ ಬಗ್ಗೆ | ಅರಣ್ಯ ಭೂಮಿಯನ್ನು ಅರಣ್ಯೇತರ ಉದ್ದೇಶಕ್ಕೆ ಬಳಸಲು ಅರಣ್ಯ ಸಂರಕ್ಷಣಾ ಕಾಯ್ದೆ, 1980ರಡಿ ಕೇಂದ್ರ ಸರ್ಕಾರದ ಪೂರ್ವಾನುಮತಿ ಪಡೆಯುವುದು ಕಡ್ಡಾಯವಾಗಿದೆ. ಈ ಹಿನ್ನಲೆಯಲ್ಲಿ ಪ್ಯಾಕೇಜ್–1 ಮತ್ತು ಪ್ಯಾಕೇಜ್–3ರ ಪ್ರಸ್ತಾವನೆಗಳಿಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರಕ್ಕೆ ಕಳುಹಿಸಲು ಕ್ರಮವಹಿಸಲಾಗುತ್ತಿದೆ. ಪ್ಯಾಕೇಜ್–2 ಪ್ರಸ್ತಾವನೆಯು ಕ್ಷೇತ್ರ ಇಲಾಖೆಯಲ್ಲಿ ಪರಿಶೀಲನೆಯಲ್ಲಿರುತ್ತದೆ ಎಂದು ಮಾನ್ಯ ಅರಣ್ಯ ಸಚಿವರು ತಿಳಿಸಿದರು. | ದಿನಾಂಕ: 02.03.2018ರಂದು ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ಚಿತ್ರದುರ್ಗ ಬ್ರಾಂಚ್ ಕೆನಾಲ್ ನಿರ್ಮಿಸಲು ಭದ್ರಾ ಮೇಲ್ದಂಡೆ ಯೋಜನೆಗೆ ಚಿತ್ರದುರ್ಗ ಅರಣ್ಯ ವಲಯದ ಹೊಸದುರ್ಗದ ಜನಕಲ್, ದೇವರಗುಡ್ಡ ಮತ್ತು ಲಕ್ಕಿಹಳ್ಳಿ ಅರಣ್ಯ ಪ್ರದೇಶದ 111.57 ಹೆ. ಅರಣ್ಯ ಭೂಮಿಯನ್ನು ಭಾರತ ಸರ್ಕಾರದ ಅರಣ್ಯ ಮಂತ್ರಾಲಯದ ಅನುಮತಿ ಪಡೆದು ಸರ್ಕಾರದ ಆದೇಶ ಸಂಖ್ಯೆ: ಎಫ್ಇಇ 168 ಎಫ್ಎಲ್ಎಲ್ 2011, ದಿನಾಂಕ: 24.01.2018ರಲ್ಲಿ ಮಂಜೂರಾತಿ ನೀಡಲಾಗಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ಸಮಿತಿಯು ತೀರ್ಮಾನಿಸಿತು. |
| 10. | 5415<br>ಚು.ಗು.ಪ್ರ: 1023<br>ಶ್ರೀ ಅರುಣ ಶಹಾಪೂರ<br>ವಿಪನದಿ;<br>9.07.2014 | ಕೆ.ಸಿ.ಎಸ್.ಆರ್. ನಿಯಮ 32ರ ಅಡಿಯಲ್ಲಿ ಕರ್ತವ್ಯ ನಿರ್ವಹಿಸಲು ವಲಯ ಅರಣ್ಯ ಅಧಿಕಾರಿಗಳಿಗೆ ಕೇವಲ 6ತಿಂಗಳು ಕಾಲಾವಕಾಶವಿದ್ದು, ನಂತರವೂ ವಲಯ ಅರಣ್ಯ ಅಧಿಕಾರಿಗಳನ್ನು ಮುಂದುವರೆಸಿರುವ ಕುರಿತು. | ಕೆ.ಸಿ.ಎಸ್.ಆರ್ ನಿಯಮ 32ರ ಅಡಿಯಲ್ಲಿ ವಲಯ ಅರಣ್ಯ ಅಧಿಕಾರಿ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿರುವ, ನೌಕರರನ್ನು 6 ತಿಂಗಳ ನಂತರ ಮುಂದುವರೆಸಲು ಅನುಮತಿ ಕೋರಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಯವರು ಸಲ್ಲಿಸಿರುವ ಪ್ರಸ್ತಾವನೆಯು ಕೆಲವೊಂದು ಹೆಚ್ಚುವರಿ ಮಾಹಿತಿಗಾಗಿ ಸರ್ಕಾರದ ಪರಿಶೀಲನೆಯಲ್ಲಿದೆ ಎಂದು ಮಾನ್ಯ ಅರಣ್ಯ ಪರಿಸರ ಜೀವಿಶಾಸ್ತ್ರ ಸಚಿವರು ತಿಳಿಸಿದರು. | ದಿನಾಂಕ: 02.03.2018ರಂದು ಸಮಿತಿ ಸಭೆಯಲ್ಲಿ ಚರ್ಚಿಸಿದಾಗ ಸರ್ಕಾರದ ಪತ್ರ ಸಂಖ್ಯೆ: ಅಪಜೀ 181 ಅಅಸೇ 2012, ದಿನಾಂಕ: 19.01.2013ರಲ್ಲಿ 50 ವಲಯ ಅರಣ್ಯಾಧಿಕಾರಿ ಹುದ್ದೆಗಳಿಗೆ ಹಾಗೂ ಸಂಖ್ಯೆ: ಅಪಜೀ 005 ಅಅಸೇ 2014, ದಿನಾಂಕ: 07.07.2014ರಲ್ಲಿ 120 ಹುದ್ದೆಗಳಿಗೆ ಒಟ್ಟು 170 ಹುದ್ದೆಗಳನ್ನು ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ನೇರ ನೇಮಕಾತಿ ಮೂಲಕ ಭರ್ತಿ ಮಾಡಿ ಅವರುಗಳು ಇಲಾಖೆಯಲ್ಲಿ ವಿವಿಧ ಹಂತದಲ್ಲಿ ತರಬೇತಿಯಲ್ಲಿದ್ದರು. ಇದರಿಂದಾಗಿ ನೇರ ನೇಮಕಾತಿ ಹುದ್ದೆಗಳು ಖಾಲಿ ಇದ್ದವು.<br><br>ಕರ್ನಾಟಕ ವಿಧಾನ ಮಂಡಲದ ಪರಿಶಿಷ್ಟ ಜಾತಿ/ಪಂಗಡಗಳ ಕಲ್ಯಾಣ ಸಮಿತಿಯು ವಿಧಾನ ಮಂಡಲಕ್ಕೆ ಸಲ್ಲಿಸಿದ್ದ 2013–14ನೇ 1982ರ ಸಿಆಸು ಇಲಾಖೆಯ ಸುತ್ತೋಲೆಗೆ ತಿದ್ದುಪಡಿ ಆಗುವವರೆಗೆ ಯಾವುದೇ ಇಲಾಖಾ ಮುಂಬಡ್ತಿ ಸಮಿತಿ ಸಭೆಗಳನ್ನು ನಡೆಸದಂತೆ ನಿರ್ದೇಶಿಸಿತ್ತು. ಈ |

| | | | | |
|---|---|---|---|---|
| | | | | ಕಾರಣದಿಂದಾಗಿ 2013 ರಿಂದ 2015ರವರೆಗೆ ಇಲಾಖೆಯಲ್ಲಿ ಯಾವುದೇ ಮುಂಬಡ್ತಿಗಳನ್ನು ನೀಡಲಾಗದ ಕಾರಣ ಮುಂಬಡ್ತಿ ಹುದ್ದೆಗಳ ಸಹ ಖಾಲಿ ಇದ್ದವು.<br><br>ವಲಯ ಅರಣ್ಯಾಧಿಕಾರಿಗಳ ನೇರ ನೇಮಕಾತಿ ಹುದ್ದೆಗಳು ಮತ್ತು ಬಡ್ತಿ ಹುದ್ದೆಗಳು ಬಹಳಷ್ಟು ಹುದ್ದೆಗಳು ಖಾಲಿ ಇದ್ದ ಕಾರಣ ಆಡಳಿತಾತ್ಮಕ ದೃಷ್ಟಿಯಿಂದ, ಬೇಸಿಗೆಯಲ್ಲಿ ಬೆಂಕಿ ಆಕಸ್ಮಿಕಗಳನ್ನು ತಡೆಯುವ ಉದ್ದೇಶದಿಂದ ಉಪ ವಲಯ ಅರಣ್ಯಾಧಿಕಾರಿಗಳನ್ನು ವಲಯ ಅರಣ್ಯಾಧಿಕಾರಿಗಳ ಹುದ್ದೆಗಳಲ್ಲಿ ಕೆ.ಸಿ.ಎಸ್.ಆರ್. ನಿಯಮ 32ರಡಿಯಲ್ಲಿ ಸ್ವತಂತ್ರ ಪ್ರಭಾರದಲ್ಲಿರಿಸಲಾಗಿತ್ತು. ಹಾಗೂ ವಲಯ ಅರಣ್ಯಾಧಿಕಾರಿ ಹುದ್ದೆಗಳಿಗೆ ಸ್ಥಾನಪನ್ನ ಬಡ್ತಿ ನೀಡಲು ನಿಷೇದ ಇದ್ದ ಕಾರಣ ಉಪ ವಲಯ ಅರಣ್ಯಾಧಿಕಾರಿಗಳನ್ನು ವಲಯ ಅರಣ್ಯಾಧಿಕಾರಿ ಹುದ್ದೆಗಳಲ್ಲಿ ನಿಯಮ 32ರಡಿಯಲ್ಲಿ ಮುಂದುವರಿಸಲಾಗಿತ್ತು.<br><br>ದಿನಾಂಕ: 17.08.2015ರ ಸಭೆಯಲ್ಲಿ ಕರ್ನಾಟಕ ವಿಧಾನ ಮಂಡಲದ ಪರಿಶಿಷ್ಟ ಜಾತಿ/ಪಂಗಡಗಳ ಕಲ್ಯಾಣ ಸಮಿತಿಯು ಮುಂಬಡ್ತಿ ನೀಡುವಲ್ಲಿ ವಿಧಿಸಿದ್ದ ನಿಷೇಧವನ್ನು ತೆರವುಗೊಳಿಸಿದ ಕಾರಣ ದಿನಾಂಕ: 30.11.2015ರ ಕಛೇರಿ ಆದೇಶದಲ್ಲಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿರವರು 246 ವಲಯ ಅರಣ್ಯಾಧಿಕಾರಿಗಳ ಹುದ್ದೆಗಳಿಗೆ ನಿಯಮ 42ರಡಿ ಸ್ಥಾನಪನ್ನ ಮುಂಬಡ್ತಿ ನೀಡಿರುತ್ತಾರೆ.<br>ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಯವರು ಕೆ.ಸಿ.ಎಸ್.ಆರ್. ನಿಯಮಾವಳಿಯ ನಿಯಮ 32ರಡಿ ಆರು ತಿಂಗಳಿಗೂ ಹೆಚ್ಚಿನ ಅವಧಿಗೆ 26 ಉಪ ವಲಯ ಅರಣ್ಯಾಧಿಕಾರಿಗಳನ್ನು ವಲಯ ಅರಣ್ಯಾಧಿಕಾರಿ ಹುದ್ದೆಯಲ್ಲಿ ಸ್ವತಂತ್ರ ಪ್ರಭಾರದಲ್ಲಿರಿಸಿರುವ ಕ್ರಮಕ್ಕೆ ಸರ್ಕಾರಕ್ಕೆ ಅನುಮೋದನೆ ನೀಡಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ಸಮಿತಿಯು ತೀರ್ಮಾನಿಸಿತು. |
| 11. | 5416 | ಕಲಬುರಗಿ ಮತ್ತು ಯಾದಗಿರಿ | ಆ ಭಾಗದಲ್ಲಿ ನಾವು | ದಿನಾಂಕ: 02.03.2018ರಂದು ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, |

<table>
<tr>
<td></td>
<td>ಚು.ಗು.ಪ್ರ: 1046<br>ಶ್ರೀ ಅಲ್ಲಮ ಪ್ರಭುಪಾಟೀಲ್<br>ವಿಪನದಿ:<br>9.07.2014</td>
<td>ಜಿಲ್ಲೆಗಳ ಭಾಗಗಳಲ್ಲಿ ಅರಣ್ಯ ಬೆಳೆಸಲು ಕಟ್ಟುನಿಟ್ಟಾದ ಕ್ರಮಕೈಗೊಳ್ಳುವ ಕುರಿತು.</td>
<td>ಖಂಡಿತವಾಗಿಯೂ ಕಾರ್ಯಕ್ರಮವನ್ನು ಹಮ್ಮಿಕೊಳ್ಳುತ್ತಿದ್ದೇವೆ. ಬಯಲು ಸೀಮೆಯಲ್ಲಿ ಅರಣ್ಯೀಕರಣ ಮಾಡಬೇಕೆನ್ನುವ ಉದ್ದೇಶದಿಂದ ನಾನು ಕಲಬುರಗಿ ಪ್ರದೇಶಕ್ಕೆ ಭೇಟಿಯನ್ನು ಕೊಟ್ಟು ಎರಡು ದಿವಸ ಅಲ್ಲಿ ಇದ್ದುಕೊಂಡು ಒಂದು ಕಾರ್ಯಕ್ರಮವನ್ನು ಕೂಡ ಹಮ್ಮಿಕೊಂಡಿದ್ದೆವು. ಮುಂದಿನ ದಿನಗಳಲ್ಲಿ ನಿಮಗೆ ವಿಶ್ವಾಸ ಬರತಕ್ಕಂಥ ರೀತಿಯಲ್ಲಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತೇವೆ ಎಂದು ಮಾನ್ಯ ಅರಣ್ಯ, ಮತ್ತು ಪರಿಸರ ಜೀವಿಶಾಸ್ತ್ರ ಸಚಿವರು ತಿಳಿಸಿದರು.</td>
<td>ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ 2013–14 ರಿಂದ 2017–18ರವರೆಗೆ ವಿವಿಧ ಯೋಜನೆಗಳಡಿ ನೆಡತೋಪುಗಳನ್ನು ಬೆಳೆಸಲಾಗಿರುತ್ತದೆ. ಅದರ ವಿವರ ಈ ಕೆಳಕಂಡಂತಿದೆ.
<table>
<tr><th rowspan="2">ವರ್ಷ</th><th>ಕಲಬುರಗಿ</th><th>ಯಾದಗಿರಿ</th></tr>
<tr><th>ನೆಡುತೋಪು ಬೆಳಸಿದ ವಿಸ್ತೀರ್ಣ (ಹೆ.ಗಳಲ್ಲಿ)</th><th>ನೆಡುತೋಪು ಬೆಳಸಿದ ವಿಸ್ತೀರ್ಣ (ಹೆ.ಗಳಲ್ಲಿ)</th></tr>
<tr><td>2013–14</td><td>3,251</td><td>1,343</td></tr>
<tr><td>2014–15</td><td>1,953</td><td>784</td></tr>
<tr><td>2015–16</td><td>2,150</td><td>654</td></tr>
<tr><td>2016–17</td><td>2,085</td><td>1,039</td></tr>
<tr><td>2017–18 (ಜನವರಿ–2018ರ ಅಂತ್ಯಕ್ಕೆ)</td><td>1,533</td><td>1,201</td></tr>
</table>
ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ಸಮಿತಿಯು ತೀರ್ಮಾನಿಸಿತು.</td>
</tr>
<tr>
<td>12.</td>
<td>5417<br>ಚು.ಗು.ಪ್ರ: 1018<br>ಶ್ರೀ ಎಂ.ಶ್ರೀನಿವಾಸ<br>ವಿಪನದಿ:<br>9.07.2014</td>
<td>ಕೇಂದ್ರ ಪರಿಸರ ಮತ್ತು ಅರಣ್ಯ ಸಚಿವಾಲಯ 2009ರ ಪರಿಷ್ಕೃತ ಮಾರ್ಗ ಸೂಚಿಯನ್ವಯ ಮಾಲಿನ್ಯ ನಿಯಂತ್ರಣ ಮಂಡಳಿಯು ಕೇವಲ ತ್ಯಾಜ್ಯ ನೀರಿನ ಮಾದರಿಗಳನ್ನು ಪರೀಕ್ಷೆ ಮಾಡುವ ಅರ್ಹತೆ ಇದ್ದು, ಖಾಸಗಿ ಪ್ರಯೋಗಾಲಯಗಳಿಗೆ ಮಾನ್ಯತೆ ನೀಡಿರುವ ಕುರಿತು.</td>
<td>ಮಾನ್ಯತೆ ಇಲ್ಲದ 67 ಪ್ರಯೋಗಾಲಯಗಳೇನಿವೆ, ಅವು ಮಾನ್ಯತೆ ಪಡೆಯದಿದ್ದಲ್ಲಿ ಅವುಗಳನ್ನು ರದ್ದು ಮಾಡುವುದಕ್ಕೆ ನಾವು ಸೂಕ್ತ ಕ್ರಮವನ್ನು ಕೈಗೊಳ್ಳುತ್ತೇವೆ. ಇನ್ನೂ ಮಾಲಿನ್ಯ ಮಂಡಳಿಯ ವ್ಯಾಪ್ತಿಯಲ್ಲಿರುವ ಪ್ರಯೋಗಾಲಯಗಳಿಗೆ ಮಾನ್ಯತೆ ಪಡೆಯುವ ಕೆಲಸವನ್ನು ಆದಷ್ಟು ಬೇಗ ಮಾಡಲಾಗುವುದು ಎಂದು ಮಾನ್ಯ ಅರಣ್ಯ, ಪರಿಸರ ಮತ್ತು</td>
<td>ದಿನಾಂಕ: 02.03.2018ರಂದು ಸಮಿತಿ ಸಭೆಯಲ್ಲಿ ಚರ್ಚಿಸಿದಾಗ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಖಾಸಗಿ ಪರಿಸರ Empanelment ಪ್ರಯೋಗಾಲಯಗಳನ್ನು ಮಾಡುತ್ತಿರುವ ಬಗ್ಗೆ ಕೇಂದ್ರ ಪರಿಸರ ಮತ್ತು ಅರಣ್ಯ ಸಚಿವಾಲಯವು ದಿನಾಂಕ: 09.04.2014ರಂದು ಪತ್ರವನ್ನು ಕಳುಹಿಸುತ್ತಾ, ಮಂಡಳಿಯ ಈ ಕ್ರಮದಿಂದ ಪರಿಸರ (ಸಂರಕ್ಷಣೆ) ಕಾಯ್ದೆ, 1986ರಲ್ಲಿ ನಿಗದಿಪಡಿಸಿರುವ ಮಾರ್ಗಸೂಚಿಗಳ ಉಲ್ಲಂಘನೆಯಾಗುತ್ತಿರುವ ಬಗ್ಗೆ ತಿಳಿಸುತ್ತಾ, ಈ Empanelment ಪ್ರಕ್ರಿಯೆಗೆ ಆಕ್ಷೇಪಣೆಯನ್ನು ವ್ಯಕ್ತಪಡಿಸಿರುತ್ತದೆ. ಈ ಬಗ್ಗೆ ಸೂಕ್ತ ಕ್ರಮ ವಹಿಸಲು ಜಲ (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಕಾಯ್ದೆ, 1974ರ ಮತ್ತು ವಾಯು (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಕಾಯ್ದೆ, 1981 ರ ಕಲಂ 18(1) (ಬಿ)ರ ಅನುಸಾರ ರಾಜ್ಯ ಸರ್ಕಾರಕ್ಕೆ ಪ್ರದತ್ತವಾಗಿರುವ ಅಧಿಕಾರದ ಅನುಸಾರ</td>
</tr>
</table>

| | | | | |
|---|---|---|---|---|
| | | | ಜೀವಿಶಾಸ್ತ್ರ ಸಚಿವರು ತಿಳಿಸಿದರು. | ಮಂಡಳಿಗೆ ನಿರ್ದೇಶನ ನೀಡಲಾಗಿದೆ. ಅದರಂತೆ ಮಂಡಳಿಯು 67 ಖಾಸಗಿ ಪ್ರಯೋಗಾಲಯಗಳಿಗೆ ಮಾನ್ಯತೆ ನೀಡಿರುವ ಬಗ್ಗೆ ಮಂಡಳಿಯ 192ನೇ ಸಭೆಯಲ್ಲಿ ಚರ್ಚಿಸಿ Empanelment ಮಾಡಿದ 67 ಖಾಸಗಿ ಪ್ರಯೋಗಾಲಯಗಳ ಮಾನ್ಯತೆಯನ್ನು ರದ್ದುಗೊಳಿಸಿ ದಿನಾಂಕ: 24.03.2015ರಂದು ಜ್ಞಾಪನ ಪತ್ರವನ್ನು ಹೊರಡಿಸಿದೆ.<br><br>ಭರವಸೆಯ 2ನೇ ವಿಷಯಕ್ಕೆ ಸಂಬಂಧಿಸಿದಂತೆ ಮಂಡಳಿ ವ್ಯಾಪ್ತಿಯಲ್ಲಿ ಸದ್ಯಕ್ಕೆ 9 ಪ್ರಯೋಗಾಲಯಗಳಿದ್ದು, ಅವುಗಳ ಪೈಕಿ ಬೆಂಗಳೂರಿನಲ್ಲಿ ಒಂದು ಕೇಂದ್ರ ಪರಿಸರ ಪ್ರಯೋಗಾಲಯ ಹಾಗೂ ಇತರೆ ಜಿಲ್ಲಾ ಕೇಂದ್ರಗಳಲ್ಲಿರುವ 8 ಪ್ರಾದೇಶಿಕ ಪ್ರಯೋಗಾಲಯಗಳು ಈ ಕೆಳಗೆ ತಿಳಿಸಿರುವ ಮಾನ್ಯತೆಗಳನ್ನು ಪಡೆದಿವೆ:<br><br>1. ಜಲ (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಕಾಯ್ದೆ, 1974ರ ಕಲಂ 52(1) (ಬಿ) ಮತ್ತು ವಾಯು (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಕಾಯದೆ, 1981ರ ಕಲಂ28 (1) (ಬಿ)ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ರಾಜ್ಯ ಸರ್ಕಾರವು ಬೆಂಗಳೂರಿನಲ್ಲಿರುವ ಮಂಡಳಿಯ ಕೇಂದ್ರ ಪರಿಸರ ಪ್ರಯೋಗಾಲಯವನ್ನು ಅನುಕ್ರಮವಾಗಿ "State Water Laboratory" ಮತ್ತು "State Air Laboratory" ಎಂದು ದಿನಾಂಕ: 18.12.2015ರಂದು ಅಧಿಸೂಚನೆ ಹೊರಡಿಸುವ ಮೂಲಕ ಘೋಷಿಸಲಾಗಿದೆ.<br>2. ಮುಂದುವರೆದು, ಮಂಡಳಿಯ ಪ್ರಾದೇಶಿಕ ಪರಿಸರ ಕಛೇರಿಗಳಾದ ಮೈಸೂರು, ಹಾಸನ, ಮಂಗಳೂರು, ದಾವಣಗೆರೆ, ಧಾರವಾಡ, ಬೆಳಗಾವಿ, ಕಲ್ಬುರ್ಗಿ ಮತ್ತು ರಾಯಚೂರುಗಳಲ್ಲಿರುವ ಪ್ರಯೋಗಾಲಯಗಳನ್ನು ಸಹ ಜಲ (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಕಾಯ್ದೆ, 1974ರ ಕಲಂ 17 (2) ಮತ್ತು ವಾಯು (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಕಾಯ್ದೆ, 1981 ರ ಕಲಂ 17(2) ರಡಿಯಲ್ಲಿ ಮಂಡಳಿಯ ಪ್ರಯೋಗಾಲಯಗಳೆಂದು (State Board Laboratory) ಮಂಡಳಿಯ ದಿನಾಂಕ: 04.12.2015ರ |

| | | | | |
|---|---|---|---|---|
| | | | | ಅಧಿಸೂಚನೆಯಲ್ಲಿ ಘೋಷಿಸಲಾಗಿದೆ.<br><br>3. ಮಂಡಳಿಯ ಕೇಂದ್ರ ಪರಿಸರ ಪ್ರಯೋಗಾಲಯ, ಬೆಂಗಳೂರು ಈ ಕೆಳಗಿನ ಮಾನ್ಯತೆಗಳನ್ನು ಸಹ ಪಡೆದಿದೆ:<br>* Certification of ISO 9001:2008<br>* Certification of OHSAS 18001:2007<br>* Certification of ISo/IEC 17025:2005<br>* Recognized under EP Act 1986 vide MoEF & CC Notification No. Legal 42(3)/87, dated: 03.08.2016.<br><br>ಪ್ರಾದೇಶಿಕ ಪ್ರಯೋಗಾಲಯ, ಮಂಗಳೂರು, ಮೈಸೂರು ಮತ್ತು ಧಾರವಾಡ ಇವುಗಳಿಗೆ Certification of OHSAS 18001:2007 and Certification of ISO 9001:2008 ಮಾನ್ಯತೆಯನ್ನು ಪಡೆದಿವೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ಸಮಿತಿಯು ತೀರ್ಮಾನಿಸಿತು. |
| 13. | 5418<br>ಶೂನ್ಯವೇಳೆಯ ಪ್ರಸ್ತಾಪ<br>ಶ್ರೀ ರಾಮಚಂದ್ರಗೌಡ<br>ವಿಪನದಿ:9.07.2014 | ಕಾಡಾನೆ ದಾಳಿಯಿಂದ ಅಪಾರ ನಷ್ಟ ಉಂಟಾಗಿರುವ ಕುರಿತು. | ಕಾಡಾನೆಗಳ ದಾಳಿಯಿಂದ ಉಂಟಾದ ಬೆಳೆಹಾನಿಯನ್ನು ಪರಿಶೀಲಿಸಿ ರೈತರಿಗೆ ಜಾಲ್ತಿಯಲ್ಲಿರುವ ಸರ್ಕಾರದ ಆದೇಶದ ಪ್ರಕಾರ ದಯಾತ್ಮಕ ಧನ ಪಾವತಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ತಿಳಿಸಿದರು. | ದಿನಾಂಕ: 02.03.2018ರಂದು ಸಮಿತಿ ಸಭೆಯಲ್ಲಿ ಚರ್ಚಿಸಿದಾಗ ಕಾಡಾನೆ ಹಾಗೂ ಇತರೆ ವನ್ಯ ಪ್ರಾಣಿಗಳ ದಾಳಿಯಿಂದ ಉಂಟಾದ ಬೆಳೆಹಾನಿ, ಆಸ್ತಿ ನಷ್ಟ ಹಾಗೂ ಇತರೆ ಹಾನಿಗೆ ಪ್ರಸ್ತುತ ಚಾಲ್ತಿಯಲ್ಲಿರುವ ಸರ್ಕಾರಿ ಆದೇಶದಂತೆ ದಯಾತ್ಮಕ ಧನ ಪಾವತಿಸಲಾಗುತ್ತಿದೆ. 2017–18ನೇ ಸಾಲಿನಲ್ಲಿ ಇಲ್ಲಿಯವರೆಗೂ ರೂ. 1,682.00 ಲಕ್ಷ ದಯಾತ್ಮಕ ಧನ ಪಾವತಿಸಲಾಗಿದೆ. ಸರ್ಕಾರವು ಈ ಕೆಳಕಂಡ ಸರ್ಕಾರಿ ಆದೇಶಗಳಲ್ಲಿ ಐದು ಬಾರಿ ದಯಾತ್ಮಕ ಧನ ಹೆಚ್ಚಿಸಿ ಮಂಜೂರು ಮಾಡಿರುತ್ತದೆ.<br>ಅಪಜೀ 143 ಎಫ್‌ಡಬ್ಲೂಎಲ್ 2010, ದಿನಾಂಕ: 30.04.2011<br>ಅಪಜೀ 143 ಎಫ್‌ಡಬ್ಲೂಎಲ್ 2010, ದಿನಾಂಕ: 03.08.2011<br>ಅಪಜೀ 109 ಎಫ್‌ಎಪಿ, 2014, ದಿನಾಂಕ: 13.08.2014<br>ಅಪಜೀ 128 ಎಫ್‌ಡಬ್ಲೂಎಲ್ 2013, ದಿನಾಂಕ: 15.09.2015<br>ಅಪಜೀ 130 ಎಫ್‌ಡಬ್ಲೂಎಲ್ 2016, ದಿನಾಂಕ: 19.09.2016 |

| | | | | |
|---|---|---|---|---|
| | | | | ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ಸಮಿತಿಯು ತೀರ್ಮಾನಿಸಿತು. |
| 14. | 5419<br>ಚು.ಗು.ಪ್ರ: 326<br>ಶ್ರೀಮತಿ ಮೋಟಮ್ಮ<br>ವಿಪನದಿ:<br>10/12/2014 | ಚಿಕ್ಕಮಗಳೂರು ಜಿಲ್ಲೆಯಲ್ಲಿ ಕಾಡಾನೆ ಹಾವಳಿಯು ಹೆಚ್ಚುತ್ತಿದ್ದು, ಸರ್ಕಾರ ಅವುಗಳ ನಿಯಂತ್ರಣಕ್ಕೆ ಮತ್ತು ಸ್ಥಳಾಂತರಿಸಲು ತೆಗೆದುಕೊಂಡಿರುವ ಬಗ್ಗೆ. | ಕಾಡಾನೆಗಳ ಹಾವಳಿಗಳ ನಿಯಂತ್ರಣಕ್ಕಾಗಿ ಅರಣ್ಯ ಪ್ರದೇಶದಿಂದ ಪಕ್ಕದ ಕೃಷಿ ಹಾಗೂ ಸಾರ್ವಜನಿಕರ ಸ್ಥಳಗಳಲ್ಲಿ ಕಾಡಾನೆ ನಿರೋಧಕ ಕಂದಕ ಮತ್ತು ಸೌರಶಕ್ತಿ ಬೇಲಿ ನಿರ್ಮಿಸಿ ನಿರ್ವಹಿಸಲಾಗುತ್ತಿದೆ ಮತ್ತು ಗ್ರಾಮಸ್ಥರೊಂದಿಗೆ ಸಭೆಯನ್ನು ನಡೆಸುವ ಮುಖಾಂತರ ಜಾಗೃತಿಯನ್ನು ಮೂಡಿಸಲಾಗುತ್ತಿದೆ. ಬೆಳೆಹಾನಿ ಹಾಗೂ ಮಾನವ ಪ್ರಾಣ ಹಾನಿ ಆಗಿರುವ ಪ್ರಕರಣಗಳಿಗೆ ಸಂಬಂಧಿಸಿದಂತೆ ಸರ್ಕಾರದ ಆದೇಶದ ಪ್ರಕಾರ ದಯಾತ್ಮಕ ಧನವನ್ನು ಪಾವತಿಸಿ ಕ್ರಮ ಕೈಗೊಳ್ಳಲಾಗಿದೆ, ಮುಂದುವರೆದಂತೆ ಪ್ರಾಣ ಹಾನಿಗೆ ತೊಂದರೆಯಾದರೆ ಆನೆಗಳ ಕಾರಿಡಾರ್ ಅನ್ನು ಸ್ಥಳಾಂತರಗೊಳಿಸಲು ಕ್ರಮವನ್ನು ಕೈಗೊಳ್ಳುತ್ತೇವೆ ಎಂದು ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ತಿಳಿಸಿದರು. | ದಿನಾಂಕ:02.03.2018ರಂದು ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ಕಾಡಾನೆಗಳು ಅರಣ್ಯ ದಾಟಿ ಹೊರಗೆ ಬರದಂತೆ ಆನೆ ನಿರೋಧಕ ಕಂದಕಗಳನ್ನು ತೆಗೆಯಲಾಗಿದೆ. ಕೆಲವು ಪ್ರದೇಶಗಳಲ್ಲಿ ಸೌರಶಕ್ತಿ ಬೇಲಿ ನಿರ್ಮಿಸಿ, ನಿರ್ವಹಿಸಲಾಗುತ್ತದೆ. ಬೆಳೆಹಾನಿ ಮತ್ತು ಆಸ್ತಿಹಾನಿ ಪ್ರಕರಣಗಳಲ್ಲಿ ಹಾಲಿ ಚಾಲ್ತಿಯಲ್ಲಿರುವ ಸರ್ಕಾರಿ ಆದೇಶದಂತೆ ದಯಾತ್ಮಕ ಧನವನ್ನು ಪಾವತಿಸಲಾಗುತ್ತದೆ.<br><br>ಚಿಕ್ಕಮಗಳೂರು ಜಿಲ್ಲೆಯಲ್ಲಿ ದಿನಾಂಕ: 16.03.2017ರಂದು ಪುಂಡಾಟ ನಡೆಸುತ್ತಿದ್ದ ಒಂದು ಕಾಡಾನೆಯನ್ನು ಹಿಡಿದು ಶಿವಮೊಗ್ಗ ಸಕ್ಕರೆಬೈಲು ಆನೆ ಶಿಬಿರಕ್ಕೆ ಸ್ಥಳಾಂತರಿಸಲಾಗಿರುತ್ತದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ಸಮಿತಿಯು ತೀರ್ಮಾನಿಸಿತು. |
| 15. | 5420<br>ಚು.ಗು.ಪ್ರ: 366 ಶ್ರೀ ಐವನ್ ಡಿ'ಸೋಜಾ<br>ವಿಪನದಿ: | ರಾಜ್ಯದಲ್ಲಿ ಒತ್ತುವರಿ ಮಾಡಲಾಗಿರುವ ಅರಣ್ಯ ಭೂಮಿಯನ್ನು ಸಕ್ರಮೀಕರಣ ಗೊಳಿಸಲು | ರಾಜ್ಯದಲ್ಲಿ ಈವರೆಗೆ 1,10,626 ಪ್ರಕರಣಗಳಲ್ಲಿ 2,04,442.16 ಎಕರೆ ಅರಣ್ಯ ಪ್ರದೇಶವು ಒತ್ತುವರಿಯಾಗಿರುತ್ತದೆ. 1980ರ | ದಿನಾಂಕ:02.03.2018ರಂದು ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ರಾಜ್ಯದ ಅರಣ್ಯ ಪ್ರದೇಶದಲ್ಲಿ ದಿನಾಂಕ: 27.04.1978 ರ ಪೂರ್ವದಲ್ಲಿ ಮಾಡಿದ್ದ 14,848,83 ಹೆ. ಅರಣ್ಯ ಒತ್ತುವರಿಯನ್ನು ಅರಣ್ಯ (ಸಂರಕ್ಷಣಾ) ಕಾಯ್ದೆ–1980 ರ ಅಡಿಯಲ್ಲಿ ಕೇಂದ್ರ ಸರ್ಕಾರದ ಅರಣ್ಯ ಪರಿಸರ ಮಂತ್ರಾಲಯವು |

| | | | | |
|---|---|---|---|---|
| | 10/12/2014 | ಕೈಗೊಳ್ಳಲಾಗಿರುವ ಕ್ರಮಗಳ ಬಗ್ಗೆ. | ನಂತರ 3 ಎಕರೆವರೆಗೆ ಒತ್ತುವರಿಯಾದ ಪ್ರಕರಣಗಳಲ್ಲಿ ಸರ್ಕಾರದಿಂದ ಅಂತಹವರ ಪುನರ್ವಸತಿಗಾಗಿ ಸಂಪೂರ್ಣ ವ್ಯವಸ್ಥೆ ಕಲ್ಪಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ತಿಳಿಸಿದರು. | ದಿನಾಂಕ: 15.05.1996ರ ಪತ್ರದಲ್ಲಿ ಕೆಲವು ಷರತ್ತುಗಳನ್ನು ವಿಧಿಸಿ ಸಕ್ರಮಗೊಳಿಸಲು ಅನುಮತಿ ನೀಡಿರುತ್ತದೆ. ತತ್ಸಂಬಂಧ 19,348 ಒತ್ತುವರಿ ಪ್ರಕರಣಗಳಿಗೆ ಸಂಬಂಧಿಸಿದಂತೆ 05.05.1997 ರಂದು ಸರ್ಕಾರದ ಆದೇಶ ಹೊರಡಿಸಲಾಗಿದೆ. ಅರಣ್ಯಗಳಲ್ಲಿ ಸಂಪ್ರದಾಯಿಕವಾಗಿ ವಾಸಿಸಿಕೊಂಡು ಬಂದಿರುವ ಜನರಿಗೆ ಅರಣ್ಯ ಹಕ್ಕು ಕಾಯ್ದೆಯಡಿಯಲ್ಲಿ ನೀಡಿರುವ ಮಾರ್ಗ ಸೂಚಿಗಳನ್ವಯ ಅವರು ಆಕ್ರಮಿಸಿದ ಪ್ರದೇಶವನ್ನು ಅವಲಂಬಿಸಿ 10 ಎಕರೆಗಳವರೆಗೆ ವಾಸದ ಹಾಗೂ ಉಳುಮೆಯ ಹಕ್ಕನ್ನು ಮಾನ್ಯ ಮಾಡಲಾಗುತ್ತಿದೆ. ಅರಣ್ಯ ಹಕ್ಕು ಕಾಯ್ದೆಯಂತೆ ಅನರ್ಹ ಎಂದು ಕಂಡು ಬಂದ ಅರಣ್ಯ ಒತ್ತುವರಿ ಜಮೀನು ಮತ್ತು ಆ ವ್ಯಕ್ತಿಯ ಪಟ್ಟಾ ಜಮೀನು ಸೇರಿದಂತೆ 3 (ಮೂರು) ಎಕರೆಗಿಂತ ಕಡಿಮೆ ಇರುವ ಅರಣ್ಯ ಒತ್ತುವರಿದಾರರುಗಳನ್ನು ಪುನರ್ವಸತಿ ಇಲ್ಲದೇ ಒಕ್ಕಲೆಬ್ಬಿಸಬಾರದು ಎಂದು ದಿನಾಂಕ: 13.03.2015 ಹಾಗೂ 28.06.2016ರ ಸುತ್ತೋಲೆಗಳ ಮೂಲಕ ನಿರ್ದೇಶನ ನೀಡಲಾಗಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ಸಮಿತಿಯು ತೀರ್ಮಾನಿಸಿತು. |
| 16 | 5422<br>ಚು.ರ.ಪ್ರ: 324<br>ಶ್ರೀಮತಿ ಎ.ವಿ. ಗಾಯತ್ರಿ ಶಾಂತೇಗೌಡ<br>ವಿಪನದಿ:<br>10/12/2014 | ರಾಜ್ಯದಲ್ಲಿ ಹುಲಿ ಹಾಗೂ ಇತರೆ ಕಾಡು ಪ್ರಾಣಿಗಳಿಂದ ಗ್ರಾಮೀಣ ಹಾಗೂ ನಗರ ಪ್ರದೇಶಗಳಲ್ಲಿನ ಜನರಿಗೆ ತೊಂದರೆಯಾಗುತ್ತಿದ್ದು, ಈ ನಿಟ್ಟಿನಲ್ಲಿ ಶಾಶ್ವತ ಪರಿಹಾರವನ್ನು ಕೈಗೊಳ್ಳುವ ಬಗ್ಗೆ. | ರಾಜ್ಯದಲ್ಲಿ ಹುಲಿ ಹಾಗೂ ಇತರೆ ಕಾಡು ಪ್ರಾಣಿಗಳಿಂದ ಗ್ರಾಮೀಣ ಹಾಗೂ ನಗರ ಪ್ರದೇಶಗಳಲ್ಲಿನ ಜನರಿಗೆ ತೊಂದರೆಯಾಗದಂತೆ<br>ಮಾನವ – ವನ್ಯಪ್ರಾಣಿ ಸಂಘರ್ಷ ನಿಯಂತ್ರಣಕ್ಕಾಗಿ ಅರಣ್ಯ ಪ್ರದೇಶದಿಂದ ಪಕ್ಕದ ಕೃಷಿ ಹಾಗೂ ಸಾರ್ವಜನಿಕರ ಸ್ಥಳಗಳಲ್ಲಿ ಕಾಡಾನೆ ನಿರೋಧಕ ಕಂದಕ ಮತ್ತು ಸೌರಶಕ್ತಿ ಬೇಲಿ ನಿರ್ಮಿಸಲಾಗಿರುತ್ತದೆ. ವರ್ಷವಿಡೀ ಕುಡಿಯುವ ನೀರು ದೊರಕುವಂತೆ ಅರಣ್ಯದಲ್ಲಿರುವ | ದಿನಾಂಕ:02.03.2018ರಂದು ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ರಾಜ್ಯದಲ್ಲಿ ಹುಲಿ ಹಾಗೂ ಇತರೆ ಕಾಡು ಪ್ರಾಣಿಗಳಿಂದ ಉಂಟಾಗುವ ಹಾನಿಯನ್ನು ತಡೆಯಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.<br>ವನ್ಯಪ್ರಾಣಿಗಳಿಗಾಗಿ ಅರಣ್ಯ ಪ್ರದೇಶಗಳ ಒಳಗೆ ನೀರಿನ ಸೌಕರ್ಯವನ್ನು ಸತತವಾಗಿ ಒದಗಿಸಿ, ಮಣ್ಣು ಮತ್ತು ಸವಕಳಿ ಸಂರಕ್ಷಣೆ ಮಾಡುವುದು, ಬಿದಿರು, ಹಣ್ಣು ಹಂಪಲುಗಳ ಮರಗಳನ್ನು ಬೆಳೆಸಿ ವನ್ಯ ಪ್ರಾಣಿಗಳ ಅವಾಸ ಸ್ಥಾನವನ್ನು ಅಭಿವೃದ್ಧಿಗೊಳಿಸುವುದು.<br>ಅರಣ್ಯ ಪ್ರದೇಶಗಳಲ್ಲಿ ಕಾಡುಪ್ರಾಣಿಗಳಿಗೆ ವರ್ಷವಿಡೀ ಕುಡಿಯುವ ನೀರು ದೊರಕುವಂತೆ ಅರಣ್ಯದಲ್ಲಿರುವ ಕೆರೆಗಳ ಹೂಳು ತೆಗೆಯುವುದು ಗಲ್ಲಿಪ್ಲಗ್, ಚೆಕ್‌ಡ್ಯಾಮ್, ನಾಲಾಬಂಡ್ ಇತ್ಯಾದಿ ಕೆಲಸಗಳನ್ನು ರಕ್ಷಿತಾರಣ್ಯಗಳಲ್ಲಿ ತೆಗೆದುಕೊಳ್ಳಲಾಗುತ್ತಿದೆ. |

| | | | | |
|---|---|---|---|---|
| | | | ಕೆರೆಗಳ ಹೂಳು ತೆಗೆಯುವುದು, ಗಲ್ಲಿಪ್ಲಗ್, ಚೆಕ್‌ಡ್ಯಾಮ್, ನಾಲಾಬಂಡ್, ಇತ್ಯಾದಿ ಕೆಲಸಗಳನ್ನು ರಕ್ಷಿತಾರಣ್ಯಗಳಲ್ಲಿ ತೆಗೆದುಕೊಳ್ಳಲಾಗುತ್ತಿದೆ ಎಂದು ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ತಿಳಿಸಿದರು. | ಕಾಡುಪ್ರಾಣಿಗಳು ಅರಣ್ಯ ಪ್ರದೇಶದಿಂದ ಪಕ್ಕದ ಕೃಷಿ ಹಾಗೂ ಸಾರ್ವಜನಿಕರ ಸ್ಥಳಗಳಲ್ಲಿ ದಾಳಿ ಮಾಡುವುದನ್ನು ತಡೆಗಟ್ಟುವ ಸಲುವಾಗಿ ಸೂಕ್ಷ್ಮ ಪ್ರದೇಶಗಳ ಅರಣ್ಯದ ಅಂಚಿನಲ್ಲಿ ಕಾಡಾನೆ ನಿರೋಧಕ ಕಂದಕ ಮತ್ತು ಸೌರಶಕ್ತಿ ಬೇಲಿ ನಿರ್ಮಿಸಿ ನಿರ್ವಹಿಸಲಾಗುತ್ತಿದೆ.<br><br>ಕಾಡುಪ್ರಾಣಿಗಳು ಕೃಷಿ ಜಮೀನುಗಳಿಗೆ ದಾಳಿ ಮಾಡುವ ಸೂಕ್ಷ್ಮ ಸ್ಥಳಗಳನ್ನು ಗುರುತಿಸಿ ಹಾವಳಿ ನಡೆಸುವ ಕಾಡು ಪ್ರಾಣಿಗಳನ್ನು ಪುನ: ಕಾಡಿಗೆ ಹಿಮ್ಮೆಟ್ಟಿಸುವ ಸಲುವಾಗಿ ಕಾಡಾನೆ ತಡೆ ತಂಡಗಳನ್ನು ರಚಿಸಿ, ಪ್ರತಿಯೊಂದು ತಂಡದಲ್ಲೂ ಸ್ಥಳೀಯರ ಜೊತೆಗೆ ನಾಲ್ಕು ಮಂದಿ ಅರಣ್ಯ ಸಿಬ್ಬಂದಿಗಳನ್ನು ನಿಯೋಜಿಸಿ ಕ್ರಮಕೈಗೊಳ್ಳಲಾಗುತ್ತಿದೆ.<br><br>ಕಾಡುಪ್ರಾಣಿಗಳನ್ನು ಅರಣ್ಯ ಪ್ರದೇಶಗಳಿಗೆ ಹಿಮ್ಮೆಟ್ಟಿಸಲು ಸಿಬ್ಬಂದಿಗಳಿಗೆ ವಾಕಿ–ಟಾಕಿ, ಗನ್ ಹಾಗೂ ವಾಹನಗಳ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ.<br><br>ಹಾವಳಿ ನಡೆಸುವ ಕಾಡುಪ್ರಾಣಿಗಳನ್ನು ಅರಣ್ಯ ಪ್ರದೇಶಗಳಿಗೆ ಹಿಮ್ಮೆಟ್ಟಿಸಲು ಸಿಬ್ಬಂದಿಗಳಿಗೆ ಪಟಾಕಿ ಇನ್ನಿತರ ಸಾಮಗ್ರಿಗಳನ್ನು ಒದಗಿಸಿ ಕ್ರಮ ಕೈಗೊಳ್ಳಲಾಗುತ್ತದೆ.<br><br>ವನ್ಯಜೀವಿ ಹಾವಳಿ ಹೆಚ್ಚಾಗಿ ಕಂಡುಬರುವ ಸೂಕ್ಷ್ಮ ಪ್ರದೇಶಗಳಲ್ಲಿ ಅವಶ್ಯಕತೆಗನುಗುಣವಾಗಿ Anti Depredation Camp ಗಳನ್ನು ಮತ್ತು Rapid Response Teams (RRT) ತಂಡಗಳನ್ನು ರಚಿಸಿ ವನ್ಯ ಜೀವಿಗಳ ಹಾವಳಿ ನಿಯಂತ್ರಿಸಲಾಗುತ್ತಿದೆ.<br><br>ವನ್ಯ ಜೀವಿಗಳ ದಾಳಿಯ ಸಮಯದಲ್ಲಿ ಏನನ್ನು ಮಾಡಬೇಕು ಮತ್ತು ಏನನ್ನು ಮಾಡಬಾರದು ಎಂಬುದರ ಬಗ್ಗೆ ಸಾರ್ವಜನಿಕರಲ್ಲಿ ಸೂಚನಾ ಫಲಕದ ಹಾಗೂ ಗ್ರಾಮಸ್ಥರೊಂದಿಗೆ ಸಭೆಯನ್ನು ನಡೆಸುವ ಮುಖಾಂತರ |

| | | | | |
|---|---|---|---|---|
| | | | | ಜಾಗೃತಿಯನ್ನು ಮೂಡಿಸಲಾಗುತ್ತಿದೆ.<br><br>ಅರಣ್ಯ ಪ್ರದೇಶ ವ್ಯಾಪ್ತಿಯಲ್ಲಿ ಕಾಡುಪ್ರಾಣಿ/ಕಾಡಾನೆಗಳಿಂದ ಉಂಟಾಗುವ ಪ್ರಾಣಹಾನಿ, ಬೆಳೆಹಾನಿ ತಡೆಯಲು ಮೇಲ್ಕಂಡಂತೆ ರಕ್ಷಣಾ ಕ್ರಮಗಳನ್ನು ಕೈಗೊಳ್ಳುವುದರ ಜೊತೆಗೆ, 2014-15ನೇ ಸಾಲಿಗೆ ರೈತರು ಬೆಳೆದ ಬೆಳೆಗಳನ್ನು ರಕ್ಷಿಸಲು ಅರಣ್ಯ ಇಲಾಖೆ ಮತ್ತು ಗ್ರಾಮಸ್ಥರ ಸಹಯೋಗದೊಂದಿಗೆ ಸಹಾಯಧನ ರೂಪದಲ್ಲಿ 50:50 ಆಧಾರದಲ್ಲಿ ಸೌರಶಕ್ತಿ ಬೇಲಿಯನ್ನು ನಿರ್ಮಾಣ ಮಾಡುವ ಕಾರ್ಯ ಕೈಗೊಳ್ಳಲಾಗುತ್ತಿದೆ.<br>ರಾಜ್ಯದಲ್ಲಿ ಆನೆಗಳ ಸಂಖ್ಯೆ ಅಧಿಕವಾಗಿರುವ ಪ್ರದೇಶಗಳಲ್ಲಿ ಮಾನವ ಆನೆ ಸಂಘರ್ಷವನ್ನು ಪರಿಣಾಮಕಾರಿಯಾಗಿ ತಡೆಯುವ ಸಲುವಾಗಿ ಉಪಯೋಗಿಸಿ ಬಿಟ್ಟ ರೈಲ್ವೆ ಹಳಿಗಳನ್ನು ಬಳಸಿಕೊಂಡು ಅರಣ್ಯಗಳ ಸುತ್ತ ಬ್ಯಾರಿಕೇಡನ್ನು ನಿರ್ಮಾಣ ಮಾಡುವ ಕಾರ್ಯವನ್ನು ಸಹ ಹಮ್ಮಿಕೊಳ್ಳಲಾಗುತ್ತಿದೆ.<br><br>ಮುಂಜಾನೆ ಎಚ್ಚರಿಕೆ ವ್ಯವಸ್ಥೆಯನ್ನು (Early Warning System) ಜಾರಿಗೊಳಿಸಲಾಗಿದೆ. ಮುಂಜಾನೆ ಎಚ್ಚರಿಕೆ ವ್ಯವಸ್ಥೆ, ಬೋರ್ಡ್‌ಗಳು ದೀಪಗಳ ವ್ಯವಸ್ಥೆಯನ್ನು ಜಾರಿಗೊಳಿಸಲಾಗಿದೆ. ಹೆಚ್ಚಿನ ಸಂಖ್ಯೆಯ ಎಸ್‌ಎಂಎಸ್‌ಗಳನ್ನು (Bulk SMS) ಪ್ರಾರಂಭಿಸಲಾಗಿದ್ದು, ಇದರಿಂದಾಗಿ ಜನರು ಆನೆಗಳ ಇರುವಿಕೆಯ ಬಗ್ಗೆ ಜಾಗೃತರಾಗಿರಬಹುದಾಗಿದೆ ಮತ್ತು ಮಾನವರ ಜೀವರಕ್ಷಣೆಗೂ ಸಹಕಾರಿಯಾಗಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ಸಮಿತಿಯು ತೀರ್ಮಾನಿಸಿತು. |
| 17 | 5423<br>ಚು.ಗು.ಪ್ರ. 1104<br>ಶ್ರೀ ದಯಾನಂದ<br>ವಿಪನದಿ:<br>17.12.2014 | ರಾಜ್ಯದ ಅರಣ್ಯ ಪ್ರದೇಶಗಳ ಜಾಗಗಳನ್ನು ಅತಿಕ್ರಮವಾಗಿ ಆಕ್ರಮಿಸಿಕೊಂಡು ನಿವೇಶನ ಹಾಗೂ ವಾಣಿಜ್ಯ ಚಟುವಟಿಕೆಗಳನ್ನು | ಅರಣ್ಯ ಒತ್ತುವರಿಯನ್ನು ಮಾಡಿ ಅಕ್ರಮ ಚಟುವಟಿಕೆಗಳನ್ನು ನಡೆಸುತ್ತಿರುವವರ ವಿರುದ್ಧ 1963ರ ಕರ್ನಾಟಕ ಅರಣ್ಯ ಕಾಯ್ದೆ ಕಲಂ 64(ಎ)ರಡಿ ಕಾನೂನು ಕ್ರಮ | ದಿನಾಂಕ:02.03.2018ರಂದು ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ರಾಜ್ಯದ ಅರಣ್ಯ ಪ್ರದೇಶದಲ್ಲಿ ದಿನಾಂಕ: 27.04.1978 ರ ಪೂರ್ವದಲ್ಲಿ ಮಾಡಿದ್ದ 14,848,83 ಹೆ. ಅರಣ್ಯ ಒತ್ತುವರಿಯನ್ನು ಅರಣ್ಯ (ಸಂರಕ್ಷಣಾ) ಕಾಯ್ದೆ-1980 ರ ಅಡಿಯಲ್ಲಿ ಕೇಂದ್ರ ಸರ್ಕಾರದ ಅರಣ್ಯ ಪರಿಸರ ಮಂತ್ರಾಲಯವು ದಿನಾಂಕ:15.05.1996ರ ಪತ್ರದಲ್ಲಿ ಕೆಲವು ಷರತ್ತುಗಳನ್ನು ವಿಧಿಸಿ |

| | | | | |
|---|---|---|---|---|
| | | ನಡೆಸುತ್ತಿರುವವರ ವಿರುದ್ಧ ಸರ್ಕಾರ ತೆಗೆದುಕೊಂಡಿರುವ ಕ್ರಮದ ಬಗ್ಗೆ. | ಜರುಗಿಸಲು ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ತಿಳಿಸಿದರು. | ಸಕ್ರಮಗೊಳಿಸಲು ಅನುಮತಿ ನೀಡಿರುತ್ತದೆ. ಮುಂದುವರೆದು, ಅರಣ್ಯ ಪ್ರದೇಶದಲ್ಲಿ ಆಗುವಳಿ ಮಾಡುತ್ತಿರುವವರಿಗೆ ಅರಣ್ಯ ಹಕ್ಕು ಕಾಯ್ದೆ 2006 ರಂತೆ ಅರ್ಹರಾಗಿದ್ದಲ್ಲಿ ಅಧಿಬೋಗದ ಹಕ್ಕನ್ನು ಮಾನ್ಯ ಮಾಡಲು ಅವಕಾಶವಿರುತ್ತದೆ. ಅರಣ್ಯ ಹಕ್ಕು ಕಾಯ್ದೆಯಲ್ಲಿ ಅನರ್ಹ ಎಂದು ಕಂಡು ಬಂದವರಿಗೆ 1963ರ ಕರ್ನಾಟಕ ಅರಣ್ಯ ಕಾಯ್ದೆ ಕಲಂ 64(ಎ) ರಡಿ ಕಾನೂನು ಕ್ರಮ ಜರುಗಿಸಲಾಗುತ್ತಿದೆ. ಅಲ್ಲದೆ ಕರ್ನಾಟಕ ಭೂ ಕಬಳಿಕ4ಎ ನಿಎಧ ವಿಶೇಷ ನ್ಯಾಯಾಲಯವು ಇತ್ತೀಚೆಗೆ ಸ್ಥಾಪಿಸಲಾಗಿದ್ದು, ಕರ್ನಾಟಕ ಭೂ ಕಬಳಿಕೆ ನಿಷೇಧ ಅಧಿನಿಯಮ 2011ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕ್ರಮ ಕೈಗೊಳ್ಳಲಾಗುತ್ತಿದೆ. ತಮ್ಮ ಸ್ವಂತ ಜಮೀನು ಹಾಗೂ ಒತ್ತುವರಿ ಸೇರಿ ಮೂರು ಎಕರೆಗಿಂತ ಕಡಿಮೆ ಜಮೀನು ಇರುವವರಿಗೆ ಅವರನ್ನು ಒಕ್ಕಲೆಬ್ಬಿಸುವ ಪೂರ್ವದಲ್ಲಿ ಪುನರ್ವಸತಿ ಕಲ್ಪಿಸಲು ಪರಿಶೀಲಿಸಲಾಗುತ್ತಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ಸಮಿತಿಯು ತೀರ್ಮಾನಿಸಿತು. |
| 18 | 1857<br>ಚುಗುಪ್ರ 537<br>ಶ್ರೀ ಪ್ರಭಾಕರ ಬಿ ಕೋರೆ<br>ದಿ: 09.07.2014 | ಬೆಳಗಾಂ ಜಿಲ್ಲೆಯಲ್ಲಿ ಕೋಟ್ಯಾಂತರ ರೂ. ಬೆಲೆ ಬಾಳುವ ಔಷಧಿ ಗಿಡಗಳ ಕಳ್ಳಸಾಗಾಣಿಕೆ ನಡೆಯುತ್ತಿರುವ ಬಗ್ಗೆ ಅರಣ್ಯದಲ್ಲಿ ಗಿಡಗಳ ಕಳ್ಳಸಾಗಾಣಿಕೆ, ಬೆಳೆ ಬಾಳುವ ಮರಗಳನ್ನು ಹಾಗೂ ಗಂಧದ ಮರಗಳನ್ನು ಕಡಿದು ಸಾಗಾಣಿಕೆ ಮಾಡುತ್ತಿರುವವರ ಮೇಲೆ ಕ್ರಮ ಕೈಗೊಳ್ಳುವ ಬಗ್ಗೆ. | ಈ ವಿಷಯಕ್ಕೆ ಸಂಬಂಧಿಸಿದಂತೆ, ಒಂದು ಗುನ್ನೆ ಪ್ರಕರಣವನ್ನು ದಾಖಲು ಮಾಡಿ ಇಬ್ಬರನ್ನು ಬಂಧಿಸಲಾಗಿದ್ದು, ನ್ಯಾಯಾಲಯದ ವಶದಲ್ಲಿರುತ್ತಾರೆ. ಇದಲ್ಲದೆ ಸಿಬ್ಬಂದಿಗಳ ಮೇಲೆಯೂ ಕ್ರಮ ಕೈಗೊಳ್ಳಲು ಪರಿಶೀಲನೆಯಲ್ಲಿದೆ. ಇಂತಹ ಪ್ರಕರಣಗಳು ಕಂಡು ಬಂದಲ್ಲಿ ಕರ್ನಾಟಕ ಅರಣ್ಯ ಕಾಯ್ದೆ ಮತ್ತು ನಿಯಮಗಳಡಿಯಲ್ಲಿ ಕ್ರಮ ಜರುಗಿಸಲಾಗುವುದು. ತಪ್ಪು ಮಾಡಿರುವಂತಹ ಇಬ್ಬರು ಆರ್ ಇಫ್‌ಒಗಳನ್ನು ಸಸ್ಪೆಂಡ್ ಮಾಡಿದ್ದೇವೆ. ಆರ್‌ಎಫ್‌ಒ ಗಳಲ್ಲಿ | ದಿನಾಂಕ:02.03.2018ರಂದು ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ಈ ಹಿಂದೆ ಈ ವಿಚಾರದ ಬಗ್ಗೆ ಅರಣ್ಯ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿಯವರು ಹಾಗೂ ಇಲಾಖಾಧಿಕಾರಿಗಳು ಅಗತ್ಯ ದಾಖಲೆ ಹಾಗೂ ಮಾಹಿತಿಯನ್ನು ಸಂಗ್ರಹಿಸಿ, ಇಲಾಖಾ ವಿಚಾರಣೆಯನ್ನು ನಡೆಸಿ, ಸರ್ಕಾರಕ್ಕೆ ವರದಿಯನ್ನು ಸಲ್ಲಿಸಿರುವ ಹಿನ್ನೆಲೆಯಲ್ಲಿ ಮುಂದೆ ಯಾವ ರೀತಿಯ ಮರು ತನಿಖೆಯನ್ನು ನಡೆಸುವ ಅಗತ್ಯವಿಲ್ಲವೆನ್ನುವ ಅಭಿಪ್ರಾಯದ ಮೇರೆಗೆ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ಸಮಿತಿಯು ತೀರ್ಮಾನಿಸಿತು. |

<table>
<tr><td></td><td></td><td></td><td>ಯಾರ್‍ಯಾರಿಗೆ ಸಂಬಂಧ ಇದೆ ಎಂಬುದನ್ನು ವಿಚಾರಣೆ ಮಾಡುತ್ತಿದ್ದೇವೆ. ಯಾರು ತಪ್ಪಿತಸ್ಥರಿದ್ದಾರೆ ಅವರ ಮೇಲೆ ಶಿಸ್ತಿನ ಕ್ರಮವನ್ನು ತೆಗೆದುಕೊಳ್ಳುತ್ತೇವೆ. ಮುಂದೆ ಈ ರೀತಿ ಆಗಲಾರದಂತೆ ನಾವು ನೋಡಿಕೊಳ್ಳುತ್ತೇವೆ ಎಂದು ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ತಿಳಿಸಿದರು.</td><td></td></tr>
<tr><td>19</td><td>6047<br>ಚು.ಗು.ಪ್ರ : 3706<br>ಶ್ರೀ ಸೋಮಣ್ಣ ಮ. ಬೇವಿನಮರದ<br>ವಿ.ಪ.ನ.ದಿ:<br>15-11-2017</td><td>ಹಾವೇರಿ ಜಿಲ್ಲೆಯಲ್ಲಿ ಜಿಂಕೆ ಹಾಗೂ ಸಾರಂಗಳಿಂದ ಉಂಟಾದ ಬೆಳೆನಾಶ ಆದ ಅಲ್ಪ ಮಳೆಯಲ್ಲಿ ರೈತರು ಧೈರ್ಯ ಮಾಡಿ ಬೆಳೆದ ಬೆಳೆಗಳಿಗೆ ಸಂಪೂರ್ಣ ನಾಶವಾದ ರೈತರಿಗೆ ಸರ್ಕಾರದಿಂದ ಸಹಾಯಧನ ನೀಡುವ ಬಗ್ಗೆ.</td><td>ಸರ್ಕಾರ ಆದೇಶ ಸಂಖ್ಯೆ: ಅಪಜೀ/130/ಎಫ್ ಡಬ್ಲ್ಯು ಎಲ್/2016 ದಿನಾಂಕ: 19.09.2016ರ ಆದೇಶದಲ್ಲಿ ವನ್ಯಪ್ರಾಣಿಗಳಿಂದ ಉಂಟಾಗುವ ಬೆಳೆಹಾನಿ ಪ್ರಕರಣಗಳಲ್ಲಿ ವಿವಿಧ ಬೆಳೆಗಳಿಗೆ ದರಗಳನ್ನು ನಿಗದಿಪಡಿಸಿದ್ದು, ಅದರಂತೆ ದಯಾತ್ಮಕ ಧನವನ್ನು ಪಾವತಿಸಲಾಗುತ್ತಿದೆ. 2017-18ನೇ ಸಾಲಿನಲ್ಲಿ ಹಾವೇರಿ ಜಿಲ್ಲೆಯಲ್ಲಿ ಜಿಂಕೆ, ಸಾರಂಗಗಳ ಹಾವಳಿಯಿಂದ ಉಂಟಾದ ಬೆಳೆನಾಶ ಪ್ರಕರಣಗಳಿಗೆ ದಯಾತ್ಮಕ ಧನದ ಪರಿಹಾರಕ್ಕಾಗಿ ಈಗ ವಲಯ ಅರಣ್ಯಾಧಿಕಾರಿಗಳಿಗೆ ಅರ್ಜಿಗಳು ಬರುತ್ತಿದ್ದು, ಸದರಿ ಅರ್ಜಿಗಳು ಪರಿಶೀಲನಾ ಹಂತದಲ್ಲಿದ್ದು, ನಿಯಮಾನುಸಾರ ದಯಾತ್ಮಕ ಧನ ವಿತರಿಸಲಾಗುವುದು ಎಂದು ಅರಣ್ಯ, ಪರಿಸರ ಮತ್ತು</td><td>ದಿನಾಂಕ: 22.11.2018ರಂದು ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, 2017-18ನೇ ಸಾಲಿನಲ್ಲಿ ಹಾವೇರಿ ಜಿಲ್ಲೆಯಲ್ಲಿ ಜಿಂಕೆ ಮತ್ತು ಸಾರಂಗಗಳ ಹಾವಳಿಯಿಂದ ಉಂಟಾದ ಬೆಳೆನಾಶ ಪ್ರಕರಣಗಳಿಗೆ ಪರಿಹಾರ ಧನವನ್ನು ಈ ಕೆಳಗಿನಂತೆ ವಿತರಿಸಲಾಗಿದೆ :
<table>
<tr><th>ಕ್ರಮ ಸಂಖ್ಯೆ</th><th>ವಲಯ</th><th>ಸಂಖ್ಯೆ</th><th>ಪರಿಹಾರ (ರೂ.)</th></tr>
<tr><td>1</td><td>ಹಾವೇರಿ</td><td>291</td><td>4,22.200.00</td></tr>
<tr><td>2</td><td>ಹಿರೇಕೆರೂರು</td><td>119</td><td>64,120.00</td></tr>
<tr><td>3</td><td>ಬ್ಯಾಡಗಿ</td><td>30</td><td>2,00,544.00</td></tr>
<tr><td>4</td><td>ರಾಣೇಬೆನ್ನೂರು</td><td>39</td><td>95,670.00</td></tr>
<tr><td>5</td><td>ಧುಂಡಶಿ</td><td>35</td><td>1,48.721.00</td></tr>
<tr><td></td><td>ಒಟ್ಟು</td><td>514</td><td>9.31.255.00</td></tr>
</table>
ಮೇಲ್ಕಂಡಂತೆ ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ಸಮಿತಿಯು ತೀರ್ಮಾನಿಸಿತು.</td></tr>
</table>

| | | | | |
|---|---|---|---|---|
| | | | ಜೀವಿಶಾಸ್ತ್ರ ಸಚಿವರು ತಿಳಿಸಿದರು. | |
| 20 | 6048<br>ಚು.ಗು.ಪ್ರ : 3777<br>ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ<br>ವಿ.ಪ.ನ.ದಿ: 15–11–2017 | ಪಶ್ಚಿಮ ಘಟ್ಟ ಪ್ರದೇಶ ಹಾಗೂ ಕಾಳಿ ಕಣಿವೆ ಪ್ರದೇಶಗಳು ಅತ್ಯಂತ ಸೂಕ್ಷ್ಮ ಪ್ರದೇಶಗಳಾಗಿದ್ದು, ಇವುಗಳ ಸಂರಕ್ಷಣೆಗೆ ಮಾಡುವ ಕುರಿತು. | ಕರ್ನಾಟಕ ಜೀವ ವೈವಿಧ್ಯ ಮಂಡಳಿಯ ವತಿಯಿಂದ ಪಶ್ಚಿಮ ಘಟ್ಟ ಪ್ರದೇಶ ಹಾಗೂ ಕಾಳಿ ಕಣಿವೆ ಪ್ರದೇಶಗಳ ಸಂರಕ್ಷಣೆಗಾಗಿ ಈ ಪ್ರದೇಶವನ್ನು ಜೀವವೈವಿಧ್ಯತಾ ಪಾರಂಪರಿಕ ತಾಣವೆಂದು ಘೋಷಿಸುವ ಬಗ್ಗೆ ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ತಿಳಿಸಿದರು. | ದಿನಾಂಕ: 22.11.2018ರಂದು ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ಪಶ್ಚಿಮಘಟ್ಟಗಳ ಭಾಗವಾದ ಕಾಳಿ ಕಣಿವೆ ಪ್ರದೇಶಗಳಲ್ಲಿನ 814.884 ಚ.ಕಿ.ಮೀ. ಪ್ರದೇಶವನ್ನು ಕಾಳಿ ಹುಲಿ ಸಂರಕ್ಷಣೆ ಯೋಜನೆಯ ಕೋರ್/ಕ್ರಿಟಿಕಲ್ ಪ್ರದೇಶವೆಂದು ಸರ್ಕಾರದಿಂದ ಘೋಷಿಸಲ್ಪಟ್ಟು, ಸಂರಕ್ಷಣೆ ಕಾರ್ಯ ಕೈಗೊಳ್ಳಲಾಗುತ್ತಿದೆ ಜೀವ ವೈವಿಧ್ಯವು ಹೆಚ್ಚಿಗೆ ಇರುವ ಕಾರಣಕ್ಕೆ ಈ ಭಾಗಗಳನ್ನು ರಕ್ಷಿತ ಪ್ರದೇಶಗಳೆಂದು ಘೋಷಿಸಲಾಗಿರುತ್ತದೆ ಮತ್ತು ಕಾಳಿ ಕಣಿವೆ ಪ್ರದೇಶದ ಸುತ್ತಮುತ್ತಲಿನ ಪ್ರದೇಶವನ್ನು ಪರಿಸರ ಸೂಕ್ಷ್ಮ ವಲಯವೆಂದು ಘೋಷಿಸುವ ಪ್ರಸ್ತಾವನೆಯು ಕೇಂದ್ರ ಸರ್ಕಾರದ ಪರಿಶೀಲನೆಯಲ್ಲಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸದರಿ ಭರವಸೆಯನ್ನು ಮುಕ್ತಾಯ ಗೊಳಿಸಲು ಸಮಿತಿಯು ತೀರ್ಮಾನಿಸಿತು. |

| | | | | |
|---|---|---|---|---|
| 21 | 6049<br>ಚು.ಗು; 2158<br>ಶ್ರೀ ಎಸ್.ಎಲ್.ಘೋಟ್ನೇಕರ್<br>ವಿಪನದಿ:07.06.2017 | ಉತ್ತರ ಕನ್ನಡ ಶಿರಸಿ ತಾಲ್ಲೂಕಿನಲ್ಲಿ ಗಂಧದ ಗಿಡಗಳ ಹಾಗೂ ದಾಲಚಿನ್ನಿ ಎಲೆ, ತೊಗಟೆಗಳ ವ್ಯಾಪಕ ಕಳ್ಳತನದ ಬಗ್ಗೆ. | ಶ್ರೀಗಂಧ ಕಳ್ಳತನದ ಕೆಲವು ಪ್ರಕರಣಗಳು ಕಂಡು ಬಂದಿದ್ದು, ಅವುಗಳ ಕುರಿತು ಅರಣ್ಯ ಮೊಕದ್ದಮ್ಮೆಗಳನ್ನು ದಾಖಲಿಸಲಾಗಿದೆ.<br><br>ಬೇರೆ ಇನ್ನಾವುದೇ ಇಂತಹ ಪ್ರಕರಣಗಳು ಕಂಡು ಬಂದಲ್ಲಿ ಕರ್ನಾಟಕ ಅರಣ್ಯ ಕಾಯ್ದೆ 1963 ಹಾಗೂ ಕರ್ನಾಟಕ ಅರಣ್ಯ ನಿಯಮಾವಳಿ 1969 ರಂತೆ ಅರಣ್ಯ ಮೊಕದ್ದಮೆ ದಾಖಲಿಸಿ ಕ್ರಮ ಕೈಗೊಳ್ಳಲಾಗುವುದು ಎಂದು ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ತಿಳಿಸಿದರು. | ದಿನಾಂಕ: 22.11.2018ರಂದು ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ಶಿರಸಿ ಅರಣ್ಯ ವಿಭಾಗದಲ್ಲಿ ಶ್ರೀಗಂಧ ಹಾಗೂ ದಾಲಚಿನ್ನಿ ಎಲೆ ತೊಗಟೆಗಳ ವ್ಯಾಪಕ ಕಳ್ಳತನದ ಪ್ರಕರಣಗಳಲ್ಲಿ ಶಿರಸಿ ಅರಣ್ಯ ವಲಯಕ್ಕೆ ಸಂಬಂಧಿಸಿದಂತೆ ಹೊನ್ನೆಗದ್ದೆ, ನೀರ್ನಳ್ಳಿ, ಇಟಗುಳಿ ಭಾಗಗಳಲ್ಲಿ ಯಾವುದೇ ಕಳ್ಳತನ ಪ್ರಕರಣಗಳು ದಾಖಲಾಗಿರುವುದಿಲ್ಲ. ಆದರೆ, ಶಿರಸಿ ತಾಲ್ಲೂಕು ಹುಲೇಕಲ್, ಶೀಗೇಹಳ್ಳಿ ಗ್ರಾಮದಲ್ಲಿ ಈ ಕೆಳಗಿನಂತೆ ಪ್ರಕರಣಗಳು ದಾಖಲಾಗಿರುತ್ತದೆ. |

| ಅರಣ್ಯ ಮೊಕದ್ದಮೆ ಸಂಖ್ಯೆ/ವರ್ಷ | ಪ್ರಕರಣ ದಾಖಲಿಸಿದ ಸ್ಥಳ | ಜಪ್ತಿ ಮಾಡಿದ ಮಾಲಿನ ವಿವರ (ಕೆ.ಜಿ.ಗಳಲ್ಲಿ) | | ಷರಾ |
|---|---|---|---|---|
| **01/2014–15 ದಿ: 21.07.214** | **ಹುಲೇಕಲ್ ವಲಯ, ಶೀಗೇಹಳ್ಳಿ ಗ್ರಾಮದ ಅ.ಸ.ಸಂ. 167, ಶಿರಸಿ ತಾಲ್ಲೂಕು** | ಶ್ರೀಗಂಧ | **17.00** | **ವಲಯ ಅರಣ್ಯಾಧಿಕಾರಿಯವರು ವಿಚಾರಣೆ ವರದಿ ಸಲ್ಲಿಸಿ ಆರೋಪಿ ಪತ್ತೆಯಾಗದ ಕಾರಣ ಪ್ರಕರಣ ಇತ್ಯರ್ಥಗೊಳಿಸಲು ಕೋರಿಕೊಂಡ ಪ್ರಯುಕ್ತ ಉಪ ಅರಣ್ಯ ಸಂರಕ್ಷಣಾಧಿಕಾರಿ, ಶಿರಸಿ ವಿಭಾಗ, ಶಿರಸಿ, ಇವರ ಕಚೇರಿಯಿಂದ ಪ್ರಕರಣ ಮುಕ್ತಾಯಗೊಳಿಸಿ ಜಪ್ತಾದ ಶ್ರೀಗಂಧವನ್ನು ಧಾರವಾಡದಲ್ಲಿರುವ ಶ್ರೀಗಂಧ ಕೋಠಿಗೆ ಸಾಗಿಸಲು ದಿ: 01.08.2014ಕ್ಕೆ ಆದೇಶ ನೀಡಲಾಗಿರುತ್ತದೆ. ಸದರಿ ಆದೇಶದ ಮೇರೆಗೆ ವಲಯ ಅರಣ್ಯಾಧಿಕಾರಿ ಹುಲೇಕಲ್ ಇವರು ದಿ: 03.08.2017ರಂದು ರಹದಾರಿ ಸಂಖ್ಯೆ: 6705ರ ಮೂಲಕ ಶ್ರೀಗಂಧದ ಕೋಠಿ, ಧಾರವಾಡಕ್ಕೆ ಸಾಗಾಣಿಕೆ ಮಾಡಿರುತ್ತಾರೆ.** |
| **02/2014–15 ದಿ: 22.8.2014** | **ಶೀಗೇಹಳ್ಳಿ ಗ್ರಾಮ ಅ.ಸ.ಸಂ: 167, ಶಿರಸಿ ತಾಲ್ಲೂಕು** | ಶ್ರೀಗಂಧ | **12.30** | **ವಾಹನ ಮಾಲೀಕರ ಮೇಲೆ ವಲಯ ಅರಣ್ಯಾಧಿಆರಿ, ಹುಲೇಕಲ್ ರವರು ದಿ: 9.12.2015ರಂದು ನ್ಯಾಯಾಲಯದಲ್ಲಿ ಆರೋಪಣಾ ಪಟ್ಟಿ ಸಲ್ಲಿಸಲಾಗಿದ್ದು, ಹೆಚ್ಚುವರಿ ಸಹಾಯಕ ಸರ್ಕಾರಿ ಅಭಿಯೋಜಕರು, ಶಿರಸಿ, ಇವರು ಕೆಲವು ಅಂಶಗಳ ಬಗ್ಗೆ ಸ್ಪಷ್ಟೀಕರಣ ಕೋರಿದ್ದು, ಸರಿಪಡಿಸಿ ಮರು ಸಲ್ಲಿಸಲಾಗುವುದು.** |

| | | | | |
|---|---|---|---|---|
| | | | | ವಶಪಡಿಸಿಕೊಂಡಿರುವ ದ್ವಿಚಕ್ರ ವಾಹನ ಎಂ–80 ಸಂಖ್ಯೆ: ಕೆಎ 31–ಹೆಚ್3186 ವಾಹನದ ಬಗ್ಗೆ 71(ಎ) ಪ್ರಕರಣ ವಿಚಾರಣೆ ಹಂತದಲ್ಲಿರುತ್ತದೆ. |
| **01/2016–17 ದಿ: 10.08.2016** | ಶೀಗೇಹಳ್ಳಿ ಗ್ರಾಮ ಅ.ಸ.ಸಂ:51 ಶಿರಸಿ ತಾಲ್ಲೂಕು | ಶ್ರೀಗಂಧ | **40.00** | ವಲಯ ಅರಣ್ಯಾಧಿಕಾರಿಯವರು ವಿಚಾರಣೆ ವರದಿ ಸಲ್ಲಿಸಿ ಆರೋಪಿ ಪತ್ತೆಯಾಗದ ಕಾರಣ ಪ್ರಕರಣ ಇತ್ಯರ್ಥಗೊಳಿಸಲು ಕೋರಿಕೊಂಡ ಪ್ರಯುಕ್ತ ಉಪ ಅರಣ್ಯ ಸಂರಕ್ಷಣಾಧಿಕಾರಿ, ಶಿರಸಿ ವಿಭಾಗ, ಶಿರಸಿ, ಇವರ ಕಚೇರಿಯಿಂದ ಪ್ರಕರಣ ಮುಕ್ತಾಯಗೊಳಿಸಿ ಜಪ್ತಾದ ಶ್ರೀಗಂಧವನ್ನು ಧಾರವಾಡದಲ್ಲಿರುವ ಶ್ರೀಗಂಧದದ ಕೋಠಿಗೆ ಸಾಗಿಸಲು ದಿ: 22.2.2017ರಂದು ಆದೇಶ ನೀಡಲಾಗಿರುತ್ತದೆ. ಸದರಿ ಆದೇಶದ ಮೇರೆಗೆ ವಲ ಅರಣ್ಯಾಧಿಕಾರಿಗಳು ದಿ: 03.08.2017ರಂದು ರಹದಾರಿ ಸಂಖ್ಯೆ: 6705ರಂತೆ ಶ್ರೀಗಂಧವನ್ನು ಶ್ರೀಗಂಧದ ಕೋಠಿ ಧಾರವಾಡಕ್ಕೆ ಸಾಗಿಸಿರುತ್ತಾರೆ. |
| **01/2017–18 ದಿ: 08.09.2017** | ಶೀಗೇಹಳ್ಳಿ ಗ್ರಾಮ ಅ.ಸ.ಸಂ. 167 ಶಿರಸಿ ತಾಲ್ಲೂಕು | ಶ್ರೀಗಂಧ | **36.00** | ವಲಯ ಅರಣ್ಯಾಧಿಕಾರಿಯವರು ವಿಚಾರಣೆ ವರದಿ ಸಲ್ಲಿಸಿ ಆರೋಪಿ ಪತ್ತೆಯಾಗದ ಕಾರಣ ಪ್ರಕರಣ ಇತ್ಯರ್ಥಗೊಳಿಸಲು ಕೋರಿಕೊಂಡ ಪ್ರಯುಕ್ತ ಉಪ ಅರಣ್ಯ ಸಂರಕ್ಷಣಾಧಿಕಾರಿ, ಶಿರಸಿ ವಿಭಾಗ, ಶಿರಸಿ ಇವರ ಕಚೇರಿಯಿಂದ ಪ್ರಕರಣ ಮುಕ್ತಾಯಗೊಳಿಸಿ ಜಪ್ತಾದ ಶ್ರೀಗಂಧವನ್ನು ಧಾರವಾಡದಲ್ಲಿರುವ ಶ್ರೀಗಂಧದ ಕೋಠಿಗೆ ಸಾಗಿಸಲು ದಿ: 20.6.2018ಕ್ಕೆ ಆದೇಶ ನೀಡಲಾಗಿದೆ. |

ಈ ಮೇಲಿನಂತೆ ಶಿರಸಿ ವಿಭಾಗದಲ್ಲಿ ಅರಣ್ಯ ಮೊಕದ್ದಮೆ ಪ್ರಕರಣಗಳನ್ನು ದಾಖಲಿಸಿ ನಿಯಮಾನುಸಾರ ಕ್ರಮ ಕೈಗೊಳ್ಳಲಾಗಿದೆಯೆಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ಸಮಿತಿಯು ಶೀರ್ಮಾನಿಸಿತು.

| | | | | |
|---|---|---|---|---|
| 22 | 6050 ಚು.ಗು.ಪ್ರ;2283 ಶ್ರೀ ಆರ್.ಚೌಡರೆಡ್ಡಿ ತೂಪಲ್ಲಿ ವಿಪನದಿ:07.06.2017 | ಸಕಲೇಶಪುರ ತಾಲ್ಲೂಕು ಪಶ್ಚಿಮ ಘಟ್ಟದ ಅಂಚಿನಲ್ಲಿರುವ ಬಿಸಲೆ ರಕ್ಷಿತಾರಣ್ಯಾ ಮತ್ತು ಕಾಗಿನೆಲೆ ಅರಣ್ಯ ಪಕ್ಕದ ಆನೆ ಕಾರಿಡಾರ್ ವ್ಯಾಪ್ತಿಯಲ್ಲಿ ರೈತರು ಆನೆಗಳ ಹಾವಳಿಯಿಂದ ತೀವ್ರ ತೊಂದರೆಗೊಳಗಾಗಿರುವ ವಿಷಯಕ್ಕೆ ಸಂಬಂಧಿಸಿದಂತೆ ತಾತ್ಕಾಲಿಕ ಪರಿಹಾರ ಅಲ್ಲದೆ, ಶಾಶ್ವತ ಪರಿಹಾರದ ಬಗ್ಗೆ. | ಕರ್ನಾಟಕ ವಿಧಾನ ಪರಿಷತ್ತಿನ ಅರ್ಜಿ ಸಮಿತಿಯು ದಿನಾಂಕ: 25.05.2016ರಂದು ನಡೆಸಿದ ಸಭೆಗೆ ಹಾಸನ ಜಿಲ್ಲೆ ಸಕಲೇಶಪುರ ತಾಲ್ಲೂಕಿನ ಹೆತ್ತೂರು ಹೋಬಳಿಯಲ್ಲಿ ವನ್ಯಪ್ರಾಣಿಗಳ ಹಾವಳಿಯಿಂದ ಉಂಟಾದ ಹಾನಿ ಪ್ರಕರಣಗಳಾದ ಬೆಳೆನಾಶ, ಮಾನವ ಪ್ರಾಣಹಾನಿ/ಗಾಯ ಮತ್ತು ಸಾಕುಪ್ರಾಣಿ ಹತ್ಯೆಯ ಪ್ರಕರಣಗಳಲ್ಲಿ ನಿಯಮಾನುಸಾರ ದಯಾತ್ಮಕ ಧನ ನೀಡಿದ್ದರೂ ಪಶ್ಚಿಮ ಘಟ್ಟಕ್ಕೆ ಹೊಂದಿ ಕೊಂಡಿರುವ ಹೆತ್ತೂರು ಹೋಬಳಿಯ 2400 ಎಕರೆ ಜಮೀನನ್ನು ಸರ್ಕಾರವು ಸ್ವಾದೀನಕ್ಕೆ ಪಡೆದುಕೊಳ್ಳುವಂತೆ ಸಮಿತಿಯು ಸೂಚಿಸಿರುತ್ತದೆ. ಆನೆ ಮೊಗಸಾಲೆ (ಕಾರಿಡಾರ್) ಯೋಜನೆಯಲ್ಲಿ ಕಾಡಿನ ಮಧ್ಯದಲ್ಲಿರುವ ಅಥವಾ ಕಾಡಿಗೆ ಹೊಂದಿಕೊಂಡಿರುವ ಖಾಸಗಿ ಜಮೀನುಗಳನ್ನು ಆನೆಗಳು ಬಹುಕಾಲ ವಲಸೆ ಮಾರ್ಗವಾಗಿ ಬಳಸುತ್ತಿದ್ದಲ್ಲಿ ಅಂತಹ ಚಿಕ್ಕ ಚಿಕ್ಕ ಭೂಮಿಗಳನ್ನು ಖರೀದಿಸಿ ಆನೆಗಳ ವಲಸೆಗೆ ಅಡಚಣೆ ಇಲ್ಲದಂತೆ ಮಾಡುವುದಾಗಿದೆ. ಆ ಯೋಜನೆ ಯಲ್ಲಿ ರೂ.272.00 ಕೋಟಿಯಷ್ಟು ಅನುದಾನ ನೀಡಲು | ದಿನಾಂಕ:22.11.2018ರಂದು ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ಸಕಲೇಶಪುರ ತಾಲ್ಲೂಕು ಪಶ್ಚಿಮಘಟ್ಟದ ಅಂಚಿನಲ್ಲಿರುವ ಬಿಸಲೆ, ಕಾಗಿನೆಲೆ ಮತ್ತು ಕೆಂಚಕಮಾರಿ ರಕ್ಷಿತ ಅರಣ್ಯದ ವ್ಯಾಪ್ತಿಯಲ್ಲಿ 7 ಗ್ರಾಮಗಳು (ಮಂಕನಹಳ್ಳಿ, ಅರಣಿ, ಬಾಜಿಮನೆ ಎಸ್ಟೇಟ್, ಬಾಳೆಹಳ್ಳ, ಬೆಟ್ಟಕುಮಾರಿ, ಬೋರನಮನೆ ಮತ್ತು ಯತ್ತನಹಳ್ಳಿ) ಬರುತ್ತವೆ. ಸದರಿ ಗ್ರಾಮಗಳಲ್ಲಿ ಕಾಡಾನೆಗಳ ಹಾವಳಿ ಹೆಚ್ಚಾಗಿರುವ ಸೂಕ್ಷ್ಮ ಪ್ರದೇಶಗಳಾಗಿದ್ದು, ಮುನ್ನೆಚ್ಚರಿಕಾ ಕ್ರಮವಾಗಿ ಗ್ರಾಮ ಪಂಚಾಯಿತಿ ಕಚೇರಗಳ ಅವರಣದಲ್ಲಿ ಸೂಚನಾ ಫಲಕಗಳನ್ನು ಅಳವಡಿಸಿ ರೈತರು, ಸಾರ್ವಜನಿಕರು, ವಿದ್ಯಾರ್ಥಿಗಳಲ್ಲಿ ಆನೆಗಳ ಚಲನವಲನಗಳ ಬಗ್ಗೆ ಜಾಗೃತಿ ಮೂಡಿಸಲಾಗುತ್ತಿದೆ. ವಲಯ ಅರಣ್ಯ ಅಧಿಕಾರಿಗಳ ಮಟ್ಟದಲ್ಲಿ ಕ್ಷಿಪ್ರ ಕಾರ್ಯಪಡೆ ತಂಡಗಳನ್ನು ರಚಿಸಿದ್ದು, ವಾಹನ, ಪಟಾಕಿ, ಧ್ವನಿವರ್ಧಕ ಮತ್ತಿತರೆ ಸೌಲಭ್ಯಗಳನ್ನು ಸಹ ಒದಗಿಸಲಾಗಿದೆ. ಈ ಕ್ಷಿಪ್ರ ಪಡೆಯು ಸಾರ್ವಜನಿಕರಿಂದ ಕಾಡಾನೆಗಳ ಹಾವಳಿ ಕುರಿತು ಮಾಹಿತಿ ದೊರೆತ ತಕ್ಷಣ ಸ್ಥಳಕ್ಕೆ ಧಾವಿಸಿ ಕಾಡಾನೆಗಳನ್ನು ಹಿಮ್ಮೆಟ್ಟಿಸಲು ಕ್ರಮ ತೆಗೆದುಕೊಳ್ಳಲಾಗಿದೆ. ಇತ್ತೀಚೆಗೆ ಸಕಲೇಶಪುರ ತಾಲ್ಲೂಕಿನಲ್ಲಿ ಎರಡು ಗುಂಪಿನ ಕಾಡಾನೆಗಳ ನಾಯಕತ್ವ ವಹಿಸುವ ಹೆಣ್ಣಾನೆಗಳಿಗೆ ರೇಡಿಯೋ ಕಾಲರ್‌ನ್ನು ಅಳವಡಿಸಿ ಆನೆಗಳ ಹಿಂಡಿನ ಚಲನವಲನಗಳನ್ನು ಕಾಲಕಾಲಕ್ಕೆ ಪತ್ತೆಹಚ್ಚಲಾಗುತ್ತಿದ್ದು, ಸದರಿ ಮಾಹಿತಿಯನ್ನು ಸ್ಥಳೀಯರೊಂದಿಗೆ ಹಂಚಿಕೊಳ್ಳಲಾಗುತ್ತಿದೆ.<br><br>ಸಕಲೇಶಪುರ ತಾಲ್ಲೂಕಿನ ಹೆತ್ತೂರು ಹೋಬಳಿಯಲ್ಲಿ ವನ್ಯ ಪ್ರಾಣಿಗಳಿಂದ ಉಂಟಾದ ಹಾನಿ ಪ್ರಕರಣಗಳಾದ ಬೆಳೆನಾಶ, ಮಾನವ ಪ್ರಾಣಹಾನಿ/ಗಾಯ ಮತ್ತು ಸಾಕುಪ್ರಾಣಿ ಹತ್ಯೆಯ ಪ್ರಕರಣಗಳಲ್ಲಿ ನಿಯಮಾನುಸಾರ ದಯಾತ್ಮಕಧನ ನೀಡಲಾಗುತ್ತಿದೆ. |

| | | | | |
|---|---|---|---|---|
| | | | ಸಾಧ್ಯವಾಗದಿದ್ದರಿಂದ ಈ ಯೋಜನೆಗೆ ಕಾಂಪಾ ನಿಧಿಯಿಂದ ಅನುದಾನ ನೀಡುವಂತೆ ಕೇಂದ್ರ ಸರ್ಕಾರಕ್ಕೆ ಕೋರಲಾಗಿದೆ, ಕೇಂದ್ರ ಸರ್ಕಾರದ ಉತ್ತರವನ್ನು ನೀರಿಕ್ಷಿಸಲಾಗುತ್ತಿದೆ ಎಂದು ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ತಿಳಿಸಿದರು. | 2017–18ನೇ ಸಾಲಿನಲ್ಲಿ ಹಾಸನ ಜಿಲ್ಲೆಗೆ ಆನೆ ಹಾವಳಿ ನಿಯಂತ್ರಣ ತಡೆಗೆ ತೆಗೆದುಕೊಂಡ ಎಲ್ಲಾ ಕಾರ್ಯಕ್ರಮಗಳ ನಿರ್ವಹಣೆಗಾಗಿ, ಆನೆ ಹಿಮ್ಮೆಟ್ಟಿಸುವ ತಂಡಗಳ ಹೊರಗುತ್ತಿಗೆ ದಿನಗೂಲಿ ನೌಕರರ ಮಜೂರಿ ಹಾಗು ದಯಾತ್ಮಕ ಧನ ಪಾವತಿಗೆ ಒಟ್ಟಾರೆಯಾಗಿ ರೂ. 512.61 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ.<br>ಹಾಸನ ಜಿಲ್ಲೆಯಲ್ಲಿ ಶಾಶ್ವತ ಪರಿಹಾರ ಕಂಡುಕೊಳ್ಳಲು ಹಾಸನ ಜಿಲ್ಲೆಯ ಮೀಸಲು ಅರಣ್ಯ ಪ್ರದೇಶಗಳು ಛಿದ್ರಾವಸ್ಥೆಯಲ್ಲಿರುವುದರಿಂದ (Fragmented) ಸದರಿ ಅರಣ್ಯಗಳ ಸುತ್ತ ತಡೆ ನಿರ್ಮಿಸುವುದು ವ್ಯವಹಾರಿಕವಾಗಿ ಸಾಧ್ಯವಾಗುತ್ತಿಲ್ಲ. (Practically barricading forest area in Hassan District is not possible because of fragmented forest areas) ಸಕಲೇಶಪುರ ಅರಣ್ಯ ಪ್ರದೇಶದ ಸುತ್ತಮತ್ತ ಆನೆಗಳ ಹಾವಳಿ ತೀವ್ರತರನಾಗಿದ್ದ ಹಿನ್ನಲೆಯಲ್ಲಿ, 2013–14ನೇ ಸಾಲಿನಲ್ಲಿ 22 ಕಾಡಾನೆಗಳನ್ನು ಹಿಡಿದು, ಆನೆ ಪುನರ್ವಸತಿ ಶಿಬಿರಗಳಲ್ಲಿ ಪುನರ್ವಸತಿ ಕಲ್ಪಿಸಿದ ಮೇಲೆ, ಸದರಿ ಪ್ರದೇಶದಲ್ಲಿ ಗಣನೀಯವಾಗಿ ಸಮಸ್ಯೆ ಹತೋಟಿಗೆ ಬಂದಿತ್ತು. ಆದರೆ, ಇತ್ತೀಚಿನ ದಿನಗಳಲ್ಲಿ ಮಡಿಕೇರಿ ಅರಣ್ಯ ಪ್ರದೇಶದಿಂದ ಕಾಡಾನೆಗಳು ಮತ್ತೊಮ್ಮೆ ಈ ಪ್ರದೇಶಕ್ಕೆ ಬಂದು ಹಾವಳಿಯನ್ನು ಉಂಟು ಮಾಡುತ್ತಿವೆ.<br>ಕರ್ನಾಟಕ ವಿಧಾನ ಪರಿಷತ್ ಅರ್ಜಿ ಸಮಿತಿಯು ದಿ: 25/5/2016ರಂದು ನಡೆಸಿದ ಸಭೆಗೆ ಹಾಸನ ಜಿಲ್ಲೆ ಸಕಲೇಶಪುರ ತಾಲ್ಲೂಕಿನ ಹೆತ್ತೂರು ಹೋಬಳಿಯಲ್ಲಿ 2400 ಎಕರೆ ಜಮೀನನ್ನು ಸರ್ಕಾರವು ಸ್ವಾಧೀನಕ್ಕೆ ಪಡೆದುಕೊಳ್ಳುವಂತೆ ಸೂಚಿಸಿರುತ್ತದೆ. ಸಮಿತಿಯ ಸೂಚನೆ ಪ್ರಕಾರ ಹೆತ್ತೂರು ಹೋಬಳಿಯ 7 ಹಳ್ಳಿಗಳಿಗೆ ಸಂಬಂಧಿಸಿದ 3143 ಎಕರೆ ಜಮೀನು ಹಾಗೂ ವಸತಿಗಳನ್ನು ಹೊಸ ಭೂಸ್ವಾಧಿನ ಕಾಯ್ದೆಯಂತೆ ಸ್ವಾಧೀನಪಡಿಸಿಕೊಳ್ಳಲು ಅಂದಾಜು ರೂ. 272.00 ಕೋಟಿ ಅನುದಾನ ಬೇಕಾಗುತ್ತದೆ. ಸುಮಾರು 3000 ಎಕರೆ ಭೂಸ್ವಾಧೀನ ಪ್ರಕ್ರಿಯೆ ನಡೆಸಿ ಖಾಸಗಿ ಜಮೀನನ್ನು ಖರೀದಿಸುವುದು ಶಾಶ್ವತ ಪರಿಹಾರವಾದರೂ ಈ |

| | | | | |
|---|---|---|---|---|
| | | | | ಪ್ರಕ್ರಿಯೆಗೆ ಸುಮಾರು ರೂ. 300.00 ಕೋಟಿ ಅನುದಾನ ಬೇಕಾಗುತ್ತದೆ.<br>ಪ್ರಾಕೃತಿಕ ಕಾಯ್ದಿಟ್ಟ ಅರಣ್ಯ ಮತ್ತು ರಕ್ಷಿತಾರಣ್ಯಗಳ ಮಧ್ಯಭಾಗದಲ್ಲಿ ಮತ್ತು ಅಕ್ಕ-ಪಕ್ಕದಲ್ಲಿರುವ ಖಾಸಗಿ ಪ್ರದೇಶವನ್ನು ಸರ್ಕಾರಕ್ಕೆ ಸ್ವಾಧೀನ ಪಡಿಸಿಕೊಳ್ಳುವ ಬಗ್ಗೆ ಮಾನ್ಯ ಸರ್ವೋಚ್ಛ ನ್ಯಾಯಾಲಯವು ಐ.ಎ.ನಂ. 2530-31 ಮತ್ತು ಡಬ್ಲೂಪಿ ನಂ. 14029/2008ರಲ್ಲಿ ನೀಡಿದ ಆದೇಶದ ಮೇರೆಗೆ ಸರ್ಕಾರಿ ಆದೇಶ ಸಂಖ್ಯೆ: ಅಪಜೀ 139 ಎಫ್ಎಎಫ್ 2012, ದಿ: 6.1.2014ರಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ಮಟ್ಟದ ಸಮಿತಿಯೊಂದನ್ನು ರಚಿಸಲಾಗಿರುತ್ತದೆ.<br>ಹೆತ್ತೂರು ಹೋಬಳಿ ಸಕಲೇಶಪುರ ತಾಲ್ಲೂಕಿನ 3143 ಎಕರೆ ಖಾಸಗಿ ಜಮೀನನ್ನು ಭೂಸ್ವಾಧೀನಪಡಿಸಿಕೊಳ್ಳಲು ಪರಿಹಾರದ ಮೊತ್ತವನ್ನು 2015-16ನೇ ಸಾಲಿನಲ್ಲಿ ಅಂದಾಜಿಸಲಾಗಿರುತ್ತದೆ. ಪತ್ರ ದಿನಾಂಕ: 26.07.2018ರಂದು ಆನೆ ಕಾರಿಡಾರ್ ಅನುಷ್ಠಾನಕ್ಕಾಗಿ ರೂ.50.00 ಕೋಟಿಯನ್ನು ಹಂಚಿಕೆ ಮಾಡಲಾಗಿದೆ. ಆನೆ ಕಾರಡಾರ್ ವ್ಯಾಪ್ತಿಗೆ ಒಳಪಡುವಂತಹ ಅರಣ್ಯ ಲಕ್ಷಣವಿರುವ ಸರ್ಕಾರಿ ಜಮೀನುಗಳ ಮಧ್ಯಭಾಗದಲ್ಲಿರುವ ಖಾಸಗಿ ಜಮೀನುಗಳನ್ನು ಆದ್ಯತೆಯ ಮೇರೆಗೆ ಸ್ವಾಧೀನಪಡಿಸಿಕೊಂಡು ಸರ್ಕಾರಿ ಜಮೀನಿನ ಜೊತೆಜೊತೆಯಲ್ಲಿ ಒಟ್ಟು ಜಮೀನನ್ನು ಕಂದಾಯ ಇಲಾಖೆಯಿಂದ ಅರಣ್ಯ ಇಲಾಖೆಗೆ ಹಸ್ತಾಂತರಿಸಿ ರಕ್ಷಿತ ಅರಣ್ಯವೆಂದು ಘೋಷಿಸುವಂತೆ ಕ್ರಮ ಕೈಗೊಳ್ಳುವುದು ಸೂಕ್ತವಾಗಿದೆ. ಈಗಾಗಲೇ ಹೆತ್ತೂರು ಹೋಬಳಿಯಲ್ಲಿ ಗುರುತು ಮಾಡಿರುವ ಖಾಸಗಿ ಭೂಮಿಯ ಜೊತೆಗೆ ಅರಣ್ಯ ಲಕ್ಷಣ ಹೊಂದಿರುವ ಇತರೆ ಸರ್ಕಾರಿ ಜಮೀನನ್ನು ಅರಣ್ಯ ಇಲಾಖೆಗೆ ವರ್ಗಾಯಿಸಿಕೊಳ್ಳಲು ಕ್ರಮ ಕೈಗೊಳ್ಳಲಾಗುತ್ತಿದೆ. ಸ್ವಲ್ಪ ಮಟ್ಟಿಗೆ ಮಾನವ-ಆನೆ ಸಂಘರ್ಷ ಕಡಿಮೆ ಮಾಡಲು ಸಾಧ್ಯವಾಗುತ್ತದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ಸಮಿತಿಯು ತೀರ್ಮಾನಿಸಿತು. |

| | | | | |
|---|---|---|---|---|
| 23 | 6051<br>ಚು.ಗು.ಪ್ರ : 3238<br>ಡಾ॥ ಜಯಮಾಲ ರಾಮಚಂದ್ರ<br>ವಿ.ಪ.ನ.ದಿ :<br>15-11-2017 | ರಾಜ್ಯದ ಅರಣ್ಯ ಭಾಗದಲ್ಲಿ ಕೃಷಿ ಚಟುವಟಿಕೆ ನಡೆಸಿರುವ ಜನರ ಸಮೀಕ್ಷೆ ಹಾಗೂ ಸದರಿ ಅರಣ್ಯ ಭಾಗಗಳಲ್ಲಿ ಕೃಷಿ ಚಟುವಟಿಕೆ ಮಾಡುವ ಜನರಿಗೆ ಸರ್ಕಾರ ಪರಿಹಾರ ನೀಡುವ ಬಗ್ಗೆ. | ಗ್ರಾಮ/ತಾಲ್ಲೂಕು ಮತ್ತು ಜಿಲ್ಲಾ ಮಟ್ಟದ ಸಮಿತಿಗಳಲ್ಲಿ ಅರಣ್ಯ ಹಕ್ಕು ಕಾಯ್ದೆಯಡಿ ಸಲ್ಲಿಸಿರುವ ಅರ್ಜಿಗಳನ್ನು ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುತ್ತಿದೆ. ಅರಣ್ಯ ಹಕ್ಕು ಕಾಯ್ದೆಯಡಿ ಸಲ್ಲಿಸಿರುವ ಅರ್ಜಿಗಳನ್ನು ಪರಿಶೀಲಿಸಿ ಅರ್ಹರಲ್ಲದ ಫಲಾನುಭವಿಗಳಿಗೆ ಸರ್ಕಾರದ ಸುತ್ತೋಲೆ ಸಂಖ್ಯೆ: ಅಪಜೀ 45 ಎಫ್‌ಜಿಎಲ್.2015 ದಿನಾಂಕ: 28-06-2016 ರಲ್ಲಿ ನಿರ್ದೇಶಿಸಿರುವಂತೆ ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ತಿಳಿಸಿದರು. | ದಿನಾಂಕ:22.11.2018ರಂದು ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ಅರಣ್ಯ ಹಕ್ಕು ಕಾಯ್ದೆಯಡಿ ಸೆಪ್ಟೆಂಬರ್ ಅಂತ್ಯದವರೆಗೆ ಅನುಸೂಚಿತ ಪಂಗಡದಿಂದ 48608 ಅರ್ಜಿಗಳು ಸ್ವೀಕೃತವಾಗಿದ್ದು, ಅವುಗಳ ಪೈಕಿ 12086 ಅರ್ಜಿಗಳನ್ನು ಮಾನ್ಯ ಮಾಡಲಾಗಿದೆ.<br><br>ಮುಂದುವರೆದು, ಇತರೆ ಪಾರಂಪರಿಕ ಅರಣ್ಯ ವರ್ಗದಿಂದ (ಅನುಸೂಚಿತ ಬುಡಕಟ್ಟುಗಳ ಮತ್ತು ಇತರೆ ಪಾರಂಪರಿಕ ಅರಣ್ಯ ವಾಸಿಗಳ (ಅರಣ್ಯ ಹಕ್ಕುಗಳನ್ನು ಮಾನ್ಯ ಮಾಡುವ) ಅಧಿನಿಯಮ 2006 (2007ರ 2) ಮತ್ತು ನಿಯಮಗಳು-2008 (ನಿಯಮಗಳ ತಿದ್ದುಪಡಿ-2012) 229757 ಅರ್ಜಿಗಳು ಸ್ವೀಕೃತವಾಗಿದ್ದು, ಅವುಗಳ ಪೈಕಿ 2318 ಅರ್ಜಿಗಳನ್ನು ಮಾನ್ಯ ಮಾಡಲಾಗಿದೆ.<br><br>ಅರಣ್ಯ ಹಕ್ಕು ಕಾಯ್ದೆಯಡಿ ಅನರ್ಹವೆಂದು ಕಂಡು ಬಂದ ಪ್ರಕರಣಗಳಲ್ಲಿ ಸರ್ಕಾರದ ಸುತ್ತೋಲೆ ಸಂಖ್ಯೆ: ಅಪಜೀ 45 ಎಫ್‌ಜಿಎಲ್ 2015, ದಿ: 28.6.2016ರಲ್ಲಿ ನಿರ್ದೇಶಿಸಿರುವಂತೆ ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ಸಮಿತಿಯು ತೀರ್ಮಾನಿಸಿತು. |
| 24 | 6052<br>ಚು.ಗು.ಪ್ರ. 792<br>ಶ್ರೀ ಎಸ್.ವಿ. ರವಿ<br>ವಿಪನದಿ:<br>23.03.2016 | ಕನಕಪುರ ತಾಲ್ಲೂಕಿನ ಸುಂಡಗಟ್ಟದಲ್ಲಿ ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿ ಚುನಾವಣೆಯ ಹಿಂದಿನ ದಿನ ರೈತ ತನ್ನ ಹೊಲದಲ್ಲಿ ಕೆಲಸ ನಿರ್ವಹಿಸುತ್ತಿದ್ದ ಸಂದರ್ಭದಲ್ಲಿ ಆನೆಯ ತುಳಿತಕ್ಕೆ ಒಳಪಟ್ಟು ಮೃತಪಟ್ಟ | ಚುನಾವಣೆ ಬಹಿಷ್ಕಾರ ಮಾಡಿದಂತಹ ಗಂಭೀರ ವಾದಂತಹ ವಿಷಯವನ್ನು ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಯಾವ ಅಧಿಕಾರಿಯ ಇನ್ನೂ ಏಕೆ ಆ ಸ್ಥಳಕ್ಕೆ ಭೇಟಿ ನೀಡಿಲ್ಲ ಎಂಬುದರ ಬಗ್ಗೆ | ದಿನಾಂಕ:22.11.2018ರಂದು ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ಕೋಡಿಹಳ್ಳಿ ವನ್ಯಜೀವಿ ವಲಯ, ಬಿಳಿಕಲ್ ಅರಣ್ಯ ಪ್ರದೇಶದ ಸುಂಡಘಟ್ಟ ಫಾರೆಸ್ಟ್ ಎನ್‌ಕ್ಲೋಶರ್, ಸುಂಡಘಟ್ಟ ಗ್ರಾಮದ ಸರ್ವೆ ನಂ. 25/ಪಿ-41ರ ಜಮೀನಿನಲ್ಲಿ ಶ್ರೀ ಮರಿಲಿಂಗೇಗೌಡ ಬಿನ್: ಭೈರೇಗೌಡ ಸುಮಾರು 55 ವರ್ಷ, ಸುಂಡಘಟ್ಟ ವಾಸಿ ಇವರು ದಿ: 11.02.2016ರ ರಾತ್ರಿ 9.30ರ ಸಮಯದಲ್ಲಿ |

| | | | | |
|---|---|---|---|---|
| | | ಸಂದರ್ಭದಲ್ಲಿ PCCF ಆಗಲಿ CCF ಆಗಲಿ DFO ಆಗಲಿ ಸ್ಥಳಕ್ಕೆ ಭೇಟಿ ನೀಡದಿದ್ದ ಕಾರಣ ಜನರು ಚುನಾವಣೆಯನ್ನು ಬಹಿಷ್ಕಾರ ಮಾಡಿದ್ದರ ಬಗ್ಗೆ ಹಾಗೂ ಪರಿಹಾರ ಮೊತ್ತವನ್ನು ಜಾಸ್ತಿ ಮಾಡುವ ಬಗ್ಗೆ. | ಪರಿಶೀಲಿಸಿ, ಅವರಿಂದ ವಿವರಗಳನ್ನು ಪಡೆದು ಅವರ ಮೇಲೆ ಕ್ರಮವನ್ನು ತೆಗೆದುಕೊಳ್ಳುತ್ತೇನೆ ಮತ್ತು ಪರಿಹಾರ ಮೊತ್ತವನ್ನು ಹೆಚ್ಚಿಸುವ ಕುರಿತು ಪರಿಶೀಲನೆ ಮಾಡುತ್ತೇವೆ ಎಂದು ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ತಿಳಿಸಿದರು. | ದನಕರಗಳನ್ನು ಹುಡುಕಲು ಹೋಗಿದ್ದ ಸಂದರ್ಭದಲ್ಲಿ ಕಾಡಾನೆ ದಾಳಿಯಿಂದ ಮೃತಪಟ್ಟಿರುತ್ತಾರೆ. ಸದರಿ ಸ್ಥಳಕ್ಕೆ ವಲಯ ಅರಣ್ಯಾಧಿಕಾರಿ, ಕೋಡಿಹಳ್ಳಿ ವನ್ಯಜೀವಿ ವಲಯ ರವರು ಆರಕ್ಷಕರೊಡನೆ ಹೋಗಿ ಮಹಜರ್ ಕ್ರಮ ಜರುಗಿಸಿ ಮೃತದೇಹವನ್ನು ಕನಕಪುರ ಸಾರ್ವಜನಿಕ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ನಡೆಸಿರುತ್ತಾರೆ. ಮೃತರು ತೀರಿಕೊಂಡ ದಿನದಂದು ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ನ್ಯಾಯಾಲಯದಲ್ಲಿ ಹಾಜರಿದ್ದ ಕಾರಣ ಘಟನಾ ಸ್ಥಳಕ್ಕೆ ವಲಯಾರಣ್ಯಾಧಿಕಾರಿಯವರು ಭೇಟಿ ನೀಡಿರುತ್ತಾರೆ. ನಂತರ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ದೂರವಾಣಿ ಮುಖಾಂತರ ಸಂಬಂಧಿಗಳು ಮತ್ತು ಸುಂಡಕಟ್ಟ ಗ್ರಾಮದ ಮುಖಂಡರೊಂದಿಗೆ ಮಾತನಾಡಿ ಸಂತಾಪವನ್ನು ವ್ಯಕ್ತಪಡಿಸಿ, ಕೂಡಲೇ ಧಯಾತ್ಮಕಧನ ನೀಡುವ ಬಗ್ಗೆ ತಿಳಿಸಿರುತ್ತಾರೆ. ಸರ್ಕಾರಿ ಆದೇಶದ ಪ್ರಕಾರ ಮೃತಪಟ್ಟ ವ್ಯಕ್ತಿಯ ವಾರಸುದಾರರಿಗೆ ನಿಯಮಾನುಸಾರ ರೂ. 5.00 ಲಕ್ಷ ಪಾವತಿಸಬೇಕಾಗಿದ್ದು, ಅದರಂತೆ, ಮೃತರ ಪತ್ನಿ ಶ್ರೀಮತಿ ನಾಗಮ್ಮರವರಿಗೆ ರೂ.5.00 ಲಕ್ಷಗಳ ಧಯಾತ್ಮಕ ಧನವನ್ನು ಚೆಕ್ ಸಂಖ್ಯೆ: 832664, ದಿ: 17.3.2016ರ ಮೂಲಕ ಪಾವತಿಸಲಾಗಿರುತ್ತದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸದರಿ ಭರವಸೆಯನ್ನು ಮುಕ್ತಾಯ ಗೊಳಿಸಲು ಸಮಿತಿಯು ತೀರ್ಮಾನಿಸಿತು. |

<table>
<tr>
<td>25</td>
<td>6053<br>ಚು.ರ.ಪ್ರ. 769<br>ಶ್ರೀ ಎನ್.ಎಸ್. ಬೋಸ್‌ರಾಜು<br>ವಿಪನದಿ:<br>23.03.2016</td>
<td>ರಾಯಚೂರು ಜಿಲ್ಲೆಯಲ್ಲಿ ಖಾಲಿ ಇರುವ ಪ್ರದೇಶಗಳಲ್ಲಿ ಅರಣ್ಯೀಕರಣ ಯೋಜನೆಗಳಿಗೆ ಸರ್ಕಾರ ಕೈಗೊಂಡಿರುವ ಕ್ರಮದ ಬಗ್ಗೆ.</td>
<td>ರಾಯಚೂರು ಜಿಲ್ಲೆಯಲ್ಲಿ ಒಟ್ಟು ಅರಣ್ಯ ಪ್ರದೇಶದ ಶೇ.30ರಷ್ಟು ಪ್ರದೇಶವು ಕಲ್ಲುಬಂಡೆಗಳಿಂದ ಕೂಡಿದೆ. ಇತರೆ ಖಾಲಿ ಇರುವ ಮತ್ತು ನೆಡುತೋಪು ಬೆಳೆಸಲು ಯೋಗ್ಯವಿರುವ ಪ್ರದೇಶಗಳಲ್ಲಿ ಸಸಿಗಳನ್ನು ನೆಡಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ ಎಂದು ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ತಿಳಿಸಿದರು.</td>
<td>ದಿನಾಂಕ:22.11.2018ರಂದು ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ರಾಯಚೂರು ಜಿಲ್ಲೆಯಲ್ಲಿ ಖಾಲಿ ಇರುವ ಅರಣ್ಯ ಪ್ರದೇಶ, ರಸ್ತೆ ಬದಿ, ನಗರ ಪ್ರದೇಶಗಳಲ್ಲಿ ಕಳೆದ ಎರಡು ವರ್ಷಗಳಲ್ಲಿ ಪ್ರಾದೇಶಿಕ ಮತ್ತು ಸಾಮಾಜಿಕ ಅರಣ್ಯ ವಿಭಾಗಗಳಿಂದ ಬೆಳೆಸಲಾಗಿರುವ ನೆಡುತೋಪುಗಳ ವಿವರ ಈ ಕೆಳಗಿನಂತಿದೆ:–
<table>
<tr><th>ವರ್ಷ</th><th>ನೆಡುತೋಪು ನಿರ್ಮಾಣ ಮಾಡಿದ ಪ್ರದೇಶ (ಹೆ.ಗಳಲ್ಲಿ)</th><th>ನೆಟ್ಟ ಸಸಿಗಳ ಸಂಖ್ಯೆ (ಲಕ್ಷಗಳಲ್ಲಿ)</th><th>ರೈತರಿಗೆ/ಸಂಘ ಸಂಸ್ಥೆಗಳಿಗೆ ವಿತರಿಸಿದ ಸಸಿಗಳ ಸಂಖ್ಯೆ (ಲಕ್ಷಗಳಲ್ಲಿ)</th><th>ಷರಾ</th></tr>
<tr><td>2016–17</td><td>1635.95</td><td>8.485</td><td>2.436</td><td>–</td></tr>
<tr><td>2017–18</td><td>1844.87</td><td>9.847</td><td>5.36</td><td>–</td></tr>
<tr><td>2018–19</td><td>1480.40</td><td>6.622</td><td>1.9</td><td>ಪ್ರಸಕ್ತ ಸಾಲಿನಲ್ಲಿ ನಿಗದಿಪಡಿಸುವ ಗುರಿ</td></tr>
</table>
ಮುಂದುವರೆದು, ಕೇಂದ್ರ ಸರ್ಕಾರದ ಅಧೀನದ ಫಾರೆಸ್ಟ್ ಸರ್ವೆ ಆಫ್ ಇಂಡಿಯಾ ಸಂಸ್ಥೆಯ 2017ರ ವರದಿಯಂತೆ ರಾಯಚೂರು ಜಿಲ್ಲೆಯಲ್ಲಿ 20 ಚದರ ಕಿ.ಮೀ. (2000 ಹೆಕ್ಟೇರ್)ನಷ್ಟು ವೃಕ್ಷ ಹೊದಿಕೆಯು ಹೆಚ್ಚಾಗಿರುತ್ತದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ಸಮಿತಿಯು ತೀರ್ಮಾನಿಸಿತು.</td>
</tr>
</table>

| | | | | |
|---|---|---|---|---|
| 26 | 6054<br>ಚು.ರ.ಪ್ರ. 777<br>ಶ್ರೀ ಬಿ.ಜಿ. ಪಾಟೀಲ್<br>ವಿಪನದಿ:<br>23.03.2016 | ಯಾದಗಿರಿ ಜಿಲ್ಲೆಯ ಸುರಪುರ ತಾಲ್ಲೂಕಿನ ಬೋನಾಳ ಕೆರೆಗೆ ವಿವಿಧ ದೇಶಗಳಿಂದ ಲಕ್ಷಾಂತರ ಪಕ್ಷಿಗಳು ವಲಸೆ ಬರುತ್ತಿರುವುದರಿಂದ ಸದರಿ ಪಕ್ಷಿಗಳನ್ನು ರಕ್ಷಿಸುವುದರ ಜೊತೆಗೆ ಸದರಿ ಕೆರೆಯನ್ನು ಅಭಿವೃದ್ಧಿಪಡಿಸಿ ಪಕ್ಷಿಧಾಮ ವೆಂದು ಘೋಷಿಸುವ ಬಗ್ಗೆ | ಬೋನಾಳ ಕೆರೆಯಲ್ಲಿ ಬಹಳಷ್ಟು ಪಕ್ಷಿಗಳು ಬರುವುದನ್ನು ಗಮನಿಸಲಾಗಿ, ಅರಣ್ಯ ಇಲಾಖೆಯ ಗಸ್ತು ಸಿಬ್ಬಂದಿಗಳಿಂದ ಪಕ್ಷಿಗಳನ್ನು ಬೇಟೆಯಾಡದಂತೆ ರಕ್ಷಿಸಲಾಗುತ್ತಿದೆ. ಕೆರೆಯನ್ನು ಅಭಿವೃದ್ಧಿಪಡಿಸಿ ಪಕ್ಷಿಧಾಮವೆಂದು ಘೋಷಿಸುವ ಕುರಿತು ಅಧ್ಯಯನ ನಡೆಸಿ ಸೂಕ್ತ ಕ್ರಮ ಜರುಗಿಸಲಾಗುವುದು ಎಂದು ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ತಿಳಿಸಿದರು. | ದಿನಾಂಕ:22.11.2018ರಂದು ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ಜಿಲ್ಲಾಧಿಕಾರಿಗಳು, ಯಾದಗಿರಿ ಜಿಲ್ಲೆ, ಯಾದಗಿರಿರವರು ದಿ: 16.01.2018ರಂದು ನಡೆದ ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿಯ ಸಭೆಯಲ್ಲಿ ಸುರಪುರ ತಾಲ್ಲೂಕಿನ ಅಮ್ಮಾಪುರ ಸೀಮಾಂತರದ ಸರ್ವೆ ನಂ. 23 ಒಟ್ಟು ವಿಸ್ತೀರ್ಣ 673.04 ಎಕರೆ/ಗುಂಟೆ ಪ್ರದೇಶವು ಬೋನಾಳ ಕೆರೆಯ ಪ್ರದೇಶವಾಗಿದ್ದು, ಕೆರೆಯು ಭೂಮಿಯು ಯಾದಗಿರಿ ಜಿಲ್ಲಾ ಪ್ರವಾಸೋದ್ಯಮ ಇಲಾಖೆಯ ಸ್ವಾದೀನದಲ್ಲಿದ್ದು, ಅದನ್ನು ಅರಣ್ಯ ಇಲಾಖೆಗೆ ಹಸ್ತಾಂತರಿಸುವಂತೆ ನಿರ್ದೇಶನ ನೀಡಿರುತ್ತಾರೆ. ಅದರಂತೆ, ದಿ: 12.6.2018ರಂದು ಜಂಟಿ ಸರ್ವೇ ಕಾರ್ಯ ಕೈಗೊಂಡಿದ್ದು, ದಿ: 28.6.2018ರಲ್ಲಿ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಪ್ರಾದೇಶಿಕ ಅರಣ್ಯ ವಿಭಾಗ, ಯಾದಗಿರಿರವರು ಜಿಲ್ಲಾಧಿಕಾರಿ, ಯಾದಗಿರಿ ಜಿಲ್ಲೆ, ಯಾದಗಿರಿ ರವರಿಗೆ ಪತ್ರ ಬರೆದು, ಬೋನಾಳ ಕೆರೆಯನ್ನು ಸಂರಕ್ಷಿಸಲು ಅರಣ್ಯ ಇಲಾಖೆಗೆ ಭೌತಿಕವಾಗಿ ಹಸ್ತಾಂತರಸಲು ಕೋರಿರುತ್ತಾರೆ. ಸದರಿ ಕೆರೆ ಪ್ರದೇಶವನ್ನು ವನ್ಯಜೀವಿ ಸಂರಕ್ಷಣಾ ಕಾಯ್ದೆ–1972 ಸೆಕ್ಷೆನ್–36(ಎ) ಅಡಿಯಲ್ಲಿ ಬೋನಾಳ ಪಕ್ಷಿ ಸಂರಕ್ಷಣೆ ಪ್ರದೇಶವೆಂದು ಘೋಷಿಸಬೇಕಾದಲ್ಲಿ ಸ್ಥಳೀಯ ಸಂಸ್ಥೆಯಾದ ಗ್ರಾಮ ಪಂಚಾಯಿತಿಯು ಸದರಿ ಕೆರೆ ಪ್ರದೇಶವನ್ನು ಸಂರಕ್ಷಿತ ಪ್ರದೇಶವೆಂದು ಘೋಷಿಸುವ ಬಗ್ಗೆ ಗ್ರಾಮ ಪಂಚಾಯಿತಿ ಸಭೆಯಲ್ಲಿ ಠರಾವು ಮಾಡಿ ತೀರ್ಮಾನವನ್ನು ಇಲಾಖೆಗೆ ತಿಳಿಸಿದಲ್ಲಿ ವಿಷಯವನ್ನು ರಾಜ್ಯ ವನ್ಯಜೀವಿ ಮಂಡಳಿಯ ಮುಂದೆ ಪ್ರಸ್ತಾಪಿಸಿ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ಸಮಿತಿಯು ತೀರ್ಮಾನಿಸಿತು. |

## ಸಣ್ಣ ನೀರಾವರಿ ಇಲಾಖೆ

| ಕ್ರಮ ಸಂಖ್ಯೆ | ಆಶ್ವಾಸನೆ ಸಂಖ್ಯೆ ಆಧಾರ ಮತ್ತು ದಿನಾಂಕ | ವಿಷಯ | ಆಶ್ವಾಸನೆ | ತೆಗೆದುಕೊಂಡ ಕ್ರಮ |
|---|---|---|---|---|
| 1 | 3472<br>ಚು.ರ.ಪ್ರ: 273<br>ಶ್ರೀಮತಿ ವಿಮಲಾಗೌಡ<br>ವಿಪನದಿ:10.03.2010 | 2009–10ನೇ ಸಾಲಿನಲ್ಲಿ ಸಣ್ಣ ನೀರಾವರಿ ಕೆರೆಗಳ ಹೂಳು ತೆಗೆಯುವ ಕಾಮಗಾರಿಯನ್ನು ಪೂರ್ಣಗೊಳಿಸುವ ಬಗ್ಗೆ. | ಮುಂಬರುವ ಸಾಲಿನಲ್ಲಿ ವಿವಿಧ ಯೋಜನೆಯಡಿಯಲ್ಲಿ ಲಭ್ಯವಾಗಬಹುದಾದ ಅನುದಾನದಿಂದ ಉಳಿದ ಕೆರೆಗಳಲ್ಲಿ ಅಗತ್ಯವಿರುವ ಕಡೆ ಹೂಳನ್ನು ತೆಗೆಯುವ ಕಾಮಗಾರಿಗಳನ್ನು ಕೈಗೊಳ್ಳಲಾಗುವುದು ಎಂದು ಮಾನ್ಯ ಸಣ್ಣ ನೀರಾವರಿ ಯೋಜನೆ ಹಾಗೂ ಸಾಂಖ್ಯಿಕ ಸಚಿವರು ತಿಳಿಸಿದರು. | ದಿನಾಂಕ: 06.06.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ಸಣ್ಣ ನೀರಾವರಿ ಇಲಾಖೆಯಲ್ಲಿ ಕೆರೆಗಳ ಹೂಳೆತ್ತುವ ನಿರ್ದಿಷ್ಟ ಕಾಮಗಾರಿಗಳನ್ನು ಕೈಗೊಳ್ಳಲಾಗುವುದಿಲ್ಲ. ಕೆರೆಗಳಲ್ಲಿ ನೈಸರ್ಗಿಕವಾಗಿ ತುಂಬಿರುವ ಹೂಳನ್ನು ತೆಗೆದು ಸುಸ್ಥಿತಿಯಲ್ಲಿರಿಸುವ ಮತ್ತು ಕೆರೆಗಳ ದುರಸ್ತಿ ಮಾಡಿ ಅಭಿವೃದ್ಧಿಪಡಿಸುವ ಕಾರ್ಯವನ್ನು ಪ್ರತಿ ಸಾಲಿನಲ್ಲಿ ಇಲಾಖೆಗೆ 4702–ಕೆರೆಗಳ ಆಧುನೀಕರಣ ನಬಾರ್ಡ್, 4702 – ಕೆರೆಗಳ ಆಧುನೀಕರಣ ಪ್ರಧಾನ ಕಾಮಗಾರಿಗಳು ಮತ್ತು 4702 – ಕೆರೆಗಳ ದುರಸ್ತಿ ಮತ್ತು ಪುನ:ಶ್ಚೇತನ ಲೆಕ್ಕಶೀರ್ಷಿಕೆಗಳಡಿ ಒದಗಿಸುವ ಅನುದಾನದಲ್ಲಿ ಹಂತ ಹಂತವಾಗಿ ಕೈಗೊಳ್ಳಲಾಗುತ್ತಿದೆ.<br><br>2017–18 ಮತ್ತು 2018–19ನೇ ಸಾಲುಗಳಲ್ಲಿ ಕೆರೆ ಅಭಿವೃದ್ಧಿ ಪ್ರಾಧಿಕಾರದ ಮೂಲಕ "ಕೆರೆ ಸಂಜೀವಿನಿ ಯೋಜನೆ" ಅಡಿ ಕೆರೆಗಳಲ್ಲಿ ಹೂಳೆತ್ತುವ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗಿದೆ. ಈ ಯೋಜನೆಯ ಕೆರೆಗಳಲ್ಲಿ ತುಂಬಿರುವ ಹೂಳನ್ನು ಭಾಗಶ: ತೆಗೆಯಲು ಕ್ರಮವಹಿಸಲಾಗಿರುತ್ತದೆ. ಈ ಯೋಜನೆಯಡಿ ಇಲಾಖೆಯು ಕೆರೆಗಳಲ್ಲಿ ಹೂಳೆತ್ತುವ ಕಾಮಗಾರಿಗಳಿಗೆ ಜೆ.ಸಿ.ಬಿ. ರೀತಿಯ ಯಂತ್ರಗಳನ್ನು ನೀಡಲಿದ್ದು, ಕೆರೆ ಹೂಳನ್ನು ರೈತರು ತಮ್ಮ ಸ್ವಂತ ಖರ್ಚಿನಲ್ಲಿ ತಮ್ಮ ಜಮೀನುಗಳಿಗೆ ಸಾಗಾಣೆ ಮಾಡಲು ಅವಕಾಶ ಕಲ್ಪಿಸಲಾಗಿದೆ. ಇದಲ್ಲದೇ ಕೆರ ಅಭಿವೃದ್ಧಿ ಮತ್ತು ಸುಧಾರಣೆ ಕಾಮಗಾರಿಗಳನ್ನು ಅನುದಾನದ ಲಭ್ಯತೆ ಮತ್ತು ಆದ್ಯತೆಯ ಮೇರೆಗೆ ಹಂತ ಹಂತವಾಗಿ ಕೈಗೊಳ್ಳಲಾಗುತ್ತಿದೆ.<br><br>2015–16ನೇ ಸಾಲಿನಿಂದ 2018–19ನೇ ಸಾಲಿನವರೆಗೆ ಸಣ್ಣ ನೀರಾವರಿ ಇಲಾಖೆಯ ವಿವಿಧ ಲೆಕ್ಕಶೀರ್ಷಿಕೆಗಳಡಿ ಒದಗಿಸಲಾದ |

| | | | | |
|---|---|---|---|---|
| | | | | ಮತ್ತು ವೆಚ್ಚ ಮಾಡಲಾದ ಅನುದಾನದ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.<br><br>ಕೆರೆಗಳಲ್ಲಿ ಹೂಳೆತ್ತುವ ಹಾಗೂ ಕೆರೆಗಳ ಅಭಿವೃದ್ಧಿ ಕಾರ್ಯವು ನಿರಂತರ ಪ್ರಕ್ರಿಯೆಯಾಗಿದ್ದು, ಅನುದಾನದ ಲಭ್ಯತೆಯನುಸಾರ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುವುದು ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ಸಮಿತಿಯು ತೀರ್ಮಾನಿಸಿತು. |
| 2 | 5363<br>ಚು.ರ.ಪ್ರ. 2162<br>ಶ್ರೀ ಮಹಂತೇಶ ಶಿವಾನಂದ ಕೌಜಲಗಿ<br>ವಿಪನದಿ:30.07.2014 | ಬಾದಾಮಿ ತಾಲ್ಲೂಕಿನ ಶಿವಯೋಗಿಮಂದಿರ ದೇವಸ್ಥಾನದ ಆವರಣಕ್ಕೆ ಹಾನಿಯಾಗುವುದನ್ನು ತಡೆಯಲು ಕೈಗೊಳ್ಳಲಾದ ಪ್ರವಾಹ ಸಂರಕ್ಷಣೆ ಕಾಮಗಾರಿ ಪ್ರಗತಿ ಬಗ್ಗೆ | ಬಾಗಲಕೋಟೆ ಜಿಲ್ಲೆ, ಬಾದಾಮಿ ತಾಲ್ಲೂಕಿನ ಶಿವಯೋಗಿ ಮಂದಿರದಲ್ಲಿ ದೇವಸ್ಥಾನದ ಆವರಣದ ಕಟ್ಟಡಕ್ಕೆ ತಡೆಗೋಡೆ ನಿರ್ಮಿಸುವ ರೂ. 35.00 ಲಕ್ಷ ಅಂದಾಜು ಮೊತ್ತದ ಕಾಮಗಾರಿಯನ್ನು 2013–14ನೇ ಸಾಲಿನಲ್ಲಿ "ಪ್ರವಾಹ ನಿಯಂತ್ರಣ" ಲೆಕ್ಕ ಶೀರ್ಷಿಕೆ ಅಡಿ ಕೈಗೆತ್ತಿಕೊಳ್ಳಲಾಗಿದೆ. ಈ ಕಾಮಗಾರಿಯನ್ನು ಟೆಂಡರ್ ಆಧಾರದ ಮೇಲೆ ರೂ.27.43 ಲಕ್ಷಗಳಿಗೆ ಗುತ್ತಿಗೆದಾರರಿಗೆ ವಹಿಸಿಕೊಡಲಾಗಿದೆ. 138.00 ಮೀ. ಉದ್ದಕ್ಕೆ ಮೆಟ್ಟಿಲುಗಳ ಕೆಲಸ ಹಾಗೂ ಗ್ರಿಲ್ ಕೆಲಸ ಪೂರ್ಣಗೊಂಡಿದೆ, ಈ ಕಾಮಗಾರಿಯು ಪ್ರತಿಶತ 50ಕ್ಕಿಂತ ಹೆಚ್ಚಿಗೆ ಪೂರ್ಣಗೊಂಡಿದೆ ಈ ಕಾಮಗಾರಿಗೆ ಇದುವರೆಗೆ ರೂ. 11.12 ಲಕ್ಷ ವೆಚ್ಚ ಮಾಡಲಾಗಿದೆ. ಬ್ಯಾರೇಜ್‌ನ ಮೇಲ್ಭಾಗದಲ್ಲಿ ಪ್ರವಾಹ ಸಂರಕ್ಷಣಾ ಕಾಮಗಾರಿಯನ್ನು ಕೈಗೊಳ್ಳಲು | ದಿನಾಂಕ: 06.06.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ಬಾಗಲಕೋಟೆ ಜಿಲ್ಲೆ ಬಾದಾಮಿ ತಾಲ್ಲೂಕಿನ ಶಿವಯೋಗಿ ಮಂದಿರ ಬ್ಯಾರೇಜಿನ ಮೇಲ್ಭಾಗದಲ್ಲಿ ನೀರಿನ ಕೊರೆತದಿಂದ ಶಿವಯೋಗಿ ಮಂದಿರದ ಕಟ್ಟಡಗಳಿಗೆ ಧಕ್ಕೆಯಾಗುವ ಸಾಧ್ಯತೆಯಿರುತ್ತದೆ. ಇದನ್ನು ತಪ್ಪಿಸಲು 20 ಅಡಿ ಉದ್ದದ Protection Wall, Nala trimming, CNS filling, Providing Weep holes etc, ಐಟಂಗಳನ್ನು ಅಳವಡಿಸಿ ರೂ.75.00 ಲಕ್ಷ ಅಂದಾಜು ಮೊತ್ತದ ಕಾಮಗಾರಿಗೆ ಅನುಮೋದನೆ ನೀಡಲಾಗಿದೆ. ಅದರಂತೆ ಕಾಮಗಾರಿಯನ್ನು ಟೆಂಡರ್ ಆಧಾರದ ಮೇಲೆ ಕೈಗೊಂಡು ರೂ.59.25 ಲಕ್ಷ ವೆಚ್ಚದಲ್ಲಿ ಪೂರ್ಣಗೊಳಿಸಲಾಗಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ಸಮಿತಿಯು ತೀರ್ಮಾನಿಸಿತು. |

| | | | | |
|---|---|---|---|---|
| | | | ರೂ.45.00 ಲಕ್ಷ ವೆಚ್ಚ ತಗುಲಬಹುದೆಂದು ಅಂದಾಜಿಸಲಾಗಿದೆ. ಇದರಲ್ಲಿ 60ಮೀ. ಉದ್ದಕ್ಕೆ ಕಾಂಕ್ರೀಟ್ ಗೋಡೆ, ಏರಿ ನಿರ್ಮಾಣ, ಮೆಟ್ಟಿಲುಗಳ ನಿರ್ಮಾಣ ಹಾಗೂ ಗ್ರಿಲ್ ಅಳವಡಿಸುವ ಕೆಲಸ ಒಳಗೊಂಡಿರುವುದು. ಅನುದಾನದ ಲಭ್ಯತೆಯ ಅನುಸಾರ ಪರಿಶೀಲಿಸಲಾಗುವುದು ಎಂದು ಮಾನ್ಯ ಸಣ್ಣ ನೀರಾವರಿ ಸಚಿವರು ತಿಳಿಸಿದರು. | |
| 3 | 5364<br>ಚು.ಗು.ಪ್ರ: 983<br>ಡಾ॥ ವೀರಣ್ಣ ಮತ್ತಿಕಟ್ಟಿ<br>ವಿಪನದಿ:09.07.2014 | ಹುಬ್ಬಳ್ಳಿ–ಧಾರವಾಡ ಅವಳಿ ನಗರಗಳಲ್ಲಿ ಅಂತರ್ಜಲದ ಕುಸಿತದಿಂದಾಗಿ ಕೊಳವೆ ಬಾವಿಗಳು ಬತ್ತಿ ಹೋಗಿದ್ದು, ನೀರಿನ ಸಮಸ್ಯೆ ಹೆಚ್ಚಾಗುತ್ತಿರುವ ಕುರಿತು. | ಅಂತರ್ಜಲವನ್ನು ಹೆಚ್ಚು ಮಾಡುವುದಕ್ಕೆ ನಾವು ಗ್ರೌಂಡ್ ವಾಟರ್ ಅಥಾರಿಟಿ ನಿರ್ದೇಶನಾಲಯ ಮಹಾ ನಗರ ಪಾಲಿಕೆ, ನಗರ ಸಭೆ, ಪುರಸಭೆ ಪಟ್ಟಣ ಪಂಚಾಯತಿಗೂ ನಿರ್ದೇಶನ ಕೊಡುತ್ತಿದ್ದೇವೆ. ಎಲ್ಲೆಲ್ಲಿ ಮನೆಯನ್ನು ಕಟ್ಟಿಸುತ್ತಿದ್ದಾರೆ ಅಲ್ಲೆಲ್ಲಾ ಮಳೆ ನೀರು ಕೊಯ್ಲನ್ನು ಮಾಡಲೇಬೇಕು ಎಂದು ಕಟ್ಟು ನಿಟ್ಟಿನ ಸೂಚನೆಯನ್ನು ನೀಡುವಂತಹ ಕೆಲಸವನ್ನು ಮಾಡುತ್ತೇವೆ ಎಂದು ಮಾನ್ಯ ಸಣ್ಣ ನೀರಾವರಿ ಸಚಿವರು ತಿಳಿಸಿದರು. | ದಿನಾಂಕ: 06.06.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ಹುಬ್ಬಳ್ಳಿ–ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರವು "ಹುಬ್ಬಳ್ಳಿ – ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರದ ಕಚೇರಿ ಕಟ್ಟಡಕ್ಕೆ ಮಳೆ ನೀರು ಸಂಗ್ರಹಣೆ ವ್ಯವಸ್ಥೆ ಮಾಡಲಾಗಿದ್ದು, ಈ ನೀರನ್ನು ಕಚೇರಿ ಬೋರ್‌ವೆಲ್ ಅಂತರ್ಜಲ ಮರುಪೂರೈಕೆಗಾಗಿ ಹಾಗೂ ಕಚೇರಿ ಉದ್ಯಾನವನದ ನೀರು ಪೂರೈಕೆಗಾಗಿ ಉಪಯೋಗಿಸಲಾಗುತ್ತಿದೆ. ಅಲ್ಲದೇ ಹುಬ್ಬಳ್ಳಿ–ಧಾರವಾಡ ಅವಳಿನಗರ ವ್ಯಾಪ್ತಿಯಲ್ಲಿ ಬರುವ (1) ಎತ್ತಿನಗುಡ್ಡ ಕೆರೆ (2) ಕೃಷಿನಗರದ ಕೆರೆ (3) ಬಮ್ಮಾಪೂರ ಕೆರೆ ಹಾಗೂ (4) ಉಣಕಲ್ಲದ ಚೆನ್ನಪ್ಪನಕೆರೆ ಇವುಗಳಿಗೆ ಕೆರೆ ಒಡ್ಡು ಭದ್ರಗೊಳಿಸುವುದು. ಕಸ, ಹೂಳು ತೆಗೆಯುವುದು, ಆವರಣ ಬೇಲಿ ನಿರ್ಮಿಸುವುದು ತಡೆಗೋಡೆ ನಿರ್ಮಿಸುವುದು, ಪಾಥ್‌ವೇ ನಿರ್ಮಿಸುವುದು ಮತ್ತು ಇನ್‌ಲೇಟ್ ಹಾಗೂ ಔಟ್‌ಲೇಟ್ ದುರಸ್ತಿಗೊಳಿಸುವುದು ಇತ್ಯಾದಿ ಕೆಲಸಗಳನ್ನು ಒಳಗೊಂಡಂತೆ ಅಭಿವೃದ್ಧಿ ಕಾರ್ಯ ಕೈಗೊಳ್ಳಲಾಗಿದೆ ಹಾಗೂ ಖಾಸಗಿ ವಿನ್ಯಾಸಗಳಲ್ಲಿನ ಕೊಳವೆ ಬಾವಿಗಳಿಗೆ ಅಂತರ್ಜಲ ಮರು ಪೂರೈಕೆಗಾಗಿ ಮಳೆ ನೀರು ಇಂಗು ಗುಂಡಿಗಳನ್ನು ವಿನ್ಯಾಸದಾರರೆ ನಿರ್ಮಿಸಲು ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು |

| | | | | |
|---|---|---|---|---|
| | | | | ಸಮಿತಿಯು ತೀರ್ಮಾನಿಸಿತು. |
| 4. | 5365<br>ಚು.ಗು.ಪ್ರ. 1005<br>ಶ್ರೀ ವೀರಕುಮಾರ ಅಪ್ಪಾಸೋ ಪಾಟೀಲ್<br>ವಿಪನದಿ: 17.12.2014 | ಬೆಳಗಾವಿ ಜಿಲ್ಲೆಯಲ್ಲಿರುವ ಕೆರೆಗಳನ್ನು ಒತ್ತುವರಿ ಮಾಡಿಕೊಂಡಿರುವವರ ವಿರುದ್ಧ ತೆಗೆದುಕೊಂಡಿರುವ ಕ್ರಮದ ಬಗ್ಗೆ. | ಬೆಳಗಾವಿ ಜಿಲ್ಲೆಯಲ್ಲಿ 266 ಕೆರೆಗಳು ಸಣ್ಣ ನೀರಾವರಿ ಇಲಾಖೆಯ ವ್ಯಾಪ್ತಿಯೊಳಗೆ ಬರುತ್ತದೆ. 141 ಕೆರೆಗಳನ್ನು ಸರ್ವೆ ಮಾಡಲಾಗಿದೆ, ಅದರಲ್ಲಿ 8 ಕೆರೆಗಳು ಒತ್ತುವರಿಯಾಗಿವೆ, ಅದರಲ್ಲಿ 6 ಕೆರೆಗಳ ಒತ್ತುವರಿಯನ್ನು ತೆರವುಗೊಳಿಸಲಾಗಿದೆ. ಬೆಳಗಾವಿಯ ಅವರೂಳ್ಳಿ ಸಣ್ಣ ನೀರಾವರಿ ಕೆರೆ ಸುಮಾರು 2.50 ಹೆಕ್ಟೇರ್‌ನಷ್ಟು ಉಳಿದಿದೆ, ಚಮಕೇರಿ ಸಣ್ಣ ನೀರಾವರಿ ಕೆರೆ 0.89 ಹೆಕ್ಟೇರ್‌ನಷ್ಟು ಉಳಿದುಕೊಂಡಿದೆ. ಒಟ್ಟು ಸುಮಾರು 3 ಹೆಕ್ಟೇರ್ 39 ಗುಂಟೆಯಷ್ಟು ತೆರವುಗೊಳಿಸಬೇಕಾಗಿದೆ. 86 ಕೆರೆಗಳನ್ನು ಈಗಾಗಲೇ ಸರ್ಕಾರ ಕೆರೆ ಅಭಿವೃದ್ಧಿ ಪ್ರಾಧಿಕಾರವನ್ನು ತರುವುದರ ಮುಖಾಂತರ ಇಡೀ ರಾಜ್ಯದಲ್ಲಿರುವಂತಹ ಎಲ್ಲಾ ಕೆರೆಗಳನ್ನು ಸರ್ವೆ ಮಾಡಿಸಿ ಒತ್ತುವರಿಯನ್ನು ತೆರವುಗೊಳಿಸುವುದಕ್ಕೆ ಸರ್ಕಾರ ಚಿಂತನೆ ಮಾಡಿದೆ ಎಂದು ಮಾನ್ಯ ಸಣ್ಣ ನೀರಾವರಿ ಸಚಿವರು ತಿಳಿಸಿದರು. | ದಿನಾಂಕ: 06.06.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ಬೆಳಗಾವಿ ಜಿಲ್ಲೆಯಲ್ಲಿ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ಅಡಿಯಲ್ಲಿರುವ ಕೆರೆಗಳ ಪೈಕಿ 211 ಕೆರೆಗಳ ಸರ್ವೆ ಮಾಡಲಾಗಿದೆ. ಇದರಲ್ಲಿ 8 ಕೆರೆಗಳು ಒತ್ತುವರಿಯಾಗಿದ್ದು, ಈ ಎಲ್ಲಾ 8 ಕೆರೆಗಳ ಒತ್ತುವರಿ ಪ್ರದೇಶ 6.503 ಹೆಕ್ಟೇರ್‌ಗಳನ್ನು ತೆರವುಗೊಳಿಸಲಾಗಿದೆ. ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.<br><br>ಬೆಳಗಾವಿ ಜಿಲ್ಲೆಯಲ್ಲಿ ಅಸ್ಥಿತ್ವದಲ್ಲಿರುವ ಉಳಿಕೆ 67 ಕೆರೆಗಳ ಪೈಕಿ 44 ಕೆರೆಗಳ ಸರ್ವೆ ಕಾರ್ಯ ಪ್ರಗತಿಯಲ್ಲಿದೆ. 1 ಕೆರೆ ಪೂರ್ಣಗೊಂಡಿರದ ಹಾಗೂ 1 ಕೆರೆ ಬೆಳಗಾವಿ ಜನವಸತಿ ಪ್ರದೇಶದಲ್ಲಿರುವುದರಿಂದ ಈ 2 ಕೆರೆಗಳ ಸರ್ವೆ ಕಾಮಗಾರಿಗಳನ್ನು ಕೈಬಿಡಲಾಗಿದೆ. 1 ಕೆರೆಯನ್ನು ಪ್ರವಾಸೋದ್ಯಮಕ್ಕಾಗಿ ಜಿಲ್ಲಾಡಳಿತಕ್ಕೆ ಹಸ್ತಾಂತರಿಸಲಾಗಿದೆ. 1 ಕೆರೆಯನ್ನು ಕಿತ್ತೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಹಸ್ತಾಂತರಿಸಲಾಗಿದೆ.<br><br>ಉಳಿದಂತೆ ಸರ್ವೆಕಾರ್ಯ ಕೈಗೊಳ್ಳಬೇಕಾದ 19 ಕೆರೆಗಳಿಗೆ ಅನುದಾನಕ್ಕೆ ಅನುಗುಣವಾಗಿ ಹಾಗೂ ಆಧ್ಯತೆಯ ಮೇರೆಗೆ ಸರ್ವೆ ಕಾರ್ಯ ಕೈಗೊಳ್ಳಲಾಗುವುದು ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ಸಮಿತಿಯು ತೀರ್ಮಾನಿಸಿತು. |
| 5. | 5366<br>ಚು.ರ.ಪ್ರ. 996<br>ಶ್ರೀ ಎಂ. ಶ್ರೀನಿವಾಸ್<br>ವಿಪನದಿ: 17.12.2014 | ರಾಜ್ಯದಲ್ಲಿ ಅತಿಕ್ರಮವಾಗಿ ಒತ್ತುವರಿಯಾಗಿರುವ ಕೆರೆಗಳನ್ನು ತೆರವುಗೊಳಿಸುವ ಬಗ್ಗೆ. | ಸಣ್ಣ ನೀರಾವರಿ ಕೆರೆಗಳ ಒತ್ತುವರಿಯನ್ನು ತೆರವುಗೊಳಿಸಲು ಕೆರೆಯ ಗಡಿಯನ್ನು Total station ನಿಂದ ಸರ್ವೆ ಕಾರ್ಯ ಕೈಗೊಂಡು, | ದಿನಾಂಕ: 06.06.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖಾ ವ್ಯಾಪ್ತಿಯಲ್ಲಿ ಒಟ್ಟು 3699 ಕೆರೆಗಳಿದ್ದು, 1122 ಕೆರೆಗಳ 6139. 74 ಹೆಕ್ಟೇರ್ ವಿಸ್ತೀರ್ಣ ಒತ್ತುವರಿಯಾಗಿರುತ್ತದೆ. ಭೂಮಾಪಕರ ಸಹಯೋಗದೊಂದಿಗೆ ಸರ್ವೆ ಕಾರ್ಯ ಕೈಗೊಂಡು |

| | | | | |
|---|---|---|---|---|
| | | | ಒತ್ತುವರಿ ಕಂಡು ಬಂದಲ್ಲಿ ಕಂದಾಯ ಇಲಾಖೆಯ ಸಹಕಾರ ಹಾಗೂ ಅವರ ಉಪಸ್ಥಿತಿಯಲ್ಲಿ ಒತ್ತುವರಿಯನ್ನು ತೆರವುಗೊಳಿಸಲು ಕ್ರಮಕೈಗೊಳ್ಳಲಾಗುತ್ತಿದೆ. ಹಾಗೆಯೇ ಕೆರೆಯಂಗಳದ ಸುತ್ತಲೂ ಬೌಂಡರಿ ಟ್ರೆಂಚ್ ನಿರ್ಮಿಸುವುದು, ಕಾಂಟೂರ್ ಬಂಡ್ ನಿರ್ಮಾಣ, ಫೆನ್ಸಿಂಗ್ ಅಳವಡಿಕೆ ಹಾಗೂ ಬೌಂಡರಿ ಕಲ್ಲುಗಳನ್ನು ನೆಟ್ಟು ಕೆರೆಯಂಗಳದ ಪ್ರದೇಶವನ್ನು ಸಂರಕ್ಷಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಅವಶ್ಯ ಕಂಡುಬಂದಲ್ಲಿ ನ್ಯಾಯಾಲಯದ ಮೊರೆ ಹೋಗಿ ಒತ್ತುವರಿ ತೆರವುಗೊಳಿಸಲು ಕ್ರಮವಹಿಸಲಾಗುವುದು ಎಂದು ಮಾನ್ಯ ಸಣ್ಣ ನೀರಾವರಿ ಸಚಿವರು ತಿಳಿಸಿದರು. | ಒತ್ತುವರಿಯಾದ 1079 ಕೆರೆಗಳ 5735.79 ಹೆಕ್ಟೇರ್ ವಿಸ್ತೀರ್ಣವನ್ನು ತೆರವುಗೊಳಿಸಿ ಕೆರೆಯಂಗಳದ ಸುತ್ತಲೂ ಬೌಂಡರಿ ಟ್ರೆಂಚ್, ಪೆರಿಫರಲ್ ಬಂಡ್, ಚೈನ್‌ಲಿಂಕ್ ಫೆನ್ಸಿಂಗ್ ಮಾಡಿ ಕೆರೆಗಳನ್ನು ಒತ್ತುವರಿಯಿಂದ ಸಂರಕ್ಷಿಸಲಾಗಿದೆ. ಉಳಿದ 43 ಕೆರೆಗಳ 404.15 ಹೆಕ್ಟೇರ್ ವಿಸ್ತೀರ್ಣವನ್ನು ತೆರವುಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.<br><br>ಇಲಾಖೆಯಲ್ಲಿ 51 ಸರ್ವೇಯರ್ ಹುದ್ದೆಗಳು ಮಂಜೂರಾಗಿದ್ದು, 50 ಹುದ್ದೆಗಳು ಖಾಲಿ ಇರುತ್ತವೆ. ಆದಾಗ್ಯೂ, ಖಾಸಗಿ ಸರ್ವೇಯರುಗಳ ಸೇವೆಯನ್ನು ಬಳಸಿಕೊಂಡು ಸರ್ವೆ ಕಾರ್ಯ ಕೈಗೊಂಡು ಒತ್ತುವರಿಯನ್ನು ತೆರವುಗೊಳಿಸಲು ಇಲಾಖೆಯು ಕ್ರಮ ಕೈಗೊಳ್ಳುತ್ತಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ಸಮಿತಿಯು ತೀರ್ಮಾನಿಸಿತು. |
| 6. | 6178<br>ಚು.ಗು.ಪ್ರ:4016<br>ಶ್ರೀ ಕೋಟ ಶ್ರೀನಿವಾಸ ಪೂಜಾರಿ<br>ವಿಪನದಿ: 22.11.2017 | ಎತ್ತಿನಹೊಳೆ ಯೋಜನೆಯಿಂದ ಬಾಧಿತವಾಗುವ ಪ್ರದೇಶಗಳ ಹಾಗೂ ಉಡುಪಿ–ದಕ್ಷಿಣ ಕನ್ನಡ ಜಿಲ್ಲೆಗೆ ಪಶ್ಚಿಮ ವಾಹಿನಿ ಮತ್ತು ಸೌಭಾಗ್ಯ ಸಂಜೀವಿನಿ ಯೋಜನೆಗಳನ್ನು ಅನುಷ್ಠಾನಗೊಳಿಸುವ ಕುರಿತು. | ಪಶ್ಚಿಮ ವಾಹಿನಿ ಮತ್ತು ಸೌಭಾಗ್ಯ ಸಂಜೀವಿನಿ ಯೋಜನೆಗಳ ಅನುಷ್ಠಾನ ಕುರಿತಂತೆ ಸಣ್ಣ ನೀರಾವರಿ ಇಲಾಖೆಯಲ್ಲಿ ಪರಿಶೀಲಿಸಲಾಗುತ್ತದೆ ಎಂದು ಮಾನ್ಯ ಜಲಸಂಪನ್ಮೂಲ ಸಚಿವರು ತಿಳಿಸಿದರು. | ದಿನಾಂಕ: 06.06.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, 2018–19ನೇ ಸಾಲಿನ ಮಾರ್ಚ್ 2019ರ ಅಂತ್ಯಕ್ಕೆ ಪಶ್ಚಿಮವಾಹಿನಿ ಯೋಜನೆಯಡಿ ಕೆಳಕಂಡಂತೆ ಕಾಮಗಾರಿಗಳಿಗೆ ಅನುಮೋದನೆ ನೀಡಲಾಗಿದೆ.<br><br>ದಕ್ಷಿಣ ಕನ್ನಡ ಜಿಲ್ಲೆಯ 9 ಕಾಮಗಾರಿಗಳಿಗೆ ಮತ್ತು ಉಡುಪಿ ಜಿಲ್ಲೆಯ 14 ಕಾಮಗಾರಿಗಳಿಗೆ ಟೆಂಡರ್ ಕರೆಯಲಾಗಿದ್ದು, ಈ ಕಾಮಗಾರಿಗಳನ್ನು 2019–20ನೇ ಸಾಲಿನ ಅಂತ್ಯದೊಳಗೆ ಪೂರ್ಣಗೊಳಿಸಲು ಕ್ರಮಕೈಗೊಳ್ಳಲಾಗುವುದು. ಕಾಮಗಾರಿಗಳ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.<br><br>ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲ್ಲೂಕಿನ ಬಿಳಿಯೂರು |

| | | | | |
|---|---|---|---|---|
| | | | | ಎಂಬಲ್ಲಿ ಕಿಂಡಿ ಅಣೆಕಟ್ಟು ನಿರ್ಮಾಣ ಕಾಮಗಾರಿಯ ಪ್ರದೇಶದಲ್ಲಿ 2018ನೇ ಸಾಲಿನಲ್ಲಿ ಬಂದ ಪ್ರವಾಹದಿಂದಾಗಿ ಹೆಚ್.ಎಫ್.ಎಲ್.ನಲ್ಲಿ ಆದ ಬದಲಾವಣೆಯಿಂದಾಗಿ ಅಂದಾಜುಪಟ್ಟಿಯನ್ನು ಪರಿಷ್ಕರಿಸ ಬೇಕಾಗಿದ್ದು ಸೂಕ್ತ ಕ್ರಮ ಕೈಗೊಳ್ಳಲಾಗುತ್ತಿದೆ.<br><br>ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ತಾಲ್ಲೂಕಿನ ಬಿಳಿಯೂರು ಹರೇಕಳ ಎಂಬಲ್ಲಿ ಸೇತುವೆ ಸಹಿತ ಉಪ್ಪು ನೀರು ತಡೆ ಕಿಂಡಿ ಅಣೆಕಟ್ಟು ಕಾಮಗಾರಿಯ ವಿಸ್ತೃತ ಯೋಜನಾ ವರದಿ ತಯಾರಿಸಲು ಕನ್ಸಲ್ಟೆನ್ಸಿಗೆ ವಹಿಸಲಾಗಿರುತ್ತದೆ. ಶೀಘ್ರವೇ ಅಂದಾಜು ಪೆಟ್ಟಿಗೆ ಅನುಮೋದನೆ ಪಡೆದು ಟೆಂಡರ್ ಕರೆಯಲು ಕ್ರಮ ಕೈಗೊಳ್ಳಲಾಗುವುದು.<br><br>ಉತ್ತರ ಕನ್ನಡ ಜಿಲ್ಲೆಯಲ್ಲಿ 29 ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ. ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.<br><br>ಸೌಭಾಗ್ಯ ಸಂಜೀವಿನ ಯೋಜನೆಯನ್ನು ಸಣ್ಣ ನೀರಾವರಿ ಇಲಾಖೆಯಿಂದ ಅನುಷ್ಠಾನಗೊಳಿಸಲಾಗುತ್ತಿರುವುದಿಲ್ಲ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ಸಮಿತಿಯು ತೀರ್ಮಾನಿಸಿತು. |
| 7 | 6358<br>ಚು.ಗು.ಪ್ರ: 1057<br>ಶ್ರೀ ರಾಮಚಂದ್ರಗೌಡ<br>ವಿ.ಪ.ನ.ದಿ: 30.11.2016 | ಕೆರೆ ಅಭಿವೃದ್ಧಿ ಪ್ರಾಧಿಕಾರದ ಮೂಲ ಉದ್ದೇಶ ಹಾಗೂ ಕಾರ್ಯಚಟುವಟಿಕೆಗಳ ಬಗ್ಗೆ. | ಈ ಸಮಿತಿಗೆ ವಿಶೇಷವಾದಂತಹ ಅಧಿಕಾರವಿದೆ. ಒತ್ತುವರಿ ಆದಂತಹ ಸಂದರ್ಭದಲ್ಲಿ ಅದನ್ನು ಖುಲ್ಲಾ ಮಾಡುವುದು, ಸರ್ವೇ ಮಾಡುವುದು, ಅಭಿವೃದ್ಧಿ ಮಾಡುವುದು ಮತ್ತು boundary trench ಮಾಡುವುದಕ್ಕೆ ಎಲ್ಲಾ ಅವಕಾಶಗಳು ಕೂಡ ಇದೆ. ಈ Karnataka Tank Conservation and Development Authority | ದಿನಾಂಕ: 06.06.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರವನ್ನು ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ–2014ರಡಿ ಸ್ಥಾಪಿಸಲಾಗಿದೆ.<br><br>ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರದ ಪ್ರಕಾರ್ಯಗಳಲ್ಲಿ ಸಹಭಾಗಿತ್ವದ ಯೋಜನೆ ಅನುಷ್ಠಾನವೂ ಒಂದು ಭಾಗವಾಗಿದ್ದು, ವಿಶ್ವಬ್ಯಾಂಕ್ ನೆರವಿನ ಸಮುದಾಯ ಆಧಾರಿತ ಕೆರೆ ನಿರ್ವಹಣಾ ಯೋಜನೆಯನ್ನು ಅನುಷ್ಠಾನಗೊಳಿಸಿದ್ದ ಸಣ್ಣ ನೀರಾವರಿ |

| | | | | |
|---|---|---|---|---|
| | | | ಏನು ಮಾಡಿದ್ದೇವೆ ಈ ಉದ್ದೇಶವೇನಿದೆ ಅದನ್ನು ಸಾಧನೆ ಮಾಡುವುದಕ್ಕೆ ಅಗತ್ಯವಾದ ಎಲ್ಲಾ ಪ್ರಯತ್ನಗಳನ್ನು ಸಹ ನಾವು ಮಾಡುತ್ತೇವೆ ಎಂದು ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಸಣ್ಣ ನೀರಾವರಿ ಸಚಿವರು ತಿಳಿಸಿದರು. | ಇಲಾಖೆಯಡಿ ಸ್ಥಾಪಿತವಾಗಿದ್ದ, ಜಲ ಸಂವರ್ಧನೆ ಯೋಜನಾ ಸಂಘವನ್ನು ದಿನಾಂಕ: 26.10.2017ರ ಸರ್ಕಾರಿ ಆದೇಶದಲ್ಲಿ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರದೊಂದಿಗೆ ವಿಲೀನಗೊಳಿಸಲಾಗಿದೆ. ಸದರಿ ಜಲ ಸಂವರ್ಧನೆ ಯೋಜನಾ ಸಂಘದ ಕಚೇರಿಗಳಲ್ಲಿ ದಿನಾಂಕ: 02.11.2017ರಿಂದ ಕೆರೆ ಪ್ರಾಧಿಕಾರದ ಕಚೇರಿಗಳನ್ನು ಕಾರ್ಯಾರಂಭಿಸಲಾಗಿದೆ.<br><br>ಮುಂದುವರಿದು ಮೇಲಿನ ಅಧಿನಿಯಮವನ್ನು 2018ರ ತಿದ್ದುಪಡಿಯಲ್ಲಿ ಕರ್ನಾಟಕ ಸರೋವರ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರವನ್ನು ನಿರಶನಗೊಳಿಸಿ ಎಲ್ಲಾ ನಗರ ಪಾಲಿಕೆಗಳು, ಪೌರ ನಿಗಮಗಳ ಮತ್ತು ಬೆಂಗಳೂರು ನಗರ ವ್ಯಾಪ್ತಿಯ ಎಲ್ಲಾ ಕೆರೆಗಳನ್ನು ಕೂಡಾ ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಗೆ ಒಳಪಡಿಸಲಾಗಿದೆ.<br><br>ಪ್ರಾಧಿಕಾರವು ಕೆರೆ ಸಂಜೀವಿನಿ ಯೋಜನೆಯನ್ನು ಅನುಷ್ಠಾನಗೊಳಿಸುತ್ತಿದ್ದು, ಸದರಿ ಯೋಜನೆಯಡಿ ಕೆರೆಯ ಅಂಗಳದ ಹೂಳನ್ನು ಜೆ.ಸಿ.ಬಿ/ಹಿಟಾಚಿ ಯಂತ್ರಗಳ ಮೂಲಕ ತೆಗೆಸಿ ರೈತರ ಟ್ರ್ಯಾಕ್ಟರ್‌ಗಳಿಗೆ ಉಚಿತವಾಗಿ ತುಂಬಿಕೊಡುವ ಅವಕಾಶ ಕಲ್ಪಿಸಲಾಗಿದೆ. ಇದರಿಂದಾಗಿ ರೈತರಿಗೆ ಫಲವತ್ತಾದ ಹೂಳನ್ನು ವಿತರಿಸುವುದರ ಜೊತೆಗೆ ಕೆರೆಯ ನೀರು ಶೇಖರಣಾ ಸಾಮರ್ಥ್ಯವನ್ನು ಹೆಚ್ಚಿಸುವುದು ಯೋಜನೆಯ ಉದ್ದೇಶವಾಗಿದೆ.<br><br>ಮುಂದಿನ ದಿನಗಳಲ್ಲಿ ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ–2014 ಹಾಗೂ ತದನಂತರದ ತಿದ್ದುಪಡಿಯಲ್ಲಿ ಪ್ರದತ್ತವಾದ ಎಲ್ಲಾ ಪ್ರಕಾರ್ಯಗಳನ್ನು ಕೈಗೊಳ್ಳಲು ಯೋಜಿಸಲಾಗಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ಸಮಿತಿಯು ತೀರ್ಮಾನಿಸಿತು. |

**ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ**

| ಕ್ರಮ ಸಂಖ್ಯೆ | ಆಶ್ವಾಸನೆ ಸಂಖ್ಯೆ ಆಧಾರ ಮತ್ತು ದಿನಾಂಕ | ವಿಷಯ | ಆಶ್ವಾಸನೆ | ತೆಗೆದುಕೊಂಡ ಕ್ರಮ |
|---|---|---|---|---|
| 01. | 5523<br>ಶೂನ್ಯ ವೇಳೆ<br>ಶ್ರೀ ಮೋನಪ್ಪ ಭಂಡಾರಿ<br>ವಿಪನದಿ:24.07.2014 | ಪ್ರಾಥಮಿಕ ಹಾಗೂ ಪ್ರೌಢ ಶಾಲಾ ಶಿಕ್ಷಕರ ಅರ್ಹತಾ ಪರೀಕ್ಷೆಯ (ಟಿ.ಇ.ಟಿ.) ಪ್ರಶ್ನೆ ಪತ್ರಿಕೆಗಳು ಬಹಿರಂಗಗೊಂಡು ಶಿಕ್ಷಣ ವಲಯದಲ್ಲಿ ಆತಂಕ ಸೃಷ್ಟಿಸಿದ್ದು, ಅದರಲ್ಲಿ ಭಾಗಿಯಾದ ಆರೋಪಿತ ಇಲಾಖಾಧಿಕಾರಿಗಳ ಮೇಲೆ ಕೈಗೊಳ್ಳುವ ಕ್ರಮದ ಬಗ್ಗೆ. | ಶಿಕ್ಷಣ ಇಲಾಖೆಯ ಶಿಕ್ಷಕನಾದ ಹಾಗೂ ಕೊಪ್ಪಳ ಜಿಲ್ಲಾ ವಯಸ್ಕರ ಶಿಕ್ಷಣ ಇಲಾಖೆಯಲ್ಲಿ ನಿಯುಕ್ತಿಗೊಂಡು ಕಾರ್ಯಕ್ರಮ ಸಹಾಯಕನಾಗಿರುವ ಶ್ರೀ ಈಶಪ್ಪ ಹಿರೇಮನಿ, ಇವರು ಪ್ರಶ್ನೆ ಪತ್ರಿಕೆ ಬಯಲು ಪ್ರಕರಣದಲ್ಲಿ ಶಾಮೀಲಾಗಿರುತ್ತಾರೆಂದು ಸಿ.ಸಿ.ಬಿ. ಪೊಲೀಸರು ದಿನಾಂಕ: 27.06.2014ರಂದು ಸದರಿಯವರನ್ನು ಬಂಧಿಸಿರುತ್ತಾರೆ. ಇದನ್ನು ಗಂಭೀರವಾಗಿ ಪರಿಗಣಿಸಿ ವಿಭಾಗೀಯ ಆಯುಕ್ತರಿಂದ ವಿಚಾರಣಾ ವರದಿ ಹಾಗೂ ಸಿ.ಸಿ.ಬಿ. ಪೊಲೀಸ್‌ರವರ ಅಂತಿಮ ವರದಿಯನ್ನು ತರಿಸಿ ತಪ್ಪಿತಸ್ಥರ ಮೇಲೆ ನಿರ್ದಾಕ್ಷಿಣ್ಯ ಕ್ರಮಕೈಗೊಳ್ಳಲಾಗುವುದು ಮತ್ತು ಅಭ್ಯರ್ಥಿಗಳಿಗೆ ಯಾವುದೇ ಅನ್ಯಾಯವಾಗದಂತೆ ಕ್ರಮವಹಿಸಲಾಗುವುದು ಎಂದು ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ತಿಳಿಸಿದರು. | ದಿನಾಂಕ: 16.03.2018ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, 2014ನೇ ಸಾಲಿನ ಟಿಇಟಿ ಪರೀಕ್ಷೆಯಲ್ಲಿ ಪ್ರಶ್ನೆ ಪತ್ರಿಕೆಗಳು ಪರೀಕ್ಷೆಗಿಂತ ಮುನ್ನವೇ ಬಯಲಾಗಿರುವ ಕುರಿತು. ಸಮಗ್ರ ತನಿಖೆ ನಡೆಸಲು ಸರ್ಕಾರದ ಆದೇಶ ಸಂಖ್ಯೆ: ಇಡಿ 129 ಪಿಟಿಐ 2014, ದಿನಾಂಕ: 30.06.2014ರ ಆದೇಶದಲ್ಲಿ ಸಮಗ್ರ ತನಿಖೆ ನಡೆಸಲು ಶ್ರೀ ಅಮ್ಲಾನ್ ಆದಿತ್ಯಾ ಬಿಸ್ವಾಸ್, ಭಾ.ಆ.ಸೇ., ಪ್ರಾದೇಶಿಕ ಆಯುಕ್ತರು, ಕಲಬುರಗಿ ಇವರನ್ನು ನೇಮಿಸಿ ಆದೇಶಿಸಲಾಗಿತು. ಸದರಿಯವರು ದಿನಾಂಕ: 17.09.2014ರಂದು ಸರ್ಕಾರಕ್ಕೆ ತನಿಖಾ ವರದಿಯನ್ನು ಸಲ್ಲಿಸಿದ್ದು, ವರದಿಯಲ್ಲಿ ಕರ್ನಾಟಕ ಶಿಕ್ಷಕರ ಅರ್ಹತಾ ಪರೀಕ್ಷೆಯ 2014ರ ಸಾಲಿನ ಪ್ರಶ್ನೆ ಪತ್ರಿಕೆಯಲ್ಲಿ ಪರೀಕ್ಷೆ ಮುನ್ನವೇ ಕೊಪ್ಪಳ ಜಿಲ್ಲೆಯಲ್ಲಿ ಬಯಲಾಗಿರುವ ಬಗ್ಗೆ ನಿಖರವಾದ ಕುರುಹುಗಳು ಇರುವುದಿಲ್ಲ ಹಾಗೂ ಕೊಪ್ಪಳ ಜಿಲ್ಲೆ ಸದರಿ ಪರೀಕ್ಷೆ ಕಾರ್ಯದಲ್ಲಿ ನಿಯೋಜಿತಾ ಸಿಬ್ಬಂದಿಗಳು ಕರ್ನಾಟಕ ಟೀಚರ್ಸ್ ಎಂಟ್ರೆನ್ಸ್ ಟೆಸ್ಟ್ 2014ರ ಮಾರ್ಗಸೂಚಿಯಂತೆ ಕಾರ್ಯನಿರ್ವಹಿಸಿರುವುದು ಕಂಡು ಬರುತ್ತದೆ. ಹಾಗೂ ಜಿಲ್ಲಾ ಕೇಂದ್ರಗಳಿಗೆ ಸರಬರಾಜು ಮಾಡುವ ಪ್ರಾಧಿಕಾರದಿಂದ ಪ್ಯಾಕಿಂಗ್ ಮಾಡುವ ಸಂದರ್ಭದಲ್ಲಿ ಲೋಪದೋಷ ಆಗಿರಬಹುದು ಎಂದು ವರದಿಯಲ್ಲಿ ತಿಳಿಸಿರುತ್ತಾರೆ.<br>ಈ ಸಾಲಿನಲ್ಲಿ ಪರೀಕ್ಷೆ ಉತ್ತಮವಾಗಿ ನಡೆದಿರುತ್ತದೆ. ಪರೀಕ್ಷಾ ಫಲಿತಾಂಶವು ಶೇ. 01ರಷ್ಟು ಮಾತ್ರ ಬಂದಿರುತ್ತದೆ.<br>ಮುಂದುವರೆದು ಈ ಪ್ರಕರಣದಲ್ಲಿ ಪೋಲಿಸ್ ಇನ್ಸ್‌ಪೆಕ್ಟರ್, ಸಿಸಿಬಿ, ಮಹಿಳಾ ಮತ್ತು ಮಾದಕ ದ್ರವ್ಯ ದಳ ಇವರಿಗೆ ಅವರ ಭಾತ್ಮಿದಾರರರಿಂದ ಶ್ರೀ ಶಿವಕುಮಾರ್ ಎಂಬ ವ್ಯಕ್ತಿಯು ದಿ: 22.06.2014ರಂದು ನಡೆಯುವ ಟಿಇಟಿ ಪ್ರಶ್ನೆ ಪತ್ರಿಕೆಗಳನ್ನು ಟಿಇಟಿ ಪರೀಕ್ಷೆ ಬರೆಯುವ ವಿದ್ಯಾರ್ಥಿಗಳಿಗೆ ಮುಂಚಿತವಾಗಿ ಮಾರಾಟ ಮಾಡುತ್ತಿರುವುದಾಗಿ ಬಂದ ಖಚಿತ ವರ್ತಮಾನದ ಮೇರೆಗೆ ಸಿಬ್ಬಂದಿಗಳೊಂದಿಗೆ ದಾಳಿ ಮಾಡಿ ಪ್ರಶ್ನೆ ಪತ್ರಿಕೆ ಮಾರಾಟದ ಪ್ರಮುಖ |

| | | | | |
|---|---|---|---|---|
| | | | | ಆರೋಪಿಗಳನ್ನು ಮತ್ತು ಎಲ್ಲಾ ವಸ್ತುಗಳನ್ನು ದಸ್ತಗಿರಿ ಮಾಡಿ ನಂದಿನಿ ಲೇಔಟ್ ಪೊಲೀಸ್ ಠಾಣೆಯಲ್ಲಿ ದಿನಾಂಕ: 21.06.2014ರಲ್ಲಿ ಮೊಕದ್ದಮೆ ಸಂಖ್ಯೆ: 139/2014 ಕಲಂ 120ಬಿ. ಭಾ.ದಂ.ಸಂ 420 ಪ್ರಕಾರ ದೂರನ್ನು ದಾಖಲಿಸಿರುತ್ತಾರೆ. ಮಾಲುಗಳನ್ನು ಪಿಎಫ್ ಸಂಖ್ಯೆ: 54/2014ರಲ್ಲಿ ನಮೂದಿಸಿಕೊಂಡು ಅಮಾನತ್ತುಪಡಿಸಿದ ಪ್ರಶ್ನೆ ಪತ್ರಿಕೆಗಳನ್ನು ಸುರಕ್ಷತೆಯ ದೃಷ್ಟಿಯಿಂದ ಆ ದಿನವೇ ಮಾನ್ಯ ನ್ಯಾಯಾಲಯದ ವಶಕ್ಕೆ ನೀಡಲಾಗಿರುತ್ತದೆ ಎಂದು ಸಿ.ಸಿ.ಬಿ.ಯವರು ವರದಿ ಮಾಡಿರುತ್ತಾರೆ.<br>ಈ ಪ್ರಕರಣದಲ್ಲಿ ಒಟ್ಟು 17 ಆರೋಪಿಗಳಿರುತ್ತಾರೆ. ಅವರುಗಳೆಂದರೆ, (1) ಶಿವಕುಮಾರ್ ಬಿನ್ ಲೇಟ್ ಚನ್ನಪ್ಪ 64 ವರ್ಷ, ನಂ. 72, 4ನ# ಮೇನ್, ರಾಮಕೃಷ್ಣ ನಗರ, ನಂದನಿ ಲೇಔಟ್, ಬೆಂಗಳೂರು ಮತ್ತು ಪ್ರಶ್ನೆ ಪತ್ರಿಕೆಗಳನ್ನು ಕೊಳ್ಳಲು ಬಂದಿದ್ದ ವ್ಯಕ್ತಿಗಳಾದ (2) ಬನ್ನಪ್ಪ ಚಕ್ರಸಾಲಿ, (3) ರಮೇಶ್ ಕುಮಾರ್. ಬಿ.ಆರ್. (4) ನಾಗಪ್ಪ ಕೃಷ್ಣಾಪರ, (5) ರಂಗನಾಥ ಲಿಂಗಾರೆಡ್ಡಿ (6) ಶ್ರೀಮತಿ ಶಕ್ತಿ ದುದಿಹಳ್ಳಿ, (7) ಶಾಂತಿಲಾಲ್ ರಾಥೋಡ್ (8) ಶ್ರೀಧರ್ (9) ಸಂತೋಷ್ ಜಿ.ನಿ. (10) ತಮ್ಮಯ್ಯ ಹೊಸಮನಿ (11) ಹನುಮರೆಡ್ಡಿ ಎರಗುಪ್ಪಿ (12) ಟಿ.ಎನ್. ಸೋಮಶೇಖರ್ (13) ರವಿ ಬಿನ್ ಪೆರಮಾಳ್ (14) ಈಶಪ್ಪ ಬಿನ್ ದುರ್ಗಪ್ಪ ಇವರುಗಳಲ್ಲಿ ಕ್ರಮ ಸಂಖ್ಯೆ: (15) ಶಿವರಾಂ (16) ಕಾರ್ತಿಕ್ (17) ದೇವರಾಜ್ ಇವರು ತಲೆಮರೆಸಿಕೊಂಡಿರುತ್ತಾರೆ.<br>ಆರೋಪಿಗಳ ವಿರುದ್ಧ ಆರೋಪ ದೃಡಪಟ್ಟ ಕಾರಣ ಸದರಿ ಆರೋಪಿಗಳ ವಿರುದ್ಧ ಮತ್ತು ತಲೆ ಮರೆಸಿಕೊಂಡಿರುವ ಮೂವರು ವ್ಯಕ್ತಿಗಳ ವಿರುದ್ಧ ನ್ಯಾಯಾಲಯಕ್ಕೆ ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿದ್ದು, ಮಾನ್ಯ 1ನೇ ಎಸಿಎಂಎಂ ನ್ಯಾಯಾಲಯದಲ್ಲಿ ಸಿಸಿ ಸಂಖ್ಯೆ: 19287/2015ರಲ್ಲಿ ವಿಚಾರಣೆಯಲ್ಲಿರುತ್ತದೆ.<br>ಪ್ರಸ್ತುತ 17 ಜನ ಆರೋಪಿಗಳ ಪೈಕಿ 14 ಜನ ಈ ಪ್ರಕರಣದಲ್ಲಿ ಮಾನ್ಯ ನ್ಯಾಯಾಲಯದ ಜಾಮೀನಿನ ಮೇಲಿರುತ್ತಾರೆ ಹಾಗೂ ಮೂವರು ಆರೋಪಿಗಳು ತಲೆಮರೆಸಿಕೊಂಡಿರುತ್ತಾರೆ.<br>ಕ್ರಮ ಸಂಖ್ಯೆ: 14ರ ಈಶಪ್ಪ ಹಿರೇಮನಿ ಬಿನ್ ದುರ್ಗಪ್ಪ ಇವರು ಸರ್ಕಾರಿ |

| | | | | |
|---|---|---|---|---|
| | | | | ಪ್ರೌಢಶಾಲೆ, ಹಿರೇಬೊಮ್ಮನಹಳ್ಳಿ, ಇಲ್ಲಿ ಶಿಕ್ಷಕರಾಗಿರುತ್ತಾರೆ. ಸದರಿಯವರು ಟಿ.ಇ.ಟಿ. ಪ್ರಶ್ನೆ ಪತ್ರಿಕೆ ಬಹಿರಂಗದಲ್ಲಿ ಆರೋಪಿಯಾಗಿದ್ದ ಕಾರಣ ಸದರಿಯವರ ವಿರುದ್ಧದ ಇಲಾಖಾ ವಿಚಾರಣೆಯನ್ನು ಕಾಯ್ದಿರಿಸಿ, ದಿನಾಂಕ: 18.08.2014ರಲ್ಲಿ ಅಮಾನತ್ತುಗೊಳಿಸಲಾಗಿತ್ತು. ಹಾಗೂ ಸದರಿ ಶಿಕ್ಷಕರು ಆದಾಯಕ್ಕಿಂತ ಹೆಚ್ಚಿನ ಸಂಪತ್ತು ಹೊಂದಿದ್ದಾರೆಂಬ ಆರೋಪದ ಹಿನ್ನಲೆಯಲ್ಲಿ ಲೋಕಾಯುಕ್ತದಿಂದ ದಾಳಿಗೊಳಗಾಗಿದ್ದು, ಸದರಿಯವರ ವಿರುದ್ಧ ಪ್ರಕರಣ ಬಾಕಿ ಇರುತ್ತದೆ. ಪೋಲೀಸ್ ಮಹಾ ನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರು ದಿನಾಂಕ: 30.04.2016ರಂದು ಸದರಿಯವರ ಅಮಾನತ್ತು ತೆರವುಗೊಳಿಸಿ, ಕರ್ತವ್ಯಕ್ಕೆ ಪುನರ್ ಸ್ಥಾಪಿಸಲು ತಿಳಿಸಿದ್ದರ ಮೇರೆಗೆ ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕೊಪ್ಪಳ ಇವರು ದಿನಾಂಕ: 16.05.2016ರ ಆದೇಶದಲ್ಲಿ ಈಶಪ್ಪ ಹಿರೇಮನಿ ಬಿನ್ ದುರ್ಗಪ್ಪ ಇವರನ್ನು ಸಹಶಿಕ್ಷಕರ ಹುದ್ದೆಗೆ ಪುನರ್‌ಸ್ಥಾಪಿಸಿ, ಸರ್ಕಾರಿ ಪ್ರೌಢಶಾಲೆ, ಹಿರೇಬೊಮ್ಮನಾಳ, ಕೊಪ್ಪಳ ಇಲ್ಲಿಗೆ ನಿಯುಕ್ತಿಗೊಳಿಸಲಾಗಿರುತ್ತದೆ.<br><br>ಪ್ರಸ್ತುತ ಸದರಿ ಶಿಕ್ಷಕರ ವಿರುದ್ಧ ಕರ್ನಾಟಕ ಲೋಕಾಯುಕ್ತ ಮತ್ತು ಸಿ.ಸಿ.ಬಿ. ಬೆಂಗಳೂರು ಇಲ್ಲಿ ವಿಚಾರಣೆ ಬಾಕಿ ಇರುತ್ತದೆ ಹಾಗೂ ಆರೋಪಿತ ಶಿಕ್ಷಕರು ಪ್ರೌಢಶಾಲಾ ಸಹಶಿಕ್ಷಕರ ಹುದ್ದೆಗೆ ರಾಜೀನಾಮೆ ನೀಡಿದ್ದು, ರಾಜೀನಾಮೆ ಅಂಗೀಕಾರವಾಗಿರುವುದಿಲ್ಲ.<br><br>ಪ್ರಸ್ತುತ ಪ್ರಕರಣವು 1ನೇ ಎ.ಸಿ.ಎಂ.ಎಂ. ನ್ಯಾಯಾಲಯದ ವಿಚಾರಣೆಯಲ್ಲಿದ್ದು, ಇತ್ಯರ್ಥಗೊಂಡಿರುವುದಿಲ್ಲ. ಅಂತಿಮ ತೀರ್ಪಿನ ಅನುಸಾರ ಸೂಕ್ತ ಕ್ರಮವಹಿಸಲಾಗುವುದು ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ಸಮಿತಿಯು ತೀರ್ಮಾನಿಸಿತು. |
| 2 | 5547 | ಹಲವಾರು ಖಾಸಗಿ | ಇಂತಹ ಪ್ರಕರಣಗಳನ್ನು | ದಿನಾಂಕ: 01.10.2018ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, |

<table>
<tr>
<td></td>
<td>ಚು.ಗು.ಪ್ರ: 160<br>ಶ್ರೀ ಎಂ. ಶ್ರೀನಿವಾಸ್<br>ವಿಪನದಿ: 12/12/2014</td>
<td>ಶಿಕ್ಷಣ ಸಂಸ್ಥೆಗಳು ಅನುಮತಿ ರಹಿತವಾಗಿ ಶಾಲೆಗಳನ್ನು / ಸಂಸ್ಥೆಗಳನ್ನು ನಡೆಸುತ್ತಿದ್ದು ಮತ್ತು ಶಿಕ್ಷಣ ಮಾಧ್ಯಮದಲ್ಲೂ ನಿಯಮಗಳನ್ನು ಉಲ್ಲಂಘಿಸುತ್ತಿದ್ದು ಅಂತಹವರುಗಳ ವಿರುದ್ಧ ಕ್ರಮ ಕೈಗೊಳ್ಳುವ ಬಗ್ಗೆ.</td>
<td>ಸರ್ಕಾರ ಅತ್ಯಂತ ಗಂಭೀರವಾಗಿ ಪರಿಗಣಿಸಿದೆ. ಈ ಎಲ್ಲ ಅನಧಿಕೃತ ಶಾಲೆಗಳ ವಿರುದ್ಧ ಕರ್ನಾಟಕ ಶಿಕ್ಷಣ ಕಾಯಿದೆ 1983ರ ಸೆಕ್ಷನ್ 123, 124ರನ್ವಯ ಜಿಲ್ಲಾ ಉಪನಿರ್ದೇಶಕರುಗಳು ಕ್ರಿಮಿನಲ್ ಕೇಸುಗಳನ್ನು ದಾಖಲಿಸಲು ಕ್ರಮವಹಿಸುತ್ತಿದ್ದಾರೆ. ಈ ಸೆಕ್ಷನ್ ಅಡಿ ಅನಧಿಕೃತ ಸಂಸ್ಥೆಯ ಸ್ಥಾಪನೆಗೆ ಕಾರಣರಾದವರು 06 ತಿಂಗಳಿಗೆ ಕಡಿಮೆ ಇಲ್ಲದಂತೆ 03 ವರ್ಷಗಳವರೆಗೆ ಸೆರೆವಾಸದ ಶಿಕ್ಷೆಯನ್ನು ಅನುಭವಿಸ ಬೇಕಾಗುತ್ತದೆ.<br><br>ಅಲ್ಲದೆ ‘ಕರ್ನಾಟಕ ಸರ್ಕಾರದ ಮಾನ್ಯತೆ ಪಡೆಯದ ಮತ್ತು ಸಂಯೋಜಿತವಾಗಿಲ್ಲದ ಶಿಕ್ಷಣ ಸಂಸ್ಥೆಗಳಿಗೆ ಪ್ರವೇಶ ನಿಷೇಧ ಅಧಿನಿಯಮ 1992ರ ನಿಯಮಗಳನ್ನು ಉಲ್ಲಂಘಿಸಿ ಅನಧಿಕೃತವಾಗಿ ನಡೆಸುವ ಸಂಸ್ಥೆಯ ಆಡಳಿತ ಮಂಡಳಿಯ ವಿರುದ್ಧ ಆಯಾ ಉಪನಿರ್ದೇಶಕರ ವ್ಯಾಪ್ತಿಯ ಮ್ಯಾಜಿಸ್ಟ್ರೇಟ್ ನ್ಯಾಯಾಲಯದಲ್ಲಿ ಕ್ರಿಮಿನಲ್ ಮೊಕದ್ದಮೆಯನ್ನು ಹೂಡುವಂತೆ ಸೂಚಿಸಿದೆ ಮತ್ತು ಉಳಿದ ಪ್ರಕರಣಗಳಲ್ಲಿಯೂ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ</td>
<td>ಕರ್ನಾಟಕ ಶಿಕ್ಷಣ ಕಾಯಿದೆ 1983 ಸೆಕ್ಷನ್ 31ರ ಅಡಿಯಲ್ಲಿ ನೋಂದಾಯಿತ ವಿದ್ಯಾಸಂಸ್ಥೆಗಳು ಶಾಲೆಗಳನ್ನು ಪ್ರಾರಂಭಿಸಲು ಇಚ್ಛಿಸಿದಲ್ಲಿ ರಾಜ್ಯ ಸರ್ಕಾರವು ಕಾಲಕಾಲಕ್ಕೆ ನೇಮಕ ಮಾಡಿರುವ ಸಂಬಂಧಪಟ್ಟ ನೊಂದಣಿ ಪ್ರಾಧಿಕಾರದಿಂದ ಕಡ್ಡಾಯವಾಗಿ ಶಾಲೆಗಳನ್ನು ತೆರೆಯಲು ನೊಂದಣಿ ಪಡೆಯಬೇಕಾಗಿದೆ.<br><br>ಈ ಸಂಬಂಧ ರಾಜ್ಯದ ಜಿಲ್ಲಾ ಉಪ ನಿರ್ದೇಶಕರುಗಳಿಂದ ಮಾಹಿತಿಯನ್ನು ಪಡೆಯಲಾಗಿದ್ದು, ಅದರಂತೆ ಕೆಳಕಂಡ ಜಿಲ್ಲೆಗಳಲ್ಲಿ ಅನಧಿಕೃತ ಶಾಲೆಗಳು ನಡೆಯುತ್ತಿರುತ್ತವೆ. ಉಳಿದ ಜಿಲ್ಲೆಗಳಲ್ಲಿ ಯಾವುದೇ ಅನಧಿಕೃತ ಶಾಲೆಗಳು ಇರುವುದಿಲ್ಲವೆಂಬುದಾಗಿ ಶೂನ್ಯ ವರದಿಯನ್ನು ಉಪ ನಿರ್ದೇಶಕರುಗಳು ಸಲ್ಲಿಸಿರುತ್ತಾರೆ.<br><br>
<table>
<tr><th>ಕ್ರಮ ಸಂಖ್ಯೆ</th><th>ಜಿಲ್ಲೆಯ ಹೆಸರು</th><th>ಅನಧಿಕೃತ ಶಾಲೆಗಳ ಸಂಖ್ಯೆ</th><th>ಷರಾ</th></tr>
<tr><td>1.</td><td>ಧಾರವಾಡ</td><td>5</td><td>5 ಶಾಲೆಗಳ ನೋಂದಣಿಯನ್ನು ಇಲಾಖಾಧಿಕಾರಿಗಳು ರದ್ದುಪಡಿಸಲಾಗಿದ್ದು, ಈ ಆದೇಶವನ್ನು ಪ್ರಶ್ನಿಸಿ ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ಪ್ರಕರಣವನ್ನು ದಾಖಲಿಸಿರುತ್ತಾರೆ. ಸದರಿ ಪ್ರಕರಣದ ಅರ್ಜಿ ಸಂಖ್ಯೆ: 46811–15/2017 ಆಗಿರುತ್ತದೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಸರ್ಕಾರದ ಪತ್ರದ ಸಂಖ್ಯೆ: ಇಡಿ 679 ಪಿಜಿಸಿ 2017, ದಿ:01.12.2017ರನ್ವಯ ಸದರಿ ಶಾಲೆಗಳ ಮಾನ್ಯತೆಯನ್ನು</td></tr>
</table>
</td>
</tr>
</table>

| | | | | | | | |
|---|---|---|---|---|---|---|---|
| | | | ಎಂದು ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ತಿಳಿಸಿದರು. | | | | ರದ್ದುಪಡಿಸಿರುವ ಉಪ ನಿರ್ದೇಶಕರ ಆದೇಶಗಳಿಗೆ ಸರ್ಕಾರದಿಂದ ಮಧ್ಯಂತರ ತಡೆಯಾಜ್ಞೆಯನ್ನು ನೀಡಲಾಗಿದೆ. |
| | | | | 2 | ಮೈಸೂರು | 14 | 14 ಶಾಲೆಗಳ ಪೈಕಿ 03 ಶಾಲೆಗಳು ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ಪ್ರಕರಣವನ್ನು ದಾಖಲಿಸಿರುತ್ತಾರೆ. ಈ ಪೈಕಿ 01 ಪ್ರಕರಣದಲ್ಲಿ ರಾಜ್ಯ ಉಚ್ಚ ನ್ಯಾಯಾಲಯವು 2018–19ನೇ ಸಾಲಿನಿಂದ ಶಾಲೆಯನ್ನು ಮುಚ್ಚುವಂತೆ ನಿರ್ದೇಶನ ನೀಡಿರುತ್ತದೆ. ಉಳಿದ 2 ಪ್ರಕರಣಗಳು ವಿಚಾರಣಾ ಹಂತದಲ್ಲಿ ಬಾಕಿ ಇರುತ್ತದೆ.<br>08 ಶಾಲೆಗಳು ಸಿಬಿಎಸ್ಇ ಮಂಡಳಿಯಿಂದ ಸಂಯೋಜನೆಯನ್ನು ಪಡೆದಿದ್ದು, ರಾಜ್ಯ ಸರ್ಕಾರದಿಂದ ನೊಂದಣಿಯನ್ನು ಪಡೆದಿರುವುದಿಲ್ಲ ಆದರೆ ರಾಜ್ಯ ಸರ್ಕಾರದಿಂದ ಎನ್.ಓ.ಸಿ. ಪಡೆದಿರುತ್ತಾರೆ. ಉಳಿದ 03 ಶಾಲೆಗಳಿಗೆ ಸಂಬಂಧಿಸಿದಂತೆ ನೋಟಿಸ್ ಜಾರಿಗೊಳಿಸಿದ್ದು, ಶಾಲೆಗಳನ್ನು ಮುಚ್ಚಲು ಕ್ರಮವಹಿಸುವುದಾಗಿ ಉಪ ನಿರ್ದೇಶಕರು ತಿಳಿಸಿರುತ್ತಾರೆ. |
| | | | | 3 | ರಾಮನಗರ | 02 | ಶಾಲೆಗಳನ್ನು ಮುಚ್ಚುವಂತೆ ಕ್ಷೇತ್ರ |

<table>
<tr>
<td></td>
<td></td>
<td></td>
<td></td>
<td>
<table>
<tr><td></td><td></td><td></td><td>ಶಿಕ್ಷಣಾಧಿಕಾರಿಗಳು ಚನ್ನಪಟ್ಟಣ ರವರು ದಿ: 04.07.2017 ಮತ್ತು ದಿ:21.3.2018ರಲ್ಲಿ ನೋಟಿಸ್ ಜಾರಿ ಮಾಡಿರುವ ಬಗ್ಗೆ ಉಪ ನಿರ್ದೇಶಕರು ರಾಮನಗರರವರು ವರದಿ ನೀಡಿರುತ್ತಾರೆ.</td></tr>
</table>
ನೋಂದಣಿ ಪಡೆಯದ ಅನಧಿಕೃತವಾಗಿ ಶಾಲೆಯನ್ನು ತೆರೆದು ನಡೆಸುವ ಪ್ರಕರಣಗಳನ್ನು ಅತ್ಯಂತ ಗಂಭೀರವಾಗಿ ಪರಿಗಣಿಸಲಾಗಿದೆ. ಇಂತಹ ಶಾಲೆಗಳ ವಿರುದ್ಧ ಕರ್ನಾಟಕ ಶಿಕ್ಷಣ ಕಾಯಿದೆ 1983 ಸೆಕ್ಷನ್ 123, 124ರನ್ವಯ ಜಿಲ್ಲಾ ಉಪ ನಿರ್ದೇಶಕರುಗಳು ಕ್ರಿಮಿನಲ್ ಕೇಸುಗಳನ್ನು ದಾಖಲಿಸಲು ಕ್ರಮವಹಿಸಿರುತ್ತಾರೆ. ಈ ಸೆಕ್ಷನ್ ಅಡಿ ಅನಧಿಕೃತ ಸಂಸ್ಥೆಯ ಸ್ಥಾಪನೆಗೆ ಕಾರಣರಾದವರು 06 ತಿಂಗಳಿಗೆ ಕಡಿಮೆ ಇಲ್ಲದಂತೆ 03 ವರ್ಷಗಳವರೆಗೆ ಸೆರೆವಾಸದ ಶಿಕ್ಷೆಯನ್ನು ವಿಧಿಸಬೇಕಾಗುತ್ತದೆ.<br><br>
ಅಲ್ಲದೇ, 'ಕರ್ನಾಟಕ ಮಾನ್ಯತೆ ಪಡೆಯದ ಮತ್ತು ಸಂಯೋಜಿತವಾಗಿಲ್ಲದ ಶಿಕ್ಷಣ ಸಂಸ್ಥೆಗಳಿಗೆ ಪ್ರವೇಶ ನಿಷೇಧ ಅಧಿನಿಯಮ 1992'ರ ನಿಯಮಗಳನ್ನು ಉಲ್ಲಂಘಿಸಿ, ಮಾನ್ಯತೆ ರಹಿತವಾಗಿ ಅನಧಿಕೃತವಾಗಿ ಸಂಸ್ಥೆಗಳನ್ನು ನಡೆಸುವ ಸಂಸ್ಥೆಯ ಆಡಳಿತ ಮಂಡಳಿಯ ಜವಾಬ್ದಾರಿಯುತರ ವಿರುದ್ಧ ಆಯಾ ಉಪ ನಿರ್ದೇಶಕರ ವ್ಯಾಪ್ತಿಯ ಮ್ಯಾಜಿಸ್ಟ್ರೇಟ್ ನ್ಯಾಯಾಲಯದಲ್ಲಿ ಕ್ರಿಮಿನಲ್ ಮೊಕದ್ದಮೆಯನ್ನು ಹೂಡುವಂತೆ ಸೂಚಿಸಿದೆ.<br><br>
ಕರ್ನಾಟಕ ರಾಜ್ಯ ಸರ್ಕಾರವು 01 ರಿಂದ 04/05ನೇ ತರಗತಿಯವರೆಗೆ ಶಿಕ್ಷಣ ಮಾಧ್ಯಮ ಮಾತೃಭಾಷೆ ಅಥವಾ ಕನ್ನಡ ಭಾಷೆ ಆಗಿರಬೇಕೆಂದು ದಿ: 29.04.1994ರಂದು ಭಾಷಾ ನೀತಿಯನ್ನು ರೂಪಿಸಲಾಗಿತ್ತು. ಸದರಿ ನೀತಿ ವಿರುದ್ಧ ಖಾಸಗಿ ಶಿಕ್ಷಣ ಸಂಸ್ಥೆಗಳ ಆಡಳಿತ ಮಂಡಳಿಗಳು ನ್ಯಾಯಾಲಯದ ಮೊರೆ ಹೋಗಿದ್ದವು.
</td>
</tr>
</table>

| | | | | |
|---|---|---|---|---|
| | | | | 1. ಕರ್ನಾಟಕ ಶಿಕ್ಷಣ ಕಾಯಿದೆ–1983ರಡಿ ನೊಂದಣಿಯಾಗಿ ಅಸ್ತಿತ್ವದಲ್ಲಿರುವ 1 ರಿಂದ 5ನೇ ತರಗತಿ ಶಾಲೆಗಳ ನೊಂದಣಿಯಲ್ಲಿ ಘೋಷಿಸಿರುವ ಮಾಧ್ಯಮದ ಬದಲಾಗಿ ಆಂಗ್ಲ ಮಾಧ್ಯಮದಲ್ಲಿ ಶಿಕ್ಷಣ ನೀಡುತ್ತಿದ್ದರೆ ಅಂತಹ ಶಾಲೆಗಳಿಗೆ ಆಂಗ್ಲ ಮಾಧ್ಯಮದಲ್ಲಿ ಶಿಕ್ಷಣ ನೀಡಲು ಅನುಮತಿ ನೀಡಬೇಕು.<br>2. ಕರ್ನಾಟಕ ಶಿಕ್ಷಣ ಕಾಯಿದೆ 1983ರಡಿ ಕನ್ನಡ ಮಾಧ್ಯಮದಲ್ಲಿ ನೊಂದಣಿಗೊಂಡು ಅಸ್ತಿತ್ವದಲ್ಲಿರುವ 01 ರಿಂದ 05ನೇ ತರಗತಿ ಶಾಲೆಗಳು ಆಂಗ್ಲ ಮಾಧ್ಯಮಕ್ಕೆ 2015–16ನೇ ಸಾಲಿನಿಂದ ಪರಿವರ್ತಿಸಲು ಅರ್ಜಿ ಸಲ್ಲಿಸಿದರೆ ಅಂತಹ ಶಾಲೆಗಳಿಗೆ 2015–16ನೇ ಸಾಲಿನಿಂದ ಆಂಗ್ಲ ಮಾಧ್ಯಮಕ್ಕೆ ಅನುಮತಿ ನೀಡಲು ಅವಕಾಶ ಕಲ್ಪಿಸಲಾಗಿದೆ.<br>ಈ ಮೇಲೆ ವಿವರಿಸಿದಂತೆ ರಾಜ್ಯದ ಭಾಷಾ ನೀತಿಯನ್ನು ಘನ ಸರ್ವೋಚ್ಚ ನ್ಯಾಯಾಲಯ ಅನೂರ್ಜಿತಗೊಳಿಸಿರುವುದರಿಂದ ಮಾಧ್ಯಮ ಉಲ್ಲಂಘನೆ ಪ್ರಶ್ನೆ ಉದ್ಭವಿಸುವುದಿಲ್ಲ. ಆದಾಗ್ಯೂ, ರಾಜ್ಯದಲ್ಲಿ ಅಸ್ತಿತ್ವದಲ್ಲಿರುವ ಖಾಸಗಿ ಶಾಲೆಗಳು ಅನುಮತಿ ಪಡೆದ ಮಾಧ್ಯಮದಲ್ಲಿ ಬೋಧನೆ ಮಾಡದೆ ನಿಯಮಗಳನ್ನು ಉಲ್ಲಂಘಿಸಬಾರದೆಂಬ ಉದ್ದೇಶದಿಂದ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು, ಇವರು ದಿ: 09.05.2017ರಂದು ಒಂದು ಸಮಗ್ರವಾದ ಸುತ್ತೋಲೆಯನ್ನು ಹೊರಡಿಸಿ ರಾಜ್ಯದಲ್ಲಿ ನೊಂದಾಯಿತ ಖಾಸಗಿ ಶಾಲೆಗಳು ಕನ್ನಡ ಮಾಧ್ಯಮದಲ್ಲಿ ಅನುಮತಿಯನ್ನು ಪಡೆದು ಇತರೆ ಮಾಧ್ಯಮಗಳಲ್ಲಿ ಬೋಧನೆ ಮಾಡುತ್ತಿರುವುದನ್ನು ನಿಯಂತ್ರಿಸಿ ಕ್ರಮ ಕೈಗೊಳ್ಳುವಂತೆ ರಾಜ್ಯದ ಎಲ್ಲಾ ಜಿಲ್ಲಾ ಉಪ ನಿರ್ದೇಶಕರಿಗೆ ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಈಗಾಗಲೇ ನಿರ್ದೇಶನ ನೀಡಲಾಗಿದೆಯೆಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ಸಮಿತಿಯು ತೀರ್ಮಾನಿಸಿತು. |

| | | | | |
|---|---|---|---|---|
| 3 | 5548<br>ಚು.ಗು.ಪ್ರ: 720<br>ಶ್ರೀ ಅಲ್ಲಮ ಪ್ರಭು ಪಾಟೀಲ್<br>ವಿಪನದಿ: 12/12/2014 | ಗುಲ್ಬರ್ಗಾ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಶಾಲೆಗಳಿಂದ ಹೊರಗುಳಿದ ಮಕ್ಕಳನ್ನು ಪುನ: ಶಾಲೆಗಳಿಗೆ ಸೇರಿಸುವ ಬಗ್ಗೆ. | ಮಕ್ಕಳನ್ನು ಪುನ: ಶಾಲೆಗೆ ತರಲು ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದ್ದು, ಶಾಲಾ ವ್ಯಾಪ್ತಿಗೆ ತರುವಲ್ಲಿ ಯಶ್ವಸಿಯಾಗಿದೆ ಗುಲ್ಬರ್ಗಾ ಜಿಲ್ಲೆಯಲ್ಲಿ ಸಮೀಕ್ಷೆಯಲ್ಲಿ ಗುರುತಿಸಿದ ಒಟ್ಟು 15367 ಶಾಲೆಗಳಿಂದ ಹೊರಗುಳಿದ ಮಕ್ಕಳಲ್ಲಿ 11014 ಮಕ್ಕಳನ್ನು ಹಾಗೂ ಯಾದಗಿರಿ ಜಿಲ್ಲೆಯಲ್ಲಿ ಒಟ್ಟು 11142 ಶಾಲೆಯಿಂದ ಹೊರಗುಳಿದ 5680 ಮಕ್ಕಳನ್ನು ಈಗಾಗಲೇ ಶಾಲಾ ವ್ಯಾಪ್ತಿಗೆ ತರಲಾಗಿದೆ. ಇನ್ನುಳಿದ ಮಕ್ಕಳನ್ನು ಶಾಲಾ ವ್ಯಾಪ್ತಿಗೆ ತರಲು ಕ್ರಮವಹಿಸಲಾಗಿದೆ. ಶಾಲೆಯಿಂದ ಹೊರಗುಳಿಯುವ ಮಕ್ಕಳ ಸಂಖ್ಯೆಗೆ ಪೂರ್ಣ ವಿರಾಮ ಹಾಕಬೇಕೆನ್ನುವ ನಿಟ್ಟಿನಲ್ಲಿ ಸರ್ಕಾರ ಕ್ರಮ ಕೈಗೊಂಡಿದೆ. ರಾಜ್ಯದ ಒಂದೆರಡು ಜಿಲ್ಲೆಗಳನ್ನು ಹೊರತುಪಡಿಸಿ ಎಲ್ಲ ಜಿಲ್ಲೆಗಳಿಗೂ ಭೇಟಿ ನೀಡಿ ಸುಮಾರು 3–6 ಗಂಟೆಗಳ ಕಾಲ ಒಂದು ರಿವ್ಯೂ ಮೀಟಿಂಗ್ ಮಾಡಿದ್ದೇನೆ. ಈ ರಿವ್ಯೂ ಮೀಟಿಂಗ್‌ನಲ್ಲಿ ಈ ಎಲ್ಲಾ ಪ್ರಶ್ನೆಗಳು ಪ್ರಸ್ತಾಪವಾಗಿವೆ. ಖಂಡಿತವಾಗಿ ಇದರ ಬಗ್ಗೆ ಕ್ರಮವನ್ನು ತೆಗೆದುಕೊಳ್ಳುತ್ತೇವೆ ಎಂದು ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ತಿಳಿಸಿದರು. | ದಿನಾಂಕ: 01.10.2018ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, 2013–14ನೆ ಸಾಲಿನಲ್ಲಿ ನಡೆಸಲಾದ ಸಮೀಕ್ಷೆಯಲ್ಲಿ ಕಲಬುರಗಿ ಜಿಲ್ಲೆಯಲ್ಲಿ ಗುರುತಿಸಲಾದ ಒಟ್ಟು 15367 ಮಕ್ಕಳಲ್ಲಿ 11393 ಮಕ್ಕಳನ್ನು ಹಾಗೂ ಯಾದಗಿರಿ ಜಿಲ್ಲೆಯಲ್ಲಿ ಗುರುತಿಸಲಾದ 11142 ಮಕ್ಕಳಲ್ಲಿ 5879 ಮಕ್ಕಳನ್ನು 31.01.2016ರ ಅಂತ್ಯಕ್ಕೆ ಮುಖ್ಯವಾಹಿನಿಗೆ ತರಲಾಗಿದೆ. ಮಗು ಶಾಲೆಯಿಂದ ಹೊರಗುಳಿಯದಂತೆ ಮಾಡಲು ಸರ್ಕಾರ ತೆಗೆದುಕೊಂಡ ಕ್ರಮದಿಂದಾಗಿ ಈ ಎರಡು ಜಿಲ್ಲೆಯಲ್ಲಿ ಶಾಲೆಯಿಂದ ಹೊರಗುಳಿದ ಮಕ್ಕಳ ಸಂಖ್ಯೆ ಗಣನೀಯ ಪ್ರಮಾಣದಲ್ಲಿ ಕಡಿಮೆಯಾಗಿದೆ.<br>2016–17ನೆ ಸಾಲಿನಲ್ಲಿ ಕಲಬುರಗಿ ಜಿಲ್ಲೆಯಲ್ಲಿ 993 ಮಕ್ಕಳು ಶಾಲೆಯಿಂದ ಹೊರಗುಳಿದಿದ್ದು, ಇವರಲ್ಲಿ 590 ಮಕ್ಕಳನ್ನು ಹಾಗೂ ಯಾದಗಿರಿ ಜಿಲ್ಲೆಯಲ್ಲಿ 429 ಮಕ್ಕಳು ಹೊರಗುಳಿದಿದ್ದು ಎಲ್ಲಾ ಮಕ್ಕಳನ್ನು ಮುಖ್ಯವಾಹಿನಿಗೆ ತರಲಾಗಿದೆ.<br>2017–18ನೇ ಸಾಲಿನಲ್ಲಿ ಮಾರ್ಚ್ ಅಂತ್ಯದವರೆಗೂ ಕಲಬುರಗಿ ಜಿಲ್ಲೆಯಲ್ಲಿ 1389 ಮಕ್ಕಳು ಶಾಲೆಯಿಂದ ಹೊರಗುಳಿದಿದ್ದು, ಎಲ್ಲಾ 635 ಮಕ್ಕಳನ್ನು ಮುಖ್ಯವಾಹಿನಿಗೆ ತರಲಾಗಿದೆ. ಈ ಮೇಲ್ಕಂಡ ಅಂಶಗಳಿಂದ ಶಾಲೆಯಿಂದ ಹೊರಗುಳಿದ ಮಕ್ಕಳ ಸಂಖ್ಯೆಗಳಲ್ಲಿ ಗಣನೀಯ ಪ್ರಮಾಣದ ಇಳಿಕೆಯಾಗಿರುವುದು ಕಂಡುಬರುತ್ತದೆ.<br>2018–19ನೇ ಸಾಲಿನಲ್ಲಿ ಕಲಬುರಗಿ ಜಿಲ್ಲೆಯಲ್ಲಿ 984 ಮಕ್ಕಳು ಶಾಲೆಯಿಂದ ಹೊರಗುಳಿದಿದ್ದು, ಇವರಲ್ಲಿ 35 ಮಕ್ಕಳಿಗೆ ವಸತಿ ಸೌಲಭ್ಯ ನೀಡಿ, 139 ಮಕ್ಕಳನ್ನು ಶಾಲಾಧಾರಿತ ವಿಶೇಷ ತರಬೇತಿಗೆ ದಾಖಲಿಸಲಾಗಿದ್ದು, ಒಟ್ಟು 174 ಮಕ್ಕಳನ್ನು ಮುಖ್ಯವಾಹಿನಿಗೆ ತರಲಾಗಿದೆ. ಉಳಿದ ಮಕ್ಕಳನ್ನು ಇನ್ನಿತರೆ ಕಾರ್ಯತಂತ್ರಗಳ ಮೂಲಕ ಮುಖ್ಯವಾಹಿನಿಗೆ ತರಲಾಗುವುದು ಹಾಗೂ ಯಾದಗಿರಿ ಜಿಲ್ಲೆಯಲ್ಲಿ 284 ಮಕ್ಕಳು ಹೊರಗುಳಿದಿದ್ದು ಎಲ್ಲಾ ಮಕ್ಕಳನ್ನು ಶಾಲಾಧಾರಿತ ವಿಶೇಷ ತರಬೇತಿ (ಸ್ವಯಂ ಸೇವಕ ಸಹಿತ/ರಹಿತ) ಮೂಲಕ ಮುಖ್ಯವಾಹಿನಿಗೆ |

| | | | | |
|---|---|---|---|---|
| | | | | ತರಲಾಗಿದೆಯೆಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ಸಮಿತಿಯು ತೀರ್ಮಾನಿಸಿತು. |
| 4 | 5549<br>ಚು.ಗು.ಪ್ರ: 607<br>ಶ್ರೀ ಸೋಮಣ್ಣ ಮ. ಬೇವಿನಮರದ<br>ವಿಪನದಿ: 12/12/2014 | ಬಿಸಿಯೂಟ ಕಾರ್ಯಕ್ರಮದಲ್ಲಿ ಪೂರೈಸುತ್ತಿರುವ ಆಹಾರದ ಗುಣಮಟ್ಟ ಸರಿಯಿಲ್ಲದ ಕಾರಣದಿಂದ ಶಾಲಾ ಮಕ್ಕಳು ಅಸ್ವಸ್ಥರಾಗುತ್ತಿರುವ ಬಗ್ಗೆ. | ಕೆಲವು ಎನ್.ಜಿ.ಓ.ಗಳ ಬಗ್ಗೆ ಪ್ರಕರಣಗಳು ಬಂದಿವೆ. ಅವುಗಳ ಬಗ್ಗೆ ಪ್ರತ್ಯೇಕ ತನಿಖೆ ಮಾಡಿದ್ದೇವೆ. ಮುನ್ನೆಚ್ಚರಿಕೆ ಕ್ರಮವಾಗಿ ಏನೇನು ಮಾಡಬೇಕೆಂದು ಸುಮಾರು 150–200 ವಿಷಯಗಳ ಒಂದು ಪಟ್ಟಿ ಮಾಡಿ ಮಾರ್ಗದರ್ಶನಗಳನ್ನು ನಾವು ನೀಡಿದ್ದೇವೆ. ಇನ್ನು ನಿರ್ದಿಷ್ಟ ಪ್ರಕರಣಗಳನ್ನು ಹೇಳಿದರೆ ಖಂಡಿತವಾಗಿಯೂ ಕೂಡ ನಾವು ಅದರ ಬಗ್ಗೆ ಕ್ರಮವನ್ನು ತೆಗೆದುಕೊಳ್ಳುತ್ತೇವೆ ಎಂದು ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ತಿಳಿಸಿದರು. | ದಿನಾಂಕ: 01.10.2018ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ,<br>1. ಮಧ್ಯಾಹ್ನ ಉಪಹಾರ ಯೋಜನೆಯಡಿಯಲ್ಲಿ ಶಾಲೆಗಳಿಗೆ ಬಿಸಿಯೂಟ ಸರಬರಾಜು ಮಾಡುತ್ತಿರುವ ಸ್ವಯಂ ಸೇವಾ ಸಂಸ್ಥೆಗಳು ಆಹಾರ ಸುರಕ್ಷತೆ ಸೂಚನೆಗಳನ್ನು ಪಾಲಿಸುವಂತೆ ತಿಳಿಸಲಾಗಿದೆ.<br>2. ಎನ್.ಜಿ.ಓ.ಗಳು ಕೇಂದ್ರಿಕೃತ ಅಡುಗೆ ಕೇಂದ್ರಗಳಲ್ಲಿ ಸಿದ್ಧಪಡಿಸಿದ ಆಹಾರ ಪದಾರ್ಥಗಳನ್ನು 3 ತಿಂಗಳಿಗೊಮ್ಮೆ ಅಧಿಕೃತ ಪ್ರಯೋಗಾಲಯಗಳಲ್ಲಿ ಪರೀಕ್ಷೆಗೆ ಒಳಪಡಿಸಿ ದಾಖಲೆಗಳನ್ನು ನಿರ್ವಹಿಸುವಂತೆ ಸೂಚಿಸಲಾಗಿರುತ್ತದೆ.<br>3. ಸುರಕ್ಷತಾ ಕ್ರಮ ಕೈಗೊಳ್ಳಲು ಅನುಷ್ಠಾನದ ಜವಾಬ್ದಾರಿಯ ಬಗ್ಗೆ ಹಾಗೂ ಪ್ರಾಮಾಣಿಕ ಕಾರ್ಯಕಾರಿ ವಿಧಾನಗಳ ಬಗ್ಗೆ ಸುತ್ತೋಲೆ ಮೂಲಕ ಸೂಚಿಸಲಾಗಿದೆ.<br>4. 2017–18ನೇ ಸಾಲಿನಲ್ಲಿ ಶಾಲಾ ಪ್ರಾರಂಭಕ್ಕೂ ಮುನ್ನ ಕಾರ್ಯಕ್ರಮವನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಎನ್.ಜಿ.ಓ.ಗಳು ಕಡ್ಡಾಯವಾಗಿ ಕ್ಲೋಸ್ಡ್ ಕಂಟೈನರ್‌ಗಳ ಮೂಲಕ ಬಿಸಿಯೂಟವನ್ನು ಸರಬರಾಜು ಮಾಡುವಂತೆ, ಒಂದು ವೇಳೆ ಸರಬರಾಜು ಮಾಡಿದ ಆಹಾರದ ಗುಣಮಟ್ಟ ಕಳಪೆಯಾಗಿದ್ದಲ್ಲಿ ಅಂತಹ ಆಹಾರವನ್ನು ಮಕ್ಕಳಿಗೆ ನೀಡದೆ ತಿರಸ್ಕರಿಸುವಂತೆ ತಿಳಿಸಲಾಗಿರುತ್ತದೆ.<br>ಮೇಲ್ಕಂಡಂತೆ ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ಸಮಿತಿಯು ತೀರ್ಮಾನಿಸಿತು. |
| 5 | 5550 | ರಾಜ್ಯದಲ್ಲಿ ಸರ್ಕಾರಿ | ಮಾಹಿತಿ ಕ್ರೋಢೀಕರಿಸಲಾಗುತ್ತಿದೆ. | ದಿನಾಂಕ: 01.10.2018ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, |

| | | | | |
|---|---|---|---|---|
| | ಚು.ರ.ಪ್ರ: 41<br>ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ<br>ವಿಪನದಿ: 12/12/2014 | ಕಿರಿಯ ಪ್ರಾಥಮಿಕ, ಹಿರಿಯ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಸಿ.ಸಿ. ಕ್ಯಾಮರಾ ಅಳವಡಿಸುವ ಬಗ್ಗೆ. | ಆದೇಶದಲ್ಲಿರುವಂತೆ ಅನುಷ್ಠಾನ ಗೊಳಿಸಲು ಸರ್ಕಾರ ಒಪ್ಪಿದ್ದು, ಅದರಂತೆ ಅನುದಾನವನ್ನು ಬಿಡುಗಡೆ ಮಾಡಲಾಗುವುದು ಎಂದು ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ತಿಳಿಸಿದರು. | 2018–19ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ–112 ರಲ್ಲಿ ಮಾನ್ಯ ಮುಖ್ಯಮಂತ್ರಿಯವರು "ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿನ ಮಕ್ಕಳ ಸುರಕ್ಷತೆಯು ಸರ್ಕಾರದ ಪ್ರಥಮ ಆದ್ಯತೆಯಾಗಿದ್ದು, ಇದಕ್ಕಾಗಿ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಹಂತ–ಹಂತವಾಗಿ ಸಿಸಿಟಿವಿ ಕ್ಯಾಮರಗಳನ್ನು ಅಳವಡಿಸಲಾಗುವುದು" ಎಂದು ಘೋಷಿಸಿರುತ್ತಾರೆ.<br>ಅದರಂತೆ, 2018–19ನೇ ಸಾಲಿಗೆ ರಾಜ್ಯ ವಲಯದ ಮುಂದುವರೆದ ಯೋಜನಾ ಕಾರ್ಯಕ್ರಮಗಳಡಿ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಸಿಸಿಟಿವಿ ಅಳವಡಿಸುವ ಸಲುವಾಗಿ ಸೆಕೆಂಡರಿ ಸ್ಕೂಲ್ ಕಟ್ಟಡಗಳ ನಿರ್ವಹಣೆ ಲೆಕ್ಕಶೀರ್ಷಿಕೆ: 2202–02–053–0–01–59 (ಇತರೆ ವೆಚ್ಚಗಳು) ಅಡಿಯಲ್ಲಿ ರೂ.1,00 ಲಕ್ಷಗಳ ಅನುದಾನವನ್ನು ಒದಗಿಸಲಾಗಿರುತ್ತದೆ.<br>ಈ ಹಿನ್ನಲೆಯಲ್ಲಿ, 2018–19ನೇ ಸಾಲಿಗೆ ಹೆಚ್ಚಿನ ದಾಖಲಾತಿ ಹೊಂದಿರುವ ಶಾಲೆಗಳಿಗೆ ಪ್ರಾಯೋಗಿಕವಾಗಿ ಸಿ.ಸಿ.ಟಿ.ವಿ. ಕ್ಯಾಮರಾ ಅಳವಡಿಸುವ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ಸಮಿತಿಯು ತೀರ್ಮಾನಿಸಿತು. |
| 6 | 5553<br>ಚು.ರ.ಪ್ರ: 597<br>ಶ್ರೀ.ಜಿ.ಎಸ್. ನ್ಯಾಮಗೌಡ<br>ವಿಪನದಿ: 12.12.2014 | ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಬಿಸಿಯೂಟ ಅಡುಗೆ ಸಹಾಯಕರ ವೇತನ ಹೆಚ್ಚಿಸುವ ಬಗ್ಗೆ. | ಮುಖ್ಯ ಅಡಿಗೆಯವರಿಗೆ ಮಾಸಿಕ ರೂ. 1700/– ಮತ್ತು ಅಡುಗೆ ಸಹಾಯಕರಿಗೆ ಮಾಸಿಕ ರೂ. 1600/–ಗಳನ್ನು ದಿನಾಂಕ: 01.10.2014 ರಿಂದ ಅನ್ವಯವಾಗುವಂತೆ ಸಂಪೂರ್ಣ ರಾಜ್ಯ ಸರ್ಕಾರದ ಅನುದಾನದಿಂದ ಮಾಹೆಯಾನ ರೂ. 500/– ಸೇರಿಸಿ ಮೇಲ್ಕಂಡಂತೆ ಪಾವತಿಸಲಾಗುತ್ತದೆ. ಕೇಂದ್ರ ಪುರಸ್ಕೃತ ಯೋಜನೆಯಾಗಿರುವುದರಿಂದ ಕೇಂದ್ರ | ದಿನಾಂಕ: 01.10.2018ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ಸರ್ಕಾರದ ಆದೇಶ ಸಂಖ್ಯೆ: ಇಡಿ 05 ಎಂಎಂಎಸ್ 2016, ದಿ: 21.2.2016ರನ್ವಯ ದಿನಾಂಕ: 01.04.2016ರಿಂದ ಜಾರಿಗೆ ಬರುವಂತೆ ರೂ.300/– ಗಳಷ್ಟು ಸಂಭಾವನೆ ಹೆಚ್ಚಿಸಿದ್ದು, ಮುಖ್ಯ ಅಡುಗೆಯವರಿಗೆ ರೂ.2,000/– ಹಾಗೂ ಸಹಾಯಕ ಅಡುಗೆಯವರಿಗೆ ರೂ.1,900/–ಗಳ ಗೌರವ ಸಂಭಾವನೆಯನ್ನು ನೀಡಲಾಗುತ್ತಿತ್ತು.<br>ತದನಂತರ, ಸರ್ಕಾರದ ಆದೇಶ ಸಂಖ್ಯೆ: ಇಡಿ 35 ಎಂ.ಎಂ.ಎಸ್. 2017, ದಿ: 11.07.2017ರಲ್ಲಿ ದಿ: 01.07.2017 ರಿಂದ ಜಾರಿಗೆ ಬರುವಂತೆ ರೂ. 200/–ಗಳನ್ನು ಹೆಚ್ಚಿಸಿ ಮುಖ್ಯ ಅಡುಗೆಯವರಿಗೆ ಮಾಸಿಕ 2,200/– ಹಾಗೂ ಅಡುಗೆ ಸಹಾಯಕರಿಗೆ ರೂ. 2,100/–ಗಳನ್ನು |

| | | | | |
|---|---|---|---|---|
| | | | ಸರ್ಕಾರ ಹೆಚ್ಚಿಸಿದಲ್ಲಿ ಪಾವತಿಸಲಾಗುವುದು ಎಂದು ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ತಿಳಿಸಿದರು. | ಪರಿಷ್ಕರಿಸಲಾಯಿತು.<br>ಪ್ರಸ್ತುತ ಸರ್ಕಾರದ ಆದೇಶ ಸಂಖ್ಯೆ: ಇಡಿ 54 ಎಂ.ಎಂ.ಎಸ್. 2017, ದಿ: 05.03.2018ರಲ್ಲಿ ಅಕ್ಷರ ದಾಸೋಹ ಯೋಜನೆಯಡಿ ಕಾರ್ಯನಿರ್ವಹಿಸುತ್ತಿರುವ ಮುಖ್ಯ ಅಡುಗೆಯವರು ಹಾಗೂ ಸಹಾಯಕ ಅಡುಗೆಯವರಿಗೆ ನೀಡಲಾಗುವ ಮಾಸಿಕ ಗೌರವ ಸಂಭಾವನೆಯಲ್ಲಿ ದಿ: 01.01.2018ರಿಂದ ಜಾರಿಗೆ ಬರುವಂತೆ ತಲಾ ರೂ.500/-ಗಳನ್ನು ಹೆಚ್ಚಿಸಿ ಆದೇಶಿಸಲಾಗಿದ್ದು, ಅದರನ್ವಯ ದಿ: 01.01.2018ರಿಂದ ಅನ್ವಯವಾಗುವಂತೆ ಮುಖ್ಯ ಅಡುಗೆಯವರಿಗೆ ಮಾಸಿಕ ರೂ.2,700/- ಹಾಗೂ ಸಹಾಯಕ ಅಡುಗೆಯವರಿಗೆ ಮಾಸಿಕ ರೂ. 2,600/-ಗಳ ಗೌರವ ಸಂಭಾವನೆಯನ್ನು ನೀಡಲಾಗುತ್ತಿದೆ. ಒಟ್ಟಾರೆ 2013-2014ರಿಂದ ಈವರೆಗೆ ರೂ. 1,200/- ಗಳಷ್ಟು ಗೌರವ ಸಂಭಾವನೆ ಹೆಚ್ಚಿಸಲಾಗಿದೆಯೆಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ಸಮಿತಿಯು ತೀರ್ಮಾನಿಸಿತು. |
| 7 | 5556<br>ಚು.ರ.ಪ್ರ: 620<br>ಶ್ರೀ ಗೋ.ಮಧುಸೂದನ್<br>ವಿಪನದಿ: 12.12.2014 | ಶಿಕ್ಷಣ ಇಲಾಖೆಯಲ್ಲಿ ಪತಿ-ಪತ್ನಿ ಪ್ರಕರಣ ಮತ್ತು ವೈದ್ಯಕೀಯ ಅನಾರೋಗ್ಯ ಪ್ರಕರಣಗಳ ಅಡಿಯಲ್ಲಿ ವರ್ಗಾವಣೆಗೆ ಸಂಬಂಧಿಸಿದಂತೆ ರಾಜ್ಯ ಉಚ್ಚ ನ್ಯಾಯಾಲಯವು ನೀಡಿರುವ ತೀರ್ಪಿನ ಕುರಿತು. | ಮಾನ್ಯ ಉಚ್ಚ ನ್ಯಾಯಾಲಯವು ನೀಡಿರುವ ತೀರ್ಪಿನಂತೆ ನಿಯಮ 8(13)ರ ವರ್ಗಾವಣೆ ನೀತಿಯನ್ನು ಮಾರ್ಪಡಿಸಲು ಸೂಚಿಸಿ ನೌಕರಸ್ನೇಹಿ ನೀತಿ ರೂಪಿಸಲು ಸೂಚಿಸಿರುತ್ತದೆ ಹಾಗೂ ವರ್ಗಾವಣೆ ನೀತಿ ಮಾರ್ಪಾಡು ಬಗ್ಗೆ ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ ಎಂದು ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ತಿಳಿಸಿದರು. | ದಿನಾಂಕ: 01.10.2018ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ಅಧಿನಿಯಮ-2007ಕೆ ತಿದ್ದುಪಡಿ ತಂದು ನಿಯಮಗಳನ್ನು ಅಂತಿಮಗೊಳಿಸಿ, ದಿ: 29.11.2017ರಂದು ಪ್ರಕಟಿಸಲಾಗಿರುತ್ತದೆ. ಈ ನಿಯಮಗಳನ್ವಯ ಕೋರಿಕೆ ವರ್ಗಾವಣೆಗಳಿಗೆ ಸಂಬಂಧಪಟ್ಟಂತೆ ಪತಿ-ಪತ್ನಿ ಪ್ರಕರಣ ಮತ್ತು ವೈದ್ಯಕೀಯ ಅನಾರೋಗ್ಯ ಪ್ರಕರಣಗಳಲ್ಲಿ ನಿಯಮಾನುಸಾರ ಅರ್ಹತೆ ಇದ್ದಲ್ಲಿ ವರ್ಗಾವಣೆ ಪಡೆಯಲು ಅವಕಾಶ ಕಲ್ಪಿಸಲಾಗಿದೆಯೆಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ಸಮಿತಿಯು ತೀರ್ಮಾನಿಸಿತು. |
| 8 | 5557<br>ಚು.ರ.ಪ್ರ: 658 | ರಾಜ್ಯದ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ | ವೃಂದ ಮತ್ತು ನೇಮಕಾತಿ ನಿಯಮಗಳಿಗೆ ತಿದ್ದುಪಡಿ ವಿಷಯವು | ದಿನಾಂಕ: 01.10.2018ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 626 ಪಿಬಿಎಸ್ 2014, ದಿ: |

| | | | | |
|---|---|---|---|---|
| | ಶ್ರೀ. ವೈ.ಎ. ನಾರಾಯಣ ಸ್ವಾಮಿ ವಿಪನದಿ: 12.12.2014 | ಖಾಲಿ ಇರುವ ಶಿಕ್ಷಕರ ನೇಮಕಾತಿ ವಿಳಂಬದ ಬಗ್ಗೆ. | ಪರಿಶೀಲನೆಯಲ್ಲಿದೆ ಹಾಗೂ ಹೈದರಾಬಾದ್-ಕರ್ನಾಟಕ 371ಜೆ ರೀತ್ಯಾ ಮೀಸಲಾತಿ ನಿಗಧಿಪಡಿಸಿ ತುರ್ತಾಗಿ ನೇಮಕಾತಿಗೆ ಕ್ರಮವಹಿಸಲಾಗಿದೆ.<br>ನೇಮಕಾತಿಯನ್ನು ನಡೆಸಲು ಕಾರ್ಯಕಾರಿ ಆದೇಶವನ್ನು ಅಥವಾ ಅನುಮತಿಯನ್ನು ತಿದ್ದುಪಡಿಯೊಂದಿಗೆ ಹೊರಡಿಸಲು ಕ್ರಮ ಕೈಗೊಳ್ಳಲಾಗಿದೆ ಎಂದು ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ತಿಳಿಸಿದರು. | 07.08.2017ರಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರ ವೃಂದ ಮತ್ತು ನೇಮಕಾತಿ ನಿಯಮಗಳಿಗೆ ತಿದ್ದುಪಡಿ ತರಲಾಗಿದೆ. ಸದರಿ ತಿದ್ದುಪಡಿ ನಿಯಮಗಳನ್ವಯ ಒಟ್ಟು 10,000 ಹುದ್ದೆಗಳನ್ನು (6 ರಿಂದ 8ನೇ ತರಗತಿ) ಪದವೀಧರ ಶಿಕ್ಷಕರ ನೇಮಕಾತಿ ಮಾಡಿಕೊಳ್ಳಲು ಕ್ರಮವಹಿಸಲಾಗಿದ್ದು, ಇದರಲ್ಲಿ ಹೈದ್ರಾಬಾದ್-ಕರ್ನಾಟಕ ಸ್ಥಳೀಯ ವೃಂದದವರಿಗೆ 3,966 ಹುದ್ದೆಗಳು, ಹೈದ್ರಾಬಾದ್ ಕರ್ನಾಟಕ ಮಿಕ್ಕುಳಿದ ವೃಂದದ 1001 ಹುದ್ದೆಗಳು ಹಾಗೂ ಬೆಂಗಳೂರು ಬಿ.ಬಿ.ಎಂ.ಪಿ. ವ್ಯಾಪ್ತಿಯ ಹೈದ್ರಾಬಾದ್-ಕರ್ನಾಟಕ ರಾಜ್ಯಮಟ್ಟದ ಸ್ಥಳೀಯ ವೃಂದದ 50 ಹುದ್ದೆಗಳನ್ನೊಳಗೊಂಡಂತೆ ಜಿಲ್ಲಾವಾರು ನೇಮಕಾತಿಗೆ ಅಧಿಸೂಚಿಸಲಾಗಿದ್ದು, ಸ್ಪರ್ಧಾತ್ಮಕ ಪರೀಕ್ಷೆಯನ್ನು ದಿ: 04.11.2017 ಮತ್ತು 05.11.2017ರಂದು ನಡೆಸಲಾಗಿದ್ದು, ತಾತ್ಕಾಲಿಕಾ ಪರಿಶೀಲನಾ ಪಟ್ಟಿಯನ್ನು ದಿ: 27.08.2018ರಂದು ಬಿಡುಗಡೆ ಮಾಡಿದ್ದು, ತಾತ್ಕಾಲಿಕ ಪರಿಶೀಲನಾ ಪಟ್ಟಿಗೆ ಆಕ್ಷೇಪಣೆಗಳನ್ನು ಸ್ವೀಕರಿಸಿ ಹಾಗೂ ಜಿಲ್ಲಾ ಹಂತದಲ್ಲಿ ಅಭ್ಯರ್ಥಿಗಳ ಮೂಲ ದಾಖಲೆ ಪರಿಶೀಲನೆಯನ್ನು ದಿ: 01.09.2018 ರಿಂದ 07.09.2018ರವರೆಗೆ ಪರಿಶೀಲನೆ ಮಾಡಿದ್ದು, ಸದರಿ ಆಕ್ಷೇಪಣೆಗಳನ್ವಯ ತಿದ್ದುಪಡಿಯನ್ನು ದಿ: 11.09.2018 ರಿಂದ 19.09.2018ರವರೆಗೆ ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ ಇವರುಗಳು ಮಾಡಲಿದ್ದು, ಶೀಘ್ರದಲ್ಲಿಯೇ ತಾತ್ಕಾಲಿಕ ಪಟ್ಟಿಯನ್ನು ಪ್ರಕಟಿಸಲಾಗುವುದು.<br>ಪ್ರೌಢಶಾಲೆಗೆ ಸಂಬಂಧಿಸಿದಂತೆ 2014-15ನೇ ಸಾಲಿನ ನೇರ ನೇಮಕಾತಿ ಪ್ರಕ್ರಿಯೆಯಲ್ಲಿ ರಾಜ್ಯದಲ್ಲಿ ಖಾಲಿ ಇರುವ ಪ್ರೌಢಶಾಲಾ ಶಿಕ್ಷಕರ ಒಟ್ಟು 1689 ಹುದ್ದೆಗಳನ್ನು ನೇಮಕಾತಿ ಮಾಡಲಾಗಿದ್ದು, ಇದರಲ್ಲಿ 148 ದೈಹಿಕ ಶಿಕ್ಷಣ ಶಿಕ್ಷಕರ ಹುದ್ದೆಗಳೂ ಸಹ ಒಳಗೊಂಡಿರುತ್ತದೆಯೆಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ಸಮಿತಿಯು ತೀರ್ಮಾನಿಸಿತು. |
| 9 | 5558<br>ಚು.ರ.ಪ್ರ: 702 | ರಾಜ್ಯದಲ್ಲಿರುವ ಗ್ರಂಥಾಲಯಗಳಲ್ಲಿ | 2014-15ನೇ ಸಾಲಿನಲ್ಲಿ 5 ಗ್ರಂಥಪಾಲಕರು, 10 ಸಹ | ದಿನಾಂಕ: 01.10.2018ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ಸರ್ಕಾರದ ಪತ್ರ ಸಂ: ಇಡಿ 394 ಎಲ್‌ಐಬಿ 201, ದಿನಾಂಕ: |

| | | | | |
|---|---|---|---|---|
| | ಶ್ರೀ ಆರ್. ಧರ್ಮಸೇನ ವಿಪನದಿ: 12.12.2014 | ಖಾಲಿ ಇರುವ ಗ್ರಂಥಪಾಲಕರು, ಸಹ ಗ್ರಂಥಪಾಲಕರು ಹಾಗೂ ಗ್ರಂಥಾಲಯ ಸಹಾಯಕರ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ | ಗ್ರಂಥಪಾಲಕರು ಹಾಗೂ 20 ಗ್ರಂಥಾಲಯ ಸಹಾಯಕರ ಹುದ್ದೆಗಳನ್ನು ಕರ್ನಾಟಕ ಲೋಕ ಸೇವಾ ಆಯೋಗದ ಮೂಲಕ ಭರ್ತಿ ಮಾಡಿಕೊಳ್ಳಲಾಗಿದ್ದು, ಉಳಿದ 399 ಖಾಲಿ ಹುದ್ದೆಗಳ ಭರ್ತಿ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ ಎಂದು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ತಿಳಿಸಿದರು. | 20.02.2018ರನುಸಾರ ನೇರ ನೇಮಕಾತಿ ಮೂಲಕ ಖಾಲಿ ಇರುವ ಹುದ್ದೆಗಳ ಪೈಕಿ ಒಟ್ಟು 39 ಹುದ್ದೆಗಳ ಭರ್ತಿಗಾಗಿ ಮಂಜೂರಾತಿ ನೀಡಲಾಗಿದ್ದು, 13 ಮುಖ್ಯ ಗ್ರಂಥಾಲಯಾಧಿಕಾರಿಗಳ ಹುದ್ದೆಗಳ ಭರ್ತಿಗಾಗಿ ಮತ್ತು 13 ಗ್ರಂಥಪಾಲಕರ ಹುದ್ದೆಗಳ ಭರ್ತಿಗಾಗಿ ಹಾಗೂ 13 ಸಹ ಗ್ರಂಥಪಾಲಕರ ಹುದ್ದೆಗಳ ಭರ್ತಿಗಾಗಿ ಕಾರ್ಯದರ್ಶಿಗಳು, ಕರ್ನಾಟಕ ಲೋಕ ಸೇವಾ ಆಯೋಗ ಇವರಿಗೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಮುಂದುವರೆದು, ಉಳಿದ ನೇರ ನೇಮಕಾತಿ ಮೂಲಕ ಖಾಲಿ ಹುದ್ದೆಗಳನ್ನು ಭರ್ತಿ ಮಾಡುವ ಸಂಬಂಧ ಅನುಮತಿ ನೀಡುವಂತೆ ಕೋರಿ, ದಿ: 07.10.2017ರಂದು ಆರ್ಥಿಕ ಇಲಾಖೆಯ ಸಹಮತಿಗಾಗಿ ಕಡತವನ್ನು ಸಲ್ಲಿಸಲಾಗಿದೆ, ಆರ್ಥಿಕ ಇಲಾಖೆಯು ನೀಡುವ ಸಹಮತಿಯ ಮೇರೆಗೆ ಕ್ರಮವಹಿಸಲಾಗುವುದೆಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ಸಮಿತಿಯು ತೀರ್ಮಾನಿಸಿತು. |
| 10 | 2306<br>ಗಮನ ಸೆಳೆಯುವ ಸೂಚನೆ<br>ಶ್ರೀ ಹೆಚ್.ಎಸ್. ಶಿವಶಂಕರ್<br>ವಿಪನದಿ: 05.04.2006 | ಬೆಳಗಾವಿ ಜಿಲ್ಲೆಯ ರಾಮದುರ್ಗ ತಾಲ್ಲೂಕಿನ ಶ್ರೀ ಫಲಹಾರ ಶಿವಯೋಗಿಶ್ವರ ಶಿಕ್ಷಣ ಸಂಸ್ಥೆಯಲ್ಲಿ ಕಾನೂನುಬಾಹಿರ ಆಡಳಿತ ನಡೆಸುತ್ತಿರುವ ಬಗ್ಗೆ. | ಆಡಳಿತ ಮಂಡಳಿಯ ಅಧ್ಯಕ್ಷರಿಗೆ ಕಾರಣ ಕೇಳಿ ನೋಟೀಸು ನೀಡಲಾಗಿದ್ದು, ನಿಗದಿತ ಅವಧಿಯಲ್ಲಿ ಉತ್ತರವನ್ನು ನಿರೀಕ್ಷಿಸಲಾಗುತ್ತಿದೆ, ಸದರಿಯವರು ನೀಡುವ ಉತ್ತರವನ್ನು ನಿಯಮಾನುಸಾರ ಪರಿಶೀಲಿಸಿ ಕರ್ನಾಟಕ ಶಿಕ್ಷಣ ಕಾಯ್ದೆ 1983ರ ನಿಯಮಗಳಡಿಯಲ್ಲಿ ಸೂಕ್ತ ಕ್ರಮ ಜರುಗಿಸಲಾಗುವುದು ಎಂದು ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ತಿಳಿಸಿದರು. | ದಿನಾಂಕ: 20.06.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ಬೆಳಗಾವಿ ಜಿಲ್ಲೆಯ ಮನಿಹಾಳ–ಸುರೇಬಾನದ ನಾಗರೀಕ ಹಿತರಕ್ಷಣಾ ಹೋರಾಟ ಸಮಿತಿಯ ಅಧ್ಯಕ್ಷರು ದಿನಾಂಕ:23.11.2005ರಂದು ಹಾಗೂ ಬೆಳಗಾವಿ ಜಿಲ್ಲಾ ಘಟಕದ ಕರ್ನಾಟಕ ಮಾಧ್ಯಮಿಕ ಶಾಲಾ ನೌಕರರ ಸಂಘದ ಅಧ್ಯಕ್ಷರು, ಮನಿಹಾಳ ಸುರೇಬಾನದ ಶ್ರೀ ಫಲಹಾರ ಶಿವಯೋಗೀಶ್ವರ ಶಿಕ್ಷಣ ಸಮಿತಿಯ ಅಧ್ಯಕ್ಷರ ಮೇಲೆ ದೂರು ನೀಡಿದ್ದರು.<br>ಈ ದೂರಿನ ಹಿನ್ನೆಲೆಯಲ್ಲಿ ಸದರಿ ಪದವಿ ಪೂರ್ವ ಕಾಲೇಜಿನ ಲೆಕ್ಕ ತಪಾಸಣೆ ಮತ್ತು ಆಡಳಿತಾತ್ಮಕ ತಪಾಸಣೆಯನ್ನು ದಿನಾಂಕಃ14.12.2005 ರಿಂದ 17.12.2005ರವರೆಗೆ ಕೈಗೊಳ್ಳಲಾಯಿತು. ದಿನಾಂಕಃ17.12.2005ರಂದು ಅಂದಿನ ಉಪ ನಿರ್ದೇಶಕರಾದ ಶ್ರೀ ಬಿ. ಶಿವಣ್ಣರವರು ತಪಾಸಣೆಯ ಮರು ಪರಿಶೀಲನೆಯನ್ನು ಕೈಗೊಂಡಿರುತ್ತಾರೆ. ತಪಾಸಣೆಯ ವರದಿಯನ್ನು ಪರಿಶೀಲಿಸಿದಾಗ ಕೆಳಕಂಡ ಅಂಶಗಳು ಬೆಳಕಿಗೆ ಬಂದಿರುತ್ತವೆ.<br>• ಪದವಿ ಪೂರ್ವ ಕಾಲೇಜಿನ ಲೆಕ್ಕದಿಂದ ಆಡಳಿತ ಮಂಡಳಿಯು |

| | | | | |
|---|---|---|---|---|
| | | | | ರೂ.4,15,083–00ಗಳನ್ನು ಆಡಳಿತ ಮಂಡಳಿಗೆ ವರ್ಗಾಯಿಸಿರುವುದು ನಿಯಮಬಾಹಿರ.<br>• ಪ್ರಿನ್ಸಿಪಾಲರಾದ ಶ್ರೀ ಬಿ.ಎನ್. ಬಗಲಿರವರನ್ನು ಸೇವೆಯಿಂದ ಅಮಾನತ್ತುಗೊಳಿಸಿರುವುದು ಸಮಂಜಸವಾಗಿರುವುದಿಲ್ಲ.<br>• ಬೋಧಕ ಮತ್ತು ಬೋಧಕೇತರ ನೇಮಕಾತಿಯಲ್ಲಿ ಮೀಸಲಾತಿ ನಿಯಮ ಪಾಲನೆ ಆಗಿಲ್ಲ.<br>• ವಿದ್ಯಾರ್ಥಿಗಳಿಗೆ ಕ್ರೀಡಾ ಸಾಮಗ್ರಿ ಗ್ರಂಥಾಲಯ ಸೌಲಭ್ಯ ನೀಡಿರುವುದಿಲ್ಲ.<br>• ಕನ್ನಡ ಭಾಷೆ ಉಪನ್ಯಾಸಕರಾದ ಶ್ರೀ ಸಿ.ಎಸ್. ಹಿರೇಮಠ ಇವರಿಗೆ ನಿಯಮಬಾಹಿರವಾಗಿ ಹೆಚ್ಚುವರಿ ವೇತನ ಪಾವತಿಸಿರುವುದು.<br><br>ಈ ಮೇಲ್ಕಂಡ ಕಾರಣಗಳಿಂದಾಗಿ ಕಾಲೇಜಿನ ವೇತನ ಅನುದಾನ ಏಕೆ ತಡೆಹಿಡಿಯಬಾರದೆಂದು ದಿನಾಂಕಃ 10/14.03.2006ರಂದು ಆಡಳಿತ ಮಂಡಳಿಯ ಅಧ್ಯಕ್ಷರಿಗೆ ಕಾರಣ ಕೇಳಿ ನೋಟೀಸ್ ನೀಡಲಾಗಿತ್ತು.<br><br>ನಿರ್ದೇಶಕರ ಕಛೇರಿಯ ಕಾರಣ ಕೇಳಿ ನೋಟೀಸ್‌ಗೆ ಆಡಳಿತ ಮಂಡಳಿಯವರು ದಿನಾಂಕಃ24.03.2006ರಂದು ಉತ್ತರ ನೀಡಿರುತ್ತಾರೆ. ಆಡಳಿತ ಮಂಡಳಿಯ ಅಧ್ಯಕ್ಷರು ಪ್ರತಿಪಾದಿಸಿರುವುದನ್ನು ಒಪ್ಪಲು ಸಾಧ್ಯವಿಲ್ಲದ ಹಿನ್ನೆಲೆಯಲ್ಲಿ ದಿನಾಂಕಃ15.05.2006ರ ನಡವಳಿಯಲ್ಲಿ ಕಾಲೇಜಿನ ಲೆಕ್ಕದಿಂದ ಅಕ್ರಮವಾಗಿ ಆಡಳಿತ ಮಂಡಳಿಯ ಲೆಕ್ಕಕ್ಕೆ ವರ್ಗಾಯಿಸಿಕೊಂಡ ಮೊಬಲಗು ರೂ.4,15,083–00ನ್ನು ಕಾಲೇಜಿನ ಲೆಕ್ಕಕ್ಕೆ ಜಮಾ ಮಾಡಲು ಆದೇಶಿಸಲಾಯಿತು. ಈ ಮಧ್ಯದಲ್ಲಿ ಸರ್ಕಾರದ ಕಾರ್ಯದರ್ಶಿಗಳ ಮುಂದೆ 1983ರ ಶಿಕ್ಷಣ ಕಾಯ್ದೆಯ ನಿಯಮ 131ರ ಅಡಿಯಲ್ಲಿ ದಾಖಲಾದ ಅಪೀಲು ಸಂಖ್ಯೆ:26/2006ರ ಮೇಲೆ ಸಕ್ಷಮ ಪ್ರಾಧಿಕಾರವು ದಿನಾಂಕ:21.08.2006 ರ ತೀರ್ಪಿನಲ್ಲಿ ಈ ಕೆಳಕಂಡಂತೆ ನಿರ್ದೇಶನ ನೀಡಿದೆ:– |

| | | | | |
|---|---|---|---|---|
| | | | | "In the above circumstances the order of the management dated 31.05.2006 and the enquiry culminating in the report dated 24.05.2006 are declared as illegal and hence it is null and void. The management is hereby directed to reinstate the appellant in Principals post with immediate effect, remit to the Government the misappropriate amount, and also to recover and remit to Government account which is wrongfully drawn and disbursed to the aforesaid lecturer in Kannada.<br><br>If the management fails to follow the above order within a week the Department of Pre-University Education may consider to initiate suitable action as per the rule 12A or 12B of the Grant-in-Aid Code.<br><br>The Directorate should also take full compliance from the management about the financial matters within a period of one month and also see that reservation policy is fully complied with."<br><br>ಸದರಿ ತೀರ್ಪನ್ನು ಪ್ರಶ್ನಿಸಿ ಆಡಳಿತ ಮಂಡಳಿಯ ಅಧ್ಯಕ್ಷರು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ದಾಖಲಿಸಿದ್ದರು. ರಿಟ್ ಅರ್ಜಿ ಸಂಖ್ಯೆಃ11994/2006. ದಿನಾಂಕಃ29.05.2008 ರಂದು ಮಾನ್ಯ ಉಚ್ಚ ನ್ಯಾಯಾಲಯವು ತೀರ್ಪು ನೀಡಿದೆ. ಈ ತೀರ್ಪಿನಲ್ಲಿಯ ನಿರ್ದೇಶನ ಅನುಸಾರ ಶ್ರೀ ಬಿ.ಎನ್. ಬಗಲಿಯವರನ್ನು ಪ್ರಿನ್ಸಿಪಾಲರಾಗಿ ಸೇವೆಗೆ ಪುನಃ ಸ್ಥಾಪನೆಗೊಳಿಸಲು ಆಡಳಿತ ಮಂಡಳಿಯ ಅಧ್ಯಕ್ಷರಿಗೆ ನಿರ್ದೇಶಕರ |

| | | | | |
|---|---|---|---|---|
| | | | | ಕಛೇರಿಯ ದಿನಾಂಕಃ 04.06.2008ರ ಪತ್ರದಲ್ಲಿ ತಿಳಿಸಿದೆ. ಆಡಳಿತ ಮಂಡಳಿಯವರು ದಿನಾಂಕಃ 29.05.2008ರಂದು ಮಾನ್ಯ ಉಚ್ಚ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ:11994/2006ರ ಮೇಲೆ ನೀಡಿದ ತೀರ್ಪನ್ನು ತಳ್ಳಿ ಹಾಕಬೇಕೆಂದು ಕೋರಿ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅಪೀಲು ದಾಖಲಿಸಿರುತ್ತಾರೆ. ಸಂಖ್ಯೆ:914/2008ರ ಈ ರಿಟ್ ಅಪೀಲಿನ ಮೇಲೆ ಮಾನ್ಯ ಉಚ್ಚ ನ್ಯಾಯಾಲಯವು ದಿನಾಂಕ:20.06.2008 ರಂದು ಮಧ್ಯಂತರ ಆದೇಶ ನೀಡಿ ಶ್ರೀ ಬಿ.ಎನ್. ಬಗಲಿರವರನ್ನು ಪ್ರಿನ್ಸಿಪಾಲ್‌ರಾಗಿ ಕರ್ತವ್ಯಕ್ಕೆ ಹಾಜರುಪಡಿಸುವ ಬಗ್ಗೆ ತಡೆಯಾಜ್ಞೆಯನ್ನು ನೀಡಲಾಗಿದೆ. ಮಂದುವರೆದಂತೆ ಇದೇ ಆದೇಶದಲ್ಲಿ ಶ್ರೀ ಬಿ.ಎನ್. ಬಗಲಿರವರು ಉಪನ್ಯಾಸಕರಾಗಿ ಕರ್ತವ್ಯಕ್ಕೆ ಹಾಜರಾಗಲು ಸಿದ್ದರಿದ್ದಲ್ಲಿ, ಅವರನ್ನು ಉಪನ್ಯಾಸಕರಾಗಿ ಕರ್ತವ್ಯಕ್ಕೆ ಹಾಜರುಪಡಿಸಿಕೊಳ್ಳಲು ಆದೇಶಿಸಲಾಗಿದೆ. ಆಡಳಿತ ಮಂಡಳಿ ಶ್ರೀಯುತರನ್ನು ಉಪನ್ಯಾಸಕರನ್ನಾಗಿ ಕರ್ತವ್ಯದ ಮೇಲೆ ಹಾಜರುಪಡಿಸಿಕೊಂಡಿದೆ.<br><br>ಉಪ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಳಗಾಂ ಇವರು ತಮ್ಮ ಪತ್ರ ದಿನಾಂಕಃ28.11.2011 ರಲ್ಲಿ ಆಡಳಿತ ಮಂಡಳಿಯು ಇಲಾಖೆಯ ನಿರ್ದೇಶನದಂತೆ ರೂ.4,15,083–00ಗಳನ್ನು ಕಾಲೇಜಿನ ಖಾತೆಗೆ ಜಮಾ ಮಾಡಿರುತ್ತಾರೆ ಎಂದು ವರದಿ ಮಾಡಿರುತ್ತಾರೆ ಹಾಗೂ ಸದರಿ ಮೊತ್ತ ಕಾಲೇಜಿನ ಎಸ್.ಬಿ. ಖಾತೆ ಸಂಖ್ಯೆಃ 220/4919ಕ್ಕೆ ಜಮಾ ಆಗಿರುತ್ತದೆ ಎಂದು ತಿಳಿಸಿರುತ್ತಾರೆ.<br><br>ಶ್ರೀ ಬಿ.ಎನ್.ಬಗಲಿ ಇವರು ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆರವರ ಅಪೀಲ್ ಪ್ರಾಧಿಕಾರದಲ್ಲಿ ದಾಖಲಿಸಿದ್ದ ಅಪೀಲು ಸಂಖ್ಯೆ:08/2010 ಮತ್ತು ಅಪೀಲು ಸಂಖ್ಯೆ:12/2012ನ್ನು ದಿನಾಂಕ: 10.11.2016ರಂದು ಈ ಕೆಳಕಂಡಂತೆ ಪ್ರತಿವಾದಿ ಆಡಳಿತ ಮಂಡಳಿಗೆ ನಿರ್ದೇಶನ ನೀಡಿ, ಇತ್ಯರ್ಥಪಡಿಸಿರುತ್ತಾರೆ :– |

| | | | | |
|---|---|---|---|---|
| | | | | “Subject to the final Judgement of E.A.T. in Appeal No:09/2009, the Respondents are directed to fix the salary of the Appellant allowing the annual increments as per rules in the appropriate pay scales of the lecturer of the Pre-University College from the date of report for duty by the Appellant in the post of lecturer till date as per rules.”<br><br>ನಿರ್ದೇಶಕರ ಮೇಲಿನ ಆದೇಶವನ್ನು ಆಡಳಿತ ಮಂಡಳಿಯು ಅನುಷ್ಠಾನಗೊಳಿಸಿರುವುದಿಲ್ಲ. ಈ ಕುರಿತಂತೆ ಜಂಟಿ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆರವರು ದಿನಾಂಕ:01.04.2017ರಂದು ಸದರಿ ಆಡಳಿತ ಮಂಡಳಿಗೆ ಕಾರಣ ಕೇಳುವ ಸೂಚನಾ ಪತ್ರವನ್ನು ನೀಡಿರುತ್ತಾರೆ. ಆದಾಗ್ಯೂ ಆಡಳಿತ ಮಂಡಳಿಯು ನಿರ್ದೇಶಕರ ಆದೇಶವನ್ನು ಅನುಷ್ಠಾನಗೊಳಿಸದಿರುವುದನ್ನು ಪರಿಗಣಿಸಿ, ಸರ್ಕಾರವು ಕರ್ನಾಟಕ ಶಿಕ್ಷಣ ಕಾಯ್ದೆ 1983ರ ಕಲಂ 67(1)ರಡಿ ಈ ಪದವಿ ಪೂರ್ವ ಕಾಲೇಜಿಗೆ ಏಕೆ ಆಡಳಿತಾಧಿಕಾರಿಯನ್ನು ನೇಮಿಸಬಾರದು ಎಂಬ ಬಗ್ಗೆ ಕಾರಣ ಕೇಳಿ ನೋಟೀಸನ್ನು ಸಂಸ್ಥೆಗೆ ಜಾರಿ ಮಾಡಿದೆ. ಸಂಸ್ಥೆಯು ಸದರಿ ನೋಟೀಸಿಗೆ ನೀಡಿರುವ ಉತ್ತರವನ್ನು ಪರಿಶೀಲಿಸಲಾಗುತ್ತಿದೆ. ಸದರಿ ಉತ್ತರದಲ್ಲಿ ಆಡಳಿತ ಮಂಡಳಿಯು ನಿರ್ದೇಶಕರ ಅಪೀಲು ಪ್ರಾಧಿಕಾರದ ಅಪೀಲು ಸಂಖ್ಯೆ:8/2010 ಮತ್ತು 12/2012ರಲ್ಲಿನ ದಿನಾಂಕ:10.11.2016ರ ತೀರ್ಪಿನ ವಿರುದ್ಧ ಸರ್ಕಾರದ ಅಪೀಲು ಪ್ರಾಧಿಕಾರದಲ್ಲಿ ಕರ್ನಾಟಕ ಶಿಕ್ಷಣ ಕಾಯ್ದೆ 1983ರ ಕಲಂ 131ರಡಿ ರಿವಿಜನ್ ಅರ್ಜಿ ದಾಖಲಿಸಿದ್ದು, ಸದರಿ ರಿವಿಜನ್ ಅರ್ಜಿಯನ್ನು ಇತ್ಯರ್ಥಪಡಿಸದೆ ನಿರ್ದೇಶಕರ ಆದೇಶವನ್ನು ಅನುಷ್ಠಾನಗೊಳಿಸಲು ಸಾಧ್ಯವಿಲ್ಲವೆಂದು ತಿಳಿಸಿದೆ.<br>ಸರ್ಕಾರದ ಅಪೀಲು ಪ್ರಾಧಿಕಾರದ ರಿವಿಷನ್ ಅಪೀಲು ಸಂಖ್ಯೆ:2/2017ನ್ನು ದಿನಾಂಕ:18.09.2017ರಂದು ಇತ್ಯರ್ಥಪಡಿಸಿ, ಆಡಳಿತ ಮಂಡಳಿಯ ಅರ್ಜಿಯನ್ನು ತಿರಸ್ಕರಿಸಲಾಗಿದೆ. ಈ ಹಿನ್ನೆಲೆಯಲ್ಲಿ |

| | | | | |
|---|---|---|---|---|
| | | | | ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ ಇವರ ದಿನಾಂಕ:10.11.2016ರ ಆದೇಶವನ್ನು ಅನುಷ್ಠಾನಗೊಳಿಸುವಂತೆ ಹಾಗೂ ಶ್ರೀ ಬಿ.ಎನ್.ಬಗಲಿ, ಉಪನ್ಯಾಸಕರು ಇವರಿಗೆ ಸಲ್ಲಬೇಕಾದ ನಿವೃತ್ತಿ ಸೌಲಭ್ಯಗಳನ್ನು ಬಿಡುಗಡೆಗೊಳಿಸುವ ಬಗ್ಗೆ ಕೂಡಲೇ ಕ್ರಮ ಕೈಗೊಳ್ಳುವಂತೆ ಮತ್ತು ಒಂದು ಪಕ್ಷ ನಿಗದಿತ ವೇಳೆಯಲ್ಲಿ ಕ್ರಮ ಕೈಗೊಳ್ಳದಿದ್ದಲ್ಲಿ ನಿಯಮಗಳ ಪ್ರಕಾರ ಸೂಕ್ತ ಕ್ರಮ ಜರುಗಿಸಲಾಗುವುದೆಂದು ಸರ್ಕಾರದ ಪತ್ರ ಸಂಖ್ಯೆ:ಇಡಿ 385 ಎಸ್‌ಹೆಚ್‌ಹೆಚ್ 2009 ದಿನಾಂಕ:03.10.2017ರಲ್ಲಿ ಆಡಳಿತ ಮಂಡಳಿಗೆ ತಿಳಿಸಲಾಗಿರುತ್ತದೆ.<br><br>ಸದರಿ ಆಡಳಿತ ಮಂಡಳಿಯು ಮೇಲಿನಂತೆ ಸರ್ಕಾರದ ಆದೇಶವನ್ನು ಪಾಲಿಸದಿರುವ ಹಿನ್ನೆಲೆಯಲ್ಲಿ ಸರ್ಕಾರದ ಆದೇಶ ಸಂಖ್ಯೆ:ಇಡಿ 385 ಎಸ್‌ಹೆಚ್‌ಹೆಚ್ 2009 ದಿನಾಂಕ:23.10.2017ರಲ್ಲಿ ಕರ್ನಾಟಕ ಶಿಕ್ಷಣ ಕಾಯ್ದೆ 1983ರ ಕಲಂ 67(1)ರನ್ವಯ ಈ ಪದವಿ ಪೂರ್ವ ಕಾಲೇಜಿಗೆ ಉಪ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಳಗಾವಿ ಜಿಲ್ಲೆ ಇವರನ್ನು ವಿಶೇಷಾಧಿಕಾರಿಯನ್ನಾಗಿ ನೇಮಿಸಲಾಗಿತ್ತು. ಈ ಆದೇಶವನ್ನು ಪ್ರಶ್ನಿಸಿ, ಸದರಿ ಸಂಸ್ಥೆಯು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ದಾಖಲಿಸಿದ್ದ ರಿಟ್ ಅರ್ಜಿ ಸಂಖ್ಯೆ:110510/2017ರಲ್ಲಿನ ದಿನಾಂಕ:30.05.2018ರ ತೀರ್ಪಿನಲ್ಲಿ ವಿಶೇಷಾಧಿಕಾರಿಯನ್ನು ನೇಮಿಸಿರುವ ಸದರಿ ಸರ್ಕಾರದ ಆದೇಶವನ್ನು ರದ್ದುಪಡಿಸಿದೆ ಮತ್ತು ಈ ಕೆಳಕಂಡಂತೆ ನಿರ್ದೇಶನ ನೀಡಿದೆ.<br><br>"32. In the circumstances, Writ Petition is allowed the order dated 23.10.2017 Annexure-V is quashed. However, it is clarified that once respondent No.4 is entitled to the benefits that he is seeking whether in Writ Petition No.109131/2017 or in any other proceedings and is successful in seeking the said |

| | | | | |
|---|---|---|---|---|
| | | | | benefits, the same shall be payable to him by the petitioner management or by the State, as the case may be subject to any further orders that may be made by either this court or any other forum."<br><br>ಶ್ರೀ ಬಿ.ಎನ್.ಬಗಲಿ, ಉಪನ್ಯಾಸಕರು ಇವರು ದಿನಾಂಕ:31.07.2017 ರಂದು ಸೇವೆಯಿಂದ ವಯೋನಿವೃತ್ತಿ ಹೊಂದಿದ ಪ್ರಯುಕ್ತ ಸದರಿಯವರ ಪಿಂಚಣಿಯ ಮಂಜೂರಾತಿ ಪ್ರಸ್ತಾವನೆಯನ್ನು ಮಹಾಲೇಖಪಾಲರು, ಬೆಂಗಳೂರು ಇವರಿಗೆ ದಿನಾಂಕ:25.08.2018ರಲ್ಲಿ ಸಲ್ಲಿಸಿದ್ದು, ಮಹಾಲೇಖಪಾಲರು ದಿನಾಂಕ:13.02.2019ರ ಪತ್ರದಲ್ಲಿ ಶ್ರೀ ಬಿ.ಎನ್.ಬಗಲಿ ಉಪನ್ಯಾಸಕರಿಗೆ ದಿನಾಂಕ:01.08.2017ರಿಂದ ಜಾರಿಗೆ ಬರುವಂತೆ ಪಿಂಚಣಿ ಸೌಲಭ್ಯವನ್ನು ಮಂಜೂರು ಮಾಡಿರುತ್ತಾರೆ.<br><br>ಶ್ರೀ ಬಿ.ಎನ್.ಬಗಲಿ ಇವರನ್ನು ಆಡಳಿತ ಮಂಡಳಿಯವರು ಪ್ರಾಂಶುಪಾಲರ ಹುದ್ದೆಯಿಂದ ಉಪನ್ಯಾಸಕರ ಹುದ್ದೆಗೆ ಹಿಂಬಡ್ತಿ ನೀಡಿರುವ ಹಿನ್ನೆಲೆಯಲ್ಲಿ ಸದರಿಯವರು ಉಪನ್ಯಾಸಕರ ಕರ್ತವ್ಯಕ್ಕೆ ಹಾಜರಾದ ದಿನಾಂಕದಿಂದ ವೇತನವನ್ನು ನೀಡಲಾಗಿರುತ್ತದೆ. ಆದರೆ, ಸದರಿಯವರಿಗೆ 2009 ರಿಂದ 2017ರವರೆಗೆ ವಾರ್ಷಿಕ ವೇತನ ಬಡ್ತಿಗಳನ್ನು ನೀಡಿರುವುದಿಲ್ಲ. ಈ ಬಗ್ಗೆ ಸದರಿ ಉಪನ್ಯಾಸಕರು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯ ಧಾರವಾಡ ಇಲ್ಲಿನ ರಿಟ್ ಅರ್ಜಿ ಸಂಖ್ಯೆ:109131/2017ನ್ನು ದಾಖಲಿಸಿರುವ ಹಿನ್ನೆಲೆಯಲ್ಲಿ ಸದರಿ ಪ್ರಕರಣದಲ್ಲಿ ಆಗುವ ತೀರ್ಪಿನಂತೆ ಕ್ರಮವಹಿಸಲಾಗುವುದು ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿದ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |
| 11 | 3113<br>ಚುರಪ್ರ: 296<br>ಶ್ರೀ ಬಸವರಾಜ | ಅನುದಾನರಹಿತ ಶಿಕ್ಷಣ ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಿರುವ ಶಿಕ್ಷಕರಿಗೆ | ಸದರಿ ಆದೇಶವನ್ನು ಅನುಷ್ಠಾನಗೊಳಿಸಿದ ಶಾಲೆಗಳ ಬಗ್ಗೆ ಮಾಹಿತಿಯನ್ನು ರಾಜ್ಯದ ಎಲ್ಲಾ | ದಿನಾಂಕ: 20.06.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ಖಾಸಗಿ ಅನುದಾನರಹಿತ ಶಾಲೆಗಳ ಸಿಬ್ಬಂದಿಗಳಿಗೆ ಶಾಲೆಯ ಆಡಳಿತ ಮಂಡಳಿಯವರು ಕರ್ನಾಟಕ ಶಿಕ್ಷಣ ಅಧಿನಿಯಮ-1983, ಕಲಂ-89 |

| | | | | |
|---|---|---|---|---|
| | ಹೊರಟ್ಟಿ<br>ವಿಪನದಿ: 27.2.2009 | ಸಂಬಳವನ್ನು ಚೆಕ್ ಮೂಲಕ ನೀಡಲು ಹಾಗೂ ಸೇವಾ ಭದ್ರತೆ ನೀಡುವ ಬಗ್ಗೆ. | ಶಾಲೆಗಳಿಂದ ಸಂಗ್ರಹಿಸುತ್ತಿದ್ದು, ಪೂರ್ಣ ಮಾಹಿತಿ ಸ್ವೀಕಾರವಾದ ನಂತರ ಈ ಬಗ್ಗೆ ಪರಿಶೀಲಿಸ ಲಾಗುವುದೆಂದು ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ತಿಳಿಸಿದರು. | ಮತ್ತು 90ರಲ್ಲಿ ಪ್ರಸ್ತಾಪಿಸಿರುವಂತೆ ಅಗತ್ಯ ಸೇವಾ ಸೌಲಭ್ಯಗಳಾದ ವೇತನ ಮತ್ತು ಇತರೆ ಭತ್ಯೆಗಳ ಪಾವತಿ, ಸಿಬ್ಬಂದಿಗಳ ತಃಖ್ತೆ ಹಾಗೂ ಇತರೆ ಸೌಲಭ್ಯಗಳನ್ನು ಒದಗಿಸದೇ ನಿಯಮಗಳನ್ನು ಉಲ್ಲಂಘಿಸುವ ಶಾಲೆಗಳ ವಿರುದ್ಧ ವಿಚಾರಣೆಯನ್ನು ನಡೆಸಿ ರೂ.5.00 ಲಕ್ಷಗಳವರೆಗೆ ದಂಡ ವಿಧಿಸುವ ಅಧಿಕಾರವನ್ನು ಜಿಲ್ಲಾ ಶಿಕ್ಷಣ ಮತ್ತು ನಿಯಂತ್ರಣ ಪ್ರಾಧಿಕಾರಕ್ಕೆ (DERA) ಕರ್ನಾಟಕ ಶಿಕ್ಷಣ ಅಧಿನಿಯಮ–1983, ಕಲಂ–125ಎ ರಂತೆ ನೀಡಲಾಗಿದೆ.<br>ವಿಧಾನ ಪರಿಷತ್ತು ಭರವಸೆ ಸಮಿತಿಯ ಸೂಚನೆಯಂತೆ ಶಿಕ್ಷಕವಾರು ಮತ್ತು ಶಾಲಾವಾರು ಸೇವಾ ಭದ್ರತೆ ಒದಗಿಸಿರುವ ಬಗ್ಗೆ ತಂತ್ರಾಂಶವನ್ನು ಸಿದ್ದಪಡಿಸಿ ಮಾಹಿತಿಗಳನ್ನು ಸಂಗ್ರಹಿಸುವಂತೆ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರಿಗೆ ತಿಳಿಸಲಾಗಿತ್ತು. ಪ್ರಸ್ತುತ ಎನ್.ಐ.ಸಿ ವತಿಯಿಂದ ತಂತ್ರಾಂಶವನ್ನು ಅಭಿವೃದ್ಧಿ ಪಡಿಸುವ ಪ್ರಕ್ರಿಯೆ ಚಾಲನೆಯಲ್ಲಿದ್ದು, 2019–20ನೇ ಸಾಲಿನ ಶೈಕ್ಷಣಿಕ ವರ್ಷ ಪ್ರಾರಂಭಗೊಂಡಿದ್ದು, ತಂತ್ರಾಂಶ ಸಿದ್ದಗೊಂಡನಂತರ ಶಿಕ್ಷಕರ ಇತ್ತೀಚಿನ ಪರಿಷ್ಕೃತ ಮಾಹಿತಿಯನ್ನು ತಂತ್ರಾಂಶದಲ್ಲಿ ಸಂಗ್ರಹಿಸಿ ವರದಿಯನ್ನು ಸಲ್ಲಿಸಲಾಗುವುದು ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿದ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |
| 12 | 3287<br>ಚು.ಗು.ಪ್ರ: 787<br>ಶ್ರೀ ಬಸವರಾಜ ಹೊರಟ್ಟಿ<br>ವಿಪನದಿ: 24.07.2009 | ಖಾಸಗಿ ಅನುದಾನಿತ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಶೇ.55ಕ್ಕಿಂತ ಕಡಿಮೆ ಅಂಕ ಪಡೆದು ನೇಮಕಾತಿ ಹೊಂದಿದ ಅರೆಕಾಲಿಕ ಉಪನ್ಯಾಸಕರ ಸೇವೆಯನ್ನು ಸಕ್ರಮಾತಿಗೊಳಿಸುವ | ಈ ವಿಷಯದ ಬಗ್ಗೆ ಸೂಕ್ತವಾಗಿ ಪರಿಶೀಲಿಸಿ ಅಗತ್ಯ ನಿರ್ಣಯಗಳನ್ನು ಕೈಗೊಳ್ಳುತ್ತೇವೆ ಎಂದು ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ತಿಳಿಸಿದರು. | ದಿನಾಂಕ: 20.06.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ಖಾಸಗಿ ಅನುದಾನಿತ ಪದವಿ ಕಾಲೇಜುಗಳಲ್ಲಿ 1993–94 ಮತ್ತು 1994–95ನೇ ಸಾಲಿನಲ್ಲಿ ಅರೆಕಾಲಿಕ ಉಪನ್ಯಾಸಕರಾಗಿ ಕಾರ್ಯನಿರ್ವಹಿಸಿರುವವರಲ್ಲಿ ಸ್ನಾತಕೋತ್ತರ ಪದವಿಯಲ್ಲಿ ಶೇ.55ಕ್ಕಿಂತ ಕಡಿಮೆ ಮತ್ತು ಶೇಕಡ 50 ಕ್ಕಿಂತ ಹೆಚ್ಚಿಗೆ ಅಂಕ ಪಡೆದ ಅರೆಕಾಲಿಕ ಉಪನ್ಯಾಸಕರುಗಳನ್ನು ಖಾಸಗಿ ಅನುದಾನಿತ ಪದವಿ ಪೂರ್ವ ಕಾಲೇಜುಗಳಲ್ಲಿ ಸೇವಾವಿಲೀನಗೊಳಿಸುವ ಕುರಿತಂತೆ ಕಾಲೇಜು ಶಿಕ್ಷಣ ಇಲಾಖೆಯು ಒಟ್ಟು 125 ಉಪನ್ಯಾಸಕರುಗಳ ಪ್ರಸ್ತಾವನೆಗಳನ್ನು ಪದವಿ ಪೂರ್ವ ಶಿಕ್ಷಣ ಇಲಾಖೆಗೆ ಕಳುಹಿಸಿದೆ. ಇಂತಹ ಉಪನ್ಯಾಸಕರನ್ನು ಸೇವಾ ವಿಲೀನಗೊಳಿಸಲು ದಿನಾಂಕ: 11.08.2010ರಂದು ಸರ್ಕಾರದ |

| | | | | |
|---|---|---|---|---|
| | | ಬಗ್ಗೆ. | | ಅಧಿಸೂಚನೆ ಸಂಖ್ಯೆ: ಇಡಿ 86 ಟಿಪಿಯು 2006ರಲ್ಲಿ ಅಂತಿಮ ವಿಶೇಷ ನಿಯಮಗಳನ್ನು ಪ್ರಕಟಿಸಲಾಗಿದೆ. ಸದರಿ ನಿಯಮಗಳನ್ವಯ ಸೇವಾ ವಿಲೀನಕ್ಕೆ ಅರ್ಹರಾಗುವ ಅರೆಕಾಲಿಕ ಉಪನ್ಯಾಸಕರುಗಳ ಪಟ್ಟಿಯನ್ನು ದಾಖಲೆಗಳೊಂದಿಗೆ ತಯಾರಿಸಲು ಸರ್ಕಾರದ ಆದೇಶ ಸಂಖ್ಯೆ: ಇಡಿ 86 ಟಿಪಿಯು 2006 ದಿನಾಂಕ:13-09-2010 ರಲ್ಲಿ ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ ರವರ ಅಧ್ಯಕ್ಷತೆಯಲ್ಲಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಮತ್ತು ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆರವರನ್ನು ಒಳಗೊಂಡ ಪರಾಮರ್ಶಕ ಸಮಿತಿ(ಸ್ಕ್ರೀನಿಂಗ್ ಕಮಿಟಿ)ಯನ್ನು ರಚಿಸಲಾಗಿತ್ತು.<br><br>ಪರಾಮರ್ಶಕ ಸಮಿತಿಯು ಅರ್ಹರೆಂದು ಶಿಫಾರಸ್ಸು ಮಾಡಿರುವ 25 ಅರೆಕಾಲಿಕ ಉಪನ್ಯಾಸಕರನ್ನು ಸರ್ಕಾರದ ಅಧಿಸೂಚನೆ ಸಂಖ್ಯೆ:ಇಡಿ 86 ಟಿಪಿಯು 2006 ದಿನಾಂಕ: 03.04.2012 ಮತ್ತು ಸರ್ಕಾರದ ಆದೇಶ ಸಂಖ್ಯೆ:ಇಡಿ 141 ಟಿಪಿಯು 2012 ದಿನಾಂಕ:02-03-2013ರಲ್ಲಿ ಕೆಲವು ಷರತ್ತುಗಳೊಂದಿಗೆ ಸೇವಾ ಸಕ್ರಮಗೊಳಿಸಲಾಗಿದೆ. |
| 13 | 6455<br>ಗಮನ ಸೆಳೆಯುವ ಸೂಚನೆ<br>ಶ್ರೀ ಪುಟ್ಟಣ್ಣ<br>ವಿಪನದಿ: 24.11.2016 | ಸರ್ವೋಚ್ಛ ನ್ಯಾಯಾಲಯದ ತೀರ್ಪಿನಂತೆ ಖಾಸಗಿ ಅನುದಾನಿತ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಶೇ.55ಕ್ಕಿಂತ ಕಡಿಮೆ ಅಂಕ ಪಡೆದು ಕಾರ್ಯನಿರ್ವಹಿಸುತ್ತಿರುವ ಉಪನ್ಯಾಸಕರನ್ನು ಖಾಯಂಗೊಳಿಸುವ ಬಗ್ಗೆ. | ನಾನು ಬಂದ ನಂತರ ಸಚಿವ ಸಂಪುಟದ ಮುಂದೆ ತೆಗೆದುಕೊಂಡು ಹೋಗುವುದಕ್ಕೆ ಈಗಾಗಲೇ ಸಿದ್ಧತೆಯನ್ನು ಮಾಡಿಕೊಂಡಿದ್ದೇನೆ. ಸರ್ಕಾರ ಈಗಾಗಲೇ ಸುಮಾರು 1800, 1900 ಜನರಿಗೆ ಏನು ಮಾಡಿದ್ದೇವೆ ಉಳಿದಂಥ 66,107 ಜನ ಯಾರಿದ್ದಾರೆ ಅವರಿಗೆ ನಾವು ಯಾವ ರೀತಿಯಾಗಿ ಮಾಡಬೇಕು ಆದನ್ನು ಖಂಡಿತವಾಗಿ ಸರ್ಕಾರ ಸ್ಪಂದಿಸುತ್ತದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆಂದು ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ರಾಜ್ಯ ಸಚಿವರು ತಿಳಿಸಿದರು. | |
| 14 | 4706<br>ಚು.ರ.ಪ್ರ: 07<br>ಶ್ರೀ ಬಸವರಾಜ ಹೊರಟ್ಟಿ<br>ವಿಪನದಿ: 19.07.2013<br>ಮಂಡಿಸಿದ<br>ದಿ: 19.07.2013 | ಖಾಸಗಿ ಅನುದಾನಿತ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಶೇ.55ಕ್ಕಿಂತ ಕಡಿಮೆ ಅಂಕ ಪಡೆದ ಅರೆಕಾಲಿಕ ಉಪನ್ಯಾಸಕರನ್ನು ಪದವಿ ಪೂರ್ವ ಕಾಲೇಜುಗಳಲ್ಲಿ ಸಕ್ರಮಾತಿಗೊಳಿಸಲು ರಚಿಸಿದ ನಿಯಮಾವಳಿಗಳಲ್ಲಿ | 2010ರ ವಿಶೇಷ ನಿಯಮಗಳಿಗೆ ಸೂಕ್ತ ತಿದ್ದುಪಡಿ ಮಾಡಿ ಸತತ ಸೇವೆಯಲ್ಲಿರಬೇಕು ಎಂಬ ಷರತ್ತನ್ನು ಸಡಿಲಿಸಲು ಪರಿಶೀಲಿಸಲಾಗುತ್ತಿದೆ ಎಂದು ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ತಿಳಿಸಿದರು. | ಕರ್ನಾಟಕ ಶಿಕ್ಷಣ ಸಂಸ್ಥೆಯ (ಖಾಸಗಿ ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿ ಅರೆಕಾಲಿಕ ಉಪನ್ಯಾಸಕರಾಗಿ ಕಾರ್ಯನಿರ್ವಹಿಸುತ್ತಿರುವ ಸೇವೆ ವಿಲೀನಗೊಳಿಸುವ) (ವಿಶೇಷ) ನಿಯಮಗಳು, 2010ರ ನಿಯಮ2(C)(V)ರಲ್ಲಿ ಉಪನ್ಯಾಸಕರಗಳು ಸತತವಾಗಿ ಸೇವೆಯಲ್ಲಿರುವವರನ್ನು ಖಾಯಂಗೊಳಿಸಲು ಅವಕಾಶ ಕಲ್ಪಿಸಲಾಗಿದೆ. ಈ ಅಂಶವನ್ನು ಮಾರ್ಪಡಿಸಿ, 1993-94 ಮತ್ತು 1994-95ನೇ ಸಾಲುಗಳಲ್ಲಿ ಅರೆಕಾಲಿಕ ಉಪನ್ಯಾಸಕರಾಗಿ ಸೇವೆ ಸಲ್ಲಿಸಿರುವವರನ್ನು ಸೇವಾ ಸಕ್ರಮಗೊಳಿಸಲು ನಿಯಮಗಳಲ್ಲಿ ತಿದ್ದುಪಡಿ ಮಾಡುವ ಬಗ್ಗೆ ಮಾನ್ಯ ಅಡ್ವೋಕೇಟ್ ಜನರಲ್ ಹಾಗೂ ಕಾನೂನು ಇಲಾಖೆಯ ಅಭಿಪ್ರಾಯವನ್ನು ಕೋರಲಾಗಿತ್ತು. ಮಾನ್ಯ ಅಡ್ವೋಕೇಟ್ ಜನರಲ್‌ರವರು ನೀಡಿರುವ ಅಭಿಪ್ರಾಯದ ಸಂಕ್ಷಿಪ್ತ ವಿವರ ಈ ಕೆಳಕಂಡಂತಿದೆ- |

| | | | | |
|---|---|---|---|---|
| | | ಸತತವಾಗಿ ಸೇವೆಯಲ್ಲಿರಬೇಕೆಂಬ ಷರತ್ತನ್ನು ಸಡಿಲಿಸುವ ಬಗ್ಗೆ. | | *"One more class of persons to benefit under the Rule for absorption by virtue of altered conditions cannot be permited. From this angle also, the proposed Amendment runs counter to the mandate of the Constitution Bench Judgement on 10.04.2006."* |
| 15 | 5560<br>ಶೂನ್ಯವೇಳೆ<br>ಶ್ರೀ ಬಸವರಾಜ ಹೊರಟ್ಟಿ<br>ವಿಪನದಿ: 07.07.2014 | ಶೈಕ್ಷಣಿಕ ವರ್ಷದ ಮಧ್ಯದಲ್ಲಿ ನಿವೃತ್ತರಾಗುವ ಅನುದಾನಿತ ಶಾಲಾ ಶಿಕ್ಷಕರನ್ನು ಮುಂದುವರೆಸುವ ಬಗ್ಗೆ | ತಕ್ಷಣದಲ್ಲೇ ಇದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆ. ಸರ್ಕಾರ ಕೂಡ ಈ ನಿಟ್ಟಿನಲ್ಲಿ ಉತ್ಸುಕತೆಯಿಂದಿದೆ, ಖಂಡಿತವಾಗಿ ಈ ದಿಸೆಯಲ್ಲಿ ಪ್ರಯತ್ನ ಮಾಡುತ್ತೇವೆ ಎಂದು ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ತಿಳಿಸಿದರು. | ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆಯು ವಿಶೇಷ ನಿಯಮಗಳಿಗೆ ವಿರುದ್ಧವಾಗಿ ಮಾರ್ಗಸೂಚಿಗಳನ್ನು ರಚಿಸುವುದು ಕಾನೂನು ರೀತಿ ಸರಿಯಿಲ್ಲ. ಒಂದು ವೇಳೆ ಆ ರೀತಿ ಮಾರ್ಗಸೂಚಿಗಳನ್ನು ನಿಯಮಗಳಿಗೆ ವಿರುದ್ಧವಾಗಿ ರಚಿಸಿ, ಉಪನ್ಯಾಸಕರನ್ನು ಸೇವಾ ಸಕ್ರಮಗೊಳಿಸಿದಲ್ಲಿ, ಅಂತಹ ಆದೇಶಗಳನ್ನು ನ್ಯಾಯಾಲಯದ ಮುಂದೆ ಸಮರ್ಥಿಸಿಕೊಳ್ಳುವುದು ಕಷ್ಟಸಾಧ್ಯವಾಗುತ್ತದೆ ಎಂದು ಅಭಿಪ್ರಾಯ ನೀಡಿದೆ.<br>1993–94 ಮತ್ತು 1994–95ನೇ ಶೈಕ್ಷಣಿಕ ಸಾಲುಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅರೆಕಾಲಿಕ ಉಪನ್ಯಾಸಕರುಗಳ ಸೇವಾ ಸಕ್ರಮಾತಿ ಕುರಿತಂತೆ ದಿ:11/03/2015 ಮತ್ತು ದಿ:20/04/2015ರಂದು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರು ಇವರ ಅಧ್ಯಕ್ಷತೆಯಲ್ಲಿ ಸಭೆ ನಡೆಸಲಾಯಿತು. ಸದರಿ ಸಭೆಯ ನಿರ್ಣಯದಂತೆ ದಿ:15/05/2015 ಮತ್ತು ದಿ:16/05/2015ರಂದು ಪ್ರಧಾನ ಕಾರ್ಯದರ್ಶಿಗಳು ಉನ್ನತ ಶಿಕ್ಷಣ ಇಲಾಖೆ, ಮತ್ತು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರ ಜಂಟಿ ಅಧ್ಯಕ್ಷತೆಯಲ್ಲಿ ವಿಶ್ವವಿದ್ಯಾಲಯ, ಕಾಲೇಜು ಶಿಕ್ಷಣ ಮತ್ತು ಪ್ರೌಢ ಶಿಕ್ಷಣ ಇಲಾಖೆಯ ಹಿರಿಯ ಅಧಿಕಾರಿಗಳನ್ನೊಳಗೊಂಡಂತೆ ಸಭೆ ಕರೆದು ಚರ್ಚಿಸಿ, ಈ ಕೆಳಕಂಡಂತೆ ನಿರ್ಣಯಿಸಲಾಯಿತು.<br>*" ಪರಾಮರ್ಶಕ ಸಮಿತಿಯು ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 86 ಟಿಪಿಯು 2006 ದಿನಾಂಕ:11/08/2010 ಹಾಗೂ ಸರ್ಕಾರದ ಆದೇಶ ಸಂಖ್ಯೆ: ಇಡಿ 86 ಟಿಪಿಯು 2006* |

| | | | | |
|---|---|---|---|---|
| | | | | *ದಿನಾಂಕ:13/09/2010ರಲ್ಲಿ ತಿಳಿಸಿರುವಂತೆ ಪ್ರತಿಯೊಬ್ಬ ಅರೆಕಾಲಿಕ ಉಪನ್ಯಾಸಕರು ಸೇವಾ ಸಕ್ರಮಾತಿಗೆ ಅರ್ಹರಿರುವ ಹಾಗೂ ಅರ್ಹರಿಲ್ಲದಿರುವ ಬಗ್ಗೆ ವಿವರವಾದ ವರದಿಯನ್ನು ಸಲ್ಲಿಸಿರುತ್ತಾರೆ. ಸಮಿತಿಯು ನೀಡಿರುವ ವರದಿ ಕ್ರಮಬದ್ಧವಾಗಿದ್ದು, ಅದರಂತೆ ಸರ್ಕಾರ ಅರ್ಹರಿರುವ ಅರೆಕಾಲಿಕ ಉಪನ್ಯಾಸಕರನ್ನು ಸೇವಾ ಸಕ್ರಮಾತಿಗೊಳಿಸಲು ದಿನಾಂಕ:03/04/2012ರ ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 86 ಟಿಪಿಯು 2006 ಹಾಗೂ ಸರ್ಕಾರದ ಆದೇಶ ಸಂಖ್ಯೆ:ಇಡಿ 141 ಟಿಪಿಯು 2012 ದಿನಾಂಕ: 02/03/2013ರಲ್ಲಿ ಪದವಿ ಪೂರ್ವ ಶಿಕ್ಷಣ ಇಲಾಖೆಗೆ ಆದೇಶಿಸಲಾಗಿದೆ. ಉಳಿದಂತೆ ಪರಾಮರ್ಶಕ ಸಮಿತಿ ವರದಿಯ ಪ್ರಕಾರ ಸೇವಾ ಸಕ್ರಮಾತಿಗೆ ಅರ್ಹರಿಲ್ಲದವರನ್ನು ಸೇವಾ ಸಕ್ರಮಾತಿಗೊಳಿಸಲು ನಿಯಮಗಳಲ್ಲಿ ಅವಕಾಶವಿರುವುದಿಲ್ಲ ಎಂಬುದಾಗಿ ಸಭೆಯು ಒಮ್ಮತದ ತೀರ್ಮಾನಕ್ಕೆ ಬರಲಾಯಿತು.”*<br><br>ದಿನಾಂಕ:25/08/2015ರಂದು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರು ಇವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ ಮತ್ತು ಉನ್ನತ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳ ಜಂಟಿ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಅಭಿಪ್ರಾಯಪಟ್ಟಿರುವ ಅಂಶಗಳ ಬಗ್ಗೆ ಚರ್ಚಿಸಿ ಈ ಕೆಳಕಂಡಂತೆ ನಿರ್ಣಯಿಸಲಾಗಿದೆ.<br><br>*“1) ಮಾನ್ಯ ಸರ್ವೋಚ್ಚ ನ್ಯಾಯಾಲಯದ ಸ್ಪಷ್ಟ ನಿರ್ದೇಶನದ ಹಿನ್ನೆಲೆಯಲ್ಲಿ 2010ರ ವಿಶೇಷ ನಿಯಮಗಳಿಗೆ ಯಾವುದೇ ತಿದ್ದುಪಡಿ ಮಾಡಲು ಸಾಧ್ಯವಿಲ್ಲ.*<br>*2) ಸೇವಾ ಸಕ್ರಮಗೊಳಿಸಲು ಕೋರುತ್ತಿರುವ ವ್ಯಕ್ತಿಗಳು ಮಂಡಿಸುತ್ತಿರುವ ವಾದಗಳನ್ನು ಪರಾಮರ್ಶಕ ಸಮಿತಿಯು ವಿವರವಾಗಿ ಪರಿಗಣಿಸಿದೆ ಮತ್ತು ಸಮಿತಿಯ ವರದಿಯಲ್ಲಿ* |

| | | | | |
|---|---|---|---|---|
| | | | | *ಗುರುತಿಸಲಾದ ಕಾರಣಗಳಿಂದ ಅವರುಗಳು ಸೇವಾ ವಿಲೀನಗೊಳಿಸಲು ಅನರ್ಹರೆಂದು ಕಂಡುಬಂದಿದೆ.*<br>*ಮೇಲಿನ ಅವಲೋಕನೆಗಳೊಂದಿಗೆ ಸದರಿ ಪ್ರಕರಣವನ್ನು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ, ಆರ್ಥಿಕ ಇಲಾಖೆ ಮತ್ತು ಅಡ್ವೋಕೇಟ್ ಜನರಲ್ ರವರು ನೀಡಿರುವ ಸ್ಪಷ್ಟ ಅಭಿಪ್ರಾಯಗಳೊಂದಿಗೆ ಸಚಿವ ಸಂಪುಟದ ಅವಗಾಹನೆಗೆ ತರಲಾಗಿದ್ದು, ದಿನಾಂಕ:31.01.2018 ರಂದು ನಡೆದ ಮಾನ್ಯ ಸಚಿವ ಸಂಪುಟ ಸಭೆಯಲ್ಲಿ ಚರ್ಚಿಸಿ, ಸಚಿವ ಸಂಪುಟವು ಈ ಪ್ರಕರಣವನ್ನು ಶಾಶ್ವತವಾಗಿ ಮುಕ್ತಾಯಗೊಳಿಸಲು ನಿರ್ಣಯಿಸಿದೆ.*<br>• ಖಾಸಗಿ ಅನುದಾನಿತ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಶೈಕ್ಷಣಿಕ ವರ್ಷದ ಮಧ್ಯದಲ್ಲಿ ನಿವೃತ್ತರಾಗುವ ಶಿಕ್ಷಕರನ್ನು ಮುಂದುವರೆಸುವ ವಿಚಾರದಲ್ಲಿ ಸರ್ಕಾರದಿಂದ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಶೈಕ್ಷಣಿಕ ವರ್ಷದ ಮಧ್ಯದಲ್ಲಿ ನಿವೃತ್ತರಾಗುವ ಶಿಕ್ಷಕರನ್ನು ಮಾತ್ರ ಮುಂದುವರೆಸುವ ಬಗ್ಗೆ ಅನುಮತಿ ನೀಡಿದೆ. ಅದರಂತೆ ಕ್ರಮ ವಹಿಸಲಾಗುತ್ತಿದೆ.<br>• ಅನುದಾನಿತ ಪ್ರೌಢಶಾಲೆಗಳಲ್ಲಿ ಶೈಕ್ಷಣಿಕ ವರ್ಷದ ಮಧ್ಯದಲ್ಲಿ ನಿವೃತ್ತರಾಗುವ ಶಿಕ್ಷಕರನ್ನು ಮುಂದುವರೆಸುವ ಬಗ್ಗೆ ಸರ್ಕಾರದಲ್ಲಿ ಇಲ್ಲಿಯವರೆಗೆ ಯಾವುದೇ ಪ್ರಸ್ತಾವನೆ ಇರುವುದಿಲ್ಲ.<br><br>ಮೇಲ್ಕಂಡಂತೆ ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿದ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |
| 16 | 5525<br>ನಿಯಮ.330<br>ಶ್ರೀಮತಿ ಮೋಟಮ್ಮ | ಮೂಡಿಗೆರೆ ತಾಲ್ಲೂಕಿನ ಕಳಸಾ ಹೋಬಳಿಯಲ್ಲಿನ | As per the direction of the High Court, ಮಕ್ಕಳಿಗೆ ಪಾಠ ಹೇಳುವಂತಹ ಸಿಲಬಸ್ ಅನ್ನು | ದಿನಾಂಕ: 20.06.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ತಾಲ್ಲೂಕಿನ ಕಳಸಾ ಹೋಬಳಿಯಲ್ಲಿನ ಕುದುರೆಮುಖ ಕಂಪನಿಯು 2005–06ನೇ ಸಾಲಿನಲ್ಲಿ ಕೆಲಸವನ್ನು |

| | | | | |
|---|---|---|---|---|
| | ವಿಪನದಿ:24.07.2014 | ಕುದುರೆಮುಖ ಕಂಪನಿ ವತಿಯಿಂದ ನಡೆಸಲಾಗುತ್ತಿದ್ದ ಸಿ.ಬಿ.ಎಸ್.ಇ. ಹೈಸ್ಕೂಲ್ ಮುಚ್ಚಲ್ಪಟ್ಟಿದ್ದು, ಶಿಕ್ಷಣ ಹಕ್ಕು ಕಾಯ್ದೆ ಪ್ರಕಾರ ಸರ್ಕಾರ ಈ ಶಾಲೆಯನ್ನು ತೆಗೆದುಕೊಂಡು ನಡೆಸುವ ಬಗ್ಗೆ. | ನಾವು ಮಾಡುತ್ತಿದ್ದೇವೆ. ಇದನ್ನು ಯಾವುದಾದರೂ ರೀತಿಯಲ್ಲಿ ಮಾಡುವುದು ನಮ್ಮ ಕರ್ತವ್ಯ Right to Education Actನ ಅಡಿಯಲ್ಲೂ ಕೂಡ ಮಾಡಬೇಕು. We will take the risk of running it. ಆದರೂ ಸಹ ನಾವು ಕೇಂದ್ರ ಸರ್ಕಾರದಿಂದಲೂ ಸಹ ಪ್ರಯತ್ನ ಮಾಡುತ್ತಿದ್ದೇವೆ. ಅನುದಾನ ಪಡೆದುಕೊಳ್ಳುವುದಕ್ಕೆ ಮತ್ತು ಅವರಿಗೆ ಪರ್ಮಿಷನ್‌ಗೆ ಕೇಳುತ್ತಿದ್ದೇವೆ. We have been directed by the High Court to run the school. ಅಲ್ಲಿರುವಂತಹ ಮಕ್ಕಳಿಗೆ ಅನ್ಯಾಯವಾಗದಂತೆ ನೋಡಿಕೊಳ್ಳುವುದಕ್ಕೆ ಎಲ್ಲಾ ರೀತಿಯಾದಂತಹ ಪ್ರಯತ್ನವನ್ನು ನಾವು ಮಾಡುತ್ತೇವೆ ಎಂದು ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ತಿಳಿಸಿದರು. | ಸ್ಥಗಿತಗೊಳಿಸಿದ ಕಾರಣದಿಂದಾಗಿ 2013–14ನೇ ಸಾಲಿನವರೆಗೆ ಕುದುರೆಮುಖ ಕಂಪನಿಯ ವತಿಯಿಂದ ಸಿ.ಬಿ.ಎಸ್.ಇ ಪಠ್ಯಕ್ರಮ ಕೇಂದ್ರೀಯ ವಿದ್ಯಾಲಯ ಶಾಲೆಯನ್ನು ನಡೆಸಿದ್ದು ಕಂಪನಿಯು ಸಂಪೂರ್ಣವಾಗಿ ಸ್ಥಗಿತವಾದ ಕಾರಣ 2014–15ನೇ ಸಾಲಿನಿಂದ ಶಾಲೆಯನ್ನು ಮುಚ್ಚಲ್ಪಟ್ಟಿದ್ದು ಸದರಿ ಶಾಲೆಯಲ್ಲಿ ಅಧ್ಯಯನ ಮಾಡುತ್ತಿದ್ದ ಮಕ್ಕಳನ್ನು ಸಮೀಪದ ಜಿಲ್ಲೆಗಳಾದ ಮಂಗಳೂರು ಮತ್ತು ಹಾಸನ ಜಿಲ್ಲೆಯಲ್ಲಿ ನಡೆಯುತ್ತಿರುವ ಕೇಂದ್ರೀಯ ವಿದ್ಯಾಲಯ ಶಾಲೆಗಳಿಗೆ ಜಿಲ್ಲಾಡಳಿತ ಹಾಗೂ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕರು ಮಕ್ಕಳನ್ನು ದಾಖಲು ಮಾಡಿದ್ದು ಮಕ್ಕಳ ಶೈಕ್ಷಣಿಕ ಪ್ರಗತಿಗೆ ಯಾವುದೇ ರೀತಿಯ ತೊಂದರೆಯಾಗಿರುವುದಿಲ್ಲ.<br>ಪ್ರಸ್ತುತ ಜಿಲ್ಲೆಯಲ್ಲಿ ಕೇಂದ್ರೀಯ ಪಠ್ಯಕ್ರಮ ಅಧ್ಯಯನ ಮಾಡಲು ಬಯಸುವ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ರಾಜ್ಯ ಸರ್ಕಾರದ ಸಹಭಾಗಿತ್ವದಲ್ಲಿ ಕೇಂದ್ರೀಯ ವಿದ್ಯಾಲಯ ಸಂಘಟನಾ, ನವದೆಹಲಿ ರವರು 2017–18ನೇ ಶೈಕ್ಷಣಿಕ ಸಾಲಿನಿಂದ ಕೇಂದ್ರೀಯ ವಿದ್ಯಾಲಯ ಶಾಲೆಯನ್ನು ತೆರೆಯಲು ಅನುಮತಿ ನೀಡಿರುತ್ತಾರೆ. ಹೊಸ ಕಟ್ಟಡವನ್ನು ನಿರ್ಮಿಸಲು ಚಿಕ್ಕಮಗಳೂರು ಸಮೀಪದ ಕದ್ರಿಮಿದ್ರಿಯಲ್ಲಿ 10.00 ಎಕರೆ ನಿವೇಶನವನ್ನು ಮಂಜೂರು ಮಾಡಿದ್ದು ಕಟ್ಟಡವನ್ನು ನಿರ್ಮಿಸುವ ಸಂಬಂಧ ಕಾರ್ಯ ಚಾಲ್ತಿಯಲ್ಲಿರುತ್ತದೆ.<br>ಸದರಿ ಶಾಲೆಯು ತಾತ್ಕಾಲಿಕವಾಗಿ ಚಿಕ್ಕಮಗಳೂರು ಡಯಟ್ ನಲ್ಲಿ ದಿನಾಂಕ:01–08–2017ರಿಂದ ಪ್ರಾರಂಭವಾಗಿ 01 ರಿಂದ 05ನೇ ತರಗತಿಯವರೆಗೆ ನಡೆಯುತ್ತಿದ್ದು ಪ್ರತಿ ತರಗತಿಯಲ್ಲಿ 40 ರಂತೆ ಒಟ್ಟು 200 ಮಕ್ಕಳು ವ್ಯಾಸಂಗ ಮಾಡುತ್ತಿರುತ್ತಾರೆ.<br>ಹೊಸ ಕಟ್ಟಡದ ಕಾಮಗಾರಿ ಪೂರ್ಣಗೊಂಡ ನಂತರ ಚಿಕ್ಕಮಗಳೂರು ಟೌನ್‌ನಲ್ಲಿ ನಡೆಯುತ್ತಿರುವ ಈ ಶಾಲೆಯನ್ನು ಹೊಸ ಕಟ್ಟಡದಲ್ಲಿ ನಡೆಸಲು ಕ್ರಮಕೈಗೊಳ್ಳಲಾಗುವುದು ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿದ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |
| 17 | 5532<br>ಚು.ರ.ಪ್ರ: 2012<br>ಶ್ರೀ ಗಣೇಶ್ ಕಾರ್ಣಿಕ್ | ಪ್ರೊ. ವೈದ್ಯನಾಥನ್ ವರದಿಯ ಅನುಷ್ಠಾನ ಪ್ರಕ್ರಿಯೆ | ಪ್ರೊ. ವೈದ್ಯನಾಥನ್ ವರದಿಯ ಬಹುಪಾಲು ಶಿಫಾರಸ್ಸುಗಳನ್ನು ಅನುಷ್ಠಾನಕ್ಕೆ ತರಲಾಗಿದೆ. | ದಿನಾಂಕ: 20.06.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ಸರ್ಕಾರದ ಆದೇಶ ಸಂಖ್ಯೆ:ಇಡಿ 290 ಎಸ್‌ಎಲ್‌ಬಿ 2006, ದಿನಾಂಕ: 06.08.2007ರಲ್ಲಿ ಪ್ರೋ: ವೈದ್ಯನಾಥನ್ ವರದಿಗೆ |

| | | | | |
|---|---|---|---|---|
| | ವಿಪನದಿ: 25/07/2014 | ಕುಂಠಿತವಾಗಿರುವ ಬಗ್ಗೆ. | ಸಾರ್ವಜನಿಕ ಶಿಕ್ಷಣ ಇಲಾಖೆಗೆ ಸಂಬಂಧಿಸಿದ ದೈಹಿಕ ಶಿಕ್ಷಣ ಹಾಗೂ ಇತರೆ ವಿವಿಧ ಹುದ್ದೆಗಳ ವೃಂದ ಮತ್ತು ನೇಮಕಾತಿ ನಿಯಮಾವಳಿಯ ತಿದ್ದುಪಡಿ ಪ್ರಸ್ತಾವನೆಯ ಕರಡು ನಿಯಮಗಳನ್ನು ಸಂಸದೀಯ ವ್ಯವಹಾರಗಳು ಮತ್ತು ಶಾಸನಾ ರಚನಾ ಇಲಾಖೆಯಿಂದ ಪರಿಷ್ಕರಿಸಿ ಕೆಲವು ಸೇರ್ಪಡೆ ಮತ್ತು ತಿದ್ದುಪಡಿ ಮಾಡುವಂತೆ ಶಿಕ್ಷಣ ಇಲಾಖೆಗೆ ಸೂಚಿಸಿದೆ. ಈ ಪ್ರಕ್ರಿಯೆ ಪ್ರಗತಿಯಲ್ಲಿದ್ದು, ಸದರಿ ನಿಯಮಗಳನ್ನು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಅಧ್ಯಕ್ಷತೆಯಲ್ಲಿನ ವೃಂದ ಪರಿಶೀಲನಾ ಸಮಿತಿ ಮುಂದೆ ಮಂಡಿಸಿ, ಅನುಮೋದನೆ ಪಡೆದು ಸಚಿವ ಸಂಪುಟದ ಅನುಮೋದನೆಯೊಂದಿಗೆ ಕರಡು ನಿಯಮಗಳನ್ನು ರಾಜ್ಯ ಪತ್ರದಲ್ಲಿ ಪ್ರಕಟಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ತಿಳಿಸಿದರು. | ಅನುಮೋದನೆ ನೀಡಿದ್ದು, ಸದರಿ ವರದಿಯ 13 ಅಂಶಗಳನ್ನು ಜಾರಿಗೊಳಿಸಲಾಗಿದೆ.<br><br>ಉಳಿದ 14ನೇ ಅಂಶವಾದ ದೈಹಿಕ ಶಿಕ್ಷಣ ಶಿಕ್ಷಕರುಗಳ ಪದನಾಮವನ್ನು "ಸಹ ಶಿಕ್ಷಕರು" (ದೈಹಿಕ ಶಿಕ್ಷಣ) ಎಂದು ಪರಿಗಣಿಸುವುದು ಸೇರಿದಂತೆ ವೃಂದ ಮತ್ತು ನೇಮಕಾತಿ ನಿಯಮಗಳಿಗೆ ಸಮಗ್ರವಾಗಿ ತಿದ್ದುಪಡಿ ಕುರಿತು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ದಿನಾಂಕ:24.05.2018ರಂದು ನಡೆದ ಸಭೆಯಲ್ಲಿ ದೈಹಿಕ ಶಿಕ್ಷಣ ಶಿಕ್ಷಕರುಗಳ ಪದನಾಮವನ್ನು "ಸಹ ಶಿಕ್ಷಕರು" (ದೈಹಿಕ ಶಿಕ್ಷಣ) ಎಂದು ಸೇರ್ಪಡೆಗೊಳಿಸಲು ತೀರ್ಮಾನಿಸಲಾಗಿರುತ್ತದೆ. ಈ ಬಗ್ಗೆ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಕರ್ನಾಟಕ ಸರ್ಕಾರ ಇವರ ಅಧ್ಯಕ್ಷತೆಯಲ್ಲಿ ದಿ:23/10/2018ರಂದು ನಡೆದ ವೃಂದ ಪರಿಶೀಲನಾ ಸಮಿತಿ ಸಭೆಯಲ್ಲಿ ಕರಡು ನಿಯಮಗಳಲ್ಲಿ ಕೆಲವೊಂದು ಅಂಶಗಳನ್ನು ಸೇರ್ಪಡೆಗೊಳಿಸಲು ಹಾಗೂ ಕೆಲವು ಅಂಶಗಳನ್ನು ಕೈಬಿಡಲು ನಿರ್ಣಯಿಸಿ, ಕರಡು ತಿದ್ದುಪಡಿ ನಿಯಮಗಳನ್ನು ಅನುಮೋದಿಸಿರುತ್ತಾರೆ.<br><br>ಸದರಿ ಸಭೆಯಲ್ಲಿ ನಿರ್ಣಯದಂತೆ ಕರಡು ನಿಯಮಗಳನ್ನು ತಯಾರಿಸಿ ಸರ್ಕಾರಕ್ಕೆ ಸಲ್ಲಿಸುವಂತೆ ಹಾಗೂ ವೃಂದ ಮತ್ತು ನೇಮಕಾತಿ ನಿಯಮಗಳಿಗೆ ಸಮಗ್ರವಾಗಿ ತಿದ್ದುಪಡಿ ಕುರಿತು ಸಹಮತಿ / ಅಭಿಪ್ರಾಯಕ್ಕಾಗಿ ಆರ್ಥಿಕ ಇಲಾಖೆಗೆ ಸಲ್ಲಿಸಲಾಗಿದ್ದ ಸಂಖ್ಯೆ:ಇಡಿ 1 ಡಿಪಿಐ 2018 (ಭಾಗ-1) ಕಡತದಲ್ಲಿ ಆರ್ಥಿಕ ಇಲಾಖೆಯು ಕೋರಿರುವ ಮಾಹಿತಿಗಳನ್ನು ಒದಗಿಸುವಂತೆ ಕ್ರಮವಾಗಿ ದಿ:15/04/2019 ಹಾಗೂ ದಿ:11/06/2019ರಂದು ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರಿಗೆ ಪತ್ರ ಬರೆಯಲಾಗಿದ್ದು, ಆಯುಕ್ತರಿಂದ ಪ್ರಸ್ತಾವನೆ/ಮಾಹಿತಿಯನ್ನು ನಿರೀಕ್ಷಿಸಲಾಗುತ್ತಿದ್ದು, ಆರ್ಥಿಕ ಇಲಾಖೆಯು ನೀಡುವ ಅಭಿಪ್ರಾಯದ ನಂತರ ಹಾಗೂ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ ಇವರಿಂದ ಸ್ವೀಕೃತವಾಗುವ ಪ್ರಸ್ತಾವನೆಯನ್ನು ಸಂಸದೀಯ ವ್ಯವಹಾರಗಳ ಇಲಾಖೆಗೆ ಸಲ್ಲಿಸಿ, ಸದರಿ ಇಲಾಖೆಯು |
| 18 | 5716<br>ಚು.ರ.ಪ್ರ:1195<br>ಶ್ರೀ ಮರಿಬ್ಬೇಗೌಡ | ದೈಹಿಕ ಶಿಕ್ಷಣ ಸಂಬಂಧ ಪ್ರೊ.ವೈದ್ಯನಾಥನ್ ವರದಿಯ ಅನುಷ್ಠಾನ | ಸಾರ್ವಜನಿಕ ಶಿಕ್ಷಣ ಇಲಾಖೆಗೆ ದೈಹಿಕ ಶಿಕ್ಷಣ ಹುದ್ದೆಗಳನ್ನೊಳಗೊಂಡಂತೆ ವಿವಿಧ | |

| | | | | |
|---|---|---|---|---|
| | ವಿಪನದಿ:10.07.2015 | ಹಾಗೂ ನೇಮಕಾತಿ ವೃಂದಕ್ಕೆ ತಿದ್ದುಪಡಿ ತರುವ ಬಗ್ಗೆ. | ಹುದ್ದೆಗಳ ವೃಂದ ಮತ್ತು ನೇಮಕಾತಿ ತಿದ್ದುಪಡಿಯ ಕರಡು ನಿಯಮಗಳನ್ನು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿನ ವೃಂದ ಪರಿಶೀಲನಾ ಸಮಿತಿಯ ಮುಂದೆ ಮಂಡಿಸಿ, ಅದರ ಅನುಮೋದನೆಯನ್ನು ಪಡೆದು ತಿದ್ದುಪಡಿ ಮಾಡಲು ಕ್ರಮ ಕೈಗೊಳ್ಳಲಾಗುವುದು ಎಂದು ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಅಲ್ಪ ಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು ತಿಳಿಸಿದರು. | ಪರಿಶೋಧಿಸಿ ಸಲ್ಲಿಸುವ ಕರಡು ನಿಯಮಗಳನ್ನು ಇಲಾಖಾ ಸಚಿವರ ಅನುಮೋದನೆಯ ನಂತರ ಸಚಿವ ಸಂಪುಟದ ಅನುಮೋದನೆ ಪಡೆದು ಕರಡು ನಿಯಮಗಳನ್ನು ಪ್ರಕಟಿಸಲು ಕ್ರಮವಹಿಸಲಾಗುವುದು ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿದ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |
| 19 | 5731<br>ಚು.ಗು.ಪ್ರ : 3366<br>ಶ್ರೀ ಪುಟ್ಟಣ್ಣ<br>ವಿ.ಪ.ನ.ದಿ :<br>27–11–2015 | ದೈಹಿಕ ಶಿಕ್ಷಣ ಸಂಬಂಧ ಪ್ರೊ॥ ವೈದ್ಯನಾಥನ್ ವರದಿ ಆಧರಿಸಿ ವೃಂದ ಮತ್ತು ನೇಮಕಾತಿ ನಿಯಮಕ್ಕೆ ತಿದ್ದುಪಡಿ ಮಾಡಲು ರಾಜ್ಯ ಸರ್ಕಾರ ಒಪ್ಪಿಗೆ ಸೂಚಿಸಿರುವಂತೆ ನೇಮಕಾತಿ ನಿಯಮಗಳಿಗೆ ತಿದ್ದುಪಡಿ ತರುವ ಬಗ್ಗೆ. | ಕರ್ನಾಟಕ ಶಿಕ್ಷಣ ಇಲಾಖೆ ಸೇವೆಗಳು (ಸಾರ್ವಜನಿಕ ಶಿಕ್ಷಣ ಇಲಾಖೆ), (ನೇಮಕಾತಿ) ನಿಯಮಾವಳಿಗಳು 1967ಕ್ಕೆ ಸಮಗ್ರ ತಿದ್ದುಪಡಿ ಮಾಡಲು ಉದ್ದೇಶಿಸಲಾಗಿದ್ದು, ಸದರಿ ನಿಯಮಾವಳಿಗಳಲ್ಲಿ ದೈಹಿಕ ಶಿಕ್ಷಣ ಶಿಕ್ಷಕರು ಮತ್ತು ಅಧಿಕಾರಿಗಳಿಗೆ ನೇಮಕಾತಿ/ಮುಂಬಡ್ತಿಗೆ ಸಂಬಂಧಿಸಿದಂತೆ ವೃಂದ ಮತ್ತು ನೇಮಕಾತಿ ನಿಯಮಾವಳಿಗಳಲ್ಲಿ ಅವಕಾಶವನ್ನು ಕಲ್ಪಿಸಲಾಗಿದ್ದು, ಅದು ಸರ್ಕಾರದ ಪರಿಶೀಲನೆಯಲ್ಲಿ ಇದ್ದು ಅಂತಿಮವಾಗಿ ನಿಯಮಾವಳಿಗಳನ್ನು ಪ್ರಕಟಿಸಲಾಗಿಲ್ಲ. | |

| | | | | |
|---|---|---|---|---|
| | | | ಸಾರ್ವಜನಿಕ ಶಿಕ್ಷಣ ಇಲಾಖೆಗೆ ಸಂಬಂಧಿಸಿದಂತೆ ದೈಹಿಕ ಶಿಕ್ಷಣ ಹುದ್ದೆಗಳನ್ನೊಳಗೊಂಡಂತೆ ಇತರೆ ವಿವಿಧ ಹುದ್ದೆಗಳ ವೃಂದ ಮತ್ತು ನೇಮಕಾತಿ ತಿದ್ದುಪಡಿಯ ಸಮಗ್ರ ಪ್ರಸ್ತಾವನೆಯ ಕರಡು ನಿಯಮಗಳನ್ನು ಸಂಸದೀಯ ವ್ಯವಹಾರಗಳು ಮತ್ತು ಶಾಸನಾ ರಚನಾ ಇಲಾಖೆಯಿಂದ ಪರಿಷ್ಕರಿಸಿ ಕೆಲವು ಸೇರ್ಪಡೆ ಹಾಗೂ ತಿದ್ದುಪಡಿ ಮಾಡುವಂತೆ ಶಿಕ್ಷಣ ಇಲಾಖೆಗೆ ಸೂಚಿಸಿದೆ. ಪ್ರಸ್ತಾಪಿಸಲಾಗಿರುವ ಕರಡು ನಿಯಮಾವಳಿಗಳಲ್ಲಿ ನಮೂದಾಗಿರುವ ವಿವಿಧ ವೃಂದಗಳ ವೃಂದ ಬಲದಲ್ಲಿ ಸಾಕಷ್ಟು ವ್ಯತ್ಯಾಸಗಳು ಇರುವುದನ್ನು ಆರ್ಥಿಕ ಇಲಾಖೆಯು ಗಮನಿಸಿದ್ದು, ಸದರಿ ಇಲಾಖೆಯು ಸಹಮತಿ ನೀಡಿರುವ ಹುದ್ದೆಗಳ ವೃಂದ-ಬಲ, ಆನಂತರದಲ್ಲಿ ಆಗಿರುವ ಹುದ್ದೆಗಳ ಸೃಜನೆ, ಉನ್ನತೀಕರಣ, ನವೀಕರಣ, ರದ್ದುಪಡಿಸುವಿಕೆ ಹಾಗೂ ಮರುಪದನಾಮೀಕರಣಕ್ಕೆ ಸಂಬಂಧಿಸಿದ ಆದೇಶಗಳ ಪ್ರತಿಗಳೊಂದಿಗೆ ಮಾಹಿತಿಯನ್ನು ಒದಗಿಸುವಂತೆ ಆರ್ಥಿಕ ಇಲಾಖೆಯು ಶಿಕ್ಷಣ ಇಲಾಖೆಯನ್ನು ಕೋರಿದೆ. ಪ್ರಾಥಮಿಕ ವಿಭಾಗದ 380 ಶಿಕ್ಷಣ | |

| | | | | |
|---|---|---|---|---|
| | | | ಸಂಯೋಜಕರ ಹುದ್ದೆಗಳ ಸೃಜನೆ, 30 ಉರ್ದುಶಿಕ್ಷಣ ಸಂಯೋಜಕರ ಹುದ್ದೆಗಳ ಸೃಜನೆ, ಎಸ್.ಎಸ್.ಎ ಅಡಿ ಮಂಜೂರಾದ ಪ್ರಾಥಮಿಕ ಶಾಲಾ ಶಿಕ್ಷಕರ 2949 ಹುದ್ದೆಗಳಿಗೆ ಸರ್ಕಾರದ ಮಂಜೂರಾತಿ ಮತ್ತು ನೇಮಕಾತಿ ಅನುಮತಿ, ಎಸ್.ಎಸ್.ಎ ಅಡಿ ಕಸ್ತೂರಬಾ ಗಾಂಧಿ ಬಾಲಿಕ ವಿದ್ಯಾಲಯಗಳು ಹಾಗೂ ನಿರ್ಧಿಷ್ಠ ವರ್ಗದ ಮಕ್ಕಳ ಶಾಲೆಗಳಿಗೆ ಸಂಬಂಧಿಸಿದಂತೆ ಒಟ್ಟು – 228 ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಗಳ ಮಂಜೂರಾತಿಗೆ ಸಂಬಂಧಿಸಿದಂತೆ ಪ್ರಸ್ತಾವನೆಯನ್ನು ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರು ಸರ್ಕಾರಕ್ಕೆ ಸಲ್ಲಿಸಿದ್ದು, ಅದು ಸರ್ಕಾರದ ಹಂತದಲ್ಲಿ ಆರ್ಥಿಕ ಇಲಾಖೆಯ ಸಮಾಲೋಚನೆಯೊಂದಿಗೆ ಪರಿಶೀಲನೆಯಲ್ಲಿದೆ.<br><br>ಆರ್ಥಿಕ ಇಲಾಖೆಯ ಸಹಮತಿಯ ತರುವಾಯ, ಕರಡು ನಿಯಮಗಳನ್ನು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿನ ವೃಂದ ಪರಿಶೀಲನಾ ಸಮಿತಿಯ ಮುಂದೆ ಮಂಡಿಸಿ, ಅದರ ಅನುಮೋದನೆಯನ್ನು ಪಡೆದು, ಸಚಿವ ಸಂಪುಟದ ಮುಂದೆ ಮಂಡಿಸಿ | |

| | | | | |
|---|---|---|---|---|
| | | | ಅದರ ಅನುಮೋದನೆಯೊಂದಿಗೆ ಕರಡು ನಿಯಮಗಳನ್ನು ರಾಜ್ಯ ಪತ್ರದಲ್ಲಿ ಪ್ರಕಟಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ತಿಳಿಸಿದರು. | |
| 20 | 5766<br>ಚು.ರ.ಪ್ರ. 1998<br>ಶ್ರೀ ವೈ.ಎ. ನಾರಾಯಣಸ್ವಾಮಿ<br>ವಿಪನದಿ:23.03.2015<br>(ಮಂಡನೆಯಾದ ಪ್ರಶ್ನೆ)<br>ಚು.ರ.ಪ್ರ. 2013<br>ಕ್ಯಾಪ್ಟನ್ ಗಣೇಶ್ ಕಾರ್ಣಿಕ್ | ದೈಹಿಕ ಶಿಕ್ಷಣ ಸುಧಾರಣೆ ಸಂಬಂಧ ಪ್ರೋ: ವೈದ್ಯನಾಥನ್ ವರದಿಯನ್ನು ಜಾರಿಗೆ ತರುವ ಬಗ್ಗೆ. | ಪ್ರೊಫೆಸರ್ ವೈದ್ಯನಾಥನ್ ವರದಿಯ ಸರಿಸುಮಾರು ಎಲ್ಲಾ ಶೈಕ್ಷಣಿಕ ಮತ್ತು ಸೇವಾ ಶಿಫಾರಸ್ಸುಗಳನ್ನು ಈಗಾಗಲೇ ಅನುಷ್ಠಾನಗೊಳಿಸಲಾಗಿದೆ. ದೈಹಿಕ ಶಿಕ್ಷಣ ಶಿಕ್ಷಕರಿಗೆ ಮುಂಬಡ್ತಿ ನೀಡುವ ಕುರಿತಂತೆ ಸಾರ್ವಜನಿಕ ಶಿಕ್ಷಣ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಾವಳಿಗಳ ಸಮಗ್ರ ತಿದ್ದುಪಡಿಯಲ್ಲಿ ಅವಕಾಶವನ್ನು ಕಲ್ಪಿಸಿದ್ದು, ಅದು ಸರ್ಕಾರದ ಪರಿಶೀಲನೆಯಲ್ಲಿದೆ ಎಂದು ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ತಿಳಿಸಿದರು. | |
| 21 | 6462<br>ಚು.ಗು.ಪ್ರ. 4755<br>ಶ್ರೀ ಪುಟ್ಟಣ್ಣ<br>ವಿಪನದಿ: 24.11.2017 | ದೈಹಿಕ ಶಿಕ್ಷಣ ಉನ್ನತೀಕರಣ ಸಂಬಂಧ ಪ್ರೊ ಎಸ್.ಆರ್. ವೈದ್ಯನಾಥನ್‌ರವರು ನೀಡಿರುವ ವರದಿಯ ಶಿಫಾರಸ್ಸುಗಳ ಬಗ್ಗೆ | ಪ್ರೊ ಎಸ್.ಆರ್. ವೈದ್ಯನಾಥನ್, ವರದಿಯಲ್ಲಿ 14 ಅಂಶಗಳಿದ್ದು ಇದರಲ್ಲಿ 13 ಅಂಶಗಳನ್ನು ಅನುಷ್ಠಾನಗೊಳಿಸಲಾಗಿದ್ದು ಈ ವರದಿಯಲ್ಲಿನ 01 ಅಂಶವಾದ ದೈಹಿಕ ಶಿಕ್ಷಣ ಶಿಕ್ಷಕರುಗಳ ಪದನಾಮವನ್ನು ಸಹ ಶಿಕ್ಷಕರು (ದೈಹಿಕ ಶಿಕ್ಷಣ) | |

| | | | | |
|---|---|---|---|---|
| 22 | 5774<br>ಚು.ಗು.ಪ್ರ:1287<br>ಶ್ರೀ ವೈ.ಎ. ನಾರಾಯಣಸ್ವಾಮಿ<br>ವಿಪನದಿ: 13.02.2015 | ದೈಹಿಕ ಶಿಕ್ಷಣ ಸಂಬಂಧ ಪ್ರೋ. ವೈದ್ಯನಾಥನ್ ವರದಿ ಜಾರಿಗೊಳಿಸುವ ಬಗ್ಗೆ | ಎಂದು ಪರಿಗಣಿಸುವ ಕುರಿತಂತೆ ಸಮಗ್ರವಾದ ವೃಂದ ಮತ್ತು ನೇಮಕಾತಿ ನಿಯಮಾವಳಿಗೆ ತಿದ್ದುಪಡಿ ತರುವ ಪ್ರಸ್ತಾವನೆಯು ಪರಿಶೀಲನೆಯಲ್ಲಿದ್ದು ನಿಯಮಗಳ ಅನ್ವಯ ಪರಿಶೀಲಿಸಿ ಕ್ರಮವಹಿಸಲಾಗುವುದು ಎಂದು ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಅಲ್ಪ ಸಂಖ್ಯಾತರ ಕಲ್ಯಾಣ ಹಾಗೂ ವಕ್ಫ್ ಸಚಿವರು ತಿಳಿಸಿದರು.<br>ಪ್ರೋ. ವೈದ್ಯನಾಥನ್ ವರದಿಯ ಸರಿ ಸುಮಾರು ಎಲ್ಲಾ ಶೈಕ್ಷಣಿಕ ಮತ್ತು ಸೇವಾ ಶಿಫಾರಸ್ಸುಗಳನ್ನು ಈಗಾಗಲೇ ಅನುಷ್ಠಾನಗೊಳಿಸಲಾಗಿದೆ. ದೈಹಿಕ ಶಿಕ್ಷಣ ಶಿಕ್ಷಕರಿಗೆ ಮುಂಬಡ್ತಿ ನೀಡುವ ಕುರಿತಂತೆ ಸಾರ್ವಜನಿಕ ಶಿಕ್ಷಣ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಾವಳಿಗಳ ಸಮಗ್ರ ತಿದ್ದುಪಡಿಯಲ್ಲಿ ಅವಕಾಶವನ್ನು ಕಲ್ಪಿಸಿದ್ದು, ಅದು ಸರ್ಕಾರದ ಪರಿಶೀಲನೆಯಲ್ಲಿದೆ ಎಂದು ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ತಿಳಿಸಿದರು. | |
| 23 | 5533<br>ಚು.ರ.ಪ್ರ: 2042<br>ಶ್ರೀ ವೈ.ಎ. | ರಾಜ್ಯದಲ್ಲಿ ಕಳೆದ 3 ವರ್ಷಗಳಿಂದ ವೇತನಾನುದಾನಕ್ಕೆ | ಖಾಸಗಿ ಅನುದಾನರಹಿತ ಶಾಲಾ ಕಾಲೇಜುಗಳನ್ನು ವೇತನಾನುದಾನಕ್ಕೆ ಒಳಪಡಿಸಲು ನಿಗಧಿಪಡಿಸಿರುವ | ದಿನಾಂಕ: 20.06.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ದಿನಾಂಕ: 01.06.1987 ರಿಂದ 1994–95ನೇ ಶೈಕ್ಷಣಿಕ ಅವಧಿಯಲ್ಲಿ ಸಾಮಾನ್ಯ ವರ್ಗ, ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ವರ್ಗಕ್ಕೆ ಸೇರಿದ |

<table>
<tr>
<td></td>
<td>ನಾರಾಯಣಸ್ವಾಮಿ<br>ವಿಪನದಿ: 25/07/2014</td>
<td>ಒಳಪಡಿಸದಿರುವ ಪ್ರಾಥಮಿಕ, ಪ್ರೌಢ ಹಾಗೂ ಪದವಿ ಪೂರ್ವ ಕಾಲೇಜುಗಳ ಬಗ್ಗೆ.</td>
<td>ಮಾನದಂಡಗಳನ್ನು ಪೂರೈಸುವ ಶಾಲಾ ಕಾಲೇಜುಗಳನ್ನು ಅನುದಾನಕ್ಕೆ ಒಳಪಡಿಸಲು ಪ್ರಸ್ತಾವನೆ ಸಲ್ಲಿಸಿದಲ್ಲಿ ವೇತನಾನುದಾನಕ್ಕೆ ಒಳಪಡಿಸಲು ನಿಯಮಾನುಸಾರ ಕ್ರಮ ವಹಿಸಲಾಗುವುದು ಎಂದು ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ರಾಜ್ಯ ಸಚಿವರು ತಿಳಿಸಿದರು.</td>
<td>ಆಡಳಿತ ಮಂಡಳಿಗಳ ವತಿಯಿಂದ ಸತತವಾಗಿ ನಡೆಸಲಾಗುತ್ತಿರುವ ಖಾಸಗಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಮತ್ತು ಪದವಿ ಪೂರ್ವ ಕಾಲೇಜುಗಳಿಗೆ ಸಹಾಯಾನುದಾನ ನೀಡಲು ಸರ್ಕಾರದ ಆಸ್ಪದ ಕಲ್ಪಿಸಲಾಗಿತ್ತು.</td>
</tr>
<tr>
<td>24</td>
<td>6444<br>ಚು.ಗು.ಪ್ರ:2930<br>ಕ್ಯಾಪ್ಟನ್ ಗಣೇಶ್ ಕಾರ್ಣಿಕ್<br>ವಿಪನದಿ: 20.11.2015</td>
<td>1994–95ರಲ್ಲಿ ಪ್ರಾರಂಭವಾದ ಖಾಸಗಿ ಪ್ರಾಥಮಿಕ, ಪ್ರೌಢ ಹಾಗೂ ಪದವಿ ಪೂರ್ವ ಶಿಕ್ಷಣ ಸಂಸ್ಥೆಗಳನ್ನು ಅನುದಾನಕ್ಕೆ ಒಳಪಡಿಸುವ ಬಗ್ಗೆ</td>
<td>ಅನುದಾನಕ್ಕೆ ಅರ್ಜಿ ಸಲ್ಲಿಸಲು ಇಚ್ಛೆ ಇರುವ ಶಾಲಾ ಕಾಲೇಜುಗಳ ಆಡಳಿತ ಮಂಡಳಿಗಳು ನಿಗಧಿತ ಅವಧಿಯಲ್ಲಿ ಅನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಸೂಚಿಸಿ, ಅಂತಹ ಶಾಲಾ–ಕಾಲೇಜುಗಳಿಂದ ಬಂದಿರುವ ಅರ್ಜಿಗಳ ಹಿನ್ನಲೆಯನ್ನು ಸೂಕ್ತ ಪರಿಶೀಲನೆ ಹಾಗೂ ತಪಾಸಣೆ ನಡೆಸಿ ಅರ್ಹ ಶಾಲಾ–ಕಾಲೇಜುಗಳ ಹಾಗೂ ಅರ್ಹ ಸಿಬ್ಬಂದಿಯ ಕ್ರೋಢೀಕೃತ ಪಟ್ಟಿಯನ್ನು ತಯಾರಿಸಿ ಸರ್ಕಾರಕ್ಕೆ ಸಲ್ಲಿಸಲು ಕ್ರಮ ಕೈಗೊಳ್ಳುವಂತೆ ಸೂಚಿಸಿರುವ ಹಿನ್ನೆಲೆಯಲ್ಲಿ ದಿನಾಂಕ: 18.09.2015ರಂದು ಸಭೆ ನಡೆಸಿ ಆಯುಕ್ತರು, ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ ಮತ್ತು ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇವರುಗಳಿಗೆ ನಿರ್ದೇಶನ ನೀಡಲಾಗಿದೆ. ಈ ಪ್ರಕ್ರಿಯೆಯು</td>
<td>ದಿನಾಂಕ: 01.06.1987 ರಿಂದ 1994–95ನೇ ಸಾಲಿನ ಅವಧಿಯಲ್ಲಿ ಪ್ರಾರಂಭವಾಗಿರುವ ಶಾಲಾ ಕಾಲೇಜುಗಳು ಸಂಖ್ಯೆ ಈ ಕೆಳಕಂಡಂತಿದೆ:–
<table>
<tr><th>ಕ್ರ.ಸಂ.</th><th>ಶಾಲಾ/ಕಾಲೇಜುಗಳು</th><th>ಸಂಖ್ಯೆ</th></tr>
<tr><td>1.</td><td>ಪ್ರಾಥಮಿಕ</td><td>1740</td></tr>
<tr><td>2.</td><td>ಪ್ರೌಢ</td><td>1411</td></tr>
<tr><td>3.</td><td>ಪದವಿ ಪೂರ್ವ</td><td>371</td></tr>
<tr><td></td><td>ಒಟ್ಟು</td><td>3522</td></tr>
</table>
ಈ ಶಾಲಾ–ಕಾಲೇಜುಗಳ ಪೈಕಿ ಅನುದಾನ ಕೋರಿ ಅರ್ಜಿ ಸಲ್ಲಿಸಿದ್ದ ಈ ಕೆಳಕಂಡ ಶಾಲಾ/ಕಾಲೇಜುಗಳನ್ನು ವೇತನಾನುದಾನಕ್ಕೆ ಒಳಪಡಿಸಲಾಗಿದೆ :–
<table>
<tr><th>ಕ್ರ.ಸಂ.</th><th>ಶಾಲಾ/ಕಾಲೇಜುಗಳು</th><th>ಸಂಖ್ಯೆ</th></tr>
<tr><td>1.</td><td>ಪ್ರಾಥಮಿಕ</td><td>1309</td></tr>
<tr><td>2.</td><td>ಪ್ರೌಢ</td><td>1267</td></tr>
<tr><td>3.</td><td>ಪದವಿ ಪೂರ್ವ</td><td>300</td></tr>
<tr><td colspan="2">ಒಟ್ಟು</td><td>2876</td></tr>
</table>
ಮೇಲ್ಕಂಡ ಸಾಲಿನ ಅವಧಿಯಲ್ಲಿ ಪ್ರಾರಂಭಗೊಂಡಿರುವ ಶಾಲಾ ಕಾಲೇಜುಗಳನ್ನು ವೇತನಾನುದಾನಕ್ಕೆ ಒಳಪಡಿಸಲು 2007ರಲ್ಲಿ ಅವಕಾಶ</td>
</tr>
</table>

| | | | | |
|---|---|---|---|---|
| | | | ಪರಿಶೀಲನೆಯಲ್ಲಿರುತ್ತದೆ ಎಂದು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ರಾಜ್ಯ ಸಚಿವರು ತಿಳಿಸಿದರು. | ಕಲ್ಪಿಸಿ ಈಗಾಗಲೇ 11 ವರ್ಷಗಳು ಗತಿಸಿದ್ದರೂ ಸಹ ಈವರೆವಿಗೂ ಉಳಿದ ಶಾಲೆಗಳ ಪ್ರಸ್ತಾವನೆಗಳು ಬಾರದೇ ಇದ್ದು ಅವುಗಳನ್ನು ಇನ್ನು ಮುಂದೆ ಪರಿಗಣಿಸ ಬಾರದೆಂದು ದಿನಾಂಕ; 28.09.2018ರಂದು ಮಾನ್ಯ ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿನ ನಡೆದ ಸಭೆಯಲ್ಲಿ ತೀರ್ಮಾನಿಸಿದಂತೆ ಸರ್ಕಾರದ ಆದೇಶ ಸಂಖ್ಯೆ: ಇಡಿ 18 ಎಸ್‌ಇಪಿ 2018 (ಭಾಗ), ದಿನಾಂಕ: 02.01.2019ರಲ್ಲಿ ದಿನಾಂಕ:01.06.1987ರಿಂದ 1994-95ನೇ ಅವಧಿಯಲ್ಲಿ ಪ್ರಾರಂಭವಾದ ಅನುದಾನರಹಿತ ಪ್ರಾಥಮಿಕ, ಪ್ರೌಢಶಾಲೆ ಹಾಗೂ ಪದವಿಪೂರ್ವ ಕಾಲೇಜುಗಳನ್ನು ವೇತನಾನುದಾನಕ್ಕೆ ಒಳಪಡಿಸಲು ಸಲ್ಲಿಕೆಯಾಗುವ ಕೋರಿಕೆ/ಪ್ರಸ್ತಾವನೆಗಳನ್ನು ಸರ್ಕಾರಕ್ಕೆ ಸಲ್ಲಿಸತಕ್ಕದ್ದಲ್ಲ ಹಾಗೂ ಸಾರ್ವಜನಿಕ ಶಿಕ್ಷಣ ಇಲಾಖೆ/ಪದವಿಪೂರ್ವ ಶಿಕ್ಷಣ ಇಲಾಖೆಯ ಅಧೀನ ಕಛೇರಿಗಳಲ್ಲಿಯೂ ಸಹ ಅಂತಹ ಪ್ರಸ್ತಾವನೆ/ ಕೋರಿಕೆಗಳನ್ನು ಪರಿಗಣಿಸಬಾರದೆಂದು ಆದೇಶಿಸಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿದ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |

## ಜಲ ಸಂಪನ್ಮೂಲ ಇಲಾಖೆ

| ಕ್ರಮ ಸಂಖ್ಯೆ | ಆಶ್ವಾಸನೆ ಸಂಖ್ಯೆ ಆಧಾರ ಮತ್ತು ದಿನಾಂಕ | ವಿಷಯ | ಆಶ್ವಾಸನೆ | ತೆಗೆದುಕೊಂಡ ಕ್ರಮ |
|---|---|---|---|---|
| 1 | 1168<br>ಸಭಾಪತಿಯವರ ಅನುಮತಿ ಮೇರೆಗೆ<br>ಶ್ರೀ ಜಿ. ಮಧುಸೂದನ್<br>ವಿಪನದಿ: 08.08.2002 | ಹುಲ್ಲಹಳ್ಳಿ ನಾಲೆಯ ಆಧುನೀಕರಣ ಕಾಮಗಾರಿ ಕಳಪೆ ಮಟ್ಟದಾಗಿರುವ ಬಗ್ಗೆ. | ಈ ಬಗ್ಗೆ ಸೂಕ್ತ ಕ್ರಮವನ್ನು ಕೈಗೊಳ್ಳಲಾಗುವುದು ಎಂದು ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಭರವಸೆ ನೀಡಿದರು. | ದಿನಾಂಕ: 29.11.2018ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ಹುಲ್ಲಹಳ್ಳಿ ನಾಲಾ ಆಧುನೀಕರಣ ಕಾಮಗಾರಿಗಳ ಗುಣಮಟ್ಟದ ಪರಿಶೀಲನೆ ಮಾಡಲು ಸರ್ಕಾರವು ಆದೇಶ ಸಂಖ್ಯೆ: ಜಸಂಇ 301 ಎಂಎಂಕೆ 2002, ದಿ: 31.07.2002 ರಲ್ಲಿ ಆರು ಪರಿಶೀಲನಾ ತಂಡಗಳನ್ನು ರಚಿಸಿದ್ದು, ಈ ತಂಡಗಳು ಹುಲ್ಲಹಳ್ಳಿ ನಾಲಾ ಆಧುನೀಕರಣ ಕಾಮಗಾರಿಗಳನ್ನು ಖಾರೀಫ್–2002ರ ಬೆಳೆಗೆ ನೀರು ಬಿಡುಗಡೆ ಮುನ್ನ ಜುಲೈ ಮತ್ತು ಆಗಸ್ಟ್–2002ರ ತಿಂಗಳುಗಳಲ್ಲಿ ವಿವರವಾಗಿ ಪರಿಶೀಲನೆ ಮಾಡಿರುತ್ತವೆ. ಪೂರ್ಣ ತನಿಖೆಯನ್ನು ವಿಚಕ್ಷಣಾ ದಳದ ಅಧೀಕ್ಷಕ ಇಂಜನಿಯರ್‌ರವರಿಂದ ನಡೆಸಲಾಗಿದ್ದು, ಸದರಿ ವರದಿಯಲ್ಲಿ ರಿವೆಟ್‌ಮೆಂಟ್ ಸ್ಟೋನ್ ಕೆಲಸ ಕಳಪೆಯಾಗಿರುವುದರಿಂದ ಹಾಗೂ 40%ರಷ್ಟು ಹಣವನ್ನು ಕಡಿಮೆ ಮಾಡಲು ತಿಳಿಸಿರುವುದರಿಂದ ಸದರಿ ವರದಿಯನ್ನು ಆಧರಿಸಿ ದಿ: 29.09.2003ರ ಸರ್ಕಾರದ ಪತ್ರದಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತದವರಿಗೆ ಸೂಕ್ತ ಕ್ರಮ ಕೈಗೊಳ್ಳುವಂತೆ ಆದೇಶಿಸಲಾಯಿತು ಹಾಗೂ ಅದರಂತೆ ರಿವೆಟ್‌ಮೆಂಟ್ ಸ್ಟೋನ್ ಕಾಮಗಾರಿಯಲ್ಲಿ ಶೇ.40%ರಷ್ಟು ಹಣವನ್ನು ಗುತ್ತಿಗೆದಾರರ ಬಿಲ್ಲಿನಲ್ಲಿ ಕಡಿತಗೊಳಿಸಲು ಕ್ರಮ ಕೈಗೊಳ್ಳಲಾಗಿದೆ. ಅದರಂತೆ, ರಿವೆಟ್‌ಮೆಂಟ್ ಕಾಮಗಾರಿಗೆ ನಿಗದಿಯಾದ ಮೊತ್ತ ರೂ. 79,42,749/–ಗಳಲ್ಲಿ 40% ರಷ್ಟು ಅಂದರೆ, ರೂ. 33.42,938/–ಗಳನ್ನು ಗುತ್ತಿಗೆದಾರರ ಬಿಲ್ಲುಗಳಲ್ಲಿ ಕಡಿತಗೊಳಿಸಲಾಗಿದೆ.<br>ಮುಂದುವರೆದು, ಈ ಪ್ರಕರಣದಲ್ಲಿ ಭಾಗಿಯಾಗಿದ್ದಾರೆ ಎನ್ನಲಾದ ಒಟ್ಟು 33 ಅಧಿಕಾರಿ/ನೌಕರರುಗಳ ಮೇಲೆ ಶಿಸ್ತು ಕ್ರಮ ತೆಗೆದುಕೊಳ್ಳುವ ಸಂಬಂಧ ಸರ್ಕಾರದ ಪತ್ರ ಸಂ. ಜಸಂಇ/30/ಸೇಇವಿ/2004 (ಭಾ), |

| | | | | |
|---|---|---|---|---|
| | | | | ದಿ: 28-3-2006ರಲ್ಲಿ ದೋಷರೋಪಣಾ ಪಟ್ಟಿಯನ್ನು ಜಾರಿ ಮಾಡಲಾಗಿದ್ದು, ಅವರ ಮೇಲಿನ ವಿಚಾರಣೆ ಬಗ್ಗೆ ವಿವರಗಳು ಕೆಳಕಂಡಂತೆ ಇರುತ್ತದೆ.<br><br>ಇಬ್ಬರು ನಿವೃತ್ತ ಮುಖ್ಯ ಇಂಜನಿಯರ್‌ಗಳಾದ ಶ್ರೀ ಹೆಚ್. ಚಂದ್ರಶೇಖರಯ್ಯ ಮತ್ತು ಶ್ರೀ ಎಸ್. ಕೃಷ್ಣಯ್ಯ ಶೆಟ್ಟಿ ಇವರ ಮೇಲಿನ ಆರೋಪಗಳ ಬಗ್ಗೆ ವಿಚಾರಣೆ ನಡೆಸಲು ಸರ್ಕಾರದ ಆದೇಶ ಸಂಖ್ಯೆ: ಸಿ.ಆ.ಸು.ಇ., 133 ಎಸ್.ಇ.ಎನ್ 2004, ದಿ: 29.12.2007ರಲ್ಲಿ ಶ್ರೀ ಪಿ.ಕೆದಿಲಾಯ, ನಿವೃತ್ತ ಜಿಲ್ಲಾ ನ್ಯಾಯಾಧೀಶರು ಇವರನ್ನು ಇಲಾಖಾ ವಿಚಾರಣಾಧಿಕಾರಿಗಳಾಗಿ ಹಾಗೂ ಕಾರ್ಯಪಾಲಕ ಇಂಜನಿಯರ್, ಕಬಿನಿ ಕಾಲುವೆ ವಿಭಾಗ ಇವರನ್ನು ಮಂಡನಾಧಿಕಾರಿಯನ್ನಾಗಿ ನೇಮಿಸಲಾಗಿರುತ್ತದೆ. ವಿಚಾರಣಾಧಿಕಾರಿಗಳು ನೀಡಿದ ವರದಿಯ ಮೇರೆಗೆ ಸರ್ಕಾರದ ಆದೇಶ ಸಂ: ಸಿಆಸುಇ 133 ಎಸ್‌ಇಎನ್ 2004, ದಿ: 26.10.2010ರಲ್ಲಿ ಈ ಇಬ್ಬರು ಅಪಾದಿತ ಅಧಿಕಾರಿಗಳ ನಿವೃತ್ತಿ ವೇತನದ ಶೇ.20 ರಂತೆ 5 ವರ್ಷಗಳವರೆಗೆ ವಸೂಲಿ ಮಾಡಲು ಆದೇಶಿಸಲಾಗಿರುತ್ತದೆ. ಅದರಂತೆ, ಸದರಿ ಅಧಿಕಾರಿಗಳಿಂದ ಕ್ರಮವಾಗಿ ರೂ. 42,505/-ಗಳನ್ನು ಮತ್ತು ರೂ. 22.324/-ಗಳನ್ನು ವಸೂಲು ಮಾಡಲಾಗಿರುತ್ತದೆ.<br><br>ಇದರಲ್ಲಿ 29 ಜನ ಅಧಿಕಾರಿಗಳ ಮೇಲಿನ ಆಪಾದನೆಗಳ ಬಗ್ಗೆ ಇಲಾಖಾ ವಿಚಾರಣೆ ನಡೆಸಲು ಸರ್ಕಾರದ ಆದೇಶ ಸಂ: ಜಸಂಇ 30 ಸೇಇವಿ 2004(ಭಾ), ದಿ: 14.01.2008ರಲ್ಲಿ ಶ್ರೀ ರಂಗಸ್ವಾಮಿ, ನಿವೃತ್ತ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು ಇವರನ್ನು ಇಲಾಖಾ ವಿಚಾರಣಾಧಿಕಾರಿಯನ್ನಾಗಿ ಹಾಗೂ ಮುಖ್ಯ ಆಡಳಿತಾಧಿಕಾರಿ, ಕಾನೀನಿನಿ, ಮೈಸೂರು, ಇವರನ್ನು ಮಂಡನಾಧಿಕಾರಿಯನ್ನಾಗಿ ನೇಮಕ ಮಾಡಲಾಗಿರುತ್ತದೆ.<br><br>ದಿನಾಂಕ: 22.10.2011 ರಂದು ವಿಚಾರಣೆಯು ಮುಕ್ತಾಯಗೊಂಡಿದ್ದು, ವಿಚಾರಣಾಧಿಕಾರಿಗಳು ಅಂತಿಮ ವರದಿಯನ್ನು ದಿ: 20.6.2012ರಂದು ಸರ್ಕಾರಕ್ಕೆ ಸಲ್ಲಿಸಿದ್ದು, |

| | | | | |
|---|---|---|---|---|
| | | | | ಸರ್ಕಾರದ ಆದೇಶ ಸಂಖ್ಯೆ: ಜಸಂಇ/30/ಸೇಇವಿ/2004, ದಿ: 21.12.2012ರಲ್ಲಿ ಮೇಲಿನ 29 ಮಂದಿಯ ವಿರುದ್ಧ ಆರೋಪವು ಇಲಾಖಾ ವಿಚಾರಣೆಯಲ್ಲಿ ಸಾಬೀತಾಗದೇ ಇರುವುದರಿಂದ ಸಕ್ಷಮ ಪ್ರಾಧಿಕಾರದ ಅನುಮೋದನೆಯಂತೆ ಮೇಲಿನ ಆರೋಪದಿಂದ ಅವರುಗಳನ್ನು ದೋಷಮುಕ್ತರನ್ನಾಗಿಸಿ ಆದೇಶ ಹೊರಡಿಸಲಾಗಿರುತ್ತದೆ.<br><br>ಶ್ರೀ ಎನ್.ರವಿಕುಮಾರ್, ಸಹಾಯಕ ಕಾರ್ಯಪಾಲಕ ಇಂಜನಿಯರ್‌ರವರು ನೀಡಿದ್ದ ಹೇಳಿಕೆಯನ್ನು ಸರ್ಕಾರವು ಒಪ್ಪಿ, ಅದೇಶ ಸಂ: ಜಸಂಇ 30 ಸೇಇವಿ 2004 (ಭಾ) ದಿ: 18.07.2007ರಲ್ಲಿ ಅವರನ್ನು ದೋಷಮುಕ್ತರನ್ನಾಗಿ ಮಾಡಲಾಗಿರುತ್ತದೆ.<br><br>ಆಪಾದಿತರಲ್ಲಿ ಒಬ್ಬರಾಗಿದ್ದ ಶ್ರೀ ಕೆ.ಗೋಪಾಲಯ್ಯ, ಸಹಾಯಕ ಕಾರ್ಯಪಾಲಕ ಇಂಜನಿಯರ್‌ರವರು ನಿಧನರಾಗಿರುವುದರಿಂದ, ಅವರ ಹೆಸರನ್ನು ಇಲಾಖಾ ವಿಚಾರಣೆಯಿಂದ ಸರ್ಕಾರದ ಆದೇಶ ಸಂಖ್ಯೆ: ಜಸಂಇ 30 ಸೇಇವಿ 2004 (ಭ) ದಿ: 01.10.2007ರಲ್ಲಿ ಕೈಬಿಡಲಾಗಿರುತ್ತದೆ.<br><br>ಹುಲ್ಲಹಳ್ಳಿ ನಾಲೆಯ ಆಧುನೀಕರಣ ಕಾಮಗಾರಿಯಲ್ಲಿ ಕಳಪೆ ಕಾಮಗಾರಿ ನಡೆದಿರುವ ಬಗ್ಗೆ ಕ್ರಮವನ್ನು ಕೈಗೊಳ್ಳಲಾಗಿದೆಯೆಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |
| 2 | 6169<br>ಚು.ಗು.ಪ್ರ. 182<br>ಶ್ರೀ ಎಸ್.ನಾಗರಾಜು<br>(ಸಂದೇಶ್ ನಾಗರಾಜ್)<br>ವಿಪನದಿ: 08.02.2017 | ಗುಂಡಾಲ್ ಜಲಾಶಯದ ನಾಲೆ ಹೂಳನ್ನು ತೆಗೆಸಿ ಈ ನಾಲೆಯ ಮೂಲಕ ಕೆರೆಗಳಿಗೆ ನೀರು ಹರಿಸಲು ಹಾಗೂ ಈ ಜಲಾಶಯದ ಉದ್ಯಾನವನದ ಅಭಿವೃದ್ಧಿಗೆ ಸರ್ಕಾರ ಕೈಗೊಂಡಿರುವ ಕ್ರಮಗಳ ಬಗ್ಗೆ | ಗುಂಡಾಲ್ ಜಲಾಶಯದ ಬಲದಂಡೆ ನಾಲೆಯಲ್ಲಿನ ಹೂಳನ್ನು ತೆಗೆಸಿ, ಈ ನಾಲೆಯ ಮೂಲಕ ಕೆರೆಗಳಿಗೆ ನೀರನ್ನು ಹರಿಸಲು ಕ್ರಮ ಕೈಗೊಳ್ಳಲಾಗುವುದು. ಈ ಜಲಾಶಯದ ಅಭಿವೃದ್ಧಿ ಮತ್ತು ಉದ್ಯಾನವನದ ಅಭಿವೃದ್ಧಿಗೆ ರೂ. 85.50 ಲಕ್ಷ ಅಂದಾಜು ಮೊತ್ತದ ಕಾಮಗಾರಿಗೆ | ದಿನಾಂಕ: 29.11.2018ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ಗುಂಡಾಲ್ ಜಲಾಶಯದ ಬಲದಂಡೆ ನಾಲೆಯಲ್ಲಿನ ಹೂಳನ್ನು ತೆಗೆಸಿ, ಈ ನಾಲೆಯ ಮೂಲಕ ಕೆರೆಗಳಿಗೆ ನೀರನ್ನು ಹರಿಸಲು ಕ್ರಮ ಕೈಗೊಳ್ಳಲಾಗಿದೆ. ಗುಂಡಾಲ್ ಜಲಾಶಯದ ಉದ್ಯಾನವನ ಅಭಿವೃದ್ಧಿ ಕಾಮಗಾರಿಯನ್ನು ರೂ. 85.50 ಲಕ್ಷಗಳಿಗೆ ಕೈಗೊಂಡಿದ್ದು, ಕಾಮಗಾರಿ ಪೂರ್ಣಗೊಳ್ಳುವ ಹಂತದಲ್ಲಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |

| | | | | |
|---|---|---|---|---|
| | | | ಅನುಮೋದನೆಯಾಗಿದ್ದು, ಈ ಕಾಮಗಾರಿಯನ್ನು ಕೈಗೊಳ್ಳಲು ಕ್ರಮ ವಹಿಸಲಾಗುವುದು ಎಂದು ಮಾನ್ಯ ಜಲಸಂಪನ್ಮೂಲ ಸಚಿವರು ತಿಳಿಸಿದರು. | |
| 3 | 6183 ಎ<br>ಚು.ರ.ಪ್ರ. 767<br>ಶ್ರೀ ಎನ್.ಎಸ್. ಬೋಸ್‌ರಾಜು<br>ವಿಪನದಿ: 23.03.2016 | ರಾಯಚೂರು ನಗರ ಹಾಗೂ ಸುತ್ತಲಿನ 60 ಗ್ರಾಮಗಳಿಗೆ ಕುಡಿಯುವ ನೀರಿಗಾಗಿ ಎನ್.ಆರ್.ಬಿ.ಸಿ. 106 ಮೈಲಿನಿಂದ ಲಿಂಕ್ ಕ್ಯಾನಾಲ್‌ನ ಗಣೇಕಲ್ ಸಮತೋಲನ ಜಲಾಶಯಕ್ಕೆ ಸೇರಿಸುವ ಪ್ರಸ್ತಾವನೆ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮಗಳ ಬಗ್ಗೆ | ರಾಯಚೂರು ನಗರ ಕುಡಿಯುವ ನೀರಿನ ಪೂರೈಕೆಗೆ ನಾರಾಯಣಪುರ ಬಲದಂಡೆ ಕಾಲುವೆಯಿಂದ ಲಿಂಕ್ ಕೆನಾಲ್ ನಿರ್ಮಿಸಿ, ಹರಿಸುವ ಪ್ರಸ್ತಾವನೆ ತಾಂತ್ರಿಕವಾಗಿ ಕಾರ್ಯಸಾಧುವಲ್ಲವೆಂದು ಅಭಿಪ್ರಾಯಪಡಲಾಗಿದೆ. ಮುಂದುವರೆದು, ನಾರಾಯಣಪುರ ಬಲದಂಡೆ ಕಾಲುವೆ ಕಿ.ಮೀ. 140.226ರಲ್ಲಿ ಸೂಕ್ತ ಔಟ್‌ಲೆಟ್ ಮುಖಾಂತರ ಅವಶ್ಯಕ ಕುಡಿಯುವ ನೀರಿನ ಪ್ರಮಾಣ ಪೂರೈಕೆ ಪ್ರಸ್ತಾವನೆ ಬಗ್ಗೆ ನಿರ್ಣಯ ಕೈಗೊಳ್ಳಲಾಗಿರುತ್ತದೆ. ಈ ಸಂಬಂಧ, ಕರ್ನಾಟಕ ನೀರು ಸರಬರಾಜು ಮತ್ತು ಒಳಚರಂಡಿ ವಿಭಾಗ, ಬಳ್ಳಾರಿ ಇವರಿಗೆ, ರಾಯಚೂರು ನಗರದ ಕುಡಿಯುವ ನೀರಿನ ಪೂರೈಕೆಗೆ 29 ಕ್ಯೂಸೆಕ್ಸ್ ನೀರಿನ ಪ್ರಮಾಣವನ್ನು ಒದಗಿಸುವ ಬಗ್ಗೆ ಕೃಷ್ಣಾ ಭಾಗ್ಯ ಜಲ ನಿಗಮದ ಮಂಡಳಿಯು ಅನುಮೋದನೆ ನೀಡಿದ್ದು, ಪ್ರಸ್ತಾವನೆ ಪರಿಶೀಲನೆಯಲ್ಲಿರುತ್ತದೆ ಎಂದು | ದಿನಾಂಕ: 29.11.2018ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ಕೃಷ್ಣಾ ಮೇಲ್ದಂಡೆ ಯೋಜನೆ ಹಂತ–3ರಡಿ ಬರುವ ನಾರಾಯಣಪುರ ಬಲದಂಡೆ ಕಾಲುವೆ ವಿಸ್ತರಣೆ ಒಳಗೊಂಡಿದ್ದು ಸದರಿ ಉಪ ಯೋಜನೆಯಡಿ 18.192 ಟಿಎಂಸಿ ನೀರು ಬಳಸಿ ರಾಯಚೂರು ಜಿಲ್ಲೆ ದೇವದುರ್ಗ ಹಾಗೂ ರಾಯಚೂರು ತಾಲ್ಲೂಕುಗಳಿಗೆ ಸುಮಾರು 56,100 ಹೆಕ್ಟೇರ್ ಕ್ಷೇತ್ರಕ್ಕೆ ನೀರಾವರಿ ಸೌಲಭ್ಯ ಕಲ್ಪಿಸುವುದಾಗಿರುತ್ತದೆ. ಇದಕ್ಕನುಗುಣವಾಗಿ ಪ್ರಸ್ತುತ ನಾರಾಯಣಪುರ ಬಲದಂಡೆ ಕಾಲುವೆ ವಿಸ್ತರಣೆ ಕಿ.ಮೀ. 95.00 ರಿಂದ 168.50 ರವರೆಗಿನ ಮುಖ್ಯ ಕಾಲುವೆ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗುತ್ತಿದ್ದು ಪ್ರಗತಿಯು ವಿವಿಧ ಹಂತದಲ್ಲಿರುತ್ತವೆ.<br><br>ಗಣೇಕಲ್ ಸಮತೋಲನ ಜಲಾಶಯದಿಂದ ತುಂಗಭದ್ರಾ ಎಡದಂಡೆ ಕಾಲುವೆಯ ಎಂಡ್ ಅಚ್ಚುಕಟ್ಟು ಕ್ಷೇತ್ರಕ್ಕೆ ಹಾಗೂ ರಾಯಚೂರು ನಗರಕ್ಕೆ ಕುಡಿಯುವ ನೀರು ಒದಗಿಸಲು ನಿರ್ಮಿಸಲಾಗಿದ್ದು, ಇದು ನಾರಾಯಣಪುರ ಬಲದಂಡೆ ಕಾಲುವೆ ವಿಸ್ತರಣೆ ಕಿ.ಮೀ. 108.90 ರಿಂದ 113.40ರ ಪ್ರಸ್ತಾಪಿತ ನಾರಾಯಾಣಪುರ ಬಲದಂಡೆ ಕಾಲುವೆ ವಿಸ್ತರಣೆ ಕಾಮಗಾರಿಯನ್ನು ಕೈಗೆತ್ತಿಕೊಂಡು ಅನುಷ್ಠಾನಗೊಳಿಸಲಾಗುತ್ತಿದ್ದು, ಗಣೇಕಲ್ ಸಮತೋಲನ ಜಲಾಶಯಕ್ಕೆ ನಾರಾಯಣಪುರ ಬಲದಂಡೆ ಕಾಲುವೆಯಿಂದ ಲಿಂಕ್ ಕೆನಾಲ್ ನಿರ್ಮಿಸಿ, ನೀರು ಹರಿಸುವ ಕುರಿತು ಇದ್ದ ಪ್ರಸ್ತಾವನೆ ಬಗೆಗಿನ ತಾಂತ್ರಿಕ ಸಾಧ್ಯಾಸಾಧ್ಯತೆ ಕುರಿತು ನಿಗಮದ ತಾಂತ್ರಿಕ ಉಪ ಸಮಿತಿಯಲ್ಲಿ ಪರಿಶೀಲಿಸಿ, ತಾಂತ್ರಿಕ ಉಪ ಸಮಿತಿಯ ಸದಸ್ಯರಿಂದ ದಿನಾಂಕ: 31.10.2013ರಲ್ಲಿ ಸ್ಥಳ ಪರಿವೀಕ್ಷಣೆ |

| | | | | |
|---|---|---|---|---|
| | | | ಮಾನ್ಯ ಜಲಸಂಪನ್ಮೂಲ ಸಚಿವರು ತಿಳಿಸಿದರು. | ಕೈಗೊಂಡಿದ್ದು ನಾಬದಂಕಾ ಕಿ.ಮೀ. 108.90ರಲ್ಲಿ ಕಾಲುವೆ ಬೆಡ್ ಲೆವೆಲ್ ಆರ್‌ಎಲ್ 411.23 ಮೀ. ಆಗಿದ್ದು, ಗಣೇಕಲ್ ರಿಸರ್ವಾಯರ್ ಎಫ್‌ಟಿಎಲ್ ಮಟ್ಟ ಆರ್‌ಎಲ್ 416.00 ಮೀ. ಆಗಿದ್ದು, ಲಿಂಕ್ ಕೆನಾಲ್ ನಿರ್ಮಿಸಿ ನೀರು ಒದಗಿಸುವುದು ತಾಂತ್ರಿಕವಾಗಿ ಕಾರ್ಯಸಾಧುವಲ್ಲ ಎಂಬುದಾಗಿ ಅಭಿಪ್ರಾಯಪಡಲಾಗಿರುತ್ತದೆ.<br><br>ಮುಂದುವರೆದು, ರಾಯಚೂರು ನಗರ ಕುಡಿಯುವ ನೀರು ಪೂರೈಕೆಗೆ ಸಂಬಂಧಿಸಿದಂತೆ 29 ಕ್ಯೂಸೆಕ್ಸ್ ಪ್ರಮಾಣದ ನೀರನ್ನು ಆರು ತಿಂಗಳ ಅವಧಿಗೆ ಪೂರೈಸುವ ನಿಟ್ಟಿನಲ್ಲಿ ರಾಂಪುರ ಗ್ರಾಮದ ಬಳಿ ರಾಯಚೂರು ನಗರದ ನೀರು ಸರಬರಾಜಿಗಾಗಿ Impounding Reservoir ಇದ್ದು, ನಾರಾಯಣಪುರ ಬಲದಂಡೆ ಕಾಲುವೆ ಕಿ.ಮೀ. 140.226ರ ಬಳಿ ಸೂಕ್ತ ಇನ್‌ಟೇಕ್ ಕಾಲುವೆ, ಸಂಪ್ ಕಂ ಪಂಪ್‌ಹೌಸ್ ನಿರ್ಮಾಣದೊಂದಿಗೆ ಮುಖ್ಯ ಕಾಲುವೆಯಿಂದ 1.30 ಕಿ.ಮೀ.: ಅಂತರದಲ್ಲಿಯ ರಾಂಪುರ ಗ್ರಾಮದ ಬಳಿಯ Impounding Reservoir ನೀರನ್ನು ಪಡೆದು ರಾಯಚೂರು ನಗರ ನೀರು ಸರಬರಾಜಿಗೆ ಕ್ರಮ ಕೈಗೊಳ್ಳಬಹುದಾಗಿದೆ ಎಂದು ಸಹ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ವಿಭಾಗದವರು ಕೋರಿಕೆ ಸಲ್ಲಿಸಿರುತ್ತಾರೆ.<br><br>ಸದರಿ ಪ್ರಸ್ತಾವನೆಗೆ ದಿನಾಂಕ: 19.12.2015ರ ಸರ್ಕಾರದ ಪತ್ರದಲ್ಲಿ ಅನುಮೋದನೆ ನೀಡಲಾಗಿರುತ್ತದೆ.<br><br>ಮುಂದುವರೆದು, ಈಗಾಗಲೇ ನಾರಾಯಣಪುರ ಬಲದಂಡೆ ಮುಖ್ಯ ಕಾಲುವೆ ಕಿ.ಮೀ. 135.00 ರಿಂದ ಕಿ.ಮೀ. 145.00 ರವರೆಗಿನ ಕಾಲುವೆ ನಿರ್ಮಾಣದ ಕಾಮಗಾರಿ ಪ್ರಗತಿಯಲ್ಲಿದ್ದು, ಕಿ.ಮೀ. 140.226ರಲ್ಲಿ ಸೂಕ್ತ ಔಟ್‌ಲೆಟ್ ನಿರ್ಮಿಸಿ ಅಗತ್ಯ ಕುಡಿಯುವ ನೀರು |

| | | | | |
|---|---|---|---|---|
| | | | | ಹರಿಸಲು ಕ್ರಮ ಜರುಗಿಸಲಾಗುವುದು ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |
| 4 | 6176<br>ಚು.ಗು.ಪ್ರ : 3512<br>ಶ್ರೀ ಬಸವರಾಜ ಪಾಟೀಲ್ ಇಟಗಿ<br>ವಿ.ಪ.ನ.ದಿ:<br>15.11.2017 | ನಾರಾಯಣಪುರ ಬಲದಂಡೆ ಕಾಲುವೆ ನವೀಕರಿಸುವ ಕಾಮಗಾರಿ ಬಗ್ಗೆ. | ವಿತರಣಾ ಕಾಲುವೆ ಸಂ.1 ರಿಂದ 18ರಡಿ ಕಾಲುವೆ ಜಾಲದ ಸಮಗ್ರ ಅಧುನಿಕರಣ/ನವೀಕರಣ ಕಾಮಗಾರಿ ತಯಾರಿಸಲಾಗಿದ್ದು ನಿಗಮ ಹಂತದಲ್ಲಿ ಪರಿಶೀಲನೆಯಲ್ಲಿದೆ ಎಂದು ಜಲಸಂಪನ್ಮೂಲ ಸಚಿವರು ತಿಳಿಸಿದರು. | ದಿನಾಂಕ: 29.11.2018ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ದಿನಾಂಕ: 16.02.2018ರಂದು ಮಂಡಿಸಲಾದ 2018–19ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಕೃಷ್ಣಾ ಮೇಲ್ದಂಡೆ ಯೋಜನೆಯ ಹಂತ–2ರ ನಾರಾಯಣಪುರ ಬಲದಂಡೆ ಕಾಲುವೆ ಕಿ.ಮೀ.0.00 ದಿಂದ 95.00 ರವರೆಗಿನ ಕಾಲುವೆ ಆಧುನೀಕರಣ ಯೋಜನೆಯನ್ನು ರೂ. 750.00 ಕೋಟಿ ವೆಚ್ಚದಲ್ಲಿ ಕೈಗೆತ್ತಿಕೊಳ್ಳಲು ಘೋಷಿಸಲಾಗಿರುತ್ತದೆ.<br><br>ಈಗಾಗಲೇ, ನಾರಾಯಣಪುರ ಬಲದಂಡೆ ಕಾಲುವೆ ಕಿ.ಮಿ. 0.00 ದಿಂದ 95.00 ರವರೆಗಿನ ವಿತರಣಾ ಕಾಲುವೆ 1 ರಿಂದ 18 ಒಳಗೊಂಡಂತೆ ಒಟ್ಟಾರೆ ಕಾಲುವೆ ಜಾಲದ ಆಧುನೀಕರಣಕ್ಕಾಗಿ ಯೋಜನೆಗಾಗಿ ರೂ. 1800.00 ಕೋಟಿಗಳ ಅಂದಾಜು ಮೊತ್ತದ ಪ್ರಸ್ತಾವನೆ ತಯಾರಿಸಲಾಗಿರುತ್ತದೆ.<br><br>ಪ್ರಸಕ್ತ ಆಯವ್ಯಯದ ಘೋಷಣೆಯನ್ವಯ ನಾರಾಯಣಪುರ ಬಲದಂಡೆ ಮುಖ್ಯ ಕಾಲುವೆ ಕಿ.ಮಿ. 0.00 ದಿಂದ 95.00 ವರೆಗಿನ ಮೊದಲನೇ ಹಂತದ ರೂ. 750.00 ಕೋಟಿಗಳ ಅಂದಾಜು ಮೊತ್ತದ ಪ್ರಸ್ತಾವನೆಯನ್ನು ದಿನಾಂಕ: 27.08.2018 ರಂದು ಜರುಗಿದ ನಿಗಮದ 117ನೇ ನಿರ್ದೇಶಕರ ಮಂಡಳಿಯ ಸಭೆಯಲ್ಲಿ ಮಂಡಿಸಲಾಗಿದ್ದು ಸಭೆಯಲ್ಲಿ ವಿಷಯವನ್ನು ಮುಂದೂಡಲಾಗಿರುತ್ತದೆ.<br><br>ಯೋಜನೆಗೆ ನಿಗಮದ ನಿರ್ದೇಶಕರ ಮಂಡಳಿಯ ಅಗತ್ಯ ತಿರುವಳಿ ಪಡೆದು ಮುಂದಿನ ಕ್ರಮ ಜರುಗಿಸಲಾಗುವುದು ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |

| | | | | |
|---|---|---|---|---|
| 5 | 4321<br>ಚು.ಗು.ಪ್ರ. 427<br>ಶ್ರೀ ವೈ.ಎ. ನಾರಾಯಣಸ್ವಾಮಿ<br>ವಿಪನದಿ: 17.07.2013 | ಕೋಲಾರ, ಚಿಕ್ಕಬಳ್ಳಾಪುರ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿರುವ ಕೆರೆಗಳಿಗೆ ನೀರು ತುಂಬಿಸಲು ಹಾಗೂ ಕೃಷಿ ಚಟುವಟಿಕೆಗಳಿಗೆ ನೀರುಣಿಸಲು ಸರ್ಕಾರ ರೂಪಿಸಿರುವ ಶಾಶ್ವತ ನೀರಾವರಿ ಯೋಜನೆಗಳ ಬಗ್ಗೆ. | ಎತ್ತಿನಹೊಳೆ ಯೋಜನೆಯಿಂದ ಲಭ್ಯವಾಗುವ ನೀರನ್ನು ರಾಜ್ಯದ ಪೂರ್ವಭಾಗದ ಕುಡಿಯುವ ನೀರಿನ ಅತೀವ ಅಭಾವ ಎದುರಿಸುತ್ತಿರುವ ಜಿಲ್ಲೆಗಳಿಗೆ ಕುಡಿಯುವ ನೀರು ಮತ್ತು ಅಂತರ್‌ಜಲ ಮರುಪೂರಣಕ್ಕಾಗಿ ಬಳಸಿಕೊಳ್ಳಲು ಯೋಜಿಸಲಾಗಿದೆ. ಆದರೆ ಪರಮಶಿವಯ್ಯ ವರದಿ ಆಧಾರಿತ ಯೋಜನೆಯಿಂದ ದೊರೆಯಬಹುದಾದ ನೀರಿನಿಂದ ಬರಪೀಡಿತ ಜಿಲ್ಲೆಗಳ ಪ್ರದೇಶಗಳಿಗೆ ಕುಡಿಯುವ ನೀರು ಮತ್ತು ಅಂತರ್‌ಜಲ ಮರುಪೂರಣದ ಜೊತೆ ನೀರಾವರಿ ಸೌಲಭ್ಯ ಒದಗಿಸಲು ಸಹ ಪರಿಶೀಲಿಸಲಾಗುತ್ತಿದೆ ಎಂದು ಮಾನ್ಯ ಜಲ ಸಂಪನ್ಮೂಲ ಸಚಿವರು ತಿಳಿಸಿದರು. | ದಿನಾಂಕ: 29.11.2018ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆಯಿಂದ ರಾಜ್ಯದ ಬರಪೀಡಿತ ಜಿಲ್ಲೆಗಳಾದ ಕೋಲಾರ, ಚಿಕ್ಕಬಳ್ಳಾಪುರ, ತುಮಕೂರು, ರಾಮನಗರ, ಬೆಂಗಳೂರು ಗ್ರಾಮಾಂತರ ಹಾಗೂ ಭಾಗಶ: ಹಾಸನ ಮತ್ತು ಚಿಕ್ಕಮಗಳೂರು ಜಿಲ್ಲೆಗಳಿಗೆ ಕುಡಿಯುವ ನೀರಿಗಾಗಿ ಮತ್ತು ಅಂತರ್ಜಲ ಮರುಪೂರಣಕ್ಕಾಗಿ ಆಯ್ದ 527 ಕೆರೆಗಳನ್ನು ಅವುಗಳ ಶೇ. 50 ರಷ್ಟು ತುಂಬಿಸಲು ಉದ್ದೇಶಿಸಲಾಗಿರುತ್ತದೆ. ಯೋಜನೆಯ ಅನುಷ್ಠಾನವು ಪ್ರಗತಿಯಲ್ಲಿದೆ. ಇದು ಕುಡಿಯುವ ನೀರಿನ ಯೋಜನೆಯಾಗಿದ್ದು, ಯಾವುದೇ ಕೃಷಿ ಚಟುವಟಿಕೆಗಳಿಗೆ ಅವಕಾಶ ಕಲ್ಪಿಸಿರುವುದಿಲ್ಲ. ಸದರಿ ಯೋಜನೆಯಡಿ ಕುಡಿಯುವ ನೀರಿಗಾಗಿ ಕೋಲಾರ ಜಿಲ್ಲೆಗೆ 2,842 ಟಿ.ಎಂ.ಸಿ. ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗೆ 2.217 ಟಿಎಂಸಿ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆ 1,924 ಟಿಎಂಸಿ ನೀರಿನ ಹಂಚಿಕೆ ಮಾಡಿಕೊಳ್ಳಲಾಗಿದೆ. ಇದಲ್ಲದೇ ಅಂತರ್ಜಲ ಮರುಪೂರಣಕ್ಕಾಗಿ ಕೊಳಾರ ಜಿಲ್ಲೆಯ 138 ಕೆರೆಗಳಿಗೆ 2,064 ಟಿಎಂ.ಸಿ., ಚಿಕ್ಕಬಳ್ಳಾಪುರ ಜಿಲ್ಲೆಯ 196 ಕೆರೆಗಳಿಗೆ 2.876 ಟಿಎಂಸಿ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಯ 46 ಕೆರೆಗಳಿಗೆ 1,067 ಟಿಎಂಸಿ. ನೀರಿನ ಹಂಚಿಕೆ ಮಾಡಿಕೊಳ್ಳಲಾಗಿದೆ.<br><br>ಶ್ರೀ ಪರಮಶಿವಯ್ಯರವರ ಪರಿಕಲ್ಪನೆ ಆಧಾರದಮೇಲೆ ಕುಡಿಯುವ ನೀರಿನ ಸುಧಾರಣೆಗಾಗಿ ಹಾಗೂ ಕರ್ನಾಟಕದ ಬರಪೀಡಿತ ಪ್ರದೇಶಗಳ ಮರುಪೂರಣಕ್ಕಾಗಿ ಪಶ್ಚಿಮಕ್ಕೆ ಹರಿಯುವ ನದಿಗಳ ನೀರನ್ನು ತಿರುವುಗೊಳಿಸುವ ಯೋಜನೆಯ ವಿವರವಾದ ಯೋಜನಾ ವರದಿ ತಯಾರಿಕೆ ಹಾಗೂ ಅದರನ್ವಯ ಯೋಜನೆಗಳನ್ನು ಅನುಷ್ಠಾನಗೊಳಿಸುವ ರೋಡ್‌ಮ್ಯಾಪ್ ತಯಾರಿಕೆ ಪ್ರಕ್ರಿಯೆಗಳಲ್ಲಿ ತಾಂತ್ರಿಕ ಸಲಹೆ ಹಾಗೂ ಮಾರ್ಗದರ್ಶನ ನೀಡಲು ಶ್ರೀ ಪರಮಶಿವಯ್ಯರವರ ಅಧ್ಯಕ್ಷತೆಯಲ್ಲಿ ಒಂದು ತಜ್ಞರ ಸಮಿತಿಯನ್ನು ರಚಿಸಲಾಗಿತ್ತು. ಸದರಿ ಸಮಿತಿಯು ಪಶ್ಚಿಮಘಟ್ಟಗಳ ಸ್ಥಳ |

| | | | | |
|---|---|---|---|---|
| | | | | ಪರಿವೀಕ್ಷಣೆಯನ್ನು ಕೈಗೊಂಡು ಪ್ರಸ್ತಾಪಿತ ಯೋಜನಾ ಸ್ಥಳವು ಸೂಕ್ಷ್ಮ ಪರಿಸರ ಮತ್ತು ಜೀವ ವೈವಿಧ್ಯ ತಾಣವಾಗಿರುವುದರಿಂದ ಮಾಲಾ ಕಾಲುವೆಯ ನಿರ್ಮಾಣವು ಕಷ್ಟಸಾಧ್ಯವೆಂದು ಪರಿಗಣಿಸಿ, ಪ್ರಸ್ತಾಪಿತ ಮಾಲಾ ಕಾಲುವೆಗೆ ಪರ್ಯಾಯವಾಗಿ Funneling and Tunneling Methodology ಸಾಧ್ಯತೆ ಕುರಿತು ಪ್ರಾಯೋಗಿಕ ಯೋಜನೆಯ ಆರಂಭಿಕ ಅಧ್ಯಯನಕ್ಕಾಗಿ ಶಿಫಾರಸ್ಸು ಮಾಡಿರುತ್ತದೆ.<br>ಈ ಕುರಿತಂತೆ ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆಯನ್ನು ಈಗಾಗಲೇ ಕೈಗೆತ್ತಿಕೊಳ್ಳಲಾಗಿದ್ದು, ಈ ಯೋಜನೆಗೆ ಈಗಾಗಲೇ ದಕ್ಷಿಣ ಕನ್ನಡ ಜಿಲ್ಲೆಯ ಭಾಗದ ಜನರ ಪ್ರತಿರೋಧ ವ್ಯಕ್ತವಾಗುತ್ತಿದೆ. ಈ ಹಿನ್ನಲೆಯಲ್ಲಿ ಶ್ರೀ ಪರಮಶಿವಯ್ಯ ಅಧ್ಯಕ್ಷತೆಯ ತಜ್ಞರ ಸಮಿತಿ ನೀಡಿರುವ ಶಿಫಾರಸ್ಸಿನ ನೀರಿನ ಲಭ್ಯತೆ ಹಾಗೂ ಬೇರೆ ಬೇರೆ ಮೂಲಗಳಿಂದ ದೊರಕಬಹುದಾದ ಪರ್ಯಾಯ ನೀರಿನ ಲಭ್ಯತೆ ಬಗ್ಗೆ ಅಧ್ಯಯನ ನಡೆಸಿ ಚಿಕ್ಕಬಳ್ಳಾಪುರ ಮತ್ತು ಕೋಲಾರ ಜಿಲ್ಲೆಗಳ ಬರಪೀಡಿತ ಪ್ರದೇಶಗಳಿಗೆ ಶಾಶ್ವತ ನೀರಾವರಿ ಯೋಜನೆ ಕಲ್ಪಿಸುವ ಬಗ್ಗೆ ವರದಿ ಸಲ್ಲಿಸಲು ಶ್ರೀ ಎ.ಕೆ. ಬಜಾಜ್, ಮಾಜಿ ಅಧ್ಯಕ್ಷರು, ಕೇಂದ್ರ ಜಲ ಆಯೋಗ ಇವರ ಅಧ್ಯಕ್ಷತೆಯಲ್ಲಿ ದಿನಾಂಕ: 09.06.2016ರಂದು ತಜ್ಞರ ಸಮಿತಿಯನ್ನು ರಚಿಸಲಾಗಿದ್ದು, ಸದರಿ ಸಮಿತಿಯು ವರದಿಯನ್ನು ಸಲ್ಲಿಸಿರುತ್ತದೆ. ಸದರಿ ವರದಿಯು ಪರಿಶೀಲನೆಯಲ್ಲಿರುತ್ತದೆಯೆಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |
| 6 | 4042<br>ಚು.ಗು.ಪ್ರ: 743<br>ಶ್ರೀ ಅಲ್ಲಮಪ್ರಭು ಪಾಟೀಲ್<br>ವಿಪನದಿ: 08.02.2012<br>ಮಂಡಿಸಿದ<br>ದಿ: 09.02.2012 | ಬೆಣ್ಣೆತೊರಾ ಹಾಗೂ ಗಂಡೋರಿ ನಾಲಾ ಯೋಜನೆಗಳು ಉದ್ಘಾಟನೆಗೊಂಡರೂ ಅವುಗಳಿಂದ ನಿಗದಿತ ಪ್ರಮಾಣದಲ್ಲಿ ರೈತರ | ಈ ಯೋಜನೆಯಡಿಯಲ್ಲಿ ಬಲದಂಡೆ ಹಾಗೂ ಎಡದಂಡೆಯ ಮುಖ್ಯ ಕಾಲುವೆಗಳು ಸುಮಾರು 15 ವರ್ಷಗಳ ಹಿಂದೆ ಶಹಾಬಾದ್ ಕಲ್ಲುಚಪ್ಪಡಿಯ ಲೈನಿಂಗ್ ಒಳಗೊಂಡಂತೆ ನಿರ್ಮಾಣ ವಾಗಿದ್ದು, | ದಿನಾಂಕ: 29.11.2018ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ಗಂಡೋರಿ ನಾಲಾ ಹಾಗೂ ಬೆಣ್ಣೆತೋರಾ ಯೋಜನೆಗಳ ಪ್ರಸ್ತುತ ಹಂತ ಕೆಳಗಿನಂತಿವೆ.<br>**ಗಂಡೋರಿ ನಾಲಾ ಯೋಜನೆ:–** ಗಂಡೋರಿನಾಲಾ ಅಣೆಕಟ್ಟಿನ ಕಾಮಗಾರಿಯು 2001ರಲ್ಲಿ ಪೂರ್ಣಗೊಂಡಿರುತ್ತದೆ. ಒಟ್ಟು 8094 |

| | | | | |
|---|---|---|---|---|
| | | ಹೊಲಗಳಿಗೆ ನೀರು ಹರಿಸದಿರುವ ಬಗ್ಗೆ. | ಕಾಲುವೆಯನ್ನು ಅರ್.ಸಿ.ಸಿ. ಲೈನಿಂಗ್ ಸಮೇತ ಪುನಶ್ಚೇತನಗೊಳಿಸುವ ಕಾಮಗಾರಿ ಗಳನ್ನು ಕೈಗೆತ್ತಿಕೊಳ್ಳಲಾಗುತ್ತಿದ್ದು, 2012–2013ರ ಅಂತ್ಯದೊಳಗೆ ಯೋಜನೆಯನ್ನು ಪೂರ್ಣಗೊಳಿಸಿ ನೀರನ್ನು ಒದಗಿಸಲಾಗುವುದು ಎಂದು ಮಾನ್ಯ ಜಲಸಂಪನ್ಮೂಲ ಸಚಿವರು ತಿಳಿಸಿದರು. | ಹೆ. ನೀರಾವರಿ ಸಾಮರ್ಥ್ಯ ಕಲ್ಪಿಸಬೇಕಾಗಿದ್ದು, ಒಟ್ಟು 7943 ಹೆ. ನೀರಾವರಿ ಸಾಮರ್ಥ್ಯ ಸೃಷ್ಟಿಸಲಾಗಿದೆ.<br>ಮುಂದುವರೆದು, ನೀರಿನ ಪರಿಣಾಮಕಾರಿ, ಸಮರ್ಥ ಹಾಗೂ ಸಮಗ್ರ ಬಳಕೆಗಾಗಿ ಕಾಲುವೆ ಜಾಲದ ಸುಧಾರಣೆಗಾಗಿ ರೂ. 92.00 ಕೋಟಿ ಮೊತ್ತದ ಆಧುನೀಕರಣ ಪ್ರಸ್ತಾವನೆಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. ಕಾಮಗಾರಿಯನ್ನು ಟೆಂಡರ್ ಮೂಲಕ ಗುತ್ತಿಗೆ ವಹಿಸಲಾಗಿದ್ದು, ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.<br><br>**ಬೆಣ್ಣೆತೋರಾ ಯೋಜನೆ:** ಬೆಣ್ಣೆತೋರಾ ಯೋಜನೆಯನ್ನು 2006–07ರಲ್ಲಿ ಪೂರ್ಣಗೊಳಿಸಿ, ಮುಖ್ಯ ನಾಲೆಗಳಲ್ಲಿ ಪ್ರಾಯೋಗಿಕವಾಗಿ ನೀರು ಹರಿಸಲಾಗುತ್ತಿತ್ತು. 2009–10ರಲ್ಲಿ ಬಿದ್ದ ಭಾರಿ ಮಳೆಯಿಂದ ಕಾಲುವೆಯ ಕೆಲವು ಭಾಗಗಳಲ್ಲಿ ಕಾಲುವೆ ಕುಸಿದು ಹೋಗಿ ನೀರು ಕೊನೆಯಂಚಿನವರೆಗೂ ತಲುಪದಿದ್ದರಿಂದ ಯೋಜನೆಯ ಕಾಲುವೆ ಜಾಲದ ಸಮಗ್ರ ಸುಧಾರಣೆ ಪ್ರಸ್ತಾವನೆಗೆ ಅನುಮೋದನೆ ನೀಡಿದ್ದು, ಕಾಮಗಾರಿಯನ್ನು ಟೆಂಡರ್ ಮೂಲಕ ರೂ. 174.15 ಕೋಟಿಗಳಿಗೆ ಗುತ್ತಿಗೆ ವಹಿಸಲಾಗಿದ್ದು, ಕಾಮಗಾರಿಯು ಪ್ರಗತಿಯಲ್ಲಿರುತ್ತದೆ. ಈವರೆಗೂ ರೂ. 129.67 ಕೋಟಿ ಆರ್ಥಿಕ ಪ್ರಗತಿ ಸಾಧಿಸಲಾಗಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |
| 7 | 4224<br>ಚು.ಗು.ಪ್ರ: 41<br>ಶ್ರೀ ಅಮರನಾಥ ಪಾಟೀಲ<br>ವಿಪನದಿ: 06.02.2013 | ಕಲಬುರಗಿ ಜಿಲ್ಲೆಯ ಬೆಣ್ಣೆತೋರಾ, ಅಮರ್ಜಾ ಕೆಳದಂಡೆ, ಮುಲ್ಲಾಮಾರಿ ಯೋಜನೆಗಳಿಗೆ ಸಂಬಂಧಿಸಿದಂತೆ ಬೆಣ್ಣೆತೊರಾ ಯೋಜನೆಯ ಬಲದಂಡೆ ಕಾಲುವೆ | ನಾಲೆಯ ಬಗ್ಗೆ ಪರಿಶೀಲನೆ ಮಾಡುತ್ತೇನೆ. ಏನಾದರೂ ತೊಂದರೆ ಇದ್ದರೆ ಖಂಡಿತವಾಗಿಯೂ ಸರಿಪಡಿಸುವಂತಹ ಕೆಲಸವನ್ನು ಮಾಡುತ್ತೇನೆ ಎಂದು ಮಾನ್ಯ ಜಲಸಂಪನ್ಮೂಲ ಸಚಿವರು ತಿಳಿಸಿದರು. | ದಿನಾಂಕ: 29.11.2018ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ಬೆಣ್ಣೆತೋರಾ ಯೋಜನೆಯನ್ನು 2006–07ರಲ್ಲಿ ಪೂರ್ಣಗೊಳಿಸಿ, ಮುಖ್ಯ ನಾಲೆಗಳಲ್ಲಿ ಪ್ರಾಯೋಗಿಕವಾಗಿ ನೀರು ಹರಿಸಲಾಗುತ್ತಿತ್ತು. 2009–10ರಲ್ಲಿ ಬಿದ್ದ ಭಾರೀ ಮಳೆಯಿಂದ ಕಾಲುವೆಯ ಕೆಲವು ಭಾಗಗಳಲ್ಲಿ ಕಾಲುವೆ ಕುಸಿದು ಹೋಗಿ ನೀರು ಕೊನೆಯಂಚಿನವರೆಗೂ ತಲುಪುವಲ್ಲಿ ತೊಂದರೆಯಾಗಿರುತ್ತದೆ. ಬೆಣ್ಣೆತೋರಾ ಯೋಜನೆಯ ಬಲದಂಡೆ ಕಾಲುವೆ ಕಲಗುರ್ತಿ |

| | | | | |
|---|---|---|---|---|
| | | "ಕಲಬುರ್ಗಿ" ನಾಲೆಯ ಅವೈಜ್ಞಾನಿಕ ದುರಸ್ತಿ ಬಗ್ಗೆ. | | ನಾಲೆಯ ಆಧುನೀಕರಣ ಕಾಮಗಾರಿಯನ್ನು ಕೈಗೊಂಡು ಸಮರ್ಪಕವಾಗಿ ನೀರನ್ನು ಹರಿಸಲಾಗುತ್ತಿದೆ.<br>ಮುಂದುವರೆದು, ಯೋಜನೆಯ ಕಾಲುವೆ ಜಾಲದ ಸಮಗ್ರ ಸುಧಾರಣೆ ಪ್ರಸ್ತಾವನೆಗೆ ಅನುಮೋದನೆ ನೀಡಿದ್ದು, ಕಾಮಗಾರಿಯನ್ನು ಟೆಂಡರ್ ಮೂಲಕ ರೂ. 174.15 ಕೋಟಿಗೆ ಗುತ್ತಿಗೆ ವಹಿಸಲಾಗಿದೆ. ಕಾಮಗಾರಿಯು ಪ್ರಗತಿಯಲ್ಲಿದ್ದು, ಈವರೆಗೂ ರೂ. 129.67 ಕೋಟಿ ಆರ್ಥಿಕ ಪ್ರಗತಿ ಸಾಧಿಸಲಾಗಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |
| 8 | 4326<br>ಚು.ರ.ಪ್ರ. 571<br>ಶ್ರೀ ಆಚಾರ್ ಹಾಲಪ್ಪ ಬಸಪ್ಪ<br>ವಿಪನದಿ: 24.07.2013 | ಸಿಂಗಟಾಲೂರು ಏತ ನೀರಾವರಿ ಯೋಜನೆಯಡಿ ತೀವ್ರ ಬರಪೀಡಿತ ಯಲಬುರ್ಗಾ ತಾಲ್ಲೂಕಿನ ಕನಿಷ್ಠ 50,000 ಎಕರೆ ಭೂಪ್ರದೇಶಕ್ಕೆ ನೀರಾವರಿ ಸೌಲಭ್ಯ ಒದಗಿಸುವ ಬಗ್ಗೆ. | ಪ್ರಸ್ತುತ, ಮುಖ್ಯ ಇಂಜಿನಿಯರ್‌ರವರು ಸಲ್ಲಿಸಿರುವ ಪರಿಕಲ್ಪನಾ ವರದಿಯಲ್ಲಿ (Concept Report) ಯಲಬುರ್ಗಾ ತಾಲ್ಲೂಕಿಗೆ ನೀರಾವರಿ ಸೌಲಭ್ಯ ಒದಗಿಸುವ ಪ್ರಸ್ತಾವನೆ ಇರುವುದಿಲ್ಲ. ಆದಾಗ್ಯೂ, ಈ ಸೌಲಭ್ಯವನ್ನು ಯಲಬುರ್ಗಾ ತಾಲ್ಲೂಕಿಗೆ ಸಾಧ್ಯವಾದಷ್ಟು ಮಟ್ಟಿಗೆ ವಿಸ್ತರಿಸಲು ಪರಿಶೀಲಿಸಲಾಗುವುದು ಎಂದು ಮಾನ್ಯ ಜಲಸಂಪನ್ಮೂಲ ಸಚಿವರು ತಿಳಿಸಿದರು. | ದಿನಾಂಕ: 29.11.2018ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ಸಿಂಗಟಾಲೂರು ಏತ ನೀರಾವರಿ ಯೋಜನೆಯ ಎಡಭಾಗದಲ್ಲಿ ಬರುವ ಮುಂಡರಗಿ ಶಾಖಾ ಕಾಲುವೆಯ ವ್ಯಾಪ್ತಿಯಲ್ಲಿನ ಆಲೂರು ಬನ್ನಿಕೊಪ್ಪ ಲಿಫ್ಟ್‌ನಿಂದ ಕೊಪ್ಪಳ ಜಿಲ್ಲೆಯ ಯಲಬುರ್ಗಾ ತಾಲ್ಲೂಕಿನ 19427 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲು ಯೋಜಿಸಲಾಗಿದೆ. ಸದರಿ ಕಾಮಗಾರಿಯನ್ನು ಟೆಂಡರ್ ಮುಖಾಂತರ ರೂ. 112.46 ಕೋಟಿಗಳಿಗೆ ವಹಿಸಲಾಗಿದ್ದು, ಕಾಮಗಾರಿ ಪ್ರಗತಿಯಲ್ಲಿದೆ. ಈವರೆಗೆ ರೂ. 91.00 ಕೋಟಿಗಳ ಆರ್ಥಿಕ ಪ್ರಗತಿ ಸಾಧಿಸಲಾಗಿರುತ್ತದೆ. ಸದರಿ ಕಾಮಗಾರಿಯನ್ನು 2018–19ನೇ ಸಾಲಿನಲ್ಲಿ ಪೂರ್ಣಗೊಳಿಸಲಾಗುವುದು ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |
| 9 | 4743<br>ಚು.ಗು.ಪ್ರ: 1445/2014<br>ಕೆ. ಪ್ರತಾಪಚಂದ್ರ ಶೆಟ್ಟಿ<br>ವಿಪನದ: 16.07.2014 | ವಾರಾಹಿ ನೀರಾವರಿ ಯೋಜನೆಯ ಭೂಸ್ವಾಧೀನ ಪ್ರಕ್ರಿಯೆಯನ್ನು ತ್ವರಿತಗತಿಯಲ್ಲಿ ಕೈಗೊಂಡು | ಒಟ್ಟಾರೆ 1456 ಎಕರೆಯಲ್ಲಿ 487 ಎಕರೆಗಳ ಭೂಸ್ವಾಧೀನ ಕಾರ್ಯ ಪೂರ್ಣಗೊಂಡಿದೆ. 972 ಎಕರೆ ಜಮೀನನ್ನು ನಾವು ಭೂಸ್ವಾಧೀನ ಮಾಡಿಕೊಳ್ಳಬೇಕಾಗಿದೆ. ಹೊಸ | ದಿನಾಂಕ: 29.11.2018ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ವಾರಾಹಿ ನೀರಾವರಿ ಯೋಜನೆಯಡಿ ಒಟ್ಟು 1456 ಎಕರೆ ಪಟ್ಟಾ ಜಮೀನುಗಳ ಭೂಸ್ವಾಧೀನಕ್ಕೆ ಸಂಬಂಧಿಸಿದಂತೆ, ಸುಮಾರು 601.01 ಎಕರೆಗಳ ಭೂಸ್ವಾಧೀನ ಪ್ರಕ್ರಿಯೆ ಪೂರ್ಣಗೊಂಡಿರುತ್ತದೆ. ಉಳಿದ ಸುಮಾರು 136.90 ಎಕರೆ |

| | | | | |
|---|---|---|---|---|
| | | ಆದಷ್ಟು ಬೇಗನೆ ನೀರನ್ನು ಒದಗಿಸುವ ಬಗ್ಗೆ. | ಭೂ ಕಾಯಿದೆ ಪ್ರಕಾರವಾಗಿಯೇ ಪರಿಹಾರಗಳನ್ನು ಕೊಡುತ್ತೇವೆ ಹಾಗೂ ಡಿಸೆಂಬರ್ 2015ರೊಳಗೆ 7500 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಒದಗಿಸುವ ಕೆಲಸವನ್ನು ಮುಂದಿನ 6 ತಿಂಗಳಿನಲ್ಲಿ ಮಾಡಲಾಗುವುದೆಂದು ಮಾನ್ಯ ಜಲಸಂಪನ್ಮೂಲ ಸಚಿವರು ತಿಳಿಸಿರುತ್ತಾರೆ. | ಪ್ರದೇಶದ ಭೂಸ್ವಾಧೀನ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ. ಇನ್ನುಳಿದ ಪ್ರದೇಶದ ಭೂಸ್ವಾಧೀನ ಪ್ರಕ್ರಿಯೆಗೆ ಹೊಸ ಭೂಸ್ವಾಧೀನ ಕಾಯ್ದೆಯಡಿ ಪ್ರಸ್ತಾವನೆ ಸಲ್ಲಿಸಲು ಕ್ರಮ ಕೈಗೊಳ್ಳಲಾಗಿದೆ.<br><br>ವಾರಾಹಿ ಯೋಜನೆಯಲ್ಲಿ ನಿಯಮದಂತೆ ಭೂಸ್ವಾಧೀನ ಪ್ರಕ್ರಿಯೆ ಕೈಗೊಂಡು ಡೈವರ್ಷನ್ ವಿಯರ್ ಕಾಮಗಾರಿ, ಬಲದಂಡೆ ಸಾಮಾನ್ಯ ಕಾಲುವೆ 18.725 ಕಿ.ಮೀ. ಎಡದಂಡೆ ನಾಲೆ 30.00 ಕಿ.ಮೀ. ಮತ್ತು ಉಪ ನಾಲೆಗಳನ್ನು ಪೂರ್ಣಗೊಳಿಸಿ, ಪ್ರಪ್ರಥಮವಾಗಿ ದಿ: 10.01.2016ರಂದು 3372 ಹೆಕ್ಟೇರ್ ಪ್ರದೇಶಕ್ಕೆ ಬೇಸಿಗೆ ಹಂಗಾಮಿಗೆ ನೀರು ಹರಿಸಲಾಗಿದೆ.<br><br>ಎಡದಂಡೆ ಕಾಲುವೆಯ 30.00 ಕಿ.ಮೀ. ರಿಂದ 38.00 ಕಿ.ಮೀ.ವರೆಗೆ ಮುಖ್ಯ ಕಾಲುವೆ ಹಾಗೂ ಅದರಡಿ ಬರುವ ವಿತರಣಾ ಕಾಲುವೆಗೆ ಸಂಬಂಧಿಸಿದಂತೆ, ಭೂಸ್ವಾಧಿನವನ್ನು ಪೂರ್ಣಗೊಳಿಸಿ, ಟೆಂಡರ್ ಮೂಲಕ ಕಾಮಗಾರಿಯನ್ನು ಗುತ್ತಿಗೆ ವಹಿಸಲಾಗಿದ್ದು, ಕಾಮಗಾರಿ ಪ್ರಗತಿಯಲ್ಲಿದೆ. ಸೆಪ್ಟೆಂಬರ್ 2018ರ ಅಂತ್ಯಕ್ಕೆ 5053 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯವನ್ನು ಒದಗಿಸಲಾಗಿರುತ್ತದೆ.<br><br>ಉಳಿದ ಎಡದಂಡೆ ಮುಖ್ಯ ಕಾಲುವೆ 38.00 ರಿಂದ 43.45 ಕಿ.ಮೀ.ವರೆಗೆ ಭೂಸ್ವಾಧೀನ ಪ್ರಕ್ರಿಯೆ ಬಹುತೇಕ ಪೂರ್ಣಗೊಳಿಸಿದ್ದು, ಅಂದಾಜು ಮತ್ತು ವಿನ್ಯಾಸ ಅನುಮೋದನೆ ಅಂತಿಮ ಹಂತದಲ್ಲಿರುತ್ತದೆ.<br><br>ಇದಾದ ನಂತರ ಎರಡನೇ ಹಂತದಲ್ಲಿ, ಬಲದಂಡೆ ಕಾಲುವೆ ಭೂಸ್ವಾಧೀನಕ್ಕಾಗಿ ಅಂತಿಮ ಸರ್ವೇ ಕಾರ್ಯ ಪ್ರಗತಿಯಲ್ಲಿದ್ದು, ತ್ವರಿತಗತಿಯಲ್ಲಿ ಕಾಮಗಾರಿ ಕೈಗೊಳ್ಳಲಾಗುವುದು. ವಾರಾಹಿ ಎಡದಂಡೆ ಕಾಲುವೆ 6.100 ಕಿ.ಮೀ. ನಲ್ಲಿ ನೀರನೆತ್ತಿ ಸುಮಾರು 2,723 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಒದಗಿಸುವ ವಾರಾಹಿ ಏತ |

| | | | | |
|---|---|---|---|---|
| | | | | ನೀರಾವರಿ ಯೋಜನೆಯ ಕಾಮಗಾರಿಯನ್ನು ಟರ್ನ್ ಕೀ ಆಧಾರದ ಮೇಲೆ ರೂ. 301.05 ಕೋಟಿಗಳಿಗೆ ಗುತ್ತಿಗೆ ವಹಿಸಲಾಗಿದ್ದು, ಕಾಮಗಾರಿ ಪ್ರಗತಿಯಲ್ಲಿರುತ್ತದೆ.<br>ಸದರಿ ಯೋಜನೆಯ ಎಲ್ಲಾ ಕಾಮಗಾರಿಗಳನ್ನು ಅನುಷ್ಠಾನಗೊಳಿಸಿ 2021–22ನೇ ಸಾಲಿನಲ್ಲಿ ಪೂರ್ಣಗೊಳಿಸಲು ಯೋಜಿಸಲಾಗಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |
| 10 | 6167<br>ಚು.ಗು.ಪ್ರ. 168<br>ಶ್ರೀ.ಎನ್.ಎಸ್. ಬೋಸ್‌ರಾಜು<br>ವಿಪನದಿ: 08.02.2017 | ತುಂಗಭದ್ರಾ ರಿಸರ್ವಾಯರ್‌ನ ಎನ್.ಆರ್.ಬಿ.ಸಿ. ಗೆ ಸೇರಿರುವ 9 ಎ ಕ್ಯಾನಲ್ ವಡವಟ್ಟಿ ಬ್ರಾಂಚ್ ಕಾಲುವೆ ಪೂರೈಸಲು ಸರ್ಕಾರ ತೆಗೆದುಕೊಂಡ ಕ್ರಮಗಳ ಬಗ್ಗೆ | 14 ಲ್ಯಾಟರಲ್‌ಗಳಲ್ಲಿ 14 ಲ್ಯಾಟರಲ್‌ಗಳು ಪ್ರಗತಿಯಲ್ಲಿವೆ ಅವುಗಳಲ್ಲಿ 3 ಲ್ಯಾಟರಲ್‌ಗಳ ಬಗ್ಗೆ ಶೀಘ್ರದಲ್ಲಿಯೇ ಕ್ರಮಕೈಗೊಳ್ಳುತ್ತೇವೆ. ಒಟ್ಟಾರೆ ವಡವಟ್ಟಿ ಶಾಖಾ ಕಾಲುವೆಯ ಎಲ್ಲಾ ಬಾಕಿ ಕಾಮಗಾರಿಗಳನ್ನು 2017–18ನೇ ಸಾಲಿನಲ್ಲಿ ಪೂರ್ಣಗೊಳಿಸಲಿಕ್ಕೆ ಚಿಂತನೆ ಮಾಡಿದ್ದೇವೆ. ಮಾನ್ಯ ಸದಸ್ಯರು ನಿಜಾಂ ಅಣೆಕಟ್ಟಿನಲ್ಲಿ ನೀರು ಹರಿದು ಹೋಗುತ್ತದೆ ಎಂದು ಹೊಸ ವಿಷಯವನ್ನು ಹೇಳಿದ್ದಾರೆ. ಅದರ ಬಗ್ಗೆ ಸಹ ಪರಿಶೀಲನೆ ಮಾಡುತ್ತೇವೆ. | ದಿನಾಂಕ: 29.11.2018ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ನಾರಾಯಣಪುರ ಬಲದಂಡೆ ಕಾಲುವೆ ವಿತರಣಾ ಕಾಲುವೆ ಸಂ.9 (ಎ)ರ ಕಿ.ಮೀ. 29.15 ರಲ್ಲಿ ವಡವಟ್ಟಿ ಶಾಖಾ ಕಾಲುವೆ ಆಫ್‌ಟೇಕ್ ಹೊಂದಿದ್ದು, ಇದರ ಒಟ್ಟು ಉದ್ದ 28.77 ಕಿ.ಮೀ. ಆಗಿದ್ದು ಇದರಡಿ ಒಟ್ಟು 8.678 ಹೆಕ್ಟೇರ್ ಕ್ಷೇತ್ರ ನೀರಾವರಿ ಸೌಲಭ್ಯಕ್ಕೆ ಒಳಪಡಿಸಲು ಯೋಜಿಸಲಾಗಿದೆ. ವಡವಟ್ಟಿ ಶಾಖಾ ಕಾಲುವೆ ಕಿ.ಮೀ. 0.00 ರಿಂದ 28.77ರ ವರೆಗಿನ ಕಾಮಗಾರಿಗಳನ್ನು 4 ಪ್ಯಾಕೇಜ್‌ಗಳಡಿ ಕೈಗೆತ್ತಿಕೊಳ್ಳಲಾಗಿದ್ದು, ಪ್ರಗತಿಯ ಪ್ರಸ್ತುತ ವಿವರಗಳು ಈ ಕೆಳಗಿನಂತಿವೆ:– |

| ಕ್ರಮ ಸಂಖ್ಯೆ | ಕಾಮಗಾರಿಯ ವಿವರ | ಪ್ರಸ್ತುತ ಹಂತ |
|---|---|---|
| 1 | ವಡವಟ್ಟಿ ಶಾಖಾ ಕಾಲುವೆ ಕಿ.ಮೀ. 0.00 ರಿಂದ 10.00 | ಬಹುತೇಕ ಪೂರ್ಣಗೊಂಡಿದ್ದು, ಪೂರ್ಣಗೊಂಡ ಕಾಲುವೆ ಜಾಲದಡಿ ನೀರು ಹರಿಬಿಡಲಾಗಿದೆ |
| 2 | ವಡವಟ್ಟಿ ಶಾಖಾ ಕಾಲುವೆ ಕಿ.ಮೀ. 10.00 ರಿಂದ 15.78 | ಕಾಮಗಾರಿಗಳ ಪ್ರಗತಿಯು ವಿವಿಧ ಹಂತದಲ್ಲಿದ್ದು, ಬಾಕಿ |

<table>
<tr>
<td></td>
<td></td>
<td></td>
<td></td>
<td>
<table>
<tr><td>3</td><td>ವಡವಟ್ಟಿ ಶಾಖಾ ಕಾಲುವೆ ಕಿ.ಮೀ. 15.78 ರಿಂದ 15.78</td><td rowspan="2">ಕಾಮಗಾರಿಗಳನ್ನು ಪ್ರಸಕ್ತ 2018–19ನೇ ಸಾಲಿನಲ್ಲಿ ಪೂರ್ಣಗೊಳಿಸಲು ಯೋಜಿಸಲಾಗಿದೆ</td></tr>
<tr><td>4</td><td>ವಡವಟ್ಟಿ ಶಾಖಾ ಕಾಲುವೆ ಕಿ.ಮೀ. 20.00 ರಿಂದ 28.77</td></tr>
</table>
ಮುಂದುವರೆದು, ವಡವಟ್ಟಿ ಶಾಖಾ ಕಾಲುವೆಯಡಿ 4 ಲ್ಯಾಟರಲ್‌ಗಳ ಪೈಕಿ 11 ಲ್ಯಾಟರೆಲ್‌ಗಳ ಕಾಮಗಾರಿಗಳು ಪೂರ್ಣಗೊಳ್ಳುವ ಹಂತದಲ್ಲಿದೆ. ಇನ್ನುಳಿದಂತೆ, ಬಾಕಿ 3 ಲ್ಯಾಟರಲ್‌ಗಳ ಹಾಗೂ ಅವುಗಳಡಿಯ ಸಬ್ ಲ್ಯಾಟರಲ್‌ಗಳ ಕಾಮಗಾರಿಗಳ ಟೆಂಡರ್ ಪ್ರಕ್ರಿಯೆಯಲ್ಲಿದ್ದು ಶೀಘ್ರದಲ್ಲಿಯೇ ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆದು ಪ್ರಾರಂಭಿಸಲು ಯೋಜಿಸಲಾಗಿದೆ.
ಇಲ್ಲಿಯವರೆಗೆ, ವಡವಟ್ಟಿ ಶಾಖಾ ಕಾಲುವೆಯಡಿ ನಿಗದಿತ ಒಟ್ಟು 8.678 ಹೆಕ್ಟೇರ್ ಪೈಕಿ 5,358 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸಾಮರ್ಥ್ಯ ಕಲ್ಪಿಸಲಾಗಿರುತ್ತದೆ. ಒಟ್ಟಾರೆ, ನಾರಾಯಣಪುರ ಬಲದಂಡೆ ಕಾಲುವೆ ವಿತರಣಾ ಕಾಲುವೆ ಸಂ. 99(ಎ)ರಡಿಯ ವಡವಟ್ಟಿ ಶಾಖಾ ಕಾಲುವೆಯಡಿಯ ಎಲ್ಲಾ ಬಾಕಿ ಕಾಮಗಾರಿಗಳನ್ನು ಪ್ರಸಕ್ತ 2018–19ನೇ ಸಾಲಿನಲ್ಲಿ ಪೂರ್ಣಗೊಳಿಸಿ ನಿಗದಿತ ಅಚ್ಚುಕಟ್ಟು ಕ್ಷೇತ್ರಕ್ಕೆ ನೀರಾವರಿ ಸೌಲಭ್ಯ ಒದಗಿಸಲು ಕ್ರಮ ಜರುಗಿಸಲಾಗುವುದೆಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು.
</td>
</tr>
</table>

| | | | | |
|---|---|---|---|---|
| 11 | 6170<br>ಚು.ಗು.ಪ್ರ. 223<br>ಶ್ರೀ ನಿರಾಣಿ ಹಣಮಂತ್ ರುದ್ರಪ್ಪ<br>ವಿಪನದಿ: 08.02.2017 | ಜಮಖಂಡಿ ತಾಲ್ಲೂಕಿನ ಸಸಾಲಟ್ಟಿ ಏತ ನೀರಾವರಿ ಯೋಜನೆಗೆ ಬಗ್ಗೆ. | ಸಸಾಲಟ್ಟಿ ಏತ ನೀರಾವರಿ ಯೋಜನೆಯ ಕ್ಷೇತ್ರಕ್ಕೆ ಈಗಾಗಲೇ ಘಟಪ್ರಭಾ ಎಡದಂಡೆ, ಕಾಲುವೆಯ ಮೂಲಕ ನೀರನ್ನು ಪೂರೈಸಲಾಗುತ್ತಿದ್ದು ಸಮರ್ಪಕ ನೀರು ಪೂರೈಕೆಗಾಗಿ ವ್ಯವಸ್ಥಿತ ನೀರು ನಿರ್ವಹಣೆ ಕುರಿತಂತೆ ಕ್ರಮವಹಿಸಲಾಗುವುದು. ಇದಲ್ಲದೇ, ಘಟಪ್ರಭಾ ಎಡದಂಡೆ ಕಾಲುವೆಯ ಆಧುನೀಕರಣ ಸಹ ಪರಿಶೀಲನೆಯಲ್ಲಿದ್ದು ಇದರೊಂದಿಗೆ ಸಸಾಲಟ್ಟಿ ಏತ ನೀರಾವರಿ ಯೋಜನೆಯ ಕಾರ್ಯಸಾಧ್ಯತೆ ಬಗ್ಗೆ ಪರಿಶೀಲಿಸಲಾಗುವುದೆಂದು ಮಾನ್ಯ ಜಲಸಂಪನ್ಮೂಲ ಸಚಿವರು ತಿಳಿಸಿದರು. | ದಿನಾಂಕ: 29.11.2018ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ಘಟಪ್ರಭಾ ಎಡದಂಡೆ ಕಾಲುವೆ ಅಡಿ ಬರುವ ಜಮಖಂಡಿ ಪಾರ್ಶ್ವ ಕಾಲುವೆ, ಬಿಳಗಿ ಪಾರ್ಶ್ವ ಕಾಲುವೆ ಹಾಗೂ ದಕ್ಷಿಣ ಪಾರ್ಶ್ವ ಕಾಲುವೆಗಳಡಿ ಬರುವ 36,856 ಹೆಕ್ಟೇರ್ ಅಚ್ಚುಕಟ್ಟು ಪ್ರದೇಶಕ್ಕೆ ನೀರು ತಲುಪದೇ ಭಾದಿತ ಅಚ್ಚುಕಟ್ಟು ಪ್ರದೇಶವಾಗಿರುತ್ತದೆ. ಈ ಕಾರಣ ಸದರಿ ಅಚ್ಚುಕಟ್ಟು ಪ್ರದೇಶಕ್ಕೆ ಕೃಷ್ಣಾ ನದಿಯಿಂದ ನೀರನ್ನೆತ್ತಿ ಸ್ಥಿರೀಕರಣಗೊಳಿಸುವ ಉದ್ದೇಶದಿಂದ ಸಸಾಲಟ್ಟಿ ಏತ ನೀರಾವರಿ ಯೋಜನೆಯನ್ನು ಕೈಗೆತ್ತಿಕೊಳ್ಳಲಾಗುವುದೆಂದು 2018–19ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಲಾಗಿರುತ್ತದೆ. ಈ ಪ್ರದೇಶವು ಹೊಸ ಅಚ್ಚುಕಟ್ಟು ಪ್ರದೇಶವಾಗಿರದೇ ಮೇಲೆ ಹೇಳಿದಂತೆ ಘಟಪ್ರಭಾ ಎಡದಂಡೆ ಕಾಲುವೆಯಡಿ ಬರುವ ಅಚ್ಚುಕಟ್ಟು ಪ್ರದೇಶವಾಗಿರುತ್ತದೆ.<br><br>ಸದರಿ ಯೋಜನೆಗೆ ಬೇಕಾಗಿರುವ 8.47 ಟಿ.ಎಂ.ಸಿ. ನೀರಿನ ಹಂಚಿಕೆ ಹಾಗೂ ಲಭ್ಯತೆ ಕುರಿತಂತೆ ಪರಿಶೀಲಿಸಿ, ವಿವರವಾದ ಅಧ್ಯಯನ ನಡೆಸಿ ಪ್ರಸ್ತಾವನೆಯಲ್ಲಿನ ಬೇಡಿಕೆಗಳ ಬಗ್ಗೆ ಸೂಕ್ತ ಪರಿಹಾರದ ಶಿಫಾರಸ್ಸು ಒಳಗೊಂಡ ವರದಿಯನ್ನು ಸಲ್ಲಿಸಲು ಸರ್ಕಾರದ ಆದೇಶ ಸಂಖ್ಯೆ: ಜಸಂಇ 112 ವಿಬ್ಯಾಇ 2016, ದಿನಾಂಕ: 13.03.2018ರನ್ವಯ ಪ್ರಧಾನ ಸಲಹೆಗಾರರು, ಜಲ ಸಂಪನ್ಮೂಲ ಇಲಾಖೆಯ ಶ್ರೀ ಡಿ.ಎನ್. ದೇಸಾಯಿ ಇವರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಿದ್ದು, ಸದರಿ ಸಮಿತಿಯು ದಿನಾಂಕ: 08.04.2018ರಂದು ವರದಿಯನ್ನು ಸಲ್ಲಿಸಿರುತ್ತದೆ. ಸದರಿ ವರದಿಯು ಪರಿಶೀಲನೆ ಹಂತದಲ್ಲಿರುತ್ತದೆ. ಇದಲ್ಲದೇ, ಘಟಪ್ರಭಾ ಎಡದಂಡೆ ಕಾಲುವೆಯ ಆಧುನೀಕರಣಕ್ಕೆ ರೂ. 573.28 ಕೋಟಿ ಮೊತ್ತದ ವಿವರವಾದ ಯೋಜನಾ ವರದಿಯು ಸಹ ಪರಿಶೀಲನೆಯಲ್ಲಿರುತ್ತದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |

| | | | | |
|---|---|---|---|---|
| 12 | 6172<br>ಚು.ಗು.ಪ್ರ: 2067<br>ಶ್ರೀ ಕೆ ಪ್ರತಾಪಚಂದ್ರ ಶೆಟ್ಟಿ<br>ವಿಪನದಿ22.07.2015 | ಕರ್ನಾಟಕ ನೀರಾವರಿ ನಿಗಮದಿಂದ ನಿರ್ವಹಿಸುತ್ತಿರುವ ವರಾಹಿ ನೀರಾವರಿ ಯೋಜನೆ ಎಡದಂಡೆ ಕಾಲುವೆಯ 23ನೇ (ಇಪ್ಪತ್ತಮೂರನೇ) ಕಿ.ಮೀ ಮುಖ್ಯ ಕಾಲುವೆ ಕಾಮಗಾರಿಯ ಮೇಲ್ವಿಚಾರಣೆ ನಡೆಸುತ್ತಿರುವ ಸಹಾಯಕ ಅಭಿಯಂತರರ ಮೇಲೆ ಶಿಸ್ತುಕ್ರಮ ಕೈಗೊಳ್ಳುವ ಬಗ್ಗೆ. | ವರಾಹಿ ಎಡದಂಡೆ ಕಾಲುವೆಯ 23ನೇ ಕಿ.ಮೀ ಮುಖ್ಯ ನಾಲೆಯ ಕಾಮಗಾರಿಯ ಗುಣಮಟ್ಟದ ಬಗ್ಗೆ ದೂರು ಬಂದಿರುವುದರಿಂದ, ಸದರಿ ಕಾಮಗಾರಿಯ ಗುಣಮಟ್ಟದ ಬಗ್ಗೆ ನಿಯಂತ್ರಣ ವಿಭಾಗದಿಂದ ಪರಿಶೀಲಿಸಲಾಗುತ್ತಿದ್ದು, ವರದಿ ಬಂದ ನಂತರ ಪರಿಶೀಲಿಸಿ, ಕ್ರಮ ಜರುಗಿಸಲಾಗುವುದು ಎಂದು ಮಾನ್ಯ ಜಲಸಂಪನ್ಮೂಲ ಸಚಿವರು ತಿಳಿಸಿರು. | ದಿನಾಂಕ: 29.11.2018ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ವಾರಾಹಿ ಎಡದಂಡೆ 22.00 ಕಿ.ಮೀ. ನಿಂದ 23.00ನೇ ಕಿ.ಮೀ. ವರೆಗೆ ಮಣ್ಣು ಅಗೆತ ಮತ್ತು ಸಿ.ಸಿ. ಲೈನಿಂಗ್ ನಿರ್ಮಾಣ ಅಡ್ಡಮೋರಿ ಕಾಮಗಾರಿ ಸೇರಿದಂತೆ) ಕಾಮಗಾರಿಯನ್ನು ಟೆಂಡರ್ ಕರಾರು ಒಪ್ಪಂದ ಸಂ: 14/2013–14, ದಿ: 25.02.2014 ರಂತೆ ಶ್ರೀ ಪ್ರವೀಣ್‌ಕುಮಾರ್ ಶೆಟ್ಟಿ, ಕೆಟಗರಿ–3 ಗುತ್ತಿಗೆದಾರರು, ಶ್ರೀ ದುರ್ಗಾ ಪರಮೇಶ್ವರಿ ಕನ್ಸ್‌ಟ್ರಕ್ಷನ್ಸ್, ಬೇಳೂರು, ಕುಂದಾಪುರ ಇವರಿಗೆ ವಹಿಸಿಕೊಡಲಾಗಿರುತ್ತದೆ. ಕರಾರಿನಂತೆ ಗುತ್ತಿಗೆದಾರರು ದಿ: 25.02.2014ರಂದು ಪ್ರಾರಂಭಿಸಿದ್ದು ಕಾಮಗಾರಿ ಪ್ರಗತಿಯಲ್ಲಿರುವಾಗ ಸಾರ್ವಜನಿಕರಿಂದ ಮತ್ತು ಗುತ್ತಿಗೆದಾರರ ಸಂಘ, ಕುಂದಾಪುರ ತಾಲ್ಲೂಕು, ಉಡುಪಿ ಜಿಲ್ಲೆ, ಇದರ ಸದಸ್ಯರುಗಳಿಂದ ಕಾಮಗಾರಿಯ ಗುಣಮಟ್ಟದ ಬಗ್ಗೆ ದೂರುಗಳು ಬಂದಿದ್ದು, ಸರ್ಕಾರದ ಪತ್ರದನ್ವಯ ವ್ಯವಸ್ಥಾಪಕ ನಿರ್ದೇಶಕರು, ಕನೀನಿನಿ, ಬೆಂಗಳೂರು ಇವರ ಕಚೇರಿ ಪತ್ರ ಸಂ: 3125 ದಿ: 22.9.2015ರಲ್ಲಿ (ಅನುಬಂಧ–1) ಈ ಕಾಮಗಾರಿಯ ಮೂರನೇ ಹಂತದ ಗುಣಮಟ್ಟದ ತನಿಖೆ ಆದೇಶಿಸಲಾಗಿದ್ದು ಗುಣಮಟ್ಟದ ತನಿಖೆಯ ಜವಾಬ್ದಾರಿಯನ್ನು Civil Aid Yeyyadi-Mangalore (Bureau Veritas) ಇವರಿಗೆ ವಹಿಸಿಕೊಡಲಾಗಿರುತ್ತದೆ.<br><br>Civil Aid Yeyyadi-Mangalore (Bureau Veritas) ಸಂಸ್ಥೆಯವರು ನೀಡಿರುವ ಪರೀಕ್ಷಾ ವರದಿಯಲ್ಲಿ ಕಾಮಗಾರಿಗಳ ಗುಣಮಟ್ಟದ ಪರೀಕ್ಷೆಗಳನ್ನು IS Code ವ್ಯಾಖ್ಯಾನದಂತೆ ನಡೆಸಿದ್ದು, ಎಲ್ಲಾ ಕಾಮಗಾರಿಗಳು IS Codeನಲ್ಲಿ ನಿಗದಿಪಡಿಸಿದ ಗುಣಮಟ್ಟವನ್ನು ಹೊಂದಿರುತ್ತದೆ ಎಂದು ವರದಿ ಮಾಡಿರುತ್ತಾರೆ. ಇದಲ್ಲದೆ ವರದಿಯಲ್ಲಿ ಗುಣಮಟ್ಟದ ಪರೀಕ್ಷೆಗೆ ಒಳಪಡಿಸಿದ ಸದರಿ ಕಾಮಗಾರಿಯ ಕಾಂಕ್ರೀಟ್ ರಿಬೌಂಡ್ ಟೆಸ್ಟ್‌ಗಳು ನಿಗದಿಪಡಿಸಿದ ಗುಣಮಟ್ಟ ಹೊಂದಿರುವ ಬಗ್ಗೆ ವರದಿ ನೀಡಲಾಗಿರುತ್ತದೆ (ಅನುಬಂಧ–2). |

| | | | | |
|---|---|---|---|---|
| | | | | Civil Aid Yeyyadi-Mangalore (Bureau Veritas) ಸಂಸ್ಥೆಯವರು ದಿ: 29.06.2017ರಂದು ನೀಡಿರುವ ಪರೀಕ್ಷಾ ವರದಿಗಳನ್ನು ದಿ: 08.09.2017ರಂದು ನಡೆದ ಕರ್ನಾಟಕ ನೀರಾವರಿ ನಿಗಮದ 165ನೇ ತಾಂತ್ರಿಕ ಉಪ ಸಮಿತಿಯ ಸಭೆಯಲ್ಲಿ ಮಂಡಿಸಲಾಗಿದ್ದು, ಪರಿಶೀಲನೆ ನಡೆಸಿ ಸದರಿ ತಾಂತ್ರಿಕ ಉಪ ಸಮಿತಿಯ ನಡವಳಿಯಂತೆ ಪ್ರಕರಣವು ಇತ್ಯರ್ಥವಾಗಿರುತ್ತದೆ (ಅನುಬಂಧ–3).<br><br>ಮುಂದುವರೆದು, ಸದರಿ ಗುತ್ತಿಗೆದಾರರು ಕಾಮಗಾರಿಯನ್ನು 2018ನೇ ಫೆಬ್ರವರಿ ತಿಂಗಳಿನಲ್ಲಿ ಪೂರ್ಣಗೊಳಿಸಿರುತ್ತಾರೆ ಹಾಗೂ ನಿರ್ವಹಿಸಿರುವ ಕಾಮಗಾರಿಯ ಗುಣಮಟ್ಟವು ಪ್ರಕಾರ ಇರುತ್ತದೆ. ವಾರಾಹಿ ಎಡದಂಡೆಯ 23ನೇ ಕಿ.ಮೀ. ಮೂಲಕ 30ನೇ ಕಿ.ಮೀ. ವರೆಗೆ ಬೇಸಿಗೆ ಹಂಗಾಮಿಗೆ ನೀರು ಸಮರ್ಪಕವಾಗಿ ಹರಿಸಲಾಗಿರುತ್ತದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸಮಿತಿಯು ಭರವಸೆಯನ್ನು ಮುಕ್ತಾಯಗೊಳಿಸಿತು. |
| 13 | 4341<br>ಚು.ರ.ಪ್ರ: 920<br>ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ<br>ವಿಪನದಿ:04.12.2013 | ಹಿಂದಿನ ಸರ್ಕಾರ ಬೇರೆ ಬೇರೆ ಸಂದರ್ಭಗಳಲ್ಲಿ ವರಾಹಿ ನೀರಾವರಿ ಯೋಜನೆಯ ಅವ್ಯವಹಾರಗಳ ಬಗ್ಗೆ ತನಿಖೆಗೆ ಆದೇಶಿಸಿದ ಮತ್ತು ತನಿಖೆಗೆ ಭರವಸೆ ನೀಡಿದ ಪ್ರಕರಣಗಳ ಬಗ್ಗೆ. | ಜಲಸಂಪನ್ಮೂಲ ಇಲಾಖೆಯ ವಿಚಕ್ಷಣಾದಳವು ದಿನಾಂಕ: 06.01.2007ರಂದು ವರದಿಯನ್ನು ಸಲ್ಲಿಸಿರುತ್ತದೆ. ಸದರಿ ವರದಿಯಲ್ಲಿನ ಅಂಶಗಳ ಬಗ್ಗೆ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಇವರಿಗೆ ಕ್ರಮ ಕೈಗೊಳ್ಳುವಂತೆ ನಿರ್ದೇಶನ ನೀಡಲಾಗಿದೆ.<br><br>ಎರಡನೇ ಪ್ರಕರಣಕ್ಕೆ ಸಂಬಂಧಿಸಿದಂತೆ, 05.06.2012 | ದಿನಾಂಕ: 29.11.2018ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ವಾರಾಹಿ ಯೋಜನೆಯಡಿ ಎರಡು ಪ್ರಕರಣಗಳನ್ನು ವಿಚಕ್ಷಣಾದಳದ ತನಿಖೆಗೆ ಒಳಪಡಿಸಲಾಗಿರುತ್ತದೆ.<br>1. ವಾರಾಹಿ ನೀರಾವರಿ ಯೋಜನೆಯಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರ ಮತ್ತು ಕಳಪೆ ಕಾಮಗಾರಿಯ ಕುರಿತು ತನಿಖೆ ನಡೆಸಿ ಪೊಲೀಸ್ ಮಹಾನಿರೀಕ್ಷಕರು, ವಿಚಕ್ಷಣಾ ದಳ, ಜಲ ಸಂಪನ್ಮೂಲ ಇಲಾಖೆ, ಇವರು ದಿನಾಂಕ: 06.01.2007ರಂದು ವರದಿಯನ್ನು ನೀಡಿರುತ್ತಾರೆ.<br>ಸದರಿ ವರದಿಯಲ್ಲಿ ಪ್ರಮುಖವಾಗಿ ಆಡಳಿತಾತ್ಮಕ ಅನುಮೋದನೆ ಪಡೆಯುವಲ್ಲಿ ವಿಳಂಬ, ತಾಂತ್ರಿಕ ಲೋಪದೋಷಗಳು ಮತ್ತು |

| | | | | |
|---|---|---|---|---|
| | | | ರಂದು ತನಿಖೆಗೆ ವಹಿಸಲಾದ ಪ್ರಕರಣವು ವಿಚಕ್ಷಣಾದಳದ ಪರಿಶೀಲನೆಯಲ್ಲಿದೆ ಎಂದು ಮಾನ್ಯ ಜಲಸಂಪನ್ಮೂಲ ಸಚಿವರು ತಿಳಿಸಿದರು. | ಕಾಮಗಾರಿ ವೆಚ್ಚದಲ್ಲಿ ಆಗಿರುವ ಹೆಚ್ಚಳದ ಬಗ್ಗೆ ಇರುತ್ತದೆ.<br>ಸದರಿ ವರದಿಯನ್ನು ಪರಿಶೀಲಿಸಿ ತಾಂತ್ರಿಕ ಉಪ ಸಮಿತಿಯ ಅಭಿಪ್ರಾಯವನ್ನು ಪಡೆದು ವಿವರವಾದ ವರದಿ ಸಲ್ಲಿಸುವಂತೆ ದಿ: 15.03.2007ರಲ್ಲಿ ವ್ಯವಸ್ಥಾಪಕ ನಿರ್ದೇಶಕರನ್ನು ಕೋರಲಾಗಿತ್ತು.<br>ವ್ಯವಸ್ಥಾಪಕರು ನಿರ್ದೇಶಕರು, ಈ ಕೆಳಗಿನಂತೆ ವರದಿ ನೀಡಿರುತ್ತಾರೆ.<br>ವಾರಾಹಿ ನೀರಾವರಿ ಯೋಜನೆಯು 1979ರಲ್ಲಿ ಆರಂಭಗೊಂಡಿದ್ದರೂ ಸಹ 2005ರವರೆಗೆ ಕೇಂದ್ರ ಪರಿಸರ ಮತ್ತು ಅರಣ್ಯ ಇಲಾಖೆಯ ತೀರುವಳಿ ಪಡೆಯುವವರೆಗೆ ವಾಸ್ತವಿಕವಾಗಿ ಕಾಮಗಾರಿ ಪ್ರಾರಂಭವಾಗಿರುವುದಿಲ್ಲ. 2003–04ರಲ್ಲಿ ಯೋಜನೆಯನ್ನು ಕರ್ನಾಟಕ ನೀರಾವರಿ ನಿಗಮ ವ್ಯಾಪ್ತಿಗೆ ಒಳಪಡಿಸಿದ ನಂತರ ಯೋಜನೆಯ ಪರಿಷ್ಕೃತ ಅಂದಾಜು ರೂ. 569.53 ಕೋಟಿಗಳ ಆಡಳಿತಾತ್ಮಕ ಅನುಮೋದನೆ ನೀಡಿದ್ದು ಕಾಮಗಾರಿಗಳ ಶೀಘ್ರ ಅನುಷ್ಠಾನಕ್ಕೆ ಚಾಲನೆ ನೀಡಲಾಗಿದೆ.<br>ಅನುಷ್ಠಾನಗೊಳಿಸುವಲ್ಲಿ ಉಂಟಾಗಿರುವ ಆಡಳಿತಾತ್ಮಕ ಮತ್ತು ತಾಂತ್ರಿಕ ಸಮಸ್ಯೆಗಳು ಈ ಕೆಳಗಿನಂತಿವೆ:–<br>1) ಯೋಜನೆಯ ರೂಪುರೇಷೆಗಳನ್ನು ಕೇಂದ್ರ ಪರಿಸರ ಮತ್ತು ಅರಣ್ಯ ಇಲಾಖೆ ಮತ್ತು ಜಲ ಆಯೋಗವು ಆಗಿಂದಾಗ್ಗೆ ಬದಲಾವಣೆ ಮಾಡಿ ತೀರ್ಮಾನ ಪಡೆದುಕೊಳ್ಳಲು ಆದ ವಿಳಂಬ.<br>2) ರಾಜ್ಯ ಅರಣ್ಯ ಹಾಗೂ ಕಾಯ್ದಿಟ್ಟರಣ್ಯದಲ್ಲಿನ ಮರಗಳನ್ನು ತೆರವುಗೊಳಿಸುವಲ್ಲಿನ ವಿಳಂಬ ಮತ್ತು ಕುಮ್ಕಿ ಪ್ರದೇಶವನ್ನು ತೆರವುಗೊಳಿಸುವಲ್ಲಿನ ವಿಳಂಬ.<br>3) ಭೂಸ್ವಾಧೀನ ಪ್ರಕ್ರಿಯೆಯಲ್ಲಿನ ವಿಳಂಬ.<br>4) ವಾರಾಹಿ ಯೋಜನೆಯ ಪ್ರದೇಶವು ಪಶ್ಚಿಮ ಘಟ್ಟ ಪ್ರದೇಶದಲ್ಲಿದ್ದು, ಜೂನ್‌ನಿಂದ ಅಕ್ಟೋಬರ್‌ವರೆಗೆ ಹೆಚ್ಚಿನ |

| | | | | |
|---|---|---|---|---|
| | | | | ಪ್ರಮಾಣದ ಮಳೆ ಬೀಳುವುದರಿಂದ ಯೋಜನೆಯ ಕೆಲಸ ನಿರ್ವಹಿಸಲು ವರ್ಷದಲ್ಲಿ ಕೇವಲ 6 ತಿಂಗಳ ಅವಧಿ ಮಾತ್ರ ದೊರೆಯುತ್ತದೆ.<br>5) ಯೋಜನಾ ಪ್ರದೇಶದ ಭೂಗೋಳಿಕ ಮಣ್ಣಿನ ಲಕ್ಷಣ, ಇಳಿಜಾರು, ಹಳ್ಳಕೊಳ್ಳ ಇತ್ಯಾದಿ ಕಾರಣಗಳಿಂದ ನಿರ್ಮಾಣದಲ್ಲಿನ ವಿಳಂಬ.<br>6) ವಾರಾಹಿ ಡೈವರ್ಷನ್ ವಿಯರ್ ಕಾಮಗಾರಿ, ಬಲದಂಡೆ ಕಾಮನ್ ಕಾಲುವೆ ಮತ್ತು ಎಡದಂಡೆ ಕಾಲುವೆಯನ್ನು ಸಂಪರ್ಕಿಸುವ ಮೇಲ್ಗಾಲುವೆ, ವಾರಾಹಿ ಏತ ನೀರಾವರಿ ಯೋಜನೆಯ ಎಡದಂಡೆ ಕಾಲುವೆ ಸರಪಳಿ; 0.00 ಕಿ.ಮೀ. ನಿಂದ 21.00 ಕಿ.ಮೀ.ವರೆಗಿನ ನಾಲಾ ಅಗೆತ ಮತ್ತು ಸಿ.ಸಿ. ಲೈನಿಂಗ್ ಹಾಗೂ ಅದರಡಿ ಬರುವ ಮೇಲ್ಗಾಲುವೆ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಹೆಚ್ಚುವರಿ ಆರ್ಥಿಕ ಪ್ರಸ್ತಾವನೆಗಳಿಗೆ ಕರ್ನಾಟಕ ನೀರಾವರಿ ನಿಗಮದ ತಾಂತ್ರಿಕ ಉಪ ಸಮಿತಿ ಹಾಗೂ ನಿಗಮ ಮಂಡಳಿ ಪರಿಶೀಲಿಸಿ ಅವಶ್ಯಕತೆಗನುಗುಣವಾಗಿ ಅನುಮೋದನೆಯನ್ನು ನೀಡಿರುತ್ತದೆ.<br>7) ವಿಚಕ್ಷಣಾ ದಳದ ವರದಿಯಲ್ಲಿನ ಅಂಶಗಳಿಗೆ ಮುಖ್ಯ ಇಂಜನಿಯರ್, ಸಿದ್ದಾಪುರ ಇವರು ಪಾಲನಾ ವರದಿಯನ್ನು ಸಲ್ಲಿಸಿದ್ದು, ಸದರಿ ಪಾಲನಾ ವರದಿಯನ್ನು ದಿನಾಂಕ: 14.03.2011 ರಂದು ಜರುಗಿದ ನಿಗಮದ 121ನೇ ತಾಂತ್ರಿಕ ಉಪ ಸಮಿತಿ ಸಭೆಯಲ್ಲಿ ಮಂಡಿಸಲಾಗಿರುತ್ತದೆ.<br>ತಾಂತ್ರಿಕ ಸಲಹಾ ಸಮಿತಿಯು, ಈ ಕೆಳಗಿನಂತೆ ನಿರ್ಣಯ ಕೈಗೊಂಡಿದೆಯೆಂದು ತಿಳಿಸಲಾಗಿದೆ.<br>TSC does not appreciate the comments of Vigilence Cell. |

| | | | | |
|---|---|---|---|---|
| | | | | The extra cost is approved by the Board without naming any officer responsible.<br><br>The Vigilence Cell should respect decision of the Board.<br><br>ಅದರಂತೆ, ನಿಗಮದ ಮಂಡಳಿಯ ಸಭೆಯಲ್ಲಿ ವಿಚಕ್ಷಣಾ ದಳದ ವರದಿ ಹಾಗೂ ತಾಂತ್ರಿಕ ಸಲಹಾ ಸಮಿತಿಯ ನಿರ್ಣಯದ ಹಿನ್ನಲೆಯಲ್ಲಿ ಪ್ರಕರಣವನ್ನು ನಿಗಮದ ನಿರ್ದೇಶಕ ಮಂಡಳಿಯಲ್ಲಿ ಮಂಡಿಸಿ, ನಂತರ, ನಿರ್ದೇಶಕ ಮಂಡಳಿಯ ಶಿಫಾರಸ್ಸಿನಂತೆ ಕ್ರಮ ವಹಿಸಲಾಗುವುದು.<br><br>2. ವಾರಾಹಿ ನೀರಾವರಿ ಯೋಜನೆಯ ಎಡದಂಡೆ ಮತ್ತು ಬಲದಂಡೆ ಕಾಲುವೆ ಮತ್ತು ಅಣೆಕಟ್ಟು ಕಾಮಗಾರಿಗಳನ್ನು ನಿರ್ವಹಿಸುವಾಗ ಅಗೆತದಲ್ಲಿ ಸಿಕ್ಕಿರುವ ಮೃದು ಹಾಗೂ ಗಟ್ಟಿಕಲ್ಲು ಪರಿಮಾಣದಲ್ಲಿ ವ್ಯತ್ಯಾಸ ನಿರ್ಧರಿಸುವಲ್ಲಿ ಆಗಿರುವ ನ್ಯೂನತೆಗಳ ಹಿನ್ನಲೆಯಲ್ಲಿ ಯೋಜನೆಯ ಕಾಮಗಾರಿ ವೆಚ್ಚದಲ್ಲಿ ಹೆಚ್ಚಳವಾದ ದೂರಿನ ಬಗ್ಗೆ ವಿಚಕ್ಷಣಾದಳ, ಜಲ ಸಂಪನ್ಮೂಲ ಇಲಾಖೆಯವರಿಂದ ತನಿಖೆ ನಡೆಸಲಾಗಿದೆ.<br><br>ವಿಚಕ್ಷಣಾ ದಳ, ಜಲ ಸಂಪನ್ಮೂಲ ಇಲಾಖೆ, ಇವರು ಜಿಯೋಲಾಜಿಕಲ್ ಸರ್ವೆ ಮಾಡಿಸಿ ವಿವರಗಳೊಂದಿಗೆ ದಿ: 10.07.2015ರಂದು ವರದಿ ನೀಡಿರುತ್ತಾರೆ. ಸದರಿ ವರದಿಯನ್ನು ಪರಿಶೀಲಿಸಿ, ನಿಗಮದ ಮಂಡಳಿ ಸಭೆಯಲ್ಲಿ ಚರ್ಚಿಸಿ, ತೀರ್ಮಾನ ತೆಗೆದುಕೊಂಡು, ಕಾಮಗಾರಿಯ ಹೆಚ್ಚುವರಿ ವೆಚ್ಚಕ್ಕೆ ಕಾರಣರಾದವರನ್ನು ಗುರುತಿಸಿ ಸೇವೆಯಲ್ಲಿರುವ ಅಧಿಕಾರಿ/ನೌಕರರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಹಾಗೂ ನಿವೃತ್ತರಾದವರ ವಿರುದ್ಧ ಸಿವಿಲ್ ದಾವೆ ಹೂಡಲು ಅಗತ್ಯ ವರದಿ/ಪ್ರಸ್ತಾವನೆಯನ್ನು ಸಲ್ಲಿಸುವಂತೆ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತದವರನ್ನು ದಿ: 26.08.2015ರಂದು ಕೋರಲಾಗಿತ್ತು. |

| | | | | |
|---|---|---|---|---|
| | | | | ವಿಚಕ್ಷಣಾದಳದ ತನಿಖಾ ವರದಿಯನ್ನು ದಿನಾಂಕ: 01/06/2017ರಂದು ಜರುಗಿದ ನಿಗಮದ ತಾಂತ್ರಿಕ ಉಪ ಸಮಿತಿ 164ನೇ ಸಭೆಯಲ್ಲಿ ಮಂಡಿಸಲಾಗಿದ್ದು, ತಾಂತ್ರಿಕ ಉಪ ಸಮಿತಿಯು ""Financial implications are not forthcoming" ಎಂದು ಅಭಿಪ್ರಾಯಪಟ್ಟಿರುತ್ತದೆ. ಮುಂದುವರೆದು, ತಾಂತ್ರಿಕ ಉಪ ಸಮಿತಿ ಸಭೆಯ ಅಭಿಪ್ರಾಯದಂತೆ ಆರ್ಥಿಕ ಪರಿಣಾಮಗಳೊಂದಿಗೆ ಪಾಲನಾ ವರದಿಗಳನ್ನು ದಿ: 16/05/2018ರಂದು ನಡೆದ ತಾಂತ್ರಿಕ ಉಪ ಸಮಿತಿಯ 168ನೇ ಸಭೆಯಲ್ಲಿ ಮಂಡಿಸಲಾಗಿದೆ. ತಾಂತ್ರಿಕ ಉಪ ಸಮಿತಿಯು ಈ ಕೆಳಕಂಡಂತೆ ಅಭಿಪ್ರಾಯಪಟ್ಟಿರುತ್ತದೆ.<br>'This information containing the financial implications is to be forwarded to the Vigilance Unit'<br>ಸಭೆಯ ಅಭಿಪ್ರಾಯದ ಹಿನ್ನೆಲೆಯಲ್ಲಿ, ವಿಚಕ್ಷಣಾ ದಳದ ತನಿಖಾ ವರದಿಯನ್ನು ತಾಂತ್ರಿಕ ಉಪ ಸಮಿತಿಯ ಅಭಿಪ್ರಾಯದೊಂದಿಗೆ ನಿಗಮದ ನಿರ್ದೇಶಕರ ಮಂಡಳಿ ಸಭೆಯಲ್ಲಿ ಮಂಡಿಸಿ, ನಂತರ ನಿರ್ದೇಶಕ ಮಂಡಳಿಯು ಶಿಫಾರಸ್ಸಿನಂತೆ ಕ್ರಮ ವಹಿಸಲಾಗುವುದು ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |
| 14 | 6184<br>ಚು.ರ.ಪ್ರ. 658<br>ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ<br>ವಿಪನದಿ: 23.03.2016 | ಕರ್ನಾಟಕ ನೀರಾವರಿ ನಿಗಮದಿಂದ ನಿರ್ವಹಿಸಲ್ಪಡುತ್ತಿರುವ ವಾರಾಹಿ ನೀರಾವರಿ ಯೋಜನೆಯಲ್ಲಿ ಕಳಪೆ ಕಾಮಗಾರಿ ನಿರ್ವಹಿಸಿರುವ ಕುರಿತು ಸಾಬೀತಾದ ಪ್ರಕರಣಗಳಲ್ಲಿ ಸರ್ಕಾರ | ಕರ್ನಾಟಕ ನೀರಾವರಿ ನಿಗಮದಿಂದ ನಿರ್ವಹಿಸಲ್ಪಡುತ್ತಿರುವ ವಾರಾಹಿ ನೀರಾವರಿ ಯೋಜನೆಯಲ್ಲಿ ನಿರ್ವಹಿಸಲಾದ ಕಾಮಗಾರಿಗಳಲ್ಲಿ ಕಳಪೆ ಕಾಮಗಾರಿಯಾಗಿರುವ ಬಗ್ಗೆ ಎಂಟು ದೂರುಗಳು ಬಂದಿದ್ದು, ತನಿಖಾ ವರದಿಯ ನಿರೀಕ್ಷೆಯಲ್ಲಿದ್ದು, ವರದಿ ಬಂದ ನಂತರ | ದಿನಾಂಕ: 29.11.2018ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ಶ್ರೀ ಪ್ರವೀಣ್‌ಕುಮಾರ್ ಶೆಟ್ಟಿ, ಕೆಟಗರಿ–3 ಗುತ್ತಿಗೆದಾರರು, ಶ್ರೀ ದುರ್ಗಾ ಪರಮೇಶ್ವರಿ ಕನ್‌ಸ್ಟ್ರಕ್ಷನ್ಸ್, ಬೇಳೂರು, ಕುಂದಾಪುರ ಇವರು ನಿರ್ವಹಿಸಿದ ಎಂಟು ಕಾಮಗಾರಿಗಳ (ವಾರಾಹಿ ಎಡದಂಡೆ ನಾಲಾ ಕಾಮಗಾರಿ 22.00 ರಿಂದ 23.00ನೇ ಕಿ.ಮೀ. ಲ್ಯಾಟರಲ್–23, ವಾರಾಹಿ ಎಡದಂಡೆ ನಾಲೆ 25ರ ಸರಪಳಿ 4.00 ರಿಂದ 5.00 ಕಿ.ಮೀ, ವಿತರಣಾ ನಾಲೆ 16ರ ಸರಪಳಿ 6.00 ರಇಂದ 7.00ನೇ ಕಿ.ಮೀ. ಹಾಗೂ ಎಸ್.ಸಿ.ಪಿ ಮತ್ತು ಟಿ.ಎಸ್.ಪಿ. 4 |

| | | | | |
|---|---|---|---|---|
| | | ತೆಗೆದುಕೊಂಡ ಕ್ರಮಗಳ ಕುರಿತು. | ನಿಯಮಾನುಸಾರ ಅಗತ್ಯ ಕ್ರಮ ಜರುಗಿಸಲಾಗುವುದು ಎಂದು ಮಾನ್ಯ ಜಲಸಂಪನ್ಮೂಲ ಸಚಿವರು ತಿಳಿಸಿದರು. | ಪ್ಯಾಕೇಜ್ ಕಾಮಗಾರಿಗಳು) ಗುಣಮಟ್ಟದ ಬಗ್ಗೆ ಸಾರ್ವಜನಿಕರಿಂದ ಮತ್ತು ಗುತ್ತಿಗೆದಾರರ ಸಂಘ', ಕುಂದಾಪುರ ತಾಲ್ಲೂಕು, ಉಡುಪಿ ಜಿಲ್ಲೆ ಇದರ ಸದಸ್ಯರುಗಳಿಂದ ಕಾಮಗಾರಿಯ ಗುಣಮಟ್ಟದ ಬಗ್ಗೆ ದೂರುಗಳು ಬಂದಿದ್ದು, ಸರ್ಕಾರದ ಪತ್ರದನ್ವಯ ವ್ಯವಸ್ಥಾಪಕ ನಿರ್ದೇಶಕರು, ಕನೀನಿನಿ, ಬೆಂಗಳೂರು ಇವರ ಕಚೇರಿ ಪತ್ರ ಸಂ: 3125 ದಿ: 22.09.2015ರಲ್ಲಿ (ಅನುಬಂಧ-1) ಈ ಕಾಮಗಾರಿಯ ಮೂರನೇ ಹಂತದ ಗುಣಮಟ್ಟದ ತನಿಖೆ ಆದೇಶಿಸಲಾಗಿದ್ದು ಗುಣಮಟ್ಟದ ತನಿಖೆಯ ಜವಬ್ದಾರಿಯನ್ನು Civil Aid Yeyyadi-Mangalore (Bureau Veritas) ಇವರಿಗೆ ವಹಿಸಿಕೊಡಲಾಗಿರುತ್ತದೆ.<br><br>ಸಿವಿಲ್ ಏಡ್ ಸಂಸ್ಥೆಯವರು ಕಾಮಗಾರಿಗಳನ್ನು IS 456-2000-clause No. 17.4.3. ವ್ಯಾಖ್ಯಾನದಂತೆ ಗುಣಮಟ್ಟ ಪರೀಕ್ಷೆ ನಡೆಸಿ, ದಿ: 29.6.2017ರಂದು ಅಂತಿಮ ಪರೀಕ್ಷಣಾ ವರದಿಯನ್ನು ನೀಡಿದ್ದು, ಎಲ್ಲಾ ಕಾಮಗಾರಿಗಳು IS 456-2000-clause No. 17.4.3. ವ್ಯಾಖ್ಯಾನದಂತೆ ಅವಶ್ಯಕ ಗುಣಮಟ್ಟ ಹೊಂದಿರುವುದಾಗಿ ವರದಿ ಮಾಡಿರುತ್ತಾರೆ (ಅನುಬಂಧ-2).<br><br>ಸದರಿ ವರದಿಗಳನ್ನು ದಿ: 08.09.2017ರಂದು ಜರುಗಿದ ಕರ್ನಾಟಕ ನೀರಾವರಿ ನಿಗಮದ 165ನೇ ತಾಂತ್ರಿಕ ಸಲಹಾ ಸಮಿತಿಯಲ್ಲಿ ಪರಾಮರ್ಶೆಗಾಗಿ ಮಂಡಿಸಲಾಗಿ, ಸದರಿ ಕಾಮಗಾರಿಗಳ ಗುಣಮಟ್ಟದ ತಪಾಸಣಾ ವರದಿಯ ಕುರಿತು ವಿಸ್ತೃತವಾಗಿ ಚರ್ಚಿಸಲಾಗಿರುತ್ತದೆ ಹಾಗೂ ಕಾಮಗಾರಿಗಳಿಗೆ ಯಾವುದೇ ವ್ಯತಿರಿಕ್ತ ಷರಾಗಳು ವ್ಯಕ್ತವಾಗಿರುವುದಿಲ್ಲ (ಅನುಬಂಧ-3). ಮುಂದುವರೆದು, ಸದರಿ ಗುತ್ತಿಗೆದಾರರು ಕಾಲುವೆ ಮತ್ತು ಅದಕ್ಕೆ ಸಂಬಂಧಿಸಿದ ಕಾಮಗಾರಿಗಳನ್ನು ಪೂರ್ಣಗೊಳಿಸಿದ್ದು, ಬೇಸಿಗೆ ಹಂಗಾಮಿಗೆ ಸಮರ್ಪಕವಾಗಿ ನೀರು ಹರಿಸಲಾಗಿರುತ್ತದೆ ಹಾಗೂ ಗುಣ ನಿಯಂತ್ರಣ |

| | | | | |
|---|---|---|---|---|
| | | | | ವರದಿಗಳನ್ವಯ ಎಸ್.ಸಿ.ಪಿ/ಟಿ.ಎಸ್.ಪಿ. ಯೋಜನೆಯಡಿಯಲ್ಲಿ ನಿರ್ವಹಿಸಿರುವ ಕಾಮಗಾರಿಯ ಗುಣಮಟ್ಟವು Tender Specification ಪ್ರಕಾರ ಇರುತ್ತದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |
| 15 | 6177<br>ಚು.ಗು.ಪ್ರ : 3696<br>ಶ್ರೀ ನಿರಾಣಿ ಹಣಮಂತ್ ರುದ್ರಪ್ಪ<br>ವಿ.ಪ.ನ.ದಿ: 15.11.2017 | ಬೀಳಗಿ ತಾಲ್ಲೂಕಿನ ಗಲಗಲಿ–ಚಿಕ್ಕಗಲಗಲಿ ಮತ್ತು ಕೊರ್ತಿ–ಕೊಲ್ಹಾರ ಗ್ರಾಮಗಳ ಹತ್ತಿರ ಕೃಷ್ಣಾ ನದಿಗೆ ನಿರ್ಮಿಸಿರುವ ಹಳೆ ಸೇತುವೆಗಳನ್ನು ಎತ್ತರಕ್ಕೆ ನಿರ್ಮಿಸುವ ಬಗ್ಗೆ. | ಬೀಳಗಿ ತಾಲ್ಲೂಕಿನ ಗಲಗಲಿ ಗ್ರಾಮದ ಹತ್ತಿರವಿರುವ ಗಲಗಲಿ ಬ್ಯಾರೇಜನ್ನು ಸದೃಢಗೊಳಿಸಿ (Strengthening) ಎತ್ತರಿಸುವ ಪ್ರಸ್ತಾವನೆಯ ಕುರಿತು ನೀರಿನ ಹಂಚಿಕೆ ಹಾಗೂ ಸಾಧಕ–ಬಾಧಕಗಳ ಬಗ್ಗೆ ತಾಂತ್ರಿಕವಾಗಿ ನಿಗಮದ ಹಂತದಲ್ಲಿ ಪರಿಶೀಲನೆಯಲ್ಲಿದೆ.<br>ಪ್ರಸ್ತುತ ಬ್ಯಾರೇಜ್‌ನಲ್ಲಿ ಹೂಳು ತುಂಬಿಕೊಂಡಿದ್ದು ನೀರಿನ ಸಂಗ್ರಹಣ ಸಾಮರ್ಥ್ಯ ಕಡಿಮೆಯಾಗಿರುವುದಲ್ಲದೇ ಬ್ಯಾರೇಜ್ ಶಿಥಿಲಾವಸ್ಥೆಯಲ್ಲಿರುವುದರಿಂದ ಸದರಿ ಬ್ರಿಡ್ಜ್ ಕಮ್ ಬ್ಯಾರೇಜ್‌ನ್ನು ಬಲಪಡಿಸುವುದರ ಜೊತೆಗೆ ಸುಮಾರು 1–8 ಮೀ ಎತ್ತರಕ್ಕೆ weir ಮಾದರಿಯಲ್ಲಿ ಬ್ಯಾರೇಜ್‌ನ ಎತ್ತರವನ್ನು ಎತ್ತರಿಸಿ ಹೂಳಿನಿಂದ ಕಡಿಮೆಯಾಗಿರುವ ಶೇಖರಣಾ ಸಾಮರ್ಥ್ಯವನ್ನು ಮುಂದಿನ 20 | ದಿನಾಂಕ: 29.11.2018ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ಬೀಳಗಿ ತಾಲ್ಲೂಕಿನ ಗಲಗಲಿ ಗ್ರಾಮದ ಹತ್ತಿರವಿರುವ ಕೃಷ್ಣಾ ನದಿಗೆ ಅಡ್ಡಲಾಗಿ ನಿರ್ಮಿಸಿರುವ ಗಲಗಲಿ ಬ್ಯಾರೇಜನ್ನು ಸದೃಢಗೊಳಿಸಿ ಎತ್ತರಿಸುವ ರೂ. 32.00 ಕೋಟಿ ಮೊತ್ತದ ವಿವರವಾದ ಯೋಜನಾ ವರದಿಗೆ ಸರ್ಕಾರಿ ಆದೇಶ ಸಂಖ್ಯೆ: ಜಸಂಇ 8 ಹಿಆಯೋ 2017, ದಿನಾಂಕ: 07.03.2018ರಂದು ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. ಕಾಮಗಾರಿಯ ಟೆಂಡರ್ ಪ್ರಕ್ರಿಯೆಯು ನಿಗಮದ ಹಂತದಲ್ಲಿ ಜಾರಿಯಲ್ಲಿರುತ್ತದೆ.<br>ಬೀಳಗಿ ತಾಲ್ಲೂಕಿನ ಕೊರ್ತಿ–ಕೊಲ್ಹಾರ ಗ್ರಾಮಗಳ ಹತ್ತಿರ ಕೊರ್ತಿ–ಕೊಲ್ಹಾರ ಬ್ರಿಡ್ಜ್ ಕಮ್ ಬ್ಯಾರೇಜನ್ನು 1977ರಲ್ಲಿ ಲೋಕೋಪಯೋಗಿ ಇಲಾಖೆಯಿಂದ ನಿರ್ಮಿಸಲಾಗಿದ್ದು, ಸದರಿ ಬ್ಯಾರೇಜ್ ಆಲಮಟ್ಟಿ ಆಣೆಕಟ್ಟಿನ ಹಿನ್ನೀರಿನಲ್ಲಿ ಮುಳುಗಡೆ ಹೊಂದಿದ್ದು, ಬೇಸಿಗೆ ಅವಧಿಯಲ್ಲಿ ಆಲಮಟ್ಟಿ ಜಲಾಶಯದ ನೀರಿನ ಮಟ್ಟ ಕಡಿಮೆಯಾದಾಗ ಕೊರ್ತಿ–ಕೊಲ್ಹಾರ ಬ್ರಿಡ್ಜ್ ಕಮ್ ಬ್ಯಾರೇಜ್‌ನಡಿ ಸಂಗ್ರಹವಾಗಿರುವ ನೀರನ್ನು ಬಳಸಿಕೊಂಡು, ಸುತ್ತಮುತ್ತಲಿನ ಬಹುಗ್ರಾಮ ಕುಡಿಯುವ ನೀರಿನ ಮತ್ತು ವಿಜಯಪುರ ನಗರ ಹಾಗೂ ಬೀಳಗಿ ಪಟ್ಟಣದ ಕುಡಿಯುವ ನೀರಿನ ಯೋಜನೆಗಳಿಗೆ ಕುಡಿಯುವ ನೀರಿನ ಮೂಲವನ್ನಾಗಿ ಉಪಯೋಗಿಸಲಾಗುತ್ತದೆ. |

| | | | | |
|---|---|---|---|---|
| | | | ವರ್ಷಗಳ ಅವಧಿಗೆ ಯೋಜಿತ ಜನಸಂಖ್ಯೆಯನ್ನಾಧರಿಸಿ ಕುಡಿಯುವ ನೀರಿನ ಬೇಡಿಕೆಗೆ ಅನುಗುಣವಾಗಿ ಶೇಖರಣಾ ಸಾಮರ್ಥ್ಯಕ್ಕೆ ವಿನ್ಯಾಸಿಸಿ ರೂ.31.00 ಕೋಟಿ ಅಂದಾಜು ಮೊತ್ತದ (2016–17ನೇ ಸಾಲಿನ ದರಪಟ್ಟಿಯನ್ವಯ) ಪ್ರಸ್ತಾವನೆಯನ್ನು ದಿನಾಂಕ:01.09.2017 ರಂದು ಜರುಗಿದ ನಿಗಮದ 112ನೇ ನಿರ್ದೇಶಕರ ಮಂಡಳಿಯ ಅನುಮೋದನೆಯಂತೆ ಸರ್ಕಾರದ ಮಟ್ಟದಲ್ಲಿ ಪರಿಶೀಲನೆಯಲ್ಲಿರುತ್ತದೆ ಎಂದು ಜಲ ಸಂಪನ್ಮೂಲ ಸಚಿವರು ತಿಳಿಸಿದರು. | ಪ್ರಸ್ತುತ ಬ್ಯಾರೇಜ್‌ನಲ್ಲಿ ಹೂಳು ತುಂಬಿಕೊಂಡಿದ್ದು ನೀರಿನ ಸಂಗ್ರಹಣಾ ಸಾಮರ್ಥ್ಯ ಕಡಿಮೆಯಾಗಿರುವುದಲ್ಲದೇ ಬ್ಯಾರೇಜ್ ಶಿಥಿಲಾವಸ್ಥೆಯಲ್ಲಿರುವುದರಿಂದ ಸದರಿ ಬ್ರಿಡ್ಜ್ ಕಮ್ ಬ್ಯಾರೇಜ್‌ನ್ನು ಬಲಪಡಿಸುವುದರ ಜೊತೆಗೆ ಸುಮಾರು 1.8 ಮೀ. ಎತ್ತರಕ್ಕೆ weir ಮಾದರಿಯಲ್ಲಿ ಬ್ಯಾರೇಜ್‌ನ ಎತ್ತರವನ್ನು ಎತ್ತರಿಸಿ ಹೂಳಿನಿಂದ ಕಡಿಮೆಯಾಗಿರುವ ಶೇಖರಣಾ ಸಾಮರ್ಥ್ಯವನ್ನು ಮುಂದಿನ 20 ವರ್ಷಗಳ ಅವಧಿಯಲ್ಲಿನ ಯೋಜಿತ ಜನಸಂಖ್ಯೆಯನ್ನಾಧರಿಸಿ ಕುಡಿಯುವ ನೀರಿನ ಬೇಡಿಕೆಗೆ ಅನುಗುಣವಾಗಿ ಶೇಖರಣಾ ಸಾಮರ್ಥ್ಯಕ್ಕೆ ವಿನ್ಯಾಸಿಸಿ ರೂ. 31.00 ಕೋಟಿಗಳ ಅಂದಾಜು ಮೊತ್ತದ (2016–17ನೇ ಸಾಲಿನ ದರಪಟ್ಟಿಯನ್ವಯ) ಪ್ರಸ್ತಾವನೆಗೆ ಸರ್ಕಾರವು ದಿನಾಂಕ: 07.03.2018ರಂದು ಆಡಳಿತಾತ್ಮಕ ಅನುಮೋದನೆಯನ್ನು ನೀಡಿರುತ್ತದೆ. ಇದರನ್ವಯ ಸದರಿ ಕಾಮಗಾರಿಯ ತಾಂತ್ರಿಕ ಬಿಡ್ ಮೌಲ್ಯ ನಿರ್ಣಯ ವರದಿ ಸ್ವೀಕೃತಗೊಂಡಿದ್ದು, ಕಾಮಗಾರಿಯ ಆರ್ಥಿಕ ಮೌಲ್ಯ ನಿರ್ಣಯ ವರದಿಯನ್ನು ನಿಗಮದ ಮಂಡಳಿ ಸಭೆಯ ಮುಂದೆ ಮಂಡಿಸಿ, ಅನುಮೋದನೆ ಪಡೆದು ಕಾಮಗಾರಿಯನ್ನು ನಿಗಧಿತ ಅವಧಿಯಲ್ಲಿ ಪೂರ್ಣಗೊಳಿಸಲು ಎಲ್ಲಾ ಕ್ರಮ ಜರುಗಿಸಲಾಗುವುದೆಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |
| 16 | 6180<br>ಚು.ಗು.ಪ್ರ. 2510<br>ಶ್ರೀ ರಘುನಾಥ್‌ರಾವ್ ಮಲ್ಕಾಪುರೆ ಪರವಾಗಿ ಶ್ರೀ ಮೃತ್ಯುಂಜಯ ಜಿನಗಾ<br>ವಿಪನದಿ:18.11.2015 | ಬೆಣ್ಣೆತೋರಾ ಯೋಜನೆಯ ಟೆಂಡರ್ ಪ್ರಕ್ರಿಯೆಯನ್ನು ಮುಗಿಸಿ ಕಾಮಗಾರಿಯನ್ನು ಪ್ರಾರಂಭಿಸಿ, ಪೂರ್ಣಗೊಳಿಸುವುದರ ಬಗ್ಗೆ. | ಈ ಯೋಜನೆಗೆ ಸಂಬಂಧಪಟ್ಟಂತೆ ಟೆಂಡರ್ ಕರೆಯಲಾಗಿದೆ, ಟೆಕ್ನಿಕಲ್ ಬಿಡ್ ಕೂಡ ಓಪನ್ ಆಗಿದೆ.<br>Evaluation progress ನಲ್ಲಿದೆ. ಟೆಂಡರ್ ಪ್ರಕ್ರಿಯೆ ಪ್ರಕಾರ ಎಷ್ಟು ನಿಗದಿತ ಸಮಯ ಬೇಕಾಗುತ್ತದೆ ಅಷ್ಟು ಸಮಯವನ್ನು ನಾವು ಕೊಡಬೇಕಾಗುತ್ತದೆ. ಅದಕ್ಕೆ ಕಾನೂನು | ದಿನಾಂಕ: 29.11.2018ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ಬೆಣ್ಣೆತೋರಾ ಯೋಜನೆ ಬಲದಂಡೆ ಹಾಗೂ ಎಡದಂಡೆ ಕಾಲುವೆಗಳ ಆರ್.ಸಿ.ಸಿ. ಲೈನಿಂಗ್ ಸಮೇತ ಕಾಲುವೆ ಪುನ:ಶ್ಚೇತನಗೊಳಿಸುವ ಕಾಮಗಾರಿಯನ್ನು 2015–16ನೇ ಸಾಲಿಗೆ ಕೈಗೆತ್ತಿಕೊಳ್ಳಲಾಗಿದೆ. ಬಲದಂಡೆ ಕಾಲುವೆ ಒಟ್ಟು ಉದ್ದ 82.20 ಕಿ.ಮೀ. ಇದ್ದು, ಇದರಲ್ಲಿ 81.16 ಕಿ.ಮೀ.ವರೆಗೆ ಆರ್.ಸಿ.ಸಿ. ಲೈನಿಂಗ್ ಕಾಮಗಾರಿಯನ್ನು ನಿರ್ವಹಿಸಲಾಗಿದೆ ಹಾಗೂ ಎಡದಂಡೆ ಮುಖ್ಯ ಕಾಲುವೆಯ ಉದ್ದ 62.20 ಕಿ.ಮೀ. ಇದ್ದು, ಇದರಲ್ಲಿ 58.61 ಕಿ.ಮೀ.ವರೆಗೆ ಲೈನಿಂಗ್ ಕಾಮಗಾರಿಯನ್ನು ನಿರ್ವಹಿಸಲಾಗಿದೆ. |

| | | | | |
|---|---|---|---|---|
| | | | ಇದೆ, ಆ ಪ್ರಕಾರವಾಗಿ ಮಾಡಿ ಅದಕ್ಕೆ 18 ತಿಂಗಳ ಕಾಲಾವಕಾಶ ಇರುತ್ತದೆ. ಬೆಣ್ಣೆ ತೋರಾ ಯೋಜನೆಯನ್ನು ನಿಗದಿತ ಸಮಯದಲ್ಲಿ, ಅಂದರೆ ಟೆಂಡರ್ ಪಿರಿಯಡ್‌ಗೆ ಏನು ಕೊಟ್ಟಿದ್ದೇವೆ ಆ ಪಿರಿಯಡ್ ಒಳಗೆ 50 ಸಾವಿರ ಎಕರೆಗೆ ನೀರು ಹರಿಸುವಂತಹ ಕೆಲಸವನ್ನು ಮಾಡುತ್ತೇವೆ. ಗುತ್ತಿಗೆ ಕೊಟ್ಟಾಗ ಗುತ್ತಿಗೆದಾರರಿಗೆ ಒಂದು Stipulated time, 12 ತಿಂಗಳು 18 ತಿಂಗಳು ಎಂದು ಕಾಲಾವಕಾಶವಿರುತ್ತದೆ. ಆ ಸಮಯಾವಕಾಶದ ಒಳಗಾಗಿಯೇ ಕೆಲಸವನ್ನು ಮುಗಿಸುತ್ತೇವೆಂದು ಮಾನ್ಯ ಜಲಸಂಪನ್ಮೂಲ ಸಚಿವರು ತಿಳಿಸಿದರು. | ಉಳಿದಂತೆ ಬಲದಂಡೆ ಕಾಲುವೆ 1.04 ಕಿ.ಮೀ. ಹಾಗೂ ಎಡದಂಡೆ ಕಾಲುವೆ 3.585 ಕಿ.ಮೀ. ಕಾಮಗಾರಿ ಬಾಕಿ ಇದ್ದು, ಅದನ್ನು 2018-19ನೇ ಸಾಲಿನಲ್ಲಿ ಪೂರ್ಣಗೊಳಿಸಲಾಗುವುದು. ಇಲ್ಲಿಯವರೆಗೆ ಬಲದಂಡೆ ಕಾಲುವೆ 60.00 ಕಿ.ಮೀ.ವರೆಗೆ ನೀರನ್ನು ಕಾಲುವೆಯಲ್ಲಿ ಸರಾಗವಾಗಿ ಹರಿಸಲಾಗುತ್ತಿದ್ದು, ಇದರಿಂದ ರೈತರು ನೀರಿನ ಸೌಲಭ್ಯವನ್ನು ಪಡೆಯುತ್ತಿದ್ದಾರೆಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |
| 17 | 6181<br>ಚು.ಗು.ಪ್ರ. 2610<br>ಶ್ರೀ ಅಲ್ಲಮಪ್ರಭು ಪಾಟೀಲ್ ಪರವಾಗಿ<br>ಶ್ರೀ ಐವನ್ ಡಿ'ಸೋಜಾ<br>ವಿಪನದಿ:18.11.2015 | ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಯ ಭೀಮಾ ನದಿ ತೀರದ ವ್ಯಾಪ್ತಿಯಲ್ಲಿ ಬರುವ ಏತ ನೀರಾವರಿ ಯೋಜನೆಗೆ ಚಾಲನೆ ದೊರಕಿಲ್ಲದಿರುವ ಬಗ್ಗೆ. | ಭೀಮಾ ಏತ ನೀರಾವರಿಗೆ ಸುಮಾರು 24,292 ಹೆಕ್ಟೇರ್ ಪ್ರದೇಶ ತೆಗೆದುಕೊಳ್ಳಲಾಗುತ್ತದೆ. ಅಧಿಸೂಚಿತ ನೀರಾವರಿಗೆ 6,032 ಹೆಕ್ಟರ್ ಪ್ರದೇಶ ಕೊಟ್ಟಿದ್ದೇವೆ. ಬ್ಯಾರೇಜ್‌ಗೆ ಸುಮಾರು 24 ಕೋಟಿ ರೂ.ಗಳನ್ನು ಖರ್ಚು ಮಾಡಲಾಗಿದೆ. ಇಲ್ಲಿಯವರೆಗೆ ಆದ ಖರ್ಚು 131.90 ಲಕ್ಷ ರೂ.ಗಳು ಅಕ್ಟೋಬರ್ ಕೊನೆಯಲ್ಲಿ 17.52 ಲಕ್ಷ ರೂ.ಗಳನ್ನು ಖರ್ಚು ಮಾಡಲಾಗಿದೆ. | ದಿನಾಂಕ: 29.11.2018ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ಭೀಮಾ ಏತ ನೀರಾವರಿ ಯೋಜನೆಗೆ ಇಲ್ಲಿಯವರೆಗೆ ರೂ. 801.81 ಕೋಟಿ ಖರ್ಚು ಮಾಡಲಾಗಿದ್ದು, ಈಗಾಗಲೇ 21.858 ಹೆಕ್ಟೇರ್ ಪ್ರದೇಶವನ್ನು ನೀರಾವರಿಗೆ ಒಳಪಡಿಸಲಾಗಿದೆ ಹಾಗೂ 2012ರ ಮಾರ್ಚ್‌ರಿಂದ ಈ ಯೋಜನೆಯಿಂದ ಕಾಲುವೆಗೆ ನೀರು ಹರಿಸಲಾಗುತ್ತಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |

| | | | | |
|---|---|---|---|---|
| | | | ಶೀಘ್ರದಲ್ಲಿಯೇ ಆ ಕೆಲಸವನ್ನು ಪೂರ್ಣಗೊಳಿಸುತ್ತೇವೆ ಎಂದು ಮಾನ್ಯ ಜಲಸಂಪನ್ಮೂಲ ಸಚಿವರು ತಿಳಿಸಿದರು. | |
| 18 | 6182<br>ಚು.ಗು.ಪ್ರ. 2577<br>ಶ್ರೀ ಎಸ್.ವ್ಹಿ. ಸಂಕನೂರ<br>ವಿಪನದಿ:18.11.2015 | ಮುಂಡರಗಿ ತಾಲ್ಲೂಕಿನ ಸಿಂಗಟಾಲೂರು ಏತ ನೀರಾವರಿಯ 3ನೇ ಹಂತದ ಕಾಮಗಾರಿ ಪೂರ್ಣಗೊಳಿಸುವ ಬಗ್ಗೆ. | 3ನೇ ಹಂತದ ಕಾಮಗಾರಿ ಅಂದರೆ ಮುಂಡರಗಿ ಶಾಖಾ ಕಾಲುವೆ (ಕಿ.ಮೀ. 33ರಿಂದ 72 ಕಿ.ಮೀ.ವರೆಗೆ) 1ನೇ ಹಾಗೂ 2ನೇ ಲಿಫ್ಟ್ ಅಡಿ ಹೆಚ್ಚುವರಿ ಪಂಪ್‌ಗಳನ್ನು ಅಳವಡಿಸುವ ಕಾಮಗಾರಿ ಪೈಕಿ ನಾಲಾ ಕಾಮಗಾರಿಗಳು ಪ್ರಗತಿಯಲ್ಲಿದ್ದು, ಹೆಚ್ಚುವರಿ ಪಂಪ್‌ಗಳನ್ನು ಅಳವಡಿಸುವ ಕಾಮಗಾರಿಯ ಟೆಂಡರ್ ಪ್ರಕ್ರಿಯೆ ಜಾರಿಯಲ್ಲಿದೆ. 2018ರಲ್ಲಿ ಈ ಯೋಜನೆಯನ್ನು ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ ಎಂದು ಮಾನ್ಯ ಜಲಸಂಪನ್ಮೂಲ ಸಚಿವರು ತಿಳಿಸಿದರು. | ದಿನಾಂಕ: 29.11.2018ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ಸಿಂಗಟಾಲೂರು ಏತ ನೀರಾವರಿ ಯೋಜನೆಯ 3ನೇ ಹಂತದ ಕಾಮಗಾರಿ ಅಂದರೆ ಮುಂಡರಗಿ ಶಾಖಾ ಕಾಲುವೆ (ಕಿ.ಮೀ. 33 ರಿಂದ 72 ಕಿ.ಮೀ ವರೆಗಿನ ಮುಖ್ಯ ಕಾಲುವೆಯ ಕಾಮಗಾರಿ ಪೂರ್ಣಗೊಂಡಿದ್ದು, ಜೈ–34.29 ಕಿ.ಮೀ.ನಲ್ಲಿ ಜೈ.35.144 ಕಿ.ಮೀ.ನಲ್ಲಿ, ಜೈ.38.80 ಕಿ.ಮೀ. ಮತ್ತು ಜೈ. 49.65 ಕಿ.ಮೀ.ಗಳಲ್ಲಿ ನಿರ್ಮಾಣದ ಕಾರ್ಯವು ಪ್ರಗತಿಯಲ್ಲಿದೆ. ಅಲ್ಲದೇ 1ನೇ ಹಾಗೂ 2ನೇ ಲಿಫ್ಟ್ ಅಡಿ ಹೆಚ್ಚುವರಿ ಪಂಪ್‌ಗಳನ್ನು ಅಳವಡಿಸುವ ಕಾಮಗಾರಿಯು ಪೂರ್ಣಗೊಂಡಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |

## ಸಹಕಾರ ಇಲಾಖೆ

| ಕ್ರಮ ಸಂಖ್ಯೆ | ಆಶ್ವಾಸನೆ ಸಂಖ್ಯೆ ಆಧಾರ ಮತ್ತು ದಿನಾಂಕ | ವಿಷಯ | ಆಶ್ವಾಸನೆ | ತೆಗೆದುಕೊಂಡ ಕ್ರಮ |
|---|---|---|---|---|
| 1. | 6055<br>ಚು.ಗು.ಪ್ರ. : 2298<br>ಶ್ರೀ ವೈ.ಎ.ನಾರಾಯಣ ಸ್ವಾಮಿ<br>ವಿ.ಪ.ನ.ದಿ:<br>24–03–2015 | ಕೋಲಾರ, ಚಿಕ್ಕಬಳ್ಳಾಪುರ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ ವಿಫಲವಾದ ಬಾವಿಗಳಿಗೆ ಸಹಕಾರ ಸಂಘ ಗಳಿಂದ ರೈತರು ಪಡೆದ ಸಾಲವನ್ನು ಮನ್ನಾ ಮಾಡುವ ಬಗ್ಗೆ. | ವಿಫಲವಾದ ಬಾವಿ ಯೋಜನೆಯಡಿಯಲ್ಲಿ ಬಾಕಿ ಇರುವ ಪ್ರಕರಣಗಳಲ್ಲಿ ಪರಿಹಾರ ನೀಡುವ ಕುರಿತು ಮಾನ್ಯ ಮುಖ್ಯಮಂತ್ರಿ ಯವರ ಅಧ್ಯಕ್ಷತೆಯ ಸಭೆಯಲ್ಲಿ ನಿರ್ದಿಷ್ಟವಾಗಿ ಜಿಲ್ಲಾವಾರು ಬೇಡಿಕೆ ಬಂದಲ್ಲಿ, ಅದನ್ನು ಪರಿಶೀಲಿಸಿದ ನಂತರ ಸಚಿವ ಸಂಪುಟಕ್ಕೆ ಸಲ್ಲಿಸಬಹುದೆಂದು ತೀರ್ಮಾನಿಸಲಾಗಿರುತ್ತದೆ.<br><br>ಮೇಲಿನ ಸಭೆಯ ಹಿನ್ನೆಲೆಯಲ್ಲಿ ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳನ್ನು ಒಳಗೊಂಡಂತೆ ಇತರೆ ಜಿಲ್ಲೆಗಳ ವಿಫಲವಾದ ಬಾವಿಗಳಿಗೆ ಪರಿಹಾರ ಮಂಜೂರಾತಿಗಾಗಿ 1577 ಪ್ರಕರಣಗಳಲ್ಲಿ ಅಸಲು ರೂ.149.99 ಲಕ್ಷ ಬಡ್ಡಿ ರೂ.133.59 ಲಕ್ಷಗಳು ಸೇರಿ ಅಂದಾಜು ರೂ.283.58 ಲಕ್ಷ ಕ್ಲೈಂ ಬಾಕಿಯಿರುವುದಾಗಿ ವರದಿ ಮಾಡಿದ್ದು, ಸರ್ಕಾರದ ಪರಿಶೀಲನೆಯಲ್ಲಿರುತ್ತದೆ ಎಂದು | ದಿನಾಂಕ: 23.8.2018ರಂದು ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು. ದಿನಾಂಕ: 17.10.2013 ರಂದು ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ತೀರ್ಮಾನದಂತೆ ವಿಫಲ ಬಾವಿ ಪರಿಹಾರಕ್ಕಾಗಿ ಜಿಲ್ಲಾವಾರು ಬೇಡಿಕೆಗಳನ್ನು ಪರಿಶೀಲಿಸಲು ಸಚಿವ ಸಂಪುಟ ಸಭೆಯ ಅನುಮೋದನೆ ಪಡೆದು ವಿಫಲ ಬಾವಿ ಪರಿಹಾರ ಯೋಜನೆಯಡಿ 1431 ಪ್ರಕರಣಗಳಲ್ಲಿ ಬಾಕಿ ಇರುವ ಸಾಲದ ಅಸಲು ಮತ್ತು ಬಡ್ಡಿ ಮೊತ್ತವನ್ನು ಮನ್ನಾ ಮಾಡಲು ನಿರ್ಧರಿಸಲಾಗಿರುತ್ತದೆ.<br><br>ಸರ್ಕಾರದ ಆದೇಶ ಸಂಖ್ಯೆ: ಸಿಓ 382 ಸಿಎಲ್‌ಎಸ 2016 (ಭಾಗ–1), ದಿ: 23.3.2017ರಲ್ಲಿ ಒಟು 1431 ವಿಫಲ ತೋಡುಬಾವಿ ಪ್ರಕರಣಗಳಲ್ಲಿ ಬಾಕಿ ಇರುವ ಸಾಲದ ಅಸಲು ಮತ್ತು ಬಡ್ಡಿ ಒಟ್ಟು ರೂ. 263.64 ಲಕ್ಷಗಳನ್ನು ಮನ್ನಾ ಮಾಡಲು ಬಿಡುಗಡೆ ಮಾಡಿದೆ. ನಂತರ ಅವಧಿಯಲ್ಲಿ 429 ಸಾಲಗಾರರು ರೂ. 38.85 ಲಕ್ಷಗಳನ್ನು ಸ್ವ–ಇಚ್ಛೆಯಿಂದ ಮರು ಪಾವತಿಸಿದ ಕಾರಣದಿಂದ ಸರ್ಕಾರ ಬಿಡುಗಡೆ ಮಾಡಿದ ಮೊತ್ತದ ಪೈಕಿ 1002 ಪ್ರಕರಣಗಳಿಗೆ ಸಂಬಂಧಿಸಿದ ಸುಸ್ತಿ ಬಾಕಿ ಮೊತ್ತ ರೂ.224.79 ಲಕ್ಷಗಳನ್ನು ಮಾತ್ರ ಸಂಬಂಧಪಟ್ಟ ಸಾಲಗಾರರ ಖಾತೆಗೆ ಜಮಾ ನೀಡಿ ಬಿಡುಗಡೆ ಮಾಡಿದೆ. ಈ ಪೈಕಿ ಉಳಿದ ಮೊತ್ತ ರೂ. 38.85 ಲಕ್ಷಗಳನ್ನು ಸರ್ಕಾರಕ್ಕೆ ದಿನಾಂಕ: 16.3.2018ರಂದು ಮರುಪಾವತಿಸಲಾಗಿರುತ್ತದೆ. ಈ ಸಾಲ ಮನ್ನಾ ಯೋಜನೆಯಲ್ಲಿ ಕೋಲಾರ, ಚಿಕ್ಕಬಳ್ಳಾಪುರ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಗಳ ಪಿಕಾರ್ಡ್ ಬ್ಯಾಂಕುಗಳಲ್ಲಿ ವಿಲೇವಾರಿಗೆ ಬಾಕಿ ಇದ್ದ ವಿಫಲತೋಡು ಬಾವಿ ಪ್ರಕರಣಗಳಲ್ಲಿ ಎಲ್ಲಾ ಅರ್ಹ ಪ್ರಕರಣಗಳು ವಿಲೇವಾರಿಯಾಗಿದ್ದು, ಬಾಕಿ ಇರುವುದಿಲ್ಲ.<br><br>ಸರ್ಕಾರವು ಘೋಷಿಸಿದಂತೆ, ಯೋಜನೆಯು ಸಂಪೂರ್ಣವಾಗಿ ಅನುಷ್ಠಾನವಾಗಿರುತ್ತದೆಯೆಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ಸಮಿತಿಯು ತೀರ್ಮಾನಿಸಿತು. |

| | | | | |
|---|---|---|---|---|
| | | | ಮಾನ್ಯ ಸಹಕಾರ ಮತ್ತು ಸಕ್ಕರೆ ಸಚಿವರು ತಿಳಿಸಿದರು. | |
| 2. | 6057<br>ಚು.ರ.ಪ್ರ.: 1560<br>**ಶ್ರೀ ಎಂ.ಡಿ.ಲಕ್ಷ್ಮೀನಾರಾಯಣ** (ಅಣ್ಣಯ್ಯ)<br>ವಿ.ಪ.ನ.ದಿ:<br>17–03–2015 | ರೈತರು ಬೆಳೆದ ಪದಾರ್ಥಗಳನ್ನು ಇ–ಟೆಂಡರ್‌ನಿಂದ ಮಾರಾಟ ಮಾಡಲು ಅವಕಾಶ ಕಲ್ಪಿಸಿ ಕೊಡುವ ಬಗ್ಗೆ. | ಮಾರುಕಟ್ಟೆ ಕಾಯ್ದೆಯಡಿಯಲ್ಲಿ ಬಹಿರಂಗ ಹರಾಜು, ಪರಸ್ಪರ ಒಪ್ಪಂದ, ಟೆಂಡರ್ ಪದ್ದತಿ ಮೂಲಕ ಮಾರಾಟದ ಬೆಲೆಯನ್ನು ನಿರ್ಧರಿಸಲು ನಿಗದಿಪಡಿಸಿದೆ.<br>ಇ–ಟೆಂಡರ್ ಪದ್ದತಿಯನ್ನು 51 ಕೃಷಿ ಉತ್ಪನ್ನ ಮಾರುಕಟ್ಟೆಗಳಲ್ಲಿ ಜಾರಿಗೆ ತರಲಾಗಿದೆ. ಹಂತ ಹಂತವಾಗಿ ಉಳಿದ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಲ್ಲಿ ಇ–ಟೆಂಡರ್ ಪದ್ದತಿಯನ್ನು<br>ಜಾರಿಗೊಳಿಸಲಾಗುವುದು ಎಂದು ಮಾನ್ಯ ತೋಟಗಾರಿಕೆ ಮತ್ತು ಕೃಷಿ ಮಾರುಕಟ್ಟೆ ಸಚಿವರು ತಿಳಿಸಿದರು. | ದಿನಾಂಕ: 23.8.2018ರಂದು ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು. ರಾಷ್ಟ್ರದಲ್ಲಿಯೇ ಪ್ರಪ್ರಥಮವಾಗಿ ಕರ್ನಾಟಕ ಸರ್ಕಾರ ಕೃಷಿಕರ ಸಬಲೀಕರಣಕ್ಕಾಗಿ ಕರ್ನಾಟಕ ಕೃಷಿ ಮಾರಾಟ ನೀತಿಯನ್ನು ಅನುಷ್ಠಾನಗೊಳಿಸಿ, ರಾಜ್ಯದ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಲ್ಲಿ ಏಕೀಕೃತ ಮಾರುಕಟ್ಟೆ ವೇದಿಕೆ (ಇ–ಮಾರ್ಕೆಟ್)ನ್ನು ಸ್ಥಾಪಿಸಿದೆ.<br><br>162 ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳ ಪೈಕಿ ಈಗಾಗಲೇ 160 ಮಾರುಕಟ್ಟೆ ಸಮಿತಿಗಳು ಏಕೀಕೃತ ಮಾರುಕಟ್ಟೆ ವೇದಿಕೆಯಲ್ಲಿ ಕಾರ್ಯನಿರ್ವಹಿಸುತ್ತಿವೆ. ಅದರಲ್ಲಿ, 65 ಮಾರುಕಟ್ಟೆಗಳಲ್ಲಿ ಇ–ಟೆಂಡರ್ ಪದ್ಧತಿ ಜಾರಿಯಲ್ಲಿದೆ.<br><br>ಕೃಷಿ ಉತ್ಪನ್ನಗಳ ಗುಣಸ್ವರೂಪ, ಆವಕದ ಪ್ರಮಾಣ, ಪೇಟೆ ಕಾರ್ಯಕರ್ತರ ಭಾಗವಹಿಸುವಿಕೆ ಅಂಶಗಳಿಂದಾಗಿ ಉಳಿದೆ ಮಾರುಕಟ್ಟೆ ಸಮಿತಿಗಳಲ್ಲಿ ಕಾಯ್ದೆಯಲ್ಲಿ ಅವಕಾಶ ಕಲ್ಪಿಸಿರುವಂತೆ ಇತರೆ ಮಾರಾಟ ಪದ್ಧತಿಗಳಾದ ಬಹಿರಂಗ ಹರಾಜು, ಪರಸ್ಪರ ಒಪ್ಪಂದ, ನೇರ ಖರೀದಿ ಮೂಲಕ ದರ ನಿರ್ಧರಣೆ ಆಗುತ್ತಿದ್ದು, ಸಮಿತಿಗಳಲ್ಲಿ ವಹಿವಾಟಿನ ಗಣಕೀಕೃತ ಮಾರಾಟ ಬಿಲ್ಲು, ದಾಸ್ತಾನು ನಿರ್ವಹಣೆ ಹಾಗೂ ಇ–ಪರ್ಮಿಟ್ ಪದ್ದತಿ ಜಾರಿಗೊಳಿಸಲಾಗಿದೆಯೆಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ಸಮಿತಿಯು ತೀರ್ಮಾನಿಸಿತು. |
| 3. | 6058<br>ಚು.ರ.ಪ್ರ.: 1595<br>ಶ್ರೀಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ<br>ವಿ.ಪ.ನ.ದಿ: 17–03–2015 | ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ರೈತ ಭವನಗಳನ್ನು ನಿರ್ಮಿಸುವ ಬಗ್ಗೆ. | ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳು ಮಾರುಕಟ್ಟೆ ಪ್ರಾಂಗಣಗಳಲ್ಲಿ ರೈತರ ಅನುಕೂಲಕ್ಕಾಗಿ ರೈತ ಭವನಗಳನ್ನು ಮಾರುಕಟ್ಟೆ ನಿಧಿಯಿಂದ ನಿರ್ಮಿಸಲು ಕ್ರಮ ವಹಿಸಲಾಗುತ್ತಿದೆ. ರಾಜ್ಯದಲ್ಲಿರುವ ಒಟ್ಟು 156 ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳ ಪೈಕಿ | ದಿನಾಂಕ: 23.8.2018ರಂದು ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು. ರಾಜ್ಯದಲ್ಲಿ ಒಟ್ಟು 162 ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳನ್ನು ಸ್ಥಾಪಿಸಿದ್ದು, ಕಾರ್ಯನಿರ್ವಹಿಸುತ್ತಿವೆ. ಅಧಿಸೂಚಿತ ಕೃಷಿ ಉತ್ಪನ್ನಗಳ ಮಾರಾಟ ಚಟುವಟಿಕೆಗೆ ಅಗತ್ಯವಾಗಿ ಪ್ರಾಂಗಣಗಳನ್ನು ಅಭಿವೃದ್ಧಿ ಪಡಿಸಲು ಮಾರುಕಟ್ಟೆ ಸಮಿತಿಗಳು ವಾರ್ಷಿಕ ಕ್ರಿಯಾ ಯೋಜನೆ ರೂಪಿಸಿಕೊಂಡು ಅನುಮೋದನೆ ಪಡೆದು ಅನುಷ್ಠಾನಗೊಳಿಸುತ್ತಿದೆ. |

| | | | | |
|---|---|---|---|---|
| | | | 120 ಮಾರುಕಟ್ಟೆ ಸಮಿತಿಗಳು ರೈತ ಭವನ ನಿರ್ಮಿಸಿದೆ. 7 ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಲ್ಲಿ 2015–16ನೇ ಸಾಲಿನಲ್ಲಿ ರೈತ ಭವನ ನಿರ್ಮಿಸಲು ಉದ್ದೇಶಿಸಲಾಗಿದೆ. ಉಳಿದ ಮಾರುಕಟ್ಟೆಗಳಲ್ಲಿ ಪ್ರಾಂಗಣದಲ್ಲಿನ ವಹಿವಾಟು ಆಧರಿಸಿ ಸಮಿತಿಯ ಸಂಪನ್ಮೂಲವನ್ನು ಗಮನದಲ್ಲಿಟ್ಟು ರೈತ ಭವನ ನಿರ್ಮಿಸಲು ಕ್ರಮ ವಹಿಸಲಾಗುವುದೆಂದು ಎಂದು ಮಾನ್ಯ ತೋಟಗಾರಿಕೆ ಮತ್ತು ಕೃಷಿ ಮಾರುಕಟ್ಟೆ ಸಚಿವರು ತಿಳಿಸಿದರು. | ಪ್ರಸ್ತುತ, 162 ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳ ಪೈಕಿ 119 ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಲ್ಲಿ ಹಾಗೂ 24 ಉಪ ಮಾರುಕಟ್ಟೆಗಳಲ್ಲಿ ರೈತ ಭವನ ನಿರ್ಮಿಸಲಾಗಿದೆ.<br><br>ಉಳಿದ ಮಾರುಕಟ್ಟೆ ಸಮಿತಿಗಳ ಪ್ರಾಂಗಣದಲ್ಲಿ ವಹಿವಾಟು ಅಲ್ಪ ಪ್ರಮಾಣದಲ್ಲಿರುತ್ತದೆ ಹಾಗೂ ಹಲವು ಮಾರುಕಟ್ಟೆ ಸಮಿತಿಗಳಲ್ಲಿ ಮಾರುಕಟ್ಟೆ ಪ್ರಾಂಗಣಗಳು ಇರುವುದಿಲ್ಲ. ಈ ಕಾರಣಗಳಿಂದಾಗಿ ರೈತಭವನ ನಿರ್ಮಾಣ ಕೈಗೊಂಡಿರುವುದಿಲ್ಲ. ಸಮಿತಿಯ ಆರ್ಥಿಕ ಪರಿಸ್ಥಿತಿ, ಸ್ಥಳಾವಕಾಶ ಲಭ್ಯತೆಗಳಿಗನುಗುಣವಾಗಿ ರೈತ ಭವನ ನಿರ್ಮಿಸುವ ಬಗ್ಗೆ ಕ್ರಮ ವಹಿಸಲಾಗುವುದೆಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ಸಮಿತಿಯು ತೀರ್ಮಾನಿಸಿತು. |
| 4. | 6062<br>ಚು.ಗು.ಪ್ರ: 2854<br>ಶ್ರೀ ಆರ್. ಧರ್ಮಸೇನ<br>ವಿ.ಪ.ನ.ದಿ: 13–06–2017 | ಕೃಷಿ ಉತ್ಪನ್ನ ಮಾರುಕಟ್ಟೆಗಳಲ್ಲಿ ಉಪಯೋಗಿಸುತ್ತಿರುವ ತೂಗು ಯಂತ್ರಗಳು ಅನೇಕ ಕಡೆಗಳಲ್ಲಿ ದೋಷಪೂರಿತವಾಗಿರುವ ಬಗ್ಗೆ. | ಟಿ. ನರಸೀಪುರ ಕೃಷಿ ಉತ್ಪನ್ನ ಮಾರುಕಟ್ಟೆಯ ಒಳಗಡೆ ಇರುವ ವೇಬ್ರಿಡ್ಜ್‌ನಲ್ಲಿ ಏನಾದರೂ ತೊಂದರೆಗಳಿದ್ದರೆ ಅದನ್ನು ಪರೀಕ್ಷೆ ಮಾಡುವ ಬಗ್ಗೆ ಕ್ರಮ ತೆಗೆದುಕೊಳ್ಳತ್ತೇನೆಂದು ಮಾನ್ಯ ತೋಟಗಾರಿಕೆ ಮತ್ತು ಕೃಷಿ ಮಾರುಕಟ್ಟೆ ಸಚಿವರು ತಿಳಿಸಿದರು. | ದಿನಾಂಕ: 23.8.2018ರಂದು ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು. ರಾಜ್ಯದಲ್ಲಿ ಒಟ್ಟು 162 ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳು ಕಾರ್ಯನಿರ್ವಹಿಸುತ್ತಿದ್ದು, 112 ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಲ್ಲಿ ವೇಬ್ರಿಡ್ಜ್ ಹೊಂದಿರುತ್ತದೆ.<br><br>ತೂಗು ಯಂತ್ರಗಳನ್ನು ಪ್ರತಿ ವರ್ಷ ಕಾನೂನು ಮಾಪನ ಶಾಸ್ತ್ರ ಇಲಾಖೆಯ ವತಿಯಿಂದ ತೂಕದ ನಿಖರತೆ ಬಗ್ಗೆ ಪರಿಶೀಲನೆ ಕೈಗೊಂಡು ಸ್ಟಾಂಪಿಂಗ್ ಮಾಡಲಾಗುತ್ತದೆ. ಇದಲ್ಲದೆ, ಬರುವ ಸಣ್ಣ ಪುಟ್ಟ ದೋಷಗಳನ್ನು ಸಮಿತಿಗಳು ತಮ್ಮ ಹಂತದಲ್ಲಿಯೇ ಸರಿಪಡಿಸಿಕೊಳ್ಳಲು ಕ್ರಮ ವಹಿಸುತ್ತವೆ.<br><br>ಟಿ.ನರಸೀಪುರ ಸಮಿತಿಯ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿರುವ ವೇಬ್ರಿಡ್ಜ್ ದುರಸ್ಥಿಯಲ್ಲಿದ್ದು, ವೇಬ್ರಿಡ್ಜ್ ಯಂತ್ರದ ಪ್ರದೇಶವು ತಗ್ಗು ಪ್ರದೇಶದಲ್ಲಿರುವುದರಿಂದ ಟಿ.ನರಸೀಪುರ ನಂಜನಗೂಡು ಮುಖ್ಯ ರಸ್ತೆಗೆ ಅನುಗುಣವಾಗಿ ತಗ್ಗು ಪ್ರದೇಶವನ್ನು ಎತ್ತರಿಸಬೇಕಾಗಿದ್ದು, ಅದಕ್ಕೆ ತಕ್ಕಂತೆ ಕಾಂಕ್ರೀಟ್ ರಸ್ತೆ ಕಾಮಗಾರಿಯನ್ನು ಕೈಗೊಳ್ಳಬೇಕಾಗಿರುತ್ತದೆ. |

| | | | | |
|---|---|---|---|---|
| | | | | ವೇಬ್ರಿಡ್ಜ್ ಯಂತ್ರದ ಪ್ರದೇಶವನ್ನು ಎತ್ತರಿಸುವ ಸಿವಿಲ್ ಕಾಮಗಾರಿ ಕೈಗೊಳ್ಳಲು ಅಂದಾಜು ಪಟ್ಟಿ ತಯಾರಿಸಿಕೊಡುವಂತೆ ತಾಂತ್ರಿಕ ವಿಭಾಗದವರನ್ನು ಕೋರಲಾಗಿದೆ. ಸದರಿ ಯಂತ್ರವನ್ನು ದುರಸ್ಥಿಪಡಿಸುವ ಬಗ್ಗೆ ಏಜೆನ್ಸಿದಾರರೊಂದಿಗೆ ಚರ್ಚಿಸಲಾಗಿದ್ದು, ದುರಸ್ಥಿಪಡಿಸಲು ಕ್ರಮವಹಿಸಲಾಗಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಸಮಿತಿಯು ಒಪ್ಪಿ, ಭರವಸೆಯನ್ನು ಮುಕ್ತಾಯಗೊಳಿಸಿತು. |
| 5. | 6062ಎ<br>ಚು.ಗು.ಪ್ರ: 2809<br>ಶ್ರೀಸಯದ್ ಮುಧೀರ್ ಆಗಾ<br>ವಿ.ಪ.ನ.ದಿ:<br>13-06-2017 | ಕೃಷಿ ಉತ್ಪನ್ನ ಮಾರುಕಟ್ಟೆ ಪ್ರಾಂಗಣದಲ್ಲಿಯೇ ವೇಬ್ರಿಡ್ಜ್‌ಗಳನ್ನು ಅಳವಡಿಸಿ ರೈತರ ಕೃಷಿ ಸಾಮಗ್ರಿಗಳಿಗೆ ಉತ್ತಮ ತೂಕ ವ್ಯವಸ್ಥೆ ಕಲ್ಪಿಸಲು ಸರ್ಕಾರದ ಕ್ರಮದ ಬಗ್ಗೆ. | ಮಾರುಕಟ್ಟೆ ಪ್ರಾಂಗಣಗಳಲ್ಲಿ ಲೈಸೆನ್ಸ್ ಪಡೆದ ಪೇಟೆ ಕಾರ್ಯಕರ್ತರು ಎಲೆಕ್ಟ್ರಾನಿಕ್ ತೂಕದ ಯಂತ್ರ ಹೊಂದುವುದು ಕಡ್ಡಾಯಗೊಳಿಸಿದ್ದು, ಅದರ ಮೂಲಕ ತೂಕ ಕಾರ್ಯನಿರ್ವಹಣೆಗೆ ಅವಕಾಶಿಸಿದೆ. ಪ್ರಾಂಗಣಗಳಿಗೆ ಬರುವ ಉತ್ಪನ್ನದ ಆವಕ, ಸಮಿತಿಯ ಸಂಪನ್ಮೂಲ ಹಾಗೂ ಬೇಡಿಕೆಗಳನ್ನು ಗಮನದಲ್ಲಿಟ್ಟು ಮಾರುಕಟ್ಟೆ ಸಮಿತಿಗಳು ಪ್ರಾಂಗಣಗಳಲ್ಲಿ ವೇಬ್ರಿಡ್ಜ್ ಸ್ಥಾಪನೆಗೆ ಕ್ರಮ ವಹಿಸಲಾಗುವುದು ಎಂದು ಮಾನ್ಯ ತೋಟಗಾರಿಕೆ ಮತ್ತು ಕೃಷಿ ಮಾರುಕಟ್ಟೆ ಸಚಿವರು ತಿಳಿಸಿದರು. | ದಿನಾಂಕ: 23.8.2018ರಂದು ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು. ರಾಜ್ಯದಲ್ಲಿ ಒಟ್ಟು 162 ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳು ಕಾರ್ಯನಿರ್ವಹಿಸುತ್ತಿದ್ದು, 112 ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಲ್ಲಿ ವೇಬ್ರಿಡ್ಜ್ ಹೊಂದಿರುತ್ತವೆ.<br><br>ಸಮಿತಿಯ ಪ್ರಾಂಗಣದಲ್ಲಿನ ಉತ್ಪನ್ನಗಳ ಆವಕ, ವೇಬ್ರಿಡ್ಜ್ ಮೂಲಕ ತೂಕದ ಅಗತ್ಯತೆ, ಮಾರುಕಟ್ಟೆ ಸಮಿತಿಯ ಸಂಪನ್ಮೂಲ ಹಾಗೂ ಬೇಡಿಕೆ ಇವುಗಳನ್ನು ಆಧರಿಸಿ ಆಯಾ ಮಾರುಕಟ್ಟೆ ಸಮಿತಿಗಳು ವೇಬ್ರಿಡ್ಜ್ ಸ್ಥಾಪನೆಗೆ ಕ್ರಮ ವಹಿಸುತ್ತವೆ. ಮಾರುಕಟ್ಟೆ ಸಮಿತಿಗಳಲ್ಲು ಸಂಪನ್ಮೂಲದ ಕೊರತೆ ಇದ್ದು, ವೇಬ್ರಿಡ್ಜ್ ಸ್ಥಾಪನೆಗೆ ಬೇಡಿಕೆ ಇದ್ದಲ್ಲಿ ಖಾಸಗಿಯವರು ಮಾರುಕಟ್ಟೆ ಪ್ರಾಂಗಣದಲ್ಲಿ ವೇಬ್ರಿಡ್ಜ್ ಸ್ಥಾಪನೆಗೆ ಲೀಸ್ ಕಂ ಸೇಲ್ ಆಧಾರದ ಮೇಲೆ ನಿವೇಶನವನ್ನು ಹಂಚಿಕೆ ಮಾಡಲಾಗುತ್ತಿದ್ದು, ನಿರಂತಹ ಪ್ರಕ್ರಿಯೆಯಾಗಿರುತ್ತದೆಯೆಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಸಮಿತಿಯು ಒಪ್ಪಿ, ಭರವಸೆಯನ್ನು ಮುಕ್ತಾಯಗೊಳಿಸಿತು. |
| 6 | 6063<br>ಚು.ಗು.ಪ್ರ: 2919<br>ಶ್ರೀ ಆರ್. ಚೌಡರೆಡ್ಡಿ ತೂಪಲ್ಲಿ<br>ವಿ.ಪ.ನ.ದಿ:<br>13-06-2017 | ಕೃಷಿ ಮಾರುಕಟ್ಟೆ ಇಲಾಖೆಯಲ್ಲಿ ರಾಷ್ಟ್ರೀಯ ಇ-ಮಾರುಕಟ್ಟೆ ಸೇವೆ ಬಗ್ಗೆ. | ಮಾರುಕಟ್ಟೆ ಪ್ರವೇಶ ದ್ವಾರದಲ್ಲಿ ರೈತರು ದಲ್ಲಾಲರು ಹಾಗೂ ಉತ್ಪನ್ನದ ವಿವರದ ಗಣಕೀಕರಣ, ಖರೀದಿದಾರರಿಗೆ ಮಾಹಿತಿ ಇ-ಟೆಂಡರ್ ನಂತರದ ದಾಖಲೆಗಳ ಗಣಕೀಕರಣ ಹಾಗೂ ಹಣ ಪಾವತಿಗೆ ಸಂಬಂಧಿಸಿದಂತೆ ಸೌಲಭ್ಯಗಳನ್ನು | ದಿನಾಂಕ: 23.8.2018ರಂದು ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು. ಕೃಷಿ ಮಾರಾಟ ನೀತಿ 2013ನ್ನು ಸರ್ಕಾರವು ಅಂಗೀಕರಿಸಿದ್ದು, ಅದನ್ನು ಜಾರಿಗೊಳಿಸಲು ರೆಮ್ಸ್ ಸಂಸ್ಥೆಯನ್ನು ಸ್ಥಾಪಿಸಿ ಏಕೀಕೃತ ಮಾರುಕಟ್ಟೆ ವೇದಿಕೆ ನಿರ್ವಹಿಸುತ್ತಿದ್ದು, ಅದರಿಂದ ಎಲೆಕ್ಟ್ರಾನಿಕ್ ಹರಾಜು ಪದ್ಧತಿ ಜಾರಿ ಮೂಲಕ ಮಾರಾಟವಾದ ಉತ್ಪನ್ನಗಳ ಬೆಲೆ ಪಾರದರ್ಶಕವಾಗಿ ನಿಗಧಿಪಡಿಸಲು ಸಹಾಯವಾಗುತ್ತದೆ.<br>ಹರಾಜು ಪ್ರಕ್ರಿಯೆ ಮೊದಲು ಹಾಗೂ ನಂತರದ ಪ್ರಕ್ರಿಯೆಗಳನ್ನು ಜೋಡಿಸುವುದು/ಒಂದು ಗೂಡಿಸುವುದು, ಮುಖ್ಯವಾಗಿ ತೂಕ, ಬಿಲ್ಲುಗಳ |

| | | | | |
|---|---|---|---|---|
| | | | ಕಲ್ಪಿಸಲು ರೆಮ್ಸ್ ಸಂಸ್ಥೆ ಕ್ರಮವಹಿಸುತ್ತದೆ ಎಂದು ಮಾನ್ಯ ತೋಟಗಾರಿಕೆ ಮತ್ತು ಕೃಷಿ ಸಚಿವರು ತಿಳಿಸಿದರು. | ಸಿದ್ದಪಡಿಸುವಿಕೆ, ಮಾರುಕಟ್ಟೆ ಶುಲ್ಕ ಆಕರಣೆ, ಲೆಕ್ಕಪತ್ರ ನಿರ್ವಹಣೆ, ಮಾರಾಟ ಮೌಲ್ಯದ ಹಣವನ್ನು ನೇರವಾಗಿ ರೈತರಿಗೆ ಪಾವತಿಸುವುದು, ಇವುಗಳಿಂದಾಗಿ ಕೆಲಸಗಳ ಪುನರಾವರ್ತನೆ ಗೊಳ್ಳುವುದು ಹಾಗೂ ಅನಧಿಕೃತ ಚಟುವಟಿಕೆಗಳ ನಿಯಂತ್ರಣ ಸಾಧ್ಯವಾಗುತ್ತದೆ.<br><br>ಹೆಚ್ಚಿನ ಸಂಖ್ಯೆಯಲ್ಲಿ ರಾಜ್ಯದ ಹಾಗೂ ಹೊರ ರಾಜ್ಯದ ಖರೀದಿದಾರರು ಖರೀದಿ ಪ್ರಕ್ರಿಯೆಯಲ್ಲಿ ಭಾಗವಹಿಸುವುದರಿಂದ ಉತ್ಪನ್ನದ ನಿಜವಾದ ಬೆಲೆ ನಿರ್ಧರಣೆಗೆ ಸಹಾಯವಾಗುತ್ತದೆ.<br><br>ಉಗ್ರಾಣಗಳನ್ನು ಪ್ರಮಾಣೀಕರಿಸುವುದು ಹಾಗೂ ಅವುಗಳನ್ನು ಮಾರುಕಟ್ಟೆಗಳಿಗೆ ಜೋಡಣೆ ಮಾಡುವುದರ ಮೂಲಕ ರೈತರು ತಮ್ಮ ಉತ್ಪನ್ನಗಳನ್ನು ಅಂತಹ ಉಗ್ರಾಣಗಳಲ್ಲಿ ದಾಸ್ತಾನು ಮಾಡುವುದರ ಮೂಲಕ ವಹಿವಾಟು ನಡೆಸಲು ಸಾಧ್ಯವಾಗುವುದು, ಇದರಿಂದಾಗಿ ಸಾಗಾಣಿಕೆ ವೆಚ್ಚ ಕಡಿಮೆ ಮಾಡಬಹುದಾಗಿದೆ ಮತ್ತು ಎಲ್ಲಾ ಮಾರುಕಟ್ಟೆಗಳಲ್ಲಿನ ಖರೀದಿದಾರರನ್ನು ಆಕರ್ಷಿಸಲು ಸಾಧ್ಯವಾಗುತ್ತದೆ.<br><br>ರೈತರು ತಮ್ಮ ಉತ್ಪನ್ನಗಳನ್ನು ದಾಸ್ತಾನು ಮಾಡಿ ಅದರ ಮೇಲೆ ಸಾಲ ಪಡೆಯಲು ಅವಕಾಶವಿರುತ್ತದೆ. ಇದರಿಂದಾಗಿ ಹತಾಶೆ ಮಾರಾಟ ತಪ್ಪಿಸಬಹುದಾಗಿದೆ.<br><br>ವರ್ಗೀಕರಣ ಆಧಾರಿತ ಹರಾಜು ಹಾಗೂ ಬೆಲೆ ನಿರ್ಧರಣೆ ಪದ್ಧತಿ ಜಾರಿ ಮೂಲಕ ರೈತರ ಗುಣಮಟ್ಟದ ಉತ್ಪನ್ನಗಳಿಗೆ ಸ್ಪರ್ಧಾತ್ಮಕ ಧಾರಣೆ ದೊರೆಯುತ್ತದೆ.<br><br>ಮಾರುಕಟ್ಟೆ ಪ್ರವೇಶ ದ್ವಾರದಲ್ಲಿ ರೈತರು ದಲ್ಲಾಲರು ಹಾಗೂ ಉತ್ಪನ್ನದ ವಿವರದ ಗಣಕೀಕರಣ, ಖರೀದಿದಾರರಿಗೆ ಮಾಹಿತಿ ಇ–ಟೆಂಡರ್ ನಂತರದ ದಾಖಲೆಗಳ ಗಣಕೀಕರಣ ಹಾಗೂ ಹಣ ಪಾವತಿಗೆ ಸಂಬಂಧಿಸಿದಂತೆ ಸೌಲಭ್ಯಗಳನ್ನು ಕಲ್ಪಿಸಲು ರೆಮ್ಸ್ ಸಂಸ್ಥೆ ಕ್ರಮವಹಿಸುತ್ತಿದೆ. |

<table>
<tr><td></td><td></td><td></td><td></td><td>ಪ್ರಾಯೋಗಿಕವಾಗಿ ಚಾಮರಾಜನಗರ, ತಿಪಟೂರು ಗದಗ ಜಿಲ್ಲೆ ಹುಬ್ಬಳ್ಳಿ ಸಮಿತಿಗಳಲ್ಲಿ ಆನ್‌ಲೈನ್ ಮೂಲಕ ಮಾರಾಟದ ಮೌಲ್ಯ ಪಾವತಿಗೆ ಕ್ರಮ ವಹಿಸಿದ್ದು, 830 ರೈತರ ಖಾತೆಗೆ ರೂ. 6.17 ಕೋಟಿ ಪಾವತಿಯಾಗಿರುತ್ತದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಸಮಿತಿಯು ಒಪ್ಪಿ, ಭರವಸೆಯನ್ನು ಮುಕ್ತಾಯಗೊಳಿಸಿತು.</td></tr>
<tr><td>7.</td><td>6064<br>ಚು.ಗು.ಪ್ರ.: 2910<br>ಶ್ರೀ ವಿಜಯಸಿಂಗ್<br>ವಿ.ಪ.ನ.ದಿ:<br>13-06-2017</td><td>ಕೃಷಿ ಉತ್ಪನ್ನ ಮಾರುಕಟ್ಟೆಯಲ್ಲಿ ಸಿಬ್ಬಂದಿಗಳ ಕೊರತೆ ಇರುವುದರ ಕುರಿತು.</td><td>ಬೀದರ್ ಜಿಲ್ಲೆಯ ವ್ಯಾಪ್ತಿಯಲ್ಲಿರುವ ಮಾರುಕಟ್ಟೆಗಳಲ್ಲಿ ಪ್ರಸ್ತುತ 57 ಖಾಲಿ ಹುದ್ದೆಗಳಿದ್ದು, ಖಾಲಿ ಇರುವ ಹುದ್ದೆಗಳ ನೇರನೇಮಕಾತಿಗೆ ಲಭ್ಯವಿರುವ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಕೃಷಿ ಮಾರಟ ಇಲಾಖೆಯ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ ಎಂದು ಮಾನ್ಯ ತೋಟಗಾರಿಕೆ ಮತ್ತು ಕೃಷಿ ಸಚಿವರು ತಿಳಿಸಿದರು.</td><td>ಕೃಷಿ ಮಾರುಕಟ್ಟೆ ಇಲಾಖೆಯ ಬೀದರ್ ಜಿಲ್ಲೆಯ ವ್ಯಾಪ್ತಿಯಲ್ಲಿರುವ ಮಾರುಕಟ್ಟೆ ಸಮಿತಿಗಳು ಹೈದ್ರಾಬಾದ್ ಕರ್ನಾಟಕ ವೃಂದದ ವ್ಯಾಪ್ತಿಗೆ ಒಳಪಟ್ಟಿದ್ದು, ಹೈದ್ರಾಬಾದ್ ಕರ್ನಾಟಕ ಸ್ಥಳೀಯ ವೃಂದಕ್ಕೆ ಈ ಕೆಳಕಂಡಂತೆ ಹುದ್ದೆಗಳು ಮಂಜೂರಾಗಿರುತ್ತದೆ.
<table>
<tr><th>ಮಂಜೂರಾದ ಒಟ್ಟು ಹುದ್ದೆಗಳು ಅಧಿಕಾರಿ/ಸಿಬ್ಬಂದಿಗಳನ್ನು ಒಳಗೊಂಡಂತೆ</th><th>ಭರ್ತಿಯಾದ ಹುದ್ದೆಗಳು</th><th>ಖಾಲಿ ಇರುವ ಹುದ್ದೆಗಳು (ಪದೋನ್ನತಿ/ನೇರ ನೇಮಕಾತಿಯನ್ನೊಳಗೊಂಡಂತೆ</th></tr>
<tr><td>529</td><td>145</td><td>226</td></tr>
</table>
ಮೇಲಿನ ಹುದ್ದೆಗಳಲ್ಲಿ ದಿನಾಂಕ: 1.1.2015 ಮತ್ತು 01.10.2016ರ ಅಂತ್ಯಕ್ಕೆ ನೇರ ನೇಮಕಾತಿಯಡಿ ಲಭ್ಯವಿರುವ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ ನಿರ್ದೇಶನಾಲಯವು ಕ್ರಮವಹಿಸುತ್ತಿದೆ.
<table>
<tr><th>ಕ್ರ. ಸಂ.</th><th>ಪದವೃಂದ</th><th>ನೇರ ನೇಮಕಾತಿಗೆ ಕೋರಲಾದ ಹುದ್ದೆಗಳ ಸಂಖ್ಯೆ</th><th>ಕೆ.ಪಿ.ಎಸ್.ಸಿ. ಯಿಂದ ಹಂಚಿಕೆ ಮಾಡಲಾದ ಹುದ್ದೆಗಳ ಸಂಖ್ಯೆ</th><th>ನೇಮಕಾತಿ ಆದೇಶ ಹೊರಡಿಸಲಾದ ಹುದ್ದೆಗಳ ಸಂಖ್ಯೆ</th></tr>
<tr><td>1</td><td>ಸಹಾಯಕ ನಿರ್ದೇಶಕರು</td><td>2</td><td>1</td><td>1</td></tr>
<tr><td>2</td><td>ಸಹಾಯಕ ಅಭಿಯಂತರರು</td><td>4</td><td>4</td><td>2</td></tr>
</table>
</td></tr>
</table>

| | | | | |
|---|---|---|---|---|
| 3 | ಕಿರಿಯ ಅಭಿಯಂತರರು | 2 | – | – |
| 4 | ಮಾರುಕಟ್ಟೆ ಮೇಲ್ವಿಚಾರಕರು | 5 | 3 | 2 |
| 5 | ಮಾರಾಟ ಸಹಾಯಕರು | 25 | – | – |
| 6 | ಪ್ರಥಮ ದರ್ಜೆ ಸಹಾಯಕರು | 10 | – | – |
| 7 | ದ್ವಿತೀಯ ದರ್ಜೆ ಸಹಾಯಕರು | 7 | – | – |

ಮಾರಾಟ ಸಹಾಯಕರ 25 ಹುದ್ದೆಗಳಿಗೆ ಕೆ.ಪಿ.ಎಸ್.ಸಿ. ಯಿಂದ ಅಧಿಸೂಚನೆ ಹೊರಡಿಸಲಾಗಿದ್ದು, ಅಭ್ಯರ್ಥಿಗಳ ಹಂಚಿಕೆ ನಿರೀಕ್ಷಣೆಯಲ್ಲಿದೆ. ಹಂಚಿಕೆಯಾದ ನಂತರ ಬೀದರ್ ಜಿಲ್ಲೆಯಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ವಹಿಸಲಾಗುವುದು.

ಉಳಿದಂತೆ, ಪ್ರಥಮ ದರ್ಜೆ ಸಹಾಯಕರು ಹಾಗೂ ದ್ವಿತೀಯ ದರ್ಜೆ ಸಹಾಯಕರ ಹುದ್ದೆಗಳ ನೇಮಕಾತಿಗೆ ಸಂಬಂಧಿಸಿದಂತೆ ಅನುಮತಿ ಕೋರಿರುವ ಪ್ರಸ್ತಾವನೆಯು ಆರ್ಥಿಕ ಇಲಾಖೆಯ ಪರಿಶೀಲನೆಯಲ್ಲಿರುತ್ತದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ, ಸಮಿತಿಯು ಭರವಸೆಯನ್ನು ಮುಕ್ತಾಯಗೊಳಿಸಿತು.

**ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ**

| ಕ್ರಮ ಸಂಖ್ಯೆ | ಆಶ್ವಾಸನೆ ಸಂಖ್ಯೆ | ಆಧಾರ ಮತ್ತು ದಿನಾಂಕ | ವಿಷಯ | ಆಶ್ವಾಸನೆ |
|---|---|---|---|---|
| 1. | 1854 ಸಭಾಪತಿಯವರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯ ಡಾ: ಎಂ.ಆರ್. ತಂಗಾ ವಿಪನದಿ: 03.08.2004 (ನಗರಾಭಿವೃದ್ಧಿಯಿಂದ ಆಹಾರ ಇಲಾಖೆಗೆ ದಿನಾಂಕ: 20.08.2010 ರಂದು ವರ್ಗಾವಣೆ, ನಂತರ ಆರೋಗ್ಯ ಇಲಾಖೆಗೆ<br>ದಿನಾಂಕ: 16.09.2010 ರಂದು ವರ್ಗಾವಣೆಗೊಂಡಿದೆ ) | ಸ್ಪ್ರೈಟ್ ಪಾನೀಯ ಬಾಟಲಿನಲ್ಲಿ ನೊಣ ಬಿದ್ದಿರುವ ಬಗ್ಗೆ ತಪ್ಪಿತಸ್ಥರ ವಿರುದ್ಧ ಕ್ರಮ ತೆಗೆದು ಕೊಳ್ಳುವ ಬಗ್ಗೆ | ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಯವರು ಎನ್‌ಕ್ವೈರಿ ಮಾಡಲು ಮತ್ತು ಪೊಲೀಸ್ ಇಲಾಖೆಯವರು ಸಹ ಈ ವಿಚಾರಕ್ಕೆ ಸಂಬಂಧಪಟ್ಟ ಹಾಗೆ ಕಾನೂನು ರೀತಿಯಲ್ಲಿ ಯಾವ ಕ್ರಮವನ್ನು ಜರುಗಿಸಬಹುದು ಅದಕ್ಕೆ ನಾನು ಆದೇಶವನ್ನು ನೀಡುತ್ತೇನೆ. ಯಾರು ತಪ್ಪಿತಸ್ಥರಿದ್ದಾರೆ ಅವರ ಮೇಲೆ ಯಾವ ಕ್ರಮವನ್ನು ಜರುಗಿಸಬೇಕು ಅದನ್ನು ಜರುಗಿಸುತ್ತೇವೆ. ಕಾನೂನು ಉಲ್ಲಂಘನೆ ಮಾಡಿದ್ದರೆ ಖಂಡಿತವಾಗಿ ಅಂತಹವರ ಮೇಲೆ ಕ್ರಮವನ್ನು ತೆಗೆದುಕೊಳ್ಳುತ್ತೇವೆ ಎಂದು ಮಾನ್ಯ ಸಭಾನಾಯಕರು ತಿಳಿಸಿದರು. | ದಿನಾಂಕ: 16.8.2018ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು, ಹೊಸಪೇಟೆ ತಾಲ್ಲೂಕು ಬಳ್ಳಾರಿ ಜಿಲ್ಲೆಯಲ್ಲಿ 268 ಅಂಗಡಿಗಳ ಸಮೀಕ್ಷೆ ಮಾಡಿ 3 ಸ್ಪ್ರೈಟ್ ತಂಪುಪಾನೀಯವನ್ನು ವಿಶ್ಲೇಷಣೆಗಾಗಿ ಸಂಗ್ರಹಿಸಲಾಗಿತ್ತು. ಪ್ರಯೋಗಾಲಯ ವಿಶ್ಲೇಷಣೆ ಒಳಪಟ್ಟ ಯಾವುದೇ ಮಾದರಿ ಕಲಬೆರಕೆ ಎಂದು ವರದಿಯಾಗಿರುವುದಿಲ್ಲ ಹಾಗೂ ಸಮೀಕ್ಷೆಯ ಸಂದರ್ಭದಲ್ಲಿ ನೊಣ ಇರುವಂತಹ ಯಾವುದೇ ಸ್ಪ್ರೈಟ್ ಬಾಟೆಲ್ ದೊರೆತಿರುವುದಿಲ್ಲ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸಮಿತಿಯು ಭರವಸೆಯನ್ನು ಮುಕ್ತಾಯಗೊಳಿಸಿತು. |
| 2. | 3190 ಚು.ರ.ಪ್ರ.623 ಶ್ರೀ ಪ್ರಕಾಶ್ ಕೆ. ರಾಥೋಡ್ ವಿಪನದಿ:20.07.2009 | ಬಿಜಾಪುರ ಜಿಲ್ಲೆಯ ಆಸ್ಪತ್ರೆಗಳಲ್ಲಿ ವೈದ್ಯರ ಮತ್ತು ಔಷಧಿಗಳ ಕೊರತೆ ಬಗ್ಗೆ | 182 ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳ ಹುದ್ದೆಗಳು ಖಾಲಿಯಿದ್ದು, ಈ ಹುದ್ದೆಗಳನ್ನು ಭರ್ತಿ ಮಾಡುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ ಎಂದು ಮಾನ್ಯ ಆರೋಗ್ಯ ಮತ್ತು | ದಿನಾಂಕ: 16.8.2018ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು, 2010ನೇ ಸಾಲಿನಲ್ಲಿ 373 ಮತ್ತು 2015ರಲ್ಲಿ 212 ಹಾಗೂ 2016ರಲ್ಲಿ 48 ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಯನ್ನು ನೇಮಕಾತಿ ಮಾಡಲಾಗಿದೆ. ಖಾಲಿ ಇದ್ದ 182 ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳ ಹುದ್ದೆಗಳ ಪೈಕಿ ಪ್ರಸ್ತುತ 23 ಹುದ್ದೆಗಳು ಮಾತ್ರ ಖಾಲಿ ಇವೆ. ಉಳಿದ ಹುದ್ದೆಗಳನ್ನು ಭರ್ತಿ ಮಾಡಲಾಗಿದೆ. |

<table>
<tr>
<td></td>
<td></td>
<td></td>
<td>ಕುಟುಂಬ ಕಲ್ಯಾಣ ಸಚಿವರು ತಿಳಿಸಿದರು.</td>
<td>ಬಿಜಾಪುರ ಜಿಲ್ಲೆಯ ವಿವಿಧ ಆರೋಗ್ಯ ಕೇಂದ್ರಗಳಲ್ಲಿನ ತಜ್ಞರು/ವೈದ್ಯಾಧಿಕಾರಿ ಹುದ್ದೆಗಳ ವಿವರ ಕೆಳಕಂಡಂತಿದೆ.
<table>
<tr><th>ಆಸ್ಪತ್ರೆ & ಹುದ್ದೆಯ ಹೆಸರು</th><th>ಮಂ.</th><th>ಕಾ</th><th>ಖಾ</th></tr>
<tr><td>ಜಿಲ್ಲಾ ಆಸ್ಪತ್ರೆ, ವಿಜಯಪುರ (ತಜ್ಞರು)</td><td>35</td><td>26</td><td>09</td></tr>
<tr><td>4 ಸಾರ್ವಜನಿಕ ಆಸ್ಪತ್ರೆಗಳು (ತಜ್ಞರು)</td><td>45</td><td>17</td><td>28</td></tr>
<tr><td>9 ಸಮುದಾಯ ಆರೋಗ್ಯ ಕೇಂದ್ರಗಳು (ತಜ್ಞರು)</td><td>45</td><td>15</td><td>30</td></tr>
<tr><td>70 ಪ್ರಾಥಮಿಕ ಆರೋಗ್ಯ ಕೇಂದ್ರಗಳು (ವೈದ್ಯಾಧಿಕಾರಿ)</td><td>70</td><td>47</td><td>23</td></tr>
</table>
ಇಲಾಖೆಯಲ್ಲಿ ಖಾಲಿ ಇರುವ ತಜ್ಞರು ಹಾಗೂ ವೈದ್ಯಾಧಿಕಾರಿ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡುವವರೆಗೆ ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಲು ಎಲ್ಲಾ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾನ ಅಧಿಕಾರಿಗಳಿಗೆ ಅನುಮತಿ ನೀಡಲಾಗಿದೆ. ಜೊತೆಗೆ, ತಜ್ಞರು ಲಭ್ಯವಿಲ್ಲದ ಆಸ್ಪತ್ರೆಗಳಲ್ಲಿ ತಾತ್ಕಾಲಿಕವಾಗಿ ಎಂ.ಬಿ.ಬಿ.ಎಸ್ ವೈದ್ಯರನ್ನು ಗುತ್ತಿಗೆ ಆಧಾರದಲ್ಲಿ ನೇಮಿಸಿಕೊಳ್ಳಲು ಸಹ ಅನುಮತಿ ನೀಡಲಾಗಿದೆ. ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿನ ವೈದ್ಯಾಧಿಕಾರಿ ಹುದ್ದೆಗಳಿಗೆ ಎಂ.ಬಿ.ಬಿ.ಎಸ್ ವಿದ್ಯಾರ್ಹತೆಯ ಅಭ್ಯರ್ಥಿಗಳು ಲಭ್ಯವಿಲ್ಲದಿದ್ದಲ್ಲಿ ಆಯುಷ್ ವೈದ್ಯರನ್ನು ಸಹ ಗುತ್ತಿಗೆ ಆಧಾರದಲ್ಲಿ ನೇಮಿಸಕೊಳ್ಳಲು ಅವಕಾಶ ಕಲ್ಪಿಸಲಾಗಿದೆ. ಅಲ್ಲದೆ, ಖಾಯಂ ತಜ್ಞರು ಲಭ್ಯವಿಲ್ಲದ ಸಂದರ್ಭದಲ್ಲಿ ತುರ್ತು ಪರಿಸ್ಥಿತಿಯನ್ನು ನಿಭಾಯಿಸಲು ಆಧಾರದಲ್ಲಿ ಖಾಸಗಿ ತಜ್ಞರ ಸೇವೆಯನ್ನು ಪಡೆಯಲು ಸಹ ಅವಕಾಶ ಕಲ್ಪಿಸಿದೆ. ಇದರ ಜೊತೆಗೆ, ವಯೋನಿವೃತ್ತಿ ಹೊಂದಿದ ತಜ್ಞರು/ವೈದ್ಯರನ್ನು ಗರಿಷ್ಠ 65 ವರ್ಷ ವಯೋಮಿತಿಯವರೆಗೆ ಪ್ರತಿ ವರ್ಷ ನವೀಕರಿಸುವ</td>
</tr>
</table>

| | | | | |
|---|---|---|---|---|
| | | | | ಷರತ್ತಿಗೊಳಪಟ್ಟು ಗುತ್ತಿಗೆ ಆಧಾರದಲ್ಲಿ ಮರು ನೇಮಕಾತಿ ಮಾಡಿಕೊಳ್ಳಲು ಆಯಾ ಜಿಲ್ಲಾಧಿಕಾರಿಗಳಿಗೆ ಅಧಿಕಾರ ನೀಡಲಾಗಿದೆ.<br><br>ಮುಂದುವರಿದು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಖಾಲಿ ಇರುವ ವಿವಿಧ ತಜ್ಞತೆಗಳ 1065 ತಜ್ಞ ವೈದ್ಯರು ಹಾಗೂ 365+111 (ಹೈ.ಕ) ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿ ಹುದ್ದೆಗಳನ್ನು ವಿಶೇಷ ನೇಮಕಾತಿ ನಿಯಮಗಳನ್ವಯ ನೇರ ನೇಮಕಾತಿಯಿಂದ ಭರ್ತಿ ಮಾಡಲು ಕರ್ನಾಟಕ ಲೋಕಸೇವಾ ಆಯೋಗಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿತ್ತು. ಆಯೋಗವು ಅರ್ಹ 382 ತಜ್ಞರ ಅಂತಿಮ ಆಯ್ಕೆ ಪಟ್ಟಿಯನ್ನು ಸರ್ಕಾರಕ್ಕೆ ಸಲ್ಲಿಸಿರುತ್ತದೆ. ವೈದ್ಯಾಧಿಕಾರಿಗಳ ಅಂತಿಮ ಆಯ್ಕೆ ಪಟ್ಟಿಯನ್ನು ಶೀಘ್ರದಲ್ಲಿಯೇ ಸಲ್ಲಿಸಲಿದೆ. ಈ ಹುದ್ದೆಗಳಿಗೆ ಆಯ್ಕೆಯಾಗಿರುವ ಅಭ್ಯರ್ಥಿಗಳಿಗೆ ಸದ್ಯದಲ್ಲಿಯೇ ಸಮಾಲೋಚನೆ ಮೂಲಕ ನೇಮಕಾತಿ ಆದೇಶ ನೀಡಿ, ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುವುದು.<br><br>ಬಿಜಾಪುರ ಜಿಲ್ಲೆಯ ವ್ಯಾಪ್ತಿಯ ಆರೋಗ್ಯ ಸಂಸ್ಥೆಗಳಿಗೆ ಅವರ ಬೇಡಿಕೆಗನುಸಾರ ಔಷಧಿಗಳನ್ನು ಬಿಜಾಪುರ ಜಿಲ್ಲಾ ಔಷಧ ಉಗ್ರಾಣದಿಂದ ಪೂರೈಸಲಾಗುತ್ತಿದೆ. ಬಿಜಾಪುರ ಜಿಲ್ಲಾ ಔಷಧ ಉಗ್ರಾಣದಲ್ಲಿ ಲಭ್ಯವಿಲ್ಲದ ಅವಶ್ಯ ಔಷಧಿಗಳನ್ನು ತುರ್ತು ಸಂದರ್ಭದಲ್ಲಿ ಪೂರೈಸಲು ಆರೋಗ್ಯ ಸಂಸ್ಥೆಯಲ್ಲಿ ಲಭ್ಯವಿರುವ ಯೂಸರ್ ಫಂಡ್ ಹಾಗೂ ಎನ್‌ಹೆಚ್‌ಎಂ ವತಿಯಿಂದ ನೇರವಾಗಿ ಕೆಳಕಂಡಂತೆ ಅನುದಾನ ಪಡೆಯಬಹುದಾಗಿದೆ.<br><br>ಜಿಲ್ಲಾ ಆಸ್ಪತ್ರೆಗೆ – ರೂ. 25.00 ಲಕ್ಷ<br>ತಾಲ್ಲೂಕು ಆಸ್ಪತ್ರೆಗಳಿಗೆ – ರೂ. 10.00 ಲಕ್ಷ<br>ಸಮುದಾಯ ಆರೋಗ್ಯ ಕೇಂದ್ರಗಳಿಗೆ – ರೂ. 3.00 ಲಕ್ಷ<br>ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ – ರೂ.50,000/–ಗಳನ್ನು |

| | | | | |
|---|---|---|---|---|
| | | | | ಬಿಡುಗಡೆ ಮಾಡಲಾಗುತ್ತಿದೆ. ಮುಕ್ತ ನಿಧಿಯಿಂದ ಔಷಧಿಗಳನ್ನು ಖರೀದಿಸಿ ಉಪಯೋಗಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಒಂದು ವೇಳೆ ಔಷಧಿಗಳಿಗೆ ಹೆಚ್ಚುವರಿ ಬೇಡಿಕೆ ಬಂದಂತಹ ಪಕ್ಷದಲ್ಲಿ ಔಷಧಿಗಳನ್ನು ಇತರೆ ಜಿಲ್ಲಾ ಔಷಧ ಉಗ್ರಾಣಗಳ ಮೂಲಕ ಸರಬರಾಜು ಮಾಡಲು ಸಹ ಕ್ರಮ ಕೈಗೊಳ್ಳಲಾಗುತ್ತಿದೆಯೆಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸಮಿತಿಯು ಭರವಸೆಯನ್ನು ಮುಕ್ತಾಯಗೊಳಿಸಿತು. |
| 3. | 3446<br>ಚು.ಗು.ಪ್ರ:114<br>ಶ್ರೀ ಎಂ.ಶ್ರೀನಿವಾಸ್<br>ವಿಪನದಿ: 08.03.2010<br><br>ಉಪ ಪ್ರಶ್ನೆ<br>ಶ್ರೀಮತಿ ಮೋಟಮ್ಮ<br>ವಿಪನದಿ:08.03.2010 | ಬೆಂಗಳೂರು ನಗರದಲ್ಲಿ ನೋಂದಣಿಯಾಗದೆ, ಗುಣಮಟ್ಟ ಕಾಪಾಡಿಕೊಳ್ಳದೆ ದುಬಾರಿ ಶುಲ್ಕವನ್ನು ರೋಗಿಗಳಿಗೆ ವಿಧಿಸುವ ಖಾಸಗಿ ವೈದ್ಯಕೀಯ ಕ್ಲಿನಿಕ್, ನರ್ಸಿಂಗ್ ಹೋಮ್, ಆಸ್ಪತ್ರೆ, ಪ್ರಯೋಗಾಲಯ ಹಾಗೂ ಸಲಹಾ ಕೇಂದ್ರ ಇಂತಹ ಸಂಸ್ಥೆಗಳ ವಿರುದ್ಧ ಸರ್ಕಾರ ಕೈಗೊಂಡಿರುವ ಕ್ರಮಗಳ ಬಗ್ಗೆ<br><br>ಗ್ರಾಮಾಂತರ ಪ್ರದೇಶಗಳ Health centreಗಳಲ್ಲಿ | ಎಲ್ಲಾ ನರ್ಸಿಂಗ್ ಹೋಂ.ಗಳು ಸಮಾನವಾಗಿರಬೇಕು. ಯಾರಿಗೂ ಕೂಡ ದುಬಾರಿ ಯಾಗಬಾರದೆಂದು ನಾವು ಹೊಸ Actನ್ನು ತೆಗೆದು ಕೊಂಡು ಬಂದಿದ್ದೇವೆ. ಇವತ್ತು 10,481 ಅರ್ಜಿಗಳು ಬಂದಿದೆ. ಬಹಳಷ್ಟು ಸದಸ್ಯರುಗಳು ಕಾಲಾವಕಾಶವನ್ನು ಹೆಚ್ಚಿಸಬೇಕೆಂದು ಹೇಳಿದ್ದಾರೆ. ಅದರ ಬಗ್ಗೆ ನಾನು ಚರ್ಚೆ ಮಾಡಿ Implementation ಕೂಡ ಮಾಡುತ್ತೇನೆ. ಜೊತೆಗೆ ಯಾರು ಈ ಕಾನೂನನ್ನು ಉಲ್ಲಂಘನೆ ಮಾಡುತ್ತಾರೆಯೋ ಅವರಿಗೆ ಕಡ್ಡಾಯವಾಗಿ 3 ವರ್ಷಗಳ ಕಾಲ ಜೈಲು ಶಿಕ್ಷೆಯಾಗಬೇಕು. ಮತ್ತು ಕನಿಷ್ಟ 10,000/–ರೂಪಾಯಿಗಳ ದಂಡ ತೆರಬೇಕೆಂದು ನಮ್ಮ ವೈದ್ಯಕೀಯ ಸಂಸ್ಥೆಗಳಿಗೆ ಒಂದು ಹೊಸ Act ಅನ್ನು ತೆಗೆದು | ದಿನಾಂಕ: 16.8.2018ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು, ಕರ್ನಾಟಕ ಖಾಸಗಿ ವೈದ್ಯಕೀಯ ಅಧಿನಿಯಮ, 2007 ಮತ್ತು ನಿಯಮಗಳು, 2009 ಅದರಂತೆ ಎಲ್ಲಾ ಖಾಸಗಿ ವೈದ್ಯಕೀಯ ಸಂಸ್ಥೆಗಳು ಜಿಲ್ಲಾ ನೋಂದಣಿ ಪ್ರಾಧಿಕಾರದಲ್ಲಿ ನಿಯಮಾನುಸಾರ ಕಡ್ಡಾಯವಾಗಿ ನೋಂದಣಿ ಮಾಡಿಸಬೇಕಾಗಿರುತ್ತದೆ.<br><br>ಸಾರ್ವಜನಿಕರಿಗೆ ಗುಣಮಟ್ಟದ ಸೇವೆ ಖಾಸಗಿ ವೈದ್ಯಕೀಯ ಸಂಸ್ಥೆಯವರಿಂದ ದೊರೆಯುವುದನ್ನು ಖಚಿತಪಡಿಸಿಕೊಳ್ಳಲು ಹಾಗೂ ಆರ್ಥಿಕ ಶೋಷಣೆಯಿಂದ ರಕ್ಷಿಸಲು ಸರ್ಕಾರವು ಅನುಷ್ಠಾನದಲ್ಲಿರುವ ಕೆ.ಪಿ.ಎಂ.ಇ. ಕಾಯ್ದೆಯನ್ನು ಪರಿಷ್ಕರಿಸಿ ತಿದ್ದುಪಡಿ ಕಾಯ್ದೆ 2017ನ್ನು ದಿ: 6.1.2018ರಿಂದ ಜಾರಿಗೊಳಿಸಿ, ದಿ: 27.3.2018ರಂದು ಕೆ.ಪಿ.ಎಂ.ಇ. ತಿದ್ದುಪಡಿ ಕಾಯ್ದೆಯ ನಿಯಮಗಳನ್ನು ಸಹ ರಾಜ್ಯಪತ್ರದಲ್ಲಿ ಪ್ರಕಟಿಸಲಾಗಿದೆ.<br><br>ರಾಜ್ಯದಲ್ಲಿ ಒಟ್ಟು 26228 ಖಾಸಗಿ ವೈದ್ಯಕೀಯ ಸಂಸ್ಥೆಗಳಿಗೆ ನೋಂದಣಿ ನೀಡಲಾಗಿದ್ದು, ಬೆಂಗಳೂರು ನಗರ ಜಿಲ್ಲಾ ವ್ಯಾಪ್ತಿಯಲ್ಲಿ ಇಂದಿನವರೆಗೆ 7389 ಅರ್ಜಿಗಳು ನೋಂದಣಿಯಾಗಿ ಸ್ವೀಕೃತಗೊಂಡಿದ್ದು, ಈ ಪೈಕಿ 6541 ಸಂಸ್ಥೆಗಳಿಗೆ ನೋಂದಣಿ ನೀಡಲಾಗಿದೆ.<br><br>ಇದರಲ್ಲಿ ಸದರಿ ಕಾಯ್ದೆಯಲ್ಲಿ ಖಾಸಗಿ ವೈದ್ಯಕೀಯ ಸಂಸ್ಥೆಗಳನ್ನು |

| | | | | |
|---|---|---|---|---|
| | | ವೈದ್ಯರುಗಳು ಇಲ್ಲದಿರುವ ಬಗ್ಗೆ | ಕೊಂಡು ಬಂದಿದ್ದೇವೆ. ಇವತ್ತು ಮತ್ತೆ ಕಾಲಾವಕಾಶವನ್ನು ಕೊಟ್ಟ ನಂತರ ಇನ್ನು ಎಷ್ಟು ಅರ್ಜಿಗಳು ಬರುತ್ತದೆ ಎನ್ನುವುದನ್ನು ನೋಡಿಕೊಂಡು ಯಾರು Implementation ಮಾಡುವುದಿಲ್ಲ ಅಂತಹ ಖಾಸಗಿ ನರ್ಸಿಂಗ್ ಹೋಂಗಳನ್ನು ಮುಚ್ಚುವಂತಹ ವ್ಯವಸ್ಥೆಯನ್ನು ಮಾಡುತ್ತೇವೆ ಎಂದು ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ತಿಳಿಸಿದರು.<br><br>ಮುಂಬರುವಂತಹ ದಿನಗಳಲ್ಲಿ ಡಾಕ್ಟರ್‌ಗಳಿಗೆ ಮೊದಲನೆಯ ಆದ್ಯತೆಯನ್ನು ಕೊಟ್ಟು ಅವರುಗಳನ್ನು ನೇಮಕ ಮಾಡಿ ಸಾರ್ವಜನಿಕರಿಗೆ ಅನುಕೂಲ ಮಾಡುವಂತಹ ವ್ಯವಸ್ಥೆಯನ್ನು ಮಾಡುತ್ತೇವೆ ಎಂದು ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ತಿಳಿಸಿರುತ್ತಾರೆ. | ನೋಂದಾಯಿಸಲು ಅಲ್ಲಿಯ ಸಿಬ್ಬಂದಿಯ ವಿದ್ಯಾರ್ಹತೆ, ಮೂಲಭೂತ ಸೌಕರ್ಯಗಳು ಇತ್ಯಾದಿಗಳನ್ನೊಳ ಗೊಂಡ ಕೆ.ಪಿ.ಎಂ.ಇ ಕಾಯ್ದೆ ಹಾಗೂ ನಿಯಮಾನುಸಾರ ಮಾನದಂಡಗಳನ್ನು ಕಡ್ಡಾಯ ಅನುಕರಣೆಗಾಗಿ ನಿಗಧಿಪಡಿಸ ಲಾಗಿರುತ್ತದೆ. ಅವರು ನೀಡುವ ಚಿಕಿತ್ಸೆ/ಶಸ್ತ್ರ ಚಿಕಿತ್ಸೆ/ಪರೀಕ್ಷೆಗಳ ದರವನ್ನು ಕಡ್ಡಾಯವಾಗಿ ಅವರ ಸಂಸ್ಥೆಗಳಲ್ಲಿ ಸಾರ್ವಜನಿಕರಿಗೆ ಕಾಣುವಂತೆ ಪ್ರಕಟಿಸಬೇಕಾಗಿರುತ್ತದೆ. ಹಾಗೂ ಅವರು ನಡುವೆ ಕರಪತ್ರ/ಭಿತ್ತಿ ಪತ್ರಗಳನ್ನು ಸಹ ಪ್ರಕಟಿಸಲು ಕಡ್ಡಾಯಗೊಳಿಸ ಲಾಗಿದೆ. ವಿವಿಧ ದರಗಳ ಗರಿಷ್ಠ ಮೊತ್ತವನ್ನು ನಿಗದಿಪಡಿಸಲು ರಾಜ್ಯಪತ್ರದಲ್ಲಿ ಪ್ರಕಟವಾಗಿರುವ ನಿಯಮದಡಿ ಸಂಬಂಧಿತ ಸಮಿತಿಗಳನ್ನು ರಚಿಸಲು ಮಾರ್ಗ ಸೂಚಿಯನ್ನು ನೀಡಲಾಗಿದ್ದು, ಸಮಿತಿಗಳ ರಚನೆ ಪ್ರಕ್ರಿಯೆ ಜಾರಿಯಲ್ಲಿದೆ.<br><br>ಮುಂದುವರೆದು, ಬೆಂಗಳೂರು ನಗರ ಜಿಲ್ಲೆಯಲ್ಲಿ ಜನವರಿ ಮಾಹೆಯಿಂದ ಎಲ್ಲಾ ಖಾಸಗಿ ಆರೋಗ್ಯ ಸಂಸ್ಥೆಗಳ ನೊಂದಣಿ/ ನವೀಕರಣ/ನೋಂದಣಿಯಾಗದಿರುವ ಆರೋಗ್ಯ ಸಂಸ್ಥೆಗಳ ಸರ್ವೆಕಾರ್ಯ ಮಾಡಿಸುತ್ತಿದ್ದು, ಇಲ್ಲಿಯವರೆಗೆ ಆನೇಕಲ್ ತಾಲ್ಲೂಕಿನ ಸರ್ವೇಕಾರ್ಯ ಮುಗಿದಿದ್ದು, ಆನೇಕಲ್ ತಾಲ್ಲೂಕಿನಲ್ಲಿ 241 ಕ್ಲಿನಿಕ್‌ಗಳು ನೊಂದಣಿ ಮಾಡಿಸಿಕೊಳ್ಳದೇ ಕಾರ್ಯನಿರ್ವಹಿಸುತ್ತಿರುವುದು ಕಂಡುಬಂದಿರುತ್ತದೆ. 241 ಕ್ಲಿನಿಕ್‌ಗಳಲ್ಲಿ ನೋಂದಣಿಯಾಗದಿರುವ ಎಲ್ಲಾ ಕ್ಲಿನಿಕ್‌ಗಳಿಗೆ ನೋಟಿಸ್ ಜಾರಿಗೊಳಿಸಲಾಗಿರುತ್ತದೆ. ಅದೇ ರೀತಿಯಾಗಿ ಬೆಂಗಳೂರು ಉತ್ತರ ತಾಲ್ಲೂಕಿನಲ್ಲಿ ಸರ್ವೇಕಾರ್ಯ ಮುಗಿದಿದ್ದು ಅವುಗಳಲ್ಲಿ 1142 ಕ್ಲಿನಿಕ್‌ಗಳು ನೋಂದಣಿಯಾಗದಿರುವುದು ಕಂಡುಬಂದಿರುತ್ತದೆ ಅಂತಹ ಕ್ಲಿನಿಕ್‌ಗಳಿಗೆ ನೋಟೀಸ್ ಜಾರಿಗೊಳಿಸಲಾಗಿರುತ್ತದೆ. ಅಲ್ಲದೇ ದಿ: 28.5.2018ರಂದು ಮಾನ್ಯ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜರುಗಿದ ಸಭೆಯಲ್ಲಿ ಈ ವಿಷಯ ಪ್ರಸ್ತಾಪಿಸಿದಾಗ ಮಾನ್ಯ ಜಿಲ್ಲಾಧಿಕಾರಿಗಳು ಕಾಯ್ದೆಯ ನಿಯಮಾನುಸಾರ ನೋಟೀಸ್ ಜಾರಿಗೊಳಿಸಿ ನೋಟಿಸ್‌ಗೆ ಉತ್ತರಿಸದೆ ನೊಂದಣಿ ಮಾಡಿಕೊಳ್ಳದ |

| | | | | |
|---|---|---|---|---|
| | | | | ಆರೋಗ್ಯ ಸಂಸ್ಥೆಗಳ ವಿರುದ್ಧ ಸೂಕ್ತ ಕ್ರಮಕ್ಕಾಗಿ ಪೊಲೀಸ್ ಆಯುಕ್ತರಿಗೆ ದೂರನ್ನು ಸಲ್ಲಿಸಲು ಆದೇಶಿಸಿರುತ್ತಾರೆ. ಆದುದರಿಂದ, ನೋಂದಣಿಯಾಗದಿರುವ ಆರೋಗ್ಯ ಸಂಸ್ಥೆಗಳ ವಿರುದ್ಧ ಪೊಲೀಸ್ ಆಯುಕ್ತರಿಗೆ ದೂರು ನೀಡಲು ಕ್ರಮವಹಿಸಲಾಗುತ್ತಿದೆ.<br><br>ಗ್ರಾಮಾಂತರ ಪ್ರದೇಶಗಳ Health Centreಗಳಲ್ಲಿ ವೈದ್ಯರುಗಳು ಇಲ್ಲದಿರುವ ಬಗ್ಗೆ ರಾಜ್ಯದಲ್ಲಿ ಒಟ್ಟು 2353 ಪ್ರಾಥಮಿಕ ಆರೋಗ್ಯ ಕೇಂದ್ರಗಳಿದ್ದು, 2586 ಸಾಮಾನ್ಯ ಕರ್ತವ್ಯ ವೈದ್ಯರ ಹುದ್ದೆ ಮಂಜೂರಾಗಿದ್ದು, ಖಾಯಂ-1748, ಗುತ್ತಿಗೆ-743 ಒಟ್ಟು 2491 ಸಾಮಾನ್ಯ ಕರ್ತವ್ಯ ವೈದ್ಯರು ಕಾರ್ಯನಿರ್ವಹಿಸುತ್ತಿದ್ದಾರೆ. 95 ಸಾಮಾನ್ಯ ಕರ್ತವ್ಯ ವೈದ್ಯರ ಹುದ್ದೆ ಖಾಲಿ ಇದ್ದು, ಈ ಖಾಲಿ ಇರುವ ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳ ಹುದ್ದೆಯನ್ನು ಭರ್ತಿ ಮಾಡಲು ಸರ್ಕಾರದ ಆದೇಶ ಸಂಖೆ: ಆಕುಕ/297/ಹೆಚ್‌ಎಸ್‌ಹೆಚ್/2015, ದಿ: 22/4/2016ರಲ್ಲಿ ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಗುತ್ತಿಗೆ ಆಧಾರದ ಮೇಲೆ ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳನ್ನು ನೇಮಕ ಮಾಡಿಕೊಳ್ಳುವಂತೆ ಆದೇಶ ನೀಡಲಾಗಿದೆ.<br><br>365+111 ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳನ್ನು ನೇಮಕಾತಿ ಮಾಡಲು ಕೆ.ಪಿ.ಎಸ್.ಸಿ. ಮುಖಾಂತರ ನೇಮಕಾತಿ ಪ್ರಕ್ರಿಯೆ ಚಾಲನೆಯಲ್ಲಿದೆ.<br><br>ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಕೆ.ಪಿ.ಎಸ್.ಸಿ. ಮುಖಾಂತರ 382 ತಜ್ಞ ವೈದ್ಯರ ನೇಮಕಾತಿಗೆ ಅಂತಿಮ ಪಟ್ಟಿ ಪ್ರಚುರ ಪಡಿಸಿದ್ದು, ಕೌನ್ಸಲಿಂಗ್ ಮುಖಾಂತರ ನೇಮಕಾತಿ ಆದೇಶ ಹೊರಡಿಸಲು/ಸ್ಥಳ ನಿಯುಕ್ತಿ ಪ್ರಕ್ರಿಯೆ ಚಾಲನೆಯಲ್ಲಿರುತ್ತದೆ.<br><br>ಆದರೆ, ಇಲಾಖೆಯಲ್ಲಿ ತಜ್ಞರು ಹಾಗೂ ವೈದ್ಯಾಧಿಕಾರಿಗಳ ಕೊರತೆ ಇರುವುದರಿಂದ ಎಲ್ಲಾ ಹುದ್ದೆಗಳನ್ನು ಭರ್ತಿ ಮಾಡಲು ಸಾಧ್ಯವಾಗಿರುವುದಿಲ್ಲ. ಖಾಲಿ ಇರುವ ಹುದ್ದೆಗಳನ್ನು ನೇರ |

| | | | | |
|---|---|---|---|---|
| | | | | ನೇಮಕಾತಿ ಮೂಲಕ ಭರ್ತಿಮಾಡಲು ಕಾಲಕಾಲಕ್ಕೆ ಕ್ರಮ ಕೈಗೊಳ್ಳಲಾಗುತ್ತಿದೆ. ಖಾಲಿ ಇರುವ ತಜ್ಞ ವೈದ್ಯರನ್ನು ಎನ್.ಹೆಚ್.ಎಂ. ಅಡಿಯಲ್ಲಿ ಬಿಡ್ ಮೂಲಕ ನೇಮಕಗೊಳಿಸಲು ಕ್ರಮಕೈಗೊಳ್ಳಲಾಗುತ್ತಿದೆ. ಜೊತೆಗೆ ಗುತ್ತಿಗೆ ಆಧಾರದಲ್ಲಿ ಹಾಗೂ ಕರೆ ಆಧಾರದಲ್ಲಿ (on call basis) ಸಹ ನೇಮಕಾತಿ ಮಾಡಲು ಅವಕಾಶ ಕಲ್ಪಿಸಿದೆ. ಹಾಗೆಯೇ, ವಯೋನಿವೃತ್ತಿ ಹೊಂದಿದ ತಜ್ಞರು ಹಾಗೂ ವೈದ್ಯರನ್ನು 65 ವರ್ಷ ವಯಸ್ಸಿನವರೆಗೆ ಪ್ರತಿ ವರ್ಷ ನವೀಕರಿಸುವ ಷರತ್ತಿಗೊಳಪಟ್ಟು ಗುತ್ತಿಗೆ ಆಧಾರದಲ್ಲಿ ಮರು ನೇಮಕಾತಿ ಮಾಡಿಕೊಳ್ಳಲು ಅವಕಾಶ ಕಲ್ಪಿಸಿದೆಯೆಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸಮಿತಿಯು ಭರವಸೆಯನ್ನು ಮುಕ್ತಾಯಗೊಳಿಸಿತು. |
| 4. | 3741<br>ಚು.ಗು.ಪ್ರ: 902<br>ಶ್ರೀ ಕೆ.ಪ್ರತಾಪ ಚಂದ್ರ ಶೆಟ್ಟಿ<br>ವಿಪನದಿ: 14.03.2011 | ರಾಜ್ಯದಲ್ಲಿ ಡೆಂಗ್ಯೂ, ಹೆಚ್ 1 ಎನ್ 1 ಹಾಗೂ ಅದರಂತೆ ಇರುವ ಮಾರಕ ರೋಗಗಳ ಪತ್ತೆ ಹಚ್ಚಲು ರಕ್ತ ಪರೀಕ್ಷೆ ಮಾಡುವ ಸೌಲಭ್ಯ ಕಲ್ಪಿಸುವ ಬಗ್ಗೆ. | ಕಸ್ತೂರ್‌ಬಾ ಮೆಡಿಕಲ್ ಕಾಲೇಜು ಮಣಿಪಾಲ್, ಇದನ್ನು Manipal Centre for Virus Research ಒಂದನ್ನು ಮಾಡಬೇಕೆಂಬುದಕ್ಕೆ ಅದನ್ನು ಅಧಿಕೃತ ಪ್ರಯೋಗಾಲಯವಾಗಿ ಅಂಗೀಕರಿಸುವುದಕ್ಕೆ ಎನ್‌ವಿಬಿಡಿಸಿಪಿ (National Vector Borne Disease control Programme) ಇದಕ್ಕೆ ಒಪ್ಪಿಗೆ ಕೊಟ್ಟಿದ್ದಾರೆ. ಕೇಂದ್ರದ ಆರೋಗ್ಯ ಸಚಿವಾಲಯದ ಅನುಮತಿಗಾಗಿ ನಾವು ನಿರೀಕ್ಷಿಸುತ್ತಿದ್ದೇವೆ. ಅಲ್ಲಿಂದ ಅನುಮತಿ ಬಂದ ತಕ್ಷಣ ಅದನ್ನು ಕೂಡ ತಪಾಸಣಾ ಕೇಂದ್ರ ಎಂದು ಘೋಷಣೆ ಮಾಡಲಾಗುತ್ತದೆ ಎಂದು ಮಾನ್ಯ ಸಭಾನಾಯಕರು ತಿಳಿಸಿದರು. | ದಿನಾಂಕ: 16.8.2018ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು, 2012–13ನೇ ಸಾಲಿನಲ್ಲಿ ಕೇಂದ್ರ ಸರ್ಕಾರದ ಎನ್‌ವಿಬಿಡಿಸಿಪಿ ನಿರ್ದೇಶನಾಲಯದಿಂದ ಅನುಮತಿ ಪಡೆದು Manipal Centre for Virus Research ಪ್ರಯೋಗಾಲಯವು ಪೂರ್ಣ ಪ್ರಮಾಣದಲ್ಲಿ ಡೆಂಗ್ಯೂ, ಹೆಚ್1ಎನ್1 ಹಾಗೂ ಅದರಂತಹ ಮಾರಕ ರೋಗಗಳ ಪತ್ತೆ ಹಚ್ಚುವ ಸೌಲಭ್ಯವನ್ನು ಹೊಂದಿ ಸಮರ್ಥವಾಗಿ ಕಾರ್ಯನಿರ್ವಹಿಸುತ್ತಿದೆಯೆಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸಮಿತಿಯು ಭರವಸೆಯನ್ನು ಮುಕ್ತಾಯಗೊಳಿಸಿತು. |

| | | | | |
|---|---|---|---|---|
| 5. | 3984<br>ಚು.ಗು.ಪ್ರ: 145<br>ಶ್ರೀ ಡಿ.ಎಸ್.ವೀರಯ್ಯ<br>ವಿಪನದಿ: 08.12.2011 | ಆಯುಷ್ ಇಲಾಖೆಯಲ್ಲಿ ವೈದ್ಯರುಗಳನ್ನು ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡುವಾಗ ಅರ್ಹ ಪ.ಜಾ/ಪ.ಪಂ ಅಭ್ಯರ್ಥಿ ಗಳಿದ್ದು, ನೇಮಕಾತಿ ಪ್ರಕ್ರಿಯೆಯಲ್ಲಿ ಭಾಗಿಯಾಗಿದ್ದರೂ ಅವರನ್ನು ಕಡೆಗಣಿಸಿ ಸಾಮಾನ್ಯ ವರ್ಗಕ್ಕೆ ನೇಮಕಾತಿ ಆದೇಶ ನೀಡಿರುವ ಬಗ್ಗೆ | ಎಸ್‌ಸಿ/ಎಸ್‌ಟಿ ಜನಾಂಗಕ್ಕೆ ಎಷ್ಟು ಆದ್ಯತೆ ಕೊಡಬೇಕೋ ಅಷ್ಟನ್ನೂ ಕೊಟ್ಟು ಕೆಲಸ ಮಾಡುತ್ತಿದ್ದೇವೆ. ನೇಮಕಾತಿಗೆ ಸಂಬಂಧಿಸಿದಂತೆ ಇನ್ನು ಸ್ವಲ್ಪ ಪೆಂಡಿಂಗ್ ಇರುವಂಥದ್ದನ್ನು ನಿಯಮಾನುಸಾರ ಮುಂದಿನ ಕ್ರಮ ಜರುಗಿಸುತ್ತೇವೆ ಎಂದು ಮಾನ್ಯ ಮುಖ್ಯಮಂತ್ರಿಯವರು ತಿಳಿಸಿದರು. | ದಿನಾಂಕ: 16.8.2018ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು, ಆಯುಷ್ ಇಲಾಖೆಯಲ್ಲಿ ಮಂಜೂರುಗೊಂಡ ಖಾಲಿಯಿದ್ದ ವೈದ್ಯಾಧಿಕಾರಿ ಹುದ್ದೆಗಳ ಎದುರಿಗೆ ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡುವ ಪ್ರಾಧಿಕಾರ ಜಿಲ್ಲಾಧಿಕಾರಿಗಳಾಗಿದ್ದು, ಅಭ್ಯರ್ಥಿಗಳನ್ನು ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡುವ ನಿಯಮಾನುಸಾರ ಕನಿಷ್ಠ ವಿದ್ಯಾರ್ಹತೆ ಮೆರಿಟ್, ಮೀಸಲಾತಿ ನಿಯಮಗಳನ್ನು ಅನುಸರಿಸಿ, ನೇಮಕಾತಿ ಮಾಡಲಾಗಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸಮಿತಿಯು ಭರವಸೆಯನ್ನು ಮುಕ್ತಾಯಗೊಳಿಸಿತು. |
| 6. | 4166<br>ಚು.ಗು.ಪ್ರ 395<br>ಶ್ರೀ ಡಿ.ಎಸ್.ವೀರಯ್ಯ<br>ವಿಪನದಿ:<br>27.7.2012 | ಆಯುಷ್ ಇಲಾಖೆಯಲ್ಲಿ ವೈದ್ಯರುಗಳನ್ನು ಗುತ್ತಿಗೆ ಆಧಾರದ ಮೇಲೆ ಖಾಯಂಗೊಳಿಸುವ ಹಂತದಲ್ಲಿ ಅರ್ಹ ಪ.ಜಾ/ಪ.ಪಂ. ಅಭ್ಯರ್ಥಿಗಳನ್ನು ಪರಿಗಣಿಸುವ ಬಗ್ಗೆ. | ಪ.ಜಾ/ಪ.ಪಂ. ಅಭ್ಯರ್ಥಿ ಒಳಗೊಂಡಂತೆ ಗುತ್ತಿಗೆ ಆಯುಷ್ ವೈದ್ಯರನ್ನು ಖಾಯಂಗೊಳಿಸುವ ಬಗ್ಗೆ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದೆಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ತಿಳಿಸಿದರು. | |
| 7 | 3986<br>ಚು.ರ.ಪ್ರ: 277<br>ಶ್ರೀ ತೋಂಟದಾರ್ಯ<br>ವಿಪನದಿ: 08.12.2011 | ಮೈಸೂರು ಜಿಲ್ಲೆಯ, ಕೃಷ್ಣರಾಜನಗರ ಟೌನ್‌ನಲ್ಲಿರುವ "ಪುಟ್ಟತಾಯಮ್ಮ ಹೆರಿಗೆ ಆಸ್ಪತ್ರೆ " ಶಿಥಿಲಗೊಂಡಿದ್ದು | ಸದರಿ ಆಸ್ಪತ್ರೆಯ ಕಟ್ಟಡ ದುರಸ್ತಿ ಮಾಡಲು ಅಂದಾಜು ಪಟ್ಟಿಯು ಸ್ವೀಕೃತವಾಗಿದ್ದು ಪರಿಶೀಲನೆ ಯಲ್ಲಿದೆ ಎಂದು ಮಾನ್ಯ ಮುಖ್ಯಮಂತ್ರಿಗಳು ತಿಳಿಸಿದರು. | ದಿನಾಂಕ: 16.8.2018ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು, ಮೈಸೂರು ಜಿಲ್ಲೆಯ ಕೃಷ್ಣರಾಜನಗರ ಟೌನ್‌ನಲ್ಲಿರುವ ಪುಟ್ಟತಾಯಮ್ಮ ಹೆರಿಗೆ ಆಸ್ಪತ್ರೆಯನ್ನು ಇಲಾಖೆಯ ಇತರೆ ಕಾರ್ಯಕ್ಕೆ ಬಳಸಲಾಗುತ್ತಿದ್ದು, ಆಸ್ಪತ್ರೆಯ ಆವರಣದಲ್ಲಿ ಹೊಸದಾಗಿ ನಿರ್ಮಾಣಗೊಂಡಿರುವ ಹೆರಿಗೆ ಆಸ್ಪತ್ರೆ ದಿ: 3.3.2017ರಿಂದ ಕಾರ್ಯನಿರ್ವಹಿಸುತ್ತಿದೆ ಎಂದು |

| | | | | |
|---|---|---|---|---|
| | | ಈ ಆಸ್ಪತ್ರೆಯನ್ನು ಅಭಿವೃದ್ಧಿಪಡಿಸಲು ಕೈಗೊಂಡಿರುವ ಕ್ರಮದ ಬಗ್ಗೆ. | | ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸಮಿತಿಯು ಭರವಸೆಯನ್ನು ಮುಕ್ತಾಯಗೊಳಿಸಿತು. |
| 8 | 3987<br>ಚು.ಗು.ಪ್ರ: 229<br>ಶ್ರೀ ವೀರಕುಮಾರ್ ಅಪ್ಪಾಸೋ ಪಾಟೀಲ್<br>ವಿಪನದಿ: 02.02.2012 | ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನ (NRHM) ಯೋಜನೆಯಲ್ಲಿ ಕೇಂದ್ರ ಸರ್ಕಾರದಿಂದ ಆರೋಗ್ಯ ಇಲಾಖೆಗೆ ಸಾಕಷ್ಟು ಹಣ ಬರುತ್ತಿದ್ದು, ಜಿಲ್ಲಾ ಮಟ್ಟದಲ್ಲಿ ಅದರ ನಿಯಂತ್ರಣಕ್ಕಾಗಿ ಜಿಲ್ಲಾಧಿಕಾರಿ ಅಥವಾ ಜಿಲ್ಲಾ ಮಂತ್ರಿಗಳ ಅಧೀನದಲ್ಲಿ ಸಮಿತಿ ರಚನೆ ಮಾಡುವ ಬಗ್ಗೆ. | ಸನ್ಮಾನ್ಯ ಸದಸ್ಯರ ಸಲಹೆಯನ್ನು ಪರಿಶೀಲನೆ ಮಾಡಿ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಮಾನ್ಯ ಮುಖ್ಯ ಮಂತ್ರಿಯವರು ತಿಳಿಸಿದರು. | ದಿನಾಂಕ: 16.8.2018ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು, ಗ್ರಾಮೀಣ ಜನತೆಯ ಆರೋಗ್ಯ ಸುಧಾರಿಸುವ ಸಲುವಾಗಿ ಕೇಂದ್ರ ಸರ್ಕಾರವು ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನ ಯೋಜನೆ ಏಪ್ರಿಲ್–2005ರಿಂದ ಜಾರಿಗೆ ತಂದಿದ್ದು, ಸದರಿ ಯೋಜನೆಯನ್ನು ಕೇಂದ್ರ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಮಾರ್ಗಸೂಚಿಯ ಅನ್ವಯ ಅನುಷ್ಠಾನಗೊಲಿಸಲು ಮತ್ತು ರಾಜ್ಯ ಹಾಗೂ ಜಿಲ್ಲಾ ಮಟ್ಟದಲಿ ನಿಯಂತ್ರಿಸಲು ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೊಸೈಟಿಯನ್ನು ಮತ್ತು ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೊಸೈಟಿಯನ್ನು ಸರ್ಕಾರದ ಆದೇಶ ಸಂಖ್ಯೆ: ಆಕುಕ 107 ಎಫ್‌ಪಿಆರ್ 2005, ದಿನಾಂಕ: 15.5.2005ರ ಅನ್ವಯ ರಚಿಸಲಾಗಿರುತ್ತದೆ.<br><br>ಈ ಸಮಿತಿಯಲ್ಲಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಜಿಲ್ಲಾ ಪಂಚಾಯತ್ ಇವರು ಅಧ್ಯಕ್ಷರಾಗಿದ್ದು, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಯು ಸದಸ್ಯ ಕಾರ್ಯದರ್ಶಿಯಾಗಿರುತ್ತಾರೆ.<br><br>ರಾಜ್ಯ ಮತ್ತು ಜಿಲ್ಲಾ ಮಟ್ಟದಲ್ಲಿ ರಚಿಸಲಾಗಿರುವ ಸೊಸೈಟಿಯ ನಿಯಮ ಮತ್ತು ಬೈಲಾದನ್ವಯ ರಾಜ್ಯ ಮಟ್ಟದಲ್ಲಿ "ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೊಸೈಟಿ" ಹಾಗೂ "ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೊಸೈಟಿ" ಎಂದು ನೋಂದಾಯಿಸಲು ಹಾಗೂ ನಿಯಮ ಮತ್ತು ಬೈಲಾದ ಅನ್ವಯ |

| | | | | |
|---|---|---|---|---|
| | | | | ಕಾರ್ಯಕ್ರಮಗಳನ್ನು ಅನುಷ್ಠಾನ ಗೊಳಿಸಲಾಗಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸಮಿತಿಯು ಭರವಸೆಯನ್ನು ಮುಕ್ತಾಯಗೊಳಿಸಿತು. |
| 9 | 3988<br>ಚು.ರ.ಪ್ರ. 106<br>ಶ್ರೀ ಕೆ. ಪ್ರತಾಪ್ ಚಂದ್ರ ಶೆಟ್ಟಿ<br>ವಿಪನದಿ: 02.02.2012 | ಆರೋಗ್ಯ ರಕ್ಷಾ ಸಮಿತಿಗೆ ಬಿಡುಗಡೆಯಾದ ಹಣ ವೆಚ್ಚ ಮಾಡದಿರುವ ಬಗ್ಗೆ. | ಆರೋಗ್ಯ ರಕ್ಷಾ ಸಮಿತಿಯು ಈ ಬಗ್ಗೆ ಸ್ವತಂತ್ರವಾಗಿ ನಿರ್ಧಾರ ಕೈಗೊಳ್ಳಲು ಸಂಪೂರ್ಣ ಅಧಿಕಾರ ನೀಡಲಾಗಿದೆ. ಆಯಾಯ ಆರೋಗ್ಯ ರಕ್ಷಾ ಸಮಿತಿಗಳು ತನ್ನ ವಿವೇಚನೆಗೆ ಒಳಪಟ್ಟ ಮಾರ್ಗಸೂಚಿಗಳ ಪ್ರಕಾರ ಸದರಿ ಅನುದಾನವನ್ನು ಉಪಯೋಗಿಸಿಕೊಳ್ಳಬಹುದಾಗಿದೆ ಎಂದು ಮಾನ್ಯ ಮುಖ್ಯಮಂತ್ರಿಯವರು ತಿಳಿಸಿದರು. | ದಿನಾಂಕ: 16.8.2018ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು, ಗ್ರಾಮ ಆರೋಗ್ಯ, ನೈರ್ಮಲ್ಯ ಮತ್ತು ಪೌಷ್ಠಿಕ ಸಮಿತಿಗಳು ಹಾಗೂ ಉಪ ಕೇಂದ್ರಗಳಿಗೆ ಸೇರಿದಂತೆ ಜಿಲ್ಲಾಸ್ಪತ್ರೆ ಮತ್ತು ತಾಯಿ ಮಕ್ಕಳ ಆಸ್ಪತ್ರೆಗೆ ವಾರ್ಷಿಕ ಮುಕ್ತ ನಿಧಿ ಬಿಡುಗಡೆ ಮಾಡಲಾಗುತ್ತಿದೆ. ಈ ಮುಕ್ತ ನಿಧಿಯಿಂದ ರೋಗಿಗಳು ಹಾಗೂ ಅವರ ಜೊತೆ ಬರುವ ಸಂಬಂಧಿಕರಿಗೆ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಿಕೊಡಲು ಬಳಸಲಾಗುತ್ತಿದೆ.<br><br>ಈ ನಿಧಿಯಿಂದ ರೋಗಿಗಳನ್ನು, ಅದರಲ್ಲೂ ವಿಶೇಷವಾಗಿ ಗರ್ಭಿಣಿಯರು ಮತ್ತು ಮಕ್ಕಳನ್ನು ಆಸ್ಪತ್ರೆಗೆ ಕರೆತರಲು, ಮೇಲ್ದರ್ಜೆ ಆಸ್ಪತ್ರೆಗೆ ಕಳುಹಿಸಿಕೊಡಲು ಮತ್ತು ಅವರನ್ನು ಮನೆಗೆ ಕಳುಹಿಸಿ ಕೊಡಲು ಬಳಸಬಹುದಾಗಿದೆ. ಈ ನಿಧಿಯಿಂದ ಆಸ್ಪತ್ರೆಗಳಲ್ಲಿ ದಿನನಿತ್ಯದ ಬಳಕೆಯ ಔಷಧಿಗಳು, ತುರ್ತು ಸಂದರ್ಭದ ಔಷಧಿಗಳನ್ನು ಖರೀದಿಸಲು ಬಳಸಲಾಗುತ್ತಿದೆ. ಈ ಎಲ್ಲಾ ನಿರ್ಣಯಗಳನ್ನು ಸದರಿ ಸಂಸ್ಥೆಗಳ ಆರೋಗ್ಯ ರಕ್ಷಾ ಸಮಿತಿಗಳು ತೆಗೆದುಕೊಳ್ಳುತ್ತವೆ. ಕೆಲವೊಂದು ಸಂದರ್ಭಗಳಲ್ಲಿ ಆರೋಗ್ಯ ರಕ್ಷಾ ಸಮಿತಿಗಳ ಸಭೆ ಸೇರಿ ಅನುಮತಿ ನೀಡಲು ವಿಳಂಬವಾಗುತ್ತಿದ್ದು, ಮುಕ್ತ ನಿಧಿ ಬಳಕೆ ಕುಂಠಿತವಾಗಿದೆ.<br><br>ರಾಷ್ಟ್ರೀಯ ಆರೋಗ್ಯ ಅಭಿಯಾನದ ವತಿಯಿಂದ ಆರೋಗ್ಯ ಸಂಸ್ಥೆಗಳಿಗೆ ಜನನಿ ಶಿಶು ಸುರಕ್ಷಾ ಯೋಜನೆಯಿಂದ ಸಾಕಷ್ಟು ಅನುದಾನ ದೊರಕುತ್ತಿದೆ. ಈ ಹಣದಿಂದಲೂ, ಮೇಲೆ ಹೇಳಿರುವ |

| | | | | |
|---|---|---|---|---|
| | | | | ವಿಷಯಗಳಿಗೆ ಜೆ.ಎಸ್ಎಸ್.ಕೆ. ಅನುದಾನ ಬಳಸಬಹುದಾಗಿದೆ. ಸಮುದಾಯ ಆರೋಗ್ಯ ಕೇಂದ್ರಗಳು ಮತ್ತು ಅದರ ಮೇಲ್ಪಟ್ಟ ಆಸ್ಪತ್ರೆಗಳಲ್ಲಿ ಬಳಕೆದಾರರ ನಿಧಿ ಮತ್ತು ರಾಜ್ಯಮಟ್ಟ ಮತ್ತು ಜಿಲ್ಲಾ ಪಂಚಾಯಿತಿಗಳಿಂದಲೂ ಸಾಕಷ್ಟು ಅನುದಾನ ಲಭ್ಯವಿರುತ್ತದೆ.<br>ಆರೋಗ್ಯ ಸಂಸ್ಥೆಗಳಿಗೆ, ನಿಗದಿತ ಅನುದಾನದ ಬದಲು ಈಗ ರಾಜ್ಯ ಮಟ್ಟದಿಂದ, ಅವುಗಳಿಗೆಷ್ಟು ಔಷಧಿಗಳ ಅವಶ್ಯಕತೆಯಿದೆಯೋ, ಅಷ್ಟು ಔಷಧಿಗಳು ಸರಬರಾಜು ಅಗುತ್ತಿವೆಯೆಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸಮಿತಿಯು ಭರವಸೆಯನ್ನು ಮುಕ್ತಾಯಗೊಳಿಸಿತು. |
| 10 | 3948<br>ಮಾನ್ಯ ಸಭಾಪತಿಯವರ ಅನುಮತಿ ಮೇರೆಗೆ<br>ಶ್ರೀ ಆರ್.ವಿ.ವೆಂಕಟೇಶ್<br>ಶ್ರೀ ಎಂ.ಸಿ. ನಾಣಯ್ಯ<br>ಶ್ರೀ ಗೋ. ಮಧುಸೂಧನ್<br>ಶ್ರೀ ಮನೋಹರ್ ಮಸ್ಕಿ<br>ವಿಪನದಿ: 02.02.2012<br>(ನಗರಾಭಿವೃದ್ಧಿಯಿಂದ ವರ್ಗಾವಣೆ ದಿನಾಂಕ:26.4.2014) | ಬಿ.ಬಿ.ಎಂ.ಪಿ.ಯ ಆಂಬ್ಯುಲೆನ್ಸ್ ಹಾಗೂ 108 ಆರೋಗ್ಯ ಸೇವೆ ಆಂಬ್ಯುಲೆನ್ಸ್‌ಗಳು ಸಾಕಷ್ಟಿಲ್ಲದೆ ಸಾರ್ವಜನಿಕರಿಗೆ ತೊಂದರೆ ಯಾಗಿರುವ ಬಗ್ಗೆ. | ಆರೋಗ್ಯ ಕವಚ ಯೋಜನೆಯಡಿ 108 ಆಂಬ್ಯುಲೆನ್ಸ್ ಸೇವೆಯನ್ನು ಪಾಲಿಕೆ ವ್ಯಾಪ್ತಿಯಿಂದ 58 ಆಂಬ್ಯುಲೆನ್ಸ್ ಗಳನ್ನು ಸಾರ್ವಜನಿಕರ ಸಲುವಾಗಿ ಬಳಕೆ ಮಾಡಲಾಗುತ್ತಿದೆ. ಇನ್ನೂ ಹೆಚ್ಚಿನ ತುರ್ತು ಸೇವೆಯನ್ನು ಪಾಲಿಕೆಯ ವ್ಯಾಪ್ತಿಯಿಂದ ಒದಗಿಸುವ ದೃಷ್ಟಿಯಿಂದ ಮುಂದಿನ ದಿವಸಗಳಲ್ಲಿ ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಆಂಬ್ಯುಲೆನ್ಸ್‌ಗಳನ್ನು ಒದಗಿಸಲು ಪ್ರಯತ್ನವನ್ನು ಮಾಡಲಾಗುವುದು ಎಂದು ಮಾನ್ಯ ಮುಖ್ಯಮಂತ್ರಿಯವರು ತಿಳಿಸಿದರು. | ದಿನಾಂಕ: 16.8.2018ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು, ರಾಜ್ಯದಲ್ಲಿ ಆರೋಗ್ಯ ಕವಚ 108 ಯೋಜನೆಯಡಿ ಒಟ್ಟು 1461 ಆಂಬ್ಯುಲೆನ್ಸ್ ಸೇವೆ ಲಭ್ಯವಿರುತ್ತದೆ.<br>2017–18ನೇ ಸಾಲಿನ ರಾಷ್ಟ್ರೀಯ ಆರೋಗ್ಯ ಅಭಿಯಾನ ಮತ್ತು ರಾಜ್ಯ ಸರ್ಕಾರದ ಅನುದಾನದಿಂದ, ಆರೋಗ್ಯ ಕವಚ ಸೇವೆಯ 371 ಹಳೆಯ ಆಂಬ್ಯುಲೆನ್ಸ್‌ಗಳನ್ನು ಬದಲಾಯಿಸಿ ಹೊಸ ಸುಸಜ್ಜಿತ ಆಂಬ್ಯುಲೆನ್ಸ್‌ಗಳನ್ನು "108" ಆರೋಗ್ಯ ಕವಚ ಸೇವೆಯೊಳಗೆ ವಿಲೀನಗೊಳಿಸಿ ದಿನಾಂಕ: 30.10.2017ರಂದು ಆದೇಶ ಹೊರಡಿಸಲಾಗಿದೆ.<br>2015–16, 2016–17 ಮತ್ತು 2017–2018ನೇ ಸಾಲಿನ ಎಸ್.ಡಿ.ಪಿ. ಅನುದಾನದಿಂದ ರಾಜ್ಯದ ವಿವಿಧ ಆಸ್ಪತ್ರೆಗಳಿಗೆ 52 ಹೊಸ ಸುಸಜ್ಜಿತ ಆಂಬ್ಯುಲೆನ್ಸ್‌ಗಳನ್ನು ಸೇರ್ಪಡೆಗೊಳಿಸಲಾಗುತ್ತದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸಮಿತಿಯು ಭರವಸೆಯನ್ನು ಮುಕ್ತಾಯಗೊಳಿಸಿತು. |

| | | | | |
|---|---|---|---|---|
| 11 | 4163<br>ಚು.ಗು.ಪ್ರ 348<br>ಶ್ರೀ ಘೋಟ್ನೇಕರ ಶ್ರೀಕಾಂತ ಲಕ್ಷ್ಮಣ<br>ವಿಪನದಿ: 20.07.2012 | ಕಾರವಾರ ಜಿಲ್ಲೆಯಲ್ಲಿ ಖಾಲಿಯಿರುವ ಸರ್ಕಾರಿ ವೈದ್ಯರ ಹುದ್ದೆಗಳನ್ನು ತುಂಬುವ ಬಗ್ಗೆ. | ಕಾರವಾರ ಜಿಲ್ಲೆಯಲ್ಲಿ ವಿಶೇಷ ಪ್ರಯತ್ನ ಮಾಡಿ ಖಾಲಿ ಇರುವಂತಹ ಹುದ್ದೆಗಳನ್ನು ತುಂಬುವಂತಹ ಪ್ರಯತ್ನ ಮಾಡುತ್ತೇನೆಂದು ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ತಿಳಿಸಿದರು. | ದಿನಾಂಕ: 16.8.2018ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು, 2012ನೇ ಸಾಲಿನಲ್ಲಿ 75 ತಜ್ಞ ವೈದ್ಯರನ್ನು ಮತ್ತು 2015ರಲ್ಲಿ 218 ತಜ್ಞ ವೈದ್ಯರು ಹಾಗೂ 2016ರಲ್ಲಿ 37 ತಜ್ಞ ವೈದ್ಯರುಗಳನ್ನು ನೇಮಕಾತಿ ಮಾಡಲಾಗಿದೆ. 2015ರಲ್ಲಿ 212 ಹಗೂ 2016ರಲ್ಲಿ 48 ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳನ್ನು ಕೆ.ಪಿ.ಎಸ್.ಸಿ. ಮುಖಾಂತರ ನೇಮಕಾತಿ ಮಾಡಲಾಗಿದೆ.<br>ಉತ್ತರ ಕನ್ನಡ ಜಿಲ್ಲೆಯ ವಿವಿಧ ಆರೋಗ್ಯ ಕೇಂದ್ರಗಳಲ್ಲಿನ ತಜ್ಞರು/ವೈದ್ಯಾಧಿಕಾರಿಗ ಹುದ್ದೆಗಳ ವಿವರ ಕೆಳಕಂಡಂತಿದೆ. |

| ಆಸ್ಪತ್ರೆ ಮತ್ತು ಹುದ್ದೆಯ ಹೆಸರು | ಮಂ | ಕಾ | ಖಾ |
|---|---|---|---|
| **ಜಿಲ್ಲಾ ಆಸ್ಪತೆ, ಕಾರವಾರ (ತಜ್ಞರು)** | **33** | **13** | **20** |
| **11 ಸಾರ್ವಜನಿಕ ಆಸ್ಪತ್ರೆ (ತಜ್ಞರು)** | **121** | **86** | **35** |
| **2 ಸಮುದಾಯ ಆರೋಗ್ಯ ಕೇಂದ್ರ (ತಜ್ಞರು)** | **10** | **5** | **5** |
| **106 ಪ್ರಾಥಮಿಕ ಆರೋಗ್ಯ ಕೇಂದ್ರ** | **88** | **85** | **03** |

ಇಲಾಖೆಯಲ್ಲಿ ಖಾಲಿ ಇರುವ ತಜ್ಞರು ಹಾಗೂ ವೈದ್ಯಾಧಿಕಾರಿ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡುವವರೆಗೆ ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಲು ಎಲ್ಲಾ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಆರೋಗ್ಯ ಮತ್ತು ಕುಟಂಬ ಕಲ್ಯಾಣ ಅಧಿಕಾರಿಗಳಿಗೆ ಅನುಮತಿ ನೀಡಿದೆ. ಜೊತೆಗೆ, ತಜ್ಞರು ಲಭ್ಯವಿಲ್ಲದ ಆಸ್ಪತ್ರೆಗಳಲ್ಲಿ ತಾತ್ಕಾಲಿಕವಾಗಿ ಎಂಬಿಬಿಎಸ್ ವೈದ್ಯರನ್ನು ಗುತ್ತಿಗೆ ಆಧಾರದಲ್ಲಿ ನೇಮಿಸಿಕೊಳ್ಳಲು ಸಹ ಅನುಮತಿ ನೀಡಲಾಗಿದೆ.

| | | | | |
|---|---|---|---|---|
| | | | | ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ವೈದ್ಯಾಧಿಕಾರಿ ಹುದ್ದೆಗಳಿಗೆ ಎಂಬಿಬಿಎಸ್. ವಿದ್ಯಾರ್ಹತೆಯ ಅಭ್ಯರ್ಥಿಗಳು ಲಭ್ಯವಿಲ್ಲದಿದ್ದಲ್ಲಿ ಆಯುಷ್ ವೈದ್ಯರನ್ನು ಸಹ ಗುತ್ತಿಗೆ ಆಧಾರದಲ್ಲಿ ನೇಮಿಸಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ. ಅಲ್ಲದೆ, ಖಾಯಂ ತಜ್ಞರು ಲಭ್ಯವಿಲ್ಲದ ಸಂದರ್ಭದಲ್ಲಿ ತುರ್ತು ಪರಿಸ್ಥಿತಿಯನ್ನು ನಿಭಾಯಿಸಲು on call basis ಆಧಾರದಲ್ಲಿ ಖಾಸಗಿ ತಜ್ಞರ ಸೇವೆಯನ್ನು ಪಡೆಯಲು ಸಹ ಅವಕಾಶ ಕಲ್ಪಿಸಲಾಗಿದೆ. ಇದರ ಜೊತೆಗೆ, ವಯೋನಿವೃತ್ತಿ ಹೊಂದಿದ ತಜ್ಞರು/ವೈದ್ಯರನ್ನು ಗರಿಷ್ಠ 65 ವರ್ಷ ವಯೋಮಿತಿಯವರೆಗೆ ಪ್ರತಿ ವರ್ಷ ನವೀಕರಿಸುವ ಷರತ್ತಿಗೊಳಪಟ್ಟು ಗುತ್ತಿಗೆ ಆಧಾರದಲ್ಲಿ ಮರು ನೇಮಕಾತಿ ಮಾಡಿಕೊಳ್ಳಲು ಆಯಾ ಜಿಲ್ಲಾಧಿಕಾರಿಗಳಿಗೆ ಅಧಿಕಾರ ನೀಡಲಾಗಿದೆ.<br><br>ಮುಂದುವರಿದು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಖಾಲಿ ಇರುವ ವಿವಿಧ ತಜ್ಞತೆಗಳ 1065 ತಜ್ಞ ವೈದ್ಯರು ಹಾಗೂ 365+111 (ಹೈ.ಕ) ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿ ಹುದ್ದೆಗಳನ್ನು ವಿಶೇಷ ನೇಮಕಾತಿ ನಿಯಮಗಳನ್ವಯ ನೇರ ನೇಮಕಾತಿಯಿಂದ ಭರ್ತಿ ಮಾಡಲು ಕರ್ನಾಟಕ ಲೋಕಸೇವಾ ಆಯೋಗಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿತ್ತು. ಆಯೋಗವು ಅರ್ಹ 382 ತಜ್ಞರ ಅಂತಿಮ ಆಯ್ಕೆ ಪಟ್ಟಿಯನ್ನು ಸರ್ಕಾರಕ್ಕೆ ಸಲ್ಲಿಸಿರುತ್ತದೆ. ವೈದ್ಯಾಧಿಕಾರಿಗಳ ಅಂತಿಮ ಆಯ್ಕೆ ಪಟ್ಟಿಯನ್ನು ಶೀಘ್ರದಲ್ಲಿಯೇ ಸಲ್ಲಿಸಲಿದೆ. ಈ ಹುದ್ದೆಗಳಿಗೆ ಆಯ್ಕೆಯಾಗಿರುವ ಅಭ್ಯರ್ಥಿಗಳಿಗೆ ಸದ್ಯದಲ್ಲಿಯೇ ಸಮಾಲೋಚನೆ ಮೂಲಕ ನೇಮಕಾತಿ ಆದೇಶ ನೀಡಿ, ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುವುದೆಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸಮಿತಿಯು ಭರವಸೆಯನ್ನು ಮುಕ್ತಾಯಗೊಳಿಸಿತು. |

| | | | | |
|---|---|---|---|---|
| 12 | 4164<br>ಚು.ಗು.ಪ್ರ 256<br>ಶ್ರೀ ಅಲ್ಲಮಪ್ರಭು ಪಾಟೀಲ್<br>ವಿಪನದಿ: 20.07.2012 | ಗುಲ್ಬರ್ಗಾ ಮತ್ತು ಯಾದಗಿರಿ ಜಿಲ್ಲೆಗಳಲ್ಲಿರುವ ತಾಲ್ಲೂಕು ಆಸ್ಪತ್ರೆ, ಪ್ರಾಥಮಿಕ ಆರೋಗ್ಯ ಕೇಂದ್ರ, ಪ್ರಾಥಮಿಕ ಆರೋಗ್ಯ ಘಟಕ, ಸಮುದಾಯ ಕೇಂದ್ರಗಳಲ್ಲಿ, ವೈದ್ಯರು ಮತ್ತು ಸಿಬ್ಬಂದಿಯ ಕೊರತೆ ಇರುವ ಬಗ್ಗೆ. | ಮಾನ್ಯ ಸದಸ್ಯರು ನೀಡಿರುವ ಸಲಹೆಗಳನ್ನು ಸ್ವೀಕರಿಸಿ, ಎಲ್ಲಿ ಕೊರತೆಯಿದೆ ಅವುಗಳನ್ನು ಸರಿಪಡಿಸತಕ್ಕ ಕೆಲಸವನ್ನು ಮುಂದಿನ ದಿವಸಗಳಲ್ಲಿ ಮಾಡುವುದಾಗಿ ಭರವಸೆಯನ್ನು ನೀಡುತ್ತೇನೆ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ತಿಳಿಸಿದರು. | ದಿನಾಂಕ: 16.8.2018ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು,<br>• ಪ್ರಸ್ತುತ ಗುಲ್ಬರ್ಗಾ ಜಿಲ್ಲಾ ಆಸ್ಪತ್ರೆಯಲ್ಲಿ 96 ತಜ್ಞ ವೈದ್ಯರ ಹುದ್ದೆಗಳು ಮಂಜೂರಾಗಿದ್ದು, ಈ ಪೈಕಿ 59 ತಜ್ಞರು ಕರ್ತವ್ಯ ನಿರ್ವಹಿಸುತ್ತಿದ್ದಾರೆ. 37 ತಜ್ಞರ ಹುದ್ದೆಗಳು ಖಾಲಿ ಇವೆ.<br>• ಗುಲ್ಬರ್ಗಾ ಜಿಲ್ಲೆಯಲ್ಲಿ 6 ಸಾರ್ವಜನಿಕ ಆಸ್ಪತ್ರೆ ಇದ್ದು, ಇದರಲ್ಲಿ 80 ತಜ್ಞ ವೈದ್ಯರ ಹುದ್ದೆಗಳು ಮಂಜೂರಾಗಿದ್ದು, ಈ ಪೈಕಿ 55 ತಜ್ಞರು ಕರ್ತವ್ಯ ನಿರ್ವಹಿಸುತ್ತಿದ್ದಾರೆ. 25 ತಜ್ಞರ ಹುದ್ದೆಗಳು ಖಾಲಿ ಇವೆ.<br>• ಗುಲ್ಬರ್ಗಾ ಜಿಲ್ಲೆಯಲ್ಲಿ 15 ಸಮುದಾಯ ಆರೋಗ್ಯ ಕೇಂದ್ರ ಇದ್ದು, ಇದರಲ್ಲಿ 75 ತಜ್ಞ ವೈದ್ಯರ ಹುದ್ದೆಗಳು ಮಂಜೂರಾಗಿದ್ದು, ಈ ಪೈಕಿ 48 ತಜ್ಞರು ಕರ್ತವ್ಯ ನಿರ್ವಹಿಸುತ್ತಿದ್ದಾರೆ. 27 ತಜ್ಞ ಹುದ್ದೆಗಳು ಖಾಲಿ ಇವೆ.<br>• ಗುಲ್ಬರ್ಗಾ ಜಿಲ್ಲೆಯಲ್ಲಿ 100 ಪ್ರಾಥಮಿಕ ಆರೋಗ್ಯ ಕೇಂದ್ರ ಇದ್ದು, ಇದರಲ್ಲಿ 100 ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳ ಹುದ್ದೆ ಮಂಜೂರಾಗಿದ್ದು, ಈ ಪೈಕಿ 94 ವೈದ್ಯರು ಕಾರ್ಯನಿರ್ವಹಿಸುತ್ತಿದ್ದಾರೆ. 06 ವೈದ್ಯರ ಹುದ್ದೆಗಳು ಖಾಲಿ ಇವೆ.<br>• ಯಾದಗಿರಿ ಜಿಲ್ಲಾ ಆಸ್ಪತ್ರೆಯಲ್ಲಿ 19 ತಜ್ಞ ವೈದ್ಯರ ಹುದ್ದೆಗಳು ಮಂಜೂರಾಗಿದ್ದು, ಈ ಪೈಕಿ 14 ತಜ್ಞರು ಕರ್ತವ್ಯ ನಿರ್ವಹಿಸುತ್ತಿದ್ದಾರೆ. 05 ತಜ್ಞರ ಹುದ್ದೆಗಳು ಖಾಲಿ ಇವೆ.<br>• ಯಾದಗಿರಿ ಜಿಲ್ಲೆಯಲ್ಲಿ 2 ಸಾರ್ವಜನಿಕ ಆಸ್ಪತ್ರೆ ಇದ್ದು, ಇದರಲ್ಲಿ 23 ತಜ್ಞ ವೈದ್ಯರ ಹುದ್ದೆಗಳು ಮಂಜೂರಾಗಿದ್ದು, ಈ ಪೈಕಿ 11 ತಜ್ಞರು ಕರ್ತವ್ಯ ನಿರ್ವಹಿಸುತ್ತಿದ್ದಾರೆ. 12 ತಜ್ಞರ ಹುದ್ದೆಗಳು ಖಾಲಿ ಇವೆ. |

| | | | | |
|---|---|---|---|---|
| | | | | • ಯಾದಗಿರಿ ಜಿಲ್ಲೆಯಲ್ಲಿ 6 ಸಮುದಾಯ ಆರೋಗ್ಯ ಕೇಂದ್ರ ಇದ್ದು, ಇದರಲ್ಲಿ 30 ತಜ್ಞ ವೈದ್ಯರ ಹುದ್ದೆಗಳು ಮಂಜೂರಾಗಿದ್ದು, ಈ ಪೈಕಿ 16 ತಜ್ಞರು ಕರ್ತವ್ಯ ನಿರ್ವಹಿಸುತ್ತಿದ್ದಾರೆ. 14 ತಜ್ಞರ ಹುದ್ದೆಗಳು ಖಾಲಿ ಇವೆ.<br>• ಯಾದಗಿರಿ ಜಿಲ್ಲೆಯಲ್ಲಿ 42 ಪ್ರಾಥಮಿಕ ಆರೋಗ್ಯ ಕೇಂದ್ರ ಇದ್ದು, ಇದರಲ್ಲಿ 42 ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳ ಹುದ್ದೆ ಮಂಜೂರಾಗಿದ್ದು, ಈ ಪೈಕಿ 40 ವೈದ್ಯರು ಕಾರ್ಯನಿರ್ವಹಿಸುತ್ತಿದ್ದಾರೆ. 02 ವೈದ್ಯರ ಹುದ್ದೆಗಳು ಖಾಲಿ ಇವೆ.<br><br>**ವೈದ್ಯರುಗಳ ಕೊರತೆ ನೀಗಿಸಲು ಕೆಳಕಂಡಂತೆ ಕ್ರಮ ವಹಿಸಲಾಗಿದೆ.**<br><br>1. ಸರ್ಕಾರದ ಆದೇಶ ಸಂಖ್ಯೆ: ಆಕುಕ 297 ಹೆಚ್‌ಎಸ್‌ಹೆಚ್ 2015, ದಿ: 22.4.2016ರಲ್ಲಿ ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಲು ಎಲ್ಲಾ ಜಿಲ್ಲಾಧಿಕಾರಿಗಳು ಹಾಗೂ ಎಲ್ಲಾ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳಿಗೆ ಗ್ರಾಮೀಣ ಪ್ರದೇಶದಲ್ಲಿ ವೈದ್ಯರಿಲ್ಲದ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ವೈದ್ಯರನ್ನು ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಲು ಅನುಮತಿ ನೀಡಲಾಗಿದೆ.<br>2. ಕೆ.ಪಿ.ಎಸ್.ಸಿ. ಮುಖಾಂತರ 382 ತಜ್ಞ ವೈದ್ಯರ ನೇಮಕಾತಿಗೆ ಅಂತಿಮ ಪಟ್ಟಿ ಪ್ರಚುರ ಪಡಿಸಿ, ಕೌನ್ಸಿಲಿಂಗ್ ಭಾಗವಹಿಸಿದ 226 ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ಹೊರಡಿಸಲಾಗಿದೆ.<br>3. 365+111 ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳನ್ನು ನೇಮಕಾತಿ ಮಾಡಲು ಕೆ.ಪಿ.ಎಸ್.ಸಿ. ಮುಖಾಂತರ ನೇಮಕಾತಿ ಪ್ರಕ್ರಿಯೆ ಚಾಲನೆಯಲ್ಲಿದೆ. |

| | | | | |
|---|---|---|---|---|
| | | | | 4. ಖಾಲಿ ಇರುವ ತಜ್ಞ ವೈದ್ಯರನ್ನು ಎನ್.ಹೆಚ್.ಎಂ. ಅಡಿಯಲ್ಲಿ ಬಿಡ್ ಮೂಲಕ ನೇಮಕಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಜೊತೆಗೆ, ಗುತ್ತಿಗೆ ಆಧಾರದಲ್ಲಿ ಹಾಗೂ ಕರೆ ಆಧಾರದಲ್ಲಿ (on call basis) ಸಹ ನೇಮಕಾತಿ ಮಾಡಲು ಅವಕಾಶ ಕಲ್ಪಿಸಿದೆ.<br>5. ವಯೋನಿವೃತ್ತಿ ಹೊಂದಿದ ತಜ್ಞರು ಹಾಗೂ ವೈದ್ಯರನ್ನು 65 ವರ್ಷ ವಯಸ್ಸಿನವರೆಗೆ ಪ್ರತಿ ವರ್ಷ ನವೀಕರಿಸುವ ಷರತ್ತಿಗೊಳಪಟ್ಟು ಗುತ್ತಿಗೆ ಆಧಾರದಲ್ಲಿ ಮರು ನೇಮಕಾತಿ ಮಾಡಿಕೊಳ್ಳಲು ಅವಕಾಶ ಕಲ್ಪಿಸಿದೆ.<br>ಖಾಲಿ ಇರುವ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಕಾಲಕಾಲಕ್ಕೆ ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸಮಿತಿಯು ಭರವಸೆಯನ್ನು ಮುಕ್ತಾಯಗೊಳಿಸಿತು. |
| 13 | 4165<br>ಚು.ಗು.ಪ್ರ 95<br>ಶ್ರೀ ಪಟೇಲ್ ಶಿವರಾಂ<br>ವಿಪನದಿ: 20.07.2012 | ಹಾಸನ ನಗರದ ಪೆನ್‌ಷನ್ ಮೊಹಲ್ಲಾ, ಮಯೂಬ್ ನಗರ ನಿವಾಸಿಗಳಾದ ಸಯ್ಯದ್ ಇಬ್ರಾಹಿಂ ಹಾಗೂ ಅವರ ಪುತ್ರ ಮುನ್ವರ್ ಮಲೈಕಾ ಎನ್ನುವವರು ಡೆಂಗ್ಯೂ ಜ್ವರದಿಂದ ಮೃತಪಟ್ಟಿದ್ದು, ಗ್ರಾಮೀಣ ಪ್ರದೇಶದಲ್ಲಿ ಇನ್ನೂ ಅನೇಕ ಜನರು ಡೆಂಗ್ಯೂ ಜ್ವರದಿಂದ ಬಳಲುತ್ತಿದ್ದು ಹಾಗೂ ಮೃತಪಟ್ಟಿರುವ ಬಗ್ಗೆ. | ಮಾನ್ಯ ಸದಸ್ಯರು ಹೇಳಿದಂತಹ ಪ್ರಕರಣ ಸರ್ಕಾರದ ಗಮನಕ್ಕೆ ಬಂದಿಲ್ಲ ನಾನು ಇದರ ಬಗ್ಗೆ ನಿಶ್ಚಿತವಾಗಿ ಪರಿಶೀಲಿಸುತ್ತೇನೆ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ತಿಳಿಸಿದರು. | ದಿನಾಂಕ: 16.8.2018ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು, ಪರಿಶೀಲಿಸಲಾಗಿ 2 ಮರಣ ಪ್ರಕರಣಗಳು ಪತ್ತೆಯಾಗಿವೆ. ಅದರಂತೆ, ಹಾಸನದ ಜಿಲ್ಲಾ ಹಾಗೂ ರಾಜ್ಯ ಮಟ್ಟದ ಡೆಂಗ್ಯೂ ಮರಣ ತಪಾಸಣಾ ಸಮಿತಿಯು ಈ ಎರಡೂ ಮರಣ ಪ್ರಕರಣಗಳು ಡೆಂಗ್ಯೂ ಜ್ವರದಿಂದ ಸಂಭವಿಸಿರುವುದಿಲ್ಲವೆಂದ ದೃಢೀಕರಿಸುತ್ತದೆ. 2012ನೇ ಸಾಲಿನಲ್ಲಿ (ಡಿಸೆಂಬರ್ ಅಂತ್ಯದವರೆಗೆ ಹಾಸನ ಜಿಲ್ಲೆಯಲ್ಲಿ ಒಟ್ಟು 20 ಡೆಂಗ್ಯೂ ಪ್ರಕರಣಗಳು ವರದಿಯಾಗಿದ್ದು, ಯಾವುದೇ ದೃಢೀಕೃತ ಮರಣ ಪ್ರಕರಣಗಳು ವರದಿಯಾಗಿರುವುದಿಲ್ಲವೆಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸಮಿತಿಯು ಭರವಸೆಯನ್ನು ಮುಕ್ತಾಯಗೊಳಿಸಿತು. |
| 14 | 4167<br>ಚು.ಗು.ಪ್ರ; 651 | ಗುಲ್ಬರ್ಗಾ ಜಿಲ್ಲೆ ಜೇವರ್ಗಿ | ನಿಶ್ಚಿತವಾಗಿ ಮಾಹಿತಿಗಳನ್ನು ತರಿಸಿ | ದಿನಾಂಕ: 16.8.2018ರಂದು ನಡೆದ ಸಮಿತಿ ಸಭೆಯಲ್ಲಿ |

| | | | | |
|---|---|---|---|---|
| | ಶ್ರೀ ಅಲ್ಲಮಪ್ರಭು ಪಾಟೀಲ್<br>ವಿಪನದಿ: 27.07.2012 | ತಾಲ್ಲೂಕಿನ ಮಳ್ಳಿಗ್ರಾಮದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ ಸ್ಥಾಪಿಸುವ ಬಗ್ಗೆ. | ಪರಿಶೀಲನೆ ಮಾಡುತ್ತೇನೆ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ತಿಳಿಸಿದರು. | ಚರ್ಚಿಸಲಾಯಿತು, ಸರ್ಕಾರದ ಆದೇಶ ಸಂಖ್ಯೆ: ಆಕುಕ/513/ಸಿಜೆಎಂ/2012, ದಿ: 4.2.2013ರಲ್ಲಿ ಗುಲ್ಬರ್ಗಾ ಜಿಲ್ಲೆ ಜೇವರ್ಗಿ ತಾಲ್ಲೂಕಿನ ಮಳ್ಳಿ ಗ್ರಾಮದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ ಸ್ಥಾಪಿಸಲು ಅನುಮತಿ ನೀಡಲಾಗಿದ್ದು, ಕಟ್ಟಡ ಕಾಮಗಾರಿ ಪೂರ್ಣಗೊಂಡಿದ್ದು ಕಾರ್ಯಾರಂಭಗೊಂಡಿದೆ ಯೆಂದು ಇಲಾಖೆಯ ಅಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸಮಿತಿಯು ಭರವಸೆಯನ್ನು ಮುಕ್ತಾಯಗೊಳಿಸಿತು. |
| 15. | 4242<br>ಸಭಾಪತಿಯವರ ಅಪ್ಪಣೆ ಮೇರೆಗೆ<br>ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ<br>ವಿಪನದಿ: 11.12.2012 | ಬೆಳಗಾವಿ ಜಿಲ್ಲೆಯ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು ಚಿಕ್ಕೋಡಿ ತಾಲ್ಲೂಕಿನ ಜೈನಾಪುರ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ವೈದ್ಯರ ಹಾಗೂ ಸಿಬ್ಬಂದಿ ಕೊರತೆ ಅಲ್ಲದೆ, ವಿದ್ಯುತ್ ಸಮಸ್ಯೆ, ನೀರಿನ ಸೌಕರ್ಯವಿಲ್ಲದಿರುವುದು, ಶೌಚಾಲಯದ ಅವ್ಯವಸ್ಥೆ ಬಗ್ಗೆ ನಿರ್ಲಕ್ಷ್ಯ ತೋರಿರುವ ಕುರಿತು. | ಅಲ್ಲಿನ ವೈದ್ಯರು ಪ್ರಸೂತಿ ರಜೆಯ ಮೇಲೆ ತೆರಳಿದ್ದಾರೆ ಹೀಗಾಗಿ ವೈದ್ಯರ ಕೊರತೆಯಾಗಿದೆ. ನಮ್ಮಲ್ಲಿ ಹಣದ ಕೊರತೆ ಇರುವುದಿಲ್ಲ. ನಿಶ್ಚಿತವಾಗಿಯೂ ಅದನ್ನು ಸರಿಪಡಿಸುವಂತಹ ಕೆಲಸವನ್ನು ಮಾಡುತ್ತೇನೆ. ಉಳಿದಂತಹ ಕೊರತೆಗಳ ಬಗ್ಗೆ ತಕ್ಷಣ ಕ್ರಮ ಜರುಗಿಸುತ್ತೇನೆ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ತಿಳಿಸಿದರು. | ದಿನಾಂಕ: 16.8.2018ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು, ಬೆಳಗಾವಿ ಜಿಲ್ಲೆ, ಚಿಕ್ಕೋಡಿ ತಾಲ್ಲೂಕಿನ ಜೈನಾಪುರದ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ 19 ವಿವಿಧ ವೃಂದದ ಹುದ್ದೆಗಳು ಮಂಜೂರಾಗಿದ್ದು, ಈ ಪೈಕಿ 12 ವಿವಿಧ ವೃಂದದ ನೌಕರರ ಕರ್ತವ್ಯ ನಿರ್ವಹಿಸುತ್ತಿದ್ದಾರೆ. 7 ಹುದ್ದೆಗಳು ಖಾಲಿ ಇವೆ. ಜೈನಾಪುರ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಒಂದು ಸಾಮಾನ್ಯ ಕರ್ತವ್ಯ ವೈದ್ರ ಹುದ್ದೆ ಮಂಜೂರಾಗಿದ್ದು, ಈ ಹುದ್ದೆಯಲ್ಲಿ ಗುತ್ತಿಗೆ ಆಧಾರದಲ್ಲಿ ಆಯುಷ್ ವೈದ್ಯರು ಕರ್ತವ್ಯ ನಿರ್ವಹಿಸುತ್ತಿದ್ದಾರೆ.<br>ಪ್ರಾಥಮಿಕ ಆರೋಗ್ಯ ಕೇಂದ್ರ್ಕೆ ವಿದ್ಯುತ್ ವ್ಯವಸ್ಥೆ ಇದ್ದು, 1 ಕೊಳವೆ ಬಾವಿ ಇರುತ್ತದೆ. ನೀರಿನ ಕೊರತೆ ಇರುವದಿಲ್ಲ.<br>ವಾರ್ಡ್‌ನಲ್ಲಿರುವ ಶೌಚಾಲಯಗಳನ್ನು ಸ್ವಚ್ಚವಾಗಿಡಲು ಕ್ರಮ ಜರುಗಿಸಲಾಗಿದೆ.<br>ಸದರಿ ಪ್ರಾಥಮಿಕ ಆರೋಗ್ಯ ಕೇಂದ್ರದ ಕಟ್ಟಡ ಹೊಸದಾಗಿ ನಿರ್ಮಾಣಗೊಂಡಿದ್ದು, ಆ ಕಟ್ಟಡದಲ್ಲಿ ದಿ: 8.5.2018ರಿಂದ ಕಾರ್ಯಾರಂಭ ಮಾಡಲಾಗಿದೆಯೆಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸಮಿತಿಯು ಭರವಸೆಯನ್ನು ಮುಕ್ತಾಯಗೊಳಿಸಿತು. |
| 16 | 4244<br>ಚು.ರ.ಪ್ರ:147 | ಕೊಡಗು ಜಿಲ್ಲೆಯ ಸೋಮವಾರಪೇಟೆ | ಇಲಾಖೆಯಲ್ಲಿ ಲಭ್ಯವಿರುವ ಅನುದಾನದಲ್ಲಿ ರಾಜ್ಯಾದ್ಯಂತ | ದಿನಾಂಕ: 16.8.2018ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು, ಸೋಮವಾರಪೇಟೆ ಸಾರ್ವಜನಿಕ ಆಸ್ಪತ್ರೆಯಲ್ಲಿ |

| | | | | |
|---|---|---|---|---|
| | ಶ್ರೀ ಟಿ. ಜಾನ್<br>ವಿಪನದಿ:11.02.2013 | ಸಾರ್ವಜನಿಕ ಆಸ್ಪತ್ರೆಯಲ್ಲಿ ವೈದ್ಯಾಧಿಕಾರಿಗಳಿಗೆ ವಸತಿ ಗೃಹಗಳು ಇಲ್ಲದಿರುವ ಬಗ್ಗೆ. | ಕಟ್ಟಡವಿಲ್ಲದಿರುವ ಆಸ್ಪತ್ರೆಗಳಿಗೆ ಆದ್ಯತೆಯ ಮೇರೆಗೆ ಕಟ್ಟಡ ನಿರ್ಮಾಣ ಮಾಡುವ ಬಗ್ಗೆ ಕ್ರಮ ಕೈಗೊಳ್ಳಲಾಗಿದ್ದು,<br>ವೈದ್ಯಾಧಿಕಾರಿಗಳ ವಸತಿ ಗೃಹ ನಿರ್ಮಾಣಕ್ಕಾಗಿ ಅಂದಾಜನ್ನು ರೂ.130 ಲಕ್ಷಗಳಿಗೆ ತಯಾರಿಸಲಾಗಿದೆ. ಅನುದಾನದ ಲಭ್ಯತೆ ಆಧಾರದ ಮೇಲೆ ವಸತಿ ಗೃಹಗಳ ನಿರ್ಮಾಣಕ್ಕೆ ಕ್ರಮ ಕೈಗೊಳ್ಳಲಾಗುವುದು ಎಂದು ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ತಿಳಿಸಿದರು. | ವೈದ್ಯಾಧಿಕಾರಿಗಳ 4 ವಸತಿ ಗೃಹ ನಿರ್ಮಾಣ ಕಾಮಗಾರಿ ಅಂದಾಜು ಮೊತ್ತ ರೂ. 120.00 ಲಕ್ಷಗಳಿಗೆ ಲೆಕ್ಕಶೀರ್ಷಿಕೆ: 4210–01–110–1–01–059 (ಇತರೆ ವೆಚ್ಚಗಳು) ಗಳಿಗೆ ಮಂಜೂರಾಗಿರುತ್ತದೆ. ಸದರಿ ಕಾಮಗಾರಿಯನ್ನು ಟೆಂಡರ್ ಆಧಾರದ ಮೇಲೆ ಕೈಗೆತ್ತಿಕೊಂಡಿದ್ದು, ಕಾಮಗಾರಿಯು ಮುಕ್ತಾಯದ ಹಂತದಲ್ಲಿರುತ್ತದೆ. ಸದರಿ ಸ್ಥಳವು ಹೆಚ್ಚುವರಿ ಮಳೆ ಬೀಳುವ ಪ್ರದೇಶವಾಗಿರುವುದರಿಂದ ಕಾಮಗಾರಿಯ ಪ್ರಗತಿಯಲ್ಲಿ ವಿಳಂಬವಾಗಿರುತ್ತದೆ. ಹಾಗಾಗಿ ನವೆಂಬರ್ 2018ಕ್ಕೆ ಕಾಮಗಾರಿಯನ್ನು ಸಂಪೂರ್ಣವಾಗಿ ಪೂರ್ಣಗೊಳಿಸಲು ಉದ್ದೇಶಿಸಲಾಗಿರುತ್ತದೆಯೆಂದು ಇಲಾಖೆಯ ಅಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸಮಿತಿಯು ಭರವಸೆಯನ್ನು ಮುಕ್ತಾಯಗೊಳಿಸಿತು. |
| 17. | 4497<br>ಚು.ಗು.ಪ್ರ: 97<br>ಶ್ರೀ ಮಹಾಂತೇಶ್ ಶಿವಾನಂದ ಕೌಜಲಗಿ<br>ವಿಪನದಿ: 15.07.2013 | ತಾಲ್ಲೂಕು ಕೇಂದ್ರದ ಸರ್ಕಾರಿ ಆಸ್ಪತ್ರೆಗಳಲ್ಲಿ ಡಯಾಲಿಸಿಸ್ ಕೇಂದ್ರಗಳನ್ನು ಪ್ರಾರಂಭಿಸುವ ಬಗ್ಗೆ. | ಪ್ರತಿ ಜಿಲ್ಲೆಯ ತಾಲ್ಲೂಕೊಂದರಲ್ಲಿ ಡಯಾಲಿಸಿಸ್ ಕೇಂದ್ರವನ್ನು ಪ್ರಾರಂಭಿಸುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ ಎಂದು ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ತಿಳಿಸಿದರು. | ದಿನಾಂಕ: 16.8.2018ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು, 2013–14ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಿರುವಂತೆ ಪ್ರತಿ ಜಿಲ್ಲೆಯ ಪ್ರತಿ ತಾಲೂಕು ಆಸ್ಪತ್ರೆಗೆ ಒಂದರಂತೆ ಒಟ್ಟು 34 ತಾಲ್ಲೂಕು ಆಸ್ಪತ್ರೆಗಳಲ್ಲಿ ಡಯಾಲಿಸಿಸ್ ಕೇಂದ್ರಗಳನ್ನು ಪ್ರಾರಂಭಿಸಲಾಗಿದೆ.<br>2017–18ನೇ ಸಾಲಿನ ಆಯ–ವ್ಯಯದಲ್ಲಿ ಘೋಷಿಸಿರುವಂತೆ ಹೊಸದಾಗಿ 74 ತಾಲ್ಲೂಕು ಆಸ್ಪತ್ರೆಗಳಲ್ಲಿ (ಒಟ್ಟು 108) ಡಯಾಲಿಸಿಸ್ ಕೇಂದ್ರಗಳನ್ನು ಪ್ರಾರಂಭಿಸಲಾಗಿದೆಯೆಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸಮಿತಿಯು ಭರವಸೆಯನ್ನು ಮುಕ್ತಾಯಗೊಳಿಸಿತು. |
| 18 | 4499<br>ಚು.ರ.ಪ್ರ: 170<br>ಶ್ರೀ ಇ.ಕೃಷ್ಣಪ್ಪ | ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಮಾಗಡಿ, | ಸರ್ಕಾರಿ ಆದೇಶ ಮಾಡಿ ವಿವಿಧ ಹುದ್ದೆಗಳ ಒಟ್ಟು 3579 ಹುದ್ದೆಗಳಿಗೆ | ದಿನಾಂಕ: 16.8.2018ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು, 2013ರಲ್ಲಿ ವಿವಿಧ ಹುದ್ದೆಗಳಿಗೆ ನೇಮಕಾತಿ |

<table>
<tr>
<td></td>
<td>ವಿಪನದಿ: 15.7.2013</td>
<td>ನೆಲಮಂಗಲ, ದಾವನಹಳ್ಳಿ, ರಾಮನಗರ, ಜಿಲ್ಲೆಯ ಚನ್ನಪಟ್ಟಣ, ಕನಕಪುರ ಹಾಗೂ ಇತರೆ ತಾಲ್ಲೂಕುಗಳಲ್ಲಿ ಸರ್ಕಾರಿ ವೈದ್ಯರ ಕೊರತೆ ಇದ್ದು ಖಾಲಿ ಇರುವ ಹುದ್ದೆಗಳನ್ನು ಭರ್ತಿಮಾಡುವ ಕುರಿತು.</td>
<td>ಅಭ್ಯರ್ಥಿಗಳನ್ನು ನೇಮಕ ಮಾಡಿದ್ದು ಆದೇಶಕೊಡುವಂತಹ ಸಂದರ್ಭದಲ್ಲಿ ಹೈದರಾಬಾದ ಕರ್ನಾಟಕಕ್ಕೆ ಸಂಬಂಧ ಪಟ್ಟಂತೆ ಅದಕ್ಕೆ ಅನುಗುಣವಾಗಿ ಮಾಡಬೇಕೆ ಬೇಡವೆ ಎನ್ನುವ ಕಾರಣಕ್ಕಾಗಿ ಸ್ಪಷ್ಟೀಕರಣ ಕೇಳಲಾಗಿದೆ. ಘೋಷಣೆ ಆಗುವ ಮುಂಚೆ ಆಯ್ಕೆಯಾಗಿರುವ ಕಾರಣ ಸರ್ಟಿಫಿಕೇಟ್ ಕೊಡಬಹುದು ಎನ್ನುವಂತಹ ಅಭಿಪ್ರಾಯ ವ್ಯಕ್ತವಾದ ಕಾರಣ ಒಪ್ಪಿಗೆಗಾಗಿ ಕಳುಹಿಸಿಕೊಟ್ಟಿದ್ದು ಒಪ್ಪಿಗೆ ಬಂದ ತಕ್ಷಣ ನೇಮಕಾತಿ ಆದೇಶ ಕಳುಹಿಸಿಕೊಟ್ಟು ಎಲ್ಲಾ ವೈದ್ಯರ ಕೊರತೆ ಇದೆ. ಅಲ್ಲಿರುವ ಜಿಲ್ಲಾ ಆಸ್ಪತ್ರೆಗಳಿಗೆ ಕಳುಸಿಕೊಡುವಂತಹ ವ್ಯವಸ್ಥೆ ಮಾಡುತ್ತೇವೆ ಎಂದು ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ತಿಳಿಸಿದರು.</td>
<td>ಮಾಡುವಾಗ ಹೈದ್ರಾಬಾದ್–ಕರ್ನಾಟಕ ಮತ್ತು ಇತರೆ ಜಿಲ್ಲೆಗಳಿಗೆ ನೇಮಕಾತಿ ಮಾಡಲಾಗಿದೆ.<br><br>ಬೆಂಗಳೂರು ಗ್ರಾಮಾಂತರ ಮತ್ತು ರಾಮನಗರ ಜಿಲ್ಲೆಗಳ ವಿವಿಧ ಆರೋಗ್ಯ ಕೇಂದ್ರಗಳಲ್ಲಿನ ತಜ್ಞರು/ವೈದ್ಯಾಧಿಕಾರಿ ಹುದ್ದೆಗಳ ವಿವರ ಕೆಳಕಂಡಂತಿದೆ:–
<table>
<tr><th>ಆಸ್ಪತ್ರೆ/ಕೇಂದ್ರಗಳು</th><th>ಮಂ</th><th>ಕಾ</th><th>ಖಾ</th></tr>
<tr><td colspan="4">ಬೆಂಗಳೂರು ಗ್ರಾಮಾಂತರ ಜಿಲ್ಲೆ</td></tr>
<tr><td>4 ಸಾರ್ವಜನಿಕ ಆಸ್ಪತ್ರೆ</td><td>44</td><td>39</td><td>5</td></tr>
<tr><td>2 ಸಮುದಾಯ ಆರೋಗ್ಯ ಕೇಂದ್ರಗಳು</td><td>10</td><td>08</td><td>2</td></tr>
<tr><td>51 ಪ್ರಾಥಮಿಕ ಆರೋಗ್ಯ ಕೇಂದ್ರಗಳು</td><td>51</td><td>48</td><td>3</td></tr>
<tr><td colspan="4">ರಾಮನಗರ ಜಿಲ್ಲೆ</td></tr>
<tr><td>ಜಿಲ್ಲಾ ಆಸ್ಪತ್ರೆ, ರಾಮನಗರ</td><td>17</td><td>12</td><td>5</td></tr>
<tr><td>3 ಸಾರ್ವಜನಿಕ ಆಸ್ಪತ್ರೆ</td><td>32</td><td>27</td><td>5</td></tr>
<tr><td>4 ಸಮುದಾಯ ಆರೋಗ್ಯ ಕೇಂದ್ರಗಳು</td><td>15</td><td>12</td><td>3</td></tr>
<tr><td>63 ಪ್ರಾಥಮಿಕ ಆರೋಗ್ಯ ಕೇಂದ್ರಗಳು</td><td>63</td><td>62</td><td>1</td></tr>
</table>
<br>ಇಲಾಖೆಯಲ್ಲಿ ಖಾಲಿ ಇರುವ ತಜ್ಞರು ಹಾಗೂ ವೈದ್ಯಾಧಿಕಾರಿ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡುವವರೆಗೆ</td>
</tr>
</table>

| | | | | |
|---|---|---|---|---|
| | | | | ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಲು ಎಲ್ಲಾ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳಿಗೆ ಅನುಮತಿ ನೀಡಲಾಗಿದೆ. ಜೊತೆಗೆ, ತಜ್ಞರು ಲಭ್ಯವಿಲ್ಲದ ಆಸ್ಪತ್ರೆಗಳಲ್ಲಿ ತಾತ್ಕಾಲಿಕವಾಗಿ ಎಂ.ಬಿ.ಬಿ.ಎಸ್ ವೈದ್ಯರನ್ನು ಗುತ್ತಿಗೆ ಆಧಾರದಲ್ಲಿ ನೇಮಿಸಿಕೊಳ್ಳಲು ಸಹ ಅನುಮತಿ ನೀಡಲಾಗಿದೆ. ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿನ ವೈದ್ಯಾಧಿಕಾರಿ ಹುದ್ದೆಗಳಿಗೆ ಎಂಬಿ.ಬಿ.ಎಸ್. ವಿದ್ಯಾರ್ಹತೆಯ ಅಭ್ಯರ್ಥಿಗಳು ಲಭ್ಯವಿಲ್ಲದಿದ್ದಲ್ಲಿ ಆಯುಷ್ ವೈದ್ಯರನ್ನು ಸಹ ಗುತ್ತಿಗೆ ಆಧಾರದಲ್ಲಿ ನೇಮಿಸಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ. ಅಲ್ಲದೆ, ಖಾಯಂ ತಜ್ಞರು ಲಭ್ಯವಿಲ್ಲದ ಸಂದರ್ಭದಲ್ಲಿ ತುರ್ತು ಪರಿಸ್ಥಿತಿಯನ್ನು ನಿಭಾಯಿಸಲು on call basis ಆಧಾರದಲ್ಲಿ ಖಾಸಗಿ ತಜ್ಞರ ಸೇವೆಯನ್ನು ಪಡೆಯಲು ಸಹ ಅವಕಾಶ ಕಲ್ಪಿಸಿದೆ. ಇದರ ಜೊತೆಗೆ, ವಯೋನಿವೃತ್ತಿ ಹೊಂದಿದ ತಜ್ಞರು/ವೈದ್ಯರನ್ನು ಗರಿಷ್ಠ 65 ವರ್ಷ ವಯೋಮಿತಿಯವರೆಗೆ ಪ್ರತಿ ವರ್ಷ ನವೀಕರಿಸುವ ಷರತ್ತಿಗೊಳಪಟ್ಟು ಗುತ್ತಿಗೆ ಆಧಾರದಲ್ಲಿ ಮರು ನೇಮಕಾತಿ ಮಾಡಿಕೊಳ್ಳಲು ಆಯಾ ಜಿಲ್ಲಾಧಿಕಾರಿಗಳಿಗೆ ಅಧಿಕಾರ ನೀಡಲಾಗಿದೆ.<br><br>ಮುಂದುವರಿದು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಖಾಲಿ ಇರುವ ವಿವಿಧ ತಜ್ಞತೆಗಳ 1065 ತಜ್ಞ ವೈದ್ಯರು ಹಾಗೂ 365+111 (ಹೈ.ಕ) ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿ ಹುದ್ದೆಗಳನ್ನು ವಿಶೇಷ ನೇಮಕಾತಿ ನಿಯಮಗಳನ್ವಯ ನೇರ ನೇಮಕಾತಿಯಿಂದ ಭರ್ತಿ ಮಾಡಲು ಕರ್ನಾಟಕ ಲೋಕಸೇವಾ ಆಯೋಗಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿತ್ತು. ಆಯೋಗವು ಅರ್ಹ 382 ತಜ್ಞರ ಅಂತಿಮ ಆಯ್ಕೆ ಪಟ್ಟಿಯನ್ನು ಸರ್ಕಾರಕ್ಕೆ ಸಲ್ಲಿಸಿರುತ್ತದೆ. ವೈದ್ಯಾಧಿಕಾರಿಗಳ ಅಂತಿಮ ಆಯ್ಕೆ ಪಟ್ಟಿಯನ್ನು ಶೀಘ್ರದಲ್ಲಿಯೇ ಸಲ್ಲಿಸಲಿದೆ. ಈ ಹುದ್ದೆಗಳಿಗೆ ಆಯ್ಕೆಯಾಗಿರುವ ಅಭ್ಯರ್ಥಿಗಳಿಗೆ ಸದ್ಯದಲ್ಲಿಯೇ ಸಮಾಲೋಚನೆ ಮೂಲಕ ನೇಮಕಾತಿ ಆದೇಶ ನೀಡಿ, |

| | | | | |
|---|---|---|---|---|
| | | | | ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುವುದೆಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸಮಿತಿಯು ಭರವಸೆಯನ್ನು ಮುಕ್ತಾಯಗೊಳಿಸಿತು. |
| 19 | 4500<br>ಚು.ರ.ಪ್ರ: 345<br>ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ)<br>ವಿಪನದಿ: 15.07.2013 | ತುಮಕೂರು ಜಿಲ್ಲೆ, ತುರುವೇಕೆರೆ ತಾಲ್ಲೂಕು ಮಾಯಸಂದ್ರ ಗ್ರಾಮದಲ್ಲಿ ನೂತನ ಆಸ್ಪತ್ರೆ ಪ್ರಾರಂಭಿಸುವ ಬಗ್ಗೆ. | ಮಾಯಸಂದ್ರ ಆರೋಗ್ಯ ಕೇಂದ್ರ ಕಟ್ಟಡ ನಿರ್ಮಾಣಕ್ಕಾಗಿ ಅಂದಾಜು ಪಟ್ಟಿ ತಯಾರಿಸಲಾಗಿದ್ದು ಟೆಂಡರ್ ಪ್ರಕ್ರಿಯೆ ಮುಗಿದ ನಂತರ ಕಾಮಗಾರಿಯನ್ನು ಕೈಗೊಂಡು ಮುಕ್ತಾಯಗೊಳಿಸುವ ಬಗ್ಗೆ ಪರಿಶೀಲಿಸಲಾವುದು ಎಂದು ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ತಿಳಿಸಿದರು. | ದಿನಾಂಕ: 16.8.2018ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು, ತುಮಕೂರು ಜಿಲ್ಲೆ ತುರುವೇಕೆರೆ ತಾಲ್ಲೂಕು ಮಾಯಸಂದ್ರ ಗ್ರಾಮದಲ್ಲಿ ವಿಶ್ವಬ್ಯಾಂಕ್ ಯೋಜನೆಯಡಿ 24x7 ಮಾದರಿಯ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ರೂ. 115.00 ಲಕ್ಷಗಳ ಅಂದಾಜಿನೊಂದಿಗೆ ನಿರ್ಮಿಸಿದ್ದು, ಕಾಮಗಾರಿಯು ಮುಕ್ತಾಯಗೊಂಡಿರುತ್ತದೆ. ದಿ: 10.12.2015ರಂದು ಮಾಯಸಂದ್ರ ಪ್ರಾಥಮಿಕ ಆರೋಗ್ಯ ಕೇಂದ್ರ ವೈದ್ಯಾಧಿಕಾರಿಗಳು ನೂತನ ಕಟ್ಟಡವನ್ನು ಹಸ್ತಾಂತರಿಸಿಕೊಂಡು, ದಿ: 18.5.2016ರಂದು ನೂತನ ಕಟ್ಟಡ ಉದ್ಘಾಟನೆ ಮಾಡಲಾಗಿದೆಯೆಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸಮಿತಿಯು ಭರವಸೆಯನ್ನು ಮುಕ್ತಾಯಗೊಳಿಸಿತು. |
| 20 | 4502<br>ಸಭಾಪತಿಯವರ ಅಪ್ಪಣೆ ಮೇರೆಗೆ<br>ಶ್ರೀ ಕೋಟ ಶ್ರೀನಿವಾಸ ಪೂಜಾರಿ<br>ವಿಪನದಿ: 15.07.2013 | ಉಡುಪಿ ತಾಲ್ಲೂಕು ಸಾಸ್ತಾನದ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಬಡ ವರ್ಗದ ರೋಗಿಗಳಿಗೆ ಸೂಕ್ತ ಔಷದೋಪಚಾರದ ಕೊರತೆಯ ಬಗ್ಗೆ. | ಈ ಬಗ್ಗೆ ತಕ್ಷಣ ವರದಿಯನ್ನು ತರಿಸಿಕೊಂಡು ಅದರ ಬಗ್ಗೆ ಸೂಕ್ತವಾದ ಕ್ರಮವನ್ನು ತೆಗೆದುಕೊಳ್ಳುತ್ತೇನೆ ಎಂದು ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ತಿಳಿಸಿದರು. | ದಿನಾಂಕ: 16.8.2018ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು, ಉಡುಪಿ ತಾಲ್ಲೂಕು ಸರ್ಕಾರಿ ಆಸ್ಪತ್ರೆಗಳಲ್ಲಿ ಆರೋಗ್ಯ ಸಂಸ್ಥೆಗಳಿಗೆ ಅವರ ಬೇಡಿಕೆಗನುಸಾರ ಔಷಧಿಗಳನ್ನು ಮಂಗಳೂರು ಜಿಲ್ಲಾ ಔಷಧ ಉಗ್ರಾಣದಿಂದ ಪೂರೈಸಲಾಗುತ್ತಿದೆ. ಮಂಗಳೂರು ಜಿಲ್ಲಾ ಔಷಧ ಉಗ್ರಾಣದಲ್ಲಿ ಯಾವುದಾದರೂ ಲಭ್ಯವಿಲ್ಲದಿದ್ದ ಅವಶ್ಯ ಔಷಧಿಗಳನ್ನು ತುರ್ತು ಸಂದರ್ಭದಲ್ಲಿ ಪೂರೈಸಲು ಆರೋಗ್ಯ ಸಂಸ್ಥೆಯಲ್ಲಿ ಲಭ್ಯವಿರುವ ಯೂಸರ್ ಫಂಡ್ (User fund) ಹಾಗೂ ಎನ್.ಹೆಚ್.ಎಂ ವತಿಯಿಂದ ನೇರವಾಗಿ (Free Drugs Initative) ಅನುದಾನ ಜಿಲ್ಲಾ ಆಸ್ಪತ್ರೆಗೆ ರೂ. 25.00 ಲಕ್ಷ, ತಾಲ್ಲೂಕು ಆಸ್ಪತ್ರೆಗಳಿಗೆ ರೂ. 10.00 ಲಕ್ಷ, ಸಮುದಾಯ ಆರೋಗ್ಯ ಕೇಂದ್ರಗಳಿಗೆ ರೂ. 50,000.00ಗಳನ್ನು ಬಿಡುಗಡೆ ಮಾಡಲಾಗುತ್ತದೆ. ಮುಕ್ತ ನಿಧಿಯಿಂದ ಔಷಧಿಗಳನ್ನು |

<table>
<tr>
<td></td>
<td></td>
<td></td>
<td></td>
<td>ಖರೀದಿಸಿ ಉಪಯೋಗಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಒಂದು ವೇಳೆ ಔಷಧಿಗಳಿಗೆ ಹೆಚ್ಚಿವರ ಬೇಡಿಕೆ ಬಂದಂತಹ ಪಕ್ಷದಲ್ಲಿ ಔಷಧಿಗಳನ್ನು ಇತರೆ ಜಿಲ್ಲಾ ಔಷಧ ಉಗ್ರಾಣಗಳ ಮೂಲಕ ಸರಬರಾಜು ಮಾಡಲು ಸಹ ಕ್ರಮ ಕೈಗೊಳ್ಳಲಾಗುತ್ತಿದೆಯೆಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸಮಿತಿಯು ಭರವಸೆಯನ್ನು ಮುಕ್ತಾಯಗೊಳಿಸಿತು.</td>
</tr>
<tr>
<td>21</td>
<td>4504<br>ಚು.ಗು.ಪ್ರ:306<br>ಶ್ರೀ ಆರ್.ಕೆ. ಸಿದ್ದರಾಮಣ್ಣ<br>ವಿಪನದಿ:<br>22–07–2013</td>
<td>ಶಿವಮೊಗ್ಗ ಮತ್ತು ದಾವಣಗೆರೆ ಜಿಲ್ಲೆಗಳ ತೀರ್ಥಹಳ್ಳಿ, ಹೊಸನಗರ, ಸಾಗರ ಮತ್ತು ಹೊನ್ನಾಳಿ, ಹಾಗೂ ಚನ್ನಗಿರಿ ತಾಲ್ಲೂಕುಗಳ ಪ್ರಾಥಮಿಕ ಮತ್ತು ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ ಖಾಲಿ ಇರುವ ಅಥವಾ ವೈದ್ಯರು ಇಲ್ಲದೆ ಇರುವ ಕೇಂದ್ರಗಳಿಗೆ ವೈದ್ಯರನ್ನು ನೇಮಿಸುವ ಕುರಿತು.</td>
<td>ಈ ಬಗ್ಗೆ ಸಂಬಂಧಪಟ್ಟವರೊಂದಿಗೆ ಚರ್ಚಿಸಿ ಸೂಕ್ತ ಕ್ರಮವನ್ನು ತೆಗೆದುಕೊಳ್ಳಲಾಗುವುದೆಂದು ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರುತಿಳಿಸಿದರು.</td>
<td>ದಿನಾಂಕ: 16.8.2018ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು, 2015ರಲ್ಲಿ 218 ತಜ್ಞ ವೈದ್ಯರು ಹಾಗೂ 2016ರಲ್ಲಿ 37 ತಜ್ಞ ವೈದ್ಯರುಗಳನ್ನು ನೇಮಕಾತಿ ಮಾಡಲಾಗಿದೆ. 2015ರಲ್ಲಿ 212 ಹಾಗೂ 2016ರಲ್ಲಿ 48 ಸಾಮಾನ್ಯ ಕರ್ತವ್ಯ ವ್ಯದ್ಯಾಧಿಕಾರಿಗಳನ್ನು ಕೆ.ಪಿ.ಎಸ್.ಸಿ. ಮುಖಾಂತರ ನೇಮಕಾತಿ ಮಾಡಲಾಗಿದೆ.<br><br>ಶಿವಮೊಗ್ಗ ಮತ್ತು ದಾವಣಗೆರೆ ಜಿಲ್ಲೆಗಳ ವಿವಿಧ ಆರೋಗ್ಯ ಕೇಂದ್ರಗಳಲ್ಲಿನ ತಜ್ಞರು/ವೈದ್ಯಾಧಿಕಾರಿ ಹುದ್ದೆಗಳ ವಿವರ ಕೆಳಕಂಡಂತಿದೆ :
<table>
<tr><th>ಆಸ್ಪತ್ರೆ ಮತ್ತು ಹುದ್ದೆಯ ಹೆಸರು</th><th>ಮಂ</th><th>ಕಾ</th><th>ಖಾ</th></tr>
<tr><td>ಸಾರ್ವಜನಿಕ ಆಸ್ಪತ್ರೆ, ತೀರ್ಥಹಳ್ಳಿ</td><td>11</td><td>9</td><td>2</td></tr>
<tr><td>ಸಮುದಾಯ ಆರೋಗ್ಯ ಕೇಂದ್ರ, ಕನ್ನಂಗಿ</td><td>5</td><td>2</td><td>3</td></tr>
<tr><td>ತೀರ್ಥಹಳ್ಳಿ ತಾಲ್ಲೂಕಿನ ಪ್ರಾಥಮಿಕ ಆರೋಗ್ಯ ಕೇಂದ್ರಗಳು</td><td>15</td><td>15</td><td></td></tr>
<tr><td>ಸಾರ್ವಜನಿಕ ಆಸ್ಪತ್ರೆ, ಹೊಸನಗರ</td><td>11</td><td>2</td><td>9</td></tr>
<tr><td>ಹೊಸನಗರ ತಾಲ್ಲೂಕಿನ ಪ್ರಾಥಮಿಕ ಆರೋಗ್ಯ ಕೇಂದ್ರಗಳು</td><td>10</td><td>10</td><td>–</td></tr>
<tr><td>ಸಾರ್ವಜನಿಕ ಆಸ್ಪತ್ರೆ, ಸಾಗರ</td><td>12</td><td>8</td><td>4</td></tr>
<tr><td>ಸಮುದಾಯ ಆರೋಗ್ಯ ಕೇಂದ್ರ, ಆನಂದಪುರಂ</td><td>5</td><td>2</td><td>3</td></tr>
</table>
</td>
</tr>
</table>

| | | | |
|---|---|---|---|
| ಸಾರ್ವಜನಿಕ ಆಸ್ಪತ್ರೆ, ಚನ್ನಗಿರಿ | 11 | 11 | – |
| ಸಮುದಾಯ ಆರೋಗ್ಯ ಕೇಂದ್ರ, ಸಂತೆಬೆನ್ನೂರು | 5 | 3 | 2 |
| ಸಮುದಾಯ ಆರೋಗ್ಯ ಕೇಂದ್ರ, ಕೆರೆಬಿಳಚಿ | 5 | 3 | 2 |
| ಸಾರ್ವಜನಿಕ ಆಸ್ಪತ್ರೆ, ಹೊನ್ನಾಳಿ | 11 | 10 | 1 |
| ಸಮುದಾಯ ಅರೋಗ್ಯ ಕೇಂದ್ರ, ನ್ಯಾಮತಿ | 5 | 3 | 2 |
| ಹೊನ್ನಾಳಿ ತಾಲ್ಲೂಕಿನ ಪ್ರಾಥಮಿಕ ಆರೋಗ್ಯ ಕೇಂದ್ರಗಳು | 11 | 11 | – |

ಇಲಾಖೆಯಲ್ಲಿ ಖಾಲಿ ಇರುವ ತಜ್ಞರು ಹಾಗೂ ವ್ಯದ್ಯಾಧಿಕಾರಿ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡುವವರೆಗೆ ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಲು ಎಲ್ಲಾ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳಿಗೆ ಅನುಮತಿ ನೀಡಲಾಗಿದೆ. ಜೊತೆಗೆ, ತಜ್ಞರು ಲಭ್ಯವಿಲ್ಲದ ಅಸ್ಪತ್ರೆಗಳಲ್ಲಿ ತಾತ್ಕಾಲಿಕವಾಗಿ ಎಂಬಿಬಿಎಸ್ ವೈದ್ಯರನ್ನು ಗುತ್ತಿಗೆ ಆಧಾರದಲ್ಲಿ ನೇಮಿಸಿಕೊಳ್ಳಲು ಸಹ ಅನುಮತಿ ನೀಡಲಾಗಿದೆ. ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿನ ವೈದ್ಯಾಧಿಕಾರಿ ಹುದ್ದೆಗಳಿಗೆ ಎಂ.ಬಿ.ಬಿ.ಎಸ್. ವಿದ್ಯಾರ್ಹತೆಯ ಅಭ್ಯರ್ಥಿಗಳು ಲಭ್ಯವಿಲ್ಲದಿದ್ದಲ್ಲಿ ಆಯುಷ್ ವೈದ್ಯರನ್ನು ಸಹ ಗುತ್ತಿಗೆ ಆಧಾರದಲ್ಲಿ ನೇಮಿಸಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ. ಅಲ್ಲದೆ, ಖಾಯಂ ತಜ್ಞರು ಲಭ್ಯವಿಲ್ಲದ ಸಂದರ್ಭದಲ್ಲಿ ತುರ್ತು ಪರಿಸ್ಥಿತಿಯನ್ನು ನಿಭಾಯಿಸಲು on call basis ಆಧಾರದಲ್ಲಿ ಖಾಸಗಿ ತಜ್ಞರ ಸೇವೆಯನ್ನು ಪಡೆಯಲು ಸಹ ಅವಕಾಶ ಕಲ್ಪಿಸಿದೆ. ಇದರ ಜೊತೆಗೆ, ವಯೋನಿವೃತ್ತಿ ಹೊಂದಿದ ತಜ್ಞರು/ವೈದ್ಯರನ್ನು ಗರಿಷ್ಠ 65 ವರ್ಷ ವಯೋಮಿತಿಯವರೆಗೆ ಪ್ರತಿ ವರ್ಷ ನವೀಕರಿಸುವ ಷರತ್ತಿಗೊಳಪಟ್ಟು ಗುತ್ತಿಗೆ ಆಧಾರದಲ್ಲಿ ಮರು ನೇಮಕಾತ ಮಾಡಿಕೊಳ್ಳಲು ಆಯಾ ಜಿಲ್ಲಾಧಿಕಾರಿಗಳಿಗೆ ಅಧಿಕಾರ

<table>
<tr><td></td><td></td><td></td><td></td><td>ನೀಡಲಾಗಿದೆ.<br><br>ಮುಂದುವರಿದು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಖಾಲಿ ಇರುವ ವಿವಿಧ ತಜ್ಞತೆಗಳ 1065 ತಜ್ಞ ವೈದ್ಯರು ಹಾಗೂ 365+111 (ಹೈ.ಕ) ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿ ಹುದ್ದೆಗಳನ್ನು ವಿಶೇಷ ನೇಮಕಾತಿ ನಿಯಮಗಳನ್ವಯ ನೇರ ನೇಮಕಾತಿಯಿಂದ ಭರ್ತಿ ಮಾಡಲು ಕರ್ನಾಟಕ ಲೋಕಸೇವಾ ಆಯೋಗಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿತ್ತು. ಆಯೋಗವು ಅರ್ಹ 382 ತಜ್ಞರ ಅಂತಿಮ ಆಯ್ಕೆ ಪಟ್ಟಿಯನ್ನು ಸರ್ಕಾರಕ್ಕೆ ಸಲ್ಲಿಸಿರುತ್ತದೆ. ವೈದ್ಯಾಧಿಕಾರಿಗಳ ಆಯ್ಕೆ ಪಟ್ಟಿಯನ್ನು ಶೀಘ್ರದಲ್ಲಿಯೇ ಸಲ್ಲಿಸಲಿದೆ. ಈ ಹುದ್ದೆಗಳಿಗೆ ಆಯ್ಕೆಯಾಗಿರುವ ಅಭ್ಯರ್ಥಿಗಳಿಗೆ ಸದ್ಯದಲ್ಲಿಯೇ ಸಮಾಲೋಚನೆ ಮೂಲಕ ನೇಮಕಾತಿ ಆದೇಶ ನೀಡಿ, ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುವುದೆಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸಮಿತಿಯು ಭರವಸೆಯನ್ನು ಮುಕ್ತಾಯಗೊಳಿಸಿತು.</td></tr>
<tr><td>22</td><td>4505<br>ಚು.ಗು.ಪ್ರ: 813<br>ಶ್ರೀಮತಿ ಎ.ವಿ. ಗಾಯಿತ್ರಿ ಶಾಂತೇಗೌಡ<br>ವಿಪನದಿ:<br>22-07-2013</td><td>ಚಿಕ್ಕಮಗಳೂರು ಜಿಲ್ಲೆ, ಮೂಡಿಗೆರೆ ತಾಲ್ಲೂಕಿನ ಸರ್ಕಾರಿ ಆಸ್ಪತ್ರೆಗೆ ತುರ್ತಾಗಿ ಅಗತ್ಯವಿರುವ ವೈದ್ಯರನ್ನು ನೇಮಿಸುವ ಕುರಿತು.</td><td>ಮೂಡಿಗೆರೆ ಪ್ರದೇಶವನ್ನು ಕ್ಲಿಷ್ಟಕರ ಸನ್ನಿವೇಶದ ಪ್ರದೇಶವೆಂದು ಪರಿಗಣಿಸಿ ಪ್ರಥಮ ಆದ್ಯತೆಯ ಮೇರೆಗೆಅಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಿ ವೈದ್ಯರ ಕೊರತೆಯನ್ನು ನೀಗಿಸಲು ಪ್ರಯತ್ನಿಸುವುದಾಗಿ ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ತಿಳಿಸಿದರು.</td><td>ದಿನಾಂಕ: 16.8.2018ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು, ಚಿಕ್ಕಮಗಳೂರು ಜಿಲ್ಲೆ, ಮೂಡಿಗೆರೆ ಸಾರ್ವಜನಿಕ ಆಸ್ಪತ್ರೆಯಲ್ಲಿನ ತಜ್ಞರು/ವೈದ್ಯರ ವಿವರ ಕೆಳಕಂಡಂತಿದೆ:-<table><tr><th>ಆಸ್ಪತ್ರೆ ಹೆಸರು</th><th>ಮಂ</th><th>ಕಾ</th><th>ಖಾ</th></tr><tr><td>ಸಾರ್ವಜನಿಕ ಆಸ್ಪತೆ, ಮೂಡಿಗೆರೆ</td><td>15</td><td>7</td><td>8</td></tr></table>ಇಲಾಖೆಯಲ್ಲಿ ಖಾಲಿ ಇರುವ ತಜ್ಞರು ಹಾಗೂ ವೈದ್ಯಾಧಿಕಾರಿ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡುವವರೆಗೆ ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಲು ಎಲ್ಲಾ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳಿಗೆ ಅನುಮತಿ ನೀಡಲಾಗಿದೆ. ಜೊತೆಗೆ, ತಜ್ಞರು</td></tr>
</table>

| | | | | |
|---|---|---|---|---|
| | | | | ಲಭ್ಯವಿಲ್ಲದ ಆಸ್ಪತ್ರೆಗಳಲ್ಲಿ ತಾತ್ಕಾಲಿಕವಾಗಿ ಎಂ.ಬಿ.ಬಿ.ಎಸ್. ವೈದ್ಯರನ್ನು ಗುತ್ತಿಗೆ ಆಧಾರದಲ್ಲಿ ನೇಮಿಸಿಕೊಳ್ಳಲು ಸಹ ಅನುಮತಿ ನೀಡಲಾಗಿದೆ. ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿನ ವೈದ್ಯಾಧಿಕಾರಿ ಹುದ್ದೆಗಳಿಗೆ ಎಂಬಿಬಿಎಸ್ ವಿದ್ಯಾರ್ಹತೆಯ ಅಭ್ಯರ್ಥಿಗಳು ಲಭ್ಯವಿಲ್ಲದಿದ್ದಲ್ಲಿ ಆಯುಷ್ ವೈದ್ಯರನ್ನು ಸಹ ಗುತ್ತಿಗೆ ಆಧಾರದಲ್ಲಿ ನೇಮಿಸಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ. ಅಲ್ಲದೆ, ಖಾಯಂ ತಜ್ಞರು ಲಭ್ಯವಿಲ್ಲದ ಸಂದರ್ಭದಲ್ಲಿ ತುರ್ತು ಪರಿಸ್ಥಿತಿಯನ್ನು ನಿಭಾಯಿಸಲು ಆಧಾರದಲ್ಲಿ ಖಾಸಗಿ ತಜ್ಞರ ಸೇವೆಯನ್ನು ಪಡೆಯಲು ಸಹ ಅವಕಾಶ ಕಲ್ಪಿಸಿದೆ. ಇದರ ಜೊತೆಗೆ, ವಯೋನಿವೃತ್ತಿ ಹೊಂದಿದ ತಜ್ಞರು/ವೈದ್ಯರನ್ನು ಗರಿಷ್ಠ 65 ವರ್ಷ ವಯೋಮಿತಿಯವರೆಗೆ ಪ್ರತಿ ವರ್ಷ ನವೀಕರಿಸುವ ಷರತ್ತಿಗೊಳಪಟ್ಟು ಗುತ್ತಿಗೆ ಆಧಾರದಲ್ಲಿ ಮರು ನೇಮಕಾತಿ ಮಾಡಿಕೊಳ್ಳಲು ಆಯಾ ಜಿಲ್ಲಾಧಿಕಾರಿಗಳಿಗೆ ಅಧಿಕಾರ ನೀಡಲಾಗಿದೆ.<br><br>ಮುಂದುವರಿದು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಖಾಲಿ ಇರುವ ವಿವಿಧ ತಜ್ಞತೆಗಳ 1065 ತಜ್ಞ ವೈದ್ಯರು ಹಗೂ 365+111 (ಹೈ.ಕ) ಸಾಮಾನ್ಯ ಕರ್ತವ್ಯ ವ್ಯದ್ಯಾಧಿಕಾರಿ ಹುದ್ದೆಗಳನ್ನು ವಿಶೇಷ ನೇಮಕಾತಿ ನಿಯಮಗಳನ್ವಯ ನೇರ ನೇಮಕಾತಿಯಿಂದ ಭರ್ತಿ ಮಾಡಲು ಕರ್ನಾಟಕ ಲೋಕಸೇವಾ ಆಯೋಗಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿತ್ತು. ಆಯೋಗವು ಅರ್ಹ 382 ತಜ್ಞರ ಅಂತಿಮ ಆಯ್ಕೆ ಪಟ್ಟಿಯನ್ನು ಸರ್ಕಾರಕ್ಕೆ ಸಲ್ಲಿಸಿರುತ್ತದೆ. ವೈದ್ಯಾಧಿಕಾರಿಗಳ ಅಂತಿಮ ಆಯ್ಕೆ ಪಟ್ಟಿಯನ್ನು ಶೀಘ್ರದಲ್ಲಿಯೇ ಸಲ್ಲಿಸಲಿದೆ. ಈ ಹುದ್ದೆಗಳಿಗೆ ಆಯ್ಕೆಯಾಗಿರುವ ಅಭ್ಯರ್ಥಿಗಳಿಗೆ ಸದ್ಯದಲ್ಲಿಯೇ ಸಮಾಲೋಚನೆ ಮೂಲಕ ನೇಮಕಾತಿ ಆದೇಶ ನೀಡಿ, ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುವುದೆಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸಮಿತಿಯು ಭರವಸೆಯನ್ನು ಮುಕ್ತಾಯಗೊಳಿಸಿತು. |
| 23 | 4508<br>ಗ.ಸೆ.ಸೂ | ಬೆಂಗಳೂರು, ದಾವಣಗೆರೆ, ಮೈಸೂರು, ಮಣಿಪಾಲ್, | ಈ ರೋಗಿಗಳಿಗೆ ಖಾಯಿಲೆಯ ತೀವ್ರತೆಗನುಗುಣವಾಗಿ ಕೆ.ಸಿ. | ದಿನಾಂಕ: 16.8.2018ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು, ಹಿಮೋಫಿಲಿಯಾ ರೋಗವು ಅನುವಂಶಿಕವಾಗಿ, |

| | | | | |
|---|---|---|---|---|
| | ಶ್ರೀ ರಾಮಚಂದ್ರಗೌಡ<br>ಡಾ: ಎ.ಹೆಚ್.<br>ಶಿವಯೋಗಿಸ್ವಾಮಿ<br>ಶ್ರೀ ಗಣೇಶ್ ಕಾರ್ಣಿಕ್<br>ವಿಪನದಿ: 25.07.2013 | ಧಾರವಾಡ, ಹಾಸನ ಹಾಗೂ ಗಂಗಾವತಿ ನಗರಗಳಲ್ಲಿ ರಕ್ತ ಸಂಬಂಧಿ ಖಾಯಿಲೆಯಿಂದ ಬಳಲುತ್ತಿರುವ ರೋಗಿಗಳಿಗೆ ಚಿಕಿತ್ಸೆಗಾಗಿ ಸರ್ಕಾರದಿಂದ ಹಣ ಮಂಜೂರು ಮಾಡುವುದಲ್ಲದೆ ಈ ಕುರಿತು ಸಾರ್ವಜನಿಕರಲ್ಲಿ ಅರಿವು ಮೂಡಿಸುವ ಬಗ್ಗೆ. | ಜನರಲ್ ಆಸ್ಪತ್ರೆ, ಮಲ್ಲೇಶ್ವರಂ ಹಾಗೂ ಜಿಲ್ಲಾ ಆಸ್ಪತ್ರೆಗಳಾದ ತುಮಕೂರು, ಮಂಗಳೂರು, ದಾವಣಗೆರೆ, ಧಾರವಾಡ, ಬಿಜಾಪುರ, ಗುಲ್ಬರ್ಗಾ ಮತ್ತು ಸಾರ್ವಜನಿಕ ಆಸ್ಪತ್ರೆಗಳಾದ ಕುಷ್ಠಗಿ, ಶಿರಸಿ, ಗಂಗಾವತಿ ಮತ್ತು ಕೊಪ್ಪಳ ಈ ಆಸ್ಪತ್ರೆಗಳಲ್ಲಿ ಹೊರ ರೋಗಿಯಾಗಿ ಚಿಕಿತ್ಸೆ ನೀಡಲಾಗುತ್ತಿದೆ. ಈ ಖಾಯಿಲೆಗೆ ಬೇಕಾಗುವಂತಹ ಫ್ಯಾಕ್ಟರ್ 8 ಮತ್ತು ಫ್ಯಾಕ್ಟರ್ 9ನ್ನು ವಾರಕ್ಕೊಮ್ಮೆ, 15 ದಿನಗಳಿಗೊಮ್ಮೆ ಅಥವಾ ತಿಂಗಳಿಗೊಮ್ಮೆ ರಕ್ತನಾಳದ ಮೂಲಕ ಕೊಡಬೇಕಾಗುತ್ತದೆ. ಈ ಖಾಯಿಲೆಗೆ 2012–13ನೇ ಸಾಲಿನಲ್ಲಿ ರೂ.20,46,359/–ಗಳಿಗೆ ಮತ್ತು 2013–14ನೇ ಸಾಲಿನಿಂದ ಇಲ್ಲಿಯವರೆಗೆ ರೂ.18,19,165/–ಗಳಿಗೆ ಔಷಧಿಗಳನ್ನು ಮೇಲ್ಕಾಣಿಸಿದ ಆಸ್ಪತ್ರೆಗಳಿಗೆ ಸರಬರಾಜು ಮಾಡಲಾಗಿದೆ. {ಜನಜಾಗೃತಿ (ಐಈಅ) ನೀಡುವ ಬಗ್ಗೆ ಕ್ರಮ ಕೈಗೊಳ್ಳಲಾಗುವುದು ಎಂದು ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ತಿಳಿಸಿದರು. | ಹೆಚ್ಚಿನದಾಗಿ ಎಲ್ಲಾ ಗಂಡು ಮಕ್ಕಳಿಗೆ ಬರುವಂತಹ ಕಾಯಿಲೆಯಾಗಿದ್ದು, ಇಂತಹ ರೋಗಿಗಳಿಗೆ ರಕ್ತ ಹೆಪ್ಪುಗಟ್ಟಲು ಫ್ಯಾಕ್ಟರ್ 8 ಮತ್ತು ಫ್ಯಾಕ್ಟರ್ 9ನ್ನು ಶರೀರದಲ್ಲಿ ತೀವ್ರ ಕೊರತೆಯಿಂದ ನರಳುತ್ತಿರುತ್ತಾರೆ. ಆದುದರಿಂದ, ಇಂತಹ ರೋಗಿಗಳಿಗೆ ಕಾಯಿಲೆಯ ತೀವ್ರತೆಗನುಗುಣವಾಗಿ ಫ್ಯಾಕ್ಟರ್ 8 ಮತ್ತು ಫ್ಯಾಕ್ಟರ್ 9 ಅನ್ನು 2017ನೇ ಸಾಲಿನಿಂದ ಇಲ್ಲಿಯವರೆಗೆ ಉಚಿತವಾಗಿ ನೀಡಲಾಗುತ್ತಿದೆ.<br>1. ಈ ರೋಗಿಗಳಿಗೆ ಕಾಯಿಲೆಯ ತೀವ್ರತೆಗನುಗುಣವಾಗಿ ಎಲ್ಲಾ ಜಿಲ್ಲಾ ಆಸ್ಪತ್ರೆಗಳಲ್ಲಿ 7 ಹಾಸಿಗೆಗಳ ದಿನದ ಆರೈಕೆ ಕೇಂದ್ರ ತೆರೆದಿದೆ.<br>2. ಎಲ್ಲಾ ಫ್ಯಾಕ್ಟರ್‌ಗಳನ್ನು ಒಳ ಮತ್ತು ಹೊರರೋಗಿಗಳಿಗೆ ಉಚಿತವಾಗಿ ನೀಡಲಾಗುತ್ತಿದೆ.<br>3. ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯದಲ್ಲಿ ಹಿಮೋಫಿಲಿಯಾ ಚಿಕಿತ್ಸೆಯ ಕೇಂದ್ರವನ್ನು ತೆರೆಯಲಾಗಿದೆ.<br>4. ಹಿಮೋಫಿಲಿಯಾ ರೋಗಿಗಳಿಗೆ ಜಿಲ್ಲಾ ಮಟ್ಟದಲ್ಲಿ ಪುನರ್ವಸತಿ ಕಾರ್ಯಾಗಾರ ಆಯೋಜಿಸಲಾಗಿದೆ.<br>5. ಹಿಮೋಫಿಲಿಯಾ ರೋಗಿಗಳ ಚಿಕಿತ್ಸೆ ಗುಣಮಟ್ಟ ಹೆಚ್ಚಿಸಲು ವೈದ್ಯರಿಗೆ ವಿಶೇಷ ತರಬೇತಿಯನ್ನು ನೀಡಲಾಗಿದೆ.<br>ಮೇಲ್ಕಂಡಂತೆ ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸಮಿತಿಯು ಭರವಸೆಯನ್ನು ಮುಕ್ತಾಯಗೊಳಿಸಿತು. |
| 24 | 4514<br>ಚು.ರ.ಪ್ರ: 1059 | ಬಡಜನರಿಗೆ ಹಾಗೂ ಹಿಂದುಳಿದ ವರ್ಗದವರಿಗೆ | ವಿಶ್ವಬ್ಯಾಂಕ್ ನೆರವಿನಡಿಯಲ್ಲಿ ಸುಮಾರು 2.5 ಲಕ್ಷ ಕೀಟನಾಶಕ | ದಿನಾಂಕ: 16.8.2018ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು, 2013ರಲ್ಲಿ ವಿಶ್ವಬ್ಯಾಂಕ್‌ನ ನೆರವಿನಡಿಯಲ್ಲಿನ |

| | | | | |
|---|---|---|---|---|
| | ವಿಪನದಿ: 29–07–2013 ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) | ಡೆಂಗ್ಯೂಜ್ವರ ಹಾಗೂ ಸೊಳ್ಳೆಗಳ ಕಡಿತದಿಂದ ಸಂಭವಿಸುತ್ತಿರುವ ಸಾವು ನೋವನ್ನು ತಡೆಯಲು ಸೊಳ್ಳೆ ಪರದೆಯನ್ನು ಒದಗಿಸುವ ಕುರಿತು. | ಪೂರ್ವಲೇಪಿತ ಸೊಳ್ಳೆ ಪರದೆಗಳ ಬೇಡಿಕೆ ಪ್ರಸ್ತಾವನೆಯನ್ನು ಭಾರತ ಸರ್ಕಾರಕ್ಕೆ ಸಲ್ಲಿಸಿದ್ದು, ಅವುಗಳನ್ನು ಈ ಯೋಜನೆಯು ಅನುಷ್ಠಾನಗೊಳ್ಳುತ್ತಿರುವ 7 ಜಿಲ್ಲೆಗಳಾದ ಬಾಗಲಕೋಟೆ, ಬಿಜಾಪುರ, ಬಳ್ಳಾರಿ, ಗುಲ್ಬರ್ಗಾ, ರಾಯಚೂರು, ಕೊಪ್ಪಳ ತುಮಕೂರು ಇಲ್ಲಿನ ಸಮಸ್ಯಾತ್ಮಕ ಪ್ರದೇಶಗಳಿಗೆ ಜನರಿಗೆ ನೀಡುವ ಬಗ್ಗೆ ಕೇಂದ್ರ ಸರ್ಕಾರದಿಂದ ಅನುಮೋದನೆ ಬಂದ ನಂತರ ಸೊಳ್ಳೆ ಪರದೆ ಖರೀದಿ ಮತ್ತು ವಿತರಣೆ ಬಗ್ಗೆ ಪರಿಶೀಲಿಸಲಾಗುವುದೆಂದು ಮಾನ್ಯ ಆರೋಗ್ಯ ಮತ್ತು ಕುಟುಂಬ ಸಚಿವರು ತಿಳಿಸಿದರು. | ರಾಜ್ಯಗಳಿಗೆ ಮಲೇರಿಯ ನಿಯಂತ್ರಣಕ್ಕಾಗಿ ಒಟ್ಟು 10 ಲಕ್ಷ ಸೊಳ್ಳೆ ಪರದೆಗಳು ಮಂಜೂರಾಗಿದ್ದು, ಅದರಲ್ಲಿ ಕರ್ನಾಟಕ್ಕೆ 2.5 ಲಕ್ಷ ಸೊಳ್ಳೆ ಪರದೆಗಳನ್ನು ಅನುದಾನ ರೂಪದಲ್ಲಿ ಒದಗಿಸಬೇಕಾಗಿತ್ತು. ನಂತರ ಇದನ್ನು ಕಾರಣಾಂತರದಿಂದ ರದ್ದುಪಡಿಸಲಾಗಿತ್ತು.<br><br>ಭಾರತ ಸರ್ಕಾರ ಎನ್.ವಿ.ಬಿ.ಡಿ.ಸಿ.ಪಿ ನಿರ್ದೇಶನಾಲಯವು 2016ರಲ್ಲಿ 1.20.000 ಹಾಗೂ 2017ರಲ್ಲಿ 3.09.100 ಸೊಳ್ಳೆ ಪರದೆಗಳನ್ನು ಸರಬರಾಜು ಮಾಡಿದ್ದು, ಇದನ್ನು ಸೊಳ್ಳೆಗಳಿಂದ ಹರಡುವ ರೋಗಗಳಾದ ಮಲೇರಿಯಾ, ಡೆಂಗ್ಯೂ ಚಿಕುನ್‌ಗುನ್ಯಾ ಮತ್ತು ಮೆದುಳುಜ್ವರ ನಿಯಂತ್ರಿಸಲು ಬಾಗಲಕೋಟೆ, ವಿಜಯಪುರ, ಕಲ್ಬುರ್ಗಿ, ರಾಯಚೂರು, ಕೊಪ್ಪಳ, ತುಮಕೂರು ಗದಗ, ಹಾವೇರಿ, ಯಾದಗಿರಿ, ದಕ್ಷಿಣ ಕನ್ನಡ, ಉಡುಪಿ ಹಾಗೂ ಮಂಡ್ಯ ಜಿಲ್ಲೆಗಳಿಗೆ ವಿತರಿಸಲಾಗಿದೆಯೆಂದು ಫಲಾನುಭವಿಗಳ ಪಟ್ಟಿಯನ್ನು ಎಲ್ಲ ಮಾನ್ಯ ಸದಸ್ಯರುಗಳಿಗೆ ಒದಗಿಸಿಕೊಡಲಾಗುವುದೆಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸಮಿತಿಯು ಭರವಸೆಯನ್ನು ಮುಕ್ತಾಯಗೊಳಿಸಿತು. |
| 25 | 4516 ಚು.ಗು.ಪ್ರ: 322 ಶ್ರೀ ಆಚಾರ್ ಹಾಲಪ್ಪ ಬಸಪ್ಪ ವಿಪನದಿ: 02.12.2013 | ಕೊಪ್ಪಳ ಜಿಲ್ಲೆಯಲ್ಲಿ ಸರ್ಕಾರಿ ಆಸ್ಪತ್ರೆಗಳಲ್ಲಿ ವೈದ್ಯರ ಕೊರತೆಯಿಂದ ಶಿಶುಗಳು ಮರಣ ಹೊಂದುತ್ತಿರುವುದನ್ನು ತಡೆಗಟ್ಟುವಲ್ಲಿ ಸರ್ಕಾರ ಕೈಗೊಂಡ ಕ್ರಮಗಳ ಕುರಿತು. | ಕೊಪ್ಪಳ ಜಿಲ್ಲೆಯಲ್ಲಿ ತಾಯಿ ಹಾಗೂ ಶಿಶು ಮರಣಕ್ಕೆ ಪ್ರಮುಖ ಕಾರಣವಾಗಿರುವ ಬಾಲ್ಯ ವಿವಾಹ ಪದ್ಧತಿಯನ್ನು ನಿರ್ಮೂಲನೆ ಗೊಳಿಸುವುದು ಅತ್ಯಂತ ಅಗತ್ಯವಾಗಿದ್ದು, ಈ ನಿಟ್ಟಿನಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಯುನಿಸೆಫ್ ಜಿಲ್ಲಾ ಮಕ್ಕಳ ಕಲ್ಯಾಣ ಇಲಾಖೆಯ ಸಹಯೋಗದೊಂದಿಗೆ ಬಾಲ್ಯ | ದಿನಾಂಕ: 16.8.2018ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು, ತಾಯಿ ಮರಣವನ್ನು ತಡೆಗಟ್ಟುವಲ್ಲಿ ಸರ್ಕಾರವು ಕೆಳಕಂಡ ಕ್ರಮಗಳನ್ನು ಕೈಗೊಂಡಿದೆ.<br>• ಅಂಗನವಾಡಿ ಕೇಂದ್ರಗಳಲ್ಲಿ ಸರ್ಕಾರದಿಂದ ಪೂರಕ ಆಹಾರವನ್ನು ನೀಡಲಾಗುತ್ತಿದೆ.<br>• ಬಿ.ಪಿ.ಎಲ್., ಎಸ್.ಸಿ/ಎಸ್.ಟಿ., ತಾಯಂದರಿಗೆ ಹೆರಿಗೆ ಆದ ನಂತರ ರೂ. ರೂ. 300/–, ಗ್ರಾಮೀಣ ಪ್ರದೇಶದಲ್ಲಿ ರೂ.400/–, ನಗರ ಪ್ರದೇಶದಲ್ಲಿ ಮತ್ತು ಶಸ್ತ್ರಚಿಕಿತ್ಸೆಯಾದಲ್ಲಿ ರು. 600/– ನೀಡಲಾಗುತ್ತಿದೆ. |

| | | | | |
|---|---|---|---|---|
| | | | ವಿವಾಹದಿಂದ ಉಂಟಾಗುವ ದುಷ್ಪರಿಣಾಮಗಳ ಬಗ್ಗೆ ಜನಸಾಮಾನ್ಯರಲ್ಲಿ ಅರಿವು ಮೂಡಿಸುವ ಕಾರ್ಯಕ್ರಮ ಗಳನ್ನು ತೀವ್ರಗೊಳಿಸಲು ಕ್ರಮ ಕೈಗೊಳ್ಳಲಾಗುವುದು ಹಾಗೂ ಜಿಲ್ಲಾ ಆಸ್ಪತ್ರೆಯಲ್ಲಿ ವೈದ್ಯರ ಕೊರತೆ ನೀಗಿಸಲು ಮಕ್ಕಳ ತಜ್ಞ ವೈದ್ಯರನ್ನು ನೇಮಕ ಮಾಡುವಂತಹ ವ್ಯವಸ್ಥೆ ಮಾಡುತ್ತೇವೆ ಎಂದು ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ತಿಳಿಸಿದರು. | • ಪ್ರಧಾನ ಮಂತ್ರಿ ಮಾತೃ ವಂದನಾ ಯೋಜನೆಯಲ್ಲಿ ಬಿ.ಪಿ.ಎಲ್., ಎಸ್.ಸಿ/ಎಸ್.ಟಿ ಫಲಾನುಭವಿಗಳಿಗೆ ರೂ.6,000/- ಧನ ಸಹಾಯವಿರುತ್ತದೆ.<br>• 9 ತಿಂಗಳ ಗರ್ಭಾವಸ್ಥೆಯಲ್ಲಿ ಕನಿಷ್ಠ ಪಕ್ಷ ನಾಲ್ಕು ಬಾರಿ ತಪಾಸಣೆ ಮಾಡಿಸಲು ಉತ್ತೇಜಿಸಲಾಗುತ್ತಿದ್ದು, ಆರೋಗ್ಯ ಇಲಾಖೆಯ ಮುಂಚೂಣಿ ಕಾರ್ಯಕರ್ತೆಯರಾದ, ಆಶಾ ಮತ್ತು ಕಿರಿಯ ಮಹಿಳಾ ಆರೋಗ್ಯ ಸಹಾಯಕಿಯರು ಕಾರ್ಯನಿರ್ವಹಿಸುತ್ತಿದ್ದಾರೆ.<br>• ಗರ್ಭಿಣಿಯರಿಗೆ ಸಾರಿಗೆ ವ್ಯವಸ್ಥೆ ಕಲ್ಪಿಸಲು ಮನೆಯಿಂದ 108 ಆಂಬ್ಯುಲೆನ್ಸ್ ವ್ಯವಸ್ಥೆ, ಆಸ್ಪತ್ರೆಯಿಂದ ಮನೆಗೆ ತೆರಳಲು "ನಗು ಮಗು" ಮತ್ತ ಜೆ.ಎಸ್.ವಿ. ಆಂಬ್ಯುಲೆನ್ಸ್ ವ್ಯವಸ್ಥೆಯನ್ನು ಮಾಡಲಾಗುತ್ತಿದೆ. ಒಂದು ವೇಳೆ ಈ ಮೂರು ವ್ಯವಸ್ಥೆಗಳು ಇಲ್ಲದೆ ಇದ್ದ ಪಕ್ಷದಲ್ಲಿ ಸ್ಥಳೀಯ ಮಟ್ಟದಲ್ಲಿ ಖಾಸಗಿ ಸಾರಿಗೆಯವರೊಂದಿಗೆ ಒಡಂಬಡಿಕೆಯನ್ನು ಮಾಡಿಕೊಂಡು ವ್ಯವಸ್ಥೆ ಕಲ್ಪಿಸಲು ಕ್ರಮ ವಹಿಸಲಾಗುತ್ತಿದೆ.<br>• ಸಿಬ್ಬಂದಿ ವರ್ಗದವರಿಗೆ ಕೌಶಲ್ಯ ಅಭಿವೃದ್ಧಿ ತರಬೇತಿ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.<br>• ರಕ್ತದ ಕೊರತೆಯನ್ನು ನೀಗಿಸಲು ಪ್ರತಿಯೊಂದು ತಾಲ್ಲುಕು ಆಸ್ಪತ್ರೆಗಳಲ್ಲಿ ರಕ್ತನಿಧಿ ಘಟಕಗಳನ್ನು ಸ್ಥಾಪಿಸಲಾಗಿದೆ ಹಾಗೂ ಅಭಿವೃದ್ಧಿ ಪಡಿಸಲಾಗುತ್ತದೆ.<br>• ಎಲ್ಲಾ ಗರ್ಭಿಣಿ ಮಹಿಳೆಯರನ್ನು ಕನಿಷ್ಠ 4 ಬಾರಿ ತಪಾಸಣೆಗಾಗಿ ಮತ್ತು ಗಂಡಾಂತರ ಗರ್ಭಿಣಿಯರ ಆರೈಕೆಗಾಗಿ ಪ್ರಧಾನ ಮಂತ್ರಿ ಸುಕ್ಷಿತ್ ಮಾತೃತ್ವ ಅಭಿಯಾನ ಕಾರ್ಯಕ್ರಮವು ಪ್ರತಿ ತಿಂಗಳು 9ನೇ ತಾರೀಖಿನಂದು ಎಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿ ನಡೆಸಲಾಗುತ್ತಿದೆ.<br>• ತಜ್ಞರ ಕೊರತೆಯನ್ನು ನೀಗಿಸುವ ದೃಷ್ಟಿಯಿಂದ ಹುದ್ದೆ ಖಾಲಿ ಇರುವ ಆಸ್ಪತ್ರೆಗಳಲ್ಲಿ ಕರೆ ಆಧಾರದ ಮೇಲೆ ಖಾಸಗಿ ತಜ್ಞ |

| | | | | |
|---|---|---|---|---|
| | | | | ವೈದ್ಯರು ಬಂದು ಸಿಜೇ:ರಿಯನ್ ಮಾಡಲು ಯೋಜನೆಯನ್ನು ರೂಪಿಸಿ ಅನುಷ್ಠಾನಗೊಳಿಸಲಾಗಿದೆ.<br><br>ತಾಯಂದಿರ ಸಾವನ್ನು ತಡೆಗಟ್ಟಲು ಸರ್ಕಾರವು ಈ ಕೆಳಗಿನ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುತ್ತದೆ.<br><br>1. ತಾಯಿ ಭಾಗ್ಯ (ರಾಜ್ಯದ 14 ಜಿಲ್ಲೆಗಳಲ್ಲಿ)<br>2. ಜನನಿ ಶಿಶು ಸುರಕ್ಷಾ ಕಾರ್ಯಕ್ರಮ.<br>3. ಜನನಿ ಸುರಕ್ಷಾ ಯೋಜನೆ.<br>4. ಪ್ರಧಾನ ಮಂತ್ರಿ ಮಾತೃ ವಂದನಾ ಯೋಜನೆ.<br><br>ಶಿಶು ಮರಣ ಕಡಿತಗೊಳಿಸಲು ಹಮ್ಮಿಕೊಂಡಿರುವ ಆರೋಗ್ಯ ಕಾರ್ಯಕ್ರಮಗಳು :–<br><br>ನವಜಾತ ಶಿಶು ಮತ್ತು 5 ವರ್ಷದೊಳಗಿನ ಶಿಶುಗಳ ಮರಣ ದರವನ್ನು ಕಡಿತಗೊಳಿಸಲು ಮತ್ತು ಮಕ್ಕಳ ಆರೋಗ್ಯವನ್ನು ಸುಧಾರಿಸುವುದರ ಮೂಲಕ ಶಿಶು ಮರಣ ದರವನ್ನು ಕಡಿಮೆ ಮಾಡಲು ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಅನುಷ್ಠಾನಗೊಳಿಸಲಾಗಿದೆ. ಆಧುನಿಕ ವೈಜ್ಞಾನಿಕ ವಿಧಾನಗಳನ್ನು ಅನುಸರಿಸುವುದರ ಮೂಲಕ ಮಕ್ಕಳ ಆರೋಗ್ಯ ರಕ್ಷಣೆಯನ್ನು ಮಾಡಲಾಗುತ್ತಿದೆ. ಅವುಗಳೆಂದರೆ, ಸಾಂಸ್ಥಿಕ ಆಧಾರಿತ ನವಜಾತ ಶಿಶು ಆರೈಕೆ (ವಿಶೇಷ ನವಜಾತ ಶಿಶು ಆರೈಕೆ ಘಟಕ, ನವಜಾತ ಶಿಶು ಸ್ಥಿರೀಕರಣ ಘಟಕ, ನವಜಾತ ಶಿಶು ಆರೈಕೆ ಕೇಂದ್ರ), ಮನೆ ಆಧಾರಿತ ಶಿಶು ಆರೈಕೆ ಕಾರ್ಯಕ್ರಮ, ಜನನಿ ಶಿಶು ಸುರಕ್ಷಾ ಕಾರ್ಯಕ್ರಮ, ಶಿಶು ಮರಣ ಪರಿಶೀಲನೆ, ಕಾಂಗರೂ ಮದರ್‌ಕೇರ್, ತಾಯಿ ಎದೆ ಹಾಲುಣಿಸುವ ಕೇಂದ್ರಗಳ ಸ್ಥಾಪನೆ, ನವಜಾತ ಮತ್ತು ಮಕ್ಕಳ ಕಾಯಿಲೆಗಳ ಸಮಗ್ರ ನಿರ್ವಹಣಾ ಕಾರ್ಯಕ್ರಮ, ಅತಿಸಾರ ಭೇದಿ ನಿಯಂತ್ರಣ ಪಾಕ್ಷಿಕ ಆಚರಣೆ, ಈ ಕಾರ್ಯಕ್ರಮಗಳ ಮೂಲಕ |

| | | | | |
|---|---|---|---|---|
| | | | | ಶಿಶು ಮರಣ ತಡೆಗಟ್ಟಲು ಕ್ರಮ ಕೈಗೊಳ್ಳಲಾಗಿದೆಯೆಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸಮಿತಿಯು ಭರವಸೆಯನ್ನು ಮುಕ್ತಾಯಗೊಳಿಸಿತು. |
| 26 | 4518<br>ಚು.ಗು.ಪ್ರ: 640<br>ಡಿ.ಎಸ್. ವೀರಯ್ಯ<br>ವಿಪನದಿ: 2–12–2013 | ಅವಧಿ ಮೀರಿದ ಔಷಧಿಗಳನ್ನು ಅರಣ್ಯ ಪ್ರದೇಶ ಮತ್ತಿತರೆ ಬೇರೆ ಬೇರೆ ಸ್ಥಳಗಳಲ್ಲಿ ಬಿಸಾಡುತ್ತಿರುವುದರಿಂದ ಅವುಗಳನ್ನು ತಿಂದು ಪ್ರಾಣಿಗಳು ಸಾಯುತ್ತಿರುವ ಬಗ್ಗೆ. | ಇವುಗಳ ಸೂಕ್ತ ವಿಲೇವಾರಿಗೆ ನೂತನ ತಂತ್ರಜ್ಞಾನದ ಬಗ್ಗೆ ಖಂಡಿತವಾಗಿಯೂ ಪರಿಶೀಲನೆ ಮಾಡಿ ಅವುಗಳನ್ನು ಅಳವಡಿಸಿಕೊಳ್ಳುತ್ತೇವೆ ಎಂದು ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ತಿಳಿಸಿದರು. | ದಿನಾಂಕ: 16.8.2018ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು, ದಕ್ಷಿಣ ಕನ್ನಡ ಜಿಲ್ಲೆಯ, ಬೆಳ್ತಂಗಡಿಯಲ್ಲಿ ಒಂದು ಪ್ರಕರಣದಲ್ಲಿ ಔಷಧಿ ಅಂಗಡಿಯೊಬ್ಬರು ಅವಧಿ ಮೀರಿದ ಔಷಧಗಳನ್ನು ಸಾರ್ವಜನಿಕರ ಸ್ಥಳದಲ್ಲಿ ಬೀಸಾಡಿದ್ದು ಕಂಡುಬಂದಿದ್ದು, ತಕ್ಷಣ ಇಲಾಖೆಯ ಅಧಿಕಾರಿಗಳು ಸದರಿ ಸಂಸ್ಥೆಯವರನ್ನು ಘಟನಾ ಸ್ಥಳಕ್ಕೆ ಕರೆಯಿಸಿ, ಅವುಗಳನ್ನು ವೈಜ್ಞಾನಿಕವಾಗಿ ನಾಶಪಡಿಸಲು ಸೂಚಿಸಿದ್ದು, ಸಂಸ್ಥೆಯವರು ಅವುಗಳನ್ನು ನಾಶಪಡಿಸಿದ್ದು, ಇಂತಹ ಕೃತ್ಯ ಎಸಗಿರುವುದರಿಂದ ಸಂಸ್ಥೆಯ ಪರವಾನಿಗೆಯನ್ನು ರದ್ದುಪಡಿಸಲಾಗಿದೆ.<br><br>ಔಷಧ ಅಂಗಡಿಯವರು ಅವಧಿ ಮೀರಿದ ಔಷಧಗಳನ್ನು ಅವರ ಹಂತದಲ್ಲಿಯೇ ವಿಲೇ ಮಾಡುವ ಪ್ರಸಂಗದಲ್ಲಿ ಅವುಗಳನ್ನು Bio-medical Waste (Management Handling) Rules ಪ್ರಕಾರ ನಾಶಪಡಿಸಲು ಸೂಚಿಸಲಾಗಿರುತ್ತದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸಮಿತಿಯು ಭರವಸೆಯನ್ನು ಮುಕ್ತಾಯಗೊಳಿಸಿತು. |
| 27 | 4521<br>ಚು.ಗು.ಪ್ರ: 783<br>ಶ್ರೀ ಸೈಯದ್ ಮುದೀರ್ ಆಗಾ<br>ವಿಪನದಿ: 17.02.2014 | ರಾಮನಗರ ಜಿಲ್ಲಾ ಆಸ್ಪತ್ರೆಗೆ ಹೊಸ ಕಟ್ಟಡ ನಿರ್ಮಿಸುವ ಬಗ್ಗೆ. | ಲೋಕೋಪಯೋಗಿ ಇಲಾಖೆಗೆ ಸೇರಿದ ಮೂರು ಎಕರೆಗಳ ಜಾಗದಲ್ಲಿ ಜಿಲ್ಲಾ ಆಸ್ಪತ್ರೆ ಕಟ್ಟಡ ನಿರ್ಮಿಸಲು ನಿವೇಶನ ಗುರುತಿಸಲಾಗಿದೆ. ಸದರಿ ಸ್ಥಳವನ್ನು ಲೋಕೋಪಯೋಗಿ ಇಲಾಖೆಯಿಂದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ | ದಿನಾಂಕ: 16.8.2018ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಇಂಜನಿಯರಿಂಗ್ ಘಟಕದ ವತಿಯಿಂದ ರಾಮನಗದಲ್ಲಿ 250 ಹಾಸಿಗೆಗಳ ಜಿಲ್ಲಾ ಆಸ್ಪತ್ರೆಯನ್ನು ರೂ. 66.05 ಕೋಟಿಗಳ ವೆಚ್ಚದಲ್ಲಿ ಎನ್.ಹೆಚ್.ಎಂ. ಯೋಜನೆ ಅಡಿಯಲ್ಲಿ ಕೈಗೊಳ್ಳಲಾಗಿದ್ದು, ಪ್ರಸ್ತುತ ಬ್ಲಾಕ್ "ಎ"ನಲ್ಲಿ ಬೇಸ್‌ಮೆಂಟ್, ನೆಲಮಹಡಿ, ಮೊದಲನೇ ಮತ್ತು ಎರಡನೇ ಮಹಡಿಯ ಮೇಲ್ಛಾವಣಿ ಕಾಮಗಾರಿ ಪೂರ್ಣಗೊಂಡಿದ್ದು, ಇಟ್ಟಿಗೆ ಗೋಡೆ ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿರುತ್ತದೆ. ಬ್ಲಾಕ್ |

| | | | | |
|---|---|---|---|---|
| | | | ಹಸ್ತಾಂತರಿಸಬೇಕಾಗಿರುತ್ತದೆ. ಹಸ್ತಾಂತರಿಸಿದ ಕೂಡಲೇ ಸದರಿ ಕಾಮಗಾರಿಯನ್ನು ಕೈಗೊಳ್ಳಲಾಗುವುದು ಎಂದು ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ತಿಳಿಸಿದರು. | "ಬಿ"ನಲ್ಲಿ ನೆಲಮಹಡಿ ಮತ್ತು ಮೊದಲನೆ ಮಹಡಿ ಮೇಲ್ಛಾವಣಿ ಕಾಮಗಾರಿಯೂ ಪೂರ್ಣಗೊಂಡಿರುತ್ತದೆ.<br><br>**ವಸತಿ ಗೃಹಗಳು** :– ವೈದ್ಯರ, ದಾದಿಯರ ಹಾಗೂ ಗ್ರೂಪ್ "ಡಿ" ಸಿಬ್ಬಂದಿ ವರ್ಗದ ವಸತಿ ಗೃಹ ಕಟ್ಟಡದ ತಳಪಾಯ ಹಾಗೂ ಪ್ಲಿಂತ್ ಬೀಮ್ ಕಾಮಗಾರಿ ಪೂರ್ಣಗೊಂಡಿದ್ದು, ಕಾಲಂ ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿರುತ್ತದೆ.<br><br>ಸದರಿ ಕಾಮಗಾರಿಗೆ ಈಗಾಗಲೇ ರೂ.1,604.00 ಲಕ್ಷಗಳ ವೆಚ್ಚವಾಗಿದ್ದು, ಮಾರ್ಚ್ 2019ರ ಅಂತ್ಯದೊಳಗೆ ಕಾಮಗಾರಿಯನ್ನು ಪೂರ್ಣಗೊಳಿಸಲು ಯೋಜಿಸಲಾಗಿರುತ್ತದೆ. ಒಳ್ಳೆಯ ಗುಣಮಟ್ಟದ ಆಸ್ಪತ್ರೆಯನ್ನು ಕಟ್ಟಲು ಗಮನಹರಿಸುವಂತೆ ಎಂದು ಸೂಚಿಸಿ ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸಮಿತಿಯು ಭರವಸೆಯನ್ನು ಮುಕ್ತಾಯ ಗೊಳಿಸಿತು. |
| 28 | 4522<br>ಚು.ಗು.ಪ್ರ: 800<br>ಶ್ರೀ ಕೋಟ ಶ್ರೀನಿವಾಸ ಪೂಜಾರಿ<br>ವಿಪನದಿ:17.02.2014 | ರಾಜ್ಯದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಜಿಲ್ಲಾ ತಾಲ್ಲೂಕು ಮತ್ತು ಎಲ್ಲಾ ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ ಹೆಚ್.ಐ.ವಿ ನಿರ್ಮೂಲನಾ ಆಪ್ತ ಸಮಾಲೋಚಕರಾಗಿ 2001 ರಿಂದಲೂ ದುಡಿಯುತ್ತಿರುವ ಸಿಬ್ಬಂದಿಗಳನ್ನು ಖಾಯಂ ಮಾಡದೆ ಪರಿಷ್ಕೃತ ವೇತನವನ್ನು ನೀಡದೆ ಇರುವ ಬಗ್ಗೆ. | ಇದಕ್ಕೆ ಆತಂಕಪಡುವ ಅವಶ್ಯಕತೆ ಇಲ್ಲ. ಜನಸಾಮಾನ್ಯರಿಗೆ ಒಳ್ಳೆಯದಾಗಬೇಕು ಎನ್ನುವುದು ನಮ್ಮ ಮತ್ತು ಅವರೆಲ್ಲರ ಉದ್ದೇಶ ಹಿರಿಯ ನಾಯಕರು ಸಲಹೆಗಳನ್ನು ಕೊಟ್ಟಿದ್ದಾರೆ ಅವುಗಳನ್ನು ಚರ್ಚಿಸಿ ಪರಿಶೀಲನೆ ಮಾಡುತ್ತೇನೆ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ತಿಳಿಸಿದರು. | ದಿನಾಂಕ: 16.8.2018ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು, ಕರ್ನಾಟಕ ರಾಜ್ಯ ಏಡ್ಸ್ ಪ್ರಿವೆನ್ಷನ್ ಸೊಸೈಟಿಯು ರಾಷ್ಟ್ರೀಯ ಏಡ್ಸ್ ನಿಯಂತ್ರಣ ಮಂಡಳಿ (NACO) ನವದೆಹಲಿ, ಇದರ ಅಧೀನದಲ್ಲಿ ಹಾಗೂ ಮಾರ್ಗಸೂಚಿಗಳನ್ವಯ ರಾಜ್ಯದಲ್ಲಿ ಹೆಚ್.ಐ.ವಿ/ಏಡ್ಸ್ ನಿಯಂತ್ರಣ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸ ಲಾಗುತ್ತಿದೆ. ಕರ್ನಾಟಕ ರಾಜ್ಯ ಏಡ್ಸ್ ಪ್ರಿವೆನ್ಷನ್ ಸೊಸೈಟಿಯ ಕೇಂದ್ರ ಕಚೇರಿ ಮತ್ತು ಜಿಲ್ಲಾ ಮಟ್ಟದ ವಿವಿಧ ಕೇಂದ್ರಗಳಲ್ಲಿ ಸುಮಾರು 2300 ವಿವಿಧ ವೃಂದದ ಗುತ್ತಿಗೆ ಆಧಾರದ ಹುದ್ದೆಗಳು ಮಂಜೂರಾಗಿರುತ್ತದೆ.<br><br>ಸದರಿ ವಿವಿಧ ವೃಂದಗಳ ಹುದ್ದೆಗಳಿಗೆ ಗುತ್ತಿಗೆ ಅಧಿಕಾರಿಗಳು/ನೌಕರರನ್ನು ಒಂದು ವರ್ಷದ ಅವಧಿಗೆ ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿಕೊಂಡು ನಂತರ ಹಿಂದಿನ ಅವಧಿಯ ಕಾರ್ಯನಿರ್ವಹಣಾ ವರದಿಯ ಆಧಾರದ ಮೇಲೆ |

| | | | | |
|---|---|---|---|---|
| | | | | ಅವರುಗಳ ಗುತ್ತಿಗೆ ಸೇವೆಯನ್ನು ಮತ್ತೊಂದು ವರ್ಷದ ಅವಧಿಗೆ ಮುಂದುವರಿಸಲಾಗುತ್ತದೆ. NACO ಪತ್ರ ಸಂ: T.110022/2/2010-NACO(A), Vol-I, Dated: 25.01.2018ರಲ್ಲಿ ಗುತ್ತಿಗೆ ನೌಕರರನ್ನು ಖಾಯಂ ಮಾಡುವ ಕುರಿತಂತೆ ಈ ಕೆಳಕಂಡ ವಿವರಣೆಯನ್ನು ನೀಡಿರುತ್ತದೆ:– <br><br> Regularization : NACP is a centrally sponsored scheme. It executes its work through State AIDS Control Society (SACS). The NACP is co-terminate with plan period and all contractual staffs in National AIDS Control Organisation/are appointed on a consolidated monthly remuneration for specific purpose and period. There is no provision for regularization of contractual staff. <br><br> Salary revision as per 7th pay commission: There is no such provision existing at this point of time. <br><br> ಕರ್ನಾಟಕ ರಾಜ್ಯ ಏಡ್ಸ್ ಪ್ರಿವೆನ್‌ಷೆನ್ ಸೊಸೈಟಿಯ ಗುತ್ತಿಗೆ ಅಧಿಕಾರಿಗಳು/ನೌಕರರಿಗೆ NACO letter No. A-11011/23/2013-DAC (HR), Dated: 9.1.2014 ರಂತೆ ಪರಿಷ್ಕೃತ ವೇತನವನ್ನು ನಿಗದಿಪಡಿಸಲಾಗಿರುತ್ತದೆ ಹಾಗೂ ಹೆಚ್ಚುವರಿಯಾಗಿ ಏಪ್ರಿಲ್–2014 2015 ಮತ್ತು 2016ರಿಂದ ಅನ್ವಯವಾಗುವ ವಾರ್ಷಿಕ ವೇತನ ಬಡ್ತಿಯನ್ನು ಮಂಜೂರು ಮಾಡಲಾಗಿರುತ್ತದೆ. |

| | | | | |
|---|---|---|---|---|
| | | | | NACO letter No. A-11011/23/2013-DAC (HR), Dated: 27.03.2018ರಲ್ಲಿ ಏಪ್ರಿಲ್–2017ರಿಂದ ವಾರ್ಷಿಕ ವೇತನ ಹೆಚ್ಚಳವನ್ನು ಬಿಡುಗಡೆ ಮಾಡಲು ಮಂಜೂರಾತಿ ದೊರೆತಿದ್ದು ಅನುದಾನದ ಕೊರತೆಯಿಂದ ಪರಿಷ್ಕೃತ ವೇತನವನ್ನು ಬಿಡುಗಡೆ ಮಾಡಲಾಗಿರುವುದಿಲ್ಲ. National AIDS Control Organization, New Delhi ಇವರಿಂದ ಅನುದಾನ ನಿರೀಕ್ಷಿಸಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸಮಿತಿಯು ಭರವಸೆಯನ್ನು ಮುಕ್ತಾಯಗೊಳಿಸಿತು. |
| 29<br><br><br><br><br><br><br><br>30 | 4523<br>ಚು.ಗು.ಪ್ರ: 796<br>ಶ್ರೀ ಮಹಂತೇಶ್ ಶಿವಾನಂದ ಕೌಜಲಗಿ<br>ವಿಪನದಿ: 17.02.2014<br><br><br>4526<br>ಚು.ಗು.ಪ್ರ: 796<br>ಶ್ರೀ ಮಹಂತೇಶ್ ಶಿವಾನಂದ ಕೌಜಲಗಿ<br>ವಿಪನದಿ: 17.02.2014 | ಬೆಳಗಾವಿ ಜಿಲ್ಲೆ, ಬೈಲಹೊಂಗಲದಲ್ಲಿ ಆಯುರ್ವೇದ ಮತ್ತು ಆಯುಷ್ ಆಸ್ಪತ್ರೆ ಪ್ರಾರಂಭಿಸುವ ಬಗ್ಗೆ. | ಬೈಲಹೊಂಗಲದಲ್ಲಿ 06 ಹಾಸಿಗೆಗಳ ಆಯುರ್ವೇದ ಆಸ್ಪತ್ರೆ ಕಾರ್ಯನಿರ್ವಹಿಸುತ್ತಿದ್ದು ಅವಶ್ಯಕತೆಯಿದ್ದಲ್ಲಿ, ಎಲ್ಲಾ ಆಯುಷ್ ಪದ್ಧತಿಗಳನ್ನೊಳಗೊಂಡ ಆಯುಷ್ ಸಂಯುಕ್ತ ಆಸ್ಪತ್ರೆಯನ್ನಾಗಿ ಮೇಲ್ದರ್ಜೆಗೇರಿಸಲು ಪರಿಶೀಲಿಸ ಲಾಗುವುದು ಎಂದು ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ತಿಳಿಸಿದರು. | ದಿನಾಂಕ: 16.8.2018ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು, ಬೈಲಹೊಂಗಲದಲ್ಲಿ ಪ್ರಸ್ತುತ 6 ಹಾಸಿಗೆಗಳ ಆಯುರ್ವೇದ ಆಸ್ಪತ್ರೆ ಕಾರ್ಯನಿರ್ವಹಿಸುತ್ತಿದ್ದು, ಸಾರ್ವಜನಿಕರಿಗೆ ಆಯುರ್ವೇದ ಪದ್ಧತಿಯಲ್ಲಿ ಚಿಕಿತ್ಸೆ ಸೌಲಭ್ಯ ಕಲ್ಪಿಸಲಾಗುತ್ತಿದೆ. ವರ್ಷಕ್ಕೆ ಅಂದಾಜು 9.734 ಹೊರರೋಗಿಗಳು ಹಾಗೂ 901 ಒಳರೋಗಿಗಳು ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ. ಮಂಜೂರಾದ ಎಲ್ಲಾ ವೈದ್ಯಾಧಿಕಾರಿಗಳ ಹುದ್ದೆಗಳು ಭರ್ತಿಯಾಗಿದ್ದು, ಸಾರ್ವಜನಿಕರಿಗೆ ಚಿಕಿತ್ಸೆ ನೀಡಲು ಯಾವುದೇ ಅನಾನುಕೂಲವಾಗಿರುವುದಿಲ್ಲ<br><br>ಸಾರ್ವಜನಿಕರಿಂದ ಇತರೆ ಆಯುಷ್ ಪದ್ಧತಿಗಳ ಆಸ್ಪತ್ರೆಗೆ ಬೇಡಿಕೆ ಬಂದಲ್ಲಿ ಈಗಿರುವ ಆಸ್ಪತ್ರೆಯನ್ನು ಆಯವ್ಯಯದ ಲಭ್ಯತೆಗನುಸಾರ ಮೇಲ್ದರ್ಜೆಗೇರಿಸಲು ಪರಿಶೀಲಿಸ ಲಾಗುವುದು ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸಮಿತಿಯು ಭರವಸೆಯನ್ನು ಮುಕ್ತಾಯಗೊಳಿಸಿತು. |
| 31 | 4524<br>ಚು.ಗು.ಪ್ರ: 743<br>ಡಾ॥ ಎ.ಹೆಚ್. | ದಾವಣಗೆರೆ ಚಿಗಟೇರಿ ಜಿಲ್ಲಾ ಸಾರ್ವಜನಿಕ ಆಸ್ಪತ್ರೆಯಲ್ಲಿ ಪ್ರಸೂತಿ ವಿಭಾಗಕ್ಕೆ ಹೆಚ್ಚುವರಿ ಹಾಸಿಗೆಗಳನ್ನು ಮಂಜೂರು | ನಾನೂ ಕೂಡ ಅಲ್ಲಿಗೆ ಹೋದಂತಹ ಸಂದರ್ಭದಲ್ಲಿ ಅಲ್ಲಿರುವಂತಹ ಒಳ ರೋಗಿಗಳಿಗೆ ಹಾಗೂ ಪ್ರಸೂತಿ ವಿಭಾಗಕ್ಕೆ ಸಂಬಂಧಪಟ್ಟಂತೆ ಅವರ | ದಿನಾಂಕ: 16.8.2018ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು, ದಾವಣಗೆರೆ ಜಿಲ್ಲೆಯಲ್ಲಿ ಮಹಿಳಾ ಮತ್ತು ಮಕ್ಕಳ ಆಸ್ಪತ್ರೆಯಲ್ಲಿ ಹಾಲಿ ಇರುವ 100 ಹಾಸಿಗೆಯಿಂದ 150 ಹಾಸಿಗೆಗೆ ಮೇಲ್ದರ್ಜೆಗೇರಿಸಲು ರಾಷ್ಟ್ರೀಯ ಆರೋಗ್ಯ ಅಭಿಯಾನದ |

| | | | | |
|---|---|---|---|---|
| | ಶಿವಯೋಗಿಸ್ವಾಮಿ<br>ವಿಪನದಿ: 17.02.2014 | ಮಾಡುವ ಬಗ್ಗೆ. | ಬೇಡಿಕೆ ಏನಿದೆ, ಅದು ನ್ಯಾಯಯುತವಾದಂತಹ ಬೇಡಿಕೆಯಾಗಿದೆ. ಮುಂದಿನ ದಿನಗಳಲ್ಲಿ ಖಂಡಿತವಾಗಿಯೂ ಸ್ಥಾಪನೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ ಎಂದು ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ತಿಳಿಸಿದರು. | ಅನುಮೋದನೆಯಾಗಿದ್ದು, ಕಟ್ಟಡ ಕಾಮಗಾರಿಯು ಅಂತಿಮ ಘಟ್ಟದಲ್ಲಿದೆ. ಉಳಿದಂತೆ, ದಾವಣಗೆರೆ ಜಿಲ್ಲೆಯ ಚಿಗಟೇರಿ ಜಿಲ್ಲಾ ಆಸ್ಪತ್ರೆ ಮಹಿಳಾ ಮತ್ತು ಮಕ್ಕಳ ವಿಭಾಗಕ್ಕೆ ಹೆಚ್ಚುವರಿ ಹಾಸಿಗೆಗಳ ಪ್ರಸ್ತಾವನೆ ಸಲ್ಲಿಕೆಯು ಆಯುಕ್ತರ ಕಚೇರಿಯಲ್ಲಿ ಪರಿಶೀಲನೆಯಲ್ಲಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸಮಿತಿಯು ಭರವಸೆಯನ್ನು ಮುಕ್ತಾಯಗೊಳಿಸಿತು. |
| 32 | 4525<br>ಚು.ಗು.ಪ್ರ: 794<br>ಶ್ರೀ ಮಹಂತೇಶ್ ಶಿವಾನಂದ ಕೌಜಲಗಿ<br>ವಿಪನದಿ: 17.02.2014 | ಆರೋಗ್ಯಶ್ರೀ ಯೋಜನೆಯಡಿ ಎ.ಪಿ.ಎಲ್ ಕಾರ್ಡುದಾರರಿಗೂ ಉಚಿತ ಚಿಕಿತ್ಸೆ ನೀಡುವ ಬಗ್ಗೆ. | Empanelled Hospital ಜೊತೆಯಲ್ಲಿ ಈಗಾಗಲೇ ಮಾತುಕತೆ ನಡೆಸಿ ಅವರ ಒಪ್ಪಿಗೆಯನ್ನು ಪಡೆಯುವುದರ ಮೂಲಕ ಇದನ್ನು ಶೀಘ್ರವೇ ಅನುಷ್ಠಾನಕ್ಕೆ ತರಲಾಗುವುದು ಎಂದು ಹೇಳಲಿಚ್ಛಿಸುತ್ತೇನೆ ಎಂದು ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ತಿಳಿಸಿದರು. | ದಿನಾಂಕ: 16.8.2018ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು, ಎ.ಪಿ.ಎಲ್. ಕುಟುಂಬಗಳಿಗಾಗಿ ಉಚಿತ ಚಿಕಿತ್ಸೆ ಒದಗಿಸುವ ಸಲುವಾಗಿ ನೊಂದಾಯಿತ ಆಸ್ಪತ್ರೆಗಳೊಂದಿಗೆ ಚರ್ಚಿಸಿ, ದಿನಾಂಕ: 31.7.2014ರಂದು ಆಸ್ಪತ್ರೆಗಳಿಗೆ ಪತ್ರವನ್ನು ಕಳುಹಿಸಲಾಗಿತ್ತು. ಸರ್ಕಾರದ ಆದೇಶ ಸಂಖ್ಯೆ: ಆಕುಕ 343 ಸಿಜಿಇ 2013, ದಿನಾಂಕ: 23.11.2013ರನ್ವಯ ದಿನಾಂಕ: 20.1.2015ರಿಂದ "ರಾಜೀವ್ ಆರೋಗ್ಯ ಭಾಗ್ಯ" ಯೋಜನೆಯನ್ನು ಅನುಷ್ಠಾನಗೊಳಿಸಲಾಗಿತ್ತು.<br><br>ಇತ್ತೀಚೆಗೆ ರಾಜೀವ್ ಆರೋಗ್ಯ ಭಾಗ್ಯ ಯೋಜನೆಯೊಂದಿಗೆ ಇನ್ನು ಕೆಲವು ಆರೋಗ್ಯ ಯೋಜನೆಗಳನ್ನು "ಆರೋಗ್ಯ ಕರ್ನಾಟಕ" ಯೋಜನೆಯಡಿಯಲ್ಲಿ ವಿಲೀನಗೊಳಿಸಿ ಸರ್ಕಾರದ ಆದೇಶ ಸಂಖ್ಯೆ: ಆಕುಕ 91 ಸಿಜಿಇ 2017, ದಿನಾಂಕ: 1.3.2018ರಂತೆ ಆರೋಗ್ಯ ಕರ್ನಾಟಕ ಯೋಜನೆಯನ್ನು ಅನುಷ್ಠಾನಗೊಳಿಸಲಾಗಿದೆಯೆಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸಮಿತಿಯು ಭರವಸೆಯನ್ನು ಮುಕ್ತಾಯಗೊಳಿಸಿತು. |
| 33 | 4527<br>ಗ.ಸೆ.ಸೂ.<br>ಶ್ರೀ ಅರುಣ ಶಹಾಪುರ<br>ವಿಪನದಿ:21.02.2014 | ರಾಷ್ಟ್ರೀಯ ಕ್ಷಯರೋಗ ನಿಯಂತ್ರಣ ಕೇಂದ್ರದಡಿಯಲ್ಲಿ ಸುಮಾರು 14 ವರ್ಷಗಳಿಂದಲೂ ಗುತ್ತಿಗೆ ಆಧಾರದ ಮೇಲೆ ಸಾವಿರಾರು | ಕೇಂದ್ರ ಸರ್ಕಾರದ ಪರಿಷ್ಕೃತ ರಾಷ್ಟ್ರೀಯ ಕ್ಷಯರೋಗ ನಿಯಂತ್ರಣ ಕಾರ್ಯಕ್ರಮದ ಅಡಿಯಲ್ಲಿ ರಾಜ್ಯದಲ್ಲಿ ಗುತ್ತಿಗೆ ಆಧಾರದಲ್ಲಿ ವಿವಿಧ ಹುದ್ದೆಗಳಲ್ಲಿ ತಾತ್ಕಾಲಿಕವಾಗಿ ಸುಮಾರು 12 | ದಿನಾಂಕ: 16.8.2018ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು, 2013ರಲ್ಲಿ ರಾಜ್ಯದ ಪರಿಷ್ಕೃತ ರಾಷ್ಟ್ರೀಯ ಕ್ಷಯರೋಗ ನಿಯಂತ್ರಣ ಕಾರ್ಯಕ್ರಮದ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ವೃಂದದ ಗುತ್ತಿಗೆ ನೌಕರರಿಗೆ ಕೇಂದ್ರ ಸರ್ಕಾರದ **RNTCP** ಮಾರ್ಗಸೂಚಿಯಂತೆ ವೇತನ ಹಾಗೂ ಇತರೆ ಭತ್ಯೆಗಳನ್ನು ಪರಿಷ್ಕರಣೆ ಮಾಡಲಾಗಿದೆ. |

<table>
<tr>
<td></td>
<td></td>
<td>ನೌಕರರು ಕಾರ್ಯನಿರ್ವಹಿಸುತ್ತಿದ್ದು, ಇವರ ವೇತನ ಪರಿಷ್ಕರಣೆಗೆ ಸಂಬಂಧಿಸಿದಂತೆ ಕೇಂದ್ರ ಕ್ಷಯರೋಗ ವಿಭಾಗ (ನವದೆಹಲಿ) ದಿಂದ ಸೂಚನೆ ನೀಡಿದಾಗ್ಯೂ ಸಹ ವೇತನ ಪರಿಷ್ಕರಣೆಯಾಗದಿರುವ ಬಗ್ಗೆ.</td>
<td>ವರ್ಷಗಳಿಂದ ಒಂದು ವರ್ಷದವರೆವಿಗೂ ಕಾರ್ಯ ನಿರ್ವಹಿಸುತ್ತಿದ್ದಾರೆ. ಸದರಿಯವರಿಗೆ 2013ರಲ್ಲಿ ಕೇಂದ್ರ ಸರ್ಕಾರವು ವೇತನ ಪರಿಷ್ಕೃತ ಮಾರ್ಗಸೂಚಿ ನೀಡಿರುತ್ತಾರೆ. ಅದರಂತೆ ನಿಯಮಾನುಸಾರ ಪರಿಶೀಲಿಸಿ ಶೀಘ್ರದಲ್ಲಿಯೆ ವೇತನ ಪರಿಷ್ಕರಣೆ ಮಾಡುವ ಬಗ್ಗೆ ಕ್ರಮ ವಹಿಸಲಾಗುವುದು ಎಂದು ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ತಿಳಿಸಿದರು.</td>
<td>
<table>
<tr><th>SL. No.</th><th>State Level</th><th>Basic Pay as per Revised 2013 Norms</th><th>Pay fixed from 1.4.2014</th></tr>
<tr><td>1</td><td>Epidemiologist (Ass. Prog. Officer)</td><td>60000</td><td>69000</td></tr>
<tr><td>2</td><td>Medical Officer (MO-STC)</td><td colspan="2">Par as per NRHM Guidelines</td></tr>
<tr><td>3</td><td>TB HIV Co-Ordinators</td><td>50000</td><td>57750</td></tr>
<tr><td>4</td><td>Accounts Officer/State Account</td><td>25000</td><td>28950</td></tr>
<tr><td>5</td><td>Secretarial Assistant</td><td>12000</td><td>13875</td></tr>
<tr><td>6</td><td>Data Entry Operator (STC)</td><td>15000</td><td>17250</td></tr>
<tr><td>7</td><td>IEC/ACSM Officer</td><td>25000</td><td>28950</td></tr>
<tr><td>8</td><td>State PPM Co-ordintor</td><td>50000</td><td>-</td></tr>
<tr><td>9</td><td>DR-TB Co-Ordinaor</td><td>50000</td><td>-</td></tr>
<tr><td>10</td><td>DEO-STF Chairman</td><td>15000</td><td>-</td></tr>
<tr><td>11</td><td>Data Analyst</td><td>20000</td><td>-</td></tr>
<tr><td>12</td><td>Technical Officer – Procurement & Logistic Personnel</td><td>35000</td><td>-</td></tr>
<tr><td>13</td><td>Microbiologist – EQA</td><td>50000</td><td>-</td></tr>
<tr><td>14</td><td>Microbilogist</td><td>60000</td><td>68250</td></tr>
<tr><td>15</td><td>Sr. Lab. Tech. for IRL</td><td>19000</td><td>22200</td></tr>
<tr><td>16</td><td>Data Entry Operator for IRL</td><td>13000</td><td>15150</td></tr>
<tr><td>17</td><td>Pharmacist cum Storekeeper</td><td>15000</td><td>17550</td></tr>
<tr><td>18</td><td>Store Assistant</td><td>10000</td><td>11700</td></tr>
</table>
ಇಲಾಖೆಯ ಅಧಿಕಾರಿಗಳು ಮೇಲ್ಕಂಡಂತೆ ನೀಡಿದ ಉತ್ತರವನ್ನು ಒಪ್ಪಿ, ಸಮಿತಿಯು ಭರವಸೆಯನ್ನು ಮುಕ್ತಾಯಗೊಳಿಸಿತು.
</td>
</tr>
</table>

**ತೋಟಗಾರಿಕೆ ಇಲಾಖೆ**

| ಕ್ರಮ ಸಂಖ್ಯೆ | ಆಶ್ವಾಸನೆ ಸಂಖ್ಯೆ ಆಧಾರ ಮತ್ತು ದಿನಾಂಕ | ವಿಷಯ | ಆಶ್ವಾಸನೆ | ತೆಗೆದುಕೊಂಡ ಕ್ರಮ |
|---|---|---|---|---|
| 1 | 5887 | ಹಾಸನ ಜಿಲ್ಲೆಯ ಕೆಲವು ತಾಲ್ಲೂಕುಗಳಲ್ಲಿ ತೆಂಗಿನ | ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ರೈತರಿಗೋಸ್ಕರ ಸಾಕಷ್ಟು | ದಿನಾಂಕ: 28.8.2018ರಂದು ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ಹಾಸನ ಜಿಲ್ಲೆಯಲ್ಲಿ ವರ್ಷದಿಂದ |

| | | | | |
|---|---|---|---|---|
| | ಚು.ಗು.ಪ್ರ : 4541<br>ಶ್ರೀ ಎಂ.ಪಿ. ಗೋಪಾಲಸ್ವಾಮಿ<br>ವಿ.ಪ.ನ.ದಿ: 21-11-2017 | ನುಸಿ ಪೀಡೆ ರೋಗವು ಉಲ್ಬಣ ಗೊಂಡಿರುವ ಬಗ್ಗೆ. | ಯೋಜನೆಗಳನ್ನು ಜಾರಿಗೆ ತಂದಿದ್ದೇವೆ. ತಮಗೆ ಗೊತ್ತಿರುವ ಹಾಗೆ ಎರಡು -ಮೂರು ವರ್ಷಗಳಿಂದ ಬರಪೀಡಿತ ಪ್ರದೇಶಗಳಾದ್ದರಿಂದ ನುಸಿಪೀಡೆ ರೋಗಕ್ಕೆ ಸಾಕಷ್ಟು ಮರಗಳು ತುತ್ತಾಗಿವೆ. ಅದರಲ್ಲೂ ಹಾಸನ, ಮಂಡ್ಯ, ಮೈಸೂರು ಜಿಲ್ಲೆಗಳಲ್ಲಿ ಈ ರೋಗಕ್ಕೆ ಮರಗಳು ತುತ್ತಾಗಿವೆ. ಇದಕ್ಕೆ ಸೂಕ್ತವಾದಂತಹ ಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದೇವೆ ಮತ್ತು ಮಾನ್ಯ ಸದಸ್ಯರು subsidy ಬಗ್ಗೆ ಒಂದು ಪ್ರಶ್ನೆಯನ್ನು ಕೇಳಿದರು. ಅದರ ಬಗ್ಗೆ ಕೂಡ ಪರಿಶೀಲನೆಯನ್ನು ಮಾಡುತ್ತೇನೆ ಎಂದು ಮಾನ್ಯ ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರು ತಿಳಿಸಿದರು. | ವರ್ಷಕ್ಕೆ ತೆಂಗಿನ ನುಸಿಪೀಡೆ ಕಡಿಮೆಯಾಗುತ್ತಿದ್ದು, ನುಸಿಪೀಡೆ ರೋಗವನ್ನು ಹತೋಟಿಗೆ ತರಲು ಹಾಸನ ಜಿಲ್ಲೆಯಲ್ಲಿ ಇಲಾಖಾ ವತಿಯಿಂದ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ.<br>1. ಉತ್ಪಾದನಾ ಸುಧಾರಣಾ ಕಾರ್ಯಯೋಜನೆಗಾಗಿ ತೆಂಗಿನಲ್ಲಿ ಸಂಯೋಜಿತಾ ಬೇಸಾಯ ಯೋಜನೆಯಡಿ ನುಸಿಪೀಡೆ ಒಳಗೊಂಡಂತೆ ತೆಂಗು ಬೆಳೆಗೆ ತಗಲುವ ಕೀಟ ಹಾಗೂ ರೋಗಗಳ ನಿಯಂತ್ರಣಕ್ಕಾಗಿ ಸಸ್ಯ ಸಂರಕ್ಷಣಾ ಔಷಧಿಗಳನ್ನು ಖರೀದಿಸಿದ ರೈತರಿಗೆ ಶೇ. 75ರಂತೆ ಪ್ರತಿ ಹೆಕ್ಟೇರಿಗೆ ಗರಿಷ್ಠ ರೂ. 5,250/ರಂತೆ ಗರಿಷ್ಠ 2 ಹೆಕ್ಟೇರುಗಳವರೆಗೆ ಸಹಾಯಧನ ಒದಗಿಸಲಾಗುತ್ತಿದೆ.<br>2. ತೆಂಗುಬೆಳೆ ಒಳಗೊಂಡಂತೆ ತೋಟಗಾರಿಕೆ ಬೆಳೆಗಳಿಗೆ ತಗಲುವ ಕೀಟ ಮತ್ತು ರೋಗಗಳ ನಿಯಂತ್ರಣಕ್ಕಾಗಿ ಸಸ್ಯ ಸಂರಕ್ಷಣೆ ಔಷಧಿಗಳನ್ನು ಖರೀದಿಸಿದ ರೈತರಿಗೆ ಸಹಾಯಧನವನ್ನು ನೀಡಲಾಗುತ್ತಿದ್ದು, ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯಡಿ ಶೇ.30 ರಂತೆ ಪ್ರತಿ ಹೆಕ್ಟೇರ್‌ಗೆ ರೂ. 1,200/-ಗಳ ಸಹಾಯ ಧನವನ್ನು ಗರಿಷ್ಠ 4 ಹೆಕ್ಟೇರ್ ವರೆಗೆ ನೀಡಲಾಗುತ್ತಿದೆ.<br>3. ಜಿಲ್ಲಾ ವಲಯ ಹಾಗೂ ರಾಜ್ಯವಲಯ |

| | | | | |
|---|---|---|---|---|
| | | | | ಯೋಜನೆಗಳಡಿ ಶೇ.50 ರಂತೆ ಪ್ರತಿ ಹೆಕ್ಟರ್‌ಗೆ ಗರಿಷ್ಠ ರೂ. 2000/= ಸಾಮಾನ್ಯ ವರ್ಗದವರಿಗೆ ಹಾಗೂ ಪರಿಶಿಷ್ಟ ಜಾತಿ ಮತ್ತು ಪಂಗಡದ ಫಲಾನುಭವಿಗಳಿಗೆ ಶೇ. 90ರಂತೆ ರೂ. 3,600 ಗಳ ಸಹಾಯಧನವನ್ನು ಗರಿಷ್ಠ 2 ಹೆಕ್ಟೇರ್ ವರೆಗೆ ನೀಡಲಾಗುತ್ತಿದೆ. ಪ್ರತಿ ಫಲಾನುಭವಿಯು ಕೀಟ ಮತ್ತು ರೋಗಗಳ ನಿಯಂತ್ರಣೆಗಾಗಿ ಮೇಲ್ಕಾಣಿಸಿದ ಯಾವುದಾದರೂ ಒಂದು ಯೋಜನೆಯಡಿ ಸಹಾಯಧನ ಪಡೆಯಬಹುದಾಗಿರುತ್ತದೆ.<br><br>4. ರೈತರ ತೆಂಗಿನ ತಾಕಿಗೆ ಭೇಟಿ ನೀಡಿದ ಸಂದರ್ಭದಲ್ಲಿ ರೋಗ/ಕೀಟ ಹತೋಟಿ ಬಗ್ಗೆ ತಾಂತ್ರಿಕ ಮಾಹಿತಿ ನೀಡಲಾಗುತ್ತಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ಸಮಿತಿಯು ತೀರ್ಮಾನಿಸಿತು. |
| 2 | 5890<br>ಚು.ಗು.ಪ್ರ: 2896<br>ಶ್ರೀ ರಮೇಶ್ ಬಾಬು<br>ವಿ.ಪ.ನ.ದಿ:<br>13-06-2017 | ತೋಟಗಾರಿಕೆಯಲ್ಲಿ ಗುಣಮಟ್ಟದ ಸುರಕ್ಷತೆ ಹಾಗೂ ನೈಜ ಬೆಲೆ ಹಿನ್ನೆಲೆಯಲ್ಲಿ ಬಳಕೆದಾರರಿಗೆ ಖಾತರಿಯ ಉತ್ಪನ್ನಗಳನ್ನು ನೀಡಲು ಉತ್ಪಾದನಾ ಸಂಸ್ಥೆಗಳಿಗೆ (ಎಫ್.ಪಿ.ಒ) ಲೇಬಲ್ ನೀಡುವ ಯೋಜನೆ ಜಾರಿಗೊಳಿಸುವ ಬಗ್ಗೆ. | ತೋಟಗಾರಿಕೆಯಲ್ಲಿ ಗುಣಮಟ್ಟದ ಸುರಕ್ಷತೆ ಹಾಗೂ ನೈಜ ಬೆಲೆ ಹಿನ್ನಲೆಯಲ್ಲಿ ಬಳಕೆದಾರರಿಗೆ ಖಾತರಿಯ ಉತ್ಪನ್ನಗಳನ್ನು ನೀಡಲು ಉತ್ಪಾದಕಾ ಸಂಸ್ಥೆಗಳಿಗೆ (ಎಫ್.ಪಿ.ಒ) ಲೇಬಲ್ ನೀಡುವ ಯೋಜನೆಗೆ ಸರ್ಕಾರವು ದಿನಾಂಕ:03-03-2017ರಂದು ಅನುಮತಿ ನೀಡಿ ಆದೇಶ ಹೊರಡಿಸಿದೆ. ಈ ಯೋಜನೆಯನ್ನು 2017-18ನೇ | ದಿನಾಂಕ: 28.8.2018ರಂದು ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು. ತೋಟಗಾರಿಕೆ ರೈತ ಉತ್ಪಾದಕರ ಕಂಪನಿಗಳು (FPO) ಇನ್ನು ಶೇಷಾವಸ್ಥೆಯಲ್ಲಿದ್ದು, ಪ್ರಸ್ತುತ ಪರಿಕರಗಳ ವ್ಯವಹಾರದಲ್ಲಿ ತೊಡಗಿಸಿಕೊಂಡಿರುತ್ತಾರೆ. ಕೆಲವು FPOಗಳು ಪ್ರಾರಂಭಿಕ ಹಂತವಾಗಿ ಸಣ್ಣ ಪ್ರಮಾಣದಲ್ಲಿ ಉತ್ಪನ್ನಗಳ ಮಾರಾಟದಲ್ಲಿ ತೊಡಗಿಸಿಕೊಂಡಿರುತ್ತಾರೆ. |

| | | | | |
|---|---|---|---|---|
| | | | ಸಾಲಿನಲ್ಲಿ ಜಾರಿಗೊಳಿಸಲು ಕ್ರಮ ವಹಿಸಲಾಗುವುದು ಎಂದು ಮಾನ್ಯ ತೋಟಗಾರಿಕೆ ಮತ್ತು ಕೃಷಿ ಸಚಿವರು ತಿಳಿಸಿದರು. | ಮುಂದುವರೆದು, ವಿವಿಧ ತೋಟಗಾರಿಕೆ ಬೆಳೆಗಳಿಗೆ ಪ್ರತ್ಯೇಕವಾಗಿ ಲೇಬಲ್‌ಗಳನ್ನು ಅಭಿವೃದ್ಧಿ ಪಡಿಸಬೇಕಾಗಿರುತ್ತದೆ (ಗುಣಮಟ್ಟ ಸುರಕ್ಷತೆ ಮತ್ತು ಇತರೆ ಮಾನದಂಡಗಳು). ಈ ನಿಟ್ಟಿನಲ್ಲಿ ಪರಿಣಿತರ ಸಲಹೆಗಳನ್ನು ಪಡೆಯುವುದು ಅವಶ್ಯಕವಾಗಿದ್ದು ಮಾರುಕಟ್ಟೆಯಲ್ಲಿನ ಸಲಹೆಗಾರರನ್ನು ಹೊರಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಳ್ಳಲು ಕ್ರಮ ವಹಿಸಲಾಗುತ್ತಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ಸಮಿತಿಯು ತೀರ್ಮಾನಿಸಿತು. |
| 3 | **5893**<br>ಚು.ರ.ಪ್ರ : 2796<br>ಶ್ರೀ ಐವನ್ ಡಿ' ಸೋಜಾ<br>ವಿ.ಪ.ನ.ದಿ:<br>13-06-2017 | ಅಡಿಕೆಗೆ ಪ್ರತ್ಯೇಕ ಮಂಡಳಿ ರಚಿಸುವ ಬಗ್ಗೆ. | ಅಡಿಕೆಗೆ ಪ್ರತ್ಯೇಕ ಮಂಡಳಿ ರಚಿಸುವ ವಿಷಯ ರಾಜ್ಯ ಸರ್ಕಾರದ ಪರಿಶೀಲನೆಯಲ್ಲಿದೆ ಎಂದು ಮಾನ್ಯ ತೋಟಗಾರಿಕೆ ಮತ್ತು ಕೃಷಿ ಸಚಿವರು ತಿಳಿಸಿದರು. | ದಿನಾಂಕ: 28.8.2018ರಂದು ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು. ಅಡಿಕೆ ಮಂಡಳಿ ರಚಿಸುವ ಬಗ್ಗೆ ಕುಲಪತಿಗಳು, ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟೆರವರು ಸರ್ಕಾರಕ್ಕೆ ವರದಿಯನ್ನು ಸಲ್ಲಿಸಿದ್ದು, ವರದಿಯು ಪರಿಶೀಲನೆಯಲ್ಲಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ಸಮಿತಿಯು ತೀರ್ಮಾನಿಸಿತು. |
| 4 | 6060<br>ಚು.ಗು.ಪ್ರ : 519<br>ಶ್ರೀ ರಾಮಚಂದ್ರಗೌಡ<br>ವಿ.ಪ.ನ.ದಿ:<br>22-03-2016 | ಲಾಲ್‌ಬಾಗ್ ಮಾದರಿ ಉತ್ತಮ ಮತ್ತು ವಿಸ್ತಾರವಾದ ಮತ್ತೊಂದು ಉದ್ಯಾನವನ್ನು ರಾಜ್ಯದಲ್ಲಿ ನಿರ್ಮಿಸುವ ಬಗ್ಗೆ. | ತೋಟಗಾರಿಕೆ ಇಲಾಖೆಯ ವ್ಯಾಪ್ತಿಯಲ್ಲಿರುವ ಭೂ ಪ್ರದೇಶದ ಲಭ್ಯತೆಯ ಮೇರೆಗೆ ಅದೇ ರೀತಿಯ ಕೆಳಕಂಡ ಸಸ್ಯ ಶಾಸ್ತ್ರೀಯ ಉದ್ಯಾನವನಗಳನ್ನು ನಿರ್ಮಿಸಲು | ದಿನಾಂಕ: 28.8.2018ರಂದು ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ತೋಟಗಾರಿಕೆ ಇಲಾಖೆಯ ವ್ಯಾಪ್ತಿಯಲ್ಲಿರುವ ಭೂಪ್ರದೇಶದ ಲಭ್ಯತೆಯ ಮೇರೆಗೆ ಕೆಳಕಂಡ ಸಸ್ಯಶಾಸ್ತ್ರೀಯ ಉದ್ಯಾನವನಗಳನ್ನು ನಿರ್ಮಿಸಲು ಕ್ರಮ ವಹಿಸಲಾಗುತ್ತಿದೆ. |

| | | | | |
|---|---|---|---|---|
| | (ವರ್ಗಾವಣೆ ಸಹಕಾರ ಇಲಾಖೆಯಿಂದ ತೋಟಗಾರಿಕೆ ಇಲಾಖೆಗೆ) | | ಈಗಾಗಲೇ ಕ್ರಮ ವಹಿಸಲಾಗುತ್ತಿದೆ ಎಂದು ಮಾನ್ಯ ಸಹಕಾರ ಮತ್ತು ಸಕ್ಕರೆ ಸಚಿವರು ತಿಳಿಸಿದರು. | 1. ಸರ್. ಎಂ.ವಿಶ್ವೇಶ್ವರಯ್ಯ ಸಸ್ಯಶಾಸ್ತ್ರೀಯ ತೋಟ, ಚಿಕ್ಕಬಳ್ಳಾಪುರ (70 ಎಕರೆ)<br>2. ಅಂಗಾಬೂದಿ ಸಸ್ಯಶಾಸ್ತ್ರೀಯ ತೋಟ, ಮೈಸೂರು (15 ಎಕರೆ)<br>3. ಪೂರ್ವ ಲಾಲ್‌ಬಾಗ್, ಕನ್ನಮಂಗಲ, ಬೆಂಗಳೂರು (ನ) (70 ಎಕರೆ),<br>4. ಡಾ: ಎಂ.ಹೆಚ್. ಮರಿಗೌಡ ಸಸ್ಯ ಸಂರಕ್ಷಣಾ ಕೇಂದ್ರ, ದೊಡ್ಡಸಾಗ್ಗೆರೆ, ತುಮಕೂರು (228 ಎಕರೆ).<br>5. ತೆರಕನಹಳ್ಳಿ, ಸಸ್ಯತೋಟ, ಉತ್ತರ ಕನ್ನಡ (20 ಎಕರೆ) ಪ್ರಸ್ತುತ ಸರ್.ಎಂ. ವಿಶ್ವೇಶ್ವರಯ್ಯ ಸಸ್ಯಶಾಸ್ತ್ರೀಯ ತೋಟ (ಚಿಕ್ಕಬಳ್ಳಾಪುರ), ಅಂಗಾಬೂದಿ ಸಸ್ಯಶಾಸ್ತ್ರೀಯ ತೋಟ (ಮೈಸೂರು), ಪೂರ್ವ ಲಾಲ್‌ಬಾ, ಕನ್ನಮಂಗಲ, (ಬೆಂಗಳೂರು ನಗರ) ಮತ್ತು ಡಾ: ಎಂ.ಹೆಚ್. ಮರಿಗೌಡ ಸಸ್ಯಸಂರಕ್ಷಣಾ ಕೇಂದ್ರ, ದೊಡ್ಡಸಾಗ್ಗರೆ (ತುಮಕೂರು) ಸಸ್ಯತೋಡಗಳ ಸಮಗ್ರ ಅಭಿವೃದ್ಧಿಗೆ ಮಾಸ್ಟರ್‌ಪ್ಲಾನ್ ಸಿದ್ದಪಡಿಸಲಾಗಿದ್ದು, ಅದರಂತೆ, ಪರಿಕಲ್ಪನೆಗಳನ್ನು ರೂಪಿಸಿ ಅನುದಾನದ ಲಭ್ಯತೆಯ ಮೇರೆಗೆ ಹಂತಹಂತವಾಗಿ ಅಭಿವೃದ್ಧಿ ಪಡಿಸಲಾಗುತ್ತಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ಸಮಿತಿಯು ತೀರ್ಮಾನಿಸಿತು. |

## ಆಹಾರ ಮತ್ತು ನಾಗರೀಕ ಸರಬರಾಜು ಮತ್ತು ವ್ಯವಹಾರಗಳ ಇಲಾಖೆ

| ಕ್ರಮ ಸಂಖ್ಯೆ | ಆಶ್ವಾಸನೆ ಸಂಖ್ಯೆ ಆಧಾರ ಮತ್ತು ದಿನಾಂಕ | ವಿಷಯ | ಆಶ್ವಾಸನೆ | ತೆಗೆದುಕೊಂಡ ಕ್ರಮ |
|---|---|---|---|---|
| 1 | 5426 | ಬೆಲೆ ಬಾಳುವ ಆಭರಣಗಳ | ನಮ್ಮ ಕಾಯಿದೆಯಡಿಯಲ್ಲಿ ಇದನ್ನು | ದಿನಾಂಕ: 30.8.2018ರಂದು ಸಮಿತಿ ಸಭೆಯಲ್ಲಿ |

| | | | | |
|---|---|---|---|---|
| | ಚು.ಗು.ಪ್ರ: 817<br>ಶ್ರೀ ದಯಾನಂದ<br>ವಿ.ಪ.ನ.ದಿ:<br>15-12-2014 | ಗುಣಮಟ್ಟದಲ್ಲಿ ತೂಕ ಹಾಗೂ ವಂಚನೆ ಆಗುತ್ತಿರುವುದನ್ನು ತಡೆಗಟ್ಟಲು ಕಾನೂನು ಮಾಪನ ಶಾಸ್ತ್ರ ಕಾಯ್ದೆಗೆ ಸೂಕ್ತ ತಿದ್ದುಪಡಿ ತರುವ ಬಗ್ಗೆ. | ತರತಕ್ಕಂಥದ್ದಕ್ಕೆ ತಿದ್ದುಪಡಿಯನ್ನು ತರಬೇಕಾಗುತ್ತದೆ. ಕೇಂದ್ರ ಸರ್ಕಾರದ ಮತ್ತು ರಾಜ್ಯ ಸರ್ಕಾರದ ಲಿಸ್ಟ್ ಆದ Concurrent Listನಲ್ಲಿ ಈ Legal Metrology ವಿಷಯ ಬರುತ್ತದೆ. ಇದರ ಅವಶ್ಯಕತೆ ಇದೆ ಎಂದು ನನಗೂ ಕೂಡ ಅನಿಸುತ್ತದೆ. ಅದಕ್ಕಾಗಿ ಸರಿಯಾದ ರೀತಿಯಲ್ಲಿ ತಿದ್ದುಪಡಿಯನ್ನು ತಂದು ಈ ಗುಣಮಟ್ಟದ ಬಗ್ಗೆ ಪರಿಶೀಲನೆ ಮಾಡತಕ್ಕಂಥದ್ದು ನಮ್ಮ ಇಲಾಖೆಯ ಮುಖಾಂತರ ಕ್ರಮ ತೆಗೆದುಕೊಳ್ಳುವುದಕ್ಕೆ ನಾನು ಕ್ರಮ ಜರುಗಿಸುತ್ತೇನೆ ಎಂದು ಮಾನ್ಯ ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ರಾಜ್ಯ ಸಚಿವರು ತಿಳಿಸಿದರು. | ಚರ್ಚಿಸಲಾಯಿತು, ಕಡತ ಸಂಖ್ಯೆ: ಆನಾಸ 89 ಇಭತ 2015ರ ಕರಡು ನಿಯಮದ ಅಧಿಸೂಚನೆಯನ್ನು ಕೇಂದ್ರ ಸರ್ಕಾರದ ಸಹಮತಿಗಾಗಿ ಕಳುಹಿಸಿದ ಹಿನ್ನಲೆಯಲ್ಲಿ ಕೇಂದ್ರ ಸರ್ಕಾರವು ಪ್ರಸ್ತಾವನೆಗೆ ಸಹಮತಿಯನ್ನು ನೀಡಿರುತ್ತದೆ. ಈ ಸಂಬಂಧ ಅಧಿಸೂಚನೆಯನ್ನು ಹೊರಡಿಸುವ ಮುನ್ನಾ ಮಾನ್ಯ ಸಚಿವರ ಅನುಮೋದನೆಗಾಗಿ ಕಾರ್ಯದರ್ಶಿಯವರ ಅನುಮೋದನೆ ಯೊಂದಿಗೆ ದಿನಾಂಕ: 7.8.2018ರಲ್ಲಿ ಕಳುಹಿಸಿ ಕೊಡಲಾಗಿರುತ್ತದೆ.<br><br>ಮಾನ್ಯ ಸಚಿವರ ಅನುಮೋದನೆ ನಂತರ ಅಧಿಸೂಚನೆಯನ್ನು ಶೀಘ್ರವಾಗಿ ಹೊರಡಿಸಲಾಗುವುದೆಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ಸಮಿತಿಯು ತೀರ್ಮಾನಿಸಿತು. |
| 2. | 5902<br>ಚು.ಗು.ಪ್ರ: 1585<br>ಶ್ರೀ ಎಸ್.ವ್ಹಿ. ಸಂಕನೂರ<br>ವಿ.ಪ.ನ.ದಿ: | ಕಡುಬಡತನವಿರುವ ಹಾಗೂ ನಿರ್ಗತಿಕರನ್ನು ಪತ್ತೆ ಹಚ್ಚಿ ಬಿಪಿಎಲ್ ಪಡಿತರ ಚೀಟಿಗಳನ್ನು ವಿತರಿಸುವ ಬಗ್ಗೆ. | ವಿಳಾಸ ರಹಿತರಿಗೆ ಬಿಪಿಎಲ್ ಕಾರ್ಡ್ ವಿತರಿಸುವ ಕಾರ್ಯವನ್ನು ಕೈಗೊಂಡಿರುವುದಿಲ್ಲ. ಆದರೆ ವಿಳಾಸ ರಹಿತರಿಗೆ ಸಾರ್ವಜನಿಕ ವಿತರಣಾ ವ್ಯವಸ್ಥೆಯಲ್ಲಿ | ದಿನಾಂಕ: 30.8.2018ರಂದು ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು, ರಾಜ್ಯದ ಎಲ್ಲಾ ಅರ್ಹ ಫಲಾನುಭವಿಗಳಿಗೆ ಪಡಿತರ ಚೀಟಿ ನೀಡಲಾಗಿದೆ. ಆಧಾರ್ ಆಧಾರಿತ ಅರ್ಜಿ ಆಧಾರದ ಮೇಲೆ ಗ್ರಾಮ ಪಂಚಾಯಿತಿಯಲ್ಲಿ ಮತ್ತು ನಗರದ ಸೇವಾ ಕೇಂದ್ರಗಳಲ್ಲಿ |

| | | | | |
|---|---|---|---|---|
| | 13-07-2015 | | ತರಬೇಕಾಗಿರುವುದು ಅವಶ್ಯಕವಿದ್ದು, ಈ ಬಗ್ಗೆ ನಿಶ್ಚಿತ ರೂಪದಲ್ಲಿ ಆಹಾರ ಧಾನ್ಯ ತಲುಪಿಸುವ ವ್ಯವಸ್ಥೆ ಜಾರಿಗೊಳಸಬೇಕಿದೆ. ಅಂತಹ ಬಡ ಜನರಿಗೆ ಆಹಾರ ಭದ್ರತೆ ನೀಡುವ ಕುರಿತು ಚಿಂತನೆ ನಡೆಸಲಾಗುವುದು ಎಂದು ಮಾನ್ಯ ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ರಾಜ್ಯ ಸಚಿವರು ತಿಳಸಿದರು. | ಅರ್ಜಿ ಸಲ್ಲಿಸಿ, ತಕ್ಷಣ ಪಡಿತರ ಚೀಟಿ ಪಡೆಯಲು ಅವಕಾಶ ಕಲ್ಪಿಸಲಾಗಿರುತ್ತದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸದರಿ ಭರವಸೆಯನ್ನು ಮುಕ್ತಾಯಗೊಳಸಲು ಸಮಿತಿಯು ತೀರ್ಮಾನಿಸಿತು. |
| 3. | 5903<br>ಚು.ರ.ಪ್ರ; 4187<br>ಶ್ರೀ ಕೆ.ವಿ. ನಾರಾಯಣಸ್ವಾಮಿ<br>ವಿ.ಪ.ನ.ದಿ:<br>23-11-2017 | ಅನ್ನಭಾಗ್ಯ ಯೋಜನೆಯ ಗೋಧಿಯು ಗೋದಾಮಿ ನಲ್ಲಿಯೇ ಕೊಳೆಯುತ್ತಿರುವ ಬಗ್ಗೆ. | ಕೆಲವು ಜಿಲ್ಲೆಗಳಲ್ಲಿ ಅನ್ನಭಾಗ್ಯ ಯೋಜನೆಯ ಗೋಧಿಯು ವಿರತಣೆಯಾಗದೆ ಗೋದಾಮುಗಳಲ್ಲಿ ಶೇಖರಣೆಯಾಗಿರುತ್ತದೆ. ಸಾರ್ವಜನಿಕ ವಿತರಣಾ ಪದ್ಧತಿಯಡಿ ಫಲಾನುಭವಿಗಳಗೆ ವಿತರಿಸಲು ಮಾನವ ಉಪಯೋಗಕ್ಕೆ ಅರ್ಹವಿದೆಯೇ ಎಂಬದರ ಬಗ್ಗೆ ವಿಶ್ಲೇಷಣಾ ವರದಿಗಳನ್ನು ಕಳುಹಿಸಿ ಕೊಡುವಂತೆ ಕೋರಿ ಜಿಲ್ಲೆಗಳಲ್ಲಿನ ಅಂಕಿತ ಅಧಿಕಾರಿಗಳು, ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರದವರಿಗೆ ಆಹಾರ | ದಿನಾಂಕ: 30.8.2018ರಂದು ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು, ಜಿಲ್ಲಗಳಲ್ಲಿ ಉಳದಿರುವ ಗೋಧಿ ಪ್ರಮಾಣವು ಬೇಡಿಕೆಗೆ ಅನುಗುಣವಾಗಿ ಲಭ್ಯವಿಲ್ಲದಿರುವ ಕಾರಣದಿಂದಾಗಿ ಗೋಧಿ ಹಂಚಿಕೆಯನ್ನು ನೀಡಲಾಗಿರುವುದಿಲ್ಲ. ಇದರಿಂದಾಗಿ ಜಿಲ್ಲೆಗಳಲ್ಲಿ ವಿವಿಧ ವರ್ಗಗಳಡಿ ಉಳಕೆಯಾದ ಗೋಧಿ ದಾಸ್ತಾನಿನಲ್ಲಿ 3150,393 ಮೆ.ಟನ್ ಬಳಸಲು ಯೋಗ್ಯವಿಲ್ಲವೆಂದು ದೃಢಪಡಿಸಲಾಗಿರುತ್ತದೆ.<br>ಮಾನವ ಉಪಯೋಗಕ್ಕೆ ಯೋಗ್ಯವಲ್ಲದ ಗೋಧಿಯನ್ನು ಹಂಚಿಕೆ ನೀಡಲಾಗಿರುವುದಿಲ್ಲ ಹಾಗೂ ಈ ದಾಸ್ತಾನನ್ನು ಸರ್ಕಾರದ ಪತ್ರ ದಿನಾಂಕ: 24.11.2017ರ ಆದೇಶದಂತೆ ವಿಲೇವಾರಿಗೊಳಸಲು ವ್ಯವಸ್ಥಾಪಕ ನಿರ್ದೇಶಕರು, ಕೆ.ಎಫ್.ಸಿ. ಎಸ್.ಸಿ. ರವರು ಕ್ರಮವಹಿಸಿರುತ್ತಾರೆ. ಮಾನವ ಉಪಯೋಗಕ್ಕೆ ಯೋಗ್ಯವಾಗಿದ್ದ 1449,353 ಮೆ.ಟನ್ ಗೋಧಿಯನ್ನು |

| | | | | |
|---|---|---|---|---|
| | | | ಪದಾರ್ಥಗಳ ಮಾದರಿಗಳನ್ನು ಕಳುಹಿಸಿಕೊಡಲಾಗಿದ್ದು, ವರದಿಯನ್ನು ನಿರೀಕ್ಷಿಸಲಾಗುತ್ತಿದ್ದು, ವರದಿಯ ಅಂಶಗಳ ಮೇರೆಗೆ ಮುಂದಿನ ಕ್ರಮವನ್ನು ತೆಗೆದುಕೊಳ್ಳಲಾಗುವುದು ಎಂದು ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಗ್ರಾಹಕರ ವ್ಯವಹಾರಗಳ ಮತ್ತು ಕಾನೂನು ಮಾಪನ ಶಾಸ್ತ್ರ ಸಚಿವರು ತಿಳಿಸಿದರು. | ಡಿಸೆಂಬರ್ 2017ರ ಮಾಹೆಯಲ್ಲಿ ಹಂಚಿಕೆಗೆ ಕ್ರಮವಹಿಸಲಾಗಿರುತ್ತದೆ ಹಾಗೂ ಆಗಸ್ಟ್-2018ರ ಮಾಹೆಯಲ್ಲಿ 3206.427 ಮೆ.ಟನ್ ಗೋಧಿಯನ್ನು ಹಂಚಿಕೆ ನೀಡಲಾಗಿರುತ್ತದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ಸಮಿತಿಯು ತೀರ್ಮಾನಿಸಿತು. |
| 4. | 5904<br>ಚು.ರ.ಪ್ರ; 4227<br>ಶ್ರೀ ಬಸನಗೌಡ ಆರ್. ಪಾಟೀಲ್ (ಯತ್ನಾಳ್)<br>ವಿ.ಪ.ನ.ದಿ:<br>20-11-2017 | ಹೊಸ ಪಡಿತರ ಚೀಟಿಗಳ ವಿತರಣೆಯಲ್ಲಿ ವಿಳಂಬ ಹಾಗೂ ಆಹಾರ ಇಲಾಖೆಯಲ್ಲಿ ಆಹಾರ ನಿರೀಕ್ಷಕರು ಮತ್ತು ಶಿರಸ್ತೇದಾರರ ಹುದ್ದೆಗಳ ನೇಮಕಾತಿ ಬಗ್ಗೆ. | ಆನ್‌ಲೈನ್ ಮೂಲಕ ಸ್ವೀಕರಿಸಿರುವ ಅರ್ಜಿಗಳನ್ನು ವಿಲೇವಾರಿ ಮಾಡಲು ಪ್ರತಿ ಅರ್ಜಿಯ ಸದಸ್ಯರ ವಾರ್ಷಿಕ ವರಮಾನವನ್ನು ಅಧಿಕೃತ ಮಾನದಂಡವಾಗಿ ಪರಿಗಣಿಸಲಾಗುವುದು. ಎಲ್ಲಾ ಅರ್ಜಿಯ ವಿವರಗಳನ್ನು ಅಟಲ್ ಜೀ ಜನ ಸ್ನೇಹಿ ಕೇಂದ್ರಗಳ ಮುಖಾಂತರ ಕಂದಾಯ ಇಲಾಖೆಯ ಅಧಿಕಾರಿಗಳು ಅಗತ್ಯ ಮಾಹಿತಿಯನ್ನು ಭರ್ತಿ ಮಾಡಿ ಅನ್‌ಲೈನ್ ಮೂಲಕ ಅಪ್‌ಲೋಡ್ ಮಾಡಿದ ನಂತರ ಸದರಿ ಮಾಹಿತಿಯೂ ಆಹಾರ ಡೇಟಾ ಬೇಸ್‌ಗೆ ವರ್ಗಾವಣೆಗೊಂಡು | ದಿನಾಂಕ: 30.8.2018ರಂದು ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು, ಪಡಿತರ ಚೀಟಿ ವಿತರಿಸುವಲ್ಲಿ ವಿಳಂಬವಾಗದಂತೆ ಕ್ರಮವಹಿಸಲು ಸಂಪೂರ್ಣ ವಿಲೇವಾರಿ ಪ್ರಕ್ರಿಯೆಯಲ್ಲಿ ಆನ್‌ಲೈನ್ ವ್ಯವಸ್ಥೆಯನ್ನು ಜಾರಿಗೊಳಿಸಲಾಗಿದೆ. ಪ್ರತಿ ಅರ್ಜಿದಾರರ ಕುಟುಂಬ ಸದಸ್ಯರ ವಾರ್ಷಿಕ ಆದಾಯ ದೃಢೀಕರಣ ಪತ್ರ ಹಾಗೂ ಜಾತಿ ದೃಢೀಕರಣ ಪತ್ರಗಳನ್ನು ಸಂಬಂಧಪಟ್ಟ ಇಲಾಖೆಯಿಂದ ಪಡೆಯುವ ಕ್ರಿಯೆಯಲ್ಲಿ ವಿಳಂಬತೆಯನ್ನು ಗುರುತಿಸಿದ್ದು, ಈ ಕಾರ್ಯವನ್ನು ಕೂಡ ಚುರುಕುಗೊಳಿಸಲು ತಾಂತ್ರಿಕವಾಗಿ ಎಲ್ಲಾ ತರಹದ ಅಗತ್ಯ ಮಾರ್ಪಾಡುಗಳನ್ನು ಮಾಡಲಾಗಿರುತ್ತದೆ, ಹಾಗಾಗಿ ಪಡಿತರ ಚೀಟಿ ವಿತರಿಸುವಲ್ಲಿ ಯಾವುದೇ ವಿಳಂಬಗಳು ಆಗದಂತೆ ಕ್ರಮವಹಿಸಲಾಗಿದೆ. ಅದರಂತೆ, ಬಾಕಿಯಿರುವ ಎಲ್ಲಾ ಪಡಿತರ ಚೀಟಿಯ ಅರ್ಜಿಗಳನ್ನು ವಿಲೇವಾರಿ ಮಾಡಲು ಹಾಗೂ ಅರ್ಹ ಅರ್ಜಿದಾರರಿಗೆ ಪಡಿತರ ಚೀಟಿ ಪ್ರತಿಯನ್ನು ಸ್ಥಳದಲ್ಲೇ ಮುದ್ರಿಸಿ ಕಡ್ಡಾಯವಾಗಿ ನೀಡುವ |

| | | | | |
|---|---|---|---|---|
| | | | ಪಡಿತರ ಚೀಟಿ ಸಿದ್ಧಗೊಳ್ಳುತ್ತದೆ. ಈ ರೀತಿ ಸಿದ್ಧಪಡಿಸಿದ ಪಡಿತರ ಚೀಟಿಗಳನ್ನು ಅಭ್ಯರ್ಥಿಯು ನೇರವಾಗಿ ಮನೆಗೆ ತಲುಪಿಸಲಾಗುತ್ತಿದೆ. ಮೇಲೆ ವಿವರಿಸಿದಂತೆ ಅರ್ಜಿದಾರರಿಗೆ ಪಡಿತರ ಚೀಟಿ ನೀಡುವ ಕಾರ್ಯವನ್ನು 15ನೇ ಡಿಸೆಂಬರ್ 2017ರ ಒಳಗಾಗಿ ಪೂರ್ಣ ಗೊಳಿಸಲು ಕ್ರಮವಹಿಸಲಾಗುತ್ತಿದೆ.<br><br>ಆಹಾರ ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳು ಇಲಾಖೆಯಲ್ಲಿ ಪ್ರಸ್ತುತ ಪ್ರಥಮ ದರ್ಜೆ ಸಹಾಯಕರು/ಆಹಾರ ನಿರೀಕ್ಷಕರು-152 ಹುದ್ದೆಗಳು ಹಾಗೂ ವ್ಯವಸ್ಥಾಪಕರು/ಆಹಾರ ಶಿರಸ್ತೇದಾರರ-105 ಹುದ್ದೆಗಳು ಖಾಲಿ ಇರುವುದು ಗಮನಕ್ಕೆ ಬಂದಿರುತ್ತದೆ. ಈ ಎರಡೂ ವೃಂದಗಳಲ್ಲಿ ನೇರ ನೇಮಕಾತಿ ಅಡಿಯಲ್ಲಿ ಹುದ್ದೆ ಖಾಲಿ ಇರುವುದಿಲ್ಲ. ಸದರಿ ಖಾಲಿ ಇರುವ ಹುದ್ದೆಗಳಲ್ಲಿ ಮುಂಬಡ್ತಿ ಕೋಟಾದಡಿಯ ಹುದ್ದೆಗಳನ್ನು ಅರ್ಹ ನೌಕರರಿಗೆ ಮುಂಬಡ್ತಿ ನೀಡುವ ಮೂಲಕ ಭರ್ತಿ ಮಾಡಲು ಕ್ರಮವಹಿಸಲಾಗುತ್ತದೆ ಎಂದು | ವ್ಯವಸ್ಥೆಯನ್ನು ಜಾರಿಗೊಳಿಸಲಾಗಿದೆ.<br><br>ಪ್ರಸ್ತುತ, ಕಡತ ಸಂ: ಆನಾಸ 148 ಆಇಸೇ 2018, ಪ್ರಥಮ ದರ್ಜೆ ಸಹಾಯಕರು/ಆಹಾರ ನಿರೀಕ್ಷಕರ ವೃಂದದಲ್ಲಿ 154 ಹುದ್ದೆಗಳು ಖಾಲಿ ಇದ್ದು, ಸದರಿ ಹುದ್ದೆಗಳನ್ನು ಪದೋನ್ನತಿಯಿಂದ/ನೇರ ನೇಮಕಾತಿ ಯಿಂದ ಭರ್ತಿ ಮಾಡಬೇಕಾಗಿರುತ್ತದೆ. ಹಾಲಿ ಕಾರ್ಯನಿರ್ವಹಿಸುತ್ತಿರುವ ನೌಕರರುಗಳಲ್ಲಿ ಶಿರಸ್ತೇದಾರರ ವೃಂದಕ್ಕೆ ಮುಂಬಡ್ತಿಯನ್ನು ನೀಡಿದ್ದಲ್ಲಿ ಖಾಲಿಯಾಗುವ ಪ್ರ.ದ.ಸ/ಆಹಾರ ನಿರೀಕ್ಷಕರ ಹುದ್ದೆಗೆ ಕೂಡಲೇ ಭರ್ತಿ ಮಾಡಲೇ ಬೇಕಾದ ಅನಿವಾರ್ಯತೆ ಇರುವುದರಿಂದ ಡಿಪಿಆರ್.ನೊಂದಿಗೆ ಸಮಾಲೋಚಿಸಲಾಗಿ, ಡಿ.ಪಿ.ಆರ್. ರವರು ಸಿ&ಆರ್ ಪರಿಷ್ಕರಣೆಯನ್ನು ಪರಿಶೀಲಿಸಿ ಮರು ಸಲ್ಲಿಸುವಂತೆ ತಿಳಿಸಿದ್ದಾರೆ.<br><br>ವ್ಯವಸ್ಥಾಪಕರು/ಆಹಾರ ಶಿರಸ್ತೇದಾರರ ಹುದ್ದೆಗಳು 110 ಖಾಲಿ ಇದ್ದು, ಸದರಿ ಹುದ್ದೆಗಳು ಮುಂಬಡ್ತಿ ಕೋಟಾ ಹುದ್ದೆಗಳಾಗಿದ್ದು, ಸದರಿ ಹುದ್ದೆಗಳನ್ನು ಅರ್ಹ ನೌಕರರಿಗೆ ಮುಂಬಡ್ತಿ ನೀಡುವ ಮೂಲಕ ಭರ್ತಿ ಮಾಡಲು ಕ್ರಮವಹಿಸಲಾಗುತ್ತಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ಸಮಿತಿಯು ತೀರ್ಮಾನಿಸಿತು. |

| | | | | |
|---|---|---|---|---|
| | | | ಮಾನ್ಯ ಆಹಾರ ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳು ಮತ್ತು ಕಾನೂನು ಮಾಪನಾ ಶಾಸ್ತ್ರ ಸಚಿವರು ತಿಳಿಸಿದರು. | |
| 05. | 5905<br>ಚು.ರ.ಪ್ರ; 4225<br>ಶ್ರೀ ರಘುನಾಥ ರಾವ್ ಮಲ್ಕಾಪೂರೆ<br>ವಿ.ಪ.ನ.ದಿ:<br>20-11-2017 | ಬೀದರ್ ಜಿಲ್ಲೆಯಲ್ಲಿ ಪಡಿತರ ಅಂಗಡಿಗಳಲ್ಲಿ ಫಲಾನುಭವಿಗಳಿಂದ ಥಂಬಿಂಗ್ ಮಾಡಲು ಹಣ ಪಡೆಯುತ್ತಿರುವ ಬಗ್ಗೆ ಹಾಗೂ ಫನಾನುಭವಿಗಳಿಂದ ಪಡೆದ ಹಣವನ್ನು ಹಿಂತಿರು ಗಿಸುವ ಕ್ರಮದ ಬಗ್ಗೆ. | ಈ ಕುರಿತು ಜಿಲ್ಲಾಡಳಿತದಿಂದ ಪತ್ರ ಸಂಖ್ಯೆ: ಆನಾಸ/06 /ಪಿ.ಓ.ಎಸ್-07/2017-18 ದಿನಾಂಕ: 28-10-2017 ರಂದು ಜಿಲ್ಲಾ ವಾರ್ತಾಧಿಕಾರಿಗಳಿಗೆ ಪತ್ರ ಬರೆದು ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಮಾಧ್ಯಮಗಳ ಮುಖಾಂತರ ತಪ್ಪಿತಸ್ಥ ನ್ಯಾಯಬೆಲೆ ಅಂಗಡಿಗಳವರ ವಿರುದ್ಧ ಕ್ರಮ ತೆಗೆದುಕೊಳ್ಳಲಾಗುವುದೆಂದು ಸಾರ್ವಜನಿಕರಲ್ಲಿ ಅರಿವು ಮೂಡಿಸಲಾಗಿರುತ್ತದೆ. ಹಾಗೂ ಜಿಲ್ಲೆಯ ಎಲ್ಲಾ ತಾಲ್ಲೂಕಿನ ತಹಶೀಲ್ದಾರರುಗಳಿಗೆ ವಿನಾಕಾರಣ ಪಡಿತರ ಚೀಟಿದಾರರಿಂದ ಥಂಬಿಂಗ್‌ಗಾಗಿ ರೂ.10/-ನ್ನು ಪಡೆದಲ್ಲಿ ಕರ್ನಾಟಕ ಅಗತ್ಯ ವಸ್ತುಗಳ ಸಾರ್ವಜನಿಕ ವಿತರಣಾ ಪದ್ಧತಿ (ನಿಯಂತ್ರಣ) ಆದೇಶ 2016ರಡಿ ಕಾನೂನು ಕ್ರಮ ಜರುಗಿಸುವಂತೆ | **ದಿನಾಂಕ:** 30.8.2018ರಂದು ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು, ಜಿಲ್ಲೆಯ ಎಲ್ಲಾ ತಾಲ್ಲೂಕಿನ ತಹಶೀಲ್ದಾರರುಗಳಿಗೆ ವಿನಾಕಾರಣ ಪಡಿತರ ಚೀಟಿದಾರರಿಂದ ಥಂಬಿಂಗ್‌ಗಾಗಿ ರೂ.10/=ನ್ನು ಪಡೆದಲ್ಲಿ ಕರ್ನಾಟಕ ಅಗತ್ಯ ವಸ್ತುಗಳ ಸಾರ್ವಜನಿಕ ವಿತರಣಾ ಪದ್ಧತಿ (ನಿಯಂತ್ರಣ) ಆದೇಶ 2016ರಡಿ ಕಾನೂನು ಕ್ರಮ ಜರುಗಿಸುವಂತೆ ಸೂಚಿಸಲಾಗಿರುತ್ತದೆ.<br>ಬೀದರ್ ಜಿಲ್ಲೆಯಲ್ಲಿ ಎರಡು ನ್ಯಾಯಬೆಲೆ ಅಂಗಡಿಯವರ ವಿರುದ್ಧ ಕಾನೂನು ಕ್ರಮ ವಹಿಸಲಾಗಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ಸಮಿತಿಯು ತೀರ್ಮಾನಿಸಿತು. |

| | | | | |
|---|---|---|---|---|
| | | | ಸೂಚಿಸಲಾಗಿರುತ್ತದೆ. ಹಾಗೂ ಜಿಲ್ಲೆಯಲ್ಲಿ ಮೇಲ್ಕಂಡ ಎರಡು ನ್ಯಾಯಬೆಲೆ ಅಂಗಡಿಯವರು ಥಂಬಿಂಗ್‌ಗಾಗಿ ಪಡಿತರ ಚೀಟಿದಾರರಿಂದ ಪಡೆದ ಹಣವನ್ನು ಹಿಂತಿರುಗಿಸಲು ಇಲಾಖೆಯ ಆಹಾರ ನಿರೀಕ್ಷಕರು ಕ್ರಮ ವಹಿಸಿರುತ್ತಾರೆ. ಹಾಗೂ ಮೇಲ್ಕಂಡ ನ್ಯಾಯಬೆಲೆ ಅಂಗಡಿಗಳ ವಿರುದ್ಧ ಮುಂದಿನ ಕಾನೂನು ಕ್ರಮವನ್ನು ಸಹ ಜರುಗಿಸಲಾಗುವುದು ಎಂದು ಮಾನ್ಯ ಆಹಾರ ನಾಗರೀಕ ಸರಬರಾಜು ಗ್ರಾಹಕರ ವ್ಯವಹಾರಗಳ ಮತ್ತು ಕಾನೂನು ಮಾಪನಶಾಸ್ತ್ರ ಇಲಾಖಾ ಸಚಿವರು ತಿಳಿಸಿದರು. | |
| 06. | 5906<br>ಚು.ರ.ಪ್ರ: 4375<br>ಶ್ರೀ ರಮೇಶ್ ಬಾಬು<br>ವಿ.ಪ.ನ.ದಿ:<br>20-11-2017 | ರಾಜ್ಯದಲ್ಲಿರುವ ಜಿಲ್ಲಾ ಗ್ರಾಹಕ ವೇದಿಕೆಗಳ ನ್ಯಾಯಾಲಯಗಳಿಗೆ ನ್ಯಾಯಾಧೀಶರ ಹುದ್ದೆಗಳನ್ನು ಹಾಗೂ ಇತರೆ ಸಿಬ್ಬಂದಿಯನ್ನು ಪೂರ್ಣ ಪ್ರಮಾಣದಲ್ಲಿ ನೇಮಕ ಮಾಡುವ ಬಗ್ಗೆ. | ರಾಜ್ಯದಲ್ಲಿ 31 ಜಿಲ್ಲಾ ಗ್ರಾಹಕರ ವೇದಿಕೆಗಳು ಕಾರ್ಯ ನಿರ್ವಹಿಸುತ್ತಿವೆ.<br>**ಅಧ್ಯಕ್ಷರು-1 ಹುದ್ದೆಗಳು**<br>ಪ್ರಸ್ತುತ ಸದರಿ ನೇಮಕಾತಿಗೆ ಅಧಿಸೂಚನೆಯನ್ನು ಹೊರಡಿಸಿದ್ದು, ಆಯ್ಕೆ ಸಮಿತಿಯು ಆಯ್ಕೆ ಸಲುವಾಗಿ ಪರೀಕ್ಷೆಗಳನ್ನು ನಡೆಸಲು ತೀರ್ಮಾನಿಸಿ ನಿಯಮಗಳಲ್ಲಿ ತಿದ್ದುಪಡಿ ಮಾಡುವ ಕುರಿತು | ದಿನಾಂಕ: 30.8.2018ರಂದು ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು, ಕರ್ನಾಟಕ ರಾಜ್ಯದಲ್ಲಿ ಒಂದು ರಾಜ್ಯ ಆಯೋಗ ಹಾಗೂ 31 ಜಿಲ್ಲಾ ವೇದಿಕೆಗಳು ಕಾರ್ಯನಿರ್ವಹಿಸುತ್ತಿವೆ.<br>ರಾಜ್ಯ ಆಯೋಗ ಮತ್ತು ಜಿಲ್ಲಾ ವೇದಿಕೆಗಳ ಸೇವೆಯಲ್ಲಿ ಈ ಕೆಳಕಂಡ ಹುದ್ದೆಗಳು ಖಾಲಿ ಇರುತ್ತವೆ.<br><u>ಜಿಲ್ಲಾ ವೇದಿಕೆಯ ಅಧ್ಯಕ್ಷರು- 01</u> |

| | | | | |
|---|---|---|---|---|
| | | | ಪರಿಶೀಲಿಸಲಾಗುತ್ತಿದೆ.<br><br>**ಸಹಾಯಕ ರಿಜಿಸ್ಟ್ರಾರ್ ಮತ್ತು ಸಹಾಯುಕ ಆಡಳಿತಾಧಿಕಾರಿಗಳು-6 ಹುದ್ದೆಗಳು**<br><br>ಸಹಾಯಕ ರಿಜಿಸ್ಟಾರ್ ಮತ್ತು ಸಹಾಯುಕ ಆಡಳಿತಾಧಿಕಾರಿಗಳ ಹುದ್ದೆಗಳು ಪದೋನ್ನತಿ ಹುದ್ದೆಗಳಾಗಿದ್ದು, ಮೀಸಲಾತಿಗೆ ಸಂಬಂಧಿಸಿದಂತೆ ಮಾನ್ಯ ಸರ್ವೋಚ್ಚ ನ್ಯಾಯಾಲಯವು ಸಿವಿಲ್ ಅಪೀಲ್ ಸಂಖ್ಯೆ:2368/2011ರಲ್ಲಿ ನೀಡಿರುವ ತೀರ್ಪಿನ ಪಾಲನೆಯ ಉದ್ದೇಶದಿಂದ ಸರ್ಕಾರವು 6 ತಿಂಗಳ ಅವಧಿಗೆ ಯಾವುದೇ ಪದೋನ್ನತಿಯನ್ನು ನೀಡದಿರುವ ಬಗ್ಗೆ ನಿರ್ದೇಶನವನ್ನು ನೀಡಲಾಗಿದ್ದು, ಆ ಅವಧಿ ಮುಗಿದ ನಂತರ ಸದರಿ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ ಅಗತ್ಯ ಕ್ರಮವಹಿಸಲಾಗುವುದು.<br><br>**ಶಿರಸ್ತೇದಾರರು-2 ಹುದ್ದೆಗಳು**<br><br>ಶಿರಸ್ತೇದಾರ ಹುದ್ದೆಯು ಪದೋನ್ನತಿ ಹುದ್ದೆಯಾಗಿದ್ದು, ಸರ್ಕಾರವು 6 ತಿಂಗಳ ಅವಧಿಗೆ ಯಾವುದೇ | ಖಾಲಿಯಿರುವ ಚಾಮರಾಜನಗರ ಜಿಲ್ಲಾ ವೇದಿಕೆಯ ಅಧ್ಯಕ್ಷರ ಹುದ್ದೆಗೆ ಕೆಲಸದ ಒತ್ತಡ ಕಡಿಮೆಯಿರುವ ಯಾದಿಗಿರಿ ಜಿಲ್ಲಾ ವೇದಿಕೆಯ ಅಧ್ಯಕ್ಷರನ್ನು ಅನ್ಯ ಕರ್ತವ್ಯದ ಮೇರೆಗೆ ನಿಯೋಜಿಸಿ, ಪ್ರಸ್ತುತ ಖಾಲಿಯಿರುವ ಅಧ್ಯಕ್ಷರ ಹುದ್ದೆಗೆ ಅಧಿಸೂಚನೆಯನ್ನು ಹೊರಡಿಸದಿರಲು ರಾಜ್ಯ ಆಯೋಗದ ಮಾನ್ಯ ಅಧ್ಯಕ್ಷರು ನಿರ್ದೇಶನ ನೀಡಿರುವುದನ್ನು ಸರ್ಕಾರಕ್ಕೆ ತಿಳಿಸಲಾಗಿದೆ.<br><br><u>ರಾಜ್ಯ ಆಯೋಗ ಮತ್ತು ಜಿಲ್ಲಾ ವೇದಿಕೆ ಸದಸ್ಯರು – 30 ಹುದ್ದೆಗಳು</u><br><br>ರಾಜ್ಯ ಆಯೋಗ ಮತ್ತು ಜಿಲ್ಲಾ ವೇದಿಕೆಗಳ ಸೇವೆಯಲ್ಲಿ ಒಟ್ಟು 30 ಸದಸ್ಯರು/ಮಹಿಳಾ ಸದಸ್ಯರ ಹುದ್ದೆಗಳು ಖಾಲಿ ಇದ್ದು, ಈ ಹುದ್ದೆಗಳನ್ನು ಭರ್ತಿ ಮಾಡಲು ಆಯ್ಕೆ ಪ್ರಕ್ರಿಯೆಗೆ ಸರ್ವೋಚ್ಚ ನ್ಯಾಯಾಲಯದ ನಿರ್ದೇಶನದಂತೆ ಸರ್ಕಾರದ ಹಂತದಲ್ಲಿ ನಿಯಮಗಳನ್ನು ರೂಪಿಸುತ್ತಿರುವುದರಿಂದ ಸದರಿ ಹುದ್ದೆಗಳನ್ನು ತಕ್ಷಣಕ್ಕೆ ಭರ್ತಿ ಮಾಡಲು ಅವಕಾಶವಾಗುವುದಿಲ್ಲ.<br><br><u>ಸಹಾಯಕ ರಿಜಿಸ್ಟ್ರಾರ್ ಮತ್ತು ಸಹಾಯಕ ಆಡಳಿತಾಧಿಕಾರಿಗಳು 07 :</u><br><br>ಜಿಲ್ಲಾ ವೇದಿಕೆಗಳಲ್ಲಿ ಖಾಲಿಯಿರುವ 07 ಸಹಾಯಕ ರಿಜಿಸ್ಟ್ರಾರ್ ಮತ್ತು ಸಹಾಯಕ ಆಡಳಿತಾಧಿಕಾರಿಗಳ ಹುದ್ದೆಗಳು ಪದೋನ್ನತಿ ಹುದ್ದೆಗಳಾಗಿದ್ದು, ಸರ್ಕಾರದ ಸುತ್ತೋಲೆ ಸಂಖ್ಯೆ: ಸಿ.ಆಸು.ಇ ಸೇನೆನಿ 2018 (ಭಾಗ-1) ದಿನಾಂಕ: 03.8.2018 ರಲ್ಲಿ ಸರ್ಕಾರದಿಂದ ಮುಂದಿನ |

| | | | | |
|---|---|---|---|---|
| | | | ಪದೋನ್ನತಿಯನ್ನು ನೀಡದಿರುವ ಬಗ್ಗೆ ನಿರ್ದೇಶನವನ್ನು ನೀಡಲಾಗಿರುವುದರಿಂದ, ಆ ಅವಧಿ ಮುಗಿದ ನಂತರ ಸದರಿ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ ಅಗತ್ಯ ಕ್ರಮ ಕೈಗೊಳ್ಳಲಾಗುವುದು.<br>**ಶೀಘ್ರಲಿಪಿಗಾರರು-20 ಹುದ್ದೆಗಳು**<br>ಶೀಘ್ರಲಿಪಿಗಾರ ಹುದ್ದೆಗಳ ಭರ್ತಿಗೆ ಸಂಬಂಧಿಸಿದಂತೆ ಈಗಾಗಲೇ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದ್ದು, ಅದು ಪರಿಶೀಲನೆ ಹಂತದಲ್ಲಿರುತ್ತದೆ.<br>**ಪ್ರಥಮ ದರ್ಜೆ ಸಹಾಯಕರು-17 ಹುದ್ದೆಗಳು**<br>ಹೈದ್ರಾಬಾದ್ ಕರ್ನಾಟಕ ಪ್ರದೇಶದ ಸ್ಥಳೀಯ ವೃಂದದ 3 ಹುದ್ದೆಗಳಿಗೆ ಈಗಾಗಲೇ ಕರ್ನಾಟಕ ಲೋಕ ಸೇವಾ ಆಯೋಗಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿರುತ್ತದೆ. ರಾಜ್ಯ ವ್ಯಾಪಿ ಉಳಿಕೆ ವೃಂದದ 12 ಹುದ್ದೆಗಳಿಗೆ ಸಂಬಂಧಿಸಿದಂತೆ ನೇಮಕಾತಿ ಕೈಗೊಳ್ಳಲು ಪರಿಶೀಲಿಸಲಾಗುತ್ತಿದೆ.<br>**ದ್ವಿತೀಯ ದರ್ಜೆ ಸಹಾಯಕರು-8ಹುದ್ದೆಗಳು** | ನಿರ್ದೇಶನ ನೀಡುವವರೆಗೆ ಯಾವುದೇ ಮುಂಬಡ್ತಿ/ಹಿಂಬಡ್ತಿ ಪ್ರಕ್ರಿಯೆ ಜರುಗಿಸದೇ ಯಥಾಸ್ಥಿತಿಯನ್ನು ಕಾಪಾಡಲು ಸೂಚಿಸಿರುವುದರಿಂದ ಯಥಾಸ್ಥಿತಿಯನ್ನು ಕಾಯ್ದಿರಿಸಲಾಗಿದೆ.<br><br><u>ಶಿರಸ್ತೇದಾರರು -02:</u><br><br>ಜಿಲ್ಲಾ ವೇದಿಕೆಗಳಲ್ಲಿ ಖಾಲಿಯಿರುವ 02 ಶಿರಸ್ತೇದಾರರ ಹುದ್ದೆಗಳು ಪದೋನ್ನತಿ ಹುದ್ದೆಗಳಾಗಿದ್ದು, ಸರ್ಕಾರದ ಸುತ್ತೋಲೆ ಸಂಖ್ಯೆ: ಸಿ.ಆಸುಇ ಸೇಸೇನಿ 2018 (ಭಾಗ-2) ದಿನಾಂಕ: 03.8.2018ರಲ್ಲಿ ಸರ್ಕಾರದಿಂದ ಮುಂದಿನ ನಿರ್ದೇಶನ ನೀಡುವವರೆಗೆ ಯಾವುದೇ ಮುಂಬಡ್ತಿ/ಹಿಂಬಡ್ತಿ ಪ್ರಕ್ರಿಯೆ ಜರುಗಿಸದೇ ಯಥಾಸ್ಥಿತಿಯನ್ನು ಕಾಪಾಡಲು ಸೂಚಿಸಿರುವುದರಿಂದ ಯಥಾಸ್ಥಿತಿಯನ್ನು ಕಾಯ್ದಿರಿಸಲಾಗಿದೆ.<br><br><u>ಶೀಘ್ರಲಿಪಿಗಾರರು- 21 ಹುದ್ದೆಗಳು :</u><br><br>ಜಿಲ್ಲಾ ವೇದಿಕೆಗಳಲ್ಲಿ ಖಾಲಿಯಿರುವ 21 ಶೀಘ್ರಲಿಪಿಗಾರರ ಹುದ್ದೆಗಳು ನೇರನೇಮಕಾತಿ ಹುದ್ದೆಗಳಾಗಿದ್ದು, ಸದರಿ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಅನುಮತಿ ಕೋರಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದ್ದು, ಈ ವಿಷಯದಲ್ಲಿ ಆರ್ಥಿಕ ಇಲಾಖೆಯು ಕೆಲವು ಮಾಹಿತಿ/ವಿವರಗಳನ್ನು ಕೋರಿದ್ದು, ಮಾಹಿತಿಗಳನ್ನು ಗ್ರಾಹಕ ಆಯೋಗದಿಂದ ನಿರೀಕ್ಷಿಸಲಾಗಿದೆ. |

| | | | | |
|---|---|---|---|---|
| | | | ಹೈದ್ರಾಬಾದ್-ಕರ್ನಾಟಕ ಪ್ರದೇಶದ ಸ್ಥಳಿಯ ವೃಂದದ 3 ಹುದ್ದೆಗಳಿಗೆ ಕರ್ನಾಟಕ ಲೋಕ ಸೇವಾ ಆಯೋಗವು ಕಳುಹಿಸಿದ ಆಯ್ಕೆ ಪಟ್ಟಿಯ ಮೇರೆಗೆ 2 ಹುದ್ದೆಗಳನ್ನು ಭರ್ತಿ ಮಾಡಲಾಗಿದ್ದು, ಮೂಲ ದಾಖಲೆಗಳಿಗೆ ಪರಿಶೀಲನೆಗೆ ಹಾಜರಾಗದ ಕಾರಣದಿಂದ ಒಬ್ಬ ಅಭ್ಯರ್ಥಿಯನ್ನು ಹೆಚ್ಚುವರಿ ಪಟ್ಟಿ ಮೂಲಕ ಆಯ್ಕೆ ಮಾಡುವಂತೆ ಕರ್ನಾಟಕ ಲೋಕ ಸೇವಾ ಆಯೋಗಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿರುತ್ತದೆ. ರಾಜ್ಯ ವ್ಯಾಪಿ ಉಳಿಕೆ ವೃಂದದ 7 ಹುದ್ದೆಗಳಿಗೆ ಸಂಬಂಧಿಸಿದಂತೆ ನೇಮಕಾತಿ ಕುರಿತಂತೆ ಪರಿಶೀಲಿಸಲಾಗುತ್ತದೆ.<br><br>**ಬೆರಳಚ್ಚುಗಾರರು-2 ಹುದ್ದೆಗಳು**<br><br>ಸದರಿ ಹುದ್ದೆಗಳನ್ನು ಭರ್ತಿ ಮಾಡವ ಬಗ್ಗೆ ಅಗತ್ಯ ಕ್ರಮ ವಹಿಸಲಾಗುತ್ತಿದೆ.<br><br>**ವಾಹನ ಚಾಲಕರು-19 ಹುದ್ದೆಗಳು**<br><br>ವಾಹನ ಚಾಲಕರುಗಳು ಲಭ್ಯವಿಲ್ಲದಿರುವುದರಿಂದ ವಾಹನ ಚಾಲಕರ ಹುದ್ದೆಗಳನ್ನು ಭರ್ತಿ | ರಾಜ್ಯ ಆಯೋಗ ಮತ್ತು ಜಿಲ್ಲಾ ವೇದಿಕೆಗಳ ಸೇವೆಯಲ್ಲಿ ಖಾಲಿ ಇರುವ 14 ಹುದ್ದೆಗಳಲ್ಲಿ 13 ಹುದ್ದೆಗಳು ನೇರ ನೇಮಕಾತಿ ಹುದ್ದೆಗಳಾಗಿದ್ದು, 01 ಹುದ್ದೆ ಮುಂಬಡ್ತಿ ಹುದ್ದೆಗಳಾಗಿದ್ದು, ನೇರ ನೇಮಕಾತಿ ಹುದ್ದೆಗಳಿಗೆ ಸರ್ಕಾರದಿಂದ ಅನುಮತಿ ನೀಡಿರುವ 06 ಹುದ್ದೆಗಳನ್ನು ಕರ್ನಾಟಕ ಲೋಕಸೇವಾ ಆಯೋಗದಿಂದ ಭರ್ತಿ ಮಾಡಲು ಕ್ರಮವಹಿಸಲಾಗುತ್ತಿದೆ. ಇನ್ನುಳಿದ 01 ಹುದ್ದೆಯನ್ನು ಪದೋನ್ನತಿ ಮೂಲಕ ಭರ್ತಿ ಮಾಡಲು ಸರ್ಕಾರದ ಸುತ್ತೋಲೆ ಸಂಖ್ಯೆ: ಸಿಆಸುಇ ಸೇನೆನಿ 2018 (ಭಾಗ-1) ದಿನಾಂಕ: 3.8.2018ರಲ್ಲಿ ಸರ್ಕಾರದಿಂದ ಮುಂದಿನ/ಹಿಂಬಡ್ತಿ ಪ್ರಕ್ರಿಯೆ ಜರುಗಿಸದೇ ಯಥಾಸ್ಥಿತಿಯನ್ನು ಕಾಪಾಡಲು ಸೂಚಿಸಿರುವುದರಿಂದ ಯಥಾಸ್ಥಿತಿಯನ್ನು ಕಾಯ್ದಿರಿಸಲಾಗಿದೆ.<br><br>**<u>ಬೆರಳಚ್ಚುಗಾರರು – 03 ಹುದ್ದೆಗಳು</u>**<br><br>ರಾಜ್ಯ ಆಯೋಗ ಮತ್ತು ಜಿಲ್ಲಾ ವೇದಿಕೆಗಳ ಸೇವೆಯಲ್ಲಿ ಖಾಲಿ ಇರುವ ಹುದ್ದೆಗಳಾಗಿದ್ದು, ಈ 03 ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಸರ್ಕಾರದ ಅನುಮತಿಯನ್ನು ಕೋರಿ ಪ್ರಸ್ತಾವನೆಯನ್ನು ಸಲ್ಲಿಸಲು ಕ್ರಮವಹಿಸಲಾಗುತ್ತಿದೆ.<br>**<u>ವಾಹನ ಚಾಲಕರು – 19 ಹುದ್ದೆಗಳು</u>**<br>ವಾಹನಗಳು ಲಭ್ಯವಿಲ್ಲದೇ ಇರುವುದರಿಂದ ವಾಹನ ಚಾಲಕರ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ವಹಿಸಿರುವುದಿಲ್ಲ.<br><u>ಗ್ರೂಪ್ ಡಿ (ಪೀವನ್)– 15 ಹುದ್ದೆಗಳು :</u> |

| | | | | |
|---|---|---|---|---|
| | | | ಮಾಡಿರುವುದಿಲ್ಲ.<br>**ಗ್ರೂಪ್-'ಡಿ'-14 ಹುದ್ದೆಗಳು**<br>ಗ್ರೂಪ್-'ಡಿ' ಹುದ್ದೆಗಳ ಭರ್ತಿಗೆ ಸಂಬಂಧಿಸಿಂತೆ ಹೊರಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಳ್ಳಲು ಅನುಮತಿಸಲಾಗುವುದು ಎಂದು ಮಾನ್ಯ ಆಹಾರ, ನಾಗರೀಕ ಸರಬರಾಜು, ಗ್ರಾಹಕರ ವ್ಯವಹಾರಗಳು ಹಾಗೂ ಕಾನೂನು ಮಾಪನಾಶಾಸ್ತ್ರ ಸಚಿವರು ತಿಳಿಸಿದರು. | ರಾಜ್ಯ ಆಯೋಗ ಮತ್ತು ಜಿಲ್ಲಾ ವೇದಿಕೆಗಳ ಸೇವೆಯಲ್ಲಿ ಹಾಲಿ 15 ಹುದ್ದೆಗಳು ಖಾಲಿ ಇದ್ದು, ಸದರಿ ಹುದ್ದೆಗಳನ್ನು ಭರ್ತಿ ಮಾಡಲು ಅನುಮತಿ ಕೋರಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿ, ಸರ್ಕಾರವು ಹೊರಗುತ್ತಿಗೆ ಆಧಾರದ ಮೇರೆಗೆ ಭರ್ತಿ ಮಾಡಲು ತಿಳಿಸಲಾಗಿರುತ್ತದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ಸಮಿತಿಯು ತೀರ್ಮಾನಿಸಿತು. |
| 07. | 5907/ 5908<br>ಚು.ರ.ಪ್ರ; 4214<br>ಶ್ರೀ ರಘುನಾಥ ರಾವ್ ಮಲ್ಕಾಪೂರೆ<br>ವಿ.ಪ.ನ.ದಿ: 20-11-2017<br>ಹಾಗೂ<br>ಚು.ರ.ಪ್ರ; 4177<br>ಶ್ರೀ ರಿಜ್ವಾನ್ ಅರ್ಷದ್<br>ವಿ.ಪ.ನ.ದಿ: 20-11-2017 | ಬೀದರ್ ಜಿಲ್ಲೆಯಲ್ಲಿ ತಾಲ್ಲೂಕು ವಾರು ಬಿ.ಪಿ.ಎಲ್ ಕಾರ್ಡ್ ಗಳನ್ನು ಕಾಲಮಿತಿಯೊಳಗೆ ವಿತರಿಸುವ ವ್ಯವಸ್ಥೆ ಹಾಗೂ ಆಹಾರ ನಿರೀಕ್ಷಕರ ಹುದ್ದೆಗಳನ್ನು ಸೃಜಿಸುವ ಬಗ್ಗೆ. | ಆನ್‌ಲೈನ್ ಮೂಲಕ ಸ್ವೀಕರಿಸಿರುವ ಅರ್ಜಿಗಳನ್ನು ವಿಲೇವಾರಿ ಮಾಡಲು ಪ್ರತಿ ಅರ್ಜಿಯ ಸದಸ್ಯರ ವಾರ್ಷಿಕ ವರಮಾನವನ್ನು ಅಧಿಕೃತ ಮಾನದಂಡವಾಗಿ ಪರಿಗಣಿಸಲಾಗುವುದು. ಎಲ್ಲಾ ಅರ್ಜಿಯ ವಿವರಗಳನ್ನು ಅಟಲ್ ಜೀ ಜನ ಸ್ನೇಹಿ ಕೇಂದ್ರಗಳ ಮುಖಾಂತರ ಕಂದಾಯ ಇಲಾಖೆಯ ಅಧಿಕಾರಿಗಳು ಅಗತ್ಯ ಮಾಹಿತಿಯನ್ನು ಭರ್ತಿ ಮಾಡಿ ಆನ್‌ಲೈನ್ ಮೂಲಕ ಅಪ್‌ಲೋಡ್ ಮಾಡಿದ ನಂತರ ಸದರಿ ಮಾಹಿತಿಯೂ ಆಹಾರ ಡೇಟಾ ಬೇಸ್‌ಗೆ ವರ್ಗಾವಣೆಗೊಂಡು ಪಡಿತರ ಚೀಟಿ ಸಿದ್ಧಗೊಳ್ಳುತ್ತದೆ. | ದಿನಾಂಕ: 30.8.2018ರಂದು ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು, ಪಡಿತರ ಚೀಟಿ ವಿತರಿಸುವಲ್ಲಿ ವಿಳಂಬವಾಗದಂತೆ ಕ್ರಮವಹಿಸಲು ಸಂಪೂರ್ಣ ವಿಲೇವಾರಿ ಪ್ರಕ್ರಿಯೆಯಲ್ಲಿ ಆನ್‌ಲೈನ್ ವ್ಯವಸ್ಥೆಯನ್ನು ಜಾರಿಗೊಳಿಸಲಾಫಿದೆ. ಪ್ರತಿ ಅರ್ಜಿದಾರರ ಕುಟುಂಬ ಸದಸ್ಯರ ವಾರ್ಷಿಕ ಆದಾಯ ದೃಢೀಕರಣ ಪತ್ರ ಹಾಗು ಜಾತಿ ದೃಢೀಕರಣ ಪತ್ರಗಳನ್ನು ಸಂಬಂಧಪಟ್ಟ ಇಲಾಖೆಯಿಂದ ಪಡಯುವ ಪ್ರಕ್ರಿಯೆಯಲ್ಲಿ ವಿಳಂಬತೆಯನ್ನು ಗುರುತಿಸಿದ್ದು, ಈ ಕಾರ್ಯವನ್ನು ಕೂಡ ಚುರುಕುಗೊಳಿಸಲು ತಾಂತ್ರಿಕವಾಗಿ ಎಲ್ಲಾ ತರಹದ ಅಗತ್ಯ ಮಾರ್ಪಾಡುಗಳನ್ನು ಮಾಡಲಾಗಿರುತ್ತದೆ. ಹಾಗಾಗಿ ಪಡಿತರ ಚೀಟಿ ವಿತರಿಸುವಲ್ಲಿ ಯಾವುದೇ ವಿಳಂಬಗಳು ಆಗದಂತೆ ಕ್ರಮ ವಹಿಸಲಾಗಿದೆ. ಅದರಂತೆ ಬಾಕಿಯಿರುವ ಎಲ್ಲಾ ಪಡಿತರ ಚೀಟಿಯ ಅರ್ಜಿಗಳನ್ನು ವಿಲೇವಾರಿ ಮಾಡಲು ಕ್ರಮವಹಿಸಲಾಗಿರುತ್ತದೆ. |

| | | | | |
|---|---|---|---|---|
| | | | ಈ ರೀತಿ ಸಿದ್ದಪಡಿಸಿದ ಪಡಿತರ ಚೀಟಿಗಳನ್ನು ಕೇಂದ್ರೀಯವಾಗಿ ಮುದ್ರಿಸಿ ಫಲಾನುಭವಿಗಳಿಗೆ ಸ್ಪೀಡ್ ಪೋಸ್ಟ್ ಮೂಲಕ ನೇರ ಮನೆಗೆ ತಲುಪಿಸಲಾಗುತ್ತಿದೆ. ಮೇಲೆ ವಿವರಿಸಿದಂತೆ ಅರ್ಜಿದಾರರಿಗೆ ಪಡಿತರ ಚೀಟಿ ನೀಡುವ ಕಾರ್ಯವನ್ನು 15ನೇ ಡಿಸೆಂಬರ್ 2017 ಒಳಗಾಗಿ ಪೂರ್ಣ ಗೊಳಿಸಲು ಕ್ರಮವಹಿಸಲಾಗುತ್ತಿದೆ<br><br>ಇಲಾಖೆಯಲ್ಲಿ ಪ್ರ.ದ.ಸ,/ಆಹಾರ ನಿರೀಕ್ಷಕರ ಹುದ್ದೆ ಕೊರತೆ ಇದ್ದು, ಹೊಸದಾಗಿ 48 ಹುದ್ದೆಗಳನ್ನು ಸೃಜಿಸಿ, ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಸೇರ್ಪಡೆಗೊಳಿಸಲು ಕ್ರಮವಹಿಸಲಾಗಿರುತ್ತದೆ ಎಂದು ಮಾನ್ಯ ಆಹಾರ, ನಾಗರೀಕ ಸರಬರಾಜು, ಗ್ರಾಹಕರ ವ್ಯವಹಾರಗಳು ಹಾಗೂ ಕಾನೂನು ಮಾಪನಾಶಾಸ್ತ್ರ ಸಚಿವರು ತಿಳಿಸಿದರು. | ಇಲಾಖೆಯಲ್ಲಿ ಪ್ರ.ದ.ಸ/ಆಹಾರ ನಿರೀಕ್ಷಕರ ಹುದ್ದೆ ಕೊರತೆ ಇದ್ದು ಹಾಗೂ ಹೊಸ ತಾಲ್ಲೂಕುಗಳಿಗೆ ಹೊಸದಾಗಿ 40 ಹುದ್ದೆಗಳನ್ನು ಸೃಜಿಸಿ, ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳಿಗೆ ಪರಿಷ್ಕರಣೆ ಬಗ್ಗೆ ಡಿ.ಪಿ.ಆರ್.ನೊಂದಿಗೆ ಸಮಾಲೋಚಿಸಲಾಗಿ, ಡಿ.ಪಿ.ಆರ್. ಇವರು ಸಿ & ಆರ್ ಪರಿಷ್ಕರಣೆಯನ್ನು ಪರಿಶೀಲಿಸಿ ಮರುಸಲ್ಲಿಸುವಂತೆ ತಿಳಿಸಿದ್ದಾರೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ಸಮಿತಿಯು ತೀರ್ಮಾನಿಸಿತು. |
| 08. | 5911<br>ಚು.ರ.ಪ್ರ.: 1399<br>ಶ್ರೀ ಕೋಟಾ ಶ್ರೀನಿವಾಸ ಪೂಜಾರಿ | ರಾಜ್ಯದ ಎಲ್ಲಾ ಜಿಲ್ಲೆ ಮತ್ತು ತಾಲ್ಲೂಕುಗಳಲ್ಲಿ ಮತದಾರರ ಗುರುತಿನ ಚೀಟಿ ಮತ್ತು ಆಧಾರ್ | ಕೆಲವು ಕಡೆ ಟೆಕ್ನಿಕಲ್ ಸಮಸ್ಯೆ ಅಗಿರುತ್ತದೆ ಅದನ್ನು ಖಂಡಿತವಾಗಿ ನಾನು ಪರಿಶೀಲನೆ ಮಾಡಿ ಯಾವ ರೀತಿ ಕ್ರಮ ತೆಗೆದುಕೊಳ್ಳಬೇಕು | ದಿನಾಂಕ: 30.8.2018ರಂದು ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು, ಪ್ರಾರಂಭದ ಹಂತದಲ್ಲಿ ಪಡಿತರ ಚೀಟಿಗಳಿಗೆ ಆಧಾರ್ ಹೊಂದಾಣಿಕೆ ಮಾಡುವಾಗ ಸಮಸ್ಯೆಗಳು ಉದ್ಭವಿಸಿದ್ದು, ಸದರಿ ಸಮಸ್ಯೆಗಳನ್ನು |

| | | | | |
|---|---|---|---|---|
| | ವಿ.ಪ.ನ.ದಿ: 23-03-2015 | ಕಾರ್ಡ್ ಹೊಂದಾಣಿಕೆಯಾಗದೆ ಪಡಿತರ ಚೀಟಿರದ್ದಾಗಿ ಸಾರ್ವಜನಿಕರು ತೊಂದರೆ ಅನುಭವಿಸುತ್ತಿರುವ ಬಗ್ಗೆ. | ಅದನ್ನು ಪರಿಶೀಲನೆ ಮಾಡಿ ಹೇಳುತ್ತೇನೆ ಎಂದು ಮಾನ್ಯ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು ತಿಳಿಸಿದರು. | ಬಗೆಹರಿಸಲಾಗಿದೆ. ಪ್ರಸ್ತುತ ರಾಜ್ಯದಲ್ಲಿ 1,21,01,315 ಆದ್ಯತೆ (ಪಿ.ಹೆಚ್.ಹೆಚ್) ಪಡಿತರ ಚೀಟಿಗಳಿದ್ದು, ಈ ಪೈಕಿ 1,20,73,668 ಪಡಿತರ ಚೀಟಿಗಳಿಗೆ ಆಧಾರ್ ಹೊಂದಾಣಿಕ ಮಾಡಲಾಗಿದೆ. ಶೇ.99 ರಷ್ಟು ಹೊಂದಾಣಿಕೆ ಕಾರ್ಯ ಪೂರ್ಣಗೊಂಡಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ಸಮಿತಿಯು ತೀರ್ಮಾನಿಸಿತು. |

## ಕಾನೂನು ಇಲಾಖೆಯ ವರದಿ

| ಕ್ರಮ ಸಂಖ್ಯೆ | ಆಶ್ವಾಸನೆ ಸಂಖ್ಯೆ ಆಧಾರ ಮತ್ತು ದಿನಾಂಕ | ವಿಷಯ | ಆಶ್ವಾಸನೆ | ತೆಗೆದುಕೊಂಡ ಕ್ರಮ |
|---|---|---|---|---|
| 1. | 5405<br>ಚು.ರ.ಪ್ರ.: 559<br>ಶ್ರೀ ಕೋಟ ಶ್ರೀನಿವಾಸ ಪೂಜಾರಿ<br>ವಿಪನದಿ: 03.07.2014 | ರಾಜ್ಯದಲ್ಲಿ ಖಾಲಿ ಇರುವ ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷರ ಆಯ್ಕೆ ಮಾಡುವಲ್ಲಿ ಸರ್ಕಾರ ವಿಳಂಬ ಮಾಡುತ್ತಿರುವ ಬಗ್ಗೆ. | ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷರ ಆಯ್ಕೆಗೆ ಸರ್ಕಾರ ಕ್ರಮ ಕೈಗೊಳ್ಳುತ್ತಿದೆ. ದೆಹಲಿ ಉಚ್ಚ ನ್ಯಾಯಾಲಯದ ಗೌರವಾನ್ವಿತ ನಿವೃತ್ತ ಮುಖ್ಯ ನ್ಯಾಯಮೂರ್ತಿ ಶ್ರೀ ಧರ್ಮಾರ್ ಮುರುಗೇಶನ್, ಇವರನ್ನು ಮಾನ್ಯ ಆಯೋಗದ ಅಧ್ಯಕ್ಷರನ್ನಾಗಿ ನೇಮಕ ಮಾಡಲಾಗಿತ್ತು. ಆದರೆ, ಗೌರವಾನ್ವಿತರು ಆ ಹುದ್ದೆಯನ್ನು ಸ್ವೀಕರಿಸದೇ ಇರುವುದರಿಂದ ಬೇರೆಯವರನ್ನು ಅಧ್ಯಕ್ಷರನ್ನಾಗಿ ನೇಮಕ ಮಾಡುವ ಬಗ್ಗೆ ಪರಿಶೀಲಿಸಲಾಗುತ್ತಿದೆ ಎಂದು ಮಾನ್ಯ ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಮತ್ತು ಪಶು ಸಂಗೋಪನಾ ಸಚಿವರು ತಿಳಿಸಿದರು. | ದಿನಾಂಕ: 06.09.2018ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ಮಾನವ ಹಕ್ಕುಗಳ ಸಂರಕ್ಷಣಾ ಅಧಿನಿಯಮ, 1993ರ ಕಲಂ 22 (1)ರನ್ವಯ ಆಯ್ಕೆ ಸಮಿತಿಯ ಮೂಲಕ ಜಸ್ಟಿಸ್ ಧೀರೇಂದ್ರ ಹೀರಾಲಾಲ್ ವಘೇಲಾ ಇವರನ್ನು ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷರನ್ನಾಗಿ ನೇಮಕ ಮಾಡಲಾಗಿದೆ (ಸರ್ಕಾರದ ಅಧಿಸೂಚನೆ ಸಂಖ್ಯೆ: ಲಾ 42 ಹೆಚ್ಆರ್‌ಸಿ 2017, ದಿ: 22.02.2018). ಮಾನ್ಯ ಅಧ್ಯಕ್ಷರು, ದಿನಾಂಕ: 12.03.2018ರಂದು ಆಯೋಗದಲ್ಲಿ ಕಾರ್ಯವರದಿ ಮಾಡಿಕೊಂಡಿರುತ್ತಾರೆ.<br>ಈ ಭರವಸೆಯನ್ನು ಈಗಾಗಲೇ ಸರ್ಕಾರವು ಈಡೇರಿಸಿರುವುದರಿಂದ, ಇಲಾಖಾಧಿಕಾರಿಗಳು ನೀಡಿದ ವರದಿಯನ್ನು ಒಪ್ಪಿ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |
| 02. | 5406<br>ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪ<br>ಶ್ರೀ ಬಸವರಾಜ ಹೊರಟ್ಟಿ<br>ವಿಪನದಿ: 30.07.2014 | ಮಾನವ ಹಕ್ಕುಗಳ ಆಯೋಗಕ್ಕೆ ಪ್ರಭಾರ ಅಧ್ಯಕ್ಷರ ನೇಮಕಾತಿಯಲ್ಲಿ ಕಾನೂನು ಬಾಹಿರವಾಗಿ ನೇಮಿಸಿರುವ ಬಗ್ಗೆ. | ಮಾನ್ಯ ಸದಸ್ಯರು ತೆಗೆದುಕೊಂಡು ಬಂದಿರುವಂತಹ ವಿಷಯ ಸರ್ಕಾರದ ಗಮನಕ್ಕೂ ಕೂಡ ಬಂದಿದೆ. ಅದರ ದಾಖಲಾತಿಗಳ ಬಗ್ಗೆ ಇವತ್ತು ಪರಿಶೀಲನೆ ನಡೆಯುತ್ತಿದೆ. ಒಂದು ವಾರದಲ್ಲಿ ಅಂತಿಮ ತೀರ್ಮಾನವನ್ನು | ದಿನಾಂಕ: 06.09.2018ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ದೆಹಲಿ ಉಚ್ಚ ನ್ಯಾಯಾಲಯದ ಗೌರವಾನ್ವಿತ ನಿವೃತ್ತ ಮುಖ್ಯ ನ್ಯಾಯಮೂರ್ತಿ ಶ್ರೀ ಧರ್ಮಾರ್ ಮುರುಗೇಶನ್ ಇವರನ್ನು ಆಯೋಗದ ಅಧ್ಯಕ್ಷರನ್ನಾಗಿ ನೇಮಕ ಮಾಡಿ ದಿ: 28.12.2013ರಂದು ಅಧಿಸೂಚನೆ ಸಂಖ್ಯೆ: ಲಾ 15 ಹೆಚ್ಆರ್‌ಸಿ 2012ನ್ನು ಹೊರಡಿಸಲಾಗಿತ್ತು. ಆದರೆ, ಗೌರವಾನ್ವಿತರು ಆ ಹುದ್ದೆಯನ್ನು ಸ್ವೀಕರಿಸದೇ ಇರುವುದರಿಂದ, 193ರ ಕಲಂ |

| | | | | |
|---|---|---|---|---|
| | | | ಸರ್ಕಾರ ತೆಗೆದುಕೊಳ್ಳುತ್ತದೆ. ಎಂದು ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ತಿಳಿಸಿದರು. | (251)ರನ್ವಯ ಗೌರವಾನ್ವಿತ ರಾಜ್ಯಪಾಲರ ಅನುಮೋದನೆಯೊಂದಿಗೆ ದಿನಾಂಕ: 23.06.2014ರ ಅಧಿಸೂಚನೆ ಸಂಖ್ಯೆ: ಲಾ 15 ಹೆಚ್‌ಆರ್‌ಸಿ 2012 ರಲ್ಲಿ ಶ್ರೀಮತಿ ಮೀರಾ ಸಕ್ಷೇನಾ ಇವರನ್ನು ಆಯೋಗದ ಪ್ರಭಾರ ಅಧ್ಯಕ್ಷರನ್ನಾಗಿ ನೇಮಿಸಲಾಗಿದೆ. ಸದರಿ ನೇಮಕಾತಿ ನಿಯಮಾನುಸಾರ ಮಾಡಲಾಗಿದೆ.<br>ಶ್ರೀಮತಿ ಮೀರ ಸಿ. ಸಕ್ಷೇನಾ ಇವರ ಸದಸ್ಯತ್ವದ ಅಧಿಕಾರವಧಿಯು ನವೆಂಬರ್ 2017ಕ್ಕೆ ಪೂರ್ಣಗೊಂಡಿತ್ತು. ಮಾನವ ಹಕ್ಕುಗಳ ಸಂರಕ್ಷಣಾ ಅಧಿನಿಯಮ, 1993ರ ಕಲಂ 22(1)ರನ್ವಯ ಆಯ್ಕೆ ಸಮಿತಿಯ ಮೂಲಕ ಜಸ್ಟೀಸ್ ಧೀರೇಂದ್ರ ಹೀರಾಲಾಲ್ ವಘೇಲಾ ಇವರನ್ನು ಕರ್ನಾಟಕ ರಜ್ಯ ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷರನ್ನಾಗಿ ನೇಮಕ ಮಾಡಲಾಗಿದೆ (ಸರ್ಕಾರದ ಅಧಿಸೂಚನೆ ಸಂಖ್ಯೆ: ಲಾ 42 ಹೆಚ್‌ಆರ್‌ಸಿ 2017, ದಿನಾಂಕ: 22.02.2018). ಮಾನ್ಯ ಅಧ್ಯಕ್ಷರು ದಿನಾಂಕ: 12.03.2018ರಂದು ಆಯೋಗದಲ್ಲಿ ಕಾರ್ಯವರದಿ ಮಾಡಿಕೊಂಡಿರುತ್ತಾರೆ<br>ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷರ ನೇಮಕಾತಿಯಾಗಿರುವುದರಿಂದ ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |
| 03. | 6152<br>ಚು.ಗು.ಪ್ರ. 169<br>ಶ್ರೀ ಎನ್.ಎಸ್. ಬೋಸ್‌ರಾಜು<br>ವಿಪನದಿ: 08.02.2017 | ಮಾನ್ವಿ ತಾಲ್ಲೂಕು ಮ್ಯಾಜಿಸ್ಟ್ರೇಟ್ ಕೋರ್ಟ್ ನಿರ್ಮಾಣ ಮಾಡಲು ಸರ್ಕಾರ ತೆಗೆದುಕೊಂಡ ಕ್ರಮದ ಬಗ್ಗೆ. | ಸದರಿ ನ್ಯಾಯಾಲಯದ ಸಂಕೀರ್ಣದ ನಿರ್ಮಾಣಕ್ಕಾಗಿ ರೂ. 595.00 ಲಕ್ಷಗಳ ಹೆಚ್ಚುವರಿ ಅನುದಾನವನ್ನು ಮಂಜೂರಿಸಿ ಬಿಡುಗಡೆಗೊಳಿಸುವಂತೆ ರಿಜಿಸ್ಟ್ರಾರ್ ಜನರಲ್, ಕರ್ನಾಟಕ ಉಚ್ಚ ನ್ಯಾಯಾಲಯ, | ದಿನಾಂಕ: 06.09.2018ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ರಾಯಚೂರು ಜಿಲ್ಲೆಯ ಮಾನ್ವಿ ಪಟ್ಟಣದಲ್ಲಿ ನ್ಯಾಯಾಲಯ ಸಂಕೀರ್ಣದಲ್ಲಿ ನೆಲಮಹಡಿ ಮತ್ತು ಮೊದಲನೆ ಮಹಡಿ (2ನೇ ಮಹಡಿ ನಿರ್ಮಾಣ ಮಾಡಲು ಅನುವಾಗುವಂತೆ) ನಿರ್ಮಾಣಕ್ಕೆ ದಿ: 01.03.2018ರಂದು ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. ಈ ಕಟ್ಟಡದ |

| | | | | |
|---|---|---|---|---|
| | | | ಬೆಂಗಳೂರುರವರು ದಿನಾಂಕ: 10.09.2015ರಂದು ಲೋಕೋಪಯೋಗಿ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಿದ್ದು, ಸದರಿ ಪ್ರಸ್ತಾವನೆಯು ಪ್ರಸ್ತುತ ಲೋಕೋಪಯೋಗಿ ಇಲಾಖೆಯ ಪರಿಶೀಲನೆಯಲ್ಲಿರುತ್ತದೆ. | ನೆಲಮಹಡಿ ಮತ್ತು ಮೊದಲನೆ ಮಹಡಿ ಕಾಮಗಾರಿಗೆ 2017–18ನೇ ಸಾಲಿನ ಆಯವ್ಯಯದ ಅಪೆಂಡಿಕ್ಸ್–ಇ ಅಂದಾಜಿನಲ್ಲಿ ರೂ. 845.00 ಲಕ್ಷಗಳ ಅನುದಾನವನ್ನು ಒದಗಿಸಲಾಗಿದೆ. ಈ ಮೊತ್ತದಲ್ಲಿ ರೂ. 338.00 ಲಕ್ಷಗಳನ್ನು ಪ್ರಸಕ್ತ ಸಾಲಿಗೆ ಮೀಸಲಿರಿಸಲಾಗಿದೆ.<br>ನ್ಯಾಯಾಲಯ ಸಂಕೀರ್ಣ ನಿರ್ಮಾಣಕ್ಕೆ ಅನುಮೋದಿತ ನಕ್ಷೆಯನುಸಾರ ಅಂದಾಜು ಪಟ್ಟಿಯನ್ನು ಸಲ್ಲಿಸುವಂತೆ ಲೋಕೋಪಯೋಗಿ ಪ್ರಾಧಿಕಾರವನ್ನು ಕೋರಲಾಗಿದ್ದು, ಅಂದಾಜು ಪಟ್ಟಿ ಸ್ವೀಕೃತಗೊಂಡ ನಂತರ ಕಟ್ಟಡ ಕಾಮಗಾರಿಗೆ ಕ್ರಮ ಕೈಗೊಳ್ಳಲಾಗುವುದೆಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |
| 04. | 6153 ಚು.ಗು.ಪ್ರ : 3701 ಶ್ರೀ ಎನ್.ಎಸ್. ಬೋಸ್‌ರಾಜು ವಿ.ಪ.ನ.ದಿ:15.11.2017 | ರಾಯಚೂರು ನಗರದಲ್ಲಿರುವ ಜಿಲ್ಲಾ ನ್ಯಾಯಾಲಯ ಸಂಕೀರ್ಣ ನಿರ್ಮಾಣ ಮಾಡಲು ಕೈಗೊಳ್ಳುವ ಬಗ್ಗೆ. | ಈ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ ಎಂದು ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಸಣ್ಣ ನೀರಾವರಿ ಸಚಿವರು ತಿಳಿಸಿದರು. | ದಿನಾಂಕ: 06.09.2018ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ರಾಯಚೂರಿನಲ್ಲಿ ಜಿಲ್ಲಾ ನ್ಯಾಯಾಲಯ ಸಂಕೀರ್ಣ, ನ್ಯಾಯಾಂಗ ಅಧಿಕಾರಿಗಳ ವಸತಿ ಗೃಹ, ವಕೀಲರ ಸಂಘದ ಕಟ್ಟಡಗಳನ್ನು ನಿರ್ಮಾಣ ಮಾಡಲು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ರಾಯಚೂರು ನಗರದಲ್ಲಿ 10 ಎಕರೆ 32 ಗುಂಟೆ ಜಾಗವನ್ನು ರಾಯಚೂರಿನ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ಹೆಸರಿಗೆ ದಿನಾಂಕ: 22.05.2017ರಂದು ಹಸ್ತಾಂತರಿಸಲಾಗಿದೆ.<br>ಸದರಿ ಜಾಗದಲ್ಲಿ ಜಿಲ್ಲಾ ನ್ಯಾಯಾಲಯ ಸಂಕೀರ್ಣ, ನ್ಯಾಯಾಂಗ ಅಧಿಕಾರಿಗಳ ವಸತಿ ಗೃಹ, ವಕೀಲರ ಸಂಘದ ಕಟ್ಟಡ ಇತ್ಯಾದಿ ನಿರ್ಮಾಣ ಮಾಡಲು ಹ್ಯಾಂಡ್‌ಸೆಟ್ ಅನ್ನು ಲೋಕೋಪಯೋಗಿ ಪ್ರಾಧಿಕಾರದಿಂದ ಪಡೆಯಲು ಕ್ರಮ ಕೈಗೊಳ್ಳಲಾಗಿದೆ. |

| | | | | |
|---|---|---|---|---|
| | | | | ಮುಂದುವರೆದು, ಇಂಡಿಯನ್ ಮೆಡಿಕಲ್ ಅಸೋಸಿಯೇಷನ್, ರಾಯಚೂರು ಇವರು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ: 34391/2017 (ಜೆಎಂ–ಆರ್‌ಎಸ್)ರ ಅರ್ಜಿಯಲ್ಲಿ ರಾಯಚೂರು ನಗರದಲ್ಲಿ ನ್ಯಾಯಾಂಗ ಇಲಾಖೆಗೆ ಹಸ್ತಾಂತರಿಸಲಾದ 10 ಎಕರೆ 32 ಗುಂಟೆ ಜಾಗ ಆರೋಗ್ಯ ಇಲಾಖೆಗೆ ಸಂಬಂಧಿಸಿದ ಎಂಬುದಾಗಿ ದಾವೆ ಹೂಡಿದ್ದು, ಮಾನ್ಯ ನ್ಯಾಯಾಲಯವು ದಿನಾಂಕ: 04.04.2018ರಂದು ಪ್ರಕರಣವನ್ನು ವಿಚಾರಣೆ ನಡೆಸಿ ಮುಂದೂಡಿರುತ್ತದೆಯೆಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |
| 05. | 6154<br>ಚು.ಗು.ಪ್ರ : 3694<br>ಶ್ರೀ ರಾಮಚಂದ್ರಗೌಡ<br>ವಿ.ಪ.ನ.ದಿ:15.11.2017 | ಕರ್ನಾಟಕ ರಾಜ್ಯ ಕಾನೂನು ಸೇವಾ ಪ್ರಾಧಿಕಾರವು ಹಿರಿಯ ನಾಗರೀಕರಿಗೆ ವಿಶೇಷ ನ್ಯಾಯಾಧೀಕರಣ ರೂಪಿಸಬೇಕೆಂದು ಅಭಿಪ್ರಾಯ ವ್ಯಕ್ತ ಪಡಿಸಿರುವ ಬಗ್ಗೆ. | ಕರ್ನಾಟಕ ರಾಜ್ಯ ಕಾನೂನು ಸೇವಾ ಪ್ರಾಧಿಕಾರವು NIMHANS, ಬೆಂಗಳೂರು ಇವರ ಸಹಯೋಗದಲ್ಲಿ ರೂಪಿಸಿರುವ Implementation of 'National Legal Services Authority (Legal Services to Senior Citizens) Scheme, 2016 in Karnataka ಎಂಬ ಪ್ರಸ್ತಾವನೆಯು ಸರ್ಕಾರಕ್ಕೆ ಸ್ವೀಕೃತವಾಗಿದ್ದು, ಪರಿಶೀಲನೆಯಲ್ಲಿದೆ ಎಂದು ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಸಣ್ಣ ನೀರಾವರಿ ಸಚಿವರು ತಿಳಿಸಿದರು. | ದಿನಾಂಕ: 06.09.2018ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರವು ಹಿರಿಯ ನಾಗರೀಕರ ಸರ್ಕಾರದ ಯೋಜನೆಗಳ ಸೌಕರ್ಯಗಳನ್ನು ಹಿರಿಯ ನಾಗರೀಕರಿಗೆ ತಲುಪಿಸುವ ಬಗ್ಗೆ ನಿಮ್ಹಾನ್ಸ್, ಬೆಂಗಳೂರು ಮತ್ತು ಕೋಲಾರದಲ್ಲಿ ಹಮ್ಮಿಕೊಳ್ಳಲಾಗಿದ್ದ ಶಿಬಿರಗಳ ವರದಿಯನ್ನು ಲಗತ್ತಿಸಿದೆ.<br><br>Implementation of "national Legal Services Authority (Legal Services to Senior Citizens) Scheme, 2016 in Karnataka ವಿಷಯಕ್ಕೆ ಸಂಬಂಧಿಸಿದಂತೆ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರವು ಕ್ರಮ ಕೈಗೊಳ್ಳುತ್ತಿರುವುದರಿಂದ ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |

| | | | | |
|---|---|---|---|---|
| 06. | 6155<br>ಚು.ರ.ಪ್ರ. 1910<br>ಶ್ರೀ ಮರಿತಿಬ್ಬೇಗೌಡ<br>ವಿಪನದಿ:19.03.2015 | ಮಂಡ್ಯ ಜಿಲ್ಲೆ, ಮಳವಳ್ಳಿ ತಾಲ್ಲೂಕು ಕೇಂದ್ರದಲ್ಲಿ ಹೊಸದಾಗಿ ಕೋರ್ಟ್ ಸಂಕೀರ್ಣ ನಿರ್ಮಿಸುವ ಬಗ್ಗೆ ಹಾಗೂ ನೌಕರರ ಕೊರತೆಯನ್ನು ನೀಗಿಸುವ ಬಗ್ಗೆ. | ಮಳವಳ್ಳಿಯಲ್ಲಿ ಹೊಸ ನ್ಯಾಯಾಲಯ ಕಟ್ಟಡವನ್ನು ನಿರ್ಮಿಸಲು ಈಗಾಗಲೇ ನಿರ್ಧರಿಸಿದ್ದು, ಕಟ್ಟಡದ ನೀಲಿನಕ್ಷೆ ತಯಾರಿಸಿ, ಇದಕ್ಕೆ ಬೇಕಾದ ಅಂದಾಜು ತಯಾರಿಸಲಾಗುತ್ತಿದೆ ಹಾಗೂ ಖಾಲಿ ಹುದ್ದೆಗಳನ್ನು ತುಂಬಲು ಶೀಘ್ರದಲ್ಲಿಯೇ ಕ್ರಮವಹಿಸಲಾಗುವುದು ಎಂದು ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು, ಪಶು ಸಂಗೋಪನಾ ಮತ್ತು ಮುಜರಾಯಿ ಸಚಿವರು ತಿಳಿಸಿದರು. | ದಿನಾಂಕ: 06.09.2018ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ಮಳವಳ್ಳಿ ನಗರದಲ್ಲಿ ನ್ಯಾಯಾಲಯ ಕಟ್ಟಡ ನಿರ್ಮಾಣ ಮಾಡಲು ಸರ್ವೆ ನಂ. ಪಿ2 ರಲ್ಲಿನ 2.00 ಎಕರೆ ಜಾಗವನ್ನು ನ್ಯಾಯಾಂಗ ಇಲಾಖೆಯ ಹೆಸರಿನಲ್ಲಿ ವಶಕ್ಕೆ ಪಡೆಯುವಂತೆ ಮಂಡ್ಯ ಜಿಲ್ಲೆಯ ಮಾನ್ಯ ಆಡಳಿತಾತ್ಮಕ ನ್ಯಾಯಮೂರ್ತಿಯವರು ದಿ: 11.02.2014ರಂದು ಅನುಮತಿ ನೀಡಿರುತ್ತಾರೆ. ಸದರಿ ಜಾಗದ ಕುರಿತಾಗಿ ಮಳವಳ್ಳಿ ನಗರ ಕುಂಬಾರ ಸಂಘವು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ: 31577/2016 ದಾಖಲಿಸಿದ್ದು, ಮಾನ್ಯ ನ್ಯಾಯಾಲಯವು ದಿನಾಂಕ: 12.03.2018ರಂದು ಪ್ರಕರಣವನ್ನು ವಿಚಾರಣೆ ನಡೆಸಿ ಮುಂದೂಡಿರುತ್ತದೆಯೆಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |

# ವೈದ್ಯಕೀಯ ಶಿಕ್ಷಣ ವರದಿ

| ಕ್ರಮ ಸಂಖ್ಯೆ | ಆಶ್ವಾಸನೆ ಸಂಖ್ಯೆ ಆಧಾರ ಮತ್ತು ದಿನಾಂಕ | ವಿಷಯ | ಆಶ್ವಾಸನೆ | ತಗೆದುಕೊಂಡ ಕ್ರಮ |
|---|---|---|---|---|
| 1 | 3782<br>ಚು.ರ.ಪ್ರ. 52<br>ಶ್ರೀ ಎಂ. ಶ್ರೀನಿವಾಸ<br>ವಿಪನದಿ: 07.03.2011 | ಕಳೆದ 5 ವರ್ಷಗಳಲ್ಲಿ ಸ್ಥಾಪನೆಯಾಗಿರುವ ವೈದ್ಯಕೀಯ ಕಾಲೇಜ್‌ಗಳಲ್ಲಿ ವಿವಿಧ ಹುದ್ದೆಗಳ ನೇಮಕಾತಿಯಲ್ಲಿ ಅವ್ಯವಹಾರವಾಗಿದ್ದು ಭಾಗಿಯಾದ ವ್ಯಕ್ತಿ ಮತ್ತು ಅಧಿಕಾರಿಗಳ ವಿರುದ್ಧ ಕೈಗೊಂಡ ಕ್ರಮದ ಬಗ್ಗೆ. | ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ಶಿಸ್ತಿನ ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ತಿಳಿಸಿದರು. | ದಿನಾಂಕ: 17.9.2018ರಲ್ಲಿ ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು.<br><br>**<u>ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ</u>**<br><br>ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಗಳ ನೇಮಕಾತಿಯಲ್ಲಿ ಅವ್ಯವಹಾರ ನಡೆದಿದೆ ಎಂಬ ಬಗ್ಗೆ ಹಾಗೂ ಉಪಕರಣಗಳ ಖರೀದಿಯಲ್ಲಿ ನಡೆದಿದೆ ಎನ್ನಲಾದ ಅಕ್ರಮಗಳ ಬಗ್ಗೆ ತನಿಖೆ ನಡೆಸುವಂತೆ ಪ್ರಗತಿಪರ ಚಿಂತಕರು ಮಾನ್ಯ ಲೋಕಾಯುಕ್ತರಿಗೆ ದೂರು ಸಲ್ಲಿಸಿದ್ದು, ಮಾನ್ಯ ಲೋಕಾಯುಕ್ತರು ತನಿಖೆ ನಡೆಸಿ ದಿನಾಂಕ: 8.2.2018ರಂದು ತನಿಖಾ ವರದಿಯನ್ನು ಸಲ್ಲಿಸಿರುತ್ತಾರೆ. ಸದರಿ ವರದಿಯಲ್ಲಿ ಕೆಳಕಂಡ ವೈದ್ಯರುಗಳು ಸುಳ್ಳು/ನಕಲಿ ಬೋಧನಾ ಅನುಭವ ಪ್ರಮಾಣ ಪತ್ರಗಳನ್ನು ಸಲ್ಲಿಸಿರುವ ಬಗ್ಗೆ ವರದಿ ಮಾಡಿರುತ್ತಾರೆ.<br><br>1) ಡಾ: ರಾಮಲಿಂಗೇಗೌಡ, ಸಹಾಯಕ ಪ್ರಾಧ್ಯಾಪಕರು.<br>2) ಡಾ: ನಾರಾಯಣ್, ಸಹ ಪ್ರಾಧ್ಯಾಪಕರು.<br>3) ಡಾ: ಕಾವ್ಯಶ್ರೀ, ಸಹ ಪ್ರಾಧ್ಯಾಪಕರು.<br>4) ಡಾ: ಆನಂದ್, ಪ್ರಾಧ್ಯಾಪಕರು.<br>5) ಡಾ: ಕೃಷ್ಣ ಸಹ ಪ್ರಾಧ್ಯಾಪಕರು<br>6) ಡಾ: ವಿದ್ಯಾರಾಣಿ, ಸಹ ಪ್ರಾಧ್ಯಾಪಕರ<br>7) ಡಾ: ಸವಿತ, ಸಹ ಪ್ರಾಧ್ಯಾಪಕರು<br><br>ಈ ಎಲ್ಲಾ ನೆಮಕಾತಿಗಳಗೆ ಭಾರತೀಯ ವೈದ್ಯಕೀಯ ಪರಿಷತ್ತಿನ ಅನುಮೋದನೆಯನ್ನು ಪಡೆದಿರುವುದರಿಂದ ಹಾಗೂ |

| | | | | |
|---|---|---|---|---|
| | | | | ಸಂಸ್ಥೆಯ ಆಡಳಿತ ಮಂಡಳಿಯಲ್ಲಿಯೂ ಅನುಮೋದನೆ ಪಡೆದಿರುವ ಹಿನ್ನಲೆಯಲ್ಲಿ ಈ ಬಗ್ಗೆ ಸರ್ಕಾರದ ಹಂತದಲ್ಲಿಯೇ ಸೂಕ್ತ ಕ್ರಮಗಳನ್ನು ಶಿಫಾರಸ್ಸು ಮಾಡಿದ್ದರು.<br><br>ಮಾನ್ಯ ಲೋಕಾಯುಕ್ತರ ತನಿಖಾ ವರದಿಯಲ್ಲಿನ ಶಿಫಾರಸ್ಸುಗಳ ಮೇರೆಗೆ ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ಬೋಧಕ ಹುದ್ದೆಗಳ ನೇಮಕಾತಿಯಲ್ಲಿ ನಡೆದಿವೆ ಎನ್ನಲಾದ ಅಕ್ರಮಗಳು ಹಾಗೂ ಪೀಠೋಪಕರಣ/ಉಪಕರಣಗಳ ಖರೀದಿಯಲ್ಲಿ ನಡೆದಿವೆ ಎನ್ನಲಾದ ಅವ್ಯವಹಾರಗಳ ಬಗ್ಗೆ ಬೋಧಕ ಸಿಬ್ಬಂದಿಗಳು ಎಂ.ಸಿ.ಐ. ಗೈಡ್‌ಲೈನ್ಸ್ ಪ್ರಕಾರ ಕೆಲಸ ನಿರ್ವಹಿಸುತ್ತಿರುವರೇ/ನಿರ್ವಹಿಸಲಾಗುತ್ತಿದೆಯೇ ಎಂಬುದರ ಬಗ್ಗೆ ಆಡಳಿತಾತ್ಮಕ ಲೋಪದೋಷಗಳಿಗೆ ಸಂಬಂಧಿಸಿದಂತೆ ಯಾವುದಾದರೂ ದೂರುಗಳಿದ್ದಲ್ಲಿ, ಅವುಗಳನ್ನು ವಿಚಾರಣೆಗೆ ತೆಗೆದುಕೊಳ್ಳುವ ಬಗ್ಗೆ ಹಾಗೂ ಸಂಸ್ಥೆಯ ಅಭಿವೃದ್ಧಿಗೆ ಸಂಬಂಧಿಸಿದಂತೆ ವಿಚಾರಣೆಯ ಅವಧಿಯಲ್ಲಿ ಕಂಡು ಬರುವ/ಗಮನಿಸಲಾದ ನ್ಯೂನ್ಯತೆಗಳನ್ನು ಸರಿಪಡಿಸಲು ಸಲಹೆಗಳನ್ನು ನೀಡುವ ಬಗ್ಗೆ ತನಿಖೆ/ವಿಚಾರಣೆ ನಡೆಸಲು ದಿನಾಂಕ: 8.3.2011ರ ಸರ್ಕಾರದ ಆದೇಶ ಹಾಗೂ ತಿದ್ದುಪಡಿ ಆದೇಶ ದಿನಾಂಕ: 1.4.2011ರಲ್ಲಿ ನಿವೃತ್ತ ಜಿಲ್ಲಾ ನ್ಯಾಯಾದೀಶರಾದ ಶ್ರೀ ಎನ್. ನಾರಾಯಣ ಇವರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಿಸಲಾಗಿತ್ತು. ಸದರಿ ವಿಚಾರಣೆ ವರದಿ ದಿನಾಂಕ 11.4.2011 ರಂದು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ<br><br>ನಿವೃತ್ತ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಶ್ರೀ ಎನ್.ನಾರಾಯಣ ಇವರು ಸಲ್ಲಿಸಿರುವ ವರದಿ ಮತ್ತು ಲೋಕಾಯುಕ್ತರು ಸಲ್ಲಿಸಿರುವ ವರದಿಯಲ್ಲಿನ ಅಂಶಗಳು ವ್ಯತಿರಿಕ್ತವಾಗಿದೆ ಎಂದು ದಿ: 24.5.2012 ರಂದು ನಡೆದ ಸಂಸ್ಥೆಯ ಆಡಳಿತ ಮಂಡಳಿಯ ಸಭೆಯಲ್ಲಿ ಚರ್ಚಿಸಿ ಮತ್ತೊಮ್ಮೆ ತನಿಖೆ ನಡೆಸಲು ತೀರ್ಮಾನಿಸಲಾಗಿರುತ್ತದೆ. |

| | | | | |
|---|---|---|---|---|
| | | | | ಮಾನ್ಯ ಲೋಕಾಯುಕ್ತರು ಹಾಗೂ ನಿವೃತ್ತ ನ್ಯಾಯಾಧೀಶರಾದ ಶ್ರೀ ಎಸ್. ನಾರಾಯಣ ಇವರು ಸರ್ಕಾರಕ್ಕೆ ಸಲ್ಲಿಸಿರುವ ವರದಿಗಳಲ್ಲಿನ ಕೆಲವೊಂದು ವಿಚಾರಗಳು ವ್ಯತಿರಿಕ್ತವಾಗಿರುವುದರಿಂದ ಈ ವಿಷಯದಲ್ಲಿ ಅಂತಿಮ ತೀರ್ಮಾನ ತೆಗೆದುಕೊಳ್ಳುವ ಸಲುವಾಗಿ ಈ ಎರಡೂ ವರದಿಗಳ ಪುನರ್ ಪರಿಶೀಲನೆಯೊಂದಿಗೆ ತನಿಖೆ ನಡೆಸಲು ಹಾಗೂ ಈ ಸಂಬಂಧಿತವಾಗಿ ಸಮಗ್ರ ತನಿಖಾ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲು ದಿನಾಂಕ: 19.2.2013ರ ಸರ್ಕಾರಿ ಆದೇಶದಲ್ಲಿ ಉಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಾಧೀಶರಾದ ಶ್ರೀ ಆರ್.ಗುರುರಾಜನ್ ಇವರ ನೇತೃತ್ವದಲ್ಲಿ ಏಕಸದಸ್ಯ ಸಮಿತಿಯನ್ನು ರಚಿಸಲಾಗಿದೆ. ಸದರಿಯವರು ದಿನಾಂಕ: 24.5.2013ರಂದು ಸರ್ಕಾರಕ್ಕೆ ಅಂತಿಮ ವರದಿ ಸಲ್ಲಿಸಿದ್ದು, ಸದರಿ ವರದಿಯಲ್ಲಿ ಕೆಳಕಂಡಂತೆ ಶಿಫಾರಸ್ಸುಗಳನ್ನು ಮಾಡಿರುತ್ತಾರೆ.<br><br>To take an administrative decision with regard to continuation or otherwise of any proceedings in the light of resignation submitted by dr. Anand and Dr. K. Narayan; (2) Dr. Kavyashree, Dr. Vidyarani, Dr. K. Krishna and Dr. H.C. Savitha are found guilty of producing false certificates in obtaining employment from the Institute and that therefore, they deserve to be dealt with in accordance with law in terms of the findings in the earlier paragraphs against these officials departmentally or otherwise and to approach the Medical council of India with these reports seeking for such action as deemed fit including |

| | | | | |
|---|---|---|---|---|
| | | | | withdrawal of the approval in accordance with law against these officials for their obtaining employment in the institute of producing false experience certificates and not having experience certificates.<br>ನ್ಯಾಯಮೂರ್ತಿ ಶ್ರೀ. ಆರ್. ಗುರುರಾಜನ್ ರವರು ಸಲ್ಲಿಸಿರುವ ವರದಿಯನ್ನು ದಿ: 31.7.2013ರಂದು ನಡೆದ ಆಡಳಿತ ಪರಿಷತ್ ಸಭೆಯಲ್ಲಿ ಅಂಗೀಕರಿಸಿದ್ದು, ಅಗತ್ಯ ಕ್ರಮ ಕೈಗೊಳ್ಳಲು ಸೂಚಿಸಲಾಗಿರುತ್ತದೆ.<br>ಅದರಂತೆ, ಸರ್ಕಾರದ ಪತ್ರ ಸಂ: ಆಕುಕ 65 ಕೆವಿಎಂ 2007 (1), (2), (3), ದಿ: 12.6.2014ರಲ್ಲಿ ನೀಡಿರುವ ಆದೇಶಗಳಂತೆ ಡಾ: ಹೆಚ್.ಸಿ. ಸವಿತ, ಸಹ ಪ್ರಾಧ್ಯಾಪಕರು, ಡಾ: ಕಾವ್ಯಶ್ರೀ ಜ. ಸಹ ಪ್ರಾಧ್ಯಾಪಕರು, ಪ್ರಸೂತಿ ಮತ್ತು ಸ್ತ್ರೀರೋಗ ವಿಭಾಗ ಮತ್ತು ಡಾ: ಕೃಷ್ಣ.ಕೆ. ಅರಿವಳಿಕೆ ಶಾಸ್ತ್ರ ವಿಭಾಗ, ಡಾ: ಆನಂದ್, ಪ್ರಾಧ್ಯಾಪಕರು, ಅರಿವಳಿಕಾ ಶಾಸ್ತ್ರ ವಿಭಾಗಾ, ಡಾ: ಕೆ. ನಾರಾಯಣ್, ಸಹ ಪ್ರಾಧ್ಯಾಪಕರು, ಔಷಧ ಶಾಸ್ತ್ರ ವಿಭಾಗ ಹಾಗೂ ಡಾ: ವಿದ್ಯಾರಾಣಿ, ಸಹ ಪ್ರಾಧ್ಯಾಪಕರು, ರೇಡಿಯೋಲಜಿ ವಿಭಾಗ ಕ್ರಮ ಕೈಗೊಳ್ಳುವ ಬಗ್ಗೆ ದಿ: 22.8.2014ರಂದು ನಡೆದ ಆಡಳಿತ ಪರಿಷತ್ ಸಭೆಯಲ್ಲಿ ಮಂಡಿಸಲಾಗಿರುತ್ತದೆ. ಈ ಸಭೆಯಲ್ಲಿ ನ್ಯಾಯಮೂರ್ತಿ ಶ್ರೀ ಆರ್. ಗುರುರಾಜನ್ ಇವರ ವರದಿಯಲ್ಲಿನ ಶಿಫಾರಸ್ಸಿನಂತೆ ಕ್ರಮವಹಿಸುವ ಬಗ್ಗೆ ವೈದ್ಯರುಗಳಿಂದ ವಿವರಣೆ ಪಡೆಯಲು ಸೂಚಿಸಲಾಗಿರುತ್ತದೆ.<br>ದಿನಾಂಕ 27.8.14 ರಂದು ಈ ಮೇಲ್ಕಂಡ ವೈದ್ಯರುಗಳಿಗೆ ಕಾರಣ ಕೇಳುವ ಷೋಕಾಸ್ ನೋಟೀಸ್ ನಿಡಲಾಗಿದ್ದು ಸದರಿಯವರಿಂದ ವಿವರಣೆ ಪಡೆಯಲಾಗಿರುತ್ತದೆ.<br>ದಿನಾಂಕ 27.10.2014 ರಂದು ನಡೆದ ಆಡಳಿತ ಪರಿಷತ್ ಸಭೆಯಲ್ಲಿ ವೈದ್ಯರುಗಳಿಂದ ಷೋಕಾಸ್ ನೋಟೀಸ್ ಗೆ ಪಡೆದ ವಿವರಣೆಯನ್ನು ಮಂಡಿಸಲಾಗಿರುತ್ತದೆ. ಈ |

| | | | | |
|---|---|---|---|---|
| | | | | ಸಭೆಯಲ್ಲಿ ವೈದ್ಯರುಗಳು ನೀಡಿರುವ ವಿವರಣೆಯನ್ನು ಕೂಲಂಕುಷವಾಗಿ ಪರಿಶೀಲಿಸಲಾಗಿ ವೈದ್ಯರು ಹಿಂದೆ ನೀಡಿರುವ ಸೇವಾ ಪ್ರಮಾಣ ಪತ್ರಗಳನ್ನು ಲಗತ್ತಿಸಿ ತಾವು ನೀಡಿರುವ ಬೋಧನಾನುಭವ ಭೋದನಾ ಪತ್ರಗಳು ಸರಿ ಇದೆ ಎಂದು ಸಮರ್ಥಿಸಿಕೊಂಡಿರುತ್ತಾರೆ. ಹಾಗೂ ಸೇವೆಯನ್ನು ಸಕ್ರಮಗೊಳಿಸಲು ಕೋರಿಕೊಂಡಿರುತ್ತಾರೆ. ವೈದ್ಯರು ನೀಡಿರುವ ವಿವರಣೆ ಸಮರ್ಪಕವಾಗಿಲ್ಲದ ಕಾರಣ ಡಾ: ಹೆಚ್.ಸಿ.ಸವಿತ, ಸಹ ಪ್ರಾದ್ಯಾಪಕರು, ಡಾ; ಕಾವ್ಯ ಶ್ರೀ ಜಿ, ಸಹ ಪ್ರಾದ್ಯಾಪಕರು, ಪ್ರಸೂತಿ ಮತ್ತು ಸ್ತ್ರೀ ರೋಗ ವಿಭಾಗ ಮತ್ತು ಡಾ ಕೃಷ್ಣ ಕೆ, ಅರಿವಳಿಕೆ ಶಾಸ್ತ್ರ ವಿಭಾಗ ಇವರುಗಳನ್ನು ಸೇವೆಯಿಂದ ವಜಾ ಗೊಳಿಸಿ ಹೆಚ್ಚುವರಿಯಾಗಿ ಪಾವತಿಸಿರುವ ವೇತನವನ್ನು ಹಿಂಪಡೆಯಲು ಹಾಗೂ ಈಗಾಗಲೇ ನಿವೃತ್ತಿಗೊಂಡಿರುವ ಹಾಗೂ ರಾಜೀನಾಮೆ ಹೊಂದಿರುವ ಡಾ ಆನಂದ್, ಅರವಳಿಕೆ ಶಾಸ್ತ್ರ ವಿಭಾಗ, ಡಾ ಕೆ. ನಾರಾಯನ್, ಔಷದ ಶಾಸ್ತ್ರ ವಿಭಾಗ ಹಾಗೂ ಡಾ ವಿದ್ಯಾರಾಣಿ ಇವರಿಗೆ ಹೆಚ್ಚುವರಿಯಾಗಿ ಪಾವತಿಸಿರುವ ವೇತನವನ್ನು ಹಿಂಪಡೆಯಲು ಮತ್ತು ಬಾಕಿ ಇರುವ ಯಾವುದೇ ಆರ್ಥಿಕ ಸೌಲಭ್ಯ ಮತ್ತು ಸಂಸ್ಥೆಯಲ್ಲಿ ಕರ್ತವ್ಯ ನಿರ್ವಹಿಸಿರುವ ಬಗ್ಗೆ ಅನುಭವ ಪ್ರಮಾಣ ಪತ್ರ ನೀಡಬಾರದೆಂದು ಸಭೆಯಲ್ಲಿ ಆದೇಶಿಸಲಾಗಿರುತ್ತದೆ.<br>ಸದರಿ ಬೋಧಕರಿಗೆ ಪ್ರಮಾಣ ಪತ್ರವನ್ನು ನೀಡಿರುವ ಆಯಾ ಕಾಲೇಜಿನ ಪ್ರಾಂಶುಪಾಲರು ಲೋಕಾಯುಕ್ತರ ತನಿಖಾ ಸಮಯದಲ್ಲಿ ಭೋಧನಾನುಭವದ ಬಗ್ಗೆ ವಿವರಣೆ ನೀಡಿ ಪ್ರಮಾಣಪತ್ರಗಳಲ್ಲಿರುವ ಅಂಶಗಳು ನ್ಯೂನ್ಯತೆಯಿಂದ ಕೂಡಿರುವುದಾಗಿ ಒಪ್ಪಿಕೊಂಡಿರುತ್ತಾರೆ. ಈ ಬಗ್ಗೆ ಶ್ರೀ ಗುರುರಾಜನ್‌ರವರ ವರದಿಯಲ್ಲಿ ಸ್ಪಷ್ಟವಾಗಿ ತಿಳಿಸಲಾಗಿದೆ. ಪ್ರಮಾಣ ಪತ್ರಗಳು ನಕಲಿ ಅಲ್ಲ ಎಂದು ವೈದ್ಯರು ತಿಳಿಸಿದ್ದರೂ ಅದರಲ್ಲಿರುವ ಅಂಶಗಳು ಸತ್ಯಾಂಶಕ್ಕೆ ದೂರವಾಗಿದ್ದು ಇದರ ಬಗ್ಗೆ ವೈದ್ಯರಿಗೆ ಸಂಪೂರ್ಣ ಅರಿವಿರುತ್ತದೆ. ಅಲ್ಲಿನ ಪ್ರಾಂಶುಪಾಲರ ಜೊತೆ ಶಾಮೀಲಾಗಿ ಬೋದನಾನುಭವದ ಸುಳ್ಳು ಪ್ರಮಾಣ |

| | | | | |
|---|---|---|---|---|
| | | | | ಪತ್ರಗಳನ್ನು ಸಲ್ಲಿಸಿರುತ್ತಾರೆ. ಮೇಲ್ಕಂಡ ವೈದ್ಯರುಗಳಿಗೆ ನೀಡಲಾಗಿರುವ ನೇಮಕಾತಿ ಆದೇಶದಲ್ಲಿನ ಷರತ್ತು 8 ರಲ್ಲಿ ಈ ಕೆಳಕಂಡಂತಿರುತ್ತದೆ.<br><br>The appointment is provisional and is subjected to the certificates including caste certificates or willfully suppressed any material information, if on verification the information/certificate found to be false, the services will be terminated without assigning any further reason without prejudice to such further action as may be taken under the provision of IPC for production of false certificate/information.<br><br>ಅಧಿಸೂಚನೆ ಸಂ.ಮಿಮ್ಸ್/ಸಿಬ್ಬಂದಿ(1)ದೂರು/24/2013/14 ಮಂಡ್ಯ ದಿ: 18.11.2014ರ ಮೂಲಕ ದಿ: 27.10.2014 ರಂದು ನಡೆದ ಆಡಳಿತ ಪರಿಷತ್ ಸಭೆಯ ನಿರ್ಣಯದಂತೆ, ಮಿಮ್ಸ್ ಆಡಳಿತ ಪರಿಷತ್ ಸಮಿತಿ ಉಪಾಧ್ಯಕ್ಷರು, ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಮಂಡ್ಯ ಹಾಗೂ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ(ವೈಶಿ) ಇವರಿಂದ ಡಾ ಹೆಚ್.ಸಿ ಸವಿತ, ಸಹ ಪ್ರಾದ್ಯಾಪಕರು, ಡಾ ಕಾವ್ಯ ಶ್ರೀ ಜಿ , ಸಹ ಪ್ರಾದ್ಯಾಪಕರು, ಪ್ರಸೂತಿ ಮತ್ತು ಸ್ತ್ರೀ ರೋಗ ವಿಭಾಗ ಮತ್ತು ಡಾ ಕೃಷ್ಣ ಕೆ, ಸಹ ಪ್ರಾದ್ಯಾಪಕರು, ಅರಿವಳಿಕೆ ಶಾಸ್ತ್ರ ವಿಭಾಗ ಇವರುಗಳನ್ನು ಸೇವೆಯಿಂದ ವಜಾ ಗೊಳಿಸಲಾಗಿರುತ್ತದೆ.<br><br>ಮುಂದುವರಿದು, ಡಾ ಹೆಚ್.ಸಿ. ಸವಿತ, ಸಹ ಪ್ರಾದ್ಯಾಪಕರು, ಡಾ ಕಾವ್ಯಶ್ರೀ ಜಿ, ಸಹ ಪ್ರಾದ್ಯಾಪಕರು, ಪ್ರಸೂತಿ ಮತ್ತು ಶ್ರೀ ರೋಗ ವಿಭಾಗ ಮತ್ತು ಡಾ ಕೃಷ್ಣ ಕೆ ಸಹ ಪ್ರಾದ್ಯಾಪಕರು, |

| | | | | |
|---|---|---|---|---|
| | | | | ಅರಿವಳಿಕೆ ಶಾಸ್ತ್ರ ವಿಭಾಗ ಇವರುಗಳಿಗೆ ಹೆಚ್ಚುವರಿಯಾಗಿ ಪಾವತಿಸಿರುವ ವೇತನವನ್ನು ವೈದ್ಯರುಗಳಿಂದ ಹಿಂಪಡೆಯುವ ಬಗ್ಗೆ ಕ್ರಮವಹಿಸಲಾಗುತ್ತಿದೆ.<br>ನಿವೃತ್ತಗೊಂಡಿರುವ ಡಾ ಆನಂದ್, ಪ್ರಾಧ್ಯಾಪಕರು ಹಾಗೂ ರಾಜೀನಾಮೆ ಸಲ್ಲಿಸಿರುವ ಡಾ ವಿದ್ಯಾರಾಣಿ ಹಾಗೂ ಡಾ ನಾರಾಯಣ್ ವೈದ್ಯರುಗಳಿಗೆ ಹೆಚ್ಚುವರಿಯಾಗಿ ಪಾವತಿಸಿರುವ ವೇತನವನ್ನು ಸಂಸ್ಥೆಗೆ ಮರುಪಾವತಿಸಲು ತಿಳುವಳಿಕೆ ಪತ್ರ ನೀಡಲಾಗಿದೆ.<br>ಆದರೆ, ಈ ವೈದ್ಯರು ಹೆಚ್ಚುವರಿ ವೇತನವನ್ನು ಪಾವತಿಸದಿರುವುದರಿಂದ ಈ ವೈದ್ಯರುಗಳ ವಿರುದ್ಧ ಸಿವಿಲ್ ಮೊಕದ್ದಮೆ ಹೂಡಲು ಹಾಗೂ ಇವರಿಗೆ ನೋಟೀಸ್ ಜಾರಿಗೊಳಿಸಲು ವೈದ್ಯರುಗಳ ವಿಳಾಸ ಪತ್ತೆಯಾಗದ ಹಿನ್ನೆಲೆಯಲ್ಲಿ ದಿನಾಂಕ 22.2.2017 ರಂದು 30 ದಿನದೊಳಗಾಗಿ ಹೆಚ್ಚುವರಿಯಾಗಿ ನೀಡಲಾಗಿರುವ ವೇತನವನ್ನು ಮರುಪಾವತಿಸುವಂತೆ ನೀಡಲಾದ ನೋಟೀಸಿಗೆ ಸದರಿಯವರು ಕರ್ನಾಟ ಉಚ್ಛ ನ್ಯಾಯಾಲಯದಲ್ಲಿ ಕ್ರಿಮಿನಲ್ ಪಿಟಿಷನ್ ಸಿಆರ್ ಎಲ್ ಪಿ 822/2016 ಮತ್ತು 52807-52808/2017 ನ್ನು ದಾಖಲಿಸಿ ತಡೆಯಾಜ್ಞೆ ಪಡೆದಿರುತ್ತಾರೆ. ಈ ಪ್ರಕರಣದಲ್ಲಿ ಮಾನ್ಯ ನ್ಯಾಯಾಲಯವು ನೀಡಿರುವ ತಡೆಯಾಜ್ಞೆಯನನ್ನು ತೆರವುಗೊಳಸಲು ಕ್ರಮ ವಹಿಸಲಾಗಿದೆ.<br><br>ಡಾ: ಹೆಚ್.ಸಿ. ಸವಿತ, ಡಾ ಕಾವ್ಯ ಶ್ರೀ ಜಿ, ಡ ಕೃಷ್ಣ ಕೆ ಇವರು ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂ. 54265, 54274, 54273/2014(ಎಸ್-ಡಿಐಎಸ್) ದಾಖಲಿಸಿ ವಜಾಗೊಳಿಸಿರುವ ಅಧಿಸೂಚನೆಗೆ ತಡೆಯಾಜ್ಞೆ ತಂದಿರುತ್ತಾರೆ. ಹಾಲಿ ಈ 3 ಜನ ಬೋದಕರು ಕರ್ತ್ಯವ್ಯಕ್ಕೆ ವರದಿ ಮಾಡಿಕೊಂಡು ಕರ್ತವ್ಯ ನಿರ್ವಹಿಸುತ್ತಿರುತ್ತಾರೆ. |

| | | | | |
|---|---|---|---|---|
| | | | | ನಂತರದಲ್ಲಿ ಡಾ: ಕಾವ್ಯಶ್ರೀ ಇವರು ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ದಾಖಲಿಸಿರುವ ರಿಟ್ ಪಿಟಿಷನ್ ಸಂಖ್ಯೆ 54265/2014ರ ಪ್ರಕರಣವು ಮಾನ್ಯ ನ್ಯಾಯಾಲಯವು ದಿನಾಂಕ 4.12.2017 ರಂದು ವಜಾಗೊಳಿಸಿರುತ್ತದೆ. ಅದರಂತೆ, ಸದರಿ ವೈದ್ಯರನ್ನು ದಿನಾಂಕ 18.11.2014ರ ಮಾನ್ಯ ಕರ್ನಾಟಕ ಉಚ್ಛ ನ್ಯಾಯಾಲಯದ ಆದೇಶದನ್ವಯ ದಿನಾಂಕ 19.1.2018 ರಂದು ಕರ್ತವ್ಯದಿಂದ ಬಿಡುಗಡೆಗೊಳಿಸಲಾಗಿರುತ್ತದೆ. ನಂತರದಲ್ಲಿ, ಡಾ ಕಾವ್ಯಶ್ರೀ ಇವರು ಸಲ್ಲಿಸಿರುವ ಮೇಲ್ಮನವಿಯನ್ನು ಪರಿಗಣಿಸಿದ ಮಾನ್ಯ ಉಚ್ಛ ನ್ಯಾಯಾಲಯವು ದಿನಾಂಕ 16.3.2018 ರಂದು ನೀಡಿದ ನಿರ್ದೇಶನದ ಮೇರೆಗೆ ಸದರಿಯವರು ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುತ್ತಾರೆ.<br>ಈ ಪ್ರಕರಣದ ಸಂಬಂಧ ಈಗಾಗಲೇ ಕಂಡಿಕೆವಾರು ಷರಾಗಳನ್ನು ಗೌರವಾನ್ವಿತ ನ್ಯಾಯಾಲಯಕ್ಕೆ ಸಲ್ಲಿಸಲಾಗಿದ್ದು, ರಿಟ್ ಅರ್ಜಿ ಸಂ. 54265, 54274, 54273/2014( ಎಸ್ ಡಿಐಳ ಮೇಲೆ ಮಾನ್ಯ ಉಚ್ಛ ನ್ಯಾಯಾಲಯವು ನೀಡಿರುವ ತಡೆಯಾಜ್ಞೆಯನ್ನು ತೆರವುಗೊಳಿಸಲು ಕ್ರಮವಹಿಸಲಾಗಿದೆ.<br><br>ಶಿವಮೊಗ್ಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ:<br><br>ಶಿವಮೊಗ್ಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ಸಿಬ್ಬಂದಿಗಳ ನೇಮಕಾತಿಯಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರದ ಬಗ್ಗೆ ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯದ ಇಬ್ಬರು ಅಧಿಕಾರಿಗಳನ್ನು ಒಳಗೊಂಡ ತಂಡವು ನೀಡಿದ ತನಿಖಾ ವರದಿಯಲ್ಲಿ ಭೋಧಕ ಸಿಬ್ಬಂದಿ ನೇಮಕಾತಿಯಲ್ಲಿ ಹಾಗೂ ಉಪಕರಣ ಖರೀದಿಯಲ್ಲಿ ಯಾವುದೇ ಅವ್ಯವಹಾರ ಜರುಗಿರುವುದಿಲ್ಲವೆಂದು ವರದಿ ಮಾಡಲಾಗಿದೆ. ಆದರೆ, ಬೋಧಕೇತರ ಸಿಬ್ಬಂದಿಯ ನೇಮಕಾತಿಯಲ್ಲಿ ಕೆಲವೊಂದು ನಿಯಮ ಉಲ್ಲಂಘನೆಯಾಗಿದೆ ಎಂದು ವರದಿಯಾಗಿದೆ. ಈ |

| | | | | |
|---|---|---|---|---|
| | | | | ವರದಿಯ ಬಗ್ಗೆ ಕ್ರಮ ಕೈಗೊಳ್ಳಲು ಸಂಸ್ಥೆಯ ಆಡಳಿತ ಮಂಡಳಿಯ ಮುಂದೆ ಮಂಡಿಸಲು ಸಂಸ್ಥೆಯ ನಿರ್ದೇಶಕರಿಗೆ ನಿರ್ದೇಶನ ನೀಡಲಾಗಿತ್ತು. ಅದರಂತೆ ಸದರಿ ಸಂಸ್ಥೆಯ ನಿರ್ದೇಶಕರು ಈ ವಿಷಯವನ್ನು ದಿನಾಂಕ 16.12.14 ರಂದು ಜರುಗಿದ 18ನೇ ಆಡಳಿತ ಮಂಡಳಿ ಸಭೆಯಲ್ಲಿ ಮಂಡಿಸಿದ್ದು, ಸದರಿ ಸಭೆಯಲ್ಲಿ ಡಾ ಹೆಚ್. ಓ. ಚಿದಾನಂದ, ಹಿಂದಿನ ಪ್ರಾಂಶುಪಾಲರು, ಶಿಮ್ಸ್, ಶಿವಮೊಗ್ಗ ಇವರು ಸರ್ಕಾರದಿಂದ ಯಾವುದೇ ರೀತಿಯ ಪರವಾನಿಗೆಯನ್ನು ಪಡೆಯದೆ ಕಾನೂನಿನ ವಿರುದ್ಧವಾಗಿ 94 ಶುಶ್ರೂಷಕರು, 43 ಪ್ರಯೋಗ ಶಾಲಾ ತಂತ್ರಜ್ಞರಿಗೆ ಹಾಗೂ ಇತರೆ ಬೋದಕೇತರ ಗುತ್ತಿಗೆ ನೌಕರರಿಗೆ ಹೊರಡಿಸಿದ್ದ ಖಾಯಂ ನೇಮಕಾತಿ ಆದೇಶವನ್ನು ಹಿಂಪಡೆದು ಆ ಸಂದರ್ಭದಲ್ಲಿಯೇ ರದ್ದುಗೊಳಿಸಲಾಗಿರುವುದನ್ನು ಸಭೆಯು ಪರಿಶೀಲಿಸಿತು. ಅದೇ ರೀತಿ ಡಾ ಅಶ್ವಿನ್ ಹೆಬ್ಬಾರ್ ಮತ್ತು ಡಾ ಮೋಹನ್ ಎಸ್ ವಿ ಎಸ್ ಇವರಿಗೆ ನಿಯಮ ಬಾಹಿರವಾಗಿ ನೀಡಿರುವ ಮುಂಬಡ್ತಿಯನ್ನು ಸಹ ಆ ಸಂದರ್ಭದಲ್ಲಿಯೇ ಹಿಂಪಡೆದಿರುವುದನ್ನು ಪರಿಶೀಲಿಸಿದ ಸಮಿತಿಯು ಸದರಿಯವರ ಮೇಲಿನ ಆಡಳಿತಾತ್ಮಕ ದೋಷಗಳ ಬಗ್ಗೆ ಸರ್ಕಾರದಲ್ಲಿ ಬಾಕಿ ಇರುವ ಪ್ರಕರಣವನ್ನು ಅಂತಿಮಗೊಳಿಸಲು ಸಭೆಯಲ್ಲಿ ತೀರ್ಮಾನಿಸಲಾಗಿದೆ. ಅಲ್ಲದೆ, ಪೋಲೀಸ್ ಇಲಾಖೆ ವತಿಯಿಂದ ಡಾ ಚಿದಾನಂದ್ ಇವರ ಮೇಲೆ ಐಪಿಸಿ ಸೆಕ್ಸನ್ 420ರ ಅಡಿಯಲ್ಲಿ ದಾಖಲಾದ ದಾವೆಯನ್ನು ಶಿವಮೊಗ್ಗ ಜೆ ಎಂ ಎಫ್ ಸಿ ನ್ಯಾಯಾಲಯವು ವಜಾಗೊಳಿಸಿರುತ್ತದೆ.<br><br>ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ:<br>ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ 307 ಬೋಧಕೇತರ ಹುದ್ದೆಗಳನ್ನು ನಿಯಮಬಾಹಿರವಾಗಿ ನೇಮಕಾತಿ ಮಾಡಿಕೊಂಡಿರುವುದನ್ನು ಸರ್ಕಾರವು ಪರಿಶೀಲಿಸಿ, ಸದರಿ ನೇಮಕಾತಿಗಳನ್ನು ರದ್ದುಗೊಳಿಸಿ ದಿನಾಂಕ 19.11.2015 ರಂದು |

| | | | | |
|---|---|---|---|---|
| | | | | ಆದೇಶವನ್ನು ಹೊರಡಿಸಲಾಗಿದೆ. ಸದರಿ ಅವಧಿಯಲ್ಲಿ ಸಂಸ್ಥೆಯ ನಿರ್ದೇಶಕರಾಗಿ ಕಾರ್ಯನಿರ್ವಹಿಸುತ್ತಿದ್ದ ಡಾ ಕೆ.ಎಸ್. ಗಂಗಾಧರ್ ಇವರ ವಿರುದ್ದ ಇಲಾಖಾ ವಿಚಾರಣೆ ಕೈಗೊಳ್ಳಲು ಕಡತ ಸಂ. ಆಕುಕ 177 ಕೆವಿಎಂ 2013(ಭಾ) ರಲ್ಲಿ ದೋಷಾರೋಪಣಾ ಪಟ್ಟಿಯನ್ನು ಜಾರಿಗೊಳಿಸಲಾಗಿದ್ದು, ಸದರಿಯವರಿಂದ ಸಮಜಾಯಿಷಿಯನ್ನು ಪಡೆಯಲಾಗಿದೆ.<br><br>ಸದರಿ ಅವರು ನೀಡಿರುವ ಸಮಜಾಯಿಷಿಯನ್ನು ಪರಿಶೀಲಿಸಿದ ನಂತರ, ಇವರ ವಿರುದ್ದದ ಆರೋಪಗಳು ಮೇಲ್ನೋಟಕ್ಕೆ ಕಂಡುಬಂದಿರುವುದರಿಂದ ಹಾಸನ ವೈದ್ಯಕೀಯ ವಿಜ್ಞಾನಗಳಸಂಸ್ಥೆಯ ಆದೇಶ ಸಂಖ್ಯೆ ಆಕುಕ 177 ಕೆವಿಎಂ 2013(ಭಾಗಂ, ದಿನಾಂಕ 22.8.2017 ರಲ್ಲಿ ಇವರ ವಿರುದ್ದ ಇಲಾಖಾ ವಿಚಾರಣೆ ನಡೆಸಲು ಶ್ರೀ ಎಸ್, ಇಂಧುದರ, ನಿವೃತ್ತ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಇವರನ್ನು ವಿಚಾರಣಾಧಿಕಾರಿಗಳನ್ನಾಗಿ ನೇಮಿಸಲಾಗಿದೆ. ಸದರಿ ಆದೇಶದ ವಿರುದ್ದ ಆರೋಪಿತ ಅಧಿಕಾರಿಯಾದ ಡಾ ಗಂಗಾಧರ್ ಇವರು ರಿಟ್ ಅರ್ಜಿ ಸಂ. 18429/2017 ಅನ್ನು ದಾಖಲಿಸಿದ್ದು ಸದರಿ ಪ್ರಕರಣದಲ್ಲಿ ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ತಡೆಯಾಜ್ಞೆ ನೀಡಿರುತ್ತದೆ. ಇದನ್ನು ತೆರವು ಗೊಳಿಸಲು ಕ್ರಮ ವಹಿಸಲಾಗುತ್ತಿದೆಯೆಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಈ ಭರವಸೆಯನ್ನು ಮುಕ್ತಾಯಗೊಳಿಸಲು ಸಮಿತಿಯು ತೀರ್ಮಾನಿಸಿತು. |

| | | | | |
|---|---|---|---|---|
| 2 | 4087<br>ಚು.ಗು.ಪ್ರ:23<br>ಶ್ರೀ ಅಲ್ಲಮಪ್ರಭು ಪಾಟೀಲ್<br>ವಿಪನದಿ :<br>26.03.2012 | ಯಾದಗಿರಿ ಜಿಲ್ಲೆಯಲ್ಲಿ ವೈದ್ಯಕೀಯ ಕಾಲೇಜನ್ನು ಸ್ಥಾಪಿಸುವ ಬಗ್ಗೆ. | ಈ ಬಗ್ಗೆ ಮನವಿ ಸ್ವೀಕೃತವಾಗಿದ್ದು, ಅದು ಪರಿಶೀಲನೆಯಲ್ಲಿದೆ ಎಂದು ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ತಿಳಿಸಿದರು. | ದಿನಾಂಕ: 17.9.2018ರಲ್ಲಿ ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು. ವೈದ್ಯಕೀಯ ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿ ಮೊದಲಿಗೆ 04 ಹಳೆಯ ವೈದ್ಯಕೀಯ ಕಾಲೇಜುಗಳು ಕಾರ್ಯನಿರ್ವಹಿಸುತ್ತಿರುತ್ತವೆ;<br>• ಬಿ.ಎಂ.ಸಿ.ಆರ್.ಐ. ಬೆಂಗಳೂರು.<br>• ಎಂಎಂಸಿಆರ್ಐ, ಮೈಸೂರು<br>• ಏಮ್ಸ್, ಬಳ್ಳಾರಿ<br>• ಕಿಮ್ಸ್, ಹುಬ್ಬಳ್ಳಿ.<br>ಈ ಎಲ್ಲಾ ವೈದ್ಯಕೀಯ ಕಾಲೇಜುಗಳ ಆಸ್ಪತ್ರೆಗಳು ಸುಸಜ್ಜಿತ ಬೋಧಕ ಆಸ್ಪತ್ರೆಗಳು ಹಾಗೂ ಹಾಸ್ಟೆಲ್ ಸೌಲಭ್ಯಗಳನ್ನು ಒದಗಿಸಲಾಗಿದೆ.<br>2005-06ನೇ ಸಾಲಿನಿಂದ ಮಂಡ್ಯ, ಹಾಸನ, ಶಿವಮೊಗ್ಗ, ಬೆಳಗಾವಿ, ಬೀದರ್ ಮತ್ತು ರಾಯಚೂರು ಇಲ್ಲಿ ಹೊಸ ವೈದ್ಯಕೀಯ ಕಾಲೇಜುಗಳನ್ನು 100 ಎಂ.ಬಿ.ಬಿ.ಎಸ್., ಪ್ರವೇಶ ಮಿತಿಯೊಂದಿಗೆ ಕಾರ್ಯಾರಂಭಗೊಳಿಸಲಾಗಿದೆ.<br>• ಈ ವೈದ್ಯಕೀಯ ಕಾಲೇಜುಗಳಲ್ಲಿ 2017-18ನೇ ಸಾಲಿನಿಂದ ಎಂ.ಬಿ.ಬಿ.ಎಸ್., ಪ್ರವೇಶ ಮಿತಿಯನ್ನು 150ಕ್ಕೆ ಹೆಚ್ಚಿಸಲಾಗಿದೆ. |
| 3 | 6030<br>ಚು.ರ.ಪ್ರ. 1414<br>ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ<br>ವಿಪನದಿ:16.03.2015 | ರಾಜ್ಯದಲ್ಲಿ ಸರ್ಕಾರಿ ವೈದ್ಯಕೀಯ ಕಾಲೇಜುಗಳು ಇಲ್ಲದ ಜಿಲ್ಲೆಗಳಲ್ಲಿ ಸರ್ಕಾರಿ ವೈದ್ಯಕೀಯ ಕಾಲೇಜು ಮಂಜೂರು ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳ ಕುರಿತು. | ರಾಜ್ಯದಲ್ಲಿ ಕೋಲಾರ, ದಕ್ಷಿಣ ಕನ್ನಡ, ದಾವಣಗೆರೆ, ಬಿಜಾಪುರ, ಬೆಂಗಳೂರು ಗ್ರಾಮಾಂತರ, ರಾಮನಗರ ಮತ್ತು ಉಡುಪಿ ಜಿಲ್ಲೆಗಳಲ್ಲಿ ಸರ್ಕಾರಿ ವೈದ್ಯಕೀಯ ಕಾಲೇಜುಗಳಿರುವುದಿಲ್ಲ.<br>ಜಿಲ್ಲೆಗೊಂದು ಸರ್ಕಾರಿ ವೈದ್ಯಕೀಯ ಕಾಲೇಜನ್ನು ಪ್ರಾರಂಭಿಸಬೇಕೆಂಬುದು ಸರ್ಕಾರದ ನೀತಿಯಾಗಿದ್ದು, ಚಾಮರಾಜನಗರ, ಕಾರವಾರ, ಕೊಡಗು, ಕೊಪ್ಪಳ, ಗದಗ, ಕಲಬುರ್ಗಿ, ತುಮಕೂರು, ಚಿತ್ರದುರ್ಗ, ಬಾಗಲಕೋಟೆ, ಚಿಕ್ಕಬಳ್ಳಾಪುರ, ಹಾವೇರಿ ಮತ್ತು ಯಾದಗಿರಿ ಇಲ್ಲಿ ಹೊಸ ವೈದ್ಯಕೀಯ ಕಾಲೇಜುಗಳನ್ನು ಪ್ರಾರಂಭಿಸಲು ಸರ್ಕಾರವು ಈಗಾಗಲೇ ಮಂಜೂರಾತಿ ನೀಡಿದೆ. ಸರ್ಕಾರಿ ವೈದ್ಯಕೀಯ ಕಾಲೇಜುಗಳಿರದ 3 ಜಿಲ್ಲೆಗಳಲ್ಲಿ ಅಗತ್ಯವಿರುವ | |

| | | | | |
|---|---|---|---|---|
| 4 | 6034<br>ಚು.ಗು.ಪ್ರ:1583<br>ಶ್ರೀ ವೈ.ಎ.ನಾರಾಯಣಸ್ವಾಮಿ<br>ವಿಪನದಿ: 13.07.2015 | ಸರ್ಕಾರಿ ವೈದ್ಯಕೀಯ ಕಾಲೇಜು ಪ್ರಾರಂಭಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳ ಬಗ್ಗೆ. | ಮೂಲಭೂತ ಸೌಲಭ್ಯಗಳ ಲಭ್ಯತೆ ಹಾಗೂ ಅನುದಾನದ ಲಭ್ಯತೆಗನುಗುಣವಾಗಿ ಮುಂದಿನ ಶೈಕ್ಷಣಿಕ ವರ್ಷಗಳಲ್ಲಿ ಹಂತ ಹಂತವಾಗಿ ಪ್ರಾರಂಭಿಸಲು ಪರಿಶೀಲಿಸಲಾಗುವುದು ಎಂದು ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ತಿಳಿಸಿದರು.<br><br>ಜಿಲ್ಲೆಗೊಂದು ಸರ್ಕಾರಿ ವೈದ್ಯಕೀಯ ಕಾಲೇಜ್‌ನ್ನು ಪ್ರಾರಂಭಿಸ ಬೇಕೆಂಬುದು ಸರ್ಕಾರದ ನೀತಿಯಾಗಿದ್ದು, ಮುಂದಿನ ಶೈಕ್ಷಣಿಕ ವರ್ಷಗಳಲ್ಲಿ ಲಭ್ಯವಿರುವ ಮೂಲಭೂತ ಸೌಲಭ್ಯಗಳು ಹಾಗೂ ಅನುದಾನದ ಲಭ್ಯತೆಗನುಗುಣವಾಗಿ ಹೊಸ ವೈದ್ಯಕೀಯ ಕಾಲೇಜು ಗಳನ್ನು ಪ್ರಾರಂಭಿಸಲು ಪರಿಶೀಲಿಸ ಲಾಗುವುದು ಎಂದು ಮಾನ್ಯ ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು ತಿಳಿಸಿದರು. | • ಈ ವೈದ್ಯಕೀಯ ಕಾಲೇಜುಗಳಿಗೆ ಹೊಂದಿಕೊಂಡಂತೆ ಆಯಾ ಜಿಲ್ಲಾ ಆಸ್ಪತ್ರೆಗಳು ಬೋಧಕ ಆಸ್ಪತ್ರೆಗಳಗೆ ಕಾರ್ಯನಿರ್ವಹಿಸುತ್ತಿರುತ್ತವೆ.<br><br>• ಬೆಳಗಾವಿ, ಬೀದರ್ ಮತ್ತು ಶಿವಮೊಗ್ಗ ವೈದ್ಯಕೀಯ ಕಾಲೇಜು ಆಸ್ಪತ್ರೆಗಳು 750 ಹಾಸಿಗೆ ಸಾಮರ್ಥ್ಯವನ್ನು ಹೊಂದಿರುತ್ತವೆ.<br>• ಮಂಡ್ಯ ಹಾಸನ ಮತ್ತು ರಾಯಚೂರು ಇಲ್ಲಿನ ಬೋಧಕ ಆಸ್ಪತ್ರೆಗಳ ಹಾಸಿಗೆ ಸಾಮರ್ಥ್ಯವನ್ನು 750 ಹಾಸಿಗೆ ಸಾಮರ್ಥ್ಯಕ್ಕೆ ಹೆಚ್ಚಿಸಬೇಕಾಗಿರುತ್ತದೆ.<br><br>• ಉಳಿದಂತೆ, ಈ ವೈದ್ಯಕೀಯ ಕಾಲೇಜುಗಳಲ್ಲಿ 150 ಎಂಬಿಬಿಎಸ್ ಪ್ರವೇಶಾತಿಗೆ ಅನುಗುಣವಾಗಿ ಹಾಸ್ಟೆಲ್ ಹಾಗೂ ಇನ್ನಿತರೆ ಸೌಲಭ್ಯಗಳನ್ನು ವಿಸ್ತರಿಸಬೇಕಾಗಿರುತ್ತದೆ.<br><br>2013-14ನೇ ಸಾಲಿನ ಆಯವ್ಯಯ ಘೋಷಣೆಯಂತೆ 2015-16ನೇ ಸಾಲಿನಿಂದ ಗದಗ, ಕಲಬುರಗಿ ಮತ್ತು ಕೊಪ್ಪಳ ಇಲ್ಲಿ ಹಾಗೂ 2016-17ನೇ ಸಾಲಿನಿಂದ ಕಾರವಾರ, ಕೊಡಗು ಮತ್ತು ಚಾಮರಾಜನಗರ ಇಲ್ಲಿ 150 ಎಂಬಿಬಿಎಸ್ ಪ್ರವೇಶಮಿತಿ ಯೊಂದಿಗೆ ಹೊಸದಾಗಿ ಪ್ರಾರಂಭಿಸಲಾಗಿದೆ. |
| 5 | 6037<br>ಚು.ಗು.ಪ್ರ; 791<br>ಶ್ರೀ ಜಿ.ರಘು ಆಚಾರ್<br>ವಿಪನದಿ:20.03.2017 | ಚಿತ್ರದುರ್ಗ ಜಿಲ್ಲೆಯಲ್ಲಿ ಸರ್ಕಾರಿ ವೈದ್ಯಕೀಯ ಕಾಲೇಜು ಪ್ರಾರಂಭಿಸುವ ಬಗ್ಗೆ. | 2017-18ನೇ ಸಾಲಿನ ಆಯವ್ಯಯ ಘೋಷಣೆಯನ್ವಯ ಚಿತ್ರದುರ್ಗದಲ್ಲಿ ವೈದ್ಯಕೀಯ ಕಾಲೇಜು ನಿರ್ಮಾಣ ಕಾಮಗಾರಿಯನ್ನು ಪ್ರಸಕ್ತ ವರ್ಷದಲ್ಲಿ ಪ್ರಾರಂಭಿಸಲಾಗುವುದು. | • ಈ ವೈದ್ಯಕೀಯ ಕಾಲೇಜುಗಳಿಗೆ ಹೊಂದಿಕೊಂಡಂತೆ ಆಯಾ ಜಿಲ್ಲಾ ಆಸ್ಪತ್ರೆಗಳು ಬೋಧಕ ಆಸ್ಪತ್ರೆಗಳಾಗಿ ಕಾರ್ಯನಿರ್ವಹಿಸುತ್ತಿದ್ದು, ಇವುಗಳು 300 ಹಾಸಿಗೆ |

| | | | | |
|---|---|---|---|---|
| | | | ತದನಂತರದಲ್ಲಿ ಈ ವೈದ್ಯಕೀಯ ಕಾಲೇಜನ್ನು ಪ್ರಾರಂಭಿಸಲು ಕೇಂದ್ರ ಸರ್ಕಾರ ಹಾಗೂ ಭಾರತೀಯ ವೈದ್ಯಕೀಯ ಪರಿಷತ್ತಿಗೆ (ಎಂಸಿಐ) ಅನುಮತಿ ಕೋರಿ ಅರ್ಜಿ ಸಲ್ಲಿಸಲಾಗುವುದು. ಈಗ ವೈದ್ಯಕೀಯ ಕಾಲೇಜ ಕಟ್ಟಡ ಕಟ್ಟುವುದಕ್ಕೆ ಸ್ವಲ್ಪ ಹಣದ ಲಭ್ಯತೆಯನ್ನು ನೋಡಿಕೊಂಡು ಮಾಡಬೇಕು ಎನ್ನುವಂತಹ ಉದ್ದೇಶದಿಂದ ಸ್ವಲ್ಪ ವಿಳಂಬವಾಗಿದೆ. ಮಾನ್ಯ ಮುಖ್ಯಮಂತ್ರಿಯವರು ಈ ಬಜೆಟ್‌ನಲ್ಲಿ ಇದಕ್ಕೆ ಹಣವನ್ನು ಒದಗಿಸಿದ್ದಾರೆ. ಹಾಗಾಗಿ ಇದಕ್ಕೆ ಶೀಘ್ರವಾಗಿ ಟೆಂಡರ್ ಕರೆಯುವಂತಹ ಪ್ರಕ್ರಿಯೆಯನ್ನು ಪ್ರಾರಂಭ ಮಾಡುತ್ತೇವೆ ಎಂದು ವೈದ್ಯಕೀಯ ಶಿಕ್ಷಣ ಸಚಿವರು ತಿಳಿಸಿದರು. | ಸಾಮರ್ಥ್ಯವನ್ನು ಹೊಂದಿದ ಆಸ್ಪತ್ರೆಗಳಾಗಿರುತ್ತವೆ.<br>• ಈ ಎಲ್ಲಾ ವೈದ್ಯಕೀಯ ಕಾಲೇಜುಗಳು ಎಂ.ಸಿ.ಐ. ಮಾರ್ಗಸೂಚಿಗಳನ್ವಯ 750 ಹಾಸಿಗೆ ಸಾಮರ್ಥ್ಯದ ಹಾಸ್ಟೆಲ್ ಕಟ್ಟಡ, ಹಾಸ್ಟೆಲ್ ಸೌಲಭ್ಯ ಹಾಗೂ ಇನ್ನಿತರೆ ಸೌಲಭ್ಯಗಳನ್ನು ಹೊಂದುವುದು ಕಡ್ಡಾಯವಾಗಿರುತ್ತದೆ.<br>• ಪ್ರಸ್ತುತ ಕೊಪ್ಪಳ, ಗದಗ ಮತ್ತು ಚಾಮರಾಜನಗರ ಇಲ್ಲಿ 450 ಹಾಸಿಗೆ ಸಾಮರ್ಥ್ಯದ ಆಸ್ಪತ್ರೆ ಕಟ್ಟಡಗಳನ್ನು ಹಾಗೂ ಕೊಡಗು, ಗದಗ ಮತ್ತು ಕೊಪ್ಪಳ ಇಲ್ಲಿನ ವಿದ್ಯಾರ್ಥಿಗಳಿಗೆ ಹೆಚ್ಚುವರಿ ಹಾಸ್ಟೆಲ್ ಕೊಠಡಿಗಳನ್ನು ನಿರ್ಮಿಸಲು ಕ್ರಮವಹಿಸಲಾಗಿದೆ.<br>• ಕಾರವಾರ ಮತ್ತು ಕೊಡಗು ಇಲ್ಲಿ 450 ಹಾಸಿಗೆ ಸಾಮರ್ಥ್ಯದ ಕಟ್ಟಡಗಳನ್ನು ನಿರ್ಮಿಸುವುದು ಹಾಗೂ ಕಾರವಾರ ಮತ್ತು ಚಾಮರಾಜನಗರ ಇಲ್ಲಿ ಹೆಚ್ಚುವರಿ ಹಾಸ್ಟೆಲ್ ಕಟ್ಟಡಗಳನ್ನು ನಿರ್ಮಿಸುವುದು ಬಾಕಿ ಉಳಿದಿರುತ್ತದೆ.<br>• ಈ ಆಸ್ಪತ್ರೆಗಳಿಗೆ ಅಗತ್ಯವಿರುವ ಉಪಕರಣಗಳು ಹಾಗೂ ಪೀಠೋಪಕರಣಗಳು ಮತ್ತು ಇನ್ನಿತರೆ ಸೌಲಭ್ಯಗಳನ್ನು ಒದಗಿಸಬೇಕಾಗಿರುತ್ತದೆ.<br>ಈ ಎಲ್ಲಾ ಸೌಲಭ್ಯಗಳನ್ನು ಒದಗಿಸಲು ಅಂದಾಜು ರೂ. 900.00 ಕೋಟಿಗಳ ಅನುದಾನದ ಅವಶ್ಯಕತೆ ಇರುತ್ತದೆ.<br>ಈ ವೈದ್ಯಕೀಯ ಕಾಲೇಜುಗಳಿಗೆ ಎಂ.ಸಿ.ಐ.ನಿಂದ ಖಾಯಂ ಮಾನ್ಯತೆ ಪಡೆಯಲು ಅಗತ್ಯವಿರುವ ಎಲ್ಲಾ |
| 6 | 6038<br>ಚು.ರ.ಪ್ರ; 783<br>ಶ್ರೀ ಬಸನಗೌಡ ಆರ್. ಪಾಟೀಲ್ (ಯತ್ನಾಳ್)<br>ವಿಪನದಿ:20.03.2017 | ವಿಜಯನಗರದಲ್ಲಿ ವೈದ್ಯಕೀಯ ಮಹಾವಿದ್ಯಾಲಯ ಪ್ರಾರಂಭಿಸುವ ಪ್ರಸ್ತಾವನೆ ಬಗ್ಗೆ. | ಜಿಲ್ಲೆಗೊಂದು ಸರ್ಕಾರಿ ವೈದ್ಯಕೀಯ ಕಾಲೇಜನ್ನು ಸ್ಥಾಪಿಸಬೇಕೆಂದು ಸರ್ಕಾರದ ನೀತಿಯಾಗಿದೆ. ಅದರನ್ವಯ ಸರ್ಕಾರಿ ವೈದ್ಯಕೀಯ ಕಾಲೇಜುಗಳಿಲ್ಲದ ಜಿಲ್ಲೆಗಳಲ್ಲಿ ಅನುದಾನ ಲಭ್ಯತೆಗನುಸಾರವಾಗಿ ಹಂತಹಂತವಾಗಿ ವೈದ್ಯಕೀಯ ಕಾಲೇಜುಗಳನ್ನು ಸ್ಥಾಪನೆ ಮಾಡಲಾಗುವುದು ಎಂದು ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ತಿಳಿಸಿದರು. | |

| | | | | |
|---|---|---|---|---|
| 7 | 6039<br>ಚು.ರ.ಪ್ರ: 758<br>ಶ್ರೀ ಕಾಂತರಾಜು<br>(ಬಿ.ಎಂ.ಎಲ್)<br>ವಿಪನದಿ:20.03.2017 | ರಾಜ್ಯ ಸರ್ಕಾರವು ರಾಜ್ಯದ ಪ್ರತಿ ಜಿಲ್ಲೆಯಲ್ಲಿ ಒಂದೊಂದು ಜಿಲ್ಲಾಸ್ಪತ್ರೆ ಮತ್ತು ವೈದ್ಯಕೀಯ ಕಾಲೇಜುಗಳನ್ನು ತೆರೆಯಲು ತೆಗೆದು ಕೊಂಡಿರುವ ಕ್ರಮಗಳ ಬಗ್ಗೆ ಹಾಗೂ ತುಮಕೂರು ಜಿಲ್ಲೆಗೆ ವೈದ್ಯಕೀಯ ಕಾಲೇಜು ಮತ್ತು ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಸ್ಥಾಪಿಸುವ ಬಗ್ಗೆ. | ಸರ್ಕಾರಿ ವೈದ್ಯಕೀಯ ಕಾಲೇಜುಗಳಿಲ್ಲದ ಜಿಲ್ಲೆಗಳಲ್ಲಿ ಅನುದಾನ ಲಭ್ಯತೆಗನುಸಾರವಾಗಿ ಹಂತಹಂತವಾಗಿ ವೈದ್ಯಕೀಯ ಕಾಲೇಜುಗಳನ್ನು ಸ್ಥಾಪನೆ ಮಾಡಲಾಗುವುದು. ತುಮಕೂರು ಜಿಲ್ಲೆಯಲ್ಲಿ ವೈದ್ಯಕೀಯ ಕಾಲೇಜನ್ನು ಸ್ಥಾಪನೆ ಮಾಡುವ ಪ್ರಸ್ತಾವನೆಯು ಪ್ರಸಕ್ತ ಸಾಲಿನಲ್ಲಿ ಸರ್ಕಾರದ ಮುಂದೆ ಇರುವುದಿಲ್ಲ. 2017-18ನೇ ಸಾಲಿನ ಆಯವ್ಯಯ ಘೋಷಣೆಯನ್ವಯ ತುಮಕೂರಿನಲ್ಲಿ 25.00 ಕೋಟಿ ರೂಗಳ ವೆಚ್ಚದಲ್ಲಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯನ್ನು ಸ್ಥಾಪಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ತಿಳಿಸಿದರು. | ಸೌಲಭ್ಯಗಳನ್ನು ಮುಂದಿನ 03 ವರ್ಷಗಳ ಅವಧಿಯಲ್ಲಿ ಒದಗಿಸಿಕೊಳ್ಳಬೇಕಾಗಿರುತ್ತದೆ.<br><br>2014-15ನೇ ಸಾಲಿನ ಆಯವ್ಯಯ ಘೋಷಣೆಯನ್ವಯ ಚಿತ್ರದುರ್ಗ, ಚಿಕ್ಕಬಳ್ಳಾಪುರ, ಚಿಕ್ಕಮಗಳೂರು, ಬಾಗಲಕೋಟೆ, ಹಾವೇರಿ ಮತ್ತು ಯಾದಗಿರಿ ಇಲ್ಲಿ ಹೊಸ ವೈದ್ಯಕೀಯ ಕಾಲೇಜುಗಳನ್ನು ಪ್ರಾರಂಭಿಸಲು ಕ್ರಮವಹಿಸಬೇಕಾಗಿರುತ್ತದೆ.<br><br>ಪ್ರತಿ ಹೊಸ ವೈದ್ಯಕೀಯ ಕಾಲೇಜಿನ ಸ್ಥಾಪನೆಗೆ ಅಂದಾಜು ರೂ. 480.00 ಕೋಟಿಗಳ ಅನಾವರ್ತಕ ವೆಚ್ಚ ಹಾಗೂ ವಾರ್ಷಿಕ ರೂ. 50.00 ಕೋಟಿಗಳ ಆವರ್ತಕ ವೆಚ್ಚದ ಅವಶ್ಯಕತೆ ಇರುತ್ತದೆ. |
| 8 | 4513<br>ಚು.ರ.ಪ್ರ: 1076<br>ಡಾ: ಎ.ಹೆಚ್.<br>ಶಿವಯೋಗಿಸ್ವಾಮಿ<br>ವಿಪನದಿ: 29-07-2013<br>(ದಿ:16.8.2018ರ ಸಮಿತಿ ಸಭೆಯಲ್ಲಿ ಈ ಭರವಸೆಯನ್ನು ಆರೋಗ್ಯ ಇಲಾಖೆಯಿಂದ ವೈದ್ಯಕೀಯ ಶಿಕ್ಷಣ ಇಲಾಖೆಗೆ ವರ್ಗಾಯಿಸಲಾಗಿದೆ) | ದಾವಣಗೆರೆ, ಚಿತ್ರದುರ್ಗ, ಕೋಲಾರ, ತುಮಕೂರು, ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿ ವೈದ್ಯಕೀಯ ಕಾಲೇಜುಗಳನ್ನು ಪ್ರಾರಂಭಿಸುವ ಯೋಜನೆ. | ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ವೈದ್ಯಕೀಯ ಕಾಲೇಜುಗಳನ್ನು ಪ್ರಾರಂಭಿಸಲು ಸರ್ಕಾರ ಉದ್ದೇಶಿಸಿದ್ದು, ಸದರಿ ಜಿಲ್ಲೆಗಳಲ್ಲಿ ಮುಂಬರುವ ಶೈಕ್ಷಣಿಕ ಸಾಲುಗಳಲ್ಲಿ ಹಂತಹಂತವಾಗಿ ಪ್ರಾರಂಭಿಸಲು ಪರಿಶೀಲಿಸಲಾಗುವುದೆಂದು ಮಾನ್ಯ ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು ತಿಳಿಸಿದರು. | ಕಾರವಾರ, ಕೊಪ್ಪಳ, ಕೊಡಗು, ಚಾಮರಾಜನಗರ, ಗದಗ ಮತ್ತು ಗುಲ್ಬರ್ಗಾ ಇಲ್ಲಿನ ವೈದ್ಯಕೀಯ ಕಾಲೇಜುಗಳಿಗೆ ಎಂ.ಸಿ.ಐ. ಮಾರ್ಗಸೂಚಿಗಳನ್ವಯ ಅಗತ್ಯವಿರುವ ಮೂಲಭೂತ ಸೌಲಭ್ಯಗಳನ್ನು ಹಂತಹಂತವಾಗಿ ಒದಗಿಸಲು ಕ್ರಮವಹಿಸಲಾಗಿದ್ದು, ಈ ಎಲ್ಲಾ ವೈದ್ಯಕೀಯ ಕಾಲೇಜುಗಳನ್ನು ಎಂ.ಸಿ.ಐ. ಮಾರ್ಗಸೂಚಿಗಳಿಗನುಸಾರವಾಗಿ ಸುಸಜ್ಜಿತಗೊಳಿಸಿದ ನಂತರ ಅನುದಾನ ಲಭ್ಯತೆಗೆ ಅನುಗುಣವಾಗಿ ಹೊಸ |

| | | | | |
|---|---|---|---|---|
| | | | | ವೈದ್ಯಕೀಯ ಕಾಲೇಜುಗಳ ಸ್ಥಾಪನೆಯ ಕಾರ್ಯವನ್ನು ಕೈಗೊಳ್ಳಲು ಪರಿಶೀಲಿಸಲಾಗುವುದು.<br><br>ಮೇಲ್ಕಂಡಂತೆ ಇಲಾಖೆಯ ಅಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ, ಭರವಸೆಯನ್ನು ಮುಕ್ತಾಯಗೊಳಿಸಲು ಸಮಿತಿಯು ತೀರ್ಮಾನಿಸಿತು. |
| ೯ | 6031<br>ಚು.ರ.ಪ್ರ. 1425<br>ಶ್ರೀ ಐವನ್ ಡಿ' ಸೋಜಾ<br>ವಿಪನದಿ:16.03.2015 | ರಾಜ್ಯದಲ್ಲಿ ಖಾಸಗಿ ಸಂಸ್ಥೆಗಳಿಂದ ಮೆಡಿಕಲ್ ಕಾಲೇಜ್‌ಗಳನ್ನು ತೆರೆಯಲು ಅರ್ಜಿಗಳನ್ನು ಸ್ವೀಕರಿಸಿರುವ ಬಗ್ಗೆ. | 2015-16ನೇ ಸಾಲಿನ ಶೈಕ್ಷಣಿಕ ಸಾಲಿಗೆ ಸಂಬಂಧಿಸಿದಂತೆ, ಸಂಭ್ರಮ ವೈದ್ಯಕೀಯ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ, ಕಣಚೂರು ವೈದ್ಯಕೀಯ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ,<br>ಈಸ್ಟ್ ಪಾಯಿಂಟ್ ವೈದ್ಯಕೀಯ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ ಮತ್ತು ಶ್ರೀ ಸಿದ್ಧಾರ್ಥ ಮೆಡಿಕಲ್ ಕಾಲೇಜು, ಈ ಸಂಸ್ಥೆಗಳಿಗೆ ಸಂಬಂಧಿಸಿದ ಇಸಿ ಮತ್ತು ಎಫ್‌ಸಿಗಳನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಟ್ಟಿದ್ದು, ಪ್ರಸ್ತಾವನೆ ಕೇಂದ್ರ ಸರ್ಕಾರದ ಪರಿಶೀಲನೆಯಲ್ಲಿರುತ್ತದೆ ಎಂದು ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ತಿಳಿಸಿದರು. | ದಿನಾಂಕ: 17.9.2018ರಲ್ಲಿ ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು. ಸಂಭ್ರಮ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಕಣಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಈಸ್ಟ್ ಪಾಯಿಂಟ್ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಮತ್ತು ಶ್ರೀ ಸಿದ್ಧಾರ್ಥ್ ಮೆಡಿಕಲ್ ಕಾಲೇಜು, ಈ ಸಂಸ್ಥೆಗಳನ್ನು ಹೊಸದಾಗಿ ಪ್ರಾರಂಭಿಸಲು ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ಸಂಸ್ಥೆಯಿಂದ ಸ್ವೀಕೃತಗೊಂಡಿದ್ದ ಅರ್ಜಿಗಳನ್ನು ಪರಿಶೀಲಿಸಿದ ನಂತರ, ಸರ್ಕಾರವು ಇಸಿ/ಎಫ್‌ಸಿಗಳನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿರುತ್ತದೆ.<br><br>ಸಂಭ್ರಮ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಕಣಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಈಸ್ಟ್ ಪಾಯಿಂಟ್, ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗಳನ್ನು ಹೊಸದಾಗಿ ಪ್ರಾರಂಭಿಸಲು ಭಾರತೀಯ ವೈದ್ಯಕೀಯ ಪರಿಷತ್ತು (ಎಂ.ಸಿ.ಐ) ಈಗಾಗಲೇ ಅನುಮತಿ ನೀಡಿದ್ದು, ಸದರಿ ವೈದ್ಯಕೀಯ ಕಾಲೇಜುಗಳು ಕಾರ್ಯಾರಂಭಗೊಂಡಿರುತ್ತವೆ. ಆದರೆ, ಸಂಭ್ರಮ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ ಸಂಬಂಧಪಟ್ಟಂತೆ ಭಾರತೀಯ ವೈದ್ಯಕೀಯ ಪರಿಷತ್ತು 2017-18 ಮತ್ತು 2018-19ನೇ ಸಾಲಿಗೆ ವಿದ್ಯಾರ್ಥಿಗಳ ಪ್ರವೇಶಾತಿಗೆ ಅನುಮೋದನೆ ನೀಡಿರುವುದಿಲ್ಲ. |

| | | | | |
|---|---|---|---|---|
| | | | | ಆದರೆ, ಸಿದ್ಧಾರ್ಥ ವೈದ್ಯಕೀಯ ಕಾಲೇಜನ್ನು ಹೊಸದಾಗಿ ಪ್ರಾರಂಭಿಸಲು ಎಂ.ಸಿ.ಐ. ಅನುಮತಿ ನೀಡಿರುವುದರಿಂದ, ದಿನಾಂಕ: 6.4.2018ರಂದು ಮತ್ತೊಮ್ಮೆ ರಾಜ್ಯ ಸರ್ಕಾರದಿಂದ ಇಸಿ/ಎಫ್‌ಸಿ.ಯನ್ನು ನೀಡಲಾಗಿದ್ದು, ಕೇಂದ್ರ ಸರ್ಕಾರದ ಪರಿಶೀಲನೆಯಲ್ಲಿದೆಯೆಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಭರವಸೆಯನ್ನು ಮುಕ್ತಾಯಗೊಳಿಸಲು ಸಮಿತಿಯು ತೀರ್ಮಾನಿಸಿತು. |
| 10 | 6032<br>ಚು.ಗು.ಪ್ರ:1562<br>ಶ್ರೀ ಮರಿತಿಬ್ಬೇಗೌಡ<br>ವಿಪನದಿ: 13.07.2015 | ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿ ಖಾಲಿ ಇರುವ ಬೋಧಕರು, ಶುಶ್ರೂಷಕರು, ತಂತ್ರಜ್ಞರುಗಳನ್ನು ಭರ್ತಿ ಮಾಡುವ ಬಗ್ಗೆ. | ಖಾಲಿ ಇರುವ ಹುದ್ದೆಗಳನ್ನು ಎಂ.ಸಿ.ಐ ಮಾರ್ಗಸೂಚಿಗಳ ಗನುಸಾರವಾಗಿ ಅವಶ್ಯಕತೆ ಗನುಗುಣವಾಗಿ ಕಾಲಕಾಲಕ್ಕೆ ಭರ್ತಿ ಮಾಡಿಕೊಳ್ಳಲು ಕ್ರಮವಹಿಸ ಲಾಗುವುದು ಎಂದು ಮಾನ್ಯ ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು ತಿಳಿಸಿದರು. | ದಿನಾಂಕ: 17.9.2018ರಲ್ಲಿ ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು. ಖಾಲಿ ಇರುವ ಬೋಧಕರ ಹುದ್ದೆಗಳನ್ನು ಎಂ.ಸಿ.ಐ. ಮಾರ್ಗಸೂಚಿಗಳಗನುಸಾರವಾಗಿ ಅವಶ್ಯಕತೆಗನು ಗುಣವಾಗಿ Walk –Interview ಮೂಲಕ ಕಾಲಕಾಲಕ್ಕೆ ಭರ್ತಿ ಮಾಡಿಕೊಳ್ಳಲಾಗುತ್ತಿದೆ.<br><br>ಶುಶ್ರೂಷಕರ ಹುದ್ದೆಗಳನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಮೂಲಕ ಭರ್ತಿ ಮಾಡಿಕೊಳ್ಳಲಾಗಿದೆ. ತಂತ್ರಜ್ಞರ ಹುದ್ದೆಗಳನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಮೂಲಕ ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆಯೆಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಈ ಭರವಸೆಯನ್ನು ಮುಕ್ತಾಯಗೊಳಿಸಲು ಸಮಿತಿಯು ತೀರ್ಮಾನಿಸಿತು. |
| 11 | 6033<br>ಚು.ಗು.ಪ್ರ: 1616<br>ಶ್ರೀ ಮಹಾಂತೇಶ್ ಶಿವಾನಂದ ಕೌಜಲಗಿ<br>ವಿಪನದಿ: 13.07.2015 | ಬೆಳಗಾವಿ ಮೆಡಿಕಲ್ ಕಾಲೇಜಿನಲ್ಲಿ ರೋಗಿಗಳ ಜನ ಸಂಖ್ಯೆಗೆ ಅನುಗುಣವಾಗಿ ಸಾಮಾನ್ಯ ವಾರ್ಡುಗಳು ಮತ್ತು ಹೆರಿಗೆ ವಾರ್ಡುಗಳ ಕೊರತೆ ಇರುವ ಬಗ್ಗೆ. | 2014–15ನೇ ಸಾಲಿನ ಆಯವ್ಯಯ ಘೋಷಣೆಯಂತೆ ಬೆಳಗಾವಿ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಯಲ್ಲಿ 250 ಹಾಸಿಗೆಗಳ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯನ್ನು ನಿರ್ಮಿಸುವ ಸಂಬಂಧ ಕೆ.ಹೆಚ್. ಎಸ್.ಡಿ.ಆರ್.ಪಿ. ಯಿಂದ ಪಡೆಯಲಾಗಿರುವ | ದಿನಾಂಕ: 17.9.2018ರಲ್ಲಿ ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು. ಬೆಳಗಾವಿ ವೈದ್ಯಕೀಯ ವಿಜ್ಞಾನ ಸಂಸ್ಥೆ, ಬೆಳಗಾವಿಯ ಆಸ್ಪತ್ರೆಯಲ್ಲಿ ರೋಗಿಗಳ ಸಂಖ್ಯೆಗೆ ಅನುಗುಣವಾಗಿ ಸಾಮಾನ್ಯ ವಾರ್ಡುಗಳ ಮತ್ತು ಹೆರಿಗೆ ವಾರ್ಡ್‌ಗಳ ಕೊರತೆ ಇರುವುದಿಲ್ಲ. ಆಸ್ಪತ್ರೆಯು 740 ಹಾಸಿಗೆಗಳ ಸಾಮರ್ಥ್ಯದ ಆಸ್ಪತ್ರೆಯಾಗಿರುತ್ತದೆ. |

| | | | | |
|---|---|---|---|---|
| | | | ನೀಲನಕ್ಷೆಯು ಪರಿಶೀಲನೆಯಲ್ಲಿದೆ ಪ್ರಸ್ತಾಪಿತ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಹೃದಯ ರೋಗಗಳ ಚಿಕಿತ್ಸಾ ವಿಭಾಗವನ್ನೊಳಗೊಂಡಂತೆ ಇನ್ನೂ 12 ವಿಶೇಷ ಚಿಕಿತ್ಸಾ ವಿಭಾಗ ಗಳನ್ನು ಸೂಪರ್ ಸ್ಪೆಷಾಲಿಟಿ ಸೌಲಭ್ಯಗಳೊಂದಿಗೆ ಸುಸಜ್ಜಿತ ಗೊಳಿಸಿ ಕಾರ್ಯಾರಂಭಗೊಳಿಸಲು ಉದ್ದೇಶಿಸಲಾಗುವುದು ಎಂದು ಮಾನ್ಯ ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು ತಿಳಿಸಿದರು. | ಅಲ್ಲದೆ ಸಂಸ್ಥೆಯು ಎಂ.ಬಿ.ಬಿ.ಎಸ್. ಪ್ರವೇಶ ಮಿತಿಯನ್ನು 100 ರಿಂದ 150ಕ್ಕೆ ಹೆಚ್ಚಿಸಿರುವುದರಿಂದ, ಭಾರತೀಯ ವೈದ್ಯಕೀಯ ಪರಿಷತ್ತಿನ ಮಾನದಂಡದಂತೆ ಹೆಚ್ಚುವರಿಯಾಗಿ 200 ಹಾಸಿಗೆಗಳ ಸಾಮರ್ಥ್ಯದ ವಾರ್ಡ್‌ಗಳ ನಿರ್ಮಾಣಕ್ಕಾಗಿ ಸರ್ಕಾರದ ಆದೇಶ ಸಂಖ್ಯೆ: ಆಕುಕ 465 ಎಂಪಿಎಸ್ 2018, ದಿ: 14.3.2018ರಲ್ಲಿ ರೂ. 925.00 ಲಕ್ಷಗಳ ಮೊತ್ತಕ್ಕೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿರುತ್ತದೆ. ಈ ಕಾಮಗಾರಿಯನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಇಂಜಿನಿಯರಿಂಗ್ ಉಪವಿಭಾಗ, ಬೆಳಗಾವಿ ಇವರ ಮುಖಾಂತರ ಕೈಗೊಳ್ಳಲಾಗುತ್ತಿದೆ.<br><br>ಭಾರತೀಯ ವೈದ್ಯಕೀಯ ಪರಿಷತ್ತಿನ ಮಾನದಂಡದಂತೆ ಹೆರಿಗೆ ವಾರ್ಡ್‌ನಲ್ಲಿ 90 ಹಾಸಿಗೆಗಳು ಇರಬೇಕಾಗಿದ್ದು, ಪ್ರಸ್ತುತ 240 ಹಾಸಿಗೆಗಳು ಲಭ್ಯವಿರುವುದರಿಂದ ಹೆರಿಗೆ ವಾರ್ಡ್‌ನಲ್ಲಿ ಹಾಸಿಗೆಗಳ ಕೊರತೆ ಇರುವುದಿಲ್ಲ. ಸದರಿ ವಿಭಾಗವನ್ನು ಎರಡನೇ ಮಹಡಿಗೆ 90 ಹಾಸಿಗೆಗಳ ಸಾಮರ್ಥ್ಯದ ಪಿಡಿಯಾಟ್ರಿಕ್ ವಾರ್ಡ್ ನಿರ್ಮಾಣ ಕಾರ್ಯಕ್ಕೆ ಸರ್ಕಾರದ ಆದೇಶ ಸಂಖ್ಯೆ: ಆಕುಕ 465 ಎಂ.ಪಿ.ಎಸ್. 2018ರಲ್ಲಿ ರೂ. 750.00 ಲಕ್ಷಗಳ ಮೊತ್ತಕ್ಕೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದ್ದು, ಸದರಿ ಕಾಮಗಾರಿಯನ್ನು ಕೂಡ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಇಂಜನಿಯರಿಂಗ್ ಉಪ ವಿಭಾಗ, ಬೆಳಗಾವಿ ಇವರ ಮುಖಾಂತರ ಕೈಗೊಳ್ಳಲಾಗುತ್ತಿದೆ.<br><br>ಬೆಳಗಾವಿ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ 250 ಹಾಸಿಗೆಗಳ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ನಿರ್ಮಾಣಕ್ಕಾಗಿ ಸರ್ಕಾರದ ಆದೇಶ ಸಂಖ್ಯೆ: ಆಕುಕ 150 ಎಮ್‌ಎಸ್‌ಎಫ್ 2014, ದಿ: 12.9.2017ರಲ್ಲಿ ಆಡಳಿತಾತ್ಮಕ ಮಂಜೂರಾತಿ ನೀಡಲಾಗಿದ್ದು, 11 ಸೂಪರ್ ಸ್ಪೆಷಾಲಿಟಿ ಸೇವೆಗಳನ್ನು |

| | | | | |
|---|---|---|---|---|
| | | | | ಅಳವಡಿಸಿಕೊಳ್ಳಲಾಗುತ್ತಿದೆ. ಸದರಿ ಕಾಮಗಾರಿಯನ್ನು ಈಗಾಗಲೆ ಪ್ರಾರಂಭಿಸಲಾಗಿದ್ದು, ಕಾಮಗಾರಿ ಪ್ರಗತಿಯಲ್ಲಿದೆ.<br><br>ಹೀಗಾಗಿ ಬೆಳಗಾವಿ ಆಸ್ಪತ್ರೆಯಲ್ಲಿ ಸಾಮಾನ್ಯ ವಾರ್ಡ್‌ಗಳ ಮತ್ತು ಹೆರಿಗೆ ವಾರ್ಡ್‌ಗಳ ಕೊರತೆಯನ್ನು ನೀಗಿಸಲು ಅಗತ್ಯವಿರುವ ಎಲ್ಲಾ ಕ್ರಮಗಳನ್ನು ಈಗಾಗಲೇ ಕೈಗೊಳ್ಳಲಾಗಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಈ ಭರವಸೆಯನ್ನು ಮುಕ್ತಾಯಗೊಳಿಸಲು ಸಮಿತಿಯು ತೀರ್ಮಾನಿಸಿತು. |
| 12 | 6035<br>ಚು.ರ.ಪ್ರ:2747<br>ಶ್ರೀ ಅಮರನಾಥ ಪಾಟೀಲ್<br>ವಿಪನದಿ: 12.06.2017 | ಗ್ರಾಮೀಣ ಭಾಗದ ಜನರಿಗೆ ಆರೋಗ್ಯದ ಸಹಾಯಕ್ಕಾಗಿ ಕೈಗೊಳ್ಳುವ ಕ್ರಮದ ಕುರಿತು. | ಕರ್ನಾಟಕ ವೈದ್ಯಕೀಯ ಕೋರ್ಸುಗಳನ್ನು ಪೂರ್ಣಗೊಳಿಸಿದ ಅಭ್ಯರ್ಥಿಗಳ ಕಡ್ಡಾಯ ಸೇವಾ ತರಬೇತಿ ವಿಧೇಯಕ, 2012 ಹಾಗೂ ಅದರನ್ವಯ ರೂಪಿಸಲಾದ ನಿಯಮಾವಳಿಗೆ ಮಾನ್ಯ ಉಚ್ಚ ನ್ಯಾಯಾಲಯವು ನೀಡಿರುವ ತಡೆಯಾಜ್ಞೆಯನ್ನು ತೆರವುಗೊಳಿಸಲು ಹಾಗೂ ಪರ್ಯಾಯ ಕ್ರಮಗಳನ್ನು ಕೈಗೊಳ್ಳುವ ಬಗ್ಗೆ ಸಹ ಪರಿಶೀಲಿಸಲಾಗುತ್ತಿದೆ. ಎಂದು ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ತಿಳಿಸಿದರು. | ದಿನಾಂಕ: 17.9.2018ರಲ್ಲಿ ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳಲು ಸರ್ಕಾರಿ ಆದೇಶ ಸಂಖ್ಯೆ: ಆಕುಕ 297 ಹೆಚ್‌ಎಸ್‌ಹೆಚ್ 2015, ದಿ: 22.4.2016ರಲ್ಲಿ ಎಂಬಿಬಿಎಸ್ ವೈದ್ಯಾಧಿಕಾರಿಗಳ ಹುದ್ದೆಗೆ ಎದುರು ಆಯುಷ್ ವೈದ್ಯರ ನೇಮಕಾತಿ ಮಾಡಿಕೊಳ್ಳಲು ಆಕುಕ 359 ಹೆಚ್‌ಎಸ್‌ಹೆಚ್ 2016, ದಿ: 1.8.2016ರಲ್ಲಿ ತಜ್ಞ ವೈದ್ಯರನ್ನು "On call basis" ಮೇಲೆ ತೆಗೆದುಕೊಳ್ಳಲು ಸರ್ಕಾರದ ಆದೇಶ ಸಂಖ್ಯೆ: ಆಕುಕ 178 ಹೆಚ್‌ಎಸ್‌ಹೆಚ್ 2011, ದಿ: 20.5.2016ರಲ್ಲಿ ಹಾಗೂ ಸ್ಕಾರದ ಆದೇಶ ಸಂಕ್ಯೆ: ಆಕುಕ 554 ಹೆಚ್‌ಎಸ್‌ಹೆಚ್ 2016, ದಿ: 22.11.2916ರಲ್ಲಿ ಸೂಚಿತವಾದಂತೆ ತಜ್ಞ ವೈದ್ಯರುಗಳ ಎದುರು ಹುದ್ದೆಯಲ್ಲಿ ಎಂಬಿಬಿಎಸ್ ವೈದ್ಯರನ್ನು ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲು ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು ಸುತ್ತೋಲೆ ಸಂ: ಜೆಆರ್‌ಓ (1ಎ)/101/2012-13, ದಿನಾಂಕ: 9.12.2016 ರಂತೆ ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗಳು/ಜಿಲ್ಲಾ ಆಕುಕ ಅಧಿಕಾರಿಗಳಿಗೆ |

| | | | | |
|---|---|---|---|---|
| | | | | ಅನುಮತಿ ನೀಡಲಾಗಿದೆ. ಅದರಂತೆ ಇಂದಿನವರೆಗೆ 755 ವೈದ್ಯಾಧಿಕಾರಿಗಳು ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿದ್ದಾರೆ.<br><br>ಜೊತೆಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಅಡಿ ಕಾರ್ಯನಿರ್ವಹಿಸಿ, ನಿವೃತ್ತಿ ಹೊಂದಿರುವ ತಜ್ಞರು ಹಾಗೂ ವೈದ್ಯಾಧಿಕಾರಿಗಳು ಸ್ವ-ಇಚ್ಛೆಯಿಂದ ಅರ್ಜಿ ಸಲ್ಲಿಸಿದವರನ್ನು ಒಂದು ವರ್ಷದ ಅವಧಿಗೆ ಹಾಗೂ ಈ ಸೇವೆಯನ್ನು 65 ವರ್ಷ ವಯಸ್ಸಿನವರೆಗೆ ಪ್ರತಿ ವರ್ಷ ನವೀಕರಿಸುವ ಷರತ್ತಿನೊಂದಿಗೆ ಗುತ್ತಿಗೆ ಆಧಾರದ ಮೇಲೆ ಮರು ನೇಮಕಾತಿ ಮಾಡಿಕೊಳ್ಳಲಾಗುತ್ತಿದೆ.<br><br>ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿನ ಕರ್ನಾಟಕ ಲೋಕಸೇವಾ ಆಯೋಗದಿಂದ ಸಾಮಾನ್ಯ ಕರ್ತವ್ಯ ನಿರತ ವೈದ್ಯಾಧಿಕಾರಿಗಳ ನೇಮಕಾತಿಗೆ ಅಂತಿಮ ಆಯ್ಕೆ ಪಟ್ಟಿಯನ್ನು ಪ್ರಕಟಿಸಿ ಕೌನ್ಸಿಲಿಂಗ್ ಮೂಲಕ ಸ್ಥಳ ನಿಯುಕ್ತಿಗೊಳಿಸುವ ಸಂಬಂಧ ಒಂದು ಸುತ್ತಿನ ಪ್ರಕ್ರಿಯೆ ಮುಕ್ತಾಯಗೊಂಡಿರುತ್ತದೆ ದಿನಾಂಕ: 17.9.2018ರಂದು ಮತ್ತೊಂದು ಸುತ್ತಿನ ಕೌನ್ಸಿಲಿಂಗ್‌ನ್ನು ನಿಗಧಿಪಡಿಸಲಾಗಿದೆ.<br><br>ಮುಂದುವರೆದು, ಗ್ರಾಮೀಣ ಪ್ರದೇಶದ ಜನರಿಗೆ ವೈದ್ಯಕೀಯ ಸೌಲಭ್ಯಗಳನ್ನು ಒದಗಿಸುವ ನಿಟ್ಟಿನಲ್ಲಿ ಕರ್ನಾಟಕ ವೈದ್ಯಕೀಯ ಕೋರ್ಸ್‌ಗಳನ್ನು ಪೂರ್ಣಗೊಳಿಸಿದ ಅಭ್ಯರ್ಥಿಗಳ ಕಡ್ಡಾಯ ಸೇವಾ ತರಬೇತಿ ಅಧಿನಿಯಮ, 2012 ಹಾಗೂ ಅದರನ್ವಯ ನಿಯಮಾವಳಿಯನ್ನು ರೂಪಿಸಲಾಗಿತ್ತು. ಸದರಿ ಅಧಿನಿಯಮ ಹಾಗೂ ನಿಯಮಾವಳಿಗೆ ಮಾನ್ಯ ಉಚ್ಚ ನ್ಯಾಯಾಲಯವು ತಡೆಯಾಜ್ಞೆಯನ್ನು ನೀಡಿದ್ದು, ಸದರಿ ತಡೆಯಾಜ್ಞೆಯನ್ನು ತೆರವುಗೊಳಿಸಲು ಎಲ್ಲಾ ರೀತಿಯ ಸೂಕ್ತ ಕ್ರಮಗಳನ್ನು ಕೈಗೊಳ್ಳಲಾಗಿದೆ. ತಡೆಯಾಜ್ಞೆಯು ತೆರವುಗೊಂಡ ನಂತರ |

| | | | | |
|---|---|---|---|---|
| | | | | ಸದರಿ ಅಧಿನಿಯಮವನ್ನು ಪೂರ್ಣ ಪ್ರಮಾಣದಲ್ಲಿ ಜಾರಿಗೆ ತರಲಾಗುವುದೆಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ, ಈ ಭರವಸೆಯನ್ನು ಮುಕ್ತಾಯಗೊಳಿಸಲು ಸಮಿತಿಯು ತೀರ್ಮಾನಿಸಿತು. |
| 13 | 6036<br>ಚು.ಗು.ಪ್ರ: 30<br>ಶ್ರೀ ಸೈಯದ್ ಮುಧೀರ್ ಆಗಾ<br>ವಿಪನದಿ:21.11.2016 | ರಾಮನಗರ ಅರ್ಚಕರಹಳ್ಳಿಯಲ್ಲಿ ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ ಸ್ಥಾಪನೆಗಾಗಿ ಕಾಮಗಾರಿ ಕೆಲಸಗಳನ್ನು ಪ್ರಾರಂಭ ಮಾಡುವ ಬಗ್ಗೆ. | ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ದಾಖಲಾಗಿರುವ ರಿಟ್ ಅರ್ಜಿಗಳಲ್ಲಿ ಗೌರವಾನ್ವಿತ ಉಚ್ಚ ನ್ಯಾಯಾಲಯವು ನೀಡುವ ಅಂತಿಮ ತೀರ್ಪಿನ ಅನುಸಾರ ಕ್ರಮವಹಿಸಲಾಗುವುದು ಎಂದು ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ತಿಳಿಸಿದರು. | ದಿನಾಂಕ: 17.9.2018ರಲ್ಲಿ ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ರಾಮನಗರ ಜಿಲ್ಲೆ, ರಾಮನಗರ ತಾಲ್ಲೂಕು, ಅರ್ಚಕರಹಳ್ಳಿ ಗ್ರಾಮದಲ್ಲಿ ಒಟ್ಟು 216 ಎಕರೆ 24 ಗುಂಟೆ ಜಮೀನನ್ನು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ವತಿಯಿಂದ ಆರೋಗ್ಯ ನಗರ ಮತ್ತು ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾನಿಲಯದ ಸ್ಥಾಪನೆಗಾಗಿ ಭೂಸ್ವಾಧೀನಪಡಿಸಿ ಕೊಳ್ಳಲಾಗಿದೆ.<br><br>ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯವನ್ನು ರೂ. 580.00 ಕೋಟಿಗಳ ವೆಚ್ಚದಲ್ಲಿ ಸ್ಥಾಪಿಸಲು ಸಚಿವ ಸಂಪುಟದ ಅನುಮೋದನೆ ಪಡೆದು ಸರ್ಕಾರದ ಆದೇಶ ಸಖ್ಯೆ: ಆಕುಕ 425 ಆರ್‌ಜಿಯು 2015, ದಿ: 17.5.2016ರಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.<br><br>ಪ್ರಸ್ತುತ ಕೆಲವು ಭೂಮಾಲೀಕರು ನೂತನ ಭೂಸ್ವಾಧೀನ ಕಾಯ್ದೆ ಪ್ರಕಾರ ಪರಿಹಾರವನ್ನು ಪಾವತಿಸವಂತೆ ಕೋರಿ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ: 58807-09/2015ರ ಪ್ರಕರಣಗಳನ್ನು ದಾಖಲಿಸಿದ್ದು, ಸದರಿ ಪ್ರಕರಣಗಳಲ್ಲಿ ನ್ಯಾಯಾಲಯವು ದಿ:22.12.2015ರಂದು ತಡೆಯಾಜ್ಞೆ ನೀಡಿರುತ್ತದೆ.<br><br>ಮುಂದುವರೆದು, ಮಾನ್ಯ ಉಚ್ಚ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ: 11154/2017ರ ಪ್ರಕರಣದಲ್ಲಿ ದಿ: 14.3.2018ರಂದು ಈ ಕೆಳಗಿನಂತೆ ಆದೇಶ ನೀಡಿರುತ್ತದೆ. |

| | | | | |
|---|---|---|---|---|
| | | | | By way of an interim order, it is directed that the status-quoas it exists today with regard to shifting of the entire establishment of the Respondent RGUHS shall be maintained by the all the parties if a part of the Administrative Blocks have already been shifted from Bangalore to Ramanagara, before passing of this order that the status need not be altered or reversed. But, no further shifting or new construction etc., may be raised at Ramanagara out of te funds of the Respondent RGUHS, without the specific permission obtained from the Court.<br>ಆದ್ದರಿಂದ, ಭೂಮಾಲೀಕರು ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ಸಲ್ಲಿಸಿರುವ ಪ್ರಕರಣಗಳು ಹಾಗೂ ರಿಟ್ ಅರ್ಜಿ ಸಂಖ್ಯೆ: 11154/210/2017ರ ಪ್ರಕರಣಗಳಲ್ಲಿ ನ್ಯಾಯಾಲಯವು ನೀಡಿರುವ ತಡೆಯಾಜ್ಞೆಗಳು ತೆರವುಗೊಂಡ ನಂತರ ವಿಶ್ವವಿದ್ಯಾಲಯದ ಕಾಮಗಾರಿ ಕೆಲಸಗಳನ್ನು ಪ್ರಾರಂಭಿಸುವ ಬಗ್ಗೆ ಮುಂದಿನ ಕ್ರಮ ಕೈಗೊಳ್ಳಲಾಗುವುದೆಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಈ ಭರವಸೆಯನ್ನು ಮುಕ್ತಾಯಗೊಳಿಸಲು ಸಮಿತಿಯು ತೀರ್ಮಾನಿಸಿತು. |
| 14 | 6040<br>ಚು.ರ.ಪ್ರ; 883<br>ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ<br>ವಿಪನದಿ:20.03.2017 | ಬೆಳಗಾವಿ ವೈದ್ಯಕೀಯ ಕಾಲೇಜಿನ (ಬಿಮ್ಸ್) ಹೊಸ ಹಾಸ್ಟೆಲ್ ಕಟ್ಟಡ ಕಾಮಗಾರಿ ವಿಳಂಬವಾಗಿರುವ ಬಗ್ಗೆ. | 2014-15ನೇ ಸಾಲಿನಲ್ಲಿ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ವಸತಿ ಗೃಹ ಕಟ್ಟಡ ನಿರ್ಮಾಣ ಕಾಮಗಾರಿಯನ್ನು ಕೈಗೊಳ್ಳಲು ಎಸ್‌ಸಿಪಿ/ಟಿಎಸ್‌ಪಿ ಯೋಜನೆಯಡಿ ರೂ. 300 ಲಕ್ಷಗಳ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ | ದಿನಾಂಕ: 17.9.2018ರಲ್ಲಿ ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು. ಬೆಳಗಾವಿ ವೈದ್ಯಕೀಯ ವಿಜ್ಞಾನ ಸಂಸ್ಥೆ, ಬೆಳಗಾವಿ ಆವರಣದಲ್ಲಿ ಸ್ನಾತಕೋತ್ತರ ಮತ್ತು ಬಿ.ಎಸ್ಸಿ., ನರ್ಸಿಂಗ್ ವಿದ್ಯಾರ್ಥಿಗಳಿಗೆ ಹಾಸ್ಟೆಲ್‌ಗಳನ್ನು ರೂ. 589.79 ಲಕ್ಷಗಳ ಮೊತ್ತದಲ್ಲಿ ನಿರ್ಮಿಸಲಾಗಿದ್ದು ಈ ಕಾಮಗಾರಿಗಳಿಗೆ ಕೊರತೆ ಇರುವ ರೂ. 337.61 ಲಕ್ಷ ಮೊತ್ತವನ್ನು 2011-12 ಮತ್ತು 2013-14ನೇ ಸಾಲಿನ ಎಸ್.ಸಿ.ಪಿ/ಟಿ.ಎಸ್.ಪಿ |

| | | | | |
|---|---|---|---|---|
| | | | ಯನ್ನು ನೀಡಲಾಗಿರುತ್ತದೆ. ಅದೇ ರೀತಿ ಸರ್ಕಾರದ ಆದೇಶ ಸಂಖ್ಯೆ: ಆಕುಕ 50 ಕೆವಿಎಂ 2015 ದಿ:20.03.2015ರಲ್ಲಿ ಇದೇ ಯೋಜನೆಯಡಿ ಬಿಎಸ್‌ಸಿ ನರ್ಸಿಂಗ್ ಹಾಗೂ ಬಿ.ಎಸ್.ಸಿ ನರ್ಸಿಂಗ್ ವಿದ್ಯಾರ್ಥಿಗಳಿಗೆ ವಸತಿ ಗೃಹ ಕಟ್ಟಡ ನಿರ್ಮಾಣ ಕೈಗೊಳ್ಳಲು ರೂ. 289.79 ಲಕ್ಷಗಳ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಗಿದ್ದು, ಈ ಕಾಮಗಾರಿಗಳು ಪ್ರಗತಿಯಲ್ಲಿವೆ. ಕಾಮಗಾರಿಗಳನ್ನು ಕೂಡಲೇ ಪೂರ್ಣಗೊಳಿಸಲು ಅಗತ್ಯ ಕ್ರಮವಹಿಸಲಾಗುತ್ತಿದೆ. ಹಾಸ್ಟೆಲ್ ಕಾಮಗಾರಿಯನ್ನು ಪೂರ್ಣಗೊಳಿಸಲು ಅವಶ್ಯವಿರುವ ಬಾಕಿ ಅನುದಾನ ರೂ.147.25 ಲಕ್ಷಗಳ ಮೊತ್ತವನ್ನು ಸಂಸ್ಥೆಯಲ್ಲಿ 2011-12 ರಿಂದ 2013-14 ನೇ ಸಾಲಿನವರೆಗೆ ಬಾಕಿ ಉಳಿದಿರುವ ಎಸ್.ಸಿ.ಪಿ/ಟಿ.ಎಸ್.ಪಿ ಮೊತ್ತದಲ್ಲಿ ಬಳಕೆ ಮಾಡಿಕೊಳ್ಳಲು ಅನುಮತಿ ನೀಡುವ ಪ್ರಸ್ತಾವನೆಯು ಪರಿಶೀಲನೆಯಲ್ಲಿದೆ ಎಂದು ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ತಿಳಿಸಿದರು. | ಯೋಜನೆಯಡಿ ಬಳಕೆಯಾಗದೇ ಇರುವ ಮೊತ್ತವನ್ನು ಈ ಕಾಮಗಾರಿಗಳಿಗೆ ವಿನಿಯೋಗಿಸಿಕೊಳ್ಳಲು ಸರ್ಕಾರದ ಪತ್ರ ಸಂಖ್ಯೆ: ಆಕುಕ 25 ಕೆವಿಎಂ 2017, ದಿ: 25.4. 2017ರಲ್ಲಿ ಅನುಮತಿ ನೀಡಲಾಗಿದೆ. ಪ್ರಸ್ತುತ ಈ ಕಾಮಗಾರಿಗಳು ಪೂರ್ಣಗೊಂಡಿದ್ದು, 2018-19ನೇ ಶೈಕ್ಷಣಿಕ ವರ್ಷಕ್ಕೆ ಪ್ರವೇಶ ಪಡೆದಿರುವಂತಹ 86 ವಿದ್ಯಾರ್ಥಿಗಳಿಗೆ ಹಾಸ್ಟೆಲ್ ಸೌಲಭ್ಯವನ್ನು ಒದಗಿಸಲಾಗಿದೆಯೆಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸಮಿತಿಯು ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |

| | | | | |
|---|---|---|---|---|
| 15 | 6041<br>ಚು.ರ.ಪ್ರ: 786<br>ಶ್ರೀ ರಾಮಚಂದ್ರಗೌಡ<br>ವಿಪನದಿ:20.03.2017 | ಬೌರಿಂಗ್ ಮತ್ತು ಲೇಡಿ ಕರ್ಜನ್ ಆಸ್ಪತ್ರೆಯು ವೈದ್ಯಕೀಯ ಕಾಲೇಜ್‌ನ್ನಾಗಿ ಮೇಲ್ದರ್ಜೆಗೇರಿಸುತ್ತಿರುವ ಕಾರಣದಿಂದಾಗಿ ಅಲ್ಲಿರುವ ನರ್ಸಿಂಗ್ ಕಾಲೇಜ್ ಕಟ್ಟಡವನ್ನು ಕೆಡವುತ್ತಿರುವುದರಿಂದ ನರ್ಸಿಂಗ್ ಕಾಲೇಜಿನಲ್ಲಿ ತರಬೇತಿ ಹಾಗೂ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಪರ್ಯಾಯ ವ್ಯವಸ್ಥೆ ಮಾಡುವ ಬಗ್ಗೆ. | ಬೌರಿಂಗ್ ಮತ್ತು ಲೇಡಿ ಕರ್ಜನ್ ಆಸ್ಪತ್ರೆಯ ಆವರಣದಲ್ಲಿ ಇತ್ತೀಚೆಗಷ್ಟೆ ನಿರ್ಮಾಣವಾಗಿರುವ ವೈದ್ಯರ ಮತ್ತು ಶುಶ್ರೂಷಕರ ವಸತಿ ಗೃಹದಲ್ಲಿ ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ (ಬಿ.ಎಂ.ಸಿ.ಆರ್.ಐ) 380 ಎಂ.ಬಿ.ಬಿ.ಎಸ್ ವಿದ್ಯಾರ್ಥಿಗಳನ್ನು ವಸತಿ ಸೌಲಭ್ಯ ಕಲ್ಪಿಸಿದ್ದು, ಈ ವಿದ್ಯಾರ್ಥಿಗಳನ್ನು ಬಿಎಂಸಿಆರ್ಐ ಸಂಸ್ಥೆಯ ಅಧೀನದಲ್ಲಿ ಹೊಸದಾಗಿ ನಿರ್ಮಿಸಲಾಗಿರುವ ವಿದ್ಯಾರ್ಥಿ ಹಾಗೂ ವಿದ್ಯಾರ್ಥಿನಿಯರ ವಸತಿ ಗೃಹಕ್ಕೆ ಸ್ಥಳಾಂತರಿಸಲಾಗುವುದು. ತದನಂತರದಲ್ಲಿ ನರ್ಸಿಂಗ್ ಶಾಲೆಯಲ್ಲಿ ತರಬೇತಿ ಹಾಗೂ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಬೌರಿಂಗ್ ಮತ್ತು ಲೇಡಿ ಕರ್ಜನ್ ಆಸ್ಪತ್ರೆಯ ಆವರಣದಲ್ಲಿರುವ ವಸತಿ ಗೃಹದ ನೆಲಮಹಡಿಯಲ್ಲಿ ಅಡುಗೆ ಮನೆ ಹಾಗೂ ಡೈನಿಂಗ್ ಹಾಲ್ ಸೌಕರ್ಯ, 1ನೇ ಮಹಡಿಯಲ್ಲಿ ನರ್ಸಿಂಗ್ ವಿದ್ಯಾರ್ಥಿಗಳಿಗೆ ತರಗತಿ ಕೊಠಡಿಗಳು 2ನೇ ಮಹಡಿಯಲ್ಲಿ ಬೋಧಕ ಸಿಬ್ಬಂದಿಗೆ ಕೊಠಡಿಗಳ ವ್ಯವಸ್ಥೆ ಹಾಗೂ 3 ರಿಂದ 8ನೇ ಮಹಡಿಯವರೆಗೆ ನರ್ಸಿಂಗ್ | ದಿನಾಂಕ: 17.9.2018ರಲ್ಲಿ ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು. ಬೌರಿಂಗ್ & ಲೇಡಿ ಕರ್ಜನ್ ಆಸ್ಪತ್ರೆಯ ಆವರಣದಲ್ಲಿ ನರ್ಸಿಂಗ್ ಶಾಲೆ ಮತ್ತು ಸದರಿ ಶಾಲೆ ವಿದ್ಯಾರ್ಥಿಗಳಿಗಾಗಿ ವಸತಿಗೃಹದ ಸೌಲಭ್ಯವಿತ್ತು.<br><br>ಇತ್ತೀಚೆಗೆ ವೈದ್ಯಕೀಯ ಕಾಲೇಜಿನ ನೂತನ ಕಟ್ಟಡದ ನಿರ್ಮಾಣ ಕಾರ್ಯ ಪ್ರಾರಂಭವಾಗಿರುವುದರಿಂದ ನರ್ಸಿಂಗ್ ಶಾಲೆ ಮತ್ತು ವಸತಿ ಗೃಹದ ಕಟ್ಟಡವನ್ನು ಕೆಡವಲಾಗಿದೆ. ಆದ್ದರಿಂದ, ಈ ಆಸ್ಪತ್ರೆಯಲ್ಲಿನ ವೈದ್ಯರ ಮತ್ತು ಶುಶ್ರೂಷಕರ 8 ಮಹಡಿಗಳುಳ್ಳ ವಸತಿ ಗೃಹದಲ್ಲಿ ಶುಶ್ರೂಷಾ ಶಾಲೆ ಹಾಗೂ ವಿದ್ಯಾರ್ಥಿನಿಯರಿಗೆ ವಸತಿ ಗೃಹದ ಅನುಕೂಲತೆಗಳನ್ನು ಒದಗಿಸಲಾಗಿರುತ್ತದೆ.<br><br>ಸದರಿ ಕಟ್ಟಡದ ನೆಲಮಹಡಿಯಲ್ಲಿ ವಿದ್ಯಾರ್ಥಿಗಳಿಗೆ ಅಡುಗೆ ಮನೆ ಸೌಕರ್ಯ ಹಾಗೂ ಡೈನಿಂಗ್ ಹಾಲ್ ಸೌಕರ್ಯ ಕಲ್ಪಿಸಲಾಗಿದೆ. 1ನೇ ಮಹಡಿಯಲ್ಲಿ ನರ್ಸಿಂಗ್ ವಿದ್ಯಾರ್ಥಿಗಳಿಗೆ ತರಗತಿಗಳನ್ನು ತೆಗೆದುಕೊಳ್ಳಲು ಅನುಕೂಲತೆ, 2ನೇ ಮಹಡಿಯಲ್ಲಿ ಸಿಬ್ಬಂದಿ ಕೊಠಡಿಗಳ ವ್ಯವಸ್ಥೆ ಹಾಗೂ 3 ರಿಂದ 8ನೇ ಮಹಡಿಯವರೆಗೆ ನರ್ಸಿಂಗ್ ವಿದ್ಯಾರ್ಥಿನಿಯರಿಗೆ ವಸತಿ ಸೌಲಭ್ಯವನ್ನು ಒದಗಿಸಲು ವ್ಯವಸ್ಥೆ ಮಾಡಲಾಗಿದೆ. ಹೀಗಾಗಿ ಪರ್ಯಾಯ ವ್ಯವಸ್ಥೆ ಮಾಡಿದ ನಂತರವೇ ಹಳೆಯ ಕಟ್ಟಡವನ್ನು ಕೆಡವಲಾಗಿರುತ್ತದೆಯೆಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ, ಸಮಿತಿಯು ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |

| | | | | |
|---|---|---|---|---|
| | | | ವಿದ್ಯಾರ್ಥಿನಿಯರಿಗೆ ವಸತಿ ಸೌಲಭ್ಯವನ್ನು ಒದಗಿಸಲು ವ್ಯವಸ್ಥೆ ಮಾಡುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ. ಪರ್ಯಾಯ ವ್ಯವಸ್ಥೆ ಕಲ್ಪಿಸಿದ ನಂತರವೇ ಈಗಿರುವ ಶುಶ್ರೂಷಾ ಶಾಲೆಯ ಕಟ್ಟಡವನ್ನು ಕೆಡವಲು ಕ್ರಮ ವಹಿಸಲಾಗುವುದು ಎಂದು ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ತಿಳಿಸಿದರು. | |
| 16 | 6043<br>ಚು.ರ.ಪ್ರ; 4334<br>ಶ್ರೀಮತಿ ಎಸ್. ವೀಣಾ ಅಚ್ಚಯ್ಯ<br>ವಿಪನದಿ:20.11.2017 | ಕೊಡಗು ವೈದ್ಯಕೀಯ ವಿಜ್ಞಾನ ಸಂಸ್ಥೆಯ ಕಟ್ಟಡ ಕಾಮಗಾರಿಗಳ ವಿಳಂಬದ ಬಗ್ಗೆ. | ಪ್ರಸ್ತುತ ಸದರಿ ಕಟ್ಟಡ ಕಾಮಗಾರಿಗಳು ಅಂತಿಮ ಹಂತದಲ್ಲಿದ್ದು, ಮಾರ್ಚ್-2018ರ ಕಾಲಮಿತಿ ಯೊಳಗೆ ಪೂರ್ಣಗೊಳಿಸಲಾಗುವುದು. ಸದರಿ ಸಂಸ್ಥೆಯ ವಿದ್ಯಾರ್ಥಿ ನಿಲಯ, ವೈದ್ಯರ ಮತ್ತು ಗ್ರೂಪ್-ಡಿ ವಸತಿ ಗೃಹಗಳು ಮತ್ತು ಆಸ್ಪತ್ರೆಯ ಕಟ್ಟಡ ನಿರ್ಮಾಣ ಕಾಮಗಾರಿಗಳನ್ನು ಎರಡನೇ ಹಂತದಲ್ಲಿ ರೂ. 227.00 ಕೋಟಿಗಳ ಮೊತ್ತದಲ್ಲಿ ಕೈಗೊಳ್ಳಲು ಕೆ.ಹೆಚ್.ಎಸ್.ಡಿ.ಆರ್.ಪಿ. ವತಿಯಿಂದ ಅಂದಾಜು ಪಟ್ಟಿಯನ್ನು ಪಡೆಯಲಾಗಿದೆ. ಸದರಿ ಕಾಮಗಾರಿಗಳನ್ನು ಅನುದಾನದ ಲಭ್ಯತೆಗೆ ಅನುಗುಣವಾಗಿ ಹಂತ ಹಂತವಾಗಿ ಕೈಗೊಳ್ಳಲು ಪರಿಶೀಲಿಸಲಾಗುವುದು ಎಂದು | ದಿನಾಂಕ: 17.9.2018ರಲ್ಲಿ ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು. ಕೊಡಗು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಕಟ್ಟಡ ಕಾಮಗಾರಿಗಳನ್ನು ಕೈಗೊಳ್ಳಲು ಪರಿಷ್ಕೃತ ಅಂದಾಜು ಮೊತ್ತ ರೂ. 227.62 ಕೋಟಿಗಳಿಗೆ ಸರ್ಕಾರಿ ಆದೇಶ ಸಂಖ್ಯೆ: ಆಕುಕ 52 ಎಂಪಿಎಸ್ 2018(1), ಬೆಂಗಳೂರು, ದಿನಾಂಕ: 9.3.2018ರಲ್ಲಿ ಅನುಮೋದನೆ ನೀಡಲಾಗಿದೆ.<br><br>ಕೊಡಗು ವೈದ್ಯಕೀಯ ವಿಜ್ಞಾನ ಸಂಸ್ಥೆಗೆ ಸಂಬಂಧಿಸಿದಂತೆ 3-ಆಡಳಿತ ಮತ್ತು ಬೋಧಕ ಕಟ್ಟಡಗಳು, ನೆಲಮಹಡಿ ಮತ್ತು 3 ಅಂತಸ್ತಿನ ಕಟ್ಟಡಗಳಾಗಿದ್ದು, ಇದರಲ್ಲಿ ನೆಲಮಹಡಿ ಹಾಗೂ 2ನೇ ಮಹಡಿ ಅಂತಸ್ತಿನವರೆಗೆ ಕಾಮಗಾರಿಯು ಪೂರ್ಣಗೊಂಡು ಬಳಕೆಯಲ್ಲಿರುತ್ತದೆ. 3ನೇ ಮಹಡಿಯ ಕಾಮಗಾರಿಯು ಮುಕ್ತಾಯ ಹಂತದಲ್ಲಿರುತ್ತದೆ.<br>ಬಾಲಕ ಮತ್ತು ಬಾಲಕಿಯರ ವಸತಿ ಗೃಹಗಳು, ಬಾಲಕರ ವಸತಿ ಗೃಹವು ನೆಲಮಹಡಿ ಮತ್ತು 3 ಅಂತಸ್ತಿನ ಕಟ್ಟಡವಾಗಿದ್ದು, 2ನೇ ಮಹಡಿವರೆಗೆ ಪೂರ್ಣಗೊಂಡು ಬಳಕೆಯಲ್ಲಿರುತ್ತದೆ. 3ನೇ ಮಹಡಿಯ ಕಾಮಗಾರಿಯು ಮುಕ್ತಾಯ ಹಂತದಲ್ಲಿರುತ್ತದೆ. |

| | | | | |
|---|---|---|---|---|
| | | | ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ತಿಳಿಸಿದರು. | ಬಾಲಕಿಯರ ವಸತಿ ಗೃಹವು ನೆಲಮಹಡಿ ಹಾಗೂ 2 ಅಂತಸ್ತಿನ ಕಟ್ಟಡವಾಗಿದ್ದು, ಕಾಮಗಾರಿಯು ಪೂರ್ಣಗೊಂಡು ಹಸ್ತಾಂತರಿಸಲಾಗಿರುತ್ತದೆ.<br>ಸಿಬ್ಬಂದಿ ವಸತಿ ಗೃಹಗಳು, ವೈದ್ಯಾಧಿಕಾರಿಗಳ ವಸತಿ ಗೃಹವು ನೆಲಮಹಡಿ ಹಾಗೂ ಮೊದಲನೇ ಮಹಡಿ ಕಟ್ಟಡವಾಗಿದ್ದು, ಎಲ್ಲಾ ರೀತಿಯಿಂದ ಪೂರ್ಣಗೊಂಡು ಹಸ್ತಾಂತರಿಸಲಾಗಿದೆ.<br>ಬೋಧಕೇತರ ವಸತಿ ಗೃಹವು ನೆಲಮಹಡಿ ಹಾಗೂ 3 ಅಂತಸ್ತಿನ ಕಟ್ಟಡವಾಗಿದ್ದು, ಪೂರ್ಣಗೊಳ್ಳುವ ಹಂತದಲ್ಲಿರುತ್ತದೆ.<br>ಸದರಿ ಸ್ಥಳವು ಗುಡ್ಡ ಪ್ರದೇಶವಾಗಿದ್ದು, ಎತ್ತರದ ಸ್ಥಳದಲ್ಲಿರುತ್ತದೆ. ಇದು ಅತೀ ಹೆಚ್ಚು ಮಳೆ ಬೀಳುವ ಪ್ರದೇಶವಾಗಿದ್ದು, ಸದರಿ ಸ್ಥಳಕೆ ಕಟ್ಟಡದ ಸಾಮಾಗ್ರಿಗಳನ್ನು ಸಾಗಿಸುವಲ್ಲಿ ರಸ್ತೆ ಇಲ್ಲದಿದ್ದುದರಿಂದ, ನೂತನವಾಗಿ ರಸ್ತೆಯನ್ನು ನಿರ್ಮಾಣ ಮಾಡಬೇಕಾಗಿದ್ದರಿಂದ ಕಟ್ಟಡದ ಪ್ರಗತಿಯಲ್ಲಿ ವಿಳಂಬವಾಗಿರುತ್ತದೆ. ಬಾಕಿ ಇರುವ ಎಲ್ಲಾ ಕಾಮಗಾರಿಗಳನ್ನು ಡಿಸೆಂಬರ್-2018ರೊಳಗೆ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆಯೆಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ, ಈ ಭರವಸೆಯನ್ನು ಮುಕ್ತಾಯಗೊಳಿಸಲು ಸಮಿತಿಯು ತೀರ್ಮಾನಿಸಿತು. |
| 17 | 6044<br>ಚು.ರ.ಪ್ರ; 4212<br>ಶ್ರೀ ಭಾನುಪ್ರಕಾಶ್<br>ವಿಪನದಿ:20.11.2017 | ರಾಜ್ಯದ ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿ ಕಾಂಕ್ಲಿಯರ್ ಇಂಪ್ಲಾಟ್ ಶಸ್ತ್ರ ಚಿಕಿತ್ಸೆ ಸೌಲಭ್ಯ ಹಾಗೂ ಮೆಡಿಕಲ್ ಕಾಲೇಜುಗಳಲ್ಲಿ ಶಸ್ತ್ರ ಚಿಕಿತ್ಸೆಯನ್ನು ಒದಗಿಸುವ ಕುರಿತು. | ಕೇಂದ್ರ ಸರ್ಕಾರದ ಮಹತ್ವದ ಯೋಜನೆ NPPCD ಸಹಕಾರದಿಂದ ರಾಜ್ಯದ ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿ ಕಾಂಕ್ಲಿಯರ್ ಇಂಪ್ಲಾಟ್ ಶಸ್ತ್ರ ಚಿಕಿತ್ಸೆ ಸೌಲಭ್ಯ ಒದಗಿಸುವ ಕುರಿತು ಪರಿಶೀಲಿಸಲಾಗುವುದು. ಪ್ರಸ್ತುತ ರಾಜ್ಯದ ಯಾವುದೇ ಸ್ವಾಯತ್ತ ವೈದ್ಯಕೀಯ ಕಾಲೇಜುಗಳಲ್ಲಿ B.Sc., | ದಿನಾಂಕ: 17.9.2018ರಲ್ಲಿ ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು. ಕೇಂದ್ರ ಸರ್ಕಾರದ ಮಹತ್ವದ ಯೋಜನೆ ಎನ್‌ಪಿಪಿಸಿಡಿ ಸಹಕಾರದಿಂದ ವೈದ್ಯಕೀಯ ಕಾಲೇಜುಗಳಲ್ಲಿ ಕಾಂಕ್ಲಿಯರ್ ಇಂಪ್ಲಾಂಟ್ ಶಸ್ತ್ರಚಿಕಿತ್ಸೆ ಸೌಲಭ್ಯ ಒದಗಿಸುವಂತೆ ಯಾವುದೇ ಪ್ರಸ್ತಾವನೆಗಳು ವೈದ್ಯಕೀಯ ಕಾಲೇಜುಗಳಿಂದ ಬಂದಿರುವುದಿಲ್ಲ.<br>ಬಿ.ಎಸ್ಸಿ., (ಸ್ಪೀಚ್ ಅಂಡ್ ಹಿಯರಿಂಗ್) ಕೋರ್ಸ್ ಪ್ರಾರಂಭಿಸಲು ಅಗತ್ಯವಿರುವ ಸ್ಥಳಾವಕಾಶ, ಉಪಕರಣಗಳನ್ನು ಹಾಗೂ ಸಿಬ್ಬಂದಿಗಳ ಲಭ್ಯತೆಯೊಂದಿಗೆ ಬಿ.ಎಸ್ಸಿ., ಸ್ಪೀಚ್ & ಹಿಯರಿಂಗ್ |

| | | | | |
|---|---|---|---|---|
| | | | (Speech & Hearing) ಕೋರ್ಸ್ ಪ್ರಾರಂಭಿಸಲು ಅಗತ್ಯ ವ್ಯವಸ್ಥೆ ಇರುವುದಿಲ್ಲ. ಆದರೆ, ಮುಂದಿನ ದಿನಗಳಲ್ಲಿ ಸ್ವಾಯತ್ತ ಸಂಸ್ಥೆಗಳಲ್ಲಿ ಸದರಿ ಕೋರ್ಸನ್ನು ಪ್ರಾರಂಭಿಸಲು ಅಗತ್ಯವಿರುವ ಸ್ಥಳಾವಕಾಶ, ಉಪಕರಣಗಳನ್ನು ಹಾಗೂ ಸಿಬ್ಬಂದಿಗಳ ಲಭ್ಯತೆಗಳನ್ನು ಪರಿಗಣಿಸಿ ಸ್ವಾಯತ್ತ ಸಂಸ್ಥೆಗಳು ಬೇಡಿಕೆ ಸಲ್ಲಿಸಿದಲ್ಲಿ, ಸದರಿ ಕೋರ್ಸ್‌ನ್ನು ಪ್ರಾರಂಭಿಸುವ ಕುರಿತು ಪರಿಶೀಲನೆ ನಡೆಸಲಾಗುವುದು ಎಂದು ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ತಿಳಿಸಿದರು. | ಕೋರ್ಸ್‌ನ್ನು ಪ್ರಾರಂಭಿಸಲು ಸ್ವಾಯತ್ತ ಸಂಸ್ಥೆಗಳಿಂದ ಬೇಡಿಕೆ ಬಂದಿರುವುದಿಲ್ಲವೆಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ, ಈ ಭರವಸೆಯನ್ನು ಮುಕ್ತಾಯಗೊಳಿಸಲು ಸಮಿತಿಯು ತೀರ್ಮಾನಿಸಿತು. |
| 18 | 6045<br>ಚು.ರ.ಪ್ರ; 4319<br>ಶ್ರೀ ವಿಜಯ್ ಸಿಂಗ್<br>ವಿಪನದಿ:20.11.2017 | ಬೀದರ್‌ನ ಬಿಮ್ಸ್ ಆಸ್ಪತ್ರೆಗಾಗಿ ನಿರ್ಮಿಸಲಾಗಿರುವ ಹೊಸ ಕಟ್ಟಡಕ್ಕೆ ಬೋಧಕ ಆಸ್ಪತ್ರೆಯನ್ನು ಸ್ಥಳಾಂತರಿಸುವ ಕುರಿತು. | ಬೀದರ್ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ (ಬಿಮ್ಸ್), ಬೀದರ್ ಇಲ್ಲಿ ಹೊಸದಾಗಿ ನಿರ್ಮಿಸಲಾಗಿರುವ ಬೋಧನಾ ಆಸ್ಪತ್ರೆಯ ಹೊಸ ಕಟ್ಟಡಕ್ಕೆ ಈಗಾಗಲೇ ಡಯಾಗ್ನೋಸ್ಟಿಕ್ ಕೇಂದ್ರವನ್ನು ಸ್ಥಳಾಂತರಿಸಲಾಗಿದ್ದು, ಎಲ್ಲಾ ರೀತಿಯ ಪರೀಕ್ಷೆಗಳನ್ನು ಈಗಾಗಲೇ ನಡೆಸಲಾಗುತ್ತಿದೆ. ಉಳಿದ ಎಲ್ಲಾ ವಿಭಾಗಗಳನ್ನು ನವೆಂಬರ್-2017ರ ಒಳಗಾಗಿ ಹೊಸದಾಗಿ ನಿರ್ಮಿಸಿದ ಆಸ್ಪತ್ರೆಗೆ ಸ್ಥಳಾಂತರಿಸಲು ಕ್ರಮವಹಿಸಲಾಗಿದೆ ಎಂದು ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ತಿಳಿಸಿದರು. | ದಿನಾಂಕ: 17.9.2018ರಲ್ಲಿ ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು. ಬೀದರ್ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ (ಬ್ರಿಮ್ಸ್) ಬೀದರ್ ಇಲ್ಲಿ ಹೊಸದಾಗಿ ನಿರ್ಮಿಸಲಾಗಿರುವ ಬೋಧನಾ ಆಸ್ಪತ್ರೆಯ ಹೊಸ ಕಟ್ಟಡಕ್ಕೆ ಡಯಾಗ್ನೋಸ್ಟಿಕ್ ಕೇಂದ್ರದ ಜೊತೆಗೆ ಓ.ಬಿ.ಜಿ. ವಿಭಾಗ, ಮಕ್ಕಳ ವಿಭಾಗ, ಆರ್ಥೋಪೇಡಿಕ್ ವಿಭಾಗ ಮತ್ತು ಸರ್ಜರಿ ವಿಭಾಗಗಳು, ತುರ್ತು ಚಿಕಿತ್ಸಾ ಘಟಕ, ಓ.ಟಿ ಹಾಗೂ ಎಂ.ಆರ್.ಡಿಗಳನ್ನು ನೂತನ ಆಸ್ಪತ್ರೆಯ ಕಟ್ಟಡಕ್ಕೆ ಸ್ಥಳಾಂತರಿಸಲಾಗಿದ್ದು, ಆಸ್ಪತ್ರೆಯು ಪೂರ್ಣ ಪ್ರಮಾಣದಲ್ಲಿ ಈಗಾಗಲೇ ಕಾರ್ಯನಿರ್ವಹಿಸುತ್ತಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ, ಈ ಭರವಸೆಯನ್ನು ಮುಕ್ತಾಯಗೊಳಿಸಲು ಸಮಿತಿಯು ತೀರ್ಮಾನಿಸಿತು. |

| | | | | |
|---|---|---|---|---|
| 19 | 4511<br>ಚು.ಗು.ಪ್ರ: 1103<br>ಶ್ರೀ ಮರಿತಿಬ್ಬೇಗೌಡ<br>ವಿಪನದಿ:<br>29-07-2013<br>(ದಿ:16.8.2018ರ ಸಮಿತಿ ಸಭೆಯಲ್ಲಿ ಈ ಭರವಸೆಯನ್ನು ಆರೋಗ್ಯ ಇಲಾಖೆಯಿಂದ ವೈದ್ಯಕೀಯ ಶಿಕ್ಷಣ ಇಲಾಖೆಗೆ ವರ್ಗಾಯಿಸಲಾಗಿದೆ) | ವೈದ್ಯಕೀಯ ಕಾಲೇಜುಗಳ ಬೋಧಕ ವೃಂದದ ವೈದ್ಯರುಗಳ ಬಡ್ತಿ ಮತ್ತು ಜೇಷ್ಠತೆಯಲ್ಲಿ ಆಗಿರುವ ತಾರತಮ್ಯವನ್ನು ಸರಿಪಡಿಸುವ ಕುರಿತು. | ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಈ ಹಿಂದೆ ಆಗಿರತಕ್ಕಂತಹ ತಪ್ಪನ್ನು ಸರಿಪಡಿಸುವ ಉದ್ದೇಶದಿಂದ 2009ರಲ್ಲಿ ವಿಲೀನಗೊಳಸಲಾಗಿದ್ದ ವೈದ್ಯರುಗಳನ್ನು ಅವರು ಕೆಲಸ ನಿರ್ವಹಿಸಿದ ಅವಧಿಯಿಂದಲೇ ಅಂದರೆ 2006ರಿಂದಲೇ ಜೇಷ್ಠತಾಪಟ್ಟಿಯಲ್ಲಿ ಮಾನ್ಯತೆ ಮಾಡಬೇಕೆಂದು ಆದೇಶ ಹೊರಡಿಸಿರುವ ವಿಚಾರವಾಗಿ ನ್ಯಾಯಾಲಯದಲ್ಲಿ ತಡೆಯಾಜ್ಞೆ ಯಾಗಿರುತ್ತದೆ. ಇದು ಈ ಹಿಂದೆ ಸೃಷ್ಟಿಸಲಾದ ಗೊಂದಲವಾಗಿ ರುವುದರಿಂದ ಎಂ.ಸಿ.ಐ. ನಿಯಮಾವಳಿಗಳ ಪ್ರಕಾರ ಇದನ್ನು ಪರಿಶೀಲನೆ ಮಾಡಿ ಯಾವುದು ಸೂಕ್ತ ಮತ್ತು ನ್ಯಾಯಬದ್ಧ ವಾಗಿರುತ್ತವೆ ಅದನ್ನು ಮಾಡಲು ಪ್ರಾಮಾಣಿಕ ಪ್ರಯತ್ನ ಮಾಡುವುದಾಗಿ ಮಾನ್ಯ ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು ತಿಳಿಸಿದರು. | ದಿನಾಂಕ: 17.9.2018ರಲ್ಲಿ ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು. ವೈದ್ಯಕೀಯ ಶಿಕ್ಷಣ ಇಲಾಖೆಯಡಿ ವೈದ್ಯಕೀಯ/ದಂತ ವೈದ್ಯಕೀಯ ಕಾಲೇಜು ಹಾಗೂ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳಲ್ಲಿ ಬೋಧಕ ವೃಂದದ ಬಡ್ತಿ ಮತ್ತು ಜೇಷ್ಠತೆಯಲ್ಲಿ ತಾರತಮ್ಯಗಳಾಗುತ್ತಿದ್ದು ಗಮನಕ್ಕೆ ಬಂದಿದ್ದು, ಸದರಿ ವಿಷಯಗಳನ್ನು ಸರಿಪಡಿಸುವ ನಿಟ್ಟಿನಲ್ಲಿ ಕೆಳಕಂಡಂತೆ ಕ್ರಮ ಕೈಗೊಳ್ಳಲಾಗುತ್ತಿದೆ.<br><br>ವೈದ್ಯಕೀಯ ಕಾಲೇಜುಗಳ ಬೋಧಕ ವೃಂದದ ವೈದ್ಯರುಗಳ ಬಡ್ತಿ ಪ್ರಕ್ರಿಯೆಯನ್ನು ಇಲಾಖಾ ಬಡ್ತಿ ಸಮಿತಿ (ಡಿಪಿಸಿ) ಸಭೆಗಳ ಮುಖಾಂತರ ಈ ಕೆಳಕಂಡಂತೆ ನಿರ್ವಹಿಸಲಾಗುತ್ತಿದೆ.<br><br>• ಸದರಿ ಸಭೆಯಲ್ಲಿ ಈ ಬೋಧಕ ಸಿಬ್ಬಂದಿಯನ್ನು ವೈದ್ಯಕೀಯ ಶಿಕ್ಷಣ ಇಲಾಖೆಯಡಿ ಸ್ವಾಯತ್ತ ವೈದ್ಯಕೀಯ/ದಂತ ವೈದ್ಯಕೀಯ ಕಾಲೇಜುಗಳ ಹಾಗೂ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳಲ್ಲಿ ವಿವಿಧ ಬೋಧಕ ವೃಂದದ ಖಾಲಿ ಹುದ್ದೆಗಳ ಲಭ್ಯತೆಯ ಮಾಹಿತಿಯ ಪಡೆಯಲಾಗುತ್ತದೆ.<br>• ಎಂಸಿಐ/ಡಿಸಿಐ ಮಾರ್ಗಸೂಚಿಗಳನುಸಾರ ಅರ್ಹತೆಯನ್ನು ಪರಿಗಣಿಸಲಾಗುತ್ತದೆ.<br>• ಬಡ್ತಿಗೆ ಅರ್ಹರಿರುವ ಅಭ್ಯರ್ಥಿಗಳ ವಿರುದ್ಧ ಇಲಾಖಾ ವಿಚಾರಣೆ/ಕ್ರಿಮಿನಲ್ ಮೊಕದ್ದಮೆ ಹೂಡಲಾಗಿಲ್ಲ/ಹೂಡಲು ಉದ್ದೇಶಿಸಿರುವುದಿಲ್ಲ ಎಂಬುದನ್ನು ಖಾತ್ರಿಪಡಿಸಿಕೊಳ್ಳಲಾಗುತ್ತದೆ.<br>• ತದನಂತರ ಅವರುಗಳ ವಾರ್ಷಿಕ ಕಾರ್ಯನಿರ್ವಹಣಾ ವರದಿಗಳನ್ನು ಪರಿಶೀಲಿಸಿ, ಎಲ್ಲಾ ರೀತಿಯಿಂದಲೂ ಅರ್ಹರಿದ್ದಲ್ಲಿ ಬಡ್ತಿಗಾಗಿ ಶಿಫಾರಸ್ಸು ಮಾಡಲಾಗುತ್ತದೆ. |

| | | | | |
|---|---|---|---|---|
| | | | | **<u>ವೈದ್ಯಕೀಯ ಕಾಲೇಜುಗಳ ಬೋಧಕ ವೃಂದದ ವೈದ್ಯರುಗಳ ಸೇವಾ ಜೇಷ್ಠತೆ:</u>**<br><br>• ಎಲ್ಲಾ ಸಂಸ್ಥೆಗಳಿಗೂ ಸಹ ಜೇಷ್ಠತಾ ಪಟ್ಟಿಯನ್ನು ಪ್ರತಿ ವರ್ಷ ಅಂತಿಮಗೊಳಿಸಿ ನಿಯಮಾನುಸಾರ ಜನವರಿ 1ನೇ ತಾರೀಖಿನಂದು ಸೂಚಿಸಲಾಗಿದೆ.<br>• ಹಾಗೆ ಅಂತಿಮಗೊಳಿಸುವ ಮುನ್ನ ಆಕ್ಷೇಪಣೆ ಸಲ್ಲಿಸಲು 10 ದಿವಸಗಳ ಅವಕಾಶ ನೀಡಲಾಗುತ್ತದೆ. ಸದರಿ ಆಕ್ಷೇಪಣೆಗಳನ್ನು ಪರಿಶೀಲಿಸಿ ನಂತರದಲ್ಲಿ ಅಗತ್ಯವಿದ್ದಲ್ಲಿ ಪುನ: ಸರಿಪಡಿಸಿ ಆಕ್ಷೇಪಣೆ ವಿವರವನ್ನೊಳಗೊಂಡ ಅಂತಿಮ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸಲಾಗುತ್ತದೆ.<br>• ಈ ಹಿಂದೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಡಿ ತಜ್ಞ ವೈದ್ಯರುಗಳಾಗಿ ಸೇವೆಯಲ್ಲಿದ್ದವರನ್ನು ವೈದ್ಯಕೀಯ ಶಿಕ್ಷಣ ಇಲಾಖೆಯಡಿ ಸ್ವಾಯತ್ತ ವೈದ್ಯಕೀಯ/ದಂತ ವೈದ್ಯಕೀಯ ಕಾಲೇಜುಗಳ ಹಾಗೂ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳಲ್ಲಿ ಬೋಧಕ ವೃಂದದ ಉಪನ್ಯಾಸಕ/ಸಹಾಯಕ ಪ್ರಾಧ್ಯಾಪಕ ಹುದ್ದೆಯಲ್ಲಿ ವಿಲೀನಗೊಳಿಸಲಾಗಿರುತ್ತದೆ. ವಿಲೀನಾತಿಗೊಂಡ ವೈದ್ಯರು ಪ್ರೋರೇಟ ಪೆನ್‌ಷನ್ ಪಡೆಯಲು ಅರ್ಹರಿದ್ದು, ಸದರಿ ವೈದ್ಯರು ವಿಲೀನಾತಿಗೊಂಡ ದಿನಾಂಕದಿಂದ ಸದರಿ ವೃಂದದ ಜೇಷ್ಠಾತಾ ಪಟ್ಟಿಯಲ್ಲಿ ಕಿರಿಯರನ್ನಾಗಿಸಿ ಜೇಷ್ಠತೆಯನ್ನು ನಿಗದಿಪಡಿಸಲಾಗುತ್ತದೆ.<br><br>ಮೇಲ್ಕಂಡಂತೆ ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಈ ಭರವಸೆಯನ್ನು ಮುಕ್ತಾಯಗೊಳಿಸಲು ಸಮಿತಿಯು ತೀರ್ಮಾನಿಸಿತು. |

<table>
<tr>
<td>20</td>
<td>4512<br>ಚು.ಗು.ಪ್ರ:115<br>ಶ್ರೀ ಪುಟ್ಟಣ್ಣ<br>ವಿಪನದಿ: 29-07-2013<br>(ದಿ:16.8.2018ರ ಸಮಿತಿ ಸಭೆಯಲ್ಲಿ ಈ ಭರವಸೆಯನ್ನು ಆರೋಗ್ಯ ಇಲಾಖೆಯಿಂದ ವೈದ್ಯಕೀಯ ಶಿಕ್ಷಣ ಇಲಾಖೆಗೆ ವರ್ಗಾಯಿಸಲಾಗಿದೆ)</td>
<td>ಸರ್ಕಾರಿ ಆಸ್ಪತ್ರೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸೂಪರ್ ಸ್ಪೆಷಾಲಿಟಿ ವೈದ್ಯರಿಗೆ ಸರ್ಕಾರದ ವತಿಯಿಂದ ಪ್ರೋತ್ಸಾಹಧನ ನೀಡುವ ಕುರಿತು.</td>
<td>ಈ ವಿಚಾರವನ್ನು ಪರಿಶೀಲನೆ ಮಾಡುತ್ತೇವೆ ಅಗತ್ಯಬಿದ್ದರೆ ಪರಿಗಣಿಸುತ್ತೇವೆಂದು ಮಾನ್ಯ ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು ತಿಳಿಸಿದರು.</td>
<td>ದಿನಾಂಕ: 17.9.2018ರಲ್ಲಿ ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು. ವೈದ್ಯಕೀಯ ಶಿಕ್ಷಣ ವ್ಯಾಪ್ತಿಯಲ್ಲಿ ಬರುವ ಸರ್ಕಾರಿ ಸ್ವಾಯತ್ತ ಸಂಸ್ಥೆಗಳಲ್ಲಿ ರಾಜ್ಯ ವೇತನ ಶ್ರೇಣಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಎಂಓ/ಐಸಿಎಂಓ ಆಗಿ ಕರ್ತವ್ಯ ನಿರ್ವಹಿಸುತ್ತಿರುವ ವೈದ್ಯರುಗಳಿಗೆ ದಿ: 21.7.2018ರಿಂದ ಜಾರಿಗೆ ಬರುವಂತೆ ಈ ಕೆಳಕಂಡಂತೆ ವಿಶೇಷ ಭತ್ಯೆಗಳನ್ನು ಮಂಜೂರು ಮಾಡಿ ಆದೇಶಿಸಿದೆ.
<table>
<tr><th>ಸೇವಾವಧಿ</th><th>ಸೂಪರ್ ಸ್ಪೆಷಾಲಿಟಿ ವಿದ್ಯಾರ್ಹತೆ ಹೊಂದಿದವರಿಗೆ ಪಿ.ಜಿ. ಭತ್ಯೆ</th></tr>
<tr><td>0-6 ವರ್ಷ ಸೇವೆ ಸಲ್ಲಿಸಿದವರಿಗೆ</td><td>50,800</td></tr>
<tr><td>6-13 ವರ್ಷ ಸೇವೆ ಸಲ್ಲಿಸಿದವರಿಗೆ</td><td>52,100</td></tr>
<tr><td>13-2 ವರ್ಷ ಸೇವೆ ಸಲ್ಲಿಸಿದವರಿಗೆ</td><td>58,400</td></tr>
<tr><td>ಪ್ರತಿ ವರ್ಷ ಹೆಚ್ಚಳ</td><td>6,000</td></tr>
</table>
ಇಲಾಖಾಧಿಕಾರಿಗಳು ನೀಡಿದ ಮೇಲ್ಕಂಡ ಉತ್ತರವನ್ನು ಒಪ್ಪಿ, ಈ ಭರವಸೆಯನ್ನು ಮುಕ್ತಾಯಗೊಳಿಸಲು ಸಮಿತಿಯು ತೀರ್ಮಾನಿಸಿತು.</td>
</tr>
</table>

**ಲೋಕೋಪಯೋಗಿ ಇಲಾಖೆ**

| ಕ್ರಮ ಸಂಖ್ಯೆ | ಆಶ್ವಾಸನೆ ಸಂಖ್ಯೆ ಆಧಾರ ಮತ್ತು ದಿನಾಂಕ | ವಿಷಯ | ಆಶ್ವಾಸನೆ | ತಗೆದುಕೊಂಡ ಕ್ರಮ |
|---|---|---|---|---|
| 1 | 4288<br>ಚು.ರ.ಪ್ರ: 351<br>ಶ್ರೀ ಬಿ.ಜೆ.ಪುಟ್ಟಸ್ವಾಮಿ<br>ವಿಪನದಿ:16.7.2013 | ರಾಜ್ಯ ಮತ್ತು ರಾಷ್ಟ್ರೀಯ ಹಾಗೂ ಇತರೆ ರಸ್ತೆಗಳಿಗೆ ಅಡ್ಡಲಾಗಿ ರಸ್ತೆ ಉಬ್ಬುಗಳನ್ನು ಅವೈಜ್ಞಾನಿಕವಾಗಿ ನಿರ್ಮಿಸಿರುವ ಕುರಿತು | ಸಾರ್ವಜನಿಕರ ಹಾಗೂ ಸ್ಥಳೀಯರ ಪ್ರತಿರೋಧ ವ್ಯಕ್ತವಾಗಿದ್ದು, ಇವುಗಳನ್ನು ತೆಗೆದು ಹಾಕಲು ಸ್ಥಳೀಯರ ಮನವೊಲಿಸಿ ಅವೈಜ್ಞಾನಿಕ ರಸ್ತೆ ಉಬ್ಬುಗಳನ್ನು ತೆಗೆದು ಹಾಕಲು ಕ್ರಮಕೈಗೊಳ್ಳಲಾಗುವುದೆಂದು ಲೋಕೋಪಯೋಗಿ ಸಚಿವರು ತಿಳಿಸಿದರು. | ದಿನಾಂಕ: 09.10.2018ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು,<br>• ಲೋಕೋಪಯೋಗಿ ಇಲಾಖೆಯ ದಕ್ಷಿಣ ವಲಯದಲ್ಲಿ ಒಟ್ಟಾರೆಯಾಗಿ 2437 ರಸ್ತೆ ಉಬ್ಬುಗಳಿದ್ದು ಅವುಗಳಲ್ಲಿ 2157 ರಸ್ತೆ ಉಬ್ಬುಗಳನ್ನು ತೆರವುಗೊಳಿಸಿದ್ದು 208 ರಸ್ತೆ ಉಬ್ಬುಗಳನ್ನು ವೈಜ್ಞಾನಿಕವಾಗಿ ಮಾರ್ಪಾಡಿಸಲಾಗಿದೆ.<br>• ಲೋಕೋಪಯೋಗಿ ಇಲಾಖೆ ಉತ್ತರ ವಲಯದ ವ್ಯಾಪ್ತಿಯಲ್ಲಿ ಇಲ್ಲಿಯವರೆಗೆ ರಾಜ್ಯ ಹೆದ್ದಾರಿಗಳ ಮೇಲೆ 515 ಸಂಖ್ಯೆ ಅವೈಜ್ಞಾನಿಕ ರಸ್ತೆ ಉಬ್ಬುಗಳನ್ನು ಹಾಗೂ ಜಿಲ್ಲಾ ಮುಖ್ಯ ರಸ್ತೆಗಳ ಮೇಲೆ 385 ಸಂಖ್ಯೆ ಅವೈಜ್ಞಾನಿಕ ರಸ್ತೆ ಉಬ್ಬುಗಳನ್ನು ಗುರುತಿಸಲಾಗಿದೆ. ಅವುಗಳಲ್ಲಿ ರಾಜ್ಯ ಹೆದ್ದಾರಿಗಳ ಮೇಲೆ 496 ಸಂಖ್ಯೆ ಹಾಗೂ ಜಿಲ್ಲಾ ಮುಖ್ಯ ರಸ್ತೆಗಳ ಮೇಲೆ 378 ಸಂಖ್ಯೆ ಅವೈಜ್ಞಾನಿಕ ರಸ್ತೆ ಉಬ್ಬುಗಳನ್ನು ತೆರವುಗೊಳಿಸಲಾಗಿದೆ. ಮುಂದಿನ ದಿನಗಳಲ್ಲಿ ಬಾಕಿ ಉಳಿದಿರುವ ಅವೈಜ್ಞಾನಿಕ ರಸ್ತೆ ಉಬ್ಬುಗಳನ್ನು ತೆರವುಗೊಳಿಸಲು ಕ್ರಮ ಕೈಗೊಳ್ಳಲಾಗುವುದು<br>ಅವೈಜ್ಞಾನಿಕ ರಸ್ತೆ ಉಬ್ಬುಗಳನ್ನು ತೆರವುಗೊಳಿಸುವಾಗ ಸಾರ್ವಜನಿಕರ ಹಾಗೂ ಸ್ಥಳೀಯರ ಪ್ರತಿರೋಧ ವ್ಯಕ್ತವಾದಲ್ಲಿ, ಸ್ಥಳೀಯರಿಗೆ ಈ ಬಗ್ಗೆ ತಿಳಿಪಡಿಸಿ ಅವೈಜ್ಞಾನಿಕ ರಸ್ತೆ ಉಬ್ಬುಗಳನ್ನು ತೆರವುಗೊಳಿಸಲು ಹಾಗೂ ಸುರಕ್ಷತೆಯ ದೃಷ್ಟಿಯಿಂದ ಅವಶ್ಯವಿದ್ದಲ್ಲಿ ವೈಜ್ಞಾನಿಕ ರಸ್ತೆ ಉಬ್ಬುಗಳನ್ನು ನಿರ್ಮಿಸಲು ಕ್ರಮಕೈಗೊಳ್ಳಲಾಗುತ್ತಿದೆ. |

| | | | | |
|---|---|---|---|---|
| | | | | • ರಾಷ್ಟ್ರೀಯ ಹೆದ್ದಾರಿಯಲ್ಲಿ ಐಆರ್‌ಸಿ ನಿಯಮಾವಳಿಯ ಪ್ರಕಾರ ಹಾಗೂ ಕೇಂದ್ರ ಮಂತ್ರಾಲಯವು ಪ್ರಕಟಿಸಿರುವ ಕೈಪಿಡಿ ಅನುಸಾರ ಅವೈಜ್ಞಾನಿಕ ರಸ್ತೆ ಉಬ್ಬುಗಳನ್ನು ಹಾಕಲು ಅವಕಾಶವಿರುತ್ತದೆ.<br>ಈಗಾಗಲೇ ಚಾಲ್ತಿಯಲ್ಲಿರುವ ರಾಷ್ಟ್ರೀಯ ಹೆದ್ದಾರಿಯಲ್ಲಿ ಈವರೆಗೂ ಅವೈಜ್ಞಾನಿಕ ಉಬ್ಬುಗಳನ್ನು ಹಾಕಲು ಅವಕಾಶ ನೀಡಿರುವುದಿಲ್ಲ. ಹೊಸದಾಗಿ ಘೋಷಿತವಾಗಿರುವ ರಾಷ್ಟ್ರೀಯ ಹೆದ್ದಾರಿಯಲ್ಲಿ ರಾಜ್ಯ ಹೆದ್ದಾರಿಯಾಗಿದ್ದಾಗ ಅಳವಡಿಸಿದ್ದ ಅವೈಜ್ಞಾನಿಕ ರಸ್ತೆ ಉಬ್ಬುಗಳನ್ನು ತೆಗೆಯಲು ಕ್ರಮ ಕೈಗೊಳ್ಳಲಾಗುತ್ತಿದೆ. ಈ ರೀತಿ ಅವೈಜ್ಞಾನಿಕ ಉಬ್ಬುಗಳನ್ನು ನಿರ್ಮಿಸುತ್ತಿರುವವರನ್ನು ಗುರುತಿಸಿ ಅಂತಹವರ ಬಗ್ಗೆ ಸಂಬಂಧಿತ ಆರಕ್ಷಕ ಠಾಣೆಗೆ ದೂರು ನೀಡಲಾಗುವುದು ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಸಮಿತಿಯು ಒಪ್ಪಿ ಭರವಸೆಯನ್ನು ಮುಕ್ತಾಯಗೊಳಿಸಿತು. |
| 2 | 4293<br>ಚು.ಗು.ಪ್ರ. 1152<br>ಶ್ರೀ ಮರಿತಿಬ್ಬೇಗೌಡ<br>ವಿಪನದಿ: 30.07.2013 | ಮಂಡ್ಯ ಜಿಲ್ಲೆ, ಮಳವಳ್ಳಿ ಪಟ್ಟಣದ ರಾಷ್ಟ್ರೀಯ ಹೆದ್ದಾರಿ 209 ರಿಂದ 33ಕ್ಕೆ ಸಂಪರ್ಕ ಕಲ್ಪಿಸುವ ಪೇಟೆ ಬೀದಿಯ ಮೂಲಕ ಹಾದು ಹೋಗಿರುವ ಎಂಡಿಆರ್ ರಸ್ತೆ 1.36 ಕಿ.ಮೀ. ಉದ್ದದ ರಸ್ತೆ ಮಧ್ಯ ಭಾಗದಲ್ಲಿ ಒಳಚರಂಡಿ ಕಾಮಗಾರಿ ನಡೆಯುತ್ತಿದ್ದು, ಸದರಿ ರಸ್ತೆ ಕಾಮಗಾರಿಯನ್ನು ನಬಾರ್ಡ್ ಯೋಜನೆಯಿಂದ ಕೈಬಿಟ್ಟು, ಇದನ್ನು ಲೆಕ್ಕಶೀರ್ಷಿಕೆ 5054–ಔಡಿಜಿ | ಸದರಿ ರಸ್ತೆ ದುರಸ್ಥಿ ಕಾಮಗಾರಿಗೆ ರೂ.70.00 ಲಕ್ಷಗಳ ಅನುದಾನದ ಅಗತ್ಯವಿದ್ದು, 2013–14ನೇ ಸಾಲಿನ ಅನುದಾನದಲ್ಲಿ ತೆಗೆದುಕೊಳ್ಳ ಲಾಗುವುದು. ಲೆಕ್ಕ ಶೀರ್ಷಿಕೆ 5054–ಔಡಿಜಿ ಯೋಜನೆ ಅಡಿಯಲ್ಲಿಯೇ ರೂ.1.00 ಕೋಟಿ ಖರ್ಚು ಮಾಡಿ ಆ ರಸ್ತೆ ಕಾಮಗಾರಿಯನ್ನು ಆದಷ್ಟು ಬೇಗ ಮಾಡಿಕೊಡುತ್ತೇವೆ ಎಂದು ಮಾನ್ಯ ಲೋಕೋಪಯೋಗಿ ಸಚಿವರ ಪರವಾಗಿ ಕಾನೂನು ಸಚಿವರು ತಿಳಿಸಿದರು. | ದಿನಾಂಕ: 09.10.2018ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು, ಮಂಡ್ಯ ಜಿಲ್ಲೆ ಮಳವಳ್ಳಿ ಪಟ್ಟಣದ ಅನಂತರಾಮ್ ವೃತ್ತದಿಂದ ಪೇಟೆ ಬೀದಿ ಮೂಲಕ ಕನಕಪುರ ಎನ್.ಹೆಚ್. ರಸ್ತೆಗೆ ಸೇರುವ ರಸ್ತೆಯ<br>• ಸರಪಳಿ 0.00 ರಿಂದ 0.530 ಕಿ.ಮೀ. ವರೆಗಿನ ಉಳಿದಿದ್ದ ರಸ್ತೆ ಕಾಮಗಾರಿಯು 2016–2017 ಸಾಲಿನ ಅಪೆಂಡಿಕ್ಸ್ – ಇ ಯೋಜನೆ ಅಡಿಯಲ್ಲಿ ರೂ.100.00 ಲಕ್ಷಗಳ ಅಂದಾಜು ಮೊತ್ತಕ್ಕೆ ಮಂಜೂರಾಗಿರುತ್ತದೆ.<br>• ಸದರಿ ರಸ್ತೆಯ ಸರಪಳಿ 0.75 ರಿಂದ 1.02 ಕಿ.ಮೀ. ವರೆಗೆ ರಸ್ತೆ ಅಭಿವೃದ್ಧಿ ಕಾಮಗಾರಿಯನ್ನು 2016–17 ನೇ ಸಾಲಿನ 3054 –ನಿರ್ವಹಣೆ ಲೆಕ್ಕಶೀರ್ಷಿಕೆಯಡಿ ರೂ. 20.00 ಲಕ್ಷಗಳ ಅಂದಾಜು ಮೊತ್ತದ ರಸ್ತೆ ಅಭಿವೃದ್ಧಿ ಕಾಮಗಾರಿಯು ಪೂರ್ಣಗೊಂಡಿರುತ್ತದೆ. |

| | | | | |
|---|---|---|---|---|
| | | ರಡಿಯಲ್ಲಿ ತೆಗೆದುಕೊಂಡು ಪೂರ್ಣ ಮಾಡುವ ಬಗ್ಗೆ. | | ಉಳಿದಂತೆ ಸರಪಳಿ ಸದರಿ ರಸ್ತೆಯ ಸರಪಳಿ 0.53 ರಿಂದ 0.75 ಹಾಗೂ 1.02 ರಿಂದ 1.36 ಕಿ.ಮೀ. ವರೆಗೆ ರಸ್ತೆ ಅಭಿವೃದ್ಧಿಯನ್ನು ಪುರಸಭೆ ವತಿಯಿಂದ ಕೈಗೊಳ್ಳಲಾಗಿರುತ್ತದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಸಮಿತಿಯು ಒಪ್ಪಿ ಭರವಸೆಯನ್ನು ಮುಕ್ತಾಯಗೊಳಿಸಿತು. |
| 3 | 4302<br>ಚು.ರ.ಪ್ರ: 536<br>ಶ್ರೀ ಎಸ್. ನಾಗರಾಜ್ (ಸಂದೇಶ್ ನಾಗರಾಜ್)<br>ವಿಪನದಿ: 03.12.2013 | ಮೈಸೂರು–ನಂಜನಗೂಡು ರಸ್ತೆ ಅಗಲೀಕರಣದ ಕಾರ್ಯ ಯೋಜನೆಗಳು ಹಾಗೂ ಸದರಿ ರಸ್ತೆಯಲ್ಲಿ ಬರುವ ಮಂಡಕಳ್ಳಿಕೆರೆ, ದಳವಾಯಿಕೆರೆ, ಉಂಡಬತ್ತಿ ಕೆರೆಗಳ ಏರಿಯ ಅಗಲ ಕಡಿಮೆಯಿದ್ದು, ಹೆಚ್ಚು ವಾಹನ ಅಪಘಾತಗಳು ಸಂಭವಿಸುತ್ತಿರುವುದರಿಂದ ಈ ಕೆರೆ ಏರಿಯ ಮೇಲೆ ತಾತ್ಕಾಲಿಕವಾಗಿ ಕಬ್ಬಿಣದ ಗರ್ಡಲ್ಸ್‌ಗಳಿಂದ ತಡೆಗೋಡೆ ನಿರ್ಮಾಣ ಕುರಿತು. | ಮೈಸೂರು–ನಂಜನಗೂಡು ರಸ್ತೆಯು ರಾಷ್ಟ್ರೀಯ ಹೆದ್ದಾರಿ–212 ಕೋಜಿಕೋಡ್, ಕೊಳ್ಳೆಗಾಲ ರಸ್ತೆಯ ಒಂದು ಭಾಗವಾಗಿದ್ದು, ಇದನ್ನು ಅಭಿವೃದ್ಧಿಪಡಿಸಲು ಇ.ಪಿ.ಸಿ. ಮಾದರಿಯಡಿ ಅನುಮೋದಿಸಲು ಕೇಂದ್ರ ಭೂಸಾರಿಗೆ ಮಂತ್ರಾಲಯಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದ್ದು, ಪ್ರಸ್ತಾವನೆಗೆ ಅನುಮೋದನೆ ದೊರಕಿದ ನಂತರ ನಿಯಮಾನುಸಾರ ಟೆಂಡರ್ ಆಹ್ವಾನಿಸಿ ಕಾಮಗಾರಿಯನ್ನು ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುವುದು ಹಾಗೂ ರಾಷ್ಟ್ರೀಯ ಹೆದ್ದಾರಿ 212ರಲ್ಲಿ ಬರುವ ಎಲ್ಲಾ ಕೆರೆಗಳ ಏರಿಗಳನ್ನು ಸಂಚಾರ ಸುರಕ್ಷಿತವನ್ನಾಗಿಸಲು ಹೊಸದಾಗಿ ರೂ. 938.02 ಲಕ್ಷಗಳಿಗೆ ಪ್ರಸ್ತಾವನೆಯನ್ನು ಭೂ ಸಾರಿಗೆ ಮಂತ್ರಾಲಯ, ನವದೆಹಲಿಗೆ, ಮತ್ತೊಮ್ಮೆ ಸಲ್ಲಿಸಲಾಗಿದ್ದು, ಪ್ರಸ್ತಾವನೆಗೆ ಮಂಜೂರಾತಿ ದೊರೆತ ಕೂಡಲೇ ನಿಯಮಾನುಸಾರ | ದಿನಾಂಕ: 09–10–2018ರ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ಕೇಂದ್ರ ಭೂಸಾರಿಗೆ ಮತ್ತು ಹೆದ್ದಾರಿ ಮಂತ್ರಾಲಯದಿಂದ ದಿ: 24.1.2014ರಂದು ರಾಷ್ಟ್ರೀಯ ಹೆದ್ದಾರಿ–212ರ ಎರಡು ಪಥದ ರಸ್ತೆಯನ್ನು ನಾಲ್ಕು ಪಥದ ರಸ್ತೆಯನ್ನಾಗಿ ನಿರ್ಮಾಣ ಮಾಡಲು ರೂ. 419.40 ಕೋಟಿಗಳಿಗೆ ಅನುಮೋದನೆ ದೊರೆತಿರುತ್ತದೆ. ಮೈಸೂರು–ನಂಜನಗೂಡು ರಸ್ತೆಯು ರಾಷ್ಟ್ರೀಯ ಹೆದ್ದಾರಿ 212ರ ಒಂದು ಭಾಗವಾಗಿದ್ದು, ಮೈಸೂರಿನಿಂದ ನಂಜನಗೂಡಿನವರೆಗೆ ಒಟ್ಟು 19.70 ಕಿ.ಮೀ. ಉದ್ದವಿರುತ್ತದೆ. ಸದರಿ ಹೆದ್ದಾರಿಯ ಕಾಮಗಾರಿಯನ್ನು ದಿ: 20.6.2014ರಂದು ಮೆ.ದಿಲೀಪ್ ಬಿಲ್ಡ್‌ಕಾನ್ ಲಿಮಿಟೆಡ್, ಭೂಪಾಲ್ ಎಂಬ ಗುತ್ತಿಗೆದಾರರಿಗೆ ಇಪಿಸಿ ಯೋಜನೆಯಡಿ ಗುತ್ತಿಗೆ ವಹಿಸಲಾಗಿದ್ದು, ಸದರಿ ಗುತ್ತಿಗೆ ಕರಾರಿನ ಪ್ರಕಾರ ಕೆರೆ ಏರಿಗಳ ಮೇಲೆ W metal beam crash barrier ಅಳವಡಿಸಲಾಗಿರುತ್ತದೆ. ಪ್ರಸ್ತುತ ಕಾಮಗಾರಿಯು ಪೂರ್ಣಗೊಂಡಿದ್ದು ನಿರ್ವಹಣಾ ಅವಧಿಯಲ್ಲಿರುತ್ತದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಸಮಿತಿಯು ಒಪ್ಪಿ ಭರವಸೆಯನ್ನು ಮುಕ್ತಾಯಗೊಳಿಸಿತು. |

| | | | | |
|---|---|---|---|---|
| | | | ತಡೆಗೋಡೆ ನಿರ್ಮಿಸಲು ಕ್ರಮ ಕೈಗೊಳ್ಳ ಲಾಗುವುದೆಂದು ಮಾನ್ಯ ಲೋಕೋಪಯೋಗಿ ಸಚಿವರು ತಿಳಿಸಿರುತ್ತಾರೆ. | |
| 4 | 4304<br>ಚು.ರ.ಪ್ರ: 867<br>ಶ್ರೀ ಮೃತ್ಯಂಜಯ ಜಿನಗಾ<br>ವಿಪನದಿ: 03.12.2013 | ಬಳ್ಳಾರಿ–ಹೊಸಪೇಟೆ ರಾಷ್ಟ್ರೀಯ ಹೆದ್ದಾರಿ 63ರಲ್ಲಿ ತೋರಣಗಲ್ಲು ಬಳಿ ಇರುವ ಹೆಚ್‌ಎಲ್‌ಸಿ ಕಾಲುವೆಯ ಮೇಲ್ಸೇತುವೆ ಕುಸಿದಿದ್ದು, ಅದರ ದುರಸ್ಥಿ ಕಾರ್ಯವನ್ನು ಪೂರ್ಣಗೊಳಿಸಿ, ಸಂಚಾರಕ್ಕೆ ಅನುವು ಮಾಡುವ ಕುರಿತು. | ಈ ಸೇತುವೆಯು ರಾಷ್ಟ್ರೀಯ ಹೆದ್ದಾರಿ ಮೇಲೆ ಇದ್ದು, ಕೇಂದ್ರ ಭೂ ಮಂತ್ರಾಲಯದ ವ್ಯಾಪ್ತಿಗೆ ಬರುತ್ತದೆ. ಆದಾಗ್ಯೂ ಸಾರ್ವಜನಿಕರ ಸಂಚಾರಕ್ಕೆ ತೊಂದರೆಯಾಗಿರುವುದರಿಂದ, ಜಿಲ್ಲಾಧಿಕಾರಿಗಳು, ಬಳ್ಳಾರಿ ಇವರು ಒಂದು ಪ್ರಸ್ತಾವನೆಯನ್ನು ಸಲ್ಲಿಸಿದ್ದು, ಇದರ ಅನ್ವಯ ಸ್ಥಳೀಯ ಕೈಗಾರಿಕೋದ್ಯಮಿಗಳಿಂದ ವಂತಿಗೆ ಹಾಗೂ ಸಹಕಾರದೊಂದಿಗೆ ರೂ. 127.45 ಲಕ್ಷಗಳಲ್ಲಿ ಬಿದ್ದಿರುವ ಭಾಗವನ್ನು ಮಾತ್ರ ನಿರ್ಮಿಸಲು ಯೋಜಿಸಲಾಗಿದ್ದು, ಅದು ಪರಿಶೀಲನೆಯಲ್ಲಿದ್ದು ಶೀಘ್ರದಲ್ಲಿ ಕ್ರಮ ಕೈಗೊಳ್ಳಲಾಗುವುದೆಂದು ಮಾನ್ಯ ಲೋಕೋಪಯೋಗಿ ಸಚಿವರು ತಿಳಿಸಿದರು. | ದಿನಾಂಕ: 09–10–2018ರ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ರಾಷ್ಟ್ರೀಯ ಹೆದ್ದಾರಿ–63 ಬಳ್ಳಾರಿ–ಹೊಸಪೇಟೆ ರಸ್ತೆಯ ಸರಪಳಿ ಕಿ.ಮೀ. 312.600 ತೋರಣಗಲ್ಲು ಹತ್ತಿರವಿರುವ ನೀರಾವರಿ ಇಲಾಖೆಗೆ ಸಂಬಂಧಪಟ್ಟ ಹೆಚ್.ಎಲ್.ಸಿ. ಕಾಲುವೆಯ ಮೇಲ್ಸೇತುವೆಯು ದಿ: 07.09.2013ರಂದು ಕುಸಿದಿರುತ್ತದೆ. ಹಾಲಿ ಸೇತುವೆ ಸ್ಥಳದಲ್ಲಿ ಹೊಸದಾಗಿ ಮೇಲ್ಸೇತುವೆಯನ್ನು ಕೈಗಾರಿಕೋದ್ಯಮಿಗಳ ವಂತಿಗೆ ಹಾಗೂ ಸಹಕಾರದೊಂದಿಗೆ ಜಿಲ್ಲಾಡಳಿತದ ಉಸ್ತುವಾರಿಯಲ್ಲಿ ಮೆ: ಗ್ಯಾಮನ್ ಇಂಡಿಯಾ ಲಿ. ಕಂಪನಿ ವತಿಯಿಂದ ನಿರ್ಮಿಸಲಾಗಿದ್ದು, ದಿ: 17.03.2014ರಂದು ಸೇತುವೆ ಕಾಮಗಾರಿಯನ್ನು ಪೂರ್ಣಗೊಳಿಸಿ ವಾಹನಗಳ ಸಂಚಾರಕ್ಕೆ ಅನುವು ಮಾಡಿಕೊಡಲಾಗಿರುತ್ತದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಸಮಿತಿಯು ಒಪ್ಪಿ ಭರವಸೆಯನ್ನು ಮುಕ್ತಾಯಗೊಳಿಸಿತು. |
| 5 | 4306<br>ಚು.ಗು.ಪ್ರ: 331<br>ಶ್ರೀ ಘೋಟ್ನೇಕರ ಶ್ರೀಕಾಂತ ಲಕ್ಷ್ಮಣ<br>ವಿಪನದಿ: 28.01.2014 | ಕಾರವಾರ ಜಿಲ್ಲೆ, ಹೊನ್ನಾವರ ತಾಲ್ಲೂಕಿನ ಮಾವಿನಹೊಳೆ–ಕುದ್ರಗಿ ನಡುವೆ ಹಾಗೂ ಅಂಕೋಲಾ ತಾಲ್ಲೂಕಿನ ಮಂಜುಗೂಣಿ–ಗಂಗಾವಳಿ | Karnataka Road Development Corporation Limitedನಲ್ಲಿ ನಮ್ಮ ಹಣದ ಲಭ್ಯತೆಯನ್ನು ನೋಡಿಕೊಂಡು, ಸಾರ್ವಜನಿಕರ ಸಮಸ್ಯೆಗಳನ್ನು | ದಿನಾಂಕ:09–10–2018ರ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ,<br><br>1) ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ ತಾಲ್ಲೂಕಿನಲ್ಲಿ ಮಾವಿನಹೊಳೆ–ಕುದ್ರಗಿ ರಸ್ತೆಯಲ್ಲಿ ಶರಾವತಿ ನದಿಗೆ ಅಡ್ಡಲಾಗಿ ಸೇತುವೆ ನಿರ್ಮಾಣ ಕಾಮಗಾರಿಯನ್ನು ಸರ್ಕಾರದ ಆದೇಶದಂತೆ |

| | | | | |
|---|---|---|---|---|
| | | ನಡುವೆ ಸಾರ್ವಜನಿಕರಿಗೆ ಅನುಕೂಲವಾಗಲು ಸೇತುವೆ ನಿರ್ಮಿಸಬೇಕೆಂದು ಕಳೆದ 25 ವರ್ಷಗಳಿಂದ ಒತ್ತಾಯಿಸುತ್ತಾ ಬಂದರೂ, ಇಲ್ಲಿಯವರೆಗೆ ಸೇತುವೆ ನಿರ್ಮಾಣ ಕಾರ್ಯ ಆಗದಿರುವ ಬಗ್ಗೆ. | ಗಮನದಲ್ಲಿಟ್ಟುಕೊಂಡು ಸಂಪನ್ಮೂಲಗಳನ್ನು ಕ್ರೋಢೀಕರಿಸಿ ಸೇತುವೆ ನಿರ್ಮಾಣ ಮಾಡುವುದಕ್ಕೆ ಸರ್ಕಾರ ಪರಿಶೀಲನೆ ಮಾಡಿ ತೀರ್ಮಾನ ತೆಗೆದುಕೊಳ್ಳುತ್ತದೆಂದು ಮಾನ್ಯ ಲೋಕೋಪಯೋಗಿ ಸಚಿವರು ತಿಳಿಸಿದರು. | TURNKEY ಆಧಾರದ, ಪ್ಯಾಕೇಜ್ AIVರಲ್ಲಿ ಸೇರಿರುತ್ತದೆ. (ಸದರಿ ಪ್ಯಾಕೇಜ್ AIVರಲ್ಲಿ ಒಟ್ಟು ಸೇತುವೆ ಕಾಮಗಾರಿಗಳು ಒಳಗೊಂಡಿರುತ್ತವೆ).<br><br>ಪ್ಯಾಕೇಜ್ AIV ಸೇತುವೆ ಕಾಮಗಾರಿಗೆ ಟೆಂಡರ್‌ನ್ನು ದಿ: 01.09.2017ರಲ್ಲಿ ಕರೆದು, ಕಾಮಗಾರಿಯನ್ನು ಕನಿಷ್ಠ ಮೊತ್ತದ ಬಿಡ್‌ದಾರರಾದ ಕುಂದಾಪುರ ಇವರಿಗೆ ವಹಿಸಲಾಗಿದೆ. ಸದರಿಯವರೊಂದಿಗೆ ಗುತ್ತಿಗೆ ಕರಾರನ್ನು ದಿ: 02.03.2018 ರಂದು ಮಾಡಿಕೊಳ್ಳಲಾಗಿದೆ. ಗುತ್ತಿಗೆಯ ಒಟ್ಟು ಪ್ಯಾಕೇಜ್ ಮೊತ್ತ ರೂ. 27.65 ಕೋಟಿಗಳಾಗಿರುತ್ತದೆ. ಮಾವಿನಹೊಳೆ–ಕುದ್ರಗಿ ಸೇತುವೆಯನ್ನು ಪೂರ್ಣಗೊಳಿಸಲು 12 ತಿಂಗಳ ಕಾಲಾವಕಾಶ ನೀಡಲಾಗಿರುತ್ತದೆ. M/s. Philip D'Costa & Co., ಕುಂದಾಪುರ ಇವರು ಪ್ಯಾಕೇಜ್ AIV ರಲ್ಲಿ ಬರುವ ಸೇತುವೆ ಕಾಮಗಾರಿಯ ಬಗ್ಗೆ ಸರ್ವೆ, Geo Investigation ಮುಂತಾದ ಕಾರ್ಯಗಳನ್ನು ಕೈಗೊಂಡಿರುತ್ತದೆ.<br><br>(2) ಅಂಕೋಲಾ ತಾಲ್ಲೂಕಿನ ಮಂಜುಗುಣಿ ಗ್ರಾಮದಿಂದ ಕುಮಟಾ ತಾಲ್ಲೂಕಿನ ಗಂಗಾವಳಿ ಗ್ರಾಮಕ್ಕೆ ಸಂಪರ್ಕ ಕಲ್ಪಿಸಲು ಗಂಗಾವಳಿ ನದಿಗೆ ಸೇತುವೆ ನಿರ್ಮಾಣ ಕಾಮಗಾರಿಯನ್ನು ಸರ್ಕಾರದ ಆದೇಶದಂತೆ TURNKEY ಆಧಾರದ ಪ್ಯಾಕೇಜ್ ಮಾದರಿಯಲ್ಲಿ ಕೈಗೊಂಡಿದ್ದು, ಸದರಿ ಸೇತುವೆಯು ಪ್ಯಾಕೇಜ್ IV ರಲ್ಲಿ ಸೇರಿರುತ್ತದೆ. (ಸದರಿ ಪ್ಯಾಕೇಜ್ IV ರಲ್ಲಿ ಒಟ್ಟು 7 ಸೇತುವೆ ಕಾಮಗಾರಿಗಳು ಒಳಗೊಂಡಿರುತ್ತವೆ).<br><br>ಪ್ಯಾಕೇಜ್ IV ರ ಟೆಂಡರ್‌ನ್ನು ದಿ: 27.07.2017ರಲ್ಲಿ ಕರೆದು, ಕಾಮಗಾರಿಯನ್ನು ಕನಿಷ್ಠ ಬಿಡ್‌ದಾರರಾದ M/s. DRN |

| | | | | |
|---|---|---|---|---|
| | | | | Infrastructure ಹುಬ್ಬಳ್ಳಿ ಇವರಿಗೆ ವಹಿಸಲಾಗಿದೆ. ಸದರಿಯವರೊಂದಿಗೆ ಗುತ್ತಿಗೆ ಕರಾರನ್ನು ದಿ: 16.03.2018ರಂದು ಮಾಡಿಕೊಳ್ಳಲಾಗಿರುತ್ತದೆ. ಗುತ್ತಿಗೆಯ ಒಟ್ಟು ಪ್ಯಾಕೇಜ್ ಮೊತ್ತ ರೂ. 189.95 ಕೋಟಿಗಳಾಗಿರುತ್ತದೆ.<br>ಗಂಗಾವಳಿ ನದಿಗೆ ಸೇತುವೆ ನಿರ್ಮಾಣ ಕಾಮಗಾರಿಯನ್ನು ಪೂರ್ಣಗೊಳಿಸಲು 18 ತಿಂಗಳ ಕಾಲಾವಕಾಶ ನೀಡಲಾಗಿರುತ್ತದೆ. ಸೇತುವೆ ಕಾಮಗಾರಿ ಯನ್ನು ಗುತ್ತಿಗೆದಾರರ ಸ್ವಂತ ವಿನ್ಯಾಸದಡಿ TURNKEY ಆಧಾರದ ಮೇಲೆ M/s. DRN Infrastructure ಇವರಿಗೆ ವಹಿಸಲಾಗಿದ್ದು, ಪ್ಯಾಕೇಜ್ IV ರಲ್ಲಿ ಬರುವ ಸೇತುವೆ ಕಾಮಗಾರಿಯ ಸರ್ವೇ Geo Investigation ಮುಂತಾದ ಕಾರ್ಯಗಳನ್ನು ಕೈಗೊಂಡಿರುತ್ತದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಸಮಿತಿಯು ಒಪ್ಪಿ ಭರವಸೆಯನ್ನು ಮುಕ್ತಾಯಗೊಳಿಸಿತು. |
| 6 | 4310<br>ಚು.ರ.ಪ್ರ: 325<br>ಶ್ರೀ ಮರಿತಿಬ್ಬೇಗೌಡ<br>ವಿಪನದಿ: 28.01.2014 | ಬೆಂಗಳೂರು-ಮೈಸೂರು ನಡುವಿನ ಚತುಷ್ಪಥ ರಸ್ತೆಯಲ್ಲಿ ಅನಗತ್ಯವಾಗಿ ಅವೈಜ್ಞಾನಿಕವಾಗಿ ಹಾಕಿರುವ ರಸ್ತೆ ಉಬ್ಬುಗಳನ್ನು ತೆರವುಗೊಳಿಸಿ, ಅಗತ್ಯವಿರುವ ಕಡೆ ಮಾತ್ರ ವೈಜ್ಞಾನಿಕವಾಗಿ ರಸ್ತೆ ಉಬ್ಬುಗಳನ್ನು ಅಳವಡಿಸಲು ಕ್ರಮ ಕೈಗೊಳ್ಳುವ ಕುರಿತು. | ಈ ಸಂಬಂಧ ಗೃಹ ಇಲಾಖೆಗೆ ಪತ್ರ ಬರೆಯಲಾಗಿದ್ದು, ಸದರಿಯವರಿಂದ ವರದಿ ಬಂದ ನಂತರ ಅವೈಜ್ಞಾನಿಕವಾಗಿ ಹಾಕಿರುವ ರಸ್ತೆ ಉಬ್ಬುಗಳನ್ನು ತೆರವುಗೊಳಿಸಲು/ ವೈಜ್ಞಾನಿಕವಾಗಿ ರಸ್ತೆ ಉಬ್ಬುಗಳನ್ನು ನಿರ್ಮಿಸಲು, ಸ್ಥಳೀಯ ನಾಗರೀಕರ ವಿರೋಧ ಇರುವುದರಿಂದ ಪೊಲೀಸ್ ರಕ್ಷಣೆ ಪಡೆದು ಕ್ರಮ ಕೈಗೊಳ್ಳಲಾಗುವುದೆಂದು ಮಾನ್ಯ ಲೋಕೋಪಯೋಗಿ ಸಚಿವರು ತಿಳಿಸಿದರು. | ದಿನಾಂಕ: 09-10-2018ರ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ಬೆಂಗಳೂರು-ಮೈಸೂರು ರಸ್ತೆಯಲ್ಲಿ ಈಗಾಗಲೇ ಗುರುತಿಸಲಾಗಿರುವ 108 ಅವೈಜ್ಞಾನಿಕ ರಸ್ತೆಯ ಉಬ್ಬುಗಳನ್ನು ತೆರವುಗೊಳಿಸಿ ಅವಶ್ಯಕತೆ ಇರುವ ಭಾಗಗಳಲ್ಲಿ ಮಾತ್ರ ವೈಜ್ಞಾನಿಕವಾಗಿ ರಸ್ತೆಯ ಉಬ್ಬುಗಳನ್ನು ನಿರ್ಮಿಸಲಾಗಿದೆ.<br>ಪ್ರಸುತ ಬೆಂಗಳೂರು-ಮೈಸೂರುವರೆಗಿನ ರಾಷ್ಟ್ರೀಯ ಹೆದ್ದಾರಿ-275ಅನ್ನು Express Highway ಆಗಿ ನಿರ್ಮಿಸಲು ದಿನಾಂಕ: 31.05.2016ರಂದು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರಕ್ಕೆ ಹಸ್ತಾಂತರಿಸಲಾಗಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಸಮಿತಿಯು ಒಪ್ಪಿ ಭರವಸೆಯನ್ನು ಮುಕ್ತಾಯಗೊಳಿಸಿತು. |

| | | | | |
|---|---|---|---|---|
| 7 | 4311<br>ಚು.ರ.ಪ್ರ: 407<br>ಶ್ರೀ ದಯಾನಂದ<br>ವಿಪನದಿ: 28.01.2014 | ರಾಷ್ಟ್ರೀಯ ಹೆದ್ದಾರಿ ಹಾಗೂ ರಾಜ್ಯ ಹೆದ್ದಾರಿಗಳಲ್ಲಿ ನಿಧಾನಗತಿಯ ಕಾಮಗಾರಿಗಳು ಮತ್ತು ಪ್ರಸ್ತುತ ಅಸ್ತವ್ಯಸ್ತಗೊಂಡಿರುವ ರಾಜ್ಯ ಹೆದ್ದಾರಿಗಳ ರಸ್ತೆಗಳನ್ನು ಅದರಲ್ಲೂ ಹಾಸನದ ಸಕಲೇಶಪುರ –ಧರ್ಮಸ್ಥಳದ ರಾಷ್ಟ್ರೀಯ ಹೆದ್ದಾರಿ ಶೀಘ್ರವಾಗಿ ದುರಸ್ಥಿಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳ ಕುರಿತು. | ದುರಸ್ಥಿ ಕಾರ್ಯಗಳನ್ನು ಸಮರೋಪಾದಿಯಲ್ಲಿ ಕೈಗೊಳ್ಳಲಾಗುತ್ತಿದ್ದು, ಹಾಸನ, ಸಕಲೇಶಪುರ, ಗುಂಡ್ಯವರೆಗಿನ ರಸ್ತೆಯು ರಾಷ್ಟ್ರೀಯ ಹೆದ್ದಾರಿ–48 ಆಗಿದ್ದು, ಈ ರಸ್ತೆಯಲ್ಲಿರುವ ಶಿರಾಡಿಘಾಟ್ ಭಾಗದ ರಸ್ತೆಯ ಅತೀ ಕಡಿದಾದ 39 ತಿರುವುಗಳನ್ನು ಹೊಂದಿದ್ದು, ವಾಹನಗಳ ಸಂಚಾರವು ದಟ್ಟವಾಗಿರುತ್ತದೆ. ಈ ಭಾಗದಲ್ಲಿ ಹೆಚ್ಚು ಮಳೆ ಬೀಳುವುದರಿಂದ, ಪ್ರಸ್ತುತ, ಇರುವ ಡಾಂಬರ್ ರಸ್ತೆ ಪ್ರತಿ ಮಳೆಗಾಲದಲ್ಲಿ ಹದಗೆಡುತ್ತಿದೆ. ಇದನ್ನು ಶಾಶ್ವತವಾಗಿ ಪರಿಹರಿಸಲು ರೂ. 91.00 ಕೋಟಿ ಮೊತ್ತದ ಕಾಮಗಾರಿಗಳು ಅನುಮೋದನೆಯಾಗಿದ್ದು, ಶೀಘ್ರದಲ್ಲಿ ಟೆಂಡರ್ ಕರೆದು ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗುವುದು. ಕಾಮಗಾರಿ ಕೈಗೊಂಡು ರಸ್ತೆಯನ್ನು ವಾಹನ ಸಂಚಾರಕ್ಕೆ ಸುಗಮವಾಗುವಂತೆ ಮಾಡಲು ಕ್ರಮ ಕೈಗೊಳ್ಳಲಾಗುವುದೆಂದು ಮಾನ್ಯ ಲೋಕೋಪಯೋಗಿ ಸಚಿವರು ತಿಳಿಸಿದರು. | ದಿನಾಂಕ: 09–10–2018ರ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ಪ್ರಗತಿಯಲ್ಲಿರುವ ರಾಜ್ಯ ಹೆದ್ದಾರಿ ರಸ್ತೆ ಕಾಮಗಾರಿಗಳನ್ನು ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ ಹಾಗೂ ರಾಜ್ಯ ಹೆದ್ದಾರಿ ರಸ್ತೆಗಳಲ್ಲಿ ನಿಯತಕಾಲಿಕ ವಾರ್ಷಿಕ ನಿರ್ವಹಣೆ ಕೈಗೊಂಡು ವಾಹನಗಳ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಲಾಗುತ್ತಿದೆ.<br><br>ಹಾಸನ–ಸಕಲೇಶಪುರ–ಧರ್ಮಸ್ಥಳ ರಾಷ್ಟ್ರೀಯ ಹೆದ್ದಾರಿ 48(75)ರ ಶಿರಾಡಿಘಾಟ್ ಭಾಗದ ಕಿ.ಮೀ. 237.00 ರಿಂದ 250.620ರವರೆಗೆ ಮೊದಲನೇ ಹಂತದಲ್ಲಿ ರಸ್ತೆ ಕಾಂಕ್ರಟೀಕರಣ (ರಿಜಿಡ್ ಪೇವ್‌ಮೆಂಟ್) ಕಾಮಗಾರಿಯನ್ನು 2015–16 ಸಾಲಿನಲ್ಲಿ ಮುಕ್ತಾಯಗೊಳಿಸಲಾಗಿದೆ. ಕಿ.ಮೀ. 250.620 ರಿಂದ 263.00ರವರೆಗೆ ರಸ್ತೆ ಕಾಂಕ್ರೀಟೀಕರಣ (ರಿಜಿಡ್ ಪೇವ್‌ಮೆಂಡ್) ಕಾಮಗಾರಿಯನ್ನು ಎರಡನೇ ಹಂತದಲ್ಲಿ ಕೈಗೊಂಡಿದ್ದು, ಮುಕ್ತಾಯದ ಹಂತದಲ್ಲಿರುತ್ತದೆ. ಈಗಾಗಲೇ ಜಿಲ್ಲಾಡಳಿತ ಸದರಿ ರಸ್ತೆಯನ್ನು ದಿ: 15.07.2018ರಂದು ವಾಹನಗಳ ಸಂಚಾರಕ್ಕೆ ಮುಕ್ತಗೊಳಿಸಿರುತ್ತದೆ. ಆದರೆ ಆಗಸ್ಟ್ ತಿಂಗಳಿನಲ್ಲಿ ಸುರಿದ ಭಾರಿ ಮಳೆಯಿಂದಾಗಿ ರಸ್ತೆಯ ಹಲವು ಭಾಗಗಳಲ್ಲಿ ಗುಡ್ಡ ಕುಸಿತ ಉಂಟಾಗಿ ರಸ್ತೆಯ ಇಕ್ಕೆಲಗಳಲ್ಲಿ ಕೊರೆತವಾದ ಕಾರಣ ಲಘು ವಾಹನಗಳ ಸಂಚಾರಕ್ಕೆ ಮಾತ್ರ ಅನುವು ಮಾಡಿಕೊಡಲಾಗಿದೆ. ಮಳೆಗಾಲ ಮುಗಿದ ನಂತರ ಸದರಿ ರಸ್ತೆಯನ್ನು ದುರಸ್ತಿಗೊಳಿಸಿ ಎಲ್ಲಾ ವಾಹನಗಳಿಗೆ ರಸ್ತೆ ಸಂಚಾರಕ್ಕೆ ಅನುವು ಮಾಡಲಾಗುವುದು ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಸಮಿತಿಯು ಒಪ್ಪಿ ಭರವಸೆಯನ್ನು ಮುಕ್ತಾಯಗೊಳಿಸಿತು. |

| | | | | |
|---|---|---|---|---|
| 8 | 4735<br>ಚು.ರ.ಪ್ರ;107<br>ಶ್ರೀ ಎಸ್ ನಾಗರಾಜ್ (ಸಂದೇಶ್ ನಾಗರಾಜ್)<br>ವಿಪನದಿ: 25.06.2014<br>(ದಿನಾಂಕ: 14.10.2016 ರಂದು ನಡೆದ ಸಮಿತಿ ಸಭೆಯ ತೀರ್ಮಾನದಂತೆ ಜಲಸಂಪಲನ್ಮೂಲ ಇಲಾಖೆಯಿಂದ ವರ್ಗಾಯಿಸಲಾಗಿದೆ) | ಕೊಳ್ಳೇಗಾಲ ತಾಲ್ಲೂಕು ದಾಸನಪುರ ಬಳಿ ಕಾವೇರಿ ನದಿಗೆ ಮೋಟಾರ್ ಬೋಟ್ ವ್ಯವಸ್ಥೆ ಮಾಡುವ ಬಗ್ಗೆ. | ಸಾರ್ವಜನಿಕರಿಗೆ ಅನುಕೂಲವಾಗಿರುವ ರೀತ್ಯಾ ಹೆಚ್ಚಿನ ಯಾಂತ್ರಿಕ ಬೋಟ್‌ಗಳನ್ನು ಒದಗಿಸುವ ಬಗ್ಗೆ ನಿರ್ದೇಶಕರು, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಇವರಿಂದ ಸೂಕ್ತ ಪ್ರಸ್ತಾವನೆ ಪಡೆದು ಕ್ರಮ ಕೈಗೊಳ್ಳಲಾಗುವುದು ಎಂದು ಮಾನ್ಯ ಜವಳಿ ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ತಿಳಿಸಿದರು | ದಿನಾಂಕ: 09–10–2018ರ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ಕೊಳ್ಳೇಗಾಲ ತಾಲ್ಲೂಕು ದಾಸನಪುರ–ಕಾವೇರಿಪುರ ಕಡವು ಸೇವೆಗೆ ಹಾಲಿ ಇದ್ದ ಯಂತ್ರಚಾಲಿತ ದೋಣಿಯನ್ನು ದುರಸ್ತಿಪಡಿಸಿ ಕಡವು ಸೇವೆಗೆ ನಿಯೋಜಿಸಲಾಗಿದೆ. ಅಲ್ಲದೇ ಹೆಚ್ಚುವರಿಯಾಗಿ ಒಂದು ಯಂತ್ರಚಾಲಿತ ದೋಣಿಯನ್ನು ಸದರಿ ಕಡವು ಸೇವೆಗೆ ದಿ: 28.3.2015ರಂದು ಒದಗಿಸಲಾಗಿದ್ದು, ಪ್ರಸ್ತುತ 02 ಯಂತ್ರಚಾಲಿತ ದೋಣಿಗಳು ಕಡವಿನಲ್ಲಿ ಕಾರ್ಯನಿರ್ವಹಿಸುತ್ತಿವೆ. ಪ್ರಸ್ತುತ ನಾವೆಗಳಾದ ಅನ್ನಪೂರ್ಣೇಶ್ವರಿ–I ಅನ್ನಪೂರ್ಣೇಶ್ವರಿ–II, ಈ ನಾವೆಗಳಲ್ಲಿ 05 ಸಂಖ್ಯೆಯ ದ್ವಿಚಕ್ರವಾಹನಗಳನ್ನು ಹಾಗೂ 20 ಸಂಖ್ಯೆಯ ಪ್ರಯಾಣಿಕರನ್ನು ಸಾಗಿಸಬಹುದಾದ ಸಾಮರ್ಥ್ಯವನ್ನು ಹೊಂದಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಸಮಿತಿಯು ಒಪ್ಪಿ ಭರವಸೆಯನ್ನು ಮುಕ್ತಾಯಗೊಳಿಸಿತು. |
| 9 | 4319<br>ಚು.ಗು.ಪ್ರ: 723<br>ಸೋಮಣ್ಣ ಮ. ಬೇವಿನಮರದ<br>ವಿಪನದಿ: 18.02.2014 | ಹಾವೇರಿ ಜಿಲ್ಲೆ, ತಡಸ ಮತ್ತು ಹಾನಗಲ್‌ನ ರಾಜ್ಯ ಹೆದ್ದಾರಿಯ ಕಾಮಗಾರಿಗೆ ಹಣ ಬಿಡುಗಡೆ ಮಾಡುವ ಬಗ್ಗೆ. | ಸದರಿ ಕಾಮಗಾರಿಗೆ ಇನ್ನೂ 92.98 ಕೋಟಿ ಬಿಡುಗಡೆ ಮಾಡಬೇಕಾಗಿದ್ದು, ಕಾಮಗಾರಿ ಪ್ರಗತಿಯಾನುಸಾರ ಹಣ ಬಿಡುಗಡೆ ಮಾಡಲಾಗುವುದು ಎಂದು ಮಾನ್ಯ ಲೋಕೋಪಯೋಗಿ ಸಚಿವರು ತಿಳಿಸಿದರು. | ದಿನಾಂಕ: 09–10–2018ರ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ಕೆಶಿಪ್–2ರ ವಿಶ್ವಬ್ಯಾಂಕ್ ನೆರವಿನಡಿಯಲ್ಲಿ ಹಾನಗಲ್‌ನಿಂದ ತಡಸವರೆಗಿನ 42.459 ಕಿ.ಮೀ. ಉದ್ದದ ರಸ್ತೆ ಅಭಿವೃದ್ಧಿ ಕಾಮಗಾರಿಯನ್ನು ಇಪಿಸಿ ಮಾದರಿಯಲ್ಲಿ ಕೈಗೊಳ್ಳಲಾಗಿದ್ದು, ಇದರಲ್ಲಿ ವಿಶ್ವಬ್ಯಾಂಕ್ ಶೇ.80ರಷ್ಟನ್ನು ಭರಿಸಿ ಅಭಿವೃದ್ಧಿ ಪಡಿಸಲಾಗುತ್ತಿದೆ. ಸದರಿ ಕಾಮಗಾರಿಯನ್ನು ರೂ.97.87 ಕೋಟಿಗಳ ಮೊತ್ತಕ್ಕೆ ಮೆ: ಡಿಆರ್‌ಎನ್ ಇನ್‌ಫ್ರಾಸ್ಟಕ್ಚರ್ಸ್ ಇಂಜನಿಯರ್ಸ್ & ಕಂಟ್ರಾಕ್ಟರ್ಸ್ ಗುತ್ತಿಗೆದಾರರಿಗೆ ವಹಿಸಲಾಗದ್ದು, ದಿ: 20.07.2013ರಂದು ಪ್ರಾರಂಭಗೊಂಡಿದ್ದು, ಈ ಕಾಮಗಾರಿಗೆ ಇಲ್ಲಿಯವರೆಗೆ ರೂ.86.74 ಕೋಟಿಗಳಷ್ಟು ಹಣವನ್ನು ಪಾವತಿಸ ಲಾಗಿರುತ್ತದೆ. ಸದರಿ ಕಾಮಗಾರಿಯು 31.01.2017ರಂದು ಪೂರ್ಣಗೊಂಡಿದ್ದು, ಕಾಮಗಾರಿಯ ನಿರ್ವಹಣೆ ಅವಧಿಯು 10.04.2018ರಂದು ಪೂರ್ಣಗೊಂಡಿರುತ್ತದೆ. ಸದರಿ ರಸ್ತೆಯನ್ನು ಲೋಕೋಪಯೋಗಿ ಇಲಾಖೆ ಹಸ್ತಾಂತರಿಸಲಾಗಿರುತ್ತದೆ. |

| | | | | |
|---|---|---|---|---|
| | | | | ಸದರಿ ಕಾಮಗಾರಿಯ ಅಂತಿಮ ಬಿಲ್ಲಿನ ಮೊತ್ತ ರೂ. 4.32 ಕೋಟಿಗಳನ್ನು ಪಾವತಿಸುವ ಕುರಿತು ಪರಿಶೀಲನೆಯಲ್ಲಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಸಮಿತಿಯು ಒಪ್ಪಿ ಭರವಸೆಯನ್ನು ಮುಕ್ತಾಯಗೊಳಿಸಿತು. |
| 10 | 4006<br>ಚು.ರ.ಪ್ರ. 284<br>ಶ್ರೀ ತೋಂಟದಾರ್ಯ<br>ವಿಪನದಿ: 13.12.2011 | ಮೈಸೂರು–ನಂಜನಗೂಡು ರಸ್ತೆಯು ಕರ್ನಾಟಕ – ತಮಿಳುನಾಡು –ಕೇರಳ ರಾಜ್ಯಗಳ ಸಂಪರ್ಕ ರಸ್ತೆಯಾಗಿದ್ದು, ಸದರಿ ರಸ್ತೆಯ ಅಗಲೀಕರಣದ ಬಗ್ಗೆ. | ಕೇರಳ ಗಡಿಯಿಂದ ಗುಂಡ್ಲುಪೇಟೆ–ನಂಜನಗೂಡು–ಮೈಸೂರು–ಟಿ.ನರಸೀಪುರ–ಕೊಳ್ಳೇಗಾಲ ಮಾರ್ಗವಾಗಿ ಹಾದು ಹೋಗುವ ರಾಷ್ಟ್ರೀಯ ಹೆದ್ದಾರಿ 212 ಅಭಿವೃದ್ಧಿ ಯೋಜನೆಯ ಸಾರ್ವಜನಿಕ ಸಹಭಾಗಿತ್ವದ ಅಡಿಯಲ್ಲಿ ತೆಗೆದುಕೊಳ್ಳಲು ಯೋಜಿಸಿದ್ದು, ಸದರಿ ಯೋಜನೆಯ ಪರಿಷ್ಕೃತ ಆರ್ಥಿಕ ವರದಿಗೆ ಅನುಮೋದನೆ ಕೋರಿದ್ದು, ಸದರಿ ವರದಿಗೆ ಕೇಂದ್ರ ಮಂತ್ರಾಲಯದಿಂದ ಅನುಮೋದನೆ ದೊರೆತ ನಂತರ ಅರ್ಹ ಛಿಠಿಟಿಛಿಋಠಟಿಚುಡಿಜ ಗಳನ್ನು ಗೊತ್ತುಪಡಿಸಲು ಕ್ರಮ ಕೈಗೊಳ್ಳಲಾಗುವುದೆಂದು ಮಾನ್ಯ ಲೋಕೋಪಯೋಗಿ ಸಚಿವರು ತಿಳಿಸಿದರು. | ದಿನಾಂಕ: 09–10–2018ರ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ಕೇರಳ ಗಡಿಯಿಂದ–ಗುಂಡ್ಲುಪೇಟೆ–ನಂಜನಗೂಡು–ಮೈಸೂರು–ಟಿ.ನರಸೀಪುರ–ಕೊಳ್ಳೇಗಾಲ ಮಾರ್ಗವಾಗಿ ಹಾದು ಹೋಗು ರಾಷ್ಟ್ರೀಯ ಹೆದ್ದಾರಿ–212ನ್ನು ಎರಡು ಪಥದ ರಸ್ತೆಯಿಂದ ನಾಲ್ಕು ಪಥದ ರಸ್ತೆಯನ್ನಾಗಿ ಅಭಿವೃದ್ಧಿ ಮಾಡಲು ಕೇಂದ್ರ ಭೂಸಾರಿಗೆ ಮತ್ತು ಹೆದ್ದಾರಿ ಮಂತ್ರಾಲಯದಿಂದ ದಿ: 24.01.2014ರಂದು ರೂ.419.40 ಕೋಟಿಗಳ ಅನುಮೋದನೆ ದೊರೆತಿದ್ದು ಸದರಿ ಕಾಮಗಾರಿಯನ್ನು ದಿ: 20.6.2014ರಂದು ಮೆ. ದಿಲೀಪ್ ಬಿಲ್ಡ್‌ಕಾನ್ ಲಿಮಿಟೆಡ್, ಭೂಪಾಲ್ ಎಂಬ ಗುತ್ತಿಗೆದಾರರಿಗೆ ಇಪಿಸಿ ಯೋಜನೆಯಡಿ ಗುತ್ತಿಗೆಗೆ ವಹಿಸಲಾಗಿದ್ದು ಪ್ರಸ್ತುತ ಕಾಮಗಾರಿಯ ಪೂರ್ಣಗೊಂಡಿದ್ದು ನಿರ್ವಹಣಾ ಅವಧಿಯಲ್ಲಿರುತ್ತದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಸಮಿತಿಯು ಒಪ್ಪಿ ಭರವಸೆಯನ್ನು ಮುಕ್ತಾಯಗೊಳಿಸಿತು. |
| 11 | 4911<br>ಚು.ಗು.ಪ್ರ. 444<br>ಶ್ರೀ ವೀರಕುಮಾರ್ ಅಪ್ಪಾಸೊ ಪಾಟೀಲ್<br>ವಿಪನದಿ:01.07.2014 | ಕೇಂದ್ರ ರಸ್ತೆ ಅನುದಾನ (ಅಖಈ) ಯೋಜನೆ ಅಡಿಯಲ್ಲಿ 2013–14ನೇ ಸಾಲಿಗೆ ರಾಜ್ಯಕ್ಕೆ ಮಂಜೂರಾದ ಅನುದಾನ | ಆಯಾ ರಾಜ್ಯಗಳ fuel consumption ಮೇಲೆ ಸಿಆರ್‌ಎಫ್ ಫಂಡ್ ಬರುವುದು. fuel consumption | ದಿನಾಂಕ: 09–10–2018ರ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, 2013–14ನೇ ಸಾಲಿಗೆ ರಾಜ್ಯಕ್ಕೆ ಕೇಂದ್ರ ರಸ್ತೆಯ ನಿಧಿಯಿಂದ 1070.00 ಕೋಟಿ ರೂ.ಗಳು ಮಂಜೂರಾಗಿರುತ್ತದೆ. |

| | | | | |
|---|---|---|---|---|
| | | ಹಾಗೂ ಇದರಲ್ಲಿ ಬೆಳಗಾಂ ಜಿಲ್ಲೆಗೆ ಮಂಜೂರಾದ ಹಣ ಕುರಿತು. | ಆಧಾರದ ಮೇಲೆ ನಮಗೆ ಈ ಸಲ ಕೇಂದ್ರ ಸರ್ಕಾರದಿಂದ 1070 ಕೋಟಿ ರೂಪಾಯಿ ಮಂಜೂರಾಗಿರುತ್ತದೆ. ಹಾಗೂ ಬೆಳಗಾಂ ಜಿಲ್ಲೆಗೆ ರೂ. 60.50 ಕೋಟಿ ಮೊತ್ತದ 22 ಕಾಮಗಾರಿಗಳು ಮಂಜೂರಾಗಿರುತ್ತದೆ. ಎಲ್ಲೆಲ್ಲಿ ರಸ್ತೆಗಳು ಹಾಳಾಗಿವೆ ಈಗ Road information System (RIS) ಅನ್ನು ಡೆವೆಲಪ್ ಮಾಡುತ್ತಿದ್ದೇವೆ. ಅಲ್ಲಿ ಯಾವ್ಯಾವ ರಸ್ತೆಗಳು ಇದ್ದವು, ಯಾವ ರೀತಿ ಅದನ್ನು ಮಾಡಿದ್ದಾರೆ, ಯಾವ ವರ್ಷದಲ್ಲಿ ಅದನ್ನು ಮಾಡಿದ್ದಾರೆ ಹೇಗೆ ಎನ್ನುವುದನ್ನು ಶೀಘ್ರದಲ್ಲಿ ಬಿಡುಗಡೆ ಮಾಡಿ ವೆಬ್‌ಸೈಟ್‌ನಲ್ಲಿ ಹಾಕಿದರೆ ಅದರ ಆಧಾರದ ಮೇಲೆ ಎಸ್ಟಿಮೇಟ್‌ಗಳನ್ನು ತಯಾರು ಮಾಡುವುದಕ್ಕೆ ನಮ್ಮ ಸರ್ಕಾರ ಮೊದಲನೇ ಬಾರಿಗೆ ದೇಶದಲ್ಲಿ ನಮ್ಮ ರಾಜ್ಯ RIS ಅನ್ನು ಅಭಿವೃದ್ಧಿ ಮಾಡಿರುವಂಥದ್ದು. ಅಧಿವೇಶನ ಮುಗಿಯುವುದ ರೊಳಗೆ RIS ಅನ್ನು ಇಂಟರ್‌ನೆಟ್‌ಗೆ ಹಾಕುವುದಕ್ಕೆ ನಾವು ಪ್ರಯತ್ನ ಮಾಡಿ, ಅದರ ಆಧಾರದ ಮೇಲೆ ರಸ್ತೆಗಳ ನಿರ್ವಹಣೆ ಮತ್ತು ಅಂದಾಜನ್ನು ತಯಾರು ಮಾಡಿ ಅದರ ಕಾರ್ಯಭಾರವನ್ನು | 2013–14ನೇ ಸಾಲಿನಲ್ಲಿ ಕೇಂದ್ರ ರಸ್ತೆ ನಿಧಿಯಿಂದ ರಾಜ್ಯಕ್ಕೆ ಮಂಜೂರಾಗಿದ್ದ ಕಾಮಗಾರಿಗಳಲ್ಲಿ ಬೆಳಗಾವಿ ಜಿಲ್ಲೆಗೆ ರೂ. 60.50 ಕೋಟಿಗಳಲ್ಲಿ 22 ಕಾಮಗಾರಿಗಳು ಅನುಮೋದನೆಗೊಂಡಿದ್ದು, ಎಲ್ಲಾ ಕಾಮಗಾರಿಗಳು ಪೂರ್ಣಗೊಂಡಿರುತ್ತದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಸಮಿತಿಯು ಒಪ್ಪಿ ಭರವಸೆಯನ್ನು ಮುಕ್ತಾಯಗೊಳಿಸಿತು. |

| | | | | |
|---|---|---|---|---|
| | | | ನಿರ್ವಹಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ ಎಂದು ಮಾನ್ಯ ಲೋಕೋಪಯೋಗಿ ಸಚಿವರು ತಿಳಿಸಿದರು. | |
| 12 | 4912<br>ಚು.ರ.ಪ್ರ.: 403<br>ಡಾ: ಮತ್ತಿಕಟ್ಟಿ ವೀರಣ್ಣ<br>ವಿಪನದಿ: 01.07.2014 | ಬೆಳಗಾವಿ ನಗರ, ಸಾಂಬ್ರಾ ವಿಮಾನ ನಿಲ್ದಾಣ ಮತ್ತು ಸುವರ್ಣಸೌಧಕ್ಕೆ ಸಂಪರ್ಕ ಹೊಂದುವಂತೆ ಹೊಸತಾದ ರಸ್ತೆ ಸಂಪರ್ಕ ಮತ್ತು ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲು ಸರ್ಕಾರವು ಕೈಗೊಂಡ ಕ್ರಮಗಳ ಬಗ್ಗೆ. | ಬೆಳಗಾವಿ ನಗರ, ಸಾಂಬ್ರಾ ವಿಮಾನ ನಿಲ್ದಾಣ ಮತ್ತು ಸುವರ್ಣಸೌಧಕ್ಕೆ ಸಂಪರ್ಕ ಕಲ್ಪಿಸುವ ಸಲುವಾಗಿ ಹಾಲಿ ಇರುವ ರಾಯಚೂರು–ಬಾಜಿ ರಾಜ್ಯ ಹೆದ್ದಾರಿ–20ನ್ನು ಬಳಸಿಕೊಂಡು ರಾಷ್ಟ್ರೀಯ ಹೆದ್ದಾರಿ–4ರ ಮುಖಾಂತರವಾಗಿ ಸಂಪರ್ಕ ಕಲ್ಪಿಸಲು ಯೋಜಿಸಲಾಗಿರುತ್ತದೆ. ಸರ್ಕಾರದಿಂದ ಹಾಲಿ ಇರುವ ರಾಯಚೂರು–ಬಾಜಿ ರಾಜ್ಯ ಹೆದ್ದಾರಿ 20ನ್ನು ಜಿಲ್ಲೆಯಿಂದ ಜಿಲ್ಲೆಗೆ ಸಂಪರ್ಕ ಕಲ್ಪಿಸಲು 4 ಪಥ ರಸ್ತೆ ನಿರ್ಮಿಸಲು ಡಿ.ಪಿ.ಆರ್. ತಯಾರಿಕೆಗಾಗಿ ಸಮಾಲೋಚಕರನ್ನು ನೇಮಿಸುವ ಸಲುವಾಗಿ ಆರ್.ಎಫ್.ಪಿ. ಗಳಿಗಾಗಿ ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿರುವುದು ಎಂದು ಮಾನ್ಯ ಲೋಕೋಪಯೋಗಿ ಸಚಿವರು ತಿಳಿಸಿದರು. | ದಿನಾಂಕ: 09–10–2018ರ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ಬೆಳಗಾವಿ ನಗರ, ಸಾಂಬ್ರಾ ವಿಮಾನ ನಿಲ್ದಾಣ ಮತ್ತು ಸುವರ್ಣ ಸೌಧಕ್ಕೆ ಸಂಪರ್ಕ ಕಲ್ಪಿಸುವ ಸಲುವಾಗಿ ಹಾಲಿ ಇರುವ ರಾಯಚೂರ–ಬಾಚಿ ರಾಜ್ಯ ಹೆದ್ದಾರಿ–20 ನ್ನು ಬಳೆಸಿಕೊಂಡು ರಾಷ್ಟ್ರೀಯ ಹೆದ್ದಾರಿ–4 ರ ಮುಖಾಂತರವಾಗಿ ಸಂಪರ್ಕ ಕಲ್ಪಿಸಲು ಯೋಜಿಸಲಾಗಿತ್ತು. ಈ ಮಧ್ಯೆ ಸದರಿ ರಾಯಚೂರು–ಬಾಚಿ ರಾಜ್ಯ ಹೆದ್ದಾರಿಯನ್ನು ರಾಷ್ಟ್ರೀಯ ಹೆದ್ದಾರಿಯನ್ನಾಗಿ ಮೇಲ್ದರ್ಜೆಗೇರಿಸುವ ಪ್ರಸ್ತಾವನೆಯಿರುವುದಾಗಿ ಕಾರ್ಯನಿರ್ವಾಹಕ ಅಭಿಯಂತರರು, ರಾಷ್ಟ್ರೀಯ ಹೆದ್ದಾರಿ ವಿಭಾಗ, ಹುಬ್ಬಳ್ಳಿ ಇವರು ದಿನಾಂಕ 27/02/2016 ರಂದು ಪತ್ರ ಬರೆದು ತಿಳಿಸಿ, ಅದರಂತೆ ಕಾಮಗಾರಿ ಕೈಗೆತ್ತಿಕೊಂಡಿರುವ ಪ್ರಯುಕ್ತ ಸದರಿ ರಾಯಚೂರ–ಬಾಚಿ ರಾಜ್ಯ ಹೆದ್ದಾರಿ–20 ನ್ನು ಜಿಲ್ಲೆಯಿಂದ ಜಿಲ್ಲೆಗೆ ಸಂಪರ್ಕ ಕಲ್ಪಿಸುವ 4 ಪಥ ರಸ್ತೆ ನಿರ್ಮಿಸುವ ಯೋಜನೆಯನ್ನು ಕೈಬಿಡಲಾಗಿರುತ್ತದೆ.<br>ಸದರಿ ರಸ್ತೆಯನ್ನು ಬಳಸಿಕೊಂಡು ರಾಷ್ಟ್ರೀಯ ಹೆದ್ದಾರಿ–4 ರ ಮಾರ್ಗವಾಗಿ ಸುವರ್ಣ ಸೌಧಕ್ಕೆ ಸಂಪರ್ಕ ಕಲ್ಪಿಸಬಹುದಾಗಿರುತ್ತದೆ ಹಾಗೂ ಪ್ರಸ್ತುತವಾಗಿ ಸುವರ್ಣಸೌಧಕ್ಕೆ ಬದಲಿ ಸಂಪರ್ಕ ರಸ್ತೆ ಕಾಮಗಾರಿಯು 2014–15 ನೇ ಸಾಲಿನ ಅಪೆಂಡಿಕ್ಸ್–ಇ ರಡಿ ರೂ.500.00 ಲಕ್ಷಗಳ ಮೊತ್ತಕ್ಕೆ ಅನುಮೋದನೆಗೊಂಡಿರುತ್ತದೆ. ಇದರಡಿ ಹಾಲಿ ಇರುವ 3.75 ಮೀಟರ್ ಅಗಲದ ರಸ್ತೆಯನ್ನು 5.50 ಮೀಟರ್ ಅಗಲಕ್ಕೆ ಅಗಲೀಕರಣ ಗೊಳಿಸುವುದು ಹಾಗೂ ಸುಮಾರು 8.00 ಕಿ.ಮೀ. ಉದ್ದಕ್ಕೆ ಅಭಿವೃದ್ಧಿಪಡಿಸುವುದಕ್ಕೆ ಅವಕಾಶ ಕಲ್ಪಿಸಲಾಗಿದ್ದು ಸದರಿ |

| | | | | |
|---|---|---|---|---|
| | | | | ರಸ್ತೆಯು ಹಲಗಾ, ಮಾಸ್ತಮರ್ಡಿ, ಬಸರಿಕಟ್ಟಿ ಮತ್ತು ಶಿಂದೋಳ್ಳಿ ಮಾರ್ಗವಾಗಿ ರಾಜ್ಯ ಹೆದ್ದಾರಿ–20ನ್ನು ಸೇರುತ್ತದೆ. ಪ್ರಸ್ತುತವಾಗಿ 7.00 ಕಿ.ಮೀ.ಉದ್ದಕ್ಕೆ ರಸ್ತೆ ಕಾಮಗಾರಿಯು ಪೂರ್ಣಗೊಂಡಿರುತ್ತವೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಸಮಿತಿಯು ಒಪ್ಪಿ ಭರವಸೆಯನ್ನು ಮುಕ್ತಾಯಗೊಳಿಸಿತು. |
| 13 | 4913<br>ಚು.ಗು.ಪ್ರ. 440<br>ಶ್ರೀ ಟಿ. ಜಾನ್<br>ವಿಪನದಿ: 01.07.2014 | ಪಿರಿಯಾಪಟ್ಟಣ–ಸಿದ್ದಾಪುರ ರಸ್ತೆಯು ಹದಗೆಟ್ಟಿದ್ದು, ಸದರಿ ರಸ್ತೆಯ ಕಾಮಗಾರಿಯನ್ನು ಪೂರ್ಣ ಗೊಳಿಸುವ ಬಗ್ಗೆ. | ಸದರಿ ಕಾಮಗಾರಿ ಅನ್ವಯ 35 ಕಿ.ಮಿ. ಉದ್ದದ ರಸ್ತೆ ಪೈಕಿ 25 ಕಿ.ಮಿ. ಉದ್ದದ ರಸ್ತೆ ಪರಿಯಾಪಟ್ಟಣ ತಾಲ್ಲೂಕಿನಲ್ಲಿ, 13 ಕಿ.ಮಿ. ಉದ್ದದ ರಸ್ತೆ ವಿರಾಜಪೇಟೆ ವ್ಯಾಪ್ತಿಗೆ ಬರುತ್ತದೆ. ಈ ರಸ್ತೆಗೆ 8 ಕೋಟಿ ರೂಪಾಯಿಗಳನ್ನು ಅಪೆಂಡಿಕ್ಸ್–ಸಿ ನಲ್ಲಿ ಒದಗಿಸಿದ್ದೇವೆ. ಸಿ.ಎಂ.ಜಿ.ಎಸ್.ವೈ. ಯೋಜನೆಯಡಿಯಲ್ಲಿ 2.40 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆ. ಟೆಂಡರ್ ಅನುಮೋದನೆ ಪ್ರಕ್ರಿಯೆ ಪ್ರಗತಿಯಲ್ಲಿದ್ದು, ಈ ವರ್ಷದ ಅಂತ್ಯದಲ್ಲಿ ಕೆಲಸವನ್ನು ಮುಗಿಸುತ್ತೇವೆ ಎಂದು ಮಾನ್ಯ ಲೋಕೋಪಯೋಗಿ ಸಚಿವರು ತಿಳಿಸಿದರು. | ದಿನಾಂಕ: 09–10–2018ರ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ಪಿರಿಯಾಪಟ್ಟಣ–ಸಿದ್ದಾಪುರ ರಸ್ತೆಯು ಪಿರಿಯಾಪಟ್ಟಣ ತಾಲ್ಲೂಕು ವ್ಯಾಪ್ತಿಯಲ್ಲಿ ಭುವನಹಳ್ಳಿ–ತೆಲಗಿನಕೊಪ್ಪ–ಪಿರಿಯಾಪಟ್ಟಣ ರಸ್ತೆಯು ಸರಪಳಿ 0.00 ರಿಂದ 25.35 ಕಿ.ಮೀ. ವರೆಗಿದ್ದು ಒಟ್ಟು 25.35 ಕಿ.ಮೀ. ಉದ್ದದ ಜಿಲ್ಲಾ ಮುಖ್ಯ ರಸ್ತೆಯಾಗಿರುತ್ತದೆ. ರಸ್ತೆಯ ಮುಂದಿನ ಭಾಗವು ವಿರಾಜಪೇಟೆ ತಾಲ್ಲೂಕು ವ್ಯಾಪ್ತಿಯಲ್ಲಿದ್ದು ಸಿದ್ಧಾಪುರ–ಮೈಸೂರು ರಸ್ತೆಯ ಸರಪಳಿ 0.00 ರಿಂದ 13.00 ಕಿ.ಮೀ. ವರೆಗೆ ಒಟ್ಟು 13.00 ಕಿ.ಮೀ. ಉದ್ದದ ಜಿಲ್ಲಾ ಮುಖ್ಯ ರಸ್ತೆಯಾಗಿರುತ್ತದೆ.<br><br>2) ಸರಪಳಿ 16.00 ರಿಂದ 18.85 ಕಿ.ಮೀ. ವರೆಗೆ ಹಾಗೂ ಸರಪಳಿ 21.00 ರಿಂದ 24.00 ಕಿ.ಮೀ. ವರೆಗೆ ಒಟ್ಟು 5.85 ಕಿ.ಮೀ. ಉದ್ದದ ರಸ್ತೆಯನ್ನು ಲೋಕೋಪಯೋಗಿ ಇಲಾಖೆಯಿಂದ 2013–14ನೇ ಸಾಲಿನಲ್ಲಿ ಅಪೆಂಡಿಕ್ಸ್–ಇ ನಡಿ (ಲೆಕ್ಕಶೀರ್ಷಿಕೆ 5054) ರೂ. 800.00 ಲಕ್ಷಗಳಿಗೆ ಅಭಿವೃದ್ಧಿಗೆ ಮಂಜೂರಾಗಿದ್ದು, 2015–16ನೇ ಸಾಲಿನಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿಯನ್ನು ಪೂರ್ಣಗೊಳಿಸಿದ್ದು ರಸ್ತೆಯು ಸಂಚಾರ ಯೋಗ್ಯವಾಗಿರುತ್ತದೆ.<br><br>ಸರಪಳಿ 18.85 ರಿಂದ 21.00 ಕಿ.ಮೀ. ವರೆಗೆ ಹಾಗೂ 24.00 ರಿಂದ 25.35 ಕಿ.ಮೀ. ವರೆಗೆ ಒಟ್ಟು 3.50 ಕಿ.ಮೀ. |

| | | | | |
|---|---|---|---|---|
| | | | | ರಸ್ತೆಯನ್ನು 2016–17ನೇ ಸಾಲಿನ ವಾರ್ಷಿಕ ನಿರ್ವಹಣೆ ಮಾಡಲಾಗುತ್ತಿದೆ.<br><br>3) ಪಿರಿಯಾಪಟ್ಟಣ ತಾಲ್ಲೂಕು ವ್ಯಾಪ್ತಿಯಲ್ಲಿನ 25.35 ಕಿ.ಮೀ ಪೈಕಿ ಭುವನಹಳ್ಳಿ–ಪಿರಿಯಾಪಟ್ಟಣ ರಸ್ತೆಯ ಸರಪಳಿ 0.00 ರಿಂದ 5.85 ಕಿ.ಮೀ. ವರೆಗೆ ಈಗಾಗಲೇ ರಾಷ್ಟ್ರೀಯ ಹೆದ್ದಾರಿ ವಿಭಾಗದಿಂದ ಸಿ.ಆರ್.ಎಫ್.ನಡಿ ರಸ್ತೆಯ ಅಭಿವೃದ್ಧಿ ಪೂರ್ಣಗೊಂಡಿದ್ದು, ಸಂಚಾರ ಯೋಗ್ಯವಾಗಿರುತ್ತದೆ. ಸರಪಳಿ 5.85 ರಿಂದ 16.00 ಕಿ.ಮೀ. ವರೆಗೆ ಅಭಿವೃದ್ಧಿಪಡಿಸಲು ರಾಷ್ಟ್ರೀಯ ಹೆದ್ದಾರಿ ವಲಯದ ಕೇಂದ್ರ ರಸ್ತೆ ನಿಧಿಯಡಿಯಲ್ಲಿ 2016–17ನೇ ಸಾಲಿನಲ್ಲಿ "Improvement to road from Periyapatna to Siddapura via Komalapura Telenakoppa from Km 5.85 to 15.00 (Job No. CRF-KNT-2016–17 1692 Dated: 02.11.2016" ಮಂಜೂರಾಗಿರುತ್ತದೆ. ಸದರಿ ಕಾಮಗಾರಿಗೆ ರಾಷ್ಟ್ರೀಯ ಹೆದ್ದಾರಿ ವಿಭಾಗ, ಬೆಂಗಳೂರು ಇವರ ಕಛೇರಿಯಿಂದ ಎನ್ಐಟಿ:13/2017–18 ದಿನಾಂಕ:15.12.2017ರಲ್ಲಿ ಅರ್ಹ ಗುತ್ತಿಗೆದಾರರಿಂದ ಟೆಂಡರ್‌ನ್ನು ಆಹ್ವಾನಿಸಲಾಗಿದ್ದು, ಆರ್ಥಿಕ ಇಲಾಖೆಯ ಸೂಚನೆಯನ್ವಯ 2ನೇ ಹಂತದ ಸಿ.ಆರ್.ಎಫ್ ಕಾಮಗಾರಿಗಳ ಗುತ್ತಿಗೆ/ಟೆಂಡರ್ ಪ್ರಕ್ರಿಯೆಯನ್ನು ತಡೆಹಿಡಿಯಲಾಗಿದ್ದು, ಯಥಾಸ್ಥಿತಿಯನ್ನು ಕಾಪಾಡಲಾಗಿದೆ.<br><br>4) ವಿರಾಜಪೇಟೆ ತಾಲ್ಲೂಕು ವ್ಯಾಪ್ತಿಯಲ್ಲಿ ರಸ್ತೆಯು 13.00 ಕಿ.ಮೀ. ಉದ್ದವಿದ್ದು (ಸಿದ್ದಾಪುರ–ಮೈಸೂರು–ಜಿಮುರ) ಸರಪಳಿ 0.00 ರಿಂದ 12.50 ಕಿ.ಮೀ. ವರೆಗೆ 5.50 ಮೀ. ಅಗಲದ ಮಧ್ಯಪಥ ರಸ್ತೆಯಾಗಿರುತ್ತದೆ. |

| | | | | |
|---|---|---|---|---|
| | | | | ಸರಪಳಿ 0.00 ಕಿ.ಮಿ.ನಿಂದ 3.40 ಕಿ.ಮೀ. ವರೆಗೆ ಮತ್ತು 8.50 ರಿಂದ 13.00 ಕಿ.ಮೀ. ವರೆಗೆ ಸಿಎಂಜಿಎಸ್‌ವೈ ಯೋಜನೆಯಡಿ ವಾರ್ಷಿಕ ನಿರ್ವಹಣೆ ಮಾಡಿದ್ದು ರಸ್ತೆಯು ಸಂಚಾರ ಯೋಗ್ಯವಾಗಿರುತ್ತದೆ. ಸ.3.40 ರಿಂದ 5.00 ಕಿ.ಮೀ. ವರೆಗೆ ರಸ್ತೆಯು ಉತ್ತಮ ಗುಣಮಟ್ಟದಲ್ಲಿದ್ದು ಸಂಚಾರ ಯೋಗ್ಯವಾಗಿರುತ್ತದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಸಮಿತಿಯು ಒಪ್ಪಿ ಭರವಸೆಯನ್ನು ಮುಕ್ತಾಯಗೊಳಿಸಿತು. |
| 14 | 4915<br>ಚು.ರ.ಪ್ರ. 443<br>ಶ್ರೀಮತಿ ಮೋಟಮ್ಮ<br>ವಿಪನದಿ: 01.07.2014 | ಜನ್ನಾಪುರ–ಅಣಗೂರು ಇಕ್ಕಟ್ಟಾದ ರಾಜ್ಯ ಹೆದ್ದಾರಿ (ಸಂಖ್ಯೆ 107ರ) ಅಭಿವೃದ್ಧಿಗೆ ಇದೇ ರಸ್ತೆಯ ಕಿರಗುಂದ ಗ್ರಾಮ ಪಂಚಾಯತ್ ಮತ್ತು ಚಿನ್ನಿಗಾ ಗ್ರಾಮ ಪಂಚಾಯತ್ ನಡುವೆ ಇರುವ ಬೆಟ್ಟದಮನೆ ಸೇತುವೆ ಕಿರಿದಾಗಿದ್ದು, ಶಿಥಿಲಾವಸ್ಥೆಯಲ್ಲಿರುವುದಕ್ಕೆ ತೆಗೆದು ಕೊಂಡಿರುವ ಕ್ರಮದ ಕುರಿತು. | ಮೂಡಿಗೆರೆ ತಾಲ್ಲೂಕು ಜನ್ನಾಪುರ–ವಣಗೂರು ರಸ್ತೆಯಲ್ಲಿ ಕಿರುಗುಂದ ಚಿನ್ನಿಗೆ ಗ್ರಾಮ ಪಂಚಾಯಿತಿ ನಡುವೆ ಇರುವ ಬೆಟ್ಟದಮನೆ ಬಳಿ ಹೇಮಾವತಿ ನದಿಗೆ ಅಡ್ಡಲಾಗಿ ಹಾಲಿ ಇರುವ ಸೇತುವೆಯು 5.00 ಮೀ.ಗಳ 12 ಅಂಕಣಗಳು (ಒಟ್ಟು ಉದ್ದ 60.00 ಮೀ.) ಇದ್ದು ಏಕಪಥ ಸಂಚಾರದ ಸೇತುವೆಯಾಗಿದ್ದು ಅಗಲವು 3.00 ಮೀ. ಇದ್ದು, ಸುಗಮ ವಾಹನ ಸಂಚಾರಕ್ಕೆ ಅಡಚಣೆಯುಂಟಾಗುತ್ತಿದೆ. ಸದರಿ ಸ್ಥಳದಲ್ಲಿ ಹೊಸ ಸೇತುವೆಯನ್ನು ನಿರ್ಮಿಸಲು ಸುಮಾರು ರೂ.500.00 ಲಕ್ಷಗಳ ಅವಶ್ಯಕತೆಯಿದ್ದು ಅನುದಾನದ ಲಭ್ಯತೆಯನುಸಾರ ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು ಎಂದು ಮಾನ್ಯ ಲೋಕೋಪಯೋಗಿ ಸಚಿವರು ತಿಳಿಸಿದರು. | ದಿನಾಂಕ: 09–10–2018ರ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ಮೂಡಿಗೆರೆ ತಾಲ್ಲೂಕು ಜನ್ನಾಪುರ ವಣಗೂರು ರಸ್ತೆಯಲ್ಲಿ ಕಿರುಗುಂದ ಚಿನ್ನಿಗೆ ಗ್ರಾಮ ಪಂಚಾಯಿತಿ ನಡುವೆ ಇರುವ ಬೆಟ್ಟದಮನೆ ಬಳಿ ಹೇಮಾವತಿ ನದಿಗೆ ಅಡ್ಡಲಾಗಿ ಸೇತುವೆ ಕಾಮಗಾರಿಯನ್ನು ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತದ ವತಿಯಿಂದ ಟರ್ನ್‌ಕೀ ಆಧಾರದಲ್ಲಿ, ಮೆ: ಬಿ.ಎಸ್.ಆರ್. ಇನ್‌ಫ್ರಾಟೆಕ್ ಇಂಡಿಯಾ ಲಿ, ಬೆಂಗಳೂರು, ಇವರಿಗೆ ಕಾರ್ಯಾದೇಶವನ್ನು ದಿನಾಂಕ: 19.03.2018ರಂದು ನೀಡಲಾಗಿರುತ್ತದೆ. ಸದರಿ ಸೇತುವೆಯ ಗುತ್ತಿಗೆ ಮೊತ್ತ ರೂ. 13.83 ಕೋಟಿ ಇದ್ದು, ಸೇತುವೆ ಕಾಮಗಾರಿ ಪೂರ್ಣಗೊಳಿಸಲು 18 ತಿಂಗಳ ಕಾಲಾವಕಾಶ ನೀಡಿದೆ. ಸೇತುವೆ ಕಾಮಗಾರಿಯನ್ನು ಗುತ್ತಿಗೆದಾರರ ಸ್ವಂತ ವಿನ್ಯಾಸದಡಿಯಲ್ಲಿ ಟರ್ನ್‌ಕೀ ಆಧಾರದ ಮೇಲೆ ವಹಿಸಿರುವುದರಿಂದ ಗುತ್ತಿಗೆದಾರರ ಕಾಮಗಾರಿ ಕೈಗೆತ್ತಿಕೊಳ್ಳುವ ಮುನ್ನ ಅಗತ್ಯವಿರುವ ಸರ್ವೆ ಕಾರ್ಯ, ಮಣ್ಣಿನ ಪರಿಶೀಲನೆ, ವಿನ್ಯಾಸ ಇತರೆ ತನಿಖೆಗಳು ಪ್ರಗತಿಯಲ್ಲಿವೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಸಮಿತಿಯು ಒಪ್ಪಿ ಭರವಸೆಯನ್ನು ಮುಕ್ತಾಯಗೊಳಿಸಿತು. |

| | | | | |
|---|---|---|---|---|
| 15 | 4919<br>ಚು.ರ.ಪ್ರ: 941<br>ಶ್ರೀ ರಾಮಚಂದ್ರಗೌಡ<br>ವಿಪನದಿ:08.07.2014 | ಹಾವೇರಿ ಜಿಲ್ಲೆಯ ತಡಸದಿಂದ ಶಿವಮೊಗ್ಗದವರೆಗಿನ ಹೆದ್ದಾರಿ ಹಾಗೂ ಹಾನಗಲ್‌ನಿಂದ ಹಾವೇರಿ ವರೆಗಿನ ಹೆದ್ದಾರಿ ರಸ್ತೆ ದುರಸ್ಥಿ ಕಾರ್ಯ ಪ್ರಾರಂಭವಾಗಿದ್ದು, ಕಾಮಗಾರಿ ವಿಳಂಬವಾಗುತ್ತಿರುವ ಬಗ್ಗೆ. | ಹಾನಗಲ್‌ನಿಂದ ಶಿವಮೊಗ್ಗದವರೆಗಿನ ರಸ್ತೆ ಅಭಿವೃದ್ಧಿ ಕಾಮಗಾರಿಯನ್ನು ಇಪಿಸಿ ಗುತ್ತಿಗೆ ಮುಖಾಂತರ ಕೈಗೊಳ್ಳಲು ಟೆಂಡರ್ ದಸ್ತಾವೇಜುಗಳನ್ನು ಸಿದ್ದಪಡಿಸಿದ್ದು, ವಿಶ್ವ ಬ್ಯಾಂಕ್‌ನಿಂದ ಅನುಮೋದನೆ ಪಡೆದು ಟೆಂಡರ್ ಪ್ರಕಟಣೆಯನ್ನು ಹೊರಡಿಸಲಾಗುವುದು.<br>ಹಾನಗಲ್‌ನಿಂದ ಹಾವೇರಿವರೆಗಿನ ಅಭಿವೃದ್ಧಿ ಕಾಮಗಾರಿಯು ಪ್ರಗತಿಯಲ್ಲಿದ್ದು, ಸದರಿ ಕಾಮಗಾರಿಗೆ ಅಗತ್ಯವಿರುವ ಕ್ರಷರ್ ಘಟಕ ಸ್ಥಾಪನೆ ಸ್ವಲ್ಪ ವಿಳಂಬವಾಗಿದ್ದು, ಪ್ರಗತಿಯಲ್ಲಿರುತ್ತದೆ.<br>ಕಾಮಗಾರಿಯನ್ನು ಗುತ್ತಿಗೆಯ ಕಾಲಾವಧಿಯೊಳಗೆ ಪೂರ್ಣಗೊಳಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುತ್ತದೆ ಎಂದು ಮಾನ್ಯ ಲೋಕೋಪಯೋಗಿ ಸಚಿವರು ತಿಳಿಸಿದರು. | ದಿನಾಂಕ: 09-10-2018ರ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ಕೆಶಿಪ್-2ರ ವಿಶ್ವಬ್ಯಾಂಕ್ ನೆರವಿನಡಿಯಲ್ಲಿ ತಡಸದಿಂದ ಶಿವಮೊಗ್ಗದವರೆಗಿನ ಹೆದ್ದಾರಿ ಹಾಗೂ ಹಾನಗಲ್‌ನಿಂದ ಹಾವೇರಿ ವರೆಗಿನ ಹದ್ದಾರಿ ರಸ್ತೆ ದುರಸ್ತಿ ಕಾಮಗಾರಿಗಳು ವಿವಿಧ ಹಂತಗಳಲಿದ್ದು, ಅವುಗಳ ಇತ್ತೀಚಿನ ಹಂತದ ಮಾಹಿತಿಯು ಕೆಳಕಂಡಂತಿರುತ್ತದೆ.<br><br>ಅ) ಹಾನಗಲ್-ತಡಸ: ಹಾನಗಲ್‌ನಿಂದ ತಡಸವರೆಗಿನ 43.459 ಕಿ.ಮೀ. ಉದ್ದದ ರಸ್ತೆ ಕಾಮಗಾರಿಯನ್ನು ರೂ. 97.87 ಕೋಟಿಗಳ ಮೊತ್ತಕ್ಕೆ ಮೆ: ಡಿ.ಆರ್.ಎನ್. ಇನ್‌ಫ್ರಾಸ್ಟ್ರಕ್ಚರ್ಸ್, ಇಂಜನಿಯರ್ಸ್ & ಕಂಟ್ರಾಕ್ಟರ್ಸ್ ಗುತ್ತಿಗೆದಾರರಿಗೆ ವಹಿಸಲಾಗಿದ್ದು ದಿ: 20.7.2013ರಂದು ಪ್ರಾರಂಭಿಸಲಾಗಿತ್ತು. ಸದರಿ ಕಾಮಗಾರಿಯು ದಿ: 31.01.2017ರಂದು ಪೂರ್ಣಗೊಂಡಿದ್ದು ಕಾಮಗಾರಿಯ ನಿರ್ವಹಣಾ ಅವಧಿಯು ದಿ: 10.04.2018ಕ್ಕೆ ಪೂರ್ಣಗೊಂಡಿರುತ್ತದೆ. ಸದರಿ ರಸ್ತೆಯನ್ನು ಲೋಕೋಪಯೋಗಿ ಇಲಾಖೆಗೆ ಹಸ್ತಾಂತರಿಸಲಾಗಿದೆ.<br><br>ಆ) ಶಿಕಾರಿಪುರ-ಅನವಟ್ಟಿ-ಹಾನಗಲ್: ಶಿಕಾರಿಪುರ-ಅನವಟ್ಟಿ-ಹಾನಗಲ್‌ವರೆಗಿನ 71.629 ಕಿ.ಮೀ. ಉದ್ದದ ರಸ್ತೆ ಅಭಿವೃದ್ಧಿ ಕಾಮಗಾರಿಯನ್ನು ರೂ. 224.71 ಕೋಟಿಗಳ ಮೊತ್ತಕ್ಕೆ ಮೆ: ಆರ್.ಎನ್ಎಸ್.ಲಿಮಿಟೆಡ್ ಗುತ್ತಿಗೆದಾರರಿಗೆ ವಹಿಸಲಾಗಿದ್ದು, ದಿ: 1.10.2015 ರಂದು ಪ್ರಾರಂಭಗೊಂಡಿದೆ. ಸದರಿ ಕಾಮಗಾರಿಯನ್ನು ದಿ: 30.11.2018ರಂದು ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ. ಪ್ರಸ್ತುತ ಹಂತದಲ್ಲಿ ಅಂದರೆ ಆಗಸ್ಟ್ 2018ರ ಅಂತ್ಯದವರೆಗೆ 55.28 (BC) ಕಿ.ಮೀ. ಹಾಗೂ 62.89 (DBM)ಕಿ.ಮೀ. ರಷ್ಟು ಭೌತಿಕ ಪ್ರಗತಿಯಾಗಿದ್ದು, ರೂ. 227.75 ಕೋಟಿಗಳಷ್ಟು ಆರ್ಥಿಕ ಪ್ರಗತಿಯಾಗಿರುತ್ತದೆ. |

| | | | | |
|---|---|---|---|---|
| | | | | ಇ) ಹಾವೇರಿಯಿಂದ ಹಾನಗಲ್: ಹಾವೇರಿಯಿಂದ ಹಾನಗಲ್ ವರೆಗಿನ 31.784 ಕಿ.ಮೀ. ಉದ್ದದ ರಸ್ತೆ ಅಭಿವೃದ್ಧಿ ಕಾಮಗಾರಿಯನ್ನು ರೂ. 92.98 ಕೋಟಿಗಳ ಮೊತ್ತಕ್ಕೆ ಮೆ: ಡಿಆರ್‌ಎನ್ ಇನ್‌ಫ್ರಾಸ್ಟ್ರಕ್ಚರ್ಸ್, ಇಂಜನಿಯರ್ಸ್ & ಕಂಟ್ರಾಕ್ಟರ್ಸ್ ಗುತ್ತಿಗೆದಾರರಿಗೆ ವಹಿಸಲಾಗಿದ್ದು ದಿ: 2.3.2013ರಂದು ಪ್ರಾರಂಭಿಸಲಾಗಿತುತ. ಸದರಿ ಕಾಮಗಾರಿಯು ದಿ: 27.06.2016ರಂದು ಪೂರ್ಣಗೊಂಡಿರುತ್ತದೆ. ಸದರಿ ರಸ್ತೆಯನ್ನು ದಿ: 01.03.2018 ಮತ್ತು 13.03.2018ರಂದು ಲೋಕೋಪಯೋಗಿ ಇಲಾಖೆಗೆ ಹಸ್ತಾಂತರಿಸಲಾಗಿರುತ್ತದೆ.<br><br>ಈ) ಶಿವಮೊಗ್ಗ–ಶಿಕಾರಿಪುರ–ಅನಂತಪುರಂ ವರೆಗಿನ 82 ಕಿ.ಮೀ. ಉದ್ದದ ರಸ್ತೆ ಕಾಮಗಾರಿಯನ್ನು ಮೆ: ಪಟೇಲ್ ಇಂಜನಿಯರ್ ಲಿಮಿಟೆಡ್ ಇವರಿಗೆ ವಹಿಸಲಾಗಿದ್ದು ದಿ: 12.08.2015ರಂದು ಪ್ರಾರಂಭಗೊಂಡಿದೆ. ಪ್ರಸ್ತುತ 78.00 ಕಿ.ಮೀ. (95%) ಭೌತಿಕ ಪ್ರಗತಿಯಾಗದ್ದು ಹಾಗೂ ರೂ. 237.21 ಕೋಟಿ ರಷ್ಟು ಆರ್ಥಿಕ ಪ್ರಗತಿಯಾಗಿರುತ್ತದೆ. ಕಾಮಗಾರಿಯನ್ನು ಅಕ್ಟೋಬರ್ 2018ರೊಳಗೆ ಪೂರ್ಣಗೊಳಿಸಲು ಯೋಜಿಸಲಾಗಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಸಮಿತಿಯು ಒಪ್ಪಿ ಭರವಸೆಯನ್ನು ಮುಕ್ತಾಯಗೊಳಿಸಿತು. |
| 16 | 4921<br>ಚು.ರ.ಪ್ರ: 959<br>ಶ್ರೀ.ಎಂ.ಡಿ. ಲಕ್ಷ್ಮೀನಾರಾಯಣ<br>ವಿಪನದಿ:08.07.2014 | ಯಡಿಯೂರು–ತಿಪಟೂರು ರಸ್ತೆಯನ್ನು ಅಭಿವೃದ್ಧಿಪಡಿಸುವ ಬಗ್ಗೆ. | ತುರುವೇಕೆರೆ ತಾಲ್ಲೂಕಿನ ಯಡಿಯೂರು–ತಿಪಟೂರು ರಸ್ತೆಯಲ್ಲಿ ಒಟ್ಟು 51 ಸೇತುವೆ ಕಾಮಗಾರಿಗಳನ್ನು ನಿರ್ವಹಿಸಲು ಕ್ರಮ ಕೈಗೊಂಡಿದ್ದು, ಈ ಪೈಕಿ 15 ಮೋರಿಗಳನ್ನು ಅಭಿವೃದ್ಧಿಪಡಿಸಲು ಅಂದಾಜಿನಲ್ಲಿ ಅಳವಡಿಸಲಾಗಿದೆ. 5 | ದಿನಾಂಕ: 09–10–2018ರ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆಯ ಹಂತ–2ರಲ್ಲಿ ಕೈಗೊಂಡ ಯಡಿಯೂರು–ತಿಪಟೂರು ರಸ್ತೆಯ ಅಭಿವೃದ್ಧಿ ಕಾಮಗಾರಿಯು ಪೂರ್ಣಗೊಂಡಿರುತ್ತದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಸಮಿತಿಯು ಒಪ್ಪಿ ಭರವಸೆಯನ್ನು ಮುಕ್ತಾಯಗೊಳಿಸಿತು. |

| | | | | |
|---|---|---|---|---|
| | | | ಸೇತುವೆ ಕೆಲಸ ಪೂರ್ಣಗೊಂಡಿದ್ದು, 3 ಸೇತುವೆ ಕೆಲಸ ಪ್ರಗತಿಯಲ್ಲಿದೆ. 45 ಸೇತುವೆ ಕೆಲಸ ಪ್ರಾರಂಭಿಸಬೇಕಾಗಿದೆ. ಒಟ್ಟಾರೆ ಎಸ್‌ಹೆಚ್‌ಡಿಪಿ–2ನೇ ಹಂತದ ಯೋಜನೆ ಪ್ಯಾಕೇಜ್ ಮತ್ತು 117ರ ಯೋಜನೆಯಡಿಯಲ್ಲಿ 64 ಸೇತುವೆಗಳ ಮರು ನಿರ್ಮಾಣ, ದುರಸ್ಥಿ, ರಸ್ತೆ ನವೀಕರಣ ಮತ್ತು ಅಭಿವೃದ್ಧಿ ಹಾಗೂ ನೊಣವಿನಕೆರೆ ಏರಿಗೆ ತಡೆಗೋಡೆ ಮತ್ತು ಸಿಮೆಂಟ್ ಕಾಂಕ್ರೀಟ್ ಚರಂಡಿ ನಿರ್ಮಾಣ ಕಾಮಗಾರಿಗಳನ್ನು ಒಳಗೊಂಡಿರುತ್ತದೆ. ಮಾರ್ಚ್–2015ರೊಳಗೆ ಈ ಕಾಮಗಾರಿಗಳನ್ನು ಪೂರ್ಣಗೊಳಿಸಲು ಯೋಜಿಸಲಾಗಿದೆ ಎಂದು ಮಾನ್ಯ ಲೋಕೋಪಯೋಗಿ ಸಚಿವರು ತಿಳಿಸಿದರು. | |
| 17 | 4922<br>ಚು.ರ.ಪ್ರ. 1543<br>ಶ್ರೀ ಪಟೇಲ್ ಶಿವರಾಂ<br>ವಿಪನದಿ:17.03.2015 | ಹಾಸನ ಜಿಲ್ಲೆಯಲ್ಲಿ ಅಧಿಕ ವಾಹನ ಸಂಚರಿಸುವ ಕೆರೆ ಏರಿಯ ಮೇಲಿನ ರಸ್ತೆಗಳಿಗೆ ತಡೆಗೋಡೆ ನಿರ್ಮಿಸಲು ಮತ್ತು ಡಾಂಬರೀಕರಣಗೊಳಿಸಲು ಸರ್ಕಾರ ಕ್ರಮ ಕೈಗೊಳ್ಳುವ ಬಗ್ಗೆ | ಹಾಸನ ಜಿಲ್ಲೆಯಲ್ಲಿನ ಕೆರೆ ಏರಿ ರಸ್ತೆಗಳಿಗೆ ಕ್ರಾಶ್ ಬ್ಯಾರಿಯರ್ ನಿರ್ಮಿಸುವಲ್ಲಿ ಒಟ್ಟಾರೆ ರೂ.66.00 ಕೋಟಿ ಹಣವು ಅವಶ್ಯವಿರುವುದು. ಇಲ್ಲಿಯವರೆಗೆ 20 ಕೆರೆ ಏರಿ ರಸ್ತೆಗಳಿಗೆ ತಡೆಗೋಡೆ ನಿರ್ಮಿಸಲಾಗಿದೆ. ರಸ್ತೆಗಳ ಅಭಿವೃದ್ಧಿಗೆ ಹಾಗೂ ನಿರ್ವಹಣೆಗೆ ವಿವಿಧ ಲೆಕ್ಕಶೀರ್ಷಿಕೆ ಅಡಿ ನೀಡಲಾಗುವ ಅನುದಾನದಲ್ಲಿ ಉಳಿದ ಕೆರೆ ಏರಿ ರಸ್ತೆಗಳಿಗೆ ಹಂತ ಹಂತವಾಗಿ | ದಿನಾಂಕ: 09–10–2018ರ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ಹಾಸನ ಜಿಲ್ಲಾ ವ್ಯಾಪ್ತಿಯಲ್ಲಿ ರಾಜ್ಯ ಹೆದ್ದಾರಿಯ ಮೇಲೆ 68 ಸ್ಥಳಗಳಲ್ಲಿ ಮತ್ತು ಜಿಲ್ಲಾ ಮುಖ್ಯ ರಸ್ತೆಯಲ್ಲಿನ 188 ಸ್ಥಳಗಳಲ್ಲಿ ಒಟ್ಟಾರೆಯಾಗಿ 256 ಸ್ಥಳಗಳಲ್ಲಿ ಕೆರೆ ಏರಿ ಮೇಲಿನ ರಸ್ತೆಗಳು ಇರುತ್ತವೆ.<br><br>ಹಾಸನ ಜಿಲ್ಲಾ ವ್ಯಾಪ್ತಿಯಲ್ಲಿ ಒಟ್ಟು 128.95 ಕಿಮೀ ಉದ್ದದ ಕೆರೆ ಏರಿ ಮೇಲಿನ ರಸ್ತೆಗಳಿದ್ದು, ಅವುಗಳಿಗೆ 229.41 ಕಿಮೀ ಉದ್ದಕ್ಕೆ ಎರಡೂ ಬದಿಗಳಲ್ಲಿ ಅಗತ್ಯಾನುಸಾರ ತಡೆಗೋಡೆ/ಕ್ರಾಶ್ ಬ್ಯಾರಿಯರ್ ನಿರ್ಮಿಸಲು ರೂ.56.28 ಕೋಟಿ ಅನುದಾನದ ಅವಶ್ಯಕತೆ ಇರುತ್ತದೆ. |

| | | | | |
|---|---|---|---|---|
| | | | ಸುರಕ್ಷತಾ ತಡೆಗೋಡೆಯನ್ನು/ಕ್ರಾಶ್ ಬ್ಯಾರಿಯರನ್ನು ಅಳವಡಿಸಲಾಗುವುದು ಎಂದು ಮಾನ್ಯ ಲೋಕೋಪಯೋಗಿ ಸಚಿವರು ತಿಳಿಸಿದರು. | ಇದುವರೆವಿಗೂ 24.218 ಕಿಮೀ ಉದ್ದಕ್ಕೆ 45 ಸಂಖ್ಯೆ ಕೆರೆ ಏರಿ ರಸ್ತೆಗಳಿಗೆ ತಡೆಗೋಡೆ/ಕ್ರಾಶ್ ಬ್ಯಾರಿಯರ್ ನಿರ್ಮಿಸಲಾಗಿದ್ದು, ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಿದೆ.<br>ಅನುದಾನದ ಲಭ್ಯತೆಯ ಆಧಾರದ ಮೇಲೆ ಹಾಗೂ ವಿವಿಧ ಲೆಕ್ಕಶೀರ್ಷಿಕೆ ಅಡಿ ನೀಡುವ ಅನುದಾನದಲ್ಲಿ ಹಂತ ಹಂತವಾಗಿ ತಡೆಗೋಡೆ ನಿರ್ಮಿಸಲು ಕ್ರಮವಹಿಸಲಾಗುತ್ತಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಸಮಿತಿಯು ಒಪ್ಪಿ ಭರವಸೆಯನ್ನು ಮುಕ್ತಾಯಗೊಳಿಸಿತು. |
| 18 | 4923<br>ಚು.ರ.ಪ್ರ. 1554<br>ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ<br>ವಿಪನದಿ:17.03.2015 | ಕುಂದಾಪುರ ಪುರಸಭೆಯಿಂದ ಅನಗಳ್ಳಿ ಗ್ರಾಮಕ್ಕೆ ಹೋಗುವ ರಸ್ತೆಯು ಲೋಕೋಪಯೋಗಿ ಇಲಾಖೆ ರಸ್ತೆಯಾಗಿದ್ದು, ಸೇತುವೆಯು ಶಿಥಿಲಗೊಂಡಿರುವುದರಿಂದ, ವಾಹನ ಸಂಚಾರವು ಸ್ಥಗಿತಗೊಂಡಿದ್ದು, ಸದರಿ ಸೇತುವೆಯನ್ನು ನಿರ್ಮಿಸುವ ಬಗ್ಗೆ. | ಕುಂದಾಪುರ–ಅನಗಳ್ಳಿ ರಸ್ತೆಯನ್ನು ದಿನಾಂಕ; 05.04.2007ರಲ್ಲಿ ಮೇಲ್ದರ್ಜೆಗೇರಿಸಲ್ಪಟ್ಟು ಜಿಲ್ಲಾ ಮುಖ್ಯ ರಸ್ತೆಯಾಗಿರುತ್ತದೆ. ಇದರ ಉದ್ದ 2.0 ಕಿ.ಮೀ. ಇದ್ದು ಪ್ರಸ್ತಾವಿತ ಅನಗಳ್ಳಿ ಸೇತುವೆಯು ರಸ್ತೆಯ ಚೈನೇಜ್ 0.00ರಲ್ಲಿ (ಕುಂದಾಪುರ ಬದಿ) 70.00 ಮೀ. ಉದ್ದದ ಉಪ್ಪು ನೀರು ತಡೆ ಅಣೆಕಟ್ಟನ್ನು (Salt water exclusion dam cum foot bridge) 1983ರಲ್ಲಿ ನಿರ್ಮಿಸಲಾಗಿರುತ್ತದೆ. ಸದರಿ ಸೇತುವೆಗೆ ಬದಲಿಗೆ ಹೊಸ ಸೇತುವೆ ನಿರ್ಮಿಸಲು ಲೋಕೋಪಯೋಗಿ ಇಲಾಖೆಯಿಂದ ಲೆಕ್ಕ ಶೀರ್ಷಿಕೆ 5054–03–101–0–02–132 ಜಿಲ್ಲಾ ಮುಖ್ಯ ರಸ್ತೆ ಸೇತುವೆಗಳು ಅಡಿಯಲ್ಲಿ ರೂ.500.00 ಲಕ್ಷಗಳಿಗೆ 2014–15ನೇ ಸಾಲಿನ ಅಪೆಂಡಿಕ್ಸ್–ಇ ಹೊಸ | ದಿನಾಂಕ: 09–10–2018ರ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ಅನಗಳ್ಳಿಯಿಂದ ಕುಂದಾಪುರಕ್ಕೆ ಹೋಗುವ ಮುಖ್ಯ ರಸ್ತೆಯಲ್ಲಿನ ಸೇತುವೆ ಕಾಮಗಾರಿಯನ್ನು ರೂ.5.94 ಕೋಟಿ ಗುತ್ತಿಗೆ ಮೊತ್ತಕ್ಕೆ M/s. Philip D'costa and Co., ಕುಂದಾಪುರ ರವರಿಗೆ ದಿ:09.09.2014ರಂದು ವಹಿಸಿ ಕಾಮಗಾರಿಯನ್ನು ಪೂರ್ಣಗೊಳಿಸಲು 18 ತಿಂಗಳು ಕಾಲಾವಕಾಶ ನೀಡಲಾಗಿತ್ತು. ಅದರಂತೆ, ಕಾಮಗಾರಿಯನ್ನು ದಿ: 15.09.2015ರಂದು ಪ್ರಾರಂಭಿಸಿ, ದಿ: 14.03.2017ರಂದು ಪೂರ್ಣಗೊಳಿಸಲಾಗಿದ್ದು, ಸೇತುವೆಯನ್ನು ಸಂಚಾರಕ್ಕೆ ಮುಕ್ತಗೊಳಿಸಲಾಗಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಸಮಿತಿಯು ಒಪ್ಪಿ ಭರವಸೆಯನ್ನು ಮುಕ್ತಾಯಗೊಳಿಸಿತು. |

| | | | | |
|---|---|---|---|---|
| | | | ಕಾಮಗಾರಿಗಳ ಪಟ್ಟಿಯಲ್ಲಿ ಸೇರ್ಪಡೆಗೊಳಿಸುವ ಕ್ರಮ ಪರಿಶೀಲನೆಯಲ್ಲಿದೆ ಎಂದು ಮಾನ್ಯ ಲೋಕೋಪಯೋಗಿ ಸಚಿವರು ತಿಳಿಸಿದರು. | |
| 19 | 4924<br>ಚು.ರ.ಪ್ರ. 1558<br>ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ<br>ವಿಪನದಿ:17.03.2015 | ತುರುವೇಕೆರೆ ನಗರದಲ್ಲಿ ಲೋಕೋಪಯೋಗಿ ಕಚೇರಿ ಕಾಮಗಾರಿ ಸ್ಥಗಿತಗೊಂಡಿದ್ದು, ಪ್ರಸ್ತುತ ವರ್ಷದಲ್ಲಿ ಕಾಮಗಾರಿಯನ್ನು ಪೂರ್ಣಗೊಳಿಸುವ ಬಗ್ಗೆ. | ತುರುವೇಕೆರೆ ನಗರದಲ್ಲಿ ಲೋಕೋಪಯೋಗಿ ಕಛೇರಿ ಕಾಮಗಾರಿಯನ್ನು 2008–09ನೇ ಸಾಲಿನಲ್ಲಿ ಪ್ರಾರಂಭಿಸಲಾಯಿತು. ರೂ. 50.00 ಲಕ್ಷಗಳ ಕಾಮಗಾರಿಯ ಅಂದಾಜಿನಲ್ಲಿ ನೆಲಮಹಡಿ ಹಾಗೂ ಒಂದನೇ ಮಹಡಿಯಲ್ಲಿ ಆರ್.ಸಿ.ಸಿ. ಕಂಬಗಳು ಹಾಗೂ ಮೇಲ್ಚಾವಣಿ ನಿರ್ಮಿಸಲು ಮಾತ್ರ ಅವಕಾಶ ಕಲ್ಪಿಸಲಾಗಿದ್ದು, ಇವುಗಳನ್ನು ಭೌತಿಕವಾಗಿ ದಿನಾಂಕ: 25.07.2011ರಂದು ಪೂರ್ಣಗೊಳಿಸಲಾಗಿದೆ. ಉಳಿದ ಕಾಮಗಾರಿಗಳಿಗೆ ಅನುದಾನ ಲಭ್ಯವಿಲ್ಲದ ಕಾರಣ ಕಾಮಗಾರಿಯನ್ನು ಸಮಗ್ರವಾಗಿ ಪೂರ್ಣಗೊಳಿಸಲಾಗಿರುವುದಿಲ್ಲ.<br><br>ಒಂದನೇ ಮಹಡಿಯಲ್ಲಿ ಬಾಕಿ ಉಳಿದಿರುವ ಕಾಮಗಾರಿಗಳನ್ನು ಶೀಘ್ರದಲ್ಲಿ ಕೈಗೊಳ್ಳಲಾಗುವುದು ಎಂದು ಮಾನ್ಯ ಲೋಕೋಪಯೋಗಿ ಸಚಿವರು ತಿಳಿಸಿದರು. | ದಿನಾಂಕ: 09–10–2018ರ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ತುರುವೇಕೆರೆ ನಗರದಲ್ಲಿ ಲೋಕೋಪಯೋಗಿ ಕಛೇರಿ ಕಾಮಗಾರಿಯನ್ನು 2008–09ನೇ ಸಾಲಿನಲ್ಲಿ ಪ್ರಾರಂಭಿಸಲಾಯಿತು. ರೂ.50.00 ಲಕ್ಷಗಳ ಅಂದಾಜಿನಲ್ಲಿ ನೆಲಮಹಡಿ ಹಾಗೂ ಒಂದನೇ ಮಹಡಿಯಲ್ಲಿ ಆರ್.ಸಿ.ಸಿ. ಕಂಬಗಳು ಹಾಗೂ ಮೇಲ್ಚಾವಣಿ ನಿರ್ಮಿಸಲು ಮಾತ್ರ ಅವಕಾಶ ಕಲ್ಪಿಸಲಾಗಿದ್ದು, ಇವುಗಳನ್ನು ಭೌತಿಕವಾಗಿ ದಿನಾಂಕ:25/07/2011 ರಂದು ಪೂರ್ಣಗೊಳಿಸಲಾಗಿದೆ. ಉಳಿದ ಕಾಮಗಾರಿಗಳೀಗೆ 2016–17ನೇ ಸಾಲಿನಲ್ಲಿ ರೂ.50.00 ಲಕ್ಷಗಳ ಅನುದಾನ ನೀಡಲಾಗಿದ್ದು, ಸದರಿ ಅಂದಾಜಿನಲ್ಲಿ ಬಾಕಿ ಉಳಿದ ಕಾಮಗಾರಿಗಳನ್ನು ಅನುವು ಮಾಡಿಕೊಂಡು ಸದರಿ ಕಾಮಗಾರಿಯನ್ನು ದಿನಾಂಕ:19/12/2016 ರಂದು ಪ್ರಾರಂಭಿಸಿ ದಿನಾಂಕ:31/03/2017 ರಂದು ಎಲ್ಲಾ ವಿಧದಲ್ಲೂ ಪೂರ್ಣಗೊಳಿಸಲಾಗಿದೆ. ಕಛೇರಿಯನ್ನು ನೂತನ ಕಟ್ಟಡದಲ್ಲಿ ನಡೆಸಲಾಗುತ್ತಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಸಮಿತಿಯು ಒಪ್ಪಿ ಭರವಸೆಯನ್ನು ಮುಕ್ತಾಯಗೊಳಿಸಿತು. |

| | | | | |
|---|---|---|---|---|
| 20 | 4926<br>ಚು.ರ.ಪ್ರ. 1567<br>ಡಾ: ಮತ್ತಿಕಟ್ಟಿ ವೀರಣ್ಣ<br>ವಿಪನದಿ:17.03.2015 | ನೈಸ್ ಕಂಪನಿಯ ನಿರ್ವಹಣೆಯಲ್ಲಿರುವ ಹುಬ್ಬಳ್ಳಿ–ಧಾರವಾಡ ಬೈಪಾಸ್ ರಸ್ತೆಯಲ್ಲಿ ದ್ವಿಮುಖ ವಾಹನ ಸಂಚಾರದ ದಟ್ಟಣೆಯಿಂದ ಅಪಘಾತಗಳು ಹೆಚ್ಚಾಗುತ್ತಿದ್ದು, ಪ್ರಸ್ತುತ ಸದರಿ ರಸ್ತೆಗೆ ಅಗತ್ಯವಾದ ರಿಪೇರಿ ಮತ್ತು ಅಗಲೀಕರಣ ಕಾಮಗಾರಿಗಳನ್ನು ಕೈಗೊಳ್ಳುವ ಬಗ್ಗೆ | ಅಗತ್ಯವಾದ ರಿಪೇರಿಯನ್ನು ಮೆ: ನಂದಿ ಹೈವೇ ಡೆವಲಪರ್ಸ್, ಇವರು ನಿಯಮಿತವಾಗಿ ಮಾಡುತ್ತಿದ್ದಾರೆ ಹಾಗೂ ಸದರಿ ರಸ್ತೆಯನ್ನು ಚತುಷ್ಪಥ ರಸ್ತೆಯನ್ನಾಗಿ ನಿರ್ಮಿಸುವ ಪ್ರಸ್ತಾವನೆ ಪರಿಶೀಲನೆಯಲ್ಲಿದೆ ಎಂದು ಮಾನ್ಯ ಲೋಕೋಪಯೋಗಿ ಸಚಿವರು ತಿಳಿಸಿದರು. | ದಿನಾಂಕ: 09–10–2018ರ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ಹುಬ್ಬಳ್ಳಿ–ಧಾರವಾಡ ಬೈಪಾಸ್ ರಸ್ತೆ ಕಿ.ಮೀ 403.8 ರಿಂದ 433.28ರವರೆಗೆ ಒಟ್ಟು 30.30 ಕಿ.ಮೀ. ರಸ್ತೆಯನ್ನು 4/6 ಪಥ ರಸ್ತೆಯನ್ನಾಗಿ ಪರಿವರ್ತಿಸುವ ಕುರಿತು ವಿಸ್ತೃತ ಯೋಜನಾ ವರದಿಯನ್ನು ತಯಾರಿಸಲು ಸಮಾಲೋಚಕರನ್ನು ನೇಮಕ ಮಾಡಲಾಗಿದೆ. ಸದರಿ ಸಮಾಲೋಚಕರು ವಿಸ್ತೃತ ಯೋಜನಾ ವರದಿಯನ್ನು ಯೋಜನಾ ನಿರ್ದೇಶಕರು, ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ, ಧಾರವಾಡ ಇವರಿಗೆ ಸಲ್ಲಿಸುವ ಹಂತದಲ್ಲಿದ್ದು, ಸದರಿ ವಿಸ್ತೃತ ಯೋಜನಾ ವರದಿಯು ಅನುಮೋದನೆಗೊಂಡ ನಂತರ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುವುದು ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಸಮಿತಿಯು ಒಪ್ಪಿ ಭರವಸೆಯನ್ನು ಮುಕ್ತಾಯಗೊಳಿಸಿತು. |
| 21 | 4927<br>ಚು.ಗು.ಪ್ರ 1325<br>ಶ್ರೀ ವೀರಕುಮಾರ್ ಅಪ್ಪಾಸೊ ಪಾಟೀಲ್<br>ದಿನಾಂಕ;15.07.2014 | ಬೆಳಗಾಂ ಜಿಲ್ಲೆಯಲ್ಲಿ ಲೋಕೋಪಯೊೀಗಿ ಇಲಾಖೆಯಲ್ಲಿ ಪ್ರಗತಿಯಲ್ಲಿರುವ ಯೋಜನೆಗಳ ಬಗ್ಗೆ. | ಇಲಾಖೆಯ ವಿವಿಧ ಲೆಕ್ಕ ಶೀರ್ಷಿಕೆಗಳಡಿ ರಾಜ್ಯ ಹೆದ್ದಾರಿ ರಸ್ತೆ ಮತ್ತು ಜಿಲ್ಲಾ ಮುಖ್ಯ ರಸ್ತೆಗಳ ಸುಧಾರಣೆ ಹಾಗೂ ನವೀಕರಣ ಕ್ಕಾಗಿ ಹಾಗೂ ರಾಜ್ಯ ಹೆದ್ದಾರಿ ಮತ್ತು ಜಿಲ್ಲಾ ಮುಖ್ಯ ರಸ್ತೆಗಳಲ್ಲಿ ಬರುವ ಸೇತುವೆಗಳ ನಿರ್ಮಾಣ ಮತ್ತು ಪರಿಶಿಷ್ಟ ಜಾತಿ, | ದಿನಾಂಕ: 09–10–2018ರ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ಬೆಳಗಾವಿ ಜಿಲ್ಲೆಯಲ್ಲಿ ಲೋಕೋಪಯೋಗಿ ಇಲಾಖೆ ವ್ಯಾಪ್ತಿಯಲ್ಲಿ ಬರುವ ಬೆಳಗಾವಿ ಹಾಗೂ ಚಿಕ್ಕೋಡಿ ವಿಭಾಗಗಳಡಿಯಲ್ಲಿ 2014–15ನೇ ಸಾಲಿನಲ್ಲಿ ಕೈಗೊಂಡ ಎಲ್ಲ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದ್ದು ಲೆಕ್ಕ ಶೀರ್ಷಿಕೆವಾರು ವಿವರಗಳು ಕೆಳಗಿನಂತಿವೆ: |

| ಕ್ರ. ಸಂ. | ಲೆಕ್ಕ ಶೀರ್ಷಿಕೆ | ವಿಭಾಗದ ಹೆಸರು | ಒಟ್ಟು ಕಾಮಗಾರಿಗಳ ಸಂಖ್ಯೆ | ಅಂದಾಜು ಮೊತ್ತ | ಒಟ್ಟು ವೆಚ್ಚ | ಪೂರ್ಣಗೊಂಡ ರಸ್ತೆ ಉದ್ದ (ಕಿ.ಮೀ ಗಳಲ್ಲಿ) |
|---|---|---|---|---|---|---|
| 1. | 2 | 3 | 4 | 5 | 6 | 7 |
| 1. | 5054 ರಾ.ಹೆ.ಸುಧಾರಣೆ | ಬೆಳಗಾವಿ | 14 | 3756.06 | 1309.95 | 39.82 |
| | | ಚಿಕ್ಕೋಡಿ | 23 | 5740.00 | 6138.64 | 87.74 |
| | | ಒಟ್ಟು | 37 | 9496.06 | 7448.59 | 127.56 |
| 2. | 5054 ರಾ.ಹೆ.ನವೀಕರಣ | ಬೆಳಗಾವಿ | 1 | 500.00 | 506.66 | 5.36 |
| | | ಚಿಕ್ಕೋಡಿ | 5 | 640.00 | 767.86. | 21.41 |
| | | ಒಟ್ಟು | 6 | 1140.00 | 1274.52 | 26.77 |

ಪರಿಶಿಷ್ಟ ಪಂಗಡಗಳ ಜನಾಂಗಗಳು ವಾಸಿಸುವ ಕಾಲೋನಿ ಗಳಲ್ಲಿ ಸಿಮೆಂಟ್ ರಸ್ತೆ ಮೋರಿ ನಿರ್ಮಾಣ ದಂತಹ ಕಾಮಗಾರಿ ಗಳನ್ನು ಪ್ರಸ್ತಾಪಿಸ ಲಾಗಿದ್ದು, ಆಯಾ ಕಾಮಗಾರಿಗಳಿಗೆ ಒದಗಿಸಲಾದ ಅನುದಾನ ಹಾಗೂ ಕಾಮಗಾರಿಗಳ ವ್ಯಾಪ್ತಿಯನ್ನಾಧರಿಸಿ (ಸ್ಕೋಪ್) ನಿಗಧಿಪಡಿಸಿದ ಕಾಲಮಿತಿಯೊಳಗೆ ಕಾಮಗಾರಿಗಳನ್ನು ಕೈಗೊಂಡು ಪೂರ್ಣಗೊಳಿಸಲು ಕ್ರಮ ವಹಿಸಲಾಗುತ್ತಿದೆ ಎಂದು ಮಾನ್ಯ ಲೋಕೋಪಯೋಗಿ ಸಚಿವರು ತಿಳಿಸಿದರು

| | | | | | | |
|---|---|---|---|---|---|---|
| 3 | 5054 ಜಿ.ಮು..ರ. ನವೀಕರಣ | ಬೆಳಗಾವಿ | 27 | 1165.00 | 1163.48 | 33.35 |
| | | ಚಿಕ್ಕೋಡಿ | 44 | 4125.00 | 4293.15 | 137.25 |
| | | ಒಟ್ಟು | 71 | 5290.00 | 5456.63 | 170.60 |
| 4 | 5054 ಜಿ.ಮು..ರ. ನವೀಕರಣ | ಬೆಳಗಾವಿ | 9 | 2410.00 | 1344.49 | 13.64 |
| | | ಚಿಕ್ಕೋಡಿ | 1 | 70.00 | 71.11 | 3.40 |
| | | ಒಟ್ಟು | 10 | 2480.00 | 1415.60 | 17.04 |
| 5 | ರಾ..ಹೆ.ನವೀಕರಣ | ಬೆಳಗಾವಿ | 2 | 565.00 | 597.54 | 2 |
| | | ಚಿಕ್ಕೋಡಿ | 3 | 270.00 | 286.20 | 3 |
| | | ಒಟ್ಟು | 5 | 835.00 | 884.20 | 5 |
| 6 | 5054 ಜಿ.ಮು..ರ. ನವೀಕರಣ | ಬೆಳಗಾವಿ | 3 | 270.00 | 79.40 | 3 |
| | | ಚಿಕ್ಕೋಡಿ | 2 | 50.00 | 46.66 | 2 |
| | | ಒಟ್ಟು | 5 | 320.00 | 126.06 | 5 |
| 7 | ಎಸ್.ಡಿ.ಪಿ. | ಬೆಳಗಾವಿ | 5 | 79.72 | 78.31 | 5 |
| | | ಚಿಕ್ಕೋಡಿ | 17 | 258.00 | 250.86 | 4.79 |
| | | ಒಟ್ಟು | 22 | 338.64 | 329.17 | 9.79 |
| 8. | ಎಸ್.ಸಿ.ಪಿ. | ಬೆಳಗಾವಿ | 36 | 695.36 | 717.41 | 11.52 |
| | | ಚಿಕ್ಕೋಡಿ | 103 | 1653.81 | 1589.53 | 42.43 |
| | | ಒಟ್ಟು | 139 | 2349.17 | 2306.93 | 53.95 |
| 9. | ಟಿ.ಎಸ್.ಪಿ. | ಬೆಳಗಾವಿ | 41 | 602.57 | 598.52 | 8.76 |
| | | ಚಿಕ್ಕೋಡಿ | 36 | 510.63 | 516.52 | 7.92 |
| | | ಒಟ್ಟು | 77 | 1113.20 | 1114.62 | 16.68 |
| 10 | ಸಿ.ಎಮ್‌ಜಿ.ಆರ್.ವೈ (ಯೋಜನೇತರ) | ಬೆಳಗಾವಿ | 18 | 499.08 | 499.08 | 19.05 |
| | | ಚಿಕ್ಕೋಡಿ | 13 | 583.35 | 481.73 | 25.78 |
| | | ಒಟ್ಟು | 31 | 1082.43 | 980.81 | 44.83 |
| 11 | ಸಿ.ಎಮ್‌ಜಿ.ಆರ್.ವೈ (ಯೋಜನೇತರ) | ಬೆಳಗಾವಿ | 18 | 511.75 | 514.57 | 23.80 |
| | | ಚಿಕ್ಕೋಡಿ | 16 | 603.03 | 620.18 | 43.13 |
| | | ಒಟ್ಟು | 34 | 1114.78 | 1134.75 | 66.93 |
| 12 | 13ನೇ ಹಣಕಾಸು | ಬೆಳಗಾವಿ | 21 | 1712.35 | 1548.91 | 81.17 |
| | | ಚಿಕ್ಕೋಡಿ | 22 | 1380.00 | 1438.51 | 71.38 |
| | | ಒಟ್ಟು | 43 | 3092.35 | 2987.42 | 152.55 |
| 13 | ನಬಾರ್ಡ್ | ಬೆಳಗಾವಿ | 11 | 973.00 | 917.76 | 31.16 |
| | | ಚಿಕ್ಕೋಡಿ | 12 | 980.00 | 1070.29 | 34.03 |

| | | | | |
|---|---|---|---|---|
| | | | | <table><tr><td></td><td></td><td>ಒಟ್ಟು</td><td>23</td><td>1953.00</td><td>1988.05</td><td>65.19</td></tr><tr><td></td><td></td><td></td><td>503</td><td>30604.63</td><td>27447.35</td><td>751.89</td></tr></table><br>ಇಲಾಖಾಧಿಕಾರಿಗಳು ಮೇಲ್ಕಂಡಂತೆ ನೀಡಿದ ಉತ್ತರವನ್ನು ಸಮಿತಿಯು ಒಪ್ಪಿ ಭರವಸೆಯನ್ನು ಮುಕ್ತಾಯಗೊಳಿಸಿತು. |
| 22 | 4932<br>ಚು.ಗು.ಪ್ರ: 810<br>ಶ್ರೀ ರಾಮಚಂದ್ರಗೌಡ<br>ವಿಪನದಿ: 10/02/2015 | ಬೆಂಗಳೂರಿನ ರಾಜಾಜಿನಗರದ 6ನೇ ಬ್ಲಾಕ್‌ನಲ್ಲಿರುವ ಹೆಚ್.ಬ್ಲಾಕ್‌ನಲ್ಲಿರುವ ಸರ್ಕಾರಿ ನೌಕರರ ವಸತಿ ಗೃಹಗಳನ್ನು ಸುಸ್ಥಿತಿಯಲ್ಲಿಡುವ ಬಗ್ಗೆ. | ಪರಿಶೀಲನೆ ನಡೆಸಿ ಸುಸ್ಥಿತಿಯಲ್ಲಿಡಲು ಕ್ರಮ ಕೈಗೊಳ್ಳ ಲಾಗುವುದೆಂದು ಮಾನ್ಯ ಲೋಕೋಪಯೋಗಿ ಸಚಿವರು ತಿಳಿಸಿದರು. | ದಿನಾಂಕ: 09-10-2018ರ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ಬೆಂಗಳೂರು ರಾಜಾಜಿನಗರ 6ನೇ ಬ್ಲಾಕ್‌ನಲ್ಲಿರುವ ಆರ್.ಹೆಚ್.ಎಸ್. ವಸತಿಗೃಹ ಸಂಖ್ಯೆ 'ಹೆಚ್' ಬ್ಲಾಕ್‌ನಲ್ಲಿ 24 ವಸತಿಗೃಹಗಳಲ್ಲಿ ದುರಸ್ತಿ ಹಾಗೂ ಅಭಿವೃದ್ಧಿ ಕೆಲಸಗಳನ್ನು ಅವಶ್ಯವಿರುವ ವಸತಿಗೃಹಗಳಲ್ಲಿ ಈ ಕೆಳಕಂಡ ಕಾಮಗಾರಿಗಳನ್ನು ಕೈಗೊಂಡು ಸುಸ್ಥಿತಿಯಲ್ಲಿಡಲಾಗಿದೆ.<br><br>1) 2015-16ರಲ್ಲಿ - 6 ಸಂಖ್ಯೆ - ಒಟ್ಟು ರೂ.25.30 ಲಕ್ಷಗಳು<br>2) 2016-17ರಲ್ಲಿ - 8 ಸಂಖ್ಯೆ - ಒಟ್ಟು ರೂ.37.84 ಲಕ್ಷಗಳು<br>3) 2017-18ರಲ್ಲಿ - 13 ಸಂಖ್ಯೆ - ಒಟ್ಟು ರೂ.54.19 ಲಕ್ಷಗಳು<br>ಇಲಾಖಾಧಿಕಾರಿಗಳು ಮೇಲ್ಕಂಡಂತೆ ನೀಡಿದ ಉತ್ತರವನ್ನು ಸಮಿತಿಯು ಒಪ್ಪಿ ಭರವಸೆಯನ್ನು ಮುಕ್ತಾಯಗೊಳಿಸಿತು. |
| 23 | 4934<br>ಚು.ಗು.ಪ್ರ. 813<br>ಶ್ರೀ ರಾಮಚಂದ್ರಗೌಡ<br>ವಿಪನದಿ: 10/02/2015 | ಬಾದಾಮಿ, ಐಹೊಳೆ, ಪಟ್ಟದಕಲ್ಲು, ರಾಷ್ಟ್ರೀಯ ಹೆದ್ದಾರಿ ರಸ್ತೆಗಳನ್ನು ಅಭಿವೃದ್ಧಿಪಡಿಸುವ ಬಗ್ಗೆ. | ಸದರಿ ರಸ್ತೆಗಳನ್ನು ಪ್ರಾಧಿಕಾರಗಳಿಂದ ಅಗಲೀಕರಣ ಮಾಡಲಾಗುತ್ತಿದೆ. ಇನ್ನುಳಿದ ರಸ್ತೆಗಳನ್ನು ಹಂತ ಹಂತವಾಗಿ ಪ್ರತಿ ವರ್ಷ ಅಪೆಂಡಿಕ್ಸ್-ಇ ಅಡಿಯಲ್ಲಿ ಅಭಿವೃದ್ಧಿಪಡಿಸಲಾಗುವುದು ಎಂದು ಮಾನ್ಯ ಲೋಕೋಪಯೋಗಿ ಸಚಿವರು ತಿಳಿಸಿದರು. | ದಿನಾಂಕ: 09-10-2018ರ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ರಾಷ್ಟ್ರೀಯ ಹೆದ್ದಾರಿ ವಲಯಕ್ಕೆ ಸಂಬಂಧಿಸಿದಂತೆ, ಹುನಗುಂದ-ಐಹೊಳೆ-ಪಟ್ಟದಕಲ್ಲು-ಬದಾಮಿ-ರಾಮದುರ್ಗ ರಸ್ತೆಯನ್ನು ಪೇವ್ಡ್ ಶೋಲ್ಡರ್ ಸಮೇತ ಎರಡು ಪಥದ ರಸ್ತೆಯಾಗಿ ಮೇಲ್ದರ್ಜೆಗೇರಿಸಲು ಕೇಂದ್ರ ಭೂ-ಸಾರಿಗೆ ಮತ್ತು ಹೆದ್ದಾರಿ ಮಂತ್ರಾಲಯ, ನವದೆಹಲಿ ಇವರಿಂದ ದಿ: 21.11.2016ರಲ್ಲಿ ತಾತ್ವಿಕವಾಗಿ ಅನುಮೋದನೆ ದೊರೆತಿದ್ದು ವಿಸ್ತೃತ ಯೋಜನಾ ವರದಿಗೆ ಕೇಂದ್ರ ಭೂ-ಸಾರಿಗೆ ಮತ್ತು ಹೆದ್ದಾರಿಗಳ ಮಂತ್ರಾಲಯ, ನವದೆಹಲಿ ಇವರಿಂದ ಅನುಮೋದನೆ ದೊರೆತ ನಂತರ ನಿಯಮಾನುಸಾರ ಕಾಮಗಾರಿ ಕೈಗೆತ್ತಿಕೊಳ್ಳಲಾಗುವುದು. |

| | | | | |
|---|---|---|---|---|
| | | | | ಪ್ರಸ್ತುತ ಯೋಜನೆಯ ಅಲೈನ್‌ಮೆಂಟ್ ತಯಾರಿಕೆ ಕಾರ್ಯ ಮುಗಿದಿದ್ದು, ಕೇಂದ್ರ ಭೂ-ಸಾರಿಗೆ ಮತ್ತು ಹೆದ್ದಾರಿ ಮಂತ್ರಾಲಯ, ನವದೆಹಲಿ ರವರಿಗೆ ಅನುಮೋದನೆಗಾಗಿ ಸಲ್ಲಿಸಲಾಗಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |
| 24 | 4935<br>ಚು.ರ.ಪ್ರ. 830<br>ಶ್ರೀ ಬಿ. ರಾಮಕೃಷ್ಣ<br>ವಿಪನದಿ: 10/02/2015 | ಮೈಸೂರಿನಿಂದ ತಿಪಟೂರಿಗೆ ಅತ್ಯಂತ ಹತ್ತಿರವಾದ ಹಾಗೂ ನೇರವಾದ ಮಾರ್ಗವಾಗಿರುವ ಮಂಡ್ಯ-ಹಾಸನ-ತುಮಕೂರು ಜಿಲ್ಲೆಗಳ ಗ್ರಾಮಾಂತರ ಪ್ರದೇಶಗಳಲ್ಲಿ ಹಾದು ಹೋಗುವ ರಸ್ತೆಯನ್ನು ಹೆದ್ದಾರಿಯನ್ನಾಗಿ ಪರಿವರ್ತಿಸಿ ಅಭಿವೃದ್ಧಿಪಡಿಸುವ ಬಗ್ಗೆ. | ಸುಮಾರು 15 ರಿಂದ 20 ಕಿ.ಮೀ. ಅಂತರದಲ್ಲಿ ಈಗಾಗಲೇ 3 ವಿವಿಧ ರಾಜ್ಯ ಹೆದ್ದಾರಿಗಳಿವೆ, ರಾಜ್ಯ ಹೆದ್ದಾರಿ ಮಾನದಂಡಗಳನ್ವಯ ಅರ್ಹವಿದ್ದಲ್ಲಿ, ರಾಜ್ಯ ಹೆದ್ದಾರಿಯಾಗಿ ಮೇಲ್ದರ್ಜೆಗೇರಿಸುವ ಬಗ್ಗೆ ಸರ್ಕಾರದ ಪರಿಶೀಲನೆಯಲ್ಲಿದೆ ಎಂದು ಮಾನ್ಯ ಲೋಕೋಪಯೋಗಿ ಸಚಿವರು ತಿಳಿಸಿದರು. | ದಿನಾಂಕ: 09-10-2018ರ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ಮೈಸೂರಿನಿಂದ ತಿಪಟೂರಿಗೆ – ಶ್ರೀರಂಗಪಟ್ಟಣ – ಪಾಂಡವಪುರ – ಕೆ.ಆರ್.ಪೇಟೆ – ಕೊಟ್ಟಿಗೆಹಳ್ಳಿ – ಸಂತೇಬಾಚಹಳ್ಳಿ – ಬೆಟ್ಟದಹಳ್ಳಿ – ಜುಟ್ಟನಹಳ್ಳಿ – ಹಿರಿಸಾವೆ – ದಿಡಗ – ನೊಣವಿನಕೆರೆ ಮೂಲಕ ತಿಪಟೂರಿಗೆ ಸೇರುವ ರಸ್ತೆಯು ಅತ್ಯಂತ ಹತ್ತಿರವಾದ ಹಾಗೂ ನೇರವಾದ ಮಾರ್ಗವಾಗಿದ್ದು, ಈಗಾಗಲೇ ಕೆಳಕಂಡ ರಾಜ್ಯ ಹೆದ್ದಾರಿಗಳು ಇರುತ್ತವೆ :<br><br>• ಪಾಂಡವಪುರ ರೈಲ್ವೆ ನಿಲ್ದಾಣದಿಂದ ಕೆ.ಆರ್. ಪೇಟೆ ವರೆಗೆ 35.00 ಕಿ.ಮೀ. ರಸ್ತೆ ಉದ್ದವಿದ್ದು, ಇದು ಪ್ರಸ್ತುತ ಶ್ರೀರಂಗಪಟ್ಟಣ – ಅರಸೀಕೆರೆ ರಾಜ್ಯ ಹೆದ್ದಾರಿ -7 ರ ಭಾಗವಾಗಿರುತ್ತದೆ.<br>• ಕೆ.ಆರ್. ಪೇಟೆಯಿಂದ ಕೊಟಗಹಳ್ಳಿ ವರೆಗಿನ ರಸ್ತೆಯು 10.00 ಕಿ.ಮೀ. ಉದ್ದವಿದ್ದು, ಇದು ಪ್ರಸ್ತುತ ಬೆಂಗಳೂರು – ಜಲಸೂರು ರಾಜ್ಯ ಹೆದ್ದಾರಿ -85 ರ ಭಾಗವಾಗಿರುತ್ತದೆ.<br>• ಬೆಟ್ಟದಹಳ್ಳಿಯಿಂದ ಜುಟ್ಟನಹಳ್ಳಿ, ಹಿರಿಸಾವೆ ವರೆಗಿನರಸ್ತೆಯು 10.00 ಕಿ.ಮೀ. ಉದ್ದವಿದ್ದು, ಇದು ಪ್ರಸ್ತುತ ಹಿರಿಸಾವೆ – ಚಟ್ಟನಹಳ್ಳಿ ರಾಜ್ಯ ಹೆದ್ದಾರಿ ಭಾಗವಾಗಿರುತ್ತದೆ.<br>• ರಾಜ್ಯ ಹೆದ್ದಾರಿ -47 ರಿಂದ ತಿಪಟೂರಿಗೆ 4.50 ಕಿ.ಮೀ. ಉದ್ದವಿದ್ದು, ಇದು ರಾಜ್ಯ ಹೆದ್ದಾರಿ ಆಗಿರುತ್ತದೆ. |

| | | | | |
|---|---|---|---|---|
| | | | | • ಜುಟ್ಟನಹಳ್ಳಿಯಿಂದ ಹಿರಿಸಾವೆ ವರೆಗಿನ 10 ಕಿಮೀ ಉದ್ದದ ರಸ್ತೆಯು ಹಿರಿಸಾವೆ – ಚಟ್ಟನಹಳ್ಳಿ ರಾಜ್ಯ ಹೆದ್ದಾರಿ–8 ರ ಭಾಗವಾಗಿರುತ್ತದೆ.<br>• ರಾಜ್ಯ ಹೆದ್ದಾರಿ–47 ರಿಂದ ತಿಪಟೂರಿಗೆ 4.50 ಕಿಮೀ ಉದ್ದವಿದ್ದು, ಇದು ರಾಜ್ಯ ಹೆದ್ದಾರಿ ಆಗಿರುತ್ತದೆ.<br>ಹಾಗೂ ಎಡಿಯೂರು – ತಿಪಟೂರು ಜಿಲ್ಲಾ ಮುಖ್ಯ ರಸ್ತೆಯನ್ನು ರಾಜ್ಯ ಹೆದ್ದಾರಿಯಾಗಿ ಮೇಲ್ದರ್ಜೆಗೇರಿಸುವ ಪ್ರಸ್ತಾವನೆಯು ಪರಿಶೀಲನಾ ಹಂತದಲ್ಲಿರುತ್ತದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |
| 25 | 1409<br>ಚು.ರ.ಪ್ರ: 349<br>ಶ್ರೀ ಜಿ. ಮಧುಸೂದನ್<br>ವಿಪನದಿ: 28.03.2003 | ನಂಜನಗೂಡಿನಲ್ಲಿ ನಿರ್ಮಿಸಿರುವ ಮಿನಿ ವಿಧಾನಸೌಧ ಕುಸಿದಿದ್ದು, ದೋಷಪೂರಿತ ಕಟ್ಟಡ ನಿರ್ಮಾಣಕ್ಕೆ ಕಾರಣರಾದವರ ವಿರುದ್ಧ ಕ್ರಮ ಕೈಗೊಳ್ಳುವ ಬಗ್ಗೆ. | ಸದರಿ ಕಟ್ಟಡದ ದೋಷಪೂರಿತ ನಿರ್ಮಾಣಕ್ಕೆ ಹಾಗೂ ಅಕ್ರಮಗಳಿಗೆ ಕಾರಣರಾದವರ ವಿರುದ್ದ ಕ್ರಮ ಕೈಗೊಳ್ಳುವ ಬಗ್ಗೆ ಲೋಕಾಯುಕ್ತದಲ್ಲಿ ದೂರು ದಾಖಲಾಗಿದೆ. ಲೋಕಾಯುಕ್ತ ದಿಂದ ವರದಿ ಬಂದ ನಂತರ ಅದರ ಶಿಫಾರಸ್ಸಿನ ಮೇರೆಗೆ ಸಂಬಂಧಪಟ್ಟ ಅಧಿಕಾರಿಗಳ ನೌಕರರ ವಿರುದ್ದ ಕ್ರಮ ಕೈಗೊಳ್ಳಲಾಗುವುದು ಎಂದು ಮಾನ್ಯ ಲೋಕೋಪಯೋಗಿ ಸಚಿವರು ತಿಳಿಸಿದರು. | ದಿನಾಂಕ: 28.02.2019ರ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ಸದರಿ ಕಟ್ಟಡದ ದೋಷಪೂರಿತ ನಿರ್ಮಾಣಕ್ಕೆ ಕಾರಣರಾಗಿರಬಹುದಾದ ಅಂದಿನ ಅಧಿಕಾರಿಗಳಿಂದ ಸರ್ಕಾರಕ್ಕೆ ಉಂಟಾಗಿರುವ ಆರ್ಥಿಕ ನಷ್ಟವನ್ನು ವಸೂಲಿ ಮಾಡಲು ಕರ್ನಾಟಕ ಕಂಡಕ್ಟ್ ಆಫ್ ಗೌರ್ನ್‌ಮೆಂಟ್ ಲಿಟಿಗೇಷನ್ ನಿಯಮ 1985ರ ರೀತ್ಯಾ ಸಿವಿಲ್ ಮೊಕದ್ದಮೆ ದಾಖಲಿಸಲು ಲಭ್ಯವಿರುವ ದಾಖಲೆಗಳನ್ನು ಅಧೀಕ್ಷಕ ಇಂಜನಿಯರ್, ಲೋಕೋಪಯೋಗಿ ಇಲಾಖೆ, ಮೈಸೂರು ವೃತ್ತ, ಮೈಸೂರು ಇವರು ದಿ: 26.8.2015ರಲ್ಲಿ ಈ ಕಚೇರಿಗೆ ಸಲ್ಲಿಸಲಾಗಿದ್ದ ಪ್ರಸ್ತಾವನೆಯನ್ನು ಈ ಕಚೇರಿ ಪತ್ರ ಸಂಖ್ಯೆ: ಸಂಕದದ/ಮಿ.ವಿ/ಕ.ಕಾ/466/ವಿಬ/2007–08, ದಿ: 29.10.2015ರಲ್ಲಿ ಸರ್ಕಾರಕ್ಕೆ ಸಲ್ಲಿಸಿರುತ್ತಾರೆ.<br>ಮುಂದುವರೆದಂತೆ, ಸದರಿ ಪ್ರಕರಣವನ್ನು ಮಾನ್ಯ ಲೋಕಾಯುಕ್ತರವರು ದಿ: 13.08.2013ರ ಪತ್ರದಲ್ಲಿ ಪ್ರತಿವಾದಿಗಳ ವಿರುದ್ದ ಆರೋಪ ಸಾಬೀತು ಆಗಿಲ್ಲದಿರುವುದಿಲ್ಲವೆಂದು ತಿಳಿಸಿರುವ ಹಿನ್ನಲೆಯಲ್ಲಿ ಸದರಿ ಪ್ರಕರಣವನ್ನು ಮುಕ್ತಾಯಗೊಳಿಸಲು ಕೋರಲಾಗಿತ್ತು. |

| | | | | |
|---|---|---|---|---|
| | | | | ನ್ಯಾಯ ಸಮ್ಮತವಾದ ತನಿಖೆಗಾಗಿ ಸದರಿ ಕಟ್ಟಡದ ದೋಷಪೂರಿತ ನಿರ್ಮಾಣಕ್ಕೆ ಕಾರಣರಾಗಿರಬಹುದಾದ ಅಂದಿನ ಅಧಿಕಾರಿಗಳಿಂದ ಸರ್ಕಾರಕ್ಕೆ ಉಂಟಾಗಿರುವ ಆರ್ಥಿಕ ನಷ್ಟವನ್ನು ವಸೂಲಿ ಮಾಡಲು ನಂಜನಗೂಡು ಸಿವಿಲ್ ನ್ಯಾಯಾಲಯದಲ್ಲಿ ಸಿವಿಲ್ ದಾವೆಯನ್ನು ಹೂಡಲು ಮತ್ತೆ ಸರ್ಕಾರದ ಪತ್ರ ಸಂಖ್ಯೆ: ಲೋಇ 38 ಸೇಇವಿ 2014, ದಿ: 31.05.2016 (ಹಾಗೂ ತಿದ್ದೋಲೆ ಸಂಖ್ಯೆ: ಲೋಇ 38 ಸೇಇವಿ 2014, ದಿ: 20.6.2016ರಲ್ಲಿ ನಿರ್ದೇಶಿಸಿರುವಂತೆ ಸಂಬಂಧಿಸಿದ ನಿವೃತ್ತ ಅಧಿಕಾರಿಗಳ ವಿರುದ್ಧ ಹಿರಿಯ ಸಿವಿಲ್ ನ್ಯಾಯಾಲಯ, ನಂಜನಗೂಡಿನಲ್ಲಿ ಅಸಲು ದಾವಾ ಸಂಖ್ಯೆ: 29/2017, ದಿ: 10.02.2017ರಲ್ಲಿ ದಾವೆಯನ್ನು ದಾಖಲಿಸಲಾಗಿರುತ್ತದೆ. ಪ್ರಕರಣವು ನ್ಯಾಯಾಲಯದಲ್ಲಿ ಬಾಕಿ ಇರುತ್ತದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |
| 26 | 4079<br>ಚು.ಗು.ಪ್ರ:117<br>ಶ್ರೀ ಎಸ್. ನಾಗರಾಜ್ (ಸಂದೇಶ್ ನಾಗರಾಜ್)<br>ವಿಪನದಿ: 15.12.2011<br>(ಮೂಲಸೌಲಭ್ಯ ಇಲಾಖೆಯಿಂದ ವರ್ಗಾವಣೆ) | ಮೈಸೂರು–ಬೆಂಗಳೂರು ಮಧ್ಯ ಆರು ಪಥದ ರಸ್ತೆ ನಿರ್ಮಾಣದ ಬಗ್ಗೆ. | ಮಾನ್ಯ ಸದಸ್ಯರು ನಾಲ್ಕು ಪಥದ ರಸ್ತೆಯನ್ನು ಇನ್ನಷ್ಟು ದೊಡ್ಡದು ಮಾಡಬೇಕೆಂದು ಹೇಳಿರುವ ಪ್ರಸ್ತಾವನೆಯನ್ನು ನಾವು ಮುಂದಿನ ದಿನಗಳಲ್ಲಿ ಪರಿಶೀಲನೆ ಮಾಡುತ್ತೇವೆ ಎಂದು ಮಾನ್ಯ ಮುಖ್ಯಮಂತ್ರಿಯವರು ತಿಳಿಸಿದರು. | ದಿನಾಂಕ: 28.02.2019ರ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ಮೈಸೂರು–ಬೆಂಗಳೂರು ರಾಷ್ಟ್ರೀಯ ಹೆದ್ದಾರಿಯು ಭಾರತೀಯ ರಾಷ್ಟ್ರೀಯ ಹೆದ್ದಾರಿ ಅಭಿವೃದ್ಧಿ ಪ್ರಾಧಿಕಾರ ಇವರು ಸುಪರ್ದಿಯಲ್ಲಿದ್ದು, ಸದರಿ ಹೆದ್ದಾರಿಯಲ್ಲಿ ಕೈಗೊಳ್ಳುತ್ತಿರುವ ಕಾಮಗಾರಿಗಳಿಗೆ ಸಂಬಂಧಿಸಿದ ವಿವರಗಳನ್ನು ಈ ಕೆಳಕಂಡಂತೆ ಭಾರತೀಯ ರಾಷ್ಟ್ರೀಯ ಹೆದ್ದಾರಿ ಅಭಿವೃದ್ಧಿ ಪ್ರಾಧಿಕಾರದವರು ತಿಳಿಸಿರುತ್ತಾರೆ.<br>ಮೈಸೂರು–ಬೆಂಗಳೂರು ರಾಷ್ಟ್ರೀಯ ಹೆದ್ದಾರಿಯ ಯೋಜನಾ ಕಾಮಗಾರಿಯನ್ನು ರಾಷ್ಟ್ರೀಯ ಹೆದ್ದಾರಿ ಅಭಿವೃದ್ಧಿ ಪ್ರಾಧಿಕಾರದವರು ಭಾರತ ಸರ್ಕಾರದ ಪರವಾಗಿ ದಿ: 28.02.201ರಂದು ಅವಾರ್ಡ್ ಮಾಡಿರುತ್ತಾರೆ ಹಾಗೂ ಈ ಬಗ್ಗೆ ಗುತ್ತಿಗೆ ಕರಾರನ್ನು ದಿ: 20.04.2018ರಂದು ಜಾರಿ ಮಾಡಿರುತ್ತಾರೆ. |

| | | | | |
|---|---|---|---|---|
| | | | | ಬೆಂಗಳೂರು–ಮೈಸೂರು ಯೋಜನಾ ರಸ್ತೆಯನ್ನು 10 ಪಥದ ರಸ್ತೆಯನ್ನಾಗಿ, ಇದರಲ್ಲಿ 6 ಪಥದ ರಸ್ತೆಯು ನೇರವಾಗಿ ಸಾಗುವ ವಾಹನಗಳಿಗಾಗಿ ಹಾಗೂ 2 ಪಥಗಳನ್ನು ರಸ್ತೆಯ ಬದಿಗಳಲ್ಲಿರುವ ಪಟ್ಟಣ/ಊರುಗಳಿಗೆ ಹೋಗಲು ಅನುಕೂಲ ಕಲ್ಪಿಸಲು ಸರ್ವಿಸ್ ರಸ್ತೆಗಳನ್ನಾಗಿ ಮಾಡಲಾಗುತ್ತದೆ.<br>ಸದರಿ ಕಾಮಗಾರಿಯನ್ನು ಕೂಡಲೇ ಪ್ರಾರಂಭಿಸಲು ಕ್ರಮ ವಹಿಸಲಾಗುವುದೆಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |
| 27 | 4297<br>ಚು.ಗು.ಪ್ರ. 354<br>ಶ್ರೀ ಪುಟ್ಟಣ್ಣ<br>ವಿಪನದಿ 26.11.2013 | ಬೆಂಗಳೂರು – ಕನಕಪುರ – ಚಾಮರಾಜನಗರ ರಸ್ತೆಯನ್ನು ಆರು ಪಥದ ರಸ್ತೆಯನ್ನಾಗಿ ಪರಿವರ್ತಿಸುವ ಬಗ್ಗೆ. | ಮಾನ್ಯ ಸದಸ್ಯರ ಭಾವನೆಗಳನ್ನು ಅರ್ಥ ಮಾಡಿಕೊಂಡು ಆದಷ್ಟು ಬೇಗ ಈ ಕಾಮಗಾರಿಯನ್ನು ಕೈಗೊಳ್ಳುವುದಕ್ಕೆ ರಾಜ್ಯ ಸರ್ಕಾರದಿಂದ ಒತ್ತಡವನ್ನು ಹಾಕಿ ಕೆಲಸ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ ಎಂದು ಮಾನ್ಯ ಲೋಕೋಪಯೋಗಿ ಸಚಿವರು ತಿಳಿಸಿದರು. | ದಿನಾಂಕ: 09–10–2018ರ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ಬೆಂಗಳೂರು–ಕನಕಪುರ–ಚಾಮರಾಜನಗರ ರಸ್ತೆಯನ್ನು ಬೆಂಗಳೂರಿನಿಂದ ಕನಕಪುರದವರೆಗೆ (ಕಿ.ಮೀ. 33.5) ನಾಲ್ಕು ಪಥದ ರಸ್ತೆಯನ್ನಾಗಿ, ಕನಕಪುರ ಚಾಮರಾಜನಗರ–ತಮಿಳುನಾಡು ಬಾರ್ಡರ್‌ವರೆಗೆ (ಕಿ.ಮೀ. 137.42) ಎರಡು ಪಥದ ಪೇವ್ಡ್ ಶೋಲ್ಡರ್ ಸಹಿತ (10 ಮೀಟರ್ಸ್) ರಸ್ತೆಯನ್ನಾಗಿ (ಬಾರ್ಡರ್‌ನಿಂದ 21 ಕಿ.ಮೀ. ಹೊರತುಪಡಿಸಿ) ನಿರ್ಮಿಸಲು ಅನುಮೋದಿಸಿರುತ್ತಾರೆ. ಒಟ್ಟು 170.92 ಕಿ.ಮೀ. ಉದ್ದದ ರಸ್ತೆಯನ್ನು Hybrid Annuity ಅಡಿಯಲ್ಲಿ ಟೆಂಡರ್ ಕರೆದು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ವತಿಯಿಂದ ಸದ್ಭಾವ ಇಂಜನಿಯರಿಂಗ್ ಅಹಮದಾಬಾದ್ ರವರಿಗೆ ದಿ: 21.08.2017ರಂದು ವಹಿಸಿಕೊಡಲಾಗಿರುತ್ತದೆ.<br>ಸದರಿ ಯೋಜನೆಯು ದಿ: 21.08.2017ರಂದು ಪ್ರಾರಂಭವಾಗಿದ್ದು ಮುಕ್ತಾಯಗೊಳ್ಳುವ ದಿನಾಂಕವು 20.08.2019 ಆಗಿರುತ್ತದೆ ಎಂದು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ವರದಿ ಮಾಡಿರುತ್ತಾರೆಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |

| | | | | |
|---|---|---|---|---|
| 28 | 4298<br>ಚು.ಗು.ಪ್ರ: 18<br>ಶ್ರೀಮತಿ ತಾರಾ ಅನುರಾಧ ವಿಪನದಿ: 26.11.2013 | ಮಂಗಳೂರು – ಮೂಡಬಿದರೆ – ಶಿವಮೊಗ್ಗ ರಾಷ್ಟ್ರೀಯ ಹೆದ್ದಾರಿಗಳು ವಾಹನ ಸಂಚಾರಕ್ಕೆ ಯೋಗ್ಯವಾಗಿಲ್ಲದೆ ವಾಹನಗಳಿಗೆ ಹಾಗೂ ಪ್ರಯಾಣಿಕರಿಗೆ ತೊಂದರೆ ಯಾಗಿರುವ ಬಗ್ಗೆ. | ಸದರಿ ರಾಷ್ಟ್ರೀಯ ಹೆದ್ದಾರಿಗಳ ಬಗ್ಗೆ ಸರ್ಕಾರದಿಂದ ಕ್ರಮ ಕೈಗೊಳ್ಳಲಿಕ್ಕೆ ಎಲ್ಲಾ ರೀತಿಯ ಸಿದ್ಧತೆಯನ್ನು ಮಾಡಿಕೊಂಡಿದೆ ಎಂದು ಮಾನ್ಯ ಲೋಕೋಪಯೋಗಿ ಸಚಿವರು ತಿಳಿಸಿದರು. | ದಿನಾಂಕ: 09–10–2018ರ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ಮಂಗಳೂರು ಶೋಲಾಪುರ ರಾಷ್ಟ್ರೀಯ ಹೆದ್ದಾರಿ 169ರಲ್ಲಿ ರಾಷ್ಟ್ರೀಯ ಹೆದ್ದಾರಿ ವಲಯದ ವ್ಯಾಪ್ತಿಯಲ್ಲಿ ಕಿ.ಮೀ. 590,00 (ತೀರ್ಥಹಳ್ಳಿ) ರಿಂದ ಕಿ.ಮೀ. 743.90 (ಬಿಕರ್ನಕಟ್ಟೆ) ವರೆಗಿನ ರಸ್ತೆಯು ಇದ್ದು, ಸದರಿ ರಸ್ತೆಯನ್ನು ವಾಹನ ಸಂಚಾರ ಯೋಗ್ಯವಾಗಿಡಲು 5054 ಲೆಕ್ಕಶೀರ್ಷಿಕೆಯಡಿಯಲ್ಲಿ ಒಟ್ಟು 11 ಕಾಮಗಾರಿಗಳನ್ನು ಕೇಂದ್ರ ಸರ್ಕಾರದ ಅನುದಾನದಲ್ಲಿ ಅಭಿವೃದ್ಧಿಪಡಿಸಲಾಗಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |
| 29 | 4307<br>ಚು.ಗು.ಪ್ರ: 405<br>ಶ್ರೀ ದಯಾನಂದ ವಿಪನದಿ: 28.01.2014 | ಚಿಕ್ಕಬಳ್ಳಾಪುರ ನಗರ ಹೊರ ವಲಯದಲ್ಲಿ ರಾಷ್ಟ್ರೀಯ ಹೆದ್ದಾರಿ–7ರಲ್ಲಿ ಚಿತ್ರಾವತಿ ಕ್ಷೇತ್ರದಿಂದ ಬೈಪಾಸ್ ಸೇರುವ ಕಡೆ ಆಗಿಂದಾಗ್ಗೆ ರಸ್ತೆ ಅಪಘಾತಗಳು ಸಂಭವಿಸುತ್ತಿದ್ದು, ಹೆಚ್ಚಿನ ಪ್ರಾಣಹಾನಿಗಳಾಗಿರುವುದನ್ನು ತಪ್ಪಿಸಲು ಸ್ಥಳೀಯ ನಾಗರೀಕರಿಂದ ಸರ್ವೀಸ್ ರಸ್ತೆ ನಿರ್ಮಾಣ ಮಾಡಲು ಒತ್ತಡವಿದ್ದರೂ, ಈ ಬಗ್ಗೆ ಯಾವುದೇ ಕ್ರಮ ಕೈಗೊಳ್ಳದೆ ಇರುವ ಕುರಿತು. | ಈಗಾಗಲೇ ಬೈಪಾಸ್ ರಸ್ತೆ ಮಾಡಿದ್ದೇವೆ. ಆದರೆ ಸರ್ವೀಸ್ ರಸ್ತೆಯ ಅಗತ್ಯವಿರುವುದಿಲ್ಲವೆಂದು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರೇ ಹೇಳಿದ್ದಾರೆ. ಆದರೂ ಸಹ ವಾಹನಗಳ ಸಂದಣಿಯನ್ನು ಗಮನದಲ್ಲಿಟ್ಟುಕೊಂಡು ಬೈಪಾಸ್ ರಸ್ತೆ ಮಾಡಿಕೊಡಬೇಕೆಂದು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವನ್ನು ಮನವಿ ಮಾಡಿ, ಸರ್ವೀಸ್ ರಸ್ತೆ ಮಾಡುವುದಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡುವುದಾಗಿ ಮಾನ್ಯ ಲೋಕೋಪಯೋಗಿ ಸಚಿವರು ತಿಳಿಸಿದರು. | ದಿನಾಂಕ: 09–10–2018ರ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ರಾಷ್ಟ್ರೀಯ ಹೆದ್ದಾರಿ–7 ಭಾರತೀಯ ರಾಷ್ಟ್ರೀಯ ಹೆದ್ದಾರಿ ಅಭಿವೃದ್ಧಿ ಪ್ರಾಧಿಕಾರ ಇವರ ಸುಪರ್ದಿಯಲ್ಲಿದ್ದು, ಸದರಿ ಹೆದ್ದಾರಿಯಲ್ಲಿ ಕೈಗೊಳ್ಳುತ್ತಿರುವ ಕಾಮಗಾರಿಗೆ ಸಂಬಂಧಿಸಿದ ವಿವರಗಳನ್ನು ಈ ಕೆಳಕಂಡಂತೆ ಭಾರತೀಯ ರಾಷ್ಟ್ರೀಯ ಹೆದ್ದಾರಿ ಅಭಿವೃದ್ಧಿ ಪ್ರಾಧಿಕಾರದವರು ತಿಳಿಸಿರುತ್ತಾರೆ.<br><br>ಚಿಕ್ಕಬಳ್ಳಾಪುರ ಹೊರ ವಲಯದಲ್ಲಿ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ವತಿಯಿಂದ ನಿರ್ಮಿಸಿರುವ ರಾಹೆ–7 ಹಾದು ಹೋಗುತ್ತಿದ್ದು, ಹೊನ್ನೇನಹಳ್ಳಿ ಇಂದ ಚಿಕ್ಕಬಳ್ಳಾಪುರ ಜಂಕ್ಷನ್ ಎಡಭಾಗದಲ್ಲಿ ಕಿ.ಮೀ. 504.03 ರಿಂದ ಕಿ.ಮೀ. 508.00 ರವರೆಗೆ ಸರ್ವೀಸ್ ರಸ್ತೆಯ ಮೂಲಕ ಸಂಪರ್ಕ ಒದಗಿಸುವ ಪ್ರಸ್ತಾವನೆಯನ್ನು ರಾಷ್ಟ್ರೀಯ ಹೆದ್ದಾರಿ ಅಭಿವೃದ್ಧಿ ಪ್ರಾಧಿಕಾರ ಕೇಂದ್ರ ಕಚೇರಿ, ನವದೆಹಲಿ ರವರಿಗೆ ಕಳುಹಿಸಿದ್ದು, ಸದರಿ ಪ್ರಸ್ತಾವನೆಯು ಪರಿಶೀಲನೆಯಲ್ಲಿರುತ್ತದೆ.<br><br>ಈ ಸ್ಥಳದಲ್ಲಿ ಎಲ್ಲಾ ರೀತಿಯ ರಸ್ತೆ ಸುರಕ್ಷತೆಯನ ಅವಶ್ಯಕತೆ ಇರುವ ಉಪಕರಣಗಳನ್ನು ಹಾಗೂ ಸೈನೇಜ್‌ಗಳನ್ನು |

| | | | | |
|---|---|---|---|---|
| | | | | ಅಳವಡಿಸಲಾಗಿದ್ದು, ಈ ರಸ್ತೆಯನ್ನು ಉಪಯೋಗಿಸುವ ವಾಹನ ಸವಾರರು ಮತ್ತು ಪಾದಚಾರಿಗಳು ರಸ್ತೆಯ ಎಡಬಲಗಳ ನಿಯಮಗಳನ್ನು ಅನುಸರಿಸಿ ಪಾಲಿಸತಕ್ಕದ್ದು ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |
| 30 | 4309<br>ಚು.ಗು.ಪ್ರ: 312<br>ಶ್ರೀ ಬಸವರಾಜ ಹೊರಟ್ಟಿ<br>ವಿಪನದಿ: 28.01.2014 | ಬೆಂಗಳೂರು–ಪುಣೆ ರಾಷ್ಟ್ರೀಯ ಹೆದ್ದಾರಿ–4ರಲ್ಲಿ ಟೋಲ್ ಸಂಗ್ರಹಣೆಯು ಒಂದು ಮಾಫಿಯಾ ಆಗಿದ್ದು, ಸರ್ಕಾರವು ತೆರಿಗೆ ಸಂಗ್ರಹಿಸುವುದಲ್ಲದೇ ಟೋಲ್ ಮೂಲಕ ಜನರನ್ನು ದೋಚಲು ಇತರರಿಗೆ ಅವಕಾಶ ನೀಡಿರುವುದು ಅನ್ಯಾಯ, ಇದರಿಂದ ಜನರಿಗೆ ಆಗುತ್ತಿರುವ ತೊಂದರೆಗಳನ್ನು ತಪ್ಪಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳ ಕುರಿತು. | ಟೋಲ್ ಸಂಗ್ರಹಣೆಯಲ್ಲಿ ಹೆಚ್ಚು ದರವನ್ನು ತೆಗೆದುಕೊಂಡು, ಶೋಷಣೆ ಅಥವಾ ಉಲ್ಲಂಘನೆ ಮಾಡಿದ್ದರೆ ಅಥವಾ ಚಿಲ್ಲರೆ ಕೊಡದಿರುವ ಪ್ರಕರಣಗಳು ಇದ್ದರೆ, ಆ ಬಗ್ಗೆ ಪರಿಶೀಲಿಸಿ ಟೋಲ್ ಪಾಲಿಸಿಗೆ ವಿರುದ್ಧವಾಗಿ ಕೆಲಸ ಮಾಡಿದಂತಹವರ ವಿರುದ್ಧ ಟೋಲ್ ಪಾಲಿಸಿಯ ಮಾರ್ಗಸೂಚಿಗಳನ್ವಯ ಕ್ರಮ ತೆಗೆದುಕೊಳ್ಳಲಾಗುವುದೆಂದು ಮಾನ್ಯ ಲೋಕೋಪಯೋಗಿ ಸಚಿವರು ತಿಳಿಸಿದರು. | ದಿನಾಂಕ: 09–10–2018ರ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ಬೆಂಗಳೂರು–ಪುಣೆ ರಾಹೆ–4ರಲ್ಲಿ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು National Highway Toll Policy 1957 Toll Plaza ಹಾಗೂ ರಿಯಾಯಿತಿದಾರರ ಕರಾರಿನಂತೆ ಟೋಲ್ ಸಂಗ್ರಹಣೆ ಮಾಡುತ್ತಿದ್ದು, ಯಾವುದೇ ರೀತಿಯ ಮಾಫಿಯಾ ಇರುವುದಿಲ್ಲವೆಂದು ತಿಳಿಸಿರುತ್ತಾರೆ.<br><br>ಅಲ್ಲದೇ ಯಾವುದೇ ರೀತಿಯ ಶೋಷಣೆ ಅಥವಾ ಉಲ್ಲಂಘನೆ ಮಾಡದಂತಿರಲು ಪ್ರತಿಯೊಂದು CC TV Camera ಗಳನ್ನು ಅಳವಡಿಸಿದ್ದು ಯಾವುದೇ ಅಹಿತಕರ ಪ್ರಕರಣಗಳು ಕಂಡುಬಂದಲ್ಲಿ ಸೂಕ್ತ ಕ್ರಮವನ್ನು ಜರುಗಿಸಬಹುದೆಂದು ತಿಳಿಸಿರುತ್ತಾರೆ ಹಾಗೂ ಪ್ರತಿಯೊಂದು Toll Plaza ದಲ್ಲಿ Complaint Book ನ್ನು ಇಡಲಾಗಿದ್ದು ಯಾವುದಾದರೂ ನಿಯಮ ಉಲ್ಲಂಘನೆಯಾದಲ್ಲಿ ದೂರನ್ನು ದಾಖಲಿಸಲಾಗುತ್ತೆಂದು ತಿಳಿಸಿರುತ್ತಾರೆ.<br><br>ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು Toll ಸಂಗ್ರಹಣಾ ಸಿಬ್ಬಂದಿಗೆ ಗ್ರಾಹಕರೊಡನೆ ಸೌಜನ್ಯಯುತವಾಗಿ ವರ್ತಿಸುವಂತೆ ತರಬೇತಿಯನ್ನು ನೀಡಲೂ ಸಹ ಕ್ರಮ ವಹಿಸಿರುತ್ತಾರೆಂದು ತಿಳಿಸಿರುತ್ತಾರೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |

| | | | | |
|---|---|---|---|---|
| 31 | 4929<br>ಚು.ರ.ಪ್ರ 1366<br>ಶ್ರೀ ಎಂ.ಡಿ.ಲಕ್ಷ್ಮೀನಾರಾಯಣ<br>ದಿ.15.07.2014 | ತುರುವೇಕೆರೆ ತಾಲ್ಲೂಕಿನಲ್ಲಿ ಲೋಕೋಪಯೋಗಿ ಇಲಾಖೆಗೆ ಸಂಬಂಧಿಸಿದ ರಸ್ತೆಗಳಲ್ಲಿನ ಸೇತುವೆಗಳು ಹಾಳಾಗಿರುವ ಬಗ್ಗೆ. | 2014–15ನೇ ಸಾಲಿನಲ್ಲಿ ಬಿಡುಗಡೆಯಾಗಿರುವ ಅನುದಾನದಲ್ಲಿ ಕ್ರಿಯಾ ಯೋಜನೆ ಅನುಮೋದನೆಯಾದ ನಂತರ ರೂ.20.00 ಲಕ್ಷಗಳಿಗೆ ಶಿಥಲಗೊಂಡಿರುವ ಶಿಂಷಾ ನದಿಗೆ ಅಡ್ಡಲಾಗಿರುವ ಸೇತುವೆಯ ದುರಸ್ಥಿ ಕಾಮಗಾರಿಯನ್ನು ಕೈಗೊಳ್ಳಲಾಗುವುದು ಎಂದು ಮಾನ್ಯ ಲೋಕೋಪಯೋಗಿ ಸಚಿವರು ತಿಳಿಸಿದರು. | ದಿನಾಂಕ: 28.02.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು,<br>• ತುರುವೇಕೆರೆ ತಾಲ್ಲೂಕಿನ ಸೊರವನಹಳ್ಳಿ ಸೀಗೆಹಳ್ಳಿ ಜಿಲ್ಲಾ ಮುಖ್ಯ ರಸ್ತೆಯು ಒಟ್ಟು 16.60 ಕಿ.ಮೀ. ಉದ್ದವಿದ್ದು, ಸರಪಳಿ 5.00 ಕಿ.ಮೀ. ನಲ್ಲಿ ಶಿಂಷಾ ನದಿಗೆ ಅಡ್ಡಲಾಗಿ ಇರುವ ಸೇತುವೆಯು ಬಹಳ ಹಳೆಯ ಸೇತುವೆಯಾಗಿದೆ.<br>• 2014–15ರಿಂದ ಇಲ್ಲಿಯವರೆಗೆ ಹಂತ–ಹಂತವಾಗಿ ವಿವಿಧ ಲೆಕ್ಕಶೀರ್ಷಿಕೆಯಡಿಯಲ್ಲಿ 10.40 ಲಕ್ಷ ರೂ.ಗಳ ವೆಚ್ಚದಲ್ಲಿ ಸೇತುವೆ ದುರಸ್ತೆ ಕಾಮಗಾರಿಯನ್ನು ಕೈಗೆತ್ತಿಕೊಂಡು ಪೂರ್ಣಗೊಳಿಸಲಾಗಿದೆ.<br>ಪ್ರಸ್ತುತ ಸೇತುವೆಯು ಸುಸ್ಥಿತಿಯಲ್ಲಿರುತ್ತದೆ. ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |
| 32 | 4930<br>ಶ್ರೀ ಮೃತ್ಯುಂಜಯ ಜಿನಗಾ<br>ಚು.ರ.ಪ್ರ; 1371<br>ದಿ;15.07.2014 | ಬಳ್ಳಾರಿ ಜಿಲ್ಲೆ ಸಂಡೂರು ತಾಲ್ಲೂಕಿನ ತಾರಾನಗರ ಗ್ರಾಮದಲ್ಲಿ ಕಬ್ಬಿಣದ ಅದಿರು ಲಾರಿಗಳ ಓಡಾಟದಿಂದ ಹಬ್ಬುವ ಧೂಳಿನಿಂದ ಗ್ರಾಮದ ಜನತೆ ಮತ್ತು ಪ್ರಾಣಿ ಪಕ್ಷಿಗಳು ರೋಗರುಜಿನಗಳಿಗೆ ತುತ್ತಾಗುತ್ತಿರು ವುದರಿಂದ, ಗ್ರಾಮದ ಬಳಿ ಬೈಪಾಸ್ ರಸ್ತೆ ನಿರ್ಮಿಸುವ ಬಗ್ಗೆ. | ಸಂಡೂರು ತಾಲ್ಲೂಕಿನ ತಾರಾನಗರ ಗ್ರಾಮದಲ್ಲಿ ಅದಿರು ಸಾಗಾಣಿಕಾ ವಾಹನಗಳ ಓಡಾಟವನ್ನು ನಿರ್ಬಂಧಿಸಲು ಗ್ರಾಮದ ಬಳಿ ಬೈಪಾಸ್ ರಸ್ತೆಯನ್ನು ಜಿಂದಾಲ್ ಉಕ್ಕಿನ ಕಾರ್ಖಾನೆ ತೋರಣಗಲ್ಲು ಇವರ ಸಹಯೋಗದೊಂದಿಗೆ ನಿರ್ಮಿಸಲು ಉದ್ದೇಶಿಸಲಾಗಿದೆ. ಭೂಸ್ವಾದೀನ ಪ್ರಕ್ರಿಯೆ ಪೂರ್ಣಗೊಂಡ ನಂತರ ಕಾಮಗಾರಿಯನ್ನು ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುವುದು. ಭೂಸ್ವಾಧೀನ ಪ್ರಕ್ರಿಯೆ ಪೂರ್ಣಗೊಂಡ ನಂತರ ಅಂದಾಜು | ದಿನಾಂಕ: 28.02.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು, ಸಂಡೂರು ತಾಲ್ಲೂಕಿನ ತಾರಾನಗರ ಗ್ರಾಮಕ್ಕೆ ಬೈಪಾಸ್ ರಸ್ತೆ ನಿರ್ಮಾಣ ಕಾಮಗಾರಿಯನ್ನು 2017–18ನೆ ಸಾಲಿನ ಡಿ.ಎಂ.ಎಫ್. (ಜಿಲ್ಲಾ ಖನಿಜ ಪ್ರತಿಷ್ಠಾನ) ಅಡಿಯಲ್ಲಿ ರೂ. 785.00 ಲಕ್ಷಗಳ ಅಂದಾಜು ಮೊತ್ತದೊಂದಿಗೆ ಅನುಮೋದನೆಯಾಗಿರುತ್ತದೆ. ಸದರಿ ಕಾಮಗಾರಿಗೆ ಟೆಂಡರು ಪ್ರಕ್ರಿಯೆಯನ್ನು ಪೂರ್ಣಗೊಳಿಸಿ ಗುತ್ತಿಗೆದಾರರನ್ನು ನೇಮಕ ಮಾಡಲಾಗಿರುತ್ತದೆ. ಭೂಸ್ವಾಧೀನ ಪ್ರಕ್ರಿಯೆಯು ಮುಕ್ತಾಯ ಹಂತದಲ್ಲಿದ್ದು, ಭೂಸ್ವಾಧೀನ ಪ್ರಕ್ರಿಯೆ ಪೂರ್ಣಗೊಂಡು ಕಾಮಗಾರಿಯನ್ನು ಕೈಗೊಳ್ಳಲು ಅಗತ್ಯವಾಗಿರುವ ಜಮೀನು ಇಲಾಖೆಗೆ ಹಸ್ತಾಂತರವಾದ ಕೂಡಲೇ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |

| | | | | |
|---|---|---|---|---|
| | | | ಪಟ್ಟಿಯನ್ನು ತಯಾರಿಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದೆಂದು ಮಾನ್ಯ ಲೋಕೋಪಯೋಗಿ ಸಚಿವರು ತಿಳಿಸಿದರು. | |
| 33 | 4931<br>ಶ್ರೀ ಬಿ.ರಾಮಕೃಷ್ಣ<br>ಚು.ರ.ಪ್ರ;1332<br>ದಿ.15.07.2014 | ಮಂಡ್ಯ ಜಿಲ್ಲೆ ಮದ್ದೂರು ತಾಲ್ಲೂಕು ಕೆ.ಎಂ.ದೊಡ್ಡಿಯಿಂದ ಮಂಡ್ಯದವರೆಗೆ ಹೋಗುವ ರಸ್ತೆ ತುಂಬಾ ಹಾಳಾಗಿದ್ದು, ಸದರಿ ರಸ್ತೆಯನ್ನು ಅಭಿವೃದ್ಧಿ ಪಡಿಸುವ ಬಗ್ಗೆ. | 2014–15ನೇ ಸಾಲಿನಲ್ಲಿ ರೂ.700–00 ಲಕ್ಷ ಮೊತ್ತದ ರಸ್ತೆ ಅಭಿವೃದ್ಧಿ ಕಾಮಗಾರಿಯ ಟೆಂಡರ್ ಪ್ರಕ್ರಿಯೆಯಲ್ಲಿದೆ. ಸರಪಳಿ 16.00ರಿಂದ 17.00 ಕಿ.ಮೀ.ವರೆಗೆ ಕೇಂದ್ರ ರಸ್ತೆ ನಿಧಿಯಲ್ಲಿ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವು ರೂ.200.00 ಲಕ್ಷಗಳ ಅಂದಾಜಿನಲ್ಲಿ ಅಭಿವೃದ್ಧಿಪಡಿಸಲು ಕ್ರಮ ಕೈಗೊಳ್ಳಲಾಗಿದೆ. ಉಳಿದ ರಸ್ತೆಯ ದುರಸ್ಥಿ ಕಾಮಗಾರಿಯನ್ನು ಶೀಘ್ರದಲ್ಲಿಯೇ ಕೈಗೊಳ್ಳಲಾಗುವುದು ಎಂದು ಮಾನ್ಯ ಲೋಕೋಪಯೋಗಿ ಸಚಿವರು ತಿಳಿಸಿದರು. | ದಿನಾಂಕ: 28.02.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು, ಮಂಡ್ಯ ಜಿಲ್ಲೆ ಮದ್ದೂರು ತಾಲ್ಲೂಕು ಕೆ.ಎಂ.ದೊಡ್ಡಿಯಿಂದ ಮಂಡ್ಯದವರೆಗೆ ಹೋಗುವ ರಸ್ತೆಯು ಜಿಲ್ಲಾ ಮುಖ್ಯರಸ್ತೆಯಾಗಿದ್ದು, ಒಟ್ಟು 17.00 ಕಿ.ಮೀ. ಗಳಿರುತ್ತದೆ. (ಸದರಿ ರಸ್ತೆಯು 2 ಉಪ ವಿಭಾಗಗಳ ವ್ಯಾಪ್ತಿಗೆ ಒಳಪಟ್ಟಿರುತ್ತದೆ, ಮಂಡ್ಯ ಮತ್ತು ಮದ್ದೂರು ತಾಲ್ಲೂಕು)<br><br>ಸದರಿ ರಸ್ತೆಯು ಮಂಡ್ಯ ಉಪ ವಿಭಾಗ ವ್ಯಾಪ್ತಿಯಲ್ಲಿ ಸರಪಳಿ 0.00 ರಿಂದ 7.00 ಕಿ.ಮೀ.ವರೆಗೆ ಇದ್ದು, ಈ ಪೈಕಿ,<br><br>ಅ) 2014.15ನೇ ಸಾಲಿನಲ್ಲಿ ಸರಪಳಿ 0.00 ರಿಂದ 1.36 ಕಿ.ಮೀ. ವರೆಗೆ ರೂ. 700.00 ಲಕ್ಷಗಳಿಗೆ ರಸ್ತೆಯನ್ನು ಅಭಿವೃದ್ಧಿಪಡಿಸಲಾಗಿರುತ್ತದೆ.<br><br>ಆ) 2015–16ನೇ ಸಾಲಿನಲ್ಲಿ ಸದರಿ ರಸ್ತೆಯಲ್ಲಿ 1.36 ರಿಂದ 4.72 ಕಿ.ಮೀ. ವರೆಗೆ 475.00 ಲಕ್ಷಗಳಿಗೆ ಹಾಗೂ ಸರಪಳಿ 4.72 ರಿಂದ 6.23 ಕಿ.ಮೀ.ವರೆಗೆ ರೂ. 150.00 ಲಕ್ಷಗಳಿಗೆ ಅಭಿವೃದ್ಧಿಪಡಿಸಲಾಗಿದೆ.<br><br>ಇ) ಸರಪಳಿ 6.23 ಯಿಂದ 7.00 ಕಿ.ಮೀ. ವರೆಗೆ ರೂ. 1.25 ಲಕ್ಷಗಳಿಗೆ ವಾರ್ಷಿಕ ನಿರ್ವಹಣೆ ಅಡಿಯಲ್ಲಿ ಕೈಗೊಂಡು ರಸ್ತೆಯನ್ನು ಸುಸ್ಥಿತಿಯಲ್ಲಿಡಲಾಗಿದೆ. |

| | | | | |
|---|---|---|---|---|
| | | | | ಸದರಿ ರಸ್ತೆಯು ಮದ್ದೂರು ಉಪ ವಿಭಾಗ ವ್ಯಾಪ್ತಿಯಲ್ಲಿ ಸರಪಳಿ 7.00 ರಿಂದ 17.00 ಕಿ.ಮೀ.ವರೆಗೆ ಇದ್ದು, ಈ ಪೈಕಿ,<br><br>ಅ) 2015–16ನೇ ಸಾಲಿನಲ್ಲಿ ಸರಪಳಿ 7.00 ರಿಂದ 16.50 ಕಿ.ಮೀ.ವರೆಗೆ ರೂ. 14.00 ಲಕ್ಷಗಳ ವೆಚ್ಚದಲ್ಲಿ ವಾರ್ಷಿಕ ನಿರ್ವಹಣೆ ಅಡಿಯಲ್ಲಿ ಕೈಗೊಂಡು ರಸ್ತೆಯನ್ನು ಸುಸ್ಥಿತಿಯಲ್ಲಿಡಲಾಗಿದೆ.<br><br>ಆ) ಸರಪಳಿ 16.00 ರಿಂದ 17.00 ಕಿ.ಮೀ.ವರೆಗೆ ಕೇಂದ್ರ ರಸ್ತೆ ನಿಧಿಯಲ್ಲಿ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವು ರೂ.200.00 ಲಕ್ಷಗಳ ಅಂದಾಜಿನಲ್ಲಿ 475 ಮೀಟರ್ ಉದ್ದಕ್ಕೆ 10 ಮೀಟರ್ ಅಗಲಕ್ಕೆ ಕಾಮಗಾರಿಯನ್ನು ಕೈಗೊಂಡು ಕಾಮಗಾರಿಯನ್ನು ಮೇ–2018ರಲ್ಲಿ ಪೂರ್ಣಗೊಳಿಸಲಾಗಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |
| 34 | 4916<br>ಚು.ರ.ಪ್ರ. 52<br>ಶ್ರೀ ಆಚಾರ್ ಹಾಲಪ್ಪ ಬಸಪ್ಪ<br>ವಿಪನದಿ:24.06.2014 | ಕುಷ್ಟಗಿ ಪಟ್ಟಣದ ಹತ್ತಿರ ಮೇಲ್ಸೆತುವೆ ನಿರ್ಮಾಣ ಮಾಡುವ ಬಗ್ಗೆ | ಕುಷ್ಟಗಿ ನಗರದಲ್ಲಿ ರಾಷ್ಟ್ರೀಯ ಹೆದ್ದಾರಿ ಮೇಲೆ ಸೇತುವೆ ನಿರ್ಮಾಣಕ್ಕಾಗಿ ಅವಶ್ಯವಿರುವ ಯಾವುದೇ ಅಡೆತಡೆ ಇಲ್ಲದ ಭೂಮಿಯ ಲಭ್ಯತೆಯಾನುಸಾರ ಮೇಲ್ಸೇತುವೆಯನ್ನು ನಿರ್ಮಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಮಾನ್ಯ ಲೋಕೋಪಯೋಗಿ ಸಚಿವರು ತಿಳಿಸಿದರು. | ದಿನಾಂಕ: 28.02.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು, ಕುಷ್ಠಗಿ ನಗರದ ರಾಷ್ಟ್ರೀಯ ಹೆದ್ದಾರಿ–13ರ ಮೇಲ್ಸೇತುವೆ ಕಾಮಗಾರಿಯನ್ನು ಹೆಚ್ಚುವರಿಯಾಗಿ ಕೈಗೊಂಡಿದ್ದು ಶೇ.30ರಷ್ಟು ಕಾಮಗಾರಿ ಪೂರ್ಣಗೊಂಡಿದ್ದು, ಉಳಿಕೆ ಕೆಲಸ ಪ್ರಗತಿಯಲ್ಲಿರುವುದಾಗಿ ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ವರದಿ ಮಾಡಿರುತ್ತಾರೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |

| | | | | |
|---|---|---|---|---|
| 35 | 4917 ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲಾದ ವಿಷಯ ಶ್ರೀ.ರಾಮಚಂದ್ರಗೌಡ ವಿಪನದಿ;26.06.2014 | ವಿಶ್ವವಿಖ್ಯಾತ ಜೋಗ ಜಲಪಾತವು ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ತನ್ನದೇ ಆದ ಆಕರ್ಷಣೆಯನ್ನು ಹೊಂದಿದ್ದು, ಜೋಗನ್ನು ವೀಕ್ಷಿಸುವ ಸಲುವಾಗಿ ದೇಶ ವಿದೇಶಗಳಿಂದ ಪ್ರವಾಸಿಗರು ಸಾವಿರಾರು ಸಂಖ್ಯೆಯಲ್ಲಿ ಪ್ರತಿ ವರ್ಷವೂ ಆಗಮಿಸುತ್ತಿದ್ದು, ರಾಜ್ಯ ಹೆದ್ದಾರಿಯಲ್ಲಿನ ಸಿದ್ದಾಪುರ ಸಮೀಪದ ಶತಮಾನದ ಹಿಂದಿನ ಸೇತುವೆಗಳು ಕುಸಿಯುತ್ತಿದ್ದು, ಅವುಗಳನ್ನು ದುರಸ್ಥಿ ಪಡಿಸುವ ಬಗ್ಗೆ. | ರಾಜ್ಯ ಹೆದ್ದಾರಿಯಲ್ಲಿ ಇರತಕ್ಕಂಥ ಈ ಸೇತುವೆ ಬ್ರಿಟೀಷರ ಕಾಲದಲ್ಲಿ ಸುಮಾರು ನೂರು ವರ್ಷಗಳ ಹಿಂದೆ ನಿರ್ಮಾಣವಾಗಿರತಕ್ಕಂಥದ್ದು, ಇದು ತುಂಬಾ ಪುರಾತನವಾಗಿರತಕ್ಕಂಥ ಒಂದು ಸೇತುವೆ, ಈ ಬಗ್ಗೆ ವಿವರವಾದಂಥ ವರದಿಗಳನ್ನು ತರಿಸಿಕೊಂಡು ದುರಸ್ಥಿಯನ್ನು ಮಾಡಲಿಕ್ಕೆ ಅದರ ಸ್ಥಿತಿ–ಗತಿಗಳನ್ನು ಪರಿಶೀಲಿಸಿ, ಸದರಿ ಸೇತುವೆಯನ್ನು ದುರಸ್ಥಿ ಪಡಿಸಲಿಕ್ಕೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳತ್ತೇನೆ ಎಂದು ಮಾನ್ಯ ಲೋಕೋಪಯೋಗಿ ಸಚಿವರು ತಿಳಿಸಿದರು. | ದಿನಾಂಕ: 28.02.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು, ಸದರಿ ಸೇತುವೆಯು ಭಟ್ಕಳ ಸೊರಬ ರಾಜ್ಯ ಹೆದ್ದಾರಿ 50ರ ಕಿ.ಮೀ. 101.80ರಲ್ಲಿ ಇರುತ್ತದೆ. ಶಿಥಿಲಗೊಂಡ ಸೇತುವೆಯು ಪಕ್ಕದಲ್ಲಿ ಹೊಸ ಸೇತುವೆಯನ್ನು ನಿರ್ಮಿಸಲಾಗಿರುತ್ತದೆ. ಸದರಿ ಸೇತುವೆಯ ಕಾಮಗಾರಿಯನ್ನು ಲೆಕ್ಕಶೀರ್ಷಿಕೆ 3054–ಸೇತುವೆಗಳ ದುರಸ್ತಿ ಅಡಿಯಲ್ಲಿ ರೂ.200.00 ಲಕ್ಷಗಳ ಅಂದಾಜು ಮೊತ್ತದಲ್ಲಿ ಕಾಮಗಾರಿಯನ್ನು ದಿ: 4.102.2014ರಂದು ಪ್ರಾರಂಭಿಸಿ ದಿ: 5.8.2015ರಂದು ಸೇತುವೆ ದುರಸ್ತಿ ಕಾಮಗಾರಿಯನ್ನು ಪೂರ್ಣಗೊಳಿಸಿ ಸಾರ್ವಜನಿಕರ ಓಡಾಟಕ್ಕೆ ಮುಕ್ತಗೊಳಿಸಲಾಗಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |

| | | | | |
|---|---|---|---|---|
| 36 | 4918<br>ಚು.ರ.ಪ್ರ: 913<br>ಶ್ರೀ.ರಘುನಾಥ್‌ರಾವ್ ಮಲ್ಕಾಪುರೆ<br>ವಿಪನದಿ:08.07.2014 | ಬೀದರ್ ಜಿಲ್ಲಾ ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಯಲ್ಲಿ ಕೆಲಸ ಮಾಡುತ್ತಿರುವ ಅಭಿಯಂತರರುಗಳ ಮೇಲೆ ಸಾರ್ವಜನಿಕ ದೂರುಗಳು, ಭ್ರಷ್ಟಾಚಾರ ಆರೋಪಗಳು ಬಂದಿದ್ದು, ಅಂತಹವರ ಮೇಲೆ ಸರ್ಕಾರ ಕೈಗೊಂಡ ಕ್ರಮದ ಬಗ್ಗೆ. | 8 ಜನ ಅಧಿಕಾರಿ/ನೌಕರರ ವಿರುದ್ಧ ಸಾರ್ವಜನಿಕ ಹಾಗೂ ಭ್ರಷ್ಟಾಚಾರ ಆರೋಪಗಳಿವೆ. ಶ್ರೀ ರಾಜು ಡಾಂಗೆ, ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಇವರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಪ್ರಕರಣವನ್ನು 1957ರ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಯ ನಿಯಮ14(ಎ)ರಡಿ ಮಾನ್ಯ ಉಪ-ಲೋಕಾಯುಕ್ತರಿಗೆ ವಹಿಸಿದೆ. ಉಳಿದ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲು ದೋಷಾರೋಪಣಾ ಪಟ್ಟಿಯನ್ನು ಇಲಾಖಾ ಮುಖ್ಯಸ್ಥರಿಂದ ಪಡೆದು ಕ್ರಮ ಜರುಗಿಸಲಾಗುವುದು ಎಂದು ಮಾನ್ಯ ಲೋಕೋಪಯೋಗಿ ಸಚಿವರು ತಿಳಿಸಿದರು. | ದಿನಾಂಕ: 28.02.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು, ಬೀದರ್ ಜಿಲ್ಲೆ ನಬಾರ್ಡ್ ಆರ್‌ಐಡಿಎಫ್–ರಡಿ ಹಲಬರ್ಗ ಬಾವಗಿ ಕಮತಣ ರಸ್ತೆ ಕಾಮಗಾರಿಯನ್ನು ಕಳಪೆಯಾಗಿ ನಿರ್ವಹಿಸಿ ಆರ್ಥಿಕ ನಷ್ಟ ಉಂಟು ಮಾಡಿರುವ ಈ ಕೆಳಕಂಡ ಅಧಿಕಾರಿಗಳ ವಿರುದ್ಧ ಇಲಾಖಾ ವಿಚಾರಣೆ ಕೈಗೊಳ್ಳಲು ಕನಾಸೇ (ವನೀಆ) ನಿಯಮಗಳು 1957ರ ನಿಯಮ 14ಎ ರಡಿ ಸರ್ಕಾರದ ಆದೇಶ ಸಂಖ್ಯೆ: ಲೋಇ 217 ಸೇಇವಿ 2012, ದಿ: 16.10.2012ರಲ್ಲಿ ಪ್ರಕರಣವನ್ನು ಮಾನ್ಯ ಉಪಲೋಕಾಯುಕ್ತರವರಿಗೆ ವಹಿಸಲಾಗಿದ್ದು, ಇಲಾಖಾ ವಿಚಾರಣೆಯಲ್ಲಿ ಆಪಾದಿತ ಅಧಿಕಾರಿ (2) ಶ್ರೀ ಸಿ.ಎಸ್. ಪಾಟೀಲ್, ಸಹಾಯಕ ಕಾರ್ಯಪಾಲಕ ಇಂಜನಿಯರ್, ಇವರ ವಿರುದ್ಧದ ವಿಚಾರಣೆಯನ್ನು ದಿ: 13.4.2017ರಂದು ಸ್ಥಗಿತಗೊಳಿಸಲಾಗಿದ್ದು, ಉಳಿದ ಎಲ್ಲಾ ಆಪಾದಿತರುಗಳ ವಿರುದ್ಧದ ಆರೋಪಗಳು ಸಾಬೀತಾಗಿರುವುದಿಲ್ಲವೆಂದು ವಿಚಾರಣಾಧಿಕಾರಿಗಳೂ ನೀಡಿರುವ ವಿಚಾರಣಾ ವರದಿಯನ್ನು ಒಪ್ಪಿ ಎಲ್ಲಾ ಆಪಾದಿತರುಗಳನ್ನು ದೋಷಮುಕ್ತಗೊಳಿಸುವಂತೆ ಮಾನ್ಯ ಉಪ ಲೋಕಾಯುಕ್ತ–1, ಇವರು ದಿ: 1.1.2019ರಂದು ಶಿಫಾರಸ್ಸು ಮಾಡಿರುತ್ತಾರೆ.<br>1) ಶ್ರೀ ಮಂಡೋಲಿ ಮನೋಹರ್, ಸಹಾಯಕ ಕಾರ್ಯಪಾಲಕ ಇಂಜನಿಯರ್<br>2) ಶ್ರೀ ಸಿ.ಎಸ್.ಪಾಟೀಲ್, ಸಹಾಯಕ ಕಾರ್ಯಪಾಲಕ ಇಂಜನಿಯರ್<br>3) ಶ್ರೀ ರಾಜಕುಮಾರ್ ವಡ್ಡೆ, ಕಿರಿಯ ಇಂಜನಿಯರ್<br>4) ಶ್ರೀ ಮಲ್ಲಿಕಾರ್ಜುನ ಶಂಭು, ಕಿರಿಯ ಇಂಜನಿಯರ್<br>5) ಶ್ರೀ ರಾಜುಡಾಂಗೆ, ಸಹಾಯಕ ಕಾರ್ಯಪಾಲಕ ಇಂಜನಿಯರ್<br>6) ಶ್ರೀ ಅಶೋಕ್ ಕುಮಾರ್ ಶಿಳ್ಳಗಿ, ಪ್ರ.ದ.ಸ. |

| | | | | |
|---|---|---|---|---|
| | | | | ಲೋಕಾಯುಕ್ತ ಕಚೇರಿಯಿಂದ ಸ್ವೀಕೃತವಾದ ವಿಚಾರಣಾ ವರದಿ ಹಾಗೂ ಶಿಫಾರಸ್ಸು ಪರಿಶೀಲನೆಯಲ್ಲಿದೆ<br>ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |
| 37 | 4920<br>ಚು.ರ.ಪ್ರ: 892<br>ಶ್ರೀ ಜಿ.ಎಸ್. ನ್ಯಾಮಗೌಡ<br>ವಿಪನದಿ:08.07.2014 | ಬಾಗಲಕೋಟೆ ಜಿಲ್ಲೆಯ ಜಮಖಂಡಿ ತಾಲ್ಲೂಕಿನ ಜಂಬಗಿ ಗ್ರಾಮದ ಹತ್ತಿರ ನಿರ್ಮಾಣವಾಗುತ್ತಿರುವ ಸೇತುವೆ ಮೂಲಕ ಸಾವಳಗಿಯಿಂದ ತೆಲಸಂಗ ಕ್ರಾಸ್‌ವರೆಗಿನ ರಸ್ತೆಯನ್ನು ಮೇಲ್ದರ್ಜೆಗೇರಿಸಿ ಅಭಿವೃದ್ಧಿಪಡಿಸುವ ಬಗ್ಗೆ | ಜಮಖಂಡಿ ಸಾವಳಗಿ ತೇಲಸಂಗ ಕ್ರಾಸ್ ಜಿಲ್ಲಾ ಮುಖ್ಯ ರಸ್ತೆಯು ಕಿ.ಮೀ.0.00 ರಿಂದ 31.20ವರೆಗೆ ಒಟ್ಟು 31.20 ಕಿ.ಮೀ. ಉದ್ದಳತೆ ಇರುತ್ತದೆ ಹಾಗೂ 3.75 ಮೀ. ಅಗಲದ ಹಾಳಾದ ಡಾಂಬರ ಮೇಲ್ಮೈ ಇದ್ದು, ಕೃಷ್ಣಾ ನದಿಗೆ ಅಡ್ಡಲಾಗಿ ಬೃಹತ್ ಸೇತುವೆ ನಿರ್ಮಾಣ ಕಾಮಗಾರಿಯು ಪ್ರಗತಿಯಲ್ಲಿದೆ. ಮಹಾರಾಷ್ಟ್ರ ರಾಜ್ಯಕ್ಕೆ ಸಂಪರ್ಕ ಕಲ್ಪಿಸುವ ಅತೀ ಪ್ರಮುಖ ರಸ್ತೆಯಾಗುವುದರಿಂದ, ರೇಖಾ ಅಂದಾಜು ಪ್ರಕ್ರಿಯೆಯನ್ನು ರೂ.40.00 ಕೋಟಿಗಳಿಗೆ ತಯಾರಿಸಲಾಗಿದ್ದು, ಅನುದಾನದ ಲಭ್ಯತೆಗನುಗುಣವಾಗಿ ಕಾಮಗಾರಿಯನ್ನು ಕೈಗೊಳ್ಳಲಾಗು ವುದೆಂದು ಮಾನ್ಯ ಲೋಕೋಪಯೋಗಿ ಸಚಿವರು ತಿಳಿಸಿದರು. | ದಿನಾಂಕ: 28.02.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು, ಬಾಗಲಕೋಟೆ ಜಿಲ್ಲೆ ಜಮಖಂಡಿ ತಾಲ್ಲೂಕಿನ ಜಮಖಂಡಿ ಸಾವಳಗಿ ತೇಲಸಂಗ ಕ್ರಾಸ್ ಜಿಲ್ಲಾ ಮುಖ್ಯರಸ್ತೆಯ ಅಭಿವೃದ್ಧಿಯನ್ನು ಈ ಕೆಳಕಂಡ ಯೋಜನೆಗಳಡಿ ಕೈಗೊಳ್ಳಲಾಗಿದೆ:–<br><br>1. ಕರ್ನಾಟಕ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ (ಹಂತ–3)ರ ಅಡಿಯಲ್ಲಿ ರೂ. 470.92 ಲಕ್ಷಗಳ ಅಂದಾಜು ಮೊತ್ತದೊಂದಿಗೆ ಒಟ್ಟು 11.02 ಕಿ.ಮೀ. ಉದ್ದಳತೆಗೆ 5.50 ಮೀಟರ್ ಅಗಲಕ್ಕೆ ರಸ್ತೆ ಸುಧಾರಣೆ ಕಾಮಗಾರಿ ಪೂರ್ಣಗೊಂಡಿದೆ.<br>2. ನಬಾರ್ಡ್ ಆರ್.ಐ.ಡಿ.ಎಫ್–21ರ ಯೋಜನೆ ಅಡಿಯಲ್ಲಿ ರೂ. 0120.00 ಲಕ್ಷಗಳ ಅಂದಾಜು ಮೊತ್ತಕ್ಕೆ ಸದರಿ ರಸ್ತೆ 1.74 ಉದ್ದಕ್ಕೆ 5.50 ಮೀಟರ್ ಅಗಲಕ್ಕೆ ರಸ್ತೆಯನ್ನು ಅಭಿವೃದ್ಧಿಪಡಿಸುವ ಕಾಮಗಾರಿಯನ್ನು ಕೈಗೆತ್ತಿಕೊಂಡು ಪೂರ್ಣಗೊಳಿಸಲಾಗಿದೆ.<br>3. 2018–19ನೇ ಸಾಲಿನ ಲೆಕ್ಕ ಶೀರ್ಷಿಕೆ ಸಿ.ಎಮ್.ಜಿ.ಆರ್.ವಾಯ್. ಅಡಿಯಲ್ಲಿ ರೂ. 129.36 ಲಕ್ಷಗಳ ಮೊತ್ತದಲ್ಲಿ ಕಿ.ಮೀ. 18.00 ರಿಂದ 19.40 ರವರೆಗೆ 7.00 ಮೀಟರ್ ಅಗಲಕ್ಕೆ ಸುಧಾರಣೆ ಕೈಗೆತ್ತಿಕೊಂಡಿದ್ದು, ಕಾಮಗಾರಿ ಪ್ರಗತಿಯಲ್ಲಿದೆ. |

| | | | | |
|---|---|---|---|---|
| | | | | 4. ಸಿ.ಆರ್.ಎಫ್. ಅಡಿಯಲ್ಲಿ ಕಿ.ಮೀ. 8.10 ರಿಂದ 10.50 ರವರೆಗೆ 7.00 ಮೀಟರ್ ಅಗಲಕ್ಕೆ ಸುಧಾರಣೆ ಕಾಮಗಾರಿಯನ್ನು ರಾಷ್ಟ್ರೀಯ ಹೆದ್ದಾರಿ ವಲಯದಿಂದ ಕೈಗೆತ್ತಿಕೊಳ್ಳಲಾಗಿದ್ದು, ಗುತ್ತಿಗೆ ನಿಗದಿಪಡಿಸಲಾಗಿದ್ದು, ಶೀಘ್ರದಲ್ಲಿ ಕಾಮಗಾರಿ ಪ್ರಾರಂಭಿಸಲಾಗುವುದು.<br>5. 2018–19ನೇ ಸಾಲಿನ ಅಪೆಂಡಿಕ್ಸ್–ಇ ಅಡಿಯಲ್ಲಿ ರೂ.1000.00 ಲಕ್ಷಗಳ ಮೊತ್ತದಲ್ಲಿ ಕಿ.ಮೀ. 7.00 ರಿಂದ 8.14 ಮತ್ತು 10.50 ರಿಂದ 18.00ರವೆಗೆ ರಸ್ತೆಯನ್ನು 7.00 ಮೀಟರ್ ಅಗಲಕ್ಕೆ ಅಭಿವೃದ್ಧಿಪಡಿಸುವ ಕಾಮಗಾರಿ ಸೇರ್ಪಡೆಗೊಂಡಿದ್ದು, ನಿಯಮಾನುಸಾರ ಟೆಂಡರ್ ಪ್ರಕ್ರಿಯೆ ಪೂರ್ಣಗೊಳಿಸಿ ಕಾಮಗಾರಿ ಕೈಗೆತ್ತಿಕೊಳ್ಳಲು ಕ್ರಮವಹಿಸಲಾಗುವುದು<br>ಮೇಲ್ಕಂಡಂತೆ ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |
| 38 | 5200<br>ಚು.ರ.ಪ್ರ: 265<br>ಶ್ರೀ ಆಚಾರ್ ಹಾಲಪ್ಪ ಬಸಪ್ಪ ವಿಪನದಿ: 09/12/2014 | ಹೊಸಪೇಟೆ–ಚಿತ್ರದುರ್ಗ ರಾಷ್ಟ್ರೀಯ ಹೆದ್ದಾರಿ–13ಕ್ಕೆ ಟೆಂಡರ್ ಪ್ರಕ್ರಿಯೆ ಮುಕ್ತಾಯ ಗೊಂಡಿದ್ದರೂ, ಕಾಮಗಾರಿ ಯನ್ನು ಪ್ರಾರಂಭಿಸುವಲ್ಲಿ ಆಗುತ್ತಿರುವ ವಿಳಂಬದ ಬಗ್ಗೆ. | ಟೆಂಡರ್ ಪ್ರಕ್ರಿಯೆ ಸಂಪೂರ್ಣವಾಗಿ ಮುಕ್ತಾಯಗೊಂಡಿರುತ್ತದೆ. ಈ ಕಾಮಗಾರಿಯ ಟೆಂಡರ್ ಕರಾರನ್ನು ದಿನಾಂಕ:13.11.2014 ರಂದು ಮಾಡಿಕೊಡಲಾಗಿದ್ದು, ಕಾಮಗಾರಿಯು ಪ್ರಗತಿಯಲ್ಲಿದೆ ಎಂದು ಮಾನ್ಯ ಲೋಕೋಪಯೋಗಿ ಸಚಿವರು ತಿಳಿಸಿದರು. | ದಿನಾಂಕ: 28.02.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು, ರಾಷ್ಟ್ರೀಯ ಹೆದ್ದಾರಿ–13 (ಹೊಸ ರಾ.ಹೆ – 50) ರಸ್ತೆಯನ್ನು ನಾಲ್ಕು ಪಥದ ರಸ್ತೆಯನ್ನಾಗಿ ಅಭಿವೃದ್ಧಿಪಡಿಸುವ ಕಾಮಗಾರಿಯನ್ನು ಟೆಂಡರ್ ಆಧಾರದ ಮೇಲೆ ಮೆ: ಹಂಪಿ ಎಕ್ಸ್‌ಪ್ರೆಸ್ ವೇ ಲಿ. ರವರಿಗೆ ದಿ: 18.02.2016ರಂದು BOT(Toll) ಆಧಾರದ ಮೇಲೆ 30 ತಿಂಗಳ ಕಾಲಾವಧಿ ನೀಡಿ ವಹಿಸಿಕೊಡಲಾಗಿತ್ತು. ಸದರಿ ಕಾಮಗಾರಿಯು ದಿ: 25.02.2019 ರಂದು ಭೌತಿಕವಾಗಿ ಶೇಕಡವಾರು 70.13% ರಷ್ಟು ಪೂರ್ಣಗೊಂಡಿರುತ್ತದೆ ಎಂದು ಹಾಗೂ ಉಳಿಕೆ ಕಾಮಗಾರಿಯನ್ನು ದಿ: 31.3.2019ರೊಳಗೆ |

| | | | | |
|---|---|---|---|---|
| | | | | ಪೂರ್ಣಗೊಳಿಸಲಾಗುವುದೆಂದು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ವರದಿ ಮಾಡಿರುತ್ತಾರೆಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |
| 39 | 4936<br>ಚು.ಗು.ಪ್ರ: 74<br>ಶ್ರೀ ಬಸವರಾಜ ಹೊರಟ್ಟಿ,<br>ದಿನಾಂಕ: 03.02.2015ರ ತಡೆಹಿಡಿಯಲಾದ ಪ್ರಶ್ನೆ<br>ವಿಪನದಿ: 10/02/2015 | ಲೋಕೋಪಯೋಗಿ ಇಲಾಖೆಯಲ್ಲಿ ದುರುಪಯೋಗಿಪಡಿಸಿಕೊಂಡ ಹಣವನ್ನು ವಸೂಲು ಮಾಡುವ ಬಗ್ಗೆ. | ತಪ್ಪಿತಸ್ಥರು ಯಾರಿದ್ದಾರೆ ಅವರ ಮೇಲೆ ಕೂಡಲೇ ತನಿಖೆ ಕೈಗೊಂಡು, ಶಿಕ್ಷೆ ವಿಧಿಸಿ ಅವರಿಂದ ದುರುಪ–'ಯೋಗವಾಗಿರುವ ಹಣವನ್ನು ರಿಕವರಿ ಮಾಡುವ ಬಗ್ಗೆ ಸರ್ಕಾರ ತಪ್ಪದೇ ಕ್ರಮ ತೆಗೆದುಕೊಳ್ಳುತ್ತದೆ ಎಂದು ಮಾನ್ಯ ಲೋಕೋಪಯೋಗಿ ಸಚಿವರು ತಿಳಿಸಿದರು. | ದಿನಾಂಕ: 28.02.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು, ಈ ಪ್ರಕರಣಗಳಿಗೆ ಸಂಬಂಧಿಸಿದಂತೆ ಅನುಬಂಧದಲ್ಲಿ ಮಾಹಿತಿಯನ್ನು ನೀಡಲಾಗಿದ್ದು, ಸದರಿ ಮಾಹಿತಿಯನ್ನು ಒಪ್ಪಿ ಸಮಿತಿಯು ಭರವಸೆಯನ್ನು ಮುಕ್ತಾಯಗೊಳಿಸಿತು. **(ಅನುಬಂಧ–X)** |
| 40 | 5211<br>ಚು.ಗು.ಪ್ರ: 1736<br>ಶ್ರೀ ಅರುಣ ಶಹಾಪೂರ<br>ವಿಪನದಿ:22.07.2014 | ಬಿಜಾಪುರ ಹಾಗೂ ಜೇವರ್ಗಿ ಮಧ್ಯೆ ಇರುವ ರಾಷ್ಟ್ರೀಯ ಹೆದ್ದಾರಿಯನ್ನು ಚತುಷ್ಪಥ ರಸ್ತೆಯನ್ನಾಗಿ ಪರಿವರ್ತಿಸುವ ಬಗ್ಗೆ | ಬಿಜಾಪುರ, ಜೇವರ್ಗಿ–ಹುಮ್ನಾಬಾದ್ ರಸ್ತೆಯ ರಾಷ್ಟ್ರೀಯ ಹೆದ್ದಾರಿ–218ಇ ಆಗಿದ್ದು, ಈ ಹೆದ್ದಾರಿಯನ್ನು ಅಂದರೆ ಕಿ.ಮೀ 195 (ಬಿಜಾಪುರ)ದಿಂದ 418 (ಹುಮ್ನಾಬಾದ್) ವರೆಗೆ 2 ಪಥದ+ಪೇವಡ್ ಶೋಲ್ಡರ್ಸ್ ರಸ್ತೆಯನ್ನಾಗಿ ಅಭಿವೃದ್ಧಿಪಡಿಸಲು ಯೋಜಿಸಲಾಗಿದೆ. ಪ್ರಸ್ತುತ, ಇದನ್ನು ಇ.ಪಿ.ಸಿ. 2 lake with paved shoulders ಮಾಡಲು ಒಪ್ಪಿರುವುದರಿಂದ ಬದಲಾವಣೆ ಮಾಡಿಕೊಂಡು model ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದೆ. ಈ ರಸ್ತೆಯನ್ನು | ದಿನಾಂಕ: 28.02.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು, ವಿಜಯಪುರ–ಜೇವರ್ಗಿ ರಾಹೆ–218ಇ (ರಾಹೆ–50) ಕಿ.ಮೀ. 195.00 ರಿಂದ 418.00 ರವರೆಗೆ 2 ಪಥದ ಜೊತೆಗೆ ಪೇವ್ಡ್ ಶೋಲ್ಡರ್ ರಸ್ತೆ ನಿರ್ಮಾಣ ಪೂರ್ಣಗೊಳ್ಳುವ ಹಂತದಲ್ಲಿದೆ ಮತ್ತು ಈ ಭಾಗದ ರಸ್ತೆಯನ್ನು ಚತುಷ್ಪಥ ರಸ್ತೆಯನ್ನಾಗಿ ಮಾರ್ಪಡಿಸುವುದಕ್ಕೆ ಸಂಬಂಧಿಸಿದಂತೆ ಈ ರಸ್ತೆಯ ವಾಹನ ಸಂಚಾರದ ಸಾಂದ್ರತೆಯನ್ನು ಪರಿಶೀಲಿಸಲಾಗುವುದೆಂದು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ವರದಿ ಮಾಡಿರುತ್ತಾರೆಂದು ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |

| | | | | |
|---|---|---|---|---|
| | | | ಮಾಡಲು ಆದಷ್ಟು ಬೇಗ ಕ್ರಮ ತೆಗೆದುಕೊಳ್ಳುತ್ತೇನೆ ಎಂದು ಮಾನ್ಯ ಲೋಕೋಪಯೋಗಿ ಸಚಿವರು ತಿಳಿಸಿದರು. | |
| 41 | 5212<br>ಚು.ಗು.ಪ್ರ: 1776<br>ಶ್ರೀ ಐವನ್ ಡಿ'ಸೋಜ<br>ವಿಪನದಿ:22.07.2014 | ಮಂಗಳೂರು ನಗರದಲ್ಲಿ ಸರ್ಕಾರಿ ವಸತಿ ಗೃಹಗಳು ದುಸ್ಥಿತಿಯಲ್ಲಿರುವ ಬಗ್ಗೆ. | ಮಂಗಳೂರು ನಗರದಲ್ಲಿ ಒಟ್ಟಾರೆ 421 ಸರ್ಕಾರಿ ವಸತಿ ಗೃಹಗಳಿದ್ದು, ಇವುಗಳ ಪೈಕಿ ಒಟ್ಟಾರೆ 101 ಸುಸ್ಥಿತಿಯಲ್ಲಿದ್ದು, 256 ಅಲ್ಪ ಸ್ವಲ್ಪ ದುರಸ್ಥಿಯಲ್ಲಿದ್ದು, 64 ದುಸ್ಥಿತಿಯಲ್ಲಿರುತ್ತವೆ. ಪ್ರತಿ ಸಾಲಿನಲ್ಲಿ ಲಭ್ಯ ವಾರ್ಷಿಕ ಅನುದಾನದಲ್ಲಿ ವಸತಿ ಗೃಹಗಳನ್ನು ಸುಸ್ಥಿತಿಯಲ್ಲಿಡಲು ಕ್ರಮಕೈಗೊಳ್ಳಲಾಗುತ್ತಿದೆ ಎಂದು ಮಾನ್ಯ ಲೋಕೋಪಯೋಗಿ ಸಚಿವರು ತಿಳಿಸಿದರು. | ದಿನಾಂಕ: 28.02.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು, ಮಂಗಳೂರಿನ ಹ್ಯಾಟ್‌ಹಿಲ್, ದೇರೆಬೈಲ್, ಬೋಂದೆಲ್ ಹಾಗೂ ಕುಂಜತ್ತ ಬೈಲ್ ಹಾಗೂ ಪಾಂಡೇಶ್ವರದಲ್ಲಿರುವ ಸರ್ಕಾರಿ ವಸತಿ ಗೃಹಗಳನ್ನು 2014–15, 2015–16 ಮತ್ತು 2016–17ನೇ ಸಾಲಿನಲ್ಲಿ ಒದಗಿಸಲಾದ ಅನುದಾನಗಳಲ್ಲಿ ಹಂತಹಂತವಾಗಿ ದುರಸ್ಥಿ ಪಡಿಸಲಾಗಿದ್ದು, ಅಲ್ಪಸ್ವಲ್ಪ ದುರಸ್ತಿಯಲ್ಲಿದ್ದ 256 ವಸತಿ ಗೃಹಗಳನ್ನು ಹಾಗೂ ದುಸ್ಥಿತಿಯಲ್ಲಿದ್ದ 64 ವಸತಿ ಗೃಹಗಳನ್ನು ದುರಸ್ತಿ ಪಡಿಸಲಾಗಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |
| 42 | 5213<br>ಚು.ಗು.ಪ್ರ: 1729<br>ಶ್ರೀ ವೀರಕುಮಾರ್ ಅಪ್ಪಾಸೊ ಪಾಟೀಲ್<br>ವಿಪನದಿ:22.07.2014 | ರಾಷ್ಟ್ರೀಯ ಹೆದ್ದಾರಿಗಳಲ್ಲಿ ಹೆಚ್ಚಾಗುತ್ತಿರುವ ಅಪಘಾತಗಳನ್ನು ತಡೆಗಟ್ಟಲು ಸರ್ಕಾರ ಕೈಗೊಂಡಿರುವ ಮುಂಜಾಗ್ರತಾ ಕ್ರಮಗಳ ಬಗ್ಗೆ. | ರಾಷ್ಟ್ರೀಯ ಹೆದ್ದಾರಿಗಳಲ್ಲಿ ಅಪಘಾತ ಸಂಭವಿಸದಂತೆ ಮುನ್ನೆಚ್ಚರಿಕೆಯ ಕ್ರಮವಾಗಿ ಅವಶ್ಯವಿರುವ ಕಡೆಗಳಲ್ಲಿ ಎಚ್ಚರಿಕೆ ಫಲಕಗಳನ್ನು ಅಳವಡಿಸಲಾಗುತ್ತಿದೆ, ಅಲ್ಲದೆ ಹೆದ್ದಾರಿಯ ಎರಡೂ ಬದಿಗಳಲ್ಲಿ ಮುಖ್ಯವಾಗಿ ಅಪಘಾತ ವಲಯದಲ್ಲಿ Retro Reflective Paints ಹಚ್ಚಲಾಗುತ್ತಿದೆ. ವಾಹನಗಳ ಸಾಂದ್ರತೆಗೆ ಅನುಗುಣವಾಗಿ ರಸ್ತೆ ಮಧ್ಯದಲ್ಲಿ ಮೀಡಿಯನ್‌ಗಳನ್ನು (Median) ಅವಶ್ಯವಿರುವ ಕಡೆ | ದಿನಾಂಕ: 28.02.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು, ರಾಷ್ಟ್ರೀಯ ಹೆದ್ದಾರಿಗಳಲ್ಲಿ ಅಪಘಾತ ತಡೆಗಟ್ಟುವ ನಿಟ್ಟಿನಲ್ಲಿ ಕೇಂದ್ರ ಭೂಸಾರಿಗೆ ಮತ್ತು ಹೆದ್ದಾರಿಗಳ ಮಂತ್ರಾಲಯದ(MoRTH) ನಿಯಮಾವಳಿಯನ್ವಯ 131 ಬ್ಲಾಕ್‌ಸ್ಪಾಟ್‌ಗಳನ್ನು ಗುರುತಿಸಲಾಗಿದ್ದು, ಅದರಲ್ಲಿ ಈಗಾಗಲೇ 111 ಬ್ಲಾಕ್‌ಸ್ಪಾಟ್‌ಗಳನ್ನು MoRTH ನಿಯಮಾವಳಿ ಪ್ರಕಾರ ಅಭಿವೃದ್ಧಿಪಡಿಸಲಾಗಿದೆ. ಉಳಿದ 20 ಬ್ಲಾಕ್‌ಸ್ಪಾಟ್‌ಗಳನ್ನು 2019–ಮಾರ್ಚ್ ಒಳಗಾಗಿ ಪೂರ್ಣಗೊಳಿಸಲಾಗುವುದು ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |

| | | | | |
|---|---|---|---|---|
| | | | ನಿರ್ಮಿಸಲಾಗುತ್ತಿದೆ. ರಾಷ್ಟ್ರೀಯ ಹೆದ್ದಾರಿಗಳನ್ನು ಸಂಪರ್ಕಿಸುವ ಇತರೆ ರಸ್ತೆಗಳಲ್ಲಿ ವೈಜ್ಞಾನಿಕವಾಗಿ ರಸ್ತೆ ಉಬ್ಬುಗಳನ್ನು ಅಳವಡಿಸಲಾಗುತ್ತಿದೆ ಮತ್ತು Junction Improvements ಗಳನ್ನು ಸಹ ಹಂತ ಹಂತವಾಗಿ ಕೈಗೊಳ್ಳಲು ಕ್ರಮತೆಗೆದುಕೊಳ್ಳಲಾಗುವುದು ಎಂದು ಮಾನ್ಯ ಲೋಕೋಪಯೋಗಿ ಸಚಿವರು ತಿಳಿಸಿದರು. | |
| 43 | 5214<br>ಚು.ಗು.ಪ್ರ: 938<br>ಶ್ರೀ ಅಲ್ಲಮ ಪ್ರಭು ಪಾಟೀಲ್<br>ವಿಪನದಿ:22.07.2014 | ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಕಳೆದ 5 ವರ್ಷಗಳ ಅವಧಿಯಲ್ಲಿ ಲೋಕೋಪಯೋಗಿ ಇಲಾಖೆ ವತಿಯಿಂದ ಕೈಗೊಂಡ ರಸ್ತೆ ನಿರ್ಮಾಣ ಕಾಮಗಾರಿಗಳು ವಿಳಂಬವಾಗುತ್ತಿರುವ ಬಗ್ಗೆ. | 2013–14ನೇ ಸಾಲಿನಲ್ಲಿ 3 divisionಗಳ ಪೈಕಿ 282 ಕಾಮಗಾರಿಗಳು ಕಲಬುರಗಿ ವಿಭಾಗವಾಗಿದ್ದು, 208 ಕಾಮಗಾರಿಗಳು ಯಾದಗಿರಿಯಲ್ಲಿ, 243 ಸೇಡಂನಲ್ಲಿ ತೆಗೆದುಕೊಂಡಿದ್ದೇವೆ. ಅದರಲ್ಲಿ 39 ಕಾಮಗಾರಿಗಳು ನಿಧಾನವಾಗಿದೆ. There will be disciplinary action on the side and there will be hastening the process on the other side. We give priority to hasterning the process of construction of roads ಎಂದು ಮಾನ್ಯ ಲೋಕೋಪಯೋಗಿ ಸಚಿವರು ತಿಳಿಸಿದರು. | ದಿನಾಂಕ: 28.02.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು, 2013–14ನೇ ಸಾಲಿನಲ್ಲಿ ಕೈಗೆತ್ತಿಕೊಂಡ ಕಾಮಗಾರಿಗಳ ಪೈಕಿ ನಿಗಧಿತ ದಿನಾಂಕದೊಳಗೆ ಪೂರ್ಣಗೊಳಿಸಲು ಸಾಧ್ಯವಾಗದೇ ವಿಳಂಬವಾಗಿದ್ದ ಒಟ್ಟಾರೆ 39 ಕಾಮಗಾರಿಗಳ ಪ್ರಸ್ತುತ ಹಂತದ ವಿವರ ಕೆಳಕಂಡಂತಿದೆ :<br>1. ಕಲಬುರಗಿ ವಿಭಾಗಕ್ಕೆ ಸಂಬಂಧಿಸಿದ ಒಟ್ಟು 18 ಕಾಮಗಾರಿಗಳ ಪೈಕಿ ಪ್ರಸ್ತುತ 16 ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ. ಉಳಿದ 2 ಕಾಮಗಾರಿಗಳನ್ನು ನಿರ್ವಹಿಸಲು ಗುತ್ತಿಗೆದಾರರು ವಿಫಲರಾದ ಹಿನ್ನಲೆಯಲ್ಲಿ ಸದರಿ ಕಾಮಗಾರಿಗಳ ಪೈಕಿ 1 ಕಾಮಗಾರಿಯ ಗುತ್ತಿಗೆಯನ್ನು ಈಗಾಗಲೇ ಮೊಟಕುಗೊಳಿಸಿದ್ದು, ಮತ್ತೊಂದು ಕಾಮಗಾರಿಯ ಗುತ್ತಿಗೆಯನ್ನು ಸಹ ಮೊಟಕುಗೊಳಿಸಲು ಕ್ರಮವಹಿಸಲಾಗುತ್ತಿದೆ. ಕೂಡಲೇ ಈ ಕಾಮಗಾರಿಗಳನ್ನು ಸಹ ಕೈಗೆತ್ತಿಕೊಂಡು ಮುಕ್ತಾಯಗೊಳಿಸಲು ಕ್ರಮವಹಿಸಲಾಗುತ್ತಿದೆ.<br>2. ಸೇಡಂ ವಿಭಾಗದಡಿಯ 15 ಕಾಮಗಾರಿಗಳನ್ನು ಹಾಗೂ ಯಾದಗಿರಿ ವಿಭಾಗದ 6 ಕಾಮಗಾರಿಗಳನ್ನು ಈಗಾಗಲೇ ಪೂರ್ಣಗೊಳಿಸಲಾಗಿದೆ. |

| | | | | |
|---|---|---|---|---|
| | | | | ಮೇಲ್ಕಂಡಂತೆ ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |
| 44 | 5215<br>ಚು.ರ.ಪ್ರ: 1737<br>ಶ್ರೀ ಅರುಣ ಶಹಾಪೂರ<br>ವಿಪನದಿ:22.07.2014 | ಬಿಜಾಪುರ ಜಿಲ್ಲೆಯ ದೇವರ ಹಿಪ್ಪರಗಿಯಿಂದ ಸಿಂಧಗಿ ನಗರಕ್ಕೆ ಹೋಗುವ ರಸ್ತೆಯಲ್ಲಿನ ದೇವರ ಹಿಪ್ಪರಗಿ ಮಲ್ಲಯ್ಯನ ಗುಡಿ ಹತ್ತಿರದ ಕ್ರಾಸ್‌ನಲ್ಲಿ ಅಪಘಾತಗಳು ಸಂಭವಿಸು ತ್ತಿದ್ದು, ಇದನ್ನು ತಡೆಗಟ್ಟಲು ಸರ್ಕಾರ ಕೈಗೊಂಡಿರುವ ಕ್ರಮದ ಬಗ್ಗೆ. | ಸದರಿ ರಸ್ತೆಯ NH–218 ಹುಬ್ಬಳ್ಳಿ–ಬಿಜಾಪುರ ಜೇವರ್ಗಿ ಹುಮ್ನಾಬಾದ್ ರಸ್ತೆಯ ಭಾಗವಾಗಿದ್ದು ಒಟ್ಟಾರೆ ರಸ್ತೆಯ ಅಭಿವೃದ್ಧಿಗಾಗಿ ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ಯೋಜನೆ ತಯಾರಿಸಿದ್ದು ಟೆಂಡರ್ ಕರೆಯುವ ಹಂತದಲ್ಲಿದೆ ಎಂದು ಮಾನ್ಯ ಲೋಕೋಪಯೋಗಿ ಸಚಿವರು ತಿಳಿಸಿದರು. | ದಿನಾಂಕ: 28.02.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು, ವಿಜಯಪುರ–ಜೇವರ್ಗಿ ರಾಹೆ–218ಇ (ರಾಹೆ–50) ಕಿ.ಮೀ. 195.00 ರಿಂದ 418.00 ರವರೆಗೆ 2 ಪಥದ ಜೊತೆಗೆ ಪೇವ್ಡ್ ಶೋಲ್ಡರ್ ರಸ್ತೆ ನಿರ್ಮಾಣ ಪೂರ್ಣಗೊಳ್ಳುವ ಹಂತದಲ್ಲಿದೆ. ಅಪಘಾತ ತಡೆಗಟ್ಟಲು ಎಲ್ಲಾ ಅವಶ್ಯ ಕ್ರಮ ವಹಿಸಲಾಗಿದ್ದು, ಈಗ ಈ ಸ್ಥಳಗಳಲ್ಲಿ ರಸ್ತೆ ಅಗಲ ಆಗಿ ವಿಸ್ತಾರಗೊಂಡಿರುತ್ತದೆ ಎಂದು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ (NHAI) ರವರು ವರದಿಸಿರುತ್ತಾರೆಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |
| 45 | 5216<br>ಚು.ರ.ಪ್ರ: 1732<br>ಶ್ರೀ ಟಿ. ಜಾನ್<br>ವಿಪನದಿ:22.07.2014 | ಮೈಸೂರು–ಬಂಟ್ವಾಳ ರಾಜ್ಯ ಹೆದ್ದಾರಿಯನ್ನು ರಾಷ್ಟ್ರೀಯ ಹೆದ್ದಾರಿ ರಸ್ತೆಯನ್ನಾಗಿ ಮೇಲ್ದರ್ಜೆಗೇರಿಸುವ ಕಾಮಗಾರಿಯ ಬಗ್ಗೆ. | ಈ ರಸ್ತೆಯನ್ನು ರಾಷ್ಟ್ರೀಯ ಹೆದ್ದಾರಿಯಾಗಿ ಮೇ–2014ರಲ್ಲಿ ಘೋಷಿಸುವ ಪೂರ್ವದಲ್ಲಿ ಲೋಕೋಪಯೋಗಿ ಇಲಾಖೆಯಿಂದ ಈ ರಸ್ತೆಯನ್ನು ಅಭಿವೃದ್ಧಿಪಡಿಸಲು ಕ್ರಮ ಕೈಗೊಳ್ಳಲಾಗಿದ್ದು, ಮೈಸೂರು–ಬಂಟ್ವಾಳ ರಸ್ತೆಯನ್ನು 3 ಪ್ಯಾಕೇಜ್ ಮಾಡಿ ಕಾಮಗಾರಿ ಕೈಗೊಳ್ಳಲಾಗಿದೆ.<br><br>ಪ್ಯಾಕೇಜ್–ಎ: ಮೈಸೂರು–ಬಂಟ್ವಾಳ ರಸ್ತೆಯ ಮೈಸೂರಿನಿಂದ ಕುಶಾಲನಗರ ಈ ಕಾಮಗಾರಿಯನ್ನು ದಿನಾಂಕ: | ದಿನಾಂಕ: 28.02.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು, ಮೈಸೂರು–ಬಂಟ್ವಾಳ ರಾಜ್ಯ ಹೆದ್ದಾರಿಯನ್ನು ಕೇಂದ್ರ ಸರ್ಕಾರದ ಅಧಿಸೂಚನೆ ದಿ: 4.3.2014ರ ಅನ್ವಯ ರಾಷ್ಟ್ರೀಯ ಹೆದ್ದಾರಿ 275 ಆಗಿ ಘೋಷಿಸಲಾಗಿದೆ. ಈ ಹೆದ್ದಾರಿಯಲ್ಲಿ ಪ್ರಸ್ತುತ ಈ ಕೆಳಗಿನ ಕಾಮಗಾರಿಗಳನ್ನು ರಾಷ್ಟ್ರೀಯ ಹೆದ್ದಾರಿ ವಲಯದಿಂದ ಕೈಗೊಳ್ಳಲಾಗುವುದು.<br><br>1) ಕಿ.ಮೀ. 132.32 ರಿಂದ ಕಿ.ಮೀ. 169.00 ರವರೆಗೆ ರಸ್ತೆ ಬಲಪಡಿಸುವ ಕಾಮಗಾರಿಯ ಗುತ್ತಿಗೆಯನ್ನು ಮೆ: ಜೆ.ಎಂ.ಸಿ. ಕನ್‌ಸ್ಟ್ರಕ್ಷನ್ ಇವರಿಗೆ ರೂ.19.74 ಕೋಟಿಗಳಿಗೆ ದಿನಾಂಕ:16.5.2018ರಂದು ವಹಿಸಿಕೊಡಲಾಗಿದೆ. |

| | | | | |
|---|---|---|---|---|
| | | | 30-04-2009 ರಂದು ಪೂರ್ಣಗೊಳಿಸಲಾಗಿದೆ.<br><br>ಪ್ಯಾಕೇಜ್-ಬಿ: ಕುಶಾಲನಗರದಿಂದ ಸಂಪಾಜೆ ಈ ಕಾಮಗಾರಿಯನ್ನು ದಿನಾಂಕ:31-03-2012ರಂದು ಪೂರ್ಣಗೊಳಿಸಲಾಗಿದೆ.<br><br>ಪ್ಯಾಕೇಜ್-ಸಿ: ಸಂಪಾಜೆಯಿಂದ ಮಾಣಿವರೆಗೆ (ಸರಪಳಿ 148.50 ಕಿ.ಮೀ.ರಿಂದ ಸರಪಳಿ 220.400 ಕಿ.ಮೀ. ವರೆಗೆ) ಈ ಕಾಮಗಾರಿಯನ್ನು ಮೆ: ಕೆ.ಎಂ.ಸಿ., ಹೈದರಾಬಾದ್, ಇವರಿಗೆ ದಿನಾಂಕ: 27-01-2010ರಲ್ಲಿ ಕಾಮಗಾರಿ ನಿರ್ಮಾಣ ಮಾಡಲು ವಹಿಸಲಾಯಿತು. ಸದರಿ ಕಾಮಗಾರಿ ಪ್ರಗತಿಯು<br><br>ಭೂಸ್ವಾಧೀನ ಪ್ರಕ್ರಿಯೆ, Utilityಗಳ ಸ್ಥಳಾಂತರ, ಕಾಮಗಾರಿಗೆ ಅವಶ್ಯಕವಾಗಿ ಬೇಕಾಗಿರುವ ಜೆಲ್ಲಿ ಮತ್ತು ಮರಳುಗಳ ಅಭಾವದಿಂದಾಗಿ ಕುಂಠಿತಗೊಂಡಿದ್ದು, ದಿನಾಂಕ:31-03-2105ಕ್ಕೆ ಪೂರ್ಣ ಗೊಳಿಸಲು ಕ್ರಮ ಕೈಗೊಳ್ಳಲಾಗುವುದು.<br><br>ಇದೀಗ ರಾಷ್ಟ್ರೀಯ ಹೆದ್ದಾರಿಯಾಗಿ ಘೋಷಿಸಿರುವುದರಿಂದ, ಕೇಂದ್ರ ಭೂಸಾರಿಗೆ ಮಂತ್ರಾಲಯದಿಂದ ರಾಷ್ಟ್ರೀಯ ಹೆದ್ದಾರಿ-275ರ ಸುಂಟಿಕೊಪ್ಪ, ಸುಳ್ಯ, ಪಿರಿಯಾಪಟ್ಟಣ ಮತ್ತು ಕುಶಾಲನಗರ, ಇವುಗಳಿಗೆ | 2) ಕಿ.ಮೀ. 171.85 ರಿಂದ ಕಿ.ಮೀ. 190.50 ರವರೆಗೆ ರಸ್ತೆ ಬಲಪಡಿಸುವ ಕಾಮಗಾರಿಗೆ ಎರಡನೇ ಬಾರಿಗೆ ಗುತ್ತಿಗೆ ಕರೆದಿದ್ದು ಟೆಂಡರ್ ಪ್ರಕ್ರಿಯೆಯು ಪ್ರಗತಿಯಲ್ಲಿದೆ.<br><br>3) ಕಿ.ಮೀ. 71.60 ರಿಂದ 99.200 ರವರೆಗಿನ ರಸ್ತೆ ಬಲಪಡಿಸುವ ಕಾಮಗಾರಿಯು ಮೆ: ಜೆ.ಎಂ.ಸಿ. ಕನ್‌ಸ್ಟ್ರಕ್ಷನ್ ಇವರಿಗೆ ರೂ. 16.439 ಕೋಟಿ ಮೊತ್ತಕ್ಕೆ ಟೆಂಡರ್‌ನ್ನು ದಿ: 5.1.2018ರಂದು ವಹಿಸಿಕೊಡಲಾಗಿದ್ದು, ಸಾಮಗ್ರಿ ಸಂಗ್ರಹಣಾ ಕಾರ್ಯ ಪ್ರಗತಿಯಲ್ಲಿರುತ್ತದೆ. ಬಾಕಿ ಉಳಿದ ರಸ್ತೆಯ ಭಾಗವನ್ನು ಹಂತ-ಹಂತವಾಗಿ ಕೇಂದ್ರ ಸರ್ಕಾರದಿಂದ ಅನುಮೋದನೆ ಪಡೆದು ಅಭಿವೃದ್ಧಿಪಡಿಸಲಾಗುವುದು.<br><br>ಮೇಲ್ಕಂಡಂತೆ ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |

| | | | | |
|---|---|---|---|---|
| | | | ಬೈಪಾಸ್ ರಸ್ತೆ ನಿರ್ಮಿಸಲು ಮತ್ತು ಈ ರಸ್ತೆ ಅಭಿವೃದ್ಧಿಗಾಗಿ ಯೋಜನಾ ವರದಿ ತಯಾರಿಸಲು ಖಾಸಗಿ ಸಹಗಾರರ ನೇಮಕಕ್ಕಾಗಿ (Consultancy Service) ಟೆಂಡರ್ ಕರೆಯಲಾಗಿದೆ ಎಂದು ಮಾನ್ಯ ಲೋಕೋಪಯೋಗಿ ಸಚಿವರು ತಿಳಿಸಿದರು. | |
| 46 | 5217<br>ಚು.ರ.ಪ್ರ. 2156<br>ಶ್ರೀ ಐವನ್ ಡಿ.ಸೋಜಾ<br>ವಿಪನದಿ:30.07.2014 | ದಕ್ಷಿಣ ಕನ್ನಡ–ಉಡುಪಿ ಜಿಲ್ಲೆಗಳಲ್ಲಿ ಸಮುದ್ರ ಕೊರೆತದ ತಡೆಗೋಡೆ ನಿರ್ಮಾಣ ಯೋಜನೆ ಮತ್ತು ಶಾಶ್ವತ ಪರಿಹಾರ ನೀಡಲು ಸರ್ಕಾರ ಕೈಗೊಂಡ ಕ್ರಮಗಳ ಬಗ್ಗೆ. | ರಾಜ್ಯ ಸರ್ಕಾರದ ಅನುದಾನದಿಂದ ಮಳೆಗಾಲದಲ್ಲಿ ಸಮುದ್ರ ಕೊರೆತ ಉಂಟಾದಾಗ ತುರ್ತು ಸಮುದ್ರ ಕೊರೆತ ಪ್ರತಿಬಂಧಕ ಕಾಮಗಾರಿಗಳನ್ನು ಪ್ರತಿ ವರ್ಷ ನಿರ್ವಹಿಸಲಾಗುತ್ತಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ರೂ.11.75 ಕೋಟಿ ಉಡುಪಿ ಹಾಗೂ ಉತ್ತರ ಕನ್ನಡ ಜಿಲ್ಲೆಗೆ 10.00 ಕೋಟಿ, ಒಟ್ಟು 3 ಜಿಲ್ಲೆಗಳಿಗೆ 31.75 ಕೋಟಿ ಮೊತ್ತದಲ್ಲಿ ದೀರ್ಘಕಾಲಿಕ ಸಮುದ್ರ ಕೊರೆತ ಪ್ರತಿಬಂಧಕ ಕಾಮಗಾರಿಗಳನ್ನು ಕೈಗೊಳ್ಳಲು ಮಂಜೂರಾತಿ ನೀಡಿದ್ದು, ಟೆಂಡರ್ ಪ್ರಕ್ರಿಯೆ ಹಾಗೂ ಸ್ಥಳ ಅಧ್ಯಯನ ಪ್ರಕ್ರಿಯೆ ಚಾಲನೆಯಲ್ಲಿರುತ್ತದೆ ಹಾಗೂ ಸಮುದ್ರ ಕೊರೆತದಿಂದ ನಿರ್ವಸಿತರಾದ ಕುಟುಂಬಗಳಿಗೆ ಪುನರ್ ವಸತಿ ಕಲ್ಪಿಸುವ ವಿಷಯವು ಕಂದಾಯ ಇಲಾಖೆಯ ವ್ಯಾಪ್ತಿಗೆ ಬರುತ್ತಿದ್ದು, ಸಂಬಂಧಪಟ್ಟ ಜಿಲ್ಲಾಡಳಿತವು ಅಗತ್ಯ ಕ್ರಮ ಕೈಗೊಳ್ಳುತ್ತದೆ ಎಂದು ಮಾನ್ಯ | ದಿನಾಂಕ: 28.02.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು, 2016–17ನೇ ಸಾಲಿನಲ್ಲಿ ಕರಾವಳಿಯ 3 ಜಿಲ್ಲೆಗಳಿಗೆ ತಲಾ ರೂ.4.00 ಕೋಟಿ ಮೊತ್ತದ ಒಟ್ಟು ರೂ. 12.00 ಕೋಟಿ ವೆಚ್ಚದಲ್ಲಿ ಸಮುದ್ರ ಕೊರತೆ ಸಂಭವಿಸಿದ ಸ್ಥಳಗಳಲ್ಲಿ ತುರ್ತು ಗೋಡೆಗಳನ್ನು ನಿರ್ಮಿಸಲಾಗಿದೆ. ಅಲ್ಲದೇ ಈ ಹಿಂದೆ ಮಂಜೂರು ಮಾಡಲಾದ ರೂ. 31.75 ಕೋಟಿ ಮೊತ್ತದ ದೀರ್ಘಕಾಲಿಕ ತಡೆಗೋಡೆ ಕಾಮಗಾರಿಯನ್ನು 3 ಜಿಲ್ಲೆಗಳ ಆಯ್ದ ಪ್ರದೇಶಗಳಲ್ಲಿ ನಿರ್ಮಾಣ ಮಾಡಲಾಗಿದೆ.<br><br>ಸಮುದ್ರ ಕೊರೆತವನ್ನು ವೈಜ್ಞಾನಿಕವಾಗಿ ನಿಯಂತ್ರಿಸಲು "ಸುಸ್ಥಿರ ಕರಾವಳಿ ತೀರ ಸಂರಕ್ಷಣೆ ಮತ್ತು ನಿರ್ವಹಣಾ ಯೋಜನೆ" ಯಡಿ ರೂ. 911.00 ಕೋಟಿ ಮೊತ್ತದ ಪ್ರಸ್ತಾವನೆಗೆ ಸರ್ಕಾರವು ಮಂಜೂರಾತಿ ನೀಡಿದ್ದು, ಉಳ್ಳಾಲದಲ್ಲಿ ರೂ. 223.32 ಕೋಟಿ ವೆಚ್ಚದಲ್ಲಿ 6 ಇನ್‌ಶೋರ್ ಬರ್ಮ್ಸ್, 2 ಆಫ್‌ಶೋರ್ ರೀವ್ಸ್ ಮತ್ತು ಬ್ರೇಕ್‌ವಾಟರ್ ನಿರ್ಮಾಣ ಕಾಮಗಾರಿಗಳು ಪೂರ್ಣಗೊಂಡಿದ್ದು, 2ನೇ ಹಂತದಲ್ಲಿ ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಯ 8 ಪ್ರದೇಶಗಳಲ್ಲಿ ರೂ. 641.00 ಕೋಟಿ ವೆಚ್ಚದಲ್ಲಿ ಸಮುದ್ರ ಕೊರತೆ ತಡೆಗೋಡೆ ನಿರ್ಮಿಸಲು ಕೇಂದ್ರ ಜಲ ಆಯೋಗದ ಅನುಮೋದನೆ ಪಡೆದು ಕಾಮಗಾರಿಗಳು |

| | | | | |
|---|---|---|---|---|
| | | | ಜವಳಿ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ತಿಳಿಸಿದರು. | ಪ್ರಗತಿಯಲ್ಲಿವೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |
| 47 | 5219<br>ಚು.ಗು.ಪ್ರ: 991<br>ಶ್ರೀ ಘೋಟ್ನೇಕರ ಶ್ರೀಕಾಂತ ಲಕ್ಷ್ಮಣ<br>ವಿಪನದಿ;9.07.2014 | ಕಾರವಾರ ಜಿಲ್ಲೆಯ ಕರಾವಳಿ ವಿಭಾಗದಲ್ಲಿ ಬಂದರುಗಳಿಗೆ ಮೂಲಭೂತ ಸೌಕರ್ಯ ಒದಗಿಸುವ ಕುರಿತು. | ಕರಾವಳಿಯ ಕಾರವಾರ, ಉಡುಪಿ ಮತ್ತು ಮಂಗಳೂರು ಜಿಲ್ಲೆಗಳಲ್ಲಿ ಕಡಲ ಕೊರೆತವನ್ನು ತಡೆಯುವ ಸಲುವಾಗಿ 911 ಕೋಟಿ ರೂಪಾಯಿಗಳನ್ನು ಸರ್ಕಾರ ಮಂಜೂರಾತಿ ನೀಡಿದೆ. ಇವತ್ತು ಹೊನ್ನಾವರದಲ್ಲಿ 511.32ಕೋಟಿ ರೂಪಾಯಿಗಳ ಹೆಚ್ಚಳದಲ್ಲಿ ಅಭಿವೃದ್ಧಿ ಮಾಡಲಾಗಿದೆ. ಉತ್ತರಕನ್ನಡ ಜಿಲ್ಲೆ ಮಂಕಿಯಲ್ಲಿ 46ಕೋಟಿ ರೂಪಾಯಿಗಳ ವೆಚ್ಚದಲ್ಲಿ ರೇಣುಕಾ ಘುಗರ್ ಕಂಪನಿಗೆ 30 ವರ್ಷಗಳಿಗೆ ಒಪ್ಪಂದ ಮೇರೆಗೆ ಗುತ್ತಿಗೆಯನ್ನು ನೀಡಲಾಗಿದೆ. ಇವತ್ತು ಮಾನ್ಯ ಮುಖ್ಯಮಂತ್ರಿಗಳ ನೇತೃತ್ವದಲ್ಲಿ ಅನೇಕ ಅಭಿವೃದ್ಧಿ ಕೆಲಸಗಳಾಗಿವೆ, ಹಾಗೆಯೇ ಮಾನ್ಯ ಸದಸ್ಯರು ಹೇಳಿರುವ ವಿಚಾರ ಕೇಂದ್ರ ಸರ್ಕಾರದ ಪಟ್ಟಿಯಲ್ಲಿದೆ. ಅದನ್ನು ಕೂಡ ಪರಿಶೀಲಿಸಿ ಕ್ರಮ ಕೈಗೊಳ್ಳುತ್ತೇನೆ ಎಂದು ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ತಿಳಿಸಿದರು. | ದಿನಾಂಕ: 28.02.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು, ಕರಾವಳಿಯ 3 ಜಿಲ್ಲೆಗಳಲ್ಲಿ ಸಮುದ್ರ ಕಡಲ ಕೊರೆತವನ್ನು ವೈಜ್ಞಾನಿಕವಾಗಿ ನಿಯಂತ್ರಿಸಲು ಸುಸ್ಥಿರ ಕರಾವಳಿ ತೀರ ಸಂರಕ್ಷಣೆ ಮತ್ತು ನಿರ್ವಹಣಾ ಯೋಜನೆಯಡಿ ರೂ. 911.00 ಕೋಟಿ ಮೊತ್ತದ ಪ್ರಸ್ತಾವನೆಗೆ ಸರ್ಕಾರವು ಮಂಜೂರಾತಿ ನೀಡಿದ್ದು, ಉಳ್ಳಲದಲ್ಲಿ ರೂ. 223.32 ಕೋಟಿ ವೆಚ್ಚದಲ್ಲಿ 06 ಇನ್‌ಶೋರ್ ಬರ್ಮ್ಸ್ 02 ಆಫ್‌ಶೋರ್ ರೀಫ್ಸ್ ಮತ್ತು ಬ್ರೇಕ್‌ವಾಟರ್ ನಿರ್ಮಾಣ ಕಾಮಗಾರಿಗಳು ಪೂರ್ಣಗೊಂಡಿದ್ದು, 2ನೇ ಹಂತದಲ್ಲಿ ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಯ 8 ಪ್ರದೇಶಗಳಲ್ಲಿ ರೂ. 641.00 ಕೋಟಿ ವೆಚ್ಚದಲ್ಲಿ ಸಮುದ್ರ ಕೊರತೆ ತಡೆಗೋಡೆ ನಿರ್ಮಿಸಲು ಕೇಂದ್ರ ಜಲ ಆಯೋಗದ ಅನುಮೋದನೆ ಪಡೆದು ಕಾಮಗಾರಿಗಳು ಪ್ರಗತಿಯಲ್ಲಿವೆ.<br><br>ಉತ್ತರ ಕನ್ನಡ ಜಿಲ್ಲೆಯ ಕಾರವಾರ ಬಂದರಿನ ಸಾಮರ್ಥ್ಯವನ್ನು ಹೆಚ್ಚಿಸುವ ಸಲುವಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಸಹಾಯಧನದಲ್ಲಿ ರೂ. 276.00 ಕೋಟಿ ಮೊತ್ತ ಕೋಸ್ಟಲ್ ಕಾರ್ಗೋ ಧಕ್ಕೆ ಮತ್ತು ಬ್ರೇಕ್‌ವಾಟರ್ ನಿರ್ಮಾಣ ಕಾಮಗಾರಿಗಳಿಗೆ ಆಡಳಿತ ಮಂಜೂರಾತಿ ನೀಡಲಾಗಿರುತ್ತದೆ. ರೂ.125.00 ಕೋಟಿ ಮೊತ್ತದ ಬ್ರೇಕ್ ವಾಟರ್ ನಿರ್ಮಾಣ ಕಾಮಗಾರಿಗೆ ಏಜೆನ್ಸಿಯನ್ನು ನಿಗದಿಪಡಿಸಲಾಗಿದೆ. ಉಳಿದ ಕಾಮಗಾರಿಗಳಿಗೆ ತಾಂತ್ರಿಕ ಮಂಜೂರಾತಿ ಪಡೆದು ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದೆ. ಅಲ್ಲದೇ ಕಾರವಾರ ಬಂದರಿನಲ್ಲಿ 8.50 ಮೀ. ಆಳದ ಹಡಗುಗಳು ಆಗಮಿಸುವಂತೆ ರೂ. 33.00 ಕೋಟಿ ವೆಚ್ಚದಲ್ಲಿ ನಿರ್ವಹಣಾ ಹೂಳೆತ್ತುವ ಕಾಮಗಾರಿಯನ್ನು |

| | | | | |
|---|---|---|---|---|
| | | | | 2018ರ ಮಾರ್ಚ್ ತಿಂಗಳಲ್ಲಿ ಪೂರ್ಣಗೊಳಿಸಲಾಗಿದೆ. ಹೆಚ್ಚುವರಿ 4 ಹಡಗುಗಳ ನಿಲುಗಡೆಗಾಗಿ 14 ಮೀ. ಆಳದ ಧಕ್ಕೆಯನ್ನು ನಿರ್ಮಿಸಲು ವಿಸ್ತೃತ ಯೋಜನಾ ವರದಿಯನ್ನು ತಯಾರಿಸಿ ರಾಜ್ಯಮಟ್ಟದ ಅಂದಾಜು ಪರಿಶೀಲನಾ ಸಮಿತಿಯ ಪರಿಶೀಲನೆ ಮತ್ತು ಅನುಮೋದನೆ ಪಡೆದುಕೊಳ್ಳಲು ಕ್ರಮ ಕೈಗೊಳ್ಳಲಾಗಿದೆ<br>ಹೊನ್ನಾವರ ಬಂದರನ್ನು ರೂ. 511.32 ಕೋಟಿ ವೆಚ್ಚದಲ್ಲಿ ಅಭಿವೃದ್ಧಿ ಪಡಿಸಲು ಮೆ: ಹೊನ್ನಾವರ ಪೋರ್ಟ್ ಪ್ರೈ.ಲಿ ಸಂಸ್ಥೆಗೆ ಬಂದರು ಭೂಮಿಯನ್ನು ಗುತ್ತಿಗೆ ಆಧಾರದಲ್ಲಿ ನೀಡಿ ಕರಾರು ಒಪ್ಪಂದ ಮಾಡಿಕೊಂಡು ಅಗತ್ಯ ಮೂಲ ಸೌಲಭ್ಯಗಳ ವಿನ್ಯಾಸಕ್ಕೆ ಅನುಮೋದನೆ ನೀಡಲಾಗಿದೆ. ಪ್ರಾಥಮಿಕ ಹಂತದ ಕೆಲಸಗಳು ಪ್ರಗತಿಯಲ್ಲಿದೆ.<br>ಮಂಕಿ ಬಂದರನ್ನು ಅಭಿವೃದ್ಧಿ ಪಡಿಸಲು ಮೆ: ರೇಣುಕಾ ಷುಗರ್ಸ್ ಕಂಪನಿಯವರಿಗೆ ಬಂದರು ಭೂಮಿಯ್ನು ಮಂಜೂರು ಮಾಡಿದ್ದು ಸದರಿ ಸಂಸ್ಥೆಯವರು ಯಾವುದೇ ಅಭಿವೃದ್ಧಿ ಕಾಮಗಾರಿ ಪ್ರಾರಂಭಿಸದೆ ಕರಾರು ಉಲ್ಲಂಘನೆ ಮಾಡಿರುವುದರಿಂದ ಇವರ ಗುತ್ತಿಗೆ ರದ್ದು ಪಡಿಸಲಾಗಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |
| 48 | 5220<br>ಚು.ಗು.ಪ್ರ: 185<br>ಶ್ರೀ ಘೋಟ್ನೇಕರ್ ಶ್ರೀಕಾಂತ ಲಕ್ಷ್ಮಣ<br>ವಿಪನದಿ: 09/12/2014 | ಉತ್ತರ ಕನ್ನಡ ಜಿಲ್ಲೆಯ ಕಾರವಾರ ತಾಲ್ಲೂಕಿನ ಖರ್ಗಾ ಮತ್ತು ಕಡಿಯಾ ಗ್ರಾಮಗಳ ಮಧ್ಯೆ ಇರುವ ಸೇತುವೆ ಕಳೆದ 60 ವರ್ಷಗಳಿಂದ ಲೋಕೋಪಯೋಗಿ ಇಲಾಖೆಯ ನಿರ್ಲಕ್ಷದಿಂದ ಇಲ್ಲಿಯವರೆಗೆ ಸೇತುವೆ | ಉತ್ತರ ಕನ್ನಡ ಜಿಲ್ಲೆಯ ಕಾರವಾರ ತಾಲ್ಲೂಕಿನ ನೈತಿಸಾವರ ಖಾರ್ಗಾ ಕಡಿಯಾ ರಸ್ತೆಯು 2008ರ ಪೂರ್ವದಲ್ಲಿ ಗ್ರಾಮೀಣ ರಸ್ತೆಯಾಗಿದ್ದು, ಸರ್ಕಾರದ ಆದೇಶ ಸಂಖ್ಯೆ: ಲೋಇ/463/ ಸಿಆರ್‌ಎಂ/2008, ದಿ: 03.11.2008 ರಂತೆ ಈ ರಸ್ತೆಯನ್ನು ಜಿಲ್ಲಾ ಮುಖ್ಯ ರಸ್ತೆಯನ್ನಾಗಿ | ದಿನಾಂಕ: 28.02.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು, ಉತ್ತರ ಕನ್ನಡ ಜಿಲ್ಲೆಯ ಕಾರವಾರ ತಾಲ್ಲೂಕಿನ ನೈತಿಸಾವರ ಖರ್ಗಾ ಕಡಿಯಾ ಗ್ರಾಮೀಣ ರಸ್ತೆಯನ್ನು ಮೇಲ್ದರ್ಜೆಗೇರಿಸಿ ಲೋಕೋಪಯೋಗಿ ಇಲಾಖೆ ವ್ಯಾಪ್ತಿಗೆ ಸರ್ಕಾರದ ಆದೇಶ ಸಂಖ್ಯೆ: ಲೋಇ 463/ಸಿಆರ್‌ಎಂ:2008, ದಿ: 3.11.2008ರಡಿ ತೆಗೆದುಕೊಳ್ಳಲು ಅನುಮೋದನೆ ನೀಡಲಾಗಿದೆ. ತದನಂತರ ಈ ರಸ್ತೆಯ ಮೇಲಿನ ಸೇತುವೆ ಕಾಮಗಾರಿಯು ಗ್ರಾಮೀಣಾಭಿವೃದ್ಧಿ ಹಾಗೂ |

| | | | | |
|---|---|---|---|---|
| | | ನಿರ್ಮಾಣವಾಗದೇ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವ ಬಗ್ಗೆ. | ಮೇಲ್ದರ್ಜೆಗೇರಿಸಿ, ಮೇ 2009 ರಲ್ಲಿ ಲೋಕೋಪಯೋಗಿ ಇಲಾಖೆಯ ಅಧೀನಕ್ಕೆ ಪಡೆದುಕೊಳ್ಳಲಾಗಿದೆ. ಈ ಸೇತುವೆ ಕಾಮಗಾರಿಯನ್ನು ಕೈಗೊಳ್ಳಲು ರೂ.400.00 ಲಕ್ಷಗಳ ಅಂದಾಜು ಮೊತ್ತಕ್ಕೆ ಪ್ರಸ್ತಾವನೆಯು ಸರ್ಕಾರದಲ್ಲಿ ಸ್ವೀಕೃತವಾಗಿರುತ್ತದೆ ಹಾಗೂ ಈ ಪ್ರಸ್ತಾವನೆಯು ಪರಿಶೀಲನೆಯಲ್ಲಿದೆಯೆಂದು ಮಾನ್ಯ ಲೋಕೋಪಯೋಗಿ ಸಚಿವರು ತಿಳಿಸಿದರು. | ಪಂಚಾಯತ್ ರಾಜ್ ಇಲಾಖೆಯಡಿ ನಮ್ಮ ಗ್ರಾಮ ನಮ್ಮ ರಸ್ತೆ ಹಂತ–IV ಯೋಜನೆ ಪ್ಯಾಕೇಜ್ ಸಂ. KS 27-41ರಡಿ ಮಂಜೂರಾಗಿದ್ದು, ಸದರಿ ಇಲಾಖೆಯಿಂದ ಗುತ್ತಿಗೆ ಆಧಾರದ ಮೇಲೆ ಮೆ: ರಾಮಶ್ರೀ ಗ್ಲೋಬಲ್ ಕನಸ್ಟ್ರಕ್ಷನ್ ಪ್ರೈ. ಲಿ. ಪ್ರಥಮ ದರ್ಜೆ ಗುತ್ತಿಗೆದಾರರು, ಕಾರವಾರ ಇವರಿಗೆ ರೂ. 662.04 ಲಕ್ಷಗಳ ಗುತ್ತಿಗೆ ಮೊತ್ತಕ್ಕೆ ವಹಿಸಲಾಗಿದ್ದು, ಸದರಿ ಕಾಮಗಾರಿ ಪ್ರಗತಿಯಲ್ಲಿರುತ್ತದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |
| 49 | 5221<br>ಚು.ಗು.ಪ್ರ: 68<br>ಶ್ರೀ ಬಿ.ಜೆ. ಪುಟ್ಟಸ್ವಾಮಿ ವಿಪನದಿ: 09/12/2014 | ರಾಜ್ಯ ಮತ್ತು ರಾಷ್ಟ್ರೀಯ ಹೆದ್ದಾರಿಗಳ ರಸ್ತೆ ಮಾರ್ಜಿನ್‌ನಲ್ಲಿ ರಾಜ್ಯದಾದ್ಯಂತ ಅನಧಿಕೃತ ಕಟ್ಟಡ ಮತ್ತು ಒತ್ತುವರಿ ಆಗಿದ್ದು, ಇದಕ್ಕೆ ಕಾರಣರಾದ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳುವ ಬಗ್ಗೆ. | 2014–15ನೇ ಸಾಲಿನಲ್ಲಿ ಲೋಕೋಪಯೋಗಿ ಇಲಾಖೆಯಲ್ಲಿ ಎರಡನೇ ಹಂತದಲ್ಲಿ ಒಟ್ಟು 8760.00 ಕಿ.ಮೀ. ಉದ್ದದ ರಾಜ್ಯ ಹೆದ್ದಾರಿಗಳ ಗಡಿ ಗುರುತು (Right of way) ಮಾಡಲು ಸಮಾಲೋಚಕರನ್ನು ನೇಮಿಸುವ ಟೆಂಡರ್ ಪ್ರಕ್ರಿಯೆ ಜಾರಿಯಲ್ಲಿದೆ. ಬಾಕಿ ಉಳಿದ ರಸ್ತೆಗಳಿಗೆ ಮುಂದಿನ ವರ್ಷಗಳಲ್ಲಿ ಗಡಿ ಗುರುತು ಮಾಡುವ ಕಾರ್ಯ ಪೂರ್ಣಗೊಳಿಸಿ, ರಸ್ತೆಗಳಲ್ಲಿನ ಒತ್ತುವರಿಗಳನ್ನು ಅಧಿಕೃತವಾಗಿ ದೃಢಪಡಿಸಿಕೊಂಡು ನಂತರ ನಿಯಮಾನುಸಾರ ಒತ್ತುವರಿಗಳನ್ನು ತೆರವುಗೊಳಿಸಲು ಹಾಗೂ ಬೈಪಾಸ್ ರಸ್ತೆಗಳಿಗೆ ಈಗಾಗಲೇ ಭೂಸ್ವಾಧೀನ | ದಿನಾಂಕ: 28.02.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು,<br>• 2014–15ನೇ ಸಾಲಿನಲ್ಲಿ ಲೋಕೋಪಯೋಗಿ ಇಲಾಖೆಯಲ್ಲಿ ಎರಡನೇ ಹಂತದಲ್ಲಿ ಒಟ್ಟು 8760.00 ಕಿ.ಮೀ. ಉದ್ದದ ರಾಜ್ಯ ಹೆದ್ದಾರಿಗಳ ಗಡಿ ಗುರುತು(Right of way) ಮಾಡಲು ಸಮಾಲೋಚಕರನ್ನು ನೇಮಿಸಲಾಗಿರುತ್ತದೆ.<br>• ಸದರಿ ಸಮಾಲೋಚಕೆರು Right of way ಗುರುತಿಸುವಲ್ಲಿ ಅವಶ್ಯವಿರುವ ಭೂಮಾಪನಾ ಮೋಜಣಿ ಕೈಗೊಂಡಿದ್ದು ನಕ್ಷೆ ತಯಾರಿಸರುತ್ತಾರೆ.<br>• ದಿನಾಂಕ: 8.8.2017ರಂದು ಅಪರ ಮುಖ್ಯ ಕಾರ್ಯದರ್ಶಿಗಳು, ಲೋಇ ಇವರ ಅಧ್ಯಕ್ಷತೆಯಲ್ಲಿ ರಾಜ್ಯ ಹೆದ್ದಾರಿಗಳ ಭೂಮಾಪನ ನಕ್ಷೆ ಮೋಜಣಿ ದೃಢೀಕರಣಗೊಳಿಸುವ ಕುರಿತು ದಿನಾಂಕ: |

| | | | | |
|---|---|---|---|---|
| | | | ಆಗಿರುವುದರಿಂದ ಇಂತಹ ರಸ್ತೆಯು ಸಂಪೂರ್ಣ ಸರ್ಕಾರದ ಆಸ್ತಿಯಾಗಿರುತ್ತದೆ. ಇಂತಹ ರಸ್ತೆಗಳ ಮಾರ್ಜಿನ್‌ನ್ನು (ಗಡಿ ಗುರುತು) ಕಾಪಾಡುವುದು ಸರ್ಕಾರದ ಕರ್ತವ್ಯವಾಗಿದ್ದು, ರಸ್ತೆಗಳಲ್ಲಿನ ಒತ್ತುವರಿ ತೆರವುಗೊಳಿಸದೇ ಇದ್ದಲ್ಲಿ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಕಾನೂನು ರೀತಿ ಕ್ರಮ ಜರುಗಿಸಲಾಗುವುದೆಂದು ಮಾನ್ಯ ಲೋಕೋಪಯೋಗಿ ಸಚಿವರು ತಿಳಿಸಿದರು. | 30.8.2018ರಂದು ಸರ್ಕಾರದ ಮಟ್ಟದಲ್ಲಿ ನಡೆದ ಸಭೆಯಲ್ಲಿ ಸಮಾಲೋಚಕರು ಕೈಗೊಂಡಿರುವ ಸರ್ವೆ ಕಾರ್ಯವನ್ನು ಅಂಗೀಕರಿಸಲು ತಿಳಿಸುತ್ತಾ ರಾಜ್ಯ ಹೆದ್ದಾರಿ ಕಾಯ್ದೆ–1964ರ ಅನುಸಾರ ಅಧಿಸೂಚನೆ ಹೊರಡಿಸಲು ನಿರ್ಣಯಿಸಲಾಗಿರುತ್ತದೆ.<br><br>ಮೇಲ್ಕಂಡಂತೆ ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |
| 50 | 5222<br>ಚು.ರ.ಪ್ರ: 240<br>ಶ್ರೀ ಬಿ. ರಾಮಕೃಷ್ಣ<br>ವಿಪನದಿ:<br>09/12/2014 | ಬೆಂಗಳೂರು ಮೈಸೂರು ಹೆದ್ದಾರಿ ಹಾದು ಹೋಗುವ ನಗರಗಳಲ್ಲಿ ವಾಹನಗಳ ದಟ್ಟಣೆಯನ್ನು ತಪ್ಪಿಸಲು ಮೇಲ್ಸೇತುವೆ ನಿರ್ಮಾಣ ಮಾಡಲು ಕೈಗೊಂಡಿರುವ ಕ್ರಮಗಳ ಬಗ್ಗೆ. | ಬೆಂಗಳೂರು–ಮೈಸೂರು ರಾಜ್ಯ ಹೆದ್ದಾರಿಯ ಕೆಂಗೇರಿ, ಬಿಡದಿ, ರಾಮನಗರ, ಚನ್ನಪಟ್ಟಣ, ಮದ್ದೂರು, ಮಂಡ್ಯ ಮತ್ತು ಮೈಸೂರು ನಗರಗಳಿಗೆ ಒಟ್ಟು 87.40 ಕಿ.ಮೀ ಉದ್ದದ ಹೊರವಲಯದ ರಸ್ತೆಯನ್ನು ಮತ್ತು ಮದ್ದೂರಿನ ಬಳಿಯ ರುದ್ರಾಕ್ಷಿಪುರ ಮತ್ತು ಸೋಮನಹಳ್ಳಿಗೆ 2.70 ಕಿ.ಮೀ ಉದ್ದದ ಎತ್ತರಿಸಿದ ರಸ್ತೆಯನ್ನು ನಿರ್ಮಾಣ ಮಾಡಲು ಸಾಧ್ಯಾಸಾಧ್ಯತೆಯೊಂದಿಗೆ (Feasibility Study) ವಿವರವಾದ ಯೋಜನಾ ವರದಿಯನ್ನು (Detailed Project Report) ಮತ್ತು Draft Alignment ನಕ್ಷೆಯೊಂದಿಗೆ ಸಿದ್ಧಪಡಿಸಲಾಗುತ್ತಿದ್ದು, ಕೇಂದ್ರ | ದಿನಾಂಕ: 28.02.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು, ಮೈಸೂರು–ಬೆಂಗಳೂರು ರಾಷ್ಟ್ರೀಯ ಹೆದ್ದಾರಿಯು ರಾಷ್ಟ್ರೀಯ ಹೆದ್ದಾರಿ ಅಭಿವೃದ್ಧಿ ಪ್ರಾಧಿಕಾರ ಇವರ ಸುಪರ್ದಿಯಲ್ಲಿದ್ದು ಸದರಿ ಹೆದ್ದಾರಿಯ್ಲಿ ಕೈಗೊಳ್ಳುತ್ತಿರುವ ಕಾಮಗಾರಿಗೆ ಸಂಬಂಧಿಸಿದ ವಿವರಗಳನ್ನು ಈ ಕೆಳಕಂಡಂತೆ ಭಾರತೀಯ ರಾಷ್ಟ್ರೀಯ ಹೆದ್ದಾರಿ ಅಭಿವೃದ್ಧಿ ಪ್ರಾಧಿಕಾರದವರು ತಿಳಿಸಿರುತ್ತಾರೆ.<br><br>ಬೆಂಗಳೂರು–ಮೈಸೂರಿನ ಯೋಜನಾ ರಸ್ತೆಯ ಒಟ್ಟು ಉದ್ದ 117 ಕಿ.ಮೀ.<br><br>ಸದರಿ ರಸ್ತೆಯು ಬೆಂಗಳೂರಿನ ನೈಸ್ ಜಂಕ್ಷನ್‌ನಿಂದ ಮೈಸೂರಿನ ಕೊಲಂಬಿಯಾ–ಏಷಿಯಾ ಹಾಸ್ಪಿಟಲ್ ಜಂಕ್ಷನ್‌ವರೆಗೆ ಇರತ್ತದೆ.<br><br>ಈ ರಸ್ತೆಯಲ್ಲಿ ವಾಹನ ಸಾಂದ್ರತೆಯನ್ನು ಕಡಿಮೆಗೊಳಿಸಲು ಈ ಹೆದ್ದಾರಿಯು ಹಾದುಹೋಗುವ ಮುಖ್ಯ |

| | | | | |
|---|---|---|---|---|
| | | | ಸರ್ಕಾರದೊಂದಿಗೆ ಪ್ರಾಥಮಿಕ ಸಮಾಲೋಚನೆಗಾಗಿ ಶೀಘ್ರದಲ್ಲಿ ಸಲ್ಲಿಸಲಾಗುತ್ತದೆ. ಕೇಂದ್ರ ಸರ್ಕಾರದ ಅನುಮೋದನೆಗೆ ಅನುಗುಣವಾಗಿ ವಾಹನ ದಟ್ಟಣೆ ನಿಲ್ಲಿಸಲು ಸೂಕ್ತ ಮಾರ್ಗೋಪಾಯಗಳನ್ನು ಕಲ್ಪಿಸಲಾಗುವುದೆಂದು ಮಾನ್ಯ ಲೋಕೋಪಯೋಗಿ ಸಚಿವರು ತಿಳಿಸಿದರು. | ದಟ್ಟಣೆಯಿರುವ ಸ್ಥಳಗಳಾದ ಕೆಂಗೇರಿ, ಬಿಡದಿ, ರಾಮನಗರ, ಚನ್ನಪಟ್ಟಣ, ಮದ್ದೂರು, ಮಂಡ್ಯ ಹಾಗೂ ಮೈಸೂರುಗಳಿಗೆ ಹೊರವಲಯದ ರಸ್ತೆಯನ್ನು ನಿರ್ಮಿಸುವುದು ಯೋಜನೆಯ ಭಾಗವಾಗಿದೆ.<br><br>ಬೆಂಗಳೂರು–ಮೈಸೂರು ಯೋಜನಾ ರಸ್ತೆಯನ್ನು 10 ಪಥದ ರಸ್ತೆಯನ್ನಾಗಿ, ಇದರಲ್ಲಿ 6 ಪಥದ ರಸ್ತೆಯು ನೇರವಾಗಿ ಸಾಗುವ ವಾಹನಗಳಿಗಾಗಿ ಹಾಗೂ 2 ಪಥಗಳನ್ನು ರಸ್ತೆಯ ಬದಿಗಳಲ್ಲಿರುವ ಪಟ್ಟಣ/ಊರುಗಳಿಗೆ ಹೋಗಲು ಅನುಕೂಲ ಕಲ್ಪಿಸಲು ಸರ್ವಿಸ್ ರಸ್ತೆಗಳನ್ನಾಗಿ ಮಾಡಲಾಗುತ್ತದೆ.<br><br>ಸದರಿ ಕಾಮಗಾರಿಯನ್ನು ಕೂಡಲೇ ಪ್ರಾರಂಭಿಸಲು ಕ್ರಮವಹಿಸಲಾಗುವುದು ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |
| 51 | 5223<br>ಚು.ರ.ಪ್ರ: 281<br>ಶ್ರೀ ವೈ.ಎ. ನಾರಾಯಣಸ್ವಾಮಿ<br>ವಿಪನದಿ:<br>09/12/2014 | ಕೋಲಾರ ಚಿಕ್ಕಬಳ್ಳಾಪುರ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ ಹೊಸದಾಗಿ ಪ್ರವಾಸಿ ಮಂದಿರ ಹಾಗೂ ಅತಿಥಿಗೃಹವನ್ನು ನಿರ್ಮಿಸುವ ಕುರಿತು. | ಕೋಲಾರ ಜಿಲ್ಲೆಯ ಕೆ.ಜಿ.ಎಫ್ ಪಟ್ಟಣದಲ್ಲಿ ಹಳೆಯ ಒಂದು ಅತಿಥಿಗೃಹ ಇದ್ದು, ರೂ. 120.00 ಲಕ್ಷಗಳ ಅಂದಾಜು ಮೊತ್ತದಲ್ಲಿ ಹೊಸದಾಗಿ ಅತಿಥಿಗೃಹ ನಿರ್ಮಾಣ ಮಾಡುವ ಕಾಮಗಾರಿಯನ್ನು 2014–15ನೇ ಸಾಲಿನ ಅಪೆಂಡಿಕ್ಸ್–ಇ–ಅಡಿ ಸೇರಿಸುವ ಪ್ರಸ್ತಾವನೆಯು ಪರಿಶೀಲನೆಯಲ್ಲಿದೆ ಹಾಗೂ ಚಿಕ್ಕಬಳ್ಳಾಪುರ ಜಿಲ್ಲೆಯ ಗೌರಿಬಿದನೂರು ಪಟ್ಟಣದಲ್ಲಿ ರೂ. 300.00 ಲಕ್ಷಗಳ ಅಂದಾಜು ಮೊತ್ತದಲ್ಲಿ ಹೊಸದಾಗಿ ಪರಿವೀಕ್ಷಣ ಮಂದಿರ ನಿರ್ಮಾಣ ಮಾಡುವ ಕಾಮಗಾರಿಯನ್ನು | ದಿನಾಂಕ: 28.02.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು,<br><br>• ಚಿಕ್ಕಬಳ್ಳಾಪುರ ಜಿಲ್ಲೆ, ಚಿಕ್ಕಬಳ್ಳಾಪುರ ಲೋಕೋಪಯೋಗಿ ಇಲಾಖೆ ವಿಭಾಗ ವ್ಯಾಪ್ತಿಯ ಗೌರಿಬಿದನೂರು ಪಟ್ಟಣದಲ್ಲಿ 2016–17ನೇ ಸಾಲಿಗೆ ಅಪೆಂಡಿಕ್ಸ್–ಇ ಅಡಿಯಲ್ಲಿ ಪ್ರವಾಸಿ ಮಂದಿರ ನಿರ್ಮಾಣ ಮಾಡಲು ರೂ.100.00 ಲಕ್ಷಗಳಿಗೆ ಸರ್ಕಾರಿ ಆದೇಶ ಸಂಖ್ಯೆ: ಲೋಇ/118/ಐಎಫ್ಎ/2016–17, ಬೆಂಗಳೂರು ದಿ: 08.02.2017ರಲ್ಲಿ ಅನುಮೋದನೆಗೊಂಡಿರುತ್ತದೆ. ಸದರಿ ಕಾಮಗಾರಿಗೆ ತಾಂತ್ರಿಕ ಮಂಜೂರಾತಿ ನೀಡಿದ್ದು, ನಿಯಮಾವಳಿ ಅನುಸಾರ ಟೆಂಡರ್ ಇತ್ಯರ್ಥಗೊಂಡಿದ್ದು ಕರಾರು ಹಂತದಲ್ಲಿದೆ. |

| | | | | |
|---|---|---|---|---|
| | | | 2014–15ನೇ ಸಾಲಿನ ಅಪೆಂಡಿಕ್ಸ್–ಇ–ಅಡಿ ಸೇರಿಸುವ ಪ್ರಸ್ತಾವನೆಯು ಪರಿಶೀಲನೆಯಲ್ಲಿರುತ್ತದೆಂದು ಮಾನ್ಯ ಲೋಕೋಪಯೋಗಿ ಸಚಿವರು ತಿಳಿಸಿದರು. | • ಬೆಂಗಳೂರು ಗ್ರಾಮಾಂತರ ಜಿಲ್ಲೆ ವ್ಯಾಪ್ತಿಯಲ್ಲಿ ನೆಲಮಂಗಳ ಪಟ್ಟಣದಲ್ಲಿ ರೂ.100.00 ಲಕ್ಷ ಮೊತ್ತದಲ್ಲಿ ಪ್ರವಾಸಿ ಮಂದಿರ ನಿರ್ಮಿಸಲಾಗಿರುತ್ತದೆ ಹಾಗೂ ದೇವನಹಳ್ಳಿಯಲ್ಲಿ ಒಂದು ಪ್ರವಾಸಿ ಮಂದಿರವನ್ನು ರೂ. 490.00 ಲಕ್ಷಗಳಲ್ಲಿ ನಿರ್ಮಿಸಲಾಗಿರುತ್ತದೆ.<br>• ಕೋಲಾರ ಜಿಲ್ಲೆಯ ಕೆ.ಜಿ.ಎಫ್. ಪಟ್ಟಣದಲ್ಲಿ ಹಳೆಯ ಒಂದು ಅತಿಥಿ ಗೃಹ ಇದ್ದು, ರೂ. 120.00 ಲಕ್ಷಗಳ ಅಂದಾಜು ಮೊತ್ತದಲ್ಲಿ ಹೊಸದಾಗಿ ಅತಿಥಿ ಗೃಹ ನಿರ್ಮಾಣ ಮಾಡುವ ಕಾಮಗಾರಿಯನ್ನು ಅನುದಾನ ಲಭ್ಯತೆಯ ಅನುಸಾರ ಮುಂದಿನ ಆರ್ಥಿಕ ವರ್ಷಗಳಲ್ಲಿ ಕೈಗೆತ್ತಿಕೊಳ್ಳಲಾಗುವುದು.<br><br>ಮೇಲ್ಕಂಡಂತೆ ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸಮಿತಿಯು ಭರವಸೆಯನ್ನು ಮುಕ್ತಾಯಗೊಳಿಸಿತು. |
| 52 | 5224<br>ಚು.ರ.ಪ್ರ: 292<br>ಡಾ: ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ<br>ವಿಪನದಿ:<br>09/12/2014 | ಬೆಳಗಾವಿ ಜಿಲ್ಲೆಯ ಗೋಟೂರು– ಕಾಗವಾಡ–ಬಿಜಾಪುರ ರಸ್ತೆಯನ್ನು ರಾಜ್ಯ ಹೆದ್ದಾರಿಯಿಂದ ರಾಷ್ಟ್ರೀಯ ಹೆದ್ದಾರಿಯಾಗಿ ಮೇಲ್ದರ್ಜೆಗೇರಿಸುವ ಯೋಜನೆಯ ಕಾಮಗಾರಿ ಬಗ್ಗೆ. | ರಾಷ್ಟ್ರೀಯ ಹೆದ್ದಾರಿಗಳ ಕಾಯ್ದೆ–1956ರ ಅನ್ವಯ ಕೇಂದ್ರ ಸರ್ಕಾರವು ಈ ರಾಜ್ಯ ಹೆದ್ದಾರಿಯನ್ನು ರಾಷ್ಟ್ರೀಯ ಹೆದ್ದಾರಿಯನ್ನಾಗಿ ಘೋಷಿಸಿದ ನಂತರ ಈ ಹೆದ್ದಾರಿಯ ಅಭಿವೃದ್ಧಿಗಾಗಿ ವಿವರವಾದ ಅಂದಾಜನ್ನು ತಯಾರಿಸಿ ಕೇಂದ್ರ ಭೂಸಾರಿಗೆ ಮಂತ್ರಾಲಯದಿಂದ ಅನುಮೋದನೆ ಪಡೆದು ನಿಯಮಾನುಸಾರ ಕಾಮಗಾರಿಯನ್ನು ಕೈಗೊಳ್ಳಲಾಗುವುದೆಂದು ಮಾನ್ಯ ಲೋಕೋಪಯೋಗಿ ಸಚಿವರು ತಿಳಿಸಿದರು. | ದಿನಾಂಕ: 28.02.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು, ಗೋಟೂರು–ಕಾಗವಾಡ–ವಿಜಯಪುರ (ರಾಜ್ಯ ಹೆದ್ದಾರಿ–12) ರಸ್ತೆಯನ್ನು ಪೇವ್ಡ್‌ಶೋಲ್ಡರ್ ಒಳಗೊಂಡು ಎರಡು ಪಥದ ರಸ್ತೆಯನ್ನಾಗಿ ಮೇಲ್ದರ್ಜೆಗೇರಿಸಲು ಕೇಂದ್ರ ಭೂಸಾರಿಗೆ ಮತ್ತು ಹೆದ್ದಾರಿ ಮಂತ್ರಾಲಯ, ನವದೆಹಲಿ ಇವರು ದಿ: 27.07.2015ರಲ್ಲಿ ವಿಸ್ತೃತ ಯೋಜನಾ ವರದಿ ತಯಾರಿಸಿ ಸಲ್ಲಿಸುವ ಸೂಚನೆಯೊಡನೆ ತಾತ್ವಿಕ ಅನುಮೋದನೆ ನೀಡಿರುತ್ತಾರೆ. ಈ ಭಾಗದ ರಸ್ತೆಯ ಒಟ್ಟು ಉದ್ದ 180 ಕಿ.ಮೀ.ಗಳಾಗಿದ್ದು, 05 ಪ್ಯಾಕೇಜ್‌ಗಳಲ್ಲಿ ಯೋಜನಾ ವರದಿ ತಯಾರಿಸಿ ಅಭಿವೃದ್ಧಿ ಪಡಿಸಲು ಕ್ರಮ ವಹಿಸಲಾಗಿದೆ. ಅದರಂತೆ ವಿಸ್ತೃತ ಯೋಜನೆ ತಯಾರಿಸಲು ಮೇ: ಜಲವಾಹಿಸಿ ಸರ್ವಿಸ್ ಪ್ರೈ. ಲಿ., |

| | | | | |
|---|---|---|---|---|
| | | | | ಧಾರವಾಡರವರಿಗೆ ಟೆಂಡರ್ ಆಧಾದ ಮೇಲೆ ದಿನಾಂಕ: 19.10.2015ರಲ್ಲಿ ವಹಿಸಿಕೊಡಲಾಗಿದ್ದು. ಈ ಯೋಜನೆಯ ಪಂಕ್ತೀಕರಣಕ್ಕೆ ಕೇಂದ್ರ ಭೂಸಾರಿಗೆ ಮತ್ತು ಹೆದ್ದಾರಿ ಮಂತ್ರಾಲಯರವರು ದಿ: 17.12.2015ರಲ್ಲಿ ಅನುಮೋದಿಸಿರುತ್ತಾರೆ. ರಾಷ್ಟ್ರೀಯ ಹೆದ್ದಾರಿ ವಲಯ, ಬೆಂಗಳೂರು ವತಿಯಿಂದ ಅಂತಿಮ ವಿಸ್ತೃತ ಯೋಜನಾ ವರದಿಯನ್ನು ದಿ: 24.6.2016ರಲ್ಲಿ ಸಲ್ಲಿಸಲಾಗಿತ್ತು. ಇದಕ್ಕೆ ಸವಿಸ್ತಾರವಾದ ಭೂಸ್ವಾಧೀನ ಸರ್ವೆ ಮತ್ತು ಭೂಸ್ವಾಧೀನಗೊಳಿಸಬೇಕಾದ ಭೂಮಿಯ ವಿಸ್ತೀರ್ಣದ ವಿವರದೊಂದಿಗೆ ದಿ: 14.11.2018ರಂದು ಮತ್ತೆ ಮರು ಸಲ್ಲಿಸಲಾಗಿದೆ. ಅದರಂತೆ, ಈಗಾಗಲೇ 3 ಪ್ಯಾಕೇಜ್‌ಗಳಿಗೆ ವಿಸ್ತೃತ ಯೋಜನಾ ವರದಿಯೊಂದಿಗೆ ಅಂದಾಜು ಪಟ್ಟಿ ಸಲ್ಲಿಸಿದ್ದು, ಉಳಿದ ಎರಡು ಪ್ಯಾಕೇಜ್‌ಗಳಿಗೆ ವಿಸ್ತೃತ ಯೋಜನಾ ವರದಿ ತಯಾರಿಸುವ ಪ್ರಕ್ರಿಯೆ ಪ್ರಗತಿಯಲ್ಲಿದ್ದು, ವಿವರ ತಯಾರಿಸುವ ಪ್ರಕ್ರಿಯೆ ಪ್ರಗತಿಯಲ್ಲಿದ್ದು ವಿವರಗಳು ಕೆಳಕಂಡಂತಿದೆ:<br><br>ಪ್ಯಾಕೇಜ್– I: (ಕಿ.ಮೀ. 0.00 ರಿಂದ 40.0ರವರೆಗೆ) ದಿ: 14.11.2018ರಲ್ಲಿ ರೂ. 183.03 ಕೋಟಿಗಳಿಗೆ ಹಾಗೂ<br>ಪ್ಯಾಕೇಜ್– II (ಕಿ.ಮೀ. 40.0 ರಿಂದ 80.00 ವರೆಗೆ) ದಿ: 20.01.2018ರಲ್ಲಿ ರೂ. 251.98 ಕೋಟಿಗಳಿಗೆ ಮತ್ತು<br><br>ಪ್ಯಾಕೇಜ್– III (ಕಿ.ಮೀ. 80.00 ರಿಂದ 120.00 ವರೆಗೆ) ದಿ: 30.11.2017ರಲ್ಲಿ ವಿಸ್ತೃತ ಯೋಜನಾ ವರದಿ ಆಧಾರಿತ ರೂ. 255.66 ಕೋಟಿ ಅಂದಾಜು ತಯಾರಿಸಿ ಕೇಂದ್ರ ಭೂಸಾರಿಗೆ ಮತ್ತು ಹೆದ್ದಾರಿ ಮಂತ್ರಾಲಯ, ನವದೆಹಲಿರವರ ಅನುಮೋದನೆಗೆ ಸಲ್ಲಿಸಲಾಗಿದೆ. |

| | | | | |
|---|---|---|---|---|
| | | | | ರಾಷ್ಟ್ರೀಯ ಹೆದ್ದಾರಿ ವತಿಯಿಂದ ಈ ಸಾಲಿನ 2018–19ರ ವಾರ್ಷಿಕ ಯೋಜನೆಯಲ್ಲಿ ಪ್ಯಾಕೇಜ್–1ರ ಕಿ.ಮೀ. 0.00 ಇಂದ 40.00 ರವರೆಗೆ ಕೈಗೆತ್ತಿಕೊಳ್ಳಲು ಕೇಂದ್ರ ಭೂಸಾರಿಗೆ ಮತ್ತು ಹೆದ್ದಾರಿ ಮಂತ್ರಾಲಯದಿಂದ ರೂ. 170.00 ಕೋಟಿಗಳಿಗೆ ಅನುವು ಮಾಡಲಾಗಿದೆ ಹಾಗೂ ದಿ: 26.03.2018ರಲ್ಲಿ ಈ ರಾಜ್ಯ ಹೆದ್ದಾರಿಯನ್ನು ರಾಷ್ಟ್ರೀಯ ಹೆದ್ದಾರಿ–548ಬಿ ಎಂದು ಕೇಂದ್ರ ಭೂಸಾರಿಗೆ ಮತ್ತು ಹೆದ್ದಾರಿ ಮಂತ್ರಾಲಯ, ನವದೆಹಲಿ ಇವರು ಘೋಷಣೆ ಮಾಡಿದ್ದು, ಪ್ಯಾಕೇಜ್–I ಕಿ.ಮೀ. 0.00 ಇಂದ 40.00 ಉದ್ದದ ರಸ್ತೆಯನ್ನು ಪ್ರಸ್ತುತ ವರ್ಷದಲ್ಲಿ ಕೇಂದ್ರ ಭೂಸಾರಿಗೆ ಮತ್ತು ಹೆದ್ದಾರಿ ಮಂತ್ರಾಲಯ, ನವದೆಹಲಿರವರ ಅನುಮೋದನೆ ನಂತರ ಅಭಿವೃದ್ಧಿ ಕಾರ್ಯ ಕೈಗೆತ್ತಿಕೊಳ್ಳಲಾಗುವುದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸಮಿತಿಯು ಭರವಸೆಯನ್ನು ಮುಕ್ತಾಯಗೊಳಿಸಿತು. |
| 53 | 5225<br>ಚು.ರ.ಪ್ರ: 300<br>ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ<br>ವಿಪನದಿ:<br>09/12/2014 | ತುಮಕೂರು ಜಿಲ್ಲೆ ತುರುವೇಕೆರೆ ಕ್ಷೇತ್ರದ ರಸ್ತೆಗಳು ಕಳಪೆ ಮಟ್ಟದಲ್ಲಿದ್ದು, ಈ ಕಾಮಗಾರಿಗಳನ್ನು ಪುನರ್ ನಿರ್ವಹಿಸಲು ಆದೇಶ ಮಾಡುವ ಬಗ್ಗೆ ಹಾಗೂ ಕಳಪೆ ಕಾಮಗಾರಿ ನಿರ್ವಹಿಸಿದ ಸಂಸ್ಥೆಯ ಮೇಲೆ ಕ್ರಮ ತೆಗೆದುಕೊಳ್ಳುವ ಬಗ್ಗೆ. | ಕಳಪೆ ಗುಣಮಟ್ಟದಲ್ಲಿ ಕಾಮಗಾರಿಗಳನ್ನು ನಿರ್ವಹಿಸಿದ ಬಗ್ಗೆ ದೂರುಗಳು ಸ್ವೀಕೃತವಾದಲ್ಲಿ, ಅಂತಹ ಕಾಮಗಾರಿಗಳನ್ನು ಪುನರ್ ನಿರ್ವಹಿಸಲು ಹಾಗೂ ಸಂಬಂಧಿಸಿದ ಸಂಸ್ಥೆಯ ವಿರುದ್ಧ ನಿಯಮಗಳ ಪ್ರಕಾರ ಕ್ರಮ ಜರುಗಿಸಲಾಗುವುದೆಂದು ಮಾನ್ಯ ಲೋಕೋಪಯೋಗಿ ಸಚಿವರು ತಿಳಿಸಿದರು. | ದಿನಾಂಕ: 28.02.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು, ತುಮಕೂರು ಜಿಲ್ಲೆಯ ತುರುವೇಕೆರೆ ತಾಲ್ಲೂಕಿನಲ್ಲಿ ಲೋಕೋಪಯೋಗಿ ಇಲಾಖಾ ವತಿಯಿಂದ ಕೈಗೊಂಡಿರುವ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದಶಕತೆ ಅಧಿನಿಯಮದ ನಿಯಮದನ್ವಯ ಟೆಂಡರ್ ಆಹ್ವಾನಿಸಿ ಕೈಗೆತ್ತಿಕೊಳ್ಳಲಾಗಿದ್ದು, ಸದರಿ ಕಾಮಗಾರಿಗಳನ್ನು ಭಾರತೀಯ ರಸ್ತೆ ಕಾಂಗ್ರೆಸ್‌ನ ವಿಶಿಷ್ಟ ವಿವರಣೆಯನ್ವಯ ಗುಣಮಟ್ಟ ಕಾಯ್ದುಕೊಂಡು ನಿರ್ವಹಿಸಲಾಗಿರುತ್ತದೆ. ಸದರಿ ಕಾಮಗಾರಿಗಳ ಗುಣಮಟ್ಟದ ಬಗ್ಗೆ ಯಾವುದೇ ದೂರುಗಳು ವರದಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲವೆಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸಮಿತಿಯು ಭರವಸೆಯನ್ನು ಮುಕ್ತಾಯಗೊಳಿಸಿತು. |

| | | | | |
|---|---|---|---|---|
| 54 | 5226<br>ಚು.ರ.ಪ್ರ: 304<br>ಶ್ರೀ ಜಿ.ಎಸ್. ನ್ಯಾಮಗೌಡ<br>ವಿಪನದಿ:<br>09/12/2014 | ಬಾಗಲಕೋಟೆ ಜಿಲ್ಲೆಯ ಜಮಖಂಡಿ ತಾಲ್ಲೂಕಿನ ಜಂಬಗಿ ಗ್ರಾಮದ ಹತ್ತಿರ ನಿರ್ಮಾಣವಾಗುತ್ತಿರುವ ಸೇತುವೆ ಕೆಲಸ ವಿಳಂಬವಾಗುತ್ತಿದ್ದು, ಸಾರ್ವಜನಿಕರಿಗೆ ತೊಂದರೆಯಾಗಿರುವ ಬಗ್ಗೆ. | ಬಾಗಲಕೋಟೆ ಜಿಲ್ಲೆಯ, ಜಮಖಂಡಿ ತಾಲ್ಲೂಕಿನ ಜಮಖಂಡಿ ಸಾವಳಿಗಿ ರಸ್ತೆ ಕಿ.ಮೀ. 7.40 ರಲ್ಲಿ ಜಂಬಗಿ ಗ್ರಾಮದ ಹತ್ತಿರ ಕೃಷ್ಣಾ ನದಿಗೆ ಅಡ್ಡಲಾಗಿ ಸೇತುವೆ ನಿರ್ಮಾಣ ಕಾಮಗಾರಿಯನ್ನು M/s IVRCL, Ltd., ರವರಿಗೆ ರೂ.38,99 ಕೋಟಿಗಳ ಮೊತ್ತಕ್ಕೆ ಗುತ್ತಿಗೆಯನ್ನು ನೀಡಿದ್ದು, ದಿನಾಂಕ: 7.7.2010ರಂದು ಕಾಮಗಾರಿಯು ಆರಂಭಗೊಂಡಿದೆ. ಈ ಕಾಮಗಾರಿಯು ದಿನಾಂಕ:06.01.2013 ರಂದು ಪೂರ್ಣಗೊಳಿಸಬೇಕಿತ್ತು. ಆದರೆ, ಈ ಅವಧಿಯಲ್ಲಿ ತಳಪಾಯ ಹಾಗೂ ಸಬ್‌ಸ್ಟ್ರಕ್ಚರ್ ಕೆಲಸ ಪೂರ್ಣ ಗೊಂಡಿರುತ್ತದೆ. ಪ್ರಸ್ತುತ ಗರ್ಡರ್ ಲಾಂಚಿಂಗ್ ಕಾಮಗಾರಿ ಪ್ರಗತಿ ಯಲ್ಲಿರುತ್ತದೆ ಎಂದು ಮಾನ್ಯ ಲೋಕೋಪಯೋಗಿ ಸಚಿವರು ತಿಳಿಸಿದರು. | ದಿನಾಂಕ: 28.02.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು, ಬಾಗಲಕೋಟೆ ಜಿಲ್ಲೆಯ, ಜಮಖಂಡಿ – ಸಾವಳಗಿ ರಸ್ತೆಯ ಕಿ.ಮೀ. 7.40ರಲ್ಲಿ ಜಂಬಗಿ ಗ್ರಾಮದ ಹತ್ತಿರ ಕೃಷ್ಣಾ ನದಿಗೆ ಅಡ್ಡಲಾಗಿ ಸೇತುವೆ ನಿರ್ಮಾಣ ಕಾಮಗಾರಿಯನ್ನು ಕೆ.ಆರ್.ಡಿ.ಸಿ.ಎಲ್. ವತಿಯಿಂದ ಮೆ: ಐ.ವಿ.ಆರ್.ಸಿ.ಎಲ್. ಮುಖೇನ ದಿ: 31.10.2016ರಂದು ಪೂರ್ಣಗೊಳಿಸಿ ವಾಹನ ಸಂಚಾರಕ್ಕೆ ತೆರವುಗೊಳಿಸಲಾಗಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸಮಿತಿಯು ಭರವಸೆಯನ್ನು ಮುಕ್ತಾಯಗೊಳಿಸಿತು. |
| 55 | 5227<br>ಚು.ರ.ಪ್ರ: 315<br>ಶ್ರೀ ಮೃತ್ಯುಂಜಯ ಜಿನಗಾ<br>ವಿಪನದಿ:<br>09/12/2014 | ಪ್ರಸಕ್ತ ಆರ್ಥಿಕ ವರ್ಷದಲ್ಲಿ, ಬಳ್ಳಾರಿ ಜಿಲ್ಲೆಯಲ್ಲಿ ಹೊಸ ರಸ್ತೆ ನಿರ್ಮಾಣಕ್ಕೆ ಆದ್ಯತೆ ನೀಡಿರುವ ಹಾಗೂ ಕೈಗೊಂಡಿರುವ ಕ್ರಮಗಳ ಕುರಿತು. | ಪ್ರಸಕ್ತ ಆರ್ಥಿಕ ವರ್ಷದಲ್ಲಿ ಬಳ್ಳಾರಿ ಜಿಲ್ಲೆಯಲ್ಲಿ ಹೊಸ ರಸ್ತೆಗಳ ನಿರ್ಮಾಣ ಕಾಮಗಾರಿಗಳನ್ನು ಕೈಗೊಂಡಿರುವುದಿಲ್ಲ. ಬದಲಾಗಿ ಹಾಲಿ ಇರುವ ರಾಜ್ಯ ಹೆದ್ದಾರಿಗಳು ಹಾಗೂ ಜಿಲ್ಲಾ ಮುಖ್ಯ ರಸ್ತೆಗಳ ಸುಧಾರಣೆ ಮತ್ತು ಮರು ನಿರ್ಮಾಣ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ ಎಂದು ಮಾನ್ಯ ಲೋಕೋಪಯೋಗಿ ಸಚಿವರು ತಿಳಿಸಿದರು. | ದಿನಾಂಕ: 28.02.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು, ರಾಷ್ಟ್ರೀಯ ಹೆದ್ದಾರಿ ವಿಭಾಗದಡಿ ಬಳ್ಳಾರಿ ಜಿಲ್ಲೆಯಲ್ಲಿ ಹಾದುಹೋಗಿರುವ ರಾಷ್ಟ್ರೀಯ ಹೆದ್ದಾರಿ ವಿವರ ಹಾಗೂ ಕೈಗೊಂಡ ಅಭಿವೃದ್ಧಿ ಕಾಮಗಾರಿಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. |

| ಕ್ರ. ಸಂ. | ರಾ.ಹೆ. ಸಂ. | ಇಂದ | ರವರಿಗೆ | ರಸ್ತೆ ಕಿ.ಮೀ. ಗಳಲ್ಲಿ | ಷರಾ |
|---|---|---|---|---|---|

<table>
<tr>
<td></td>
<td></td>
<td></td>
<td></td>
<td>
<table>
<tr><td>1</td><td>167</td><td>0.00</td><td>14.90</td><td>14.90</td><td>ಹಗರಿ ಗ್ರಾಮದಿಂದ ಆಂಧ್ರಪ್ರದೇಶದ ಗಡಿಯವರೆಗೆ</td></tr>
<tr><td>2</td><td>150ಎ</td><td>198.920</td><td>254.800</td><td>55.88</td><td>ತುಂಗಾ ಭದ್ರ ಸೇತುವೆಯಿಂದ ಸಿರುಗುಪ್ಪ ತೆಕ್ಕಲಕೋಟೆ ಮಾರ್ಗವಾಗಿ ಬಳ್ಳಾರಿಯವರೆಗೆ</td></tr>
<tr><td></td><td></td><td></td><td>ಒಟ್ಟು</td><td>70.78</td><td></td></tr>
</table>
ರಾಷ್ಟ್ರೀಯ ಹೆದ್ದಾರಿ–167ರ ಕಿ.ಮೀ. 0.00 ರಿಂದ 14.90 ರವರೆಗೆ ದ್ವಿಪಥ ರಸ್ತೆಯನ್ನಾಗಿ ಅಭಿವೃದ್ಧಿ ಪಡಿಸುವ ಕಾಮಗಾರಿಯು ಕೇಂದ್ರ ಭೂಸಾರಿಗೆ ಮತ್ತು ಹೆದ್ದಾರಿ ಮಂತ್ರಾಲಯ, ನವದೆಹಲಿ ಇವರಿಂದ ರೂ. 63.83 ಕೋಟಿಗೆ ದಿನಾಂಕ: 16.03.2016ರಂದು ಅನುಮೋದನೆ ಗೊಂಡಿದ್ದು, ಸದರಿ ಕಾಮಗಾರಿಯು ಪೂರ್ಣಗೊಂಡಿರುತ್ತದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸಮಿತಿಯು ಭರವಸೆಯನ್ನು ಮುಕ್ತಾಯಗೊಳಿಸಿತು.
</td>
</tr>
<tr>
<td>56</td>
<td>5228<br>ಚು.ಗು.ಪ್ರ. 206<br>ಶ್ರೀಮತಿ ಮೋಟಮ್ಮ<br>ವಿಪನದಿ: 16.12.2014</td>
<td>ಕಡೂರು–ಮೂಡಿಗೆರೆ ರಾಷ್ಟ್ರೀಯ ಹೆದ್ದಾರಿ ಕಾಮಗಾರಿಯ ಅನುಷ್ಠಾನದ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮದ ಕುರಿತು.</td>
<td>ಮೂಡಿಗೆರೆ–ಕಡೂರು ರಸ್ತೆಯನ್ನು ರಾಷ್ಟ್ರೀಯ ಹೆದ್ದಾರಿ–173 ಎಂದು ಕೇಂದ್ರ ಸರ್ಕಾರವು ಘೋಷಿಸಿದ್ದು, ಇದು 72.10 ಕಿ.ಮೀ. ಇರುತ್ತದೆ. ಈ ಹೆದ್ದಾರಿಯನ್ನು ದ್ವಿಪಥ ಮತ್ತು ಪೇವ್ಡ್ ಶೋಲ್ಡರ್‌ಗಳೊಂದಿಗೆ ಅಭಿವೃದ್ಧಿಪಡಿಸಲು ಸಾಧ್ಯಾ ಸಾಧ್ಯತೆಗಳನ್ನು (Feasibility Study) ಮತ್ತು ವಿವರವಾದ ಯೋಜನಾ ವರದಿಯನ್ನು (Detailed</td>
<td>ದಿನಾಂಕ: 28.02.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು, ಮೂಡಿಗೆರೆ–ಕಡೂರು ರಸ್ತೆಯನ್ನು ಕೇಂದ್ರ ಭೂಸಾರಿಗೆ ಮತ್ತು ಹೆದ್ದಾರಿ ಮಂತ್ರಾಲಯವು ರಾಷ್ಟ್ರೀಯ ಹೆದ್ದಾರಿ–173ನ್ನಾಗಿ ಮೇಲ್ದರ್ಜೆಗೇರಿಸಿದ ನಂತರ ರಾಷ್ಟ್ರೀಯ ಹೆದ್ದಾರಿ ಮಾನದಂಡಗಳಿ ಗನುಸಾರವಾಗಿ ಅಭಿವೃದ್ಧಿಗೊಳಿಸಲು ಸಮಗ್ರ ಯೋಜನಾ ವರದಿಯನ್ನು ಮೂರು ಸೂಕ್ತ ಪ್ಯಾಕೇಜ್‌ಗಳಾಗಿ ವಿಂಗಡಿಸಿ ಸಿದ್ದಪಡಿಸಲಾಗಿದೆ.<br>ಪ್ಯಾಕೇಜ್–1: ಮೂಡಿಗೆರೆ ಹ್ಯಾಂಡ್ ಪೋಸ್ಟ್‌ನಿಂದ ಬಿಳಿಗುಳ ಗ್ರಾಮ ಪಂಚಾಯಿತಿವರೆಗಿನ ಅಗಲೀಕರಣ (widening to</td>
</tr>
</table>

| | | | | |
|---|---|---|---|---|
| | | | project report) ತಯಾರಿಸಲು ಕೇಂದ್ರ ಸರ್ಕಾರವು ಅನುಮೋದನೆ ನೀಡಿದೆ. ಅದರಂತೆ, ಖಾಸಗಿ ಸಮಾಲೋಚಕರನ್ನು ನೇಮಿಸಲು ಟೆಂಡರ್ ಆಹ್ವಾನಿಸಲಾಗಿದ್ದು, ವಿವರವಾದ ಯೋಜನಾ ವರದಿಯನ್ನು ತಯಾರಿಸಿ ಕೇಂದ್ರ ಭೂ ಸಾರಿಗೆ ಮಂತ್ರಾಲಯಕ್ಕೆ ಸಲ್ಲಿಸಿ, ಅನುಮೋದನೆ ಪಡೆದು, ತದನಂತರ ನಿಯಮಾನುಸಾರ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುವುದು ಎಂದು ಮಾನ್ಯ ಲೋಕೋಪಯೋಗಿ ಸಚಿವರು ತಿಳಿಸಿದರು. | two lane with paved shoulder from Km. 0.00 to 5.200 of NH-173, Mudigere City Limits) ಕಾಮಗಾರಿಯ ಪ್ರಸ್ತಾವನೆಯನ್ನು ರೂ. 56.77 ಕೋಟಿಗಳಿಗೆ ಕೇಂದ್ರ ಭೂಸಾರಿಗೆ ಮತ್ತು ಹೆದ್ದಾರಿ ಮಂತ್ರಾಲಯಕ್ಕೆ ಸಲ್ಲಿಸಲಾಗಿದ್ದು ಅನುಮೋದನೆ ನಿರೀಕ್ಷಣೆಯಲ್ಲಿದೆ.<br><br>ಪ್ಯಾಕೇಜ್–2: ಬಿಳುಗಳ ಗ್ರಾಮದಿಂದ–ಮಾಗತಿಹಳ್ಳಿ ಯವರೆಗಿನ ಅಗಲೀಕರಣ (widening to two lane paved shoulder from Km. 5.200 to 24.600 of NH-173) ಸದರಿ ಕಾಮಗಾರಿಯು ಸುಮಾರು 66 ಎಕರೆ ಗುಂಟೆಗಳಷ್ಟು ಭೂಸ್ವಾಧೀನ ಪ್ರಕ್ರಿಯೆಯನ್ನು ಒಳಗೊಂಡಿದ್ದು, ಭೂಸ್ವಾಧೀನ ಪ್ರಕ್ರಿಯೆ ಮುಗಿದ ನಂತರ ಕಾಮಗಾರಿಯನ್ನು ಕೈಗೊಳ್ಳಬೇಕಿದೆ. ಪ್ರಸ್ತುತ ರಸ್ತೆಯನ್ನು ಕಳೆದ 2017–18ರ ಸಾಲಿನಲ್ಲಿ ಡಾಂಬರೀಕರಣದ ಮೂಲಕ ಅಭಿವೃದ್ಧಿಗೊಳಿಸಿದ್ದು ರಸ್ತೆಯು ಸುಸ್ಥಿತಿಯಲ್ಲಿರುತ್ತದೆ.<br><br>ಪ್ಯಾಕೇಜ್–3: ಮಾಗತಿ ಹಳ್ಳಿಯಿಂದ ಚಿಕ್ಕಮಗಳೂರು ನಗರದ ಮೂಲಕ ಕಡೂರುವರೆಗಿನ ರಸ್ತೆಯ ಅಗಲೀಕರಣ (widening to two lane with paved shoulder from Km. 24.600 to 70.063) ಈ ಕಾಮಗಾರಿಯು ಕೇಂದ್ರ ಹೆದ್ದಾರಿ ಮಂತ್ರಾಲಯದಿಂದ ರೂ. 297.30 ಕೋಟಿಗಳಿಗೆ ಅನುಮೋದನೆಗೊಂಡಿದ್ದು ದಿನಾಂಕ: 06.08.2018ರಂದು ಗುತ್ತಿಗೆದಾರರಿಗೆ ರೂ. 204.04 ಕೋಟಿಗಳಿಗೆ ಕಾರ್ಯಾದೇಶ ನೀಡಲಾಗಿದ್ದು, ಗುತ್ತಿಗೆದಾರರು ಸಾಮಗ್ರಿ ಸಂಗ್ರಹಣಾ ಕಾರ್ಯ ಕೈಗೊಳ್ಳುತ್ತಿದ್ದು, |

| | | | | |
|---|---|---|---|---|
| | | | | ಕಾಮಗಾರಿಯು ಪ್ರಗತಿಯಲ್ಲಿರುತ್ತದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸಮಿತಿಯು ಭರವಸೆಯನ್ನು ಮುಕ್ತಾಯಗೊಳಿಸಿತು. |
| 57 | 5229<br>ಚು.ಗು.ಪ್ರ. 916<br>ಶ್ರೀ ಐವನ್ ಡಿ'ಸೋಜಾ<br>ವಿಪನದಿ: 16.12.2014 | ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ನಗರದ ಸರ್ಕ್ಯೂಟ್ ಹೌಸ್ ನೂತನ ಕಟ್ಟಡ ರಚನೆಯಾಗಿ ಉದ್ಘಾಟನೆಗೊಂಡು 8 ತಿಂಗಳು ಕಳೆದರೂ ಪೀಠೋಪಕರಣ ಇಲ್ಲದೆ ಅದನ್ನು ಮುಚ್ಚಿರುವ ಬಗ್ಗೆ<br><br>ಹಾಗೂ<br><br>ಮೈಸೂರು ಚಾಮುಂಡೇಶ್ವರಿ ಅತಿಥಿ ಗೃಹ, ಪಿ.ಡಬ್ಲ್ಯೂ.ಡಿ. ಅತಿಥಿ ಗೃಹಗಳು ಅತ್ಯಂತ ಶಿಥಿಲ ಪರಿಸ್ಥಿತಿಯಲ್ಲಿರುವ ಬಗ್ಗೆ. | 2014–15ನೇ ಸಾಲಿನಲ್ಲಿ ಸರ್ಕ್ಯೂಟ್ ಹೌಸ್‌ಗೆ ಪೀಠೋಪಕರಣಗಳನ್ನು ಒದಗಿಸಲು ಹಾಗೂ ವಿದ್ಯುದೀಕರಣ ಕಾಮಗಾರಿಗೆ ಒಟ್ಟಾರೆ ರೂ.50.00 ಲಕ್ಷಗಳ ಅನುದಾನವನ್ನು ಲೆಕ್ಕಶೀರ್ಷಿಕೆ 2059–ಯೋಜನೇತರ ಅಡಿ ಒದಗಿಸಲಾಗಿದ್ದು, ಪೀಠೋಪಕರಣಗಳನ್ನು ಒದಗಿಸುವ ಕಾಮಗಾರಿಗೆ ಈಗಾಗಲೇ ಟೆಂಡರು ಕರೆಯಲಾಗಿದ್ದು, ಜನವರಿ 2015ರ ಅಂತ್ಯದೊಳಗೆ ಪೂರ್ಣಗೊಳಿಸಲಾಗುವುದು ಎಂದು ಮಾನ್ಯ ಲೋಕೋಪಯೋಗಿ ಸಚಿವರು ತಿಳಿಸಿದರು.<br><br>ಮೈಸೂರು ನಗರದಲ್ಲಿ ಚಾಮುಂಡಿ ಅತಿಥಿಗೃಹ ಹಾಗೂ ನಜರ್‌ಬಾದ್ ಲೋಕೋಪಯೋಗಿ ಅತಿಥಿಗೃಹಗಳ ನವೀಕರಣ ಕಾಮಗಾರಿಯನ್ನು 2013–14ನೇ ಸಾಲಿನಲ್ಲಿ ರೂ.170.00 ಲಕ್ಷಗಳಲ್ಲಿ ಕೈಗೆತ್ತಿಕೊಂಡಿದ್ದು, ಫೆಬ್ರವರಿ 2015ರೊಳಗೆ ಪೂರ್ಣಗೊಳಿಸಲಾಗುವುದು ಎಂದು ಮಾನ್ಯ ಲೋಕೋಪಯೋಗಿ ಸಚಿವರು ತಿಳಿಸಿದರು. | ದಿನಾಂಕ: 28.02.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು, 2014–15ನೇ ಸಾಲಿನಲ್ಲಿ 2059 ಯೋಜನೇತರ ಅಡಿಯಲ್ಲಿ ಮಂಗಳೂರಿನ ಕದ್ರಿಯಲ್ಲಿರುವ ಸರ್ಕ್ಯೂಟ್ ಹೌಸ್ ನೂತನ ಕಟ್ಟಡದ ಪೀಠೋಪಕರಣಗಳಿಗೆ ರೂ. 42.00 ಲಕ್ಷ ಹಾಗೂ ವಿದ್ಯುತ್ ಕಾಮಗಾರಿಗಳಿಗಾಗಿ ರೂ.8.00 ಲಕ್ಷಗಳಂತೆ ಒಟ್ಟು ಒದಗಿಸಲಾದ ರೂ.50.00 ಲಕ್ಷಗಳ ಅನುದಾನದಲ್ಲಿ 2015–16ನೇ ಸಾಲಿನಲ್ಲಿ ಪೀಠೋಪಕರಣಗಳನ್ನು ಒದಗಿಸಲಾಗಿದ್ದು, ಸುಸಜ್ಜಿತವಾಗಿ ಸರ್ಕ್ಯೂಟ್ ಹೌಸ್ ಬಳಕೆಯಲ್ಲಿರುತ್ತದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸಮಿತಿಯು ಭರವಸೆಯನ್ನು ಮುಕ್ತಾಯಗೊಳಿಸಿತು. |

| | | | | |
|---|---|---|---|---|
| 58 | 5230<br>ಚು.ರ.ಪ್ರ. 134<br>ಶ್ರೀ ಎಸ್.ನಾಗರಾಜ್ (ಸಂದೇಶ್ ನಾಗರಾಜ್)<br>ವಿಪನದಿ: 16.12.2014 | ಬೆಂಗಳೂರು–ಮೈಸೂರು ಚತುಷ್ಪಥ ರಸ್ತೆಯ ಮೇಲೆ ಇನ್ನೊಂದು ಚತುಷ್ಪಥ ಮೇಲು ಸೇತುವೆ ರಸ್ತೆಯನ್ನು ನಿರ್ಮಿಸುವ ಬಗ್ಗೆ | ಯೋಜನಾ ವರದಿಯು ಸಿದ್ಧವಾದ ನಂತರ ಸೂಕ್ತ ನಿರ್ಧಾರ ತೆಗೆದುಕೊಳ್ಳಲಾಗುವುದು ಎಂದು ಮಾನ್ಯ ಲೋಕೋಪಯೋಗಿ ಸಚಿವರು ತಿಳಿಸಿದರು. | ದಿನಾಂಕ: 28.02.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು, ಮೈಸೂರು–ಬೆಂಗಳೂರು ರಾಷ್ಟ್ರೀಯ ಹೆದ್ದಾರಿಯು ರಾಷ್ಟ್ರೀಯ ಹೆದ್ದಾರಿ ಅಭಿವೃದ್ಧಿ ಪ್ರಾಧಿಕಾರ ಇವರ ಸುಪರ್ದಿಯಲ್ಲಿದ್ದು ಸದರಿ ಹೆದ್ದಾರಿಯ್ಲಿ ಕೈಗೊಳ್ಳುತ್ತಿರುವ ಕಾಮಗಾರಿಗೆ ಸಂಬಂಧಿಸಿದ ವಿವರಗಳನ್ನು ಈ ಕೆಳಕಂಡಂತೆ ಭಾರತೀಯ ರಾಷ್ಟ್ರೀಯ ಹೆದ್ದಾರಿ ಅಭಿವೃದ್ಧಿ ಪ್ರಾಧಿಕಾರದವರು ತಿಳಿಸಿರುತ್ತಾರೆ.<br><br>ಬೆಂಗಳೂರು–ಮೈಸೂರಿನ ಯೋಜನಾ ರಸ್ತೆಯ ಒಟ್ಟು ಉದ್ಧ 117 ಕಿ.ಮೀ.<br><br>ಸದರಿ ರಸ್ತೆಯು ಬೆಂಗಳೂರಿನ ನೈಸ್ ಜಂಕ್ಷನ್‌ನಿಂದ ಮೈಸೂರಿನ ಕೊಲಂಬಿಯಾ–ಏಷಿಯಾ ಹಾಸ್ಪಿಟಲ್ ಜಂಕ್ಷನ್‌ವರೆಗೆ ಇರತ್ತದೆ.<br><br>ಈ ರಸ್ತೆಯಲ್ಲಿ ವಾಹನ ಸಾಂದ್ರತೆಯನ್ನು ಕಡಿಮೆಗೊಳಿಸಲು ಈ ಹೆದ್ದಾರಿಯು ಹಾದುಹೋಗುವ ಮುಖ್ಯ ದಟ್ಟಣೆಯಿರುವ ಸ್ಥಳಗಳಾದ ಕೆಂಗೇರಿ, ಬಿಡದಿ, ರಾಮನಗರ, ಚನ್ನಪಟ್ಟಣ, ಮದ್ದೂರು, ಮಂಡ್ಯ ಹಾಗೂ ಮೈಸೂರುಗಳಿಗೆ ಹೊರವಲಯದ ರಸ್ತೆಯನ್ನು ನಿರ್ಮಿಸುವುದು ಯೋಜನೆಯ ಭಾಗವಾಗಿದೆ.<br><br>ಬೆಂಗಳೂರು–ಮೈಸೂರು ಯೋಜನಾ ರಸ್ತೆಯನ್ನು 10 ಪಥದ ರಸ್ತೆಯನ್ನಾಗಿ, ಇದರಲ್ಲಿ 6 ಪಥದ ರಸ್ತೆಯು ನೇರವಾಗಿ ಸಾಗುವ ವಾಹನಗಳಿಗಾಗಿ ಹಾಗೂ 2 ಪಥಗಳನ್ನು ರಸ್ತೆಯ ಬದಿಗಳಲ್ಲಿರುವ ಪಟ್ಟಣ/ಊರುಗಳಿಗೆ ಹೋಗಲು ಅನುಕೂಲ ಕಲ್ಪಿಸಲು ಸರ್ವಿಸ್ ರಸ್ತೆಗಳನ್ನಾಗಿ ಮಾಡಲಾಗುತ್ತದೆ. |

| | | | | |
|---|---|---|---|---|
| | | | | ಸದರಿ ಕಾಮಗಾರಿಯನ್ನು ಕೂಡಲೇ ಪ್ರಾರಂಭಿಸಲು ಕ್ರಮವಹಿಸಲಾಗುವುದು ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸಮಿತಿಯು ಭರವಸೆಯನ್ನು ಮುಕ್ತಾಯಗೊಳಿಸಿತು. |
| 59 | 5231<br>ಚು.ರ.ಪ್ರ. 201<br>ಶ್ರೀಮತಿ ಮೋಟಮ್ಮ<br>ವಿಪನದಿ: 16.12.2014 | ಮಲೆನಾಡು ತಾಲ್ಲೂಕುಗಳಲ್ಲಿ ಭಾರಿ ಮಳೆಯಿಂದಾಗಿ ಲೋಕೋಪಯೋಗಿ ಇಲಾಖೆ ರಸ್ತೆಗಳು ಹದಗೆಟ್ಟಿರುವ ಬಗ್ಗೆ. | ಇತ್ತೀಚಿನ ತಾಂತ್ರಿಕ ವಿನ್ಯಾಸ ಐ.ಆರ್.ಸಿ.–37(2012) ಬಳಸಿ ಈಗಿನ ಹಾಗೂ ಮುಂದಿನ 10–15 ವರ್ಷಗಳ ವಾಹನ ಸಂಚಾರ ಸಾಂದ್ರತೆಯನ್ನು ಪರಿಗಣಿಸಿ, ರಸ್ತೆಗಳ ಸುಧಾರಣೆ ಕೆಲಸಗಳನ್ನು ಕೈಗೊಳ್ಳಲಾಗುತ್ತದೆ. ಮಲೆನಾಡು ಪ್ರದೇಶದಲ್ಲಿಯ ಗುಣಮಟ್ಟ ಹೊಂದಿಲ್ಲದ ರಸ್ತೆಗಳಲ್ಲಿ ವಾರ್ಷಿಕವಾಗಿ ಲಭ್ಯವಿರುವ ಅನುದಾನಕ್ಕೆ ತಕ್ಕಂತೆ ಹಾಗೂ ಹಂತ ಹಂತವಾಗಿ ಪೂರ್ಣ ಪ್ರಮಾಣದ ಸುಧಾರಣೆ ಕೆಲಸಗಳನ್ನು ಕೈಗೆತ್ತಿಕೊಳ್ಳಲಾಗುವುದು ಎಂದು ಮಾನ್ಯ ಲೋಕೋಪಯೋಗಿ ಸಚಿವರು ತಿಳಿಸಿದರು. | ದಿನಾಂಕ: 28.02.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು, ಮಲೆನಾಡು ಪ್ರದೇಶದಲ್ಲಿ ಲೋಕೋಪಯೋಗಿ ಇಲಾಖೆ ರಸ್ತೆಗಳನ್ನು ಲಭ್ಯವಿರುವ ಅನುದಾನದನ್ವಯ ವಿವಿಧ ಯೋಜನೆ/ಕಾರ್ಯಕ್ರಮಗಳಡಿ ಅಭಿವೃದ್ಧಿಪಡಿಸಲಾಗುತ್ತಿದ್ದು ರಸ್ತೆ ಸುಧಾರಣೆ ಕೆಲಸಗಳನ್ನು ಹಾಗೂ ವಾರ್ಷಿಕ ನಿರ್ವಹಣಾ ಕಾಮಗಾರಿಗಳನ್ನು ಕೈಗೊಂಡು ಸುಗಮ ವಾಹನ ಸಂಚಾರಕ್ಕೆ ಅನುವು ಮಾಡಿಕೊಡಲಾಗಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸಮಿತಿಯು ಭರವಸೆಯನ್ನು ಮುಕ್ತಾಯಗೊಳಿಸಿತು. |
| 60 | 5232<br>ಚು.ರ.ಪ್ರ. 857<br>ಶ್ರೀ ಮರಿತಿಬ್ಬೇಗೌಡ<br>ವಿಪನದಿ: 16.12.2014 | ಮಂಡ್ಯ ಜಿಲ್ಲೆ, ಮಳವಳ್ಳಿ ಪಟ್ಟಣದ ಅನಂತರಾಮ್ ವೃತ್ತದಿಂದ ಪೇಟೆ ಬೀದಿ ಮೂಲಕ ಕನಕಪುರ ಎನ್.ಹೆಚ್. ರಸ್ತೆಗೆ ಸೇರುವ ಲೋಕೋಪಯೋಗಿ ಇಲಾಖೆಯಲ್ಲಿ ಬರುವ ಸುಮಾರು 1.36 ಕಿ.ಮೀ. ವಿಸ್ತೀರ್ಣದ ರಸ್ತೆಯ ಮಧ್ಯಭಾಗದಲ್ಲಿ ಪುರಸಭೆ | ಈ ಹಿಂದೆ ನಬಾರ್ಡ್–18 ಯೋಜನೆ ಅಡಿಯಲ್ಲಿ ರೂ.70.00 ಲಕ್ಷಗಳಿಗೆ ಪ್ರಸ್ತಾವನೆಯನ್ನು ಸೇರಿಸಲಾಗಿ, ನಬಾರ್ಡ್ ನಿಯಮಾವಳಿಗೆ ಅನುಗುಣವಾಗಿರದ ಕಾರಣ ಸದರಿ ಪ್ರಸ್ತಾವನೆ ಮಂಜೂರಾಗಿರುವುದಿಲ್ಲ. ಸದರಿ ರಸ್ತೆಯನ್ನು ಅಭಿವೃದ್ಧಿಪಡಿಸಲು 2014–15ನೇ ಸಾಲಿನ ದರಪಟ್ಟಿಯಂತೆ ಸುಮಾರು ರೂ.150.00 ಲಕ್ಷಗಳು ಅವಶ್ಯವಿರುವುದಾಗಿ ಅಂದಾಜಿಸಲಾಗಿದ್ದು, | ದಿನಾಂಕ: 28.02.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು, ಮಂಡ್ಯ ಜಿಲ್ಲೆ ಮಳವಳ್ಳಿ ಪಟ್ಟಣದ ಅನಂತರಾಮ್ ವೃತ್ತದಿಂದ ಪೇಟೆ ಬೀದಿ ಮೂಲಕ ಕನಕಪುರ ಎನ್.ಹೆಚ್. ರಸ್ತೆಗೆ ಸೇರುವ ರಸ್ತೆಯ<br><br>• ಸರಪಳಿ 0.00 ರಿಂದ 0.530 ಕಿ.ಮೀ. ವರೆಗಿನ ರಸ್ತೆ ಕಾಮಗಾರಿಯು 2016–17 ಸಾಲಿನ ಅಪೆಂಡಿಕ್ಸ್–ಇ ಯೋಜನೆ ಅಡಿಯಲ್ಲಿ ರೂ.100.00 ಲಕ್ಷಗಳ ಅಂದಾಜು ಮೊತ್ತಕ್ಕೆ ಮಂಜೂರಾಗಿರುತ್ತದೆ. ರಸ್ತೆ ಕಾಮಗಾರಿಯು ಪೂರ್ಣಗೊಂಡಿರುತ್ತದೆ. |

| | | | | |
|---|---|---|---|---|
| | | ವತಿಯಿಂದ ಒಳಚರಂಡಿ ಕಾಮಗಾರಿ ಪೂರ್ಣಗೊಂಡು ವರ್ಷವಾದರೂ ಆ ರಸ್ತೆಯನ್ನು ದುರಸ್ಥಿ ಪಡಿಸದಿರುವ ಬಗ್ಗೆ. | ಅನುದಾನ ಲಭ್ಯತೆಗನುಗುಣವಾಗಿ ಕ್ರಮವಹಿಸಲಾಗುವುದು ಎಂದು ಮಾನ್ಯ ಲೋಕೋಪಯೋಗಿ ಸಚಿವರು ತಿಳಿಸಿದರು. | • ಸದರಿ ರಸ್ತೆಯ ಸರಪಳಿ 0.53 ರಿಂದ 0.75 ಹಾಗೂ 1.02 ರಿಂದ 1.36 ಕಿ.ಮೀ. ವರೆಗೆ ಪುರಸಭೆ ವತಿಯಿಂದ ರಸ್ತೆ ಅಭಿವೃದ್ಧಿ ಪಡಿಸಲಾಗಿರುತ್ತದೆ.<br>• ಸದರಿ ರಸ್ತೆಯ ಸರಪಳಿ 0.75 ರಿಂದ 1.02 ಕಿ.ಮೀ. ವರೆಗೆ ರಸ್ತೆ ಅಭಿವೃದ್ಧಿ ಕಾಮಗಾರಿಯನ್ನು 2016–17ನೇ ಸಾಲಿನ 3054 ನಿರ್ವಹಣೆ ಲೆಕ್ಕಶೀರ್ಷಿಕೆ ಅಡಿ ರೂ. 20.00 ಲಕ್ಷಗಳ ಅಂದಾಜು ಮೊತ್ತದ ರಸ್ತೆ ಅಭಿವೃದ್ಧಿ ಕಾಮಗಾರಿಯು ಪೂರ್ಣಗೊಂಡಿರುತ್ತದೆ<br>ಮೇಲ್ಕಂಡಂತೆ ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸಮಿತಿಯು ಭರವಸೆಯನ್ನು ಮುಕ್ತಾಯಗೊಳಿಸಿತು. |
| 61 | 5233<br>ಚು.ರ.ಪ್ರ. 872<br>ಶ್ರೀ ಟಿ. ಜಾನ್<br>ವಿಪನದಿ: 16.12.2014 | ಮೈಸೂರು ಜಿಲ್ಲೆ ಶ್ರೀರಂಗಪಟ್ಟಣ ತಾಲ್ಲೂಕಿನ ಬೆಳಗೊಳ ಗ್ರಾಮದ ಪೇಪರ್ ಮಿಲ್ ಸರ್ಕಲ್‌ನಲ್ಲಿ ರಸ್ತೆಯು ಸಂಪೂರ್ಣ ಹಾಳಾಗಿದ್ದರೂ, ಭಾಗಶಃ ಮಾತ್ರ ದುರಸ್ಥಿಪಡಿಸಿ ಉಳಿದ ಭಾಗವನ್ನು ದುರಸ್ಥಿಪಡಿಸದಿರುವ ಬಗ್ಗೆ. | ರಸ್ತೆ ಸರಪಳಿ 138.74 ರಿಂದ 139.15 ಕಿ.ಮೀ.ವರೆಗೆ ಒಟ್ಟು 410 ಮೀ. ರಸ್ತೆ ಅಭಿವೃದ್ಧಿ ಕಾಮಗಾರಿ (ಕಾಂಕ್ರೀಟ್ ರಸ್ತೆ)ಯನ್ನು ರೂ.167.45 ಲಕ್ಷಗಳಲ್ಲಿ 410.00 ಮೀಟರ್ ಉದ್ದದ ರಸ್ತೆಯನ್ನು ದುರಸ್ಥಿಪಡಿಸಲು ಈಗಾಗಲೇ ಟೆಂಡರ್ ಕರೆಯಲಾಗಿದ್ದು, ಟೆಂಡರ್ ಅನುಮೋದನೆಗೊಂಡ ಕೂಡಲೇ ಕಾಮಗಾರಿಯನ್ನು ತ್ವರಿತವಾಗಿ ಕೈಗೆತ್ತಿಕೊಂಡು ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಮಾನ್ಯ ಲೋಕೋಪಯೋಗಿ ಸಚಿವರು ತಿಳಿಸಿದರು. | ದಿನಾಂಕ: 28.02.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು, ರಸ್ತೆ ಸರಪಳಿ 138.74 ರಿಂದ 139.15 ಕಿ.ಮೀ.ವರೆಗೆ ಒಟ್ಟು 410 ಮೀ. ರಸ್ತೆ (ಕಾಂಕ್ರೀಟ್ ರಸ್ತೆ)ಯನ್ನು ಲೆಕ್ಕಶೀರ್ಷಿಕೆ 3054 (ಯೋಜನೇತರ) – 13ನೇ ಹಣಕಾಸು ಅಡಿಯಲ್ಲಿ ರೂ. 167.45 ಲಕ್ಷಗಳ ಅಂದಾಜು ಮೊತ್ತದಲ್ಲಿ ಅಭಿವೃದ್ಧಿಪಡಿಸಲಾಗಿದ್ದು ಕಾಮಗಾರಿಯು ಪೂರ್ಣಗೊಂಡಿರುತ್ತದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸಮಿತಿಯು ಭರವಸೆಯನ್ನು ಮುಕ್ತಾಯಗೊಳಿಸಿತು. |

| | | | | |
|---|---|---|---|---|
| 62 | 4928<br>ಚು.ರ.ಪ್ರ 1319<br>ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ<br>ದಿನಾಂಕ;15.07.2014 | ರಾಷ್ಟ್ರೀಯ ಪುಣೆ ಬೆಂಗಳೂರು ಹೆದ್ದಾರಿಯ ಮಧ್ಯದಲ್ಲಿರುವ ಹುಬ್ಬಳ್ಳಿ–ಧಾರವಾಡ ನಗರಗಳ ಮಧ್ಯೆ ಇರುವ ಬೈಪಾಸ್ ರಸ್ತೆಯನ್ನು ಚತುಷ್ಪಥ ರಸ್ತೆಯನ್ನಾಗಿ ಮಾಡುವ ಬಗ್ಗೆ. | ಸದ್ಯದಲ್ಲಿಯೇ ಗುತ್ತಿಗೆದಾರರೊಡನೆ ಸದರಿ ವಿಷಯಕ್ಕೆ ಸಂಬಂಧಿಸಿದಂತೆ, ಸರ್ಕಾರದ ಮಟ್ಟದಲ್ಲಿ ಸಭೆಯನ್ನು ಕರೆಯಲು ಉದ್ದೇಶಿಸಲಾಗಿದೆ ಸಭೆಯ ನಂತರ ಪ್ರಸ್ತಾವನೆಯನ್ನು ಕೇಂದ್ರ ಭೂಸಾರಿಗೆ ಮಂತ್ರಾಲಯಕ್ಕೆ ಸಲ್ಲಿಸಲಾಗುವುದು ಎಂದು ಮಾನ್ಯ ಲೋಕೋಪಯೋಗಿ ಸಚಿವರು ತಿಳಿಸಿದರು. | ದಿನಾಂಕ: 28.02.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು, ರಾಷ್ಟ್ರೀಯ ಹೆದ್ದಾರಿ–4ರಲ್ಲಿ ಹುಬ್ಬಳ್ಳಿ–ಧಾರವಾಡ ಬೈಪಾಸ್ ಬಿ.ಓ.ಟಿ. ಆಧಾರದ ಮೇಲೆ ನಿರ್ಮಿಸಿದ್ದು, ನಿರ್ವಹಣಾ ಅವಧಿಯು 1998 ರಿಂದ 2024ರವರೆಗೆ ಇರುತ್ತದೆ. ಸದರಿ ಕಾಮಗಾರಿಯ ಈ ಬೈಪಾಸ್‌ನ್ನು ಚತುಷ್ಪಥಗೊಳಿಸುವ ಸಲುವಾಗಿ ವಿಸ್ತೃತ ಯೋಜನಾ ವರದಿ ತಯಾರಿಕೆಯನ್ನು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಮೂಲಕ ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಮಂತ್ರಾಲಯದವರು ಕೈಗೆತ್ತಿಕೊಂಡಿರುತ್ತಾರೆ.<br><br>ಹುಬ್ಬಳ್ಳಿ–ಧಾರವಾಡ ಬೈಪಾಸ್ ರಸ್ತೆಯ ಕಿ.ಮೀ. 403.8 ರಿಂದ 433.28ರವರೆಗೆ ಒಟ್ಟು 30.38 ಕಿ.ಮೀ. ರಸ್ತೆಯನ್ನು 4/6 ಪಥ ರಸ್ತೆಯನ್ನಾಗಿ ಪರಿವರ್ತಿಸುವ ಕುರಿತು ವಿಸ್ತೃತ ಯೋಜನಾ ವರದಿಯನ್ನು (ಡಿ.ಪಿ.ಆರ್) ತಯಾರಿಸಲು ಸಮಾಲೋಚಕರನ್ನು ನೇಮಕ ಮಾಡಲಾಗಿದೆ. ಸದರಿ ಸಮಾಲೋಚಕರು ಡಿ.ಪಿ.ಆರ್.ನ್ನು Project Director, NHAI, ಧಾರವಾಡ ಇವರಿಗೆ ಸಲ್ಲಿಸುವ ಹಂತದಲ್ಲಿರುತ್ತದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸಮಿತಿಯು ಭರವಸೆಯನ್ನು ಮುಕ್ತಾಯಗೊಳಿಸಿತು. |
| 63 | 4933<br>ಚು.ಗು.ಪ್ರ. 767<br>ಶ್ರೀ ಕೆ. ಗೋವಿಂದರಾಜ್<br>ವಿಪನದಿ:<br>10/02/2015 | ಸರ್ಕಾರಿ ಕಟ್ಟಡಗಳಲ್ಲಿ ಸೌರಶಕ್ತಿಯನ್ನು ಉಪಯೋಗಿಸಿಕೊಂಡು ಬಳಸುವ ಬಗ್ಗೆ. | ವಿಕಾಸಸೌಧ ಕಟ್ಟಡ ಹಾಗೂ ಉಚ್ಚನ್ಯಾಯಾಲಯ ಕಟ್ಟಡದ ಛಾವಣಿಗಳ ಮೇಲೆ ಈಗಾಗಲೇ ಸೌರಶಕ್ತಿ ಘಟಕಗಳನ್ನು ಅಳವಡಿಸಲಾಗಿರುತ್ತದೆ ಮತ್ತು ಸರ್ಕಾರಿ ಕಟ್ಟಡಗಳಿಗೆ ಸೌರಶಕ್ತಿ ಘಟಕಗಳನ್ನು ಅಳವಡಿಸಲು ಕಾರ್ಯಸಾಧ್ಯ ಸಾಧನೆ (Feasibility) ವರದಿಯನ್ನು | ದಿನಾಂಕ: 28.02.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು, ವಿಕಾಸಸೌಧ ಕಟ್ಟಡ ಹಾಗೂ ಉಚ್ಚ ನ್ಯಾಯಾಲಯ ಕಟ್ಟಡದ ಛಾವಣಿಗಳು ಮೇಲೆ ಸೌರಶಕ್ತಿ ವಿದ್ಯುತ್ತ ಉತ್ಪಾದನಾ ಘಟಕಗಳನ್ನು ಅಳವಡಿಸಲಾಗಿರುತ್ತದೆ.<br><br>ಎಲ್ಲಾ ಸರ್ಕಾರಿ ಕಟ್ಟಡಗಳ ಛಾವಣಿಗಳ ಮೇಲೆ ಸೌರಶಕ್ತಿ ವಿದ್ಯುತ್ ಘಟಕಗಳನ್ನು ಅಳವಡಿಸಲು ಕರ್ನಾಟಕ |

| | | | | |
|---|---|---|---|---|
| | | | ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ(ಕೆಆರ್‌ಇಡಿಎಲ್)ರವರಿಂದ ಪಡೆದು ನಂತರ ಕ್ರಮ ಕೈಗೊಳ್ಳಲಾಗುವುದು ಎಂದು ಮಾನ್ಯ ಲೋಕೋಪಯೋಗಿ ಸಚಿವರು ತಿಳಿಸಿದರು. | ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ (ಕೆ.ಆರ್.ಇ.ಡಿ.ಎಲ್)ರವರು ಬೆಸ್ಕಾಂ ಹೆಸ್ಕಾಂ, ಜೆಸ್ಕಾಂ ಹಾಗೂ ಬೆಸ್ಕಾಂ ಕಂಪನಿಗಳಿಗೆ ವಹಿಸಿರುತ್ತಾರೆ.<br><br>ಸದರಿ ವಿದ್ಯುತ್ ಕಂಪನಿಗಳು ಈಗಾಗಲೇ ವಿಧಾನಸೌಧ, ಬಹುಮಹಡಿ ಕಟ್ಟಡ ಹಾಗೂ ಇತರೆ ಕಟ್ಟಡಗಳಲ್ಲಿ ಸೌರಶಕ್ತಿ ವಿದ್ಯುತ್ ಘಟಕಗಳನ್ನು ಅಳವಡಸಲು ಟೆಂಡರ್ ಕರೆದು ಸೌರಶಕ್ತಿ ವಇದ್ಯುತ್ ಘಟಕಗಳನ್ನು ಅಳವಡಿಸುವ ಕಾಮಗಾರಿಗಳನ್ನು ಪ್ರಾರಂಭಿಸಿರುತ್ತಾರೆ. ರಾಜ್ಯಾದ್ಯಾಂತ ನ್ಯಾಯಾಂಗ ಇಲಾಖೆಯ ಕಟ್ಟಡಗಳ ಛಾವಣಿಗಳ ಮೇಲೆ ಸೌರಶಕ್ತಿ ವಿದ್ಯುತ್ ಘಟಕಗಳನ್ನು ಅಳವಡಿಸಲು ಉಚ್ಛ ನ್ಯಾಯಾಲಯಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿರುತ್ತದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸಮಿತಿಯು ಭರವಸೆಯನ್ನು ಮುಕ್ತಾಯಗೊಳಿಸಿತು. |
| 64 | 2903<br>ಚು.ಗು.ಪ್ರ: 233<br>ಡಾ: ಮಲ್ಲನಗೌಡ ನಾಡಗೌಡ<br>ವಿಪನದಿ:<br>24.07.2008 | ನಂಜುಂಡಸ್ವಾಮಿ ಆಯೋಗದ ವರದಿ ಆಧಾರದ ಮೇಲೆ ಬಿಜಾಪುರ ಜಿಲ್ಲೆಯ ಸಿಂಧಗಿ ತಾಲ್ಲೂಕಿನಲ್ಲಿ ರಸ್ತೆ ಅಗಲೀಕರಣ ಹಾಗೂ ಡಾಂಬರೀಕರಣ ಕಾಮಗಾರಿಗೆ ನಕಲಿ ಬಿಲ್ ಸೃಷ್ಟಿಸಿ 88 ಲಕ್ಷ ರೂಪಾಯಿ ದುರ್ಬಳಕೆ ಮಾಡಿದ ಲೋಕೋಪಯೋಗಿ ಇಲಾಖೆ ಅಧಿಕಾರಿಗಳು ಹಾಗೂ ಗುತ್ತಿಗೆದಾರರಿಂದ ಹಣ ವಸೂಲಿ ಮಾಡುವ ಬಗ್ಗೆ | ಲೋಕಾಯುಕ್ತರವರಿಂದ ವಿಚಾರಣಾ ವರದಿಯ ಪೂರ್ಣ ವಿವರಗಳನ್ನು ಸ್ವೀಕರಿಸಿದ ನಂತರ ಲೋಕಾಯುಕ್ತರ ಶಿಫಾರಸ್ಸುಗಳನ್ವಯ ಸಂಬಂಧಪಟ್ಟವರ ಮೇಲೆ ಕ್ರಮ ಜರುಗಿಸಲಾಗುವುದು ಹಾಗೂ ಇಲಾಖಾ ನಿಯಮಾನುಸಾರ ಸಂಬಂಧಪಟ್ಟ ಅಧಿಕಾರಿ ಹಾಗೂ ಗುತ್ತಿಗೆದಾರರ ಮೇಲೆ ಕ್ರಮ ಜರುಗಿಸಲಾಗುವುದೆಂದು ಮಾನ್ಯ ಲೋಕೋಪಯೋಗಿ ಸಚಿವರು ತಿಳಿಸಿದರು. | ದಿನಾಂಕ: 28.02.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು, ಲೋಕೋಪಯೋಗಿ ಇಲಾಖೆಯ ಸಿಂದಗಿ ಉಪ ವಿಭಾಗದ ವ್ಯಾಪ್ತಿಗೆ ಬರುವ ದೇವರಹಿಪ್ಪರಗಿ ತಾಳಿಕೋಟೆ ರಸ್ತೆಯ ಕಿ.ಮೀ. 36.00 ರಿಂದ 47.00 ವರೆಗಿನ ರಸ್ತೆಯ ಬದಿಗಳನ್ನು ಅಗಲಗೊಳಿಸಿ ಮರುಡಾಂಬರೀಕರಣ ಮಾಡುವ ಕಾಮಗಾರಿಯನ್ನು ಪೂರ್ಣಗೊಳಿಸದೇ ಸರ್ಕಾರದಿಂದ ಹಣವನ್ನು ತೆಗೆದುಕೊಂಡು ಕೆಲಸ ಹಣ ದುರುಪಯೋಗ ಪಡಿಸಿಕೊಂಡಿರುವ ಬಗ್ಗೆ ಶ್ರೀ ರವೀಂದ್ರ ಶಂಕರಗೌಡ ಪಾಟೀಲ, ಗುತ್ತಿಗೆದಾರರು ಇವರು ಬಿಜಾಪುರ ಲೋಕಾಯುಕ್ತ ಕಚೇರಿಗೆ ನೀಡಿದ್ದ ದೂರಿನನ್ವಯ ಬಿಜಾಪುರ ಲೋಕಾಯುಕ್ತ ಪೊಲೀಸ್ ಠಾಣೆಯಲ್ಲಿ ಮೊಕದ್ದಮೆ ಸಂಖ್ಯೆ 7:2008ನ್ನು ದಾಖಲಿಸಿಕೊಂಡು ತನಿಖೆ ಕೈಗೊಂಡಾಗ |

| | | | | |
|---|---|---|---|---|
| | | | | ಭ್ರಷ್ಟಾಚಾರ ನಿರ್ಮೂಲನಾ ಕಾಯ್ದೆ 1988ರ ಕಲಂ 13(1)(ಸ9) ಸಹವಾಚನ 13(2) ಮತ್ತು ಭಾರತೀಯ ದಂಡ ಸಂಹಿತೆ ಕಲಂ 468, 201 ಸಹವಾಚನ 34ರ ಅಡಿಯಲ್ಲಿ ಮಾಡಲಾದ ಆಪಾಧನೆಗಳು ಮೇಲ್ನೋಟಕ್ಕೆ ಸಾಬೀತಾಗಿರುವುದಾಗಿ, ಸದರಿ ಆರೋಪಿತರುಗಳನ್ನು ಸಕ್ಷಮ ನ್ಯಾಯಾಲಯದಲ್ಲಿ ಅಭಿಯೋಜನೆಗೆ ಒಳಪಡಿಸಲು ಪ್ರಕರಣದಲ್ಲಿನ ಅಧಿಕಾರಿಗಳ ವಿರುದ್ಧ ಭ್ರಷ್ಟಾಚಾರ ನಿರ್ಮೂಲನಾ ಕಾಯ್ದೆ 1988ರ ಕಲಂ 13(1)(2) ಸಹವಾಚನ 13(2) ಮತ್ತು ಕಲಂ 468, 201, ಸಹವಾಚನ 34 ಭಾರತೀಯ ದಂಡ ಸಂಹಿತೆ ಅಡಿ ಎಸಗಿರುವ ಅಪರಾಧಕ್ಕಾಗಿ ಅಭಿಯೋಜನೆಗೆ ಒಳಪಡಿಸಲು ಭ್ರಷ್ಟಾಚಾರ ನಿರ್ಮೂಲನಾ ಕಾಯ್ದೆ 1988ರ ಕಲಂ 19(1)(ಬಿ) ಮತ್ತು ಕಲಂ 197 ಸಿಆರ್‌ಪಿಸಿ ಅನ್ವಯ ಸರ್ಕಾರದ ಮಂಜೂರಾತಿ ನೀಡುವಂತೆ ಅವರ ಪೊಲೀಸ್ ಮಹಾನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರು ಸಲ್ಲಿಸಿರುವ ಪ್ರಸ್ತಾವನೆಯನ್ನು ಪರಿಶೀಲಿಸಿ ಶ್ರೀ ರಮೇಶ ಧರೆಪ್ಪ ಕಟ್ಟೀಮನಿ, ಅಂದಿನ ಕಾರ್ಯಪಾಲಕ ಇಂಜನಿಯರ್ ಹಾಗೂ ಶ್ರೀ ಅಮರಪ್ಪ ಈರಪ್ಪ ನಾಗೂರ, ಸಹಾಯಕ ಕಾರ್ಯಪಾಲಕ ಇಂಜನಿಯರ್ ಇವರುಗಳ ವಿರುದ್ಧ ದಿ: 26.7.2012ರ ಆದೇಶದಲ್ಲಿ ಅಭಿಯೋಜನಾ ಮಂಜೂರಾತಿ ನೀಡಲಾಗಿದೆ. ಇನ್ನುಳಿದ ಶ್ರೀ ಪ್ರಕಾಶ ಮಾರ್ತಾಂಡರಾವ್ ಕುಲಕರ್ಣಿ, ಸಹಾಯಕ ಇಂಜನಿಯರ್ ಹಾಗೂ ಶ್ರೀ ಧನ್ಯಕುಮಾರ್ ಭೀಮರಾವ್ ಬಿರಾದಾರ್, ಲೆಕ್ಕಾಧೀಕ್ಷಕರು ಇವರುಗಳ ವಿರುದ್ಧ ಮುಖ್ಯ ಇಂಜನಿಯರ್, ಸಂಪರ್ಕ ಮತ್ತು ಕಟ್ಟಡಗಳು (ದಕ್ಷಿಣ) ಬೆಂಗಳೂರು ಇವರು ಅಭಿಯೋಜನಾ ಮಂಜೂರಾತಿ ನೀಡಿರುತ್ತಾರೆ.<br><br>ಸದರಿ ಪ್ರಕರಣವು ಬಿಜಾಪುರ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯದಲ್ಲಿ ಸ್ಪೆಷಲ್ ಕೇಸ್ ಸಂಖ್ಯೆ: 13/2012ರಲ್ಲಿ |

| | | | | |
|---|---|---|---|---|
| | | | | ದಾಖಲಾಗಿದ್ದು, ವಿಚಾರಣೆ ಪ್ರಗತಿಯಲ್ಲಿದೆ, ಪ್ರಸ್ತುತ ಈ ಪ್ರಕರಣವು 2012ರಿಂದ ವಿವಿಧ ದಿನಾಂಕಗಳಂದು ವಿಚಾರಣೆಗೆ ಬಂದಿರುತ್ತದೆ. ದಿನಾಂಕ: 13.04.2016ರ ನಂತರ ದಿ: 30.4.2016, 9.6.2016, 7.7.2016, 6.8.2016, 9.9.2016, 19.10.2016, 14.10.2016, 5.12.2016, 28.12.2016, 04.10.2018ರಂದು ವಿಚಾರಣೆಗೆ ಬಂದಿದ್ದು, ಮುಂದಿನ ವಿಚಾರಣೆಗಾಗಿ (Argument) ದಿನಾಂಕ: 15.03.2019 ನಿಗಧಿಯಾಗಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸಮಿತಿಯು ಭರವಸೆಯನ್ನು ಮುಕ್ತಾಯಗೊಳಿಸಿತು. |

**ಕಂದಾಯ ಇಲಾಖೆ**

| ಕ್ರಮ ಸಂಖ್ಯೆ | ಆಶ್ವಾಸನೆ ಸಂಖ್ಯೆ ಆಧಾರ ಮತ್ತು ದಿನಾಂಕ | ವಿಷಯ | ಆಶ್ವಾಸನೆ | ತಗೆದುಕೊಂಡ ಕ್ರಮ |
|---|---|---|---|---|
| 1. | 3385<br>ಚು.ಗು.ಪ್ರ. 154<br>ಶ್ರೀ ಅಬ್ದುಲ್ ಅಜೀಂ<br>ವಿಪನದಿ: 31.12.2009 | ಉತ್ತರ ಕರ್ನಾಟಕದಲ್ಲಿ ಇತ್ತೀಚೆಗೆ ಸಂಭವಿಸಿದ ಅತಿವೃಷ್ಟಿಯಿಂದ ಹಾನಿಗೊಳಗಾದ ನೆರೆ ಸಂತ್ರಸ್ಥರ ಪ್ರದೇಶಗಳ ಅಭಿವೃದ್ಧಿಯನ್ನು ಪೂರ್ಣಗೊಳಿಸುವ ಬಗ್ಗೆ. | ಆದಷ್ಟು ಬೇಗನೆ ಪರಿಹಾರ ಕಾರ್ಯ ಮತ್ತು ಮೂಲಭೂತ ಸೌಕರ್ಯಗಳ ದುರಸ್ಥಿ ಕಾರ್ಯ ಪೂರ್ಣಗೊಳಿಸಲಾಗುವುದು ಎಂದು ಮಾನ್ಯ ಕಂದಾಯ ಸಚಿವರು ತಿಳಿಸಿದರು. | ದಿನಾಂಕ: 23.10.2018ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ಕೇಂದ್ರ ಸರ್ಕಾರದ ಪ್ರಕೃತಿ ವಿಕೋಪ ಪರಿಹಾರ ನಿಧಿಯಿಂದ ಜೀವಹಾನಿ, ಜಾನುವಾರು ಹಾನಿ, ವಾಸದ ಮನೆಗಳ ಹಾನಿ, ಬೆಳೆಹಾನಿ ಪ್ರಕರಣಗಳಲ್ಲಿ ಸಂತ್ರಸ್ಥರಿಗೆ ಮಾರ್ಗಸೂಚಿಗಳನ್ವಯ ಪರಿಹಾರ ನೀಡಲಾಗಿದೆ. ಸಾರ್ವಜನಿಕ ಆಸ್ತಿಗಳು, ರಸ್ತೆ, ಸೇತುವೆ, ಕೆರೆಗಳು ಹಾಗೂ ಕಟ್ಟಡ ಮತ್ತು ಆರೋಗ್ಯ ಕೇಂದ್ರ ಮುಂತಾದ ಮೂಲಭೂತ ಸೌಕರ್ಯಗಳ ತುರ್ತು ದುರಸ್ಥಿ ಕಾರ್ಯಗಳಿಗಾಗಿ ರೂ. 1841.21 ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿದ ಸಮಿತಿಯು ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |
| 2 | 4200<br>ಚು.ರ.ಪ್ರ: 153<br>ಶ್ರೀ ಅಶ್ವತ್ಥ್ ನಾರಾಯಣ<br>ವಿಪನದಿ: 06.12.2012 | ಸರ್ಕಾರಿ ಜಾಗದಲ್ಲಿ (ಗೋಮಾಳದಲ್ಲಿ) ಅಕ್ರಮವಾಗಿ ಮನೆ ಕಟ್ಟಿಕೊಂಡವರಿಗೆ ಸಕ್ರಮ ಮಾಡಲು ಮಸೂದೆ ತಂದಿರುವಂತೆ, ಖಾಸಗಿ ಬಡಾವಣೆಗಳಲ್ಲಿ ರೆವಿನ್ಯೂ ನಿವೇಶನ ಹೊಂದಿರುವವರಿಗೆ ದಂಡ ವಿಧಿಸಿ ನಿವೇಶನಗಳನ್ನು | ಸದರಿ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ ಎಂದು ಮಾನ್ಯ ಉಪಮುಖ್ಯಮಂತ್ರಿಯವರು ತಿಳಿಸಿದರು. | ದಿನಾಂಕ: 23.10.2018ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ಕರ್ನಾಟಕ ಭೂಕಂದಾಯ ಅಧಿನಿಯಮ, 1964ರ ಕಲಂ 94ಸಿಸಿ ಅಡಿಯಲ್ಲಿ ನಗರ ಪ್ರದೇಶದಲ್ಲಿನ ಸರ್ಕಾರಿ ಭೂಮಿಯಲ್ಲಿ ಅನಧಿಕೃತವಾಗಿ ನಿರ್ಮಿಸಿರುವ ಮನೆಗಳನ್ನು ವಿಸ್ತೀರ್ಣಾನುಸಾರ ಸಕ್ರಮಗೊಳಿಸಲು ಅವಕಾಶ ಕಲ್ಪಿಸಲಾಗಿದೆ.<br><br>ನಗರಾಭಿವೃದ್ಧಿ ಇಲಾಖೆಯು ಬೆಂಗಳೂರು ನಗರ ಮತ್ತು ಸುತ್ತಮುತ್ತಲು ನಿರ್ಮಾಣವಾಗುತ್ತಿರುವ ಅನಧಿಕೃತ ಬಡಾವಣೆಗಳನ್ನು ತಡೆಯುವ ಸಲುವಾಗಿ |

| | | | | |
|---|---|---|---|---|
| | | ಸಕ್ರಮಗೊಳಿಸಲು ಮಸೂದೆ ಜಾರಿಗೆ ತರುವ ಬಗ್ಗೆ. | | ಮಾರ್ಗಸೂಚಿಯನ್ನು ರೂಪಿಸಿ ಸರ್ಕಾರಕ್ಕೆ ವರದಿ ಸಲ್ಲಿಸಲು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸಿದೆ.<br><br>ಸಮಿತಿಯು ಬೆಂಗಳೂರು ನಗರ ಮತ್ತು ಅದರ ಸುತ್ತಮುತ್ತ ಹಸಿರು ವಲಯದಲ್ಲಿ ನಿರ್ಮಾಣವಾಗುತ್ತಿರುವ ಅನಧಿಕೃತ ಬಡಾವಣೆಗಳನ್ನು ತಡೆಯುವ ಬಗ್ಗೆ ಹಾಗೂ ಈಗಾಗಲೇ ರಚಿಸಲಾಗಿರುವ ರೆವಿನ್ಯೂ ನಿವೇಶನಗಳನ್ನು ಸಕ್ರಮಗೊಳಿಸುವ ಬಗ್ಗೆ ಅಧ್ಯಯನ ಕೈಗೊಂಡು ಸೂಕ್ತ ಮಾರ್ಗಸೂಚಿಗಳನ್ನು ರೂಪಿಸಿ, ಸರ್ಕಾರಕ್ಕೆ ವರದಿ ಸಲ್ಲಿಸದ ನಂತರ ಈ ಬಗ್ಗೆ ಪರಿಶೀಲಿಸಿ ಕ್ರಮವಹಿಸಲಾಗುವುದು ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿದ ಸಮಿತಿಯು ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |
| 3 | 4379<br>ಚು.ಗು.ಪ್ರ: 1634<br>ಶ್ರೀ ಕೋಟ ಶ್ರೀನಿವಾಸ ಪೂಜಾರಿ<br>ವಿಪನದಿ: 26.02.2014 | ವಾಸ್ತವ್ಯ ದೃಢೀಕರಣ ಪತ್ರವನ್ನು ನೀಡುವ ಅಧಿಕಾರವನ್ನು ಕಂದಾಯ ಇಲಾಖೆಗೆ ಬದಲು ಸ್ಥಳೀಯಾಡಳಿತ ಸಂಸ್ಥೆಯಾದ ಗ್ರಾಮ ಪಂಚಾಯತಿಗೆ ನೀಡಿ ಜನಸಾಮಾನ್ಯರಿಗೆ ಹೆಚ್ಚು ಅನುಕೂಲ ಮಾಡಿಕೊಡುವ ಕುರಿತು. | ಖಂಡಿತ ಇದನ್ನು ಗ್ರಾಮ ಪಂಚಾಯತಿ ಮಟ್ಟದಲ್ಲೂ ಕೂಡ ಕೊಡುವುದಕ್ಕೆ ಸೂಕ್ತ ವ್ಯವಸ್ಥೆಯನ್ನು ಮಾಡಲಾಗುವುದು ಎಂದು ಮಾನ್ಯ ಕಂದಾಯ ಸಚಿವರು ತಿಳಿಸಿದರು. | ದಿನಾಂಕ: 23.10.2018ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ಅಟಲ್‌ಜೀ ಜನಸ್ನೇಹಿ ಕೇಂದ್ರಗಳಲ್ಲಿ ಸಾರ್ವಜನಿಕರಿಗೆ ವಸತಿ ಮತ್ತು ವಾಸಸ್ಥಳ ಪ್ರಮಾಣ ಪತ್ರಗಳೊಂದಿಗೆ ಒಟ್ಟು 29 ವಿವಿಧ ಪ್ರಮಾಣ ಪತ್ರಗಳ ಸೇವೆ ಹಾಗೂ 10 ವಿವಿಧ ಪಿಂಚಣಿ ಮಂಜೂರಾತಿ ಸೇವೆಗಳನ್ನು ನೀಡಲಾಗುತ್ತಿದೆ. ಅಟಲ್‌ಜೀ ಜನಸ್ನೇಹಿ ಕೇಂದ್ರಗಳಲ್ಲಿ ನೀಡುತ್ತಿರುವ ಸೇವೆಗಳ ವಿತರಣೆಯನ್ನು ಸುಗಮಗೊಳಿಸಲು ರಾಜ್ಯದ ಎಲ್ಲಾ ಗ್ರಾಮ ಪಂಚಾಯಿತಿಗಳಲ್ಲಿಯೂ ಸಹ ಈ ಯೋಜನೆಯನ್ನು ರಾಜ್ಯಾದ್ಯಂತ ಜಾರಿಗೊಳಿಸಲು ಸರ್ಕಾರದ ಆದೇಶ ಸಂಖ್ಯೆ: ಕಂಇ 127 ಎಜೆಎಸ್ 2016, ದಿ: 30.6.2016ರಲ್ಲಿ ಆದೇಶವಾಗಿದೆ. |

| | | | | |
|---|---|---|---|---|
| | | | | ಅದರಂತೆ, ಅಟಲ್‌ಜೀ ಜನಸ್ನೇಹಿ ಕೇಂದ್ರಗಳಲ್ಲಿ ನೀಡುತ್ತಿರುವ ವಸತಿ ಮತ್ತು ವಾಸಸ್ಥಳ ಪ್ರಮಾಣ ಪತ್ರಗಳೊಂದಿಗೆ ವಿವಿಧ ಪ್ರಮಾಣ ಪತ್ರಗಳ ಹಾಗೂ ಪಿಂಚಣಿ ಮಂಜೂರಾತಿಗಳ ಸೇವೆಯನ್ನು ರಾಜ್ಯದ ಗ್ರಾಮ ಪಂಚಾಯಿತಿಗಳಲ್ಲಿ ವಿತರಿಸಲಾಗುತ್ತಿದ್ದು, ಇದುವರೆಗೆ 6019 ಗ್ರಾಮ ಪಂಚಾಯಿತಿಗಳಲ್ಲಿ 7192 ವಸತಿ ಪ್ರಮಾಣ ಪತ್ರ ಹಾಗೂ 69045 ವಾಸಸ್ಥಳ ಪ್ರಮಾಣ ಪತ್ರಗಳನ್ನು ಸಾರ್ವಜನಿಕರಿಗೆ ವಿತರಿಸಲಾಗಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿದ ಸಮಿತಿಯು ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |
| 4 | 4381<br>ಶೂನ್ಯ ವೇಳೆ ಪ್ರಸ್ತಾಪ<br>ಶ್ರೀ ಬಸವರಾಜ ಹೊರಟ್ಟಿ<br>ವಿಪನದಿ: 26.02.2014 | 2009ರ ಪ್ರವಾಹ ಸಂತ್ರಸ್ಥರಿಗೆ ಪುನರ್ ವಸತಿ ಕಲ್ಪಿಸುವ ಬಗ್ಗೆ. | ಆಸರೆ ಮನೆಗಳ ನಿರ್ಮಾಣ ಕಾರ್ಯವನ್ನು ವಹಿಸಿಕೊಂಡಿದ್ದ ದಾನಿ ಸಂಸ್ಥೆಗಳ ನಿರ್ಮಾಣ ಕಾರ್ಯವನ್ನು ಅರ್ಧಕ್ಕೆ ನಿಲ್ಲಿಸಿದ್ದರಿಂದ ಹಲವು ಗ್ರಾಮಗಳಲ್ಲಿ ಪ್ರಕರಣ ನ್ಯಾಯಾಲಯ ದಲ್ಲಿರುವುದರಿಂದ ಮನೆಗಳ ನಿರ್ಮಾಣ ಕಾರ್ಯ ವಿಳಂಬವಾಗಿದೆ. ಉಳಿಕೆಯಿರುವ ಮನೆಗಳನ್ನು ತುರ್ತಾಗಿ ನಿರ್ಮಿಸಿ ಫಲಾನುಭವಿಗಳಿಗೆ ಹಸ್ತಾಂತರಿಸಲಾಗುವುದೆಂದು ಮಾನ್ಯ ಕಂದಾಯ ಸಚಿವರು ತಿಳಿಸಿದರು. | ದಿನಾಂಕ: 23.10.2018ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, 2009ರ ಪ್ರವಾಹ ಸಂತ್ರಸ್ಥರಿಗೆ ಪುನರ್ ವಸತಿ ಕಲ್ಪಿಸಲು ಆಸರೆ ಯೋಜನೆಯಡಿಯಲ್ಲಿ ರಾಜ್ಯದ ಒಟ್ಟು 11 ಜಿಲ್ಲೆಗಳಲ್ಲಿ ಭಾಗಶ: 140 ಮತ್ತು ಪೂರ್ಣ 148 ಸೇರಿ ಒಟ್ಟು 288 ಗ್ರಾಮಗಳನ್ನು ಶಾಶ್ವತವಾಗಿ ಸ್ಥಳಾಂತರಿಸಲಾಗಿದೆ. ಪ್ರವಾಹ ಸಂತ್ರಸ್ಥರಿಗೆ ಸರ್ಕಾರ ಒಟ್ಟು 56086 ಮನೆಗಳನ್ನು ನಿರ್ಮಿಸಿ ಕೊಡಲು ತೀರ್ಮಾನಿಸಲಾಗಿತ್ತು. ಇಲ್ಲಿಯವರೆಗೆ 52288 ಮನೆಗಳನ್ನು ನಿರ್ಮಿಸಲಾಗಿರುತ್ತದೆ. ಇದರಲ್ಲಿ ದಾನಿಗಳಿಂದ ನಿರ್ಮಿಸಿದ ಮನೆಗಳ ಸಂಖ್ಯೆ 20198 ಫಲಾನುಭವಿಗಳಿಗೆ ಹಸ್ತಾಂತರಿಸಿದ ಮನೆಗಳ ಸಂಖ್ಯೆ: 41152 (ಸ್ಥಳಾಂತರಿಸಲಾದ ಗ್ರಾಮಗಳ ಜಿಲ್ಲಾವಾರು ವಿವರ ಹಾಗೂ ನಿರ್ಮಿಸಿದ ಮನೆಗಳ ಸಂಖ್ಯೆಯನ್ನು ಅನುಬಂಧ–1ರಲ್ಲಿ ನೀಡಿದೆ) ಸಾರ್ವಜನಿಕರು, ಸಂಘ–ಸಂಸ್ಥೆಗಳು ಹಾಗೂ ದಾನಿಗಳು ನೀಡಿದ ದೇಣಿಗೆ ರೂಪದಲ್ಲಿ ಬಂದ ಮೊತ್ತದಿಂದ ಮನೆಗಳನ್ನು ನಿರ್ಮಿಸಲಾಗಿರುತ್ತದೆ. ಮನೆಗಳ ನಿರ್ಮಾಣಕ್ಕೆ ಅನುದಾನ ಬಿಡುಗಡೆ ಮಾಡಲು ಕೇಂದ್ರ ಸರ್ಕಾರದ |

| | | | |
|---|---|---|---|
| | | | ಎನ್.ಡಿ.ಆರ್.ಎಫ್/ಎಸ್.ಡಿ.ಆರ್.ಎಫ್ ಮಾರ್ಗಸೂಚಿಯಲ್ಲಿ ಅವಕಾಶವಿರುವುದಿಲ್ಲ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸಮಿತಿಯು ಭರವಸೆಯನ್ನು ಮುಕ್ತಾಯಗೊಳಿಸಿತು. |

**ಅನುಬಂಧ-1**

| ಕ್ರಮ ಸಂಖ್ಯೆ | ಜಿಲ್ಲೆ | ಸ್ಥಳಾಂತರಗೊಂಡ ಗ್ರಾಮಗಳ ಸಂಖ್ಯೆ | ನಿರ್ಮಿಸಲು ಮಂಜೂರಾದ ಮನೆಗಳ ಸಂಖ್ಯೆ | ನಿರ್ಮಿಸಿರುವ ಮನೆಗಳ ಸಂಖ್ಯೆ | ನಿರ್ಮಿಸಲು ಬಾಕಿ ಇರುವ ಮನೆಗಳ ಸಂಖ್ಯೆ | ಫಲಾನುಭವಿಗಳಿಗೆ ಹಸ್ತಾಂತರಿಸಿದ ಒಟ್ಟು ಮನೆಗಳ ಸಂಖ್ಯೆ |
|---|---|---|---|---|---|---|
| 1. | ಬೆಳಗಾವಿ | 20 | 2047 | 1844 | 203 | 1844 |
| 2 | ಬಿಜಾಪುರ | 38 | 6543 | 6411 | 132 | 368 |
| 3 | ಧಾರವಾಡ | 07 | 1816 | 1816 | – | 1127 |
| 4 | ಗದಗ | 14 | 6574 | 6574 | – | 564 |
| 5 | ಹಾವೇರಿ | 02 | 716 | 482 | 234 | 474 |
| 6 | ಉತ್ತರ ಕನ್ನಡ | 01 | 50 | 50 | – | 50 |
| 7 | ಗುಲ್ಬರ್ಗಾ | 41 | 2646 | 2607 | 39 | 2646 |
| 8 | ಬೀದರ್ | 03 | 269 | 269 | – | 69 |
| 9 | ಯಾದಗಿರಿ | 06 | 910 | 816 | 94 | 699 |
| 10 | ರಾಯಚೂರು | 52 | 12473 | 11188 | 1287 | 11417 |
| 11 | ಬಳ್ಳಾರಿ | 18 | 5650 | 4689 | 961 | 2495 |
| 12 | ಕೊಪ್ಪಳ | 17 | 2790 | 2123 | 667 | 2795 |
| 13 | ದಾವಣಗೆರೆ | 09 | 1201 | 1159 | 40 | 1167 |
| 14 | ಬಾಗಲಕೋಟೆ | 59 | 12401 | 12260 | 141 | 10363 |
| | ಒಟ್ಟು | 288 | 56086 | 52288 | 3798 | 41152 |

| | | | | |
|---|---|---|---|---|
| 5 | 4968<br>ಚು.ರ.ಪ್ರ. 282<br>ಶ್ರೀ ಜಿ.ಎಸ್. ನ್ಯಾಮಗೌಡ<br>ವಿಪನದಿ:27.06.2014 | ಬಾಗಲಕೋಟೆ–ಕುಡಚಿ ರೈಲು ಮಾರ್ಗ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಂಡ ರೈತರ ನೀರಾವರಿ ಭೂಮಿಗೆ ಮತ್ತು ಒಣ ಬೇಸಾಯದ ಭೂಮಿಗೆ ಪರಿಹಾರ ಮೊತ್ತ ನೀಡುವ ಬಗ್ಗೆ. | ಕೇಂದ್ರ ಸರ್ಕಾರವು ದಿನಾಂಕ: 01.01.2014ರಿಂದ ಜಾರಿಗೆ ತಂದಿರುವ ಪ್ರಸ್ತುತ "ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ಸೂಕ್ತ ಪರಿಹಾರದ ಹಕ್ಕು, ಪುನರ್ವಸತಿ ಮತ್ತು ಪುನರ್ ನಿರ್ಮಾಣ ಕಾಯ್ದೆ 2013"ರಲ್ಲಿ ಒಪ್ಪಂದದ ಐತೀರ್ಪು ರಚಿಸಲು ಅವಕಾಶವಿಲ್ಲದಿರುವುದರಿಂದ ಹೊಸ ಕಾಯ್ದೆ ಕಲಂ–26ರನ್ವಯ ಪರಿಹಾರ ನಿಗದಿಪಡಿಲಾಗುತ್ತಿದೆ ಮತ್ತು ಹೊಸ ಭೂಸ್ವಾಧೀನ ಕಾಯ್ದೆ–2013ರ ಕಲಂ–109ರಲ್ಲಿ ರಾಜ್ಯ ಸರ್ಕಾರಗಳಿಗೆ ನಿಯಮಗಳನ್ನು ರಚಿಸಲು ಅವಕಾಶ ಕಲ್ಪಿಸಿರುವಂತೆ ನಿಯಮಾವಳಿಯನ್ನು ರಚಿಸಿ ಪ್ರಾಥಮಿಕ ಅಧಿಸೂಚನೆ ಹೊರಡಿಸಿದ್ದು, ಅಂತಿಮ ಅಧಿಸೂಚನೆ ಹೊರಡಿಸಿದ ನಂತರ ಸದರಿ ನಿಯಮಾವಳಿಗಳನ್ವಯ ಪರಿಶೀಲಿಸಿ ಭೂಸ್ವಾಧೀನ ನಡವಳಿಯ ಐತೀರ್ಪು ಹಂತದ ಸಂದರ್ಭದಲ್ಲಿ ಪರಿಹಾರ ಧನ ನಿಗದಿಪಡಿಸಲಾಗುವುದು ಎಂದು ಮಾನ್ಯ ಕಂದಾಯ ಸಚಿವರು ತಿಳಿಸಿದರು. | ದಿನಾಂಕ: 23.10.2018ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ಬಾಗಲಕೋಟೆ–ಕುಡಚಿ ರೈಲು ಮಾರ್ಗ ನಿರ್ಮಾಣಕ್ಕಾಗಿ ಅಗತ್ಯವೆಂದು ಕಂಡು ಬಂದ ಬಾಗಲಕೋಟೆ ಮತ್ತು ಬೆಳಗಾವಿ ಜಿಲ್ಲೆಯಲ್ಲಿನ ನೀರಾವರಿ ಮತ್ತು ಒಣ ಬೇಸಾಯದ ಜಮೀನುಗಳಿಗೆ 1894ರ ಭೂಸ್ವಾಧೀನ ಕಾಯ್ದೆಯಡಿ ಭೂಸ್ವಾಧೀನ ಪ್ರಕ್ರಿಯೆಯನ್ನು ಪ್ರಾರಂಭಿಸಿದ ಪ್ರಕರಣಗಳಲ್ಲಿ ಐತೀರ್ಪು ರಚನೆ ಸಂದರ್ಭದಲ್ಲಿ ಅಂದರೆ ದಿ: 01.01.2014 ರಿಂದ 2013ರ ಹೊಸ ಭೂಸ್ವಾಧೀನ ಕಾಯ್ದೆ ಜಾರಿಗೆ ಬಂದಿದ್ದರಿಂದ ಸದರಿ ಕಾಯ್ದೆಯಂತೆ ಪರಿಹಾರ ಧನದ ಐತೀರ್ಪು ರಚನೆ ಮಾಡಿ ಪರಿಹಾರಧನದ ಹಂಚಿಕೆ ಮಾಡಲಾಗಿದೆ.<br><br>ಮುಂದುವರೆದಂತೆ, 2013ರ ಭೂಸ್ವಾಧೀನ ಕಾಯ್ದೆಯಡಿ ಭೂಸ್ವಾಧೀನ ಪ್ರಕ್ರಿಯೆಯನ್ನು ಪ್ರಾರಂಭಿಸಿ ಅಂತಿಮ ಅಧಿಸೂಚನೆ ಹೊರಡಿಸಿದ ಪ್ರಕರಣಗಳಲ್ಲಿ ಹೊಸ ಭೂಸ್ವಾಧೀನ ಕಾಯ್ದೆಯನ್ವಯ ಪರಿಹಾರ ಧನದ ಐತೀರ್ಪನ್ನು ರಚಿಸಿ ಪರಿಹಾರ ಧನವನ್ನು ಹಂಚಿಕ ಮಾಡಲಾಗುತ್ತಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿದ ಸಮಿತಿಯು ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |
| 6 | 4966<br>ಚು.ಗು.ಪ್ರ. 521<br>ಶ್ರೀ ಪಟೇಲ್ ಶಿವರಾಂ<br>ವಿಪನದಿ:02.07.2014 | ಹಾಸನ ಜಿಲ್ಲೆಯ ಸಾಲಗಾಮೆ ಹೋಬಳಿ ವ್ಯಾಪ್ತಿಗೆ ಬರುವ ಆರು ಗ್ರಾಮಗಳ 504 ಕುಟುಂಬಗಳಿಗೆ ಸಾಗುವಳಿ ಪತ್ರ ನೀಡಲಾಗಿದ್ದು, | ಹಾಸನ ತಾಲ್ಲೂಕಿನ ಸಾಲಗಾವೆ ಹೋಬಳಿಯಲ್ಲಿ ಫಾರಂ 50 ಮತ್ತು 53ರಲ್ಲಿ ಅರ್ಜಿ ಹಾಕಿರುವವರಿಗೆ 3616 ರೈತರಿಗೆ ಮತ್ತೆ 4356 ಎಕರೆ ಜಮೀನಿಗೆ ಸಾಗುವಳಿ ಪತ್ರವನ್ನು | ದಿನಾಂಕ: 23.10.2018ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ಹಾಸನ ತಾಲ್ಲೂಕು ಸಾಲಗಾಮೆ ಹೋಬಳಿ ವ್ಯಾಪ್ತಿಯ ಗ್ರಾಮಗಳಾದ ಸೀಗೆಗುಡ್ಡ ಕಾವಲ್, ರಾಮದೇವರ ಹಳ್ಳ ಕಾವಲ್, ಐದಳ್ಳ ಕಾವಲ್, ಹರುವನಹಳ್ಳಿ, ರಾಮದೇವಪುರ ಮತ್ತು ಚೌಡೇನಹಳ್ಳಿ ಗ್ರಾಮಗಳಲ್ಲಿನ |

| | | | | |
|---|---|---|---|---|
| | | 2006ನೇ ಇಸವಿಯಲ್ಲಿ 72 ಎಕರೆಗೆ ಖಾಯಂ ಚೀಟಿಯನ್ನು ನೀಡಲಾಗಿರುತ್ತಾದರೂ, ದಿನಾಂಕ: 11.05.2014ರಲ್ಲಿ ಸರ್ವೆ ಇಲಾಖೆ ಮತ್ತು ಅರಣ್ಯ ಇಲಾಖೆಯವರು ಭೂಮಿ ತಮ್ಮದೆಂದು ಹೇಳಿ ರೈತರನ್ನು ಒಕ್ಕಲೆಬ್ಬಿಸುತ್ತಿರುವುದನ್ನು ತಡೆಯುವ ಕುರಿತು. | ಕೊಟ್ಟಿದ್ದೇವೆ. ಫಾರಂ 50 ಮತ್ತು 53ರಡಿಯಲ್ಲಿ ನಾವು ಕೊಡಬೇಕಾದರೆ 15 ವರ್ಷಗಳ ಕಾಲ ಬೇರೆ ಯಾರಿಗೂ ಪರಭಾರೆ ಮಾಡಕೂಡದು. ಪಿ.ಟಿ.ಸಿ.ಎಲ್ ಆಕ್ಟ್ ಪ್ರಕಾರ ಯಾವುದೇ ದಲಿತರು ಕೂಡ ಸರ್ಕಾರದ ಅನುಮತಿಯಿಲ್ಲದೆ 15 ವರ್ಷಗಳು ಆದ ಮೇಲೆ ಕೂಡ ಕೊಡಬಾರದು ಎನ್ನುವ ಷರತ್ತು ಹಾಕಿ ಕೊಡಲಾಗಿರುತ್ತದೆ. ಫಾರಂ ನಮೂನೆ 50–53ರಲ್ಲಿ ಇವರೆಲ್ಲರೂ ಕೂಡ ಸಾಲಗಾವೆ ಹೋಬಳಿಯಲ್ಲಿ ಸಾಗುವಳಿ ಮಾಡುತ್ತಿದ್ದಾರೆ, ಕ್ರಮಬದ್ಧವಾಗಿ ಅವರಿಗೆ ಕೊಟ್ಟಿದ್ದಾರೆ. ಅದನ್ನು ಬಿಟ್ಟು ಬೇರೆ 504 ಕುಟುಂಬದವರು ಬೇರೆ ಒಂದೆರಡು ಎಕರೆ ಜಮೀನನ್ನು ಸಾಗುವಳಿ ಮಾಡುತ್ತಿದ್ದಾರೆ. ಸ್ವಲ್ಪ ಅರಣ್ಯ ಪ್ರದೇಶ ಕೂಡ ಸೇರಿದೆ. ಕಂದಾಯ ಇಲಾಖೆಗೆ ಸಂಬಂಧಪಟ್ಟ ಅರಣ್ಯ ಪ್ರದೇಶವೂ ಸೇರಿದೆ. ಅವರಿಗೆ ಪಹಣಿ ಸೇರಿದಂತೆ ಎಲ್ಲವನ್ನೂ ಕೊಟ್ಟಿದ್ದಾರೆ. ಆದರೂ ಕೂಡ ಒಕ್ಕಲೆಬ್ಬಿಸುತ್ತಿದ್ದಾರೆ. ಇದರ ಬಗ್ಗೆ ಪರಿಶೀಲನೆ ಮಾಡಿ ಯಾವ ರೀತಿ ಮಾಡಬಹುದು ಎಂದು ನೋಡುತ್ತೇನೆ ಎಂದು ಮಾನ್ಯ ಕಂದಾಯ ಸಚಿವರು ತಿಳಿಸಿದರು. | ರೈತರುಗಳಿಗೆ ಈ ಹಿಂದೆ ದರ್ಖಾಸ್ತು ಮೂಲಕ ಮತ್ತು ಅನಧಿಕೃತ ಸಾಗುವಳಿ ಸಕ್ರಮೀಕರಣ ಆದೇಶದಂತೆ ಜಮೀನು ಮಂಜೂರಿಯಂತೆ ಮಂಜೂರಿದಾರರು ಜಮೀನಿನ ಸ್ವಾಧೀನಾನುಭವವನ್ನು ಹೊಂದಿರುತ್ತಾರೆ. ಸದರಿಯವರ ಸ್ವಾಧೀನಕ್ಕೆ ಯಾವುದೇ ಧಕ್ಕೆಯಾಗಿರುವುದಿಲ್ಲ. ಅಲ್ಲದೆ ಮಂಜೂರಿದಾರರನ್ನು ಕಂದಾಯ ಇಲಾಖಾ ವತಿಯಿಂದಾಗಲಿ ಅಥವಾ ಅರಣ್ಯ ಇಲಾಖಾ ವತಿಯಿಂದಾಗಲಿ ರೈತರನ್ನು ಒಕ್ಕಲೆಬ್ಬಿಸುವ ಕ್ರಮವನ್ನು ಜರುಗಿಸಿರುವುದಿಲ್ಲವೆಂದು ಜಿಲ್ಲಾಧಿಕಾರಿಗಳು ತಿಳಿಸಿರುತ್ತಾರೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿದ ಸಮಿತಿಯು ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |

| | | | | |
|---|---|---|---|---|
| 7 | 5123<br>ಚು.ಗು.ಪ್ರ: 105<br>ಶ್ರೀ ಮರಿತಿಬ್ಬೇಗೌಡ<br>ವಿಪನದಿ:9.07.2014 | ಮಾನ್ಯ ಶಾಸಕರು, ಸಚಿವರು, ಲೋಕಾಸಭಾ ಸದಸ್ಯರುಗಳಿಗೆ ಅವರುಗಳ ಕ್ಷೇತ್ರಗಳಲ್ಲಿ ಕಛೇರಿಗಳನ್ನು ತೆರೆಯಲು ಅನುಮತಿ ನೀಡುವ ಕುರಿತು. | ಮಾನ್ಯ ಶಾಸಕರು, ಸಚಿವರು, ಲೋಕಸಭಾ ಸದಸ್ಯರುಗಳಿಗೆ ಅವರುಗಳ ಕ್ಷೇತ್ರಗಳಲ್ಲಿ ಕೋರಿಕೆಯಂತೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯಿಂದ ಹೊರಡಿಸಿರುವ ಸರ್ಕಾರದ ಆದೇಶದ ಸಂಖ್ಯೆ:ಸಿಆಸುಇ 153 ಶಿವಾನೀ 93 ದಿನಾಂಕ: 26.06.1993 ಮತ್ತು ಸರ್ಕಾರದ ಅಧಿಕೃತ ಜ್ಞಾಪನಾ ಪತ್ರ ಸಂಖ್ಯೆ: ಸಿಆಸುಇ 90 ಶಿಸನೇ 96 ದಿನಾಂಕ: 28.11.1996ರನ್ವಯ ಕಛೇರಿಗಳನ್ನು ತೆರೆಯಲು ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಮಾನ್ಯ ಕಂದಾಯ ಸಚಿವರು ತಿಳಿಸಿದರು. | ದಿನಾಂಕ: 23.10.2018ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ,<br>**ಮಾನ್ಯ ಲೋಕಸಭಾ ಹಾಗೂ ಮಾನ್ಯ ರಾಜ್ಯಸಭಾ ಸದಸ್ಯರು:**<br>ಮಾನ್ಯ ಸದಸ್ಯರುಗಳ ಕ್ಷೇತ್ರಗಳ ವ್ಯಾಪ್ತಿಯ ಜಿಲ್ಲಾ ಕೇಂದ್ರ ಸ್ಥಾನದಲ್ಲಿ ಸರ್ಕಾರಿ ಕಟ್ಟಡಗಳಲ್ಲಿ ಒಂದು ಕೊಠಡಿಯನ್ನು ಮಾನ್ಯ ಸಂಸದರಿಗೆ ಕಚೇರಿಯನ್ನಾಗಿ ನೀಡಲು ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 153 ಶಿವಾನೀ 93, ದಿ: 26.6.1993ರಲ್ಲಿ ಜಿಲ್ಲಾಧಿಕಾರಿಗಳಿಗೆ ಸೂಚಿಸಲಾಗಿದೆ.<br><br>ಮಾನ್ಯ ವಿಧಾನಸಭಾ ಸದಸ್ಯರು: ಮಾನ್ಯ ಸದಸ್ಯರುಗಳಿಗೆ ತಾಲ್ಲೂಕು ಪಂಚಾಯತ್ ಕಚೇರಿ ಅಥವಾ ತಾಲ್ಲೂಕು ಮುಖ್ಯ ಸ್ಥಳದಲ್ಲಿರುವ ಜಿಲ್ಲಾಧಿಕಾರಿಗಳಿಂದ ಗುರುತಿಸಲ್ಪಡುವ ಸರ್ಕಾರಿ ಕಟ್ಟಡಗಳಲ್ಲಿ ಒಂದು ಕೊಠಡಿಯನ್ನು ಒದಗಿಸಲು ಅಧಿಕೃತ ಜ್ಞಾಪನ ಪತ್ರ ಸಂಖ್ಯೆ: ಸಿಆಸುಇ 90 ಶಿಸನೇ 96, ದಿ: 28.11.1996ರಲ್ಲಿ ಜಿಲ್ಲಾಧಿಕಾರಿಗಳಿಗೆ ಸೂಚಿಸಲಾಗಿದೆ.<br><br>**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು :**<br>ಮಾನ್ಯ ವಿಧಾನ ಸಭಾ ಸದಸ್ಯರುಗಳಿಗೆ ನೀಡುತ್ತಿರುವ ರೀತಿಯಲ್ಲಿಯೇ ವಿಧಾನ ಪರಿಷತ್ ಸದಸ್ಯರಿಗೂ ಸಹ ತಾಲ್ಲೂಕು ಕಚೇರಿಯನ್ನು ಹೊರತುಪಡಿಸಿ ಅವರ ಕ್ಷೇತ್ರ ವ್ಯಾಪ್ತಿಯಲ್ಲಿನ ಯಾವುದಾದರೂ ಸರ್ಕಾರಿ ಕಚೇರಿ ಕಟ್ಟಡದಲ್ಲಿ ಸ್ಥಳಾವಕಾಶವನ್ನು ಒದಗಿಸಬೇಕೆಂದು ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ: ಸಿಆಸುಇ 48 ಶಿಸನೇ 1998, ದಿ: 2.11.1998ರಲ್ಲಿ ಜಿಲ್ಲಾಧಿಕಾರಿಗಳಿಗೆ ಸೂಚಿಸಲಾಗಿದೆ.<br><br>ಸದರಿ ಆದೇಶ ಹಾಗೂ ಅಧಿಕೃತ ಜ್ಞಾಪನಗಳಲ್ಲಿನ ಸೂಚನೆಯಂತೆ ಅವಶ್ಯಕ ಕ್ರಮಗಳನ್ನು ಆಯಾಯ |

| | | | | |
|---|---|---|---|---|
| | | | | ಜಿಲ್ಲಾಧಿಕಾರಿಗಳು ನಿರ್ವಹಿಸುತ್ತಿರುತ್ತಾರೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿದ ಸಮಿತಿಯು ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |
| 8 | 4973<br>ಚು.ಗು.ಪ್ರ: 139/2015<br>ಶ್ರೀ ಅಶ್ವತ್ ನಾರಾಯಣ<br>ವಿಪನದಿ: 04.02.2015 | ಕೆಂಪೇಗೌಡ ಜನಿಸಿದ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿ ತಾಲ್ಲೂಕಿನಲ್ಲಿರುವ ಆವತಿ ಗ್ರಾಮದ ಆವತಿ ಬೆಟ್ಟದಲ್ಲಿ ವೈದ್ಯಕೀಯ ಕಾಲೇಜು ಕಟ್ಟಲು ಅನುಮತಿ ನೀಡಬಾರದೆನ್ನುವ ಬಗ್ಗೆ. | ಈ ವಿಚಾರ ಇನ್ನೂ ಪರಿಶೀಲನೆಯ ಹಂತದಲ್ಲಿದೆ. ಈ ಬಗ್ಗೆ ವಿಚಾರ ಮಾಡಿ ಮುಂದಿನ ಕ್ರಮ ಕೈಗೊಳ್ಳಲಾಗು ವುದೆಂದು ಮಾನ್ಯ ಕಂದಾಯ ಸಚಿವರು ತಿಳಿಸಿರುತ್ತಾರೆ. | ದಿನಾಂಕ: 23.10.2018ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೇವನಹಳ್ಳಿ ತಾಲ್ಲೂಕು, ಕಸಬಾ ಹೋಬಳಿ, ಆವತಿ ಗ್ರಾಮದ ಸ.ನಂ. 211ರಲ್ಲಿ 44–07 ಎಕರೆ ಜಮೀನನ್ನು ಶ್ರೀ ರೇವಣಸಿದ್ದೇಶ್ವರ ಎಜುಕೇಷನ್ ಟ್ರಸ್ಟ್‌ರವರು 99 ವರ್ಷಗಳ ಅವಧಿಗೆ ಭೋಗ್ಯ/ಗುತ್ತಿಗೆಗೆ ಮಂಜೂರು ಮಾಡಲು ಕೋರಿ ಸರ್ಕಾರಕ್ಕೆ ಅರ್ಜಿ ಸಲ್ಲಿಸಿರುತ್ತಾರೆ.<br><br>ತಹಶೀಲ್ದಾರ್, ದೇವನಹಳ್ಳಿ ತಾಲ್ಲೂಕು ಮತ್ತು ಉಪವಿಭಾಗಾಧಿಕಾರಿ, ದೊಡ್ಡಬಳ್ಳಾಪುರ ಉಪ ವಿಭಾಗರವರ ವರದಿಗಳಂತೆ ಈ ಭೂಮಿಯ ಪುರಾತನ ಇತಿಹಾಸವುಳ್ಳ ಪ್ರದೇಶವಾಗಿದ್ದು, ಈ ಜಮೀನಿನಲ್ಲಿ ವೀರಕೆಂಪಮ್ಮ ದೇಗುಲ, ಶ್ರೀ ಕನಕಲಾಂಬ ದೇವಸ್ಥಾನ, ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನ ಹಾಗೂ ಶ್ರೀ ದೊಡ್ಡಮ್ಮದೇವಿ ದೇವಸ್ಥಾನ ಸಹ ಇದ್ದು, ಪ್ರತಿ ವರ್ಷವು ಜಾತ್ರೆ ನಡೆಯುತ್ತಿರುತ್ತದೆ ಹಾಗೂ ಬೆಂಗಳೂರು ನಿರ್ಮಾಣಕರ್ತರಾದ ನಾಡಪ್ರಭು ಶ್ರೀ ಕೆಂಪೇಗೌಡರ ಜನ್ಮಸ್ಥಳವು ಆಗಿರುತ್ತೆಂದು ಸ್ಥಳೀಯರ ನಂಬಿಕೆಯಾಗಿರುತ್ತದೆ.<br><br>ಈ ಜಮೀನನ್ನು ಸದರಿ ಸಂಸ್ಥೆಗೆ ಗುತ್ತಿಗೆಗೆ ನೀಡುವ ಬಗ್ಗೆ ಸ್ಥಳೀಯ ಗ್ರಾಮಸ್ಥರ ತಕರಾರು ಹಾಗೂ ಭಾರತೀಯ ಪುರಾತತ್ವ ಸರ್ವೇಕ್ಷಣಾ, ಬೆಂಗಳೂರು ವಲಯ ಹಾಗೂ ಹಾಗೂ ಪ್ರಾಚ್ಯವಸ್ತು, ಸಂಗ್ರಹಾಲಯಗಳು ಮತ್ತು ಪರಂಪರಾ |

| | | | | |
|---|---|---|---|---|
| | | | | ಇಲಾಖೆರವರು ನೀಡಿರುವ ಅಭಿಪ್ರಾಯದಂತೆ ಸದರಿ ಸಂಸ್ಥೆಗೆ ಗುತ್ತಿಗೆಗೆ ನೀಡುವುದು ಸಮಂಜಸವಾಗಿಲ್ಲವೆಂದು ಅಭಿಪ್ರಾಯ ನೀಡುತ್ತಾ ಪ್ರಸ್ತಾಪಿತ ಜಮೀನನ್ನು ಪ್ರಾಚ್ಯವಸ್ತು, ಸಂಗ್ರಹಾಲಯಗಳು ಮತ್ತು ಪರಂಪರಾ ಇಲಾಖೆಗೆ ಹಸ್ತಾಂತರಿಸುವ ಬಗ್ಗೆ ಪರ್ಯಾಲೋಚಿಸಬಹುದಾಗಿದೆ ಎಂದು ಪ್ರಾದೇಶಿಕ ಆಯುಕ್ತರು, ಬೆಂಗಳೂರು ವಿಭಾಗರವರ ಪತ್ರ ಸಂ: ಎಲ್ಎನ್ಡಿಸಿಆರ್ 36/14–15, ದಿ: 29.10.2015ರಂದು ಸರ್ಕಾರಕ್ಕೆ ವರದಿ ಸಲ್ಲಿಸಿರುತ್ತಾರೆ.<br><br>ಅದರಂತೆ, ಸರ್ಕಾರದ ಪತ್ರ ಸಂ. ಆರ್.ಡಿ. 431 ಎಲ್‌ಜಿಬಿ 2015, ದಿ: 24.5.1017ರಂತೆ ಪ್ರಾದೇಶಿಕ ಆಯುಕ್ತರು, ಬೆಂಗಳೂರು ವಿಭಾಗರವರ ಶಿಫಾರಸ್ಸಿನಂತೆ ಈ ಜಮೀನನ್ನು ಪುರಾತತ್ವ ಇಲಾಖೆಗೆ ಅಥವಾ ಪ್ರಾಚ್ಯವಸ್ತು ಸಂಗ್ರಹಾಲಯಗಳು ಮತ್ತು ಪರಂಪರಾ ಇಲಾಖೆಗೆ ಹಸ್ತಾಂತರಿಸುವ ಕುರಿತು ಪರಿಶೀಲಿಸಿ, ಅಗತ್ಯವಿದ್ದಲ್ಲಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಜಿಲ್ಲಾಧಿಕಾರಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇವರಿಗೆ ನಿರ್ದೇಶಿಸಲಾಗಿದ್ದು, ಶ್ರೀ ರೇವಣಸಿದ್ದೇಶ್ವರ ಎಜುಕೇಷನ್ ಟ್ರಸ್ಟ್‌ರವರಿಗೆ ಈ ಜಮೀನನ್ನು ಮಂಜೂರು ಮಾಡಿರುವುದಿಲ್ಲವೆಂಬ ಅಂಶವನ್ನು ಸಲ್ಲಿಸಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸಮಿತಿಯು ಭರವಸೆಯನ್ನು ಮುಕ್ತಾಯಗೊಳಿಸಿತು. |
| 9 | 4974<br>ಚು.ರ.ಪ್ರ: 129/2015<br>ಶ್ರೀ ಟಿ.ಎ. ಶರವಣ<br>ವಿಪನದಿ: 04.02.2015 | ಲಗ್ಗೆರೆ ಸರ್ವೆ ನಂ.7/1ಎ ರಲ್ಲಿನ ವಿಧಾನಸೌಧ ಬಡಾವಣೆಯ ನಿವೇಶನಗಳ ಕಾನೂನು ಬಾಹಿರ ನೋಂದಣಿಗಳನ್ನು | ನಕಲಿ ದಾನ ಪತ್ರಗಳನ್ನು ರದ್ದುಪಡಿಸುವಂತೆ ಕೋರಿ ವಿಧಾನಸಭೆಯ ಅರ್ಜಿಗಳ ಸಮಿತಿಗೆ ಮನವಿ ಸಲ್ಲಿಸಿದ್ದು, ಸದರಿ ಮನವಿಯ ಕುರಿತು ನಿಯಮಾನುಸಾರ ಪರಿಶೀಲಿಸಿ | ದಿನಾಂಕ: 23.10.2018ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ನೋಂದಣಿ ಮಹಾಪರಿವೀಕ್ಷಕರು ಹಾಗೂ ಮುದ್ರಾಂಕಗಳ ಆಯುಕ್ತರು ದಿ: 27.6.2015ರಂದು ಪ್ರಕರಣಕ್ಕೆ ಸಂಬಂಧಿಸಿದವರ ವಿರುದ್ಧ ನೋಂದಣಿ ಕಾಯ್ದೆ, 1908 ಕಲಂ 82 ಮತ್ತು 83ರನ್ವಯ ಕ್ರಮ ಕೈಗೊಳ್ಳುವಂತೆ |

| | | | | |
|---|---|---|---|---|
| | | ರದ್ದುಪಡಿಸುವಂತೆ ಕೋರಿ ಬಂದಿರುವ ಮನವಿಗಳು ಹಾಗೂ ಈ ಬಗ್ಗೆ ಕಂದಾಯ ಇಲಾಖೆ ಕೈಗೊಂಡಿರುವ ಕ್ರಮಗಳ ಕುರಿತು. | ಕ್ರಮ ಜರುಗಿಸಲಾಗುವುದು ಎಂದು ಮಾನ್ಯ ಕಂದಾಯ ಸಚಿವರು ತಿಳಿಸಿರುತ್ತಾರೆ. | ಉಪ ನೋಂದಣಾಧಿಕಾರಿ, ನಾಗರಭಾವಿ ರವರಿಗೆ ಸೂಚಿಸಿದ ಮೇರೆಗೆ ಉಪ ನೋಂದಣಾಧಿಕಾರಿಗಳು, ಕಾಮಕ್ಷಿಪಾಳ್ಯ ಪೊಲೀಸ್ ಠಾಣೆಯಲ್ಲಿ ದಿವಂಗತ ದೇವರಾಜ್‌ರವರ ಪತ್ನಿ ಎಂ.ಜಿ ಹೇಮಾವತಿ ಹಾಗೂ ಮಕ್ಕಳಾದ 1) ಡಿ. ಮೋಹನ್, 2) ಡಿ. ಹಂಸ, 3) ಡಿ.ಬಿಂದುರವರ ವಿರುದ್ಧ ಕ್ರಿಮಿನಲ್ ದೂರು ದಾಖಲಿಸಿದ್ದಾರೆ. ಸದರಿ ಪ್ರಕರಣಕ್ಕೆ ಸಂಬಂಧಿಸದಿಂತೆ, ಕಾಮಾಕ್ಷಿಪಾಳ್ಯ ಪೊಲೀಸ್ ಠಾಣೆಯಲ್ಲಿ ತನಿಖೆ ನಡೆಸಿ, ಪ್ರಕರಣದ ಆರೋಪಿತರ ವಿರುದ್ಧ ನ್ಯಾಯಾಲಯಕ್ಕೆ ದೋಷಾರೋಪಣೆ ಪಟ್ಟಿ ಸಲ್ಲಿಸಿದ್ದು, ಮಾನ್ಯ ಎ.ಸಿ.ಎಂ.ಎಂ. ನ್ಯಾಯಾಲಯದಲ್ಲಿ ಸಿ.ಸಿ.ಸಂ. 13085/2016ರಲ್ಲಿ ವಿಚಾರಣೆ ನಡೆದು ದಿ: 09.08.2017ರಂದು ಪ್ರಕರಣವನ್ನು ಮುಕ್ತಾಯ ವಾಗಿರುತ್ತದೆ.<br><br>ನಾಗರಭಾವಿ ಉಪ ನೋಂದಣಿ ಕಚೇರಿಯಲ್ಲಿ ನಿವೇಶನ ಸಂಖ್ಯೆ: 18ನ್ನು ನಕಲಿ ಆಧಾರದ ಮೇರೆಗೆ ದಿ: 27.09.2014ರಂದು ನೋಂದಾಯಿಸಿದ ದಸ್ತಾವೇಜು ಸಂಖ್ಯೆ: 5787/14–15ನ್ನು ಸದರಿ ದಸ್ತಾವೇಜಿನ ಪಕ್ಷಕಾರರು ದಿ: 17.8.2017ರಂದು ದಸ್ತಾವೇಜು ಸಂಖ್ಯೆ: 1104/17–18ರನ್ವಯ ರದ್ಧತಿ ಪತ್ರವನ್ನು ನೋಂದಾಯಿಸಿರುತ್ತಾರೆ. ಸದರಿ ಉಪ ನೋಂದಣಿ ಕಚೇರಿಯಲ್ಲಿ ನಿವೇಶನ ಸಂಖ್ಯೆ: 73ನ್ನು ನಕಲಿ ದಾಖಲೆಗಳ ಆಧಾರದ ಮೇರೆಗೆ ದಿ: 27.09.2014ರಂದು ನೋಂದಾಯಿಸಿದ ದಸ್ತಾವೇಜು ಸಂಖ್ಯೆ: 5790/14–15ನ್ನು ಸದರಿ ದಸ್ತಾವೇಜಿನ ಪಕ್ಷಕಾರರು ದಿ: 17.8.2017ರಂದು ದಸ್ತಾವೇಜು ಸಂಖ್ಯೆ: 1103.17–18ರನ್ವಯ ರದ್ಧತಿ ಪತ್ರವನ್ನು ನೋಂದಾಯಿಸಿರುತ್ತಾರೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿದ ಸಮಿತಿಯು ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |

| | | | | |
|---|---|---|---|---|
| 10 | 5138<br>ಚು.ರ.ಪ್ರ. 2520<br>ಶ್ರೀ ಅಮರನಾಥ ಪಾಟೀಲ್<br>ವಿಪನದಿ:18.12.2015 | ಕಲಬುರ್ಗಿ ತಾಲ್ಲೂಕಿನಲ್ಲಿ ಆಗಸ್ಟ್ ಮತ್ತು ಸೆಪ್ಟಂಬರ್ 2014ರಲ್ಲಿ ಅತಿವೃಷ್ಟಿಯಾಗಿ ಗಂಡೋರಿ ನಾಲಾ ಅಣೆಕಟ್ಟಿನಿಂದ ಹೆಚ್ಚಿನ ಪ್ರಮಾಣದ ನೀರು ಬಿಟ್ಟ ಪರಿಣಾಮ ಗಂಡೋರಿ ನಾಲಾದಲ್ಲಿ ಪ್ರವಾಹ ಉಂಟಾಗಿ ಹೊಲಗಳಿಗೆ ನೀರು ಹರಿದು ಫಲವತ್ತಾದ 2 ರಿಂದ 5 ಅಡಿ ಮಣ್ಣು ಕೊಚ್ಚಿ ಹೋಗಿದ್ದು, ಇದರಿಂದ ರೈತರ ಹೊಲಗಳಿಗೆ ಹಾನಿಯಾಗಿದ್ದು, ಹಾನಿಗೆ ಪರಿಹಾರ ನೀಡುವ ಬಗ್ಗೆ. | ರೈತರ ಹೊಲಗಳಿಗೆ ಆದ ಹಾನಿಯ ಬಗ್ಗೆ ಸಮೀಕ್ಷೆ ನಡೆಸಲಾಗಿದ್ದು, ಸಮೀಕ್ಷೆಯ ವರದಿಯ ಆಧಾರದ ಮೇಲೆ ಪರಿಹಾರ ನೀಡುವ ಬಗ್ಗೆ ಕ್ರಮ ಕೈಗೊಳ್ಳಲಾಗುವುದು ಎಂದು ಮಾನ್ಯ ಕಂದಾಯ ಸಚಿವರು ತಿಳಿಸಿದರು. | ದಿನಾಂಕ: 23.10.2018ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ಕಲಬುರ್ಗಿ ಜಿಲ್ಲೆಯಲ್ಲಿ 2014ರ ಆಗಸ್ಟ್ ಮತ್ತು ಸೆಪ್ಟೆಂಬರ್ ತಿಂಗಳಿನಲ್ಲಿ ಅತಿವೃಷ್ಟಿಯಿಂದ ಗಂಡೂರಿ ನಾಲಾ ಅಣೆಕಟ್ಟಿನಿಂದ ಹೆಚ್ಚಿನ ಪ್ರಮಾಣದ ನೀರು ಬಿಟ್ಟ ಪರಿಣಾಮ ಒಟ್ಟು 1072 ರೈತರ 2728.68 ಹೆಕ್ಟೇರ್ ಜಮೀನಿನಲ್ಲಿ ಮಣ್ಣು ಕೊಚ್ಚಿ ಹೋಗಿದ್ದು, ಈ ಸಂಬಂಧ ರೂ. 693.12 ಲಕ್ಷಗಳನ್ನು ಬಿಡುಗಡೆ ಮಾಡುವಂತೆ ದಿ: 10.10.2018ರ ಪತ್ರದಲ್ಲಿ ಕಲಬುರಗಿ ಜಿಲ್ಲಾಧಿಕಾರಿಗಳು ಕೋರಿರುತ್ತಾರೆ.<br><br>ಜಿಲ್ಲಾದಿಕಾರಿಗಳ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿ 759 ಸಣ್ಣ ಮತ್ತು ಅತಿ ಸಣ್ಣ ರೈತರಿಗೆ 318.025 ಲಕ್ಷ ಹಾಗೂ 313 ದೊಡ್ಡ ರೈತರಿಗೆ ಅಂದು ಚಾಲ್ತಿಯಲ್ಲಿದ್ದ ಮಾರ್ಗಸೂಚಿಯ ಪ್ರಕಾರ 2 ಹೆಕ್ಟೇರ್‌ಗೆ ಮಿತಿಗೊಳಿಸಿ156.50 ಕೋಟಿ ಸೇರಿ ಒಟ್ಟು ರೂ. 474.52 ಲಕ್ಷರಿಹಾರ ವಿತರಿಸಬೇಕಾಗಿರುತ್ತದೆ. ಜಿಲ್ಲಾಧಿಕಾರಿಗಳ ಪಿ.ಡಿ. ಖಾತೆಯಲ್ಲಿ ಸಾಕಷ್ಟು ಅನುಧಾನ ಲಭ್ಯವಿದ್ದು ಜಿಲ್ಲಾಧಿಕಾರಿಗಳೇ ಪರಿಹಾರ ವಿತರಿಸಬಹುದಾಗಿರುತ್ತದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸಮಿತಿಯು ಭರವಸೆಯನ್ನು ಮುಕ್ತಾಯಗೊಳಿಸಿತು. |
| 11 | 5139<br>ಚು.ರ.ಪ್ರ. 2538<br>ಶ್ರೀ ಕೋಟ ಶ್ರೀನಿವಾಸ ಪೂಜಾರಿ<br>ವಿಪನದಿ:18.11.2015 | ಮೂಲಗೇಣಿ ಮತ್ತು ಒಳ ಮೂಲಗೇಣಿದಾರರಿಗೆ ಮಾಲಿಕತ್ವ ಪ್ರಭಾರ ಮಾಡುವ ವಿಧೇಯಕ 2011ರಲ್ಲಿನ ಅಂಶಗಳನ್ನು ಅನುಷ್ಠಾನಕ್ಕೆ ತರುವ ಬಗ್ಗೆ | ಸರ್ಕಾರವು ಮೂಲಗೇಣಿ ಮತ್ತು ಒಳ ಮೂಲಗೇಣಿ ಮಾಲೀಕತ್ವ ಪ್ರಭಾರ ಮಾಡುವ ವಿಧೇಯಕ 2011ನ್ನು ಹೊರಡಿಸಲಾಗಿದೆ. ಈ ಅಂಶಗಳನ್ನು ಅನುಷ್ಠಾನಕ್ಕೆ ತರಲು ನಿಮಯಗಳ ರಚನೆಯು ಸರ್ಕಾರದ | ದಿನಾಂಕ: 23.10.2018ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ಕೃಷಿಯೇತರ ಭೂಮಿಗಳ, ಮುಖ್ಯವಾಗಿ ಮನೆ ನಿವೇಶನಗಳ ಸಂಬಂಧದಲ್ಲಿ ಮೂಲಗೇಣಿ ಗುತ್ತಿಗೆಗಳ ಕೆಲವು ಬಗೆಗಳು ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಚಾಲ್ತಿಯಲ್ಲಿವೆ. ಅನೇಕ ಕಾರಣಗಳಿಂದ ಮೂಲಗೇಣಿದಾರರು ಅಥವಾ ಒಳಮೂಲಗೇಣಿದಾರರು ಆ |

| | | | | |
|---|---|---|---|---|
| | | | ಪರಿಶೀಲನೆಯಲ್ಲಿದೆ ಎಂದು ಮಾನ್ಯ ಕಂದಾಯ ಸಚಿವರು ತಿಳಿಸಿದರು. | ಹಿಡುವಳಿ ಸ್ವತ್ತನ್ನು ಪೂರ್ಣವಾಗಿ ಅನುಭವಿಸಲು ಸಾಧ್ಯವಾಗಿರಲಿಲ್ಲ. ಆದುದರಿಂದ, ಮೂಲಗೇಣಿ ಅಥವಾ ಒಳಮೂಲಗೇಣಿದಾರರಿಗೆ ಮಾಲೀಕತ್ವವನ್ನು ಪ್ರಧಾನ ಮಾಡಲು "ಕರ್ನಾಟಕ ಮೂಲಗೇಣಿ ಅಥವಾ ಒಳಮೂಲಗೇಣಿದಾರರಿಗೆ ಮಾಲೀಕತ್ವವನ್ನು ಪ್ರಧಾನ ಮಾಡುವ ಅಧಿನಿಯಮ, 2011"ಅನ್ನು ದಿ: 25.07.2012ರಂದು ಸರ್ಕಾರವು ರಾಜ್ಯ ಪತ್ರದಲ್ಲಿ ಪ್ರಕಟಿಸಿತ್ತು. ಈ ಅಧಿನಿಯಮದ ಉಪಬಂಧಗಳು ದಿ: 20.12.2012ರಿಂದ ಜಾರಿಗೆ ಬಂದಿರುತ್ತವೆ.<br><br>ಸದರಿ ಕಾಯ್ದೆಯನ್ನು ಅನುಷ್ಠಾನಗೊಳಿಸಲು ದಿ: 07.11.2016ರಂದು "ಕರ್ನಾಟಕ ಮೂಲಗೇಣಿ ಅಥವಾ ಒಳಮೂಲಗೇಣಿದಾರರಿಗೆ ಮಾಲೀಕತ್ವವನ್ನು ಪ್ರಧಾನ ಮಾಡುವ ನಿಯಮಗಳು, 2016ನ್ನು ಸರ್ಕಾರದ ಅಧಿಸೂಚನೆ ಸಂಖ್ಯೆ: ಆರ್‌ಡಿ 84 ಎಲ್‌ಆರ್.ಎಂ 2012, ದಿ: 07.11.2016ರಂದು ಕರ್ನಾಟಕ ರಾಜ್ಯ ಪತ್ರದಲ್ಲಿ ಅಧಿಕೃತವಾಗಿ ಪ್ರಕಟಿಸಿರುತ್ತದೆ. ಈ ಬಗ್ಗೆ ಜಿಲ್ಲಾಧಿಕಾರಿಗಳು, ದಕ್ಷಿಣ ಕನ್ನಡ ಜಿಲ್ಲೆ ಮತ್ತು ಉಡುಪಿ ಜಿಲ್ಲೆರವರಿಗೆ ಸೂಚನೆಗಳನ್ನು ಸಹ ನೀಡಿ ಸದರಿ ನಿಯಮಗಳನ್ನು ಅನುಷ್ಠಾನಗೊಳಿಸಲು ಕ್ರಮ ವಹಿಸಬೇಕೆಂದು ತಿಳಿಸಲಾಗಿತ್ತು.<br><br>ಪ್ರಸ್ತುತ ಮಾನ್ಯ ಉಚ್ಚ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ: 11158/66–2013 ಮತ್ತು 62434/2016ರಲ್ಲಿ ಕ್ರಮವಾಗಿ ದಿ: 14.12.2016ರಂದು ಮತ್ತು ದಿ: 15.12.2016ರಂದು Status-quo ಆದೇಶ ಹೊರಡಿಸಿರುತ್ತದೆ ಈ ಆದೇಶವನ್ನು ತೆರವುಗೊಳಿಸುವ ಬಗ್ಗೆ ಸರ್ಕಾರದಿಂದ, ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. |

| | | | | |
|---|---|---|---|---|
| 12 | 5966<br>ಚು.ಗು.ಪ್ರ:4552<br>ಶ್ರೀ ಐವನ್ ಡಿ' ಸೋಜಾ<br>ವಿಪನದಿ: 22.11.2017 | ಮೂಲಗೇಣಿದಾರರ ಕಾನೂನು ರಚಿಸಿ ಹಲವು ವರ್ಷಗಳಾದರೂ ಮೂಲಗೇಣಿದಾರರಿಗೆ ಮಾಲಿಕತ್ವದ ಹಕ್ಕುಗಳನ್ನು ನೀಡದಿರುವ ಬಗ್ಗೆ ಮತ್ತು ಮೂಲಗೇಣಿದಾರರ ಕಾನೂನು ಜಾರಿಗೆ ತರುವ ಬಗ್ಗೆ. | ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ದಾಖಲಾಗಿರುವ ಪ್ರಕರಣಗಳು ಇತ್ಯರ್ಥವಾಗಿ ಅಂತಿಮ ಆದೇಶವಾದ ನಂತರ ಮೂಲಗೇಣಿದಾರರ ಬೇಡಿಕೆಯನ್ನು ಈಡೇರಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಮಾನ್ಯ ಕಂದಾಯ ಸಚಿವರು ತಿಳಿಸಿದರು. | ಕರ್ನಾಟಕ ಮೂಲಗೇಣಿ ಅಥವಾ ಒಳಮೂಲಗೇಣಿದಾರರಿಗೆ ಮಾಲೀಕತ್ವವನ್ನು ಪ್ರಧಾನ ಮಾಡುವ ಅಧಿನಿಯಮ, 2011ಕ್ಕೆ ಸಂಬಂಧಿಸಿದಂತೆ, ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಶ್ರೀ ಕ್ಲಾರೆನ್ಸ್ ಫೈಸ್ ಹಾಗೂ ಇತರರು ಸದರಿ ಅಧಿನಿಯಮದ ಸಿಂಧುತ್ವವನ್ನು ಪ್ರಶ್ನಿಸಿ ರಿಟ್ ಅರ್ಜಿ ಸಂಖ್ಯೆ: 11158–11166/2013 (ಜಿಎಂ–ಆರ್‌ಇಎಸ್) ಅನ್ನು ಹಾಗೂ ಪೀಟರ್ ಜೆ.ಆರ್.ಪ್ರಭು ಇವರು ರಿಟ್ ಅರ್ಜಿ ಸಂಖ್ಯೆ: 62434/2016ನ್ನು ದಾಖಲಿಸಿರುತ್ತಾರೆ. ಸದರಿ ಪ್ರಕರಣಗಳಲ್ಲಿ ಮಾನ್ಯ ನ್ಯಾಯಾಲಯವು ದಿ: 15.12.2016ರಂದು ನೀಡಿರುವ ಮಧ್ಯಂತರ ತೀರ್ಪಿನಲ್ಲಿ "ಯಥಾಸ್ಥಿತಿಯನ್ನು ಕಾಪಾಡುವಂತೆ ಆದೇಶವನ್ನು ನೀಡಿರುತ್ತದೆ.<br>ಈ ಹಿನ್ನಲೆಯಲ್ಲಿ ಮಾನ್ಯ ನ್ಯಾಯಾಲಯದಲ್ಲಿ ದಾಖಲಾಗಿರುವ ಪ್ರಕರಣಗಳು ಇತ್ಯರ್ಥವಾದ ನಂತರ ಮೂಲಗೇಣಿದಾರರ ಬೇಡಿಕೆಯನ್ನು ಈಡೇರಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿದ ಸಮಿತಿಯು ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |
| 13 | 5140<br>ಚು.ಗು.ಪ್ರ. 2596<br>ಶ್ರೀ ಅಶ್ವತ್ ನಾರಾಯಣ<br>ವಿಪನದಿ:18.11.2015 | ರಾಜ್ಯದಲ್ಲಿ ಮುದ್ರಾಂಕ ಶುಲ್ಕವನ್ನು ಹೆಚ್ಚಿಸಿರುವ ಬಗ್ಗೆ | 2009ರಲ್ಲಿ ಮುದ್ರಾಂಕ ಶುಲ್ಕ ಶೇ.8ರಷ್ಟು ಇತ್ತು ಈಗ ಶೇ.5ರಷ್ಟಿದೆ. ನಂತರ ಶೇ.5ರಲ್ಲಿಯೂ variation ಮಾಡಿದ್ದೇವೆ ಅದರಲ್ಲೇನಾದರೂ ವ್ಯತ್ಯಾಸವಿದ್ದರೆ ಅದನ್ನು ಸರ್ಕಾರಕ್ಕೆ ತಿಳಿಸಿ ನೋಡೋಣ ಎಂದು ಮಾನ್ಯ ಸಭಾನಾಯಕರು ಕಂದಾಯ ಸಚಿವರ ಪರವಾಗಿ ತಿಳಿಸಿದರು. | ದಿನಾಂಕ: 23.10.2018ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ಪ್ರಸ್ತುತ ಕರ್ನಾಟಕ ಮುದ್ರಾಂಕ ಕಾಯ್ದೆ 1957ರನ್ವಯ ಕನ್ವೆಯೆನ್ಸ್ ದಸ್ತಾವೇಜುಗಳಿಗೆ ಶೇ.5%ರಷ್ಟು ಮುದ್ರಾಂಕ ಶುಲ್ಕ ಚಾಲ್ತಿಯಲ್ಲಿರುತ್ತದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿದ ಸಮಿತಿಯು ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |

| | | | | |
|---|---|---|---|---|
| 14 | 5142<br>ಚು.ರ.ಪ್ರ. 3318<br>ಶ್ರೀ ಎಸ್.ನಾಗರಾಜ್<br>(ಸಂದೇಶ್ ನಾಗರಾಜ್)<br>ವಿಪನದಿ:26.11.2015 | ಚಾಮರಾಜನಗರದಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರಿಂದ ನಿರ್ಮಿತವಾದ ಚಾಮರಾಜೇಶ್ವರ ದೇವಾಲಯಕ್ಕೆ ಸೇರಿದ 25 ಅಂಗಡಿಗಳನ್ನು ಕಡಿಮೆ ಬಾಡಿಗೆಗೆ ನೀಡಿದ್ದು, ಈ ಮಳಿಗೆಗಳನ್ನು ಆಧುನೀಕರಣಗೊಳಿಸಿ, ಹೆಚ್ಚು ಬಾಡಿಗೆ ವಿಧಿಸಿ, ಇದರಿಂದ ಬರುವ ಆದಾಯವನ್ನು ದೇವಾಲಯದ ಅಭಿವೃದ್ಧಿಗೆ ಬಳಸಲು ಕ್ರಮ ತೆಗೆದುಕೊಳ್ಳುವ ಬಗ್ಗೆ | ಈಗಾಗಲೇ 25 ಅಂಗಡಿಗಳನ್ನು ಹೆಚ್ಚಿನ ಬಾಡಿಗೆಗೆ ನೀಡುವ ಸಂಬಂಧ ಟೆಂಡರ್ ಕರೆಯಲಾಗಿದೆ. ಹಾಲಿ ಬಾಡಿಗೆದಾರರು ಟೆಂಡರ್‌ಗೆ ವಿರುದ್ಧವಾಗಿ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಡಬ್ಲ್ಯೂಪಿ ಸಂಖ್ಯೆ: 36840–36850/2013 ದಾಖಲಿಸಿದ್ದು, ಮಾನ್ಯ ನ್ಯಾಯಾಲಯವು ತಡೆಯಾಜ್ಞೆ ಆದೇಶ ನೀಡಿರುತ್ತದೆ. ಸದರಿ ತಡೆಯಾಜ್ಞೆಯನ್ನು ತೆರವುಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಮಾನ್ಯ ಅಬಕಾರಿ ಮತ್ತು ಮುಜರಾಯಿ ಸಚಿವರು ತಿಳಿಸಿದರು. | ದಿನಾಂಕ: 23.10.2018ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ಚಾಮರಾಜನಗರ ಜಿಲ್ಲೆ ಶ್ರೀ ಚಾಮರಾಜೇಶ್ವರ ದೇವಾಲಯವು, ಧಾರ್ಮಿಕ ದತ್ತಿ ಇಲಾಖಾ ವ್ಯಾಪ್ತಿಗೆ ಒಳಪಡುವ "ಬಿ" ಶ್ರೇಣಿಯ ಅಧಿಸೂಚಿತ ದೇವಸ್ಥಾನ ಹಾಗೂ ರಾಜ್ಯ ಪುರಾತತ್ವ ಸಂಗ್ರಹಾಲಯಗಳ ಮತ್ತು ಪರಂಪರೆ ಇಲಾಖೆಯ ಸಂರಕ್ಷಿತ ಸ್ಮಾರಕವಾಗಿರುತ್ತದೆ.<br><br>ರಾಜ್ಯ ಪುರಾತತ್ವ ಸಂಗ್ರಹಾಲಯಗಳ ಮತ್ತು ಪರಂಪರೆ ಇಲಾಖೆಯಿಂದ ಈ ದೇವಾಲಯದ ಜೀರ್ಣೋದ್ಧಾರ ಕಾಮಗಾರಿಗಾಗಿ ರೂ.2.10 ಕೋಟಿಗಳು ಬಿಡುಗಡೆಯಾಗಿದ್ದು, ದಿ: 05.01.2017ರಿಂದ ಕಾಮಗಾರಿಯನ್ನು ಪ್ರಾರಂಭಿಸಿದಾಗ ದೇವಸ್ಥಾನದ ಹಿಂಭಾಗದಲ್ಲಿ ವಿಗ್ರಹಗಳು ಹಾಗೂ ಗೋಡೆಯು ತುಂಬಾ ಶಿಥಲಗೊಂಡಿದ್ದು ಈ ಸ್ಥಳದಲ್ಲಿ ಅಂಗಡಿ ಮಳಿಗೆಗಳು ಇರುವುದರಿಂದ ದುರಸ್ಥಿ ಕಾರ್ಯವನ್ನು ಕೈಗೊಳ್ಳಲು ಸಾಧ್ಯವಾಗುವುದಿಲ್ಲ. ಆದ್ದರಿಂದ, ಶ್ರೀ ದೇವಾಲಯದ ಹಿಂಭಾಗದ ಗೋಡೆಗೆ ಹೊಂದಿಕೊಂಡಂತಿರುವ ವಾಣಿಜ್ಯ ಮಳಿಗೆಗಳನ್ನು ತೆರವು ಮಾಡಿಸಿಕೊಡಬೇಕೆಂದು ದಿ:09.03.2017ರ ಪತ್ರದಲ್ಲಿ ನಿರ್ದೇಶಕರು ಪುರಾತತ್ವ ಸಂಗ್ರಹಾಲಯಗಳ ಮತ್ತು ಪರಂಪರೆ ಇಲಾಖೆ, ಮೈಸೂರು ಇವರು ಕೋರಿದ್ದರು.<br><br>ತದನಂತರ ಭಕ್ತಾದಿಗಳಿಗೆ ದೇವಸ್ಥಾನಕ್ಕೆ ಪ್ರದಕ್ಷಿಣೆ ಹಾಕುವ ಅನುಕೂಲಕ್ಕಾಗಿ ಹಾಗೂ ಚಾಮರಾಜನಗರ ರಸ್ತೆಗಳನ್ನು ನಗರಸಭೆ ವತಿಯಿಂದ ಅಗಲೀಕರಣಗೊಳಿಸಿ ಅಭಿವೃದ್ಧಿಪಡಿಸುವ ಕಾರಣದಿಂದಾಗಿ ದಿ: 31.10.2017ರಂದು ಸದರಿ ದೇವಸ್ಥಾನಕ್ಕೆ ಬಾದ್ಯಪಟ್ಟಂತೆ ಇದ್ದ ಎಲ್ಲಾ ಅಂಗಡಿಗಳನ್ನು ತೆರವುಗೊಳಿಸಲಾಗಿರುತ್ತದೆ. ಆದರೆ |

| | | | | |
|---|---|---|---|---|
| | | | | ಕರ್ನಾಟಕ ಪ್ರಾಚೀನ ಮತ್ತು ಐತಿಹಾಸಿಕ ಸ್ಮಾರಕಗಳು ಮತ್ತು ಪುರಾತತ್ವ ಸ್ಥಳಗಳ ಮತ್ತು ಅವಶೇಷಗಳ ನಿಯಮಗಳು 1965ರ ನಿಯಮ 12ರನ್ವಯ ದೇವಾಲಯದ ಸುತ್ತಲೂ ಯಾವುದೇ ಕಟ್ಟಡಗಳನ್ನು ನಿರ್ಮಿಸಲು ಅವಕಾಶವಿಲ್ಲದಿರುವುದರಿಂದ ಸದರಿ ಸ್ಥಳದಲ್ಲಿ ಪುನ: ಮಳಿಗೆಗಳನ್ನು ನಿರ್ಮಿಸಲು ಸಾಧ್ಯವಾಗುವುದಿಲ್ಲ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿದ ಸಮಿತಿಯು ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |
| 15 | 4960<br>ಚು.ಗು.ಪ್ರ: 281<br>ಶ್ರೀಮತಿ ತಾರಾ ಅನುರಾಧ<br>ವಿಪನದಿ: 05.02.2015 | ಕಾವೇರಿ, ಕಪಿಲಾ, ಸ್ಪಟಿಕಾ ಸರೋವರಗಳ ತ್ರಿವೇಣಿ ಸಂಗಮದ ತಟದಲ್ಲಿರುವ ದಕ್ಷಿಣ ಕಾಶಿ ಎಂದೇ ಪ್ರಸಿದ್ಧಗೊಂಡಿರುವ ಗುಂಜಾ ನರಸಿಂಹಸ್ವಾಮಿ ದೇವಾಲಯದಲ್ಲಿ ಮೂಲಭೂತ ಸೌಕರ್ಯಗಳ ಹಾಗೂ ಶುಚಿತ್ವದ ಕೊರತೆ ಇರುವ ಬಗ್ಗೆ. | ಪ್ರತಿನಿತ್ಯ ಸ್ನಾನ ಮಾಡುವ ಭಕ್ತರಿಗಾಗಿ ಸ್ನಾನಗೃಹ, ಸುಸಜ್ಜಿತ ಶೌಚಾಲಯ, ಬಟ್ಟೆ ಬದಲಾಯಿಸುವ ಕೊಠಡಿಗಳ ನಿರ್ಮಾಣ ಮಾಡಲು ಪ್ರವಾಸೋದ್ಯಮ ಇಲಾಖೆಯಿಂದ ರೂ. 20.00 ಲಕ್ಷಗಳ ಅನುದಾನ ಮಂಜೂರಾಗಿದ್ದು,<br><br>ಕಾಮಗಾರಿ ಕೈಗಿತ್ತಿಕೊಳ್ಳಲು ಅಗತ್ಯ ಕ್ರಮವಹಿಸಲಾಗಿದೆ. ಅಲ್ಲದೆ, ಕಳೆದ 3 ವರ್ಷಗಳಲ್ಲಿ ದೇವಾಲಯದ ಅಭಿವೃದ್ಧಿ ಕಾಮಗಾರಿಗೆ ಮಂಜೂರಾಗಿರುವ ಅನುದಾನ ರೂ. 15.00 ಲಕ್ಷಗಳ ಪೈಕಿ ಮೂಲಭೂತ ಸೌಕರ್ಯಕ್ಕೆ ರೂ. 5.00 ಲಕ್ಷಗಳನ್ನು ಬಳಸಿಕೊಂಡು ಕಾಮಗಾರಿಯನ್ನು ಕೈಗೊಳ್ಳಲಾಗುತ್ತಿದೆ. ದೇವಾಲಯಕ್ಕೆ ಬಂದಿರುವವರಿಗೆ ಶುಚಿತ್ವವನ್ನು ಕಾಪಾಡುವುದಕ್ಕೆ | ದಿನಾಂಕ: 23.10.2018ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ಮೈಸೂರು ಜಿಲ್ಲೆ, ಟಿ.ನರಸೀಪುರ ಟೌನ್ ಶ್ರೀ ಗುಂಜಾಂ ನರಸಿಂಹಸ್ವಾಮಿ ದೇವಾಲಯಕ್ಕೆ ಬರುವ ಭಕ್ತಾದಿಗಳಿಗೆ ಮೂಲಭೂತ ಸೌಕರ್ಯ ಕಲ್ಪಿಸುವ ಸಲುವಾಗಿ ಪ್ರವಾಸೋದ್ಯಮ ಇಲಾಖೆಯಿಂದ ರೂ.20.00 ಲಕ್ಷ (ಇಪ್ಪತ್ತು ಲಕ್ಷ ಮಾತ್ರ) ವೆಚ್ಚದಲ್ಲಿ ಸುಸಜ್ಜಿತ ಶೌಚಾಲಯ ಮತ್ತು ಬಟ್ಟೆ ಬದಲಾಯಿಸುವ ಕೊಠಡಿ ನಿರ್ಮಾಣ ಕಾಮಗಾರಿ ಪ್ರಾರಂಭಿಸಲಾಗಿರುತ್ತದೆ ಹಾಗೂ ಮುಜರಾಯಿ ಇಲಾಖೆಯಿಂದ ಮಂಜೂರಾದ ಅನುದಾನ ರೂ.10.00 ಲಕ್ಷದಲ್ಲಿ ಭಕ್ತಾದಿಗಳಿಗೆ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸುವ ಕಾಮಗಾರಿಗೆ ಅನುಮೋದನೆ ಪಡೆಯಲಾಗಿರುತ್ತದೆ.<br><br>ಆದರೆ, ಈ ಕಾಮಗಾರಿಗಳು ಆರಂಭ ಹಂತದಲ್ಲಿದ್ದಾಗ ರಾಷ್ಟ್ರೀಯ ಹೆದ್ದಾರಿ 212 (766)ಕ್ಕೆ ಸಂಬಂಧಿಸಿದಂತೆ, ರಾಷ್ಟ್ರೀಯ ರಸ್ತೆ ಅಭಿವೃದ್ಧಿ ಪ್ರಾಧಿಕಾರ, ಮೈಸೂರು ವಿಭಾಗ ಅವರು ಶ್ರೀ ಗುಂಜಾಂನರಸಿಂಹ ಸ್ವಾಮಿ ದೇವಾಲಯ ಮತ್ತು ಶ್ರೀ ಅಗಸ್ತ್ಯೇಶ್ವರ ದೇವಾಲಯ |

<table>
<tr>
<td></td>
<td></td>
<td></td>
<td>ಸರ್ಕಾರ ಎಲ್ಲಾ ಕ್ರಮವನ್ನು ಕೈಗೊಳ್ಳುತ್ತದೆ ಎಂದು ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು, ಪಶುಸಂಗೋಪನೆ ಮತ್ತು ಮುಜರಾಯಿ ಸಚಿವರು ತಿಳಿಸಿದರು.</td>
<td>ಸೇರಿದಂತೆ ತ್ರಿವೇಣಿ ಸಂಗಮವನ್ನು ಅಭಿವೃದ್ಧಿ ಪಡಿಸಲು ಮುಂದಾಗಿರುವುದರಿಂದ ಸದರಿ ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ದೇವಾಲಯದ ಸುತ್ತ ಭಕ್ತಾದಿಗಳ ಅನುಕೂಲಕ್ಕಾಗಿ ಈ ಕೆಳಕಂಡ ಮೂಲಭೂತ ಸೌಲಭ್ಯಗಳ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ.<br>(ರೂ. ಲಕ್ಷಗಳಲ್ಲಿ)
<table>
<tr><th>ಕ್ರ. ಸಂ</th><th>ಕಾಮಗಾರಿ ವಿವರ</th><th>ಮೊತ್ತ</th><th>ಹಂತ</th></tr>
<tr><td>1</td><td>ಶೌಚಾಲಯಗಳ ಸಮುಚ್ಛಯ ಹಾಗೂ ಬಟ್ಟೆ ಬದಲಾಯಿಸುವ ಕೊಠಡಿಗಳು</td><td>100.00</td><td>95%ರಷ್ಟು ಮುಗಿದಿದೆ. ಅಂತಿಮ ಘಟ್ಟದ ಕಾಮಗಾರಿ ಪ್ರಗತಿಯಲ್ಲಿದೆ</td></tr>
<tr><td>2</td><td>ವಾಹನ ನಿಲುಗಡೆ ಪ್ರದೇಶದ ಅಭಿವೃದ್ಧಿ</td><td>100.00</td><td>90%ರಷ್ಟು ಮುಗಿದಿದೆ ಕೆಲವು ಅನಧಿಕೃತವಾಗಿ ಕಟ್ಟಡವನ್ನು ನಿರ್ಮಿಸಿದ್ದು ಇದನ್ನು ತೆರವುಗೊಳಿಸಿದ ನಂತರ ಬಾಕಿ ಕಾಮಗಾರಿ ಪೂರ್ಣಗೊಳಿಸಲಾಗುವುದು</td></tr>
<tr><td></td><td></td><td></td><td></td></tr>
</table>
</td>
</tr>
</table>

| | | | | |
|---|---|---|---|---|
| | | | | 3 \| ದೇವಾಲಯಕ್ಕೆ ಆರ್ಚ್ ನಿರ್ಮಾಣ \| 20.00 \| 95%ರಷ್ಟು ಮುಗಿದಿದೆ. ಅಂತಿಮ ಘಟ್ಟದ ಕಾಮಗಾರಿ ಪ್ರಗತಿಯಲ್ಲಿದೆ<br>4 \| ದೇವಾಲಯದ ಸುತ್ತ ಪಾರ್ಕ್ ನಿರ್ಮಾಣ \| 80.00 \| 100%ರಷ್ಟು ಮುಗಿದಿದೆ<br><br>ಈ ಮೇಲಿನಂತೆ ಕಾಮಗಾರಿಯಲ್ಲಿ ಕೆಲವು ಮುಕ್ತಾಯವಾಗಿದ್ದು, ಕೆಲವು ಅಂತಿಮ ಘಟ್ಟದಲ್ಲಿರುತ್ತದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸಮಿತಿಯು ಭರವಸೆಯನ್ನು ಮುಕ್ತಾಯಗೊಳಿಸಿತು. |
| 16 | 4961<br>ಚು.ಗು.ಪ್ರ: 155<br>ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ<br>ವಿಪನದಿ: 05.02.2015 | ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿ ಧಾರ್ಮಿಕ ದತ್ತಿ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿರುವ ಶಿಕ್ಷಣ ಸಂಸ್ಥೆಗಳಲ್ಲಿನ ಭೋಧಕ/ ಭೋದಕೇತರ ಸಿಬ್ಬಂದಿಗಳ ಬಗ್ಗೆ. | ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಡಿಡಿಪಿಐ, ಇಓ, ಟೆಂಪಲ್, ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿ, ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ, ಇವರುಗಳನ್ನೊಳಗೊಂಡ ಒಂದು ಸಮಿತಿಯನ್ನು ರಚಿಸಿ, ಇದಕ್ಕೆ ಸಂಬಂಧಪಟ್ಟ ಎಲ್ಲಾ ರೀತಿಯ ಮಾಹಿತಿಯನ್ನು, ಸಾಧಕ/ಭಾದಕಗಳನ್ನು ವಿಮರ್ಶೆ | ದಿನಾಂಕ: 23.10.2018ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಅಧಿನಿಯಮ, 1997 ಮತ್ತು 2002ರ ಕಾಯ್ದೆ ಮತ್ತು ನಿಯಮಗಳಲ್ಲಿ ಶೈಕ್ಷಣಿಕ ಸಂಸ್ಥೆಗಳ ಬಗ್ಗೆ ಪೂರ್ಣ ವಿವರ ಇಲ್ಲದೇ ಇರುವುದರಿಂದ ಇಲಾಖಾ ವ್ಯಾಪ್ತಿಯಲ್ಲಿರುವ ಶಿಕ್ಷಣ ಸಂಸ್ಥೆಗಳ ಉದ್ದೇಶ/ಆಡಳಿತ ನಿರ್ವಹಣೆ/ಸಿಬ್ಬಂದಿ ನೇಮಕಾತಿ/ಸಿಬ್ಬಂದಿ ಮಾದರಿ/ ರೋಸ್ಟರ್‌ಬಿಂದು/ವೇತನ ಶ್ರೇಣಿ ಇತ್ಯಾದಿಗಳ ಬಗ್ಗೆ ಸಮಗ್ರ ಅಧ್ಯಯನ ನಡೆಸಿ ಅಧಿನಿಯಮದಲ್ಲಿ ಕಾನೂನಾತ್ಮಕವಾಗಿ ಅಳವಡಿಸುವ ಕುರಿತು ಪ್ರಸ್ತಾವನೆ ಸಲ್ಲಿಸುವಂತೆ ಸರ್ಕಾರದ |

| | | | | |
|---|---|---|---|---|
| | | | ಮಾಡಿ ಸರ್ಕಾರಕ್ಕೆ ಅಂತಿಮವಾಗಿ ವರದಿಯನ್ನು ಕೊಡುವುದರ ಬಗ್ಗೆ ಸೂಚನೆ ಮಾಡುತ್ತೇನೆ. 3 ತಿಂಗಳ ಒಳಗೆ ಇದನ್ನು ಇತ್ಯರ್ಥ ಮಾಡತಕ್ಕಂಥ ಎಲ್ಲಾ ಪ್ರಯತ್ನ ಮಾಡುತ್ತೇವೆ ಎಂದು ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು, ಪಶುಸಂಗೋಪನೆ ಮತ್ತು ಮುಜರಾಯಿ ಸಚಿವರು ತಿಳಿಸಿದರು. | ಕಾರ್ಯದರ್ಶಿಗಳು, ದಿ: 23.8.2016ರ ಸಭೆಯಲ್ಲಿ ನಿರ್ಣಯಿಸಿ ಸೂಚಿಸಿದ್ದಂತೆ ಶಿಕ್ಷಣ ಸಂಸ್ಥೆಗಳಿಗೆ ರೂಪಿಸಬೇಕಾಗಿರುವ ನಿಯಮಗಳ ಕರಡನ್ನು ಸಿದ್ಧಪಡಿಸಿ ಸರ್ಕಾರಕ್ಕೆ ಸಲ್ಲಿಸಲಾಗಿದ್ದು, ಸರ್ಕಾರದ ಅಧಿಸೂಚನೆ ಸಂಖ್ಯೆ: ಕಂಇ 66 ಮುಸೇವಿ 2017, ದಿ: 20.09.2018ರಂದು ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಅಧಿನಿಯಮ, 1997 (2001ರ ಕರ್ನಾಟಕ ಅಧಿನಿಯಮ 33)ರ ಪ್ರಕರಣ 76ರ ಮೇರೆಗೆ ನಿಯಮಗಳು 2002ಕ್ಕೆ ತಿದ್ದುಪಡಿ ಮಾಡಲು ಉದ್ದೇಶಿಸಿ ಸದರಿ ಕರಡಿಗೆ ಸಾರ್ವಜನಿಕರಿಂದ ಆಕ್ಷೇಪಣೆಗಳು ಹಾಗೂ ಸಲಹೆಗಳನ್ನು ಆಹ್ವಾನಿಸಿ 15 ದಿನಗೊಳಗಾಗಿ ಸಲ್ಲಿಸಲು ಕರಡು ಅಧಿಸೂಚನೆಯನ್ನು ಹೊರಡಿಸಲಾಗಿರುತ್ತದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸಮಿತಿಯು ಭರವಸೆಯನ್ನು ಮುಕ್ತಾಯಗೊಳಿಸಿತು. |
| 17 | 4962<br>ಚು.ಗು.ಪ್ರ. 347<br>ಶ್ರೀ ಮಹಾಂತೇಶ್ ಶಿವಾನಂದ ಕೌಜಲಗಿ<br>ವಿಪನದಿ: 05.02.2015 | ಹೊಸ ಹಿಂದೂ ಧಾರ್ಮಿಕ ದತ್ತಿ ಕಾನೂನು ಜಾರಿಗೊಳ್ಳುವವರೆವಿಗೂ ಈಗಿರುವ ಬಾಂಬೆ ಪಬ್ಲಿಕ್ ಟ್ರಸ್ಟ್ ಆಕ್ಟ್ ಕಾಯ್ದೆ ಮುಂದುವರೆಸುವ ಬಗ್ಗೆ. | ಪಬ್ಲಿಕ್ ಟ್ರಸ್ಟ್ ಆಕ್ಟ್ 2003ರಲ್ಲಿ Repeat ಆಗಿರುವಂತಹದ್ದು, ಸರಿಯಾದ ಕಾನೂನು ಇಲ್ಲದೆ ತೊಂದರೆಯಾಗಿದೆ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆ ಅದಕ್ಕೋಸ್ಕರ ಈ ಬಗ್ಗೆ ಹೊಸದಾಗಿ ಕಾನೂನು ತರಬೇಕೆಂದು ತೀರ್ಮಾನ ಮಾಡಿದ್ದೇವೆ, ಕಾನೂನು ತಯಾರಿ ಹಂತದಲ್ಲಿದೆ ಬಹುಶ: ಸಾಧ್ಯವಾದರೆ ಈ ಸದನ ಮುಗಿಯುವುದರೊಳಗಾಗಿ ಅಥವಾ ಆಯವ್ಯಯ ಅಧಿವೇಶನದಲ್ಲಿ ಆ ಕಾನೂನನ್ನು ತರುವಂತಹ | ದಿನಾಂಕ: 23.10.2018ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಕಾಯ್ದೆ 1997 ಜಾರಿಗೆ ಬಂದ ಪರಿಣಾಮವಾಗಿ ದಿನಾಂಕ: 0105.2003ರಿಂದ ಬಾಂಬೆ ಪಬ್ಲಿಕ್ ಟ್ರಸ್ಟ್ ಕಾಯ್ದೆ 1950 ನಿರಸನಗೊಂಡಿರುತ್ತದೆ.<br><br>ಟಿ.ಪಿ.ಟಿ. ಕಾಯ್ದೆಯು ರದ್ದಾದ ಹಿನ್ನಲೆಯಲ್ಲಿ ಶಿಕ್ಷಣ ಸಂಸ್ಥೆಗಳೂ ಸೇರಿದಂತೆ ಧಾರ್ಮಿಕೇತರ ಸಂಸ್ಥೆಗಳನ್ನು 1997ರ ಕಾಯ್ದೆಯಿಂದ ಕೈಬಿಟ್ಟಿರುವುದರಿಂದ ಅಂತಹ ಸಂಸ್ಥೆಗಳ ಆಡಳಿತ ನಿರ್ವಹಣೆ ಮತ್ತು ನಿಯಂತ್ರಣಕ್ಕಾಗಿ ಕರ್ನಾಟಕ ಪಬ್ಲಿಕ್ ಟ್ರಸ್ಟ್ ಕಾಯ್ದೆಯನ್ನು ತರಲು ಉದ್ದೇಶಿಸಿ ಕೆ.ಪಿ.ಟಿ ಕಾಯ್ದೆ 2011ರ ಮಸೂದೆಯನ್ನು ತಯಾರಿಸಿ ಸದರಿ ಬಿಲ್ಲನ್ನು ಅನುಮೋದನೆಗಾಗಿ ಉಭಯ ಸದನಗಳಲ್ಲಿ |

| | | | | |
|---|---|---|---|---|
| | | | ಪ್ರಯತ್ನ ಮಾಡುತ್ತೇವೆ ಎಂದು ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು, ಪಶುಸಂಗೋಪನೆ ಮತ್ತು ಮುಜರಾಯಿ ಸಚಿವರು ತಿಳಿಸಿದರು. | ಮಂಡಿಸಿ, ದಿ: 16.03.2011ರಂದು ಅಂಗೀಕಾರ ಪಡೆಯಲಾಗಿತ್ತು. ಆದರೆ ಕೆ.ಪಿ.ಟಿ ವಿಧೇಯಕದಲ್ಲಿ ಕೆಲವೊಂದು ಬದಲಾವಣೆಗಳ ಅಗತ್ಯತೆಯು ಕಂಡುಬಂದ ಹಿನ್ನಲೆಯಲ್ಲಿ ಸದರಿ ವಿಧೇಯಕವನ್ನು ಹಿಂದಕ್ಕೆ ಪಡೆಲಯ ಸದನವು ದಿ: 07.06.2011ರಂದು ಅನುಮೋದನೆಯನ್ನು ನೀಡಿರುತ್ತದೆ.<br><br>ಕೆಪಿಟಿ ಕಾಯ್ದೆ 2011ರ ಕರಡಿನ ಪೂರ್ಣ ಮಾಹಿತಿಯನ್ನು ತಯಾರಿಸಿ ಕರಡನ್ನು ಪರಿಶೀಲಿಸುವಂತೆ ಶಾಸನ ರಚನಾ ಇಲಾಖೆಗೆ ಕಳುಹಿಸಲಾಗಿತ್ತು. ಸದರಿ ಇಲಾಖೆಯು ಸಂಬಂಧಪಟ್ಟ ಸಚಿವರಿಂದ ಅನುಮೋದನೆ ಪಡೆದು ಕರಡನ್ನು ಸಚಿವ ಸಂಪುಟಕ್ಕೆ ಮಂಡಿಸುವಂತೆ ತಿಳಿಸಿದ್ದು, ಅದರನ್ವಯ ಸದರಿ ಬಿಲ್‌ನ್ನು ಸಚಿವ ಸಂಪುಟದ ಮುಂದೆ ದಿನಾಂಕ: 29.7.2015ರಂದು ಮಂಡಿಸಲಾಗಿತ್ತು.<br><br>ಸಚಿವ ಸಂಪುಟವು ದಿ: 29.7.2015ರಂದು ಈ ಬಿಲ್‌ನ್ನು ಜಾರಿ ಮಾಡಬೇಕಾದಲ್ಲಿ ಸಮಾಜ ಕಲ್ಯಾಣ ಇಲಾಖೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಶಿಕ್ಷಣ ಇಲಾಖೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗಳ ಅಭಿಪ್ರಾಯ ಪಡೆದು ಮರುಮಂಡಿಸುವಂತೆ ನಿರ್ಣಯಿಸಲಾಗಿರುತ್ತದೆ.<br><br>ಅದರಂತೆ, 4 ಇಲಾಖೆಗಳಿಂದ ಮಾಹಿತಿಯು ಸ್ವೀಕೃತವಾಗಿದ್ದು, ಶಿಕ್ಷಣ ಇಲಾಖೆಗೆ ಕಳೆದ 2 ವರ್ಷಗಳಿಂದ ದಿನಾಂಕ: 02.03.2016, ದಿ: 28.06.2016, 24.11.2016, 23.3.2017, 07.08.2017 ಮತ್ತು 03.10.2017ಗಳಲ್ಲಿ ನೆನಪೋಲೆಗಳನ್ನು ಬರೆಯಲಾಗಿರುತ್ತದೆ. ಆದರೂ ಇದುವರೆವಿಗೂ ಯಾವುದೇ ಮಾಹಿತಿ ಸ್ವೀಕೃತವಾಗಿರುವುದಿಲ್ಲ. ಸದರಿ ಇಲಾಖೆಯಿಂದ ಮಾಹಿತಿಯನ್ನು ನಿರೀಕ್ಷಿಸಲಾಗುತ್ತಿದೆ |

| | | | | |
|---|---|---|---|---|
| | | | | ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿದ ಸಮಿತಿಯು ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |
| 18 | 4969<br>ನಿಯಮ 330ರ ಮೇರೆಗೆ<br>ಶ್ರೀ.ಗೋ.ಮಧುಸೂದನ್<br>ದಿನಾಂಕ:23.06.2016 | ಚಾಮರಾಜನಗರ ಜಿಲ್ಲೆ ಕೊಳ್ಳೇಗಾಲ ತಾಲ್ಲೂಕು ಸತ್ತೇಗಾಲ ಇನಾಂ ಗ್ರಾಮದ ಸರ್ವೆ ನಂ–1 ಮತ್ತು ಸರ್ವೆ ನಂ 174ರ ಅರಣ್ಯ ಜಮೀನಿಗೆ ಸಂಬಂಧಿಸಿದಂತೆ ಕಾನೂನು ಬಾಹಿರ ಆದೇಶವನ್ನು ಹೊರಡಿಸಿರುವ ಬಗ್ಗೆ ಹಾಗೂ ಸಾವಿರಾರು ಎಕರೆ ಅರಣ್ಯಭೂಮಿ ಒತ್ತುವರಿ ಆಗಿರುವ ಬಗ್ಗೆ. | ತಾವು ಹೇಳಿದ್ದನ್ನು ಪ್ರಸ್ತಾಪ ಮಾಡಿ ಕಾನೂನು ಸಲಹೆಯನ್ನು ತೆಗೆದುಕೊಂಡು ನೇರವಾಗಿ ನಮ್ಮ ವಶಕ್ಕೆ ತೆಗೆದುಕೊಳ್ಳುತ್ತೇವೆ ಅವಕಾಶ ಇದ್ದರೆ ಅದನ್ನು ತೆಗೆದುಕೊಳ್ಳೋಣ ಆದಷ್ಟು ಬೇಗನೆ ಕಾನೂನು ಇಲಾಖೆಯಿಂದ ಅಭಿಪ್ರಾಯಗಳನ್ನು ಏನು ಕೊಡುತ್ತಾರೆ ಅದರ ಬಗ್ಗೆ ತಕ್ಷಣ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಕಾರ್ಯೋನ್ಮುಖರಾಗುತ್ತೇವೆ ಎಂದು ಮಾನ್ಯ ಕಂದಾಯ ಸಚಿವರು ತಿಳಿಸಿದರು. | ದಿನಾಂಕ: 23.10.2018ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ಚಾಮರಾಜನಗರ ಜಿಲ್ಲೆ ಕೊಳ್ಳೆಗಾಲ ತಾಲ್ಲೂಕು ಸತ್ತೇಗಾಲ ಗ್ರಾಮದ ಸ.ನಂ. 1 ಮತ್ತು ಸ.ನಂ. 174ರಲ್ಲಿರುವ ಅರಣ್ಯ ಜಮೀನಿಗೆ ಸಂಬಂಧಿಸಿದಂತೆ ಕಾನೂನು ಇಲಾಖೆಯ ಅಭಿಪ್ರಾಯವನ್ನು ಪಡೆದು ಜಿಲ್ಲಾಧಿಕಾರಿಗಳು, ಚಾಮರಾಜನಗರ ಜಿಲ್ಲೆ, ಚಾಮರಾಜನಗರ ಇವರ ಅರೆನ್ಯಾಯಿಕ ಅಧಿಕಾರವನ್ನು ಚಲಾಯಿಸಿ ಹೊರಡಿಸಿದ ನಡವಳಿ ಸಂ: ಆರ್‌ಎ 4650/2011–12 ಹಾಗೂ ಆರ್‌ಎ 5.11.21.22/2012–13, ದಿ: 08.7.2013ರನ್ನು ರದ್ದುಪಡಿಸುವ ಬಗ್ಗೆ ಕಂದಾಯ ಇಲಾಖೆಯು ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ರಿಟ್‌ಪಿಟಿಷನ್ ನಂ. 29553/2014ರಂತೆ ಮೇಲ್ಮನವಿ ಸಲ್ಲಿಸಲಾಗಿದ್ದು, ಜಿಲ್ಲಾಧಿಕಾರಿಗಳ ದಿ:08.07.2013ರ ಆದೇಶಕ್ಕೆ ತಡೆಯಾಜ್ಞೆ ಪಡೆಯಲಾಗಿದೆ. ಪ್ರಕರಣದ ಬಗ್ಗೆ ಹೆಚ್ಚುವರಿ ಅಡ್ವೋಕೇಟ್ ಜನರಲ್‌ರವರನ್ನು ಭೇಟಿಯಾಗಿ ಪ್ರಕರಣದ ಪೂರ್ಣ ವಿವರವನ್ನು ಸಹ ನೀಡಲಾಗಿರುತ್ತದೆ. ಅಡ್ವೋಕೇಟ್ ಜನರಲ್‌ರವರ ಪತ್ರದಲ್ಲಿ ದಿ: 30.09.2015ರಂದು ಪ್ರಕರಣವು ವಿಚಾರಣೆಗೆ ಬಂದಿರುವ ಬಗ್ಗೆ ತಿಳಿಸಿದ್ದು, ಡಿಸೆಂಬರ್ 2015ರಲ್ಲಿ ಈ ಪ್ರಕರಣವು ವಿಚಾರಣೆಗೆ ಮುಂದೂಡಿರುವುದಾಗಿ ತಿಳಿಸಿರುತ್ತಾರೆ. ಘನ ಉಚ್ಚ ನ್ಯಾಯಾಲಯದ ಆದೇಶವನ್ನು ನಿರೀಕ್ಷಿಸಲಾಗುತ್ತಿದ್ದು, ನ್ಯಾಯಾಲಯದ ಆದೇಶದನ್ವಯ ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿದ ಸಮಿತಿಯು ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |

| | | | | |
|---|---|---|---|---|
| 19 | 5594<br>ನಿಯಮ 330ರ ಮೇರೆಗೆ<br>ಶ್ರೀ ಕೆ.ಸಿ. ಕೊಂಡಯ್ಯ<br>ವಿಪನದಿ:05-07-2016 | ಹರಪನಹಳ್ಳಿ ತಾಲ್ಲೂಕನ್ನು ಬಳ್ಳಾರಿ ಜಿಲ್ಲೆಗೆ ಪುನರ್ ಸೇರ್ಪಡೆ ಮಾಡಿ, ಭಾರತ ಸಂವಿಧಾನದ ಅನುಚ್ಛೇದ 371(ಜೆ) ಮೇರೆಗೆ ಸೌಲಭ್ಯಗಳನ್ನು ಕಲ್ಪಿಸುವ ಬಗ್ಗೆ | 371(ಜೆ) ವಿಧಿಯನ್ನು ತಿದ್ದುಪಡಿ ಮಾಡಿ ಆ ಭಾಗದವರಿಗೆ ಅನುಕೂಲ ಕಲ್ಪಿಸಿ ಕೊಟ್ಟಿದ್ದಾರೆ ಈ ನಿಟ್ಟಿನಲ್ಲಿ ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ. ಮಾನ್ಯ ಸದಸ್ಯರು ಹೇಳಿರುವ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಯಾವುದೇ ಒಂದು ಜಿಲ್ಲೆಯ ತಾಲ್ಲೂಕನ್ನು ಇನ್ನೊಂದು ಜಿಲ್ಲೆಗೆ ಸೇರ್ಪಡೆ ಮಾಡುವ ಬಗ್ಗೆ ಉದ್ಭವಿಸಬಹುದಾದ ಕಾನೂನಿನ ಸಾಧಕ-ಬಾಧಕಗಳನ್ನು ಹಾಗೂ ಸಾಂವಿಧಾನಿಕ ಉಪಬಂಧಗಳ ಮೇರೆಗೆ ಎಲ್ಲಾ ದೃಷ್ಠಿ ಕೋನಗಳಿಂದ ಪರಿಶೀಲನೆ ಮಾಡಿ ಮುಂದಿನ ತೀರ್ಮಾನ ಕೈಗೊಳ್ಳಲಾಗುವುದೆಂದು ಮಾನ್ಯ ಕಂದಾಯ ಸಚಿವರು ತಿಳಿಸಿದರು. | ದಿನಾಂಕ: 23.10.2018ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ಈ ಹಿಂದೆ ಬಳ್ಳಾರಿ ಜಿಲ್ಲೆಯ ಕಂದಾಯ ವ್ಯಾಪ್ತಿಗೆ ಒಳಪಟ್ಟಿದ್ದ ಹರಪನಹಳ್ಳಿ ತಾಲ್ಲೂಕನ್ನು ಜಿಲ್ಲೆಗಳ ಪುನರ್ ವಿಂಗಡಣೆ ಸಂದರ್ಭದಲ್ಲಿ ದಾವಣಗೆರೆ ಜಿಲ್ಲೆಯ ಕಂದಾಯ ವ್ಯಾಪ್ತಿಯಲ್ಲಿ ತರಲಾಗಿರುತ್ತದೆ. ಆದರೆ, ಹರಪನಹಳ್ಳಿ ತಾಲ್ಲೂಕು ಬಹಳ ಹಿಂದುಳಿದ ತಾಲ್ಲೂಕು ಎಂದು ಸದರಿ ತಾಲ್ಲೂಕನ್ನು ಈ ಹಿಂದೆ ಇದ್ದಂತೆ ಬಳ್ಳಾರಿ ಜಿಲ್ಲೆಯ ವ್ಯಾಪ್ತಿಗೆ ಸೇರಿಸಿ ಅನುಚ್ಛೇದ 371ಜೆ ಸೌಲಭ್ಯಗಳನ್ನು ಸದರಿ ತಾಲ್ಲೂಕಿಗೂ ವಿಸ್ತರಿಸುವಂತೆ ಹಲವು ಮನವಿಗಳು ಸ್ವೀಕೃತವಾಗಿರುವ ಹಿನ್ನಲೆಯಲ್ಲಿ ಸರ್ಕಾರದ ಆದೇಶ ಸಂಖ್ಯೆ: ಕಂಇ 139 ಭೂದಾಪು 2013, ದಿ: 21.03.2018ರ ಆದೇಶದಲ್ಲಿ ಪ್ರಸ್ತುತ ದಾವಣಗೆರೆ ಜಿಲ್ಲೆಯಲ್ಲಿರುವ ಹರಪನಹಳ್ಳಿ ತಾಲ್ಲೂಕನ್ನು ದಾವಣಗೆರೆ ಜಿಲ್ಲೆಯಿಂದ ತೆಗೆದು ಈ ಹಿಂದೆ ಇದ್ದಂತೆ ಬಳ್ಳಾರಿ ಜಿಲ್ಲೆಯ ವ್ಯಾಪ್ತಿಗೆ ಸೇರ್ಪಡೆ ಮಾಡಿ ಸರ್ಕಾರವು ಆದೇಶಿಸಿದೆ.<br><br>ಅದರಂತೆ ಹರಪನಹಳ್ಳಿ ತಾಲ್ಲೂಕನ್ನು ದಾವಣಗೆರೆ ಜಿಲ್ಲೆಯಿಂದ ಬೇರ್ಪಡಿಸಿ ಬಳ್ಳಾರಿ ಜಿಲ್ಲೆಗೆ ಸೇರಿಸುವ ಬಗ್ಗೆ ಪ್ರಾಥಮಿಕ ಅಧಿಸೂಚನೆಯನ್ನು ದಿ: 23.07.2018ರಂದು ಕರ್ನಾಟರಕ ರಾಜ್ಯ ಪತ್ರದಲ್ಲಿ ಹೊರಡಿಸಿ, ಆಕ್ಷೇಪಣೆ/ಸಲಹೆಗಳನ್ನು ಆಹ್ವಾನಿಸಲಾಗಿತ್ತು. ಇದಕ್ಕೆ ಕೆಲವೊಂದು ಆಕ್ಷೇಪಣೆಗಳು ಸ್ವೀಕೃತವಾಗಿರುತ್ತವೆ. ಸದರಿ ಆಕ್ಷೇಪಣೆಗಳಂತೆ ಪರಿಶೀಲಿಸಲಾಗುತ್ತಿದ್ದು, ಅಂತಿಮ ಅಧಿಸೂಚನೆಯನ್ನು ಹೊರಡಿಸಲಾಗುವುದು ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿದ ಸಮಿತಿಯು ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |

| | | | | |
|---|---|---|---|---|
| 20 | 5963<br>ಚು.ಗು.ಪ್ರ. 193<br>ಶ್ರೀ ಕೆ.ಟಿ. ಶ್ರೀಕಂಠೇಗೌಡ<br>ವಿಪನದಿ: 08.02.2017 | ಕೊಪ್ಪ ಗ್ರಾಮಕ್ಕೆ ಹತ್ತಿರ ಇರುವ ಆಬಲವಾಡಿ, ಹವ್ವರಳ್ಳಿ, ಹರಳಕೆರೆ, ಸೋಮನಹಳ್ಳಿ, ಹೊಸಗಾವಿ, ಚಿಕ್ಕಹಸಗಾವಿ, ತರಿಕೆರೆ ಕಾಲೋನಿ, ಈ ಗ್ರಾಮಗಳನ್ನು ಕೌಡ್ಲೆ ನಾಡ ಕಛೇರಿಗೆ ಸೇರಿಸಿರುವ ಬಗ್ಗೆ. ಕೊಪ್ಪ 2ನೇ ವರ್ಗಕ್ಕೆ ಸೇರಿಸುವ ಬಗ್ಗೆ. ತಹಶೀಲ್ದರ್ ಮದ್ದೂರು ಜಿಲ್ಲಾಧಿಕಾರಿಗಳಿಗೆ ಜನರು ಮನವಿ ಸಲ್ಲಿಸಿದ್ದು ಈ ಬಗ್ಗೆ ಕ್ರಮ ವಹಿಸಿಲ್ಲದೆ ಇರುವ ಬಗ್ಗೆ. | ಈ ಬಗ್ಗೆ ತಾಲ್ಲೂಕು ಕಛೇರಿಗೆ ಸಾರ್ವಜನಿಕರಿಂದ ಮನವಿ ಸ್ವೀಕೃತವಾಗಿದ್ದು, ಸದರಿ ವಿಷಯವು ಜಿಲ್ಲಾಧಿಕಾರಿಯವರ ಕಾರ್ಯಾಲಯ ದಲ್ಲಿ ಪರಿಶೀಲನಾ ಹಂತದಲ್ಲಿರುತ್ತದೆ ಎಂದು ಮಾನ್ಯ ಕಂದಾಯ ಸಚಿವರು ತಿಳಿಸಿದರು. | ದಿನಾಂಕ: 23.10.2018ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ಮದ್ದೂರು ತಾಲ್ಲೂಕು ಕೊಪ್ಪ–1ನೇ ವೃತ್ತದಲ್ಲಿನ ಗ್ರಾಮಗಳನ್ನು ಕೊಪ್ಪ–2ನೇ ವೃತ್ತದ ನಾಡಕಚೇರಿಗೆ ಹಂಚಿಕೆ ಮಾಡುವ ಬಗ್ಗೆ ಜಿಲ್ಲಾಧಿಕಾರಿಗಳು, ಮಂಡ್ಯ ಜಿಲ್ಲೆ ಇವರಿಂದ ವರದಿಯನ್ನು ಸ್ವೀಕರಿಸಲಾಗಿದೆ. ಜಿಲ್ಲಾಧಿಕಾರಿಗಳ ಪ್ರಸ್ತಾವನೆಯಂತೆ ಪರಿಶೀಲಿಸಿ, ಕೊಪ್ಪ–1ರಲ್ಲಿನ ಕೆಲವು ಗ್ರಾಮಗಳನ್ನು ಕೊಪ್ಪ–2ರ ನಾಡಕಚೇರಿಗೆ ಹಂಚಿಕೆ ಮಾಡುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿದ ಸಮಿತಿಯು ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |
| 21 | 5964<br>ಚು.ರ.ಪ್ರ:1548<br>ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ)<br>ವಿಪನದಿ:10.07.2015 | ಯಾದಗಿರಿ ಜಿಲ್ಲೆ, ಸುರಪುರ ತಾಲ್ಲೂಕಿನ ಮುದನೂರು ಗ್ರಾಮದಲ್ಲಿ ಶ್ರೀ ದೇವರ ದಾಸಿಮಯ್ಯ ದೇವಸ್ಥಾನಕ್ಕೆ ಪಕ್ಕದಲ್ಲಿರುವ ಮನೆಗಳ ಸ್ಥಳಾಂತರ ಕಾರ್ಯ ಸ್ಥಗಿತಗೊಂಡಿರುವ ಬಗ್ಗೆ. | ಶ್ರೀ ದೇವರ ದಾಸಿಮಯ್ಯ ದೇವಸ್ಥಾನಕ್ಕೆ ಹೊಂದಿಕೊಂಡಿರುವ ಮನೆಗಳ ಸಮೀಕ್ಷೆ ನಡೆಸಿ ಸ್ಥಳಾಂತರಿಸಬೇಕಾದ ಒಟ್ಟು 181 ಮನೆಗಳನ್ನು ಗುರುತಿಸಲಾಗಿದೆ.<br><br>ಮುದನೂರು (ಬಿ) ಗ್ರಾಮದ ಸರ್ಕಾರಿ ಸರ್ವೆ ನಂ.183ರ ಪೈಕಿ 10 ಎಕರೆ ಜಮೀನಿನಲ್ಲಿ ನಿವೇಶನಕ್ಕೆ ಲೇ ಔಟ್ ನಕ್ಷೆಯನ್ನು ಸಿದ್ದಪಡಿಸಿ ರಾಜೀವ್‌ಗಾಂಧಿ ವಸತಿ ನಿರ್ಮಾಣ | ದಿನಾಂಕ: 23.10.2018ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ಯಾದಗಿರಿ ಜಿಲ್ಲೆ ಸುರಪುರ ತಾಲ್ಲೂಕಿನ ಮುದನೂರು ಗ್ರಾಮದಲ್ಲಿ ಶ್ರೀ ದೇವರದಾಸಿಮಯ್ಯ ದೇವಸ್ಥಾನದ ಪಕ್ಕದಲ್ಲಿರುವ ಮನೆಗಳ ಸ್ಥಳಾಂತರದ ಉದ್ದೇಶಕ್ಕಾಗಿ ಮುದೇನೂರು (ಬಿ) ಗ್ರಾಮದಲ್ಲಿ ಸರ್ಕಾರಿ ಸರ್ವೆ ನಂ. 183ರ ಪೈಕಿ 10 ಎಕರೆ ವಿಸ್ತೀರ್ಣದ ಜಮೀನನ್ನು ಮೀಸಲಿರಿಸಲಾಗಿರುತ್ತದೆ.<br><br>ಸ್ಥಳಾಂತರಿಸಲು ಉದ್ದೇಶಿಸಿದ 181 ಮನೆಗಳಿಗೆ 10 ಎಕರೆ ಜಮೀನಿನಲ್ಲಿ 30/40 ಅಳತೆಯ ಒಟ್ಟು 187 ನಿವೇಶನಗಳ ನೀಲಿ ನಕ್ಷೆಗೆ ಸಹಾಯಕ ನಿರ್ದೇಶಕರು ನಗರ |

| | | | | |
|---|---|---|---|---|
| | | | ನಿಗಮಕ್ಕೆ ಒಟ್ಟು 181 ಫಲಾನುಭವಿಗಳ ಪಟ್ಟಿಯೊಂದಿಗೆ ಜಿಲ್ಲಾಧಿಕಾರಿ, ಯಾದಗಿರಿ ಜಿಲ್ಲೆ ಕಳುಹಿಸಲಾಗಿದೆ. ನಿವೇಶನಗಳನ್ನು ವಿಂಗಡಿಸಿ, ಹಕ್ಕು ಪತ್ರಗಳನ್ನು ಫಲಾನುಭವಿಗಳಿಗೆ ನೀಡಿದ ನಂತರ ಲೇಔಟ್ ಅಭಿವೃದ್ಧಿಪಡಿಸಿ ರಾಜೀವ್‌ಗಾಂಧಿ ವಸತಿ ನಿರ್ಮಾಣ ನಿಗಮದ ವತಿಯಿಂದಲೆ ಮನೆಗಳ ನಿರ್ಮಾಣ ಕಾರ್ಯವನ್ನು ಕೈಗೊಳ್ಳಲಾಗುವುದು ಎಂದು ಮಾನ್ಯ ಕಂದಾಯ ಸಚಿವರು ತಿಳಿಸಿದರು. | ಮತ್ತು ಗ್ರಾಮಾಂತರ ಯೋಜನಾ ಇಲಾಖೆಯಿಂದ ಅನುಮೋದನೆ ಪಡೆಯಲಾಗಿರುತ್ತದೆ.<br><br>ನಿವೇಶನಗಳ ಚೆಕ್ಕುಬಂದಿ ಗುರುತಿಸುವ ಕಾರ್ಯಕ್ಕೆ ಅನುದಾನದ ಅವಶ್ಯಕತೆ ಇರುವುದರಿಂದ, ಅನುದಾನ ಬಿಡುಗಡೆಗಾಗಿ ರಾಜೀವ್‌ಗಾಂಧಿ ವಸತಿ ನಿರ್ಮಾಣ ನಿಗಮಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಸದರಿ ಅನುದಾನ ಬಿಡುಗಡೆಯಾದ ನಂತರ ನಿವೇಶನಗಳನ್ನು ಗುರುತಿಸಿ, ಹಕ್ಕುಪತ್ರಗಳನ್ನು ನೀಡಲು ಕೂಡಲೇ ಕ್ರಮ ಕೈಗೊಳ್ಳಲಾಗುವುದೆಂದು ಯಾದಗಿರಿ ಜಿಲ್ಲೆಯ ಜಿಲ್ಲಾಧಿಕಾರಿಯವರು ವರದಿಸಿದ್ದು, ಹಕ್ಕುಪತ್ರಗಳನ್ನು ಫಲಾನುಭವಿಗಳಿಗೆ ನೀಡಿದ ನಂತರ ರಾಜೀವ್ ಗಾಂಧಿ ವಸತಿ ನಿರ್ಮಾಣ ನಿಗಮದ ವತಿಯಿಂದಲೇ ಲೇಔಟ್ ಅಭಿವೃದ್ಧಿಪಡಿಸಿ, ಮನೆಗಳ ನಿರ್ಮಾಣ ಕಾರ್ಯವನ್ನು ಕೈಗೊಳ್ಳಬೇಕಾಗಿರುತ್ತದೆ ಎಂಬ ಮಾಹಿತಿಯನ್ನು ಸಮಿತಿಯ ಅವಗಾಹನೆಗೆ ಸಲ್ಲಿಸಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿದ ಸಮಿತಿಯು ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |
| 22 | 5965<br>ಚು.ಗು.ಪ್ರ:4612<br>ಶ್ರೀ ಎಂ. ನಾರಾಯಣಸ್ವಾಮಿ<br>ವಿಪನದಿ: 22.11.2017 | ಬೆಂಗಳೂರು ಉತ್ತರ ಅಪರ ತಾಲ್ಲೂಕು, ಯಲಹಂಕ ಹೋಬಳಿ, ಆವಲಹಳ್ಳಿ ಗ್ರಾಮ ಮತ್ತು ಇತರೆ ಗ್ರಾಮಗಳಿಗೆ ಇರುವ ಸಂಪರ್ಕಿತ ಕಾಲುದಾರಿಗಳು ಮತ್ತು ಮಳೆ ನೀರು ಹರಿದು ಹೋಗಲು ಇರುವ ರಾಜ ಕಾಲುವೆಗಳ ಒತ್ತುವರಿ | ಆವಲಹಳ್ಳಿ ಗ್ರಾಮದ ಕೆರೆಗೆ ಹಾದು ಹೋಗಿರುವ ರಾಜಕಾಲುವೆಯ ಒತ್ತುವರಿಯನ್ನು ಗುರುತಿಸಿ ಅಳತೆಮಾಡಿ ತೆರವುಗೊಳಿಸಲಾಗುವುದು ಎಂದು ಮಾನ್ಯ ಕಂದಾಯ ಸಚಿವರು ತಿಳಿಸಿದರು. | ದಿನಾಂಕ: 23.10.2018ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ಬೆಂಗಳೂರು ಉತ್ತರ ಅಪರ ತಾಲ್ಲೂಕು, ಯಲಹಂಕ ಹೋಬಳಿ, ಆವಲಹಳ್ಳಿ ಕೆರೆಗೆ ಹಾದುಹೋಗಿರುವ ರಾಜಕಾಲುವೆಯ ಒತ್ತುವರಿಯನ್ನು ಗುರುತಿಸಿ ಅಳತೆ ಮಾಡಿ, ಸದರಿ ಒತ್ತುವರಿಯನ್ನು ತೆರವುಗೊಳಿಸಲಾಗಿರುತ್ತದೆ.<br><br>ಯಲಹಂಕ ತಾಲ್ಲೂಕು, ಯಲಹಂಕ ಹೋಬಳಿ, ಆವಲಹಳ್ಳಿ ಗ್ರಾಮದ ಮತ್ತು ಇತರೆ ಗ್ರಾಮಗಳಿಗೆ ಇರುವ |

| | | | | |
|---|---|---|---|---|
| | | ತೆರವಿಗೆ ಸಂಬಂಧಿಸಿದಂತೆ ಜಿಲ್ಲಾಧಿಕಾರಿ ಗಳಿಗೆ ಮತ್ತು ತಹಶೀಲ್ದಾರ್ ರವರಿಗೆ ದೂರು ಸಲ್ಲಿಸಲಾಗಿರುವ ವಿಷಯದ ಬಗ್ಗೆ. | | ಸಂಪರ್ಕಿತ ಕಾಲುದಾರಿಗಳು ಮತ್ತು ಮಳೆ ನೀರು ಹರಿದು ಹೋಗಲು ಇರುವ ರಾಜಕಾಲುವೆ ಒತ್ತುವರಿಗೆ ಸಂಬಂಧಿಸಿದಂತೆ ಸ.ನಂ. 6, 10, 80, 84, 94ರ ಹಳ್ಳ ಇರುವ ಸರ್ಕಾರಿ ಜಮೀನಿನ ಅಳತೆ ಕಾರ್ಯ ನಡೆಸಿದ್ದು, ಮತ್ತು ಸ.ನಂ. 1, 118, 117, 116ರಲ್ಲಿ ಹಾದು ಹೋಗಿರುವ ಕಾಲುದಾರಿಯ ಅಳತೆ ಕಾರ್ಯ ಮಾಡಲಾಗಿರುತ್ತದೆ.<br><br>ಮುಂದುವರೆದು, ಸ.ನಂ. 3, 2, 8ರಲ್ಲಿ ಹಾದು ಹೋಗಿರುವ ಕಾಲುದಾರಿಯ ಅಳತೆ ಮಾಡಲಾಗಿದ್ದು, ನಕ್ಷೆ ನೀಡಲು ಬಾಕಿ ಇರುತ್ತದೆ. ಉಳಿದ ಸ.ನಂ: 101, 3, 99, 100, 101, 95, 92, 87, 84, 109, 108, 78, 79, 66, 70, 109, 110, 73, 74, 72, 71, 104, 102, 95, 93, 49, 51ರಲ್ಲಿ ಇರುವ ಕಾಲುದಾರಿಯನ್ನು ಅಳತೆ ಮಾಡಬೇಕಾಗಿರುತ್ತದೆ ಹಾಗೂ 63, 57, 58, 106, 82, 120, 126, 79ರಲ್ಲಿ ಹಾದು ಹೋಗಿರುವ ಬಂಡಿದಾರಿಯನ್ನು ಅಳತೆ ಮಾಡಬೇಕಾಗಿರುತ್ತದೆ. ಆದರೆ, ಸದರಿ ಅಳತೆ ಕಾರ್ಯಕ್ಕೆ ಗ್ರಾಮಲೆಕ್ಕಾಧಿಕಾರಿಗಳೊಂದಿಗೆ ಸಮನ್ವಯ ಮಾಡಿಕೊಂಡು ಅಳತೆ ಕಾರ್ಯನಿರ್ವಹಿಸಬೇಕಾಗಿದ್ದು, ಪ್ರಸ್ತುತ ಗ್ರಾಮ ಲೆಕ್ಕಾಧಿಕಾರಿಗಳು ಬೆಳೆ ಸಮೀಕ್ಷೆ ಕಾರ್ಯದಲ್ಲಿ ತೊಡಗಿರುವುದರಿಂದ ಹಾಗೂ ನ್ಯಾಯಾಲಯದ ಪ್ರಕರಣಕ್ಕೆ ಹಾಜರಾಗುವ ಕಾರಣದಿಂದಾಗಿ ಅಳತೆ ಕಾರ್ಯಕ್ಕೆ ಹಾಜರಾಗಲು ಸಾಧ್ಯವಾಗುತ್ತಿಲ್ಲವೆಂದು ಅಲ್ಲದೆ ಆಯುಕ್ತರು, ಭೂಮಾಪನ ಇವರ ನಿರ್ದೇಶನದಂತೆ ಬೇರೆ ಅಳತೆ ಕಡತಗಳಿಗೆ ಆದ್ಯತೆ ನೀಡಿ ಅಳತೆ ಕಾರ್ಯ ನಡೆಸಿದ್ದು, ಆವಲಹಳ್ಳಿ ಗ್ರಾಮದ ಸರ್ಕಾರಿ ಖರಾಬುಗಳನ್ನು ಅಳತೆ ಮಾಡಲು ವಿಳಂಬವಾಗಿರುತ್ತದೆಂದು, ಹಾಗೂ ಗ್ರಾಮ ಲೆಕ್ಕಾಧಿಕಾರಿಗಳ ಸಮನ್ವಯದೊಂದಿಗೆ ಈ ಅಳತೆ ಕೆಲಸ ನಿರ್ವಹಿಸಬೇಕಾಗಿರುವುದರಿಂದ ಸದರಿ ಮೇಲ್ಕಂಡ |

| | | | | |
|---|---|---|---|---|
| | | | | ಅಳತೆಯಾಗಬೇಕಾಗಿರುವ ಸರ್ವೆ ನಂಬರುಗಳ ಅಳತೆಯನ್ನು ಗ್ರಾಮ ಲೆಕ್ಕಿಗರ ಸಹಕಾರದೊಂದಿಗೆ ಅಳತೆ ಕೆಲಸವನ್ನು ಪೂರೈಸಿ ನಕ್ಷೆಯೊಂದಿಗೆ ವರದಿ ಸಲ್ಲಿಸಲು ಭೂಮಾಪಕರು ಕಾಲಾವಕಾಶವನ್ನು ಕೋರಿದ್ದಾಗಿ ವಿಶೇಷ ಜಿಲ್ಲಾಧಿಕಾರಿ, ಜಾರಿದಳ ಇವರು ವರದಿಸಿರುತ್ತಾರೆ.<br><br>ಆದ್ದರಿಂದ, ಆವಲಹಳ್ಳಿ, ಗ್ರಾಮದ ಮೇಲ್ಕಂಡ ಸರ್ವೆ ನಂಬರುಗಳ ಬಗ್ಗೆ ಭೂದಾಖಲೆಗಳ ಸಹಾಯಕ ನಿರ್ದೇಶಕರವರಿಂದ ನಕ್ಷೆ ಮತ್ತು ವರದಿ ಸ್ವೀಕೃತವಾದ ಕೂಡಲೇ ಒತ್ತುವರಿಯಾಗಿದ್ದಲ್ಲಿ ನಿಯಮಾನುಸಾರ ಪರಿಶೀಲಿಸಿ ಒತ್ತುವರಿ ತೆರವುಗೊಳಿಸಲು ಕ್ರಮ ಕೈಗೊಳ್ಳಲಾಗುವುದೆಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿದ ಸಮಿತಿಯು ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |
| 23 | 5967<br>ಚು.ಗು.ಪ್ರ:4064<br>ಶ್ರೀ ಸೋಮಣ್ಣ ಮ. ಬೇವಿನಮರದ<br>ವಿಪನದಿ: 22.11.2017 | ಹಾವೇರಿ ಜಿಲ್ಲೆಯಲ್ಲಿ ವಿಧವಾ ವೇತನ, ವೃದ್ಧಾಪ್ಯ ವೇತನ ಹಾಗೂ ಅಂಗವಿಕಲರ ವೇತನವನ್ನು ಪಡೆಯುತ್ತಿರುವ ಫಲಾನುಭವಿಗಳು ಹಾಗೂ ಇದುವರೆವಿಗೂ ವೇತನಕ್ಕಾಗಿ ಬಂದಿರುವ ಅರ್ಜಿಗಳ ಸಂಖ್ಯೆ ಹಾಗೂ ಬಾಕಿ ಇರುವ ಅರ್ಜಿಗಳ ಬಗ್ಗೆ. | ಬಾಕಿಯಿರುವ ಒಟ್ಟು 222 ಅರ್ಜಿಗಳು ಪರಿಶೀಲನೆ ಹಂತದಲ್ಲಿದ್ದು, ಸಕಾಲ ಯೋಜನೆಯಡಿ ಅರ್ಜಿಗಳ ವಿಲೇವಾರಿಗೆ ನಿಗಧಿಪಡಿಸಲಾಗಿರುವ 45 ದಿನಗಳ ಕಾಲಮಿತಿಯೊಳಗೆ ಸ್ಥಾನಿಕ ಪರಿಶೀಲನೆ ನಡೆಸಿ ಅರ್ಹ ಫಲಾನುಭವಿಗಳನ್ನು ಗುರುತಿಸಿ ಮಂಜೂರಾತಿ ನೀಡಲು ಕ್ರಮವಹಿಸಲಾಗುತ್ತಿದೆ ಎಂದು ಮಾನ್ಯ ಕಂದಾಯ ಸಚಿವರು ತಿಳಿಸಿದರು. | ದಿನಾಂಕ: 23.10.2018ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ಬಾಕಿ ಇರುವ 222 ಅರ್ಜಿಗಳಲ್ಲಿ ಅರ್ಜಿದಾರರು ಸಲ್ಲಿಸಿದ ದಾಖಲಾತಿಗಳನ್ನು ವಿಚಾರಣಾಧಿಕಾರಿಗಳು ನಡೆಸಿದ ಸ್ಥಾನಿಕ ಪರಿಶೀಲನೆಯಲ್ಲಿ 123 ಅರ್ಜಿಗಳು ಅರ್ಹ ಪ್ರಕರಣಗಳೆಂದು ಗುರುತಿಸಿ ಮಾಸಾಶನ ಮಂಜೂರು ಮಾಡಲಾಗಿದೆ.<br><br>ಉಳಿದ ಅರ್ಜಿಗಳನ್ನು ಸ್ಥಾನಿಕ ಪರಿಶೀಲನೆ ಸಂದರ್ಭದಲ್ಲಿ ನಿಗಧಿಪಡಿಸಿರುವಂತೆ ವೈದ್ಯಕೀಯ ಪ್ರಮಾಣ ಪತ್ರಗಳನ್ನು ಸಲ್ಲಿಸದಿರುವುದು. ಈಗಾಗಲೇ ಸರ್ಕಾರದಿಂದ ಬೇರೆ ಸೌಲಭ್ಯ ಪಡೆದಿರುವುದು, ಅವಶ್ಯ ದಾಖಲಾತಿಗಳನ್ನು ಒದಗಿಸದಿರುವುದು ಮತ್ತು ಆದಾಯ ಮಿತಿ ಹೆಚ್ಚಾಗಿರುವುದು ಕಂಡುಬಂದ ಪ್ರಕರಣಗಳಲ್ಲಿ ಅರ್ಜಿಯನ್ನು |

| | | | | |
|---|---|---|---|---|
| | | | | ತಿರಸ್ಕೃತಗೊಳಿಸಲಾಗಿರುತ್ತದೆ. ಅಲ್ಲದೇ, ಈ ಕುರಿತು ಅರ್ಜಿದಾರರಿಗೆ ಕಾರಣಗಳನ್ನು ತಿಳಿಸಿ ಹಿಂಬರಹ ನೀಡಲಾಗಿದೆ.<br>ಅಂತೆಯೇ ಅಕ್ಟೋಬರ್ 2017ಕ್ಕೆ ಬಾಕಿಯಿದ್ದ ಎಲ್ಲಾ 222 ಪ್ರಕರಣಗಳನ್ನು ಇತ್ಯರ್ಥಗೊಳಿಸಲಾಗಿದ್ದು, ಯಾವುದೇ ಬಾಕಿ ಇರುವುದಿಲ್ಲ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿದ ಸಮಿತಿಯು ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |
| 24 | 5968<br>ಚು.ಗು.ಪ್ರ:4609<br>ಶ್ರೀ ಕೋಟಾ ಶ್ರೀನಿವಾಸ ಪೂಜಾರಿ<br>ವಿಪನದಿ: 22.11.2017 | 2016ರ ಭೂ ಸುಧಾರಣೆ ಕಾಯ್ದೆ ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಿಗೆ ಅನ್ವಯಿಸುವುದೆ ಹಾಗೂ ಈ ಕಾಯ್ದೆಗೆ ಸಂಬಂದಿಸಿದ ನಿಯಮಗಳ ಬಗ್ಗೆ. | 2016ರ ಭೂ ಸುಧಾರಣೆ ಕಾಯ್ದೆಗೆ ಸಂಬಂಧಿಸಿದಂತೆ ನಿಯಮಗಳನ್ನು ರಚಿಸುವ ಬಗ್ಗೆ ಕ್ರಮ ಕೈಗೊಳ್ಳಲಾಗುತ್ತಿದೆ. ಈ ನಿಯಗಳಲ್ಲಿ ಎಲ್ಲ ಅಂಶಗಳು ಒಳಗೊಂಡಿರುತ್ತದೆ ಎಂದು ಮಾನ್ಯ ಕಂದಾಯ ಸಚಿವರು ತಿಳಿಸಿದರು. | ದಿನಾಂಕ: 23.10.2018ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ಕರ್ನಾಟಕ ಭೂಸುಧಾರಣಾ (ತಿದ್ದುಪಡಿ) ಕಾಯ್ದೆ 2016ಕ್ಕೆ ಸಂಬಂಧಿಸಿದಂತೆ, ಕರ್ನಾಟಕ ಭೂಸುಧಾರಣಾ (ತಿದ್ದುಪಡಿ) ನಿಯಮಗಳು–2017ನ್ನು ಸರ್ಕಾರದ ಅಧಿಸೂಚನೆ ಸಂಖ್ಯೆ: ಆರ್.ಡಿ 260 ಎಲ್‌ಆರ್‌ಎ 2017, ದಿನಾಂಕ: 11.01.2018ರಲ್ಲಿ ಹೊರಡಿಸಲಾಗಿದೆ. ಈ ನಿಯಮಗಳು ರಾಜ್ಯದ ಎಲ್ಲಾ ಜಿಲ್ಲೆಗಳಿಗೆ ಅನ್ವಯಿಸುತ್ತದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿದ ಸಮಿತಿಯು ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |
| 25 | 5969<br>ಚು.ಗು.ಪ್ರ : 3774<br>ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ<br>ವಿ.ಪ.ನ.ದಿ :<br>15–11–2017 | ಕಂದಾಯ ಇಲಾಖೆಯಡಿ ಗ್ರಾಮ ಸಹಾಯಕರನ್ನು ಗ್ರೂಪ್–ಡಿ ನೌಕರರೆಂದು ಪರಿಗಣಿಸಿ ಖಾಯಂ ಗೊಳಿಸುವ ಬಗ್ಗೆ. | ಒಟ್ಟು 9816 ಗ್ರಾಮ ಸಹಾಯಕರುಗಳು ಕಾರ್ಯನಿರ್ವಹಿಸುತ್ತಿದ್ದಾರೆ.<br>ಮನವಿಯು ಸರ್ಕಾರದ ಪರಿಶೀಲನೆಯಲ್ಲಿದೆ ಎಂದು ಕಂದಾಯ ಸಚಿವರು ತಿಳಿಸಿದರು.<br><br>ಮನವಿಯು ಸರ್ಕಾರದ ಪರಿಶೀಲನೆ | ದಿನಾಂಕ: 23.10.2018ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ಕರ್ನಾಟಕ ಗ್ರಾಮ ಕಚೇರಿಗಳ ರದ್ದಿಯಾತಿ ಕಾಯ್ದೆ 1961ರನ್ವಯ ದಿ: 1.2.1963ರಿಂದ ಅನ್ವಯವಾಗುವಂತೆ ವಂಶಪಾರಂಪರ್ಯವಾಗಿ ಬಂದ ಗ್ರಾಮ ಹಂತದ ಎಲ್ಲಾ ವಿಲೇಜ್ ಆಫೀಸರ್ಸ್ ಹುದ್ದೆಗಳು ರದ್ದಾದುದರಿಂದ, ಕೆಳಹಂತದ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದ ನೌಕರರನ್ನು ತಾತ್ಕಾಲಿಕ ಆಧಾರದ ಮೇಲೆ ಯಾವುದೇ ವಂಶಪಾರಂಪರ್ಯಗತ |

| | | | | |
|---|---|---|---|---|
| 26 | 5973<br>ಚು.ಗು.ಪ್ರ : 3770<br>ಶ್ರೀ ಆರ್. ಚೌಡರೆಡ್ಡಿ ತೂಪಲ್ಲಿ<br>ವಿ.ಪ.ನ.ದಿ:<br>15–11–2017 | ಲೋಕೋಪಯೋಗಿ, ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಹಾಗೂ ಇತರೆ ಇಲಾಖೆಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ದಿನಗೂಲಿ ನೌಕರರನ್ನು ಕರ್ನಾಟಕ ದಿನಗೂಲಿ ನೌಕರರ ಕ್ಷೇಮಾಭಿವೃದ್ಧಿ ನಿಯಮಗಳನ್ನು ರೂಪಿಸಿ ವಿಲೀನಗೊಳಿಸಿದಂತೆ ಕಂದಾಯ ಇಲಾಖೆಯಡಿ ಹಾಲಿ ಕಾರ್ಯ ನಿರ್ವಹಿಸುತ್ತಿರುವ ಗ್ರಾಮ ಸಹಾಯಕರನ್ನು ವಿಲೀನಗೊಳಿಸುವ ಬಗ್ಗೆ. | ಯಲ್ಲಿದೆ ಎಂದು ಮಾನ್ಯ ಕಂದಾಯ ಸಚಿವರು ತಿಳಿಸಿದರು. | ಹಕ್ಕುಗಳು ಅನ್ವಯವಾಗದಂತೆ, ಆಡಳಿತಾತ್ಮಕ ದೃಷ್ಟಿಯಿಂದ ಗ್ರಾಮ ಲೆಕ್ಕಿಗರಿಗೆ ಸಹಾಯ ಮಾಡುವ ಸಲುವಾಗಿ, ಒಟ್ಟು 10,450 ಗ್ರಾಮ ಸಹಾಯಕರ ಹುದ್ದೆಗಳನ್ನು ತಾತ್ಕಾಲಿಕವಾಗಿ ಮಿತವೇತನದ ಆಧಾರದ ಮೇಲೆ ಸೃಜಿಸಲಾಗಿದ್ದು, ತದನಂತರ ಈ ಹುದ್ದೆಗಳನ್ನು ಖಾಯಂ ಆಗಿ ಮುಂದುವರೆಸಿ ಸರ್ಕಾರದ ಆದೇಶ ಸಂಖ್ಯೆ: ಕಂಇ 01 ಬಿಎಸ್‌ಸಿ 2005, ದಿ: 10.7.2007ನ್ನು ಹೊರಡಿಸಲಾಗಿದೆ.<br><br>ಗ್ರಾಮ ಸಹಾಯಕರುಗಳಿಗೆ ಮಾಸಿಕ ಮಿತವೇತನವನ್ನು ಕಾಲಕಾಲಕ್ಕೆ ಹೆಚ್ಚಿಸಲಾಗಿದ್ದು, ಸರ್ಕಾರದ ಆದೇಶ ಸಂಖ್ಯೆ: ಕಂಇ 83 ಬಿಎಸ್‌ಐ 2011, ದಿನಾಂಕ: 26.3.2018ರಲ್ಲಿ ಮಾಸಿಕ ಮಿತವೇನವನ್ನು ರೂ. 10.000/ಗಳಿಂದ ರೂ. 12,000/= ಗಳಿಗೆ ಹೆಚ್ಚಿಸಿದೆ.<br><br>ಗ್ರಾಮ ಸಹಾಯಕರ ಸೇವೆಯನ್ನು ಗ್ರೂಪ್–ಡಿ ವೃಂದದಲ್ಲಿ ಖಾಯಂಗೊಳಿಸುವ ವಿಷಯಕ್ಕೆ ಸಂಬಂಧಿಸಿದಂತೆ ಮಾನ್ಯ ಕರ್ನಾಟಕ ಆಡಳಿತ ನ್ಯಾಯಮಂಡಳಿಯು ಅರ್ಜಿ ಸಂಖ್ಯೆ: 6233–6236/1995ರಲ್ಲಿ ದಿ: 5.12.1996ರಂದು ನೀಡಿದ ತೀರ್ಪನ್ನು ಪ್ರಶ್ನಿಸಿ ರಾಜ್ಯ ಸರ್ಕಾರವು ಮಾನ್ಯ ಸರ್ವೋಚ್ಛ ನ್ಯಾಯಾಲಯದಲ್ಲಿ ಸಿವಿಲ್ ಅಪೀಲು ಸಂಖ್ಯೆ: 4559–4562/1998ನ್ನು ದಾಖಲಿಸಿದ್ದು, ಮಾನ್ಯ ಸರ್ವೋಚ್ಛ ನ್ಯಾಯಾಲಯವು ರಾಜ್ಯ ಸರ್ಕಾರದ ಮೇಲ್ಮನವಿಯನ್ನು ಎತ್ತಿ ಹಿಡಿದಿದ್ದು, ಗ್ರಾಮ ಸಹಾಯಕರನ್ನು ಖಾಯಂಗೊಳಿಸಲು ಅವಕಾಶವಿರುವುದಿಲ್ಲವೆಂದು ದಿ: 6.11.2003ರ ಆದೇಶದಲ್ಲಿ ತೀರ್ಪು ನೀಡಿರುತ್ತದೆ. ಮಾನ್ಯ ಸರ್ವೋಚ್ಛ ನ್ಯಾಯಾಲಯದ ತೀರ್ಪಿನನ್ವಯ ಗ್ರಾಮ ಸಹಾಯಕರನ್ನು ಗ್ರೂಪ್–ಡಿ ಹುದ್ದೆಯಲ್ಲಿ ಖಾಯಂಗೊಳಿಸಲು ಅವಕಾಶವಿರುವುದಿಲ್ಲ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿದ ಸಮಿತಿಯು ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |

## ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆ

| ಕ್ರ ಸಂ. | ಆಶ್ವಾಸನೆ ಸಂಖ್ಯೆ | ಆಧಾರ ಮತ್ತು ದಿನಾಂಕ | ಆಶ್ವಾಸನೆ | ತೆಗೆದುಕೊಂಡ ಕ್ರಮ |
|---|---|---|---|---|
| 1 | 6280<br>ಚು.ಗು.ಪ್ರ:4550<br>ಶ್ರೀಮತಿ ಎಸ್. ವೀಣಾ ಅಚ್ಚಯ್ಯ<br>ವಿಪನದಿ: 22.11.2017 | ಕೊಡಗು ಜಿಲ್ಲೆಯ ವೀರಾಜಪೇಟೆ ಒಳಾಂಗಣ ಕ್ರೀಡಾಂಗಣ ಹಾಗೂ ಕೂಡಿಗೆಯ ಸಿಂಥೆಟಿಕ್ ಹಾಕಿ ಟರ್ಫ್ ಕ್ರೀಡಾಂಗಣದ ಕಾಮಗಾರಿಗಳಿಗೆ ಮಂಜೂರಾದ ಸಂಪೂರ್ಣ ಅನುದಾನ ಬಿಡುಗಡೆ ಬಗ್ಗೆ. | ವೀರಾಜಪೇಟೆ ಒಳಾಂಗಣ ಕ್ರೀಡಾಂಗಣ ನಿರ್ಮಾಣ ಕಾಮಗಾರಿಯನ್ನು ಗುತ್ತಿಗೆದಾರರ ಸ್ಥಗಿತಗೊಳಿಸಿರುವ ಹಿನ್ನೆಲೆಯಲ್ಲಿ ಗುತ್ತಿಗೆದಾರರ ವಿರುದ್ಧ ನಿಯಮಾನುಸಾರ ದಂಡನಾ ಕ್ರಮದ ಪ್ರಕ್ರಿಯೆಯನ್ನು ಈಗಾಗಲೇ ಕೈಗೊಳ್ಳಲಾಗಿದೆ. ಶೀಘ್ರವಾಗಿ ಕಾಮಗಾರಿಯನ್ನು ಪುನರಾರಂಭಿಸಲು ನಿಯಮಾನುಸಾರ ಕ್ರಮವಹಿಸಲಾಗುವುದು ಎಂದು ಮಾನ್ಯ ಮೀನುಗಾರಿಕೆ, ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು ತಿಳಿಸಿದರು. | ದಿನಾಂಕ: 18.1.2019ರ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ದಿನಾಂಕ: 18.1.2019ರ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ಕೊಡಗು ಜಿಲ್ಲೆಯ ವಿರಾಜಪೇಟೆಯಲ್ಲಿ ಒಳಾಂಗಣ ಕ್ರೀಡಾಂಗಣ ನಿರ್ಮಾಣವನ್ನು 326.66 ಲಕ್ಷ ವೆಚ್ಚಗಳಲ್ಲಿ ಕೈಗೆತ್ತಿಕೊಳ್ಳಲಾಗಿದ್ದು, ಪ್ರಸ್ತುತ ಕಾಮಗಾರಿ 90% ರಷ್ಟು ಪೂರ್ಣಗೊಂಡಿದೆ. ಮರದ ನೆಲಹಾಸು ಅಳವಡಿಕೆ ಹಾಗೂ ಕಿಟಕಿಗಳಿಗೆ ಅಲ್ಯೂಮಿನಿಯಮ್ ಷಟರ್ಸ್ ಅಳವಡಿಕೆ ಕಾಮಗಾರಿ ಮಾತ್ರ ಬಾಕಿ ಇದೆ. ಇದುವರೆಗೆ ಗುತ್ತಿಗೆದಾರರಿಗೆ ರೂ. 169.00 ಲಕ್ಷ ಪಾವತಿಸಲಾಗಿದೆ. ಪ್ರಸ್ತುತ ಸಾಲಿನ ಕ್ರಿಯಾ ಯೋಜನೆಯಲ್ಲಿ ರೂ. 25.00 ಲಕ್ಷ ಅನುದಾನ ಮೀಸಲಿರಿಸಿದ್ದು, ಕಾಮಗಾರಿ ಪ್ರಗತಿ ಆಧರಿಸಿ ಗುತ್ತಿಗೆದಾರರಿಗೆ ಹಣ ಪಾವತಿ ಮಾಡಲಾಗುವುದು.<br>ಕೂಡಿಗೆಯಲ್ಲಿ ರೂ. 342.05 ಲಕ್ಷ ವೆಚ್ಚಗಳಲ್ಲಿ ಹಾಕಿ ಟರ್ಫ್ ಅಳವಡಿಸುವ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದೆ. ಪ್ರಸ್ತುತ ಸಿಂಥಟಿಕ್ ಹಾಕಿ ಟರ್ಫ್ ಅಳವಡಿಸಲು ಅಗತ್ಯವಾದ ಆಸ್ಫಾಲ್ಟಿಂಗ್ ಒಳಗೊಂಡ ತಳಪಾಯ ಕಾಮಗಾರ ಪೂರ್ಣಗೊಂಡಿದೆ. ಸಿಂಥೆಟಿಕ್ ಹಾಕಿ ಟರ್ಫ್ ಸಾಮಾಗ್ರಿಗಳನ್ನು ಆಮದು ಮಾಡಿಕೊಂಡು, ಸ್ಥಳದಲ್ಲಿ ಶೇಖರಿಸಲಾಗಿದ್ದು, ಶೀಘ್ರ ಹಾಕಿ ಟರ್ಫ್ ಅಳವಡಿಕೆ ಕಾಮಗಾರಿ ಪೂರ್ಣಗೊಳಿಸಲಾಗುವುದು. ಸದರಿ ಕಾಮಗಾರಿಯ ಒಟ್ಟು ವೆಚ್ಚ ರೂ. 342.00 ಲಕ್ಷ ಆಗಿದ್ದು, ರೂ. 192.78 ಲಕ್ಷ ಮೊತ್ತಕ್ಕೆ ಆಮದು ಮಾಡಬೇಕಾದ ಸಾಮಾಗ್ರಿಗಳಿಗೆ ಸಂಬಂಧಿಸಿದಂತೆ ಹಣ ಬಿಡುಗಡೆ ಮಾಡಿ, ರಾಷ್ಟ್ರೀಕೃತ ಬ್ಯಾಂಕ್‌ನಲ್ಲಿ ಠೇವಣಿ ಇಟ್ಟು ಲೇಟರ್ ಆಫ್ ಕ್ರೆಡಿಟ್ ತೆರೆಯಲಾಗಿದೆ. ಟೆಂಡರ್ ನಿಯಮಾನುಸಾರ ಆಮದು ಮಾಡಲಾದ ಟರ್ಫ್ |

| | | | | |
|---|---|---|---|---|
| | | | | ಸಾಮಾಗ್ರಿಗಳ ಮೌಲ್ಯದ 50%ನ್ನು ಅಂದರೆ ರೂ. 96.39 ಲಕ್ಷಗಳನ್ನು ಲೆಟರ್ ಆಫ್ ಕ್ರೆಡಿಟ್ ಮೂಲಕ ಪಾವತಿಸಲಾಗಿದೆ. ಟರ್ಫ್ ಅಳವಡಿಸಿದ ನಂತರ 25% ಎಫ್.ಐ.ಹೆಚ್. ಪ್ರಮಾಣ ಪತ್ರ ಸ್ವೀಕರಿಸಿದ ನಂತರ ಉಳಿಕೆ ಮೊತ್ತ ಬಿಡುಗಡೆ ಮಾಡಲಾಗುವುದು. ಅದೇರೀತಿ ಸಿವಿಲ್ ಕಾಮಗಾರಿಗಳ ಬಾಬ್ತು ಅಂದಾಜು ವೆಚ್ಚ ರೂ. 149.27 ಲಕ್ಷಗಳಲ್ಲಿ ರೂ. 88.47 ಲಕ್ಷಗಳನ್ನು ಇದುವರೆಗೆ ಪಾವತಿಸಲಾಗಿದೆ. ಪ್ರಸ್ತುತ ಸಾಲಿನ ಕ್ರಿಯಾ ಯೋಜನೆಯಲ್ಲಿ ಈ ಬಾಬ್ತು ರೂ. 30.00 ಲಕ್ಷಗಳನ್ನು ಹಂಚಿಕೆ ಮಾಡಲಾಗಿದ್ದು, ಕಾಮಗಾರಿ ಪ್ರಗತಿ ಆಧರಿಸಿ ಗುತ್ತಿಗೆದಾರರಿಗೆ ಪಾವತಿ ಮಾಡಲಾಗುವುದು ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸಮಿತಿಯು ಭರವಸೆಯನ್ನು ಮುಕ್ತಾಯಗೊಳಿಸಿತು. |
| 2 | 6282<br>ಚು.ಗು.ಪ್ರ: 2073<br>ಶ್ರೀ ಜಿ.ಎಸ್ ನ್ಯಾಮಗೌಡ<br>ವಿಪನದಿ:22.07.2015 | ಯುವಜನ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿರುವ ಕ್ರೀಡಾ ತರಬೇತುದಾರರ ಮಾಸಿಕ ಸಂಚಿತ ವೇತನವನ್ನು ಪರಿಷ್ಕರಿಸುವ ಬಗ್ಗೆ. | ತರಬೇತುದಾರರಿಗೆ ಅವರು ಸಲ್ಲಿಸಿರುವ ಸೇವಾವಧಿ ಮತ್ತು ಅನುಭವದ ಆಧಾರದ ಮೇಲೆ ಮಾಸಿಕ ಸಂಚಿತ ವೇತನವನ್ನು ಪರಿಷ್ಕರಿಸುವ ಬಗ್ಗೆ ಕರ್ನಾಟಕ ಕ್ರೀಡಾ ಪ್ರಾಧಿಕಾರದಿಂದ ಪ್ರಸ್ತಾವನೆ ಸ್ವೀಕರಿಸಲಾಗಿದ್ದು, ಪರಿಶೀಲನೆಯಲ್ಲಿದೆ. ಈ ಬಗ್ಗೆ ಆರ್ಥಿಕ ಇಲಾಖೆಯ ಅಭಿಪ್ರಾಯದಂತೆ ನಿಯಮಾನುಸಾರ ಕ್ರಮಕೈಗೊಳ್ಳ ಲಾಗುವುದು ಎಂದು ಮಾನ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ರಾಜ್ಯ ಸಚಿವರು ತಿಳಿಸಿದರು. | ದಿನಾಂಕ: 30.10.2018ರ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ಕರ್ನಾಟಕ ಕ್ರೀಡಾ ಪ್ರಾಧಿಕಾರದಲ್ಲಿ ಕಾರ್ಯನಿರ್ವಹಿಸುತ್ತಿರುವ ಪದವೀಧರರ ಹಾಗೂ ಕ್ರೀಡಾ ತರಬೇತಿಯಲ್ಲಿ ಡಿಪ್ಲೋಮ ಹೊಂದಿದ ತರಬೇತಿದಾರರ ಮಾಸಿಕ ಸಂಚಿತ ವೇತನವನ್ನು ರೂ. 39.960ಗಳಿಗೆ ಹೆಚ್ಚಿಸಿ ನಿಗಧಿಪಡಿಸಲಾಗಿದೆ, ಅಷ್ಟೇ ಅಲ್ಲದೇ ಸದರಿ ತರಬೇತುದಾರರಲ್ಲಿ ಅತ್ಯುತ್ತಮ ಸಾಧನೆ ದಾಖಲಿಸಿರುವ ತರಬೇತಿದಾರರಿಗೆ ಮಾಸಿಕ ರೂ. 70,000/=ಗಳಿಗೆ ಹೆಚ್ಚಿಸಲು ಸರ್ಕಾರದ ಆದೇಶ ಸಂಖ್ಯೆ: ಯುಸೇಇ 11 ಯುಇಸೇ 2017, ದಿ: 26.3.2018ರಲ್ಲಿ ಅನುಮೋದನೆ ನೀಡಿ, ಸರ್ಕಾರದ ಆದೇಶ ಹೊರಡಿಸಲಾಗಿದೆಯೆಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸಮಿತಿಯು ಭರವಸೆಯನ್ನು ಮುಕ್ತಾಯಗೊಳಿಸಿತು. |

| | | | | |
|---|---|---|---|---|
| 3 | 6283<br>ಚು.ಗು.ಪ್ರ; 2295<br>ಶ್ರೀಮತಿ ಎಸ್.ವೀಣಾ ಅಚ್ಚಯ್ಯ<br>ವಿಪನದಿ:07.06.2017 | ಕೊಡಗು ಜಿಲ್ಲೆಯಲ್ಲಿರುವ ಹಾಕಿ ಕ್ರೀಡೆಗೆ ಸಂಬಂಧಿಸಿದಂತೆ ಕೊಡಗು ಜಿಲ್ಲೆಗೆ ವಿಶೇಷ ಪ್ರಾಧಾನ್ಯತೆ ಸೌಕರ್ಯಗಳನ್ನು ಒದಗಿಸುವ ಬಗ್ಗೆ. | ಕೊಡಗು ಮತ್ತು ಸೋಮವಾರ ಪೇಟೆಗಳಲ್ಲಿ ಸಿಂಥೆಟಿಕ್ ಹಾಕಿ ಟರ್ಫ್ ಅಳವಡಿಸುವ ಕಾಮಗಾರಿಯನ್ನು ಪ್ರಸಕ್ತ ಸಾಲಿನಲ್ಲಿ ಪೂರ್ಣಗೊಳಿಸಿ, ಕ್ರೀಡಾಪಟುಗಳ ಬಳಕೆಗೆ ಒದಗಿಸಲಾಗುವುದು ಎಂದು ಮಾನ್ಯ ಮೀನುಗಾರಿಕೆ, ಯುವ ಸಬಲೀಕರಣ ಹಾಗೂ ಕ್ರೀಡಾ ಸಚಿವರು ತಿಳಿಸಿದರು. | ದಿನಾಂಕ: 18.1.2019ರ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ಕೊಡಗು ಜಿಲ್ಲೆಯ ವಿರಾಜಪೇಟೆ ತಾಲ್ಲೂಕಿನ ಪೊನ್ನಂಪೇಟೆಯಲ್ಲಿ ಈಗಾಗಲೇ ಸಿಂಥೆಟಿಕ್ ಹಾಕಿ ಟರ್ಫ್ ಸೌಲಭ್ಯವನ್ನು ಒದಗಿಸಲಾಗಿದೆ.<br><br>ಕೂಡಿಗೆಯಲ್ಲಿ ರೂ. 342.05 ಲಕ್ಷ ವೆಚ್ಚಗಳಲ್ಲಿ ಹಾಕಿ ಟರ್ಫ್ ಅಳವಡಿಸುವ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದೆ. ಪ್ರಸ್ತುತ ಸಿಂಥಟಿಕ್ ಹಾಕಿ ಟರ್ಫ್ ಅಳವಡಿಸಲು ಅಗತ್ಯವಾದ ಆಸ್ಫಾಲ್ಟಿಂಗ್ ಒಳಗೊಂಡ ತಳಪಾಯ ಕಾಮಗಾರ ಪೂರ್ಣಗೊಂಡಿದೆ. ಸಿಂಥೆಟಿಕ್ ಹಾಕಿ ಟರ್ಫ್ ಸಾಮಾಗ್ರಿಗಳನ್ನು ಆಮದು ಮಾಡಿಕೊಂಡು, ಸ್ಥಳದಲ್ಲಿ ಶೇಖರಿಸಲಾಗಿದ್ದು, ಶೀಘ್ರ ಹಾಕಿ ಟರ್ಫ್ ಅಳವಡಿಕೆ ಕಾಮಗಾರಿ ಪೂರ್ಣಗೊಳಿಸಲಾಗುವುದು. ಸದರಿ ಕಾಮಗಾರಿಯ ಒಟ್ಟು ವೆಚ್ಚ ರೂ. 342.00 ಲಕ್ಷ ಆಗಿದ್ದು, ರೂ. 192.78 ಲಕ್ಷ ಮೊತ್ತಕ್ಕೆ ಆಮದು ಮಾಡಬೇಕಾದ ಸಾಮಾಗ್ರಿಗಳಿಗೆ ಸಂಬಂಧಿಸಿದಂತೆ ಹಣ ಬಿಡುಗಡೆ ಮಾಡಿ, ರಾಷ್ಟ್ರೀಕೃತ ಬ್ಯಾಂಕ್‌ನಲ್ಲಿ ಠೇವಣಿ ಇಟ್ಟು ಲೆಟರ್ ಆಫ್ ಕ್ರೆಡಿಟ್ ತೆರೆಯಲಾಗಿದೆ. ಟೆಂಡರ್ ನಿಯಮಾನುಸಾರ ಆಮದು ಮಾಡಲಾದ ಟರ್ಫ್ ಸಾಮಾಗ್ರಿಗಳ ಮೌಲ್ಯದ 50%ನ್ನು ಅಂದರೆ ರೂ. 96.39 ಲಕ್ಷಗಳನ್ನು ಲೆಟರ್ ಆಫ್ ಕ್ರೆಡಿಟ್ ಮೂಲಕ ಪಾವತಿಸಲಾಗಿದೆ. ಟರ್ಫ್ ಅಳವಡಿಸಿದ ನಂತರ 25% ಎಫ್.ಐ.ಹೆಚ್. ಪ್ರಮಾಣ ಪತ್ರ ಸ್ವೀಕರಿಸಿದ ನಂತರ ಉಳಿಕೆ ಮೊತ್ತ ಬಿಡುಗಡೆ ಮಾಡಲಾಗುವುದು. ಅದೇರೀತಿ ಸಿವಿಲ್ ಕಾಮಗಾರಿಗಳ ಬಾಬ್ತು ಅಂದಾಜು ವೆಚ್ಚ ರೂ. 149.27 ಲಕ್ಷಗಳಲ್ಲಿ ರೂ. 88.47 ಲಕ್ಷಗಳನ್ನು ಇದುವರೆಗೆ ಪಾವತಿಸಲಾಗಿದೆ. ಪ್ರಸ್ತುತ ಸಾಲಿನ ಕ್ರಿಯಾ ಯೋಜನೆಯಲ್ಲಿ ಈ ಬಾಬ್ತು ರೂ. 30.00 ಲಕ್ಷಗಳನ್ನು ಹಂಚಿಕೆ ಮಾಡಲಾಗಿದ್ದು, ಕಾಮಗಾರಿ ಪ್ರಗತಿ ಆಧರಿಸಿ ಗುತ್ತಿಗೆದಾರರಿಗೆ ಪಾವತಿ ಮಾಡಲಾಗುವುದು ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸಮಿತಿಯು ಭರವಸೆಯನ್ನು ಮುಕ್ತಾಯಗೊಳಿಸಿತು. |

| | | | | |
|---|---|---|---|---|
| 4 | 6284<br>ಚು.ಗು.ಪ್ರ; 2218<br>ಶ್ರೀ ಎಸ್.ವ್ಹಿ..<br>ಸಂಕನೂರ<br>ವಿಪನದಿ:07.06.2017 | ಹಾವೇರಿ ಜಿಲ್ಲೆಯ ಹಿರೇಕೆರೂರು ತಾಲ್ಲೂಕು ಕ್ರೀಡಾಂಗಣದಲ್ಲಿ ಒಳ ಕ್ರೀಡಾಂಗಣದ ಕಾಮಗಾರಿಗೆ ಅನುದಾನದ ಕೊರತೆ ಬಗ್ಗೆ. | ಒಳ ಕ್ರೀಡಾಂಗಣದ ಕಾಮಗಾರಿ ಮಂದಗತಿಯಲ್ಲಿ ಸಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಬಾಕಿ ಉಳಿದ ಅನುದಾನ ರೂ.13.00 ಲಕ್ಷಗಳನ್ನು ತಕ್ಷಣ ಬಿಡುಗಡೆ ಮಾಡಲಾಗುವುದು. ಒಳಾಂಗಣ ಕ್ರೀಡಾಂಗಣ ಕಾಮಗಾರಿ ಅಂತಿಮ ಹಂತದಲ್ಲಿದ್ದು, 2017ರಲ್ಲಿ ಈ ಒಳಾಂಗಣ ಕ್ರೀಡಾಂಗಣ ಕಾಮಗಾರಿ ಪೂರ್ಣಗೊಳಿಸಿ ಉದ್ಘಾಟನೆ ಮಾಡಲಾಗುವುದು ಎಂದು ಮಾನ್ಯ ಮೀನುಗಾರಿಕೆ, ಯುವ ಸಬಲೀಕರಣ ಹಾಗೂ ಕ್ರೀಡಾ ಸಚಿವರು ತಿಳಿಸಿದರು. | ದಿನಾಂಕ: 30.10.2018ರ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ಒಳಾಂಗಣ ಕ್ರೀಡಾಂಗಣ ಕಾಮಗಾರಿಯ ಬಾಕಿ ರೂ. 13.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದ್ದು, ಸದರಿ ಕಾಮಗಾರಿಯನ್ನು ಪೂರ್ಣಗೊಳಿಸಿ ದಿ: 24.8.2017ರಂದು ಅಂದಿನ ಜಿಲ್ಲಾ ಉಸ್ತುವಾರಿ ಸಚಿವರಿಂದ ಉದ್ಘಾಟನೆಗೊಳಿಸಿ ಲೋಕಾರ್ಪಣೆ ಮಾಡಲಾಗಿದ್ದು, ಕ್ರೀಡಾಪಟುಗಳು ಹಾಗೂ ಸಾರ್ವಜನರಿಕ ಬಳಕೆಯಲ್ಲಿದೆಯೆಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸಮಿತಿಯು ಭರವಸೆಯನ್ನು ಮುಕ್ತಾಯಗೊಳಿಸಿತು. |

## ಕೃಷಿ ಇಲಾಖೆ

| ಕ್ರಮ ಸಂಖ್ಯೆ | ಆಶ್ವಾಸನೆ ಸಂಖ್ಯೆ ಆಧಾರ ಮತ್ತು ದಿನಾಂಕ | ವಿಷಯ | ಆಶ್ವಾಸನೆ | ತೆಗೆದುಕೊಂಡ ಕ್ರಮ |
|---|---|---|---|---|
| 1.<br><br><br><br><br><br><br><br><br><br><br><br>2<br><br><br><br><br><br><br>3 | 1710<br>ಚು.ಪ್ರ.: 484<br>ಶ್ರೀ ರಾಮಚಂದ್ರ ಗೌಡ<br>ವಿ.ಪ.ನ.ದಿ: 14.01.2004<br><br><br><br><br><br><br><br><br>1712<br>ಶ್ರೀ ಪ್ರಭಾಕರ ಬಿ. ಕೋರೆ<br>ವಿ.ಪ.ನ.ದಿ: 14.01.2004<br>ಚು.ಪ್ರ: 138<br><br><br><br>1821<br>ಶ್ರೀಮತಿ ವಿನ್ನಿಫ್ರೆಡ್ ಎಫ್. ಫರ್ನಾಂಡೀಸ್<br>ವಿ.ಪ.ನ.ದಿ: 21.07.2004<br>ಚು.ಪ್ರ: 150 | ರಾಜ್ಯದ ಕೃಷಿ ಕ್ಷೇತ್ರದಲ್ಲಿ ನೈಸರ್ಗಿಕ ಗೊಬ್ಬರದ ಉತ್ಪಾದನೆ ಮತ್ತು ಬಳಕೆಯನ್ನು ಪ್ರೋತ್ಸಾಹಿಸುವ ಬಗ್ಗೆ. | ರಾಜ್ಯದಲ್ಲಿ ನೈಸರ್ಗಿಕ ಕೃಷಿಗೆ ವಿಶೇಷವಾದ ಒತ್ತು ನೀಡಬೇಕೆಂದು ನಿರ್ಣಯ ಮಾಡಲಾಗಿದೆ. ಜೊತೆಗೆ Organic farming policyಯನ್ನು ಮಾಡಬೇಕೆಂದು ಒಂದು ನಿರ್ಧಾರಕ್ಕೆ ಬಂದು ಒಂದೆರಡು ತಿಂಗಳೊಳಗಾಗಿ ಸಾವಯವ ಕೃಷಿ ನೀತಿಯನ್ನು ರಾಜ್ಯದಲ್ಲಿ ಅನುಷ್ಠಾನಕ್ಕೆ ತರಲಾಗುವುದೆಂದು ಮಾನ್ಯ ಕೃಷಿ ರಾಜ್ಯ ಸಚಿವರು ತಿಳಿಸಿದರು. | ದಿನಾಂಕ: 7.11.2018ರ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ಸಾವಯವ ಗೊಬ್ಬರಗಳನ್ನು ಬಳಸುವ ಬಗ್ಗೆ ರೈತರಲ್ಲಿ ಅರಿವು ಮೂಡಿಸುವ ಸಲುವಾಗಿ ಹಾಗೂ ಮಣ್ಣಿನ ಫಲವತ್ತತೆ ಮತ್ತು ಆರೋಗ್ಯವನ್ನು ಕಾಪಾಡಿ, ಉತ್ಪಾದನಾ ವೆಚ್ಚ ಕಡಿಮೆ ಮಾಡಲು ಸಾವಯವ ಗೊಬ್ಬರಗಳ ಬಳಕೆಗೆ ಹೆಚ್ಚಿನ ಪ್ರೋತ್ಸಾಹ ನೀಡುತ್ತಿದೆ. ಸಾವಯವ ಗೊಬ್ಬರಗಳನ್ನು ಸ್ಥಳೀಯವಾಗಿ ಲಭ್ಯವಿರುವ ಸಂಪನ್ಮೂಲಗಳಿಂದ ಸ್ವತ: ತಯಾರಿಸಿಕೊಳ್ಳಲು ರೈತರಿಗೆ ಉತ್ತೇಜನ ನೀಡಲಾಗುತ್ತಿದೆ. ಕಾಂಪೋಸ್ಟ ಘಟಕ, ಎರೆಹುಳು ಗೊಬ್ಬರ ಘಟಕ ನಿರ್ಮಾಣಕ್ಕೆ ಸಹಾಯಧನ ನೀಡಲಾಗುತ್ತಿದೆ. ಹಸಿರೆಲೆ ಗೊಬ್ಬರ ಬೀಜ, ಜೈವಿಕ ಪೀಡೆನಾಶಕಗಳು, ಜೈವಿಕ ಗೊಬ್ಬರಗಳು, ಸಾವಯವ ಗೊಬ್ಬರಗಳು, ಸಸ್ಯಜನ್ಯ ಕೀಟನಾಶಕಗಳು ಹಾಗೂ ಜೈವಿಕ ನಿಯಂತ್ರಣಕಾರಕಗಳ ಬಳಕೆಗೆ ಉತ್ತೇಜನ ನೀಡುವುದರ ಜೊತೆಗೆ ಇವುಗಳನ್ನು ರಿಯಾಯಿತಿ ದರದಲ್ಲಿಯೂ ಸಹ ರೈತರಿಗೆ ನೀಡಲಾಗುತ್ತಿದೆ. ಸಾವಯವ ಕೃಷಿಯನ್ನು ರಾಜ್ಯದಲ್ಲಿ ಪ್ರೋತ್ಸಾಹಿಸಿ ಹಾಗೂ ರಾಸಾಯನಿಕ ಗೊಬ್ಬರ/ ಕೀಟನಾಶಕಗಳ ಬಳಕೆಯನ್ನು ಕಡಿಮೆ ಮಾಡಿ ಮಣ್ಣಿನ ಆರೋಗ್ಯವನ್ನು ಕಾಪಾಡಿ ಕೃಷಿಯಲ್ಲಿ ಸುಸ್ಥಿರತೆ ಸಾಧಿಸಲು ಸಾವಯವ ಕೃಷಿ ನೀತಿಯನ್ನು ಮಾರ್ಚ್ 2004ರಲ್ಲಿ ಜಾರಿಗೆ ತಂದಿರುತ್ತದೆ. ಈ ಸಾವಯವ ಕೃಷಿ ನೀತಿಯನ್ವಯ ವಿವಿಧ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.<br>ಮುಂದುವರೆದು, ರಾಜ್ಯದಲ್ಲಿ 2013–14ನೇ ಸಾಲಿನಿಂದ ಅನುಷ್ಠಾನಗೊಳಿಸುತ್ತಿರುವ ಸಾವಯವ ಭಾಗ್ಯ ಯೋಜನೆ |

| | | | | |
|---|---|---|---|---|
| | | | | ಹಾಗೂ 2015–16 ಸಾಲಿನಿಂದ ಅನುಷ್ಠಾನಗೊಳಿಸುತ್ತಿರುವ ಪರಂಪರಾಗತ ಕೃಷಿ ವಿಕಾಸ ಯೋಜನೆಗಳಡಿಯಲ್ಲಿ ಸಾವಯವ ಗೊಬ್ಬರ ಉತ್ಪಾದನೆ ಹಾಗೂ ಬಳಕೆಗೆ ಪೂರಕವಾದ ಕಾರ್ಯಕ್ರಮ/ ಘಟಕಗಳಿಗೆ ಸಹಾಯಧನ ನೀಡಲಾಗುತ್ತಿದೆ. ರಾಜ್ಯದಲ್ಲಿ ಸಾವಯವ ಕೃಷಿ ನೀತಿ–2004ರ ಪರಿಷ್ಕೃತ ಸಾವಯವ ಕೃಷಿ ನೀತಿ–2017ನ್ನು ಜಾರಿಗೆ ತರಲಾಗಿದ್ದು, ಅದನ್ನು ಅನುಷ್ಠಾನಗೊಳಿಸಲಾಗುತ್ತದೆ. ನೈಸರ್ಗಿಕ ಕೃಷಿ ಪದ್ಧತಿಯಲ್ಲಿ ಬಳಸುವಂತಹ ಜೀವಾಮೃತ ಪಂಚಗವ್ಯ/ಬೀಜಾಮೃತ ತಯಾರಿಕೆಗೆ ಸಿಮೆಂಟ್ ತೊಟ್ಟಿ (400 ಲೀ. ಸಾಮರ್ಥ್ಯವುಳ್ಳ) ದ್ರವರೂಪದ ಗೊಬ್ಬರ ತಯಾರಿಕೆಗೆ ಬೇಕಾಗಿರುವ ಪ್ಲಾಸ್ಟಿಕ್ ಡ್ರಮ್‌ಗಳ, ಗಂಜಲ ಸಂಗ್ರಹಿಸುವ ತೊಟ್ಟಿಗಳು, ಎರಡು ದೇಸಿ ಹಸು ನಿಲ್ಲುವ ಜಾಗಕ್ಕೆ ನೆಲಹಾಸು ಮಾಡಲು ಸಹ ಸಹಾಯಧನ ನೀಡಲಾಗುತ್ತಿದೆ. ಅಲ್ಲದೇ ರಾಜ್ಯದ ಕೃಷಿ ವಿಶ್ವವಿದ್ಯಾನಿಲಯಗಳಲ್ಲಿಯೂ ನೈಸರ್ಗಿಕ ಕೃಷಿಯ ಸಂಶೋಧನೆಯನ್ನು ಕೈಗೊಳ್ಳಲಾಗುತ್ತಿದ್ದು, ಅಂತಿಮ ಸಂಶೋಧನಾ ಫಲಿತಾಂಶಗಳನ್ನು ಆಧರಿಸಿ ನೈಸರ್ಗಿಕ ಕೃಷಿಯನ್ನು ಇನ್ನೂ ಹೆಚ್ಚಿನ ರೀತಿಯಲ್ಲಿ ಪ್ರೋತ್ಸಾಹಿಸುವ ಬಗ್ಗೆ ಅಗತ್ಯ ಕ್ರಮ ಕೈಗೊಳ್ಳಲಾಗುವುದು.<br><br>ಸದರಿ ಯೋಜನೆಗಳಡಿ ಉತ್ಪಾದಿಸಲಾದ ಹಾಗೂ ರಾಜ್ಯದ ಇತರೆ ಸಾವಯವ ಉತ್ಪನ್ನಗಳಿಗೆ ವ್ಯವಸ್ಥಿತ ಮಾರುಕಟ್ಟೆ ಒದಗಿಸುವ ಉದ್ದೇಶದಿಂದ ರಾಜ್ಯಾದ್ಯಂತ ಪ್ರಾಂತೀಯ ಸಾವಯವ ಕೃಷಿಕರ ಸಂಘಗಳ ಒಕ್ಕೂಟಗಳನ್ನು ಸ್ಥಾಪಿಸಲಾಗಿದೆ. ಒಕ್ಕೂಟಗಳ ಮುಖಾಂತರ ಸಾವಯವ ಕೃಷಿ ಉತ್ಪನ್ನಗಳ ಸಂಗ್ರಹಣೆ, ಗ್ರೇಡಿಂಗ್, ಮೌಲ್ಯವರ್ಧನೆ, ಸಂಸ್ಕರಣೆ, ಪ್ಯಾಕಿಂಗ್, ಬ್ರಾಂಡ್ ಅಭಿವೃದ್ಧಿ, ಮಾರುಕಟ್ಟೆ ಬಳಕೆದಾರರಲ್ಲಿ ಅರಿವು ಮೂಡಿಸುವ ಕಾರ್ಯಕ್ರಮವನ್ನು |

| | | | | |
|---|---|---|---|---|
| | | | | ಹಮ್ಮಿಕೊಳ್ಳಲಾಗಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ಸಮಿತಿಯು ತೀರ್ಮಾನಿಸಿತು. |
| 4 | 4583<br>ಚು.ಗು.ಪ್ರ: 137<br>ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ<br>ವಿ.ಪ.ನ.ದಿ: 16.07.2013 | ರಾಜ್ಯದಲ್ಲಿ ಸಣ್ಣ ಮತ್ತು ಅತೀ ಸಣ್ಣ ರೈತರಿಗೆ ಅನುಕೂಲ ವಾಗುವಂತೆ ಯಾಂತ್ರೀಕೃತ ವಿಧಾನದಲ್ಲಿ ಕೃಷಿ ನಡೆಸುವ ಬಗ್ಗೆ. | ಮಾನ್ಯ ಸದಸ್ಯರ ಭಾವನೆಯನ್ನು ಅರ್ಥ ಮಾಡಿಕೊಂಡು ಇದರ ಬಗ್ಗೆ ಗಂಭೀರವಾಗಿ ಪ್ರಯತ್ನ ಮಾಡುತ್ತೇವೆ. ಯಾವ ಸಂಸ್ಥೆಯ ಮೂಲಕ ರೈತರಿಗೆ ಈ ಸೌಲಭ್ಯವನ್ನು ತಲುಪಿಸಬೇಕೆನ್ನುವುದರ ಬಗ್ಗೆ ಪರಿಶೀಲನೆ ಮಾಡುತ್ತೇವೆ ಎಂದು ಮಾನ್ಯ ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರು ತಿಳಿಸಿದರು. | ದಿನಾಂಕ: 7.11.2018ರ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, 2014–15ನೇ ಸಾಲಿನಲ್ಲಿ ರಾಜ್ಯದ ಗ್ರಾಮೀಣ ಪ್ರದೇಶದ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಸಕಾಲದಲ್ಲಿ, ಪಾರದರ್ಶಕವಾಗಿ ಮತ್ತು ಕಡಿಮೆ ಬಾಡಿಗೆ ದರದಲ್ಲಿ ಭೂಮಿ ಸಿದ್ದತೆ, ಬಿತ್ತನೆ/ನಾಟಿ ಮಾಡುವ ಉಪಕರಣಗಳು, ಕೊಯ್ಲು ಮತ್ತು ಸಂಸ್ಕರಣೆಗೆ ಉಪಯುಕ್ತವಾಗಿರುವ ವಿವಿಧ ಕೃಷಿ ಯಂತ್ರೋಪಕರಣಗಳನ್ನು ರೈತರಿಗೆ ಬಾಡಿಗೆ ಆಧಾರದಲ್ಲಿ ಒದಗಿಸಲು 175 ಹೋಬಳಿಗಳಲ್ಲಿ ಚಾರಿಟಬಲ್ ಟ್ರಸ್ಟ್/ಸರ್ಕಾರೇತರ ಸಂಸ್ಥೆಗಳ ಮೂಲಕ ಬಾಡಿಗೆ ಆಧಾರಿತ ಸೇವಾ ಕೇಂದ್ರಗಳನ್ನು (ಶ್ರೀ ಕ್ಷೇತ್ರ ಧರ್ಮಸ್ಥಳ ರೂರಲ್ ಡೆವಲೆಪ್‌ಮೆಂಟ್ ಪ್ರಾಜೆಕ್ಟ್, ಧರ್ಮಸ್ಥಳ ಮತ್ತು ಇಂಡಿಯನ್ ಸೊಸೈಟಿ ಆಫ್ ಅಗ್ರಿಬ್ಯುಸಿನೆಸ್ ಪ್ರೊಫೆಷನಲ್ಸ್, ನವದೆಹಲಿ) ಸ್ಥಾಪಿಸಲಾಗಿರುತ್ತದೆ.<br><br>ಹೋಬಳಿಗಳಲ್ಲಿ ರೈತರಿಗೆ ಬೇಕಾಗುವ ಹಾಗೂ ಅವಶ್ಯವಿರುವ ಕೃಷಿ ಯಂತ್ರೋಪಕರಣಗಳ ಬಗ್ಗೆ ಪೂರ್ವಭಾವಿ ಸಮೀಕ್ಷೆಯನ್ನು ಕೈಗೊಂಡು ಜಿಲ್ಲಾಮಟ್ಟದಲ್ಲಿ ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ರಚಿಸಿರುವ ಸಮಿತಿಯಲ್ಲಿ ಅನುಮೋದನೆ ಪಡೆದು, ಬಾಡಿಗೆ ಆಧಾರಿತ ಸೇವಾ ಕೇಂದ್ರಗಳಲ್ಲಿ ಕೃಷಿ ಯಂತ್ರೋಪಕರಣಗಳನ್ನು ಖರೀದಿಸಿ ದಾಸ್ತಾನು ಮಾಡಿ ರೈತರಿಗೆ ಬಾಡಿಗೆ ಆಧಾರದಲ್ಲಿ ಒದಗಿಸಲಾಗುತ್ತಿದೆ. ಮುಂದುವರೆದು, 2015–16ನೇ ಸಾಲಿಗೆ 315 ಕೃಷಿ ಯಂತ್ರಧಾರೆ ಕೇಂದ್ರಗಳನ್ನು ಸ್ಥಾಪಿಸಲು |

| | | | | |
|---|---|---|---|---|
| | | | | ಚಾರಿಟಬಲ್ ಟ್ರಸ್ಟ್/ಸರ್ಕಾರೇತರ ಸಂಸ್ಥೆಗಳ/ಕೃಷಿ ಉಪಕರಣಗಳ ತಯಾರಕ ಸಂಸ್ಥೆಗಳ ಕಲಾ ಚೇತನ ಯುವ ಸಂಸ್ಥೆ, ಬಿಜಾಪುರ, (M/s. V.S.T. Tillers Tractors Limited, Bengaluru, M/s. Mahindra & Mahindra Ltd., (FES), Swaraj Division, Punjab, M/s Mahindra & Mahindra Ltd., Mumbai & M/s. John Deere India Private Limited, Pune) ಮೂಲಕ ಕಾರ್ಯಕ್ರಮ ಅನುಷ್ಠಾನ ಪ್ರಗತಿಯಲ್ಲಿದ್ದು, ಈಗಾಗಲೇ 13075 ಕೃಷಿ ಯಂತ್ರಧಾರೆ ಕೇಂದ್ರಗಳನ್ನು ಸ್ಥಾಪಿಸಲಾಗಿದೆ.<br><br>2017–18ನೇ ಸಾಲಿನಲ್ಲಿ 95 ಕೃಷಿ ಯಂತ್ರಧಾರೆ ಕೇಂದ್ರಗಳನ್ನು ಸ್ಥಾಪಿಸಲು ಕಾರ್ಯಾದೇಶ ನೀಡಲಾಗಿದೆ. ಮುಂದುವರೆದು 2018–19ನೇ ಸಾಲಿನಲ್ಲಿ 139 ಕೃಷಿ ಯಂತ್ರಧಾರೆ ಕೇಂದ್ರಗಳನ್ನು ಸ್ಥಾಪಿಸಲು ಸಲುವಾಗಿ ಟೆಂಡರ್ ಕರೆಯಲಾಗಿದೆ.<br><br>ಇಲ್ಲಿಯವರೆಗೆ ಒಟ್ಟು 350 ಕೃಷಿ ಯಂತ್ರಧಾರೆ ಕೇಂದ್ರಗಳನ್ನು ಸ್ಥಾಪಿಸಲಾಗಿದೆಯೆಂದು ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |
| ೫ | 4584<br>ಚು.ರ.ಪ್ರ: 100<br>ಶ್ರೀ ಅಮರನಾಥ | ಗುಲ್ಬರ್ಗಾವನ್ನು ತೊಗರಿ ಕಣಜ ವೆಂದೇ ಗುರುತಿಸಲಾಗಿದ್ದು, ತೊಗರಿ ಮಂಡಳಿಗೆ ಹೆಚ್ಚಿನ | ಈ ಸಂಬಂಧ M/s North Eastern Regional Agricultural Marketing | ದಿನಾಂಕ: 7.11.2018ರ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ದಿನಾಂಕ: 23.08.2018ರಂದು ನಡೆದ ಮಂಡಳಿಯ ನಿರ್ದೇಶಕ ಮಂಡಳಿ ಸಭೆಯಲ್ಲಿ ಅನುಮೋದನೆ |

| | | | | |
|---|---|---|---|---|
| ೬ | ಪಾಟೀಲ್<br>ವಿ.ಪ.ನ.ದಿ: 16.07.2013<br><br>4554<br>ಚು.ಗು.ಪ್ರ: 362<br>ಶ್ರೀ ಅಮರನಾಥ ಪಾಟೀಲ್<br>ವಿ.ಪ.ನ.ದಿ:<br>16.07.2013<br>(ದಿನಾಂಕ:<br>29–05–2015ರ ಪತ್ರದಲ್ಲಿ ತಿಳಿಸಿರುವಂತೆ ತೋಟಗಾರಿಕೆ ಇಲಾಖೆಯಿಂದ ವರ್ಗಾವಣೆ)<br><br>5895<br>ಚು.ರ.ಪ್ರ. 2393<br>ಶ್ರೀ ಅಮರನಾಥ ಪಾಟೀಲ್<br>ವಿ.ಪ.ನ.ದಿ: 24.03.2015 | ಸ್ವಾಯತ್ತತೆ ನೀಡುವ ಯೋಜನೆ ಬಗ್ಗೆ.<br><br>ತೊಗರಿ ಬೋರ್ಡ್ ಇರುವ ರೀತ್ಯಾ ಎಲ್ಲಾ ಬೇಳೆ ಕಾಳುಗಳ ಅದರಲ್ಲೂ ಹೆಸರು, ಉದ್ದು ಇತ್ಯಾದಿ ಎಲ್ಲಾ ರೀತಿಯ ಕಾಳುಗಳನ್ನು ಒಳಗೊಂಡಂತೆ ಅಭಿವೃದ್ಧಿ ಯಾಗುವುದಕ್ಕೆ Pulse Board ಮಾಡುವ ಬಗ್ಗೆ.<br><br>ಕಲಬುರಗಿಯಲ್ಲಿರುವ ತೊಗರಿ ಮಂಡಳಿಯು ನಿಷ್ಕ್ರಿಯ ಗೊಂಡಿದ್ದು, ಸದರಿ ತೊಗರಿ | Corporation Limited (NERMAC), a Government Of India Enterprise, Under The Ministry Developement of North Eastern Region (DONER), ಸಂಸ್ಥೆಯಿಂದ ವರದಿಯನ್ನು ಪಡೆಯಲಾಗಿದ್ದು ಈ ಬಗ್ಗೆ ಕೈಗೊಳ್ಳಬೇಕಾದ ಕ್ರಮ ಸರ್ಕಾರದ ಪರಿಶೀಲನೆಯಲ್ಲಿದೆ ಎಂದು ಮಾನ್ಯ ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರು ತಿಳಿಸಿದರು.<br><br>ಇದರ ಬಗ್ಗೆ ಪರಿಶೀಲನೆಯನ್ನು ಮಾಡುತ್ತೇವೆ ಎಂದು ಮಾನ್ಯ ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರು ತಿಳಿಸಿದರು. | ಪಡೆಯುವಂತೆ ಹಾಗೂ ದಿನಾಂಕ: 11.9.2018ರಂದು ಮಾನ್ಯ ಕೃಷಿ ಸಚಿವರು ಹಾಗೂ ಅಧ್ಯಕ್ಷರು ಕರ್ನಾಟ ತೊಗರಿ ಮಂಡಳಿ ನಿ. ಕಲಬುರಗಿ ಇವರ ಅಧ್ಯಕ್ಷತೆಯಲ್ಲಿ ನಡೆದ 15ನೇ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಕಂಪನಿ ಕಾಯಿದೆ 2013ರ ನಿಯಮ 13 ಮತ್ತು 14ರ ನಿಯಮದಂತೆ ಕರ್ನಾಟಕ ತೊಗರಿ ಮಂಡಳಿಯ ಹೆಸರನ್ನು "ಕರ್ನಾಟಕ ರಾಜ್ಯ ಪಲ್ಸೆಸ್ ಅಭಿವೃದ್ಧಿ ಮಂಡಳಿ ನಿಯಮಿತ" ಎಂದು ಬದಲಾಯಿಸಲು ಒಪ್ಪಿಗೆ ನೀಡಲಾಗಿರುತ್ತದೆ. ಸದರಿ ನಿರ್ಣಯದಂತೆ ಎ.ಓ.ಎ. ಮತ್ತು ಎಂ.ಓ.ಎ.ಗಳಿಗೆ ಸೂಕ್ತ ತಿದ್ದುಪಡಿಗಳನ್ನು ಕಂಪನಿ ಕಾಯಿದೆ 2013ರ ಅನುಸಾರ ಅಳವಡಿಸಿ ಕೊಳ್ಳಲಾಗಿರುತ್ತದೆ.<br><br>ಮುಂದುವರೆದು, ವಾರ್ಷಿಕ ಸಾಮಾನ್ಯ ಸಭೆಯಲ್ಲಿ ತೆಗೆದುಕೊಂಡ ಎಲ್ಲಾ ನಿರ್ಣಯಗಳು ಮಾಹಿತಿಯನ್ನು ಕಂಪನಿ ರಿಜಿಸ್ಟ್ರಾರ್ ಇವರಿಗೆ ದಿನಾಂಕ: 03.10.2018ರಂದು ಎಂ.ಜೆ.ಟಿ–14 ಫಾರಂನಲ್ಲಿ ಸಲ್ಲಿಸಲಾಗಿದೆ ಮತ್ತು ಐ.ಎನ್.–24 ಫಾರಂನ್ನು ಸಹ ದಿನಾಂಕ: 05.10.2018ರಂದು ಸಲ್ಲಿಸಿದೆ. ರಿಜಿಸ್ಟ್ರಾರ್ ಆಫ್ ಕಂಪನಿ ಇವರಿಂದ ಸದ್ಯದಲ್ಲಿಯೇ "ಕರ್ನಾಟಕ ರಾಜ್ಯ ಪಲ್ಸೆಸ್ ಅಭಿವೃದ್ಧಿ ಮಂಡಳಿ ನಿ." ಎಂಬ ಹೆಸರಿನ ಪ್ರಮಾಣ ಪತ್ರ ನಿರೀಕ್ಷೆಯಲ್ಲಿರುತ್ತದೆ. ಕರ್ನಾಟಕ ರಾಜ್ಯ ಪಲ್ಸೆಸ್ ಅಭಿವೃದ್ಧಿ ಮಂಡಳಿ ನಿ. ಈ ಮೂಲಕ ಸಂಪೂರ್ಣವಾಗಿ ಸ್ವಾಯತ್ತತೆಯಿಂದ ಕಾರ್ಯನಿರ್ವಹಿಸಲು ಸಿದ್ಧವಾಗುತ್ತಿದೆ.<br><br>ಪ್ರಸ್ತಾಪಿತ "ಕರ್ನಾಟಕ ರಾಜ್ಯ ದ್ವಿ–ದಳ ಧಾನ್ಯ ಅಭಿವೃದ್ಧಿ ಮಂಡಳಿ ನಿ. ಕಲಬುರಗಿ' ಸಂಸ್ಥೆಯಡಿ ಕಲಬುರಗಿ ವಿಭಾಗಕ್ಕೆ ಸಂಬಂಧಿಸಿದಂತೆ ಬೀದರ್, ಕಲಬುರಗಿ, ಯಾದಗಿರ್ ರಾಯಚೂರು, ಕೊಪ್ಪಳ ಮತ್ತು ಬಳ್ಳಾರಿ |

| | | | | |
|---|---|---|---|---|
| 7 | | ಮಂಡಳಿಯನ್ನು ಪುನಶ್ಚೇತನ ಗೊಳಿಸುವ ಬಗ್ಗೆ. | ಕಲಬುರಗಿ ತೊಗರಿ ಮಂಡಳಿ ಕಾರ್ಯ ನಿರ್ವಹಿಸುತ್ತಿದ್ದು, ಮುಚ್ಚಲಾಗುವುದಿಲ್ಲ. ಕರ್ನಾಟಕ ತೊಗರಿ ಮಂಡಳಿಯನ್ನು ಪುನಶ್ಚೇತನಗೊಳಿಸುವ ಬಗ್ಗೆ ನ್ಯಾರೋಮ್ಯಾಕ್ (NERAMAC) ಸಂಸ್ಥೆಯು ನೀಡಿರುವ ವರದಿಯು ಸರ್ಕಾರದ ಪರಿಶೀಲನೆಯಲ್ಲಿದೆ ಎಂದು ಮಾನ್ಯ ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರು ತಿಳಿಸಿದರು. | ಜಿಲ್ಲೆಗಳೊಂದಿಗೆ ಬೆಳಗಾವಿ ವಿಭಾಗದಲ್ಲಿಯೂ ಬೆಳಗಾವಿ, ಧಾರವಾಡ, ಗದಗ, ಹಾವೇರಿ ವಿಜಾಪೂರ, ಬಾಗಲಕೋಟೆ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿಯೂ ಸಹ ರೈತರು ಹೆಚ್ಚಾಗಿ ದ್ವಿ–ದಳ ಧಾನ್ಯಗಳನ್ನು ಬೆಳೆಯುತ್ತಿದ್ದು, ಸದರಿ ರೈತರು ಬೆಳೆದಂತಹ ಎಲ್ಲಾ ದ್ವಿ–ದಳ ಧಾನ್ಯಗಳನ್ನು ನೇರವಾಗಿ ರೈತರಿಂದ ಖರೀದಿಸಲು ಅನುವಾಗುವಂತೆ ಪ್ರಥಮ ಹಂತವಾಗಿ ಪ್ರಸ್ತಾಪಿತ ಕರ್ನಾಟಕ ರಾಜ್ಯ ಪಲ್ಸೆಸ್ ಅಭಿವೃದ್ಧಿ ಮಂಡಳಿಯ ಕಾರ್ಯವ್ಯಾಪ್ತಿಯನ್ನು ವಿಸ್ತರಿಸಲು ಸರ್ಕಾರದ ಅನುಮೋದೆಯನ್ನು ನೀಡಲಾಗಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸಮಿತಿಯು ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |
| 8 | 4588<br>ಚು.ಗು.ಪ್ರ: 280<br>ಶ್ರೀಮತಿ ಭಾರತಿ ಶೆಟ್ಟಿ<br>ವಿ.ಪ.ನ.ದಿ: 26.11.2013 | ಕೃಷಿ ಬೆಲೆ ಆಯೋಗ ರಚನೆ ಮಾಡುವ ಬಗ್ಗೆ. | ಕೃಷಿ ಬೆಲೆ ಆಯೋಗದ ಕಾರ್ಯವೈಖರಿ ಬಗ್ಗೆ ಸಚಿವ ಸಂಪುಟ ಉಪ ಸಮಿತಿಯನ್ನು ರಚಿಸಲಾಗಿದ್ದು, ಸಂಪುಟ ಉಪ ಸಮಿತಿಯ ಸಲಹೆ–ಸೂಚನೆ ಮೇರೆಗೆ ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂದು ಮಾನ್ಯ ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರು ತಿಳಿಸಿದರು. | ದಿನಾಂಕ: 7.11.2018ರ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ಕೃಷಿ ಬೆಲೆ ಆಯೋಗವನ್ನು ದಿ: 31.01.2014ರ ಸರ್ಕಾರಿ ಆದೇಶ ಸಂಖ್ಯೆ: ಕೃಇ 61 ಕೃಉಇ 2013ರ ಪ್ರಕಾರ ರಚಿಸಿ ಅಧಿಸೂಚನೆ ಹೊರಡಿಸಲಾಗಿದೆ.<br><br>ದಿನಾಂಕ: 25..2014ರ ಸರ್ಕಾರಿ ಆದೇಶ ಸಂಖ್ಯೆ: ಕೃಇ 12 ಕೃಉಇ 2014 ರನ್ವಯ ಡಾ: ಟಿ.ಎನ್.ಪ್ರಕಾಶ್ ಕಮ್ಮರಡಿ ಅವರ ನೇತೃತ್ವದಲ್ಲಿ ಒಟ್ಟು 6 ಸದಸ್ಯರುಗಳನ್ನೊಳಗೊಂಡ ಕೃಷಿ ಬೆಲೆ ಆಯೋಗವನ್ನು ರಚಿಸಲಾಗಿದೆ. ಕರ್ನಾಟಕ ಕೃಷಿ ಬೆಲೆ ಆಯೋಗದ ಅವಧಿಯು ದಿನಾಂಕ: 25.6.2017ಕ್ಕೆ ಮುಕ್ತಾಯಗೊಂಡಿದ್ದು, ಕೃಷಿ ಬೆಲೆ ಆಯೋಗವನ್ನು ಮತ್ತೊಂದು ಅವಧಿಗೆ (2017 ರಿಂದ 2020)ರ ವರೆಗೆ |

| | | | | |
|---|---|---|---|---|
| | | | | ಮುಂದುವರೆಸಿ, ಸರ್ಕಾರದ ಆದೇಶ ಸಂಖ್ಯೆ: ಕೃಇ 57 ಕೃಇಕ 2017, ದಿ: 11.07.2017ರಲ್ಲಿ ಆದೇಶ ಹೊರಡಿಸಲಾಗಿದೆ ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸಮಿತಿಯ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |
| 9 | 4589<br>ಚು.ಗು.ಪ್ರ: 37<br>ಶ್ರೀ ಬಸವರಾಜ ಹೊರಟ್ಟಿ<br>ವಿ.ಪ.ನ.ದಿ: 26.11.2013 | ಧಾರವಾಡ–ಗದಗ ಮತ್ತು ಹಾವೇರಿ ಜಿಲ್ಲೆಗಳಲ್ಲಿ ಕನಕ ಹತ್ತಿ ಬೀಜ ಮತ್ತು ಗೋವಿನ ಜೋಳದ ಕಳಪೆ ಬೀಜವನ್ನು ರೈತರಿಗೆ ಮಾರಾಟ ಮಾಡಿದ್ದು, ಇದರಿಂದ ರೈತರಿಗೆ ತೊಂದರೆ ಯಾಗಿರುವ ಬಗ್ಗೆ. | ಸಮೀಕ್ಷೆ ನಡೆಸಿ ಹಾನಿಗೊಳಗಾದ ಪ್ರದೇಶವನ್ನು ನಿಖರವಾಗಿ ಗುರುತಿಸಿದ ನಂತರ ರೈತರಿಗೆ ಮಹಿಕೋ ಸಂಸ್ಥೆಯ ವತಿಯಿಂದ ಸೂಕ್ತವಾದ ನೆರವನ್ನು ನೀಡಲು ಕ್ರಮ ವಹಿಸಲಾಗುವುದು ಎಂದು ಮಾನ್ಯ ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರು ತಿಳಿಸಿದರು. | ದಿನಾಂಕ: 7.11.2018ರ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, 2013ರ ಮುಂಗಾರು ಹಂಗಾಮಿನಲ್ಲಿ ರಾಜ್ಯದ ಧಾರವಾಡ–ಗದಗ ಮತ್ತು ಹಾವೇರಿ ಜಿಲ್ಲೆಗಳಲ್ಲಿ ಮಹಿಕೋ ಕಂಪನಿಯಿಂದ ವಿತರಿಸಲಾದ ಬಿ.ಟಿ.ಹತ್ತಿ ಕನಕ ತಳಿಯು ನಿರೀಕ್ಷಿತ ಮಟ್ಟದಲ್ಲಿ ಇಳುವರಿ ನೀಡಲು ವಿಫಲವಾಗಿದ್ದು ಸಂಕಷ್ಟಕ್ಕೊಳಪಟ್ಟ ರೈತರು ದೂರು ನೀಡಿದ್ದ ಹಿನ್ನಲೆಯಲ್ಲಿ ಜಿಲ್ಲಾ ಜಂಟಿ ಸಮೀಕ್ಷಾ ತಂಡಗಳನ್ನು ರಚಿಸಿ ಸಮೀಕ್ಷೆ ನಡೆಸಿ ಅವರು ನೀಡಿದ ವರದಿಗಳನ್ವಯ ಹಾನಿಗೊಳಗಾದ ರೈತರಿಗೆ ಪ್ರತಿ ಹೆಕ್ಟೇರಿಗೆ ರೂ.6000 ರಂತೆ ಪರಿಹಾರ ಮೊತ್ತವನ್ನು ಈ ಕೆಳಕಂಡಂತೆ ನೀಡಲಾಗಿದೆ.<br><br>**ಜಿಲ್ಲೆ** / **ಹಾನಿಯಾದ ಕ್ಷೇತ್ರ (ಹೆ)** / **ನೀಡಿದ ಮೊತ್ತ (ರೂ.ಲಕ್ಷಗಳಲ್ಲಿ)**<br>ಹಾವೇರಿ / 21924 / 1315.44<br>ಧಾರವಾಡ / 13693 / 821.58<br>ಗದಗ / 9227 / 553.62<br><br>ಮೇಲ್ಕಂಡಂತೆ ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ಸಮಿತಿಯು ತೀರ್ಮಾನಿಸಿತು. |

| | | | | |
|---|---|---|---|---|
| 10 | 4590<br>ಚು.ಗು.ಪ್ರ: 310<br>ಶ್ರೀ ಮಹಾಂತೇಶ್ ಶಿವಾನಂದ ಕೌಜಲಗಿ<br>ವಿ.ಪ.ನ.ದಿ: 26.11.2013 | ರಾಜ್ಯದಲ್ಲಿ ಬೆಳೆ ಹಾನಿಯಾದರೂ 2011-2012, 2012-2013ನೇ ಸಾಲಿನಲ್ಲಿ ಇನ್ನೂವರೆಗೂ ಬೆಳೆ ವಿಮೆ ಸಿಗದೆ ರೈತರಿಗೆ ತೊಂದರೆಯಾಗಿರುವ ಬಗ್ಗೆ. | ರಾಜ್ಯದಲ್ಲಿ ಮೂರು ರೀತಿಯ ಬೆಳೆ ವಿಮೆಯನ್ನು ಜಾರಿ ಮಾಡಿದ್ದೇವೆ. ಇದರಲ್ಲಿ ಯಾವುದು ಹೆಚ್ಚಿಗೆ ರೈತರಿಗೆ ಅನುಕೂಲವಾಗುತ್ತದೆ ಎನ್ನುವುದನ್ನು ನೋಡಿ, ಅದನ್ನು ಎಲ್ಲಾ ರೈತರಿಗೂ ವಿಸ್ತರಿಸುವಂತಹ ಪ್ರಯತ್ನವನ್ನು ಮಾಡುತ್ತೇವೆ ಎಂದು ಮಾನ್ಯ ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರು ತಿಳಿಸಿದರು. | ದಿನಾಂಕ: 7.11.2018ರ ಸಮಿತಿ ಸಭೆಯಲ್ಲಿ ಚರ್ಚಿಸದಾಗ. ರಾಜ್ಯದಲ್ಲಿ 2017-18ರವರೆಗೆ ಮೂರು ರೀತಿಯ ಬೆಳೆ ವಿಮಾ ಯೋಜನೆಗಳಾದ ಇಳುವರಿ ಆಧಾರಿತ ರಾಷ್ಟ್ರೀಯ ಕೃಷಿ ವಿಮಾ ಯೋಜನೆ ಮತ್ತು ಮಾರ್ಪಡಿಸಿದ ರಾಷ್ಟ್ರೀಯ ಕೃಷಿ ವಿಮಾ ಯೋಜನೆ (ಪ್ರಾಯೋಗಿಕವಾಗಿ 4 ಜಿಲ್ಲೆಗಳು) ಹಾಗೂ ಹವಾಮಾನ ಆಧಾರಿತ ಬೆಳೆ ವಿಮಾ ಯೋಜನೆಗಳನ್ನು ಕೇಂದ್ರ ಸರ್ಕಾರದ ಮಾರ್ಗಸೂಚಿಯಂತೆ ಅನುಷ್ಠಾನಗೊಳಿಸಲಾಗುತ್ತಿತ್ತು. 2011-12, 2012-13ನೇ ಸಾಲಿನಲ್ಲಿ ಎಲ್ಲಾ ಅರ್ಹ ರೈತ ಫಲಾನುಭವಿಗಳಿಗೆ ಬೆಳೆ ವಿಮೆ ಇತ್ಯರ್ಥಪಡಿಸಲಾಗಿದೆ.<br><br>ರಾಷ್ಟ್ರೀಯ ಕೃಷಿ ವಿಮಾ ಯೋಜನೆಯನ್ನು ಮುಂಗಾರು 2000 ರಿಂದ ಹೋಬಳಿ ಮಟ್ಟದಲ್ಲಿ ಅನುಷ್ಠಾನಗೊಳಿಸಲಾಗುತ್ತಿದ್ದು, ಪ್ರಾರಂಭಿಕ ಇಳುವರಿಯನ್ನು ಲೆಕ್ಕ ಹಾಕಲು ಭತ್ತ ಮತ್ತು ಗೋಧಿ ಬೆಳೆಗಳಿಗೆ ಹಿಂದಿನ 3 ವರ್ಷಗಳ ಸರಾಸರಿ ಇಳುವರಿಯನ್ನು ಹಾಗೂ ಇತರ ಬೆಳೆಗಳಿಗೆ ಹಿಂದಿನ 5 ವರ್ಷಗಳ ಸರಾಸರಿ ಇಳುವರಿಯನ್ನು ಮತ್ತು ಬೆಳೆ ನಷ್ಟ ಸಂಭವವನ್ನು ಪರಿಗಣಿಸಲಾಗುತ್ತಿತ್ತು. ಸದರಿ ಯೋಜನೆಯಡಿ 3-5 ವರ್ಷಗಳ ಸರಾಸರಿ ಇಳುವರಿಯನ್ನು ಪರಿಗಣಿಸುತ್ತಿದ್ದರಿಂದ ಆ ವರ್ಷಗಳಲ್ಲಿ ಬರಗಾಲ ಘೋಷಿತವಾದರೆ ಪ್ರಾರಂಭಿಕ ಇಳುವರಿ ಕಡಿಮೆಯಾಗುವ ಸಂಭವ ಇದ್ದುದರಿಂದ, ಕೇಂದ್ರ ಸರ್ಕಾರವು ರಾಷ್ಟ್ರೀಯ ಕೃಷಿ ವಿಮಾ ಯೋಜನೆಯಲ್ಲಿರುವ ಕೆಲವು ನ್ಯೂನ್ಯತೆಗಳನ್ನು ಸರಿಪಡಿಸಿ ಮಾರ್ಪಾಡಿಸಲಾದ ರಾಷ್ಟ್ರೀಯ ಕೃಷಿ ವಿಮಾ ಯೋಜನೆಯನ್ನು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲೂ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಅನುಷ್ಠಾನಗೊಳಿಸಲು ಸೂಚನೆಗಳನ್ನು ನೀಡಲಾಗಿರುತ್ತದೆ. |

| | | | | |
|---|---|---|---|---|
| | | | | ಈ ಯೋಜನೆಯಡಿ, ಎಲ್ಲಾ ಬೆಳೆಗಳ ಪ್ರಾರಂಭಿಕ ಇಳುವರಿಯನ್ನು (ತ್ರೆಶೋಲ್ಡ್) ಲೆಕ್ಕ ಹಾಕುವ ಸಲುವಾಗಿ ಹಿಂದಿನ 7 ವರ್ಷಗಳ ಇಳುವರಿ ಮಾಹಿತಿಯಲ್ಲಿ ಸರ್ಕಾರವು ಬರಪೀಡಿತ ಎಂದು ಘೋಷಿಸಿರುವ 2 ವರ್ಷಗಳ ಇಳುವರಿ ಮಾಹಿತಿಯನ್ನು ಹೊರತುಪಡಿಸಿ ಉಳಿದ 5 ವರ್ಷಗಳ ಸರಾಸರಿ ಇಳುವರಿ ಮತ್ತು ಬೆಳೆ ನಷ್ಟ ಸಂಭವವನ್ನು ಪರಿಗಣಿಸಲಾಗುತ್ತದೆ. ಆದರೆ, ಈ ಯೋಜನೆಯಡಿ ರೈತರ ವಿಮಾ ಕಂತು ಶೇ.2 ರಿಂದ ಶೇ. 5ರಷ್ಟಿತ್ತು ಹಾಗೂ ಕೇವಲ ಎರಡು ಸ್ಥಳ ನಿರ್ದಿಷ್ಟ ಪ್ರಕೃತಿ ವಿಕೋಪಗಳನ್ನು ಒಳಪಡಿಸಲಾಗಿತ್ತು. ರಾಷ್ಟ್ರೀಯ ಕೃಷಿ ವಿಮಾ ಯೋಜನೆ ಹಾಗೂ ಮಾರ್ಪಡಿಸಿದ ರಾಷ್ಟ್ರೀಯ ಕೃಷಿ ವಿಮಾ ಯೋಜನೆಗಳ ಸೂಕ್ತ ಅಂಶಗಳನ್ನು ಪರಿಗಣಿಸಿ ಕೇಂದ್ರ ಸರ್ಕಾರವು ಪ್ರಧಾನ ಮಂತ್ರಿ ಫಸಲ್ ಬೀಮಾ ಯೋಜನೆಯನ್ನು 2016–17ನೇ ಸಾಲಿನಿಂದ ಅನುಷ್ಠಾನಗೊಳಿಸಲು ಆದೇಶ ನೀಡಿದ್ದು, ಅದರಂತೆ, ರಾಜ್ಯದಲ್ಲಿ ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆಯನ್ನು ಎಲ್ಲಾ ಜಿಲ್ಲೆಗಳ ಗ್ರಾಮ ಪಂಚಾಯಿತಿ ಮಟ್ಟದಲ್ಲಿ 2016ರ ಮುಂಗಾರು ಹಂಗಾಮಿನಿಂದ ಅನುಷ್ಠಾನಗೊಳಿಸಲಾಗಿದೆ.<br><br>ಈ ಯೋಜನೆಯ ಮುಖ್ಯ ಅಂಶಗಳು:<br><br>1. ರೈತರ ವಿಮಾ ಕಂತು ಆಹಾರ ಮತ್ತು ಎಣ್ಣೆ ಕಾಳು ಬೆಳೆಗಳಿಗೆ ಮುಂಗಾರು ಹಂಗಾಮಿನಲ್ಲಿ ವಿಮಾ ಮೊತ್ತದ ಶೇ.2 ಹಾಗೂ ಹಿಂಗಾರು ಮತ್ತು ಬೇಸಿಗೆ ಹಂಗಾಮುಗಳಲ್ಲಿ ಶೇ. 1.50 ರಷ್ಟು. |

| | | | | |
|---|---|---|---|---|
| | | | | 2. ಬೆಳೆ ನಷ್ಟ ಸಂಭವ :<br>ನೀರಾವರಿ ಬೆಳೆಗಳು : ಶೇ. 90<br>ಮಳೆ ಆಶ್ರಿತ ಬೆಳೆಗಳು : ಶೇ. 80<br><br>3. ಸ್ಥಳ ನಿರ್ದಿಷ್ಟ ಪ್ರಕೃತಿ ವಿಕೋಪಗಳು: ಆಲಿಕಲ್ಲು ಮಳೆ, ಭೂಕುಸಿತ ಮತ್ತು ಬೆಳೆ ಮುಳುಗಡೆ ಇವುಗಳಿಂದ ಉಂಟಾಗುವ ನಷ್ಟದ ನಿರ್ಧರಣೆಯನ್ನು ಪ್ರತ್ಯೇಕ ವಿಮಾದಾರರಿಗೆ ನಿರ್ಧರಿಸಿ ಬೆಳೆ ವಿಮಾ ನಷ್ಟ ಪರಿಹಾರವನ್ನು ಇತ್ಯರ್ಥಪಡಿಸಲಾಗುವುದು.<br>4. ಎಲ್ಲಾ ಜಿಲ್ಲೆಗಳಲ್ಲಿ ಅಧಿಸೂಚಿತ ಘಟಕದಲ್ಲಿ ಶೇಕಡಾ 75ಕ್ಕಿಂತ ಹೆಚ್ಚಿನ ಕ್ಷೇತ್ರದಲ್ಲಿ ಬಿತ್ತನೆ ವಿಫಲಗೊಂಡಲ್ಲಿ ವಿಮಾ ಮೊತ್ತದ ಗರಿಷ್ಠ ಶೇಕಡಾ 25 ರಷ್ಟು ಪರಿಹಾರವನ್ನು ನೀಡಲಾಗುವುದು.<br>5. ಬಿತ್ತನೆಯಿಂದ ಕಟಾವು ಹಂತದವರೆಗಿನ ಮಧ್ಯದ ಅವಧಿಯಲ್ಲಿ ಸಾಮಾನ್ಯ ಇಳುವರಿಗಿಂತ ಶೇಕಡಾ 50ಕ್ಕಿಂತ ಹೆಚ್ಚಿನ ಬೆಳೆ ನಷ್ಟ ಸಂಭವಿಸಿದಲ್ಲಿ ವಿಮೆ ಮಾಡಿಸಿದ ರೈತರಿಗೆ ಅಂದಾಜು ಮಾಡಲಾದ ಬೆಳೆ ವಿಮೆ ನಷ್ಟ ಪರಿಹಾರದಲ್ಲಿ ಶೇಕಡಾ 25ರಷ್ಟು ಹಣವನ್ನು ಮುಂಚಿತವಾಗಿ ನೀಡಲಾಗುವುದು.<br>6. ಕಟಾವಿನ ನಂತರ ಬೆಳೆಯನ್ನು ಜಮೀನಿನಲ್ಲಿ ಒಣಗಲು ಬಿಟ್ಟಂತಹ ಸಂದರ್ಭದಲ್ಲಿ ಎರಡು ವಾರಗಳೊಳಗೆ (ಹದಿನಾಲ್ಕು ದಿನಗಳು) ಚಂಡಮಾರುತ, ಚಂಡಮಾರುತ ಸಹಿತ ಮಳೆ ಮತ್ತು ಅಕಾಲಿಕ ಮಳೆಯಿಂದಾಗಿ ಬೆಳೆ ನಾಶವಾದರೆ ವೈಯಕ್ತಿಕವಾಗಿ ವಿಮಾ ಸಂಸ್ಥೆಯು ನಷ್ಟ ನಿರ್ಧಾರ ಮಾಡಿ ಬೆಳೆ ನಷ್ಟ ಪರಿಹಾರವನ್ನು ಇತ್ಯರ್ಥಪಡಿಸಲಾಗುವುದು. |

| | | | | |
|---|---|---|---|---|
| 11 | 4591<br>ಚು.ರ.ಪ್ರ.: 35<br>ಶ್ರೀ ಬಸವರಾಜ ಹೊರಟ್ಟಿ<br>ವಿ.ಪ.ನ.ದಿ: 26.11.2013 | ರಾಜ್ಯದಲ್ಲಿ ರೈತರಿಗೆ ವಿತರಿಸ ಬೇಕಾದ ಬೆಳೆ ವಿಮೆ ಬಾಕಿ ಬಗ್ಗೆ | ರಾಷ್ಟ್ರೀಯ ಕೃಷಿ ವಿಮಾ ಯೋಜನೆಗಳಡಿ ಬೆಳೆ ವಿಮಾ ನಷ್ಟ ಪರಿಹಾರವನ್ನು ವಿಮಾ ಸಂಸ್ಥೆಯು ಲೆಕ್ಕ ಹಾಕುತ್ತಿದ್ದು, ಶೀಘ್ರದಲ್ಲೆ ಇತ್ಯರ್ಥಪಡಿಸಲಾಗುವುದು ಎಂದು ಮಾನ್ಯ ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರು ತಿಳಿಸಿದರು. | <u>**ಹವಾಮಾನ ಆಧಾರಿತ ಬೆಳೆ ವಿಮಾ ಯೋಜನೆಯ ಮುಖ್ಯ ಅಂಶಗಳು :**</u> ರೈತರ ವಿಮಾ ಕಂತು ಆಹಾರ ಮತ್ತು ಎಣ್ಣೆ ಕಾಳು ಬೆಳೆಗಳಿಗೆ ಮುಂಗಾರು ಹಂಗಾಮಿನಲ್ಲಿ ವಿಮಾ ಮೊತ್ತದ ಶೇ.2 ಹಾಗೂ ಹಿಂಗಾರು ಮತ್ತು ಬೇಸಿಗೆ ಹಂಗಾಮುಗಳಲ್ಲಿ ಶೇ.1.50 ಹಾಗೂ ವಾರ್ಷಿಕ ವಾಣಿಜ್ಯ ಮತ್ತು ತೋಟಗಾರಿಕಾ ಬೆಳೆಗಳಿಗೆ ಶೇ. 5.00 ರಷ್ಟು<br><br><u>**ಈ ಯೋಜನೆಯ ಉದ್ದೇಶ**</u> : ರೈತರಿಗೆ ಹವಾಮಾನ ವೈಪರೀತ್ಯಗಳಿಂದ ಬೆಳೆ ನಷ್ಟ ಉಂಟಾದರೆ ಅಂದರೆ, ಅತಿವೃಷ್ಟಿ, ಅನಾವೃಷ್ಟಿ, ಆರ್ದ್ರತೆ, ಗಾಳಿಯ ವೇಗ ಮತ್ತು ತಾಪಮಾನಗಳಿಂದ ಉಂಟಾಗುವ ನಷ್ಟಕ್ಕೆ ಪರಿಹಾರ ನೀಡುತ್ತದೆ.<br><br>2012–13ನೇ ಸಾಲಿನ ಹಿಂಗಾರು ಮತ್ತು ಬೇಸಿಗೆ ಹಂಗಾಮಿನಲ್ಲಿ ರಾಷ್ಟ್ರೀಯ ಕೃಷಿ ವಿಮಾ ಯೋಜನೆ ಹಾಗೂ ಮಾರ್ಪಾಡಿಸಿದ ರಾಷ್ಟ್ರೀಯ ಕೃಷಿ ವಿಮಾ ಯೋಜನೆಗಳಡಿ ಬೆಳೆ ವಿಮಾ ನಷ್ಟ ಪರಿಹಾರವಾದ ರೂ. 2858.08 ಲಕ್ಷಗಳನ್ನು ರಾಜ್ಯದ 66615 ರೈತರಿಗೆ ಈಗಾಗಲೇ ಇತ್ಯರ್ಥಪಡಿಸಲಾಗಿದ್ದು, ಯಾವುದೂ ಬಾಕಿ ಇರುವುದಿಲ್ಲ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |
| 12 | 5048<br>ಚು.ಗು.ಪ್ರ. 1604<br>ಶ್ರೀ ಜಿ.ಎಸ್. ನ್ಯಾಮಗೌಡ<br>ವಿ.ಪ.ನ.ದಿ:17.03.2015 | ಉತ್ತರ ಕರ್ನಾಟಕದಲ್ಲಿ ಹೊಸ ಕೃಷಿ ವಿದ್ಯಾಲಯಗಳನ್ನು ಪ್ರಾರಂಭಿಸುವ ಬಗ್ಗೆ. | ರಾಜ್ಯದಲ್ಲಿರುವ ಕೃಷಿ ವಿಶ್ವವಿದ್ಯಾಲಯಗಳನ್ನು ಬಲಪಡಿಸುವ ಹಾಗೂ ಅಗತ್ಯವಿರುವೆಡೆ ಹೊಸ ಕಾಲೇಜುಗಳನ್ನು ತೆರೆಯುವ ಬಗ್ಗೆ | ದಿನಾಂಕ: 7.11.2018ರ ಸಮಿತಿ ಸಭೆಯಲ್ಲಿ ಚರ್ಚಿಸದಾಗ. ಕೃಷಿ ವಿಶ್ವವಿದ್ಯಾಲಯ, ಸ್ಥಾಪನೆಗೆ ಕನಿಷ್ಠ 500 ಎಕರೆ ಜಮೀನು ಮತ್ತು ಅಂದಾಜು ರೂ.200 ಕೋಟಿ ಅನುದಾನದ ಅವಶ್ಯವಿರುತ್ತದೆ. ಈ ಕುರಿತು ಯಾವುದೇ |

| | | | | |
|---|---|---|---|---|
| | | | ಅಭ್ಯಸಿಸಿ ವರದಿ ನೀಡುವ ಸಲುವಾಗಿ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರ ಅಧ್ಯಕ್ಷತೆಯಲ್ಲಿ ಪರಿಣಿತರ ಸಮಿತಿಯನ್ನು ರಚಿಸಿದ್ದು, ವರದಿಯನ್ನು ನಿರೀಕ್ಷಿಸಲಾಗುತ್ತಿದೆ ಎಂದು ಮಾನ್ಯ ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರು ತಿಳಿಸಿದರು. | ಪ್ರಸ್ತಾವನೆ ಸ್ವೀಕೃತವಾಗಿರುವುದಿಲ್ಲ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |
| 13<br><br><br><br><br><br>14 | 5049<br>ಚು.ರ.ಪ್ರ.: 1608<br>ಶ್ರೀ ಜಿ.ಎಸ್. ನ್ಯಾಮಗೌಡ<br>ವಿ.ಪ.ನ.ದಿ: 17.03.2015<br><br><br>5897<br>ಚು.ರ.ಪ್ರ.: 1608<br>ಶ್ರೀ ಜಿ.ಎಸ್. ನ್ಯಾಮಗೌಡ<br>ವಿ.ಪ.ನ.ದಿ: 17.03.2015 | ಸ್ವಂತ ನಿವೇಶನ ಹೊಂದಿರುವ ಕೃಷಿ ಡಿಪ್ಲೊಮಾ ಕಾಲೇಜುಗಳಿಗೆ ಕಾಲೇಜು ಕಟ್ಟಡ, ವಿದ್ಯಾರ್ಥಿಗಳ ವಸತಿ ನಿಲಯದ ಕಟ್ಟಡ ಹಾಗೂ ಸಿಬ್ಬಂದಿಗಳ ವಸತಿ ಸಮುಚ್ಛಯಗಳನ್ನು ನಿರ್ಮಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳ ಬಗ್ಗೆ. | ಬೆಂಗಳೂರು ಕೃಷಿ ವಿಶ್ವವಿದ್ಯಾಲಯ, ಧಾರವಾಡ ಕೃಷಿ ವಿಶ್ವವಿದ್ಯಾಲಯ ಹಾಗೂ ರಾಯಚೂರು ಕೃಷಿ ವಿಶ್ವವಿದ್ಯಾಲಯಕ್ಕೆ ಸಂಬಂಧಪಟ್ಟಂತೆ ವಿಶ್ವವಿದ್ಯಾಲಯದ ಆವರಣದಲ್ಲಿರುವ ಕಟ್ಟಡ ಹಾಗೂ ಲಭ್ಯವಿರುವ ಸೌಲಭ್ಯಗಳನ್ನು ಉಪಯೋಗಿಸಿಕೊಳ್ಳಲಾಗುತ್ತಿದೆ. ಶಿವಮೊಗ್ಗ ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯಕ್ಕೆ ಅನುದಾನ ನೀಡುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿರುತ್ತದೆ ಎಂದು ಮಾನ್ಯ ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರು ತಿಳಿಸಿದರು. | ದಿನಾಂಕ: 7.11.2018ರ ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು.<br><br><br><br><br>**<u>ಬೆಂಗಳೂರು ಕೃ.ವಿ.ವಿ.</u>**<br><br>ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಅಧೀನದಲ್ಲಿ ಬರುವ ಕೃಷಿ ಮಹಾವಿದ್ಯಾಲಯ, ವಿ.ಸಿ. ಫಾರಂ., ಮಂಡ್ಯದಲ್ಲಿ ಬರುವ ಕೃಷಿ ಡಿಪ್ಲೋಮಾ ಕಾಲೇಜನ್ನು ಈಗಾಗಲೇ ಸರ್ಕಾರ ಒದಗಿಸಿದ ಅನುದಾನದಲ್ಲಿ ಸ್ಥಾಪಿಸಲಾಗಿದ್ದು, ಅದಕ್ಕೆ ಬೇಕಾದ ಆಡಳಿತ ಕಚೇರಿ ಕಟ್ಟಡ, ಡಿಪ್ಲೋಮಾ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರ ವಸತಿ ನಿಲಯದ ಕಟ್ಟಡಗಳನ್ನು ನಿರ್ಮಿಸಲಾಗಿದೆ. ಹಣಕಾಸಿನ ಅಭಾವದಿಂದ ಸಿಬ್ಬಂದಿಗಳ ವಸತಿ ಸಮುಚ್ಛಯಗಳನ್ನು ನಿರ್ಮಿಸಲು ಸಾಧ್ಯವಾಗಿರುವುದಿಲ್ಲ. ಮುಂದಿನ ದಿನಗಳಲ್ಲಿ ಸಿಬ್ಬಂದಿಗಳ |

| | | | | |
|---|---|---|---|---|
| | | | | ವಸತಿ ಸಮುಚ್ಛಯಗಳನ್ನು ನಿರ್ಮಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸಮಿತಿಯ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |
| 15 | 5050<br>ಚು.ಗು.ಪ್ರ. 1569<br>ಶ್ರೀ ಬಸವರಾಜ ಹೊರಟ್ಟಿ<br>ವಿ.ಪ.ನ.ದಿ: 17.03.2015 | ಇಂಟಿಗ್ರೇಟೆಡ್ ವಿಶ್ವವಿದ್ಯಾಲಯಗಳನ್ನು ಸ್ಥಾಪಿಸುವ ಕುರಿತು ಸರ್ಕಾರ ಕೈಗೊಂಡಿರುವ ಕ್ರಮದ ಬಗ್ಗೆ. | ಇಂಟಿಗ್ರೇಟೆಡ್ ವಿಶ್ವವಿದ್ಯಾಲಯಗಳನ್ನು ಸ್ಥಾಪಿಸುವ ಬಗ್ಗೆ ಸರ್ಕಾರವು ಪರಿಶೀಲಿಸುತ್ತಿದ್ದು, ತೋಟಗಾರಿಕೆ, ಪಶು ಸಂಗೋಪನೆ ಮತ್ತು ಮೀನುಗಾರಿಕಾ ಇಲಾಖೆಗಳ ಹಾಗೂ ಆರ್ಥಿಕ ಮತ್ತು ಯೋಜನಾ ಇಲಾಖೆಗಳ ಅಭಿಪ್ರಾಯವನ್ನು ಪಡೆಯಲಾಗುತ್ತಿದೆ. ಸಂಬಂಧಪಟ್ಟ ಎಲ್ಲಾ ಇಲಾಖೆಗಳ ಅಭಿಪ್ರಾಯ ಪಡೆದು ಇಂಟೆಗ್ರೇಟೆಡ್ ವಿಶ್ವವಿದ್ಯಾಲಯಗಳ ಸ್ಥಾಪನೆಯ ಸಾಧಕ-ಭಾಧಕಗಳನ್ನು ಪರಿಶೀಲಿಸಿ ಅಂತಿಮ ನಿರ್ಣಯ ಕೈಗೊಳ್ಳಲಾಗುವುದು ಎಂದು ಮಾನ್ಯ ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರು ತಿಳಿಸಿದರು. | ದಿನಾಂಕ: 7.11.2018ರ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ರೈತ ಸಮುದಾಯಕ್ಕೆ ಒಂದೇ ಸೂರಿನಲ್ಲಿ ಸಮಸ್ಯೆಗಳಿಗೆ ಪರಿಹಾರ ನೀಡುವುದು ಅನುಕೂಲವಾಗುತ್ತದೆ. ಕೃಷಿ/ಒಕ್ಕಲುತನದ ಅವಿಭಾಜ್ಯ ಅಂಗಗಳಾದ ಹೈನುಗಾರಿಕೆ, ಕೋಲಿ ಸಾಕಾಣಿಕೆ/ ಮೀನುಗಾರಿಕೆ ತೋಟಗಾರಿಕೆ ಇತ್ಯಾದಿಗಳ ವಿಷಯಗಳನ್ನು ಈಗ ಇರುವ ಎಲ್ಲಾ ವಿಶ್ವವಿದ್ಯಾಲಯಗಳಲ್ಲಿ ಬೋಧನೆ, ಸಂಶೋಧನೆ ಹಾಗೂ ವಿಸ್ತರಣೆಗೆ ಅನುವು ಮಾಡಿಕೊಡುವುದು ಸಮರ್ಥನೀಯ. ಹೀಗಾಗಿ ಅಯಾ ಪ್ರದೇಶದ ಕೃಷಿ ಆಧಾರಿತ ಚಟುವಟಿಕೆಗಳಿಗೆ ಉತ್ತೇಜನ ಸಿಗುತ್ತದೆ. ಈ ಎಲ್ಲಾ ಹಿನ್ನಲೆಯಲ್ಲಿ ಪ್ರಸ್ತಾವನೆಯನ್ನು ಪರಿಶೀಲಿಸಲಾಗುತ್ತಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |
| 16 | 5900<br>ಚು.ಗು.ಪ್ರ. : 503<br>ಶ್ರೀ ಮಹಾಂತೇಶ ಶಿವಾನಂದ ಕೌಜಲಗಿ<br>ವಿ.ಪ.ನ.ದಿ:22.03.2016 | ಬೈಲಹೊಂಗಲ ಹಾಗೂ ಸವದತ್ತಿ ತಾಲ್ಲೂಕಿನಲ್ಲಿ ರೈತರಿಗೆ ಬೆಳೆ ವಿಮೆ ಹಣ ಬಿಡುಗಡೆ ಮಾಡುವ ಕುರಿತು. | 2015ರ ಮುಂಗಾರು ಹಂಗಾಮಿನ ಬೆಳೆಗಳ ಇಳುವರಿ ಮಾಹಿತಿಯನ್ನು ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆಯವರು ವಿಮಾ ಸಂಸ್ಥೆಗೆ ನೀಡಲು ಕೊನೆಯ ದಿನಾಂಕ: 31.03.2016 ಆಗಿದ್ದು, ನಂತರ ವಿಮಾ | ದಿನಾಂಕ: 7.11.2018ರ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, 2015ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ಬೈಲಹೊಂಗಲ ಹಾಗೂ ಸವದತ್ತಿ ತಾಲ್ಲೂಕಿನಲ್ಲಿ ಬೆಳೆವಿಮೆ ಮಾಡಿಸಿದ ಎಲ್ಲಾ ಅರ್ಹ ರೈತರಿಗೆ ಜೂನ್ 2016ರಲ್ಲಿ ಬೆಳೆ ವಿಮಾ ನಷ್ಟ ಪರಿಹಾರವನ್ನು ಸಂಪೂರ್ಣವಾಗಿ ಇತ್ಯರ್ಥ ಪಡಿಸಲಾಗಿದ್ದು ಬಾಕಿ ಯಾವುದೂ ಇರುವುದಿಲ್ಲ |

<table>
<tr>
<td></td>
<td></td>
<td></td>
<td>ಸಂಸ್ಥೆಯವರು ಬೆಳೆ ವಿಮಾ ನಷ್ಟ ಪರಿಹಾರವನ್ನು ಲೆಕ್ಕ ಹಾಕಿ ಬೈಲಹೊಂಗಲ ಹಾಗೂ ಸವದತ್ತಿ ತಾಲ್ಲೂಕಿನಲ್ಲಿ ಬೆಳೆ ವಿಮೆ ಮಾಡಿಸಿದ ರೈತರನ್ನು ಒಳಗೊಂಡಂತೆ ರಾಜ್ಯದ ಎಲ್ಲಾ ಅರ್ಹ ರೈತರಿಗೂ ಶೀಘ್ರವಾಗಿ ಇತ್ಯರ್ಥಪಡಿಸಲು ಕ್ರಮಕೈಗೊಳ್ಳಲಾಗುತ್ತದೆ ಎಂದು ಮಾನ್ಯ ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರು ತಿಳಿಸಿತ್ತಾರೆ.</td>
<td>ತಾಲ್ಲೂಕುವಾರು ವಿವರ ಈ ಕೆಳಕಂಡಂತಿದೆ :
<table>
<tr><th>ತಾಲ್ಲೂಕು</th><th>ಬೆಳೆ ವಿಮೆ ಪರಿಹಾರ ಇತ್ಯರ್ಥ ಮಾಡಿದ ಮೊತ್ತ (ಲಕ್ಷ ರೂ.)</th><th>ಫಲಾನುಭವಿ ರೈತರ ಸಂಖ್ಯೆ</th></tr>
<tr><td>ಬೈಲಹೊಂಗಲ</td><td>1132.24</td><td>10377</td></tr>
<tr><td>ಸವದತ್ತಿ</td><td>166.55</td><td>1844</td></tr>
</table>
ಮೇಲ್ಕಂಡಂತೆ ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು.</td>
</tr>
<tr>
<td>17</td>
<td>5278<br>ಚು.ಗು.ಪ್ರ: 242<br>ಶ್ರೀ ಬಿ. ರಾಮಕೃಷ್ಣ<br>ವಿಪನದಿ: 09.12.2014</td>
<td>ರಾಜ್ಯ ಸರ್ಕಾರ ರೈತರಿಗಾಗಿ ಕೃಷಿ ಭಾಗ್ಯ ಯೋಜನೆಯಡಿ ಒದಗಿಸಲಾಗುವ ಸೌಲಭ್ಯ ಹಾಗೂ ಕೃಷಿನಿರತ ರೈತರನ್ನು ಫಲಾನುಭವಿಗಳನ್ನಾಗಿ ಆಯ್ಕೆ ಮಾಡುವಲ್ಲಿ ಅನುಸರಿಸಲಾಗಿರುವ ಮಾನದಂಡಗಳ ಬಗ್ಗೆ.</td>
<td>ಪ್ರತಿ ತಾಲ್ಲೂಕಿನಲ್ಲಿ ಲಾಟರಿ ಮೂಲಕ ಪಾಲಿಹೌಸ್ ರಹಿತ ಪ್ಯಾಕೇಜ್‌ಗೆ 400 ಹಾಗೂ ಪಾಲಿಹೌಸ್ ಸಹಿತ ಪ್ಯಾಕೇಜ್‌ಗೆ 20 ಫಲಾನುಭವಿಗಳ ಆಯ್ಕೆ ಮಾಡಲಾಗಿದ್ದು, ಜಂಟಿ ಸಮೀಕ್ಷೆಯ ಕ್ಷೇತ್ರ ಪರಿಶೀಲನೆ ಮಾಡಿ ಪ್ರತಿ ತಾಲ್ಲೂಕಿಗೆ ನೀಡಿರುವ ಗುರಿಯನ್ವಯ ಅರ್ಹ 200 (ಪಾಲಿಹೌಸ್ ರಹಿತ)+10 (ಪಾಲಿಹೌಸ್) ಫಲಾನುಭವಿಗಳನ್ನು ಆಯ್ಕೆ ಮಾಡುವ ಕಾರ್ಯ ಪ್ರಗತಿಯಲ್ಲಿದೆ ಎಂದು ಮಾನ್ಯ ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರು ತಿಳಿಸಿದರು.</td>
<td>ದಿನಾಂಕ: 7.11.2018ರ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ರಾಜ್ಯದಲ್ಲಿ ಕೃಷಿ ಭಾಗ್ಯ ಯೋಜನೆಯನ್ನು 2014–15ನೇ ಸಾಲಿನಿಂದ ಅನುಷ್ಠಾನಗೊಳಿಸಲಾಗುತ್ತಿದೆ.<br><br>2014–15ನೇ ಸಾಲಿನಿಂದ 2016–17ನೇ ಸಾಲಿನವರೆಗೆ ಯೋಜನೆಯಡಿ ಈ ಕೆಳಕಂಡ ಘಟಕಗಳನ್ನು ನೀಡಲಾಗಿದೆ.<br><br><u>ಅ) ಕೃಷಿ ಹೊಂಡ ಹಾಗೂ ಇತರೆ ಘಟಕಗಳು:</u><br><br>1. ಸ್ಥಳದಲ್ಲಿಯೇ ಮಣ್ಣಿನ ತೇವಾಂಶ ಸಂರಕ್ಷಣೆ ಕ್ರಮಗಳು (ಕ್ಷೇತ್ರ ಬದು)<br><br>2. ಪಾಲಿಥೀನ್ ಹೊದಿಕೆ ಸಹಿತ ನೀರು ಸಂಗ್ರಹಣಾ ರಚನೆಗಳು (ಕೃಷಿ ಹೊಂಡ)<br><br>3. ನೀರು ಎತ್ತಲು ಡೀಸಲ್/ಸೋಲಾರ್‌ಪಂಪ್‌ಸೆಟ್</td>
</tr>
</table>

| | | | | |
|---|---|---|---|---|
| | | | | 4. ನೀರು ಹಾಯಿಸಲು ಲಘು ನೀರಾವರಿ ಘಟಕ (ಹನಿ/ತುಂತುರು)<br>5. ಪರಿವರ್ತಿತ ಬೆಳೆ ಪದ್ಧತಿ ಪ್ರಾತ್ಯಕ್ಷತೆ<br>6. ಪಶು ಸಂಗೋಪನಾ ಚಟುವಟಿಕೆ (ಐಚ್ಛಿಕ)<br><br>**ಆ) ಪಾಲಿಹೌಸ್/ನೆರಳುಪರದೆ ಮನೆ ಘಟಕ :**<br>2017–18ನೇ ಸಾಲಿನಿಂದ ಯೋಜನೆಯಡಿ ಈ ಕೆಳಕೆ ನಮೂದಿಸಿದ ಘಟಕಗಳಿಗೆ ಸಹಾಯಧನ ನೀಡಲಾಗುತ್ತಿದೆ.<br><br>1. ಕೃಷಿ ಭಾಗ್ಯ ಯೋಜನೆಯಡಿ ನೀರು ಸಂಗ್ರಹಣೆಗಾಗಿ ಕೃಷಿ ಹೊಂಡ<br>2. ನೀರು ಇಂಗದಂತೆ ತಡೆಯಲು ಪಾಲಿಥೀನ್/ಪರ್ಯಾಯ ಮಾದರಿ ಹೊದಿಕೆ.<br>3. ನೀರು ಎತ್ತಲು ಡೀಸೆಲ್ ಪಂಪ್‌ಸೆಟ್<br>4. ನೀರನ್ನು ಬೆಳೆಗೆ ಹಾಯಿಸಲು ಲಘು ನೀರಾವರಿ ಘಟಕಗಳನ್ನು ಹಾಗೂ<br>5. ಕೃಷಿ ಹೊಂಡದ ನೀರು ಆವಿಯಾಗುವುದನ್ನು ತಡೆಯಲು ಮತ್ತು ಆಕಸ್ಮಿಕ ಅವಘಡಗಳನ್ನು ಸಹಾಯಧನ ನೀಡಲಾಗುತ್ತಿದೆ.<br>6. ಇದಲ್ಲದೇ ವಿಶೇಷ ಪ್ಯಾಕೇಜ್ ಅಡಿ ಮೇಲೆ ತಿಳಿಸಿರುವ ಎಲ್ಲಾ ಘಟಕಗಳೊಂದಿಗೆ ಕೊಳವೆ ಬಾವಿ ಮರುಪೂರ್ಣ ಘಟಕವೂ ಸೇರಿದಂತೆ ಸಹಾಯಧನ ನೀಡಲಾಗುತ್ತಿದೆ.<br><br>**ಫಲಾನುಭವಿಗಳ ಆಯ್ಕೆ ಮಾಡುವಾಗ ಅನುಸರಿಸುವ ಮಾನದಂಡ:**<br><br>ರೈತ ಸಂಪರ್ಕ ಕೇಂದ್ರದಿಂದ ಅರ್ಜಿಗಳನ್ನು ರೈತರಿಗೆ ವಿತರಿಸಲಾಗುತ್ತಿದ್ದು, ಸಂಬಂಧಪಟ್ಟ ಸಹಾಯಕ ಕೃಷಿ ನಿರ್ದೇಶಕರ ಕಚೇರಿಯಲ್ಲಿ ರೈತರಿಂದ ಅರ್ಜಿ ಸ್ವೀಕೃತಗೊಂಡ |

| | | | | |
|---|---|---|---|---|
| | | | | ನಂತರ ರೈತರ ಕ್ಷೇತ್ರಕ್ಕೆ ಭೇಟಿ ನೀಡಿ ಜಂಟಿ ಸಮೀಕ್ಷೆ ಕೈಗೊಂಡು, ಪರಿಶೀಲನೆಯಲ್ಲಿ ಜಲಾನಯನ ಪ್ರದೇಶವನ್ನು ಪರಿಗಣಿಸಿ (ನೀರು ಕೊಯ್ಲು ಸನ್ನಿವೇಶ-catchment area) ಅರ್ಹಗೊಂಡ ರೈತರಿಗೆ ಕಾರ್ಯಾದೇಶ ನೀಡಿ ಇಲಾಖೆಯ ಮಾರ್ಗಸೂಚಿಯನ್ವಯ ಸೌಲಭ್ಯ ನೀಡಲಾಗುತ್ತಿದೆ. ಅರ್ಜಿ ಸಲ್ಲಿಸಿದ ಎಲ್ಲಾ ಆಸಕ್ತ ರೈತರಿಗೂ ಯೋಜನೆಯಡಿ ಸೌಲಭ್ಯ ಕಲ್ಪಿಸಿಕೊಡಲು ಕ್ರಮ ಕೈಗೊಳ್ಳಲಾಗುತ್ತಿದೆ. ಕೃಷಿ ಭಾಗ್ಯ ಯೋಜನೆಯಡಿ ಅರ್ಜಿ ಸಲ್ಲಿಸಿದ ರೈತರು ಕನಿಷ್ಠ 1 ಎಕರೆ ಜಮೀನು ಹೊಂದಿರಬೇಕು.<br><br>ರಾಜ್ಯದಲ್ಲಿ 2015-16ನೇ ಸಾಲಿನಿಂದ 2018-19ನೇ ಸಾಲಿನ ಸೆಪ್ಟೆಂಬರ್ ಮಾಹೆಯ ಅಂತ್ಯದವರೆಗೆ ಕೃಷಿ ಭಾಗ್ಯ ಮತ್ತು ಜಲಾನಯನ ಅಭಿವೃದ್ಧಿ ಇಲಾಖೆಯ ಒಗ್ಗೂಡಿಸುವಿಕೆ ಕಾರ್ಯಕ್ರಮದಡಿ 2.27 ಲಕ್ಷ ಕೃಷಿ ಹೊಂಡಗಳನ್ನು ನಿರ್ಮಿಸಲಾಗಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |
| 18 | 5054<br>ಚು.ರ.ಪ್ರ.: 1376<br>ಶ್ರೀ ಆಚಾರ್ ಹಾಲಪ್ಪ ಬಸಪ್ಪ<br>ವಿ.ಪ.ನ.ದಿ:<br>15-07-2014 | ಕೊಪ್ಪಳ ಜಿಲ್ಲೆಯ ಗಂಗಾ ವತಿಯಲ್ಲಿ ಕೃಷಿ ಮಹಾ ವಿದ್ಯಾಲಯಕ್ಕೆ ಅನುದಾನ ಮಂಜೂರು ಮಾಡುವ ಬಗ್ಗೆ. | ರಾಜ್ಯದಲ್ಲಿರುವ ವಿಶ್ವವಿದ್ಯಾಲಯ ಗಳನ್ನು ಬಲಪಡಿಸುವ ಮತ್ತು ಹೊಸ ಕಾಲೇಜುಗಳನ್ನು ತೆರೆಯುವ ಬಗ್ಗೆ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರ ಅಧ್ಯಕ್ಷತೆಯ ಪರಿಣಿತ ಸಮಿತಿ ಪರಿಶೀಲಿಸುತ್ತಿದ್ದು, ಸಮಿತಿಯ ನಿರ್ಣಯವನ್ನು ನಿರೀಕ್ಷಿಸಲಾಗಿದೆ. | ದಿನಾಂಕ: 7.11.2018ರ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ಸರ್ಕಾರದ ಆದೇಶ ಸಂಖ್ಯೆ: ಕೃಇ 194 ಕೃವಿವಿ 2011, ದಿ: 24.1.2013ರ ಪ್ರಕಾರ ಕೊಪ್ಪಳ ಜಿಲ್ಲೆಯ ಗಂಗಾವತಿಯಲ್ಲಿ ಕೃಷಿ ಮಹಾವಿದ್ಯಾಲಯವನ್ನು ಸ್ಥಾಪಿಸಲು ಅನುಮೋದನೆ ನೀಡಲಾಗಿರುತ್ತದೆ. ತದನಂತರ ಸರ್ಕಾರದ ಆದೇಶ ಸಂಖ್ಯೆ: ಕೃಇ 194 ಕೃವಿವಿ 2011, ದಿ: 21.10.2014ರ ಪ್ರಕಾರ ಡಾ: ಎಸ್.ಬಿಸಲಯ್ಯರವರ ನೇತೃತ್ವದ ಸಮಿತಿಯು ನೀಡಿರುವ ವರದಿಯ ಬಗ್ಗೆ ಅಂತಿಮ ನಿರ್ಣಯ ಕೈಗೊಳ್ಳುವವರೆಗೆ |

| | | | | |
|---|---|---|---|---|
| | | | ಸಮಿತಿಯ ವರದಿಯನ್ನು ಅನುಸರಿಸಿ ಅನುದಾನ ಒದಗಿಸುವ ಬಗ್ಗೆ ಆರ್ಥಿಕ ಇಲಾಖೆಯ ಅಭಿಪ್ರಾಯ ಪಡೆದು ಕ್ರಮ ಜರುಗಿಸಲಾಗುವುದು ಎಂದು ಮಾನ್ಯ ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ರಾಜ್ಯ ಸಚಿವರು ತಿಳಿಸಿದರು. | ಹಾಗೂ ಪರಿಣಿತರ ಸಮಿತಿಯು ವರದಿ ನೀಡುವವರೆಗೆ ಗಂಗಾವತಿಯಲ್ಲಿ ಹೊಸದಾಗಿ ಕೃಷಿ ಕಾಲೇಜ್‌ನ್ನು ಸ್ಥಾಪಿಸಲು ನೀಡಿರುವ ಆಡಳಿತಾತ್ಮಕ ಅನುಮತಿಯನ್ನು ತಡೆಹಿಡಿಯಲಾಗಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |
| 19 | 5046<br>ಚು.ರ.ಪ್ರ.: 63<br>ಶ್ರೀಕೋಟ ಶ್ರೀನಿವಾಸ ಪೂಜಾರಿ<br>ವಿ.ಪ.ನ.ದಿ:<br>24-06-2014 | ಉಡುಪಿ ಜಿಲ್ಲೆಯ ಬ್ರಹ್ಮಾವರದಲ್ಲಿ ಕೃಷಿ ಕಾಲೇಜನ್ನು ಸ್ಥಾಪಿಸುವ ಬಗ್ಗೆ. | 2010ನೇ ಸಾಲಿನಲ್ಲಿ ಬ್ರಹ್ಮಾವರದಲ್ಲಿರುವ ಕೃಷಿ ವಿಜ್ಞಾನ ಕೇಂದ್ರದ ಹತ್ತಿರ ಕೃಷಿ ಮಹಾವಿದ್ಯಾಲಯವನ್ನು ಸ್ಥಾಪಿಸುವ ಬಗ್ಗೆ ಪರಿಶೀಲಿಸಲಾಗಿತ್ತು. ತದನಂತರ, ರಾಜ್ಯದಲ್ಲಿ ಹೊಸ ಕಾಲೇಜುಗಳನ್ನು ಪ್ರಾರಂಭಿಸುವುದಕ್ಕಿಂತ ಹಾಲಿ ಇರುವ ಕಾಲೇಜುಗಳಿಗೆ ಅಗತ್ಯವಾದ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಮೂಲಕ ಅವುಗಳನ್ನು ಬಲಪಡಿಸಲು ಮತ್ತು ವಿದ್ಯಾರ್ಥಿಗಳಿಗೆ ಸಂಪೂರ್ಣ ಶಿಕ್ಷಣ ಸೌಲಭ್ಯಗಳನ್ನು ಒದಗಿಸುವುದು ಸೂಕ್ತವೆಂಬ ನಿರ್ಣಯವನ್ನು ಕೈಗೊಳ್ಳಲಾಗಿದೆ. ಆದರೂ ಸಹ ಉಡುಪಿ ಜಿಲ್ಲೆಯ ಬ್ರಹ್ಮಾವರದ ಆಸುಪಾಸಿನ ರೈತರ ಮಕ್ಕಳಿಗೆ ಅನುಕೂಲ ಮಾಡಿಕೊಡುವ ದೃಷ್ಟಿಯಿಂದ 2014-15ನೇ ಶೈಕ್ಷಣಿಕ ವರ್ಷದಿಂದ 2 ವರ್ಷಗಳ ಅವಧಿಯ ಕೃಷಿಯಲ್ಲಿ ಡಿಪ್ಲೋಮಾ ಕಾಲೇಜನ್ನು | ದಿನಾಂಕ: 7.11.2018ರ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯ, ಶಿವಮೊಗ್ಗವು ಉಡುಪಿ ಜಿಲ್ಲೆಯ ಬ್ರಹ್ಮಾವರದಲ್ಲಿ ಎಸ್.ಎಸ್.ಎಲ್.ಸಿ. ನಂತರದ ಒಂದು ಡಿಪ್ಲೋಮೋ ಕಾರ್ಯಕ್ರಮವನ್ನು 2014-15ನೇ ಶೈಕ್ಷಣಿಕ ಸಾಲಿನಿಂದ ಪ್ರಾರಂಭಿಸಿದ್ದು, ಪ್ರಸ್ತುತ ತರಗತಿಗಳು ನಡೆಯುತ್ತಿವೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |

| | | | | |
|---|---|---|---|---|
| | | | ಪ್ರಾರಂಭಿಸಲು ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ ಎಂದು ಕೃಷಿ ರಾಜ್ಯ ಸಚಿವರು ತಿಳಿಸಿದರು. | |
| 20. | 5052<br>ಚು.ರ.ಪ್ರ. : 1329<br>ಶ್ರೀ ಭಾನುಪ್ರಕಾಶ್<br>ವಿ.ಪ.ನ.ದಿ: 15-07-2014 | ಶಿವಮೊಗ್ಗ ಜಿಲ್ಲೆಯಲ್ಲಿ ಸ್ಥಾಪಿಸಬೇಕಾಗಿರುವ ಕೃಷಿ ವಿಶ್ವವಿದ್ಯಾನಿಲಯಕ್ಕೆ ಸ್ಥಳ ನೀಡುವ ಬಗ್ಗೆ. | ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯ ಶಿವಮೊಗ್ಗಕ್ಕೆ ಮುಖ್ಯ ಕೇಂದ್ರದ ಸ್ಥಾಪನೆಗೆ ಶಿವಮೊಗ್ಗ ಜಿಲ್ಲೆಯ ಯರಗನಾಳ. ಅಗಸವಳ್ಳಿ ಮತ್ತು ಇರುವಕ್ಕಿಯ ಬಳಿ ಮೂರು ಸಂಭಾವ್ಯ ಸ್ಥಳಗಳನ್ನು ಗುರುತಿಸಲಾಗಿದ್ದು ಈ ಮೂರರಲ್ಲಿ ಯಾವುದಾದರೊಂದು ಸ್ಥಳದ ಆಯ್ಕೆಯ ಬಗ್ಗೆ ಅಂತಿಮ ನಿರ್ಧಾರ ತೆಗೆದುಕೊಳ್ಳಬೇಕಾಗಿದೆ ಎಂದು ಮಾನ್ಯ ಕೃಷಿ ರಾಜ್ಯ ಸಚಿವರು ತಿಳಿಸಿದರು. | ದಿನಾಂಕ: 7.11.2018ರ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ಇರುವಕ್ಕಿಯಲ್ಲಿ 777.07 ಎಕರೆ ಜಾಗವನ್ನು ಹಾಗೂ 157.00 ಕೋಟಿ ರೂ.ಗಳನ್ನು ಮಂಜೂರು ಮಾಡಲಾಗಿರುತ್ತದೆ. ಕಟ್ಟಡ ನಿರ್ಮಾಣದ ಕಾಮಗಾರಿಯು ಎರಡನೇ ಮಹಡಿಯವರೆಗೆ ಮುಗಿದಿದ್ದು, ಮುಂದಿನ ಹಂತದ ಕಟ್ಟಡ ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |
| 21 | 5281<br>ಚು.ಗು.ಪ್ರ. : 3070<br>ಶ್ರೀ ಮೃತ್ಯುಂಜಯ ಜಿನಗಾ<br>ವಿಪನದಿ 31.3.2015 | ಬಳ್ಳಾರಿಯಲ್ಲಿ ಕೃಷಿ ವಿಶ್ವವಿದ್ಯಾಲಯ ಸ್ಥಾಪಿಸುವ ಬಗ್ಗೆ. | ಒಂದು ಸುಸಜ್ಜಿತವಾದ ಕೃಷಿ ಕಾಲೇಜ್‌ನ್ನು ಸ್ಥಾಪಿಸಬೇಕಾದರೆ 50 ರಿಂದ 150 ಕೋಟಿ ರೂ.ಗಳವರೆಗೂ ಖರ್ಚು ಬರುತ್ತದೆ. ಆದರೂ ಸಹ, ಈ ಹಂತದಲ್ಲಿ ಅಭಿವೃದ್ಧಿ ಆಯುಕ್ತರ ನೇತೃತ್ವದಲ್ಲಿ ಒಂದು ಸಮಿತಿ ರಚನೆಯಾಗಿರುತ್ತದೆ. ಸದರಿ ಸಮಿತಿಯ ವರದಿ ಬಂದ ನಂತರ ಈ ವಿಷಯದ ಬಗ್ಗೆ ಅಂತಿಮ ನಿರ್ಧಾರ ಕೈಗೊಳ್ಳಲಾಗುವುದು ಎಂದು ಮಾನ್ಯ ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರು ತಿಳಿಸಿದರು. | ದಿನಾಂಕ: 7.11.2018ರ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ಬಳ್ಳಾರಿಯ ಹಗರಿಯಲ್ಲಿ ಕೃಷಿ ಮಹಾವಿದ್ಯಾಲಯವನ್ನು ಸ್ಥಾಪಿಸುವ ಕುರಿತು ಕೃಷಿ ಇಲಾಖೆಯಿಂದ ರಚಿತಗೊಂಡ ತಂಡದ ಪ್ರತಿನಿಧಿಗಳೊಂದಿಗೆ ತಂಡದ ಅಧ್ಯಕ್ಷರಾದ ರಾಯಚೂರು ಕೃಷಿ ವಿಶ್ವವಿದ್ಯಾಲಯದ ಕುಲಪತಿಗಳು ಸಮಾಲೋಚಿಸಿ, ಅಂತಿಮ ವರದಿಯನ್ನು ಸಲ್ಲಿಸಿರುತ್ತಾರೆ.<br><br>ದಿನಾಂಕ: 03.07.2018ರಂದು ಬಳ್ಳಾರಿ ಜಿಲ್ಲೆಯ ಜಿಲ್ಲಾಧಿಕಾರಿಗಳು ಹಗರಿ ಕೃಷಿ ಸಂಶೋಧನಾ ಕೇಂದ್ರದಲ್ಲಿ ಕೃಷಿ ಪದವಿ ಕಾಲೇಜು ಸ್ಥಾಪನೆಗೆ ರಾಜ್ಯ ಸರ್ಕಾರದಿಂದ ಹಣಕಾಸಿನ ನೆರವನ್ನು ಇಚ್ಛಿಸದೇ, ಸ್ಥಳೀಯವಾಗಿ ಡಿ.ಎಂ.ಎಫ್/ಕೆ.ಎಂ.ಇ.ಆರ್.ಸಿ. ಅನುದಾನದಲ್ಲಿ |

| | | | | |
|---|---|---|---|---|
| | | | | ಸಂಗ್ರಹವಾಗಿರುವ ಹಣವನ್ನು ಬಳಕೆ ಮಾಡಲು ಅವಕಾಶವಿರುವುದಾಗಿ ಉಲ್ಲೇಖಿಸುತ್ತಾ, ಕೃಷಿ ಕಾಲೇಜು ಸ್ಥಾಪನೆಗಾಗಿ ಆಡಳಿತಾತ್ಮಕ ಮಂಜೂರು ಕೋರಿ ಪ್ರಸ್ತಾವನೆಯನ್ನು ಸಲ್ಲಿಸಿದ್ದು ಪರಿಶೀಲನೆಯಲ್ಲಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |

## ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ

| ಕ್ರಮ ಸಂಖ್ಯೆ | ಭರವಸೆ ಸಂಖ್ಯೆ | ಆಧಾರ ಮತ್ತು ದಿನಾಂಕ | ವಿಷಯ | ಆಶ್ವಾಸನೆ | ತೆಗೆದುಕೊಂಡ ಕ್ರಮ |
|---|---|---|---|---|---|
| 01. | 5590 | ಚು.ರ.ಪ್ರ: 854 ಶ್ರೀ ವಿ. ಸೋಮಣ್ಣ ವಿ.ಪ.ನ.ದಿ : 07.07.2014 | ಗ್ರಾಮೀಣ ಪ್ರದೇಶದ ಹಾಗೂ ಬಡ ಕುಟುಂಬದ ವಿದ್ಯಾರ್ಥಿಗಳನ್ನು ವೈಜ್ಞಾನಿಕತೆಯ ಕಡೆಗೆ ಪ್ರೋತ್ಸಾಹಿಸಲು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಬಗ್ಗೆ. | ಮಂಗಳೂರು ಮತ್ತು ಧಾರವಾಡದ ಪ್ರಾದೇಶಿಕ ವಿಜ್ಞಾನ ಕೇಂದ್ರಗಳಿಂದ ಹಾಗೂ ರಾಯಚೂರು, ಬಳ್ಳಾರಿ ಮತ್ತು ಕಾರವಾರ ಉಪ–ಪ್ರಾದೇಶಿಕ ವಿಜ್ಞಾನ ಕೇಂದ್ರಗಳ ಮೂಲಕ ವೈಜ್ಞಾನಿಕ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ ಎಂದು ಮಾನ್ಯ ಯೋಜನೆ ಮತ್ತು ಸಾಂಖ್ಯಿಕ, ಮಾಹಿತಿ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ತಿಳಿಸಿದರು. | ದಿನಾಂಕ: 22.11.2018ರಂದು ನಡೆದ ಸಮಿತಿಯ ಸಭೆಯಲ್ಲಿ ಚರ್ಚಿಸಿದಾಗ, ಇಲಾಖೆಯಡಿ ಸ್ಥಾಪನೆಗೊಂಡು ಕಾರ್ಯ ನಿರ್ವಹಿಸುತ್ತಿರುವ ಧಾರವಾಡ ಮತ್ತು ಮಂಗಳೂರು ಪ್ರಾದೇಶಿಕ ವಿಜ್ಞಾನ ಕೇಂದ್ರಗಳು ಹಾಗೂ ಕಾರವಾರ, ಬಳ್ಳಾರಿ ಮತ್ತು ರಾಯಚೂರು ಉಪ–ಪ್ರಾದೇಶಿಕ ವಿಜ್ಞಾನ ಕೇಂದ್ರಗಳಲ್ಲಿ ವಿದ್ಯಾರ್ಥಿಗಳು ಅದರಲ್ಲೂ ಪ್ರಮುಖವಾಗಿ ಗ್ರಾಮೀಣ ಭಾಗದ ವಿದ್ಯಾರ್ಥಿಗಳಲ್ಲಿ 'ನೋಡಿ ಕಲಿ, ಮಾಡಿ ತಿಳಿ' ಪರಿಕಲ್ಪನೆಯಡಿ ವೈಜ್ಞಾನಿಕ ಅರಿವು, ಚಿಂತನೆ ಮತ್ತು ಮನೋಭಾವನೆಯನ್ನು ಬೆಳೆಯಲು ಅನುವಾಗುವಂತಹ ಹಲವಾರು ವೈಜ್ಞಾನಿಕ ಪ್ರದರ್ಶಕ/ಮಾದರಿಗಳನ್ನು ಅಳವಡಿಸಲಾಗಿದೆ. ಈ ಕೇಂದ್ರಗಳಿಗೆ ವಿವಿಧ ಭಾಗಗಳ ವಿದ್ಯಾರ್ಥಿಗಳು ಭೇಟಿ ನೀಡುತ್ತಿದ್ದು. ಈ ಸೌಲಭ್ಯಗಳ ಪ್ರಯೋಜನವನ್ನು ಪಡೆಯುತ್ತಿದ್ದಾರೆ.<br>ಅಲ್ಲದೇ, ಈ ವಿಜ್ಞಾನ ಕೇಂದ್ರಗಳು ವಾರ್ಷಿಕವಾಗಿ ಹಲವಾರು ಸಮ್ಮೇಳನ, ಕಾರ್ಯಾಗಾರ, ಜನಸಮೂಹ ಕಾರ್ಯಕ್ರಮಗಳನ್ನು ಸಹ ಅನುಷ್ಠಾನಗೊಳಿಸುತ್ತಿವೆ ಎಂದು ಇಲಾಖಾಧಿಕಾರಿಗಳು ನೀಡಿದ ಮಾಹಿತಿಯನ್ನು ಒಪ್ಪಿಕೊಂಡ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |
| 02. | 5591 | ಚು.ರ.ಪ್ರ: 818 ಶ್ರೀ ಎಸ್.ವ್ಹಿ. ಸಂಕನೂರ ವಿ.ಪ.ನ.ದಿ: 15.12.2014 | ಪ್ರತಿ ಜಿಲ್ಲೆಯಲ್ಲಿ ಒಂದು ವಿಜ್ಞಾನ ಕೇಂದ್ರ ಸ್ಥಾಪಿಸುವ ಬಗ್ಗೆ. | ವಿಜ್ಞಾನ ಕೇಂದ್ರ ಸ್ಥಾಪನೆ ಸಂಬಂಧಿಸಿದಂತೆ ಪೂರ್ವಭಾವಿ ಸಿದ್ಧತೆಗಳೊಂದಿಗೆ ಪ್ರಸ್ತಾವನೆ ಸಲ್ಲಿಸುವಂತೆ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಪತ್ರವನ್ನು ಬರೆಯಲಾಗಿದೆ ಎಂದು ಮಾನ್ಯ ಯೋಜನೆ | ದಿನಾಂಕ: 22.11.2018ರಂದು ನಡೆದ ಸಮಿತಿಯ ಸಭೆಯಲ್ಲಿ ಚರ್ಚಿಸಿದಾಗ, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯು ರಾಜ್ಯದ ಪ್ರತಿ ಜಿಲ್ಲೆಯಲ್ಲಿ ಒಂದು ವಿಜ್ಞಾನ ಕೇಂದ್ರ ಸ್ಥಾಪಿಸಲು ಅಗತ್ಯ ಕ್ರಮಕೈಗೊಳ್ಳುತ್ತಿದೆ. ಈಗಾಗಲೇ ಇಲಾಖೆಯು ಭಾರತ ಸರ್ಕಾರದ ಸಂಸ್ಕೃತಿ ಇಲಾಖೆಯ ಸಹಯೋಗದೊಂದಿಗೆ ರಾಷ್ಟ್ರೀಯ ವಿಜ್ಞಾನ ಸಂಗ್ರಹಾಲಯಗಳ ವಸ್ತು ಪರಿಷತ್‌ನ ಮೂಲಕ ಸಮಾನ ಅನುಪಾತದ ಅನುದಾನ ಹಂಚಿಕೆಯ ಆಧಾರದ ಮೇಲೆ ಧಾರವಾಡ ಮತ್ತು ಮಂಗಳೂರು ಜಿಲ್ಲಾ ಕೇಂದ್ರಗಳಲ್ಲಿ ಪ್ರಾದೇಶಿಕ ವಿಜ್ಞಾನ ಕೇಂದ್ರಗಳನ್ನು ಸ್ಥಾಪಿಸಲಾಗಿದ್ದು ಯಶಸ್ವಿಯಾಗಿ |

| | | | | | |
|---|---|---|---|---|---|
| | | | | ಮತ್ತು ಸಾಂಖ್ಯಿಕ, ಮಾಹಿತಿ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ತಿಳಿಸಿದರು. | ಕಾರ್ಯ ನಿರ್ವಹಿಸುತ್ತಿವೆ. ಅಲ್ಲದೇ, ಉಪ–ಪ್ರಾದೇಶಿಕ ವಿಜ್ಞಾನ ಕೇಂದ್ರಗಳನ್ನು ಪ್ರತಿ ಜಿಲ್ಲೆಗಳಲ್ಲಿ ತಲಾ ರೂ.4.00 ಕೋಟಿಗಳ ರಾಜ್ಯ ಸರ್ಕಾರದ ಸಂಪೂರ್ಣ ಅನುದಾನದಿಂದ ಹಂತ–ಹಂತವಾಗಿ ಸ್ಥಾಪಿಸಲು ಕ್ರಮಕೈಗೊಳ್ಳಲಾಗುತ್ತಿದೆ. ಈಗಾಗಲೇ ರಾಜ್ಯದಲ್ಲಿ ಒಟ್ಟು 22 ಉಪ–ಪ್ರಾದೇಶಿಕ ವಿಜ್ಞಾನ ಕೇಂದ್ರಗಳ ಸ್ಥಾಪನೆಗೆ ಅನುಮೋದನೆ ನೀಡಲಾಗಿದ್ದು ಇವುಗಳ ಸ್ಥಾಪನೆ ವಿವಿಧ ಹಂತದಲ್ಲಿರುತ್ತವೆ.<br><br>ಬಳ್ಳಾರಿ, ಬೀದರ್, ಕಾರವಾರ ಮತ್ತು ರಾಯಚೂರು ಜಿಲ್ಲಾ ಕೇಂದ್ರಗಳಲ್ಲಿ ಈಗಾಗಲೇ ಉಪ–ಪ್ರಾದೇಶಿಕ ವಿಜ್ಞಾನ ಕೇಂದ್ರಗಳನ್ನು ಸ್ಥಾಪಿಸಲಾಗಿದ್ದು, ಬಾಗಲಕೋಟೆ, ಕೊಪ್ಪಳ, ದಾವಣಗೆರೆ, ಗೌರಿಬಿದನೂರು (ಚಿಕ್ಕಬಳ್ಳಾಪುರ ಜಿಲ್ಲೆ) ಮತ್ತು ಹಾವೇರಿಗಳಲ್ಲಿ ಉಪ–ಪ್ರಾದೇಶಿಕ ವಿಜ್ಞಾನ ಕೇಂದ್ರಗಳ ಕಾಮಗಾರಿ ಪ್ರಗತಿಯಲ್ಲಿದೆ.<br><br>ಇತರೆ ಜಿಲ್ಲೆಗಳಾದಂತಹ ತುಮಕೂರು, ಬೆಳಗಾವಿ, ಹಾಸನ, ಮಡಿಕೇರಿ (ಕೊಡಗು), ಶಿವಮೊಗ್ಗ, ಚಾಮರಾಜನಗರ, ವಿಜಯಪುರ, ಚಿಕ್ಕಮಗಳೂರು, ಉಡುಪಿ, ಚಿತ್ತಾಪುರ (ಕಲಬುರ್ಗಿ ಜಿಲ್ಲೆ) ಯಾದಗಿರಿ ಮತ್ತು ಗದಗಗಳಲ್ಲೂ ವಿಜ್ಞಾನ ಕೇಂದ್ರ ಸ್ಥಾಪನೆಗೆ ಅಗತ್ಯ ಭೂಮಿ ಗುರುತಿಸಿದ್ದು, ಹಂತ ಹಂತವಾಗಿ ಕಾಮಗಾರಿಗೆ ಚಾಲನೆ ನೀಡಲು ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಮಾಹಿತಿಯನ್ನು ಒಪ್ಪಿಕೊಂಡ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |
| 03. | 6158 | ಚು.ಗು.ಪ್ರ: 1615<br>ಶ್ರೀ ಮಹಾಂತೇಶ್ ಶಿವಾನಂದ ಕೌಜಲಗಿ<br>ವಿ.ಪ.ನ.ದಿ: 13.07.2015 | ಬೆಳಗಾವಿಯಲ್ಲಿ ಐ.ಟಿ ಪಾರ್ಕ್ ಪ್ರಾರಂಭಿಸಲು ಸರ್ಕಾರ ಕ್ರಮ ಕೈಗೊಂಡಿರುವ ಬಗ್ಗೆ ಹಾಗೂ ಹೊಸದಾಗಿ ಪ್ರಾರಂಭಿಸುವ ಸ್ಥಳಗಳಿಗೆ | ಜಿಲ್ಲಾ.ಧಿಕಾರಿಯವರು 5 ಎಕರೆ 17 ಗುಂಟೆ ಜಮೀನನ್ನು ಬೆಳಗಾವಿ ತಾಲ್ಲೂಕಿನ ವಾಘವಾಡೆ ಗ್ರಾಮದಲ್ಲಿ ಪುನಃ ಹಂಚಿಕೆ ಮಾಡಿದ್ದಾರೆ. ಈ ಜಮೀನಿನ ಹಂಚಿಕೆ | ದಿನಾಂಕ: 22.11.2018ರಂದು ನಡೆದ ಸಮಿತಿಯ ಸಭೆಯಲ್ಲಿ ಚರ್ಚಿಸಿದಾಗ, ಬೆಳಗಾವಿ ಜಿಲ್ಲೆಯ ಬೆಳಗಾವಿ ತಾಲ್ಲೂಕಿನ ವಾಘವಾಡೆ ಗ್ರಾಮದ ರಿ.ಸ.ನಂ:152, ಪ್ಲಾಟ್ ನಂ.1ರಲ್ಲಿ 169 ಎಕರೆ 32 ಗುಂಟೆ ಜಮೀನನ್ನು ಕೆ.ಐ.ಎ.ಡಿ.ಬಿ ಮೂಲಕ ನಿರ್ದೇಶಕರು, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ನಿರ್ದೇಶನಾಲಯಕ್ಕೆ ಮಂಜೂರು ಮಾಡಲಾಗಿತ್ತು. ಆದರೆ ಈ ಜಮೀನಿನ ಮೇಲೆ ಶ್ರೀ ಮಾಲಪ್ಪ ದೇವಾಲಯ, ಪರಿಶಿಷ್ಟ ಜಾತಿ ಇವರು ಬೆಳಗಾವಿ ಜಿಲ್ಲಾಧಿಕಾರಿಗಳ |

| | | | | | |
|---|---|---|---|---|---|
| | | | ಸರ್ಕಾರದಿಂದ ಸಹಾಯಧನ ಪಡೆಯುವ ಕುರಿತು. | ವಿಷಯವು ಈಗ ವಿವಾದದಲ್ಲಿದೆ. ಜಮೀನಿನ ವಿವಾದವು ಬಗೆಹರಿದ ನಂತರ ಜಿಲ್ಲಾಧಿಕಾರಿಯವರು ಹಂಚಿಕೆಯನ್ನು ಖಚಿತಪಡಿಸುತ್ತಾರೆ.<br>ಬೆಳಗಾವಿ ಐಟಿ ಪಾರ್ಕ್ ಸ್ಥಾಪಿಸಲು ಸರ್ಕಾರವು ಯಾವುದೇ ಅನುದಾನವನ್ನು ಒದಗಿಸಿರುವುದಿಲ್ಲ.<br>ಜಮೀನು ಪಡೆದ ನಂತರ ಮತ್ತು ವಿಸ್ತೃತ ಯೋಜನಾ ವರದಿ ತಯಾರಾದ ನಂತರ ಈ ಯೋಜನೆಯನ್ನು ಕಾರ್ಯರೂಪಕ್ಕೆ ತರಲಾಗುವುದು ಎಂದು ಮಾನ್ಯ ಯೋಜನೆ ಮತ್ತು ಸಾಂಖ್ಯಿಕ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ತಿಳಿಸಿದರು. | ನ್ಯಾಯಾಲಯದಲ್ಲಿ ದಾವೆ ಹೂಡಿದ್ದು ಸದರಿ ದಾವೆಯ ಬಗ್ಗೆ ಜಿಲ್ಲಾಧಿಕಾರಿಗಳು, ಬೆಳಗಾವಿ ಜಿಲ್ಲೆ ಇವರ ನ್ಯಾಯಾಲಯದ ಪ್ರಕರಣ ಸಂ:ಆರ್‌ಬಿ/ಆರ್‌ಟಿಎ/83/2014–15 ದಿನಾಂಕ:29.06.2017ರ ಆದೇಶದಲ್ಲಿ ಶ್ರೀ ಮಾಲಪ್ಪ ದೇವಾಲಯರವರ ಪರಿಷ್ಕರಣ ಅರ್ಜಿಯನ್ನು ತಿರಸ್ಕರಿಸಿ ಆದೇಶ ಹೊರಡಿಸಿರುತ್ತಾರೆ. ಈ ಬಗ್ಗೆ ಆದೇಶದ ಪ್ರತಿಯು ದಿನಾಂಕ: 19.04.2018 ರಂದು ನಿರ್ದೇಶನಾಲಯದಲ್ಲಿ ಸ್ವೀಕೃತಗೊಂಡಿರುತ್ತದೆ. ಅದರಂತೆ, ಸದರಿ ಆದೇಶದನುಸಾರ ಬೆಳಗಾವಿಯಲ್ಲಿ ಮಾಹಿತಿ ತಂತ್ರಜ್ಞಾನ ಪಾರ್ಕ್ ಸ್ಥಾಪನೆಗೆ ಸಂಬಂಧಿಸಿದಂತೆ ಜಮೀನನ್ನು ಇಲಾಖೆಗೆ ಹಸ್ತಾಂತರ ಮಾಡಿಕೊಳ್ಳುವ ಬಗ್ಗೆ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕೆ.ಐ.ಎ.ಡಿ.ಬಿ ರವರೊಂದಿಗೆ ಪತ್ರ ವ್ಯವಹಾರ ಮಾಡಲಾಗಿರುತ್ತದೆ.<br>ಮುಂದುವರೆದು ಬೆಳಗಾವಿಯಲ್ಲಿ ಐಟಿ ಪಾರ್ಕ್‌ನ ಸ್ಥಾಪನೆಯಾಗದಿದ್ದರೂ ಸಹ ಇಲಾಖೆಯ ವತಿಯಿಂದ ಮಾಹಿತಿ ತಂತ್ರಜ್ಞಾನ ವಲಯದ ಅಭಿವೃದ್ಧಿಗಾಗಿ ಈ ಕೆಳಕಂಡ ಯೋಜನೆ ಕಾರ್ಯಕ್ರಮಗಳನ್ನು ಈಗಾಗಲೇ ಕಾರ್ಯರೂಪಕ್ಕೆ ತರಲಾಗಿದೆ.<br>1.ದಿನಾಂಕ: 17.07.2018 ರಂದು ನವೋದ್ಯಮಿಗಳಿಗಾಗಿ ಇನ್‌ಕ್ಯೂಬೇಟರ್ ಕಮ್ ಇನ್‌ಸ್ಟ್ರುಮೆಂಟೇಷನ್ ಸೌಲಭ್ಯವಿರುವ ಎಂಟು ಸಾವಿರ ಚದರಡಿ ವಿಸ್ತೀರ್ಣವುಳ್ಳ ಕೆ–ಟೆಕ್ ಇನೋವೇಷನ್ ಹಬ್ ಅನ್ನು ಸ್ಥಾಪಿಸಲಾಗಿರುತ್ತದೆ.<br>2.ಬೆಳಗಾವಿಯ ಕೆಎಲ್‌ಎಸ್ ಗೊಗ್ಟೆ ತಾಂತ್ರಿಕ ಸಂಸ್ಥೆಯಲ್ಲಿ ಈಗಾಗಲೇ ರೂ.60 ಲಕ್ಷ ವೆಚ್ಚದಲ್ಲಿ ನ್ಯೂ ಎಜ್ ಇನ್‌ಕ್ಯೂಬೇಷನ್ ನೆಟ್‌ವರ್ಕ್ ಕೇಂದ್ರವನ್ನು ಸ್ಥಾಪಿಸಲಾಗಿರುತ್ತದೆ.<br>3.ಬೆಳಗಾವಿಯಿಂದ ಭಾಗವಹಿಸಿದ ಸ್ಟಾರ್ಟ್ ಆಪ್‌ಗಳಲ್ಲಿ ಈಗಾಗಲೇ ಮೂರು ಸ್ಟಾರ್ಟ್ ಆಪ್‌ಗಳು ರಾಜ್ಯ ಸರ್ಕಾರದ ಆರ್ಥಿಕ ಉತ್ತೇಜನಕ್ಕೆ ಆಯ್ಕೆಯಾಗಿರುತ್ತದೆ.<br>4.ಬೆಳಗಾವಿ ಜಿಲ್ಲೆಯಲ್ಲಿ 258 ಗ್ರಾಮ ಪಂಚಾಯತ್‌ಗಳಲ್ಲಿ ಗ್ರಾಮೀಣ ವೈಫೈ ಸೌಲಭ್ಯವನ್ನು ಒದಗಿಸಲಾಗಿದ್ದು, ಇದರಲ್ಲಿ ಪ್ರಸ್ತುತ 201 ವೈಫೈ |

| | | | | | |
|---|---|---|---|---|---|
| | | | | | ಘಟಕಗಳು ಕಾರ್ಯನಿರ್ವಹಿಸುತ್ತಿರುತ್ತವೆ. ಇದು ಗ್ರಾಮೀಣ ಭಾಗದ ಉದ್ಯಮಿಗಳಿಗೆ ತಮ್ಮ ಉದ್ಯಮವನ್ನು ಅಭಿವೃದ್ಧಿಪಡಿಸುವಲ್ಲಿ ಬಹಳಷ್ಟು ಸಹಕಾರಿಯಾಗಿರುತ್ತದೆ ಎಂದು ಇಲಾಖಾಧಿಕಾರಿಗಳು ನೀಡಿದ ಮಾಹಿತಿಯನ್ನು ಒಪ್ಪಿಕೊಂಡ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |
| 04. | 6287 | ಚು.ರ.ಪ್ರ : 101<br>ಶ್ರೀ ಎಸ್.ವಿ. ಸಂಕನೂರ<br>ವಿ.ಪ.ನ.ದಿ: 21.11.2016 | ರಾಜ್ಯದಲ್ಲಿ 2016–17ನೇ ಸಾಲಿನಲ್ಲಿ ಹೊಸ ಉಪ–ಪ್ರಾದೇಶಿಕ ವಿಜ್ಞಾನ ಕೇಂದ್ರಗಳನ್ನು ಗದಗ ಜಿಲ್ಲೆಯು ಸೇರಿದಂತೆ ಸ್ಥಾಪನೆ ಮಾಡುವ ಬಗ್ಗೆ. | 2016–17ನೇ ಸಾಲಿನ ಆಯವ್ಯಯದಲ್ಲಿ ಯಾವುದೇ ಹೊಸ ಉಪ –ಪ್ರಾದೇಶಿಕ ವಿಜ್ಞಾನ ಕೇಂದ್ರಗಳ ಸ್ಥಾಪನೆಗೆ ಚಾಲನೆ ನೀಡಿರುವುದಿಲ್ಲ. ಆದರೆ, ರಾಜ್ಯ ಸರ್ಕಾರದ ಪೂರ್ಣ ಅನುಮೋದನೆಯೊಂದಿಗೆ ಗದಗ ಜಿಲ್ಲೆಯು ಸೇರಿದಂತೆ ಪ್ರತಿ ಜಿಲ್ಲೆಯಲ್ಲೂ ಹಂತ–ಹಂತವಾಗಿ ಉಪ–ಪ್ರಾದೇಶಿಕ ವಿಜ್ಞಾನ ಕೇಂದ್ರಗಳನ್ನು ಸ್ಥಾಪಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಮಾನ್ಯ ಯೋಜನೆ ಮತ್ತು ಸಾಂಖ್ಯಿಕ, ಮಾಹಿತಿ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ತಿಳಿಸಿದರು. | ದಿನಾಂಕ:22.11.2018ರಂದು ನಡೆದ ಸಮಿತಿಯ ಸಭೆಯಲ್ಲಿ ಚರ್ಚಿಸಿದಾಗ, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯು ರಾಜ್ಯದ ಪ್ರತಿ ಜಿಲ್ಲೆಯಲ್ಲಿ ಒಂದು ವಿಜ್ಞಾನ ಕೇಂದ್ರ ಸ್ಥಾಪಿಸಲು ಅಗತ್ಯ ಕ್ರಮಕೈಗೊಳ್ಳುತ್ತಿದೆ. ಧಾರವಾಡ ಮತ್ತು ಮಂಗಳೂರು ಪ್ರಾದೇಶಿಕ ವಿಜ್ಞಾನ ಕೇಂದ್ರಗಳನ್ನು ಹೊರತುಪಡಿಸಿ, ಪ್ರತಿ ಜಿಲ್ಲೆಯಲ್ಲಿ ತಲಾ ರೂ.4.00ಕೋಟಿಗಳ ರಾಜ್ಯ ಸರ್ಕಾರದ ಸಂಪೂರ್ಣ ಅನುದಾನದಿಂದ ಗದಗ ಜಿಲ್ಲೆಯೂ ಸೇರಿದಂತೆ ಒಟ್ಟು 22 ಉಪ –ಪ್ರಾದೇಶಿಕ ವಿಜ್ಞಾನ ಕೇಂದ್ರಗಳನ್ನು ಸ್ಥಾಪಿಸಲು ಈಗಾಗಲೇ ಅನುಮೋದನೆ ನೀಡಲಾಗಿದ್ದು, ಅವುಗಳ ಸ್ಥಾಪನೆ ವಿವಿಧ ಹಂತದಲ್ಲಿರುತ್ತವೆ.<br><br>ಬಳ್ಳಾರಿ, ಬೀದರ್, ಕಾರವಾರ ಮತ್ತು ರಾಯಚೂರು ಜಿಲ್ಲಾ ಕೇಂದ್ರಗಳಲ್ಲಿ ಈಗಾಗಲೇ ಉಪ–ಪ್ರಾದೇಶಿಕ ವಿಜ್ಞಾನ ಕೇಂದ್ರಗಳನ್ನು ಸ್ಥಾಪಿಸಲಾಗಿದ್ದು, ಬಾಗಲಕೋಟೆ, ಕೊಪ್ಪಳ, ದಾವಣಗೆರೆ, ಗೌರಿಬಿದನೂರು (ಚಿಕ್ಕಬಳ್ಳಾಪುರ ಜಿಲ್ಲೆ) ಮತ್ತು ಹಾವೇರಿಗಳಲ್ಲಿ ಉಪ –ಪ್ರಾದೇಶಿಕ ವಿಜ್ಞಾನ ಕೇಂದ್ರಗಳ ಕಾಮಗಾರಿ ಪ್ರಗತಿಯಲ್ಲಿದೆ.<br><br>ಇತರೆ ಜಿಲ್ಲೆಗಳಾದಂತಹ ತುಮಕೂರು, ಬೆಳಗಾವಿ, ಹಾಸನ, ಮಡಿಕೇರಿ (ಕೊಡಗು), ಶಿವಮೊಗ್ಗ, ಚಾಮರಾಜನಗರ, ವಿಜಯಪುರ, ಚಿಕ್ಕಮಗಳೂರು, ಉಡುಪಿ, ಚಿತ್ತಾಪುರ, (ಕಲುಬರ್ಗಿ ಜಿಲ್ಲೆ), ಚಿಕ್ಕೋಡಿ (ಬೆಳಗಾವಿ ಜಿಲ್ಲೆ) ಯಾದಗಿರಿ ಮತ್ತು ಗದಗಗಳಲ್ಲೂ ವಿಜ್ಞಾನ ಕೇಂದ್ರ ಸ್ಥಾಪನೆಗೆ ಅಗತ್ಯ ಭೂಮಿ ಗುರುತಿಸಿದ್ದು, ಹಂತ ಹಂತವಾಗಿ ಕಾಮಗಾರಿಗೆ ನೀಡಲು ಕ್ರಮ ಕೈಗೊಳ್ಳಲಾಗುತ್ತಿದೆ. |

| | | | | | |
|---|---|---|---|---|---|
| | | | | | ಗದಗ ಜಿಲ್ಲೆಯಲ್ಲಿ ಉಪ–ಪ್ರಾದೇಶಿಕ ವಿಜ್ಞಾನ ಕೇಂದ್ರ ಹಾಗೂ ಮಿನಿ 3ಡಿ ತಾರಾಲಯವನ್ನು ಸ್ಥಾಪಿಸಲು ಅನುಮೋದನೆ ನೀಡಲಾಗಿದ್ದು, ಮೊದಲ ಹಂತದಲ್ಲಿ ತಾರಾಲಯ ಸ್ಥಾಪನೆಗೆ ಅನುದಾನ ಒದಗಿಸಲಾಗಿದೆ. ಮುಂದಿನ ಆರ್ಥಿಕ ವರ್ಷಗಳಲ್ಲಿ ಉಪ–ಪ್ರಾದೇಶಿಕ ವಿಜ್ಞಾನ ಕೇಂದ್ರಕ್ಕೂ ಅನುದಾನ ಒದಗಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಇಲಾಖಾಧಿಕಾರಿಗಳು ನೀಡಿದ ಮಾಹಿತಿಯನ್ನು ಒಪ್ಪಿಕೊಂಡ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |

# ಗೃಹ ಇಲಾಖೆ

| ಕ್ರಮ ಸಂಖ್ಯೆ | ಆಶ್ವಾಸನೆ ಸಂಖ್ಯೆ ಆಧಾರ ಮತ್ತು ದಿನಾಂಕ | ವಿಷಯ | ಆಶ್ವಾಸನೆ | ತೆಗೆದುಕೊಂಡ ಕ್ರಮ |
|---|---|---|---|---|
| 1 | 5296<br>ಚು.ರ.ಪ್ರ. 571<br>ಶ್ರೀ ಎಸ್. ನಾಗರಾಜ್ (ಸಂದೇಶ್ ನಾಗರಾಜ್)<br>ವಿಪನದಿ:03.07.2014 | ಗುಂಡ್ಲುಪೇಟೆ ತಾಲ್ಲೂಕು ಮೂಲೆಹೊಳೆ ಚೆಕ್‌ಪೋಸ್ಟ್‌ನ್ನು ಪುನರ್‌ಪ್ರಾರಂಭಿಸಿ, ಪೂರ್ಣ ಪ್ರಮಾಣದ ಸಿಬ್ಬಂದಿಯನ್ನು ನೇಮಿಸುವ ಬಗ್ಗೆ. | ಮೂಲೆಹೊಳೆ ಪೋಲೀಸ್ ಚೆಕ್ ಪೋಸ್ಟ್‌ನ ಹಳೆಯ ಕಟ್ಟಡವು ರಕ್ಷಿತ ಅರಣ್ಯದ ವ್ಯಾಪ್ತಿಗೆ ಒಳಪಟ್ಟಿರುವುದರಿಂದ ಮತ್ತು ಸದರಿ ಕಟ್ಟಡವು ಶಿಥಿಲಗೊಂಡಿರುವುದರಿಂದ ಕಟ್ಟಡವನ್ನು ನೆಲಸಮಗೊಳಿಸಿ ಹೊಸ ಕಟ್ಟಡ ವನ್ನು ನಿರ್ಮಿಸುವ ಬಗ್ಗೆ ಅರಣ್ಯ ಇಲಾಖೆಯ ಅನುಮತಿ ದೊರೆತ ನಂತರ ಹೊಸ ಕಟ್ಟಡವು ಪೂರ್ಣಗೊಂಡ ನಂತರ ಪೋಲೀಸ್ ಚೆಕ್‌ಪೋಸ್ಟ್‌ನ್ನು ಪುನರ್ ಪ್ರಾರಂಭಿಸಿ ಸುಸಜ್ಜಿತ ಗೊಳಿಸಿ ಪೂರ್ಣ ಪ್ರಮಾಣದ ಸಿಬ್ಬಂದಿಯನ್ನು ನೇಮಿಸಿ ಕಾನೂನು ಸುವ್ಯವಸ್ಥೆಯನ್ನು ಕಾಪಾಡಲಾಗುವುದು ಎಂದು ಮಾನ್ಯ ಗೃಹ ಸಚಿವರು ತಿಳಿಸಿದರು. | ದಿನಾಂಕ: 04.01.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ಗುಂಡ್ಲುಪೇಟೆ ತಾಲ್ಲೂಕು ಮೂಲೆಹೊಳೆ ಚೆಕ್‌ಪೋಸ್ಟ್ ಕಟ್ಟಡ ಮತ್ತು ಟವರ್ ನಿರ್ಮಾಣ ಮಾಡಲು ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ವನ್ಯಜೀವಿ), ಬೆಂಗಳೂರು ರವರು ನ್ಯಾಷನಲ್ ಬೋರ್ಡ್ ಆಫ್ ವೈಲ್ಡ್‌ಲೈಫ್‌ರವರಿಂದ ಅನುಮೋದನೆ ದೊರೆತ ನಂತರ ಅನುಮತಿ ನೀಡಲಾಗುವುದು ಎಂದು ತಿಳಿಸಿರುತ್ತಾರೆ. ಗುಂಡ್ಲುಪೇಟೆ ಪೊಲೀಸ್ ಠಾಣೆ ಅಂತರರಾಜ್ಯ ಗಡಿಭಾಗದ ಠಾಣೆಯಾಗಿದ್ದು ಕಳ್ಳಸಾಗಾಣಿಕೆ ಮತ್ತು ನಕ್ಸಲ್ ಚಟುವಟಿಕೆ ನಿಯಂತ್ರಿಸುವ ಸಲುವಾಗಿ ಮದ್ದೂರು ಗ್ರಾಮದ ಬಳಿ ತಾತ್ಕಾಲಿಕವಾಗಿ ಒಂದು ಕಟ್ಟಡವನ್ನು ರಾಷ್ಟ್ರೀಯ ಹೆದ್ದಾರಿ ಹಾಗೂ ಪಿ.ಡಬ್ಲ್ಯೂ.ಡಿ. ಇಲಾಖೆಯವರು ಚೆಕ್‌ಪೋಸ್ಟ್ ಕರ್ತವ್ಯಕ್ಕಾಗಿ ಪೊಲೀಸ್ ಠಾಣೆಗೆ ನೀಡಿರುತ್ತಾರೆ. ಮೂಲೆಹೊಳೆಯಲ್ಲಿ ಹೊಸ ಕಟ್ಟಡ ನಿರ್ಮಾಣ ಆಗುವವರೆಗೆ ಮದ್ದೂರು ಚೆಕ್‌ಪೋಸ್ಟ್‌ಗೆ ಗುಂಡ್ಲುಪೇಟೆ ಪೊಲೀಸ್ ಠಾಣೆಯಿಂದ ಸಿಬ್ಬಂದಿಗಳನ್ನು ನೇಮಿಸಿ ಕಾನೂನು ಸುವ್ಯವಸ್ಥೆಯನ್ನು ಕಾಪಾಡಲಾಗುತ್ತಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |
| 2 | 5314<br>ಚು.ರ.ಪ್ರ. 3615<br>ಶ್ರೀ ಟಿ.ಎ. ಶರವಣ<br>ವಿಪನದಿ:26.11.2015 | ಅಗ್ನಿಶಾಮಕ ಠಾಣೆಗಳಲ್ಲಿ ಖಾಲಿ ಇರುವ ಅಗ್ನಿಶಾಮಕ ಠಾಣಾಧಿಕಾರಿಗಳ ಹುದ್ದೆಗಳಿಗೆ ಬಡ್ತಿ ನೀಡದಿರುವ ಬಗ್ಗೆ. | ಇಲಾಖೆಯಲ್ಲಿ ಖಾಲಿ ಇರುವ ಸಹಾಯಕ ಅಗ್ನಿಶಾಮಕ ಠಾಣಾಧಿಕಾರಿಗಳ ಹುದ್ದೆಗಳಿಗೆ ಕರ್ನಾಟಕ ಅಗ್ನಿಶಾಮಕ ಸೇವೆಗಳ (ವೃಂದ ಮತ್ತು ನೇಮಕಾತಿ) ನಿಯಮಗಳು–2013ರನ್ವಯ ಶೇ.75ರಷ್ಟು ಹುದ್ದೆಗಳು ಪ್ರಮುಖ ಅಗ್ನಿಶಾಮಕ ವೃಂದದಿಂದ ಮತ್ತು ಶೇ.25ರಷ್ಟು ಹುದ್ದೆಗಳಿಗೆ ಅಗ್ನಿಶಾಮಕ | ದಿನಾಂಕ: 04.01.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ದಿನಾಂಕ: 26.11.2015ರ ನಂತರ ಪೋಲೀಸ್ ಮಹಾನಿರ್ದೇಶಕರು ಹಾಗೂ ಮಹಾನಿರ್ದೇಶಕರು, ಕರ್ನಾಟಕ ಅಗ್ನಿಶಾಮಕ ಮತ್ತು ತುರ್ತು ಸೇವೆಗಳು ಹಾಗೂ ರಾಜ್ಯ ವಿಪತ್ತು ನಿರ್ವಹಣಾ ಇಲಾಖೆ ರವರ ಪತ್ರ ಸಂಖ್ಯೆ: ಸಿಬ್ಬಂದಿ (8)01/2016, ದಿ: 12.05.2016ರಲ್ಲಿ ಹೈದ್ರಾಬಾದ್ ಕರ್ನಾಟಕ ಮೀಸಲಾತಿಯಡಿಯಲ್ಲಿ 05 ಮತ್ತು ಉಳಿದ ಮೂಲ ವೃಂದದಲ್ಲಿ 29 ಒಟ್ಟು 34 ಅಗ್ನಿಶಾಮಕ ಠಾಣಾಧಿಕಾರಿ ಹುದ್ದೆಗಳಿಗೆ ಪದೋನ್ನತಿ ನೀಡಲಾಗಿದೆ. ಆದೇಶ ಸಂಖ್ಯೆ: ಸಿಬ್ಬಂದಿ (8)19/2016–17 ಓ.ಬಿ. 179/2018. ದಿ: 18.06.2018ರಲ್ಲಿ ಹೈದ್ರಾಬಾದ್–ಕರ್ನಾಟಕ ರಾಜ್ಯ ವ್ಯಾಪಿ ಸ್ಥಳೀಯ ವೃಂದ 04 ಸಹಾಯಕ ಅಗ್ನಿಶಾಮಕ ಠಾಣಾಧಿಕಾರಿಗಳಿಗೆ ಮತ್ತು |

| | | | | |
|---|---|---|---|---|
| | | | ಚಾಲಕ ವೃಂದದಿಂದ ಮುಂಬಡ್ತಿ ನೀಡಬೇಕಾಗಿದೆ. ಇಲಾಖೆಯಲ್ಲಿ ಅಗ್ನಿಶಾಮಕ ಚಾಲಕರ ತೀವ್ರ ಕೊರತೆ ಇದೆ. ಈ ಬಗ್ಗೆ ನೇಮಕಾತಿ ಪ್ರಕ್ರಿಯೆ ಪ್ರಗತಿಯಲ್ಲಿದೆ. ಸದರಿ ನೇಮಕಾತಿ ಪ್ರಕ್ರಿಯೆ ಪೂರ್ಣಗೊಂಡ ತರುವಾಯ ಪ್ರಮುಖ ಅಗ್ನಿಶಾಮಕ ಸಿಬ್ಬಂದಿಗಳಿಂದ ಹಾಗೂ ಅಗ್ನಿಶಾಮಕ ಚಾಲಕ ಸಿಬ್ಬಂದಿಗಳ ಹುದ್ದೆಯಿಂದ 3:1 ಅನುಪಾತದಲ್ಲಿ ಸಹಾಯಕ ಅಗ್ನಿಶಾಮಕ ಠಾಣಾಧಿಕಾರಿ ಹುದ್ದೆಗೆ ಬಡ್ತಿಯನ್ನು ನೀಡಲು ಕ್ರಮಕೈಗೊಳ್ಳಲಾಗುವುದು ಎಂದು ಮಾನ್ಯ ಗೃಹ ಸಚಿವರು ತಿಳಿಸಿದರು. | ಉಳಿದ ಮೂಲ ವೃಂದದ 18 ಸಹಾಯಕ ಅಗ್ನಿಶಾಮಕ ಠಾಣಾಧಿಕಾರಿಗಳಿಗೆ ಅಗ್ನಿಶಾಮಕ ಠಾಣಾಧಿಕಾರಿ ಹುದ್ದೆಗೆ ಪದೋನ್ನತಿ ನೀಡಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |
| 3. | 6147<br>ಚು.ರ.ಪ್ರ; 973<br>ಶ್ರೀ ಟಿ.ಎ ಶರವಣ<br>ವಿಪನದಿ:01.12.2016 | ಶಾಲಾ ಮಕ್ಕಳ ಸುರಕ್ಷತೆಗಾಗಿ ಶಾಲೆಗೆ ಒಬ್ಬ ಹೋಂ ಗಾರ್ಡ್‌ನ್ನು ನಿಯೋಜಿಸುವ ಬಗ್ಗೆ. | ಖಾಸಗಿ ಶಾಲೆಗಳಿಂದ ಭದ್ರತೆಗಾಗಿ ಹೋಂ ಗಾರ್ಡ್ ಸಿಬ್ಬಂದಿಯನ್ನು ನಿಯೋಜಿಸಲು ಕೋರಿಕೆ ಸಲ್ಲಿಸಿದ್ದಲ್ಲಿ, ಇಲಾಖಾ ಮಟ್ಟದಲ್ಲಿ ಪರಿಶೀಲಿಸಲಾಗುವುದು ಎಂದು ಮಾನ್ಯ ಗೃಹ ಸಚಿವರು ತಿಳಿಸಿದರು. | ದಿನಾಂಕ: 04.01.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ಶಾಲಾ ಮಕ್ಕಳ ಸುರಕ್ಷತೆಗಾಗಿ ಶಾಲೆಗೆ ಒಬ್ಬ ಹೋಂಗಾರ್ಡ್‌ನ್ನು ನಿಯೋಜಿಸುವಂತೆ ಇಲಾಖಾ ಮುಖ್ಯಸ್ಥರಿಂದ ಕೋರಿಕೆ ಬಂದಲ್ಲಿ ಗೃಹರಕ್ಷಕರನ್ನು ಕರ್ತವ್ಯಕ್ಕೆ ನಿಯೋಜಿಸಲು ನಿಯಮಾನುಸಾರ ಪರಿಶೀಲಿಸಲಾಗುವುದು. ಆದರೆ ಖಾಸಗಿ ಶಾಲೆಗಳಿಂದ ಕೋರಿಕೆ ಬಂದಲ್ಲಿ ಗೃಹರಕ್ಷಕ ಕಾಯ್ದೆ ಪ್ರಕಾರ ಖಾಸಗಿ ಸಂಸ್ಥೆಗಳಿಗೆ ಗೃಹರಕ್ಷಕರನ್ನು ಕರ್ತವ್ಯಕ್ಕೆ ನಿಯೋಜಿಸಲು ಅವಕಾಶವಿರುವುದಿಲ್ಲ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |
| 4 | 6134 ಚು.ಗು.ಪ್ರ. 260<br>ಶ್ರೀ ಎಂ.ಎ. ಗೋಪಾಲ ಸ್ವಾಮಿ<br>ವಿಪನದಿ: 09.02.2017 | ರಾಜ್ಯದ ಗೃಹರಕ್ಷಕ ದಳದ ಸಿಬ್ಬಂದಿಗೆ ಹಾಲಿ ನೀಡುತ್ತಿರುವ ದಿನಭತ್ಯೆ ರೂ. 300/- ಗಳಿಂದ ರೂ.500/- ಗಳಿಗೆ ಏರಿಕೆ ಮಾಡುವ ಬಗ್ಗೆ. | ಗೃಹರಕ್ಷಕರ ದಿನಭತ್ಯೆಯನ್ನು ಹೆಚ್ಚಿಸುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ ಎಂದು ಮಾನ್ಯ ಗೃಹ ಸಚಿವರು ತಿಳಿಸಿದರು. | ದಿನಾಂಕ: 04.01.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ಸರ್ಕಾರದ ಆದೇಶ ಸಂಖ್ಯೆ: ಒಇ 67 ಕಗೃಸೇ 2015, ದಿ: 19.03.2018ರಲ್ಲಿ ಗೃಹರಕ್ಷಕ ಸ್ವಯಂ ಸೇವಕರಿಗೆ ನೀಡಲಾಗುತ್ತಿರುವ ಕರ್ತವ್ಯ ಭತ್ಯೆಯನ್ನು ದಿ: 01.04.2018ರಿಂದ ಜಾರಿಗೆ ಬರುವಂತೆ ಬೆಂಗಳೂರು ನಗರದಲ್ಲಿ ರೂ. 400/- ರಿಂದ ರೂ. 455/-ಕ್ಕೆ ಹಾಗೂ ಇತರೆ ಸ್ಥಳಗಳಲ್ಲಿ ರೂ.325/- ರಿಂದ ರೂ. 380/-ಕ್ಕೆ ಹೆಚ್ಚಿಸಲಾಗಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು |

| | | | | |
|---|---|---|---|---|
| | | | | ತೀರ್ಮಾನಿಸಿತು. |
| 5 | 6138<br>ಚು.ಗು.ಪ್ರ : 3191<br>ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ)<br>ವಿ.ಪ.ನ.ದಿ.:15.06.2017 | ತುರುವೇಕೆರೆ ತಾಲ್ಲೂಕಿನ ಅಗ್ನಿಶಾಮಕ ಠಾಣೆಯಲ್ಲಿ ಖಾಲಿ ಇರುವ ಸಹಾಯಕ ಅಗ್ನಿಶಾಮಕ ಠಾಣಾಧಿಕಾರಿಗಳ ಸಿಬ್ಬಂದಿಗಳನ್ನು ತುಂಬದಿರುವ ಬಗ್ಗೆ. | ಪ್ರಸ್ತುತ, ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ಅಗ್ನಿಶಾಮಕ ಚಾಲಕ ಈ ಹುದ್ದೆಯಿಂದ ಪ್ರಮುಖ ಅಗ್ನಿಶಾಮಕ ಹುದ್ದೆಗೆ ಬಡ್ತಿ ನೀಡಬೇಕಾಗಿರುತ್ತದೆ. ಪ್ರಮುಖ ಅಗ್ನಿಶಾಮಕ ಹುದ್ದೆಯು ಬಡ್ತಿಯಿಂದ ತುಂಬುವಂತಹ ಹುದ್ದೆಗಳಾಗಿರುವುದರಿಂದ ಮಾನ್ಯ ಸರ್ವೋಚ್ಚ ನ್ಯಾಯಾಲಯವು ಸಿವಿಲ್ ಅಪೀಲ್ ಸಂಖ್ಯೆ:2368/2011ರಲ್ಲಿ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸಲು ಸೂಚನೆ ನೀಡಿದೆ. ಇದರನ್ವಯ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವಾ ನಿಯಮಗಳು) ಇವರ ಸುತ್ತೋಲೆ ಸಂಖ್ಯೆ:ಸಿಆಸುಇ/182/ಸೇನೆನಿ/2011 ದಿನಾಂಕ: 22.03.2017 ರನ್ವಯ ರಾಜ್ಯ ಸಿವಿಲ್ ಸೇವೆಗಳಲ್ಲಿನ ಎಲ್ಲಾ ವೃಂದದ ಹುದ್ದೆಗಳಿಗೂ ಮುಂದಿನ ಆರು ತಿಂಗಳ ಅವಧಿಗೆ ಮುಂಬಡ್ತಿ ಪ್ರಕ್ರಿಯೆಯನ್ನು ತಾತ್ಕಾಲಿಕವಾಗಿ ತಡೆಹಿಡಿಯಲು ಆದೇಶಿಸಿದ್ದು, ಪದೋನ್ನತಿ ಪ್ರಕ್ರಿಯೆಯನ್ನು ತಡೆಹಿಡಿಯಲಾಗಿದೆ. ಜೇಷ್ಠತಾ ಪಟ್ಟಿಯನ್ನು ಪರಿಷ್ಕರಿಸಿದ ನಂತರ ಮುಂದಿನ ಕ್ರಮ ಜರುಗಿಸಲಾಗುವುದು | ದಿನಾಂಕ: 04.01.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ತುರುವೇಕೆರೆ ತಾಲ್ಲೂಕಿನಲ್ಲಿ ಅಗ್ನಿಶಾಮಕ ಠಾಣೆಲ್ಲಿ ಸಹಾಯಕ ಅಗ್ನಿಶಾಮಕ ಠಾಣಾಧಿಕಾರಿ ಹುದ್ದೆ ಭರ್ತಿಯಾಗಿದ್ದು, ಪ್ರಸ್ತುತ ಕರ್ತವ್ಯ ನಿರ್ವಹಿಸುತ್ತಿರುವ ಸಹಾಯಕ ಅಗ್ನಿಶಾಮಕ ಠಾಣಾಧಿಕಾರಿಯವರು ದಿ: 06.06.2016ರಿಂದ ಕರ್ತವ್ಯ ನಿರ್ವಹಿಸುತ್ತಿದ್ದಾರೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |

| | | | | |
|---|---|---|---|---|
| | | | ಎಂದು ಮಾನ್ಯ ಗೃಹ ಸಚಿವರು ತಿಳಿಸಿದರು. | |
| 6<br><br><br><br><br><br><br>7 | 4237<br>ಚು.ರ.ಪ್ರ: 143<br>ಶ್ರೀ ಅಮರನಾಥ ಪಾಟೀಲ್<br>ವಿಪನದಿ: 12.02.2013<br>&<br>5316<br>ಚು.ರ.ಪ್ರ. 3617<br>ಶ್ರೀ.ಅಮರನಾಥ ಪಾಟೀಲ್<br>ವಿಪನದಿ:26.11.2015 | ಗುಲ್ಬರ್ಗಾ ನಗರ ಪ್ರದೇಶದಲ್ಲಿ ಪೊಲೀಸ್ ಕಮೀಷನರೇಟ್ ಕಛೇರಿ ಯನ್ನು ಪ್ರಾರಂಭಿಸುವ ಬಗ್ಗೆ. | ಗುಲ್ಬರ್ಗಾ ನಗರ ಪ್ರದೇಶದಲ್ಲಿ ಪೊಲೀಸ್ ಕಮೀಷನರೇಟ್ ಕಛೇರಿಯನ್ನು ತೆರೆಯುವ ವಿಷಯ ಸರ್ಕಾರದ ಪರಿಶೀಲನೆಯಲ್ಲಿರುತ್ತದೆ ಎಂದು ಮಾನ್ಯ ಉಪ ಮುಖ್ಯಮಂತ್ರಿಗಳು (ಗೃಹ ಮತ್ತು ಸಾರಿಗೆ) ತಿಳಿಸಿದರು. | ದಿನಾಂಕ: 04.01.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ಕಲಬುರಗಿ ನಗರದಲ್ಲಿ ಪೊಲೀಸ್ ಆಯುಕ್ತರ ಕಚೇರಿ ಸ್ಥಾಪಿಸಲು ಸರ್ಕಾರದ ಆದೇಶ ಸಂಖ್ಯೆ : ಹೆಚ್‌ಡಿ 271 ಪಿಓಪಿ 2014, ದಿ: 24.10.2017ರಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |
| 8 | 5595<br>ಗಮನ ಸೆಳೆಯುವ ಸೂಚನೆ<br>ಶ್ರೀ.ಬಸವರಾಜ ಎಸ್. ಹೊರಟ್ಟಿ<br>ಸರ್ಕಾರದಿಂದ ನೀಡಲಾದ ಉತ್ತರವನ್ನು ದಿನಾಂಕ: 21.06.2017ರಂದು ಮಂಡಿಸಲಾಗಿರುತ್ತದೆ | ಧಾರವಾಡದ ಪೊಲೀಸರ ಮಕ್ಕಳಿಗಾಗಿ ಇರುವ ವಸತಿ ಸಹಿತ ಶಾಲೆಯ ಸಿಬ್ಬಂದಿಗಳನ್ನು ಖಾಯಂಗೊಳಿಸುವ ಬಗ್ಗೆ ಹಾಗೂ ಶಾಲಾ ಅಭಿವೃದ್ಧಿಗೆ ಓರ್ವ ನಿವೃತ್ತ ಸೈನ್ಯಾಧಿಕಾರಿ ಅಥವಾ ನಿವೃತ್ತ ಐ.ಪಿ.ಎಸ್. ಅಧಿಕಾರಿಯನ್ನು ಆಡಳಿತಾಧಿಕಾರಿಯನ್ನಾಗಿ ನೇಮಿಸುವುದರೊಂದಿಗೆ ವಜಾಗೊಂಡಿರುವ ದೈಹಿಕ ಶಿಕ್ಷಣ ಶಿಕ್ಷಕ | ಧಾರವಾಡದಲ್ಲಿರುವ ಪೊಲೀಸರ ಮಕ್ಕಳಿಗಾಗಿ ಇರುವ ವಸತಿ ಸಹಿತ ಶಾಲೆಯು 2013ರವರೆಗೆ ಉತ್ತಮ ಫಲಿತಾಂಶ ಹೊಂದಿದ್ದು ತದನಂತರದಲ್ಲಿ ಫಲಿತಾಂಶದಲ್ಲಿ ಇಳಿಕೆ ಕಂಡಿದೆ. ಶಾಲೆಯ ಸಿಬ್ಬಂದಿಗಳ ಖಾಯಮಾತಿಗಾಗಿ ವೃಂದ ಮತ್ತು ನೇಮಕಾತಿ ನಿಯಮಗಳ ಕರಡು ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿದ್ದು, ಈ ಬಗ್ಗೆ ಸರ್ಕಾರವು ಪರಿಶೀಲಿಸಿ ಕೆಲವು ಅಂಶಗಳಿಗೆ ಸ್ಪಷ್ಟೀಕರಣ ಕೋರಿದ್ದು, ಪರಿಷ್ಕೃತ ಪ್ರಸ್ತಾವನೆಯನ್ನು ಡಿ.ಜಿ. ಮತ್ತು ಐ.ಜಿ.ಪಿ. ರವರಿಂದ ನಿರೀಕ್ಷಿಸಲಾಗುತ್ತಿದೆ. ಸದರಿ | ದಿನಾಂಕ: 04.01.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ಶ್ರೀ ಎನ್.ಎ. ಮುತ್ತಣ್ಣ ಸ್ಮಾರಕ ಪೊಲೀಸ್ ಮಕ್ಕಳ ವಸತಿ ಶಾಲೆಯು ಪ್ರಾರಂಭಗೊಂಡಾಗಿನಿಂದ ಜಿಲ್ಲಾ ಎಸ್.ಪಿ. ಅವರೇ ಶಾಲಾ ಮಂಡಳಿಯ ಅಧ್ಯಕ್ಷರಾಗಿ ಕಾರ್ಯನಿರ್ವಹಿಸುತ್ತಿದ್ದರು. ಶಾಲಾ ಮಂಡಳಿಯಲ್ಲಿ ಡಿ.ಡಿ.ಪಿ.ಐ. ಕರ್ತವ್ಯನಿರತ ಅಧಿಕಾರಿಗಳು ಹಾಗೂ ಗಣ್ಯ ವ್ಯಕ್ತಿಗಳು ಸದಸ್ಯರಾಗಿ ಕಾರ್ಯನಿರ್ವಹಿಸುತ್ತಿದ್ದರು.<br><br>ಸರ್ಕಾರದ ಆದೇಶ ಸಂಖ್ಯೆ: ಒಇ 151 ಪೊಸಿಅ 2018, ದಿ: 08.08.2018ರನ್ವಯ ಶ್ರೀ ಎನ್.ಎ. ಮುತ್ತಣ್ಣ ಸ್ಮಾರಕ ಪೊಲೀಸ್ ಮಕ್ಕಳ ವಸತಿ ಶಾಲೆ, ಧಾರವಾಡ ಇದರ ವ್ಯವಸ್ಥಾಪಕ ಮಂಡಳಿಯನ್ನು ಐ.ಜಿ.ಪಿ. ಉತ್ತರ ವಲಯ, ಬೆಳಗಾವಿ ಇವರ ಅಧ್ಯಕ್ಷತೆಯಲ್ಲಿ ಪುನರ್ ರಚಿಸಿ ಆದೇಶಿಸಲಾಗಿದೆ. (ಅನುಬಂಧ–ಎ). ಸದರಿ ಆದೇಶದನ್ವಯ ಮಂಡಳಿಯ ನಿರ್ಣಯಗಳ ವಿರುದ್ಧ ಸೂಕ್ತ ದಾಖಲೆಗಳೊಂದಿಗೆ ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು ಇವರಿಗೆ ಮೇಲ್ಮನವಿಯನ್ನು ಹಾಗೂ ಸರ್ಕಾರಕ್ಕೆ ಪರಿಷ್ಕರಣ ಮೇಲ್ಮನವಿಯನ್ನು ಸಲ್ಲಿಸಬಹುದಾಗಿರುತ್ತದೆ ಎಂಬ ಅವಕಾಶವನ್ನು |

| | | | | |
|---|---|---|---|---|
| | | ಹಾಗೂ ಯೋಗ ಶಿಕ್ಷಕರು ತಪ್ಪು ಮಾಡಿದ್ದಲ್ಲಿ ತಿದ್ದಿಕೊಳ್ಳಲು ಅವಕಾಶ ನೀಡಿ ಶಾಲೆಯನ್ನು ಉನ್ನತಿಕರಿಸುವ ಬಗ್ಗೆ. | ಶಾಲೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ದೈಹಿಕ ಶಿಕ್ಷಕರಾದ ಶ್ರೀ ಪ್ರಮೋದ್ ರೋಣದ್ ಹಾಗೂ ಯೋಗ ಶಿಕ್ಷಕರಾದ ಶ್ರೀ ಪ್ರಕಾಶ್ ಪವಾಡ ಶೆಟ್ಟರ್‌ರವರನ್ನು ಕರ್ತವ್ಯ ಲೋಪದ ಮೇಲೆ ದಿನಾಂಕ: 03.05.2017ರಂದು ಸೇವೆಯಿಂದ ವಜಾಗೊಳಿಸಲಾಗಿದೆ ಎಂದು ಮಾನ್ಯ ಗೃಹ ಸಚಿವರು ತಿಳಿಸಿದರು. | ನೂತನವಾಗಿ ಕಲ್ಪಿಸಲಾಗಿದೆ.<br><br>ಧಾರವಾಡದಲ್ಲಿ ಕಾರ್ಯನಿರ್ವಹಿಸುತ್ತಿರುವ ಶ್ರೀ ಎನ್.ಎ. ಮುತ್ತಣ್ಣ ಸ್ಮಾರಕ ಪೊಲೀಸ್ ಮಕ್ಕಳ ವಸತಿ ಶಾಲೆ 1997ನೇ ಸಾಲಿನಿಂದ 22 ಜನ ಶಿಕ್ಷಕ ಮತ್ತು ಶಿಕ್ಷಕೇತರ ತಾತ್ಕಾಲಿಕ ಹುದ್ದೆಗಳನ್ನು ಸೃಜಿಸಿ ಮುಂದುವರೆಸಲಾಗುತ್ತಿರುತ್ತದೆ. ತದನಂತರ 2009ನೇ ಸಾಲಿನಲ್ಲಿ ಸದರಿ ತಾತ್ಕಾಲಿಕ ಹುದ್ದೆಗಳನ್ನು ಖಾಯಂ ಆಗಿ ಮುಂದುವರೆಸಲು ಸರ್ಕಾರವು ಮಂಜೂರಾತಿ ನೀಡಿರುತ್ತದೆ. ಈ ಹುದ್ದೆಗಳಲ್ಲಿ ಕರ್ತವ್ಯ ನಿರ್ವಹಿಸುವ ಶಿಕ್ಷಕ ಮತ್ತು ಶಿಕ್ಷಕೇತರ ಸಿಬ್ಬಂದಿಯವರಿಗೆ ಪ್ರತಿ ವರ್ಷ ಏಪ್ರಿಲ್ 1 ರಿಂದ ಮಾರ್ಚ್ 31 ರವರೆಗೆ ಒಂದು ವರ್ಷದ ಅವಧಿಗೆ ನೇಮಕಾತಿ ಆದೇಶ ನೀಡುತ್ತಾ ಬರಲಾಗಿದ್ದು, ಇವರೆಲ್ಲರೂ ತಾತ್ಕಾಲಿಕ ನೌಕರರುಗಳಾಗಿರುತ್ತಾರೆ.<br><br>ಶ್ರೀ ಎನ್.ಎ. ಮುತ್ತಣ್ಣ ಸ್ಮಾರಕ್ ಪೊಲೀಸ್ ಮಕ್ಕಳ ವಸತಿ ಶಾಲೆಗೆ ಮಂಜೂರಾದ ಹುದ್ದೆಗಳಿಗೆ ವೃಂದ ಮತ್ತು ನೇಮಕಾತಿ ನಿಯಮಗಳನ್ನು ರಚಿಸುವ ಪ್ರಸ್ತಾವನೆಗೆ ಆರ್ಥಿಕ ಇಲಾಖೆಯ ಸೂಚನೆಯಂತೆ ದಿ: 11.10.2018ರ ಪತ್ರದಲ್ಲಿ ಹೆಚ್ಚುವರಿ ಮಾಹಿತಿ/ದಾಖಲಾತಿ ಕೋರಿ ಪತ್ರ ಬರೆಯಲಾಗಿದ್ದು, ಮಾಹಿತಿ ನಿರೀಕ್ಷಿಸಲಾಗಿದೆ.<br><br>ಶ್ರೀ ಎನ್.ಎ. ಮುತ್ತಣ್ಣ ಸ್ಮಾರಕ ಪೊಲೀಸ್ ಮಕ್ಕಳ ವಸತಿ ಶಾಲೆಯಲ್ಲಿನ ವಜಾಗೊಂಡ ಶಿಕ್ಷಕರ ಮರುನೇಮಕಾತಿ ಒಳಗೊಂಡಂತೆ ಹಲವು ಅಂಶಗಳ ಕುರಿತಂತೆ ಸರ್ಕಾರದ ಆದೇಶ ಸಂಖ್ಯೆ:ಒಇ 162 ಪೊಸಿಅ 2017 (ಭಾ1) ದಿ: 07.02.2018ರನ್ವಯ, ಶ್ರೀ ಪಿ. ಮಣಿವಣ್ಣನ್, ಐ.ಎ.ಎಸ್., ಸರ್ಕಾರದ ಪ್ರಧಾನ ಕಾರ್ಯದರ್ಶಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಹಾಗೂ ಧಾರವಾಡ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಇವರನ್ನು ತನಿಖಾಧಿಕಾರಿಯನ್ನಾಗಿ ನೇಮಿಸಿ ಆದೇಶಿಸಲಾಗಿತ್ತು. ಅದರನ್ವಯ ತನಿಖಾಧಿಕಾರಿಯವರು ದಿ: 15.06.2018ರಂದು ಸರ್ಕಾರಕ್ಕೆ ವರದಿಯನ್ನು ಸಲ್ಲಿಸಿರುತ್ತಾರೆ. |

| | | | | |
|---|---|---|---|---|
| | | | | ಶ್ರೀ ಪಿ.ಮಣಿವಣ್ಣನ್, ಐ.ಎ.ಎಸ್., ಇವರ ವರದಿಯನ್ನು ಪರಿಶೀಲಿಸಿ ಶ್ರೀ ಎನ್.ಎ. ಮುತ್ತಣ್ಣ ಸ್ಮಾರಕ ಪೊಲೀಸ್ ಮಕ್ಕಳ ವಸತಿ ಶಾಲೆ, ಧಾರವಾಡ, ಇಲ್ಲಿನ ಸೇವೆಯಿಂದ ವಜಾಗೊಳಿಸಲಾಗಿರುವ ದೈಹಿಕ ಶಿಕ್ಷಕರಾಗಿದ್ದ ಶ್ರೀ ಪ್ರಮೋದ ಡಿ.ರೋಣದ ಮತ್ತು ಯೋಗ ಶಿಕ್ಷಕರಾಗಿದ್ದ ಶ್ರೀ ಪ್ರಕಾಶ ಪವಾಡಶೆಟ್ಟರ ಇವರನ್ನು ಭವಿಷ್ಯದಲ್ಲಿ ನಿಯಮಾನುಸಾರವಾಗಿ ಸೂಕ್ತ ಕ್ರಮವಹಿಸಲು ಪರಿಶೀಲಿಸುವ ಷರತ್ತಿಗೆ ಒಳಪಟ್ಟು ಕರ್ತವ್ಯಕ್ಕೆ ಹಿಂಪಡೆಯುವಂತೆ ಸರ್ಕಾರದ ಪತ್ರ ಸಂಖ್ಯೆ: ಒಇ 162 ಪೊಸಿಅ 2017, (ಭಾ) ದಿ: 07.07.2018ರಲ್ಲಿ ತಿಳಿಸಲಾಗಿತ್ತು.<br><br>ಅದರನ್ವಯ ಮೇಲ್ಕಂಡ ಶಿಕ್ಷಕರನ್ನು ಕರ್ತವ್ಯಕ್ಕೆ ಪುನರ್ ನೇಮಕ ಮಾಡಲಾಗಿರುತ್ತದೆ (ಅನುಬಂಧ–ಬಿ) ಮುಂದುವರೆದು, ಈ ಇಬ್ಬರು ಶಿಕ್ಷಕರಿಗೆ ಅರ್ಹ ವೇತನ ಪಾವತಿ ಮಾಡುವ ಬಗ್ಗೆ ದಿ: 25.09.2018ರಂದು ಧಾರವಾಡ ಜಿಲ್ಲಾ ಪೊಲೀಸ್ ಅಧೀಕ್ಷಕರಿಗೆ ಸರ್ಕಾರದಿಂದ ಪತ್ರ ಬರೆಯಲಾಗಿದೆ (ಅನುಬಂಧ–ಸಿ) ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |
| 9 | 5298<br>ಚು.ರ.ಪ್ರ. 601<br>ಶ್ರೀ ಇ. ಕೃಷ್ಣಪ್ಪ<br>ವಿಪನದಿ:03.07.2014 | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಹೊಸದಾಗಿ ಸೇರ್ಪಡೆಯಾದ ಹಳ್ಳಿಗಳು ಮತ್ತು ಬಡಾವಣೆಗಳನ್ನು ಬೆಂಗಳೂರು ಪೊಲೀಸ್ ಕಮೀಷನರೇಟ್ ವ್ಯಾಪ್ತಿಗೆ ತರುವ ಬಗ್ಗೆ. | ರಾಮನಗರ ಜಿಲ್ಲೆಯ ಕುಂಬಳಗೋಡು ಪೊಲೀಸ್ ಠಾಣಾ ಸರಹದ್ದಿಗೆ ಸೇರಿರುವ ಕೆಲವು ಪ್ರದೇಶಗಳನ್ನು ಬೆಂಗಳೂರು ನಗರ ಪೊಲೀಸ್ ಘಟಕದ ಕೆಂಗೇರಿ ಮತ್ತು ಜ್ಞಾನಭಾರತಿ ಪೊಲೀಸ್ ಠಾಣಾ ಸರಹದ್ದಿಗೆ ಸೇರಿಸಲು ಹಾಗೂ ರಾಮನಗರ ಜಿಲ್ಲೆಯ ತಾವರೆಕೆರೆ ಪೊಲೀಸ್ ಠಾಣಾ ಸರಹದ್ದಿಗೆ ಸೇರಿರುವ ಕೆಲವು ಪ್ರದೇಶಗಳನ್ನು ಬೆಂಗಳೂರು ನಗರ ಪೊಲೀಸ್ ಘಟಕದ ಕಾಮಾಕ್ಷಿಪಾಳ್ಯ ಮತ್ತು ಜ್ಞಾನಭಾರತಿ ಪೊಲೀಸ್ ಠಾಣಾ | ದಿನಾಂಕ: 04.01.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ಬೆಂಗಳೂರು ನಗರ ಪೊಲೀಸ್ ಆಯುಕ್ತರ ಘಟಕದ ವ್ಯಾಪ್ತಿಯಲ್ಲಿ ಬರುವ ಪೊಲೀಸ್ ಠಾಣೆಗಳ ಪುನರ್ ವಿಂಗಡಣೆ ಮಾಡಿ ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ 217 ಪಿಓಪಿ 2016, ದಿ: 28.11.2016ರಲ್ಲಿ ಆದೇಶ ಹೊರಡಿಸಲಾಗಿದೆ.<br><br>ಸದರಿ ಆದೇಶದಲ್ಲಿ ರಾಮನಗರ ಜಿಲ್ಲೆಯ ಕುಂಬಳಗೋಡು ಪೊಲೀಸ್ ಠಾಣಾ ಸರಹದ್ದಿಗೆ ಸೇರಿರುವ ಕೆಲವು ಪ್ರದೇಶಗಳನ್ನು ಬೆಂಗಳೂರು ನಗರ ಪೊಲೀಸ್ ಘಟಕದ ಕೆಂಗೇರಿ ಮತ್ತು ಜ್ಞಾನಭಾರತಿ ಪೊಲೀಸ್ ಠಾಣಾ ಸರಹದ್ದಿಗೆ ಸೇರಿಸಲಾಗಿದೆ.<br><br>ರಾಮನಗರ ಜಿಲ್ಲೆಯ ತಾವರೆಕೆರೆ ಪೊಲೀಸ್ ಠಾಣಾ ಸರಹದ್ದಿಗೆ ಸೇರಿರುವ ಕೆಲವು ಪ್ರದೇಶಗಳನ್ನು ಬೆಂಗಳೂರು ನಗರ ಪೊಲೀಸ್ ಆಯುಕ್ತರ ವ್ಯಾಪ್ತಿಗೆ |

| | | | | |
|---|---|---|---|---|
| 10 | & 6151 ಚು.ಗು.ಪ್ರ: 1144 ಶ್ರೀ ಬಿ. ರಾಮಕೃಷ್ಣ ವಿಪನದಿ: 12.02.2015 | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಹೊಸದಾಗಿ ಸೇರ್ಪಡೆಯಾದ ಹಳ್ಳಿಗಳು ಮತ್ತು ಬಡಾವಣೆಗಳನ್ನು ಬೆಂಗಳೂರು ಪೊಲೀಸ್ ಕಮೀಷನರೇಟ್ ವ್ಯಾಪ್ತಿಗೆ ತರುವ ಬಗ್ಗೆ. | ಸರಹದ್ದಿಗೆ ಸೇರಿಸುವ ಬಗ್ಗೆ ಪರಿಶೀಲನೆಯಲ್ಲಿದೆ ಎಂದು ಮಾನ್ಯ ಗೃಹ ಸಚಿವರು ತಿಳಿಸಿದರು.<br><br>ರಾಮನಗರ ಜಿಲ್ಲೆಯ ಹೇರೋಹಳ್ಳಿ ವೃತ್ತದ ತಲಘಟ್ಟಪುರ ಪೊಲೀಸ್ ಠಾಣೆಯನ್ನು ಬೆಂಗಳೂರು ನಗರ ಪೊಲೀಸ್ ಕಮೀಷನರೇಟ್ ವ್ಯಾಪ್ತಿಗೆ ಸೇರಿಸಿ ಸರ್ಕಾರದ ಮಂಜೂರಾತಿ ನೀಡಲಾಗಿದೆ. ಸದರಿ ಠಾಣಾ ವ್ಯಾಪ್ತಿಯಲ್ಲಿರುವ ಬಿಬಿಎಂಪಿ ಪ್ರದೇಶಗಳನ್ನು ಬೆಂಗಳೂರು ನಗರ ಪೊಲೀಸ್ ಕಮೀಷನರೇಟ್ ವ್ಯಾಪ್ತಿಗೆ ಸೇರಿಸಲಾಗಿರುತ್ತದೆ. | ಸೇರಿಸುವ ವಿಷಯವು ಪೊಲೀಸ್ ಇಲಾಖೆಯ ಪರಿಶೀಲನಾ ಹಂತದಲ್ಲಿರುತ್ತದೆ ಎಂದು ಡಿ.ಜಿ. ಮತ್ತು ಐ.ಜಿ.ಪಿ. ರವರು ತಿಳಿಸಿರುತ್ತಾರೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |
| 11 | 5299 ಚು.ಗು.ಪ್ರ. 1156 ಕ್ಯಾಪ್ಟನ್ ಗಣೇಶ್ ಕಾರ್ಣಿಕ್ ವಿಪನದಿ:10.07.2014 | ರಾಜ್ಯ ಸೈನಿಕ ಬೋರ್ಡ್ ಮತ್ತು ಜಿಲ್ಲಾ ಸೈನಿಕ ಬೋರ್ಡ್‌ಗಳಲ್ಲಿ ಈಗ ಇರುವ ಪ್ರಭಾರ ಹುದ್ದೆಗಳಿಗೆ ಪೂರ್ಣ ಕಾಲದ ನಿರ್ದೇಶಕರನ್ನು ಹಾಗೂ ಇತರೆ ಸಿಬ್ಬಂದಿಗಳನ್ನು ನೇಮಕ ಮಾಡುವ ಬಗ್ಗೆ. | ಈ ಕುರಿತಂತೆ ಈಗಾಗಲೇ ದಿನಾಂಕ: 24.06.2014ರ ಪತ್ರದಲ್ಲಿ ನಿರ್ದೇಶಕರು, ಪುನರ್ವಸತಿ, ಭಾರತ ಸರ್ಕಾರ, ರಕ್ಷಣಾ ಮಂತ್ರಾಲಯ, ಇವರಿಂದ ಅರ್ಹ ಅಭ್ಯರ್ಥಿಗಳ ಪಟ್ಟಿಯನ್ನು ಪಡೆಯಲು ಪತ್ರ ಕಳುಹಿಸಲಾಗಿದೆ. ಕೇಂದ್ರ ಸರ್ಕಾರದಿಂದ ಮಾಹಿತಿ ಬಂದ ನಂತರ ನಿರ್ದೇಶಕರ ನೇಮಕಾತಿ ಕುರಿತು ಕ್ರಮ ಕೈಗೊಳ್ಳಲಾಗುವುದು. ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆಯಲ್ಲಿನ ಇತರ ಸಿಬ್ಬಂದಿಗಳ | ದಿನಾಂಕ: 04.01.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ಪೂರ್ಣ ಕಾಲದ ನಿರ್ದೇಶಕರನ್ನು ನೇಮಕ ಮಾಡಲಾಗಿದೆ. ಇವರುಗಳು ದಿ: 13.10.2016ರಿಂದ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಉಪ ನಿರ್ದೇಶಕರ ನೇಮಕಾತಿ ಪ್ರಸ್ತಾವನೆ ಆರ್ಥಿಕ ಇಲಾಖೆಯ ಪರಿಶೀಲನೆಯಲ್ಲಿದೆ. ಇತರೆ ಸಿಬ್ಬಂದಿ ನೇಮಕಾತಿ ಬಗ್ಗೆ ಕರ್ನಾಟಕ ಲೋಕ ಸೇವಾ ಆಯೋಗವನ್ನು ಕೋರಲಾಗಿದ್ದು ನೇಮಕಾತಿ ಅಧಿಸೂಚನೆ ನಿರೀಕ್ಷಿಸಲಾಗಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |

| | | | | |
|---|---|---|---|---|
| | | | ನೇಮಕಾತಿ ಕುರಿತಂತೆ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ ಎಂದು ಮಾನ್ಯ ಗೃಹ ಸಚಿವರು ತಿಳಿಸಿದರು. | |
| 12 | 5300<br>ಚು.ರ.ಪ್ರ.<br>1090+1097<br>ಶ್ರೀ ವಿ.ಸೋಮಣ್ಣ<br>ಹಾಗೂ<br>ಶ್ರೀ ಇ. ಕೃಷ್ಣಪ್ಪ<br>ವಿಪನದಿ: 10.07.2014 | ಬೆಂಗಳೂರಿನ ಎ.ಟಿ.ಎಂ. ಒಂದರಲ್ಲಿ ಮಹಿಳಾ ಬ್ಯಾಂಕ್ ಉದ್ಯೋಗಿಯ ಮೇಲೆ ನಡೆದ ಹಲ್ಲೆ ಹಾಗೂ ದರೋಡೆ ಪ್ರಕರಣದ ಬಗ್ಗೆ. | ಈ ಪ್ರಕರಣದ ಆರೋಪಿಯ ಪತ್ತೆ ಕಾರ್ಯ ಪ್ರಗತಿಯಲ್ಲಿದ್ದು, ಆದಷ್ಟು ಬೇಗ ಆರೋಪಿಯನ್ನು ಪತ್ತೆ ಹಚ್ಚಲಾಗುವುದು ಹಾಗೂ ಇಂತಹ ಅಪರಾಧಿಗಳಿಗೆ ಕಠಿಣ ಶಿಕ್ಷೆ ವಿಧಿಸಲು ಕಾನೂನು ರೀತ್ಯಾ ಕ್ರಮ ಕೈಗೊಳ್ಳಲಾಗುವುದೆಂದು ಮಾನ್ಯ ಗೃಹ ಸಚಿವರು ತಿಳಿಸಿದರು. | ದಿನಾಂಕ: 04.01.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ,, ಬೆಂಗಳೂರು ನಗರದಲ್ಲಿ ದಿ: 19.11.2013 ರಂದು ಬೆಳಿಗ್ಗೆ 7 ಗಂಟೆಯ ಸಮಯದಲ್ಲಿ ಜ್ಯೋತಿ ಉದಯ್ ಕೋಂ: ಉದಯ್‌ಕುಮಾರ್, ನಂ.ಬಿ.208, ಬಾಕೆಡ್ ವಿಸ್ತ ಅಪಾರ್ಟ್‌ಮೆಂಟ್, ಹರಿದಾಸ ನಗರ 3ನೇ ಹಂತ, ರಾಜರಾಜೇಶ್ವರಿ ನಗರ, ಬೆಂಗಳೂರು ನಗರ ಇವರು ಎಸ್.ಜೆ. ಪಾರ್ಕ್ ಪೊಲೀಸ್ ಠಾಣಾ ವ್ಯಾಪ್ತಿಯ ಜೆ.ಸಿ. ರಸ್ತೆಯ ಎನ್.ಆರ್. ವೃತ್ತದಲ್ಲಿರುವ ಕಾರ್ಪೋರೇಷನ್ ಬ್ಯಾಂಕ್‌ನ ಎ.ಟಿ.ಎಂ. ಹೋದಾಗ ಹೊಂಚು ಹಾಕುತ್ತಿದ್ದ ಒಬ್ಬ ಅಪರಿಚಿತ ಆಸಾಮಿಯು ಎ.ಟಿ.ಎಂ. ಸೆಂಟರ್ ಒಳ ಪ್ರವೇಶಿಸಿ ರೋಲಿಂಗ್ ಶೆಟರ್‌ನ್ನು ಮುಚ್ಚಿ ಸದರಿ ಮಹಿಳೆಗೆ ಹಣ ಕೊಡುವಂತೆ ಬೆದರಿಸಿ ತನ್ನ ಬಳಿ ಇದ್ದ ಮಚ್ಚಿನಿಂದ ಮಹಿಳೆಗೆ ತಲೆ ಮತ್ತು ಮುಖದ ಮೇಲೆ ಹೊಡೆದು ಮಾರಣಾಂತಿಕ ಹಲ್ಲೆ ಮಾಡಿ ಆಕೆಯ ಪರ್ಸ್ ಮತ್ತು ಬ್ಯಾಂಕ್ ದಾಖಲಾತಿಗಳು ಹಾಗೂ ಮೊಬೈಲ್‌ನ್ನು ತೆಗೆದುಕೊಂಡು ಹೋಗಿರುತ್ತಾನೆ. ಈ ಘಟನೆ ಮೇರೆಗೆ ಎಸ್.ಜೆ.ಪಾರ್ಕ್ ಪೊಲೀಸ್ ಠಾಣೆಯ ಮೊ.ಸಂ: 152/2013 ಕಲಂ 397 ಐ.ಪಿ.ಸಿ. ಪ್ರಕರಣ ದಾಖಲಾಗಿರುತ್ತದೆ.<br>ಸದರಿ ಪ್ರಕರಣದ ತನಿಖಾ ಕಾಲದಲ್ಲಿ ಪಿರ್ಯಾದುದಾರರಾದ ಶ್ರೀಮತಿ ಜ್ಯೋತಿ ಉದಯ್ ಎಂಬುವರು ಕಾರ್ಪೋರೇಷನ್ ಬ್ಯಾಂಕ್‌ನ ಸರ್ವಿಸ್ ಬ್ರಾಂಚ್‌ನಲ್ಲಿ ಮ್ಯಾನೇಜರ್ ಆಗಿ ಕರ್ತವ್ಯ ನಿರ್ವಹಿಸಿರುತ್ತಾರೆ. ಅಪರಿಚಿತ ಆಸಾಮಿಯಿಂದ ಮಾರಣಾಂತಿಕ ಹಲ್ಲೆಗೊಳಗಾದ ಪಿರ್ಯಾದುದಾರರು ಬಿಜಿಎಸ್ ಗ್ಲೋಬಲ್ ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ದಾಖಲಾಗಿರುತ್ತಾರೆ. ಸದರಿ ಪ್ರಕರಣದ ಆರೋಪಿತನ ಪತ್ತೆ ಬಗ್ಗೆ ಬೆಂಗಳೂರು ನಗರ ಪೊಲೀಸ್ ಕಮೀಷನರ್‌ರವರಿಂದ ಅಪರಾಧ ತಂಡಗಳ ರಚನೆ ಮಾಡಿ ಆರೋಪಿಯ ಪತ್ತೆಗೆ ಕ್ರಮ ಕೈಗೊಳ್ಳಲಾಗಿತ್ತು.<br><br>ಈ ಪ್ರಕರಣದಲ್ಲಿ ಕೃತ್ಯವೆಸಗಿದ್ದ ಆರೋಪಿ ಮಧುಕರ್ ರೆಡ್ಡಿ ಎಂಬುವನು ಆಂಧ್ರಪ್ರದೇಶದ ಚಿತ್ತೂರ್ ಜಿಲ್ಲೆಯ ಪಿಲೇರ್‌ನಗರ ಪೊಲೀಸ್ ಠಾಣೆಯ |

| | | | | |
|---|---|---|---|---|
| | | | | ಮೊ.ಸಂ: 69/2014 ಕಲಂ: 302.380 ಐಪಿಸಿ ಪ್ರಕರಣದಲ್ಲಿಯು ಸಹ ಕೃತ್ಯವೆಸಗಿದ್ದು, ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಪಿಲೇರ್‌ನಗರ ಪೊಲೀಸ್ ಠಾಣಾಧಿಕಾರಿಗಳು ಆರೋಪಿ ಕೊಂಡಪ್ಪ ಗಿರಿ ಮಧುಕುಮಾರ್ ರೆಡ್ಡಿ @ ಮಧು ಎಂಬುವನನ್ನು ದಿ: 04.04.2017ರಂದು ದಸ್ತಗಿರಿ ಮಾಡಿದ್ದು, ಈ ಪ್ರಕರಣದ ತನಿಖೆ ಕಾಲದಲ್ಲಿ ಈ ಆರೋಪಿಯು ಬೆಂಗಳೂರು ನಗರದ ಎಸ್.ಜೆ. ಪಾರ್ಕ್ ಪೊಲೀಸ್ ಠಾಣೆಯ ಮೊ.ಸಂ. 152/2013 ಕಲಂ: 397 ಐ.ಪಿ.ಸಿ. ಪ್ರಕರಣದಲ್ಲಿ ಕೃತ್ಯವೆಸಗಿರುವುದಾಗಿ ಒಪ್ಪಿಕೊಂಡಿರುತ್ತಾನೆ.<br><br>ಸದರಿ ಆರೋಪಿತನನ್ನು ಕಡಪ ಕಾರಾಗೃಹದಿಂದ ದಿ: 07.03.2017ರಂದು ಆಂಧ್ರಪ್ರದೇಶದ ಪೊಲೀಸರ ವಶದಿಂದ ಬೆಂಗಳೂರು ನಗರ ಪೊಲೀಸ್ ವಶಕ್ಕೆ ಪಡೆದು ವಿಚಾರಣೆ ನಡೆಸಿದ್ದು, ಸದರಿ ಪ್ರಕರಣದ ತನಿಖಾ ಕಾಲದಲ್ಲಿ ಆರೋಪಿ ಕೊಂಡಪ್ಪ ಗಿರಿ ಮಧುಕುಮಾರ್ ರೆಡ್ಡಿ @ ಮಧು ಬಿನ್ ಕೆ.ರಾಮಚಂದ್ರರೆಡ್ಡಿ, 32 ವರ್ಷ, ಸ್ವಂತ ಸ್ಥಳ: ದಿವುಪಲ್ಲಿ ಗ್ರಾಮ, ಬಲಿರೆಡ್ಡಿ ಗರಿಪಲ್ಲಿ ಅಂಚೆ, ತಂಬಲಪಲ್ಲಿ ಮಂಡಲ್, ಚಿತ್ತೂರು ಜಿಲ್ಲೆ, ಆಂಧ್ರಪ್ರದೇಶ್ ರಾಜ್ಯ, ವಾಸ ನಂ.8–155–ಬಿ, ಬಾಬು ಕಾಲೋನಿ, ಮದನಪಲ್ಲಿ ಟೌನ್, ಚಿತ್ತೂರು ಜಿಲ್ಲೆ, ಈತನು ಕೃತ್ಯವೆಸಗಿರುವುದು ದೃಢಪಟ್ಟಿರುತ್ತದೆ. ಪ್ರಸ್ತುತ ಆರೋಪಿಯನ್ನು ಕೇಂದ್ರ ಕಾರಾಗೃಹ, ಪರಪ್ಪನ ಅಗ್ರಹಾರ, ಬೆಂಗಳೂರು, ಇಲ್ಲಿ ಇರಿಸಲಾಗಿದೆ.<br><br>ಪ್ರಕರಣದ ದೂರುದಾರರಾದ ಶ್ರೀಮತಿ ಜ್ಯೋತಿ ಉದಯ್‌ರವರು ಪ್ರಸ್ತುತ ಕಾರ್ಪೋರೇಷನ್ ಬ್ಯಾಂಕ್‌ನ ಸರ್ವಿಸ್ ಬ್ರಾಂಚ್‌ನಲ್ಲಿ ಮ್ಯಾನೇಜರ್ ಆಗಿ ಕರ್ತವ್ಯ ನಿರ್ವಹಿಸಿರುತ್ತಾರೆ.<br><br>ಸದರಿ ಪ್ರಕರಣದ ಆರೋಪಿಯ ವಿರುದ್ಧ ದೋಷಾರೋಪಣಾ ಪಟ್ಟಿಯನ್ನು ತಯಾರಿಸಿದ್ದು, ಮಾನ್ಯ ನ್ಯಾಯಾಲಯಕ್ಕೆ ದಿ: 18.05.2017ರಂದು ಸಲ್ಲಿಸಿದ್ದು, ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ಸಿ.ಸಿ. ನಂ. 14122/2017 ನೀಡಿರುತ್ತದೆ. ನಂತರ ಸದರಿ ಪ್ರಕರಣವು (ಸೆಷನ್ಸ್ ಕೋರ್ಟ್) ಸಿ.ಸಿ.ಹೆಚ್. 65ನೇ ನ್ಯಾಯಾಲಯ, ಬೆಂಗಳೂರು ನಗರ ಇಲ್ಲಿಗೆ ಪ್ರಕರಣವು ಕಮಿಟ್ ಆಗಿದ್ದು, ಸದರಿ ಮಾನ್ಯ ನ್ಯಾಯಾಲಯಾದ ಎಸ್.ಸಿ. ನಂ. 809/2017ರಲ್ಲಿ ವಿಚಾರಣೆಯಲ್ಲಿದೆ. |

| | | | | |
|---|---|---|---|---|
| | | | | ಈ ಪ್ರಕರಣದಲ್ಲಿ ಆರೋಪಿ ಪತ್ತೆಯಾಗಿ, ಆತನ ವಿರುದ್ಧ ಮಾನ್ಯ ನ್ಯಾಯಾಲಯಕ್ಕೆ ದೋಷಾರೋಪಣೆ ಪಟ್ಟಿ ಸಲ್ಲಿಸಿದ್ದು, ಪ್ರಕರಣವು ನ್ಯಾಯಾಲಯದಲ್ಲಿ ವಿಚಾರಣೆಯಲ್ಲಿರುತ್ತದೆಯೆಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |
| 13 | 5301<br>ಚು.ಗು.ಪ್ರ. 1948<br>ಶ್ರೀ ಅಲ್ಲಮಪ್ರಭು ಪಾಟೀಲ್<br>ವಿಪನದಿ:24.07.2014 | ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಯಲ್ಲಿ ಜನಸಂಖ್ಯೆಗೆ ಅನುಗುಣವಾಗಿ ಪೊಲೀಸ್ ಸ್ಟೇಷನ್‌ಗಳು ಹಾಗೂ ಸಿಬ್ಬಂದಿಗಳು ಇಲ್ಲದಿರುವ ಬಗ್ಗೆ. | ಈಗ ಮಂಜೂರಾಗಿರುವ ಹುದ್ದೆಗಳ ಪೈಕಿ 22 ಸಾವಿರ ಹುದ್ದೆಗಳ ಕೊರತೆ ಇದೆ. ಈ ವರ್ಷ 8500 ಮತ್ತು 3 ವರ್ಷದಲ್ಲಿ ಸುಮಾರು 799 ಸಬ್‌ಇನ್ಸ್‌ಪೆಕ್ಟರ್‌ಗಳನ್ನು ನೇಮಕ ಮಾಡಲು ಮುಖ್ಯಮಂತ್ರಿಯವರು ಅನುಮತಿ ಕೊಟ್ಟಿದ್ದಾರೆ. ಒಂದೇ ಸಲ ಇಷ್ಟೂ ಜನರಿಗೆ ತರಬೇತಿ ಕೊಡುವ ಸೌಲಭ್ಯಗಳು ನಮ್ಮಲ್ಲಿ ಇಲ್ಲ. ಈ 8500 ಜನರಿಗೆ ತರಬೇತಿ ಕೊಡಬೇಕಾದರೂ ಅದಕ್ಕೆ temporary arrangements ಮಾಡಿ ನಂತರ ತರಬೇತಿ ಕೊಡಬೇಕಾಗಿರುತ್ತದೆ. ಜನಸಂಖ್ಯೆಯ ಆಧಾರದ ಮೇಲೆ ಸಿಬ್ಬಂದಿಗಳನ್ನು ನೇಮಕ ಮಾಡುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳುತ್ತೇವೆ ಎಂದು ಮಾನ್ಯ ಗೃಹ ಸಚಿವರು ತಿಳಿಸಿದರು. | ದಿನಾಂಕ: 04.01.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ಧರ್ಮವೀರ ಆಯೋಗದ ಮಾನದಂಡಗಳನ್ವಯ ಒಂದು ಹೊಸ ಪೊಲೀಸ್ ಠಾಣೆ ತೆರೆಯಲು 60000ಕ್ಕಿಂತ ಹೆಚ್ಚಿನ ಜನಸಂಖ್ಯೆ 150 ಚ.ಕಿ.ಮೀ. ವಿಸ್ತೀರ್ಣ ಹಾಗೂ 300ಕ್ಕಿಂತ ಹೆಚ್ಚಿನ ಅಪರಾಧ ಪ್ರಕರಣಗಳು ದಾಖಲಾಗಿರಬೇಕು.<br>ಪ್ರಸ್ತುತ ಕಲಬುರಗಿ ಜಿಲ್ಲೆಯಲ್ಲಿ ದಾಖಲಾಗುವ ಅಪರಾಧ ಪ್ರಕರಣಗಳ ಅನುಸಾರ ಕೇವಲ 17 ಪೊಲೀಸ್ ಠಾಣೆಗಳ ಅವಶ್ಯಕತೆ ಇದ್ದು, ಪ್ರಸ್ತುತ 39 ಪೊಲೀಸ್ ಠಾಣೆಗಳು ಕರ್ತವ್ಯ ನಿರ್ವಹಿಸುತ್ತಿವೆ ಹಾಗೂ ನೇಮಕಾತಿ ಸಂಬಂಧ 2017ನೇ ಸಾಲಿನಲ್ಲಿ 144 ಸಿಪಿಸಿ/ಮಪಿಸಿ (ಲೋಕಲ್) ಹುದ್ದೆಗಳ ನೇಮಕಾತಿ ಮತ್ತು 24 ಎಪಿಸಿ (ನಾನ್ ಲೋಕಲ್) ಹುದ್ದೆಗಳ ನೇಮಕಾತಿ ಪ್ರಕ್ರಿಯೆ ಚಾಲ್ತಿಯಲ್ಲಿರುತ್ತದೆ.<br>ಅದೇ ರೀತಿ, ಯಾದಗಿರಿ ಜಿಲ್ಲೆಯಲ್ಲಿ ದಾಖಲಾಗುವ ಅಪರಾಧ ಪ್ರಕರಣಗಳ ಅನುಸಾರ 4 ಪೊಲೀಸ್ ಠಾಣೆಗಳ ಅವಶ್ಯಕತೆ ಇದ್ದು, ಪ್ರಸ್ತುತ 15 ಪೊಲೀಸ್ ಠಾಣೆಗಳು ಕಾರ್ಯನಿರ್ವಹಿಸುತ್ತಿವೆ. ಪ್ರಸ್ತುತ ಜಿಲ್ಲೆಯಲ್ಲಿ ಒಟ್ಟ 142 ಸಿಪಿಸಿ/ಮಪಿಸಿ ಮತ್ತು 33 ಎಪಿಸಿ ಹುದ್ದೆಗಳು ರಿಕ್ತವಿದ್ದು, ಆ ಪೈಕಿ 2017-18ನೇ ಸಾಲಿನಲ್ಲಿ 129 ಸಿಪಿಸಿ/ಮಪಿಸಿ ಮತ್ತು 29 ಹುದ್ದೆಗಳಿಗೆ ನೇಮಕಾತಿ ಪ್ರಕ್ರಿಯೆ ಕೈಗೊಳ್ಳಲಾಗಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |
| 14 | 5302<br>ಚು.ರ.ಪ್ರ. 1939 | ಗುಪ್ತದಳ ಇಲಾಖೆಯ ಉನ್ನತೀಕರಣಕ್ಕಾಗಿ | ಗುಪ್ತದಳದ ಉನ್ನತೀಕರಣಕ್ಕಾಗಿ ಬಾಂಬ್ ನಿಷ್ಕ್ರಿಯ ದಳ, ವಿವಿಐಪಿ | ದಿನಾಂಕ: 04.01.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ಗುಪ್ತದಳದ ಉನ್ನತೀಕರಣಕ್ಕಾಗಿ 2016-17ರ ಅವಧಿಯಲ್ಲಿ ರೂ.2,04,74,470/- |

| | | | | |
|---|---|---|---|---|
| | ಶ್ರೀ ಕೋಟ ಶ್ರೀನಿವಾಸ ಪೂಜಾರಿ ವಿಪನದಿ:24.07.2014 | ಸರ್ಕಾರ ತೆಗೆದುಕೊಂಡಿರುವ ಕ್ರಮದ ಬಗ್ಗೆ. | ಭದ್ರತೆ, ಮುಖ್ಯಮಂತ್ರಿಗಳ ಭದ್ರತೆ, ವಿದೇಶಿ ಶಾಖೆ ಇತ್ಯಾದಿಗಳಿಗೆ ಅವಶ್ಯಕವಾದ ಸಲಕರಣೆ, ಯಂತ್ರೋಪಕರಣಗಳ ಸಾಧನ ಸರಂಜಾಮು, ವಾಹನ ಇತ್ಯಾದಿಗಳ ಪೂರೈಕೆಗಾಗಿ ವಾರ್ಷಿಕವಾಗಿ ಬಿಡುಗಡೆಯಾಗುವ ಅನುದಾನದಿಂದ ಅವಶ್ಯಕತೆಯ ಪ್ರಾಮುಖ್ಯತೆ ಅನುಸಾರ ಕ್ರಿಯಾ ಯೋಜನೆ ತಯಾರಿಸಿ ಸರ್ಕಾರದಿಂದ ಅನುಮೋದನೆ ಪಡೆಯಲಾಗುತ್ತಿದೆ. ಉಳಿದಂತೆ ಘಟಕದ ಬಲವರ್ಧನೆ ಕುರಿತು ಸಿಬ್ಬಂದಿಗಳ ಹೆಚ್ಚಳಕ್ಕಾಗಿ ಪ್ರತಿ ವಲಯ/ಪೊಲೀಸ್ ಕಮಿಷನರೇಟ್‌ನಲ್ಲಿ ಒಂದೊಂದು ಎಸ್.ಪಿ. ಹುದ್ದೆ ಅವರ ಪೂರಕ ಸಿಬ್ಬಂದಿಗಳೊಂದಿಗೆ ಸೃಜಿಸಲು ಮತ್ತು ವಿವಿಐಪಿ ಭದ್ರತೆ ಮತ್ತು ಮುಖ್ಯಮಂತ್ರಿಗಳ ಭದ್ರತೆ ವಿಭಾಗಗಳ ಸಿಬ್ಬಂದಿಗಳ ಹೆಚ್ಚಳ ಮಾಡುವ ಪ್ರಸ್ತಾವನೆ ಇಲಾಖೆಯ ಹಂತದಲ್ಲಿ ಪರಿಶೀಲನೆಯಲ್ಲಿದೆ ಎಂದು ಮಾನ್ಯ ಗೃಹ ಸಚಿವರು ತಿಳಿಸಿದರು. | ಗಳ ಅನುದಾನ ಬಳಕೆ ಮಾಡಿಕೊಳ್ಳಲಾಗಿರುತ್ತದೆ. 2017–18ನೇ ಸಾಲಿನ ಕೇಂದ್ರ ಸರ್ಕಾರದ ಆಧುನೀಕರಣ ಯೋಜನೆಯಡಿ (2016–17ರ ಮರು ಮೌಲೀಕರಣ)ಯಲ್ಲಿ ರೂ. 1,25,81,339/–ಗಳ ಅನುದಾನ ಬಳಕೆ ಮಾಡಿಕೊಳ್ಳಲಾಗಿರುತ್ತದೆ.<br><br>• 2017–18ನೇ ಸಾಲಿನಲ್ಲಿ ರೂ. 40,32,363/–ವೆಚ್ಚದಲ್ಲಿ ವಾಹನಗಳನ್ನು ಖರೀದಿಸಲಾಗಿದೆ.<br>• ಪೊಲೀಸ್ ಆಧುನೀಕರಣ ಯೋಜನೆಯಡಿ 2017–18ನೇ ಸಾಲಿಗೆ ರಾಜ್ಯ ಗುಪ್ತದಳ ಘಟಕಕ್ಕೆ ರೂ. 195.00 ಲಕ್ಷಗಳ ಕ್ರಿಯಾ ಯೋಜನೆಗೆ ರಾಜ್ಯ ಮಟ್ಟದ ಅಧಿಕಾರಯುತ ಸಮಿತಿ ಸಭೆಯಲ್ಲಿ ಅನುಮೋದಿಸಿದ್ದು, ಅದರಂತೆ ಕೇಂದ್ರ ಸರ್ಕಾರದ ಉನ್ನತ ಮಟ್ಟದ ಅಧಿಕಾರಯುತ ಸಮಿತಿಯು ಅನುಮೋದಿಸಿರುತ್ತದೆ. ಪೊಲೀಸ್ ಆಧುನೀಕರಣ ಯೋಜನೆಗೆ 2017–18ನೇ ಸಾಲಿನ ಬಾಬ್ತು ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ 02 ಪಿಎಫ್‌ಎಸ್2018, ದಿ: 20.10.2018ರಲ್ಲಿ ರೂ. 1282.00 ಲಕ್ಷಗಳನ್ನು ಬಿಡುಗಡೆ ಮಾಡಿ ಆದೇಶಿಸಿದೆ.<br><br>ಗುಪ್ತವಾರ್ತೆ ಘಟಕದಲ್ಲಿ ಪಿಎಸ್‌ಐ ಮಂಜೂರಾತಿ ಬಲವು 200 ಇದ್ದು, ಅದರಲ್ಲಿ 100 ಪಿ.ಎಸ್.ಐ.ರವರನ್ನು ನೇರ ನೇಮಕಾತಿ ಮುಖಾಂತರ ಭರ್ತಿ ಮಾಡಿಕೊಳ್ಳಲಾಗುತ್ತಿದೆ.<br><br>2016–17ನೇ ಸಾಲಿನಲ್ಲಿ 41 ಪಿ.ಎಸ್.ಐ. ಗುಪ್ತ ವಾರ್ತೆ, ಹುದ್ದೆಗಳಿಗೆ ಅಧಿಸೂಚನೆಯಾಗಿದ್ದು, ಇದರಲ್ಲಿ 41 ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ನೀಡಲಾಗಿದ್ದು, 33 ಪಿಎಸ್‌ಐ (ಗುಪ್ತವಾರ್ತೆ) ರವರುಗಳಿಗೆ ಪಿ.ಟಿ.ಸಿ. ಕಲಬುರಗಿಯಲ್ಲಿ ಬುನಾದಿ ತರಬೇತಿಯಲ್ಲಿರುತ್ತಾರೆ. ಉಳಿದ 08 ಪಿ.ಎಸ್.ಐ.ಗಳಲ್ಲಿ ನೇಮಕಾತಿ ಆದೇಶ ನೀಡಿದ 02 ಅಭ್ಯರ್ಥಿಗಳು ಕರ್ತವ್ಯಕ್ಕೆ ವರದಿ ಮಾಡಿರುವುದಿಲ್ಲ. ಕರ್ತವ್ಯಕ್ಕೆ ವರದಿ ಮಾಡಿಕೊಂಡ |

| | | | | |
|---|---|---|---|---|
| | | | | ಒಬ್ಬ ಪಿ.ಎಸ್.ಐ. (ಗುಪ್ತವಾರ್ತೆ) ರವರು ಕೋರಿಕೆಯ ಮೇರೆಗೆ ಈ ಕಚೇರಿಯಿಂದ ಬಿಡುಗಡೆ ಮಾಡಲಾಗಿದೆ. ಕರ್ತವ್ಯಕ್ಕೆ ವರದಿ ಮಾಡಿದ 03 ಪಿ.ಎಸ್.ಐ. ರವರುಗಳು ಪಿ.ಎಸ್.ಐ. (ಸಿವಿಲ್)ಗೆ ಆಯ್ಕೆ ಆಗಿರುವುದರಿಂದ ಈ ಕಚೇರಿಯಿಂದ ಬಿಡುಗಡೆ ಮಾಡಲಾಗಿದೆ. 02 ಅಭ್ಯರ್ಥಿಗಳಿಗೆ ದಿ: 12.10.2018ರಂದು ನೇಮಕಾತಿ ಆದೇಶ ನೀಡಲಾಗಿದೆ.<br><br>• 2017-18ನೇ ಸಾಲಿನಲ್ಲಿ 43 ಪಿ.ಎಸ್.ಐ. ಹುದ್ದೆಗಳಿಗೆ ಅಧಿಸೂಚನೆಯಾಗಿದ್ದು, ಇದರಲ್ಲಿ 43 ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ನೀಡಿದ್ದು,32 ಪಿ.ಎಸ್.ಐ. (ಗುಪ್ತವಾರ್ತೆ) ರವರುಗಳು ವರದಿ ಮಾಡಿದ್ದು, ಪಿ.ಟಿ.ಸಿ. ಕಲಬುರಗಿಯಲ್ಲಿ ಬುನಾದಿ ತರಬೇತಿಯಲ್ಲಿರುತ್ತಾರೆ. ಉಳಿದ 11 ಪಿ.ಎಸ್.ಐ.ಗಳ ಪೈಕಿ ನೇಮಕಾತಿ ಆದೇಶ ನೀಡಿದ 02 ಅಭ್ಯರ್ಥಿಗಳು ಕರ್ತವ್ಯಕ್ಕೆ ವರದಿ ಮಾಡಿರುವುದಿಲ್ಲ. 09 ಅಭ್ಯರ್ಥಿಗಳಿಗೆ ದಿ: 12.10.2018ರಂದು ನೇಮಕಾತಿ ಆದೇಶ ನೀಡಲಾಗಿದೆ.<br>• 2018-19ನೇ ಸಾಲಿನಲ್ಲಿ 19 ಹುದ್ದೆಗಳಿಗೆ ಅಧಿಸೂಚನೆಯಾಗಿದ್ದು, ದಿ: 30.09.2018ರಂದು ಲಿಖಿತ ಪರೀಕ್ಷೆ ನಡೆದಿದ್ದು ನೇಮಕಾತಿ ಪ್ರಕ್ರಿಯೆ ಜಾರಿಯಲ್ಲಿದೆ.<br><br>ಗುಪ್ತದಳ ಬಲವರ್ಧನೆ ಕುರಿತು ಪ್ರಸ್ತುತ ಐ.ಜಿ.ಪಿ. ಪೂರ್ವ ವಲಯ, ದಾವಣಗರೆ ಮತ್ತು ಬಳ್ಳಾರಿ ವಲಯ ಹೊರತುಪಡಿಸಿ ಎಲ್ಲಾ ವಲಯಗಳಲ್ಲಿನ ಗುಪ್ತವಾರ್ತೆ ಘಟಕದಲ್ಲಿ ಎಸ್.ಪಿ. ಹುದ್ದೆ ಇರುತ್ತದೆ. ವಿವಿಐಪಿ ಭದ್ರತೆ ಮತ್ತು ಮುಖ್ಯಮಂತ್ರಿಗಳ ಭದ್ರತೆ ವಿಭಾಗಗಳ ಸಿಬ್ಬಂದಿಗಳ ಹೆಚ್ಚಳದ ಬಗ್ಗೆ ಯಾವುದೇ ಪ್ರಸ್ತಾವನೆ ಇರುವುದಿಲ್ಲ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |
| 15 | 5303<br>ಚು.ರ.ಪ್ರ. 1934 | ದ್ವಿತೀಯ ಪಿ.ಯು.ಸಿ. ಪ್ರಶ್ನೆ ಪತ್ರಿಕೆ | ಆರೋಪಿತರ ವಿರುದ್ಧ ಕಲಂ 381 ರೆ/ವಿ 34 ಐ.ಪಿ.ಸಿ. ಹಾಗೂ ಲಂಚ | ದಿನಾಂಕ: 04.01.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ದ್ವಿತೀಯ ಪಿ.ಯು.ಸಿ. ಪ್ರಶ್ನೆ ಪತ್ರಿಕೆಯ ಸೋರಿಕೆ ಕುರಿತಂತೆ ಅಜ್ಜಂಪುರ |

| | | | | |
|---|---|---|---|---|
| | ಶ್ರೀ ಅರುಣ ಶಹಾಪುರ ವಿಪನದಿ:24.07.2014 | ಬಹಿರಂಗವಾದ ಪ್ರಕರಣವನ್ನು ಸಿ.ಐ.ಡಿ.ಗೆ ವಹಿಸಿ ತನಿಖಾ ವರದಿಯನ್ನು ಒದಗಿಸುವ ಬಗ್ಗೆ. | ನಿರೋಧ ಕಾಯ್ದೆ ಕಲಂ 13(1)(ಡಿ), 13(2) ಮತ್ತು 115, 121 ಕರ್ನಾಟಕ ಎಜುಕೇಷನ್ ಆಕ್ಟ್ ರೀತ್ಯಾ ದೋಷಾರೋಪಣಾ ಪಟ್ಟಿ ತಯಾರಿಸಲಾಗಿದೆ. ಸದರಿ ಪ್ರಕರಣದ ಬಗ್ಗೆ ಸಿ.ಐ.ಡಿ. ಯಿಂದ ಕೂಲಂಕಷವಾಗಿ ತನಿಖೆಯನ್ನು ಕೈಗೊಂಡು ಮಾನ್ಯ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಲಾಗಿದೆ. ಪೊಲೀಸ್ ಮಹಾನಿರ್ದೇಶಕರು, ಸಿ.ಐ.ಡಿ., ಬೆಂಗಳೂರು, ಇವರು ಒದಗಿಸಲಾಗಿರುವ ತನಿಖೆಯ ವರದಿಯನ್ನು ಪ್ರತ್ಯೇಕವಾಗಿ ಒದಗಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಮಾನ್ಯ ಗೃಹ ಸಚಿವರು ತಿಳಿಸಿದರು. | ಪೊಲೀಸ್ ಠಾಣೆಯಲ್ಲಿ ದಾಖಲಾಗಿದ್ದು ಮೊಕದ್ದಮೆ ಸಂಖ್ಯೆ:35/2012 ಕಲಂ 418, 381, 420 ಐಪಿಸಿ ಹಾಗೂ ಕಲಂ 115 ಕರ್ನಾಟಕ ಎಜುಕೇಶನ್ ಆಕ್ಟ್ 1983 ರೀತ್ಯಾ ಪ್ರಕರಣದ ತನಿಖೆಯನ್ನು ಪೂರ್ಣಗೊಳಿಸಿ ಒಟ್ಟು 29 ಆರೋಪಿತರುಗಳ ವಿರುದ್ಧ ಘನ ನ್ಯಾಯಾಲಯದಕ್ಕೆ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಲಾಗಿದ್ದು, ಪ್ರಸ್ತುತ ಘನ 23ನೇ ಸಿಟಿ ಸಿವಿಲ್ ಮತ್ತು ಸೆಷನ್ಸ್ ಹಾಗೂ ವಿಶೇಷ ನ್ಯಾಯಾಲಯ (ಸಿ.ಸಿ.ಹೆಚ್-24) ರಲ್ಲಿ ವಿಶೇಷ ಸಿ.ಸಿ. ನಂ. 121/2017ರಲ್ಲಿ ವಿಚಾರಣೆಯಲ್ಲಿದ್ದು, ಮುಂದಿನ ವಿಚಾರಣೆಯ ದಿ: 27.10.2018ರಂದು ನಿಗದಿಪಡಿಸಲಾಗಿರುತ್ತದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |
| 16 | 5304<br>ಚು.ಗು.ಪ್ರ. 463<br>ಶ್ರೀ ಜಿ.ಎಸ್. ನ್ಯಾಮಗೌಡ<br>ವಿಪನದಿ: 11.12.2014 | ಬಾಗಲಕೋಟೆ ಜಿಲ್ಲೆಯ ಜಮಖಂಡಿ ನಗರದಲ್ಲಿ ಸಂಚಾರಿ ಆರಕ್ಷಕ ಠಾಣೆ ಸ್ಥಾಪಿಸುವ ಬಗ್ಗೆ. | ಬಾಗಲಕೋಟೆ ಜಿಲ್ಲೆಯ ಜಮಖಂಡಿ ನಗರದಲ್ಲಿ ಸಂಚಾರಿ ಪೊಲೀಸ್ ಠಾಣೆಯನ್ನು ತೆರೆಯುವ ಪ್ರಸ್ತಾವನೆಯು ಪರಿಶೀಲನೆಯಲ್ಲಿದೆ ಎಂದು ಮಾನ್ಯ ಗೃಹ ಸಚಿವರು ತಿಳಿಸಿದರು. | ದಿನಾಂಕ: 04.01.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ರಾಷ್ಟ್ರೀಯ ಪೊಲೀಸ್ ಆಯೋಗದ ಮಾನದಂಡಗಳನ್ವಯ ಸಂಚಾರಿ ಪೊಲೀಸ್ ಠಾಣೆಯನ್ನು ತೆರೆಯಲು 01 ವರ್ಷದಲ್ಲಿ 150 ರಿಂದ 250 ಸಂಚಾರ ಅಪರಾಧಗಳು ದಾಖಲಾಗಬೇಕಾಗಿರುತ್ತದೆ. ಜಮಖಂಡಿ ತಾಲ್ಲೂಕಿನಲ್ಲಿ ಸಂಚಾರ ಪೊಲೀಸ್ ಠಾಣೆಯನ್ನು ತೆರೆಯುವ ಪ್ರಸ್ತಾವನೆಯು ರಾಷ್ಟ್ರೀಯ ಪೊಲೀಸ್ ಆಯೋಗದ ಮಾನದಂಡಗಳನ್ನು ಪೂರೈಸದ ಕಾರಣ ಪ್ರಸ್ತಾವನೆಯನ್ನು ಪರಿಗಣಿಸಲಾಗಿರುವುದಿಲ್ಲ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |
| 17 | 5305<br>ಶೂನ್ಯ ವೇಳೆ ಪ್ರಸ್ತಾವ | ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿಯಲ್ಲಿ | ಶ್ರೀ ಟಿ.ಜಿ.ಕೃಷ್ಣ ಎಂಬುವರು ದಿನಾಂಕ: 12.12.2014ರಂದು ತಮ್ಮ ದಿನಸಿ | ದಿನಾಂಕ: 04.01.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ಶ್ರೀ ಟಿ.ಜಿ. ಕೃಷ್ಣ ಬಿನ್ ಗಣಪ ಪೂಜಾರಿ, ವಾಸ ಬಾಳೆಬೈಲು, ತೀರ್ಥಹಳ್ಳಿ ತಾಲ್ಲೂಕು |

| | | | | |
|---|---|---|---|---|
| | ಕ್ಯಾಪ್ಟನ್ ಗಣೇಶ್ ಕಾರ್ಣಿಕ್<br>ವಿಪನದಿ: 16.12.2014 | ದಿನಾಂಕ: 11.12.2014ರ ನಡುರಾತ್ರಿಯಲ್ಲಿ ಶ್ರೀ ಕೃಷ್ಣಮೂರ್ತಿ ಎಂಬುವವರಿಗೆ ಸೇರಿದ್ದ ದಿನಸಿ ಅಂಗಡಿಗೆ ದುಷ್ಕರ್ಮಿಗಳು ಬೆಂಕಿ ಹಚ್ಚಿದ್ದು, ಈ ಪ್ರಕರಣಕ್ಕೆ ಸಂಬಂಧಿಸಿದ ಆರೋಪಿಗಳನ್ನು ಇದುವರೆವಿಗೂ ಬಂಧಿಸದೇ ಇರುವ ಬಗ್ಗೆ. | ಅಂಗಡಿಗೆ ಕಿಡಿಗೇಡಿಗಳು ಬೆಂಕಿ ಹಚ್ಚಿರುವುದಾಗಿ ನೀಡಿದ ದೂರಿನ ಮೇರೆಗೆ ತೀರ್ಥಹಳ್ಳಿ ಪೊಲೀಸ್ ಠಾಣೆಯಲ್ಲಿ ಅಪರಾಧ ಸಂಖ್ಯೆ. 433/2014 ಕಲಂ 436 ಐಪಿಸಿ ಅಡಿಯಲ್ಲಿ ಪ್ರಕರಣ ದಾಖಲಿಸಿ ತನಿಖೆ ಕೈಗೊಳ್ಳಲಾಗಿದ್ದು, ಸದರಿ ಆರೋಪಿಗಳನ್ನು ಪತ್ತೆ ಹಚ್ಚುವ ಸಲುವಾಗಿ ವಿಶೇಷ ತಂಡವನ್ನು ರಚನೆ ಮಾಡಲಾಗಿರುತ್ತದೆ. ಕಿಡಿಗೇಡಿಗಳ ಪತ್ತೆಗಾಗಿ ತನಿಖೆ ಕೈಗೊಳ್ಳಲಾಗಿರುತ್ತದೆ ಎಂದು ಮಾನ್ಯ ಗೃಹ ಸಚಿವರು ತಿಳಿಸಿದರು. | ಇವರು ದಿ: 12.12.2014ರಂದು ಬೆಳಗಿನ ಜಾವ ಸುಮಾರು 3.20 ಗಂಟೆ ಸಮಯದಲ್ಲಿ ತಮ್ಮ ದಿನಸಿ ಅಂಗಡಿಗೆ ಯಾರೋ ಕಿಡಿಗೇಡಿಗಳು ಬೆಂಕಿ ಹಚ್ಚಿರುವುದಾಗಿ ನೀಡಿದ ದೂರಿನ ಮೇರೆಗೆ ತೀರ್ಥಹಳ್ಳಿ ಪೊಲೀಸ್ ಠಾಣೆ ಅಪರಾಧ ಸಂಖ್ಯೆ: 433/2014 ಕಲಂ 436 ಐಪಿಸಿ ರೀತ್ಯಾ ಪ್ರಕರಣ ದಾಖಲಿಸಿ, ತನಿಖಾಧಿಕಾರಿಗಳು ತನಿಖೆ ನಡೆಸಿ ಆರೋಪಿ ಪತ್ತೆಯಾಗದ ಕಾರಣ ದಿ: 10.09.2016ರಂದು "ಸಿ" ಅಂತಿಮ ವರದಿಯನ್ನು ಮಾನ್ಯ ಸಿ.ಜೆ. & ಜೆಎಂಎಫ್‌ಸಿ ನ್ಯಾಯಾಲಯ, ತೀರ್ಥಹಳ್ಳಿ ರವರಿಗೆ ನಿವೇದಿಸಿದ್ದು, ದಿ: 18.09.2017ರಂದು ಮಾನ್ಯ ನ್ಯಾಯಾಲಯವು ಸಿಆರ್. ನಂ. 751/14ರಲ್ಲಿ "ಸಿ" ಅಂತಿಮ ವರದಿಯನ್ನು ಅಂಗೀಕರಿಸಿ ಮುಕ್ತಾಯಗೊಳಿಸಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |
| 18 | 6150<br>ಚು.ಗು.ಪ್ರ: 1132<br>ಶ್ರೀ ಮರಿತಿಬ್ಬೇಗೌಡ<br>ವಿಪನದಿ: 12.02.2015 | ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆಯಲ್ಲಿ ಖಾಲಿ ಇರುವ ಅಧಿಕಾರಿ ಹಾಗೂ ಸಿಬ್ಬಂದಿಗಳ ಹುದ್ದೆಗಳನ್ನು ಕಾಲಮಿತಿಯಲ್ಲಿ ಭರ್ತಿ ಮಾಡಿಕೊಳ್ಳುವ ಬಗ್ಗೆ. | ಅಭಿಯೋಗ ಇಲಾಖೆಯಲ್ಲಿ ಖಾಲಿ ಇರುವ ಗ್ರೂಪ್ ಸಿ ಮತ್ತು ಡಿ ಹುದ್ದೆಗಳಿಗೆ ಬಾಹ್ಯ ಮೂಲದಿಂದ ಸೇವೆಯನ್ನು ಬಳಸಿಕೊಳ್ಳುತ್ತಿದ್ದು, ಈ ಹುದ್ದೆಗಳನ್ನು ಖಾಯಂ ಆಗಿ ಭರ್ತಿ ಮಾಡಬೇಕೆನ್ನುವ ಪ್ರಸ್ತಾವನೆಯು ಆರ್ಥಿಕ ಇಲಾಖೆಯ ಪರಿಶೀಲನೆಯಲ್ಲಿರುತ್ತದೆ. ಸದರಿ ಹುದ್ದೆಗಳನ್ನು ಭರ್ತಿ ಮಾಡಲು ಕಾಲಮಿತಿ ಗೊತ್ತುಪಡಿಸಿರುವುದಿಲ್ಲ. ಸಾರ್ವಜನಿಕ ಹಿತದೃಷ್ಟಿಯಿಂದ ತ್ವರಿತವಾಗಿ ಭರ್ತಿ ಮಾಡಿಕೊಳ್ಳಲು ಕ್ರಮ ಕೈಗೊಳ್ಳಲಾಗುವುದು ಎಂದು ಮಾನ್ಯ ಗೃಹ ಸಚಿವರು ತಿಳಿಸಿದರು. | ದಿನಾಂಕ: 04.01.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆಯಲ್ಲಿ ಈ ಕೆಳಕಂಡ ಹುದ್ದೆಗಳು ಖಾಲಿ ಇರುತ್ತವೆ.<br><br>ಗ್ರೂಪ್ ಸಿ : 584<br>ಗ್ರೂಪ್ ಡಿ : 1382<br><br>1) ಖಾಲಿ ಇರುವ ಗ್ರೂಪ್–ಸಿ ಮತ್ತು ಡಿ ಹುದ್ದೆಗಳನ್ನು ಈಗಾಗಲೇ ಬಾಹ್ಯಮೂಲದಿಂದ ಭರ್ತಿ ಮಾಡಲಾಗಿರುತ್ತದೆ.<br><br>ಗ್ರೂಪ್ –ಸಿ ಮತ್ತು ಡಿ ಹುದ್ದೆಗಳನ್ನು ಬಾಹ್ಯಮೂಲದಿಂದ ಭರ್ತಿ ಮಾಡಿಕೊಂಡಿರುವ ಹುದ್ದೆಗಳನ್ನು ಖಾಯಂ ಮಾಡುವ ಬಗ್ಗೆ ಮಾನ್ಯ ಸರ್ವೋಚ್ಛ ನ್ಯಾಯಾಲಯದ ಉಮಾದೇವಿ ಪ್ರಕರಣದ ತೀರ್ಮಾನದಂತೆ ಯಾವುದೇ ದಿನಗೂಲಿ ನೌಕರರು ಹಾಗೂ ಗುತ್ತಿಗೆ ಆಧಾರದ ಮೇಲೆ ಕಾರ್ಯ |

| | | | | |
|---|---|---|---|---|
| | | | | ನಿರ್ವಹಿಸುತ್ತಿರುವ ನೌಕರರನ್ನು ಖಾಯಂಗೊಳಿಸಲು ಅವಕಾಶವಿರುವುದಿಲ್ಲ ಎಂದು ತಿಳಿಸಲಾಗಿದೆ. ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |
| 19 | 6140<br>ಚು.ರ.ಪ;493<br>ಶ್ರೀ ರಾಮಚಂದ್ರಗೌಡ<br>ವಿಪನದಿ: 02.07.2015 | ಬೆಂಗಳೂರು ನಗರದಲ್ಲಿ ಸರಗಳ್ಳತನದ ಪ್ರಕರಣಗಳ ಕುರಿತು ತೆಗೆದುಕೊಂಡಿರುವ ಕ್ರಮಗಳ ಬಗ್ಗೆ. | ಸರ ಅಪಹರಣ ಪ್ರಕರಣಗಳಲ್ಲಿ ಪದೇ ಪದೇ ಭಾಗಿಯಾಗಿರುವವರ ವಿರುದ್ಧ ಗೂಂಡಾ ಕಾಯ್ದೆ ಜಾರಿಗೊಳಿಸಲು ದಾಖಲೆ ಮತ್ತು ಮಾಹಿತಿಗಳನ್ನು ಕಲೆಹಾಕಲಾಗುತ್ತಿದೆ. ಠಾಣಾ ಸರಹದ್ದುಗಳಲ್ಲಿ ವಾಹನ ತಪಾಸಣೆಗಾಗಿ ನಾಕಾ ಪಾಯಿಂಟ್‌ಗಳನ್ನು ರಚಿಸಿ ಅನುಮಾನಾಸ್ಪದ ವಾಹನಗಳು ಮತ್ತು ವ್ಯಕ್ತಿಗಳನ್ನು ಪರಿಶೀಲಿಸಲಾಗುತ್ತಿದೆ. ನಗರದ ಪ್ರಮುಖ ರಸ್ತೆ ಮತ್ತು ಜಂಕ್ಷನ್‌ಗಳಲ್ಲಿ ಸಿಸಿ ಕ್ಯಾಮೆರಾಗಳನ್ನು ಅಳವಡಿಸಿದ್ದು, ಇನ್ನು ಹೆಚ್ಚಿನ ಕ್ಯಾಮೆರಾಗಳನ್ನು ಅಳವಡಿಸುವ ಕಾರ್ಯ ಮುಂದುವರಿದಿದೆ. ಸರ ಅಪಹರಣ ಪ್ರಕರಣಗಳಲ್ಲಿ ಭಾಗಿಯಾದ ಎಂ.ಓ.ಬಿ ಆಸಾಮಿಗಳನ್ನು ಆಗಾಗ್ಗೆ ಪರಿಶೀಲಿಸಲಾಗುತ್ತಿದೆ ಎಂದು ಮಾನ್ಯ ಗೃಹ ಸಚಿವರು ತಿಳಿಸಿದರು. | ದಿನಾಂಕ: 04.01.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ಬೆಂಗಳೂರು ನಗರದಲ್ಲಿ ದಿ: 10.06.2015ರಿಂದ 15.06.2015ರವರೆಗೆ ಒಟ್ಟು 19 ಪ್ರಕರಣಗಳು ದಾಖಲಾಗಿದ್ದು, ಅವುಗಳಲ್ಲಿ 17 ಪ್ರಕರಣಗಳ ಪತ್ತೆಯಾಗಿದ್ದು 02 ಪ್ರಕರಣಗಳಲ್ಲಿ ಸಿ–ಅಂತಿಮ ವರದಿ ಸಲ್ಲಿಸಿದೆ.<br><br>ಸರಗಳ್ಳತನ ಪ್ರಕರಣಗಳಲ್ಲಿ ಭಾಗಿಯಾಗಿದ್ದ ಮೊಹಮ್ಮದ್ ಜಬೀವುದ್ದೀನ್ & ತಬ್ರೇಜ್ ಖಾನ್ ಬಿನ್ ಮೊಹಮ್ಮದ್ ನೂರುದ್ದೀನ್, 33 ವರ್ಷ ನಂ. 23/6, 1ನೇ ಮಹಡಿ, ಕೇರಾಪ್ ಇಕ್‌ಬಾಲ್ ಮನೆ, 19ನೇ ಮುಖ್ಯರಸ್ತೆ, 5ನೇ ಅಡ್ಡರಸ್ತೆ, ಎಸ್.ಎಂ.ಎಸ್.ಲೇಔಟ್, 5ನೇ ಹಂತ, ಜೆ.ಪಿ.ನಗರ, ಬೆಂಗಳೂರು ಈತನ ವಿರುದ್ಧ ಜಯನಗರ ಪೊಲೀಸರು ದಿ: 27.10.2017ರಂದು ಗೂಂಡಾ ಕಾಯಿದೆ ಅಡಿಯಲ್ಲಿ ಕ್ರಮ ಜರುಗಿಸಲಾಗಿರುತ್ತದೆ.<br><br>ಕಳೆದ 4 ವರ್ಷಗಳಲ್ಲಿ (2015, 2016, 2017 ಮತ್ತು 2018ರ ಮೇ ವರೆಗೆ) ಸರ ಅಪಹರಣ ಪ್ರಕರಣಗಳಲ್ಲಿ ಭಾಗಿಯಾಗಿರುವ ಒಟ್ಟು 292 ಆರೋಪಿಗಳ ವಿರುದ್ಧ ಎಂ.ಓ.ಬಿ. ಕಾರ್ಡ್‌ಗಳನ್ನು ತೆರೆಯಲಾಗಿರುತ್ತದೆ. ಅವರುಗಳನ್ನು ಸಹ ಆಗಿಂದಾಗ್ಗೆ ಪರಿಶೀಲನೆಗೊಳಪಡಿಸಲಾಗುತ್ತಿದೆ.<br><br>ಠಾಣಾ ಸರಹದ್ದುಗಳಲ್ಲಿ ವಾಹನ ತಪಾಸಣೆಗಾಗಿ ನಾಕಾ ಪಾಯಿಂಟ್‌ಗಳನ್ನು ರಚಿಸಿ ಅನುಮನಾಸ್ಪದ ವಾಹನಗಳು ಮತ್ತು ವ್ಯಕ್ತಿಗಳನ್ನು ಪರಿಶೀಲಿಸಲಾಗುತ್ತಿದೆ. ನಗರದ ಪ್ರಮುಖ ರಸ್ತೆ ಮತ್ತು ಜಂಕ್ಷನ್‌ಗಳಲ್ಲಿ ಸಿಸಿ ಕ್ಯಾಮೆರಾಗಳನ್ನು ಅಳವಡಿಸಿದ್ದು, ಇನ್ನು ಹೆಚ್ಚಿನ ಕ್ಯಾಮರಗಳನ್ನು ಅಳವಡಿಸಲಾಗುತ್ತಿದೆ. ಎಂ.ಓ.ಬಿ. ಅಸಾಮಿಗಳಿಗೆ ಸಮನ್ಸ್ ಮತ್ತು ವಾರೆಂಟಗಳನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಲಾಗುತ್ತಿದೆ.<br>ಬೆಂಗಳೂರು ನಗರದಲ್ಲಿ ದಿ: 10.06.2015 ರಿಂದ 15.06.2015ರವರೆಗೆ ಒಟ್ಟು 19 ಪ್ರಕರಣಗಳು ದಾಖಲಾಗಿದ್ದು, ಈಗಾಗಲೇ 19 ಪ್ರಕರಣಗಳಲ್ಲಿ 17 |

| | | | | |
|---|---|---|---|---|
| | | | | ಪ್ರಕರಣಗಳನ್ನು ಪತ್ತೆ ಹಚ್ಚಿ ಆರೋಪಿಗಳನ್ನು ದಸ್ತಗಿರಿ ಮಾಡಿ, ಕಾನೂನು ಕ್ರಮಕ್ಕೊಳಪಡಿಸಿ ಕ್ರಮ ಜರುಗಿಸಲಾಗಿದೆಯೆಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |
| 20 | 6141<br>ಚು.ಗು.ಪ್ರ:1771<br>ಶ್ರೀ ಬಿ. ರಾಮಕೃಷ್ಣ<br>ವಿಪನದಿ:16.07.2015 | ಇರಾನಿ ಗ್ಯಾಂಗ್‌ನವರು ಸರಗಳ್ಳತನದ ಪ್ರಕರಣಗಳಲ್ಲಿ ಭಾಗಿಯಾಗಿ, ಬಂಧಿತರಾದವರು ನಕಲಿ ಪಹಣೆ ಹಾಗೂ ನಕಲಿ ವ್ಯಕ್ತಿಯನ್ನು ನಿಲ್ಲಿಸಿ ಶ್ಯೂರಿಟಿ ತೆಗೆದುಕೊಳ್ಳುತ್ತಿದ್ದು ಇಂತಹವರಿಗೆ ಜಾಮೀನು ನೀಡಿದವರನ್ನು ಪತ್ತೆ ಹಚ್ಚುವ ಬಗ್ಗೆ. | ನಮ್ಮ ಕಾನೂನು ವ್ಯವಸ್ಥೆ ಏನಿದೆಯೋ ಹಾಗೆಯೇ ಮಾಡುತ್ತೇವೆ. ನಾವು ಎಲ್ಲಾ ಮುಂಜಾಗರೂಕತೆಯ ಕ್ರಮಗಳನ್ನು ತೆಗೆದುಕೊಳ್ಳುತ್ತೇವೆ, ಯಾರು ಶ್ಯೂರಿಟಿ ಕೊಟ್ಟಿದ್ದಾರೋ ಜಾಮೀನು ಕೊಟ್ಟಿದ್ದಾರೋ ಅವರ ವಿಚಾರವಾಗಿ ಕೂಡ ತನಿಖೆ ಮಾಡಬೇಕು, ನಕಲಿ ಶ್ಯೂರಿಟಿಯನ್ನು ಕೊಟ್ಟಿದ್ದರೆ ಆದನ್ನು ಸಹ ಕೋರ್ಟಿನ ಗಮನಕ್ಕೆ ತರುವ ಕೆಲಸ ಮಾಡಬೇಕೆಂದು ನಮ್ಮ ಡಿಜಿಪಿಯವರಿಗೆ ತಿಳಿಸುವುದಾಗಿ ಮಾನ್ಯ ಗೃಹ ಸಚಿವರು ತಿಳಿಸಿದರು. | ದಿನಾಂಕ: 04.01.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ಇರಾನಿ ಗ್ಯಾಂಗ್‌ನಲ್ಲಿನ ಆರೋಪಿಗಳಿಗೆ ಜಾಮೀನು ನೀಡುವವರ & ವಕಾಲತ್ತು ವಹಿಸುವ ವಕೀಲರ ಸಂಪೂರ್ಣ ಮಾಹಿತಿಯನ್ನು ನ್ಯಾಯಾಲಯದಿಂದ ಪಡೆದುಕೊಳ್ಳಲಾಗಿರುತ್ತದೆ. ಈ ಬಗ್ಗೆ ಅಗತ್ಯ ಕ್ರಮ ಕೈಗೊಳ್ಳುವಂತೆ ಇರಾನಿ ಗ್ಯಾಂಗ್‌ನ ಆರೋಪಿತರು ಭಾಗಿಯಾಗಿರುವ ಪ್ರಕರಣಗಳಲ್ಲಿನ ತನಿಖಾಧಿಕಾರಿರವರುಗಳಿಗೆ ಸೂಚಿಸಲಾಗಿರುತ್ತದೆ ಹಾಗೂ ಇರಾನಿ ಗ್ಯಾಂಗ್‌ನ 3 ಜನ ಆರೋಪಿಗಳಿಗೆ ನ್ಯಾಯಾಲಯವು ಜಾಮೀನಿನ ಮೇಲೆ ಬಿಡುಗಡೆಗೊಳಿಸಿರುತ್ತದೆ. ಆರೋಪಿಗಳ ಜಾಮೀನಿಗಾಗಿ ನಕಲಿ ಶೂರಿಟಿಯನ್ನು ಕೊಟ್ಟಿರುವುದು ಇದುವರೆಗೂ ಕಂಡು ಬಂದಿರುವುದಿಲ್ಲ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |
| 21 | 6142<br>ಚು.ಗು.ಪ್ರ:1758<br>ಶ್ರೀ ವೈ.ಎ.ನಾರಾಯಣ ಸ್ವಾಮಿ<br>ವಿಪನದಿ:16.07.2015 | ಬೆಂಗಳೂರು ನಗರದಲ್ಲಿ ಸರಗಳ್ಳತನ ವಿಪರೀತವಾಗಿದ್ದು ಇದನ್ನು ಮಟ್ಟ ಹಾಕಲು ಕೈಗೊಂಡಿರುವ ಕ್ರಮಗಳ ಬಗ್ಗೆ. | ಸ್ಥಳೀಯರಾದರೆ ಗೂಂಡಾ ಆಕ್ಟ್ ಕೆಳಗೆ ಮಾಡಬಹುದು. ಆದರೆ ಹೊರ ರಾಜ್ಯದಿಂದ ಬಂದು ಹೋಗುವವರಿಗೆ ನಾವು ಹೆಚ್ಚಿಗೆ ಮಾಡುವುದಕ್ಕಾಗುವುದಿಲ್ಲ. ಸಾಕಷ್ಟು ಕ್ರಮ ತೆಗೆದುಕೊಂಡಿದ್ದೇವೆ ಎನ್ನುವುದನ್ನು ಉತ್ತರದಲ್ಲಿ ಕೊಟ್ಟಿದ್ದೇವೆ. ಮಾನ್ಯ ಶ್ರೀ ಅಶ್ವತ್ ನಾರಾಯಣರವರು ಹೇಳಿದ ಹಾಗೆ Special Squad ಇನ್ನಷ್ಟು ಪ್ರಬಲವಾಗಿ ಮಾಡುವುದಕ್ಕೆ ಪ್ರಯತ್ನ | ದಿನಾಂಕ: 04.01.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ,<br>**ಸರಗಳ್ಳತನ ಮಟ್ಟ ಹಾಕಲು ಕೈಗೊಂಡಿರುವ ಕ್ರಮಗಳು :**<br>• ಸರ ಅಪಹರಣ ಪ್ರಕರಣಗಳಲ್ಲಿ ಪದೇ ಪದೇ ಭಾಗಿಯಾಗುವವರ ವಿರುದ್ಧ ಗೂಂಡಾ ಕಾಯ್ದೆ ಜಾರಿಗೊಳಿಸಲು ದಾಖಲೆ ಮತ್ತು ಮಾಹಿತಿಗಳನ್ನು ಕಲೆಹಾಕಲಾಗುತ್ತಿದೆ.<br>• ಬೆಳಿಗ್ಗೆ 5.30 ರಿಂದ 8.00 ಗಂಟೆಯವರೆಗೂ ಹಾಗೂ ಸಂಜೆ 5.00 ರಿಂದ ರಾತ್ರಿ 8.00 ರವರೆಗೆ ಎಲ್ಲಾ ಅಧಿಕಾರಿಗಳು, ಸಿಬ್ಬಂದಿಗಳು, ಚೀತಾ, ಹೊಯ್ಸಳ ವಾಹನಗಳಲ್ಲಿ ಗಸ್ತು ಮಾಡಲಾಗುತ್ತಿದೆ.<br>• ಠಾಣಾ ಸರಹದ್ದುಗಳಲ್ಲಿ ವಾಹನ ತಪಾಸಣೆಗಾಗಿ ನಾಕಾ ಪಾಯಿಂಟ್‌ಗಳನ್ನು ರಚಿಸಿ ಅನುಮಾನಾಸ್ಪದ ವಾಹನಗಳು ಮತ್ತು |

| | | | | |
|---|---|---|---|---|
| | | | ಮಾಡುತೇನೆ ಎಂದು ಮಾನ್ಯ ಗೃಹ ಸಚಿವರು ತಿಳಿಸಿದರು. | ವ್ಯಕ್ತಿಗಳನ್ನು ಪರಿಶೀಲಿಸಲಾಗುತ್ತಿದೆ.<br>• ನಗರದ ಪ್ರಮುಖ ರಸ್ತೆ ಮತ್ತು ಜಂಕ್ಷನ್‌ಗಳಲ್ಲಿ ಸಿ.ಸಿ. ಕ್ಯಾಮೆರಾಗಳನ್ನು ಅಳವಡಿಸಿದ್ದು, ಇನ್ನು ಹೆಚ್ಚಿನ ಕ್ಯಾಮರಾಗಳನ್ನು ಅಳವಡಿಸುವ ಕಾರ್ಯ ಮುಂದುವರಿದಿದೆ.<br>• ಸರ ಅಪಹರಣ ಪ್ರಕರಣಗಳಲ್ಲಿ ಭಾಗಿಯಾದ ಎಂ.ಓ.ಬಿ. ಆಸಾಮಿಗಳನ್ನು ಆಗಾಗ್ಗೆ ಪರಿಶೀಲಿಸಲಾಗುತ್ತದೆ.<br>• ಸದರಿ ಎಂ.ಓ.ಬಿ. ಆಸಾಮಿಗಳ ಮೇಲೆ ಮುಂಜಾಗ್ರತಾ ಕ್ರಮವಾಗಿ ಭದ್ರತಾ ಕಾಯ್ದೆ ಅಡಿ ಪ್ರಕರಣಗಳನ್ನು ಸಮನ್ಸ್ ಮತ್ತು ವಾರೆಂಟ್‌ಗಳನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಲಾಗುತ್ತಿದೆ.<br>• ಬೆಂಗಳೂರು ನಗರದಲ್ಲಿ ಪ್ರಥಮ ಬಾರಿಗೆ ಹೆಚ್ಚುವರಿ ಪೊಲೀಸ್ ಆಯುಕ್ತರಿಗೆ ದಂಡಾಧಿಕಾರಿಗಳ ಅಧಿಕಾರವನ್ನು ನೀಡಲಾಗಿರುತ್ತದೆ. ಇದರಿಂದ ಭದ್ರತಾ ಕಾಯ್ದೆಯಡಿ ಹೆಚ್ಚಿನ ಪ್ರಕರಣಗಳನ್ನು ದಾಖಲಿಸಲಾಗುತ್ತಿದೆ.<br>• ನಗರದ ಪೊಲೀಸ್ ಠಾಣೆಗಳಲ್ಲಿ ವಿಭಾಗವಾರು, ಸಿ.ಸಿ.ಬಿ. ಘಟಕ ಸೇರಿದಂತೆ ಸರಗಳ್ಳತನ ಪ್ರಕರಣಗಳ ಆರೋಪಿಗಳನ್ನು ಪತ್ತೆ ಹಚ್ಚುವ ಸಲುವಾಗಿ ತಂಡಗಳನ್ನು ರಚಿಸಿ ಆರೋಪಿಗಳ ಪತ್ತೆ ಹಚ್ಚುವ ಕ್ರಮ ಮುಂದುವರೆದಿದೆ.<br>• ವಿಶೇಷ ತಂಡಗಳನ್ನು ಪ್ರಕರಣ ಪತ್ತೆ ಹಚ್ಚಲು ರಚಿಸಲಾಗಿದೆ. ಬೇರೆ ರಾಜ್ಯದ ಅಪರಾಧಿಗಳ ಬಗ್ಗೆ ಮಾಹಿತಿ ಸಹಾ ಕಲೆ ಹಾಕಲಾಗುತ್ತಿದೆ.<br>• ಸರ ಅಪಹರಣಗಳನ್ನು ಪರಿಣಾಮಕಾರಿಯಾಗಿ ನಿಯಂತ್ರಿಸುವ ನಿಟ್ಟಿನಲ್ಲಿ ಹಾಗೂ ನಗರದಲ್ಲಿ ವ್ಯೂಹಾತ್ಮಕ ಪೊಲೀಸ್ ಗಸ್ತು ಕರ್ತವ್ಯ ನಿರ್ವಹಿಸಲು ಚೀತಾ, ಹೊಯ್ಸಳ ವಾಹನಗಳನ್ನು ನಿಯೋಜಿಸಲಾಗಿದೆ.<br>• ಇತ್ತೀಚೆಗೆ ಕೇಂದ್ರ ಕಾರಾಗೃಹದಿಂದ ಬಿಡುಗಡೆಯಾಗಿರುವ ಸರಗಳ್ಳತನ ಆರೋಪಿಗಳ ವಿರುದ್ಧ ಕಲಂ 109 ಮತ್ತು 110 ಸಿ.ಆರ್.ಪಿ.ಸಿ. ಭದ್ರತಾ ಕಾಯ್ದೆಯಡಿಯಲ್ಲಿ ಕ್ರಮ ಕೈಗೊಳ್ಳಲಾಗುತ್ತಿದೆ.<br>**<u>ಸ್ಪೆಷಲ್ ಸ್ಕ್ವಾಡ್‌ನ್ನು ಪ್ರಬಲವಾಗಿ ರಚಿಸುವ ಬಗ್ಗೆ :</u>** |

<table>
<tr>
<td></td>
<td></td>
<td></td>
<td></td>
<td>
ಬೆಂಗಳೂರು ನಗರದ ಪೊಲೀಸ್ ಠಾಣೆಗಳಲ್ಲಿ ಉಪ ವಿಭಾಗಾವಾರು, ವಿಭಾಗವಾರು, ಸಿ.ಸಿ.ಬಿ. ಘಟಕ ಸೇರಿದಂತೆ ಸರಗಳ್ಳತನ ಪ್ರಕರಣಗಳ ಆರೋಪಿಗಳನ್ನು ಪತ್ತೆ ಹಚ್ಚುವ ಸಲುವಾಗಿ ವಿಶೇಷ ತಂಡಗಳನ್ನು ರಚಿಸಿದ್ದು, ಆರೋಪಿಗಳ ಪತ್ತೆ ಹಚ್ಚಿ ಮಾಲುಗಳನ್ನು ವಶಪಡಿಸಿಕೊಳ್ಳಲಾಗುತ್ತಿದೆ ಹಾಗೂ ಸರಗಳ್ಳತನ ಪ್ರಕರಣಗಳನ್ನು ನಿಯಂತ್ರಣದಲ್ಲಿರಿಸುವ ಬಗ್ಗೆ ಎಲ್ಲಾ ಮುಂಜಾಗೃತಾ ಕ್ರಮಗಳನ್ನು ಕೈಗೊಳ್ಳ ಲಾಗುತ್ತಿರುತ್ತದೆ.
<u>ಕಳೆದ 5 ವರ್ಷಗಳಲ್ಲಿ ಬೆಂಗಳೂರು ನಗರದಲ್ಲಿ ನಡೆದ ಕಳ್ಳತನ ಪ್ರಕರಣಗಳು ಮತ್ತು ಪತ್ತೆಯಾದ ಪ್ರಕರಣಗಳ ವಿವರ ಈ ಕೆಳಕಂಡಂತಿದೆ:</u>
<table>
<tr><th>ಕ್ರಮ ಸಂಖ್ಯೆ</th><th>ವರ್ಷ</th><th>ವರದಿ</th><th>ಪತ್ತೆ</th></tr>
<tr><td>1</td><td>2013</td><td>338</td><td>275</td></tr>
<tr><td>2</td><td>2014</td><td>537</td><td>414</td></tr>
<tr><td>3</td><td>2015</td><td>343</td><td>299</td></tr>
<tr><td>4</td><td>2016</td><td>254</td><td>240</td></tr>
<tr><td>5</td><td>2017</td><td>354</td><td>332</td></tr>
<tr><td>6</td><td>2018 (30.9.2018 ರವರೆಗೆ</td><td>247</td><td>82</td></tr>
</table>
ಬೆಂಗಳೂರು ನಗರದಲ್ಲಿ ಸರಗಳ್ಳತನ ತಡೆಗಟ್ಟಲು ಹಲವಾರು ಪರಿಣಾಮಕಾರಿ ಕ್ರಮಗಳನ್ನು ಕೈಗೊಂಡಿದ್ದು, ಆರೋಪಿಗಳ ವಿರುದ್ಧ ಕ್ರಮ ಜರುಗಿಸಲಾಗುತ್ತಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು.
</td>
</tr>
<tr>
<td>22</td>
<td>6139<br>ಚು.ರ.ಪ್ರ: 517</td>
<td>ಸುಗಮ ಸಂಚಾರ ವ್ಯವಸ್ಥೆಗಾಗಿ ಹುಬ್ಬಳ್ಳಿ–ಧಾರವಾಡದಲ್ಲಿ 2015–</td>
<td>ಹುಬ್ಬಳ್ಳಿ–ಧಾರವಾಡ ನಗರದಲ್ಲಿ ಸಂಚಾರದಟ್ಟಣೆ ಸುಗಮವಾಗಿ ಸಾಗಲು ಹೆಚ್ ಡಿ–ಟ್ರಾಕ್ ಯೋಜನೆಯಡಿಯಲ್ಲಿ</td>
<td>ದಿನಾಂಕ: 04.01.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ಹುಬ್ಬಳ್ಳಿ–ಧಾರವಾಡ ನಗರದ ಸಂಚಾರ ಸುಧಾರಣೆ (ಹೆಚ್‌ಡಿ–ಟ್ರ್ಯಾಕ್)</td>
</tr>
</table>

| | | | | |
|---|---|---|---|---|
| 23 | ಶ್ರೀ ಅರುಣ ಶಹಾಪೂರ ವಿಪನದಿ: 02.07.2015<br><br>&<br><br>5313 ಚು.ರ.ಪ್ರ. 3296 ಶ್ರೀ.ಮಹಂತೇಶ್ ಶಿವಾನಂದ ಕೌಜಲಗಿ ವಿಪನದಿ:26.11.2015 | 16ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಿದಂತೆ ಹೆಚ್‌ಡಿ–ಟ್ರಾಕ್ ಅನುಷ್ಠಾನದ ಬಗ್ಗೆ.<br><br>ಹುಬ್ಬಳ್ಳಿ–ಧಾರವಾಡ ನಗರದ ಸಂಚಾರ ಸುಧಾರಣೆಗಾಗಿ ಹೆಚ್–ಟ್ರ್ಯಾಕ್ ಯೋಜನೆ ಪ್ರಾರಂಭಿಸುವ ಬಗ್ಗೆ. | ಪ್ರತಿ ವರ್ಷ ರೂ.5.00 ಕೋಟಿಯಂತೆ 5 ವರ್ಷಗಳಿಗೆ ರೂ.25.00 ಕೋಟಿ ಅನುದಾನ ಬಿಡುಗಡೆಗೆ ಸರ್ಕಾರದ ಆದೇಶ ಕೋರಿ ಯೋಜನಾ ವರದಿಯು ಸರ್ಕಾರದಲ್ಲಿ ಸ್ವೀಕೃತವಾಗಿದ್ದು ಪರಿಶೀಲನೆಯಲ್ಲಿದೆ. ನಂತರ 2015–16ನೇ ಸಾಲಿಗೆ ಬಿಡುಗಡೆಯಾಗಬೇಕಾದ ರೂ.5.00 ಕೋಟಿ ಅನುದಾನದಲ್ಲಿ ರೂ.2.00 ಕೋಟಿಯನ್ನು ಆಯವ್ಯಯದಲ್ಲಿ ಘೋಷಣೆಯಾಗಿರುವಂತೆ ಈ ಕುರಿತು ಕ್ರಿಯಾ ಯೋಜನೆಯು ಸ್ವೀಕೃತವಾಗಿದ್ದು ಪ್ರಸ್ತಾವನೆಯನ್ನು ಪರಿಶೀಲಿಸಲಾಗುತ್ತಿದೆ ಎಂದು ಮಾನ್ಯ ಗೃಹ ಸಚಿವರು ತಿಳಿಸಿದರು.<br><br>ಹುಬ್ಬಳ್ಳಿ–ಧಾರವಾಡ ನಗರದ ಸಂಚಾರ ಸುಧಾರಣೆ (ಹೆಚ್–ಟ್ರ್ಯಾಕ್) ಯೋಜನೆಯನ್ನು ಅನುಷ್ಠಾನಗೊಳಿಸಲು ಪ್ರಸಕ್ತ ಸಾಲಿಗೆ ರೂ.5.00 ಕೋಟಿಗಳ ಕ್ರಿಯಾ ಯೋಜನೆಗೆ ಆಡಳಿತಾತ್ಮಕ ಅನುಮೋದನೆ ನೀಡಿದ್ದು, ಅನುದಾನ ಬಿಡುಗಡೆ ಮಾಡಲು ಕ್ರಮಕೈಗೊಳ್ಳಲಾಗುವುದು ಎಂದು ಮಾನ್ಯ ಗೃಹ ಸಚಿವರು ತಿಳಿಸಿದರು. | ಯೋಜನೆಯನ್ನು 2015ರಿಂದ 2020ರವರೆಗೆ ಅನುಷ್ಠಾನಗೊಳಿಸಲು ಹಾಗೂ 2015–16ನೇ ಸಾಲಿನ ಕ್ರಿಯಾ ಯೋಜನೆಗೆ ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ 35 ಇಎಫ್‌ಎಸ್ 2015, ದಿ: 11.09.2015ರಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಿ ಆದೇಶಿಸಲಾಗಿದೆ.<br><br>2015–16ನೇ ಸಾಲಿನಲ್ಲಿ ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ 35 ಇಎಫ್‌ಎಸ್ 2015, ದಿ: 04.01.2016ರಲ್ಲಿ ರೂ.200.00 ಲಕ್ಷಗಳನ್ನು ಬಿಡುಗಡೆ ಮಾಡಿ ಆದೇಶಿಸಿದೆ.<br><br>2016–17ನೇ ಸಾಲಿನಲ್ಲಿ ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ 44 ಇಎಫ್‌ಎಸ್ 206, ದಿ: 09.08.2016ರಲ್ಲಿ ರೂ. 200 ಲಕ್ಷಗಳ ಕ್ರಿಯಾ ಯೋಜನೆಗೆ ಮಂಜೂರಾತಿ ನೀಡಿ ಆದೇಶಿಸಿ, ದಿ: 27.05.2016 ಮತ್ತು 14.02.2017ರ ಆದೇಶಗಳಲ್ಲಿ ರೂ. 200.00 ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಲಾಗಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |
| 24 | 6143<br>ಚು.ಗು.ಪ್ರ: 1357<br>ಶ್ರೀ ಘೋಟ್ನೇಕರ | ಉತ್ತರ ಕನ್ನಡ ಜಿಲ್ಲೆಯ ಅಂಕೋಲ ತಾಲ್ಲೂಕಿನಲ್ಲಿ ಅನಾವಶ್ಯಕವಾಗಿ | ಸದರಿ ಪ್ರಕರಣದಲ್ಲಿ ಪೋಲೀಸರ ವಿರುದ್ಧ 2 ಪ್ರಕರಣಗಳು ದಾಖಲಾಗಿದ್ದು ಅವು ತನಿಖಾ | ದಿನಾಂಕ: 04.01.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು, ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಉತ್ತರ ಕನ್ನಡ ಜಿಲ್ಲೆಯ ಅಂಕೋಲಾ ಪೋಲೀಸ್ ಠಾಣೆಯಲ್ಲಿ 02 ಪ್ರಕರಣಗಳು ದಾಖಲಾಗಿರುತ್ತವೆ. ವಿವರ ಕೆಳಗಿನಂತಿವೆ. |

| | | | | |
|---|---|---|---|---|
| | ಶ್ರೀಕಾಂತ ಲಕ್ಷ್ಮಣ<br>ವಿಪನದಿ:16.07.2015 | ಅಮಾನುಷ ಹಲ್ಲೆ ಮಾಡಿದ ಸಿಬ್ಬಂದಿ ಮೇಲೆ ಕೈಗೊಂಡಿದ್ದ ಕ್ರಮ ಹಾಗೂ ಈಗಾಗಲೇ ಹಲ್ಲೆಗೊಳಗಾದ ವ್ಯಕ್ತಿ ಅತ್ಯಂತ ಬಡವನಿದ್ದು ಅವನ ವೈದ್ಯಕೀಯ ಚಿಕಿತ್ಸೆಗೆ ಸರ್ಕಾರ ಹಣವನ್ನು ಭರಿಸುವುದರ ಬಗ್ಗೆ. | ಹಂತದಲ್ಲಿ ಇರುವುದರಿಂದ ಈ ಹಂತದಲ್ಲಿ ಅಧಿಕಾರಿ ಹಾಗೂ ಸಿಬ್ಬಂದಿಗಳ ಮೇಲೆ ಕ್ರಮ ಜರುಗಿಸಿರುವುದಿಲ್ಲ. ತನಿಖೆ ಮುಗಿದು ಆರೋಪಗಳು ಸಾಬೀತಾದಲ್ಲಿ ಅಂತಹ ಪೊಲೀಸರ ಮೇಲೆ ಸೂಕ್ತ ಶಿಸ್ತು ಕ್ರಮವನ್ನು ಜರುಗಿಸುವುದರ ಜೊತೆಗೆ ವೈದ್ಯಕೀಯ ವೆಚ್ಚವನ್ನು ಭರಿಸುವ ಬಗ್ಗೆ ಪರಿಶೀಲಿಸಿ ಕ್ರಮಕೈಗೊಳ್ಳಲಾಗುವುದು ಎಂದು ಮಾನ್ಯ ಗೃಹ ಸಚಿವರು ತಿಳಿಸಿದರು. | 1) ಮೊಕದ್ದಮೆ ಸಂಖ್ಯೆ: 83/2015 ಕಲಂ 323, 324, 504 ಐಪಿಸಿಯ ಪ್ರಕರಣವು ತನಿಖೆ ಪೂರ್ಣಗೊಂಡ ನಂತರ ಸುಳ್ಳೆಂದು ಕಂಡು ಬಂದಿರುವುದರಿಂದ ದಿ: 31.12.2015 ರಂದು ಮಾನ್ಯ ನ್ಯಾಯಾಲಯಕ್ಕೆ "ಬಿ" ಸುಳ್ಳು ಅಂತಿಮ ವರದಿಯನ್ನು ನಿವೇದಿಸಿಕೊಂಡಿದ್ದು, ಮಾನ್ಯ ನ್ಯಾಯಾಲಯದ ಎಸ್.ಆರ್.ನಂ. 33/2017 ಅನ್ನು ಪಡೆದುಕೊಂಡಿರುತ್ತದೆ.<br><br>ಸದರಿ ಪ್ರಕರಣದಲ್ಲಿ ಮಾನ್ಯ ನ್ಯಾಯಾಲಯಕ್ಕೆ "ಬಿ" ಅಂತಿಮ ವರದಿ ಸಲ್ಲಿಸಿದವರ ವಿರುದ್ಧ ಫಿರ್ಯಾನುದಾರರು ದಿ: 04.10.2017ರಂದು ಮಾನ್ಯ ಜೆ.ಎಮ್.ಎಫ್.ಸಿ. ಅಂಕೋಲಾ ನ್ಯಾಯಾಲಯಕ್ಕೆ ಅಪೀಲು ಅರ್ಜಿಯನ್ನು ಸಲ್ಲಿಸಿರುತ್ತಾರೆ.<br><br>ಎನ್.ಸಿ.ಆರ್.ನ 88/2015 ಕಲಂ 330, 331,324, 326, 341, 384, 386, 506(2) ಸಹಿತ 34 ಐ.ಪಿ.ಸಿ. ಪ್ರಕರಣವು ಅಂಕೋಲಾ ಠಾಣಾ ಗುನ್ನಾ ನಂಬರ್ 83/2015 ಕಲಂ 323, 324, 504 ಐ.ಪಿ.ಸಿ.ಗೆ ಸಂಬಂಧಿಸಿದ್ದು, ಎರಡೂ ಪ್ರಕರಣಗಳು ಒಂದೇ ಘಟನೆಗೆ ಸಂಬಂಧಪಟ್ಟದ್ದಾಗಿರುವುದರಿಂದ ಸದರಿ ಪ್ರಕರಣವನ್ನು ಕಲಂ 210 ಸಿ.ಆರ್.ಪಿ.ಸಿ. ರಂತೆ ಮುಕ್ತಾಯವಾಗಿರುತ್ತದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |
| 25 | 6144<br>ಚು.ರ.ಪ್ರ: 1773<br>ಶ್ರೀ ಬಿ.ರಾಮಕೃಷ್ಣ<br>ವಿಪನದಿ:16.07.2015 | ಆರಕ್ಷಕ ಇಲಾಖೆಯ ಪೊಲೀಸ್ ಸಿಬ್ಬಂದಿಯವರಿಗೆ ಸಮವಸ್ತ್ರ ಹೊಲಿಗೆ ಬೆಲೆ ರೂ.1000/– ನೀಡುವ ಕುರಿತು. | ಈ ಸಂಬಂಧ ಪ್ರಸ್ತುತ ಮಾರುಕಟ್ಟೆ ಬೆಲೆ ಪರಿಶೀಲಿಸಿದ್ದು, ಅದರಂತೆ ಸಮವಸ್ತ್ರದ ಮಜೂರಿಯನ್ನು ರೂ.180/– ರಿಂದ 800/–ಕ್ಕೆ ಹೆಚ್ಚಿಸಲು ಪರಿಶೀಲಿಸಲಾಗುತ್ತಿದೆ ಎಂದು ಮಾನ್ಯ ಗೃಹ ಸಚಿವರು ತಿಳಿಸಿದರು. | ದಿನಾಂಕ: 04.01.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ 37 ಇಎಫ್‌ಎಸ್ 2014, ದಿ: 01.10.2015ರಲ್ಲಿ ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಗಳಿಗೆ ಒಂದು ಜೊತೆ ಸಮವಸ್ತ್ರದ ಹೊಲಿಗೆ ದರವನ್ನು ಪುರುಷ ಅಧಿಕಾರಿ/ಸಿಬ್ಬಂದಿಗಳಿಗೆ ರೂ. 180/– ರಿಂದ ರೂ.500/– ಹಾಗೂ ಮಹಿಳಾ ಅಧಿಕಾರಿ/ಸಿಬ್ಬಂದಿಗಳಿಗೆ 600/–ಗಳಂತೆ ಪರಿಷ್ಕರಿಸಲಾಗಿರುತ್ತದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |

**ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ**

| ಕ್ರಮ ಸಂಖ್ಯೆ | ಆಶ್ವಾಸನೆ ಸಂಖ್ಯೆ | ಆಧಾರ ಮತ್ತು ದಿನಾಂಕ | ಆಶ್ವಾಸನೆ | ತೆಗೆದುಕೊಂಡ ಕ್ರಮ |
|---|---|---|---|---|
| 1 | 4897 ಚು.ರ.ಪ್ರ 542 ಶ್ರೀ. ಕೋಟ ಶ್ರೀನಿವಾಸ ಪೂಜಾರಿ ವಿಪನದಿ; 09.02.2015 | ಶಾಸಕರ ವಿವೇಚನಾ ನಿಧಿಯಿಂದ ಸೋಲಾರ್ ದಾರಿದೀಪ ಅಳವಡಿಕೆಗೆ ಅವಕಾಶ ನೀಡುವ ಬಗ್ಗೆ. | ಸೋಲಾರ್ ದಾರಿದೀಪ ಅಳವಡಿಕೆಗೆ ಅವಕಾಶ ಕಲ್ಪಿಸುವ ಬಗ್ಗೆ ಕೋರಿಕೆ ಬಂದಿದ್ದು, ಈ ಬಗ್ಗೆ ಪರಿಶೀಲಿಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂದು ಮಾನ್ಯ ಯೋಜನೆ ಮತ್ತು ಸಾಂಖ್ಯಿಕ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಮತ್ತು ವಿಜ್ಞಾನ ಹಾಗೂ ತಂತ್ರಜ್ಞಾನ ಸಚಿವರು ತಿಳಿಸಿದರು. | ದಿನಾಂಕ: 11.01.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ಅಧಿಕೃತ ಜ್ಞಾಪನ ಪತ್ರ ಸಂಖ್ಯೆ: ಯೋಇ 73 ಯೋವಿವಿ 2014, ದಿ: 11.03.2015ರಲ್ಲಿ ಕರ್ನಾಟಕ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯಡಿ "ವಿಧಾನಸಭಾ ಸದಸ್ಯರು ಮತ್ತು ವಿಧಾನ ಪರಿಷತ್ ಸದಸ್ಯರುಗಳಿಗೆ ಹಂಚಿಕೆಯಾಗಿರುವ ಅನುದಾನದಲ್ಲಿ ವಾರ್ಷಿಕ ರೂ.30.00 ಲಕ್ಷಗಳ ಮಿತಿಯಲ್ಲಿ ಸೋಲಾರ್ ಬೀದಿ ದೀಪ, ಸಾರ್ವಜನಿಕ ಸ್ಥಳಗಳಲ್ಲಿ ಹೈಮಾಸ್ಕ್ ಲೈಟ್ ಮತ್ತು ಸಿಸಿ ಕ್ಯಾಮೆರಾಗಳನ್ನು ಅಳವಡಿಸಲು" ಅವಕಾಶ ಕಲ್ಪಿಸಲಾಗಿದೆಯೆಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸಮಿತಿಯು ಭರವಸೆಯನ್ನು ಮುಕ್ತಾಯಗೊಳಿಸಿತು. |
| 2 | 6157 ಚು.ಗು.ಪ್ರ 1599 ಶ್ರೀ ಐವನ್ ಡಿ'ಸೋಜಾ, ವಿಪನದಿ: 13.07.2015 | ಕರಾವಳಿ ಅಭಿವೃದ್ಧಿ ಪ್ರಾಧಿಕಾರದಲ್ಲಿ ಸದಸ್ಯರುಗಳನ್ನು ನೇಮಕ ಮಾಡದೇ ಇರುವುದರಿಂದ ಕರಾವಳಿ ಅಭಿವೃದ್ಧಿ ಪ್ರಾಧಿಕಾರದ ಯೋಜನೆಗಳನ್ನು ಕೈಗೊಳ್ಳಲು ಸಾಧ್ಯವಾಗದಿರುವ ಬಗ್ಗೆ. | ಕರಾವಳಿ ಅಭಿವೃದ್ಧಿ ಪ್ರಾಧಿಕಾರಕ್ಕೆ ಸದಸ್ಯರುಗಳನ್ನು ನಾಮನಿರ್ದೇಶನ ಮಾಡುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ ಎಂದು ಮಾನ್ಯ ಯೋಜನೆ ಮತ್ತು ಸಾಂಖ್ಯಿಕ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಮತ್ತು ವಿಜ್ಞಾನ ಹಾಗೂ ತಂತ್ರಜ್ಞಾನ ಸಚಿವರು ತಿಳಿಸಿದರು. | ದಿನಾಂಕ: 11.01.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ದಿನಾಂಕ: 13.7.2015ರ ನಂತರ ಕರಾವಳಿ ಅಭಿವೃದ್ಧಿ ಪ್ರಾಧಿಕಾರಕ್ಕೆ 29 ಸದಸ್ಯರನ್ನು ನಾಮನಿರ್ದೇಶನ ಮಾಡಲಾಗಿದೆ (ಅಧಿಸೂಚನೆಗಳನ್ನು ಹೊರಡಿಸಲಾಗಿದೆ) ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸಮಿತಿಯು ಭರವಸೆಯನ್ನು ಮುಕ್ತಾಯಗೊಳಿಸಿತು. |
| 3 | 6285 ಚು.ಗು.ಪ್ರ:1745 | ಬಯಲುಸೀಮೆ ಅಭಿವೃದ್ಧಿ | Provisionಗಳನ್ನು ಪರಿಶೀಲನೆ | ದಿನಾಂಕ: 11.01.2019ರಂದು ನಡೆದ ಸಮಿತಿ ಸಭೆಯಲ್ಲಿ |

| | | | | |
|---|---|---|---|---|
| | ಶ್ರೀ ಆರ್.ಚೌಡರೆಡ್ಡಿ ತೂಪಲ್ಲಿ<br>ವಿಪನದಿ: 27.03.2017 | ಯೋಜನೆಯಡಿ ವಿಧಾನ ಪರಿಷತ್ ಸದಸ್ಯರಿಗೆ ಅನುದಾನ ಒದಗಿಸುವ ಬಗ್ಗೆ. | ಮಾಡಿ ಸನ್ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತಂದು ಕ್ಷೇತ್ರವಾರು ಸದಸ್ಯರಿಗೆ ಅನುದಾನ ಒದಗಿಸಲು ಅವಕಾಶವಿದ್ದರೆ, ಖಂಡಿತವಾಗಿಯೂ ಪ್ರಯತ್ನ ಮಾಡುತ್ತೇನೆ ಎಂದು ಮಾನ್ಯ ಯೋಜನೆ, ಸಾಂಖ್ಯಿಕ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ತಿಳಿಸಿದರು. | ಚರ್ಚಿಸಿದಾಗ, ಮಂಡಳಿಯ ಸರ್ವ ಸದಸ್ಯರ ಸಭೆಯ ತೀರ್ಮಾನದಂತೆ, ಮಂಡಳಿಯ ವ್ಯಾಪ್ತಿಗೊಳಪಡುವ ವಿಧಾನ ಪರಿಷತ್ ಸದಸ್ಯರಿಗೆ 2016–17ನೇ ಸಾಲಿನಲ್ಲಿ ರೂ. 10.00 ಲಕ್ಷ ಮ್ತು 2017–18ನೇ ಸಾಲಿನಲ್ಲಿ ರೂ. 20.00 ಲಕ್ಷ ಅನುದಾನವನ್ನು ನೀಡಲಾಗಿದೆಯೆಂದು ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸಮಿತಿಯು ಭರವಸೆಯನ್ನು ಮುಕ್ತಾಯಗೊಳಿಸಿತು. |
| 4 | 6286 ಚು.ಗು.ಪ್ರ : 2666<br>ಶ್ರೀ ವಿಜಯ ಸಿಂಗ್<br>ವಿ.ಪ.ನ.ದಿ: 21.06.2017 | 2017–18ನೇ ಸಾಲಿನಲ್ಲಿ ಹೈದ್ರಾಬಾದ್–ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಗೆ ಅನುದಾನ ಕೋರಿ ಬಂದಿರುವ ಪ್ರಸ್ತಾವನೆಗಳು ಹಾಗೂ ಅನುದಾನವನ್ನು ಬಿಡುಗಡೆ ಮಾಡಿರುವ ಬಗ್ಗೆ. | 2017–18ನೇ ಸಾಲಿನಲ್ಲಿ ಹೈದ್ರಾಬಾದ್–ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಗೆ ಅನುದಾನ ಕೋರಿ ಬೀದರ್ ಜಿಲ್ಲೆಯಿಂದ 229 ಪ್ರಸ್ತಾವನೆಗಳು ಬಂದಿದ್ದು ಅವುಗಳ ಪರಿಶೀಲನೆ ಹಂತದಲ್ಲಿರುತ್ತದೆ ಎಂದು ಮಾನ್ಯ ಯೋಜನೆ ಮತ್ತು ಸಾಂಖ್ಯಿಕ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ತಿಳಿಸಿದರು. | ದಿನಾಂಕ: 11.01.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ಹೈ.ಕ.ಪ್ರ.ಅ.ಮಂಡಳಿಯ 2017–18ನೇ ಸಾಲಿನಲ್ಲಿ ಬೀದರ್ ಜಿಲ್ಲೆಯ ಮೈಕ್ರೋ ಯೋಜನೆಯಡಿ ರೂ. 11436.18 ಲಕ್ಷ ಮೊತ್ತ ನಿಗದಿಪಡಿಸಿದ್ದು, ಮ್ಯಾಕ್ರೋ ಯೋಜನೆಯಡಿ ರೂ.9928.00 ಲಕ್ಷ ಮೊತ್ತವನ್ನು ನಿಗದಿಪಡಿಸಲಾಗಿರುತ್ತದೆ.<br>1) ಮೈಕ್ರೋ ಯೋಜನೆಯಡಿ ತಾಲ್ಲೂಕುವಾರು ಅನುದಾನ ಹಂಚಿಕೆ ಮಾಡಲಾಗಿರುತ್ತದೆ.<br>(see table below)<br>ಹಂಚಿಕೆ ಮಾಡಿದ ಅನುದಾನಕ್ಕೆ ಅನುಗುಣವಾಗಿ |

| ಕ್ರ. ಸಂ. | ತಾಲ್ಲೂಕು | ನಿಗದಿಪಡಿಸಿದ ಅನುದಾನ (ರೂ.ಲಕ್ಷಗಳಲ್ಲಿ) |
|---|---|---|
| 1 | Aurad | 3102.84 |
| 2. | Bhalki | 2304.96 |
| 3. | Humnabad | 2393.63 |
| 4. | Bidar | 886.52 |
| 5. | Basavakalyan | 2784.23 |
| | Total | 11436.18 |

| | | | | |
|---|---|---|---|---|
| | | | | ವಿಧಾನಸಭಾ ಸದಸ್ಯರುಗಳಿಂದ ಸ್ವೀಕರಿಸಿದ ಕಾಮಗಾರಿಗಳ ಕ್ರಿಯಾ ಯೋಜನೆ ರೂಪಿಸಿ ತಾಲ್ಲೂಕಿನ ತ್ರೈಮಾಸಿಕ ಕೆ.ಡಿ.ಪಿ. ಸಭೆಯಲ್ಲಿ ಅನುಮೋದನೆ ಪಡೆದು, ಜಿಲ್ಲಾ ಸಲಹಾ ಸಮಿತಿ ಸಭೆಯಲ್ಲಿ ಅನುಮೋದನೆ ಪಡೆದು ಸಭೆಯ ನಡವಳಿಗಳೊಂದಿಗೆ, ಜಿಲ್ಲಾಧಿಕಾರಿಗಳು ಬೀದರ್‌ರವರಿಂದ ಕಾಮಗಾರಿಗಳಿಗೆ ಮಂಜೂರಾತಿಗಾಗಿ ಸಲ್ಲಿಸಿದ ಪ್ರಸ್ತಾವನೆಗಳನ್ನು ಮಂಡಳಿಯ ಮಾರ್ಗಸೂಚಿ ಅನುಸಾರ ಮಂಜೂರಾತಿ ನೀಡಲಾಗಿರುತ್ತದೆ.<br><br>2) ಮ್ಯಾಕ್ರೋ ಯೋಜನೆಯಡಿ ಬೀದರ್ ಜಿಲ್ಲೆಯ ವಿಧಾನಸಭಾ, ವಿಧಾನ ಪರಿಷತ್ತು, ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಇತರ ಸರ್ಕಾರಿ ಕಚೇರಿಗಳಿಂದ ಒಟ್ಟು ರೂ. 13023.00 ಲಕ್ಷ ಮೊತ್ತದ 229 ಕಾಮಗಾರಿಗಳ ಅನುಮೋದನೆಗಾಗಿ ಪ್ರಸ್ತಾವನೆಗಳು ಸ್ವೀಕೃತವಾಗಿದ್ದವು. ಮ್ಯಾಕ್ರೋ ಯೋಜನೆಯಡಿ ವಾರು ಅನುದಾನ ನಿಗದಿಪಡಿಸಿದ್ದು, ಒಟ್ಟು ಸ್ವೀಕರಿಸಿದ ಪ್ರಸ್ತಾವನೆಗಳು ಪುನರ್ ಪರಿಶೀಲಿಸಿ ನಿಗದಿಪಡಿಸಿದ ಅನುದಾನಕ್ಕೆ ಮಾತ್ರ ಕಾಮಗಾರಿಗಳ ಪಟ್ಟಿಯನ್ನು ಸಿದ್ದಪಡಿಸಿ ಮಂಡಳಿಗೆ ಸಲ್ಲಿಸಲು ಮಂಡಳಿ ಪತ್ರ ಸಂ: ಹೈಕಮಂ/ಯೋಶಾ;ಕ್ರೀಯಾ/ಮ್ಯಾಕ್ರೋ/ಬೀದರ್/01–2017–18/1058, ದಿ: 24.7.2017ರನ್ವಯ ಜಿಲ್ಲಾಧಿಕಾರಿಗಳು, ಬೀದರ್ ಇವರಿಗೆ ಪತ್ರ ಬರೆಯಲಾಗಿತ್ತು.<br><br>ಅದರಂತೆ ಸದರಿ ಪ್ರಸ್ತಾವನೆಗಳಲ್ಲಿ ಜಿಲ್ಲಾಧಿಕಾರಿಗಳಿಂದ ಸ್ವೀಕೃತವಾದ ರೂ.1884.57 ಲಕ್ಷ ಮೊತ್ತದ 17 ಕಾಮಗಾರಿಗಳಿಗೆ ಮಂಜೂರಾತಿ ನೀಡಲಾಗಿರುತ್ತದೆ (ಪಟ್ಟಿ ಲಗತ್ತಿಸಲಾಗಿರುತ್ತದೆ) ರೂ. 7435.62 ಲಕ್ಷ ಮೊತ್ತದ ಗ್ರಾಮ ವಿಕಾಸ ಮತ್ತು ನಮ್ಮ ಹೊಲ ನಮ್ಮ ರಸ್ತೆ, ಇನ್ನಿತರ ಕಾಮಗಾರಿಗಳಿಗೆ ಮಂಜೂರಾತಿ ನೀಡಲಾಗಿರುತ್ತದೆ. ಒಟ್ಟು ರೂ 9320.19 ಲಕ್ಷ ಮೊತ್ತದ ಕಾಮಗಾರಿಗಳಿಗೆ ಅನುಮೋದನೆ ನೀಡಲಾಗಿರುತ್ತದೆ ಎಂದು |

| | | | | |
|---|---|---|---|---|
| | | | | ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸಮಿತಿಯು ಭರವಸೆಯನ್ನು ಮುಕ್ತಾಯಗೊಳಿಸಿತು. |
| 5 | 6288 ಚು.ರ.ಪ್ರ; 863 ಶ್ರೀ ಅಮರನಾಥ ಪಾಟೀಲ್ ವಿಪನದಿ: 20.03.2017 | ಹೈದ್ರಾಬಾದ್-ಕರ್ನಾಟಕ ವ್ಯಾಪ್ತಿಯ ಜಿಲ್ಲೆಗಳಲ್ಲಿ ಶಿಕ್ಷಣಕ್ಕೆ ಹಾಗೂ ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಅನುದಾನ ನೀಡಲು ಸರ್ಕಾರ/ಮಂಡಳಿಯ ಯೋಜನೆಗಳ ಬಗ್ಗೆ. | ಹೈದ್ರಾಬಾದ್-ಕರ್ನಾಟಕ ವ್ಯಾಪ್ತಿಯಲ್ಲಿ ಬರುವ ಜಿಲ್ಲೆಗಳಲ್ಲಿ ಶಿಕ್ಷಣಕ್ಕೆ ಸಂಬಂಧಿಸಿದಂತೆ ಪ್ರಸ್ತಾವನೆಗಳನ್ನು ಹೈದ್ರಾಬಾದ್-ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯಿಂದ ಸ್ವೀಕರಿಸಿದ ನಂತರ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದು ಎಂದು ಮಾನ್ಯ ಯೋಜನೆ, ಸಾಂಖ್ಯಿಕ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ತಿಳಿಸಿದರು. | ದಿನಾಂಕ: 11.01.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ಸರ್ಕಾರದ ಅಧಿಸೂಚನೆ ಸಂಖ್ಯೆ: ಡಿಪಿಎಆರ್ 06 ಪಿಎಲ್‌ಎಕ್ಸ್ 2012, ದಿ: 6.11.2013 ಅಧ್ಯಾಯ 4ರಲ್ಲಿ ಮಂಡಳಿಯ ನಿಧಿಯನ್ನು ಅಭಿವೃದ್ಧಿ ವೆಚ್ಚಕ್ಕಾಗಿ ಹಂಚಿಕೆ ಮಾಡುವ ಸಲುವಾಗಿ ಉಪಬಂಧ (22(2)(ಇ)ರಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ಖಾಸಗಿ ಹೂಡಿಕೆಯನ್ನು ವೃದ್ಧಿಪಡಿಸಲು ಮತ್ತು ವಿಶೇಷ ನೀತಿ ರೂಪಿಸಲು ಅವಕಾಶವಿದ್ದು, ಇದಕ್ಕೆ ಸಂಬಂಧಿಸಿದಂತೆ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆಯಿಂದ ಕ್ರಮ ಕೈಗೊಂಡು ನೀತಿಯನ್ನು ರೂಪಿಸಬೇಕಾಗಿದ್ದು, ಈ ಕುರಿತು ಯೋಜನಾ ಇಲಾಖೆಗೆ ಕ್ರಮವಹಿಸಿರುವ ಬಗ್ಗೆ ಮಾಹಿತಿಯನ್ನು ಕಳುಹಿಸಿಕೊಡುವಂತೆ ಕೋರಲಾಗಿದೆ ಎಂದು ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸಮಿತಿಯು ಭರವಸೆಯನ್ನು ಮುಕ್ತಾಯಗೊಳಿಸಿತು. |
| 6 | 6289 ಚು.ರ.ಪ್ರ; 4149 ಶ್ರೀ ಪ್ರದೀಪ್ ಶೆಟ್ಟರ್ ವಿಪನದಿ: 20.11.2017 | ಧಾರವಾಡ, ಗದಗ ಹಾಗೂ ಹಾವೇರಿ ಜಿಲ್ಲೆಗಳ ವ್ಯಾಪ್ತಿಯಲ್ಲಿ ಕಳೆದ ಎರಡು ವರ್ಷಗಳಲ್ಲಿ ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಳಿ ಹಾಗೂ ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿಗಳ ವತಿಯಿಂದ ಪ್ರಸ್ತಾಪಿತ ಕಾಮಗಾರಿಯನ್ನು ತ್ವರಿತವಾಗಿ | ಈ ಜಿಲ್ಲೆಗಳಲ್ಲಿ ಪ್ರಸ್ತಾಪಿತ ಕಾಮಗಾರಿಗಳನ್ನು ಅನುಷ್ಠಾನ ಏಜೆನ್ಸಿಗಳಾದ ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗ, ಕೆ.ಆರ್.ಐ.ಡಿ.ಎಲ್, ನಿರ್ಮಿತಿ ಕೇಂದ್ರ, ಲೋಕೋಪಯೋಗಿ ಹಾಗೂ ಮಹಾನಗರ ಪಾಲಿಕೆ ಮೂಲಕ ಅನುಷ್ಠಾನಗೊಳಿಸಲಾಗುತ್ತಿದ್ದು, | ದಿನಾಂಕ: 11.01.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿಯಿಂದ ಧಾರವಾಡ ಮತ್ತು ಹಾವೇರಿ ಜಿಲ್ಲೆಗಳಲ್ಲಿ ಪ್ರಸ್ತಾಪಿತ ಕಾಮಗಾರಿಗಳನ್ನು ಅನುಷ್ಟಾನ ಏಜೆನ್ಸಿಗಳಾದ ಪಂಚಾಯತ್‌ರಾಜ್ ಇಂಜನಿಯರಿಂಗ ವಿಭಾಗ, ಕೆ.ಆರ್.ಐ.ಡಿ.ಎಲ್.ನಿರ್ಮಿತಿ ಕೇಂದ್ರ, ಲೋಕೋಪಯೋಗಿ ಹಾಗೂ ಮಹಾನಗರ ಪಾಲಿಕೆ ಮೂಲಕ ಅನುಷ್ಠಾನಗೊಳಿಸಲಾಗುತ್ತಿದ್ದು, ಆಯಾ ಮಂಡಳಿ ಕಚೇರಿಗಳಲ್ಲಿ ಅನುಷ್ಠಾನಾಧಿಕಾರಿಗಳ ಸಭೆ ಕರೆದು ಪ್ರಗತಿ ಪರಿಶೀಲಿಸಲಾಗುತ್ತಿದೆ. ಕಾಮಗಾರಿಗಳ ಬದಲಾವಣೆ ಯಿಂದಾಗಿ ಹಾಗೂ ಕಾಮಗಾರಿ |

| | | | | |
|---|---|---|---|---|
| | | ಅನುಷ್ಠಾನಗೊಳಿಸಲು ಇದುವರೆಗೆ ಕೈಗೊಂಡಿರುವ ಕ್ರಮಗಳ ಬಗ್ಗೆ. | ಆಯಾ ಮಂಡಳಿ ಕಛೇರಿಗಳಲ್ಲಿ ಅನುಷ್ಠಾನಾಧಿಕಾರಿಗಳ ಸಭೆ ಕರೆದು ಪ್ರಗತಿ ಪರಿಶೀಲಿಸಲಾಗುತ್ತಿದೆ. ಕಾಮಗಾರಿಗಳನ್ನು ತ್ವರಿತವಾಗಿ ಅನುಷ್ಠಾನಗೊಳಿಸಲು ಅನುಷ್ಠಾನಾಧಿಕಾರಿಗಳಿಗೆ ತಿಳಿಸಲಾಗುತ್ತಿದೆ. ಕಾಮಗಾರಿಗಳ ಬದಲಾವಣೆಯಿಂದಾಗಿ ಹಾಗೂ ಕಾಮಗಾರಿ ನಿರ್ವಹಿಸುವ ಸ್ಥಳದ ಸಮಸ್ಯೆಯಿಂದಾಗಿ ಕೆಲವು ಕಾಮಗಾರಿಗಳನ್ನು ಅನುಷ್ಠಾನಗೊಳಿಸುವಲ್ಲಿ ವಿಳಂಬವಾಗುತ್ತಿದೆ. ಕಾಮಗಾರಿಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಿದ ದಿನಾಂಕ ದಿಂದ ಕಾಮಗಾರಿಗಳ ಸ್ವರೂಪಕ್ಕನುಗುಣವಾಗಿ (Nature of work) (ಮಳೆಗಾಲ ಹೊರತುಪಡಿಸಿ) 6 ತಿಂಗಳಿನಿಂದ 12 ತಿಂಗಳೊಳಗೆ ಕಾಮಗಾರಿಯನ್ನು ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಎಂದು ತಿಳಿಸಿರುತ್ತಾರೆ. . | ನಿರ್ವಹಿಸುವ ಸ್ಥಳದ ಸಮಸ್ಯೆಯಿಂದಾಗಿ ಕೆಲವು ಕಾಮಗಾರಿಗಳನ್ನು ಅನುಷ್ಠಾನಗೊಳಿಸುವಲ್ಲಿ ವಿಳಂಬವಾಗುತ್ತಿದೆ. 208–19ರ ಡಿಸೆಂಬರ್ ಅಂತ್ಯದವರೆಗೆ ಧಾರವಾಡ ಜಿಲ್ಲೆಯಲ್ಲಿ ಒಟ್ಟು 43 ಕಾಮಗಾರಿಗಳನ್ನು ತೆಗೆದುಕೊಳ್ಳಲಾಗಿದ್ದು, 33 ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿರುತ್ತದೆ. ಹಾವೇರಿ ಜಿಲ್ಲೆಯಲ್ಲಿ 126 ಕಾಮಗಾರಿಗಳನ್ನು ತೆಗೆದುಕೊಳ್ಳಲಾಗಿದ್ದು, 90 ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿರುತ್ತದೆ. 36 ಕಾಮಗಾರಿಗಳು ಪ್ರಗತಿಯಲ್ಲಿವೆ. ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಳಿಯಿಂದ ಹಾವೇರಿ, ಗದಗ ಹಾಗೂ ಧಾರವಾಡ ಜಿಲ್ಲೆಗಳಲ್ಲಿ ಕೈಗೊಂಡಿರುವ ಕಾಮಗಾರಿಗಳ ಬಗ್ಗೆ ಮಂಡಳಿಯಿಂದ ಎಲ್ಲಾ ಅನುಷ್ಠಾನಾಧಿಕಾರಿಗಳ ಸಭೆ ನಡೆಸಿ ಕಾಮಗಾರಿಗಳನ್ನು ತ್ವರಿತವಾಗಿ ಮುಕ್ತಾಯಗೊಳಿಸುವಂತೆ ಸೂಚಿಸಲಾಗಿರುತ್ತದೆ. ಮಂಡಳಿಯಿಂದ ಹಿಂದಿನ ಮೂರು ವರ್ಷಗಳಲ್ಲಿ ಧಾರವಾಡ ಜಿಲ್ಲೆಯಲ್ಲಿ 133 ಕಾಮಗಾರಿಗಳನ್ನು ಕೈಗೊಳ್ಳಲಾಗಿದ್ದು 106 ಕಾಮಗಾರಿಗಳು ಮುಕ್ತಾಯಗೊಂಡಿರುತ್ತವೆ. 24 ಕಾಮಗಾರಿಗಳು ಪ್ರಗತಿಯಲ್ಲಿವೆ. ಹಾವೇರಿ ಜಿಲ್ಲೆಯಲ್ಲಿ 72 ಕಾಮಗಾರಿಗಳನ್ನು ಕೈಗೊಳ್ಳಲಾಗಿದ್ದು, 58 ಕಾಮಗಾರಿಗಳು ಮುಕ್ತಾಯಗೊಂಡಿರುತ್ತವೆ. 14 ಕಾಮಗಾರಿಗಳು ಪ್ರಗತಿಯಲ್ಲಿವೆ. ಧಾರವಾಡ ಜಿಲ್ಲೆಯಲ್ಲಿ 3 ಮತ್ತು ಗದಗ ಜಿಲ್ಲೆಯಲ್ಲಿ 6 ಕಾಮಗಾರಿಗಳು ಇನ್ನೂ ಬಾಕಿ ಉಳಿದಿರುತ್ತವೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸಮಿತಿಯು ಭರವಸೆಯನ್ನು ಮುಕ್ತಾಯಗೊಳಿಸಿತು. |

## ಇಂಧನ ಇಲಾಖೆ

| ಕ್ರಮ ಸಂಖ್ಯೆ | ಆಶ್ವಾಸನೆ ಸಂಖ್ಯೆ | ಆಧಾರ ಮತ್ತು ದಿನಾಂಕ | ವಿಷಯ | ಆಶ್ವಾಸನೆ |
|---|---|---|---|---|
| 1 | 5194<br>ಚು.ರ.ಪ್ರ: 1784<br>ಶ್ರೀ ಎಂ.ಡಿ.<br>ಲಕ್ಷ್ಮೀನಾರಾಯಣ<br>ವಿಪನದಿ:22.07.2014 | ತುರುವೇಕೆರೆ ತಾಲ್ಲೂಕಿನಲ್ಲಿ ರೈತರು ಹಾಗೂ ಸಾರ್ವಜನಿಕರ ಅನುಕೂಲಕ್ಕಾಗಿ ವಿದ್ಯುತ್ ಉಪ ಕೇಂದ್ರವನ್ನು ಸ್ಥಾಪಿಸಲು ಸರ್ಕಾರ ಕ್ರಮಕೈಗೊಳ್ಳುವ ಬಗ್ಗೆ. | ತುರುವೇಕೆರೆ ತಾಲ್ಲೂಕಿನ ಶೆಟ್ಟಿಗೊಂಡನಹಳ್ಳಿ ಗ್ರಾಮದಲ್ಲಿ 110 ಕೆ.ವಿ. ವಿದ್ಯುತ್ ಉಪಕೇಂದ್ರವನ್ನು ಸ್ಥಾಪಿಸುವ ಕೋರಿಕೆ ಸ್ವೀಕೃತವಾಗಿದ್ದು, ಈ ಪ್ರಸ್ತಾವನೆಯ ತಾಂತ್ರಿಕ ಸಾಧ್ಯತೆಗಳನ್ನು ಪರಿಶೀಲಿಸಲಾಗುತ್ತಿದೆ ಎಂದು ಮಾನ್ಯ ಇಂಧನ ಸಚಿವರು ತಿಳಿಸಿದರು. | ದಿನಾಂಕ: 11.01.2018ರಂದು ನಡೆದ ಸಮಿತಿಯ ಸಭೆಯಲ್ಲಿ ಚರ್ಚಿಸಿದಾಗ, ಶೆಟ್ಟಿಗೊಂಡನಹಳ್ಳಿ ಗ್ರಾಮದಲ್ಲಿ 110/11 ಕೆ.ವಿ. ವಿದ್ಯುತ್ ಉಪ ಕೇಂದ್ರವನ್ನು ಸ್ಥಾಪಿಸಲು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮತವು ಉದ್ದೇಶಿಸಿದ್ದು, ತಾಂತ್ರಿಕ ಸಮನ್ವಯ ಸಮಿತಿಯ ಅನುಮೋದನೆಯು ದೊರೆತಿರುತ್ತದೆ.<br>ಶೆಟ್ಟಿಗೊಂಡನಹಳ್ಳಿ ಗ್ರಾಮದಲ್ಲಿ ವಿದ್ಯುತ್ ಉಪ ಕೇಂದ್ರವನ್ನು ಸ್ಥಾಪಿಸಲು 2 ಎಕರೆ ಸರ್ಕಾರಿ ಜಮೀನನ್ನು (ಗೋಮಾಳ) ಗುರುತಿಸಲಾಗಿದ್ದು, ಸದರಿ ಜಮೀನನ್ನು ಕವಿಪ್ರನಿನಿಯು ಸ್ವಾಧೀನಪಡಿಸಿಕೊಳ್ಳಲು, ಸಮುಚಿತ ಮಾರ್ಗದ ಮೂಲಕ ತುರುವೇಕೆರೆ ತಹಶೀಲ್ದಾರ್‌ರವರ ಕಾರ್ಯಾಲಯದಿಂದ ತಿಪಟೂರು ಉಪ ವಿಭಾಗಾಧಿಕಾರಿಗಳ ಕಚೇರಿಗೆ ವಿವರಗಳನ್ನು ಸಲ್ಲಿಸಲಾಗಿತ್ತು.<br>ಪ್ರಸ್ತುತ ಉಪ ವಿಭಾಗಾಧಿಕಾರಿಗಳು ತಿಪಟೂರುರವರು ಕರ್ನಾಟಕ ಭೂಕಂದಾಯ ಅಧಿನಿಯಮ 1964, ನಿಯಮ 68(1) ಮತ್ತು 68(5) ರಂತೆ ಸದರಿ ಜಮೀನನ್ನು ಸಾರ್ವಜನಿಕರ ಹಕ್ಕಿನಿಂದ ವಿಹಿತಗೊಳಿಸುವ ಬಗ್ಗೆ ಮತ್ತು ಸರ್ಕಾರದ ಪೂರ್ವಾನುಮೋದನೆ ಪಡೆದು ಮಾರುಕಟ್ಟೆ ಮೌಲ್ಯ ಹಾಗೂ ಇನ್ನಿತರೆ ಶುಲ್ಕಗಳನ್ನು ವಿಧಿಸಿ, ಶೆಟ್ಟಿಗೊಂಡನಹಳ್ಳಿ ಗ್ರಾಮದಲ್ಲಿ 2 ಎಕರೆ ಸರ್ಕಾರಿ ಜಮೀನನ್ನು ಕವಿಪ್ರನಿನಿಗೆ ಮಂಜೂರು ಮಾಡುವ ಪ್ರಸ್ತಾವನೆಯ ವಿಶಿಷ್ಟ ಕಡತವನ್ನು ಪ್ರಾದೇಶಕ ಆಯುಕ್ತರು, ಕಂದಾಯ ಇಲಾಖೆ, ಬೆಂಗಳೂರು ರವರಿಗೆ ಸಲ್ಲಿಸಿರುತ್ತಾರೆ.<br>ಈ ಹಿನ್ನಲೆಯಲ್ಲಿ, ವಿದ್ಯುತ್ ಉಪಕೇಂದ್ರವನ್ನು ನಿರ್ಮಿಸಲು ಅವಶ್ಯವಿರುವ ಭೂಮಿಯು ದೊರಕಿದ ನಂತರ ಮುಂದಿನ ಸೂಕ್ತ ಕ್ರಮಗಳನ್ನು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು ಕೈಗೊಳ್ಳಲಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ಸಮಿತಿಯು ತೀರ್ಮಾನಿಸಿತು. |
| ೨ | 5195<br>ಚು.ರ.ಪ್ರ: 1762 | ರಾಜ್ಯದಲ್ಲಿ ರೈತರು ಬಳಸುವ | ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ | ದಿನಾಂಕ: 11.01.2018ರಂದು ನಡೆದ ಸಮಿತಿಯ ಸಭೆಯಲ್ಲಿ ಚರ್ಚಿಸಿದಾಗ, |

| | | | | |
|---|---|---|---|---|
| | ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ ವಿಪನದಿ:22.07.2014 | ನೀರಾವರಿ ಪಂಪ್‌ಸೆಟ್ ಘಟಕಗಳಿಗೆ ವಿಶೇಷ ಧನ ಸಹಾಯ ನೀಡುವ ಬಗ್ಗೆ. | ಪ್ರಾಯೋಗಿಕವಾಗಿ ಸಮೂಹ 160 ಪರಿಶಿಷ್ಟ ಜಾತಿ/ಪಂಗಡಗಳ ರೈತರಿಗೆ ಉಚಿತವಾಗಿ ಹಾಗೂ ಸುಮಾರು 648 ಸಮಾನ್ಯ ವರ್ಗದ ರೈತರಿಗೆ 84% ರಿಯಾಯಿತಿ ದರದಲ್ಲಿ ಸೌರಶಕ್ತಿ ಆಧಾರಿತ ನೀರಾವರಿ ಪಂಪ್‌ಸೆಟ್ ಒದಗಿಸಲು 2014-15ರಲ್ಲಿ ಕಾರ್ಯ ಯೋಜನೆ ರೂಪಿಸಲಾಗುತ್ತಿದೆ ಎಂದು ಮಾನ್ಯ ಇಂಧನ ಸಚಿವರು ತಿಳಿಸಿದರು. | ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಪ್ರಾಯೋಗಿಕವಾಗಿ ಸೌರಶಕ್ತಿ ಆಧಾರಿತ ನೀರಾವರಿ ಪಂಪ್‌ಸೆಟ್‌ಗಳನ್ನು ಅಳವಡಿಸಲು 2014-15ನೇ ಸಾಲಿನಲ್ಲಿ ಕಾರ್ಯ ಯೋಜನೆ ರೂಪಿಸಿ 1009 ಸೌರ ಪಂಪ್‌ಸೆಟ್‌ಗಳನ್ನು ಅನುಷ್ಠಾನಗೊಳಿಸಲಾಗಿರುತ್ತದೆ. ಇದರಲ್ಲಿ ಸಾಮಾನ್ಯ ವರ್ಗಕ್ಕೆ 808 ಪಂಪ್‌ಸೆಟ್‌ಗಳನ್ನು ಶೇ.79 ಸಹಾಯ ಧನದೊಂದಿಗೆ ಅನುಷ್ಠಾನಗೊಳಿಸಲಾಗಿರುತ್ತದೆ ಮತ್ತು ಪ.ಜಾತಿ/ಪ.ಪಂಗಡ ವರ್ಗ ರೈತರಿಗೆ ಉಚಿತವಾಗಿ 201 ಸೌರ ಪಂಪ್‌ಸೆಟ್‌ಗಳನ್ನು ಅಳವಡಿಸಲಾಗಿರುತ್ತದೆ.<br><br>ಯೋಜನೆಯ ಮುಂದುವರೆದ ಭಾಗವಾಗಿ 2ನೇ ಹಂತದ ಕಾರ್ಯಕ್ರಮದಲ್ಲಿ ಸಾಮಾನ್ಯ ವರ್ಗಕ್ಕೆ ಶೇ.73 ಅನುದಾನದಲ್ಲಿ 959 ಸೌರ ಪಂಪ್‌ಸೆಟ್‌ಗಳನ್ನು ಅಳವಡಿಸಲಾಗಿರುತ್ತದೆ ಮತ್ತು ಪ.ಜಾತಿ/ಪಂಗಡ ವರ್ಗದ ರೈತರಿಗೆ ಉಚಿತವಾಗಿ 249 ಸೌರ ಪಂಪ್‌ಸೆಟ್‌ಗಳನ್ನು ಅನುಷ್ಠಾನಗೊಳಿಸಲಾಗಿರುತ್ತದೆ.<br><br>ರಾಜ್ಯದಲ್ಲಿ ಒಟ್ಟಾರೆ ಈವರೆಗೆ 2635 ಸಂಖ್ಯೆಗಳ ಸೌರ ಪಂಪ್‌ಸೆಟ್‌ಗಳನ್ನು ಅಳವಡಿಸಲಾಗಿದ್ದು, ಅದರಲ್ಲಿ ಸಾಮಾನ್ಯ ವರ್ಗದ ರೈತರಿಗೆ 2036, ಪ.ಜಾತಿ/ಪಂಗಡ ವರ್ಗದ ರೈತರಿಗೆ 599 ಸೌರ ಪಂಪ್‌ಸೆಟ್‌ಗಳನ್ನು ಉಚಿತವಾಗಿ ಅಳವಡಿಸಲಾಗಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ಸಮಿತಿಯು ತೀರ್ಮಾನಿಸಿತು. |
| 3 | 5199<br>ಚು.ರ.ಪ್ರ: 313<br>ಶ್ರೀ ಮೃತ್ಯುಂಜಯ ಜಿನಗಾ<br>ವಿಪನದಿ: 09/12/2014 | ಬಳ್ಳಾರಿ ಜಿಲ್ಲೆಯಲ್ಲಿ ಹೆಚ್ಚಿನ ವಿದ್ಯುತ್ ಹೈಟೆನ್ಷನ್ ತಂತಿಗಳು ಹಾದುಹೋಗುವ ಮಾರ್ಗದಲ್ಲಿ ಶಾಲಾ ಕಟ್ಟಡಗಳು ಇದ್ದು, ಅಂತಹ ಮೇಲಿನ ತಂತಿಗಳನ್ನು ಬದಲಿಸಲು ಸರ್ಕಾರ ಕ್ರಮ ಕೈಗೊಳ್ಳುವ ಬಗ್ಗೆ. | ಬಳ್ಳಾರಿ ನಗರದಲ್ಲಿ ಶಾಲೆಗಳ ಕಟ್ಟಡಗಳ ಮೇಲೆ ಹಾದುಹೋಗಿರುವ ಹೈಟೆನ್ಷನ್ ತಂತಿಗಳ ಸ್ಥಳಾಂತರದ 8 ಕಾಮಗಾರಿಗಳು ಪೂರ್ಣಗೊಂಡಿದ್ದು, 2 ಕಾಮಗಾರಿಗಳು ಪ್ರಗತಿಯಲ್ಲಿರುತ್ತದೆಂದು | ದಿನಾಂಕ: 11.01.2018ರಂದು ನಡೆದ ಸಮಿತಿಯ ಸಭೆಯಲ್ಲಿ ಚರ್ಚಿಸಿದಾಗ, ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿ ವ್ಯಾಪ್ತಿಯ ಬಳ್ಳಾರಿ ನಗರದಲ್ಲಿ 8 ಸಂಖ್ಯೆಯ ಶಾಲೆಗಳ ಕಟ್ಟಡಗಳ ಮೇಲೆ ಹಾದುಹೋಗಿದ್ದ ಹೈಟೆನ್ಷನ್ ತಂತಿಗಳನ್ನು ಈಗಾಗಲೇ ಸ್ಥಳಾಂತರಿಸಲಾಗಿದೆ.<br><br>ಮುಂದುವರೆದು, ಬಳ್ಳಾರಿ ಜಿಲ್ಲೆಯಾದ್ಯಂತ ಬಾಕಿ ಉಳಿದ ಒಟ್ಟು 68 ಶಾಲೆಗಳ ಕಟ್ಟಡಗಳ ಮೇಲೆ ಹಾದುಹೋಗಿದ್ದ ಹೈಟೆನ್ಷನ್ ತಂತಿಗಳ ಪೈಕಿ 67 ಶಾಲೆಗಳ ಮೇಲಿನ ತಂತಿಗಳನ್ನು ಗುಲ್ಬರ್ಗಾ ವಿದ್ಯುತ್ ಸರಬರಾಜು |

| | | | | |
|---|---|---|---|---|
| | | | ಹಾಗೂ ಶಾಲೆಗಳ ಕಟ್ಟಡಗಳ ಮೇಲೆ ಹಾದು ಹೋಗಿರುವ ವಿದ್ಯುತ್ ತಂತಿಗಳನ್ನು ಸ್ಥಳಾಂತರ ಮಾಡಲು ಅಂದಾಜು ಪಟ್ಟಿಗಳನ್ನು ತಯಾರಿಸಲಾಗಿದ್ದು, ಕಾಮಗಾರಿಗಳ ಪ್ರಕ್ರಿಯೆಯನ್ನು ಕೈಗೆತ್ತಿಕೊಳ್ಳಲಾಗುವುದೆಂದು ಮಾನ್ಯ ಇಂಧನ ಸಚಿವರು ತಿಳಿಸಿದರು. | ಕಂಪನಿಯ ವತಿಯಿಂದ ಸ್ಥಳಾಂತರಿಸಲಾಗಿದೆ.<br><br>ಬಾಕಿ ಉಳಿದ 1 ಶಾಲೆಯ ಹೈಟೆನ್ಷನ್ ತಂತಿ ಸ್ಥಳಾಂತರದ ಕಾಮಗಾರಿಯು ಪ್ರಗತಿಯಲ್ಲಿದ್ದು, ಜನವರಿ–2019ರ ಅಂತ್ಯದ ವೇಳೆಗೆ ಪೂರ್ಣಗೊಳಿಸಲು ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿಯು ಸೂಕ್ತ ಕ್ರಮಗಳನ್ನು ತೆಗೆದುಕೊಂಡಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ಸಮಿತಿಯು ತೀರ್ಮಾನಿಸಿತು. |
| 4 | 5202<br>ಚು.ರ.ಪ್ರ. 851<br>ಶ್ರೀಮತಿ ಮೋಟಮ್ಮ<br>ವಿಪನದಿ: 16.12.2014 | ಸೋಲಾರ್ ಸೇರಿದಂತೆ ಇತರೆ ಮೂಲದಿಂದ ವಿದ್ಯುತ್ ಉತ್ಪಾದಿಸಲು ಮುಂದೆ ಬರುವ ಖಾಸಗಿಯವರಿಗೆ, ಅದರಲ್ಲೂ ಮುಖ್ಯವಾಗಿ ಪ.ಜಾ/ ಪ.ಪಂಗಡ ದವರಿಗೆ ಸರ್ಕಾರ ನೀಡುವ ಸೌಲಭ್ಯಗಳ ಬಗ್ಗೆ. | ಸೌರ ವಿದ್ಯುತ್ ಯೋಜನೆಗಳನ್ನು ಸ್ಥಾಪಿಸಲು ಭೂ ಸುಧಾರಣೆ ಕಾಯ್ದೆ 109ರನ್ವಯ ಅನುಮತಿ ಹೊಂದಿದ ಭೂಮಿಗೆ ಡೀಮ್ಡ್ ಕನ್‌ವರ್ಷನ್ ಸೌಲಭ್ಯವನ್ನು ಒದಗಿಸಲಾಗುವುದು ಮತ್ತು ಕೇಂದ್ರ ಸರ್ಕಾರದ excise ಸುಂಕ ಮತ್ತು customs ಸುಂಕ ವಿನಾಯಿತಿಯನ್ನು ನಿಯಮಗಳ ಪ್ರಕಾರ ಒದಗಿಸಲಾಗುವುದು. ಸೌರ ಯೋಜನೆ ಅಭಿವೃದ್ಧಿದಾರರಿಗೆ plugNplay ಸೌಲಭ್ಯ ಒದಗಿಸಲು ಕೇಂದ್ರ | ದಿನಾಂಕ: 11.01.2018ರಂದು ನಡೆದ ಸಮಿತಿಯ ಸಭೆಯಲ್ಲಿ ಚರ್ಚಿಸಿದಾಗ, ನವೀಕರಿಸಬಹುದಾದ ಇಂಧನ ಮೂಲಗಳಾದ ಸೌರ, ಪವನ, ಕಿರುಜಲ, ಜೈವಿಕ ಶಕ್ತಿ ಮತ್ತು ಸಹ ಉತ್ಪಾದನಾ ಘಟಕಗಳಿಂದ ವಿದ್ಯುತ್ ಉತ್ಪಾದನೆ ಮಾಡುವ ಯೋಜನೆಗಳಿಗೆ ಸರ್ಕಾರ ನೀಡುವ ಸೌಲಭ್ಯಗಳು:<br><br>ಅ) ರಾಜ್ಯ ಸರ್ಕಾರದ ಸೌಲಭ್ಯಗಳು :<br>1. ಕರ್ನಾಟಕ ಕೈಗಾರಿಕಾ ನೀತಿಯಡಿಯಲ್ಲಿ ಸಿಗುವ ಎಲ್ಲಾ ವಿನಾಯಿತಿಗಳನ್ನು ನವೀಕರಿಸಬಹುದಾದ ಇಂಧನ ಯೋಜನೆಯ ಅಭಿವೃದ್ಧಿದಾರರು ಪಡೆಯಲು ಅವಕಾಶವಿದೆ.<br>• ಸಾಲದ ಪತ್ರಗಳ ಮತ್ತು ಕೈಗಾರಿಕಾ ನಿವೇಶನ ಮತ್ತು ಮಳಿಗೆ ಖರೀದಿ ಪತ್ರಗಳ ನೋಂದಣಿ ಶುಲ್ಕ ಮತ್ತು ಮುದ್ರಾಂಕ ಶುಲ್ಕಗಳಿಂದ ವಿನಾಯಿತಿ ನೀಡಲಾಗಿದೆ.<br>• ನವೀಕರಿಸಬಹುದಾದ ಇಂಧನ ಯೋಜನೆಗಳನ್ನು ಸ್ಥಾಪಿಸಲು ಭೂಸುಧಾರಣೆ ಕಾಯ್ದೆ 109ರನ್ವಯ ಅನುಮತಿ ಹೊಂದಿದ ಭೂಮಿಗೆ ಪರಿಭಾವಿತ ಭೂ–ಪರಿವರ್ತನೆ ಸೌಲಭ್ಯವನ್ನು ಒದಗಿಸಲಾಗುತ್ತಿದೆ. ಪರಿಭಾವಿತ ಭೂ–ಪರಿವರ್ತನೆಯ ಶುಲ್ಕದಿಂದ ವಿನಾಯಿತಿ ನೀಡಲಾಗಿದೆ. |

| | | | | |
|---|---|---|---|---|
| | | | ಸರ್ಕಾರದ ಸಹಯೋಗದೊಂದಿಗೆ ಭೂಮಿಯ ಲಭ್ಯತೆಯ ಆಧಾರದ ಮೇಲೆ ಗುತ್ತಿಗೆ ಆಧಾರದಲ್ಲಿ ಸೌರ ಪಾರ್ಕ್‌ಗಳನ್ನು ಅಭಿವೃದ್ಧಿಪಡಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಮಾನ್ಯ ಇಂಧನ ಸಚಿವರು ತಿಳಿಸಿದರು. | 2. ನವೀಕರಿಸಬಹುದಾದ ಇಂಧನ ಮೂಲಗಳ ವಿದ್ಯುತ್ ಘಟಕಗಳಿಗೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ನಿರಾಕ್ಷೇಪಣಾ ಪತ್ರವನ್ನು ಪಡೆಯುವುದರಿಂದ ವಿನಾಯಿತಿ ನೀಡಲಾಗಿದೆ.<br>3. ಜಿ.ಎಸ್.ಟಿ. ಜಾರಿಗೆ ಬರುವ ಮೊದಲು Inverter and Solar PV panel ಗಳ ಮೇಲಿನ VAT ವಿನಾಯಿತಿ ನೀಡಲಾಗುತ್ತಿತ್ತು ಮತ್ತು ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 5 ಸಿಇಟಿ 2015, ದಿನಾಂಕ: 21.09.2015ರನ್ವಯ ನವೀಕರಿಸಬಹುದಾದ ಇಂಧನ ಯೋಜನೆಗಳ ಯಂತ್ರೋಪಕರಣಗಳನ್ನು ಪ್ರವೇಶ ತೆರಿಗೆಯಿಂದ ವಿನಾಯಿತಿ ನೀಡಲಾಗುತ್ತಿತ್ತು.<br><br>ಜಿ.ಎಸ್.ಟಿ. ಜಾರಿಗೆ ಬಂದ ದಿನದಿಂದ ಮೇಲಿನ ಸೌಲಭ್ಯಗಳ ಪೈಕಿ ಕ್ರಮ ಸಂಖ್ಯೆ: 3ರ ಸೌಲಭ್ಯವು ಅನ್ವಯವಾಗುವುದಿಲ್ಲ.<br><br>ಬ) ಕೇಂದ್ರ ಸರ್ಕಾರದ ಸೌಲಭ್ಯಗಳು :<br><br>1. ಕೇಂದ್ರ ಸರ್ಕಾರದಿಂದ ನವೀಕರಿಸಬಹುದಾದ ಇಂಧನ ಯೋಜನೆಗಳಿಗೆ ಜಿ.ಎಸ್.ಟಿ. ಜಾರಿಗೆ ಬರುವ ಮೊದಲು Excise ಸುಂಕದಿಂದ ವಿನಾಯಿತಿ ಹಾಗೂ ಆಯ್ದ ಉಪಕರಣಗಳಿಗೆ ಸುಂಕ ವಿನಾಯಿತಿಯ ನಿಯಮಗಳ ಪ್ರಕಾರ ಒದಗಿಸಲು ಅಗತ್ಯ ಕ್ರಮ ಕೈಗೊಳ್ಳಲಾಗುತ್ತಿತ್ತು. (ಜಿ.ಎಸ್.ಟಿ. ಜಾರಿಗೆ ಬಂದ ದಿನದಿಂದ ಮೇಲಿನ ಸೌಲಭ್ಯ ಅನ್ವಯವಾಗುವುದಿಲ್ಲ)<br>2. ಸೌರ ಯೋಜನೆ ಅಭಿವೃದ್ಧಿದಾರರಿಗೆ plug N play ಸೌಲಭ್ಯ ಒದಗಿಸಲು ಕೇಂದ್ರ ಸರ್ಕಾರದ ಸಹಯೋಗದೊಂದಿಗೆ ಭೂಮಿಯ ಲಭ್ಯತೆಯ ಆಧಾರದ ಮೇಲೆ ಗುತ್ತಿಗೆ ಆಧಾರದಲ್ಲಿ ಸೌರ ಪಾರ್ಕ್‌ಗಳನ್ನು ಅಭಿವೃದ್ಧಿಪಡಿಸಲು ಕ್ರಮ ಕೈಗೊಳ್ಳಲಾಗುವುದು.<br>3. ಕಿರುಜಲ ವಿದ್ಯುತ್ ಯೋಜನೆಗಳಿಗೆ ಪ್ರತಿ ಮೆ.ವ್ಯಾಟ್‌ಗೆ ರೂ.1 |

| | | | | |
|---|---|---|---|---|
| | | | | ಕೋಟಿಯಂತೆ ಗರಿಷ್ಠ ರೂ.5 ಕೋಟಿವರೆಗೆ ಒಂದು ಯೋಜನೆಗೆ ಜೈವಿಕ ಶಕ್ತಿ ಮತ್ತು ಸಹ ಉತ್ಪಾದನಾ ವಿದ್ಯುತ್ ಘಟಕಗಳಿಗೆ ಶೇ.30 ರವರೆಗೆ ಹಾಗೂ ಘನತ್ಯಾಜ್ಯ ಯೋಜನೆಗಳಿಗೆ ಪ್ರತಿ ಮೆ.ವ್ಯಾಟ್‌ಗೆ ರೂ.3 ಕೋಟಿಯಂತೆ ಗರಿಷ್ಠ ರೂ.10 ಕೋಟಿಯವರೆಗೆ ಸಹಾಯಧನ ನೀಡಲಾಗುತ್ತಿತ್ತು.<br>4. ನವೀಕರಿಸಬಹುದಾದ ಇಂಧನ ಯೋಜನೆಗಳನ್ನು ಸ್ಥಾಪಿಸಲು ಯೋಜನಾದಾರರು ಸರ್ಕಾರದಿಂದ ಅನುಮೋದನೆ ಪಡೆದು ಅವರ ಸ್ವಂತ ವೆಚ್ಚಗಳಿಂದ ಯೋಜನೆಯನ್ನು ಅನುಷ್ಠಾನಗೊಳಿಸಿರುತ್ತಾರೆ. ಆದಕಾರಣ ಸರ್ಕಾರಕ್ಕೆ ಯಾವುದೇ ಖರ್ಚು ವೆಚ್ಚವಿರುವುದಿಲ್ಲ ಹಾಗೂ ಯೋಜನೆಗಳನ್ನು ಹಂಚಿಕೆ ಮಾಡುವಲ್ಲಿ ಯಾವುದೇ ಮೀಸಲಾತಿಯು ಇರುವುದಿಲ್ಲ.<br><br>ಆದರೆ, ಸೌರ ನೀತಿಯಲ್ಲಿ ಭೂಮಾಲೀಕತ್ವ ಹೊಂದಿದ ರೈತರಿಗೆ 300 ಮೆ.ವ್ಯಾ. ಸಾಮರ್ಥ್ಯದ ಸೌರ ಯೋಜನೆಗಳನ್ನು ಸ್ಥಾಪಿಸಲು ಅವಕಾಶ ಕಲ್ಪಿಸಲಾಗಿತ್ತು. ಈ ಸಂಬಂಧ Online (first come first served basis) ಮುಖಾಂತರ ಅರ್ಜಿಗಳನ್ನು ಸ್ವೀಕರಿಸಿ 314 ಮೆ.ವ್ಯಾ. ಸಾಮರ್ಥ್ಯವನ್ನು ಹಂಚಿಕೆ ಮಾಡಲಾಗಿದ್ದು, ಇದರಲ್ಲಿ ಪರಿಶಿಷ್ಟ ಜಾತಿ ವರ್ಗಕ್ಕೆ 53 ಮೆ.ವ್ಯಾ. ಮತ್ತು ಪರಿಶಿಷ್ಟ ಪಂಗಡ ವರ್ಗಕ್ಕೆ 21 ಮೆ.ವ್ಯಾ. ನಷ್ಟು ಸಾಮರ್ಥ್ಯವನ್ನು ಮೀಸಲಿರಿಸಿ ಹಂಚಿಕೆ ಮಾಡಲಾಗಿದ್ದು, ಪರಿಶಿಷ್ಟ ಜಾತಿಯ 34 ಪರಿಶಿಷ್ಟ ಪಂಗಡದ 11 ರೈತರಿಗೆ ಯೋಜನೆಗಳನ್ನು ಹಂಚಿಕೆ ಮಾಡಲಾಗಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ಸಮಿತಿಯು ತೀರ್ಮಾನಿಸಿತು. |
| 5 | 4949<br>ನಿಯಮ 68ರ ಅಡಿ<br>ಶ್ರೀ ಕೆ.ಎಸ್. ಈಶ್ವರಪ್ಪ<br>ದಿ: 04.02.2015 | M/s L&T Ltd., & M/s L&G ಕಂಪನಿಗೆ ಕೊಟ್ಟಿರುವ ಟೆಂಡರನ್ನು ರದ್ದು ಮಾಡುವ ಬಗ್ಗೆ. | ಹಣಕಾಸು ಇಲಾಖೆಯ ಪ್ರಧಾನ ಕಾರ್ಯದರ್ಶಿಯವರ ಮುಖಾಂತರ ಯೋಗ್ಯವಾದ ತನಿಖೆಯನ್ನು ಮಾಡಿಸಿ ತಪ್ಪಿತಸ್ಥರಿಗೆ ಶಿಕ್ಷೆಯನ್ನು | ದಿನಾಂಕ: 11.01.2018ರಂದು ನಡೆದ ಸಮಿತಿಯ ಸಭೆಯಲ್ಲಿ ಚರ್ಚಿಸಿದಾಗ, 2008–09ರ ನಂತರ ಇಂಧನ ಇಲಾಖೆಯ ವ್ಯಾಪ್ತಿಗೆ ಸೇರಿದ ವಿದ್ಯುತ್ ಸರಬರಾಜು ಕಂಪನಿಗಳಲ್ಲಿ ಟೆಂಡರ್ ಅವಧಿ ಮುಗಿದ ನಂತರವೂ ನಿಯಮಬಾಹಿರವಾಗಿ ಅವಧಿ ವಿಸ್ತರಿಸಿ ಹಿಂದಿನ ಟೆಂಡರ್‌ದಾರರಿಗೆ ಖರೀದಿ ಆದೇಶ ನೀಡಿರುವುದರ ಕುರಿತು ಅಂದಿನ ಆರ್ಥಿಕ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರು ತನಿಖೆಯನ್ನು ನಡೆಸಿ ಸಲ್ಲಿಸಿರುವ ವರದಿಯನ್ನು |

<table>
<tr><td></td><td></td><td></td><td>ವಿಧಿಸುತ್ತೇವೆ ಎಂದು ಮಾನ್ಯ ಸಭಾನಾಯಕರು ತಿಳಿಸಿದರು.</td><td>ಸದನದಲ್ಲಿ ಮಂಡಿಸುವ ಸಲುವಾಗಿ ದಿನಾಂಕ: 17.08.2017ರಂದು ವಿಧಾನ ಪರಿಷತ್ ಸಚಿವಾಲಯಕ್ಕೆ ಸಲ್ಲಿಸಲಾಗಿದೆಯೆಂದು ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ಸಮಿತಿಯು ತೀರ್ಮಾನಿಸಿತು</td></tr>
<tr><td>6</td><td>5870<br>ಚು.ರ.ಪ್ರ. 1374<br>ಶ್ರೀ ಇ. ಕೃಷ್ಣಪ್ಪ<br>ವಿಪನದಿ:17.03.2015</td><td>ಬೆಂಗಳೂರು ಮಹಾನಗರದಲ್ಲಿ ಪಾದಚಾರಿ ಮಾರ್ಗದ ಮೇಲಿರುವ ಟ್ರಾನ್ಸ್‌ಫಾರ್ಮರ್‌ಗಳನ್ನು ಸ್ಥಳಾಂತರಿಸಲು ಬೆಸ್ಕಾಂ ಸಂಸ್ಥೆಯು ಕೈಗೊಂಡಿರುವ ಕ್ರಮಗಳ ಬಗ್ಗೆ.</td><td>ವಿದ್ಯುತ್ ಪರಿವರ್ತಕಗಳನ್ನು ಸ್ಥಳಾಂತರಿಸಲು ಬಿ.ಬಿ.ಎಂ.ಪಿ., ಬಿ.ಡಿ.ಎ. ಮತ್ತು ಇತರೆ ಸ್ಥಳೀಯ ಸಂಸ್ಥೆಗಳನ್ನು ಪರ್ಯಾಯ ಸ್ಥಳಗಳನ್ನು ಕೋರಲಾಗಿದೆ. ಪರ್ಯಾಯ ಸ್ಥಳಗಳು ದೊರೆತ ನಂತರ ಟ್ರಾನ್ಸ್‌ಫಾರ್ಮರ್‌ಗಳನ್ನು ಸ್ಥಳಾಂತರಿಸಲು ಸೂಕ್ತ ಕ್ರಮವನ್ನು ಕೈಗೊಳ್ಳಲಾಗುವುದು ಎಂದು ಮಾನ್ಯ ಇಂಧನ ಸಚಿವರು ತಿಳಿಸಿದರು.</td><td>ದಿನಾಂಕ: 11.01.2018ರಂದು ನಡೆದ ಸಮಿತಿಯ ಸಭೆಯಲ್ಲಿ ಚರ್ಚಿಸಿದಾಗ, ಬೆಂಗಳೂರು ನಗರ ವ್ಯಾಪ್ತಿಯಲ್ಲಿ ಪಾದಚಾರಿ ಮಾರ್ಗಗಳಲ್ಲಿ ಒಟ್ಟು 8,811 ಟ್ರಾನ್ಸ್‌ಫಾರ್ಮರ್‌ಗಳನ್ನು ಅಳವಡಿಸಿರುವುದನ್ನು ಗುರುತಿಸಲಾಗಿದ್ದು, ಅವುಗಳ ಪೈಕಿ 4453 ಸಂಖ್ಯೆ ಟ್ರಾನ್ಸ್‌ಫಾರ್ಮರ್‌ಗಳು ಪಾದಚಾರಿಗಳಿಗೆ ಅಡಚಣೆ ಆಗದಂತೆ ಸುರಕ್ಷಿತ ಸ್ಥಳಗಳಲ್ಲಿ ಇರುವುದರಿಂದ ಸ್ಥಳಾಂತರಿಸುವ ಅಗತ್ಯ ಇರುವುದಿಲ್ಲ.<br><br>ಉಳಿದ 4,358 ಟ್ರಾನ್ಸ್‌ಫಾರ್ಮರ್‌ಗಳು ವಿನ್ಯಾಸ ಬದಲಾವಣೆ ಮಾಡಿ ಬದಲಾಯಿಸಲು/ಲಭ್ಯವಿರುವ ಸಾರ್ವಜನಿಕ ಸೌಕರ್ಯಗಳಿಗಾಗಿ ಮೀಸಲಿಟ್ಟ (ಸಿ.ಎ.ಸೈಟ್) ನಿವೇಶನಗಳಿಗೆ ಸ್ಥಳಾಂತರಿಸಲು/ಸ್ವಯಂ ಕಾರ್ಯ ನಿರ್ವಹಣೆ ಯೋಜನೆಯಡಿ ಗ್ರಾಹಕರು ಅಳವಡಿಸಿಕೊಂಡಿರುವ ಪರಿವರ್ತಕಗಳ ಮೇಲೆ, ಹಾಲಿ ಇರುವ ಪರಿವರ್ತಕಗಳ ಹೊರೆಯನ್ನು ವರ್ಗಾಯಿಸಲು ಕೆಳಕಂಡಂತೆ ಕ್ರಮ ಕೈಗೊಳ್ಳಲಾಗುತ್ತಿದೆ.<br><br>
<table>
<tr><th>ವಿವರ</th><th>ಪರಿವರ್ತಕಗಳ ಸಂಖ್ಯೆ</th></tr>
<tr><td>ವಿನ್ಯಾಸ ಬದಲಾವಣೆ ಮಾಡಿ ಬದಲಾಯಿಸುವಾಗುವ ಪರಿವರ್ತಕಗಳ ಸಂಖ್ಯೆ</td><td>3919</td></tr>
<tr><td>ಲಭ್ಯವಿರುವ ಸಿ.ಎ. ಸೈಟ್‌ಗೆ ಸ್ಥಳಾಂತರಿಸಲು ಉದ್ದೇಶಿಸಿರುವ ಪರಿವರ್ತಕಗಳ ಸಂಖ್ಯೆ</td><td>116</td></tr>
<tr><td>ಹಾಲಿ ಇರುವ ಪರಿವರ್ತಕಗಳ ಹೊರೆಯನ್ನು ಹತ್ತಿರ ಇರುವ ಅಳವಡಿಸಿಕೊಂಡಿರುವ ಪರಿವರ್ತಕಗಳ ಸಂಖ್ಯೆ</td><td>323</td></tr>
<tr><td>ಒಟ್ಟು</td><td>4358</td></tr>
</table>
3919 ಸಂಖ್ಯೆ ಪರಿವರ್ತಕಗಳಿಗೆ ವಿನ್ಯಾಸ ಬದಲಾವಣೆ ಮಾಡಿ</td></tr>
</table>

| | | | | |
|---|---|---|---|---|
| | | | | ಬದಲಾಯಿಸಲು ಹಾಗೂ 116 ಪರಿವರ್ತಕಗಳನ್ನು ಲಭ್ಯವಿರುವ ಸಿ.ಎ.ಸೈಟ್‌ಗೆ ಸ್ಥಳಾಂತರಿಸಲು ಒಟ್ಟಾರೆ 4035 ಪರಿವರ್ತಕಗಳನ್ನು ಬದಲಾಯಿಸಲು/ಸ್ಥಳಾಂತರಿಸಲು ರೂ. 134 ಕೋಟಿಗಳ ಅಂದಾಜು ವೆಚ್ಚದಲ್ಲಿ ಕಾಮಗಾರಿಯನ್ನು ದಿನಾಂಕ: 8.9.2017ರಂದು ಗುತ್ತಿಗೆದಾರರಿಗೆ ವಹಿಸಿಕೊಡಲಾಗಿದೆ.<br><br>ಪ್ರಸ್ತುತ, ಜೂನ್ 2018ರ ಅಂತ್ಯಕ್ಕೆ ಒಟ್ಟು925 ಪರಿವರ್ತಕಗಳಿಗೆ ವಿನ್ಯಾಸ ಬದಲಾವಣೆ ಕಾರ್ಯವು ಈಗಾಗಲೇ ಪೂರ್ಣಗೊಂಡಿದ್ದು, ಉಳಿದ 2994 ಪರಿವರ್ತಕಗಳಿಗೆ ವಿನ್ಯಾಸ ಬದಲಾವಣೆ ಮಾಡಿ ಬದಲಾಯಿಸುವ ಕಾಮಗಾರಿಗಳು ಹಾಘೂ 116 ಪರಿವರ್ತಕಗಳನ್ನು ಲಭ್ಯವಿರುವ ಸಿ.ಎ. ಸೈಟ್‌ಗೆ ಸ್ಥಳಾಂತರಿಸುವ ಗುರಿಯನ್ನು ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿಯು ಹೊಂದಿರುತ್ತದೆ.<br><br>ಅಲ್ಲದೆ, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಅಧಿಸೂಚನೆ ಸಂಖ್ಯೆ: ಕೆಆರ್‌ಇಡಿ/14/16–17, ದಿನಂಕ: 22.11.2016ರಲ್ಲಿರುವ ಷರತ್ತು 3.1.8 (ಹೊಸ) ಪ್ರಕಾರ ಉಳಿದ 323 ಪರಿವರ್ತಕಗಳ ಲೋಡ್‌ನ್ನು ಹತ್ತಿರ ಇರುವ ಸ್ವಯಂ ಕಾರ್ಯ ನಿರ್ವಹಣೆ ಯೋಜನೆಯಡಿ ಗ್ರಾಹಕರು ಅಳವಡಿಸಿಕೊಂಡಿರುವ ಪರಿವರ್ತಕಗಳ ಮೇಲೆ ವರ್ಗಾಯಿಸಲು ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ಸಮಿತಿಯು ತೀರ್ಮಾನಿಸಿತು. |
| 7 | 5871<br>ಚು.ಗು.ಪ್ರ. 19<br>ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ<br>ವಿಪನದಿ:03.02.2015 | ವರಾಹಿ ನೀರಾವರಿ ಯೋಜನೆಯಡಿ ರೈತರ ಕೃಷಿ ನೀರಾವರಿಗಾಗಿ ನಿರ್ಮಾಣವಾದ ಅಣೆಕಟ್ಟಿನಿಂದ ವಾರ್ಷಿಕ 10 ಕೋಟಿ ರೂಪಾಯಿ ಮೌಲ್ಯದ ವಿದ್ಯುತ್‌ನ್ನು ಖಾಸಗಿಯವರಿಂದ ಖರೀದಿಸುತ್ತಿದ್ದು, ರೈತರು ಮತ್ತು ಖಾಸಗಿ ವಿದ್ಯುತ್ | ಈ ಕ್ಷೇತ್ರದಲ್ಲಿ ನಿರ್ಮಾಣ ವಾಗಿರುವ ವಿದ್ಯುತ್ ಯೋಜನೆಗಳು, ಕಿರುಜಲ ಯೋಜನೆಗಳಾಗಿರುವುದರಿಂದ (25 ಮೆ.ವ್ಯಾ ಸಾಮರ್ಥ್ಯಕ್ಕಿಂತ ಕಡಿಮೆ) ಈ ಯೋಜನೆಗಳನ್ನು ಖಾಸಗಿ ಬಂಡವಾಳದಾರರಿಗೆ ಸರ್ಕಾರವು ಹಂಚಿಕೆ ಮಾಡಿದ್ದು, ಅವರುಗಳಿಂದ | ದಿನಾಂಕ: 11.01.2018ರಂದು ನಡೆದ ಸಮಿತಿಯ ಸಭೆಯಲ್ಲಿ ಚರ್ಚಿಸಿದಾಗ, ಕಿರುಜಲ ವಿದ್ಯುತ್ ಯೋಜನೆಗಳಲ್ಲಿ ಖಾಸಗಿ ಸಹಭಾಗಿತ್ವವನ್ನು ಪ್ರೋತ್ಸಾಹಿಸುವ ಸಲುವಾಗಿ 25 ಮೆ.ವ್ಯಾ.ಗಿಂತ ಕಡಿಮೆಯಿರುವ ಕಿರುಜಲ ವಿದ್ಯುತ್ ಯೋಜನೆಗಳನ್ನು ಅನುಷ್ಠಾನಗೊಳಿಸಲು ಖಾಸಗಿ ಅಭಿವೃದ್ಧಿದಾರರಿಗೆ ಅವಕಾಶ ಕಲ್ಪಿಸಲಾಗಿದ್ದು, 25 ಮೆ.ವ್ಯಾಗಿಂತ ಹೆಚ್ಚಿನ ಸಾಮರ್ಥ್ಯದ ಜಲ ವಿದ್ಯುತ್ ಯೋಜನೆಗಳನ್ನು ಕರ್ನಾಟಕ ವಿದ್ಯುತ್ ನಿಗಮ ನಿಯಮಿತದ ಮೂಲಕ ಅನುಷ್ಠಾನಗೊಳಿಸಲಾಗುತ್ತದೆ. ವರಾಹಿ ಕಣಿವೆಯಲ್ಲಿ ಪ್ರಸ್ತುತ 25 ಮೆ.ವ್ಯಾ.ಗಿಂತ ಹೆಚ್ಚಿನ ಸಾಮರ್ಥ್ಯದ ಯಾವುದೇ ಯೋಜನೆಗಳನ್ನು ಕರ್ನಾಟಕ ವಿದ್ಯುತ್ ನಿಗಮ ನಿಯಮಿತದ ಮೂಲಕ ಅನುಷ್ಠಾನಗೊಳಿಸಲು ಉದ್ದೇಶಿಸಿರುವುದಿಲ್ಲ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು |

| | | | | |
|---|---|---|---|---|
| | | ಉತ್ಪಾದನಾ ಸಂಸ್ಥೆಯವರ ನಡುವಿನ ಸಂಘರ್ಷವನ್ನು ತಪ್ಪಿಸಲು ಸರ್ಕಾರದಿಂದಲೇ ಈ ವಿದ್ಯುತ್ ಉತ್ಪಾದನಾ ಸ್ಥಾವರವನ್ನು ನಡೆಸುವ ಬಗ್ಗೆ | ಅನುಷ್ಠಾನಗೊಳಿಸಲಾಗಿದೆ. ಈ ಯೋಜನೆಗಳಿಗೆ 2009ರಲ್ಲಿ ರೂ.2.80ರಂತೆ ಪ್ರತಿ ಯೂನಿಟ್‌ಗೆ ವಿದ್ಯುತ್ ಖರೀದಿ ಒಪ್ಪಂದ ಮಾಡಿಕೊಳ್ಳಲಾಗಿದೆ. ಸರ್ಕಾರದ ಇಂಧನ ನೀತಿಯಂತೆ 25 ಮೆ.ವ್ಯಾಟ್‌ಗಿಂತ ಕಡಿಮೆ ಸಾಮರ್ಥ್ಯ ಇರುವ ಯೋಜನೆಗಳನ್ನು ಕೆ.ಪಿ.ಸಿ.ಎಲ್ ಮೂಲಕ ಅನುಷ್ಠಾನಗೊಳಿಸಲಾಗುವುದಿಲ್ಲ. 25 ಮೆ.ವ್ಯಾ ಸಾಮರ್ಥ್ಯಕ್ಕಿಂತ ಹೆಚ್ಚಿನ ಸಾಮರ್ಥ್ಯದ ಯೋಜನೆಗಳನ್ನು ಮಾತ್ರ ಕೆ.ಪಿ.ಸಿ.ಎಲ್ ಮೂಲಕ ಕೈಗೊಳ್ಳಲಾಗುವುದು ಎಂದು ಮಾನ್ಯ ಇಂಧನ ಸಚಿವರು ತಿಳಿಸಿದರು. | ಒಪ್ಪಿ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ಸಮಿತಿಯು ತೀರ್ಮಾನಿಸಿತು. |
| ೪ | 5872<br>ಚು.ಗು.ಪ್ರ. 110<br>ಶ್ರೀ ವೈ.ಎ.ನಾರಾಯಣ ಸ್ವಾಮಿ ಹಾಗೂ ಕ್ಯಾಪ್ಟನ್ ಗಣೇಶ್ ಕಾರ್ಣಿಕ್<br>ವಿಪನದಿ:03.02.2015 | ರಾಜ್ಯದಲ್ಲಿ ಪವನ ವಿದ್ಯುತ್ ಉತ್ಪಾದನೆ ಮಾಡಲು ಖಾಸಗಿಯವರಿಗೆ ಪರವಾನಗಿಯನ್ನು ಕೊಡಬೇಕಾದರೆ ತುಂಬಾ ಅವ್ಯವಹಾರ ನಡೆಯುತ್ತಿದ್ದು ಅದನ್ನು ಬುಕ್ ಮಾಡಿಕೊಂಡು | ಸರ್ಕಾರ ಈ ವಿಚಾರದಲ್ಲಿ ಬಹಳ ಗಂಭೀರವಾಗಿ ವಿಚಾರ ಮಾಡುತ್ತಿದೆ. ಏಕೆಂದರೆ Wind Energy ನಮ್ಮ Green Energyಯಿಂದಲೇ ನಮಗೆ ಏನಾದರೂ ಸ್ವಲ್ಪಮಟ್ಟಿಗೆ strength | ದಿನಾಂಕ: 11.01.2018ರಂದು ನಡೆದ ಸಮಿತಿಯ ಸಭೆಯಲ್ಲಿ ಚರ್ಚಿಸಿದಾಗ, ರಾಜ್ಯದಲ್ಲಿ ನವೀಕರಿಸಬಹುದಾದ ಇಂಧನ ಮೂಲಗಳಲ್ಲೊಂದಾದ ಪವನ ವಿದ್ಯುತ್ ಯೋಜನೆಗಳನ್ನು ಖಾಸಗಿ ಅಭಿವೃದ್ಧಿದಾರರುಗಳು ಸರ್ಕಾರದಿಂದ ಹಂಚಿಕೆ ಆದೇಶಗಳನ್ನು ಪಡೆದು, ವಿವಿಧ ಜಿಲ್ಲೆಗಳಲ್ಲಿ ಯೋಜನಾ ಪ್ರದೇಶದ ಕಾರ್ಯ ಸಾಧ್ಯತೆ ಮತ್ತು ಕಾರ್ಯ ಕ್ಷಮತೆಯನ್ನು ಪರಿಶೀಲಿಸಿ, ಸದರಿ ವರದಿಯ ಆಧಾರದ ಮೇಲೆ ಸೂಕ್ತ ಸ್ಥಳಗಳನ್ನು ಗುರುತಿಸಿ ಯೋಜನೆಯನ್ನು ಅನುಷ್ಠಾನಗೊಳಿಸಿರುತ್ತಾರೆ. ಆದರೆ, ಸರ್ಕಾರವು ಯಾವುದೇ ಸ್ಥಳಗಳನ್ನು ಗುರುತಿಸಿ ವಿದ್ಯುತ್ ಉತ್ಪಾದನೆ ಮಾಡಲು ಯೋಜನಾದಾರರಿಗೆ |

| | | | | |
|---|---|---|---|---|
| | | ಪರವಾನಗಿಯನ್ನು ಸಬ್–ಲೀಸ್ ಮಾಡುವಂಥದ್ದು ಕೂಡ ನಡೆಯುತ್ತಿರುವುದರಿಂದ ರೈತರ ಜಮೀನು ದುರುಪಯೋಗಗೊಳ್ಳುವ ಸಾಧ್ಯತೆ ಇರುವುದರಿಂದ ಲೈಸೆನ್ಸ್ ಕೊಡಬೇಕಾದರೆ ಒಂದು ಕಾಲಮಿತಿಯನ್ನು ನಿಗದಿಗೊಳಿಸುವ ಬಗ್ಗೆ. | ಬರಲಿಕ್ಕೆ ಅವಕಾಶವಿದೆ. ಆದ್ದರಿಂದ ತಮ್ಮ ಸಲಹೆಯನ್ನು ನಾನು ಖಂಡಿತವಾಗಿಯೂ ಗಮನಿಸುತ್ತೇನೆ ಎಂದು ಮಾನ್ಯ ಇಂಧನ ಸಚಿವರು ತಿಳಿಸಿದರು. | ನೀಡುವುದಿಲ್ಲ.<br><br>ಮುಂದುವರೆದು, ಯೋಜನೆಗೆ ಸಂಬಂಧಿಸಿದೆ ಸ್ಥಳಗಳು ಖಾಸಗಿ ಜಮೀನಾಗಿದ್ದಲ್ಲಿ, ಅಭಿವೃದ್ಧಿದಾರರು ಸಂಬಂಧಪಟ್ಟ ರೈತರಿಂದ ಖರೀದಿ/ಗುತ್ತಿಗೆ ಆಧಾರದಮೇಲೆ ಪಡೆದುಕೊಂಡು ಯೋಜನೆಯನ್ನು ಅನುಷ್ಠಾನಗೊಳಿಸಿರುತ್ತಾರೆ ಹಾಗೂ ಅಭಿವೃದ್ಧಿದಾರರು ಯೋಜನೆಯ ಸಾಮರ್ಥ್ಯವನ್ನು ಹೂಡಿಕೆದಾರರಿಗೆ ವರ್ಗಾವಣೆ ಮಾಡುವ ಸಂದರ್ಭದಲ್ಲಿ ಸಂಬಂಧಿಸಿದ ಯೋಜನೆಯ ಸ್ಥಳವನ್ನು ಸಹ ಸಬ್–ಲೀಸ್ ಮಾಡಬಹುದಾಗಿರುತ್ತದೆ.<br><br>ಯೋಜನೆಗೆ ಅವಶ್ಯಕವಿರುವ ಖಾಸಗಿ ಜಮೀನನ್ನು ಪಡೆಯುವುದು, ರೈತರಿಗೆ ಮತ್ತು ಅಭಿವೃದ್ಧಿದಾರರಿಗೆ ಸಂಬಂಧಪಟ್ಟದ್ದಾಗಿರುತ್ತದೆ. ಇದರಲ್ಲಿ ಸರ್ಕಾರದ ಯಾವುದೇ ಪಾತ್ರವಿರುವುದಿಲ್ಲ.<br><br>ಪ್ರತಿ ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಸ್ಥಾಪನೆ ಮಾಡಲು ರೂ. 5.50 ಕೋಟಿಯಿಂದ ರೂ.6 ಕೋಟಿವರೆಗೆ ಬಂಡವಾಳ ವೆಚ್ಚವಾಗುತ್ತದೆ. ಯೋಜನಾದಾರರು ತಮ್ಮ ಸ್ವಂತೆ ವೆಚ್ಚಗಳಿಂದಲೇ ಯೋಜನೆಯನ್ನು ಅನುಷ್ಠಾನಗೊಳಿಸಿರುತ್ತಾರೆ ಹಾಗೂ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗವು ನಿಗದಿಪಡಿಸಿರುವ ದರದಂತೆ ವಿದ್ಯುತ್ತನ್ನು ಸರಬರಾಜು ಕಂಪನಿಗಳಿಗೆ ಮಾರಾಟ ಮಾಡುತ್ತಾರೆ.<br><br>ಸರ್ಕಾರದಿಂದ ಹಂಚಿಕೆ ಆದೇಶ ಹೊರಡಿಸಿದ ದಿನಾಂಕದಿಂದ 6 ವರ್ಷಗಳೊಳಗೆ ಯೋಜನೆಯನ್ನು ಅನುಷ್ಠಾನಗೊಳಿಸಲು ಕಾಲಮಿತಿಯನ್ನು ನಿಗದಿಪಡಿಸಲಾಗಿರುತ್ತದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ಸಮಿತಿಯು ತೀರ್ಮಾನಿಸಿತು. |
| ೯ | 5874<br>ಚು.ಗು.ಪ್ರ. 4 | ರೈತರ ಪಂಪ್‌ಸೆಟ್‌ಗಳಿಗೆ 24 ಗಂಟೆಗಳ ಕಾಲ | ವಿದ್ಯುತ್ ಸಂಪರ್ಕಕ್ಕಾಗಿ ಹೊಸದಾಗಿ | ದಿನಾಂಕ: 11.01.2018ರಂದು ನಡೆದ ಸಮಿತಿಯ ಸಭೆಯಲ್ಲಿ ಚರ್ಚಿಸಿದಾಗ, ರೈತರ ನೀರಾವಿ ಪಂಪ್‌ಸೆಟ್‌ಗಳಿಗೆ ಪ್ರತ್ಯೇಕ 11 ಕೆ.ವಿ. ವಿದ್ಯುತ್ ಮಾರ್ಗ |

| | | | | |
|---|---|---|---|---|
| | ಶ್ರೀಮತಿ ಮೋಟಮ್ಮ ವಿಪನದಿ:03.02.2015 | ವಿದ್ಯುತ್ ಪೂರೈಸುವ ಬಗ್ಗೆ. | ನೋಂದಾಯಿಸುವ ಅರ್ಜಿದಾರರು ಹೆಚ್.ಟಿ. ಮಾರ್ಗದ ಮೂಲಕ ವಿದ್ಯುತ್ ಸಂಪರ್ಕ ಪಡೆಯ ಬಯಸಿದಲ್ಲಿ, 11 ಕೆ.ವಿ. ಮಾರ್ಗ ರಚನೆ ಮತ್ತು ಇತರೆ ಮೂಲಭೂತ ಸೌಕರ್ಯದ ಒಟ್ಟು ಅಂದಾಜಿನ ಶೇಕಡಾ 25ರಷ್ಟು ಮೊತ್ತವನ್ನು ಭರಿಸಿದಲ್ಲಿ ಹಾಗೂ ಬಳಕೆ ಮಾಡುವ ಪ್ರತಿ ಯೂನಿಟ್‌ಗೆ ಕೆ.ಇ.ಆರ್.ಸಿ.ರವರು ನಿಗದಿಪಡಿಸಿದ ದರವನ್ನು ಭರಿಸಿದಲ್ಲಿ 24 ಗಂಟೆಗಳ ವಿದ್ಯುತ್ತನ್ನು ಒದಗಿಸುವ ಕುರಿತು ಕ್ರಮ ಕೈಗೊಳ್ಳಲಾಗುವುದು ಎಂದು ಮಾನ್ಯ ಇಂಧನ ಸಚಿವರು ತಿಳಿಸಿದರು. | ರಚಿಸಿ 24 ಗಂಟೆ ನಿರಂತರ ವಿದ್ಯುತ್ ನೀಡುವ 75:25 ಅನುಪಾತದಲ್ಲಿ ಅಂದಾಜು ಪಟ್ಟಿಯ ವೆಚ್ಚ ಭರಿಸುವ ಯೋಜನೆ ಅಡಿಯಲ್ಲಿ ವಿದ್ಯುತ್ ಸರಬರಾಜು ಮಾಡುವ ಕುರಿತು ಈಗಾಗಲೇ ಸರ್ಕಾರದಿಂದ ನಿರ್ದೇಶಿಸಿರುವಂತೆ, ಹಾಲಿ ಇರುವ ಈಗಾಗಲೇ ಸುತ್ತೋಲೆಗಳ ಪ್ರಕಾರ ಅರ್ಜಿ ನೋಂದಣಿ ಮಾಡಿಕೊಂಡು ವಿದ್ಯುತ್ ಸಂಪರ್ಕ ಕಲ್ಪಿಸುವ ನಿಟ್ಟಿನಲ್ಲಿ ವಿದ್ಯುತ್ ಸರಬರಾಜು ಕಂಪನಿಗಳು ಕಾರ್ಯ ಪ್ರವೃತ್ತವಾಗಿರುತ್ತವೆ.<br><br>ಸರ್ಕಾರದ ಆದೇಶ ಸಂಖ್ಯೆ: ಇಎನ್–41/ವಿ ಎಸ್.ಸಿ. 2014, ದಿ: 26.9.2016ರ ಆದೇಶದಂತೆ ಈ ಕುರಿತು ಈ ಕೆಳಕಂಡಂತೆ ಸ್ಪಷ್ಟೀಕರಿಸಲಾಗಿದೆ.<br><br>• ರೈತರ ನೀರಾವರಿ ಪಂಪ್‌ಸೆಟ್‌ಗಳಿಗೆ ಪ್ರತ್ಯೇಕ 11 ಕೆ.ವಿ. ಹೆಚ್.ಟಿ. ಮಾರ್ಗವನ್ನು ರಚಿಸಿ, ವಿದ್ಯುತ್ ಸಂಪರ್ಕ ಕಲ್ಪಿಸಲು ಬೇಕಾಗುವ ಎಲ್ಲಾ ಸಾಮಾಗ್ರಿ ಹಾಗೂ ಉಪಕರಣಗಳನ್ನು ಕಂಪನಿಯ ಭಾಗ ಮತ್ತು ಗ್ರಾಹಕರ ಭಾಗಗಳಾಗಿ ವಿಂಗಡಿಸಿ, ಅಂದಾಜು ಪಟ್ಟಿಯನ್ನು ತಯಾರಿಸಿ ಕಂಪನಿ ಭಾಗದ ಒಟ್ಟಾರೆ ಅಂದಾಜು ವೆಚ್ಚದ ಮೊತ್ತದಲ್ಲಿ ಶೇ.25ರಷ್ಟು ಹಣವನ್ನು ರೈತರಿಂದ ಭರಿಸಿಕೊಳ್ಳಬೇಕಾಗಿದೆ.<br>• ವಿದ್ಯುತ್ ಸರಬರಾಜು ಕಂಪನಿಗಳಲ್ಲಿ ಈಗಾಗಲೇ, ಅನುಸರಿಸುತ್ತಿರುವ ಕೆ.ಇ.ಆರ್.ಸಿ. ವಿದ್ಯುತ್ ಪೂರೈಕೆ ಮತ್ತು ವಿತರಣಾ ನಿಯಮಾವಳಿಗಳ ಅಡಿಯಲ್ಲಿ ಇತರೆ ವರ್ಗದ ಗ್ರಾಹಕರಿಗೆ 11 ಕೆ.ವಿ. ಹೆಚ್.ಟಿ.ಮಾರ್ಗದಲ್ಲಿ ವಿದ್ಯುತ್ ಸಂಪರ್ಕ ಕಲ್ಪಿಸಲು ಅನುಸರಿಸಲಾಗುತ್ತಿರುವ ಪ್ರಕ್ರಿಯೆಗಳಂತೆ ಕ್ರಮಗಳನ್ನು ಪಾಲಿಸಬೇಕಾಗಿದೆ.<br>• ಮುಂದುವರೆದು, ಸರ್ಕಾರದ ಆದೇಶ ಸಂಖ್ಯೆ: ಇಎನ್–41/ವಿ ಎಸ್.ಸಿ. 2014/ಪಿ, ದಿ: 06.01.2017ರ ಪ್ರಕಾರ ಸದರಿ ಯೋಜನೆಯು ಖಾಸಗಿ ಏತ ನೀರಾವರಿ ಸ್ಥಾವರಗಳಿಗೆ ಅನ್ವಯಿಸುವುದಿಲ್ಲ.<br>ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿಯ ವ್ಯಾಪ್ತಿಯಲ್ಲಿ ಸ್ವೀಕೃತಗೊಂಡಿರುವ ಅರ್ಜಿಗಳ ವಿವರಗಳು ಕೆಳಕಂಡಂತಿವೆ: |

| | | | | |
|---|---|---|---|---|
| | | | | 1. ಗದಗ ಜಿಲ್ಲಾ ಮುಂಡರಗಿ ತಾಲ್ಲೂಕಿನಲ್ಲಿ ಒಟ್ಟು 21 ನೀರಾವರಿ ಪಂಪ್‌ಸೆಟ್‌ಗಳಿಗೆ ಸಂಪರ್ಕ ಕಲ್ಪಿಸುವ ಕುರಿತು ಅರ್ಜಿ ನೊಂದಣಿಯಾಗಿದ್ದು, ಒಟ್ಟು ಅಂದಾಜು ಪಟ್ಟಿಯ ಮೊತ್ತ ರೂ. 95.75 ಲಕ್ಷಗಳಿಗೆ ಮಂಜೂರಾಗಿದೆ. ಮಾರ್ಗ ರಚನೆ ಕಾಮಗಾರಿಯು ಮೇ–2017ರಂದು ಪೂರ್ಣಗೊಂಡಿದ್ದು, 11 ಕೆ.ವಿ. ಬ್ರೇಕರ್ ಕಾಮಗಾರಿಯನ್ನು ಕೈಗೆತ್ತಿಕೊಳ್ಳಬೇಕಾಗಿರುತ್ತದೆ.<br>2. ಬಾಗಲಕೋಟೆ ಉಪ–ವಿಭಾಗದಲ್ಲಿ ಒಟ್ಟು 6 ನೀರಾವರಿ ಪಂಪ್‌ಸೆಟ್‌ಗಳಿಗೆ ಸಂಪರ್ಕ ಕಲ್ಪಿಸುವ ಕುರಿತು ಅರ್ಜಿ ನೊಂದಣಿಯಾಗಿದ್ದು ಒಟ್ಟು ಅಂದಾಜು ಪತ್ರಿಕೆಯ ಮೊತ್ತ ರೂ. 39.00 ಲಕ್ಷಗಳಿಗೆ ಮಂಜೂರಾತಿ ನೀಡಲಾಗಿದೆ. ಈ ಕಾಮಗಾರಿಗೆ ಸ್ಥಳೀಯ ರೈತರು ಅಡ್ಡಿಪಡಿಸುತ್ತಿದ್ದಾರೆ. ಪ್ರಸ್ತುತ, ಮಾರ್ಗ ರಚನೆ ಕಾಮಗಾರಿಯು ಶೇ.95ರಷ್ಟು ಪೂರ್ಣಗೊಂಡಿದ್ದು, 11 ಕೆ.ವಿ. ಬ್ರೇಕರ್ ಕಾಮಗಾರಿಯನ್ನು ಕೈಗೆತ್ತಕೊಳ್ಳಬೇಕಾಗಿರುತ್ತದೆ.<br>3. ಚಿಕ್ಕೋಡಿ ಉಪ–ವಿಭಾಗದಲ್ಲಿ ಒಟ್ಟು 4 ನೀರಾವರಿ ಪಂಪ್‌ಸೆಟ್‌ಗಳಿಗೆ ಸಂಪರ್ಕ ಕಲ್ಪಿಸುವ ಕುರಿತು ಅರ್ಜಿ ನೊಂದಣಿಯಾಗಿದ್ದು, ಒಟ್ಟು ಅಂದಾಜು ಪಟ್ಟಿಯ ಮೊತ್ತ ರೂ. 87.84 ಲಕ್ಷಗಳಿಗೆ ಮಂಜೂರಾತಿ ನೀಡಲಾಗಿದೆ. ಕಾಮಗಾರಿಯು ಆಗಸ್ಟ್–2017ರಂದು ಪೂರ್ಣಗೊಂಡಿರುತ್ತದೆ.<br>4. ಚಿಕ್ಕೋಡಿ ಉಪ ವಿಭಾಗದಲ್ಲಿ ಒಟ್ಟು 2 ನೀರಾವರಿ ಪಂಪ್‌ಸೆಟ್‌ಗಳಿಗೆ ಸಂಪರ್ಕ ಕಲ್ಪಿಸುವ ಕುರಿತು ಅರ್ಜಿ ನೊಂದಣಿಯಾಗಿದ್ದು ಒಟ್ಟು ಅಂದಾಜು ಪತ್ರಿಕೆಯ ಮೊತ್ತ ರೂ. 41.64 ಲಕ್ಷಗಳಿಗೆ ಮಂಜೂರಾತಿ ನೀಡಿದ್ದು ಕಾಮಗಾರಿಯು ಅಂತಿಮ ಹಂತದಲ್ಲಿರುತ್ತದೆ.<br><br>ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿಯ ವ್ಯಾಪ್ತಿಯ ಗಂಗಾವತಿ ತಾಲ್ಲೂಕಿನಲ್ಲಿ 65 ಸಂಖ್ಯೆಯ ರೈತರುಗಳು ಮತ್ತು ಹೊಸಪೇಟೆ ತಾಲ್ಲೂಕಿನಲ್ಲಿ 43 ಸಂಖ್ಯೆಯ ರೈತರುಗಳು ಸ್ವಇಚ್ಛೆಯಿಂದ ತಮ್ಮ ನೀರಾವರಿ ಪಂಪ್‌ಸೆಟ್‌ಗಳಿಗೆ ಪ್ರತ್ಯೇಕವಾದ 11 ಕೆ.ವಿ. ವಿದ್ಯುತ |

| | | | | |
|---|---|---|---|---|
| | | | | ಮಾರ್ಗವನ್ನು ರಚಿಸಿಕೊಂಡು 24 ಗಂಟೆಗಳ ಕಾಲ ನಿರಂತರ ವಿದ್ಯುತ್ ಸೌಲಭ್ಯವನ್ನು ಪಡೆದುಕೊಳ್ಳುತ್ತಿದ್ದು, ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗವು ನಿಗದಿಪಡಿಸಿ ದರದ ಅನ್ವಯ ನಿಗದಿತ ಶುಲ್ಕ ಮತ್ತು ವಿದ್ಯುತ್ ಬಳಕೆಯ ಶುಲ್ಕವನ್ನು ಪಾವತಿಸುತ್ತಿದ್ದಾರೆ.<br><br>ಪ್ರಸ್ತುತ, ಬೆಂಗಳೂರು ಮಂಗಳೂರು ಮತ್ತು ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ಕಂಪನಿಗಳಲ್ಲಿ ಸದರಿ ಯೋಜನೆಯಡಿ ವಿದ್ಯುತ್ ಸಂಪರ್ಕ ಕೋರಿ ಯಾವುದೇ ಅರ್ಜಿಗಳು ನೋಂದಣಿಯಾಗಿರುವುದಿಲ್ಲ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ಸಮಿತಿಯು ತೀರ್ಮಾನಿಸಿತು. |
| ೧೦ | 5875<br>ಚು.ಗು.ಪ್ರ: 4286<br>ಶ್ರೀ ಕಾಂತರಾಜು (ಬಿಎಂಎಲ್)<br>ವಿ.ಪ.ನ.ದಿ: 21-11-2017 | ತುಮಕೂರು ಜಿಲ್ಲೆಯಲ್ಲಿ ವಿದ್ಯುತ್ ಪರಿವರ್ತಕಗಳನ್ನು (ಟ್ರ್ಯಾನ್ಸ್‌ಫಾರ್ಮರ್) ಪ್ರತ್ಯೇಕವಾಗಿ ಅಳವಡಿಸಿಕೊಳ್ಳಲು ರೈತರಿಂದ ಕಳೆದ 2 ವರ್ಷಗಳಿಂದ ಇಲ್ಲಿಯ ತನಕ ಬಂದಿರುವ ಅರ್ಜಿದಾರರಿಗೆ ಪರಿವರ್ತಕಗಳನ್ನು ರೈತರ ಪಂಪ್‌ಸೆಟ್‌ಗಳಿಗೆ ಅಳವಡಿಸುವ ಬಗ್ಗೆ. | ಈ ಕುರಿತು ಶೀಘ್ರ ಸಂಪರ್ಕ ಯೋಜನೆಯಡಿ ಬಾಕಿ ಉಳಿದ 284 ಸಂಖ್ಯೆಯ ಅರ್ಜಿಗಳಿಗೆ ಅಕ್ರಮ ಸಕ್ರಮ ಯೋಜನೆಯಡಿ ಪರಿವರ್ತಕಗಳನ್ನು ಅಳವಡಿಸಲು ನಿಗಮ ಕಛೇರಿಯಿಂದ ತುಮಕೂರು ವಿಭಾಗಕ್ಕೆ ಟೆಂಡರ್ ಪ್ರಕ್ರಿಯೆ ಮೂಲಕ ಮೆ॥ಎಸ್.ಎಲ್.ಎನ್ ಎಲೆಕ್ಟ್ರಿಕಲ್ಸ್, ತುಮಕೂರು ರವರಿಗೆ ಆಫಂ ಸಂಖ್ಯೆ ಸಪ್ಲೈ 3800-09 ಮತ್ತು ಎಲೆಕ್ಷನ್-3810-19 ದಿ: 16-11-2017ರನ್ವಯ ರಂದು ಕಾರ್ಯಾದೇಶ ನೀಡಲಾಗಿದೆ. | ದಿನಾಂಕ: 11.01.2018ರಂದು ನಡೆದ ಸಮಿತಿಯ ಸಭೆಯಲ್ಲಿ ಚರ್ಚಿಸಿದಾಗ, ಬೆ.ವಿ.ಕಂಪನಿ., ತುಮಕೂರು ಜಿಲ್ಲೆಯಲ್ಲಿ, ಶೀಘ್ರ ಸಂಪರ್ಕ ಯೋಜನೆಯಡಿ ಪ್ರತ್ಯೇಕವಾಗಿ ವಿದ್ಯುತ್ ಪರಿವರ್ತಕಗಳನ್ನು ಅಳವಡಿಸಿಕೊಳ್ಳಲು 2015-16ನೇ ಸಾಲಿನಿಂದ ಅಕ್ಟೋಬರ್-2017ರ ಅಂತ್ಯದವರೆಗೆ ರೈತರಿಂದ ಒಟ್ಟು 2,657 ಸಂಖ್ಯೆಯ ಅರ್ಜಿಗಳು ನೋಂದಣಿಗೊಂಡಿದ್ದು, ಅಕ್ಟೋಬರ್-2017ರ ಅಂತ್ಯಕ್ಕೆ 2,308 ಸಂಖ್ಯೆಯ ರೈತರ ಪಂಪ್‌ಸೆಟ್‌ಗಳಿಗೆ ಪರಿವರ್ತಕಗಳನ್ನು ಪ್ರತ್ಯೇಕವಾಗಿ ಅಳವಡಿಸಿ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದೆ.<br><br>ಉಳಿದ 349 ಅರ್ಜಿಗಳ ಪೈಕಿ, 65 ಸಂಖ್ಯೆ ರೈತರ ಪಂಪ್‌ಸೆಟ್‌ಗಳಿಗೆ, ಸ್ವಯಂ ಕಾರ್ಯನಿರ್ವಹಣೆ ಯೋಜನೆಯಡಿ ಕಾರ್ಯಾದೇಶ ನೀಡಿ ಪರಿವರ್ತಕಗಳನ್ನು ಅಳವಡಿಸಿ ಈಗಾಗಲೇ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದೆ.<br><br>ಬಾಕಿ ಇನ್ನುಳಿದ 284 ಸಂಖ್ಯೆಯ ರೈತರ ಪಂಪ್‌ಸೆಟ್‌ಗಳಿಗೆ ಶೀಘ್ರ ಸಂಪರ್ಕ ಯೋಜನೆಯಡಿ ವಿದ್ಯುತ್ ಸಂಪರ್ಕ ಕಲ್ಪಿಸುವ ಕಾಮಗಾರಿಗಳಿಗೆ ದಿ: 16.11.2017ರಂದು ಕಾರ್ಯಾದೇಶ ನೀಡಲಾಗಿತ್ತು. ಸದರಿ 284 ಸಂಖ್ಯೆಯ ರೈತರ ನೀರಾವರಿ ಪಂಪ್‌ಸೆಟ್‌ಗಳಿಗೆ, 284 ಸಂಖ್ಯೆಯ ರೈತರ |

| | | | | |
|---|---|---|---|---|
| | | | ಸದರಿ ಅರ್ಜಿದಾರರಿಗೆ ಮೂಲಭೂತ ಸೌಕರ್ಯವನ್ನು ಕಲ್ಪಿಸಿ ಅಕ್ರಮ ಸಕ್ರಮ ಯೋಜನೆ ಅನುಸಾರ ರೂ.10,000/- ಮತ್ತು ಇತರೆ ಠೇವಣಿಗಳನ್ನು ಪಡೆದು ಶೀಘ್ರವಾಗಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುವುದು ಎಂದು ಇಂಧನ ಸಚಿವರು ತಿಳಿಸಿದರು. | ಪರಿವರ್ತಕಗಳನ್ನು ಜುಲೈ-2018ರ ಅಂತ್ಯಕ್ಕೆ ಅಳವಡಿಸಿ ಈಗಾಗಲೇ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದೆಯೆಂದು ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ಸಮಿತಿಯು ತೀರ್ಮಾನಿಸಿತು. |
| 11 | 5876<br>ಚು.ಗು.ಪ್ರ : 4246<br>ಶ್ರೀ ಸುನೀಲ್ ಸುಬ್ರಮಣಿ ಎಂ.ಪಿ<br>ವಿ.ಪ.ನ.ದಿ:<br>21-11-2017 | ಕೊಡಗು ಜಿಲ್ಲೆಯಲ್ಲಿ ವಿದ್ಯುತ್ ಇಲಾಖೆಯಲ್ಲಿನ ಖಾಲಿ ಹುದ್ದೆಗಳನ್ನು ತುಂಬಲು ಕ್ರಮ ವಹಿಸುವ ಬಗ್ಗೆ. | ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದಲ್ಲಿ ಖಾಲಿ ಇರುವ ಹುದ್ದೆಗಳಾದ ಕಿರಿಯ ಇಂಜಿನಿಯರ್ (ವಿ), ಸಹಾಯಕ ಇಂಜಿನಿಯರ್ (ವಿ), ಸಹಾಯಕ ಲೆಕ್ಕಾಧಿಕಾರಿ, ಸಹಾಯಕ, ಕಿರಿಯ ಸಹಾಯಕ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ ನೇಮಕಾತಿ ಅಧಿಸೂಚನೆಯನ್ನು ದಿನಾಂಕ: 08-09-2016 ರನ್ವಯ ಹೊರಡಿಸಲಾಗಿದ್ದು, ನಿಗಮ ಮಟ್ಟದಲ್ಲಿ 33 | ದಿನಾಂಕ: 11.01.2018ರಂದು ನಡೆದ ಸಮಿತಿಯ ಸಭೆಯಲ್ಲಿ ಚರ್ಚಿಸಿದಾಗ, ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತದ ವ್ಯಾಪ್ತಿಯ ಕೊಡಗು ಜಿಲ್ಲೆಯಲ್ಲಿ ಖಾಲಿ ಇದ್ದ ಹುದ್ದೆಗಳನ್ನು ನೇರ ನೇಮಕಾತಿ ಮುಖಾಂತರ ಭರ್ತಿ ಮಾಡಲು ಕ್ರಮವಹಿಸಲಾಗಿದ್ದು, 2016-17ನೇ ಸಾಲಿನಲ್ಲಿ ಭರ್ತಿ ಮಾಡಲಾದ ಹುದ್ದೆಗಳ ವಿವರಗಳು ಕೆಳಕಂಡಂತಿವೆ:<br><br>ಹುದ್ದೆ — ನೇಮಕಾತಿ ಮಾಡಲಾದ ಸಂಖ್ಯೆ<br>ಸಹಾಯಕ ಇಂಜನಿಯರ್ (ವಿ) — 02<br>ಸಹಾಯಕ ಲೆಕ್ಕಾಧಿಕಾರಿ — 02<br>ಕಿರಿಯ ಇಂಜನಿಯರ್ (ವಿ) — 01<br>ಸಹಾಯಕರು — 02<br>ಕಿರಿಯ ಸಹಾಯಕರು — 05<br><br>ಮುಂದುವರೆದು, 6 ಸಂಖ್ಯೆಯ ಕಿರಿಯ ಇಂಜನಿಯರ್ (ವಿ), 02 ಸಂಖ್ಯೆಯ ಸಹಾಯಕರು ಮತ್ತು 10 ಸಂಖ್ಯೆಯ ಕಿರಯ ಸಹಾಯಕರು |

| | | | | |
|---|---|---|---|---|
| | | | ಸಂಖ್ಯೆ ಕಿರಿಯ ಇಂಜಿನಿಯರ್ (ವಿ), 24 ಸಂಖ್ಯೆ ಸಹಾಯಕ ಇಂಜಿನಿಯರ್ (ವಿ), 23 ಸಂಖ್ಯೆ ಸಹಾಯಕ ಲೆಕ್ಕಾಧಿಕಾರಿ, 70 ಸಂಖ್ಯೆ ಸಹಾಯಕರು, ಮತ್ತು 100 ಸಂಖ್ಯೆ ಕಿರಿಯ ಸಹಾಯಕ ಹುದ್ದೆಗಳನ್ನು ಭರ್ತಿ ಮಾಡುವ ಪ್ರಕ್ರಿಯೆ ಚಾಲ್ತಿಯಲ್ಲಿದ್ದು ಪ್ರಸ್ತುತ 1:2 ಅನುಪಾತದಲ್ಲಿ ಅಭ್ಯರ್ಥಿಗಳ ಪಟ್ಟಿಯನ್ನು ಪ್ರಕಟಿಸಲಾಗಿದ್ದು, ದಾಖಲಾತಿ ಪರಿಶೀಲನೆ ದಿನಾಂಕ ನಿಗದಿಪಡಿಸುವ ಹಂತದಲ್ಲಿರುತ್ತದೆ.<br>ತದನಂತರ ಆದ್ಯತೆಯ ಮೇರೆಗೆ ಕೊಡಗು ಜಿಲ್ಲಾ ವ್ಯಾಪ್ತಿಯಲ್ಲಿ ಖಾಲಿ ಇರುವ ಹುದ್ದೆಗಳನ್ನು ತುಂಬಲು ಕ್ರಮ ವಹಿಸಲಾಗುತ್ತದೆ ಹಾಗೂ ಕೊಡಗು ಜಿಲ್ಲೆಯಲ್ಲಿ ಮಾನ್ಯ ವಿದ್ಯುತ್ ಪರಿವೀಕ್ಷಣಾ ಇಲಾಖೆಯ 5 ಹುದ್ದೆಗಳು ಖಾಲಿ ಇದ್ದು ಸದರಿ ಹುದ್ದೆಗಳನ್ನು ಅದ್ಯತೆ ಮೇಲೆ ಭರ್ತಿ | ಹುದ್ದೆಗಳನ್ನು ಭರ್ತಿ ಮಾಡುವ ಪ್ರಕ್ರಿಯೆ ಅಂತಿಮ ಹಂತದಲ್ಲಿರುತ್ತದೆ.<br>ಸಂಬಂಧಪಟ್ಟ ಜಾತಿ ಮತ್ತು ಆದಾಯ ಪ್ರಮಾಣ ಪತ್ರದ ಸಿಂಧುತ್ವ ಮತ್ತು ನಡತೆ ಪೂರ್ವ ಚರಿತ್ರೆ ಕುರಿತು ಪೊಲೀಸ್ ವರದಿಗಳು, ಗ್ರಾಮೀಣ ಅಭ್ಯರ್ಥಿ ಪ್ರಮಾಣ ಪತ್ರ ಹಾಗೂ Creamy layer (ಮೇಲುಸ್ತರಕ್ಕೆ ಸೇರಿರುವ ವಿವರ)ವನ್ನು ನೀಡುವಂತೆ ಸಂಬಂಧಪಟ್ಟ ಪ್ರಾಧಿಕಾರಗಳಿಗೆ ಪತ್ರ ಬರೆಯಲಾಗಿದ್ದು, ಪ್ರಕ್ರಿಯೆ ಅಂತಿಮ ಹಂತದಲ್ಲಿರುತ್ತದೆ.<br>ಮೇಲಿನ ಪ್ರಕ್ರಿಯೆಗಳು ಪೂರ್ಣಗೊಂಡ ನಂತರ ಆದ್ಯತೆಯ ಮೇರೆಗೆ ಕೊಡಗು ಜಿಲ್ಲಾ ವ್ಯಾಪ್ತಿಯಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಸೂಕ್ತ ಕ್ರಮಗಳನ್ನು ಕೈಗೊಳ್ಳಲಾಗುವುದು.<br>ವಿದ್ಯುತ್ ಪರಿವೀಕ್ಷಣಾಲಯ ಇಲಾಖೆಯ ವ್ಯಾಪ್ತಿಯಲ್ಲಿ ಕೊಡಗು ಜಿಲ್ಲೆಗೆ ಈ ಕೆಳಕಂಡಂತೆ ಹುದ್ದೆಗಳು ಮಂಜೂರಾಗಿರುತ್ತದೆ.<br>1. ಉಪ ವಿದ್ಯುತ್ ಪರಿವೀಕ್ಷಕರು – 1<br>2. ಸಹಾಯಕ ವಿದ್ಯುತ್ ಪರಿವೀಕ್ಷಕರು –1<br>3. ಪ್ರಥಮ ದರ್ಜೆ ಸಹಾಯಕರು –1<br>4. ದ್ವಿತೀಯ ದರ್ಜೆ ಸಹಾಯಕರು–1<br>5. ಗ್ರೂಪ್–ಡಿ–1<br>ವಿದ್ಯುತ್ ಪರಿವೀಕ್ಷಣಾ ಇಲಾಖೆಗೆ ಸಂಬಂಧಿಸಿದ ಕೊಡಗು ಉಪ ವಿದ್ಯುತ್ ಪರಿವೀಕ್ಷಕರ ಕಚೇರಿಗೆ ಮಂಜೂರಾಗಿರುವ ಒಟ್ಟು 05 ಹುದ್ದೆಗಳ ಪೈಕಿ ಉಪ ವಿದ್ಯುತ್ ಪರಿವೀಕ್ಷಕರ ಹುದ್ದೆಯನ್ನು ಭರ್ತಿ ಮಾಡಲಾಗಿದೆ. ಗ್ರೂಪ್ ಡಿ ಹುದ್ದೆಯನ್ನು ಹೊರಗುತ್ತಿಗೆ ಆಧಾರದ ಮೇಲೆ ಭರ್ತಿ ಮಾಡಲಾಗಿದೆ. ಉಳಿದ 3 ಹುದ್ದೆಗಳಿಗೆ ಸಂಬಂಧಿಸಿದಂತೆ, ಸಹಾಯಕ ವಿದ್ಯುತ್ ಪರಿವೀಕ್ಷಕರ ಹುದ್ದೆಯನ್ನು ನೇರ ನೇಮಕಾತಿಯಿಂದ ತುಂಬಲು ಸರ್ಕಾರಕ್ಕೆ ಸಲ್ಲಿಸಿರುವ ಪ್ರಸ್ತಾವನೆಗೆ ಆರ್ಥಿಕ ಇಲಾಖೆಯು ನೀಡಿರುವ ಸಹಮತಿಯ ಮೇರೆಗೆ ನೇಮಕಾತಿ ಪ್ರಕ್ರಿಯೆಯನ್ನು ಆದ್ಯತೆಯ ಮೇರೆಗೆ |

| | | | | |
|---|---|---|---|---|
| | | | ಮಾಡಲಾಗುವುದು ಎಂದು ಇಂಧನ ಸಚಿವರು ತಿಳಿಸಿದರು. | ಕೈಗೊಳ್ಳಲಾಗುವುದು. ಉಳಿದ ಎರಡು ಹುದ್ದೆಗಳಾದ ಪ್ರಥಮ ದರ್ಜೆ ಸಹಾಯಕರು ಮತ್ತು ದ್ವಿತೀಯ ದರ್ಜೆ ಸಹಾಯಕರ ಹುದ್ದೆಗಳ ಭರ್ತಿಗೆ ಸಂಬಂಧಿಸಿದಂತೆ, ಕರ್ನಾಟಕ ಲೋಕಸೇವಾ ಆಯೋಗವು ನೀಡಿರುವ ಅಂತಿಮ ಆಯ್ಕೆ ಪಟ್ಟಿಯಂತೆ ಸಂಬಂಧಿಸಿದ ಅಭ್ಯರ್ಥಿಗಳ ಪೊಲೀಸ್ ತಪಾಸಣಾ ಮತ್ತು ಸಿಂಧುತ್ವ ಪ್ರಮಾಣ ಪತ್ರಗಳ ಪರಿಶೀಲನೆ ನಡೆದಿದೆ. ಪರಿಶೀಲನೆಯ ನಂತರ ಆದ್ಯತೆ ಮೇಲೆ ಖಾಲಿ ಇರುವ ಪ್ರಥಮ ದರ್ಜೆ ಸಹಾಯಕರು ಮತ್ತು ದ್ವಿತೀಯ ದರ್ಜೆ ಸಹಾಯಕರ ಹುದ್ದೆಗಳನ್ನು ಭರ್ತಿ ಮಾಡಲಾಗುವುದು ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ಸಮಿತಿಯು ತೀರ್ಮಾನಿಸಿತು. |
| 12 | 5877<br>ಗಮನ ಸೆಳೆಯುವ ಸೂಚನೆ<br>ಕ್ಯಾಪ್ಟನ್ ಗಣೇಶ್ ಕಾರ್ಣಿಕ್<br>ವಿ.ಪ.ನ.ದಿ:<br>21-06-2017 | ಶಿವಮೊಗ್ಗ ಜಿಲ್ಲೆ, ಹೊಸನಗರ ತಾಲ್ಲೂಕು ಕರಿಮನೆ ಗ್ರಾಮ ಪಂಚಾಯ್ತಿ ವ್ಯಾಪ್ತಿಯ ನಕ್ಸಲ್ ಪೀಡಿತ ಹೊಡೋಡಿ ಗ್ರಾಮಕ್ಕೆ ದೇಶಕ್ಕೆ ಸ್ವಾತಂತ್ರ್ಯ ಲಭಿಸಿ 70 ವರ್ಷಗಳು ಕಳೆದರೂ ಇದುವರೆಗೂ ವಿದ್ಯುತ್ ಸಂಪರ್ಕ ಒದಗಿಸಿಲ್ಲ ಈ ಗ್ರಾಮದಲ್ಲಿ ಸುಮಾರು ಹದಿನೈದು ಮನೆಗಳಿದ್ದು, ಎಲ್ಲರೂ ವಾರಾಹಿ ಅಣೆಕಟ್ಟು ನಿರ್ಮಿಸಲು ತಮ್ಮ ಜಮೀನುಗಳನ್ನು ಸರ್ಕಾರಕ್ಕೆ ಬಿಟ್ಟು ಕೊಟ್ಟು ಪುನರ್ವಸತಿ ಗೊಂಡವರೇ ಆಗಿ ಸರ್ಕಾರವು ಇದುವರೆಗೂ ನಕ್ಸಲ್ ಪೀಡಿತ ಹೊಡೋಡಿ ಗ್ರಾಮಕ್ಕೆ ಮೂಲ | ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪನಿ ವ್ಯಾಪ್ತಿಯ ಹೊಸನಗರ ತಾಲ್ಲೂಕಿನ ಕರಿಮನೆ ಗ್ರಾಮ ಪಂಚಾಯಿತಿಯ ನಕ್ಸಲ್ ಪೀಡಿತ ಹೊಡೋಡಿ ಗ್ರಾಮವನ್ನು ವಿದ್ಯುದ್ದೀಕರಣಗೊಳಸಲು DDUGJY ಯೋಜನೆಯಡಿ ಮಂಜೂರಾತಿ ದೊರೆತಿರುತ್ತದೆ. ಸದರಿ ಕಾಮಗಾರಿಯನ್ನು ಮೆ॥ ಪ್ರಕಾಶ್ ಮೋಟಾರ್ಸ್, ದಾವಣಗೆರೆ ಇವರಿಗೆ ವಹಿಸಿ ಕೊಡಲಾಗಿದ್ದು, ಸರ್ವೆ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ. ಈ ಗ್ರಾಮವು ವನ್ಯಜೀವಿ ಅರಣ್ಯ | ದಿನಾಂಕ: 11.01.2018ರಂದು ನಡೆದ ಸಮಿತಿಯ ಸಭೆಯಲ್ಲಿ ಚರ್ಚಿಸಿದಾಗ, ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪನಿ ವ್ಯಾಪ್ತಿಯ ಹೊಸನಗರ ತಾಲ್ಲೂಕಿನ ಕರಿಮನೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಹೋಡೋಡಿ ಗ್ರಾಮವನ್ನು ವಿದ್ಯುದ್ದೀಕರಣಗೊಳಿಸಲು ದೀನ್‌ದಯಾಳ್ ಗ್ರಾಮ ಜ್ಯೋತಿ ಯೋಜನೆಯಡಿ (DDUGJY) ಮಂಜೂರಾತಿ ದೊರೆತಿದ್ದು, ಸದರಿ ಕಾಮಗಾರಿಯನ್ನು ಗುತ್ತಿಗೆದಾರರಿಗೆ ವಹಿಸಿ ಕೊಡಲಾಗಿರುತ್ತದೆ. ಈ ಗ್ರಾಮವು ವನ್ಯಜೀವಿ ಅರಣ್ಯ ಪ್ರದೇಶದಲ್ಲಿರುವುದರಿಂದ ವಿದ್ಯುತ್ ಮಾರ್ಗಗಳನ್ನು ಎಳೆಯಲು ಅರಣ್ಯ ಇಲಾಖೆಯ ಅನುಮತಿ ಕೋರಿದ್ದು, ಇದುವರೆವಿಗೂ ಅನುಮತಿ ದೊರೆತಿರುವುದಿಲ್ಲ.<br><br>ಅರಣ್ಯ ಇಲಾಖೆಯವರು ಕೇಬಲ್ ಮುಖಾಂತರ ವಿದ್ಯುತ್ ಮಾರ್ಗ ನಿರ್ಮಿಸಲು ಮೌಖಿಕವಾಗಿ ತಿಳಿಸಿರುವುದರಿಂದ ಈ ಗ್ರಾಮಕ್ಕೆ ಹೆಚ್.ಟಿ. ಯು.ಜಿ. ಕೇಬಲ್ ಮುಖಾಂತರ ಮೂಲಭೂತ ಸೌಕರ್ಯ ಕಲ್ಪಿಸಿ ವಿದ್ಯುತ್ ಸಂಪರ್ಕ ಕಲ್ಪಿಸಲು ರೂ. 256.00 ಲಕ್ಷಗಳ ವೆಚ್ಚವನ್ನು ಅಂದಾಜಿಸಲಾಗಿದ್ದು, ಅರಣ್ಯ ಇಲಾಖೆಯ ಹಕ್ಕು ಸಮಿತಿಯ ಅನುಮತಿ ಪಡೆದು ವಿದ್ಯುತ್ ಸಂಪರ್ಕವನ್ನು ಕಲ್ಪಿಸುವ ಯೋಜನೆಯನ್ನು ಹಾಕಿಕೊಳ್ಳಲಾಗಿತ್ತು.<br><br>ಆದರೆ, ಈ ಪ್ರಕ್ರಿಯೆಯನ್ನು ಪೂರ್ಣಗೊಳಿಸಿ ವಿದ್ಯುತ್ ಸಂಪರ್ಕವನ್ನು ಕಲ್ಪಿಸುವಲ್ಲಿ ವಿಳಂಬವಾಗುತ್ತಿರುವುದರಿಂದ, ಸೌಭಾಗ್ಯ ಯೋಜನೆಯಡಿ |

| | | | | |
|---|---|---|---|---|
| | | ಸೌಕರ್ಯವಾದ ವಿದ್ಯುತ್ ಸೇರಿದಂತೆ ಯಾವುದೇ ಸೌಲಭ್ಯಗಳನ್ನು ಸರ್ಕಾರವು ಕಲ್ಪಿಸದಿರುವ ಬಗ್ಗೆ. | ಪ್ರದೇಶದಲ್ಲಿರುವುದರಿಂದ ಅರಣ್ಯ ಇಲಾಖೆಯಿಂದ ಅನುಮತಿ ಪಡೆದು ವಿದ್ಯುತ್ ಸಂಪರ್ಕವನ್ನು ಕಲ್ಪಿಸಲಾಗುವುದು ಎಂದು ಇಂಧನ ಸಚಿವರು ತಿಳಿಸಿದರು. | ಸೋಲಾರ್ ಪ್ಯಾನೆಲ್‌ಗಳನ್ನು ಅಳವಡಿಸಿ ಸದರಿ ಗ್ರಾಮಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸುವ ಕಾಮಗಾರಿಗೆ ದಿ: 7.12.2018ರಂದು LOI ನೀಡಲಾಗಿದೆ.<br><br>ಸದರಿ ಕಾಮಗಾರಿಗಳನ್ನು DWA ಅನುಸಾರ ನಿಗದಿತ ಸಮಯದಲ್ಲಿ ಪೂರ್ಣಗೊಳಿಸಿ, ಚಾಲನೆಗೊಳಿಸಲು ಮಂಗಳೂರು ವಿದ್ಯುತ್ ಸರಬರಾಜು ಕಂಪನಿಯು ಸೂಕ್ತ ಕ್ರಮಗಳನ್ನು ಕೈಗೊಂಡಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ಸಮಿತಿಯು ತೀರ್ಮಾನಿಸಿತು. |

**ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ**

| ಕ್ರಮ ಸಂಖ್ಯೆ | ಆಶ್ವಾಸನೆ ಸಂಖ್ಯೆ ಆಧಾರ ಮತ್ತು ದಿನಾಂಕ | ವಿಷಯ | ಆಶ್ವಾಸನೆ | ತೆಗೆದುಕೊಂಡ ಕ್ರಮ |
|---|---|---|---|---|
| 1 | 5878<br>ಶೂನ್ಯ ವೇಳೆಯಲ್ಲಿ ಪ್ರಸ್ತಾಪ<br>ಶ್ರೀ ಅಲ್ಲಮಪ್ರಭು ಪಾಟೀಲ್<br>ಶ್ರೀ ಅಮರನಾಥ ಪಾಟೀಲ್<br>ವಿ.ಪ.ನ.ದಿ: 02–07–2015 | ಕಲಬುರಗಿಯಲ್ಲಿ ಆಡಳಿತ ನ್ಯಾಯ ಮಂಡಳಿ ಸ್ಥಾಪನೆಯ ಬಗ್ಗೆ. | ಕಲಬುರಗಿ ಉಚ್ಚನ್ಯಾಯಾಲಯದ ವಿಭಾಗೀಯ ಪೀಠದ ಕಾರ್ಯ ವ್ಯಾಪ್ತಿಯಲ್ಲಿರುವ ಜಿಲ್ಲೆಗಳಲ್ಲಿ ಬಾಕಿಯಿರುವ ಪ್ರಕರಣಗಳ ಸಂಖ್ಯೆಯನ್ನು ಪರಿಗಣನೆಗೆ ತೆಗೆದುಕೊಂಡು, ಕಲಬುರಗಿಯಲ್ಲಿ ಪ್ರತ್ಯೇಕ ಕರ್ನಾಟಕ ಆಡಳಿತ ಮಂಡಳಿ (ಕೆ.ಎ.ಟಿ) ಪೀಠವನ್ನು ಸ್ಥಾಪಿಸುವುದರ ಬಗ್ಗೆ ಪರಿಶೀಲಿಸಲಾಗುವುದು ಎಂದು ಮಾನ್ಯ ಮುಖ್ಯಮಂತ್ರಿಯವರು ತಿಳಿಸಿದರು. | ದಿನಾಂಕ: 18.01.2019 ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ಕಲಬುರಗಿಯ ಕರ್ನಾಟಕ ರಾಜ್ಯ ಆಡಳಿತ ನ್ಯಾಯ ಮಂಡಳಿಯ ಪೀಠ ಕಾರ್ಯಾರಂಭ ಮಾಡಲು ಅಗತ್ಯವಿರುವ ವಿವಿಧ ವೃಂದದ ಒಟ್ಟು 110 ಹುದ್ದೆಗಳನ್ನು ಸೃಜಿಸಲಾಗಿದೆ ಹಾಗೂ ಈ ಪೀಠಗಳಿಗೆ ನ್ಯಾಯಾಂಗ ಮತ್ತು ಆಡಳಿತ ಸದಸ್ಯರನ್ನು ನೇಮಕ ಮಾಡಲು ಅಗತ್ಯ ಕ್ರಮ ಕೈಗೊಳ್ಳಲಾಗುತ್ತಿದೆ. ಸದರಿ ಪೀಠಕ್ಕೆ ಅಗತ್ಯವಿರುವ ಕಟ್ಟಡ, ಅನುದಾನ ಮತ್ತಿತ್ತರ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗಿದ್ದು, ಪೀಠವನ್ನು ಶೀಘ್ರದಲ್ಲಿ ಕಾರ್ಯಾರಂಭ ಮಾಡಲಾಗುವುದು ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸಮಿತಿಯು ಈ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |
| 2 | 5880<br>ಚು.ಗು.ಪ್ರ. 3563<br>ಶ್ರೀ ಪುಟ್ಟಣ್ಣ<br>ವಿ.ಪ.ನ.ದಿ: 26.11.2015 | ರಾಜ್ಯ ಸರ್ಕಾರದ ನಿವೃತ್ತ ನೌಕರರುಗಳಿಗೆ ಜ್ಯೋತಿ ಸಂಜೀವಿನಿ ಯೋಜನೆಯ ಸೌಲಭ್ಯವನ್ನು ವಿಸ್ತರಿಸುವ ಬಗ್ಗೆ. | ಜ್ಯೋತಿ ಸಂಜೀವಿನಿ ಯೋಜನೆಯನ್ನು ಸರ್ಕಾರಿ ನೌಕರರಿಗೆ ಜಾರಿಗೊಳಿಸಲಾಗಿದ್ದು, ಅದರ ಅನುಷ್ಠಾನದಲ್ಲಿನ ಸಾಧಕ ಬಾಧಕಗಳನ್ನು ಪರಿಗಣಿಸಿ ನಂತರ ಅವಶ್ಯವಿದ್ದಲ್ಲಿ, ನಿವೃತ್ತ ನೌಕರರಿಗೂ ವಿಸ್ತರಿಸುವ ಬಗ್ಗೆ ಪರಿಶೀಲಿಸಲಾಗುವುದು ಎಂದು | ದಿನಾಂಕ: 18.01.2019 ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ರಾಜ್ಯ ಸರ್ಕಾರದ ನಿವೃತ್ತ ನೌಕರರ ವೈದ್ಯಕೀಯ ಚಿಕಿತ್ಸೆಗಳಿಗೆ ಸಂಬಂಧಿಸಿದಂತೆ ಈಗಾಗಲೇ ಆರ್ಥಿಕ ಇಲಾಖೆಯು ಹೊರಡಿಸಿರುವ The Karnataka Government Pensioners (Medical Attendance) Rules, 1969 ನಿಯಮಗಳು ಜಾರಿಯಲ್ಲಿರುತ್ತದೆ.<br><br>ಈ ನಿಯಮಗಳನ್ವಯ ನಿವೃತ್ತ ರಾಜ್ಯ ಸರ್ಕಾರಿ ನೌಕರರಿಗೆ |

| | | | | |
|---|---|---|---|---|
| | | | ಮಾನ್ಯ ಮುಖ್ಯಮಂತ್ರಿಯವರು ತಿಳಿಸಿದರು. | ರಾಜ್ಯದಲ್ಲಿರುವ ಸರ್ಕಾರಿ ಆಸ್ಪತ್ರೆಗಳಲ್ಲಿ ಉಚಿತ ವೈದ್ಯಕೀಯ ಚಿಕಿತ್ಸೆ ಪಡೆಯಲು ಅವಕಾಶವಿದೆ. ಆದರೆ, ವೈದ್ಯಕೀಯ ವೆಚ್ಚಗಳ ಮರುಪಾವತಿಗೆ ಅವಕಾಶವಿರುವುದಿಲ್ಲ.<br><br>ಜ್ಯೋತಿ ಸಂಜೀವಿನಿ ಯೋಜನೆಯನ್ನು ನಿವೃತ್ತ ರಾಜ್ಯ ಸರ್ಕಾರ ನೌಕರರಿಗೆ ವಿಸ್ತರಿಸುವ ಪ್ರಸ್ತಾವನೆಯನ್ನು ಸರ್ಕಾರವು ಪರಿಶೀಲಿಸಿ, ಅಂತಹ ಸೌಲಭ್ಯವನ್ನು ನಿವೃತ್ತ ಸರ್ಕಾರಿ ನೌಕರರಿಗೆ ವಿಸ್ತರಿಸದಿರಲು ನಿರ್ಧರಿಸಲಾಗಿದೆ. ಅದರಂತೆ, ಮಾನ್ಯ ಮುಖ್ಯಮಂತ್ರಿಯವರು ಮಾರ್ಚ್–2017ರಲ್ಲಿ ನಡೆದ ಅಧಿವೇಶನದಲ್ಲಿ ಕರ್ನಾಟಕ ವಿಧಾನ ಪರಿಷತ್ತಿನಲ್ಲಿ ಮಂಡಿಸಲಾಗಿದ್ದ ಪ್ರಶ್ನೆ ಸಂಖ್ಯೆ: 1248ಕ್ಕೆ ನೀಡಿದ ಉತ್ತರದಲ್ಲಿ ಸರ್ಕಾರದ ಈ ನಿಲುವನ್ನು ಸದನಕ್ಕೆ ತಿಳಿಸಲಾಗಿರುತ್ತದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಈ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |
| 3 | 5881<br>ಚು.ಗು.ಪ್ರ. 3639<br>ಶ್ರೀ ಅರುಣ ಶಹಾಪೂರ<br>ವಿ.ಪ.ನ.ದಿ: 26–11–2015 | ರಾಜ್ಯದಲ್ಲಿ ಖಾಲಿ ಇರುವ ಕೆ.ಎ.ಎಸ್. ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ | ಪ್ರತಿ ವರ್ಷವೂ ಈ ಹುದ್ದೆಗಳನ್ನು ಭರ್ತಿ ಮಾಡಬೇಕೆಂದು ಈಗಾಗಲೇ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಗೆ ಸೂಚನೆಯನ್ನು ನೀಡಿದ್ದೇನೆ. ಅದನ್ನು ಮಾಡುತ್ತೇವೆ ಎಂದು ಮಾನ್ಯ ಮುಖ್ಯಮಂತ್ರಿಯವರು ತಿಳಿಸಿದರು. | ದಿನಾಂಕ: 18.01.2019 ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ಗೆಜೆಟೆಡ್ ಪ್ರೋಬೆಷನರ್ಸ್ ಗ್ರೂಪ್–ಎ ಮತ್ತು ಗ್ರೂಪ್–ಬಿ ಹುದ್ದೆಗಳನ್ನು ಕರ್ನಾಟಕ ಲೋಕಸೇವಾ ಆಯೋಗಕ್ಕೆ ಈ ಕೆಳಕಂಡ ಸಾಲಿನಲ್ಲಿ ಬಿಡುಗಡೆ ಮಾಡಲಾಗಿದೆ.<br><br>2011 – : 362 ಹುದ್ದೆಗಳು (ಕೆ.ಎ.ಎಸ್. ಕಿರಿಯ ಶ್ರೇಣಿ – 20 ಹುದ್ದೆಗಳು)<br><br>2012 } ನೇಮಕಾತಿ ನಡೆದಿರುವುದಿಲ್ಲ<br>2013 |

| | | | | |
|---|---|---|---|---|
| | | | | 2014 – : 464 ಹುದ್ದೆಗಳು (ಕೆ.ಎ.ಎಸ್. ಕಿರಿಯ ಶ್ರೇಣಿ – 60 ಹುದ್ದೆಗಳು)<br>2015 – : 428 ಹುದ್ದೆಗಳು (ಕೆ.ಎ.ಎಸ್. ಕಿರಿಯ ಶ್ರೇಣಿ – 45 ಹುದ್ದೆಗಳು)<br><br>2015ನೇ ಸಾಲಿನ ಹುದ್ದೆಗಳನ್ನು 2016–17ನೇ ಸಾಲಿನ ಹುದ್ದೆಗಳೊಂದಿಗೆ ಸೇರಿಸಿಕೊಂಡು ಅಧಿಸೂಚನೆಯನ್ನು ದಿ: 12.05.2017 ರಂದು ಹೊರಡಿಸಲಾಗಿದೆ.<br><br>ಮುಂದುವರೆದು, 2018ರ ರಿಕ್ತ ಸ್ಥಾನಗಳನ್ನು ಕ್ರೋಢೀಕರಿಸಿ ಕರ್ನಾಟಕ ಲೋಕಸೇವಾ ಆಯೋಗಕ್ಕೆ ಕಳುಹಿಸುವ ಕ್ರಮ ಪ್ರಕ್ರಿಯೆಯಲ್ಲಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸಮಿತಿಯು ಈ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |

## ಉನ್ನತ ಶಿಕ್ಷಣ ಇಲಾಖೆ

| ಕ್ರಮ ಸಂಖ್ಯೆ | ಆಶ್ವಾಸನೆ ಸಂಖ್ಯೆ ಆಧಾರ ಮತ್ತು ದಿನಾಂಕ | ವಿಷಯ | ಆಶ್ವಾಸನೆ | ತೆಗೆದುಕೊಂಡ ಕ್ರಮ |
|---|---|---|---|---|
| 1. | 5475<br>ಚು.ಗು.ಪ್ರ: 2011<br>ಶ್ರೀ ಎಸ್.ವಿ. ಸಂಕನೂರ<br>ವಿಪನದಿ: 25.07.2014 | ರಾಜ್ಯದಲ್ಲಿರುವ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಖಾಲಿಯಿರುವ ಪ್ರಾಂಶುಪಾಲರ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ | ಪ್ರಸ್ತುತ ಸಾಲಿನಲ್ಲಿ ಪ್ರಾರಂಭಿಸಲಾದ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ ಅಗತ್ಯವಿರುವ ಅತಿಥಿ ಉಪನ್ಯಾಸಕರುಗಳನ್ನು ಆನ್‌ಲೈನ್ ಮುಖಾಂತರ ನಿಗಧಿತ ಮಾನದಂಡಗಳನ್ವಯ ಪಾರದರ್ಶಕವಾಗಿ ಆಯ್ಕೆ ಮಾಡಿಕೊಳ್ಳಲು ಕ್ರಮಕೈಗೊಳ್ಳಲಾಗುತ್ತಿದೆ. ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಖಾಲಿಯಿರುವ ಪ್ರಾಂಶುಪಾಲರ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ ಪರಿಶೀಲಿಸಲಾಗುತ್ತಿದೆ ಎಂದು ಮಾನ್ಯ ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರು ತಿಳಿಸಿದರು. | ದಿನಾಂಕ: 25.01.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ಇಲಾಖೆಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ 2014ರ ಕಾರ್ಯಭಾರಕ್ಕನುಗುಣವಾಗಿ ಖಾಲಿ ಇದ್ದ 2160 ಸಹಾಯಕ ಪ್ರಾಧ್ಯಾಪಕರ ಹುದ್ದೆಗಳನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಮೂಲಕ ಭರ್ತಿ ಮಾಡಲು ಕ್ರಮವಹಿಸಲಾಗಿದೆ. ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ಸ್ಪರ್ಧಾತ್ಮಕ ಪರೀಕ್ಷೆ ನಡೆಸಿ ಅಭ್ಯರ್ಥಿಗಳ ಅಂತಿಮ ಆಯ್ಕೆ ಪಟ್ಟಿಯನ್ನು ಸರ್ಕಾರಕ್ಕೆ ಸಲ್ಲಿಸಿದ್ದು, ಸರ್ಕಾರವು ಅಧಿಸೂಚನೆ ಸಂಖ್ಯೆ: ಇಡಿ/33/ಡಿಸಿಎ/201, ಒಟ್ಟು 2034 ಅರ್ಹ ಅಭ್ಯರ್ಥಿಗಳ ಅಂತಿಮ ಆಯ್ಕೆ ಪಟ್ಟಿಯನ್ನು ಪ್ರಕಟಿಸಿದೆ. ಸದರಿ ಅಧಿಸೂಚನೆಯಲ್ಲಿ ಆಯ್ಕೆಯಾದ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ನೀಡುವ ಕುರಿತು ಸಕ್ಷಮ ಪ್ರಾಧಿಕಾರಗಳಿಂದ ಅಗತ್ಯ ವರದಿಗಳನ್ನು ಪಡೆದು, ಅದರನ್ವಯ ಸರ್ಕಾರವು ವಿವಿಧ ದಿನಾಂಕಗಳಂದು ವಿವಿಧ ವಿಷಯಗಳಲ್ಲಿನ ಒಟ್ಟು 1925 ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ಹೊರಡಸಿದೆ. ಈ ಪೈಕಿ 317 ಅಭ್ಯರ್ಥಿಗಳಿಗೆ ಕನ್ನಡ ವಿಷಯದ ಸಹಾಯಕ ಪ್ರಾಧ್ಯಾಪಕರ ಹುದ್ದೆಗೆ ನೇಮಕಾತಿ ಆದೇಶ ಹೊರಡಿಸಲಾಗಿರುತ್ತದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |
| 2 | 6194<br>ಶ್ರೀ ಐವನ್ ಡಿಸೋಜಾ<br>ಶೂನ್ಯ ವೇಳೆ ಪ್ರಸ್ತಾಪ<br>ವಿಪನದಿ: 12.02.2015 | ರಾಜ್ಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಸಹಾಯಕ ಪ್ರಾಧ್ಯಾಪಕರ ಹುದ್ದೆ ನೇಮಕಾತಿಗೆ ಸ್ಪರ್ಧಾತ್ಮಕ ಪರೀಕ್ಷೆ ಮೂಲಕ ಭರ್ತಿ ಮಾಡಲು ಅರ್ಜಿ ಹಾಕಲು ಬಿಬಿಎಂ ಪದವಿ | ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ ಶಿಫಾರಸ್ಸಿನಂತೆ ಕೆಲವೊಂದು ವಿಷಯಗಳ ವಿದ್ಯಾರ್ಹತೆಯನ್ನು ಕೆಲವು ವಿಷಯಗಳಿಗೆ ಬೋಧನೆ ಮಾಡಲು ಸಮಾನಾಂತರ ವಿಷಯಗಳೆಂದು ಪರಿಗಣಿಸಿ ಸರ್ಕಾರ ಅಧಿಸೂಚನೆ | ದಿನಾಂಕ: 25.01.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ದಿನಾಂಕ: 12.02.2015ರ ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ/246/ಡಿಸಿಇ/2011ರ ಭಾಗ-3ರಲ್ಲಿ ಕೆಲವು ವಿಷಯಗಳನ್ನು ಕಾಲೇಜು ಶಿಕ್ಷಣ ಇಲಾಖೆಯ ಪದವಿ ಕಾಲೇಜುಗಳಲ್ಲಿ ಸಹಾಯಕ ಪ್ರಾಧ್ಯಾಪಕರಾಗಿ ನೇಮಕಾತಿ ಹೊಂದಲು ಸಮಾನಾಂತರ ವಿಷಯಗಳೆಂದು ಘೋಷಿಸಿದ್ದು, ಸದರಿ ಅಧಿಸೂಚನೆಯಲ್ಲಿ ಬಿ.ಕಾಂ/ಬಿ.ಬಿ.ಎಂ/ಬಿ.ಬಿ.ಎ ಪದವಿಯೊಂದಿಗೆ ಎಂ.ಕಾಂ. ಸ್ನಾತಕೋತ್ತರ ಪದವಿ ಪಡೆದವರು ವಾಣಿಜ್ಯ ಶಾಸ್ತ್ರ |

| | | | | |
|---|---|---|---|---|
| | | ಬಳಿಕ ಎಂ.ಕಾಂ. ಮಾಡಿದ ಅಭ್ಯರ್ಥಿಗಳು ನೂತನ ಆದೇಶದನ್ವಯ ಅರ್ಜಿ ಹಾಕುವಂತಿಲ್ಲದಿರುವುದರಿಂದ ಹಲವು ವಿದ್ಯಾರ್ಥಿಗಳಿಗೆ ಬಿಬಿಎಂ ಪದವಿ ಶಿಕ್ಷಣಕ್ಕೆ ಹಿನ್ನಡೆಯಾಗಿರುವ ಬಗ್ಗೆ | ದಿನಾಂಕ:16.05.2014ರಲ್ಲಿ ಆದೇಶಿಸಲಾಗಿದೆ.<br><br>ಅಧಿಸೂಚನೆಯಲ್ಲಿ ವಾಣಿಜ್ಯ ಮತ್ತು ನಿರ್ವಹಣಾಶಾಸ್ತ್ರ ನಿಗಧಿಪಡಿಸಲಾದ ವಿದ್ಯಾರ್ಹತೆಯನ್ನು ಪರಿಷ್ಕರಿಸಲು ಸ್ವೀಕೃತವಾದ ಬೇಡಿಕೆಗಳ ಹಿನ್ನಲೆಯಲ್ಲಿ ಈ ಕುರಿತು ಉನ್ನತ ಶಿಕ್ಷಣ ಪರಿಷತ್ತಿನ ಅಭಿಪ್ರಾಯಕ್ಕೆ ಕಳುಹಿಸಲಾಗಿದ್ದು ಪರಿಷತ್ತಿನಲ್ಲಿ ರಚಿಸಲಾದ ಸಮಿತಿಯ ಶಿಫಾರಸ್ಸಿನಂತೆ ಸರ್ಕಾರದಲ್ಲಿ ಪರಿಶೀಲಿಸಲಾಗುವುದು ಎಂದು ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರು ತಿಳಿಸಿದರು. | ಭೋದಿಸಲು ಹಾಗೂ ಬಿ.ಬಿ.ಎಂ/ಬಿ.ಬಿ.ಎ. ಮತ್ತು ಬಿ.ಕಾಂ. ಪದವಿಯೊಂದಿಗೆ ಎಂ.ಬಿ.ಎ/ಎಂ.ಕಾಂ ಸ್ನಾತಕೋತ್ತರ ಪದವಿ ಪಡೆದವರು ಮಾತ್ರ ಬಿ.ಬಿ.ಎ/ಬಿ.ಬಿ.ಎಂ. ವಿಷಯಗಳನ್ನು ಬೋಧಿಸಲು ಅರ್ಹರು ಎಂಬುದಾಗಿ ಆದೇಶಿಸಲಾಗಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |
| 3. | 6196 ಚು.ಗು.ಪ್ರ:1243 ಎಂ.ಆರ್. ಹುಲಿನಾಯ್ಕರ್ ವಿಪನದಿ: 13.02.2015 | ತುಮಕೂರು ವಿಶ್ವವಿದ್ಯಾಲಯದಲ್ಲಿ ಸಂಚಿತ ವೇತನ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ಬೋಧಕ/ಬೋಧಕೇತರರ ಸಮಸ್ಯೆ ಪರಿಹರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳ ಬಗ್ಗೆ. | ತುಮಕೂರು ವಿಶ್ವವಿದ್ಯಾಲಯದವರು ಪರಿನಿಯಮಗಳನ್ನು ರಚಿಸಿ ಸರ್ಕಾರಕ್ಕೆ ಸಲ್ಲಿಸಿದ್ದು, ಸರ್ಕಾರದ ಪರಿಶೀಲನೆಯಲ್ಲಿದೆ ಎಂದು ಮಾನ್ಯ ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರು ತಿಳಿಸಿದರು. | ದಿನಾಂಕ: 25.01.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚೆ ಚರ್ಚಿಸಿದಾಗ, ಸಿವಿಲ್ ಅಪೀಲ್ ಸಂಖ್ಯೆ: 3595–3612/1999ರ ಪ್ರಕರಣದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಸಂವಿಧಾನ ಪೀಠವು ದಿನಾಂಕ: 10.04.2006ರಂದು ನೀಡಿದ ತೀರ್ಪಿನಲ್ಲಿ ನಾಗರೀಕ ಸೇವೆಗೆ ನೇಮಕಾತಿ ಮಾಡಿಕೊಳ್ಳುವ ಬಗ್ಗೆ ಹಾಗೂ ದಿ: 01.07.1984ರ ನಂತರದಲ್ಲಿ ತೊಡಗಿಸಲಾದ ತಾತ್ಕಾಲಿಕ ನೌಕರರನ್ನು/ದಿನಗೂಲಿ ನೌಕರರನ್ನು ಸಕ್ರಮಗೊಳಿಸುವ ವಿಷಯವು ಸೇರಿದಂತೆ ಸಂಬಂಧಿತ ಇತರ ವಿಷಯಗಳ ಬಗ್ಗೆ ವಿಶದವಾಗಿ ಅವಲೋಕಿಸಿ ಕಾನೂನನ್ನು ಪ್ರಚುರಪಡಿಸಲಾಗಿದೆ. ಈ ತೀರ್ಪಿನ ತತ್ವವು ವಿಶ್ವವಿದ್ಯಾಲಯಗಳೂ ಸೇರಿದಂತೆ ರಾಜ್ಯದ ಎಲ್ಲಾ ಅಂಗಸಂಸ್ಥೆಗಳಿಗೂ ಅನ್ವಯವಾಗುತ್ತದೆ. ತದನುಸಾರ ಸಂವಿಧಾನಾತ್ಮಕ ಅಗತ್ಯತೆಗಳನ್ನು ಕಡೆಗಣಿಸಿ ಯಾವುದೇ ನೇಮಕಾತಿ ಮಾಡಿಕೊಳ್ಳಲು ಹಾಗೂ ಸಂವಿಧಾನಾತ್ಮಕ ವಿಧಾನಗಳಿಗೆ |

| | | | | |
|---|---|---|---|---|
| | | | | ಅನುಗುಣವಾಗಿ ನೇಮಕಗೊಳ್ಳದ ವ್ಯಕ್ತಿಗಳ ಸೇವೆಯನ್ನು ಸಕ್ರಮಗೊಳಿಸಲು ಅವಕಾಶವಿರುವುದಿಲ್ಲ.<br><br>ಸರ್ಕಾರದ ಇಲಾಖೆಗಳಲ್ಲಿ ಹಂಗಾಮಿಯಾಗಿ, ಸಾಂದರ್ಭಿಕವಾಗಿ ಕಾರ್ಯನಿರ್ವಹಿಸಲು ವಿವಿಧ ವಿಧಾನಗಳಲ್ಲಿ ವ್ಯಕ್ತಿಗಳ ಸೇವೆಯನ್ನು ಪಡೆಯಲಾಗುತ್ತದೆ. ಅಕುಶಲ ಅರೆಕಾಲಿಕ ನೌಕರರನ್ನು ಇಲಾಖೆಯ ಸಾದಿಲ್ವಾರು ಶೀರ್ಷಿಕೆಗೆ ಖರ್ಚು ಹಾಕಿ ನೇಮಕ ಮಾಡಲಾಗುತ್ತದೆ. ಸಂಚಿತ ವೇತನದ ಆಧಾರದ ಮೇಲೆ ಕೆಲವರ ಸೇವೆಯನ್ನು ಪಡೆಯಲಾಗುತ್ತದೆ. ಉದಾಹರಣೆಗೆ ಅರಣ್ಯ ಪ್ರೇರಕರು, ಗ್ರಾಮ ಸಹಾಯಕರು, ಗ್ರಂಥಾಲಯ ಮೇಲ್ವಿಚಾರಕರು ಮುಂತಾದವರು ಹೀಗೆ ಬೇರೆ ಬೇರೆ ರೀತಿಯಲ್ಲಿ ಹಂಗಾಮಿಯಾಗಿ ಸಾಂದರ್ಭಿಕವಾಗಿ ಕಾರ್ಯನಿರ್ವಹಿಸುತ್ತಿರುವ ವ್ಯಕ್ತಿಗಳಿದ್ದಾರೆ. ಅವರಲ್ಲಿ ಒಂದು ಗುಂಪಿನವರನ್ನು ಇನ್ನೊಂದು ಗುಂಪಿನವರೊಂದಿಗೆ ಸಮೀಕರಿಸುವುದು ಸೂಕ್ತವಲ್ಲ. ಪ್ರತಿ ವರ್ಗ/ಗುಂಪು ವಿಭಿನ್ನವಾಗಿದ್ದು, ಅವರನ್ನು ಹಾಗೇ ಗುರುತಿಸುವುದು ಸರಿಯಾದ ಕ್ರಮವಾಗಿರುತ್ತದೆ.<br><br>ದಿನಾಂಕ: 01.07.1984ರ ನಂತರ ತೊಡಗಿಸಲಾದ ದಿನಗೂಲಿ ನೌಕರರನ್ನು ಸಕ್ರಮಗೊಳಿಸುವ ಕುರಿತಂತೆ ಸಿವಿಲ್ ಅಪೀಲು ಸಂಖ್ಯೆ: 3595–3612/99 ಮತ್ತು ಸಿವಿಲ್ ಅಪೀಲು ಸಂಖ್ಯೆ: 181–2063/2001 ಮತ್ತಿತ್ತರ ಪ್ರಕರಣಗಳಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಸಂವಿಧಾನ ಪೀಠವು ದನಾಂಕ: 10.04.2006ರಂದು ನೀಡಿದ ತೀರ್ಪಿನ ಹಿನ್ನಲೆಯಲ್ಲಿ ದಿನಾಂಕ: 25.05.2006ರ ಸುತ್ತೋಲೆ ಸಂಖ್ಯೆ: ಸಿಆಸುಇ 25 ಸೇಸ್ಥ 2003 ಮತ್ತು ದಿ: 13.11.2006ರ ಸುತ್ತೋಲೆ ಸಂಖ್ಯೆ: ಸಿಆಸುಇ 25 ಸೇಸ್ಥಅ 2003 (ಭಾ)ಗಳನ್ನು ಹೊರಡಿಸಲಾಗಿದೆ. ಈ ಸುತ್ತೋಲೆಗಳಲ್ಲಿನ ಸೂಚನೆಗಳು ದಿನಗೂಲಿ ನೌಕರರ ಸೇವಾ ಸಕ್ರಮಾತಿಗೆ ಮಾತ್ರ ಅನ್ವಯವಾಗುತ್ತವೆ.<br><br>ಉಮಾದೇವಿ ಪ್ರಕರಣದ ತೀರ್ಪಿನ ಹಿನ್ನಲೆಯಲ್ಲಿ ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಲ್ಲಿ/ಸಂಸ್ಥೆಗಳಲ್ಲಿ ಹತ್ತು ವರ್ಷಗಳಿಗಿಂತ ಹೆಚ್ಚಿನ |

| | | | | |
|---|---|---|---|---|
| | | | | ಅವಧಿಯಿಂದ ಕಾರ್ಯನಿರ್ವಹಿಸುತ್ತಿರುವ ದಿನಗೂಲಿ ನೌಕರರಿಗೆ ಕ್ಷೇಮಾಭಿವೃದ್ಧಿ ಮತ್ತು ಸೇವಾವಧಿಯ ಕನಿಷ್ಠ ಭದ್ರತೆ, ಉತ್ತಮ ವೇತನ ಸಾಮಾಜಿಕ ಭದ್ರತೆಯನ್ನು ನೀಡುವುದಕ್ಕಾಗಿ ಜಾರಿಗೊಳಿಸಲಾಗಿರುವ ಕರ್ನಾಟಕ ದಿನಗೂಲಿ ನೌಕರರ ಕ್ಷೇಮಾಭಿವೃದ್ಧಿ ಅಧಿನಿಯಮ 2012ರನ್ವಯ ಈ ಅಧಿನಿಯಮದ ಪ್ರಾರಂಭದ ದಿನಾಂಕದಿಂದ ಒಂದು ವರ್ಷದ ಒಳಗಾಗಿ ಸರ್ಕಾರದಲ್ಲಿ ಅಥವಾ ಯಾವುದೇ ಸ್ಥಳೀಯ ನಿಕಾಯಗಳಲ್ಲಿನ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ಅರ್ಹ ದಿನಗೂಲಿ ನೌಕರರ ಹೆಸರುಗಳನ್ನು ಅಧಿಸೂಚಿಸತಕ್ಕದ್ದಾಗಿರುತ್ತದೆ. ಈ ರೀತಿ ಅಧಿಸೂಚನೆ ಹೊರಡಿಸುವಾಗ ದಿನಗೂಲಿ ನೌಕರರ ಹೆಸರುಗಳನ್ನು ಹೊರತುಪಡಿಸಿ ಇತರೆಯವರ ಅಂದರೆ, ಕಾರ್ಯಭೃತ ಸಿಬ್ಬಂದಿ, ಅರೆಕಾಲಿಕ ಸಿಬ್ಬಂದಿ, ಸಂಚಿತ ವೇತನದ/ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಹೊಂದಿದ ಸಿಬ್ಬಂದಿ, ಹೊರಗುತ್ತಿಗೆ ಆಧಾರದ ಮೇಲೆ ನೇಮಕಾತಿ ಹೊಂದಿದ ಸಿಬ್ಬಂದಿ ಮತ್ತು ತಾತ್ಕಾಲಿಕವಾಗಿ ನೇಮಕಾತಿ ಹೊಂದಿದ ಸಿಬ್ಬಂದಿಯ ಹೆಸರುಗಳನ್ನು ಸೇರಿಸಲು ಅವಕಾಶವಿರುವುದಿಲ್ಲ.<br><br>ಈ ಹಿನ್ನಲೆಯಲ್ಲಿ ತುಮಕೂರು ವಿಶ್ವವಿದ್ಯಾಲಯದಲ್ಲಿ ಸಂಚಿತ ವೇತನದಡಿ ಕಾರ್ಯನಿರ್ವಹಿಸುತ್ತಿರುವ 63 ನೌಕರರ ಸೇವೆಯನ್ನು ಸಕ್ರಮಗೊಳಿಸಲು ಅಥವಾ ಈ ನೌಕರರನ್ನು ಕರ್ನಾಟಕ ದಿನಗೂಲಿ ನೌಕರರ ಕ್ಷೇಮಾಭಿವೃದ್ಧಿ ಅಧಿನಿಯಮ 2012ರ ವ್ಯಾಪ್ತಿಗೆ ತರಲು ಸಾಧ್ಯವಾಗುವುದಿಲ್ಲ. ಆದರೆ, ತುಮಕೂರು ವಿಶ್ವವಿದ್ಯಾಲಯದ ಮಂಜೂರಾದ ಬೋಧಕೇತರ ಹುದ್ದೆಗಳ ಎದುರಿಗೆ ನೇಮಕಾತಿ ಹೊಂದಿ ಕಾರ್ಯನಿರ್ವಹಿಸುತ್ತಿರುವ ಹಂಗಾಮಿ ನೌಕರರಿಗೆ ರಾಜ್ಯ ಸರ್ಕಾರದ ವೇತನ ಶ್ರೇಣಿಯ ಸಂವಾದಿ ವೇತನದ ಕನಿಷ್ಠ ವೇತನವನ್ನು ರೂ.10/- ಗಳನ್ನು ಕಡಿತಗೊಳಿಸಿ ಸಂಚಿತ ವೇತನವನ್ನಾಗಿ ಪಾವತಿಸಲಾಗುತ್ತಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |

| | | | | |
|---|---|---|---|---|
| 4. | 6198<br>ಸಭಾಪತಿಯವರ ಅಪ್ಪಣೆಯ ಮೇರೆಗೆ ಶ್ರೀ ಗಣೇಶ್ ಕಾರ್ಣಿಕ್<br>ವಿಪನದಿ: 13.02.2015 | ಮಂಗಳೂರಿನ ಯಯ್ಯಾಡಿ ಬಳಿ ಇರುವ ಮಹಿಳಾ ಪಾಲಿಟೆಕ್ನಿಕ್ ಕಟ್ಟಡ ಸಂಪೂರ್ಣ ಶಿಥಿಲಗೊಂಡಿದ್ದು ಈ ಕಟ್ಟಡ ಹೊಸ ಕಟ್ಟಡ ನಿರ್ಮಾಣಕ್ಕೆ ಕ್ರಮ ಕೈಗೊಳ್ಳುವ ಬಗ್ಗೆ. | ತಕ್ಷಣ ಇದರ ಬಗ್ಗೆ ಕ್ರಮ ತೆಗೆದುಕೊಳ್ಳಲಾಗುತ್ತದೆ ಎಂದು ಮಾನ್ಯ ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರು ತಿಳಿಸಿದರು. | ದಿನಾಂಕ: 25.01.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿ ಚರ್ಚಿಸಿದಾಗ, ಸರ್ಕಾರದ ಆದೇಶ ಸಂಖ್ಯೆ: ಇಡಿ 43 ಹೆಚ್‌ಪಿಟಿ 2015, ದಿ: 21.07.2015ರಲ್ಲಿ 2015–16ನೇ ಸಾಲಿಗೆ ಲೆಕ್ಕಶೀರ್ಷಿಕೆ 4202–02–104–1–01–139–ಯಡಿ ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಮಂಗಳೂರು ಸಂಸ್ಥೆಯ ಮುಖ್ಯ ಕಟ್ಟಡವನ್ನು ರೂ. 800.00 ಲಕ್ಷಗಳ ಅಂದಾಜಿನಲ್ಲಿ ನಿರ್ಮಾಣ ಮಾಡಲು ಮಂಜೂರಾತಿ ನೀಡಿ, ಕಾಮಗಾರಿಯನ್ನು ನಿರ್ವಹಿಸಲು ಆದೇಶಿಸಲಾಗಿದ್ದು, 2015–16ನೇ ಸಾಲಿಗೆ ರೂ. 240.00 ಲಕ್ಷ, 2016–17ನೇ ಸಾಲಿಗೆ ರೂ. 50.00 ಲಕ್ಷ ಮತ್ತು 2017–18ನೇ ಸಾಲಿಗೆ ರೂ. 510.00 ಲಕ್ಷ ಹೀಗೆ ಒಟ್ಟು ರೂ.800.00 ಲಕ್ಷಗಳ ಪೂರ್ಣ ಅನುದಾನವನ್ನು ಬಿಡುಗಡೆ ಮಾಡಲಾಗಿದೆ.<br><br>ಪ್ರಸ್ತುತ ಕಾಮಗಾರಿಯು ಪೂರ್ಣಗೊಂಡಿದ್ದು, ದಿನಾಂಕ: 18.08.2018ರಂದು ಕಟ್ಟಡವನ್ನು ಹಸ್ತಾಂತರಿಸಲಾಗಿದೆ ತರಗತಿಗಳು ನೂತನ ಕಟ್ಟಡದಲ್ಲಿ ನಡೆಯುತ್ತಿವೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸಮಿತಿಯು ಭರವಸೆಯನ್ನು ಮುಕ್ತಾಯಗೊಳಿಸಿತು. |
| 5. | 6199<br>ಚು.ರ.ಪ್ರ. 1994<br>ಶ್ರೀ ಮರಿತಿಬ್ಬೇಗೌಡ<br>ವಿಪನದಿ:23.03.2015<br>(ಮಂಡನೆಯಾದ ಪ್ರಶ್ನೆ) | ಸರ್ಕಾರಿ ಇಂಜಿನಿಯರಿಂಗ್ ಹಾಗೂ ಪಾಲಿಟೆಕ್ನಿಕ್‌ಗಳಿಗೆ ಉಪಕರಣ, ಪುಸ್ತಕ, ಕಂಪ್ಯೂಟರ್, ಪೀಠೋಪಕರಣಗಳು ಹಾಗೂ ಇನ್ನಿತರ ಉಪಕರಣಗಳನ್ನು ಇಲಾಖೆಯು ಕೇಂದ್ರೀಕೃತ ಖರೀದಿಗಾಗಿ ಆರ್ಥಿಕ ವರ್ಷ (2012–13, 2013–14, 2014–15)ರಲ್ಲಿ ಪ್ರಕ್ಯೂರ್‌ಮೆಂಟ್ ಪ್ರಕ್ರಿಯೆ ನಡೆಸಿ ಸರಬರಾಜು ಆದೇಶ ನೀಡುವ ಬಗ್ಗೆ. | 10 ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳಿಗೆ 43 ಸರ್ಕಾರಿ ಪಾಲಿಟೆಕ್ನಿಕ್‌ಗಳಿಗೆ ಮತ್ತು ನಿರ್ದೇಶನಾಲಯ ಒಳಗೊಂಡಂತೆ ಒಟ್ಟು 920 ಡೆಸ್ಕ್‌ಟಾಪ್ ಕಂಪ್ಯೂಟರ್‌ಗಳನ್ನು ರೂ.38439440–00 ಮೊತ್ತದಲ್ಲಿ ಐದು ಕೆ.ವಿ.ಎ.ಯು.ಪಿ.ಎಸ್‌ಗಳನ್ನು ರೂ.7776405–00 ಮೊತ್ತದಲ್ಲಿ 40 (600 ವಿ.ಎ.) ಯು.ಪಿ.ಎಸ್‌ಗಳನ್ನು ರೂ.129776–00 ಮೊತ್ತದಲ್ಲಿ ಹಾಗೂ 83 ಲೇಸರ್ | ದಿನಾಂಕ: 25.01.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿ ಚರ್ಚಿಸಿದಾಗ, 10 ಸರ್ಕಾರಿ ಇಂಜನಿಯರಿಂಗ್ ಕಾಲೇಜುಗಳಿಗೆ ಮತ್ತು 43 ಸರ್ಕಾರಿ ಪಾಲಿಟೆಕ್ನಿಕ್‌ಗಳಿಗೆ ಮತ್ತು ನಿರ್ದೇಶನಾಲಯ ಒಳಗೊಂಡಂತೆ ಒಟ್ಟು 920 ಡೆಸ್ಕಟಾಪ್ ಕಂಪ್ಯೂಟರ್‌ಗಳನ್ನು ರೂ. 38439440–00 ಮೊತ್ತದಲ್ಲಿ, ಐದು ಕೆ.ವಿ.ಎ.ಯು.ಪಿ.ಎಸ್.ಗಳನ್ನು ರೂ.7776405–00 ಮೊತ್ತದಲ್ಲಿ 40 (600 ವಿ.ಎ) ಯು.ಪಿ.ಎಸ್.ಗಳನ್ನು ರೂ.129776–00 ಮೊತ್ತದಲ್ಲಿ ಹಾಗೂ 83 ಲೇಸರ್ ಪ್ರಿಂಟರ್‌ಗಳನ್ನು ರೂ.1033516–00 ಮೊತ್ತದಲ್ಲಿ ಖರೀದಿಸಲು ಹಾಗೂ 10 ಸರ್ಕಾರಿ ಇಂಜನಿಯರಿಂಗ್ ಕಾಲೇಜುಗಳಿಗೆ ರೂ.1,14.00.000–00 (ರೂ.ಒಂದು ಕೋಟಿ ಹದಿನಾಲ್ಕು ಲಕ್ಷಗಳ) ಮೊತ್ತದಲ್ಲಿ ಬಿ ಯೂನಿವರ್ಸಲ್ ಟೆಸ್ಟಿಂಗ್ ಮೆಷಿನ್ (ಯುಟಿಎಂ) ಮತ್ತು (ಆ) ಕಂಪ್ರೆಷನ್ ಟೆಸ್ಟಿಂಗ್ ಮಷಿನ್ (ಸಿಟಿಎಂ) ಖರೀದಿಸಲು ಮತ್ತು 20 ಸರ್ಕಾರಿ ಪಾಲಿಟೆಕ್ನಿಕ್‌ಗಳಿಗೆ ರೂ. 1,36,50,000–00 (ಒಂದು ಕೋಟಿ ಮೂವತ್ತಾರು ಲಕ್ಷದ ಐವತ್ತು |

| | | | | |
|---|---|---|---|---|
| | | | ಪ್ರಿಂಟರ್‌ಗಳನ್ನು ರೂ.1033516–00 ಮೊತ್ತದಲ್ಲಿ ಖರೀದಿಸಲು ಹಾಗೂ 10 ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳಿಗೆ ರೂ.11400000–00 (ಒಂದು ಕೋಟಿ ಹದಿನಾಲ್ಕು ಲಕ್ಷಗಳ) ಮೊತ್ತದಲ್ಲಿ (ಅ) ಯೂನಿವರ್ಸಲ್ ಟೆಸ್ಟಿಂಗ್ ಮೆಷಿನ್ (ಯು.ಟಿ.ಎಂ) ಮತ್ತು (ಆ) ಕಂಪ್ರಸೆನ್ ಟೆಸ್ಟಿಂಗ್ ಮಿಷನ್ (ಸಿ.ಟಿ.ಎಂ) ಖರೀದಿಸಲು ಮತ್ತು 20 ಸರ್ಕಾರಿ ಪಾಲಿಟೆಕ್ನಿಕ್‌ಗಳಿಗೆ ರೂ.13650000.00 (ಒಂದು ಕೋಟಿ ಮೂವತ್ತಾರು ಲಕ್ಷ ಐವತ್ತು ಸಾವಿರ ಮಾತ್ರ) ಮೊತ್ತದಲ್ಲಿ ಯೂನಿವರ್ಸಲ್ ಟೆಸ್ಟಿಂಗ್ ಮೆಷಿನ್ (ಯು.ಟಿ.ಎಂ) ಖರೀದಿಸಲು ಸರ್ಕಾರದ ಆದೇಶವನ್ನು ಕೋರಿ ಪ್ರಸ್ತಾವನೆ ಸಲ್ಲಿಸಿದ್ದು, ಈ ಪ್ರಸ್ತಾವನೆಯು ಸರ್ಕಾರದ ಹಂತದಲ್ಲಿ ಪರಿಶೀಲನೆಯಲ್ಲಿದೆ ಎಂದು ಮಾನ್ಯ ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರು ತಿಳಿಸಿದರು. | ಸಾವಿರ ಮಾತ್ರ) ಮೊತ್ತದಲ್ಲಿ ಯೂನಿವರ್ಸಲ್ ಟೆಸ್ಟಿಂಗ್ ಮಷಿನ್ (ಯುಂಟಿಎಂ) ಖರೀದಿಸಿ ಒದಗಿಸಲಾಗಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |
| 6. | 6200 ಚು.ರ.ಪ್ರ. 1992 ಶ್ರೀ ಮರಿತಿಬ್ಬೇಗೌಡ ವಿಪನದಿ:23.03.2015 (ಮಂಡನೆಯಾದ | ರಾಜ್ಯದಲ್ಲಿರುವ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಕಾರ್ಯ ನಿರ್ವಹಿಸುವ ಪ್ರಾಂಶುಪಾಲರು ಹಾಗೂ | ತಾಂತ್ರಿಕ ಶಿಕ್ಷಣ ಇಲಾಖೆಯಲ್ಲಿನ ಸರ್ಕಾರಿ ಇಂಜಿನಿಯರಿಂಗ್ ಸಂಸ್ಥೆಗಳಲ್ಲಿನ ಪ್ರಾಂಶುಪಾಲರು ಹಾಗೂ ಪ್ರಾಧ್ಯಾಪಕರುಗಳು ಗ್ರೂಪ್–ಎ ಅಧಿಕಾರಿಗಳಾಗಿದ್ದು | ದಿನಾಂಕ: 25.01.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿ ಚರ್ಚಿಸಿದಾಗ, ಎಐಸಿಟಿಇ 6ನೇ ಪರಿಷ್ಕೃತ ವೇತನ ಶ್ರೇಣಿ ಜಾರಿಗೆ ತಂದ ದಿ: 07.03.2011ರ ಸರ್ಕಾರದ ಆದೇಶದಲ್ಲಿ ಸರ್ಕಾರಿ ಇಂಜನಿಯರಿಂಗ್ ಕಾಲೇಜುಗಳ ಪ್ರಾಂಶುಪಾಲರ ವೇತನವನ್ನು ವೇತನ ಶ್ರೇಣಿ ರೂ.37.4000–67000ರಲ್ಲಿ ನಿಗಧಿಪಡಿಸಿ ಪ್ರಾಧ್ಯಾಪಕರುಗಳ ವೇತನವನ್ನು |

<table>
<tr>
<td></td>
<td>ಪ್ರಶ್ನೆ)</td>
<td>ಪ್ರಾಧ್ಯಾಪಕರುಗಳಿಗೆ ಇದುವರೆವಿಗೂ ವೇತನ ನಿಗದಿಗೊಳಿಸದಿರುವ ಬಗ್ಗೆ.</td>
<td>ಇವರಿಗೆ ಕೆ.ಸಿ.ಎಸ್.ಆರ್. ಹಾಗೂ ಪ್ರಸ್ತುತ ಚಾಲ್ತಿಯಲ್ಲಿರುವ 6ನೇ ಪರಿಷ್ಕೃತ ಎಐಸಿಟಿಇ ನಿಯಮಾನುಸಾರ ಕಾಲಕಾಲಕ್ಕೆ ಮಹಾಲೇಖಪಾಲರು, ಎ ಅಂಡ್ ಇ ಲೆಕ್ಕ ಪರಿಶೋಧನೆ–1 ಮತ್ತು 2, ಕರ್ನಾಟಕ ಬೆಂಗಳೂರು ಇವರಿಂದ ವೇತನ ಪಟ್ಟಿ ವಿತರಿಸುತ್ತಿದ್ದು ಅದರಂತೆ ಹೆಚ್‌ಆರ್‌ಎಂಎಸ್ ಮೂಲಕ ವೇತನವನ್ನು ಪಡೆಯುತ್ತಿರುತ್ತಾರೆ. ಕೆಲವು ಪ್ರಾಂಶುಪಾಲರು ಹಾಗೂ ಪ್ರಾಧ್ಯಾಪಕರು 6ನೇ ಎಐಸಿಟಿಇ ವೇತನ ಶ್ರೇಣಿಯಲ್ಲಿ ತಮಗೆ ತಾರತಮ್ಯ ನಿವಾರಿಸುವಂತೆ ಮನವಿಗಳನ್ನು ಸಲ್ಲಿಸಿದ್ದು, ಸದರಿ ಮನವಿಗಳನ್ನು ಪರಿಶೀಲಿಸಿ ಕ್ರಮಕೈಗೊಳ್ಳುವ ಬಗ್ಗೆ ಪರಿಶೀಲಿಸಲಾಗುತ್ತಿದೆ ಎಂದು ಮಾನ್ಯ ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರು ತಿಳಿಸಿದರು.</td>
<td>ಇದೇ ವೇತನ ಶ್ರೇಣಿಯಲ್ಲಿ ರೂ. 43.000/ಗಳಿಗೆ ಕಡಿಮೆ ಇಲ್ಲದಂತೆ ನಿಗದಿಪಡಿಸಲು ತಿಳಿಸಲಾಗಿದೆ. ಇದರಿಂದಾಗಿ ಪ್ರಾಂಶುಪಾಲರ ಹುದ್ದೆಗಿಂತ ಕೆಳಹಂತದ ವೃಂದವಾದ ಪ್ರಾಧ್ಯಾಪಕರುಗಳಿಗೆ ಹೆಚ್ಚಿನ ವೇತನವನ್ನು ನಿಗಧಿಪಡಿಸಿದಂತಾಗುತ್ತದೆ. ಆದಕಾರಣ, ಪ್ರಾಧ್ಯಾಪಕರುಗಳಿಗೆ ನಿಗಧಿಪಡಿಸುವ ವೇತನಕ್ಕಿಂತ ಕನಿಷ್ಠ ಮಟ್ಟದ ಹೆಚ್ಚಿನ ವೇತನವನ್ನು ನಿಗಧಿಪಡಿಸುವಂತೆ ಸರ್ಕಾರಿ ಇಂಜನಿಯರಿಂಗ್ ಕಾಲೇಜುಗಳು ಕೆಲವು ಪ್ರಾಚಾರ್ಯರ ಮನವಿಯಾಗಿರುತ್ತದೆ. ಇದು ಸರ್ಕಾರದ ಪರಿಶೀಲನೆಯಲ್ಲಿರುವಾಗ ಈ ವೇತನ ತಾರತಮ್ಯದ ಬಗ್ಗೆ ಎಐಸಿಟಿಇ, ನವದೆಹಲಿ, ಇವರ ಅಧಿಸೂಚನೆ ದಿನಾಂಕ: 04.01.2016ರಲ್ಲಿ ಪ್ರಾಂಶುಪಾಲರ ಹುದ್ದೆಯ ವೇತನವನ್ನು ನಿಗದಿಪಡಿಸುವ ಸಂಬಂಧ ಕೆಳಕಂಡಂತೆ ಸ್ಪಷ್ಟೀಕರಣ ನೀಡಿರುತ್ತದೆ.
<table>
<tr><th>SL. No.</th><th>Issue</th><th>Clarification</th></tr>
<tr><td>20</td><td>Anomaly between UGC and AICTE Regulations, 2010 from the minimum Pay for the directly recruited Principals in Degree Colleges/Polytechnic</td><td>In order to have uniformity of Pay Scale, the Committee recommends the following.<br><br>Principal (Degree):<br>Post of Principal in Degree level Technical Insitutions shall be in the PB-4 (i.e., Rs. 37,400-67,000) with AGP of Rs. 10,000 plus a Special allowance of Rs. 5,000 per month and shall be fixed at stage not below Rs. 43,000. All in service appropriately fixed in the PB-4 with AGP of Rs.10000.</td></tr>
</table>
</td>
</tr>
</table>

| | | | | |
|---|---|---|---|---|
| | | | | ಮೇಲಿನ ಎ.ಐ.ಸಿ.ಟಿ.ಇ. ಸ್ಪಷ್ಟೀಕರಣದಂತೆ ಪ್ರಾಂಶುಪಾಲರ ವೇತನವನ್ನು ನಿಗದಿಪಡಿಸುವ ಪ್ರಸ್ತಾವನೆಯನ್ನು ಪರಿಶೀಲಿಸಿ, ಆದೇಶ ಸಂಖ್ಯೆ : ಇಡಿ 96 ಡಿಟಿಇ 2010, ದಿ: 07.02.2017ರಲ್ಲಿ ಈ ಕೆಳಗಿನಂತೆ ಆದೇಶಿಸಿದೆ.<br><br>"Government agrees for fixation of pay of Principals of Engineering Colleges appointed on or after 01-01-2006 at a stage not below Rs. 43,000, notifications as per clarification contained in AICTE Notification Dated: 04.01.2016 with monitory benefit from prospective effect. The Principals of Engineering Colleges may also be granted te benefit of Special Allowance of Rs. 5,000/- per month in lieu of the existing Special Allowance of Rs.3,000/- per month from prospective effect".<br><br>ಮೇಲಿನ ಆದೇಶವನ್ನು ಸರ್ಕಾರಿ ಆದೇಶ ಸಂಖ್ಯೆ; ಇಡಿ 96 ಡಿಟಿಇ 2010, ದಿ: 05.06.2017ರಲ್ಲಿ ಪ್ರಾಂಶುಪಾಲರ ಹುದ್ದೆಗೆ ನೇಮಕಗೊಂಡ ದಿನಾಂಕದಿಂದ ವೇತನ ಶ್ರೇಣಿ ರೂ. 37,4000–67,000ರಲ್ಲಿ ರೂ. 43,000/–ಗಳಿಗೆ ಕಡಿಮೆ ಇಲ್ಲದಂತೆ ವೇತನ ನಿಗದಿಪಡಿಸಲು ಆದೇಶಿಸಿದೆ. ಅಲ್ಲದೆ ವಿಶೇಷ ಭತ್ಯೆಯನ್ನು ರೂ. 3,000 ರಿಂದ ರೂ. 5,000 ಗಳಿಗೆ ನಿಗದಿಪಡಿಸಿ ಆದೇಶಿಸಲಾಗಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |

| | | | | |
|---|---|---|---|---|
| 7. | 6201<br>ಚು.ರ.ಪ್ರ. 1968<br>ಶ್ರೀ ಎಸ್. ನಾಗರಾಜ್ (ಸಂದೇಶ್ ನಾಗರಾಜ್)<br>ವಿಪನದಿ:23.03.2015<br>(ಮಂಡನೆಯಾದ ಪ್ರಶ್ನೆ) | ಚಾಮರಾಜನಗರದಲ್ಲಿರುವ ಸರ್ಕಾರಿ ಪಾಲಿಟೆಕ್ನಿಕ್ ಕಟ್ಟಡ ಮತ್ತು ಬಾಲಕರ ವಸತಿ ನಿಲಯದ ದುರಸ್ಥಿ, ಮಹಿಳಾ ವಸತಿ ನಿಲಯದ ಕಾಂಪೌಂಡ್ ನಿರ್ಮಾಣ, ರಂಗಮಂದಿರ ನಿರ್ಮಾಣ, ಕಾಲೇಜು ಆವರಣದಲ್ಲಿ ಪಾರ್ಕ್ ನಿರ್ಮಾಣ ಮಾಡಲು ಕ್ರಮ ತೆಗೆದುಕೊಳ್ಳುವ ಬಗ್ಗೆ. | ಅನುದಾನದ ಲಭ್ಯತೆಯ ಆಧಾರ ಮೇಲೆ ಪರಿಶೀಲಿಸಲಾಗುತ್ತಿದೆ ಎಂದು ಮಾನ್ಯ ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರು ತಿಳಿಸಿದರು. | ದಿನಾಂಕ: 25.01.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚೆ ಚರ್ಚಿಸಿದಾಗ, ಎಂಹೆಚ್ಆರ್‌ಡಿ ವಿದ್ಯಾರ್ಥಿನಿಯರ ಮತ್ತು ಎಸ್‌ಟಿಪಿ/ಟಿಎಸ್‌ಪಿ ವಿದ್ಯಾರ್ಥಿಗಳ ವಸತಿ ನಿಲಯ ಕಟ್ಟಡ ನಿರ್ಮಾಣ;–<br>ಎಂ.ಹೆಚ್.ಆರ್.ಡಿ. ವತಿಯಿಂದ ಮಹಿಳಾ ವಿದ್ಯಾರ್ಥಿ ನಿಲಯವನ್ನು ರೂ. 100.00 ಲಕ್ಷಗಳ ಅಂದಾಜಿನಲ್ಲಿ ನಿರ್ಮಿಸಲಾಗಿದ್ದು, ಈಗಾಗಲೇ ರೂ.90.00 ಲಕ್ಷಗಳನ್ನು ಬಿಡುಗಡೆಗೊಳಿಸಲಾಗಿದೆ. ಕಾಮಗಾರಿಯು ಪೂರ್ಣಗೊಂಡಿರುತ್ತದೆ.<br><br>ಎಸ್.ಸಿ.ಪಿ/ಟಿ.ಎಸ್.ಪಿ ಯೋಜನೆಯಡಿ ರೂ.99.60 ಲಕ್ಷಗಳ ಅಂದಾಜಿನಲ್ಲಿ ವಿದ್ಯಾರ್ಥಿಗಳ ವಿದ್ಯಾರ್ಥಿ ನಿಲಯವನ್ನು ನಿರ್ಮಿಸಲಾಗಿದ್ದು, ಕಾಮಗಾರಿಯು ಪೂರ್ಣಗೊಂಡಿರುತದೆ.<br><br><u>ಹೆಚ್ಚುವರಿ ಕೊಠಡಿಗಳ ನಿರ್ಮಾಣ:</u><br><br>ರೂ. 95.72 ಲಕ್ಷಗಳಲ್ಲಿ ಹೆಚ್ಚುವರಿ ಕೊಠಡಿಗಳನ್ನು ನಿರ್ಮಿಸಲಾಗಿದ್ದು, ಕಾಮಗಾರಿಯು ಪೂರ್ಣಗೊಂಡಿರುತ್ತದೆ. ಮಹಿಳಾ ವಸತಿ ನಿಲಯದ ಕಾಂಪೌಂಡ್ ಗೋಡೆ, ಅಪ್ರೋಚ್ ರೋಡ್ ನಿರ್ಮಾಣ ಕಾಮಗಾರಿಗೆ ಅಂದಾಜು ಮೊತ್ತ ರೂ. 42.30 ಲಕ್ಷಗಳ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ನೀಡಿ ರೂ. 42.30 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ. ಕಾಮಗಾರಿಯು ಪ್ರಗತಿಯಲ್ಲಿದೆ. ಕಾಮಗಾರಿಯನ್ನು ಶೀಘ್ರವಾಗಿ ಪೂರ್ಣಗೊಳಿಸಬೇಕೆಂದು ಸೂಚಿಸಲಾಗಿದೆ.<br><br><u>ರಂಗಮಂದಿರ ಕಟ್ಟಡ ನಿರ್ಮಾಣ ಹಾಗೂ ಶೌಚಾಲಯ ಕಾಮಗಾರಿ:</u><br>ರಂಗಮಂದಿರ ಹಾಗೂ ಶೌಚಾಲಯ ಕಟ್ಟಡ ನಿರ್ಮಾಣ ಕಾಮಗಾರಿಗೆ ಅಂದಾಜು ಮೊತ್ತ ರೂ. 35.50 ಲಕ್ಷಗಳ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ನೀಡಿ ರೂ. 35.50 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ. ಕಾಮಗಾರಿ ಪ್ರಗತಿಯಲ್ಲಿದೆ. |

| | | | | |
|---|---|---|---|---|
| | | | | <u>ಮುಖ್ಯ ಕಟ್ಟಡ ದುರಸ್ತಿ ಮತ್ತು ನವೀಕರಣ ಕಾಮಗಾರಿ:</u><br><br>ಮುಖ್ಯ ಕಟ್ಟಡ ದುರಸ್ತಿ ಮತ್ತು ನವೀಕರಣ ಕಾಮಗಾರಿಗೆ ಅಂದಾಜು ಮೊತ್ತ ರೂ. 184.50 ಲಕ್ಷಗಳ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ನೀಡಿ, ರೂ. 184.50 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ. ಕಾಮಗಾರಿಯು ಪ್ರಗತಿಯಲ್ಲಿದೆ. ಕಾಮಗಾರಿಯನ್ನು ಶೀಘ್ರವಾಗಿ ಪೂರ್ಣಗೊಳಿಸಬೇಕೆಂದು ಸೂಚಿಸಲಾಗಿದೆ.<br><br><u>ವಿದ್ಯಾರ್ಥಿ ನಿಲಯ ಕಟ್ಟಡದ ದುರಸ್ಥಿ ಮತ್ತು ನವೀಕರಣ ಕಾಮಗಾರಿ:</u><br><br>ವಿದ್ಯಾರ್ಥಿ ನಿಲಯ ಕಟ್ಟಡದ ದುರಸ್ಥಿ ಮತ್ತು ನವೀಕರಣ ಕಾಮಗಾರಿಗೆ ಅಂದಾಜು ಮೊತ್ತ ರೂ. 120.70 ಲಕ್ಷಗಳ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ನೀಡಿ, ರೂ. 120.70 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ. ಕಾಮಗಾರಿಯನ್ನು ಶೀಘ್ರವಾಗಿ ಪೂರ್ಣಗೊಳಿಸಬೇಕೆಂದು ನಿರ್ಮಾಣ ಏಜೆನ್ಸಿಗೆ ಸೂಚಿಸಲಾಗಿತ್ತು. ಪ್ರಸ್ತುತ ನಿರ್ಮಾಣ ಏಜೆನ್ಸಿಯು ಸಿವಿಲ್ ಏಡ್, ಟೆಕ್ನೋ ಕ್ಲಿನಿಕ್, ಬೆಂಗಳೂರು ಇವರಿಂದ ಕಟ್ಟಡವನ್ನು ಮರು ಪರಿವೀಕ್ಷಣೆ ಮಾಡಿಸಿದ್ದು, ಕಟ್ಟಡವು ಹೆಚ್ಚಿನ ರೀತಿಯಲ್ಲಿ ಶಿಥಿಲಗೊಂಡಿರುವುದರಿಂದ ದುರಸ್ಥಿ ಮತ್ತು ನವೀಕರಣ ಕಾರ್ಯಕ್ಕೆ ತಗಲುವು ಅಂದಾಜು ವೆಚ್ಚವು ನೂತನ ನಿರ್ಮಾಣದ ಶೇ.80 ರಷ್ಟು ವೆಚ್ಚವಾಗುವುದರಿಂದ, ಅದರ ಬದಲಾಗಿ ಕಟ್ಟಡದ ಪ್ಲಿಂತ್ ಮೇಲ್ಭಾಗವನ್ನು ಪೂರ್ಣವಾಗಿ ಕೆಡವಿ ಹೊಸದಾಗಿ ನಿರ್ಮಾಣ ಮಾಡಲು ರೂ. 155.50 ಲಕ್ಷಗಳ ಅಂದಾಜು ಪಟ್ಟಿಯನ್ನು ಸಲ್ಲಿಸಿದ್ದು, ದಿ: 25.04.2018ರಲ್ಲಿ ಸದರಿ ಅಂದಾಜು ಪಟ್ಟಿಗೆ ಅನುಮೋದನೆಯನ್ನು ನೀಡಲಾಗಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |

| | | | | |
|---|---|---|---|---|
| 8. | 6202<br>ಸಭಾಪತಿಯವರ ಅನುಮತಿ ಮೇರೆಗೆ ಚರ್ಚೆ<br>ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ<br>ವಿಪನದಿ: 24.03.2015 | ಧಾರವಾಡ ನಗರದಲ್ಲಿ ಉನ್ನತ ಶಿಕ್ಷಣ ಅಕಾಡೆಮಿ ಕಳೆದ ಎರಡು ವರ್ಷಗಳಿಂದ ಪ್ರಾರಂಭಗೊಳ್ಳದಿರುವ ಬಗ್ಗೆ. | ಈ ಬಗ್ಗೆ ಸಚಿವ ಸಂಪುಟದ ಅನುಮೋದನೆ ದೊರೆತು 3 ತಿಂಗಳುಗಳಾಯಿತು. ಒಂದು ಬೃಹತ್ ಆಕಾರದ ಸಂಸ್ಥೆಯನ್ನು ಪ್ರಾರಂಭ ಮಾಡಬೇಕಾದರೆ ಮೂಲಭೂತ ಸೌಕರ್ಯಗಳಿಲ್ಲದೆ ಪ್ರಾರಂಭ ಮಾಡುವುದಕ್ಕಾಗುವುದಿಲ್ಲ. ಅಲ್ಲಿ ಮೂಲಭೂತ ಸೌಕರ್ಯಗಳನ್ನು ನಿರ್ಮಾಣ ಮಾಡಿ, ನಾವು ಪ್ರಾರಂಭ ಮಾಡಬೇಕಾಗುತ್ತದೆ. ಧಾರವಾಡ ವಿಶ್ವವಿದ್ಯಾನಿಲಯದ ಜೊತೆಯಲ್ಲಿ ಮಾತನಾಡಲಾಗಿದ್ದು, ಒಂದು ಕಟ್ಟಡವನ್ನು ಕೊಡುವುದಕ್ಕೆ ಕೇಳಲಾಗಿದೆ. ಜಮೀನನ್ನು ನಾವು ಕೇಳಿದ್ದೇವೆ. ಜಮೀನು ನಮಗೆ ಬಂದ ತಕ್ಷಣ ಪ್ರಾರಂಭ ಮಾಡುವುದಕ್ಕೆ ಕ್ರಮವನ್ನು ತೆಗೆದುಕೊಳ್ಳುತ್ತೇವೆ ಎಂದು ಮಾನ್ಯ ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರು ತಿಳಿಸಿದರು. | ದಿನಾಂಕ: 25.01.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚೆ ಚರ್ಚಿಸಿದಾಗ, ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ಹೊಸದಾಗಿ ಸೇವೆಗೆ ಸೇರುವ ಬೋಧಕ ಸಿಬ್ಬಂದಿಗೆ ಜಾಗತೀಕ ಗುಣಮಟ್ಟದ ತರಬೇತಿಯನ್ನು ನೀಡುವ, ಕೌಶಲ್ಯ/ಬೋಧನಾ ಸಾಮರ್ಥ್ಯವುಳ್ಳ ಅಧ್ಯಾಪಕರನ್ನು ರೂಪಿಸುವ ಸಂಬಂಧ, ಐ.ಎ.ಎಸ್ ಮತ್ತು ಐ.ಪಿ.ಎಸ್. ಅಕಾಡೆಮಿಗಳ ಮಾದರಿಯಲ್ಲಿ ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದ ಆವರಣದಲ್ಲಿ ಉನ್ನತ ಶಿಕ್ಷಣ ಅಕಾಡೆಮಿಯನ್ನು ಸ್ಥಾಪಿಸಲಾಗಿರುತ್ತದೆ.<br><br>ಪ್ರಸ್ತುತ ಉನ್ನತ ಶಿಕ್ಷಣ ಅಕಾಡೆಮಿಯನ್ನು ಕರ್ನಾಟಕ ವಿಶ್ವವಿದ್ಯಾಲಯದ ಸುವರ್ಣ ಮಹೋತ್ಸವದ ಕಟ್ಟಡದಲ್ಲಿ ಬಾಡಿಗೆ ಆಧಾರದ ಮೇಲೆ ನಡೆಸಲಾಗುತ್ತಿದ್ದು, ಇದುವರೆಗೆ ಒಟ್ಟು 1986 ಶಿಬಿರಾರ್ಥಿಗಳಿಗೆ ಬುನಾದಿ ತರಬೇತಿಗಳನ್ನು ಯಶಸ್ವಿಯಾಗಿ ಹಮ್ಮಿಕೊಳ್ಳಲಾಗಿರುತ್ತದೆ.<br><br>ಮುಂದುವರೆದು, ಉದ್ದೇಶಿತ ಕಾರ್ಯ ಯೋಜನೆಗೆ ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದ ಒಡೆತನದಲ್ಲಿರುವ 27 ಎಕರೆ ಜಮೀನನ್ನು 99 ವರ್ಷಗಳ ಗುತ್ತಿಗೆ ಆಧಾರದ ಮೇಲೆ ಪಡೆಯಲಾಗಿರುತ್ತದೆ ಹಾಗೂ ಉನ್ನತ ಶಿಕ್ಷಣ ಅಕಾಡೆಮಿಯ ಮೊದಲ ಹಂತದ ಮೂಲಸೌಕರ್ಯಗಳ ನಿರ್ಮಾಣ ಕಾಮಗಾರಿಗೆ ಸಂಬಂಧಿಸಿದ ರೂ. 90.00 ಕೋಟಿಗಳ ಪರಿಷ್ಕೃತ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ನೀಡಿ ಇಲ್ಲಿಯವರೆಗೆ ರೂ. 45,31,39,644/=ಗಳನ್ನು ಬಿಡುಗಡೆ ಮಾಡುವ ಮೂಲಕ ಕಾಮಗಾರಿಯನ್ನು ಕರ್ನಾಟಕ ಗೃಹ ಮಂಡಳಿಗೆ ವಹಿಸಲಾಗಿರುತ್ತದೆ. ಅದರಂತೆ, ಕರ್ನಾಟಕ ಗೃಹ ಮಂಡಳಿಯಿಂದ ಆಹ್ವಾನಿಸಲಾದ ಟೆಂಡರ್‌ನಲ್ಲಿ ಎಲ್–1 ಬಿಡ್‌ದಾರರಿಗೆ ಆಯ್ಕೆಯಾದ ಮೆ: ಅರುಣಾ ಕನ್‌ಸ್ಟ್ರಕ್ಷನ್ ಪ್ರೈವೇಟ್ ಲಿಮಿಟೆಡ್, ಇವರಿಗೆ ಉನ್ನತ ಶಿಕ್ಷಣ ಅಕಾಡೆಮಿಯ ಕಟ್ಟಡ ಮತ್ತು ಮೂಲಭೂತ ಸೌಕರ್ಯ ನಿರ್ಮಾಣ ಕಾಮಗಾರಿಯನ್ನು ರೂ. 69.97 ಕೋಟಿಗಳ ವೆಚ್ಚದಲ್ಲಿ ನಿರ್ವಹಿಸಲು ಅನುಮತಿ ನೀಡಲಾಗಿದ್ದು, ಪ್ರಸ್ತುತ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ |

| | | | | |
|---|---|---|---|---|
| | | | | ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸಮಿತಿಯು ಭರವಸೆಯನ್ನು ಮುಕ್ತಾಯಗೊಳಿಸಿತು. |
| 9. | 6203<br>ಗಮನ ಸೆಳೆಯುವ ಸೂಚನೆ<br>ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ<br>ವಿಪನದಿ: 24.03.2015 | ರಾಜ್ಯದ ಗ್ರಾಮೀಣ ಭಾಗದ ಬಡ ವಿದ್ಯಾರ್ಥಿಗಳಿಗೆ ಸಿ.ಇ.ಟಿ. ತರಬೇತಿಯನ್ನು ದೂರದರ್ಶನ ಚಂದನವಾಹಿನಿ ಅಥವಾ ಖಾಸಗಿ ಏಜನ್ಸಿಗಳ ಮೂಲಕ ನೀಡುವ ಬದಲು ಆಯಾ ಕಾಲೇಜುಗಳಲ್ಲಿನ ನುರಿತ ಬೋಧನಾ ಸಿಬ್ಬಂದಿಯವರಿಂದ ತರಬೇತಿ ನೀಡುವ ಕುರಿತು. | ಈ ಸಿ.ಇ.ಟಿ. ತರಬೇತಿ ಕಾರ್ಯಕ್ರಮವನ್ನು ರಾಜ್ಯದ ಎಲ್ಲಾ ಪದವಿ ಪೂರ್ವ ಕಾಲೇಜುಗಳಲ್ಲಿ ಏಕ ಕಾಲದಲ್ಲಿ ಒಂದೇ ಗುಣಮಟ್ಟದ ಉತ್ತಮ ಉಪನ್ಯಾಸವನ್ನು ದೂರಸಂಪರ್ಕ ಆಧಾರಿತ ತರಬೇತಿ ಕಾರ್ಯಕ್ರಮದ ಮುಖಾಂತರ ಉಪನ್ಯಾಸವನ್ನು ಕೊಡಿಸುವ ಕುರಿತು ಪರಿಶೀಲಿಸಲಾಗುತ್ತಿದೆ ಎಂದು ಮಾನ್ಯ ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರು ತಿಳಿಸಿದರು. | ದಿನಾಂಕ: 25.01.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿ ಚರ್ಚಿಸಿದಾಗ, ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ಸಿ.ಇ.ಟಿ. ನಿಯಮಗಳ ಅಡಿಯಲ್ಲಿ ನಡೆಸುವ ಯು.ಜಿ.ಸಿ/ಸಿ.ಇ.ಟಿ. ಪರೀಕ್ಷೆಗೆ ವಿದ್ಯಾರ್ಥಿಗಳು ಸಿ.ಇ.ಟಿ. ಪರೀಕ್ಷೆಯನ್ನು ಹೆಚ್ಚು ಆತ್ಮವಿಶ್ವಾಸದಿಂದ ಎದುರಿಸಲು ಅದರಲ್ಲೂ ಮುಖ್ಯವಾಗಿ ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಕಾರ್ಯಕ್ರಮವನ್ನು ಸಜ್ಜುಗೊಳಿಸಲು ಪ್ರತಿ ವರ್ಷ 2ನೇ ಪಿ.ಯು.ಸಿ. ಪರೀಕ್ಷೆ ನಂತರ 30 ದಿನಗಳು ದೂರದರ್ಶನದ ಚಂದನವಾಹಿನಿ ಮೂಲಕ ವಿಕಸನ ಎಂಬ ಕಾರ್ಯಕ್ರಮದ ಅಡಿಯಲ್ಲಿ ಗುಣಮಟ್ಟದ ಪಠ್ಯಕ್ರಮವನ್ನು ನುರಿತ ವಿಷಯ ತಜ್ಞರಿಂದ ತಯಾರಿಸಿ ಪ್ರತಿದಿನ ಬೆಳಿಗ್ಗೆ 1 ಗಂಟೆ ಮತ್ತು ಸಂಜೆ 1 ಗಂಟೆ ಅವಧಿಯಲ್ಲಿ ದೂರದರ್ಶನದ ಚಂದನವಾಹಿನಿ ಮೂಲಕ ಪ್ರಸಾರ ಮಾಡಲಾಗುತ್ತಿದೆ. ಇದನ್ನು 2014–15, 2015–16, 2016–17 ಮತ್ತು 2017–18ರಲ್ಲಿ ನಡೆಸಲಾಗಿತ್ತು. 2018–19ನೇ ಸಾಲಿನಲ್ಲಿ ಈ ಕಾರ್ಯಕ್ರಮವನ್ನು ನಡೆಸಿರುವುದಿಲ್ಲ.<br><br>2018–19ನೇ ಸಾಲಿನ ಆಯವ್ಯಯ ಘೋಷಣೆ ಕಂಡಿಕೆ 59 ರಲ್ಲಿ ಪದವಿ ಪೂರ್ವ ಮತ್ತು ಪದವಿ ತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ NEET/JEE ಸೇರಿದಂತೆ ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಉನ್ನತ ವ್ಯಾಸಂಗಕ್ಕೆ, ಉದ್ಯೋಗ ಪಡೆಯಲು ಅಗತ್ಯವಾದ ತರಬೇತಿಗಳನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ವತಿಯಿಂದ ಮಾಹಿತಿ ಸಂವಹನ ತಂತ್ರಜ್ಞಾನ (ICT)ಬಳಸಿ, ನೀಡುವುದಕ್ಕೆ ಸಂಬಂಧಿಸಿದಂತೆ, ಸದರಿ ಘೋಷಣೆಯನ್ನು ಕಾರ್ಯಗತಗೊಳಿಸಲು ಅಂದಾಜು ರೂ. 6.00 ಕೋಟಿಗಳ ವೆಚ್ಚದೊಂದಿಗೆ, ಸದರಿ ವೆಚ್ಚವನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಸಂಪನ್ಮೂಲದಿಂದ ಭರಿಸುವುದರೊಂದಿಗೆ, ಸದರಿ |

| | | | | |
|---|---|---|---|---|
| | | | | ಕಾರ್ಯಕ್ರಮವನ್ನು ಮೊದಲಿಗೆ 250 ಕಾಲೇಜುಗಳಲ್ಲಿ ಹಮ್ಮಿಕೊಳ್ಳಲು ಹಾಗೂ ಇದನ್ನು ಅನುಷ್ಠಾನಗೊಳಿಸುವ ವಿಧಿವಿಧಾನ ಮತ್ತು ಸಾಧಕ–ಭಾದಕಗಳ ಬಗ್ಗೆ ಪರಿಶೀಲಿಸಿ, ವರದಿ ನೀಡಲು ಒಂದು ಸ್ವಾಯತ್ತ ಏಜೆನ್ಸಿಯನ್ನು ನೇಮಿಸುವ ಪ್ರಸ್ತಾವನೆಯು ಪರಿಶೀಲನೆಯಲ್ಲಿರುತ್ತದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |
| 10. | 6212<br>ಚು.ಗು.ಪ್ರ: 1182<br>ಡಾ: ಜಯಮಾಲ ರಾಮಚಂದ್ರ<br>ವಿಪನದಿ: 10.07.2015 | ಬೆಳಗಾವಿಯ ದಕ್ಷಿಣ ಭಾಗಕ್ಕೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಮಂಜೂರಾತಿ ನೀಡುವ ಬಗ್ಗೆ. | ಶಹಪುರ, ವಡಗಾವ್, ಖಾಸಭಾಗ್ ಈ ಭಾಗಗಳಲ್ಲಿ ನೇಕಾರರು, ಬಡವರು ಹೆಚ್ಚಿನದಾಗಿ ವಾಸ ಮಾಡುತ್ತಾರೆ. ಆ ಭಾಗದಲ್ಲಿ ಕಾಲೇಜಿನ ಅವಶ್ಯಕತೆ ಇದೆ. ಅವರು ಏನು ಪ್ರಸ್ತಾಪ ಮಾಡಿದ್ದಾರೆ ಅದನ್ನು ಸರ್ಕಾರ ಪ್ರಧಾನ್ಯತೆ ಮೇರೆಗೆ ಹಾಗೂ ಅನುದಾನದ ಲಭ್ಯತೆ ಮೇರೆಗೆ ಪರಿಗಣಿಸುತ್ತೇನೆಂದು ಮಾನ್ಯ ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರು ತಿಳಿಸಿದರು. | ದಿನಾಂಕ: 25.01.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿ ಚರ್ಚಿಸಿದಾಗ, ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ 414 ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ ಇತ್ತೀಚಿನ ವಿದ್ಯಾರ್ಥಿಗಳ ಸಂಖ್ಯೆಗನುಗುಣವಾಗಿ ಕೊರತೆ ಇರುವ ಮೂಲಭೂತ ಸೌಕರ್ಯ ಒದಗಿಸಲು, ಬೋಧಕ ಮತ್ತು ಬೋಧಕೇತರ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮವಹಿಸಲಾಗುತ್ತಿದೆ.<br><br>ಬೆಳಗಾವಿ ದಕ್ಷಿಣ ಮತಕ್ಷೇತ್ರದ ವಡಗಾವಿಯಿಂದ 16/18 ಕಿ.ಮೀ. ಅಂತರದಲ್ಲಿ ಈಗಾಗಲೇ 01 ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಮತ್ತು 09 ಖಾಸಗಿ ಅನುದಾನಿತ ಕಾಲೇಜುಗಳು ಕಾರ್ಯನಿರ್ವಹಿಸುತ್ತಿವೆ. ಆದ್ದರಿಂದ, ಪ್ರಸ್ತುತ ಬೆಳಗಾವಿ ದಕ್ಷಿಣ ಭಾಗದಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಪ್ರಾರಂಭಿಸುವ ಅವಶ್ಯಕತೆ ಇರುವುದಿಲ್ಲ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |
| 11. | 6213<br>ಚು.ರ.ಪ್ರ: 1194<br>ಶ್ರೀ ಮರಿತಿಬ್ಬೇಗೌಡ<br>ವಿಪನದಿ: 10.07.2015<br><br>& | ಸರ್ಕಾರಿ ಹಾಗೂ ಅನುದಾನಿತ ಪ್ರಥಮ ದರ್ಜೆ ಕಾಲೇಜು ಬಿ.ಇಡಿ., ಇಂಜಿನಿಯರಿಂಗ್ ಕಾಲೇಜುಗಳ ಬೋಧಕ ಸಿಬ್ಬಂದಿಗೆ ಪರಿಷ್ಕೃತ 6ನೇ ಯು.ಜಿ.ಸಿ ಹಾಗೂ ಎಐಸಿಟಿಇ ವೇತನ ಬಾಕಿ | 2015–16ನೇ ಸಾಲಿನ ಆಯವ್ಯಯದಲ್ಲಿ ಸದರಿ ಬಾಕಿ ವೇತನ ಬಿಡುಗಡೆಗಾಗಿ ರೂ.150.00 ಕೋಟಿಗಳನ್ನು ಒದಗಿಸಲಾಗಿದೆ ಹಾಗೂ ಪೂರಕ ಅಂದಾಜಿನಲ್ಲಿ ಹೆಚ್ಚಿನ ಹಣ ಬಿಡುಗಡೆಗೊಳಿಸಲು ಕ್ರಮ ಕೈಗೊಳ್ಳಲಾಗುವುದೆಂದು ಮಾನ್ಯ | ದಿನಾಂಕ: 25.01.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿ ಚರ್ಚಿಸಿದಾಗ, ಯು.ಜಿ.ಸಿ. ಬಾಕಿ ವೇತನವನ್ನು ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು 80:20 ಅನುಪಾತದಲ್ಲಿ ಭರಿಸಬೇಕಾಗಿರುತ್ತದೆ.<br><br>ಪರಿಷ್ಕೃತ 6ನೇ ವೇತನದಿಂದ ಉಂಟಾಗುವ ಯು.ಜಿ.ಸಿ.ಯ ಬೇಬಾಕಿಯನ್ನು ರಾಜ್ಯದ ಸರ್ಕಾರಿ, ಅನುದಾನಿತ ಕಾಲೇಜುಗಳು ಮತ್ತು ವಿಶ್ವವಿದ್ಯಾಲಯಗಳ ಸಿಬ್ಬಂದಿಗಳಿಗೆ ರೂ.1086.00 ಕೋಟಿಗಳನ್ನು ಇದುವರೆವಿಗೂ ಬಿಡುಗಡೆ ಮಾಡಲಾಗಿರುತ್ತದೆ. |

| | | | | |
|---|---|---|---|---|
| | | ನೀಡಲು ಸರ್ಕಾರದ ಕ್ರಮದ ಕುರಿತು. | ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರು ತಿಳಿಸಿದರು. | ರಾಜ್ಯ ಸರ್ಕಾರವು ಬಿಡುಗಡೆ ಮಾಡಿರುವ ಬೇಬಾಕಿ ಮೊತ್ತವನ್ನು ಮರು ಪಾವತಿಸುವಂತೆ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದ್ದು, ಕೇಂದ್ರ ಸರ್ಕಾರದಿಂದ ಮರುಪಾವತಿಯಾದ ನಂತರ ಅರ್ಹ ಸಿಬ್ಬಂದಿಗಳಿಗೆ ಬಾಕಿ ಮೊತ್ತವನ್ನು ಬಿಡುಗಡೆ ಮಾಡಲಾಗುವುದು ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |
| 12. | 5507<br>ಚು.ಗು.ಪ್ರ: 2658<br>ಶ್ರೀ ಬಸವರಾಜ ಹೊರಟ್ಟಿ<br>ವಿಪನದಿ: 26.11.2015<br>& | ರಾಜ್ಯದಲ್ಲಿ ಪ್ರಥಮ ದರ್ಜೆ ಸರ್ಕಾರಿ ಹಾಗೂ ಅನುದಾನಿತ ಕಾಲೇಜುಗಳಿಗೆ ಮತ್ತು ವಿಶ್ವವಿದ್ಯಾಲಯಗಳ ಶಿಕ್ಷಕರುಗಳಿಗೆ ಯು.ಜಿ.ಸಿ. ವೇತನದ ಬಾಕಿ ಮೊತ್ತವನ್ನು ಉಳಿಸಿಕೊಂಡಿರುವ ಬಗ್ಗೆ. | 2015–16ನೇ ಸಾಲಿನಲ್ಲಿ ಬಾಕಿ ವೇತನವನ್ನು ಪಾವತಿಸುವ ಸಂಬಂಧ ಬಿಡುಗಡೆಗೊಳಿಸಲು ಕ್ರಮವಹಿಸಲಾಗುತ್ತಿದೆ. ಕೇಂದ್ರ ಸರ್ಕಾರಕ್ಕೆ ಪತ್ರ ಬರೆದು ಬಾಕಿ ಮೊತ್ತವನ್ನು ಬಿಡುಗಡೆ ಮಾಡಬೇಕೆಂದು ಸಹ ಕೋರಲಾಗಿದೆ. ಈ ಮೊತ್ತವನ್ನು ಬಿಡುಗಡೆ ಮಾಡಿದ ಕೂಡಲೇ ಅರ್ಹ ಶಿಕ್ಷಕರುಗಳಿಗೆ ನೀಡಲು ಕ್ರಮ ಕೈಗೊಳ್ಳಲಾಗುವುದು ಎಂದು ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಉನ್ನತ ಶಿಕ್ಷಣ ಸಚಿವರು ತಿಳಿಸಿದರು. | |
| 13. | 6206<br>ಚು.ಗು.ಪ್ರ. 2658<br>ಶ್ರೀ ಬಸವರಾಜ ಹೊರಟ್ಟಿ<br>ವಿಪನದಿ: 26.11.2015 | ರಾಜ್ಯದಲ್ಲಿ ಪ್ರಥಮ ದರ್ಜೆ ಸರ್ಕಾರಿ ಹಾಗೂ ಅನುದಾನಿತ ಕಾಲೇಜುಗಳಿಗೆ ಮತ್ತು ವಿಶ್ವವಿದ್ಯಾಲಯಗಳ ಶಿಕ್ಷಕರುಗಳಿಗೆ ಯು.ಜಿ.ಸಿ. ವೇತನದ ಬಾಕಿ ಮೊತ್ತವನ್ನು ಉಳಿಸಿಕೊಂಡಿರುವ ಬಗ್ಗೆ. | 2015–16ನೇ ಸಾಲಿನಲ್ಲಿ ಬಾಕಿ ವೇತನವನ್ನು ಪಾವತಿಸುವ ಸಂಬಂಧ ಬಿಡುಗಡೆಗೊಳಿಸಲು ಕ್ರಮವಹಿಸಲಾಗುತ್ತಿದೆ. ಕೇಂದ್ರ ಸರ್ಕಾರಕ್ಕೆ ಪತ್ರ ಬರೆದು ಬಾಕಿ ಮೊತ್ತವನ್ನು ಬಿಡುಗಡೆ ಮಾಡಬೇಕೆಂದು ಸಹ ಕೋರಲಾಗಿದೆ. ಈ ಮೊತ್ತವನ್ನು ಬಿಡುಗಡೆ ಮಾಡಿದ ಕೂಡಲೇ | |

| | | | | |
|---|---|---|---|---|
| | | | ಅರ್ಹ ಶಿಕ್ಷಕರುಗಳಿಗೆ ನೀಡಲು ಕ್ರಮ ಕೈಗೊಳ್ಳಲಾಗುವುದು ಎಂದು ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಉನ್ನತ ಶಿಕ್ಷಣ ಸಚಿವರು ತಿಳಿಸಿದರು. | |
| 14<br><br><br><br><br><br><br><br><br><br>15. | 6209<br>ಚು.ರ.ಪ್ರ. 3613<br>ಶ್ರೀ ಅಬ್ದುಲ್ ಜಬ್ಬಾರ್<br>ವಿಪನದಿ: 26.11.2015<br><br><br><br>&<br><br><br>6217<br>ಚು.ರ.ಪ್ರ: 1248<br>ಶ್ರೀ ಕೆ.ಅಬ್ದುಲ್ ಜಬ್ಬಾರ್<br>ವಿಪನದಿ: 10.07.2015 | ದಾವಣಗೆರೆ ವಿಶ್ವವಿದ್ಯಾಲಯದಲ್ಲಿ ಖಾಲಿ ಇರುವ ಉಪನ್ಯಾಸಕರ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮದ ಬಗ್ಗೆ.<br><br><br><br><br><br>ದಾವಣಗೆರೆ ವಿಶ್ವವಿದ್ಯಾಲಯದಲ್ಲಿ ಖಾಲಿ ಇರುವ ಉಪನ್ಯಾಸಕರ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮದ ಬಗ್ಗೆ. | ದಾವಣಗೆರೆ ವಿಶ್ವವಿದ್ಯಾಲಯದ ಬೋಧಕ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರಕ್ಕೆ ಪ್ರಸ್ತಾವನೆ ಸ್ವೀಕೃತವಾಗಿದ್ದು, ಪ್ರಸ್ತುತ ಸರ್ಕಾರದ ಪರಿಶೀಲನೆಯಲ್ಲಿದೆ ಎಂದು ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಉನ್ನತ ಶಿಕ್ಷಣ ಸಚಿವರು ತಿಳಿಸಿದರು.<br><br><br>ದಾವಣಗೆರೆ ವಿಶ್ವವಿದ್ಯಾಲಯದಲ್ಲಿ ಒಟ್ಟು 181 ಬೋಧಕ ಸಿಬ್ಬಂದಿಗಳ ಮಂಜೂರಾತಿಗಾಗಿ ಪ್ರಸ್ತಾವನೆ ಯನ್ನು ಸರ್ಕಾರಕ್ಕೆ ಸಲ್ಲಿಸಿದ್ದು, ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ ಎಂದು ಮಾನ್ಯ ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರು ತಿಳಿಸಿದರು. | ದಿನಾಂಕ: 06.05.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿ ಚರ್ಚಿಸಿದಾಗ, ಸರ್ಕಾರದ ಪತ್ರ ಸಂ. 36 ಯುಎನ್ಇ 2017, ದಿನಾಂಕ: 30.01.2018ರಲ್ಲಿ ದಾವಣಗೆರೆ ವಿಶ್ವವಿದ್ಯಾಲಯದಲ್ಲಿ ಖಾಲಿ ಇರುವ 125 ಬೋಧಕ ಹಾಗೂ 13 ಬೋಧಕೇತರ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಸರ್ಕಾರವು ಅನುಮತಿಸಿದೆ. ಆದರೆ, ನೇರ ನೇಮಕಾತಿಯಲ್ಲಿ ಯು.ಜಿ.ಸಿ. ಮಾರ್ಗಸೂಚಿ/ಮಾನದಂಡಗಳಿಗೆ ವ್ಯತಿರಿಕ್ತವಾಗಿ ನೇಮಕಾತಿ ಪ್ರಕ್ರಿಯೆ ಜರುಗಿಸಿರುವ ಬಗ್ಗೆ ದೂರುಗಳು ಸ್ವೀಕೃತವಾದ ಕಾರಣ, ದಿನಾಂಕ: 05.11.2018ರ ಸುತ್ತೋಲೆಯಲ್ಲಿ ತಾತ್ಕಾಲಿಕವಾಗಿ ನೇಮಕಾತಿ ಪ್ರಕ್ರಿಯೆ ಸ್ಥಗಿತಗೊಳಿಸಲು ತಿಳಿಸಲಾಗಿದೆ.<br><br>ನೇಮಕಾತಿ ಪ್ರಕ್ರಿಯೆಯಲ್ಲಿನ ಅಕ್ರಮಗಳ ಬಗ್ಗೆ ಕೂಲಂಕಷವಾಗಿ ತನಿಖೆ ನಡೆಸಲು ದಿನಾಂಕ: 04.12.2018ರ ಆದೇಶದಲ್ಲಿ ಶಿಕ್ಷಣ ತಜ್ಞರ/ಅಧಿಕಾರಿಗಳ ಸಮಿತಿಯನ್ನು ರಚಿಸಲಾಗಿತ್ತು. ಸದರಿ ಸಮಿತಿಯು ಸರ್ಕಾರಕ್ಕೆ ಸಲ್ಲಿಸಿದ ವರದಿಯನ್ನು ಪರಿಶೀಲಿಸಿ, ದಾವಣಗೆರೆ ವಿಶ್ವವಿದ್ಯಾಲಯದಲ್ಲಿ ಅಧಿಸೂಚಿಸಲಾದ ಹುದ್ದೆಗಳಿಗೆ ಪರೀಕ್ಷೆ ನಡೆಸಿ, 1:3 ಪ್ರಕಾರ ಪ್ರಕಟಿಸಿರುವ ಆಯ್ಕೆ ಪಟ್ಟಿಯನ್ನು ಯುಜಿಸಿ ಹಾಗೂ ದಿನಾಂಕ: 17.07.2017ರ ಸುತ್ತೋಲೆಯಲ್ಲಿನ ಮಾರ್ಗಸೂಚಿಯಂತೆ ಪಾರದರ್ಶಕವಾಗಿ ವಿಡಿಯೋ ಮಾಡುವ ಮೂಲಕ ಸಂದರ್ಶನ ನಡೆಸಿ ನೇಮಕಾತಿ ಪ್ರಕ್ರಿಯೆಯನ್ನು ಮುಂದುವರೆಸುವಂತೆ ಸರ್ಕಾರದ ಆದೇಶ ಸಂ. ಇಡಿ 21 ಯುಎನ್ಇ 2019, ದಿನಾಂಕ: 08.03.2019ರಲ್ಲಿ ತಿಳಿಸಲಾಗಿತ್ತು. ಈ ಮಧ್ಯೆ, ಲೋಕಸಭಾ ಚುನಾವಣೆಯ ನೀತಿ ಸಂಹಿತೆ ಜಾರಿಯಾದ ಹಿನ್ನೆಲೆಯಲ್ಲಿ, ನೀತಿ ಸಂಹಿತೆ ಮುಕ್ತಾಯಗೊಳ್ಳುವವರೆಗೆ ನೇಮಕಾತಿ ಪ್ರಕ್ರಿಯೆಯನ್ನು ತಡೆಹಿಡಿಯುವಂತೆ ಸೂಚಿಸಲಾಗಿದೆ. |

| | | | | |
|---|---|---|---|---|
| | | | | ಚುನಾವಣಾ ನೀತಿ ಸಂಹಿತೆಯು ಮುಕ್ತಾಯಗೊಂಡ ನಂತರ ನೇಮಕಾತಿ ಪ್ರಕ್ರಿಯೆಯನ್ನು ಮುಂದುವರೆಸುವಂತೆ ಸೂಚಿಸಲಾಗುವುದು ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಸಮಿತಿಯು ಒಪ್ಪಿ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |
| 16 | 6218<br>ಚು.ರ.ಪ್ರ: 1207<br>ಶ್ರೀ ಆರ್.ಚೌಡರೆಡ್ಡಿ ತೂಪಲ್ಲಿ<br>ವಿಪನದಿ: 10.07.2015 | ಖಾಲಿ ಇರುವ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಕೈಗೊಂಡ ಕ್ರಮಗಳ ಬಗ್ಗೆ. | ಕಾಲೇಜು ಶಿಕ್ಷಣ ಇಲಾಖೆಯಡಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿನ ಪ್ರಾಂಶುಪಾಲರು ಗ್ರೇಡ್–1 ಹುದ್ದೆಯ ನೇಮಕಾತಿ ಯನ್ನೊಳಗೊಂಡಂತೆ ಸರ್ಕಾರಿ ಅಧಿಸೂಚನೆ ಸಂಖ್ಯೆ:ಇಡಿ 91 ಡಿಸಿಇ 2004 ದಿನಾಂಕ: 25.09.2009ರಲ್ಲಿ ವೃಂದ ಮತ್ತು ನೇಮಕಾತಿ ನಿಯಮಗಳನ್ನು ರೂಪಿಸಲಾಗಿರುತ್ತದೆ ಮತ್ತು ಯುಜಿಸಿ ಮಾರ್ಗಸೂಚಿಗಳನ್ವಯ ಸರ್ಕಾರದ ಆದೇಶ ಸಂಖ್ಯೆ:ಇಡಿ 37 ಯುಎನ್ಇ 2009 ದಿನಾಂಕ: 24.12.2009ರ ಆದೇಶವನ್ನು ಹೊರಡಿಸಲಾಗಿದೆ. ಅದಾಗ್ಯೂ ಪ್ರಾಂಶುಪಾಲರ ಹುದ್ದೆಗಳನ್ನು ಬಡ್ತಿ ಮೂಲಕ ಭರ್ತಿ ಮಾಡುವ ಬಗ್ಗೆ ಪುನರ್ ಪರಿಶೀಲಿಸಲಾಗುತ್ತಿದೆ. ಪ್ರಾಂಶುಪಾಲರ ಹುದ್ದೆಗಳನ್ನು ನೇರ ನೇಮಕಾತಿಯಿಂದ ಭರ್ತಿ ಮಾಡುವ ಸಂಬಂಧ ನಿಯಮಗಳನ್ನು ರೂಪಿಸಲಾಗುತ್ತಿದ್ದು, ಪೂರ್ಣವಾದ ನಂತರ ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುವುದು ಎಂದು ಮಾನ್ಯ ಉನ್ನತ ಶಿಕ್ಷಣ ಮತ್ತು | ದಿನಾಂಕ: 06.05.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿ ಚರ್ಚಿಸಿದಾಗ, ಕಾಲೇಜು ಶಿಕ್ಷಣ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ಪ್ರಾಂಶುಪಾಲರ ಹುದ್ದೆಗಳನ್ನು ಯು.ಜಿ.ಸಿ. ನಿಯಮಾವಳಿಗಳಂತೆ ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಅವಕಾಶವಿರುತ್ತದೆ. ಅದರಂತೆ ಪ್ರಾಂಶುಪಾಲರ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡುವ ಸಂಬಂಧ ದಿನಾಂಕ:20.08.2018ರ ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ/121/ಡಿಸಿಇ/2018ರಲ್ಲಿ ಕರಡು ನಿಯಮಗಳನ್ನು ಪ್ರಕಟಿಸಲಾಗಿದೆ. ಸದರಿ ಕರಡು ನಿಯಮಗಳಿಗೆ ಬಂದಿರುವ ಆಕ್ಷೇಪಣೆ/ಸಲಹೆಗಳನ್ನು ನಿಯಮಾನುಸಾರ ಪರಿಶೀಲಿಸಿ ಅಂತಿಮಗೊಳಿಸಿರುವ ನಿಯಮಗಳನ್ನು ಹೊರಡಿಸುವ ಮುನ್ನ ಸಚಿವ ಸಂಪುಟದ ಅನುಮೋದನೆಯನ್ನು ಪಡೆಯಲು ಕ್ರಮ ಕೈಗೊಳ್ಳಲಾಗುತ್ತಿದೆ. ಸಚಿವ ಸಂಪುಟದ ಅನುಮೋದನೆಯೊಂದಿಗೆ ಅಂತಿಮ ನಿಯಮಾವಳಿಯನ್ನು ಹೊರಡಿಸಿದ ನಂತರ ಪ್ರಾಂಶುಪಾಲರ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮವಹಿಸಲಾಗುವುದು.<br><br>ಗ್ರೇಡ್–2 ಪ್ರಾಂಶುಪಾಲರ ಹುದ್ದೆಗೆ ಬಡ್ತಿ ಹೊಂದಲು ಅರ್ಹ ಗ್ರೇಡ್–1 ಪ್ರಾಂಶುಪಾಲರು ಲಭ್ಯವಿಲ್ಲದ ಪ್ರಯುಕ್ತ ಗ್ರೇಡ್–2 ಪ್ರಾಂಶುಪಾಲರ ಹುದ್ದೆಗೆ ಬಡ್ತಿ ನೀಡಲಾಗಿರುವುದಿಲ್ಲ.<br><br>ಖಾಸಗಿ ಅನುದಾನಿತ ಕಾಲೇಜುಗಳು: ಕಾಲೇಜು ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿ ಒಟ್ಟು 321 ಖಾಸಗಿ ಅನುದಾನಿತ ಪದವಿ ಕಾಲೇಜುಗಳು ಬರುತ್ತಿದ್ದು, ಆದರೆ, ಸದರಿ 321 ಖಾಸಗಿ ಅನುದಾನಿತ ಪದವಿ ಕಾಲೇಜುಗಳಿಗೆ ಪ್ರಾಂಶುಪಾಲರ ಹುದ್ದೆ ಮಂಜೂರಾಗಿರುವುದಿಲ್ಲ. ಆದ್ದರಿಂದ, ಖಾಸಗಿ ಅನುದಾನಿತ ಪದವಿ ಕಾಲೇಜುಗಳಿಗೆ, ಪ್ರತಿ ಕಾಲೇಜಿನ ಒಟ್ಟು ಬೋಧಕ ವೃಂದದಲ್ಲಿ ಒಂದು ಹುದ್ದೆಯನ್ನು ಪ್ರಾಂಶುಪಾಲರ ಹುದ್ದೆಗೆ |

| | | | | |
|---|---|---|---|---|
| | | | ಪ್ರವಾಸೋದ್ಯಮ ಸಚಿವರು ತಿಳಿಸಿದರು. | ಉನ್ನತೀಕರಿಸುವ ಮೂಲಕ ಪ್ರಾಂಶುಪಾಲರ ಹುದ್ದೆ ಸೃಜಿಸುವಂತೆ ಕೋರಿ ಆರ್ಥಿಕ ಇಲಾಖೆಗೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿತ್ತು. ಆರ್ಥಿಕ ಇಲಾಖೆಯು ಸರ್ಕಾರಿ ಕಾಲೇಜಿನಲ್ಲಿ ಪ್ರಾಂಶುಪಾಲರ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮಕೈಗೊಂಡು ನಂತರ ಖಾಸಗಿ ಅನುದಾನಿತ ಪದವಿ ಕಾಲೇಜುಗಳಲ್ಲಿ ಪ್ರಾಂಶುಪಾಲರ ಹುದ್ದೆ ಸೃಜನೆ ಬಗ್ಗೆ ಪ್ರಸ್ತಾವನೆಯನ್ನು ಕಳುಹಿಸುವಂತೆ ತಿಳಿಸಿರುವಂತೆ ಕ್ರಮಕೈಗೊಳ್ಳಲಾಗುತ್ತಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಸಮಿತಿಯು ಒಪ್ಪಿ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |
| 17 | 6234<br>ಚು.ಗು.ಪ್ರ; 1845<br>ಶ್ರೀ ಮಹಾಂತೇಶ ಶಿವಾನಂದ ಕೌಜಲಗಿ<br>ವಿಪನದಿ: 17.07.2015 | ಬೆಳಗಾವಿ ಜಿಲ್ಲೆ/ತಾಲ್ಲೂಕು, ಹಿರೇಬಾಗೇ ವಾಡಿಯಲ್ಲಿ ಪ್ರಥಮ ದರ್ಜೆ ಕಾಲೇಜು ಪ್ರಾರಂಭಿಸಲು ಪರಿಶೀಲಿಸುವ ಬಗ್ಗೆ. | ಅಗತ್ಯತೆ ಮತ್ತು ಅನುದಾನದ ಲಭ್ಯತೆ ಆಧಾರದ ಮೇಲೆ ಹೊಸದಾಗಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಪ್ರಾರಂಭಿಸುವ ಪ್ರಸ್ತಾವನೆಗಳನ್ನು ಪರಿಶೀಲಿಸಲಾಗುತ್ತಿದೆ ಎಂದು ಮಾನ್ಯ ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರು ತಿಳಿಸಿದರು. | ದಿನಾಂಕ: 06.05.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿ ಚರ್ಚಿಸಿದಾಗ, ಬೆಳಗಾವಿ ಜಿಲ್ಲೆ/ತಾಲ್ಲೂಕು, ಹಿರೇಬಾಗೇವಾಡಿಯಲ್ಲಿ ಪ್ರಥಮ ದರ್ಜೆ ಕಾಲೇಜು ಪ್ರಾರಂಭಿಸುವ ಸಂಬಂಧ ಸರ್ಕಾರದ ಪತ್ರ ಸಂಖ್ಯೆ:ಇಡಿ:138:ಹೆಚ್‌ಪಿಸಿ:2018 ದಿನಾಂಕ:27.11.2018ರಲ್ಲಿನ ನಿರ್ದೇಶನದಂತೆ ಈ ಕಛೇರಿಯ ಪತ್ರ ಸಂಖ್ಯೆ:ಕಾಶಿಇ:39:ಯೋಜನೆ:2003–04 (ಭಾಗ–2),<br><br>ದಿನಾಂಕ:20.12.2018ರಲ್ಲಿ ಧಾರವಾಡ ಪ್ರಾದೇಶಿಕ ಜಂಟಿ ನಿರ್ದೇಶಕರಿಗೆ ಸ್ಥಳ ಪರಿಶೀಲನೆ ವರದಿ ನೀಡಲು ಸೂಚಿಸಲಾಗಿರುತ್ತದೆ. ಧಾರವಾಡ ಪ್ರಾದೇಶಿಕ ಜಂಟಿ ನಿರ್ದೇಶಕರಿಂದ ವರದಿ ನಿರೀಕ್ಷಿಸಲಾಗಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಸಮಿತಿಯು ಒಪ್ಪಿ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |
| 18 | 6235<br>ಚು.ರ.ಪ್ರ; 1812<br>ಕ್ಯಾಪ್ಟನ್ ಗಣೇಶ್ ಕಾರ್ಣಿಕ್<br>ವಿಪನದಿ: 17.07.2015 | ಉಪನ್ಯಾಸಕರ ಪ್ರತಿಭಟನೆಯ ಗೈರುಹಾಜರಿಯಿಂದ ವಿದ್ಯಾರ್ಥಿಗಳ ಭವಿಷ್ಯಕ್ಕೆ ತೊಂದರೆ ಆಗುವುದನ್ನು ತಡೆಯಲು ಸರ್ಕಾರ ತೆಗೆದುಕೊಂಡಿರುವ ಕ್ರಮದ ಕುರಿತು. | ಕಾಲೇಜು ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ ನಿಯಮಗಳನುಸಾರ ಖಾಯಂ ಉಪನ್ಯಾಸಕರಿಗೆ ನಿಗದಿತ ಕಾರ್ಯಭಾರ ಹಂಚಿಕೆ ಮಾಡಿ, ಹೆಚ್ಚುವರಿ ಕಾರ್ಯಭಾರದ ಅಗತ್ಯಕ್ಕನುಗುಣವಾಗಿ ಮತ್ತು | ದಿನಾಂಕ: 06.05.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿ ಚರ್ಚಿಸಿದಾಗ, ಕಾಲೇಜು ಶಿಕ್ಷಣ ಇಲಾಖೆಯ ವ್ಯಾಪ್ತಿಗೊಳಪಡುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಖಾಯಂ ಉಪನ್ಯಾಸಕರಿಗೆ ಕಾರ್ಯಭಾರವನ್ನು ಹಂಚಿಕೆ ಮಾಡಿ ಉಳಿಕೆ ಹೆಚ್ಚುವರಿ ಕಾರ್ಯಭಾರಕ್ಕೆ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯನ್ನು ಪರಿಗಣಿಸಿ ಅತಿಥಿ ಉಪನ್ಯಾಸಕರುಗಳ ಸೇವೆಯನ್ನು ಬಳಸಿಕೊಳ್ಳಲಾಗುತ್ತಿದೆ. ಈ ಮೂಲಕ ವಿದ್ಯಾರ್ಥಿಗಳಿಗೆ ಪಾಠ ಪ್ರವಚನಗಳಿಗೆ ತೊಂದರೆಯಾಗದಂತೆ ಕ್ರಮವಹಿಸಲಾಗಿದೆ. 2017–18ನೇ |

| | | | | |
|---|---|---|---|---|
| | | | ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯನ್ನು ಪರಿಗಣಿಸಿ ಆಯಾ ಕಾಲೇಜುಗಳಿಗೆ ಅತಿಥಿ ಉಪನ್ಯಾಸಕರನ್ನು ಪಾರದರ್ಶಕವಾಗಿ ಅಯ್ಕೆ ಮಾಡಿಕೊಳ್ಳುವ ಬಗ್ಗೆ ಅಗತ್ಯ ಕ್ರಮವಹಿಸಲಾಗುತ್ತಿದೆ ಎಂದು ಮಾನ್ಯ ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರು ತಿಳಿಸಿದರು. | ಸಾಲಿನಲ್ಲಿ ವಿವಿಧ ವಿಷಯಗಳಲ್ಲಿ ಒಟ್ಟು-11305 ಅತಿಥಿ ಉಪನ್ಯಾಸಕರನ್ನು ಪಾರದರ್ಶಕ ಪ್ರಕ್ರಿಯೆ ಮೂಲಕ ಆಯ್ಕೆ ಮಾಡಿಕೊಳ್ಳಲಾಗಿದೆ. ಮುಂದುವರೆದು, 2017-18ನೇ ಸಾಲಿನಲ್ಲಿ ಸಹಾಯಕ ಪ್ರಾಧ್ಯಾಪಕರ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗಿ, ಐನಾಪುರ, ಬೈಲಹೊಂಗಲ ಮತ್ತು ನೇಸರ್ಗಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿನ ಕ್ರಮವಾಗಿ 3, 5 ಮತ್ತು 8 ಸಹಾಯಕ ಪ್ರಾಧ್ಯಾಪಕರ ಹುದ್ದೆಗಳನ್ನು ಈ ಸಂದರ್ಭದಲ್ಲಿ ಭರ್ತಿ ಮಾಡಲಾಗಿರುತ್ತದೆ.<br>ಆದ್ದರಿಂದ, ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ವಿದ್ಯಾರ್ಹತೆಗಳ ಪಾಠ-ಪ್ರವಚನಕ್ಕೆ ಯಾವುದೇ ತೊಂದರೆಯಾಗುತ್ತಿಲ್ಲ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಸಮಿತಿಯು ಒಪ್ಪಿ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |
| 19 | 6236<br>ಚು.ರ.ಪ್ರ; 1846<br>ಶ್ರೀ ಮಹಾಂತೇಶ ಶಿವಾನಂದ ಕೌಜಲಗಿ<br>ವಿಪನದಿ: 17.07.2015 | ಬೆಳಗಾವಿ ಜಿಲ್ಲೆ, ಅಥಣಿ ತಾಲ್ಲೂಕಿನ ಐನಾಪೂರ ಹಾಗೂ ಬೈಲಹೊಂಗಲ ತಾಲ್ಲೂಕಿನ ನೇಸರಗಿ ಮತ್ತು ಬೈಲಹೊಂಗಲದ ಕಾಲೇಜುಗಳಲ್ಲಿ ಶಿಕ್ಷಕರ ಕೊರತೆ ಬಗ್ಗೆ. | ಖಾಲಿ ಹುದ್ದೆಗಳನ್ನು ತುಂಬಲು ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಮಾನ್ಯ ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರು ತಿಳಿಸಿದರು. | ದಿನಾಂಕ: 06.05.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿ ಚರ್ಚಿಸಿದಾಗ, ಕಾಲೇಜು ಶಿಕ್ಷಣ ಇಲಾಖೆಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ 2014ರ ಕಾರ್ಯಭಾರಕ್ಕನುಗುಣವಾಗಿ ಖಾಲಿ ಇದ್ದ 2160 ಸಹಾಯಕ ಪ್ರಾಧ್ಯಾಪಕರ ಹುದ್ದೆಗಳನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಮೂಲಕ ಭರ್ತಿ ಮಾಡಲು ಕ್ರಮವಹಿಸಲಾಗಿದೆ. ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ಸ್ಪರ್ಧಾತ್ಮಕ ಪರೀಕ್ಷೆ ನಡೆಸಿ ಅಭ್ಯರ್ಥಿಗಳ ಅಂತಿಮ ಆಯ್ಕೆ ಪಟ್ಟಿಯನ್ನು ಸರ್ಕಾರಕ್ಕೆ ಸಲ್ಲಿಸಿದ್ದು, ಸರ್ಕಾರವು ಅಧಿಸೂಚನೆ ಸಂಖ್ಯೆ:ಇಡಿ/33/ಡಿಸಿಇ/2017, ದಿನಾಂಕ:04.02.2017 ರಲ್ಲಿ ವಿವಿಧ ವಿಷಯಗಳಲ್ಲಿನ ಒಟ್ಟು 2034 ಅರ್ಹ ಅಭ್ಯರ್ಥಿಗಳ ಅಂತಿಮ ಆಯ್ಕೆ ಪಟ್ಟಿಯನ್ನು ಪ್ರಕಟಿಸಿದೆ. ಅಂತಿಮ ಆಯ್ಕೆ ಪಟ್ಟಿಯಲ್ಲಿನ ಅಭ್ಯರ್ಥಿಗಳಿಗೆ ಸಂಬಂಧಿಸಿದಂತೆ ನಿಯಮಾನುಸಾರದ ಅಗತ್ಯ ಮಾಹಿತಿಯನ್ನು ಪಡೆದು ನೇಮಕಾತಿ ಆದೇಶವನ್ನು ನೀಡಲಾಗುತ್ತಿದೆ. ಇದುವರೆಗೆ ಸರ್ಕಾರವು ವಿವಿಧ ದಿನಾಂಕಗಳಂದು ವಿವಿಧ ವಿಷಯಗಳಲ್ಲಿನ ಒಟ್ಟು 1939 ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ಹೊರಡಿಸಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಸಮಿತಿಯು ಒಪ್ಪಿ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು.. |

| | | | | |
|---|---|---|---|---|
| 20 | 6237<br>ಚು.ರ.ಪ್ರ; 1849<br>ಶ್ರೀ ಮಹಾಂತೇಶ ಶಿವಾನಂದ ಕೌಜಲಗಿ<br>ವಿಪನದಿ: 17.07.2015 | ಬೆಳಗಾವಿ ಜಿಲ್ಲೆ ಬೈಲಹೊಂಗಲ ತಾಲ್ಲೂಕಿನ ಬೆಳವಡಿಯಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಪ್ರಾರಂಭಿಸಲು ಅಗತ್ಯ ಕ್ರಮ ಕೈಗೊಳ್ಳುವ ಬಗ್ಗೆ. | ಅಗತ್ಯತೆ ಮತ್ತು ಅನುದಾನದ ಲಭ್ಯತೆ ಆಧಾರದ ಮೇಲೆ ಹೊಸದಾಗಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಪ್ರಾರಂಭಿಸುವ ಪ್ರಸ್ತಾವನೆಗಳನ್ನು ಪರಿಶೀಲಿಸಲಾಗುತ್ತಿದೆ ಎಂದು ಮಾನ್ಯ ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರು ತಿಳಿಸಿದರು. | ದಿನಾಂಕ: 06.05.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚೆ ಚರ್ಚಿಸಿದಾಗ, ಬೆಳಗಾವಿ ಜಿಲ್ಲೆ ಬೈಲಹೊಂಗಲ ತಾಲ್ಲೂಕಿನ ಬೆಳವಡಿಯಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಪ್ರಾರಂಭಿಸುವ ಬಗ್ಗೆ ಈ ಕಛೇರಿಯ ಪತ್ರ ಸಂಖ್ಯೆ:ಕಾಶಿಇ:39:ಯೋಜನೆ:2003–04 (ಭಾಗ–2) ದಿನಾಂಕ:22.12.2018ರಲ್ಲಿ ಧಾರವಾಡ ಪ್ರಾದೇಶಿಕ ಜಂಟಿ ನಿರ್ದೇಶಕರಿಗೆ ಸ್ಥಳ ಪರಿಶೀಲನೆ ವರದಿ ನೀಡಲು ಸೂಚಿಸಲಾಗಿರುತ್ತದೆ. ಧಾರವಾಡ ಪ್ರಾದೇಶಿಕ ಜಂಟಿ ನಿರ್ದೇಶಕರಿಂದ ವರದಿ ನಿರೀಕ್ಷಿಸಲಾಗಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಸಮಿತಿಯು ಒಪ್ಪಿ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |
| 21 | 6238<br>ಚು.ಗು.ಪ್ರ: 2221<br>ಶ್ರೀ ಅಮರನಾಥ ಪಾಟೀಲ್<br>ವಿಪನದಿ: 24.07.2015 | ಹೈದ್ರಾಬಾದ್ ಕರ್ನಾಟಕದ 6 ಜಿಲ್ಲೆಗಳನ್ನು ಹೊರತುಪಡಿಸಿ ಇತರೆ ಜಿಲ್ಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ವಿಶ್ವವಿದ್ಯಾಲಯದ ಬೋಧಕ ಬೋಧಕೇತರ ಸಿಬ್ಬಂದಿಗಳ ವರ್ಗಾವಣೆಯಲ್ಲಿ ಅವಕಾಶ ಕಲ್ಪಿಸದಿರುವ ವಿಷಯದ ಬಗ್ಗೆ | 371 (ಜೆ) ಪ್ರಕಾರ ಅಖಿಲ ಕರ್ನಾಟಕ ವಿಶ್ವವಿದ್ಯಾಲಯಗಳು ರಾಜ್ಯ ಮಟ್ಟದ ಸಂಸ್ಥೆಗಳಾಗಿವೆ. ಎಲ್ಲ ಕಡೆಗಳಲ್ಲಿ ಶೇಕಡಾ 8ರಷ್ಟು ಕೊಡಬೇಕೆನ್ನುವ ಬಗ್ಗೆ ತಕರಾರಿಲ್ಲ. ಕೆಲವೊಮ್ಮೆ ಮಾಡಿಕೊಡಬಹುದು. ಆದರೆ ಇಲ್ಲಿ ಇರುವ ತಾಂತ್ರಿಕ ಸಮಸ್ಯೆಯೇನೆಂದರೆ, ಉದಾಹರಣೆಗೆ ಹೇಳಬೇಕಾದರೆ, ಕನ್ನಡ ವಿಶ್ವವಿದ್ಯಾಲಯ ಶೇಕಡಾ 8ರಷ್ಟು ಕೊಡಬೇಕು, ಅದನ್ನು ಕೊಡುತ್ತಾರೆ. ಆ ಶೇಕಡಾ 8ರಷ್ಟು ಇರುವವರು ಪುನಃ ನಾವು ಗುಲ್ಬರ್ಗಾಕ್ಕೆ ಹೋಗುತ್ತೇವೆಂದು ಹೇಳಿದರೆ, ಆ ವಿಶ್ವವಿದ್ಯಾಲಯದವರು ಏನು ಮಾಡಬೇಕು? ಪುನಃ | ದಿನಾಂಕ: 06.05.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚೆ ಚರ್ಚಿಸಿದಾಗ, ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ, 2000ರ ಪ್ರಕರಣ 58ರನ್ವಯ ವಿಶ್ವವಿದ್ಯಾಲಯಗಳ ನೌಕರರಿಗೆ ಅನ್ವಯವಾಗುವ ಸೇವಾ ಷರತ್ತುಗಳಲ್ಲಿ ಏನೇ ಇದ್ದರೂ ಕುಲಾಧಿಪತಿಗಳು ಹಾಗೂ ಗೌರವಾನ್ವಿತ ರಾಜ್ಯಪಾಲರು ರಾಜ್ಯ ಸರ್ಕಾರದೊಂದಿಗೆ ಸಮಾಲೋಚಿಸಿ, ಆಡಳಿತಾತ್ಮಕ ಮತ್ತು ಸಾರ್ವಜನಿಕ ಹಿತಾಸಕ್ತಿಯ ಕಾರಣಗಳಿಗಾಗಿ ವಿಶ್ವವಿದ್ಯಾಲಯದಲ್ಲಿ ಯಾವುದೇ ಹುದ್ದೆಯನ್ನು ಧಾರಣ ಮಾಡಿರುವ ವ್ಯಕ್ತಿಯನ್ನು ರಾಜ್ಯದ ಇತರೆ ವಿಶ್ವವಿದ್ಯಾಲಯಕ್ಕೆ ವರ್ಗಾಯಿಸಲು ಅವಕಾಶ ಕಲ್ಪಿಸಲಾಗಿದೆ.<br><br>ರಾಜ್ಯ ಎಲ್ಲಾ ವಿಶ್ವವಿದ್ಯಾಲಯಗಳು ಸಂವಿಧಾನದ ಅನುಚ್ಛೇದ 371(ಜೆ) ರನ್ವಯ ಹೈದ್ರಾಬಾದ್ ಕರ್ನಾಟಕದ ಅಭ್ಯರ್ಥಿಗಳಿಗೆ ಹುದ್ದೆಗಳನ್ನು ಮೀಸಲಿರಿಸಿ ಅಧಿಸೂಚನೆ ಹೊರಡಿಸಿರುತ್ತದೆ.<br><br>ಕೆಲವು ವಿಶ್ವವಿದ್ಯಾಲಯಗಳು ಈಗಾಗಲೇ ಹೈದ್ರಾಬಾದ್–ಕರ್ನಾಟಕ ಪ್ರದೇಶದ ಅಭ್ಯಥಿಗಳಿಗೆ ಮೀಸಲಿಟ್ಟ ಹುದ್ದೆಗಳನ್ನು ಭರ್ತಿಮಾಡಿಕೊಂಡಿರುತ್ತವೆ ಎಂದು ಇಲಾಖಾಧಿಕಾರಿಗಳು ನೀಡಿದ |

| | | | | |
|---|---|---|---|---|
| | | | ನೇಮಕಾತಿಯನ್ನು ಮಾಡಿಕೊಳ್ಳಬೇಕಾಗುತ್ತದೆ. ಆ ಭಾಗದ ಶೇಕಡಾ 8ರಷ್ಟು ಜನರನ್ನು ನೇಮಕಾತಿ ಮಾಡಿಕೊಳ್ಳುವುದರಲ್ಲಿ ಸಮಸ್ಯೆ ಇಲ್ಲ. ಆದರೆ, ಇಲ್ಲಿ ನೇಮಕಗೊಂಡು ಅವರು ಅಲ್ಲಿಗೆ ವರ್ಗಾವಣೆ ಕೇಳಿದರೆ ಸಮಸ್ಯೆಯುಂಟಾಗುತ್ತದೆ. ಪುನಃ ಅವರಿಗೆ ಅವಕಾಶವನ್ನು ಮಾಡಿಕೊಡಬೇಕಾಗುತ್ತದೆ. ಆಗ ಸ್ಥಳೀಯ ವೃಂದದಲ್ಲಿ ಶೇಕಡಾ 75ಕ್ಕಿಂತ ಅಥವಾ ಶೇಕಡಾ 80ಕ್ಕಿಂತ ಕಡಿಮೆ ಇದ್ದರೆ ಆಗ ಅವಕಾಶ ಮಾಡಿಕೊಡಬೇಕು. ನಂತರ ಈ ವಿಶ್ವವಿದ್ಯಾಲಯದಲ್ಲಿ ಹುದ್ದೆ ಖಾಲಿ ಬೀಳುತ್ತದೆ. ಇದು ತಾಂತ್ರಿಕ ಸಮಸ್ಯೆಯಾಗಿದೆ. ಸಂವಿಧಾನದ ತಿದ್ದುಪಡಿ 371(ಜೆ) ಪ್ರಕಾರ ಏನು ಮಾಡಬೇಕು ಅದನ್ನು ಸರ್ಕಾರ ಮಾಡುತ್ತಿದೆ. ನಾನು ಸಕಾರಾತ್ಮಕವಾಗಿ ಉತ್ತರವನ್ನು ಕೊಟ್ಟಿದ್ದೇನೆ. ಆದ್ದರಿಂದ ಆ ವಿಶ್ವವಿದ್ಯಾಲಯಗಳಲ್ಲಿರುವ ಸ್ಥಳೀಯ ವೃಂದ ಮತ್ತು ಹೊರಗಿನ ವೃಂದದ ಬಗ್ಗೆ ರಿಪೋರ್ಟ್ ಬಂದ ನಂತರ ಕ್ರಮ ತೆಗೆದುಕೊಳ್ಳುತ್ತೇನೆ ಎಂದು ಮಾನ್ಯ ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರು ತಿಳಿಸಿದರು. | ಉತ್ತರವನ್ನು ಸಮಿತಿಯು ಒಪ್ಪಿ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |

| | | | | |
|---|---|---|---|---|
| 22 | 6239<br>ಚು.ಗು.ಪ್ರ: 2254<br>ಶ್ರೀ ಎನ್.ಎಸ್. ಬೋಸ್‌ರಾಜು<br>ವಿಪನದಿ: 24.07.2015 | ರಾಯಚೂರು ನಗರದಲ್ಲಿ ಮಹಿಳಾ ಪ್ರಥಮ ದರ್ಜೆ ಕಾಲೇಜು ನಿರ್ಮಾಣ ಮಾಡಲು ಮಾನ್ವಿ ತಾಲ್ಲೂಕಿನ ಸಿರಾವಾರ ಗ್ರಾಮದಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಕಟ್ಟಡ ನಿರ್ಮಾಣ ಮಾಡಲು ಮತ್ತು ಕವಿತಾಳ ಪಟ್ಟಣದಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಸ್ಥಾಪಿಸಲು ತೆಗೆದುಕೊಂಡಿರುವ ಕ್ರಮಗಳ ಬಗ್ಗೆ. | ರಾಯಚೂರು ನಗರದಲ್ಲಿ ಮಹಿಳಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜನ್ನು 2014–15ನೇ ಸಾಲಿನಲ್ಲಿ ಪ್ರಾರಂಭಿಸಲಾಗಿದೆ. ನಿವೇಶನ ದೊರೆತ ನಂತರ ಅನುದಾನದ ಲಭ್ಯತೆ ಆಧಾರದ ಮೇಲೆ ಕಟ್ಟಡ ನಿರ್ಮಾಣಕ್ಕಾಗಿ ಕ್ರಮಕೈಗೊಳ್ಳಲಾಗುವುದು.<br>ಮಾನ್ವಿ ತಾಲ್ಲೂಕಿನ ಸಿರಾವಾರ ಗ್ರಾಮದಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜನ್ನು 2014–15ನೇ ಸಾಲಿನಲ್ಲಿ ಪ್ರಾರಂಭಿಸಲಾಗಿದೆ. ಕಾಲೇಜಿಗೆ ನಿವೇಶನ ದೊರೆತಿರುವುದಿಲ್ಲ. ನಿವೇಶನ ದೊರೆತ ನಂತರ ಅನುದಾನದ ಲಭ್ಯತೆ ಆಧಾರ ಕಟ್ಟಡ ನಿರ್ಮಾಣಕ್ಕಾಗಿ ಕ್ರಮಕೈಗೊಳ್ಳಲಾಗುವುದು.<br>ಕವಿತಾಳ ಪಟ್ಟಣದಲ್ಲಿ ಆಗತ್ಯತೆ ಮತ್ತು ಅನುದಾನದ ಲಭ್ಯತೆ ಆಧಾರದ ಮೇಲೆ ಪರಿಶೀಲಿಸಲಾಗುವುದು ಎಂದು ಮಾನ್ಯ ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರು ತಿಳಿಸಿದರು. | ದಿನಾಂಕ: 06.05.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿ ಚರ್ಚಿಸಿದಾಗ, ರಾಯಚೂರು ನಗರದಲ್ಲಿ ಮಹಿಳಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜನ್ನು 2014–15ನೇ ಸಾಲಿನಲ್ಲಿ ಪ್ರಾರಂಭಿಸಲಾಗಿದೆ. ಸದರಿ ಕಾಲೇಜಿಗೆ 20 ಗುಂಟೆ ಜಮೀನು ಮಂಜೂರಾಗಿದ್ದು, ಕಾಲೇಜಿನ ಕಟ್ಟಡ ನಿರ್ಮಾಣ ಕಾಮಗಾರಿ 2016–17ನೇ ಸಾಲಿನ ವಿಶೇಷ ಅಭಿವೃದ್ಧಿ ಯೋಜನೆಯಡಿಯಲ್ಲಿ ರೂ.100.00 ಲಕ್ಷಗಳು ಮತ್ತು 2017–18ನೇ ಸಾಲಿನಲ್ಲಿ ರೂ.100.00 ಲಕ್ಷಗಳು ಒಟ್ಟಾರೆರೂ. 200.00 ಲಕ್ಷಗಳು ಮಂಜೂರಾಗಿದ್ದು ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.<br>ಮಾನ್ವಿ ತಾಲ್ಲೂಕಿನ ಸಿರಿವಾರ ಗ್ರಾಮದಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜನ್ನು 2014–15ನೇ ಸಾಲಿನಲ್ಲಿ ಪ್ರಾರಂಭಿಸಲಾಗಿದೆ. ಸದರಿ ಕಾಲೇಜಿಗೆ 4.10 ಎಕರೆಜಮೀನು ಮಂಜೂರಾಗಿದ್ದು, ಸದರಿ ಜಮೀನಿನಲ್ಲಿ ಕಾಲೇಜು ಕಟ್ಟಡ ನಿರ್ಮಾಣ ಕಾಮಗಾರಿಗಾಗಿ 2015–16ನೇ ವಿಶೇಷ ಅಭಿವೃದ್ಧಿ ಯೋಜನೆಯಡಿಯಲ್ಲಿ ರೂ.200.00 ಲಕ್ಷಗಳು ಮತ್ತು 2017–18ನೇ ವಿಶೇಷ ಅಭಿವೃದ್ಧಿ ಯೋಜನೆಯಡಿಯಲ್ಲಿ ರೂ.200.00 ಲಕ್ಷಗಳು ಒಟ್ಟಾರೆ ರೂ.400.00ಲಕ್ಷಗಳು ಮಂಜೂರಾಗಿದ್ದು, ಕಾಲೇಜು ಕಟ್ಟಡ ಕಾಮಗಾರಿಯ ಪ್ರಗತಿಯಲ್ಲಿರುತ್ತದೆ.<br>ಮಾನ್ವಿ ತಾಲ್ಲೂಕಿನ ಕವಿತಾಳ ಗ್ರಾಮದಲ್ಲಿ 2017–18ನೇ ಸಾಲಿನಲ್ಲಿ ಹೆಣ್ಣು ಮಕ್ಕಳ ಮತ್ತು ಗಂಡು ಮಕ್ಕಳ ಹಾಸ್ಟೆಲ್‌ಗಳೊಂದಿಗೆ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವಸತಿಯುಕ್ತ ಸರ್ಕಾರಿ ಪ್ರಥಮ ದರ್ಜೆ ಕಾಲೇಜನ್ನು ರೂ.25.00 ಕೋಟಿ ವೆಚ್ಚದಲ್ಲಿ ಸ್ಥಾಪಿಸಲು ಸರ್ಕಾರದ ಆದೇಶ ಸಂಖ್ಯೆ: ಇಡಿ/56/ಹೆಚ್‌ಪಿಸಿ/2017 ದಿನಾಂಕ: 19.07.2017ರ ಆದೇಶದಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. ಅದರಂತೆ, ಕಾಲೇಜಿಗೆ 9.00 ಎಕರೆ ಜಮೀನು ಮಂಜೂರಾಗಿದ್ದು, ಕಾಲೇಜು ಮತ್ತು ವಿದ್ಯಾರ್ಥಿನಿಲಯದ ಕಟ್ಟಡಗಳು ಪೂರ್ಣಗೊಂಡ ನಂತರ ಕಾಲೇಜ್‌ನ್ನು ಪ್ರಾರಂಭಿಸುವ ಬಗ್ಗೆ ಕ್ರಮ ಜರುಗಿಸಲಾಗುತ್ತದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಸಮಿತಿಯು ಒಪ್ಪಿ ಭರವಸೆಯನ್ನು ಮುಕ್ತಾಯಗೊಳಿಸಿತು. |

| | | | | |
|---|---|---|---|---|
| 23 | 6240<br>ಚು.ಗು.ಪ್ರ: 2273<br>ಶ್ರೀ ಐವನ್ ಡಿ'ಸೋಜಾ<br>ವಿಪನದಿ: 24.07.2015 | ಮಂಗಳೂರು ವಿಶ್ವವಿದ್ಯಾಲಯದಲ್ಲಿ ಖಾಲಿ ಇರುವ ಉಪನ್ಯಾಸಕರು ಮತ್ತು ಆಡಳಿತ ವಿಭಾಗದಲ್ಲಿರುವ ಖಾಲಿ ಇರುವ ಹುದ್ದೆಗಳನ್ನು ತುಂಬಲು ಕ್ರಮ ಕೈಗೊಳ್ಳುವ ಕುರಿತು. | ಮಂಗಳೂರು ವಿಶ್ವವಿದ್ಯಾಲಯದಲ್ಲಿ ಒಟ್ಟು 46 ಬೋಧಕ ಹುದ್ದೆಗಳಲ್ಲಿ 23 ಸಹಾಯಕ ಪ್ರಾಧ್ಯಾಪಕರು (ಉಪನ್ಯಾಸಕರು) ಹುದ್ದೆಗಳು ಖಾಲಿ ಇರುತ್ತವೆ ಮತ್ತು ಆಡಳಿತ ವಿಭಾಗದಲ್ಲಿ ಒಟ್ಟು 183 ಬೋಧಕೇತರ ಹುದ್ದೆಗಳು ಖಾಲಿ ಇರುತ್ತವೆ. ಮಂಗಳೂರು ವಿಶ್ವವಿದ್ಯಾಲಯದವರು ಬೋಧಕೇತರ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಅನುಮತಿ ಕೋರಿ ಸಲ್ಲಿಸಿರುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ ಎಂದು ಮಾನ್ಯ ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರು ತಿಳಿಸಿದರು. | ದಿನಾಂಕ: 06.05.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿ ಚರ್ಚಿಸಿದಾಗ, ಮಂಗಳೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ವಿಭಾಗಗಳಲ್ಲಿ ಹಾಗೂ ಘಟಕ ಕಾಲೇಜುಗಳಲ್ಲಿ ಒಟ್ಟು 70 ಬೋಧಕ ಹುದ್ದೆಗಳು ಖಾಲಿ ಇದ್ದು, ಸದರಿ ಖಾಲಿ ಹುದ್ದೆಗಳಲ್ಲಿ ಹೈದ್ರಾಬಾದ್–ಕರ್ನಾಟಕ, ಬ್ಯಾಕ್‌ಲಾಗ್ ಹಾಗೂ ಉಳಿಕೆ ಮೂಲವೃಂದದ ಹುದ್ದೆಗಳು ಸೇರಿದಂತೆ ಒಟ್ಟು 32 ಹುದ್ದೆಗಳನ್ನು ಭರ್ತಿಗೊಳಿಸಲು ದಿನಾಂಕ 09.06.2017 ಮತ್ತು ದಿನಾಂಕ 28.09.2017ರಂದು ಅಧಿಸೂಚನೆ ಹೊರಡಿಸಲಾಗಿತ್ತು ಹಾಗೂ ಸಮಾಜ ಕಲ್ಯಾಣ ಇಲಾಖೆಯ ಆಯುಕ್ತರು ದಿನಾಂಕ 12.01.2018ರ ಪತ್ರದಲ್ಲಿ ತಿಳಿಸಿದಂತೆ 03 ಬೋಧಕ(ಬ್ಯಾಕ್‌ಲಾಗ್) ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಕ್ರಮ ಕೈಗೊಳ್ಳಲಾಗಿತ್ತು.<br><br>ಆದರೆ, ಸರ್ಕಾರದ ಸುತ್ತೋಲೆ ಸಂಖ್ಯೆ: ಇಡಿ 136 ಯುಎನ್‌ಇ 2017, ದಿನಾಂಕ 05.11.2018ರಲ್ಲಿ ರಾಜ್ಯದ ವಿಶ್ವವಿದ್ಯಾಲಯಗಳಲ್ಲಿ ಬೋಧಕ/ಬೋಧಕೇತರ ಹುದ್ದೆಗಳ ನೇರ ನೇಮಕಾತಿ ಕುರಿತು UGC Regulations (Minimum Qualifications for Appointment to Teachers and other Academic Staff in Universities and Colleges and Measures for the Maintenance of Standards in Higher Education) 2010 ಗಳಲ್ಲಿ ಗೊತ್ತುಪಡಿಸಲಾಗಿರುವ ಅವಕಾಶಗಳು, ಅಗತ್ಯತೆಗಳು ಹಾಗೂ ಮಾನದಂಡಗಳಿಗೆ ವ್ಯತಿರಿಕ್ತವಾಗಿರುವ ಬಗ್ಗೆ ಅಭ್ಯರ್ಥಿಗಳು/ಶಿಕ್ಷಣ ತಜ್ಞರು/ ಸಾರ್ವಜನಿಕರು ಹಾಗೂ ಎಲ್ಲಾ ಮಾಧ್ಯಮಗಳು ವ್ಯಕ್ತಪಡಿಸಿದ ವಿರೋಧ/ಆಕ್ಷೇಪಣೆಗಳನ್ನು ಸರ್ಕಾರವು ಗಂಭೀರವಾಗಿ ಪರಿಗಣಿಸಿ, ಈ ಬಗ್ಗೆ ಸಮಗ್ರ ಪರಿಶೀಲನೆ ಹಾಗೂ ಪುನರಾವಲೋಕನ ಅಗತ್ಯವೆಂದು ಮನಗಂಡು ವಿಶ್ವವಿದ್ಯಾಲಯಗಳಲ್ಲಿ ಬೋಧಕ ಸಿಬ್ಬಂದಿಯ ನೇರ ನೇಮಕಾತಿಯು ಪಾರದರ್ಶಕವಾಗಿ ಹಾಗೂ ಕ್ರಮಬದ್ಧವಾಗಿರಬೇಕೆಂಬ ಸದುದ್ದೇಶದ ಹಿನ್ನೆಲೆಯಲ್ಲಿ ಸರ್ಕಾರದ ಸುತ್ತೋಲೆ ಸಂಖ್ಯೆ: ಇಡಿ 136 |

| | | | | |
|---|---|---|---|---|
| | | | | ಯುಎನ್ಇ 2017, ದಿ:17.07.2017ಅನ್ನು ಹಾಗೂ ಸದರಿ ಸುತ್ತೋಲೆಯನ್ನನುಸರಿಸಿ ವಿಶ್ವವಿದ್ಯಾಲಯಗಳಿಂದ ಆರಂಭಿಸಲಾಗಿರುವ ಬೋಧಕ ಸಿಬ್ಬಂದಿಯ ನೇರ ನೇಮಕಾತಿ ಪ್ರಕ್ರಿಯೆಯನ್ನು ಸರ್ಕಾರದ ಮುಂದಿನ ಆದೇಶದವರೆಗೆ ತಾತ್ಕಾಲಿಕವಾಗಿ ತಡೆಹಿಡಿಯುವಂತೆ ಆದೇಶಿಸಿದ ಕಾರಣ ನೇಮಕಾತಿ ಪ್ರಕ್ರಿಯೆಯನ್ನು ಸ್ಥಗಿತಗೊಳಿಸಲಾಗಿರುತ್ತದೆ.<br><br>ಅಲ್ಲದೆ ಬೋಧಕೇತರ ಹುದ್ದೆಗಳಲ್ಲಿ ಹೈದ್ರಾಬಾದ್-ಕರ್ನಾಟಕ ಪ್ರದೇಶದವರಿಗೆ ಮೀಸಲಿರಿಸಿದ್ದ 27 ಹುದ್ದೆಗಳನ್ನು ಭರ್ತಿ ಮಾಡುವ ಸಂಬಂಧ ವಿಶ್ವವಿದ್ಯಾಲಯದಿಂದ ಹೊರಡಿಸಲಾಗಿದ್ದ ಅಧಿಸೂಚನೆಗೆ ಸಂಬಂಧಪಟ್ಟಂತೆ ಸಮಾಜ ಕಲ್ಯಾಣ ಇಲಾಖೆಯ ತನಿಖಾಧಿಕಾರಿಗಳು ದಿನಾಂಕ 30.11.2017ರಂದು ಮಂಗಳೂರು ವಿಶ್ವವಿದ್ಯಾಲಯಕ್ಕೆ ಭೇಟಿಯಿತ್ತು ತನಿಖೆ ಮಾಡಿ, ಹೈದ್ರಾಬಾದ್-ಕರ್ನಾಟಕ ವಿಶೇಷ ಕೋಶದಿಂದ ಸ್ಪಷ್ಟೀಕರಣ ಪಡೆದು ಮೀಸಲಾತಿ ನಿಯಮಗಳನ್ವಯ ಕ್ರಮಕೈಗೊಳ್ಳುವಂತೆ ತಿಳಿಸಿದ ಹಿನ್ನೆಲೆಯಲ್ಲಿ, ವಿಶ್ವವಿದ್ಯಾಲಯವು ಅನುಸರಿಸಿರುವ ಕ್ರಮವಿಧಾನ/ಕ್ರಮಬದ್ಧತೆಯ ಕುರಿತು ಹೈದ್ರಾಬಾದ್-ಕರ್ನಾಟಕ ವಿಶೇಷ ಕೋಶದಿಂದ ಸ್ಪಷ್ಟೀಕರಣ ಪಡೆದು ಪ್ರಸ್ತಾವನೆಯನ್ನು ಅಭಿಪ್ರಾಯಕ್ಕಾಗಿ ಸಮಾಜ ಕಲ್ಯಾಣ ಇಲಾಖೆ ಹಾಗೂ ಸಿಆಸು ಇಲಾಖೆ (ಸೇವಾ ನಿಯಮಗಳು)ಗೆ ಕಳುಹಿಸಲಾಗಿರುತ್ತದೆ.<br><br>ಪ್ರಸ್ತುತ ಸಿಆಸು ಇಲಾಖೆಯು ನೀಡಿರುವ ತನ್ನ ಅಭಿಪ್ರಾಯದಲ್ಲಿ ವಿಶ್ವವಿದ್ಯಾಲಯದ ಬೋಧಕೇತರ ವೃಂದದ ನೇಮಕಾತಿಯಲ್ಲಿ ಪದನಾಮವಾರು ಹುದ್ದೆಗಳನ್ನು ವರ್ಗೀಕರಣ ಮಾಡಿ ಪ್ರತ್ಯೇಕ ಪ್ರತ್ಯೇಕವಾಗಿ ಮೀಸಲಾತಿ ಅಳವಡಿಸಿ ನೇರನೇಮಕಾತಿಗೆ ಅಧಿಸೂಚನೆ ಹೊರಡಿಸುವಂತೆ ತಿಳಿಸಿದ್ದು, ಇದೇ ವಿಷಯಕ್ಕೆ ಸಂಬಂಧಿಸಿದಂತೆ ಸಮಾಜ ಕಲ್ಯಾಣ ಇಲಾಖೆಯ ಅಭಿಪ್ರಾಯವನ್ನು ಸಹ ನಿರೀಕ್ಷಿಸಲಾಗಿದೆ.<br><br>ಮುಂದುವರೆದು ಖಾಲಿ ಇರುವ 35 ಬೋಧಕ ಹಾಗೂ 183 ಬೋಧಕೇತರ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳುವ ಸಂಬಂಧದ |

| | | | | |
|---|---|---|---|---|
| | | | | ಪ್ರಸ್ತಾವನೆಗಳನ್ನು ಅರ್ಥಿಕ ಇಲಾಖೆಗೆ ಸಲ್ಲಿಸಲಾಗಿದ್ದು, ಪ್ರಸ್ತಾವನೆಗಳು ಆರ್ಥಿಕ ಇಲಾಖೆಯಲ್ಲಿ ಪರಿಶೀಲನೆಯಲ್ಲಿರುತ್ತವೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಸಮಿತಿಯು ಒಪ್ಪಿ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |
| 24 | 6241<br>ಚು.ರ.ಪ್ರ: 2246<br>ಶ್ರೀ ಕವಟಗಿ ಮಠ ಮಹಂತೇಶ ಮಲ್ಲಿಕಾರ್ಜುನ<br>ವಿಪನದಿ: 24.07.2015 | ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯಕ್ಕೆ ಕೇಂದ್ರ ಧನ ಸಹಾಯ ಆಯೋಗದ 12ಬಿ (ಯುಜಿಸಿ) ಮಾನ್ಯತೆ ದೊರಕಿಸಿ ಕೊಡುವಲ್ಲಿ ಕ್ರಮ ಕೈಗೊಂಡಿರುವ ಬಗ್ಗೆ. | ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯಕ್ಕೆ ಸಾಕಷ್ಟು ಮೂಲಭೂತ ಸೌಕರ್ಯವಿದೆ. ಯು.ಜಿ.ಸಿ.ಯ ಮಾರ್ಗಸೂಚನೆಯಂತೆ (12ಬಿ) ಮಾನ್ಯತೆ ಪಡೆಯಲು ಅವಶ್ಯಕವಿರುವ ಬೋಧಕ ಹುದ್ದೆಗಳನ್ನು ಭರ್ತಿ ಮಾಡುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ ಎಂದು ಮಾನ್ಯ ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರು ತಿಳಿಸಿದರು. | ದಿನಾಂಕ: 06.05.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿ ಚರ್ಚಿಸಿದಾಗ, ವಿಶ್ವವಿದ್ಯಾಲಯ ಧನ ಸಹಾಯ ಆಯೋಗದ ಪರಿಶೀಲನಾ ಸಮಿತಿಯ ವರದಿಯನ್ವಯ ದಿ: 22.12.2017ರಂದು ಜರುಗಿದ ವಿಶ್ವವಿದ್ಯಾಲಯ ಧನಸಹಾಯ ಆಯೋಗದ 527ನೇ ಸಭೆಯ ನಿರ್ಣಯದಂತೆ ವಿಶ್ವವಿದ್ಯಾಲಯ ಧನ ಸಹಾಯ ಆಯೋಗ ಪತ್ರ ಸಂಖ್ಯೆ: ಎಫ್‌ನಂ. 9–4/99 (ಸಿ.ಪಿ.ಪಿ–1/ಪಿಯು) ದಿ: 02.01.2018ರಲ್ಲಿ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯವನ್ನು ಯು.ಜಿ.ಸಿ. ಮಾರ್ಗಸೂಚಿಗಳ 12(ಬಿ) ಮಾನ್ಯತೆಯ ವಿಶ್ವವಿದ್ಯಾಲಯಗಳ ಪಟ್ಟಿಯಲ್ಲಿ ಸೇರ್ಪಡೆಗೊಳಿಸಿರುತ್ತದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಸಮಿತಿಯು ಒಪ್ಪಿ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |
| 25 | 6242<br>ಚು.ರ.ಪ್ರ: 2193<br>ಶ್ರೀ ಮರಿತಿಬ್ಬೇಗೌಡ<br>ವಿಪನದಿ: 24.07.2015 | 1992 ರಿಂದ 1995ನೇ ಸಾಲಿನವರೆಗೆ ಪ್ರಾರಂಭವಾಗಿರುವ ಸಾಮಾನ್ಯ ವರ್ಗದ ಪ್ರಥಮ ದರ್ಜೆ ಅನುದಾನ ರಹಿತ ಕಾಲೇಜುಗಳಿಗೆ ವೇತನಾನುದಾನ ನೀಡುವ ಬಗ್ಗೆ. | ದಿನಾಂಕ: 01.06.1987 ರಿಂದ 31.03.1990 ರವರೆಗೆ ಸಾಮಾನ್ಯ ವರ್ಗದ ಆಡಳಿತ ಮಂಡಳಿಗಳಿಂದ ಪ್ರಾರಂಭಿಸಲ್ಪಟ್ಟ ಪ್ರಥಮ ದರ್ಜೆ ಕಾಲೇಜುಗಳಿಗೆ ವೇತನಾನುದಾನ ನೀಡುವ ಕುರಿತು ಸರ್ಕಾರದ ಪರಿಶೀಲನೆಯಲ್ಲಿದೆ ಎಂದು ಮಾನ್ಯ ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರು ತಿಳಿಸಿದರು. | ದಿನಾಂಕ: 06.05.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿ ಚರ್ಚಿಸಿದಾಗ, ಸರ್ಕಾರದ ಅಧಿಸೂಚನೆ ಸಂಖ್ಯೆ:ಇಡಿ/551/ ಯುಪಿಸಿ/99, ದಿ:07.08.2003ರಲ್ಲಿ ಹೊರಡಿಸಿರುವ ಕರ್ನಾಟಕ ಶಿಕ್ಷಣ ಸಂಸ್ಥೆಗಳು (ಕಾಲೇಜು ಶಿಕ್ಷಣ) ನಿಯಮ 2003ರ ನಿಯಮ 8(1)ರ ಪ್ರಕಾರ ದಿ:01.06.1987ರ ನಂತರ ಪ್ರಾರಂಭಿಸಲಾದ ಯಾವುದೇ ಹೊಸ ಖಾಸಗಿ ಕಾಲೇಜು/ ವಿಷಯಗಳು ಶಾಶ್ವತವಾಗಿ ಅನುದಾನ ಪಡೆಯಲು ಅವಕಾಶವಿರುವುದಿಲ್ಲ.<br><br>ಸರ್ಕಾರದ ದಿ:05.10.2009ರ ಅಧಿಸೂಚನೆ ಸಂಖ್ಯೆ:ಇಡಿ/30/ ಯುಪಿಸಿ/2008 ರಲ್ಲಿ ದಿ:01.06.1987 ರಿಂದ 31.03.1995ರ |

| | | | | |
|---|---|---|---|---|
| | | | | ಅವಧಿಯಲ್ಲಿ ಪ್ರಾರಂಭಿಸಲ್ಪಟ್ಟ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಆಡಳಿತ ಮಂಡಳಿಗಳ ಅನುದಾನರಹಿತ ಪ್ರಥಮ ದರ್ಜೆ ಕಾಲೇಜುಗಳನ್ನು ವೇತನಾನುದಾನಕ್ಕೆ ಒಳಪಡಿಸಲು ಅವಕಾಶವನ್ನು ಕಲ್ಪಿಸಲಾಗಿರುತ್ತದೆ.<br><br>ಅದರಂತೆ, ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಆಡಳಿತ ಮಂಡಳಿಗಳು ನಡೆಸುತ್ತಿರುವ ಒಟ್ಟು 36 ಕಾಲೇಜುಗಳ ಪೈಕಿ ಈಗಾಗಲೇ ಒಟ್ಟು 33 ಕಾಲೇಜುಗಳನ್ನು ಸರ್ಕಾರದ ವೇತನಾನುದಾನಕ್ಕೆ ಒಳಪಡಿಸಲಾಗಿರುತ್ತದೆ. ಇನ್ನುಳಿದ 03 ಕಾಲೇಜುಗಳನ್ನು ವೇತನಾನುದಾನಕ್ಕೆ ಒಳಪಡಿಸುವ ಬಗ್ಗೆ ನಿಯಮಾನುಸಾರ ಪರಿಶೀಲಿಸಲಾಗುತ್ತಿದೆ.<br><br>ದಿ:01.06.1987 ರಿಂದ 01.07.1995ರ ಅವಧಿಯಲ್ಲಿ ಪ್ರಾರಂಭವಾದ ಸಾಮಾನ್ಯ ಆಡಳಿತ ಮಂಡಳಿಗಳು ನಡೆಸುತ್ತಿರುವ ಒಟ್ಟು 128 ಅನುದಾನರಹಿತ ಕಾಲೇಜುಗಳ ಪೈಕಿ 93 ಕಾಲೇಜುಗಳಿಗೆ ಸಂಬಂಧಿಸಿದಂತೆ ಅಗತ್ಯ ಮಾಹಿತಿಯೊಂದಿಗೆ ಪ್ರಸ್ತಾವನೆಯನ್ನು ಸಿದ್ಧಪಡಿಸಿ, ಈ ವಿಷಯವನ್ನು ಸಚಿವ ಸಂಪುಟದ ಉಪ ಸಮಿತಿಯ ಪರಿಶೀಲನೆಗೆ ಸಲ್ಲಿಸಲಾಗಿತ್ತು. ಸಚಿವ ಸಂಪುಟ ಉಪಸಮಿತಿಯು ಈ ಪ್ರಸ್ತಾವನೆಯನ್ನು ಪರಿಶೀಲಿಸಿ ಸದರಿ ಕಾಲೇಜುಗಳನ್ನು ವೇತನಾನುದಾನಕ್ಕೆ ಒಳಪಡಿಸಲು ಶಿಫಾರಸ್ಸು ಮಾಡಿದೆ. ಸಚಿವ ಸಂಪುಟದ ಉಪ ಸಮಿತಿಯ ವರದಿಯೊಂದಿಗೆ ಪ್ರಸ್ತಾವನೆಯನ್ನು ಸಹಮತಿಗಾಗಿ ಆರ್ಥಿಕ ಇಲಾಖೆಗೆ ಕಳುಹಿಸಲಾಗಿತ್ತು. ಆರ್ಥಿಕ ಇಲಾಖೆಯು ಕೆಲವು ಮಾಹಿತಿ/ಸ್ಪಷ್ಟೀಕರಣಗಳನ್ನು ಕೋರಿರುವುದರಿಂದ ದಿನಾಂಕ:27.02.2019 ರಂದು ಪತ್ರ ಬರೆದು ಕಾಲೇಜು ಶಿಕ್ಷಣ ಇಲಾಖೆಯಿಂದ ಮಾಹಿತಿ ಕೋರಿದ್ದು, ವರದಿಯನ್ನು ನಿರೀಕ್ಷಿಸಲಾಗಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಸಮಿತಿಯು ಒಪ್ಪಿ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |

| | | | | |
|---|---|---|---|---|
| 26 | 6219<br>ಚು.ಗು.ಪ್ರ : 553<br>ಶ್ರೀ ಅರುಣ ಶಹಾಪುರ<br>ವಿ.ಪ.ನ.ದಿ:<br>16.03.2017 | ಖಾಸಗಿ ಶಿಕ್ಷಣ ಸಂಸ್ಥೆಗಳನ್ನು ಅನುದಾನಕ್ಕೆ ಒಳಪಡಿಸುವ ಬಗ್ಗೆ. | ಈ ಬಗ್ಗೆ ಒಂದು ಅಧ್ಯಯನ ವರದಿಯನ್ನು ಯೋಜನಾ ಇಲಾಖೆಯು ಉನ್ನತ ಶಿಕ್ಷಣ ಇಲಾಖೆ, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ ಮತ್ತು ಕಾರ್ಮಿಕ ಇಲಾಖೆಯ ನೆರವಿನಿಂದ ಸಿದ್ದಪಡಿಸುತ್ತಿದೆ. ಯೋಜನಾ ಇಲಾಖೆಯು ವರದಿ ನೀಡಿದ ನಂತರ ಪರಿಶೀಲಿಸಿ ನೂತನ ಸಹಾಯಾನುದಾನ ನೀತಿ ಸಂಹಿತೆಯನ್ನು ರೂಪಿಸಲು ಕ್ರಮಕೈಗೊಳ್ಳಲಾಗುವುದು ಎಂದು ಉನ್ನತ ಶಿಕ್ಷಣ ಸಚಿವರು ತಿಳಿಸಿದರು. | ದಿನಾಂಕ: 06.05.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿ ಚರ್ಚಿಸಿದಾಗ, ಸರ್ಕಾರದ ಅಧಿಸೂಚನೆ ಸಂಖ್ಯೆ:ಇಡಿ/551/ ಯುಪಿಸಿ/ 99, ದಿ:07.08.2003ರಲ್ಲಿ ಹೊರಡಿಸಿರುವ ಕರ್ನಾಟಕ ಶಿಕ್ಷಣ ಸಂಸ್ಥೆಗಳು (ಕಾಲೇಜು ಶಿಕ್ಷಣ) ನಿಯಮ 2003ರ ನಿಯಮ 8(1)ರ ಪ್ರಕಾರ ದಿ:01.06.1987ರ ನಂತರ ಪ್ರಾರಂಭಿಸಲಾದ ಯಾವುದೇ ಹೊಸ ಖಾಸಗಿ ಕಾಲೇಜು/ ವಿಷಯಗಳು ಶಾಶ್ವತವಾಗಿ ಅನುದಾನ ಪಡೆಯಲು ಅವಕಾಶವಿರುವುದಿಲ್ಲ.<br><br>ಸರ್ಕಾರದ ದಿ:05.10.2009ರ ಅಧಿಸೂಚನೆ ಸಂಖ್ಯೆ:ಇಡಿ/30/ ಯುಪಿಸಿ/2008 ರಲ್ಲಿ ದಿ:01.06.1987 ರಿಂದ 31.03.1995ರ ಅವಧಿಯಲ್ಲಿ ಪ್ರಾರಂಭಿಸಲ್ಪಟ್ಟ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಆಡಳಿತ ಮಂಡಳಿಗಳ ಅನುದಾನರಹಿತ ಪ್ರಥಮ ದರ್ಜೆ ಕಾಲೇಜುಗಳನ್ನು ವೇತನಾನುದಾನಕ್ಕೆ ಒಳಪಡಿಸಲು ಅವಕಾಶವನ್ನು ಕಲ್ಪಿಸಲಾಗಿರುತ್ತದೆ.<br><br>ಅದರಂತೆ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಆಡಳಿತ ಮಂಡಳಿಗಳು ನಡೆಸುತ್ತಿರುವ ಒಟ್ಟು 36 ಕಾಲೇಜುಗಳ ಪೈಕಿ ಈಗಾಗಲೇ ಒಟ್ಟು 33 ಕಾಲೇಜುಗಳನ್ನು ಸರ್ಕಾರದ ವೇತನಾನುದಾನಕ್ಕೆ ಒಳಪಡಿಸಲಾಗಿರುತ್ತದೆ. ಇನ್ನುಳಿದ 03 ಕಾಲೇಜುಗಳನ್ನು ವೇತನಾನುದಾನಕ್ಕೆ ಒಳಪಡಿಸುವ ಬಗ್ಗೆ ನಿಯಮಾನುಸಾರ ಪರಿಶೀಲಿಸಲಾಗುತ್ತಿದೆ.<br><br>ದಿ:01.06.1987 ರಿಂದ 01.07.1995ರ ಅವಧಿಯಲ್ಲಿ ಪ್ರಾರಂಭವಾದ ಸಾಮಾನ್ಯ ಆಡಳಿತ ಮಂಡಳಿಗಳು ನಡೆಸುತ್ತಿರುವ ಒಟ್ಟು 128 ಅನುದಾನರಹಿತ ಕಾಲೇಜುಗಳ ಪೈಕಿ 93 ಕಾಲೇಜುಗಳಿಗೆ ಸಂಬಂಧಿಸಿದಂತೆ ಅಗತ್ಯ ಮಾಹಿತಿಯೊಂದಿಗೆ ಪ್ರಸ್ತಾವನೆಯನ್ನು ಸಿದ್ಧಪಡಿಸಿ, ಈ ವಿಷಯವನ್ನು ಸಚಿವ ಸಂಪುಟದ ಉಪ ಸಮಿತಿಯ ಪರಿಶೀಲನೆಗೆ ಸಲ್ಲಿಸಲಾಗಿತ್ತು. ಸಚಿವ ಸಂಪುಟ ಉಪಸಮಿತಿಯು ಈ ಪ್ರಸ್ತಾವನೆಯನ್ನು ಪರಿಶೀಲಿಸಿ ಸದರಿ ಕಾಲೇಜುಗಳನ್ನು ವೇತನಾನುದಾನಕ್ಕೆ |

| | | | | |
|---|---|---|---|---|
| | | | | ಒಳಪಡಿಸಲು ಶಿಫಾರಸ್ಸು ಮಾಡಿದೆ. ಸಚಿವ ಸಂಪುಟದ ಉಪ ಸಮಿತಿಯ ವರದಿಯೊಂದಿಗೆ ಪ್ರಸ್ತಾವನೆಯನ್ನು ಸಹಮತಿಗಾಗಿ ಆರ್ಥಿಕ ಇಲಾಖೆಗೆ ಕಳುಹಿಸಲಾಗಿತ್ತು. ಆರ್ಥಿಕ ಇಲಾಖೆಯು ಕೆಲವು ಮಾಹಿತಿ/ಸ್ಪಷ್ಟೀಕರಣಗಳನ್ನು ಕೋರಿರುವುದರಿಂದ ದಿನಾಂಕ:27.02.2019 ರಂದು ಪತ್ರ ಬರೆದು ಕಾಲೇಜು ಶಿಕ್ಷಣ ಇಲಾಖೆಯಿಂದ ಮಾಹಿತಿ ಕೋರಿದ್ದು, ವರದಿಯನ್ನು ನಿರೀಕ್ಷಿಸಲಾಗಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಸಮಿತಿಯು ಒಪ್ಪಿ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |
| 27 | 6249<br>ಚು.ರ.ಪ್ರ; 138<br>ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ<br>ವಿಪನದಿ: 25.11.2016 | 1994–95ನೇ ಸಾಲಿನವರೆಗೆ ಪ್ರಾರಂಭಿಸಿದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಆಡಳಿತ ಮಂಡಳಿಯ ಪ್ರಥಮ ದರ್ಜೆ ಕಾಲೇಜುಗಳನ್ನು ಅನುದಾನಕ್ಕೆ ಒಳಪಡಿಸುವ ಬಗ್ಗೆ. | ದಿನಾಂಕ:01.06.1987 ರಿಂದ 31.03.1995ರ ಅವಧಿಯಲ್ಲಿ ಪ್ರಾರಂಭಿಸಲ್ಪಟ್ಟು ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ನಡೆಸುತ್ತಿರುವ ಒಟ್ಟು 36 ಕಾಲೇಜುಗಳ ಪೈಕಿ ಈಗಾಗಲೇ ಒಟ್ಟೂ 28 ಕಾಲೇಜುಗಳನ್ನು ಸರ್ಕಾರದ ವೇತನಾನುದಾನಕ್ಕೆ ಒಳಪಡಿಸ ಲಾಗಿರುತ್ತದೆ. ಇನ್ನುಳಿದ 08 ಕಾಲೇಜುಗಳನ್ನು ವೇತನಾನುದಾನಕ್ಕೆ ಒಳಪಡಿಸುವ ಬಗ್ಗೆ ನಿಯಮಾನುಸಾರ ಪರಿಶೀಲಿಸ ಲಾಗುತ್ತಿದೆ. ದಿನಾಂಕ: 01.06.1987 ರಿಂದ 01.07.1995ರವರೆಗೆ ಸಾಮಾನ್ಯ ವರ್ಗದ ಆಡಳಿತ ಮಂಡಳಿಗಳು ವೇತನಾನುದಾನಕ್ಕೆ ಅನುದಾನರಹಿತ ಪದವಿ ಕಾಲೇಜುಗಳನ್ನು ವೇತನಾನುದಾನಕ್ಕೆ ಒಳಪಡಿಸುವ ಬಗ್ಗೆ ಸಚಿವ | ದಿನಾಂಕ: 06.05.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿ ಚರ್ಚಿಸಿದಾಗ, ಸರ್ಕಾರದ ಅಧಿಸೂಚನೆ ಸಂಖ್ಯೆ:ಇಡಿ/551/ ಯುಪಿಸಿ/ 99, ದಿ:07.08.2003ರಲ್ಲಿ ಹೊರಡಿಸಿರುವ ಕರ್ನಾಟಕ ಶಿಕ್ಷಣ ಸಂಸ್ಥೆಗಳು (ಕಾಲೇಜು ಶಿಕ್ಷಣ) ನಿಯಮ 2003ರ ನಿಯಮ 8(1)ರ ಪ್ರಕಾರ ದಿ:01.06.1987ರ ನಂತರ ಪ್ರಾರಂಭಿಸಲಾದ ಯಾವುದೇ ಹೊಸ ಖಾಸಗಿ ಕಾಲೇಜು/ ವಿಷಯಗಳು ಶಾಶ್ವತವಾಗಿ ಅನುದಾನ ಪಡೆಯಲು ಅವಕಾಶವಿರುವುದಿಲ್ಲ.<br><br>ಸರ್ಕಾರದ ದಿ:05.10.2009ರ ಅಧಿಸೂಚನೆ ಸಂಖ್ಯೆ:ಇಡಿ/30/ ಯುಪಿಸಿ/2008 ರಲ್ಲಿ ದಿ:01.06.1987 ರಿಂದ 31.03.1995ರ ಅವಧಿಯಲ್ಲಿ ಪ್ರಾರಂಭಿಸಲ್ಪಟ್ಟ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಆಡಳಿತ ಮಂಡಳಿಗಳ ಅನುದಾನರಹಿತ ಪ್ರಥಮ ದರ್ಜೆ ಕಾಲೇಜುಗಳನ್ನು ವೇತನಾನುದಾನಕ್ಕೆ ಒಳಪಡಿಸಲು ಅವಕಾಶವನ್ನು ಕಲ್ಪಿಸಲಾಗಿರುತ್ತದೆ.<br><br>ಅದರಂತೆ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಆಡಳಿತ ಮಂಡಳಿಗಳು ನಡೆಸುತ್ತಿರುವ ಒಟ್ಟು 36 ಕಾಲೇಜುಗಳ ಪೈಕಿ ಈಗಾಗಲೇ ಒಟ್ಟು 33 ಕಾಲೇಜುಗಳನ್ನು ಸರ್ಕಾರದ ವೇತನಾನುದಾನಕ್ಕೆ ಒಳಪಡಿಸಲಾಗಿರುತ್ತದೆ. ಇನ್ನುಳಿದ 03 ಕಾಲೇಜುಗಳನ್ನು ವೇತನಾನುದಾನಕ್ಕೆ ಒಳಪಡಿಸುವ ಬಗ್ಗೆ ನಿಯಮಾನುಸಾರ ಪರಿಶೀಲಿಸಲಾಗುತ್ತಿದೆ. |

| | | | | |
|---|---|---|---|---|
| | | | ಸಂಪುಟದ ಉಪ ಸಮಿತಿಯ ಪರಿಶೀಲನೆಯಲ್ಲಿದೆ ಎಂದು ಮಾನ್ಯ ಉನ್ನತ ಶಿಕ್ಷಣ ಸಚಿವರು ತಿಳಿಸಿದರು. | ದಿ:01.06.1987 ರಿಂದ 01.07.1995ರ ಅವಧಿಯಲ್ಲಿ ಪ್ರಾರಂಭವಾದ ಸಾಮಾನ್ಯ ಆಡಳಿತ ಮಂಡಳಿಗಳು ನಡೆಸುತ್ತಿರುವ ಒಟ್ಟು 128 ಅನುದಾನರಹಿತ ಕಾಲೇಜುಗಳ ಪೈಕಿ 93 ಕಾಲೇಜುಗಳಿಗೆ ಸಂಬಂಧಿಸಿದಂತೆ ಅಗತ್ಯ ಮಾಹಿತಿಯೊಂದಿಗೆ ಪ್ರಸ್ತಾವನೆಯನ್ನು ಸಿದ್ಧಪಡಿಸಿ, ಈ ವಿಷಯವನ್ನು ಸಚಿವ ಸಂಪುಟದ ಉಪ ಸಮಿತಿಯ ಪರಿಶೀಲನೆಗೆ ಸಲ್ಲಿಸಲಾಗಿತ್ತು. ಸಚಿವ ಸಂಪುಟ ಉಪಸಮಿತಿಯು ಈ ಪ್ರಸ್ತಾವನೆಯನ್ನು ಪರಿಶೀಲಿಸಿ ಸದರಿ ಕಾಲೇಜುಗಳನ್ನು ವೇತನಾನುದಾನಕ್ಕೆ ಒಳಪಡಿಸಲು ಶಿಫಾರಸ್ಸು ಮಾಡಿದೆ. ಸಚಿವ ಸಂಪುಟದ ಉಪ ಸಮಿತಿಯ ವರದಿಯೊಂದಿಗೆ ಪ್ರಸ್ತಾವನೆಯನ್ನು ಸಹಮತಿಗಾಗಿ ಆರ್ಥಿಕ ಇಲಾಖೆಗೆ ಕಳುಹಿಸಲಾಗಿತ್ತು. ಆರ್ಥಿಕ ಇಲಾಖೆಯು ಕೆಲವು ಮಾಹಿತಿ/ ಸ್ಪಷ್ಟೀಕರಣಗಳನ್ನು ಕೋರಿರುವುದರಿಂದ ದಿನಾಂಕ: 27.02.2019 ರಂದು ಪತ್ರ ಬರೆದು ಕಾಲೇಜು ಶಿಕ್ಷಣ ಇಲಾಖೆಯಿಂದ ಮಾಹಿತಿ ಕೋರಿದ್ದು, ವರದಿಯನ್ನು ನಿರೀಕ್ಷಿಸಲಾಗಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಸಮಿತಿಯು ಒಪ್ಪಿ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |
| 28 | 6244<br>ಚು.ರ.ಪ್ರ: 2210<br>ಶ್ರೀ ನಾರಾಯಣ ಸಾ. ಬಾಂಡಗೆ<br>ವಿಪನದಿ: 24.07.2015 | ರಾಜ್ಯದಲ್ಲಿರುವ ಶಿಕ್ಷಣ ಸಂಸ್ಥೆಗಳಿಗೆ ಅನುದಾನ ಕೊಡುವ ಕುರಿತು ಹಾಗೂ ಉಪ ಸಮಿತಿಯ ಮುಂದೆ ಪ್ರಸ್ತಾವನೆ ಪರಿಶೀಲನೆಯಲ್ಲಿರುವ ವಿಷಯಗಳ ಬಗ್ಗೆ. | ದಿನಾಂಕ:01.06.1987 ರಿಂದ 01.07.0995 ರವರೆಗೆ ಪ್ರಾರಂಭಿಸಿ ಸತತವಾಗಿ ನಡೆಸುತ್ತಿರುವ ಅನುದಾನರಹಿತ ಕಾಲೇಜುಗಳನ್ನು ವೇತನಾನುದಾನಕ್ಕೆ ಒಳಪಡಿಸುವ ಕುರಿತು ಸರ್ಕಾರದ ಪರಿಶೀಲನೆಯಲ್ಲಿದೆ.<br>ಈ ಬಗ್ಗೆ ಸಚಿವ ಸಂಪುಟದ ಉಪ ಸಮಿತಿ ರಚಿಸಲಾಗಿದ್ದು, ದಿನಾಂಕ 01.06.1987 ರಿಂದ 01.07.1995ರ ವರೆಗೆ ಪ್ರಾರಂಭವಾದ ಸಾಮಾನ್ಯ ಆಡಳಿತ | ದಿನಾಂಕ: 06.05.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿ ಚರ್ಚಿಸಿದಾಗ, ಸರ್ಕಾರದ ಅಧಿಸೂಚನೆ ಸಂಖ್ಯೆ:ಇಡಿ/551/ ಯುಪಿಸಿ/ 99, ದಿ:07.08.2003ರಲ್ಲಿ ಹೊರಡಿಸಿರುವ ಕರ್ನಾಟಕ ಶಿಕ್ಷಣ ಸಂಸ್ಥೆಗಳು (ಕಾಲೇಜು ಶಿಕ್ಷಣ) ನಿಯಮ 2003ರ ನಿಯಮ 8(1)ರ ಪ್ರಕಾರ ದಿ:01.06.1987ರ ನಂತರ ಪ್ರಾರಂಭಿಸಲಾದ ಯಾವುದೇ ಹೊಸ ಖಾಸಗಿ ಕಾಲೇಜು/ ವಿಷಯಗಳು ಶಾಶ್ವತವಾಗಿ ಅನುದಾನ ಪಡೆಯಲು ಅವಕಾಶವಿರುವುದಿಲ್ಲ.<br>ಸರ್ಕಾರದ ದಿ:05.10.2009ರ ಅಧಿಸೂಚನೆ ಸಂಖ್ಯೆ:ಇಡಿ/30/ ಯುಪಿಸಿ/2008 ರಲ್ಲಿ ದಿ:01.06.1987 ರಿಂದ 31.03.1995ರ ಅವಧಿಯಲ್ಲಿ ಪ್ರಾರಂಭಿಸಲ್ಪಟ್ಟ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಆಡಳಿತ ಮಂಡಳಿಗಳ ಅನುದಾನರಹಿತ ಪ್ರಥಮ ದರ್ಜೆ ಕಾಲೇಜುಗಳನ್ನು ವೇತನಾನುದಾನಕ್ಕೆ ಒಳಪಡಿಸಲು ಅವಕಾಶವನ್ನು ಕಲ್ಪಿಸಲಾಗಿರುತ್ತದೆ. |

| | | | | |
|---|---|---|---|---|
| | | | ಮಂಡಳಿಗಳು ನಡೆಸುತ್ತಿರುವ ಅನುದಾನರಹಿತ ಕಾಲೇಜುಗಳನ್ನು 01.06.1987ರ ಪೂರ್ವದಲ್ಲಿ ವೇತನಾನುದಾನಕ್ಕೆ ಒಳಪಟ್ಟ ಕಾಲೇಜುಗಳಲ್ಲಿ ಹೊಸದಾಗಿ ಪ್ರಾರಂಭಿಸಿರುವ ವಿಷಯಗಳನ್ನು ವೇತನಾನುದಾನಕ್ಕೆ ಒಳಪಡಿಸುವ ಬಗ್ಗೆ ಪರಿಶೀಲನೆಯಲ್ಲಿದೆ ಎಂದು ಮಾನ್ಯ ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರು ತಿಳಿಸಿದರು. | ಅದರಂತೆ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಆಡಳಿತ ಮಂಡಳಿಗಳು ನಡೆಸುತ್ತಿರುವ ಒಟ್ಟು 36 ಕಾಲೇಜುಗಳ ಪೈಕಿ ಈಗಾಗಲೇ ಒಟ್ಟು 33 ಕಾಲೇಜುಗಳನ್ನು ಸರ್ಕಾರದ ವೇತನಾನುದಾನಕ್ಕೆ ಒಳಪಡಿಸಲಾಗಿರುತ್ತದೆ. ಇನ್ನುಳಿದ 03 ಕಾಲೇಜುಗಳನ್ನು ವೇತನಾನುದಾನಕ್ಕೆ ಒಳಪಡಿಸುವ ಬಗ್ಗೆ ನಿಯಮಾನುಸಾರ ಪರಿಶೀಲಿಸಲಾಗುತ್ತಿದೆ.<br><br>ದಿ:01.06.1987 ರಿಂದ 01.07.1995ರ ಅವಧಿಯಲ್ಲಿ ಪ್ರಾರಂಭವಾದ ಸಾಮಾನ್ಯ ಆಡಳಿತ ಮಂಡಳಿಗಳು ನಡೆಸುತ್ತಿರುವ ಒಟ್ಟು 128 ಅನುದಾನರಹಿತ ಕಾಲೇಜುಗಳ ಪೈಕಿ 93 ಕಾಲೇಜುಗಳಿಗೆ ಸಂಬಂಧಿಸಿದಂತೆ ಅಗತ್ಯ ಮಾಹಿತಿಯೊಂದಿಗೆ ಪ್ರಸ್ತಾವನೆಯನ್ನು ಸಿದ್ಧಪಡಿಸಿ, ಈ ವಿಷಯವನ್ನು ಸಚಿವ ಸಂಪುಟದ ಉಪ ಸಮಿತಿಯ ಪರಿಶೀಲನೆಗೆ ಸಲ್ಲಿಸಲಾಗಿತ್ತು. ಸಚಿವ ಸಂಪುಟ ಉಪಸಮಿತಿಯು ಈ ಪ್ರಸ್ತಾವನೆಯನ್ನು ಪರಿಶೀಲಿಸಿ ಸದರಿ ಕಾಲೇಜುಗಳನ್ನು ವೇತನಾನುದಾನಕ್ಕೆ ಒಳಪಡಿಸಲು ಶಿಫಾರಸ್ಸು ಮಾಡಿದೆ. ಸಚಿವ ಸಂಪುಟದ ಉಪ ಸಮಿತಿಯ ವರದಿಯೊಂದಿಗೆ ಪ್ರಸ್ತಾವನೆಯನ್ನು ಸಹಮತಿಗಾಗಿ ಆರ್ಥಿಕ ಇಲಾಖೆಗೆ ಕಳುಹಿಸಲಾಗಿತ್ತು. ಆರ್ಥಿಕ ಇಲಾಖೆಯು ಕೆಲವು ಮಾಹಿತಿ/ಸ್ಪಷ್ಟೀಕರಣಗಳನ್ನು ಕೋರಿರುವುದರಿಂದ ದಿನಾಂಕ:27.02.2019 ರಂದು ಪತ್ರ ಬರೆದು ಕಾಲೇಜು ಶಿಕ್ಷಣ ಇಲಾಖೆಯಿಂದ ಮಾಹಿತಿ ಕೋರಿದ್ದು, ವರದಿಯನ್ನು ನಿರೀಕ್ಷಿಸಲಾಗಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಸಮಿತಿಯು ಒಪ್ಪಿ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |
| 29 | 6224<br>ಚು.ಗು.ಪ್ರ : 4134<br>ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ<br>ವಿ.ಪ.ನ.ದಿ: 17.11.2017 | ರಾಜ್ಯದಲ್ಲಿ 1994–95 ರವರೆಗೆ ಪ್ರಾರಂಭಿಸಿದ ಸಾಮಾನ್ಯ ಆಡಳಿತ ಮಂಡಳಿಗಳ ಪ್ರಥಮ ದರ್ಜೆ ಕಾಲೇಜುಗಳನ್ನು ವೇತನಾನುದಾನಕ್ಕೆ ಒಳಪಡಿಸುವ ಬಗ್ಗೆ. | ಸಾಮಾನ್ಯ ಆಡಳಿತ ಮಂಡಳಿಗಳ ಪ್ರಥಮ ದರ್ಜೆ ಕಾಲೇಜುಗಳನ್ನು ವೇತನಾನುದಾನಕ್ಕೆ ಒಳಪಡಿಸುವ ವಿಷಯವು ಸಚಿವ ಸಂಪುಟದ ಉಪಸಮಿತಿಯ ಪರಿಶೀಲನೆ ಯಲ್ಲಿದ್ದು ಉಪಸಮಿತಿಯ ಶಿಫಾರಸ್ಸುಗಳನ್ನು ನಿರೀಕ್ಷಿಸಲಾಗಿದೆ. ಉಪಸಮಿತಿಯು ತನ್ನ | ದಿನಾಂಕ: 06.05.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿ ಚರ್ಚಿಸಿದಾಗ, ಸರ್ಕಾರದ ಅಧಿಸೂಚನೆ ಸಂಖ್ಯೆ:ಇಡಿ/551/ ಯುಪಿಸಿ/ 99, ದಿ:07.08.2003ರಲ್ಲಿ ಹೊರಡಿಸಿರುವ ಕರ್ನಾಟಕ ಶಿಕ್ಷಣ ಸಂಸ್ಥೆಗಳು (ಕಾಲೇಜು ಶಿಕ್ಷಣ) ನಿಯಮ 2003ರ ನಿಯಮ 8(1)ರ ಪ್ರಕಾರ ದಿ:01.06.1987ರ ನಂತರ ಪ್ರಾರಂಭಿಸಲಾದ ಯಾವುದೇ ಹೊಸ ಖಾಸಗಿ ಕಾಲೇಜು/ ವಿಷಯಗಳು ಶಾಶ್ವತವಾಗಿ ಅನುದಾನ ಪಡೆಯಲು ಅವಕಾಶವಿರುವುದಿಲ್ಲ. |

| | | | | |
|---|---|---|---|---|
| | | | ಶಿಫಾರಸ್ಸುಗಳನ್ನು ನೀಡಿದ ನಂತರ ಮುಂದಿನ ಅಗತ್ಯ ಕ್ರಮವನ್ನು ಕೈಗೊಳ್ಳಲು ಉದ್ದೇಶಿಸಲಾಗಿದೆ ಎಂದು ಮಾನ್ಯ ಉನ್ನತ ಶಿಕ್ಷಣ ಸಚಿವರು ತಿಳಿಸಿದರು. | ಸರ್ಕಾರದ ದಿ:05.10.2009ರ ಅಧಿಸೂಚನೆ ಸಂಖ್ಯೆ:ಇಡಿ/30/ ಯುಪಿಸಿ/2008 ರಲ್ಲಿ ದಿ:01.06.1987 ರಿಂದ 31.03.1995ರ ಅವಧಿಯಲ್ಲಿ ಪ್ರಾರಂಭಿಸಲ್ಪಟ್ಟ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಆಡಳಿತ ಮಂಡಳಿಗಳ ಅನುದಾನರಹಿತ ಪ್ರಥಮ ದರ್ಜೆ ಕಾಲೇಜುಗಳನ್ನು ವೇತನಾನುದಾನಕ್ಕೆ ಒಳಪಡಿಸಲು ಅವಕಾಶವನ್ನು ಕಲ್ಪಿಸಲಾಗಿರುತ್ತದೆ.<br><br>ಅದರಂತೆ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಆಡಳಿತ ಮಂಡಳಿಗಳು ನಡೆಸುತ್ತಿರುವ ಒಟ್ಟು 36 ಕಾಲೇಜುಗಳ ಪೈಕಿ ಈಗಾಗಲೇ ಒಟ್ಟು 33 ಕಾಲೇಜುಗಳನ್ನು ಸರ್ಕಾರದ ವೇತನಾನುದಾನಕ್ಕೆ ಒಳಪಡಿಸಲಾಗಿರುತ್ತದೆ. ಇನ್ನುಳಿದ 03 ಕಾಲೇಜುಗಳನ್ನು ವೇತನಾನುದಾನಕ್ಕೆ ಒಳಪಡಿಸುವ ಬಗ್ಗೆ ನಿಯಮಾನುಸಾರ ಪರಿಶೀಲಿಸಲಾಗುತ್ತಿದೆ.<br><br>ದಿ:01.06.1987 ರಿಂದ 01.07.1995ರ ಅವಧಿಯಲ್ಲಿ ಪ್ರಾರಂಭವಾದ ಸಾಮಾನ್ಯ ಆಡಳಿತ ಮಂಡಳಿಗಳು ನಡೆಸುತ್ತಿರುವ ಒಟ್ಟು 128 ಅನುದಾನರಹಿತ ಕಾಲೇಜುಗಳ ಪೈಕಿ 93 ಕಾಲೇಜುಗಳಿಗೆ ಸಂಬಂಧಿಸಿದಂತೆ ಅಗತ್ಯ ಮಾಹಿತಿಯೊಂದಿಗೆ ಪ್ರಸ್ತಾವನೆಯನ್ನು ಸಿದ್ಧಪಡಿಸಿ, ಈ ವಿಷಯವನ್ನು ಸಚಿವ ಸಂಪುಟದ ಉಪ ಸಮಿತಿಯ ಪರಿಶೀಲನೆಗೆ ಸಲ್ಲಿಸಲಾಗಿತ್ತು. ಸಚಿವ ಸಂಪುಟ ಉಪಸಮಿತಿಯು ಈ ಪ್ರಸ್ತಾವನೆಯನ್ನು ಪರಿಶೀಲಿಸಿ ಸದರಿ ಕಾಲೇಜುಗಳನ್ನು ವೇತನಾನುದಾನಕ್ಕೆ ಒಳಪಡಿಸಲು ಶಿಫಾರಸ್ಸು ಮಾಡಿದೆ. ಸಚಿವ ಸಂಪುಟದ ಉಪ ಸಮಿತಿಯ ವರದಿಯೊಂದಿಗೆ ಪ್ರಸ್ತಾವನೆಯನ್ನು ಸಹಮತಿಗಾಗಿ ಆರ್ಥಿಕ ಇಲಾಖೆಗೆ ಕಳುಹಿಸಲಾಗಿತ್ತು. ಆರ್ಥಿಕ ಇಲಾಖೆಯು ಕೆಲವು ಮಾಹಿತಿ/ ಸ್ಪಷ್ಟೀಕರಣಗಳನ್ನು ಕೋರಿರುವುದರಿಂದ ದಿನಾಂಕ:27.02.2019 ರಂದು ಪತ್ರ ಬರೆದು ಕಾಲೇಜು ಶಿಕ್ಷಣ ಇಲಾಖೆಯಿಂದ ಮಾಹಿತಿ ಕೋರಿದ್ದು, ವರದಿಯನ್ನು ನಿರೀಕ್ಷಿಸಲಾಗಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಸಮಿತಿಯು ಒಪ್ಪಿ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |

| | | | | |
|---|---|---|---|---|
| 30 | 6228<br>ಚು.ಗು.ಪ್ರ : 4773<br>ಶ್ರೀ ಪುಟ್ಟಣ್ಣ<br>ವಿ.ಪ.ನ.ದಿ :<br>24.11.2017 | ಸರ್ಕಾರಿ ಕಾಲೇಜುಗಳ ಸಿಬ್ಬಂದಿಗೆ ವೇತನಾನುದಾನ ನೀಡಲು ಅಗತ್ಯವಿರುವ ಅಂದಾಜು ಮೊತ್ತ ಹಾಗೂ ಕೈಗೊಂಡಿರುವ ಕ್ರಮಗಳ ಬಗ್ಗೆ. | ಉಪ ಸಮಿತಿಯು ಸಲ್ಲಿಸುವ ಶಿಫಾರಸ್ಸುಗಳ ಬಗ್ಗೆ ಸರ್ಕಾರವು ಕೈಗೊಳ್ಳುವ ನಿರ್ಣಯದಂತೆ ವೇತನಾನುದಾನ ನೀಡುವ ಬಗ್ಗೆ ಕ್ರಮವಹಿಸಲಾಗುವುದು ಎಂದು ಮಾನ್ಯ ಉನ್ನತ ಶಿಕ್ಷಣ ಸಚಿವರು ತಿಳಿಸಿದರು. | ದಿನಾಂಕ: 06.05.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿ ಚರ್ಚಿಸಿದಾಗ, ಸರ್ಕಾರದ ಅಧಿಸೂಚನೆ ಸಂಖ್ಯೆ:ಇಡಿ/551/ ಯುಪಿಸಿ/ 99, ದಿ:07.08.2003ರಲ್ಲಿ ಹೊರಡಿಸಿರುವ ಕರ್ನಾಟಕ ಶಿಕ್ಷಣ ಸಂಸ್ಥೆಗಳು (ಕಾಲೇಜು ಶಿಕ್ಷಣ) ನಿಯಮ 2003ರ ನಿಯಮ 8(1)ರ ಪ್ರಕಾರ ದಿ:01.06.1987ರ ನಂತರ ಪ್ರಾರಂಭಿಸಲಾದ ಯಾವುದೇ ಹೊಸ ಖಾಸಗಿ ಕಾಲೇಜು/ ವಿಷಯಗಳು ಶಾಶ್ವತವಾಗಿ ಅನುದಾನ ಪಡೆಯಲು ಅವಕಾಶವಿರುವುದಿಲ್ಲ.<br><br>ಸರ್ಕಾರದ ದಿ:05.10.2009ರ ಅಧಿಸೂಚನೆ ಸಂಖ್ಯೆ:ಇಡಿ/30/ ಯುಪಿಸಿ/2008 ರಲ್ಲಿ ದಿ:01.06.1987 ರಿಂದ 31.03.1995ರ ಅವಧಿಯಲ್ಲಿ ಪ್ರಾರಂಭಿಸಲ್ಪಟ್ಟ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಆಡಳಿತ ಮಂಡಳಿಗಳ ಅನುದಾನರಹಿತ ಪ್ರಥಮ ದರ್ಜೆ ಕಾಲೇಜುಗಳನ್ನು ವೇತನಾನುದಾನಕ್ಕೆ ಒಳಪಡಿಸಲು ಅವಕಾಶವನ್ನು ಕಲ್ಪಿಸಲಾಗಿರುತ್ತದೆ.<br><br>ಅದರಂತೆ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಆಡಳಿತ ಮಂಡಳಿಗಳು ನಡೆಸುತ್ತಿರುವ ಒಟ್ಟು 36 ಕಾಲೇಜುಗಳ ಪೈಕಿ ಈಗಾಗಲೇ ಒಟ್ಟು 33 ಕಾಲೇಜುಗಳನ್ನು ಸರ್ಕಾರದ ವೇತನಾನುದಾನಕ್ಕೆ ಒಳಪಡಿಸಲಾಗಿರುತ್ತದೆ. ಇನ್ನುಳಿದ 03 ಕಾಲೇಜುಗಳನ್ನು ವೇತನಾನುದಾನಕ್ಕೆ ಒಳಪಡಿಸುವ ಬಗ್ಗೆ ನಿಯಮಾನುಸಾರ ಪರಿಶೀಲಿಸಲಾಗುತ್ತಿದೆ.<br><br>ದಿ:01.06.1987 ರಿಂದ 01.07.1995ರ ಅವಧಿಯಲ್ಲಿ ಪ್ರಾರಂಭವಾದ ಸಾಮಾನ್ಯ ಆಡಳಿತ ಮಂಡಳಿಗಳು ನಡೆಸುತ್ತಿರುವ ಒಟ್ಟು 128 ಅನುದಾನರಹಿತ ಕಾಲೇಜುಗಳ ಪೈಕಿ 93 ಕಾಲೇಜುಗಳಿಗೆ ಸಂಬಂಧಿಸಿದಂತೆ ಅಗತ್ಯ ಮಾಹಿತಿಯೊಂದಿಗೆ ಪ್ರಸ್ತಾವನೆಯನ್ನು ಸಿದ್ಧಪಡಿಸಿ, ಈ ವಿಷಯವನ್ನು ಸಚಿವ ಸಂಪುಟದ ಉಪ ಸಮಿತಿಯ ಪರಿಶೀಲನೆಗೆ ಸಲ್ಲಿಸಲಾಗಿತ್ತು. ಸಚಿವ ಸಂಪುಟ ಉಪಸಮಿತಿಯು ಈ ಪ್ರಸ್ತಾವನೆಯನ್ನು ಪರಿಶೀಲಿಸಿ ಸದರಿ ಕಾಲೇಜುಗಳನ್ನು ವೇತನಾನುದಾನಕ್ಕೆ ಒಳಪಡಿಸಲು ಶಿಫಾರಸ್ಸು ಮಾಡಿದೆ. ಸಚಿವ ಸಂಪುಟದ ಉಪ |

| | | | | |
|---|---|---|---|---|
| | | | | ಸಮಿತಿಯ ವರದಿಯೊಂದಿಗೆ ಪ್ರಸ್ತಾವನೆಯನ್ನು ಸಹಮತಿಗಾಗಿ ಆರ್ಥಿಕ ಇಲಾಖೆಗೆ ಕಳುಹಿಸಲಾಗಿತ್ತು. ಆರ್ಥಿಕ ಇಲಾಖೆಯು ಕೆಲವು ಮಾಹಿತಿ/ಸ್ಪಷ್ಟೀಕರಣಗಳನ್ನು ಕೋರಿರುವುದರಿಂದ ದಿನಾಂಕ:27.02.2019 ರಂದು ಪತ್ರ ಬರೆದು ಕಾಲೇಜು ಶಿಕ್ಷಣ ಇಲಾಖೆಯಿಂದ ಮಾಹಿತಿ ಕೋರಿದ್ದು, ವರದಿಯನ್ನು ನಿರೀಕ್ಷಿಸಲಾಗಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಸಮಿತಿಯು ಒಪ್ಪಿ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |
| 31 | 6229<br>ಚು.ಗು.ಪ್ರ : 4831<br>ಶ್ರೀ. ಕೆ.ಟಿ.ಶ್ರೀಕಂಠೇಗೌಡ<br>ವಿ.ಪ.ನ.ದಿ : 24.11.2017 | 1995ರ ಪೂರ್ವದಲ್ಲಿ ಆರಂಭಗೊಂಡು ವೇತನಾನುದಾನಕ್ಕೆ ಒಳಪಡದ ಕಾಲೇಜುಗಳನ್ನು ವೇತನಾನುದಾನಕ್ಕೆ ಒಳಪಡಿಸುವ ಬಗ್ಗೆ. | 1987 ರಿಂದ 1995 ರವರೆಗಿನ ಅವಧಿಯಲ್ಲಿ ಆರಂಭಗೊಂಡಿರುವ ಸಾಮಾನ್ಯ ವರ್ಗದ ಆಡಳಿತ ಮಂಡಳಿಗಳು ನಡೆಸುತ್ತಿರುವ ಪದವಿ ಕಾಲೇಜುಗಳನ್ನು ವೇತನಾನುದಾನಕ್ಕೆ ಒಳಪಡಿಸುವ ವಿಷಯವು ಸಚಿವ ಸಂಪುಟದ ಉಪಸಮಿತಿಯ ಪರಿಶೀಲನೆ ಯಲ್ಲಿದ್ದು, ಉಪಸಮಿತಿಯ ಶಿಫಾರಸ್ಸುಗಳ ನಂತರ ವೇತನಾನುದಾನಕ್ಕೊಳಪಡಿಸುವ ಬಗ್ಗೆ ಕ್ರಮವಹಿಸಲಾಗುವುದು ಎಂದು ಮಾನ್ಯ ಉನ್ನತ ಶಿಕ್ಷಣ ಸಚಿವರು ತಿಳಿಸಿದರು. | ದಿನಾಂಕ: 06.05.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚೆ ಚರ್ಚಿಸಿದಾಗ, ಸರ್ಕಾರದ ಅಧಿಸೂಚನೆ ಸಂಖ್ಯೆ:ಇಡಿ/551/ಯುಪಿಸಿ/ 99, ದಿ:07.08.2003ರಲ್ಲಿ ಹೊರಡಿಸಿರುವ ಕರ್ನಾಟಕ ಶಿಕ್ಷಣ ಸಂಸ್ಥೆಗಳು (ಕಾಲೇಜು ಶಿಕ್ಷಣ) ನಿಯಮ 2003ರ ನಿಯಮ 8(1)ರ ಪ್ರಕಾರ ದಿ:01.06.1987ರ ನಂತರ ಪ್ರಾರಂಭಿಸಲಾದ ಯಾವುದೇ ಹೊಸ ಖಾಸಗಿ ಕಾಲೇಜು/ವಿಷಯಗಳು ಶಾಶ್ವತವಾಗಿ ಅನುದಾನ ಪಡೆಯಲು ಅವಕಾಶವಿರುವುದಿಲ್ಲ.<br><br>ಸರ್ಕಾರದ ದಿ:05.10.2009ರ ಅಧಿಸೂಚನೆ ಸಂಖ್ಯೆ:ಇಡಿ/30/ ಯುಪಿಸಿ/2008 ರಲ್ಲಿ ದಿ:01.06.1987 ರಿಂದ 31.03.1995ರ ಅವಧಿಯಲ್ಲಿ ಪ್ರಾರಂಭಿಸಲ್ಪಟ್ಟ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಆಡಳಿತ ಮಂಡಳಿಗಳ ಅನುದಾನರಹಿತ ಪ್ರಥಮ ದರ್ಜೆ ಕಾಲೇಜುಗಳನ್ನು ವೇತನಾನುದಾನಕ್ಕೆ ಒಳಪಡಿಸಲು ಅವಕಾಶವನ್ನು ಕಲ್ಪಿಸಲಾಗಿರುತ್ತದೆ.<br><br>ಅದರಂತೆ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಆಡಳಿತ ಮಂಡಳಿಗಳು ನಡೆಸುತ್ತಿರುವ ಒಟ್ಟು 36 ಕಾಲೇಜುಗಳ ಪೈಕಿ ಈಗಾಗಲೇ ಒಟ್ಟು 33 ಕಾಲೇಜುಗಳನ್ನು ಸರ್ಕಾರದ ವೇತನಾನುದಾನಕ್ಕೆ ಒಳಪಡಿಸಲಾಗಿರುತ್ತದೆ. ಇನ್ನುಳಿದ 03 ಕಾಲೇಜುಗಳನ್ನು ವೇತನಾನುದಾನಕ್ಕೆ ಒಳಪಡಿಸುವ ಬಗ್ಗೆ ನಿಯಮಾನುಸಾರ ಪರಿಶೀಲಿಸಲಾಗುತ್ತಿದೆ. |

| | | | | |
|---|---|---|---|---|
| | | | | ದಿ:01.06.1987 ರಿಂದ 01.07.1995ರ ಅವಧಿಯಲ್ಲಿ ಪ್ರಾರಂಭವಾದ ಸಾಮಾನ್ಯ ಆಡಳಿತ ಮಂಡಳಿಗಳು ನಡೆಸುತ್ತಿರುವ ಒಟ್ಟು 128 ಅನುದಾನರಹಿತ ಕಾಲೇಜುಗಳ ಪೈಕಿ 93 ಕಾಲೇಜುಗಳಿಗೆ ಸಂಬಂಧಿಸಿದಂತೆ ಅಗತ್ಯ ಮಾಹಿತಿಯೊಂದಿಗೆ ಪ್ರಸ್ತಾವನೆಯನ್ನು ಸಿದ್ಧಪಡಿಸಿ, ಈ ವಿಷಯವನ್ನು ಸಚಿವ ಸಂಪುಟದ ಉಪ ಸಮಿತಿಯ ಪರಿಶೀಲನೆಗೆ ಸಲ್ಲಿಸಲಾಗಿತ್ತು. ಸಚಿವ ಸಂಪುಟ ಉಪಸಮಿತಿಯು ಈ ಪ್ರಸ್ತಾವನೆಯನ್ನು ಪರಿಶೀಲಿಸಿ ಸದರಿ ಕಾಲೇಜುಗಳನ್ನು ವೇತನಾನುದಾನಕ್ಕೆ ಒಳಪಡಿಸಲು ಶಿಫಾರಸ್ಸು ಮಾಡಿದೆ. ಸಚಿವ ಸಂಪುಟದ ಉಪ ಸಮಿತಿಯ ವರದಿಯೊಂದಿಗೆ ಪ್ರಸ್ತಾವನೆಯನ್ನು ಸಹಮತಿಗಾಗಿ ಆರ್ಥಿಕ ಇಲಾಖೆಗೆ ಕಳುಹಿಸಲಾಗಿತ್ತು. ಆರ್ಥಿಕ ಇಲಾಖೆಯು ಕೆಲವು ಮಾಹಿತಿ / ಸ್ಪಷ್ಟೀಕರಣಗಳನ್ನು ಕೋರಿರುವುದರಿಂದ ದಿನಾಂಕ:27.02.2019 ರಂದು ಪತ್ರ ಬರೆದು ಕಾಲೇಜು ಶಿಕ್ಷಣ ಇಲಾಖೆಯಿಂದ ಮಾಹಿತಿ ಕೋರಿದ್ದು, ವರದಿಯನ್ನು ನಿರೀಕ್ಷಿಸಲಾಗಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಸಮಿತಿಯು ಒಪ್ಪಿ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |
| 32 | 6245<br>ಚು.ರ.ಪ್ರ: 2223<br>ಶ್ರೀ ಅಮರನಾಥ ಪಾಟೀಲ್<br>ವಿಪನದಿ: 24.07.2015 | ಹೈದ್ರಾಬಾದ್-ಕರ್ನಾಟಕದ 6 ಜಿಲ್ಲೆಗಳನ್ನು ಹೊರತು ಪಡಿಸಿ ರಾಜ್ಯದ ಇತರೆ ಜಿಲ್ಲೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಬೋಧಕ-ಬೋದಕೇತರ ಸಿಬ್ಬಂದಿಗಳನ್ನು ಅರ್ಹತೆ ಇದ್ದರೂ ಬಡ್ತಿ ನೀಡದೆ ಅನ್ಯಾಯ ಮಾಡುತ್ತಿರುವ ಬಗ್ಗೆ ಹಾಗೂ ಹೈದ್ರಾಬಾದ್-ಕರ್ನಾಟಕದ 371(ಜೆ) ಅಧಿನಿಯಮದನ್ವಯ 6 | ತಾಂತ್ರಿಕ ಶಿಕ್ಷಣ ಇಲಾಖೆಗೆ ಸಂಬಂಧಿಸಿದಂತೆ:- ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 06 ರಾಕಾವ್ಯ 2012(ಭಾಗ), ದಿನಾಂಕ:23.02.2013ರಲ್ಲಿ ಹೈದ್ರಾಬಾದ್-ಕರ್ನಾಟಕದ ಪ್ರದೇಶದಲ್ಲಿ ಮೀಸಲಾತಿ ಕಲ್ಪಿಸುವವರಿಗೆ ಎಲ್ಲಾ ವರ್ಗಗಳ ಹುದ್ದೆಗಳನ್ನು ಭರ್ತಿ ಮಾಡುವ ಪ್ರಕ್ರಿಯೆಯನ್ನು ಸ್ಥಗಿತಗೊಳಿಸಲು ಆದೇಶಿಸಲಾಗಿರುತ್ತದೆ. ಹೈದ್ರಾಬಾದ್-ಕರ್ನಾಟಕದ | ದಿನಾಂಕ: 06.05.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚೆ ಚರ್ಚಿಸಿದಾಗ,<br><u>ಸರ್ಕಾರಿ ಕಾಲೇಜುಗಳಿಗೆ ಸಂಬಂಧಿಸಿದಂತೆ :</u><br>ಸರ್ಕಾರಿ ಪದವಿ ಕಾಲೇಜುಗಳ ಅಧ್ಯಾಪಕರುಗಳಿಗೆ ನಿಯಮಾನುಸಾರ ಸ್ಥಾನೀಕರಣ ಹಾಗೂ ಎ.ಜಿ.ಪಿ. ಗಳನ್ನು ನೀಡಲಾಗುತ್ತಿದೆ. ಆದರೆ, ಬೋಧಕೇತರ ವರ್ಗದವರಿಗೆ ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ಶ್ರೀ ಬಿ.ಕೆ. ಪವಿತ್ರ ಇವರ ಸಿವಿಲ್ ಅಪೀಲು ಸಂಖ್ಯೆ: 2368/2011 ರಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ದಿನಾಂಕ:09.02.2017 ರಂದು ಹೊರಡಿಸಿದ ಆದೇಶದ ಪ್ರಕಾರ ಜ್ಯೇಷ್ಠತಾ ಪಟ್ಟಿಗಳನ್ನು ಪರಿಷ್ಕರಿಸಲಾಗಿದ್ದು, ಸ್ಥಾನಪನ್ನ ಮುಂಬಡ್ತಿ ನೀಡುವ ಬಗ್ಗೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಸುತ್ತೋಲೆ ಸಂಖ್ಯೆ: ಸಿಆಸುಇ 380 ಸೇನೇನಿ 2018 (ಭಾ-1), ದಿನಾಂಕ:13.08.2018 ರಲ್ಲಿ |

| | | | | |
|---|---|---|---|---|
| | | ಜಿಲ್ಲೆಗಳನ್ನು ಹೊರತುಪಡಿಸಿ ಇತರೆ ಜಿಲ್ಲೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸರ್ಕಾರಿ ಹಾಗೂ ಅನುದಾನಿತ ಸಂಸ್ಥೆಗಳಲ್ಲಿ ಹುದ್ದೆಗಳಿಗೆ ಬಡ್ತಿ ನೀಡಿರುವ ಹಾಗೂ ಬಡ್ತಿ ನೀಡದಿರುವ ಹುದ್ದೆಗಳ ಬಗ್ಗೆ. | ನೇಮಕಾತಿ ಪ್ರಕ್ರಿಯೆ ಚಾಲ್ತಿಯಲ್ಲಿದ್ದು, ಪೂರ್ಣಗೊಂಡ ಕೂಡಲೇ ಉಳಿದ ಎಲ್ಲಾ ಹುದ್ದೆಗಳನ್ನು ಭರ್ತಿ ಮಾಡಲಾಗುವುದು.<br>ಕಾಲೇಜು ಶಿಕ್ಷಣ ಇಲಾಖೆಗೆ ಸಂಬಂಧಿಸಿದಂತೆ ದಿನಾಂಕ: 29.06.2015ರ ಆದೇಶದಲ್ಲಿ ಮೀಸಲಿಸಿರುವ ಬೋಧಕೇತರ ಹುದ್ದೆಗಳಿಗೆ ಹೈದ್ರಾಬಾದ್–ಕರ್ನಾಟಕದ ಸ್ಥಳೀಯ ನೌಕರರನ್ನು ಹಂಚಿಕೆ ಮಾಡುವ ಪ್ರಕ್ರಿಯೆ ಜಾರಿಯಲ್ಲಿರುತ್ತದೆ. ಪ್ರಕ್ರಿಯೆ ಪೂರ್ಣಗೊಂಡ ನಂತರ ಬಡ್ತಿ ಬಗ್ಗೆ ಕ್ರಮಕೈಗೊಳ್ಳಬೇಕಾಗಿರುತ್ತದೆ.<br>ಹೈದ್ರಾಬಾದ್–ಕರ್ನಾಟಕ ಮೀಸಲಾತಿ ಕಲ್ಪಿಸುವ ಪ್ರಕ್ರಿಯೆ ಜಾರಿಯಲ್ಲಿದ್ದುದರಿಂದ ಮುಂಬಡ್ತಿಗಳು ಸ್ಥಗಿತಗೊಂಡಿದ್ದು, ಈ ಪ್ರಕ್ರಿಯೆ ಪೂರ್ಣಗೊಂಡ ಕೂಡಲೇ ಕ್ರಮ ಕೈಗೊಳ್ಳಲಾಗುವುದು.<br>ಭಾರತೀಯ ಸಂವಿಧಾನ 371(ಜೆ) ಪ್ರಕ್ರಿಯೆ ಚಾಲ್ತಿಯಲ್ಲಿದ್ದು, ಪ್ರಕ್ರಿಯೆ ಪೂರ್ಣಗೊಂಡ ನಂತರ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿನ ಅನುಪಾತದನ್ವಯ ನೇರ | ನಿರ್ಬಂಧವಿದ್ದುದ್ದರಿಂದ ತಡೆಹಿಡಿಯಲಾಗಿತ್ತು. ಇತ್ತೀಚಿನ ಸರ್ಕಾರಿ ಆದೇಶ ಸಂಖ್ಯೆ:ಸಿಆಸುಇ/186/ಎಸ್‌ಆರ್‌ಎಸ್/2018, ದಿನಾಂಕ:27.02.2019 ಹಾಗೂ ತದನಂತರದ ದಿನಾಂಕ:05.03.2019 ರ ಆದೇಶದ ಪ್ರಕಾರ ಯಥಾಸ್ಥಿತಿಯನ್ನು ಕಾಯ್ದುಕೊಳ್ಳಲಾಗಿರುತ್ತದೆ.<br><br><u>ಖಾಸಗಿ ಅನುದಾನಿತ ಕಾಲೇಜುಗಳಿಗೆ ಸಂಬಂಧಿಸಿದಂತೆ :</u><br><br>ಖಾಸಗಿ ಅನುದಾನಿತ ಕಾಲೇಜುಗಳ ಬೋಧಕರುಗಳಿಗೆ ಸ್ಥಾನೀರಕಣ ಹಾಗೂ ಎಜಿಪಿ ಗಳನ್ನು ನೀಡಲಾಗುತ್ತಿದೆ. ಹಾಗೂ ಬೋಧಕೇತರ ನೌಕರರುಗಳಿಗೂ ಸಹ ನಿಯಮಾನುಸಾರ ಬಡ್ತಿ ನೀಡಲಾಗುತ್ತಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಸಮಿತಿಯು ಒಪ್ಪಿ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |

| | | | | |
|---|---|---|---|---|
| | | | ನೇಮಕಾತಿ ಮತ್ತು ಮುಂಬಡ್ತಿ ಹುದ್ದೆಗಳನ್ನು ಭರ್ತಿ ಮಾಡಲು ತ್ವರಿತಗತಿಯಲ್ಲಿ ಕ್ರಮಕೈಗೊಳ್ಳಲಾಗುವುದು ಎಂದು ಮಾನ್ಯ ಉನ್ನತ ಶಿಕ್ಷಣ ಹಾಗೂ ಪ್ರವಾಸೋದ್ಯಮ ಸಚಿವರು ತಿಳಿಸಿದರು. | |
| 33 | 6205<br>ಚು.ಗು.ಪ್ರ. 3490<br>ಶ್ರೀ ಗೋ. ಮಧುಸೂದನ್<br>ಉಪ ಪ್ರಶ್ನೆ:<br>ಶ್ರೀ ವೈ.ಎ. ನಾರಾಯಣಸ್ವಾಮಿ<br>ವಿಪನದಿ: 26.11.2015 | ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದಲ್ಲಿ ಔಪಚಾರಿಕವಾಗಿ ಹೆಚ್ಚಿನ ಶುಲ್ಕವನ್ನು ತೆಗೆದುಕೊಂಡು ಮಕ್ಕಳಿಗೆ ಹೊರೆ ಮಾಡಿ, ಆ ಹಣವನ್ನು ದುರ್ಬಳಕೆ ಮಾಡುತ್ತಿರುವುದಕ್ಕೆ ಕಡಿವಾಣ ಹಾಕುವ ಬಗ್ಗೆ. | ಶುಲ್ಕವನ್ನು ಕಡಿಮೆ ಮಾಡಬೇಕು, ಅನಗತ್ಯವಾಗಿ ಹಣವನ್ನು ಡೆಪಾಸಿಟ್‌ನಲ್ಲಿ ಇಡಬಾರದು, ಮೂಲಭೂತ ಸೌಕರ್ಯಗಳಿಗೆ ಅಥವಾ ಮಕ್ಕಳಿಗೆ ಖರ್ಚು ಮಾಡಬೇಕು ಎನ್ನುವುದರ ಬಗ್ಗೆ ನನ್ನ ಗಮನ ಸೆಳೆದಿದ್ದಾರೆ. ಕೂಡಲೇ ಸಭೆಯನ್ನು ಕರೆದು ಒಂದು ತೀರ್ಮಾನಕ್ಕೆ ಬರುವ ಪ್ರಯತ್ನವನ್ನು ಮಾಡುತ್ತೇನೆ ಎಂದು ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಉನ್ನತ ಶಿಕ್ಷಣ ಸಚಿವರು ತಿಳಿಸಿದರು. | ದಿನಾಂಕ: 06.05.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿ ಚರ್ಚಿಸಿದಾಗ, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದಿಂದ ಪರೀಕ್ಷಾ ಶುಲ್ಕ ಮತ್ತು ಇನ್ನಿತರ ಶುಲ್ಕಗಳನ್ನು 1998 ರಿಂದ 2017–18ನೇ ಸಾಲಿನವರೆಗೆ ಹೆಚ್ಚಳ ಮಾಡಿರುವುದಿಲ್ಲ ಹಾಗೂ ಸರ್ಕಾರದಿಂದ ನಿಗದಿಮಾಡಿದ ಪ್ರವೇಶಾತಿ ಶುಲ್ಕವನ್ನು ಪಡೆಯಲು ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದಿಂದ ಇಂಜನಿಯರಿಂಗ್ ಕಾಲೇಜುಗಳಿಗೆ ನಿರ್ದೇಶನ ನೀಡಲಾಗಿರುತ್ತದೆ.<br><br>ಆದರೆ, ಆದಾಯ ತೆರಿಗೆ ಇಲಾಖೆಯು ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ಹಣವನ್ನು ಮುಟ್ಟುಗೋಲು ಹಾಕಿಕೊಂಡಿದ್ದು, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದಲ್ಲಿ ಆರ್ಥಿಕ ಮುಗ್ಗಟ್ಟು ಉಂಟಾದ ಹಿನ್ನಲೆಯಲ್ಲಿ 2017–18ನೇ ಸಾಲಿನಿಂದ ಪರೀಕ್ಷಾ ಮತ್ತು ಇನ್ನಿತರ ಶುಲ್ಕಗಳನ್ನು ಕಾರ್ಯಕಾರಿ ಪರಿಷತ್ತಿನ ಅನುಮೋದನೆಯೊಂದಿಗೆ ಹೆಚ್ಚಳ ಮಾಡಲಾಗಿದೆ.<br><br>ಮುಂದುವರಿದು, ವಿಶ್ವವಿದ್ಯಾಲಯದ ಮೂಲ ಖರ್ಚುವೆಚ್ಚಗಳಿಗೆ ಹಣದ ಅಭಾವವಿರುವುದರಿಂದ ವಿಶ್ವವಿದ್ಯಾಲಯದ ಹಣವನ್ನು ಠೇವಣಿಯಾಗಿ ಇಟ್ಟಿರುವುದಿಲ್ಲವೆಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಸಮಿತಿಯು ಒಪ್ಪಿ ಭರವಸೆಯನ್ನು ಮುಕ್ತಾಯಗೊಳಿಸಿತು. |

| | | | | |
|---|---|---|---|---|
| 34 | 6207<br>ಚು.ರ.ಪ್ರ. 3287<br>ಕ್ಯಾಪ್ಟನ್ ಗಣೇಶ್ ಕಾರ್ಣಿಕ್<br>ವಿಪನದಿ: 26.11.2015 | ರಾಜ್ಯದ ಶಾಲಾ ಕಾಲೇಜುಗಳಲ್ಲಿ ಎನ್.ಸಿ.ಸಿ. ಅಧಿಕಾರಿಯಾಗಿ ಸೇವೆ ಸಲ್ಲಿಸುತ್ತಿರುವ ಶಿಕ್ಷಕ ಹಾಗೂ ಉಪನ್ಯಾಸಕರುಗಳಿಗೆ ನೀಡುವ ಗೌರವ ಧನದ ಮೊತ್ತವನ್ನು ಪರಿಷ್ಕರಿಸುವ ಬಗ್ಗೆ. | ಗೌರವಧನದ ಮೊತ್ತವನ್ನು ಪರಿಷ್ಕರಿಸುವ ವಿಷಯದ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ ಎಂದು ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಉನ್ನತ ಶಿಕ್ಷಣ ಸಚಿವರು ತಿಳಿಸಿದರು. | ದಿನಾಂಕ: 06.05.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚೆ ಚರ್ಚಿಸಿದಾಗ, ಶಾಲಾ ಕಾಲೇಜುಗಳಲ್ಲಿ ಎನ್.ಸಿ.ಸಿ ಅಧಿಕಾರಿಗಳಾಗಿ ಸೇವೆ ಸಲ್ಲಿಸುತ್ತಿರುವ ಶಿಕ್ಷಕರು ಉಪನ್ಯಾಸಕರು, ಹಾಗೂ ಅಧ್ಯಾಪಕರುಗಳಿಗೆ ಮಾಸಿಕವಾಗಿ ನೀಡುವಂತಹ ಗೌರವ ಧನದ ಮೊತ್ತವನ್ನು ಸರ್ಕಾರದ ಆದೇಶ ಸಂಖ್ಯೆ: ಇಡಿ 16 ರಾಯುಸೇ 2015, ದಿನಾಂಕ:21.06.2016 (ಸೇರ್ಪಡೆ ಆದೇಶ ಸಂಖ್ಯೆ: ಇಡಿ 40 ರಾಯುಸೇ 2016, ದಿನಾಂಕ:14.06.2018) ರಲ್ಲಿ ಪರಿಷ್ಕರಿಸಿ ಸರ್ಕಾರದ ಆದೇಶ ಹೊರಡಿಸಲಾಗಿದೆ. ಆದ್ದರಿಂದ ಈ ಭರವಸೆಯನ್ನು ಮುಕ್ತಾಯಗೊಳಿಸಬಹುದಾಗಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಸಮಿತಿಯು ಒಪ್ಪಿ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |
| 35 | 6208<br>ಚು.ರ.ಪ್ರ. 3319<br>ಶ್ರೀ ಎಸ್.ನಾಗರಾಜ್ (ಸಂದೇಶ್ ನಾಗರಾಜ್)<br>ವಿಪನದಿ: 26.11.2015 | ಚಾಮರಾಜನಗರ ಸರ್ಕಾರಿ ಕಾಲೇಜುಗಳಲ್ಲಿ ಇಂಜಿನಿಯರಿಂಗ್ ಸ್ನಾತಕೋತ್ತರ ಕೇಂದ್ರ ಪ್ರಾರಂಭಿಸುವ ಬಗ್ಗೆ. | 2015–16ನೇ ಸಾಲಿನ ಎ.ಐ.ಸಿ.ಟಿ.ಇ. ಮಾರ್ಗ ಸೂಚಿಯನ್ವಯ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಸ್ನಾತಕೋತ್ತರ ಕೇಂದ್ರ ಸ್ಥಾಪಿಸಲು ಸಂಸ್ಥೆಯು ಎನ್.ಬಿ.ಎ. ಅಕ್ರಿಡಿಟೇಷನ್ ಹೊಂದುವುದು ಕಡ್ಡಾಯವಾಗಿರುತ್ತದೆ. ಸಂಸ್ಥೆಯು ಎನ್.ಬಿ.ಎ. ಅಕ್ರಿಡಿಟೇಷನ್ ಹೊಂದುವ ಪ್ರಕ್ರಿಯೆಯು ಜಾರಿಯಲ್ಲಿರುತ್ತದೆ. ಸಂಸ್ಥೆಯು ಅಕ್ರಿಡಿಟೇಷನ್ ಹೊಂದಿದ ನಂತರ ಸ್ನಾತಕೋತ್ತರ ಕೇಂದ್ರ ಸ್ಥಾಪಿಸುವ ಬಗ್ಗೆ ಪರಿಶೀಲಿಸಲಾಗುವುದು ಎಂದು ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಉನ್ನತ ಶಿಕ್ಷಣ ಸಚಿವರು ತಿಳಿಸಿದರು. | ದಿನಾಂಕ: 06.05.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚೆ ಚರ್ಚಿಸಿದಾಗ, 2018–19ನೇ ಸಾಲಿನ ಎಐಸಿಟಿಇ ಮಾರ್ಗ ಸೂಚಿಯನ್ವಯ ಇಂಜನಿಯರಿಂಗ್ ಕಾಲೇಜುಗಳಲ್ಲಿ ಎನ್.ಬಿ.ಎ. ಅಕ್ರಿಡಿಟೇಷನ್ ಹೊಂದಿದ ಕೋರ್ಸ್‌ಗಳಲ್ಲಿ ಮಾತ್ರ ಮಾಡಬಹುದಾಗಿದೆ. ಚಾಮರಾಜನಗರ ಸರ್ಕಾರಿ ಕಾಲೇಜು ಎನ್.ಬಿ.ಎ. ಅಕ್ರಿಡಿಟೇಷನ್ ಪಡೆಯುವ ಪ್ರಕ್ರಿಯೆ ಜಾರಿಯಲ್ಲಿದ್ದು, ಇನ್ನೂ ಅಕ್ರಿಡಿಟೇಷನ್ ಪಡೆದಿರುವುದಿಲ್ಲ. ಪ್ರಸ್ತುತ ಸರ್ಕಾರಿ ಇಂಜನಿಯರಿಂಗ್ ಕಾಲೇಜುಗಳಿಗೆ ಅತ್ಯಗತ್ಯ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಬಗ್ಗೆ ಆದ್ಯತೆ ನೀಡಲಾಗುತ್ತಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಸಮಿತಿಯು ಒಪ್ಪಿ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |

| | | | | |
|---|---|---|---|---|
| 36 | 6246<br>ಚು.ಗು.ಪ್ರ; 717<br>ಶ್ರೀ ಕೆ.ಬಿ ಶಾಣಪ್ಪ<br>ವಿಪನದಿ: 25.11.2016 | ಕಲಬುರಗಿ ಜಿಲ್ಲೆಯ ಕಡಗಂಚಿಯಲ್ಲಿನ ಕೇಂದ್ರೀಯ ವಿಶ್ವವಿದ್ಯಾಲಯಕ್ಕೆ ನೀರಿನ ಪೂರೈಕೆ ಬಗ್ಗೆ. | ಸದರಿ ವಿಶ್ವವಿದ್ಯಾಲಯಕ್ಕೆ ಅಗತ್ಯವಿರುವ ಕುಡಿಯುವ ನೀರಿನ ಪ್ರಮಾಣವನ್ನು ಸರಿದೂಗಿಸಲು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು ಹೊಸ ಯೋಜನೆಯನ್ನು ಕೈಗೊಂಡಿದ್ದು, ಸದರಿ ಯೋಜನೆಗೆ ರೂ.28.00 ಕೋಟಿಗಳ ರೇಖಾ ಅಂದಾಜು ಪಟ್ಟಿಯನ್ನು ತಯಾರು ಮಾಡಲಾಗಿದೆ ಎಂದು ಹಾಗೂ ದಿನಾಂಕ:28.07.2016 ರಂದು ನಡೆದ ಎಸ್.ಎಲ್.ಎಸ್.ಎಸ್.ಸಿ (State Level Scrutiny and Sanctioning Committee) ಸಭೆಯಲ್ಲಿ ಸದರಿ ರೇಖಾ ಅಂದಾಜು ಪಟ್ಟಿಯು ಅನುಮೋದನೆಯಾಗಿದ್ದು, ಪಿ.ಎಸ್.ಆರ್ (Primary Survey Report) ತಯಾರಿಸಲಾಗುತ್ತಿದೆ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯು ತಿಳಿಸಿರುತ್ತದೆ. ನೀರು ಬರುವ ದಾರಿಯಲ್ಲಿನ (enroute) ಹಳ್ಳಿಗರು ಯಾರು ಇದ್ದಾರೆ ಅವರೆಲ್ಲರೂ ನಮಗೂ ನೀರು ಕೊಟ್ಟು ನೀವು ನೀರು | ದಿನಾಂಕ: 06.05.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚೆ ಚರ್ಚಿಸಿದಾಗ, ಅಮರ್ಜಾ ಬ್ಯಾರೇಜ್‌ನಿಂದ ಬಹುಗ್ರಾಮಗಳ ಕುಡಿಯುವ ನೀರು ಯೋಜನೆಯಡಿಯಲ್ಲಿ ಪ್ರತಿನಿತ್ಯ ಸುಮಾರು 6,500 ಜನಸಂಖ್ಯೆಗೆ ಅನುಗುಣವಾಗಿ 0.4ರಿಂದ 0.5 ಎಂ.ಎಲ್.ಡಿ ಪ್ರಮಾಣದ ಕುಡಿಯುವ ನೀರನ್ನು ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯಕ್ಕೆ ಪೂರೈಸಲು ಕ್ರಮ ಕೈಗೊಳ್ಳಲಾಗುತ್ತಿದ್ದು, ಪ್ರಸ್ತುತ ಅಮರ್ಜಾ ಬ್ಯಾರೇಜ್‌ನಲ್ಲಿ 0.34 ಟಿಎಂಸಿ ನೀರು ಸಂಗ್ರಹವಿರುತ್ತದೆ.<br><br>ಪ್ರಾದೇಶಿಕ ಆಯುಕ್ತರು, ಕಲಬುರಗಿ ವಿಭಾಗ ಇವರ ಅಧ್ಯಕ್ಷತೆಯಲ್ಲಿ ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯಕ್ಕೆ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಮೇಲುಸ್ತುವಾರಿ ಸಮಿತಿಯನ್ನು ರಚಿಸಲಾಗಿದೆ. ಮೇಲುಸ್ತುವಾರಿ ಸಮಿತಿಯ ದಿನಾಂಕ: 14.02.2019ರ ಸಭೆಯಲ್ಲಿ ನಿರ್ಣಯಿಸಿದಂತೆ ಮುಖ್ಯ ಅಭಿಯಂತರರು, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಕಲಬುರಗಿ ಇವರು ಅಮರ್ಜಾ ಡ್ಯಾಂನಿಂದ ನಿಂಬರ್ಗಾ ಬಹುಗ್ರಾಮ ಕುಡಿಯುವ ನೀರು ಯೋಜನೆಯ ಮೂಲಕ ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯಕ್ಕೆ ಶಾಶ್ವತ ಕುಡಿಯುವ ನೀರನ್ನು ಪೂರೈಸಲು ರೂ. 55.00 ಕೋಟಿ ಮೊತ್ತದ ಅಂದಾಜು ಪಟ್ಟಿಯನ್ನು ದಿನಾಂಕ: 09.04.2019ರಂದು ಸಲ್ಲಿಸಿದ್ದು, ಸರ್ಕಾರದ ಹಂತದಲ್ಲಿ ಪರಿಶೀಲಿಸಲಾಗುತ್ತಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಸಮಿತಿಯು ಒಪ್ಪಿ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |

| | | | | |
|---|---|---|---|---|
| | | | ತೆಗೆದುಕೊಂಡು ಹೋಗಿ ಎಂದು ತಕರಾರು ಮಾಡುತ್ತಿದ್ದಾರೆ. ಆದರೂ ಗ್ರಾಮೀಣಾಭಿವೃದ್ಧಿ ಮಂತ್ರಿಗಳ ಜೊತೆ ಚರ್ಚೆ ಮಾಡಿ ಕುಡಿಯುವ ನೀರಿನ ವ್ಯವಸ್ಥೆ ಮಾಡುತ್ತೇವೆ ಎಂದು ಮಾನ್ಯ ಉನ್ನತ ಶಿಕ್ಷಣ ಸಚಿವರು ತಿಳಿಸಿದರು. | |
| 37 | 6247<br>ಚು.ರ.ಪ್ರ; 688<br>ಶ್ರೀ ಅಮರನಾಥ ಪಾಟೀಲ್<br>ವಿಪನದಿ: 25.11.2016 | ಕರ್ನಾಟಕ ಪರೀಕ್ಷಾ ಪ್ರಾಧಿಕಾರದಲ್ಲಿ ಸಹಾಯಕ ಪ್ರಾಧ್ಯಾಪಕರ ಹುದ್ದೆಗಳ ನೇಮಕಾತಿ ಪ್ರಕ್ರಿಯೆ ಗೊಂದಲ ಹಾಗೂ ವಿಳಂಬದ ಬಗ್ಗೆ. | ಕರ್ನಾಟಕ ಪರೀಕ್ಷಾ ಪ್ರಾಧಿಕಾರದಲ್ಲಿ ಸಹಾಯಕ ಪ್ರಾಧ್ಯಾಪಕರ ಹುದ್ದೆಗಳ ನೇಮಕಾತಿ ಪ್ರಕ್ರಿಯೆಯನ್ನು ಶೀಘ್ರದಲ್ಲಿಯೇ ಪೂರ್ಣಗೊಳಿಸಲು ಕ್ರಮವಹಿಸುತ್ತಿದೆ. ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದ ಆಯ್ಕೆ ಪಟ್ಟಿ ಬಂದ ನಂತರ ನಿಯಮಾನುಸಾರ ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರಿಗಳಿಂದ ಸಿಂಧುತ್ವ ಪ್ರಮಾಣ ಪತ್ರ ಮತ್ತು ಪೊಲೀಸ್ ಮತ್ತು ಇನ್ನಿತರೆ ವರದಿಯನ್ನು ಸ್ವೀಕರಿಸಿ ನೇಮಕಾತಿ ಮಾಡಲು ಕ್ರಮವಹಿಸಲಾಗುವುದು ಎಂದು ಮಾನ್ಯ ಉನ್ನತ ಶಿಕ್ಷಣ ಸಚಿವರು ತಿಳಿಸಿದರು. | ದಿನಾಂಕ: 06.05.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿ ಚರ್ಚಿಸಿದಾಗ, 1939 ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ನೀಡಲಾಗಿದೆ. ಇದರಲ್ಲಿ 25 ಅಭ್ಯರ್ಥಿಗಳು ನಕಲಿ ಪ್ರಮಾಣ ಪತ್ರ ಸಲ್ಲಿಸಿದ್ದು, 2034 ಸಹಾಯಕ ಪ್ರಾಧ್ಯಾಪಕರ ನೇಮಕ ಪ್ರಕ್ರಿಯೆ ಪೂರ್ಣಗೊಂಡಿರುತ್ತದೆ. 70 ಅಭ್ಯರ್ಥಿಗಳ ನೇಮಕ ಪ್ರಕ್ರಿಯೆ ಬಾಕಿ ಇರುತ್ತವೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಸಮಿತಿಯು ಒಪ್ಪಿ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |
| 38 | 6248<br>ಚು.ರ.ಪ್ರ; 689<br>ಶ್ರೀ ಅಮರನಾಥ ಪಾಟೀಲ್<br>ವಿಪನದಿ: 25.11.2016 | ಹೈದ್ರಾಬಾದ್–ಕರ್ನಾಟಕ ಪ್ರದೇಶ ವ್ಯಾಪ್ತಿಯ ಆರು ಜಿಲ್ಲೆಗಳಲ್ಲಿ ಮಂಜೂರಾಗಿರುವ ಸರ್ಕಾರಿ ಇಂಜಿನಿಯರಿಂಗ್ | ಕಟ್ಟಡ ಕಾಮಗಾರಿಯು ಮುಕ್ತಾಯದ ಹಂತದಲ್ಲಿದ್ದು, ಬಾಕಿ ಅನುದಾನ ರೂ.761.03 ಲಕ್ಷಗಳಿಗೆ ಹೆಚ್ಚುವರಿಯಾಗಿ ಬಿಡುಗಡೆ ಮಾಡುವ ಬಗ್ಗೆ | ದಿನಾಂಕ: 06.05.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿ ಚರ್ಚಿಸಿದಾಗ, ಹೈದ್ರಾಬಾದ್–ಕರ್ನಾಟಕ ಪ್ರದೇಶ ವ್ಯಾಪ್ತಿಯ ಆರು ಜಿಲ್ಲೆಗಳಲ್ಲಿ ಮಂಜೂರಾಗಿರುವ ಸರ್ಕಾರಿ ಇಂಜನಿಯರಿಂಗ್ ಕಾಲೇಜುಗಳ ಕಟ್ಟಡಗಳನ್ನು ಪೂರ್ಣಗೊಳಿಸಲು ಸರ್ಕಾರ ತೆಗೆದುಕೊಂಡ ವಿವರ ಕೆಳಕಂಡಂತಿದೆ:– |

| | | | |
|---|---|---|---|
| | | ಕಾಲೇಜುಗಳ ಕಟ್ಟಡಗಳನ್ನು ಕಾಲಮಿತಿಯೊಳಗೆ ಪೂರ್ಣಗೊಳಿಸುವ ನಿಟ್ಟಿನಲ್ಲಿ ಸರ್ಕಾರದ ಮುಂದಿರುವ ಕ್ರಮಗಳ ಬಗ್ಗೆ. | ಪರಿಶೀಲಿಸಲಾಗುತ್ತಿದ್ದು, ಅನುದಾನ ಬಿಡುಗಡೆಯಾದ ಕೂಡಲೇ ಕಾಮಗಾರಿಯನ್ನು ಪೂರ್ಣಗೊಳಿಸಿ ಕಟ್ಟಡವನ್ನು ಹಸ್ತಾಂತರಿಸಲಾಗುವುದು.<br>ನಬಾರ್ಡ್ ಯೋಜನೆಯ ಆರ್‌ಐಡಿಎಫ್-22 ರಡಿ ಕಟ್ಟಡ ನಿರ್ಮಾಣ ಕಾಮಗಾರಿಯನ್ನು ಮೆ. ರೈಟ್ಸ್ ವತಿಯಿಂದ ರೂ.2600.00 ಲಕ್ಷಗಳಲ್ಲಿ ನಿರ್ಮಿಸಲು ಆದೇಶಿಸಲಾಗಿದೆ. ನಿರ್ಮಾಣ ಸಂಸ್ಥೆಯಿಂದ ಅಂದಾಜು ಪಟ್ಟಿ ಸ್ವೀಕೃತವಾದ ಕೂಡಲೇ ಅನುಮೋದನೆ ನೀಡಿ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು. ಕಟ್ಟಡ ಕಾಮಗಾರಿಯು ಮುಕ್ತಾಯದ ಹಂತದಲ್ಲಿದ್ದು, ಬಾಕಿ ಅನುದಾನ ರೂ.764.96ಲಕ್ಷಗಳಿಗೆ ಹೆಚ್ಚುವರಿಯಾಗಿ ಅನುದಾನ ಬಿಡುಗಡೆಯಾದ ಕೂಡಲೇ ಕಾಮಗಾರಿಯನ್ನು ಪೂರ್ಣಗೊಳಿಸಿ ಕಟ್ಟಡವನ್ನು ಹಸ್ತಾಂತರಿಸಲಾಗುವುದು.<br>ಟೆಂಡರ್ ಪ್ರಕ್ರಿಯೆಯು ಜಾರಿಯಲ್ಲಿದ್ದು, ರೂ.500.00 ಲಕ್ಷಗಳಿಗೆ ಹೆಚ್ಚುವರಿ ಅನುದಾನ ಬಿಡುಗಡೆ ಮಾಡುವ ಬಗ್ಗೆ |

| ಸಂಸ್ಥೆಯ ಹೆಸರು | ಸರ್ಕಾರದ ಕ್ರಮಗಳು |
|---|---|
| ಸ.ಇಂ.ಕಾ ರಾಯಚೂರು | ಸರ್ಕಾರದ ಆದೇಶ ಸಂಖ್ಯೆ: ಇಡಿ 249 ಡಿಟಿಇ 2011, ದಿ: 3.11.2011ರಲ್ಲಿ ಸರ್ಕಾರಿ ಇಂಜನಿಯರಿಂಗ್ ಕಾಲೇಜು ರಾಯಚೂರು ಸಂಸ್ಥೆಯು ಕಟ್ಟಡ ನಿರ್ಮಾಣ ಕಾರ್ಯವನ್ನು ವಿಟಿಯುಗೆ ಹಸ್ತಾಂತರಿಸಲಾಗಿತ್ತು.<br><br>ಜಲ ಸಂಪನ್ಮೂಲ ಇಲಾಖೆಗೆ ಸೇರಿದ ಯರಮರಸ್ ಕ್ಯಾಂಪಸ್‌ನಲ್ಲಿ ಒಟ್ಟು 27 ಎಕರೆ 04 ಗುಂಟೆ ಜಮೀನು ಮಂಜೂರಾಗಿರುತ್ತದೆ.<br><br>ಆದಾಯ ತೆರಿಗೆ ಇಲಾಖೆಯು ವಿ.ಟಿ.ಯು.ನ ಬ್ಯಾಂಕ್‌ನ ಖಾತೆಯನ್ನು ಮುಟ್ಟುಗೋಲು ಹಾಕಿಕೊಂಡಿದ್ದ ಪ್ರಯುಕ್ತ ವಿ.ಟಿಯು.ನಲ್ಲಿ ಯಾವುದೇ ಅನುದಾನವು ಲಭ್ಯವಿಲ್ಲದ ಪ್ರಯುಕ್ತ ಸರ್ಕಾರವು ಆದೇಶ ಸಂಖ್ಯೆ: ಇಡ 45 ಹೆಚ್‌ಪಿ.ಟಿ. 2015, ದಿ: 27.07.2015ರಲ್ಲಿ ನಾಲ್ಕು ಇಂಜನಿಯರಿಂಗ್ ಕಾಲೇಜುಗಳ ಕಟ್ಟಡ ನಿರ್ಮಾಣ ಕಾಮಗಾರಿಗಳನ್ನು ಆದೇಶದ ದಿನದಿಂದ ಸದರಿ ಕಾಮಗಾರಿಗಳನ್ನು ಪೂರ್ಣಗೊಳಿಸಲು ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರಿಗೆ ವರ್ಗಾಯಿಸಿ ಅನುಮತಿಯನ್ನು ನೀಡಿ ಕಟ್ಟಡ ನಿರ್ಮಾಣ ಸಂಸ್ಥೆಗೆ ಅನುದಾನ ಬಿಡುಗಡೆ ಮಾಡಲು ಅನುಮತಿಯನ್ನು ನೀಡಿ ಆದೇಶಿಸಿದೆ. ಅದರಂತೆ, ತಾಂತ್ರಿಕ ಶಿಕ್ಷಣ ಇಲಾಖೆಯಿಂದ 2015-16ನೇ ಸಾಲಿನಿಂದ ಇಲ್ಲಿಯವರೆಗೆ ಕೆಳಕಂಡಂತೆ ಅನುದಾನವನ್ನು ಬಿಡುಗಡೆ ಮಾಡಲಾಗಿದೆ. |

ಪರಿಶೀಲಿಸಲಾಗುತ್ತಿದೆ.
ಕಾಮಗಾರಿಗಾಗಿ ರೂ.1700.00 ಲಕ್ಷಗಳನ್ನು ಪೂರಕ ಅಂದಾಜಿನಲ್ಲಿ ಬಿಡುಗಡೆ ಮಾಡಿದ್ದು, ಆರ್ಥಿಕ ಇಲಾಖೆಯು 2016–17ನೇ ಸಾಲಿನ ಪೂರಕ ಅಂದಾಜು–2ರಲ್ಲಿ ಸಕ್ರಮಗೊಳಿಸಿದ ನಂತರ ಬಿಡುಗಡೆ ಮಾಡಲು ಅನುಮತಿಸಿದೆ. ಕಟ್ಟಡ ಕಾಮಗಾರಿಯು ಮುಕ್ತಾಯದ ಹಂತದಲ್ಲಿದ್ದು, ಬಾಕಿ ಅನುದಾನ ರೂ.580.79 ಲಕ್ಷಗಳಿಗೆ ಹೆಚ್ಚುವರಿಯಾಗಿ ಅನುದಾನ ಬಿಡುಗಡೆ ಮಾಡುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ ಎಂದು ಉನ್ನತ ಶಿಕ್ಷಣ ಸಚಿವರು ತಿಳಿಸಿದರು.

(ರೂ. ಲಕ್ಷಗಳಲ್ಲಿ) )

| ಅಂದಾಜು ಮೊತ್ತ | ಟೆಂಡರ್ ಮೊತ್ತ | ವಿಟಿಯು. ಯಿಂದ ಬಿಡುಗಡೆ | ಇಲಾಖೆ ಯಿಂದ ಬಿಡುಗಡೆ | ಒಟ್ಟು ಬಿಡುಗಡೆ | ಬಾಕಿ ಬಿಡುಗಡೆ |
|---|---|---|---|---|---|
| **2229.00** | **2531.03** | **1000.00** | **153100** | **2531.00** | **0.00** |

ಪ್ರಸ್ತುತ ಕಾಮಗಾರಿಯು ಪೂರ್ಣಗೊಂಡಿದ್ದು, ಕಟ್ಟಡವನ್ನು ಪ್ರಿನ್ಸಿಪಾಲರಿಗೆ ಹಸ್ತಾಂತರಿಸಲಾಗಿದೆ.

| | |
|---|---|
| ಸ.ಇಂ.ಕಾ. ದೇವದುರ್ಗ | ಸರ್ಕಾರದ ಆದೇಶ ಸಂಖ್ಯೆ: ಇಡಿ 73 ಹೆಚ್‌ಪಿಟಿ 2012, ದಿ: 16.11.2012ರಲ್ಲಿ ರಾಯಚೂರು ಜಿಲ್ಲೆಯ ದೇವದುರ್ಗದಲ್ಲಿ ಹೊಸದಾಗಿ ಸರ್ಕಾರಿ ಇಂಜನಿಯರಿಂಗ್ ಕಾಲೇಜನ್ನು ಮಂಜೂರು ಮಾಡಿ ಆದೇಶಿಸಿದೆ.<br><br>ದೇವದುರ್ಗ ತಾಲ್ಲೂಕು ನರಗುಂದ ಗ್ರಾಮದ ಸರ್ವೆ ನಂ. 135ರಲ್ಲಿ 20 ಎಕರೆ ಜಮೀನು ಸರ್ಕಾರಿ ಇಂಜನಿಯರಿಂಗ್ ಕಾಲೇಜು, ದೇವದುರ್ಗ ಸಂಸ್ಥೆಗೆ ಮಂಜೂರಾಗಿರುತ್ತದೆ.<br><br>ಸರ್ಕಾರದ ಆದೇಶ ಸಂಖ್ಯೆ: ಇಡಿ 73 ಹೆಚ್‌ಟಿಪಿ 2012, ದಿ: 25.09.2014ರನ್ವಯ ಸರ್ಕಾರಿ ಇಂಜನಿಯರಿಂಗ್ ಕಾಲೇಜು, ದೇವದುರ್ಗ ಸಂಸ್ಥೆಗೆ ನಿವೇಶನ ಒದಗಿಸಿ, ಮುಖ್ಯ ಕಟ್ಟಡ ಮತ್ತು ಇತರೆ ಮೂಲಭೂತ ಸೌಕರ್ಯಗಳನ್ನು ಹಾಗೂ ಬೋಧಕ ಮತ್ತು ಬೋಧಕೇತರ ಹುದ್ದೆಗಳನ್ನು ಒದಗಿಸಲು ವಿ.ಟಿ.ಯು.ಗೆ ಹಸ್ತಾಂತರಿಸಲಾಗಿತ್ತು. |

| | | | | | | |
|---|---|---|---|---|---|---|
| | | | | | ಆದರೆ, ವಿ.ಟಿ.ಯು. ಬೆಳಗಾವಿಯ ರೂ. 440.00 ಕೋಟಿಗಳನ್ನು ಆದಾಯ ತೆರಿಗೆ ಇಲಾಖೆಯು ತನ್ನ ವಶಕ್ಕೆ ಪಡೆದ ಕಾರಣ ಕಟ್ಟಡ ಕಾಮಗಾರಿಯು ವಿಳಂಬವಾಗಿದೆ.<br><br>ದಿ: 22.06.2016ರಂದು ರೂಸಾ ಯೋಜನೆಯಡಿ ಮುಖ್ಯ ಕಟ್ಟಡ ನಿರ್ಮಾಣ ಕಾಮಗಾರಿಗೆ ರೂ.26.00 ಕೋಟಿಗಳ ಅನುದಾನ ಒದಗಿಸಲು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿತ್ತು. ಆದರೆ, ಅನುದಾನ ಮಂಜೂರಾಗಿರುವುದಿಲ್ಲ.<br>ದಿನಾಂಕ: 21.04.2018ರಂದು ಪುನ: ರೂಸಾ ದಡಿಯಲ್ಲಿ ರೂ.26.00 ಕೋಟಿಗಳಿಗೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿತ್ತು ಅನುಮೋದನೆ ನಿರೀಕ್ಷಿಸಿದೆ.<br>ದಿನಾಂಕ: 05.11.2016 ಮತ್ತು 13.01.2017ರಂದು ನಬಾರ್ಡ್ ಆರ್.ಐ.ಡಿ.ಎಫ್ – 22ರಡಿ ಮುಖ್ಯ ಕಟ್ಟಡ ಕಾಮಗಾರಿಗೆ ರೂ. 26.00 ಕೋಟಿ ಅನುದಾನ ಒದಗಿಸುವಂತೆ ಕೋರಲಾಗಿತ್ತು, ಆದರೆ ಅನುದಾನ ಮಂಜೂರಾಗಿರುವುದಿಲ್ಲ.<br>ಆದಾಯ ತೆರಿಗೆ ಇಲಾಖೆಯು ತನ್ನ ವಶಕ್ಕೆ ಪಡೆದ ಅನುದಾನವನ್ನು ಹಿಂದಿರುಗಿಸಿ ತಕ್ಷಣ ಕಟ್ಟಡ ಕಾಮಗಾರಿಯನ್ನು ಪ್ರಾರಂಭಿಸಲು ವಿ.ಟಿ.ಯು.ಗೆ ತಿಳಿಸಲಾಗುವುದು. | |
| | | | | ಸ.ಇಂ.ಕಾ. ಗಂಗಾವತಿ | ಸರ್ಕಾರದ ಆದೇಶ ಸಂಖ್ಯೆ: ಇಡಿ 17 ಹೆಚ್‌ಪಿಟಿ 2011, ದಿ: 16.06.2011ರಲ್ಲಿ ಕೊಪ್ಪಳ ಜಿಲ್ಲೆ, ಗಂಗಾವತಿಯಲ್ಲಿ ಹೊಸ ಸರ್ಕಾರಿ ಇಂಜನಿಯಿರಿಂಗ್ | |

ಕಾಲೇಜ್‌ನ್ನು ನಿರ್ಮಿಸಲು ಅನುಮೋದನೆ ನೀಡಿದ್ದು, ಗಂಗಾವತಿ ತಾಲ್ಲೂಕಿನ ವೀರುಪಾಪುರ್ ಗ್ರಾಮದ ಸರ್ವೆ ನಂ. 53ರಲ್ಲಿ 12.00 ಎಕರೆ ಸರ್ಕಾರಿ ಜಮೀನನ್ನು ಒದಗಿಸಲಾಗಿದೆ. ಸರ್ಕಾರದ ಆದೇಶ ಸಂಖ್ಯೆ: ಇಡಿ 249 ಡಿಟಿಇ 2011, ದಿ: 03.11.2011ರಲ್ಲಿ ವಿ.ಟಿ.ಯು. ಬೆಳಗಾವಿಗೆ ಕಟ್ಟಡವನ್ನು ನಿರ್ಮಿಸಲು ಹಾಗೂ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಹಸ್ತಾಂತರಿಸಲಾಯಿತು.

ಆದರೆ, ವಿ.ಟಿ.ಯು. ಬೆಳಗಾವಿಯು ರೂ. 440.00 ಕೋಟಿಗಳನ್ನು ಆದಾಯ ತೆರಿಗೆ ಇಲಾಖೆಯು ತನ್ನ ವಶಕ್ಕೆ ಪಡೆದ ಕಾರಣ ಕಟ್ಟಡ ಕಾಮಗಾರಿಗೆ ಬಾಕಿ ಅನುದಾನವನ್ನು ಇಲಾಖೆಯೇ ಬಿಡುಗಡೆ ಮಾಡಿರುತ್ತದೆ.

ಬಿಡುಗಡೆಯಾದ ಒಟ್ಟು ಅನುದಾನ

(ರೂ. ಲಕ್ಷಗಳಲ್ಲಿ )

| ಅಂದಾಜು ಮೊತ್ತ | ಟೆಂಡರ್ ಮೊತ್ತ | ವಿಟಿಯು.ಯಿಂದ ಬಿಡುಗಡೆ | ಇಲಾಖೆ ಯಿಂದ ಬಿಡುಗಡೆ | ಒಟ್ಟು ಬಿಡುಗಡೆ | ಬಾಕಿ ಬಿಡುಗಡೆ |
|---|---|---|---|---|---|
| **2247.00** | **2464..96** | **1000.00** | **1464.96** | **2464.96** | **0.00** |

ಪ್ರಸ್ತುತ ಕಾಮಗಾರಿಯು ಮುಕ್ತಾಯಗೊಂಡಿದ್ದು, ಕಟ್ಟಡವನ್ನು ಹಸ್ತಾಂತರಿಸಿಕೊಳ್ಳಲಾಗಿದೆ. ಸದರಿ ಶೈಕ್ಷಣಿಕ ಸಾಲಿಗೆ ತರಗತಿಗಳನ್ನು ಪ್ರಾರಂಭಿಸುವ ಸಂಬಂಧ ಅನುಮೋದನೆಗಾಗಿ ಎ.ಐ.ಸಿ.ಟಿ.ಇ. ಪ್ರಸ್ತಾವನೆಯನ್ನು ಸಲ್ಲಿಸಲಾಗಿದ್ದು, ಎ.ಐ.ಸಿ.ಟಿ.ಇ. ವತಿಯಿಂದ ಅನುಮೋದನೆ ನಿರೀಕ್ಷಿಸಲಾಗಿದೆ.

| | | | | | |
|---|---|---|---|---|---|
| | | | | ಸ.ಇಂ.ಕಾ. ತಳಕಲ್ | ಸರ್ಕಾರದ ಆದೇಶ ಇಡಿ 44 ಹೆಚ್‌ಪಿಟಿ 2013, ಬೆಂಗಳೂರು, ದಿ: 18.08.2014ರಲ್ಲಿ ಕೊಪ್ಪಳ ಜಿಲ್ಲೆ, ಯಲಬುರ್ಗಾ ತಾಲ್ಲೂಕಿನ ತಳಕಲ್ ಗ್ರಾಮದಲ್ಲಿ ಸರ್ಕಾರಿ ಇಂಜನಿಯರಿಂಗ್ ಕಾಲೇಜು ಪ್ರಾರಂಭಿಸಲು ಮಂಜೂರಾತಿ ದೊರೆತಿದೆ.<br><br>ತಳಕಲ್ ಗ್ರಾಮ, ಕಸಬಾ ಹೋಬಳಿ, ಕುಕನೂರು ಗ್ರಾಮದಲ್ಲಿ ಒಟ್ಟು 35 ಎಕರೆ 06 ಗುಂಟೆ 03 ಆಣೆ ಎಕರೆ ಜಮೀನನ್ನು ರೂ. 373.71 ಲಕ್ಷಗಳಲ್ಲಿ ಖರೀದಿಸಲಾಗಿದೆ.<br><br>ಸರ್ಕಾರದ ಆದೇಶ ಸಂಖ್ಯೆ: ಇಡಿ 90 ಹೆಚ್‌ಪಿಟಿ 2014, ದಿ: 28.02.2017ರಲ್ಲಿ ಕಟ್ಟಡ ನಿರ್ಮಾಣ ಕಾಮಗಾರಿಗೆ ರೂ. 111.89 ಕೋಟಿಗಳ ಅಂದಾಜು ಪಟ್ಟಿಗೆ ಅನುಮತಿಯನ್ನು ನೀಡಿದ್ದು, ರೂ. 50.00 ಕೋಟಿಗಳನ್ನು ಹೈದ್ರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯಿಂದ ಭರಿಸುತ್ತಿದ್ದು, ಕಟ್ಟಡ ಕಾಮಗಾರಿಯನ್ನು ನಿರ್ವಹಿಸಲು ಆದೇಶಿಸಲಾಗಿದೆ.<br><br>ಮುಖ್ಯ ಕಟ್ಟಡ ನಿರ್ಮಾಣ ಕಾಮಗಾರಿಗೆ 2017-18ನೇ ಸಾಲಿನವರೆಗೆ ರೂ. 47 ಕೋಟಿಗಳನ್ನು ಬಿಡುಗಡೆಗೊಳಿಸಿದ್ದು, ಪ್ರಸ್ತುತ ಕಟ್ಟಡದ ಮೊದಲನೇ ಮಹಡಿ ಕಾಮಗಾರಿ ಮುಗಿದಿದ್ದು, ಎರಡನೇ ಮಹಡಿ ಕಾಮಗಾರಿ ಪ್ರಗತಿಯಲ್ಲಿರುತ್ತದೆ. |

| | |
|---|---|
| ಸ.ಇಂ.ಕಾ. ಹೂವಿನ ಹಡಗಲಿ | ಸರ್ಕಾರದ ಆದೇಶ ಇಡಿ/ಟಿಇಸಿ/2997, ದಿ: 06.07.2007ರಲ್ಲಿ ಬಳ್ಳಾರಿ ಜಿಲ್ಲೆ, ಹೂವಿನಹಡಗಲಿಯಲ್ಲಿ ಸರ್ಕಾರಿ ಇಂಜನಿಯರಿಂಗ್ ಕಾಲೇಜು ಪ್ರಾರಂಭಿಸಲು ಮಂಜೂರಾತಿ ದೊರೆತಿದೆ.<br>ಹೂವಿನಹಡಗಲಿ ತಾಲ್ಲೂಕು ದೇವಗೊಂಡನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಸರ್ವೆ ನಂ. 180ರಲ್ಲಿ 25 ಎಕರೆ ಭೂಮಿಯನ್ನು ನೀಡಲಾಗಿದೆ.<br>ನಿರ್ಮಾಣ ಏಜೆನ್ಸಿಯಾದ ಮೆ: ರೈಟ್ಸ್ ಸಂಸ್ಥೆಗೆ ಒಟ್ಟು ಟೆಂಡರ್ ಮೊತ್ತ ರೂ. 2947.49 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ. |

ಬಿಡುಗಡೆಯಾದ ಒಟ್ಟು ಅನುದಾನ

(ರೂ. ಲಕ್ಷಗಳಲ್ಲಿ)

| ಅಂದಾಜು ಮೊತ್ತ | ಟೆಂಟರ್ ಮೊತ್ತ | ವಿಟಿಯು.ಯಿಂದ ಬಿಡುಗಡೆ | ಇಲಾಖೆ ಯಿಂದ ಬಿಡುಗಡೆ | ಒಟ್ಟು ಬಿಡುಗಡೆ | ಬಾಕಿ ಬಿಡುಗಡೆ |
|---|---|---|---|---|---|
| **2259.00** | **2947.49** | **1000.00** | **1947.49** | **2947.49** | **0.00** |

ಕಾಮಗಾರಿಯು ಪೂರ್ಣಗೊಂಡಿದ್ದು, ಕಟ್ಟಡವನ್ನು ಪ್ರಿನ್ಸಿಪಾಲರಿಗೆ ಹಸ್ತಾಂತರಿಸಲಾಗಿದೆ

| | |
|---|---|
| ಸ.ಇಂ.ಕಾ. ಬೀದರ್ | ಸರ್ಕಾರದ ಆದೇಶ ಸಂಖ್ಯೆ: ಇಡಿ 84 ಹೆಚ್‌ಪಿಯು 2016, ದಿ: 26.05.2017ರಲ್ಲಿ ಸರ್ಕಾರಿ ಇಂಜನಿಯರಿಂಗ್ ಕಾಲೇಜು, ಬೀದರ್ ಸಂಸ್ಥೆಗೆ ರೂ. 58.00 ಕೋಟಿಗಳ ಅಂದಾಜು ವೆಚ್ಚದಲ್ಲಿ ಕಟ್ಟಡ ನಿರ್ಮಿಸಲು ಅನುಮೋದನೆ ನೀಡಿ |

| | | | | |
|---|---|---|---|---|
| | | | | ಆದೇಶಿಸಿದೆ. ಸದರಿ ಅಂದಾಜು ಮೊತ್ತದಲ್ಲಿ ರೂ. 20.00 ಕೋಟಿಗಳನ್ನು ಹೈದ್ರಾಬಾದ್ ಪ್ರದೇಶಾಭಿವೃದ್ಧಿ ಮಂಡಳಿಯಿಂದ ಹಾಗೂ ರೂ. 38.00 ಕೋಟಿಗಳನ್ನು ರಾಜ್ಯ ಸರ್ಕಾರದಿಂದ ಭರಿಸಲಾಗುತ್ತದೆ.<br><br>ಸರ್ಕಾರದ ಆದೇಶ ಸಂಖ್ಯೆ: ಇಡಿ 84 ಹೆಚ್‌ಪಿಯು 2017, ದಿ: 16.08.2017 ಸರ್ಕಾರದ ಆದೇಶದಲ್ಲಿ ಸರ್ಕಾರಿ ಇಂಜನಿಯರಿಂಗ್ ಕಾಲೇಜು, ಬೀದರ್ ಕಾಲೇಜಿನ ಕಟ್ಟಡ ನಿರ್ಮಾಣ ಕಾಮಗಾರಿಯನ್ನು ರೂ. 59.00 ಕೋಟಿಗಳ ವೆಚ್ಚದಲ್ಲಿ ಕೈಗೊಳ್ಳಲು ಅಂದಾಜು ಪಟ್ಟಿ ಮತ್ತು ನಕ್ಷೆಗೆ ಆಡಳಿತಾತ್ಮಕ ಅನುಮೋದನೆಯನ್ನು ನೀಡಿದೆ.<br><br>ಈವರೆಗೆ ರೂ. 10.77 ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ.<br><br>ಪ್ರಸ್ತುತ ತಳಪಾಯದ ಕಾಮಗಾರಿಯು ಪೂರ್ಣಗೊಂಡಿದ್ದು, ಇಟ್ಟಿಗೆ ಕೆಲಸ ಪ್ರಗತಿಯಲ್ಲಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸಮಿತಿಯು ಭರವಸೆಯನ್ನು ಮುಕ್ತಾಯಗೊಳಿಸಿತು. |
| 39 | 6250<br>ಚು.ರ.ಪ್ರ; 702<br>ಶ್ರೀ ಎನ್.ಎಸ್. ಬೋಸ್‌ರಾಜ್<br>ವಿಪನದಿ: 25.11.2016 | ರಾಯಚೂರು–ಯಾದಗಿರಿ ಜಿಲ್ಲೆಗಳಲ್ಲಿ ವಿಶ್ವವಿದ್ಯಾಲಯ (University) ಪ್ರಾರಂಭಿಸುವ ಬಗ್ಗೆ | ರಾಯಚೂರು–ಯಾದಗಿರಿ ಜಿಲ್ಲೆಗಳನ್ನು ಒಳಗೊಂಡಂತೆ ರಾಯಚೂರು ವಿಶ್ವವಿದ್ಯಾಲಯವನ್ನು ಪ್ರಾರಂಭಿಸಲು ರಾಯಚೂರು ಜಿಲ್ಲೆಯ ಜನಪ್ರತಿನಿಧಿಗಳಿಂದ | ದಿನಾಂಕ: 06.05.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚೆ ಚರ್ಚಿಸಿದಾಗ, ಗುಲ್ಬರ್ಗ ವಿಶ್ವವಿದ್ಯಾಲಯವನ್ನು ವಿಭಜಿಸಿ ರಾಯಚೂರು ಮತ್ತು ಯಾದಗಿರಿ ಜಿಲ್ಲೆಗಳನ್ನು ಒಳಗೊಂಡು ರಾಯಚೂರು ವಿಶ್ವವಿದ್ಯಾಲಯವನ್ನು ಸ್ಥಾಪಿಸುವುದಾಗಿ 2017–18ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಲಾಗಿತ್ತು. ಅದರಂತೆ, ಶಾಸನಾತ್ಮಕ ಕ್ರಮಗಳನ್ನು ಕೈಗೊಳ್ಳುವ ಸಂಬಂಧ ಕರ್ನಾಟಕ ರಾಜ್ಯ |

| | | | | |
|---|---|---|---|---|
| | | | ಹಾಗೂ ರಾಯಚೂರು ವಿಶ್ವವಿದ್ಯಾಲಯ ಹೋರಾಟ ಸಮಿತಿಯಿಂದ ಸರ್ಕಾರದಲ್ಲಿ ಪ್ರಸ್ತಾವನೆ ಸ್ವೀಕೃತವಾಗಿದ್ದು, ಪ್ರಸ್ತಾವನೆಯ ಕುರಿತು ಗುಲ್ಬರ್ಗಾ ವಿಶ್ವವಿದ್ಯಾಲಯ ಹಾಗೂ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನಿಂದ ವರದಿ ಪಡೆಯಲು ಕ್ರಮವಹಿಸಲಾಗಿದೆ. ಈ ಬಗ್ಗೆ ವರದಿ ಸ್ವೀಕೃತವಾದ ನಂತರ ಪರಿಶೀಲಿಸಲಾಗುವುದು ಎಂದು ಮಾನ್ಯ ಉನ್ನತ ಶಿಕ್ಷಣ ಸಚಿವರು ತಿಳಿಸಿದರು. | ವಿಶ್ವವಿದ್ಯಾನಿಲಯಗಳ ವಿಧೇಯಕ 2017ರಲ್ಲಿ ರಾಯಚೂರು ವಿಶ್ವವಿದ್ಯಾಲಯದ ಸ್ಥಾಪನೆಯ ಕುರಿತು ಸೇರ್ಪಡೆಗೊಳಿಸಲಾಗಿತ್ತು. ಸದರಿ ವಿಧೇಯಕವು ಕರ್ನಾಟಕ ವಿಧಾನ ಮಂಡಲದ ಉಭಯ ಸದನಗಳಲ್ಲಿ ಅಂಗೀಕಾರಗೊಂಡು ಗೌರವಾನ್ವಿತ ರಾಜ್ಯಪಾಲರ ಅನುಮೋದನೆಗಾಗಿ ಸಲ್ಲಿಸಲಾಗಿದೆ. ಸದರಿ ವಿಧೇಯಕವು ಗೌರವಾನ್ವಿತ ರಾಜ್ಯಪಾಲರಿಂದ ಅಂಗೀಕಾರಗೊಂಡು ಅಧಿನಿಯಮಿತಗೊಂಡ ನಂತರ ರಾಯಚೂರು ವಿಶ್ವವಿದ್ಯಾಲಯವನ್ನು ಅಧಿಕೃತವಾಗಿ ಪ್ರಾರಂಭಿಸಲಾಗುವುದು.<br>ಈ ಮಧ್ಯೆ, ಗುಲ್ಬರ್ಗ ವಿಶ್ವವಿದ್ಯಾಲಯವನ್ನು ವಿಭಜಿಸಿ ರಾಯಚೂರು ವಿಶ್ವವಿದ್ಯಾಲಯವನ್ನು ಹೊಸದಾಗಿ ಪ್ರಾರಂಭಿಸಲು ಗುಲ್ಬರ್ಗ ವಿಶ್ವವಿದ್ಯಾಲಯದಿಂದ ಪ್ರಸ್ತಾಪಿತ ರಾಯಚೂರು ವಿಶ್ವವಿದ್ಯಾಲಯಕ್ಕೆ ಹಸ್ತಾಂತರಿಸಬೇಕಾದ ಚರ ಮತ್ತು ಸ್ಥಿರ ಸ್ವತ್ತುಗಳ ಕುರಿತು ಪರಿಶೀಲಿಸಿ ವರದಿ ನೀಡುವಂತೆ ಸರ್ಕಾರದ ಆದೇಶ ಸಂ. ಇಡಿ 236 ಯುಜಿವಿ 2016, ದಿನಾಂಕ:23.05.2017ರಲ್ಲಿ ಸಮಿತಿಯನ್ನು ರಚಿಸಲಾಗಿದೆ ಹಾಗೂ ರಾಯಚೂರು ವಿಶ್ವವಿದ್ಯಾಲಯದ ಸ್ಥಾಪನೆಯ ಕುರಿತು ಅಗತ್ಯ ಪೂರ್ವಬಾವಿ ಕ್ರಮಗಳನ್ನು ಕೈಗೊಳ್ಳುವ ಸಲುವಾಗಿ ಸರ್ಕಾರದ ಆದೇಶ ಸಂ. ಇಡಿ 236 ಯುಜಿವಿ 2016, ದಿನಾಂಕ: 26.03.2018ರಲ್ಲಿ ಪ್ರೊ. ಮುಜಾಫರ್ ಅಸಾದಿ, ಪ್ರಾಧ್ಯಾಪಕರು, ರಾಜ್ಯಶಾಸ್ತ್ರ ವಿಭಾಗ, ಮೈಸೂರು ವಿಶ್ವವಿದ್ಯಾಲಯ ಅವರನ್ನು ಪ್ರಸ್ತಾಪಿತ ರಾಯಚೂರು ವಿಶ್ವವಿದ್ಯಾಲಯದ ವಿಶೇಷಾಧಿಕಾರಿಯನ್ನಾಗಿ ನೇಮಕ ಮಾಡಲಾಗಿದೆ.<br>ಪ್ರಸ್ತುತ, ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000ಕ್ಕೆ ತಿದ್ದುಪಡಿ ತಂದು ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ (ತಿದ್ದುಪಡಿ) ವಿಧೇಯಕ 2017ನ್ನು ಆಧ್ಯಾದೇಶದ ಮೂಲಕ ಜಾರಿಗೆ ತಂದು ರಾಯಚೂರು ವಿಶ್ವವಿದ್ಯಾಲಯವನ್ನು ಸ್ಥಾಪಿಸಲು ಶಾಸನೀಯ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸಮಿತಿಯು ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |

| | | | | |
|---|---|---|---|---|
| 40 | 6251<br>ಚು.ರ.ಪ್ರ; 142<br>ಶ್ರೀ ನಿರಾಣಿ ಹಣಮಂತ ರುದ್ರಪ್ಪ<br>ವಿಪನದಿ: 25.11.2016 | ರಾಜ್ಯದಲ್ಲಿ ಸರ್ಕಾರಿ ಪದವಿ ಕಾಲೇಜುಗಳಲ್ಲಿ ಖಾಲಿ ಇರುವ ಉಪನ್ಯಾಸಕರ ಹುದ್ದೆಗಳಿಗೆ ಶಾಶ್ವತವಾಗಿ ನೇಮಕ ಮಾಡಿಕೊಳ್ಳುವ ಬಗ್ಗೆ. | ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಮಂಜೂರಾದ ಖಾಲಿ ಇರುವ ಸಹಾಯಕ ಪ್ರಾಧ್ಯಾಪಕರ ಹುದ್ದೆಗಳಲ್ಲಿ ಕಾರ್ಯಭಾರಕ್ಕನುಗುಣವಾಗಿ ಅಗತ್ಯತೆ ಇರುವ ವಿವಿಧ ಭೋಧನಾ ವಿಷಯಗಳಲ್ಲಿ ಒಟ್ಟು–2160 ಸಹಾಯಕ ಪ್ರಾದ್ಯಾಪಕರ ಹುದ್ದೆಗಳನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ವತಿಯಿಂದ ತುಂಬಲು ಕ್ರಮವಹಿಸಿದ್ದು, ಸದರಿ ಪ್ರಾಧಿಕಾರವು ಈಗಾಗಲೇ ಸ್ಪರ್ಧಾತ್ಮಕ ಪರೀಕ್ಷಾ ಪ್ರಕ್ರಿಯೆಯನ್ನು ಪೂರ್ಣಗೊಳಿಸಿ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಪ್ರಕಟಿಸಿ, ವಿವಿಧ ವಿಷಯಗಳ ಅರ್ಹ ಅಭ್ಯರ್ಥಿಗಳ ಮೂಲ ದಾಖಲಾತಿಗಳನ್ನು ಪರಿಶೀಲಿಸಿ ನಿಯಮಾನುಸಾರ ಅಂತಿಮ ಅರ್ಹತಾ ಪಟ್ಟಿಯನ್ನು ಸಿದ್ದಪಡಿಸಲು ಸಂಬಂಧಪಟ್ಟ ಅಭ್ಯರ್ಥಿಗಳಿಂದ ಅಕ್ಷೇಪಣೆಯನ್ನು ಆಹ್ವಾನಿಸಿದೆ. ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದ ಅಂತಿಮ ಆಯ್ಕೆ ಪಟ್ಟಿ ಬಂದ ನಂತರ ಖಾಲಿ ಇರುವ ಬೋಧಕ ಹುದ್ದೆಗಳನ್ನು ಭರ್ತಿ ಮಾಡಲು ನಿಯಮಾನುಸಾರ ಪರಿಶೀಲಿಸಲಾಗುವುದು ಎಂದು ಮಾನ್ಯ ಉನ್ನತ ಶಿಕ್ಷಣ ಸಚಿವರು ತಿಳಿಸಿದರು. | ದಿನಾಂಕ: 06.05.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚೆ ಚರ್ಚಿಸಿದಾಗ, 1939 ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ನೀಡಲಾಗಿದೆ. ಇದರಲ್ಲಿ 25 ಅಭ್ಯರ್ಥಿಗಳು ನಕಲಿ ಪ್ರಮಾಣ ಪತ್ರ ಸಲ್ಲಿಸಿದ್ದು, 2034 ಸಹಾಯಕ ಪ್ರಾಧ್ಯಾಪಕರ ನೇಮಕ ಪ್ರಕ್ರಿಯೆ ಪೂರ್ಣಗೊಂಡಿರುತ್ತದೆ. 70 ಅಭ್ಯರ್ಥಿಗಳ ನೇಮಕ ಪ್ರಕ್ರಿಯೆ ಬಾಕಿ ಇರುತ್ತವೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಒಪ್ಪಿ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |

<table>
<tr>
<td>41</td>
<td>6261<br>ಚು.ಗು.ಪ್ರ. 1079<br>ಶ್ರೀ ಕೆ.ಟಿ. ಶ್ರೀಕಂಠೇಗೌಡ<br>ವಿಪನದಿ: 02.12.2016</td>
<td>ಹಳೇ ಮೈಸೂರು ಭಾಗದಲ್ಲಿ (ಮಂಡ್ಯ, ಮೈಸೂರು, ಹಾಸನ, ಚಾಮರಾಜನಗರ) ಸರ್ಕಾರಿ ಕಿರಿಯ ತಾಂತ್ರಿಕ ಶಾಲೆ ಆರಂಭಿಸುವ ಬಗ್ಗೆ.</td>
<td>ತಾಂತ್ರಿಕ ಶಿಕ್ಷಣ ಇಲಾಖೆ ಇವರಿಂದ ಬಂದಿರುವ ಸಂಖ್ಯೆ: ಡಿಟಿಇ 19 ಡಿವಿಪ (1) 2016, ದಿ: 18.11.2016ರ ಪ್ರಸ್ತಾವನೆಯು ಉನ್ನತ ಶಿಕ್ಷಣ ಇಲಾಖೆಯ ಯೋಜನಾ ಶಾಖೆಯಲ್ಲಿ ಪರಿಶೀಲನೆಯಲ್ಲಿರುತ್ತದೆ ಎಂದು ಮಾನ್ಯ ಉನ್ನತ ಶಿಕ್ಷಣ ಸಚಿವರು ತಿಳಿಸಿದರು.</td>
<td>ದಿನಾಂಕ: 06.05.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚೆ ಚರ್ಚಿಸಿದಾಗ, ತಾಂತ್ರಿಕ ಶಿಕ್ಷಣ ಇಲಾಖೆಯ ಅಧೀನದಲ್ಲಿರುವ 6 ಸರ್ಕಾರಿ ಶಾಲೆಗಳಲ್ಲಿ ವಿದ್ಯಾರ್ಥಿಗಳ ಪ್ರವೇಶಾತಿ ವಿವರ ಇಂತಿದೆ:–
<table>
<tr><th>ಕ್ರ. ಸಂ</th><th>ಶಾಲೆಯ ಹೆಸರು</th><th>ವಿದ್ಯಾರ್ಥಿ ಪ್ರಮಾಣ</th><th>ಪ್ರವೇಶಾತಿ ಪಡೆದ ಸಂಖ್ಯೆ</th></tr>
<tr><td>1</td><td>ಸ.ಕಿ.ತಾಂ.ಶಾಲೆ, ಭದ್ರಾವತಿ</td><td>60</td><td>60</td></tr>
<tr><td>2</td><td>ಸ.ಕಿ.ತಾಂ.ಶಾಲೆ, ಹುಬ್ಬಳ್ಳಿ</td><td>60</td><td>60</td></tr>
<tr><td>3</td><td>ಸ.ಕಿ.ತಾಂ. ಶಾಲೆ, ಬಾಗಲಕೋಟೆ</td><td>60</td><td>15</td></tr>
<tr><td>4</td><td>ಸ.ಕಿ.ತಾಂ.ಶಾ. ಮಂಗಳೂರು</td><td>60</td><td>26</td></tr>
<tr><td>5</td><td>ಸ.ಕಿ.ತಾಂ.ಶಾಲೆ, ಕಲಬುರಗಿ</td><td>60</td><td>40</td></tr>
<tr><td>6</td><td>ಸ.ಕಿ.ತಾಂ.ಶಾಲೆ, ಬಳ್ಳಾರಿ</td><td>60</td><td>59</td></tr>
<tr><td></td><td>ಒಟ್ಟು</td><td>360</td><td>260</td></tr>
</table>
ಪ್ರಸ್ತುತ ಶೇ.28ರಷ್ಟು ಸೀಟುಗಳು ಖಾಲಿ ಉಳಿಯುತ್ತಿದ್ದು, ಸದ್ಯಕ್ಕೆ ಸರ್ಕಾರಿ ಕಿರಿಯ ತಾಂತ್ರಿಕ ಶಾಲೆಗಳನ್ನು ಪ್ರಾರಂಭಿಸುವ ಅವಶ್ಯಕತೆ ಇರುವುದಿಲ್ಲವೆಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಸಮಿತಿಯು ಒಪ್ಪಿ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು.</td>
</tr>
</table>

**ಸಾರಿಗೆ ಇಲಾಖೆ**

| ಕ್ರಮ ಸಂಖ್ಯೆ | ಆಶ್ವಾಸನೆ ಸಂಖ್ಯೆ | ಆಧಾರ ಮತ್ತು ದಿನಾಂಕ | ಆಶ್ವಾಸನೆ | ತೆಗೆದುಕೊಂಡ ಕ್ರಮ |
|---|---|---|---|---|
| 1 | 4119<br>ಚು.ರ.ಪ್ರ. 475,<br>ಶ್ರೀ ವೀರಣ್ಣ ಮತ್ತಿಕಟ್ಟಿ,<br>ವಿಪನದಿ: 27.07.2012 | ರಾಜ್ಯ ರಸ್ತೆ ಸಾರಿಗೆ ಮತ್ತು ಸರ್ಕಾರಿ ವಾಹನಗಳನ್ನೆಲ್ಲಾ ಮಾಲಿನ್ಯ ರಹಿತ ವಾಹನಗಳನ್ನಾಗಿ ಸುಸ್ಥಿತಿಯಲ್ಲಿ ಓಡಿಸುವ ಬಗ್ಗೆ. | ಸರ್ಕಾರವು ಜೈವಿಕ ಇಂಧನದ ಬಳಕೆಯನ್ನು ಪ್ರೋತ್ಸಾಹಿಸುತ್ತಿದೆ, ಮುಂಬರುವ ದಿನಗಳಲ್ಲಿ ಬೆಂಗಳೂರು ನಗರದಲ್ಲಿ ಸಿ.ಎನ್.ಜಿ. ಇಂಧನವು ಲಭ್ಯವಾಗಲಿದ್ದು, ಸದರಿ ಇಂಧನವನ್ನು ಸಾರ್ವಜನಿಕ ಸಾರಿಗೆ ಸೇವೆ ನೀಡುವ ವಾಹನಗಳಲ್ಲಿ ಬಳಸಿಕೊಳ್ಳಲು ಕ್ರಮ ವಹಿಸಲಾಗುವುದೆಂದು ಪರಿಸರ, ಜೀವಿಶಾಸ್ತ್ರ ಹಾಗೂ ಯೋಜನೆ ಮತ್ತು ಸಾಂಖ್ಯಿಕ ಸಚಿವರು ತಿಳಿಸಿದರು. | ದಿನಾಂಕ: 21.02.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು, ಸಾರಿಗೆ ಸಂಸ್ಥೆಗಳು ಪ್ರಸ್ತುತ ಡೀಸೆಲ್ ಇಂಧನ ಬಸ್ಸುಗಳನ್ನು ಕಾರ್ಯಾಚರಣೆ ಮಾಡುತ್ತಿದ್ದು, ಮುಂಬರುವ ದಿನಗಳಲ್ಲಿ ಸಿ.ಎನ್.ಜಿ. ಇಂಧನವು ಸರಬರಾಜು ಅಗಬಹುದಾದ ನಿಟ್ಟಿನಲ್ಲಿ ಕ.ರಾ.ರ.ಸಾ.ನಿಗಮವು ಬೇರೆ ರಾಜ್ಯ ಸಾರಿಗೆ ಸಂಸ್ಥೆಗಳ ಸಿ.ಎನ್.ಜಿ. ಇಂಧನ ವಾಹನಗಳಲ್ಲಿ ಸಿ.ಎನ್.ಜಿ. ಉಪಯೋಗಿಸುವ ಕುರಿತು ವಿವರಣಾತ್ಮಕ ಅಧ್ಯಯನ್ನವನ್ನು ನಡೆಸುತ್ತಿದೆ.<br><br>ಬೆಂ.ಮ.ಸಾ.ಸಂಸ್ಥೆಯಿಂದ ಸಿ.ಎನ್.ಜಿ. ನಿಲ್ದಾಣವನ್ನು ಸ್ಥಾಪಿಸಲು ಮೆ:GAIL ಕಂಪನಿಗೆ ಸಂಸ್ಥೆಯ ಮೂರು ಘಟಕಗಳಲ್ಲಿ (ಪೀಣ್ಯ, ಹೆಣ್ಣೂರು ಮತ್ತು ಸುಮ್ಮನಹಳ್ಳಿ) ಅಗತ್ಯವಿರುವ ಸ್ಥಳವನ್ನು ಉಚಿತವಾಗಿ ನೀಡಲಾಗಿದೆ.<br><br>ಸಿ.ಎನ್.ಜಿ. ಬಸ್ಸುಗಳ ಕಾರ್ಯಾಚರಣೆಗೆ ಅಗತ್ಯವಿರುವ ಹೆಚ್ಚುವರಿ ಸೌಲಭ್ಯಗಳನ್ನು ಕಲ್ಪಿಸುವುದು ಮತ್ತು ತಾಂತ್ರಿಕ ಸಿಬ್ಬಂದಿಗಳಿಗೆ ತರಬೇತಿ ನೀಡುವುದು ಇತ್ಯಾದಿಗಳಿಂದಾಗಿ ಸಿ.ಎನ್.ಜಿ. ಇಂಧನದ ಬಸ್ಸುಗಳ ಆಚರಣೆಯು ಆರ್ಥಿಕವಾಗಿ ಸೂಕ್ತವಾಗಿರುವುದಿಲ್ಲ.<br><br>ಆದಾಗ್ಯೂ, ಕರ್ನಾಟಕದ ಎಲ್ಲಾ ಸ್ಥಳಗಳಲ್ಲಿ ಸಿ.ಎನ್.ಜಿ. ಇಂಧನದ ಲಭ್ಯತೆಯ ಹಾಗೂ ಅಧ್ಯಯನದ ವರದಿಯ |

| | | | | |
|---|---|---|---|---|
| | | | | ಮೇರೆಗೆ ಸಿ.ಎನ್.ಜಿ. ಇಂಧನ ಬಳಕೆಯ ಬಗ್ಗೆ ನಿರ್ಧರಿಸಬೇಕಾಗುತ್ತದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ಸಮಿತಿಯು ತೀರ್ಮಾನಿಸಿತು. |
| 2 | 4189<br>ಚು.ರ.ಪ್ರ: 390<br>ಶ್ರೀ ಕೆ.ಪ್ರತಾಪಚಂದ್ರಶೆಟ್ಟಿ<br>ವಿಪನದಿ: 11.12.2012 | ಉಡುಪಿ ಮಾರ್ಗವಾಗಿ ಕುಂದಾಪುರಕ್ಕೆ ಕೆ.ಎಸ್.ಆರ್.ಟಿ.ಸಿ ವೋಲ್ವೋ ಹವಾ ನಿಯಂತ್ರಿತ ಬಸ್ಸುಗಳನ್ನು ಓಡಿಸದಿರುವ ಬಗ್ಗೆ. | ಪ್ರಾದೇಶಿಕ ಸಾರಿಗೆ ಪ್ರಾಧಿಕಾರಕ್ಕೆ ಪರವಾನಗಿ ಕೋರಿ ಅರ್ಜಿಗಳನ್ನು ಸಲ್ಲಿಸಿ, ಪರವಾನಗಿ ಮಂಜೂರಾದಲ್ಲಿ ಸಾರಿಗೆ ಸೌಲಭ್ಯವನ್ನು ಕಲ್ಪಿಸಿಕೊಡಲು ಕ್ರಮ ಕೈಗೊಳ್ಳಲಾಗುವುದು ಎಂದು ಮಾನ್ಯ ಉಪ ಮುಖ್ಯಮಂತ್ರಿಯವರು ತಿಳಿಸಿದರು. | ದಿನಾಂಕ: 21.02.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು, ಉಡುಪಿ ಪ್ರಾದೇಶಿಕ ಸಾರಿಗೆ ಪ್ರಾಧಿಕಾರದಿಂದ ಸದರಿ ಮಾರ್ಗಕ್ಕೆ ಕೆ.ಎಸ್.ಆರ್.ಟಿ.ಸಿ.ಯವರು ಕೋರಿದಂತೆ 09 ಪರವಾನಿಗೆಗಳನ್ನು ಮಂಜೂರು ಮಾಡಲಾಗಿರುತ್ತದೆ.<br><br>ಕ.ರಾ.ರ.ಸಾ. ನಿಗಮದ ಮಂಗಳೂರು ವಿಭಾಗದಿಂದ ಮಂಗಳೂರು ನಗರದ ಸ್ಟೇಟ್‌ಬ್ಯಾಂಕ್‌ನಿಂದ ಉಡುಪಿ, ಕುಂದಾಪುರ, ಬೈಂದೂರು, ಶಿರೂರು ಮಾರ್ಗವಾಗಿ ಭಟ್ಕಳಕ್ಕೆ ಮಂಗಳೂರು–2ನೇ ಘಟಕದಿಂದ ದಿ: 5.3.2017 ರಿಂದ ಒಟ್ಟು 9 ಐರಾವತ ವೋಲ್ವೋ (ಅನುಸೂಚಿಗಳನ್ನು) ಸಾರಿಗೆಗಳನ್ನು ಕಾರ್ಯಾಚರಿಸಲಾಗುತ್ತಿದ್ದು, ಇವುಗಳ ಅನುಕೂಲತೆಯನ್ನು ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಯ ಸಾರ್ವಜನಿಕ ಪ್ರಯಾಣಿಕರು ಪಡೆದುಕೊಳ್ಳುತ್ತಿದ್ದಾರೆ.<br><br>ಸದರಿ ಸಾರಿಗೆಗಳ ಆದಾಯವು ಉತ್ತೇಜಿತವಾಗದೇ ನಷ್ಟವನ್ನು ಅನುಭವಿಸುತ್ತಿವೆ. ಆದಾಗ್ಯೂ, ಸಾರ್ವಜನಿಕ ಪ್ರಯಾಣಿಕರ ಹಿತದೃಷ್ಟಿಯಿಂದ ಈ ಸಾರಿಗೆಗಳನ್ನು ಮುಂದುವರೆಸಲಾಗಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ಸಮಿತಿಯು ತೀರ್ಮಾನಿಸಿತು. |

| | | | | |
|---|---|---|---|---|
| 3 | 5572<br>ಚು.ರ.ಪ್ರ: 1703<br>ಶ್ರೀ ಆಚಾರ್ ಹಾಲಪ್ಪ ಬಸಪ್ಪ<br>ವಿಪನದಿ:21.07.2014 | ರಾಯಚೂರು ಮತ್ತು ಕೊಪ್ಪಳ ಜಿಲ್ಲೆಗಳಿಂದ ಬೆಂಗಳೂರು ಮಾರ್ಗದಲ್ಲಿ ಪ್ರಯಾಣಿಸುವ ಸಾರಿಗೆ ಸಂಸ್ಥೆಯ ಹವಾ ನಿಯಂತ್ರಿತ, ಕರೋನಾ ಸ್ಲೀಪರ್ ಬಸ್ಸುಗಳಲ್ಲಿ ಮತ್ತು ಸಾಧಾರಣಾ ಸ್ಲೀಪರ್ ಕೆಲವು ಬಸ್ಸುಗಳಲ್ಲಿ ಮಾತ್ರ ಬೆಡ್‌ಶೀಟ್ ಹೊದಿಕೆ ಒದಗಿಸುತ್ತಿದ್ದು, ಇನ್ನು ಕೆಲವು ಬಸ್ಸುಗಳಲ್ಲಿ ಬೆಡ್‌ಶೀಟ್ ನೀಡದಿರುವ ಬಗ್ಗೆ. | ರಾಯಚೂರು ಮತ್ತು ಕೊಪ್ಪಳ ವಿಭಾಗಗಳ ಹವಾನಿಯಂತ್ರಿತ ಕರೋನಾ ಸ್ಲೀಪರ್ ವಾಹನಗಳಲ್ಲಿ ಪ್ರಯಾಣಿಕರಿಗೆ ಬೆಡ್‌ಶೀಟ್ ಮತ್ತು ಹೊದಿಕೆಗಳನ್ನು ಒದಗಿಸಲಾಗುತ್ತಿದ್ದು, ರಾಯಚೂರು ವಿಭಾಗದಲ್ಲಿ ಹವಾನಿಯಂತ್ರಣ ರಹಿತ ಸ್ಲೀಪರ್ ವಾಹನಗಳಲ್ಲಿಯೂ ಸಹ ಬೆಡ್‌ಶೀಟ್‌ನೊಂದಿಗೆ ಹೊದಿಕೆಗಳನ್ನು ಸಹ ಒದಗಿಸಲು ಕ್ರಮ ಜರುಗಿಸಲಾಗುವುದು ಎಂದು ಮಾನ್ಯ ಸಾರಿಗೆ ಸಚಿವರು ತಿಳಿಸಿದರು. | ದಿನಾಂಕ: 21.02.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು, ರಾಯಚೂರು ಮತ್ತು ಕೊಪ್ಪಳ ಜಿಲ್ಲೆಗಳಿಂದ ಬೆಂಗಳೂರು ಮಾರ್ಗದಲ್ಲಿ ಪ್ರಯಾಣಿಸುವ ಸಾರಿಗೆ ಸಂಸ್ಥೆಯ ಹವಾನಿಯಂತ್ರಿತ ಕರೋನಾ ಸ್ಲೀಪರ್ ವಾಹನಗಳಲ್ಲಿ ಪ್ರಯಾಣಿಕರಿಗೆ ಬೆಡ್‌ಶೀಟ್ ಮತ್ತು ಹೊದಿಕೆಗಳನ್ನು ಮೊದಲಿನಿಂದಲೂ ಒದಗಿಸಲಾಗುತ್ತಿದೆ. ಅದರಂತೆ, ರಾಯಚೂರು ಮತ್ತು ಕೊಪ್ಪಳ ಜಿಲ್ಲೆಗಳನ್ನೊಳಗೊಂಡಂತೆ ಸಂಸ್ಥೆಯ ವ್ಯಾಪ್ತಿಯ ಎಲ್ಲಾ ವಿಭಾಗಗಳಲ್ಲಿ ಹವಾ ನಿಯಂತ್ರಿತ ಸ್ಲೀಪರ್ ವಾಹನ ಮತ್ತು ಹವಾ ನಿಯಂತ್ರಣ ರಹಿತ ಸ್ಲೀಪರ್ ವಾಹನಗಳಲ್ಲಿ ಪ್ರಯಾಣಿಸುವ ಪ್ರಯಾಣಿಕರಿಗೆ ಏಕತೆರನಾಗಿ ಬೆಡ್‌ಶೀಟ್ ಮತ್ತು ಹೊದಿಕೆಗಳನ್ನು ಒದಗಿಸಲು ಕ್ರಮ ಕೈಗೊಳ್ಳಲಾಗಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ಸಮಿತಿಯು ತೀರ್ಮಾನಿಸಿತು. |
| 4 | 5573<br>ಚು.ಗು.ಪ್ರ: 726<br>ಶ್ರೀ ಎನ್.ಎಸ್ ಬೋಸ್‌ರಾಜು<br>ವಿಪನದಿ:15.12.2014 | ರಾಯಚೂರು ಜಿಲ್ಲೆಯ ಮಾನ್ವಿ ತಾಲ್ಲೂಕಿನ ಕೌತಾಳ ಗ್ರಾಮದಲ್ಲಿ ಹೊಸ ಬಸ್ ನಿಲ್ದಾಣ ಕಾಮಗಾರಿಯನ್ನು ನಿರ್ಮಿಸುವ ಬಗ್ಗೆ. | ಹೊಸ ಬಸ್ ನಿಲ್ದಾಣದ ನಿರ್ಮಾಣಕ್ಕಾಗಿ ಕೌತಳ ಗ್ರಾಮದಲ್ಲಿ ಸರ್ವೆ ನಂ:743&5/1ರಲ್ಲಿ ಒಟ್ಟು 2.00 ಎಕರೆ ಜಮೀನು ಸಂಸ್ಥೆಯ ವಶಕ್ಕೆ ಪಡೆಯಲಾಗಿರುತ್ತದೆ. 2014–15ನೇ ಸಾಲಿನ ಸಂಸ್ಥೆಯ ಪರಿಷ್ಕೃತ ಆಯವ್ಯಯದಲ್ಲಿ ಕಾಮಗಾರಿ ಯನ್ನು ಅಳವಡಿಸಿಕೊಂಡು ರೂ.150.00 ಲಕ್ಷಗಳಲ್ಲಿ ನೂತನ ಬಸ್ ನಿಲ್ದಾಣ ನಿರ್ಮಿಸಲು ಶೀಘ್ರದಲ್ಲಿ ಕ್ರಮ ಕೈಗೊಳ್ಳಲಾಗುವುದು ಎಂದು ಮಾನ್ಯ ಸಾರಿಗೆ ಸಚಿವರು ತಿಳಿಸಿದರು. | ದಿನಾಂಕ: 21.02.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು, ಕವಿತಾಳ ಗ್ರಾಮದಲ್ಲಿ ಸರ್ವೆ ನಂ. 743&5/1ರಲ್ಲಿ ಒಟ್ಟು 2.00 ಎಕರೆ ನಿವೇಶನವನ್ನು ಸಂಸ್ಥೆಯ ವಶಕ್ಕೆ ಪಡೆದು, ಸದರಿ ನಿವೇಶನದಲ್ಲಿ ರೂ. 200.00 ಲಕ್ಷ ವೆಚ್ಚದಲ್ಲಿ 2017–18ನೇ ಸಾಲಿನಲ್ಲಿ ನೂತನ ಬಸ್ ನಿಲ್ದಾಣವನ್ನು ನಿರ್ಮಿಸಲಾಗಿದ್ದು ಕಾರ್ಯಾಚರಣೆಯಲ್ಲಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ಸಮಿತಿಯು ತೀರ್ಮಾನಿಸಿತು. |

| | | | | |
|---|---|---|---|---|
| 5 | 5574<br>ಚು.ಗು.ಪ್ರ: 836<br>ಶ್ರೀ ರಾಮಚಂದ್ರಗೌಡ<br>ವಿಪನದಿ:15.12.2014 | ಕಳೆದ ಜೂನ್ ತಿಂಗಳಿಂದ ಡೀಸೆಲ್ ಬೆಲೆ ಇಳಿಕೆಯಾಗಿರುವುದರಿಂದ ಬಸ್ ಪ್ರಯಾಣ ದರವನ್ನು ಇಳಿಕೆ ಮಾಡುವ ಬಗ್ಗೆ. | ಬಸ್ ಪ್ರಯಾಣ ದರವನ್ನು ಜಾಸ್ತಿ ಮಾಡಿದಂತಹ ಸಂದರ್ಭದಲ್ಲಿ ಕೂಡ Crude Oil ಬೆಲೆ ಸುಮಾರು 11 ರೂಪಾಯಿಗಳಷ್ಟು ಜಾಸ್ತಿಯಾದ ಮೇಲೆಯೇ ಮಾಡಿದ್ದು. ಅದೇ ರೀತಿ ಈಗ Crude Oil ಬೆಲೆ ಇದುವರಗೆ ಸುಮಾರು 5.75 ರಿಂದ 6.00 ರೂಪಾಯಿಗಳಷ್ಟು ಕಡಿಮೆಯಾಗಿದೆ. ಮೊನ್ನೆ ಕೂಡ ಅದು ಬಹಳ ಕಡಿಮೆ ಆಯಿತು, ಕಡಿಮೆಯಾದಾಗಲು ಕೂಡ ಕೇಂದ್ರ ಸರ್ಕಾರದವರು ಅದರ ಮೇಲೆ Excise Duty ಹಾಕಿಬಿಟ್ಟರು. ಅದರಿಂದಾಗಿ ಬೆಲೆ ನಾರ್ಮಲ್ ಆಗಿ ನಿಂತುಹೋಯಿತು. Excise Duty ಕಡಿಮೆ ಮಾಡಿದರೆ ಖಂಡಿತವಾಗಿಯೂ ಈ ಬಾರಿ ಸಾರಿಗೆ ದರವನ್ನು ಪರಿಷ್ಕರಿಸುವ ಬಗ್ಗೆ ಪರಿಶೀಲನೆ ಮಾಡುತ್ತೇವೆ ಎಂದು ಮಾನ್ಯ ಸಾರಿಗೆ ಸಚಿವರು ತಿಳಿಸಿದರು. | ದಿನಾಂಕ: 21.02.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಮತ್ತು ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಗಳಿಂದ ಆಚರಣೆ ಮಾಡುತ್ತಿರುವ ಸಾಮಾನ್ಯ, ವೇಗದೂತ ಮತ್ತು ನಗರ ಸಾರಿಗೆಗಳ ಪ್ರಯಾಣ ದರವನ್ನು ದಿ: 10.01.2015ರಿಂದ ಜಾರಿಗೆ ಬರುವಂತೆ ಶೇ.2ರಷ್ಟು ಕಡಿಮೆಗೊಳಿಸಿ ಕಾರ್ಯಾಚರಣೆ ಮಾಡಲಾಗುತ್ತಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ಸಮಿತಿಯು ತೀರ್ಮಾನಿಸಿತು. |
| 6 | 5575<br>ಚು.ಗು.ಪ್ರ: 747<br>ಶ್ರೀ ಸಿ.ಹೆಚ್ ವಿಜಯಶಂಕರ<br>ವಿಪನದಿ:15.12.2014 | ಮೈಸೂರು ಜಿಲ್ಲಾ, ಪಿರಿಯಪಟ್ಟಣದಲ್ಲಿ ತಾಲ್ಲೂಕು ಪಟ್ಟಣ ವ್ಯಾಪ್ತಿಯಲ್ಲಿ ಸ್ಥಳೀಯ ಬೇಡಿಕೆಗೆ ಅನುಗುಣವಾಗಿ ಬಸ್ ಡಿಪೋ ಕೆಲಸ ಪ್ರಾರಂಭಿಸಲು ನಿಗಮ ಒಪ್ಪಿಗೆ | ಸದ್ಯ ಡಿಪೋ ಕಾಮಗಾರಿಯನ್ನು ನಿಯೋಜಿತ ಗುತ್ತಿಗೆದಾರರು ಮರು ಪ್ರಾರಂಭಿಸಿದ್ದು ಘಟಕದ ಸುತ್ತ ಗೋಡೆಯ ನಿರ್ಮಾಣಕ್ಕಾಗಿ ತಳಪಾಯದ ಕೆಲಸವನ್ನು ಕೈಗೊಂಡಿದ್ದು, ಟೆಂಡರ್ ನಿಯಮಾವಳಿಗಳನ್ವಯ ಸುಮಾರು | ದಿನಾಂಕ: 21.02.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು, ಪಿರಿಯಾ ಪಟ್ಟಣದಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಬಸ್ ಘಟಕವನ್ನು ನಿರ್ಮಿಸಿ ದಿ: 31.5.2018ರಂದು ಉದ್ಘಾಟಿಸಿ ಕಾರ್ಯಾರಂಭ ಮಾಡಲಾಗಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸದರಿ ಭರವಸೆಯನ್ನು |

| | | | | |
|---|---|---|---|---|
| | | ನೀಡಿದ್ದು, ಕಾಮಗಾರಿ ಕಾರ್ಯದ ಬಗ್ಗೆ. | ಹದಿನೈದು ತಿಂಗಳಲ್ಲಿ ಕಾಮಗಾರಿಯನ್ನು ಪೂರ್ಣಗೊಳಿಸ ಲಾಗುವುದು ಎಂದು ಮಾನ್ಯ ಸಾರಿಗೆ ಸಚಿವರು ತಿಳಿಸಿದರು. | ಮುಕ್ತಾಯಗೊಳಿಸಲು ಸಮಿತಿಯು ತೀರ್ಮಾನಿಸಿತು. |
| 7 | 5576<br>ಚು.ರ.ಪ್ರ: 768<br>ಶ್ರೀ ಪಟೇಲ್ ಶಿವರಾಂ<br>ವಿಪನದಿ:15.12.2014 | ಹಾಸನ ಕೆಎಸ್‌ಆರ್‌ಟಿಸಿ ವಿಭಾಗದಲ್ಲಿನ ಕಾರ್ಮಿಕ ಸಿಬ್ಬಂದಿಗಳಿಗೆ ಮೇಲಾಧಿಕಾರಿಗಳು ಅನಗತ್ಯ ತೊಂದರೆ ಕೊಡುತ್ತಿರುವ ಬಗ್ಗೆ. | ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಕಾರ್ಮಿಕ ಸಿಬ್ಬಂದಿಗಳಿಗೆ ಆಗುವ ಅನಗತ್ಯ ತೊಂದರೆಯನ್ನು ತಪ್ಪಿಸಲು ಸಿಬ್ಬಂದಿಗಳ ಮಾರ್ಗ ನಿಯೋಜನೆಯಲ್ಲಿ ಪಾರದರ್ಶಕತೆ ಕಾಪಾಡಿಕೊಳ್ಳಲು "ಡ್ಯೂಟಿ ರೋಟಾ" ಪದ್ಧತಿಯ ಮೂಲಕ ಮಾರ್ಗ ಆಯ್ಕೆ ಮಾಡಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ. ಇನ್ನೂ ಈ ವ್ಯವಸ್ಥೆಯ ಅನುಸಾರ ಚಾಲನಾ/ ಸಿಬ್ಬಂದಿಗಳು ರಜೆ ತಿಳಿಸೋ ಮೂಲಕ ತಾನೇ ರಜೆ ಮಂಜೂರಾತಿ ಪಡೆದುಕೊಳ್ಳ ಬಹುದಾಗಿದೆ. ಇದರ ಸಾಧಕ–ಭಾದಕಗಳನ್ನು ಪರಿಶೀಲಿಸಿದ್ದಲ್ಲಿ, ಹಂತ ಹಂತವಾಗಿ ಎಲ್ಲಾ ಘಟಕಗಳಲ್ಲಿ ಈ ವ್ಯವಸ್ಥೆಯನ್ನು ಅಳವಡಿಸಲಾಗುವುದು ಎಂದು ಸಾರಿಗೆ ಸಚಿವರು ತಿಳಿಸಿದರು. | ದಿನಾಂಕ: 21.02.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮವು ಚಾಲನಾ ಸಿಬ್ಬಂದಿಗಳ ಮಾರ್ಗ ನಿಯೋಜನೆಯಲ್ಲಿ ಪಾರದರ್ಶಕತೆ ಕಾಪಾಡಿಕೊಳ್ಳಲು "ಡ್ಯೂಟಿ ರೋಟಾ" ಪದ್ಧತಿಯನುಸಾರ ಚಾಲನಾ ಸಿಬ್ಬಂದಿಗಳ ಜೇಷ್ಠತೆಗನುಗುಣವಾಗಿ ಕೌನ್ಸಲಿಂಗ್ ಮೂಲಕ ಗಣಕೀಕೃತವಾಗಿ ಮಾರ್ಗ ಆಯ್ಕೆ ಮಾಡಿಕೊಳ್ಳಲು ಚಾಲನಾ ಸಿಬ್ಬಂದಿಗಳಿಗೆ ಮುಕ್ತ ಅವಕಾಶ ಕಲ್ಪಿಸಲಾಗಿದ್ದು, ಪ್ರಸ್ತುತ ಈ ವ್ಯವಸ್ಥೆಯನ್ನು ನಿಗಮದ ಎಲ್ಲಾ ಘಟಕಗಳಲ್ಲಿ ಜಾರಿಗೆ ತರಲಾಗಿದೆ.<br><br>ಮುಂದುವರೆದು, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಚಾಲನಾ ಸಿಬ್ಬಂದಿಗಳಿಗೆ ರಜೆ ನೀಡುವಲ್ಲಿ ಪಾರದರ್ಶಕತೆಯನ್ನು ತರುವ ನಿಟ್ಟಿನಲ್ಲಿ ನಿಗಮದ ಪ್ರತಿ ಘಟಕದಲ್ಲಿ ರಜೆ ಕಿಯೋಸ್ಕ್ ಮೂಲಕ ಗಣಕೀಕೃತ ರಜೆ ನಿರ್ವಹಣಾ ವ್ಯವಸ್ಥೆಯನ್ನು ಜಾರಿಗೆ ತರಲಾಗಿದೆ. ಈ ವ್ಯವಸ್ಥೆಯನುಸಾರ ಚಾಲನಾ/ತಾಂತ್ರಿಕ ಸಿಬ್ಬಂದಿಗಳು ರಜೆ ಕಿಯೋಸ್ಕ್ ಮೂಲಕ ತಾವೇ ರಜೆ ಮಂಜೂರಾತಿ ಪಡೆದುಕೊಳ್ಳುತ್ತಿರುತ್ತಾರೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ಸಮಿತಿಯು ತೀರ್ಮಾನಿಸಿತು. |

| | | | | |
|---|---|---|---|---|
| 8 | 5577<br>ಚು.ರ.ಪ್ರ: 790<br>ಶ್ರೀ ಬಿ.ರಾಮಕೃಷ್ಣ<br>ವಿಪನದಿ:15.12.2014 | ಮಂಡ್ಯ ಜಿಲ್ಲೆಯ ಮದ್ದೂರು ತಾಲ್ಲೂಕು ಕೊಪ್ಪ ಗ್ರಾಮದ ಬಸ್ ನಿಲ್ದಾಣದ ಕಾಮಗಾರಿಯನ್ನು ಪ್ರಾರಂಭಿಸುವ ಬಗ್ಗೆ. | ಬಸ್ ನಿಲ್ದಾಣದ ಕಾಮಗಾರಿಗೆ ಟೆಂಡರ್ ಪ್ರಕಟಣೆ ಸಂಖ್ಯೆ:25/2012–13, ದಿನಾಂಕ: 30–10–2012ರಲ್ಲಿ ಟೆಂಡರ್‌ಗಳನ್ನು ಪ್ರಕಟಿಸಲಾಗಿರುತ್ತದೆ.<br><br>ದಿನಾಂಕ:20–03–2013ರಂದು ಟೆಂಡರ್‌ಗಳಿಗೆ ಅನುಮೋದನೆ ನೀಡಲಾಗಿತ್ತು. ಸದರಿ ನಿವೇಶನದಲ್ಲಿ ರೈತ ಸಂಪರ್ಕ ಕೇಂದ್ರ ಕಟ್ಟಡಗಳನ್ನು 07 ಗುಂಟೆ ನಿವೇಶನದಲ್ಲಿ ನಿರ್ಮಿಸಲಾಗಿರುತ್ತದೆ. ಸದರಿ ನಿವೇಶನವನ್ನು ವಶಕ್ಕೆ ಪಡೆದ ನಂತರ ಕೃಷಿ ಇಲಾಖೆಗೆ ಸೇರಿದ ರೈತ ಸಂಪರ್ಕ ಕೇಂದ್ರದ ಕಟ್ಟಡಕ್ಕೆ ರೂ.17..29,278.00/–ಗಳನ್ನು ನೀಡುವಂತೆ ಕೃಷಿ ಇಲಾಖೆಯವರು ತಿಳಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ ಕಾಮಗಾರಿಯನ್ನು ಪ್ರಾರಂಭಿಸಲು ಸಾಧ್ಯವಾಗಿರುವುದಿಲ್ಲ. ಈ ಬಗ್ಗೆ ಜಿಲ್ಲಾಧಿಕಾರಿಗಳು, ಮಂಡ್ಯ ರವರೊಂದಿಗೆ ಪತ್ರ ವ್ಯವಹಾರ ನಡೆಸಿ, ಅಂತಿಮವಾಗಿ ಜಿಲ್ಲಾಧಿಕಾರಿಗಳು ಸಭೆ ನಡೆಸಿ, ರೈತ ಸಂಪರ್ಕ ಕೇಂದ್ರ ಕಟ್ಟಡದ ಮೌಲ್ಯ ರೂ.17..29,278.00/– ಗಳನ್ನು ಕೃಷಿ ಇಲಾಖೆಗೆ ಪಾವತಿಸಲು ತಮ್ಮ ಪತ್ರದ ಸಂಖ್ಯೆ:ಎಲ್‌ಎನ್‌ಡಿ/1/ 179/2009–10, ದಿನಾಂಕ: 29–05– | ದಿನಾಂಕ: 21.02.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು, ಮಂಡ್ಯ ಜಿಲ್ಲೆಯ ಮದ್ದೂರು ತಾಲ್ಲೂಕು ಕೊಪ್ಪ ಗ್ರಾಮದಲ್ಲಿ ಬಸ್ ನಿಲ್ದಾಣವನ್ನು ನಿರ್ಮಿಸಿ ದಿ: 22.01.2018ರಂದು ಸಾರ್ವಜನಿಕ ಉಪಯೋಗಕ್ಕೆ ಬಿಟ್ಟುಕೊಡಲಾಗಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ಸಮಿತಿಯು ತೀರ್ಮಾನಿಸಿತು. |

| | | | | |
|---|---|---|---|---|
| | | | 2014ರಲ್ಲಿ ತಿಳಿಸಿರುತ್ತಾರೆ. ಅದರಂತೆ ಸಾರಿಗೆ ನಿಗಮದ ನಿರ್ದೇಶಕರ ಮಂಡಳಿಯ ಅನುಮೋದನೆ ಪಡೆದು ಹಣವನ್ನು ದಿನಾಂಕ:6-8-2014 ರಂದು ಪಾವತಿಸ ಲಾಗಿರುತ್ತದೆ. ಟೆಂಡರ್ ನಿಯಮಾವಳಿಗಳಂತೆ ಕಾಮಗಾರಿಯನ್ನು ಪ್ರಾರಂಭಿಸಲು ಕ್ರಮ ಜರುಗಿಸಲಾಗುವುದು ಎಂದು ಮಾನ್ಯ ಸಾರಿಗೆ ಸಚಿವರು ತಿಳಿಸಿದರು. | |
| 9 | 5578<br>ಚು.ರ.ಪ್ರ: 791<br>ಶ್ರೀ ಸೋಮಣ್ಣ ಮ. ಬೇವಿನಮರದ<br>ವಿಪನದಿ:15.12.2014 | ರಾಜ್ಯದಲ್ಲಿ ಖಾಸಗಿ ಬಸ್ಸಿನ ಮಾಲೀಕರು ಹಬ್ಬದ ಸಂದರ್ಭಗಳ ಪ್ರಯಾಣಿಕರರಿಂದ ದುಬಾರಿ ದರವನ್ನು ಪಡೆದುಕೊಳ್ಳುತ್ತಿರುವ ಬಗ್ಗೆ. | ಈ ವಿಷಯದ ಕುರಿತು ದಿನಾಂಕ 27.08.2014 ರಂದು ರಾಜ್ಯದ ಬಸ್ ಮಾಲೀಕರ ಸಭೆಯನ್ನು ಕರೆದು, ಈ ರೀತಿಯ ಹೆಚ್ಚಿನ ದರವನ್ನು ಪ್ರಯಾಣಿಕರಿಂದ ವಸೂಲು ಮಾಡಬಾರದೆಂದು ಸೂಚನೆ ನೀಡಲಾಗಿದೆ. ಒಂದು ವೇಳೆ ವಸೂಲು ಮಾಡುತ್ತಿರುವುದು ಕಂಡುಬಂದಲ್ಲಿ, ರಹದಾರಿಗಳ ಮೇಲೆ ಕಾನೂನು ರೀತ್ಯಾ ಕ್ರಮ ತೆಗೆದುಕೊಳ್ಳಲಾಗುವುದು ಹಾಗೂ ಸದರಿ ವಾಹನಗಳಲ್ಲಿ ಸಂಚರಿಸುವ ಪ್ರಯಾಣಿಕರು ನೀಡಬೇಕಾದ ದರವನ್ನು ಮೋಟಾರು ವಾಹನ ಕಾಯ್ದೆ-1988 ರ ಕಲಂ 67(1) ರ ಪ್ರಕಾರ, ನಿಗದಿಪಡಿಸಲು ದರ ನಿಗದಿ ಸಮಿತಿಯನ್ನು ರಚಿಸಲಾಗಿದೆ. ಸಮಿತಿಯು ವರದಿಯನ್ನು ನೀಡಿದ ನಂತರ ಅದರಂತೆ ಮುಂದಿನ ಕ್ರಮ ತೆಗೆದುಗೊಳ್ಳಲಾಗುವುದು ಎಂದು ಮಾನ್ಯ ಸಾರಿಗೆ ಸಚಿವರು ತಿಳಿಸಿದರು. | ದಿನಾಂಕ: 21.02.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು, ಮಜಲು ವಾಹನಗಳಿಗೆ ಏಕರೂಪದ ಪ್ರಯಾಣ ದರವನ್ನು ದಿನಾಂಕ: 31.7.2013ರ ಅಧಿಸೂಚನೆಯಲ್ಲಿ ನಿಗಧಿಪಡಿಸ ಲಾಗಿರುತ್ತದೆ. ಮುಂದುವರೆದು, ಹಬ್ಬ, ಹರಿದಿನಗಳು ಮತ್ತು ಜಾತ್ರೆ ಸಮಯದಲ್ಲಿ ಒಂದೂವರೆ ಪಟ್ಟು ಹೆಚ್ಚು ಪ್ರಯಾಣ ದರ ವಿಧಿಸಲು ಅವಕಾಶ ಕಲ್ಪಿಸಲಾಗಿರುತ್ತದೆ.<br><br>ಮಜಲು ವಾಹನಗಳಿಗೆ ದಿ: 31.7.2013ರ ಸರ್ಕಾರದ ಅಧಿಸೂಚನೆಯ ಪ್ರಕಾರ ಏಕರೂಪದ ಪ್ರಯಾಣ ದರ ನಿಗದಿಪಡಿಸಿರುವಂತೆ, ಒಪ್ಪಂದ ವಾಹನ ಮತ್ತು ಅಖಿಲ ಭಾರತ ಪ್ರವಾಸಿ ವಾಹನಗಳಿಗೆ ಪ್ರಯಾಣದರ ನಿಗದಿಪಡಿಸುವ ಸಂಬಂಧ ಇಲಾಖೆಯ ಹಿರಿಯ ಅಧಿಕಾರಿಗಳನ್ನೊಳಗೊಂಡ ತಜ್ಞರ ಸಮಿತಿಯು ವರದಿ ಸಲ್ಲಿಸಿದ್ದು, ಅದರ ಅನುಸಾರ ಅಖಿಲ ಭಾರತ ಪ್ರವಾಸಿ ಬಸ್ಸುಗಳು ಮತ್ತು ಒಪ್ಪಂದ ವಾಹನಗಳಿಗೆ ಪ್ರಯಾಣ ದರವನ್ನು ನಿಗದಿಗೊಳಿಸುವ ಬಗ್ಗೆ ಪರಿಶೀಲಿಸಲಾಗುತ್ತಿದೆ. |

| | | | | |
|---|---|---|---|---|
| | | | | ಮುಂದುವರೆದು ಹಬ್ಬ, ಹರಿದಿನಗಳು ಮತ್ತು ವಿಶೇಷ ಸಂದರ್ಭಗಳನ್ನು ಹೊರತುಪಡಿಸಿ, ಸಾಮಾನ್ಯ ದಿನಗಳಲ್ಲಿ ನಿಗಧಿತ ದರಗಳಿಗಿಂತ ಹೆಚ್ಚಿನ ದರ ವಿಧಿಸುತ್ತಿರುವವರ ವಿರುದ್ಧ ನಿರಂತರವಾಗಿ ಪ್ರವರ್ತನ ಕಾರ್ಯ ನಡೆಸಲಾಗುತ್ತಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ಸಮಿತಿಯು ತೀರ್ಮಾನಿಸಿತು. |
| 10 | 5579<br>ಚು.ರ.ಪ್ರ: 802<br>ಶ್ರೀ ಅಲ್ಲಮಪ್ರಭು ಪಾಟೀಲ್<br>ವಿಪನದಿ:15.12.2014 | ಕಲ್ಬುರ್ಗಿ ಮತ್ತು ಯಾದಗಿರಿ ಜಿಲ್ಲೆಯ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ವತಿಯಿಂದ ಗ್ರಾಮೀಣ ಭಾಗದಲ್ಲಿ ಸಂಚರಿಸುವ ಹಳೆಯ ಬಸ್ಸುಗಳನ್ನು ಬದಲಾಯಿಸಿ ಹೊಸ ಬಸ್ಸುಗಳನ್ನು ಒದಗಿಸುವ ಬಗ್ಗೆ. | ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಯ ವ್ಯಾಪ್ತಿಯಲ್ಲಿ ಗ್ರಾಮಾಂತರ ಭಾಗದಲ್ಲಿ ಸಮರ್ಪಕ ಸಾರಿಗೆ ಸೇವೆ ಒದಗಿಸುವ ನಿಟ್ಟಿನಲ್ಲಿ ಸಂಸ್ಥೆಯು ಹಂತ ಹಂತವಾಗಿ ಹೊಸ ವಾಹನಗಳನ್ನು ಖರೀದಿಸಿ ಹಳೆಯ ವಾಹನಗಳನ್ನು ನಿಷ್ಕ್ರಿಯಗೊಳಿಸಿ, ಅವುಗಳ ಬದಲಾಗಿ ಉತ್ತಮ ಸ್ಥಿತಿಯ ವಾಹನಗಳನ್ನು ಗ್ರಾಮೀಣ ಭಾಗದಲ್ಲಿ ಕಾರ್ಯಚರಣೆ ಮಾಡಲು ಕ್ರಮ ಕೈಗೊಳ್ಳಲಾಗಿದೆ. ಪ್ರಸಕ್ತ ಸಾಲಿನಲ್ಲಿ ಸಂಸ್ಥೆಯ ತನ್ನ ಆಂತರಿಕ ಸಂಪನ್ಮೂಲದಿಂದ 500 ಹೊಸ ವಾಹನಗಳನ್ನು ಮತ್ತು ಜೆ.ಎನ್. ನರ್ಮ್ ಯೋಜನೆಯಡಿಯಲ್ಲಿ 329 ನಗರ ಸಾರಿಗೆ ಮಾದರಿಯ ಹೊಸ ವಾಹನಗಳನ್ನು ಒಟ್ಟು 829 ಹೊಸ ವಾಹನಗಳನ್ನು ಖರೀದಿಸಲು ಯೋಜಿಸಲಾಗಿದ್ದು, ಈ ಪೈಕಿ ಈ ವರೆಗೆ | ದಿನಾಂಕ: 21.02.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು, ಕಲಬುರಗಿ ಜಿಲ್ಲೆ ವ್ಯಾಪ್ತಿಯ ಕಲಬುರಗಿ ವಿಭಾಗ–1 ಮತ್ತು ವಿಭಾಗ–2 ಹಾಗೂ ಯಾದಗಿರಿ ಜಿಲ್ಲೆ ವ್ಯಾಪ್ತಿಯ ಯಾದಗಿರಿ ವಿಭಾಗಗಲ್ಲಿ ನಿಗದಿತ ಕಿ.ಮೀ. ಕ್ರಮಿಸಿರುವ ವಾಹನಗಳನ್ನು ನಿಷ್ಕ್ರಿಯಗೊಳಿಸುವ ಪ್ರಕ್ರಿಯೆ ಜಾರಿಯಲ್ಲಿದ್ದು ಕಳೆದ ಮೂರು ವರ್ಷಗಳಲ್ಲಿ (ಡಿಸೆಂಬರ್–18ರ ಅಂತ್ಯದವರೆಗೆ) ಎರಡು ಜಿಲ್ಲೆಗಳಲ್ಲಿ ಕ್ರಮವಾಗಿ 292 ಮತ್ತು 136 ವಾಹನಗಳನ್ನು ನಿಷ್ಕ್ರಿಯಗೊಳಿಸಿದ್ದು, ಅದರಂತೆ ಕ್ರಮವಾಗಿ 466 ಮತ್ತು 164 ಹೊಸ ವಾಹನಗಳನ್ನು ಒದಗಿಸಲಾಗಿರುತ್ತದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ಸಮಿತಿಯು ತೀರ್ಮಾನಿಸಿತು. |

| | | | | |
|---|---|---|---|---|
| | | | (ನವೆಂಬರ್ ಅಂತ್ಯ) 186 ಹೊಸ ವಾಹನಗಳ ಸಂಸ್ಥೆಯಲ್ಲಿ ಸೇರ್ಪಡೆಗೊಂಡಿರುತ್ತವೆ. ಇನ್ನುಳಿದ ವಾಹನಗಳು ಸಹ ಶೀಘ್ರದಲ್ಲಿ ಸೇರ್ಪಡೆಗೊಳ್ಳಲಿದ್ದು, ಅವಶ್ಯಕತೆಗೆ ಅನುಗುಣವಾಗಿ ಗ್ರಾಮೀಣ ಭಾಗದ ವಾಹನಗಳನ್ನು ಬದಲಾಯಿಸಲು ಕ್ರಮ ಜರುಗಿಸಲಾಗುತ್ತದೆ ಎಂದು ಮಾನ್ಯ ಸಾರಿಗೆ ಸಚಿವರು ತಿಳಿಸಿದರು. | |
| 11 | 5580<br>ಚು.ರ.ಪ್ರ:846<br>ಡಾ: ಮತ್ತಿಕಟ್ಟಿ ವೀರಣ್ಣ<br>ವಿಪನದಿ:15.12.2014 | ಬೆಳಗಾವಿ ನಗರದಲ್ಲಿ ಆಧುನಿಕ ಬಸ್ ನಿಲ್ದಾಣ ನಿರ್ಮಿಸುವ ಬಗ್ಗೆ. | ಬೆಳಗಾವಿ ನಗರದಲ್ಲಿ ಆಧುನಿಕ ಬಸ್ ನಿಲ್ದಾಣ ನಿರ್ಮಿಸುವ ಕಾಮಗಾರಿಗೆ ಸಂಬಂಧಿಸಿದಂತೆ ಸಾರಿಗೆ ಆಯುಕ್ತರ ಅಧ್ಯಕ್ಷತೆಯಲ್ಲಿ ನಕ್ಷೆ ಪರಿಶೀಲನಾ ಸಮಿತಿ ರಚಿಸಲಾಗಿದೆ. ಈ ಸಮಿತಿಯು ನಾಲ್ಕು ವಿವಿಧ ನಕ್ಷೆಗಳನ್ನು ಪರಿಶೀಲಿಸಿ ನಕ್ಷೆಯನ್ನು ಅನುಮೋದಿಸಿರುತ್ತಾರೆ. ಸಾರಿಗೆ ಸಂಸ್ಥೆಯ ಮಂಡಳಿಯಲ್ಲಿ ಆಡಳಿತ ಅನುಮೋದನೆಯನ್ನು ಪಡೆದು ಕಾಮಗಾರಿಗಳನ್ನು ತುರ್ತಾಗಿ ಕೈಗೆತ್ತಿಕೊಳ್ಳಲಾಗುವುದು ಎಂದು ಮಾನ್ಯ ಸಾರಿಗೆ ಸಚಿವರು ತಿಳಿಸಿದರು. | ದಿನಾಂಕ: 21.02.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು, ಬೆಳಗಾವಿ ನಗರದಲ್ಲಿ ರೂ. 32.00 ಕೋಟಿಗಳ ವೆಚ್ಚದಲ್ಲಿ ಆಧುನಿಕ ಬಸ್ ನಿಲ್ದಾಣ ನಿರ್ಮಾಣವು 2017ರಲ್ಲಿ ಮಂಜೂರಾಗಿದ್ದು, ಕಾಮಗಾರಿಯು ಪ್ರಗತಿಯಲ್ಲಿದೆ. ಇದುವರೆಗೆ ಕಾಮಗಾರಿಯಲ್ಲಿ ಶೇ. 60ರಷ್ಟು ಭೌತಿಕ ಪ್ರಗತಿಯನ್ನು ಸಾಧಿಸಲಾಗಿರುತ್ತದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ಸಮಿತಿಯು ತೀರ್ಮಾನಿಸಿತು |
| 12 | 5581<br>ಚು.ಗು.ಪ್ರ: 831<br>ಶ್ರೀ ಜಿ.ರಘು ಆಚಾರ್<br>ವಿಪನದಿ:07.07.2014 | ಚಿತ್ರದುರ್ಗ ಪಟ್ಟಣದ ಸರ್ಕಾರಿ ಬಸ್ ನಿಲ್ದಾಣವು ಕಿರಿದಾಗಿದ್ದು ಪ್ರಯಾಣಿಕರಿಗೆ ತೊಂದರೆ ಯಾಗುತ್ತಿರುವುದರಿಂದ ಸದರಿ | ನೂತನ ಘಟಕದ ಕಾಮಗಾರಿಯು ಈಗಾಗಲೇ ಪ್ರಗತಿಯಲ್ಲಿರುತ್ತದೆ. ಸಂಸ್ಥೆಯ ಆರ್ಥಿಕ ಸಂಪನ್ಮೂಲಗಳ ಲಭ್ಯತೆಗೆ ಅನುಗುಣವಾಗಿ ವಿನೂತನ | ದಿನಾಂಕ: 21.02.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು, ಚಿತ್ರದುರ್ಗದಲ್ಲಿ ಕ.ರಾ.ರ.ಸಾ. ನಿಗಮದ ಬಸ್ ನಿಲ್ದಾಣವನ್ನು 3 ಎಕರೆ 26 ಗುಂಟೆ ನಿವೇಶನದಲ್ಲಿ ನಿರ್ಮಿಸಿ, ಸಾರ್ವಜನಿಕ ಪ್ರಯಾಣಿಕರ ಉಪಯೋಗಕ್ಕೆ |

| | | | | |
|---|---|---|---|---|
| | | ಬಸ್ ನಿಲ್ದಾಣವನ್ನು ಮೇಲ್ದರ್ಜೆಗೆ ಏರಿಸುವ ಬಗ್ಗೆ. | ಮಾದರಿಯ ಬಸ್ ನಿಲ್ದಾಣದ ಬಗ್ಗೆ ಕ್ರಮಕೈಗೊಳ್ಳಲಾಗುವುದು ಎಂದು ಮಾನ್ಯ ಸಾರಿಗೆ ಸಚಿವರು ತಿಳಿಸಿದರು. | ಬಿಟ್ಟುಕೊಡಲಾಗಿದೆ. ಪ್ರಸ್ತುತ ಇರುವ ಬಸ್ ನಿಲ್ದಾಣವು ಇಂದಿನ ಕಾರ್ಯಾಚರಣೆಗೆ ಸಾಕಾಗುತ್ತಿದ್ದು, ನಿಗಮದ ವಾಹನಗಳ ಕಾರ್ಯಾಚರಣೆಗೆ ಮತ್ತು ಸಾರ್ವಜನಿಕ ಪ್ರಯಾಣಿಕರಿಗೆ ಯಾವುದೇ ತೊಂದರೆ ಆಗುತ್ತಿಲ್ಲ. ಪ್ರಸ್ತುತ ಹಾಲಿ ಇರುವ ಬಸ್ ನಿಲ್ದಾಣವನ್ನು ಮೇಲ್ದರ್ಜೆಗೇರಿಸುವ ಯಾವುದೇ ಪ್ರಸ್ತಾವನೆ ಇರುವುದಿಲ್ಲ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ಸಮಿತಿಯು ತೀರ್ಮಾನಿಸಿತು |
| 13 | 5582<br>ಚು.ರ.ಪ್ರ: 872<br>ಶ್ರೀ ಎಂ.ಡಿ ಲಕ್ಷ್ಮಿನಾರಾಯಣ (ಅಣ್ಣಯ್ಯ)<br>ವಿಪನದಿ: 07.07.2014 | ಬೆಳಗಾವಿಯಲ್ಲಿ ನೂತನ ಬಸ್ ನಿಲ್ದಾಣ ನಿರ್ಮಿಸುವ ಬಗ್ಗೆ. | ಬೆಳಗಾವಿಯಲ್ಲಿ ರೂ.50.00 ಕೋಟಿ ವೆಚ್ಚದಲ್ಲಿ ಹೈಟೆಕ್ ಮಾದರಿಯಲ್ಲಿ ಸುಸಜ್ಜಿತ ಬಸ್ ನಿಲ್ದಾಣ ಮತ್ತು ನಗರ ಸಾರಿಗೆ ಬಸ್ ನಿಲ್ದಾಣ ನಿರ್ಮಿಸಲು ಮೆ: ಮಹೇಂದ್ರ ಆರ್ಕಿಟೆಕ್ಟ್ಸ್ ಚೆನ್ನೈ ಇವರು ಸಲ್ಲಿಸಿರುವ ವರದಿಯಲ್ಲಿನ ನಕ್ಷೆಯನ್ನು ಅಭ್ಯಸಿಸಲು ರಚಿಸಲಾಗಿರುವ ನಕ್ಷೆ ಅಧ್ಯಯನ ಸಮಿತಿಯ ವರದಿಯನ್ನು ನಿರೀಕ್ಷಿಸಲಾಗುತ್ತಿದೆ. ನಕ್ಷೆ ಅಧ್ಯಯನ ಸಮಿತಿ ವರದಿ ಬಂದ ನಂತರ ಸಂಸ್ಥೆಯ ಆರ್ಥಿಕ ಲಭ್ಯತೆಗನುಗಣವಾಗಿ ಕ್ರಮವಹಿಸಲಾಗುವುದು ಎಂದು ಮಾನ್ಯ ಸಾರಿಗೆ ಸಚಿವರು ತಿಳಿಸಿದರು. | ದಿನಾಂಕ: 21.02.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು, ಬೆಳಗಾವಿ ನಗರದಲ್ಲಿ ರೂ. 32.00 ಕೋಟಿಗಳ ವೆಚ್ಚದಲ್ಲಿ ಮೆ: ಮಹಿಂದ್ರಾ ಆರ್ಕಿಟೆಕ್ಟ್ ಚೆನ್ನೈ ಇವರು ಸಲ್ಲಿಸಿರುವ ನಕ್ಷೆಗೆ ಅನುಗುಣವಾಗಿ ಆಧುನಿಕ ಬಸ್ ನಿಲ್ದಾಣವನ್ನು ನಿರ್ಮಿಸುವ ಕಾಮಗಾರಿ ಪ್ರಗತಿಯಲ್ಲಿದ್ದು ಇದುವರೆಗೆ ಕಾಮಗಾರಿಯಲ್ಲಿ ಶೇ.60ರಷ್ಟು ಭೌತಿಕ ಪ್ರಗತಿಯನ್ನು ಸಾಧಿಸಲಾಗಿರುತ್ತದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ಸಮಿತಿಯು ತೀರ್ಮಾನಿಸಿತು |
| 14 | 5583<br>ಚು.ಗು.ಪ್ರ: 875<br>ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ<br>ವಿಪನದಿ:07.07.2014 | ಉಡುಪಿ ಜಿಲ್ಲೆಯ ಉಡುಪಿ ನಗರ ಸಭೆಯಲ್ಲಿ ಕೆ.ಎಸ್.ಆರ್.ಟಿ.ಸಿ ಬಸ್ಸು ನಿಲ್ದಾಣಕ್ಕೆ ಸ್ಥಳ ಕಾಯ್ದಿರಿಸುವ ಬಗ್ಗೆ. | ಉಡುಪಿ ನಗರದಲ್ಲಿ ಕರಾರಸಾ ನಿಗಮದ ಬಸ್ ನಿಲ್ದಾಣ ನಿರ್ಮಿಸಲು ಯಾವುದೇ ನಿವೇಶನವನ್ನು ಕಾಯ್ದಿರಿಸಿರುವುದಿಲ್ಲ. ಉಡುಪಿಯಲ್ಲಿ ಬಸ್ ನಿಲ್ದಾಣ ನಿರ್ಮಿಸುವ ಪ್ರಸ್ತಾವನೆ ಇದ್ದು. ಉಡುಪಿ ತಾಲ್ಲೂಕಿನ | ದಿನಾಂಕ: 21.02.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು, ಉಡುಪಿಯಲ್ಲಿ ಬಸ್ ನಿಲ್ದಾಣ ನಿರ್ಮಿಸಲು ಲೋಕೋಪಯೋಗಿ ಇಲಾಖೆಯ ಮೂಡನಿಡಂಬೂರು ಗ್ರಾಮದ ಸರ್ವೆ ಸಂಖ್ಯೆ: 58/1ಎ ಹಾಗೂ 52/4ಎ 2ರಲ್ಲಿ 2.5 ಎಕರೆ ನಿವೇಶನವನ್ನು |

| | | | | |
|---|---|---|---|---|
| | | | ಮೂಡನಿಡಂಬೂರು ಗ್ರಾಮದ ಸರ್ವೆ ಸಂಖ್ಯೆ:58/1 ಎ ರಲ್ಲಿ ಲೋಕೋಪಯೋಗಿ ಇಲಾಖೆಗೆ ಸೇರಿದ 2.87 ಎಕರೆ ಜಮೀನನ್ನು ಸಾರಿಗೆ ಇಲಾಖೆಗೆ ಒದಗಿಸಿಕೊಡುವಂತೆ ಲೋಕೋಪಯೋಗಿ ಇಲಾಖೆಯನ್ನು ಕೋರಲಾಗಿದ್ದು, ಮುಂದಿನ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ ಎಂದು ಮಾನ್ಯ ಸಾರಿಗೆ ಸಚಿವರು ತಿಳಿಸಿದರು. | ಸರ್ಕಾರದ ಆದೇಶ ಸಂಖ್ಯೆ: ಆರ್.ಡಿ. 107 ಎಲ್.ಜಿ.ಎ. 2015, ದಿ: 28.04.2016 ಹಾಗೂ ಜಿಲ್ಲಾಧಿಕಾರಿಗಳು, ಉಡುಪಿ ಇವರ ನಡಾವಳಿಗಳು ಸಂ. ಎಲ್.ಎನ್.ಡಿ.ಡಿ.ಆರ್.ಸಿ. ಆಋ.8/2008-09/22871, ದಿ: 30.5.2016ರಲ್ಲಿ ಮಂಜೂರಾಗಿರುತ್ತದೆ. ಸದರಿ ನಿವೇಶನವನ್ನು ದಿ: 20.6.2016ರಂದು ಕ.ರಾ.ರ.ಸಾ.ನಿಗಮದ ವಶಕ್ಕೆ ಪಡೆಯಲಾಗಿದೆ ಪ್ರಸ್ತುತ ಸದರಿ ನಿವೇಶನದಲ್ಲಿ ಬಸ್ ನಿಲ್ದಾಣ ನಿರ್ಮಾಣ ಕಾಮಗಾರಿಯನ್ನು ದಿ: 24.11.2018ರಂದು ಪ್ರಾರಂಭಿಸಿದ್ದು, ಕಾಮಗಾರಿ ಪ್ರಗತಿಯಲ್ಲಿರುತ್ತದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ಸಮಿತಿಯು ತೀರ್ಮಾನಿಸಿತು |
| 15 | 5584<br>ಚು.ರ.ಪ್ರ: 828<br>ಶ್ರೀ ಮಹಾಂತೇಶ ಶಿವಾನಂದ ಕೌಜಲಗಿ<br>ವಿಪನದಿ:07.07.2014 | ಬೆಳಗಾವಿ ಜಿಲ್ಲೆಯಲ್ಲಿ ಹೊಸ ರೂಟ್‌ಗಳ ಸಾರಿಗೆ ಸಂಪರ್ಕ ಕಲ್ಪಿಸುವ ಬಗ್ಗೆ | 2014-15ನೇ ಸಾಲಿನಲ್ಲಿ 60 ಹೊಸ ಅನುಸೂಚಿಗಳನ್ನು ಪ್ರಾರಂಭಿಸುವ ಗುರಿ ಹೊಂದಲಾಗಿದೆ ಮಳೆಗಾಲದ ಹಾಗೂ ವಿರಳ ಜನಸಂದಣಿಯ ಅವಧಿಯ ನಂತರ ಸಾರ್ವಜನಿಕ ಪ್ರಯಾಣಿಕರಿಂದ ಹೊಸ ರೂಟ್‌ಗಳನ್ನು ಪ್ರಾರಂಭಿಸುವಂತೆ ಬೇಡಿಕೆಗಳು ಬಂದಲ್ಲಿ ಅಂತಹ ಬೇಡಿಕೆಗಳ ಹಾಗೂ ಸಂಸ್ಥೆಯಲ್ಲಿ ಉಪಲಭ್ಯವಿರುವ ವಾಹನ ಮತ್ತು ಮಾನವ ಸಂಪನ್ಮೂಲಗಳನ್ನು ಗಮನದಲ್ಲಿಟ್ಟುಕೊಂಡು ಆಧ್ಯತೆ ಮೇರೆಗೆ ಹಂತಹಂತವಾಗಿ ಹೊಸ ಸಾರಿಗೆಗಳನ್ನು ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಮಾನ್ಯ ಸಾರಿಗೆ ಸಚಿವರು ತಿಳಿಸಿದರು. | ದಿನಾಂಕ: 21.02.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು, ಬೆಳಗಾವಿ ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವ ಬೆಳಗಾವಿ ಮತ್ತು ಚಿಕ್ಕೋಡಿ ವಿಭಾಗಗಳಿಂದ 2014-15ನೇ ಸಾಲಿನಲ್ಲಿ 73 ಹೊಸ ವಾಹನಗಳು ಸೇರ್ಪಡೆ ಮಾಡಲಾಗಿದ್ದು, 18 ನೂತನ ಅನುಸೂಚಿಗಳನ್ನು ಕಾರ್ಯಾಚರಣೆ ಮಾಡಲಾಗಿದೆ.<br><br>ಮುಂದುವರೆದು, 2015-16, 2016-17 ಮತ್ತು 2017-18ನೇ ಸಾಲಿನಲ್ಲಿ ಹೊಸ ವಾಹನಗಳ ಸೇರ್ಪಡೆ ಗನುಗುಣವಾಗಿ ಹಾಗೂ ನೀಡಿರುವ ಭರವಸೆಯನ್ವಯ 2015-16ನೇ ಸಾಲಿನಲ್ಲಿ 10 ಅನುಸೂಚಿಗಳನ್ನು, 2016-17ನೇ ಸಾಲಿನಲ್ಲಿ 65 ಹೊಸ ಅನುಸೂಚಿಗಳನ್ನು ಹಾಗೂ 2017-18ನೇ ಸಾಲಿನಲ್ಲಿ 58 ಅನುಸೂಚಿಗಳನ್ನು ಸೇರ್ಪಡೆಗೊಳಿಸಿ ಭರವಸೆಯನ್ನು ಸಾಕಾರಗೊಳಿಸಲಾಗಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ಸಮಿತಿಯು ತೀರ್ಮಾನಿಸಿತು. |

| | | | | |
|---|---|---|---|---|
| 16 | 5856<br>ಚು.ರ.ಪ್ರ. 1365<br>ಶ್ರೀ ಅಲ್ಲಮಪ್ರಭು ಪಾಟೀಲ್<br>ವಿಪನದಿ:16.03.2015 | ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳ ಗ್ರಾಮೀಣ ಪ್ರದೇಶಗಳಿಗೆ ಸರ್ಕಾರಿ ಬಸ್ ಸೌಲಭ್ಯ ಒದಗಿಸುವಲ್ಲಿ ವಿಳಂಬವಾಗುತ್ತಿರುವ ಬಗ್ಗೆ. | ಕಲಬುರಗಿ ಜಿಲ್ಲೆಯ 37 ಹಾಗೂ ಯಾದಗಿರಿ ಜಿಲ್ಲೆಯ 10 ಗ್ರಾಮಗಳಿಗೆ ಬಸ್ ಕಾರ್ಯಾಚರಣೆಗೆ ಸೂಕ್ತ ರಸ್ತೆ ಸಂಪರ್ಕವಿಲ್ಲದ ಕಾರಣ ಬಸ್ ಸೌಲಭ್ಯ ಒದಗಿಸಲು ಸಾಧ್ಯವಾಗಿರುವುದಿಲ್ಲ. ಈ ಗ್ರಾಮಸ್ಥರ ಹಾಗೂ ಶಾಲಾ ಕಾಲೇಜು ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಸದರಿ ಗ್ರಾಮದ ಸಮೀಪ ಬರುವ ಸುಮಾರು 3 ರಿಂದ 4 ಕಿ.ಮಿ. ಅಂತರದಲ್ಲಿರುವ ಗ್ರಾಮ/ಗ್ರಾಮಗಳ ಕ್ರಾಸ್‌ಗಳ ವರೆಗೆ ಬಸ್ ಸೌಲಭ್ಯ ಒದಗಿಸಿದ್ದು, ಇವುಗಳ ಸೇವೆಯನ್ನು ಈ ಗ್ರಾಮಗಳ ವಿದ್ಯಾರ್ಥಿಗಳು ಮತ್ತು ಸಾರ್ವಜನಿಕರು ಪಡೆದು ಕೊಳ್ಳುತ್ತಿದ್ದಾರೆ. ಸದರಿ ಗ್ರಾಮಗಳಿಗೆ ಬಸ್ ಕಾರ್ಯಾಚರಣೆಗೆ ಸೂಕ್ತ ರಸ್ತೆ ನಿರ್ಮಾಣವಾದ ನಂತರ ಬಸ್ ಸೌಲಭ್ಯ ಒದಗಿಸಲು ಕ್ರಮ ಜರುಗಿಸಲಾಗುವುದು ಎಂದು ಮಾನ್ಯ ಸಾರಿಗೆ ಸಚಿವರು ತಿಳಿಸಿದರು. | ದಿನಾಂಕ: 21.02.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು, ಕಲಬುರಗಿ ಜಿಲ್ಲೆಯಲ್ಲಿ 37 ಗ್ರಾಮಗಳ ಪೈಕಿ 21 ಗ್ರಾಮಗಳಿಗೆ ಸಾರಿಗೆ ಸೌಲಭ್ಯ ಕಲ್ಪಿಸಲಾಗಿದ್ದು, ಉಳಿದ 16 ಗ್ರಾಮಗಳಿಗೆ ಭಾರಿ ವಾಹನಗಳ ಕಾರ್ಯಾಚರಣೆಗೆ ಯೋಗ್ಯ ರಸ್ತೆ ಸಂಪರ್ಕ ಇಲ್ಲದ ಕಾರಣ ಸಾರಿಗೆ ಸೌಲಭ್ಯ ಒದಗಿಸಲು ಸಾಧ್ಯವಾಗಿರುವುದಿಲ್ಲ.<br><br>ಯಾದಗಿರಿ ಜಿಲ್ಲೆಯಲ್ಲಿ 10 ಗ್ರಾಮಗಳ ಪೈಕಿ 03 ಗ್ರಾಮಗಳಿಗೆ ಸಾರಿಗೆ ಭಾರಿ ವಾಹನಗಳ ಕಾರ್ಯಾಚರಣೆಗೆ ಯೋಗ್ಯ ರಸ್ತೆ ಸಂಪರ್ಕ ಇಲ್ಲದ ಕಾರಣ ಸಾರಿಗೆ ಸೌಲಭ್ಯ ಒದಗಿಸಲು ಸಾಧ್ಯವಾಗಿರುವುದಿಲ್ಲ. ಯೋಗ್ಯ ರಸ್ತೆ ನಿರ್ಮಿಸಲು ಜಿಲ್ಲಾ ಪಂಚಾಯಿತಿ ಹಾಗೂ ಹೈದ್ರಾಬಾದ್–ಕರ್ನಾಟಕ ಪ್ರಾದೇಶಿಕ ಅಭಿವೃದ್ಧಿ ಮಂಡಳಿಗೆ ಕೋರಲಾಗಿರುತ್ತದೆ. ಬಸ್ ಓಡಿಸುವ ಸ್ಥಿತಿಯಲ್ಲಿರದ ಪಟ್ಟಿಯಲ್ಲಿರುವ ಹಳ್ಳಿಗಳ ರಸ್ತೆ ನಿರ್ಮಾಣಕ್ಕೆ ಕ್ರಮ ಜರುಗಿಸುವ ಕುರಿತು ಮುಖ್ಯ ಕಾರ್ಯದರ್ಶಿಯವರಿಗೆ ಸಮಿತಿಯಿಂದ ಪತ್ರ ಬರೆದು ಶಿಫಾರಸ್ಸು ಮಾಡಲಾಗಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ಸಮಿತಿಯು ತೀರ್ಮಾನಿಸಿತು |

| | | | | |
|---|---|---|---|---|
| 17 | 5857<br>ಚು.ಗು.ಪ್ರ : 4118<br>ಡಾ॥ ಜಯಮಾಲ ರಾಮಚಂದ್ರ<br>ವಿ.ಪ.ನ.ದಿ :<br>17–11–2017 | ರಾಜ್ಯ ಸರ್ಕಾರದ ಸರ್ಕಾರಿ ಬಸ್ಸುಗಳು ಹಾಗೂ ಖಾಸಗಿ ಬಸ್ಸುಗಳಲ್ಲಿ ಮಲಗಲು ಅನುಕೂಲವಾಗುವಂತೆ ಸ್ಲೀಪರ್ ಕೋಚ್‌ಗಳಲ್ಲಿ ಪರದೆಗಳನ್ನು ನಿರ್ಮಿಸಿದ್ದು, ಇದನ್ನು ದುರ್ಬಳಕೆ ಮಾಡಿಕೊಂಡು ಕೆಲವು ಪ್ರಯಾಣಿಕರು ಅನೈತಿಕ ಚಟುವಟಿಕೆಗಳಲ್ಲಿ ತೊಡಗುತ್ತಿರುವ ಬಗ್ಗೆ. | ಹವಾನಿಯಂತ್ರಿತ ಮತ್ತು ಹವಾನಿಯಂತ್ರಿತವಲ್ಲದ ಬಸ್ಸುಗಳಲ್ಲಿ ಪ್ರಯಾಣಿಕರು ನಿದ್ದೆ ಮಾಡಿಕೊಂಡು ಹೋಗುವಾಗ ಇಂತಹ ಯಾವುದೇ ಘಟನೆಗಳು ನಡೆದಿಲ್ಲ. ಇಂತಹ ಯಾವುದೇ ಘಟನೆಗಳ ದೂರುಗಳು ಬಂದರೆ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಸಾರಿಗೆ ಸಚಿವರು ತಿಳಿಸಿದರು. | ದಿನಾಂಕ: 21.02.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು, ಸಾರಿಗೆ ಸಂಸ್ಥೆಗಳಿಂದ ಕಾರ್ಯಾಚರಿಸಲಾಗುತ್ತಿರುವ ಹವಾ ನಿಯಂತ್ರಿತ ಮತ್ತು ಹವಾನಿಯಂತ್ರಿತವಲ್ಲದ ಸ್ಲೀಪರ್ ಕೋಚ್ ಬಸ್ಸುಗಳಲ್ಲಿ ಮತ್ತು ಖಾಸಗಿ ಬಸ್ಸುಗಳಲ್ಲಿ ಪ್ರಯಾಣಿಕರು ನಿದ್ದೆ ಮಾಡಿಕೊಂಡು ಹೋಗುವಾಗ ಯಾವುದೇ ಅಹಿತಕರ ಘಟನೆಗಳು ನಡೆದಿರುವ ಕುರಿತು ಇದುವರೆವಿಗೂ ದೂರುಗಳು ಬಂದಿರುವುದಿಲ್ಲ.<br><br>ಸಾರಿಗೆ ಸಂಸ್ಥೆಗಳಿಂದ ಕಾರ್ಯಾಚರಿಸ ಲಾಗುತ್ತಿರುವ ಸ್ಲೀಪರ್ ಕೋಚ್ ಬಸ್ಸುಗಳಲ್ಲಿ ಪರದೆಗಳು ದುರ್ಬಳಕೆಯಾಗದಂತೆ ಅನುಸೂಚಿ ಕರ್ತವ್ಯನಿರತ ಚಾಲಕ, ನಿರ್ವಾಹಕರಿಗೆ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲು ಸೂಚನೆ ನೀಡಲಾಗಿರುತ್ತದೆ. ಆದಾಗ್ಯೂ, ದುರ್ಬಳಕೆಯ ಕುರಿತು ದೂರುಗಳು ದಾಖಲಾದಲ್ಲಿ ನಿಯಮಗಳನ್ವಯ ಕ್ರಮ ಜರುಗಿಸಲಾಗುವುದು ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ಸಮಿತಿಯು ತೀರ್ಮಾನಿಸಿತು |
| 18 | 5858<br>ಚು.ಗು.ಪ್ರ : 4128<br>ಶ್ರೀ ಎನ್. ಅಪ್ಪಾಜಿಗೌಡ<br>ವಿ.ಪ.ನ.ದಿ :<br>17–11–2017 | ಮಂಡ್ಯ ಜಿಲ್ಲೆಯ ಮದ್ದೂರು ತಾಲ್ಲೂಕಿನ ಕೊಪ್ಪ ಹೋಬಳಿ ಕೆ.ಎಸ್.ಆರ್.ಟಿ.ಸಿ ಬಸ್ ನಿಲ್ದಾಣದ ಕಾಮಗಾರಿಯನ್ನು ತ್ವರಿತಗತಿಯಲ್ಲಿ ಪೂರ್ಣಗೊಳಿಸುವ ಬಗ್ಗೆ. | ಮಂಡ್ಯ ಜಿಲ್ಲೆಯ ಮದ್ದೂರು ತಾಲ್ಲೂಕಿನ ಕೊಪ್ಪ ಹೋಬಳಿ ಕೆ.ಎಸ್.ಆರ್.ಟಿ.ಸಿ ಬಸ್ ನಿಲ್ದಾಣದ ಕಾಮಗಾರಿಯನ್ನು ದಿನಾಂಕ: 21.03.2013 ರಂದು ಕೆಲಸ ಪ್ರಾರಂಭಿಸಲು ಕಾರ್ಯಾದೇಶ ನೀಡಲಾಗಿರುತ್ತದೆ. ಬಸ್ ನಿಲ್ದಾಣ ನಿರ್ಮಿಸುವ ನಿವೇಶನದಲ್ಲಿದ್ದ ರೈತ ಸಂಪರ್ಕ ಕೇಂದ್ರ ಕಟ್ಟಡವನ್ನು ತೆರವುಗೊಳಿಸುವಲ್ಲಿ ತಕರಾರು ಇದ್ದ | ದಿನಾಂಕ: 21.02.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು, ಮಂಡ್ಯ ಜಿಲ್ಲೆಯ ಮದ್ದೂರು ತಾಲ್ಲೂಕು ಕೊಪ್ಪ ಗ್ರಾಮದಲ್ಲಿ ಬಸ್ ನಿಲ್ದಾಣವನ್ನು ನಿರ್ಮಿಸಿ ದಿ: 22.1.2018ರಂದು ಸಾರ್ವಜನಿಕ ಉಪಯೋಗಕ್ಕೆ ಬಿಟ್ಟುಕೊಡಲಾಗಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ಸಮಿತಿಯು ತೀರ್ಮಾನಿಸಿತು |

| | | | | |
|---|---|---|---|---|
| | | | ಕಾರಣ ವಿಳಂಬವಾಗಿರುತ್ತದೆ ಹಾಗೂ ನಿವೇಶನದಲ್ಲಿ ಬಸ್ ನಿಲ್ದಾಣದ ಕಟ್ಟಡಕ್ಕೆ ಬೆಸ್ಕಾಂ ವಿದ್ಯುತ್ ತಂತಿಗಳು ಅಡ್ಡಲಾದ ಕಾರಣ ಮುಖ್ಯ ಮತ್ತು ಸೆಕಂಡರಿ ಲೈನ್‌ನ್ನು ಸಹ ಸ್ಥಳಾಂತರಿಸಲು ವಿಳಂಬವಾಗಿರುತ್ತದೆ. ಈಗಾಗಲೇ ಕಟ್ಟಡ ನಿರ್ಮಾಣ ಕಾಮಗಾರಿ ಕೆಲಸಗಳು ಪೂರ್ಣಗೊಂಡಿದ್ದು, ಬಸ್ ನಿಲುಗಡೆ ಪ್ರದೇಶವನ್ನು ನೆಲಗಟ್ಟಣೆ ಮಾಡುವುದು ಸುತ್ತುಗೋಡೆ ನಿರ್ಮಾಣ ಕಾಮಗಾರಿ ಕೆಲಸಗಳು ಪ್ರಗತಿಯಲ್ಲಿರುತ್ತದೆ. ಸದರಿ ಕಾಮಗಾರಿಯನ್ನು ಇನ್ನೂ ಒಂದು ತಿಂಗಳೊಳಗೆ ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗಿದೆ ಎಂದು ಸಾರಿಗೆ ಸಚಿವರು ತಿಳಿಸಿದರು. | |
| 19 | 5859<br>ಚು.ರ.ಪ್ರ; 393<br>ಶ್ರೀ ರಘುನಾಥ ರಾವ್ ಮಲ್ಕಾಪೂರೆ<br>ವಿಪನದಿ:10.02.2017 | ತಾಲ್ಲೂಕು/ಜಿಲ್ಲಾ ಕೇಂದ್ರಗಳಿಂದ ಬರುವ ಗ್ರಾಮೀಣ ಪ್ರದೇಶಗಳಲ್ಲಿ ರಾತ್ರಿ ವಾಸ್ತವ್ಯ ಹೂಡುವ ನಿರ್ವಾಹಕ/ಚಾಲಕರುಗಳಿಗೆ ವಾಸ್ತವ್ಯ ತೊಂದರೆ ಉಂಟಾಗುತ್ತಿರುವುದರಿಂದ ಸೂಕ್ತ ಸೌಲಭ್ಯ ಒದಗಿಸುವ ಬಗ್ಗೆ | ರಾತ್ರಿ ತಂಗುವ ಗ್ರಾಮೀಣ ಪ್ರದೇಶಗಳಲ್ಲಿ ಚಾಲಕ/ನಿರ್ವಾಹಕರಿಗೆ ಸ್ಥಳೀಯ ಸರ್ಕಾರಿ ವಸತಿಗೃಹಗಳಲ್ಲಿ ಅಥವಾ ಸ್ಥಳೀಯ ಮಂಡಲ ಪಂಚಾಯತ್ ಕಾರ್ಯಾಲಯಗಳಲ್ಲಿ ತಂಗಲು ವ್ಯವಸ್ಥೆ ಮಾಡುವ ಬಗ್ಗೆ ಪರಿಶೀಲಿಸಲಾಗುವುದು ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ವಾಸ್ತವ್ಯದ ವ್ಯವಸ್ಥೆ ಕಲ್ಪಿಸುವ ಪ್ರಸ್ತಾವನೆ ಸಧ್ಯ ನಿಗಮದ ಮುಂದೆ ಇರುವುದಿಲ್ಲ. ಈ ಕುರಿತು ಪರಿಶೀಲಿಸಲಾಗುವುದು ಎಂದು ಮಾನ್ಯ ಸಾರಿಗೆ ಸಚಿವರು ತಿಳಿಸಿದರು. | ದಿನಾಂಕ: 21.02.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು, ಗ್ರಾಮೀಣ ಪ್ರದೇಶಗಳಲ್ಲಿ 5ಕ್ಕಿಂದ ಹೆಚ್ಚು ಅನುಸೂಚಿಗಳು (10 ಮತ್ತು 10ಕ್ಕಿಂತ ಹೆಚ್ಚು ನೌಕರರು) ರಾತ್ರಿ ತಂಗುವ ಸ್ಥಳಗಳಲ್ಲಿ ಬಸ್ ನಿಲ್ದಾಣಗಳಲ್ಲಿರುವ ಕಡೆ ಚಾಲಕ ನಿರ್ವಾಹಕರಿಗೆ ವಿಶ್ರಾಂತಿ ಗೃಹಗಳ ವ್ಯವಸ್ಥೆ ಕಲ್ಪಿಸಲಾಗಿದೆ. ಉಳಿದಂತೆ ಸ್ಥಳೀಯ ಪಂಚಾಯತ್ ಕಚೇರಿಗಳು, ಸರ್ಕಾರಿ ಶಾಲೆ, ಪ್ರಾಥಮಿಕ ಆರೋಗ್ಯ ಕೇಂದ್ರ ಮತ್ತು ದೇವಸ್ಥಾನ ಮುಂತಾದ ಸಾರ್ವಜನಿಕ ಸ್ಥಳಗಳಲ್ಲಿ ವಾಸ್ತವ್ಯ ಸೌಲಭ್ಯ ಪಡೆದುಕೊಳ್ಳುತ್ತಿದ್ದಾರೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ಸಮಿತಿಯು ತೀರ್ಮಾನಿಸಿತು |

| | | | | |
|---|---|---|---|---|
| 20 | 5860 ಚು.ರ.ಪ್ರ; 732<br>ಶ್ರೀ ವಿಜಯ್ ಸಿಂಗ್<br>ವಿಪನದಿ:17.03.2017 | ಬೀದರ್ ಜಿಲ್ಲೆಯಲ್ಲಿ ಸಾರಿಗೆ ಇಲಾಖೆಯ ಅವಧಿ ಮುಗಿದಿರುವ ಬಸ್ಸುಗಳ ಬದಲಿಗೆ ಹೊಸ ಬಸ್ಸುಗಳನ್ನು ನೀಡಲು ಕ್ರಮಕೈಗೊಳ್ಳುವ ಕುರಿತು. | ಸಂಸ್ಥೆಯಲ್ಲಿ ನಿಗದಿತ ಕಿ.ಮೀ ಕ್ರಮಿಸಿರುವ ವಾಹನಗಳನ್ನು ಅವುಗಳ ಸ್ಥಿತಿಗತಿಯ ಆಧಾರದ ಮೇಲೆ ನಿಷ್ಕ್ರೀಯೆಗೊಳಿಸುವ ಪ್ರಕ್ರಿಯೆ ಜಾರಿಯಲ್ಲಿದ್ದು, 2016–17ನೇ ಸಾಲಿನಲ್ಲಿ ಇಲ್ಲಿಯವರೆಗೆ ಬೀದರ್ ವಿಭಾಗದಲ್ಲಿ 38 ವಾಹನಗಳನ್ನು (ಮೇಲಿನ ಕೋಷ್ಟಕದಲ್ಲಿ ನಮೂದಿಸಿದಂತೆ) ನಿಷ್ಕ್ರಿಯೆಗೊಳಿಸಿ 32 ಹೊಸ ವಾಹನಗಳನ್ನು ಒದಗಿಸಲಾಗಿರುತ್ತದೆ. ಇನ್ನೂಳಿದ ನಿಗದಿತ ಕಿ.ಮೀ ಕ್ರಮಿಸಿರುವ ವಾಹನಗಳನ್ನು ಸಹ ಅವುಗಳ ಸ್ಥಿತಿಗತಿಯ ಆಧಾರದ ಮೇಲೆ ಹಂತ ಹಂತವಾಗಿ ನಿಷ್ಕ್ರೀಯೆಗೊಳಿಸಿ ಹೊಸ ವಾಹನಗಳನ್ನು ಒದಗಿಸಲು ಕ್ರಮ ಜರುಗಿಸಲಾಗುವುದು ಎಂದು ಮಾನ್ಯ ಸಾರಿಗೆ ಸಚಿವರು ತಿಳಿಸಿದರು. | ದಿನಾಂಕ: 21.02.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು, ಬೀದರ್ ಜಿಲ್ಲೆ ವ್ಯಾಪ್ತಿಯ ಬೀದರ್ ವಿಭಾಗದಲ್ಲಿ ನಿಗದಿತ ಕಿ.ಮೀ. ಕ್ರಮಿಸಿರುವ ವಾಹನಗಳನ್ನು ನಿಷ್ಕಿಯಗೊಳಿಸುವ ಪ್ರಕ್ರಿಯೆ ಜಾರಿಯಲ್ಲಿದ್ದು, ಕಳೆದ ಮೂರು ವರ್ಷಗಳಲ್ಲಿ (ಡಿಸೆಂಬರ್–18ರ ಅಂತ್ಯದವರೆಗೆ) 261 ವಾಹನಗಳನ್ನು ನಿಷ್ಕಿಯಗೊಳಿಸಿ 344 ಹೊಸ ವಾಹನಗಳನ್ನು ಒದಗಿಸಲಾಗಿರುತ್ತದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ಸಮಿತಿಯು ತೀರ್ಮಾನಿಸಿತು |
| 21 | 5861<br>ಚು.ರ.ಪ್ರ; 739<br>ಶ್ರೀ ಟಿ.ಎ ಶರವಣ<br>ವಿಪನದಿ:17.03.2017 | ಅಂಗವಿಕಲರಿಗೆ ನೀಡುವ ರಿಯಾಯಿತಿ ದರದ ಬಸ್‌ಪಾಸ್‌ಗಳನ್ನು ದೈಹಿಕವಾಗಿ ಸದೃಡವಾಗಿರುವವರು ಹೊಂದಿರುವ ಬಗ್ಗೆ. | ದೈಹಿಕವಾಗಿ ಸದೃಡವಾಗಿರುವವರು, ನಿಗಮದ ನಿಯಮಾನುವಳಿಗಳನ್ವಯ ವಿಕಲಚೇತನರ ರಿಯಾಯಿತಿ ಬಸ್ ಪಾಸ್ ಪಡೆಯಲು ಅರ್ಹರಿರುವುದಿಲ್ಲ. ಶೇಕಡ 40ಕ್ಕಿಂತ ಕಡಿಮೆ ಅಂಗವಿಕಲತೆ ಹೊಂದಿದ ಹಾಗೂ ಯಾವುದೇ ಅಂಗವಿಕಲತೆ ಇಲ್ಲದೆ ವ್ಯಕ್ತಿಗಳು ವಿಕಲಚೇತನರ ರಿಯಾಯಿತಿ ದರದ ಬಸ್ ಪಾಸ್ ಹೊಂದಿದ್ದಲ್ಲಿ, ಅವರ ವಿರುದ್ಧ | ದಿನಾಂಕ: 21.02.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು, ಸಾರಿಗೆ ನಿಯಮಗಳು ಶೇಕಡ 40ಕ್ಕಿಂತ ಹೆಚ್ಚಿನ ಅಂಗವಿಕಲತೆ ಹೊಂದಿರುವವರಿಗೆ ರಿಯಾಯಿತಿ ದರದ ಬಸ್ ಪಾಸ್ ವಿತರಿಸುತ್ತಿವೆ. ಒಂದು ವೇಳೆ ಅರ್ಹರಲ್ಲದವರು ಅಂಗವಿಕಲ ಬಸ್ ಪಾಸ್ ಪಡೆದಿದ್ದಲ್ಲಿ ತನಿಖಾ ಸಮಯದಲ್ಲಿ ಮುಟ್ಟುಗೋಲು ಹಾಕಿಕೊಂಡು ಪೋಲೀಸ್ ಠಾಣೆಯಲ್ಲಿ ಪ್ರಕರಣಗಳನ್ನು ದಾಖಲಿಸಲಾಗುತ್ತಿದೆ. |

| | | | | |
|---|---|---|---|---|
| | | | ಕಾನೂನಿನ ಕ್ರಮ ಕೈಗೊಳ್ಳಲಾಗುವುದು ಎಂದು ಮಾನ್ಯ ಸಾರಿಗೆ ಸಚಿವರು ತಿಳಿಸಿದರು. | ಅರ್ಹರಲ್ಲದವರಿಗೆ ಬಸ್ ಪಾಸ್ ವಿತರಿಸದಂತೆ ಕಟ್ಟುನಿಟ್ಟಿನ ಸೂಚನೆಗಳನ್ನು ನೀಡಲಾಗಿದೆ. ಅಂಗವಿಕಲತೆ ಕುರಿತು ಸಂಶಯ ಕಂಡುಬಂದಲ್ಲಿ ಹಿರಿಯ ನಾಗರೀಕರ ಮತ್ತು ಸಬಲೀಕರಣ ಇಲಾಖೆಗೆ ಅಂಗವಿಕಲರನ್ನು ಕಳುಹಿಸಿ, ಸದರಿ ಇಲಾಖೆಯಿಂದ ಪ್ರಮಾಣೀಕರಿಸಿದ ಅರ್ಹ ಅಭ್ಯರ್ಥಿಗಳಿಗೆ ಮಾತ್ರ ಅಂಗವಿಕಲರ ಬಸ್ ಪಾಸ್ ನೀಡಲಾಗುವುದು ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ಸಮಿತಿಯು ತೀರ್ಮಾನಿಸಿತು |
| 22 | 5862<br>ಚು.ರ.ಪ್ರ;704<br>ಶ್ರೀ ಎನ್.ಎಸ್. ಬೋಸರಾಜ್<br>ವಿಪನದಿ:25.11.2016 | ಮಾನ್ವಿ ಪಟ್ಟಣದಲ್ಲಿ ಬಸ್ ಘಟಕ (Bus Depot) ನಿರ್ಮಾಣ ಮಾಡುವ ಬಗ್ಗೆ. | ಹಾಲಿ ಬಸ್ ನಿಲ್ದಾಣದಿಂದ 2ಕಿ.ಮೀ ದೂರದಲ್ಲಿ ಸಿಂದನೂರು–ರಾಯಚೂರು ಮುಖ್ಯ ರಸ್ತೆಗೆ ಹೊಂದಿಕೊಂಡಿರುವ ತೋಟಗಾರಿಕೆ ಇಲಾಖೆಗೆ ಸಂಬಂಧಿಸಿದ ಜಮೀನಿನಲ್ಲಿ 5 ಎಕರೆ ಜಮೀನು ಪಡೆಯಲು ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರ ಅಧ್ಯಕ್ಷತೆಯಲ್ಲಿ ಕರ್ನಾಟಕ ರಾಜ್ಯ ತೋಟಗಾರಿಕೆ ಅಭಿವೃದ್ಧಿ ಸಮಿತಿ ಸಭೆಯಲ್ಲಿ ಈ ವಿಷಯವನ್ನು ಚರ್ಚಿಸಲಾಗಿದೆ. ಸದರಿ ಸಭೆಯಲ್ಲಿ ಕೈಗೊಳ್ಳುವ ತೀರ್ಮಾನವನ್ನು ಅನುಸರಿಸಿ ಸಂಸ್ಥೆಯ ನಿವೇಶನವನ್ನು ಹಸ್ತಾಂತರಿಸಿಕೊಂಡು ನಂತರ ಬಸ್ ಘಟಕ ನಿರ್ಮಾಣ ಮಾಡುವ ಕುರಿತು ಕ್ರಮ ಕೈಗೊಳ್ಳಲಾಗುವುದು ಎಂದು ಮಾನ್ಯ ಸಾರಿಗೆ ಸಚಿವರು ತಿಳಿಸಿದರು. | ದಿನಾಂಕ: 21.02.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು, ಮಾನ್ವಿ ಬಸ್ ನಿಲ್ದಾಣದಿಂದ 2 ಕಿ.ಮೀ. ದೂರದಲ್ಲಿ ಸಿಂಧನೂರು–ರಾಯಚೂರು ಮುಖ್ಯರಸ್ತೆಗೆ ಹೊಂದಿಕೊಂಡಿರುವ ತೋಟಗಾರಿಕೆ ಇಲಾಖೆಗೆ ಸಂಬಂಧಿಸಿದ ಜಮೀನಿನಲ್ಲಿ 5 ಎಕೆರೆ ಜಮೀನು ಸಂಸ್ಥೆಗೆ 7.8.2017ರಂದು ಹಸ್ತಾಂತರಿಸಲಾಗಿರುತ್ತದೆ.<br><br>ತೋಟಗಾರಿಕೆ ನಿವೇಶನದಿಂದ ಮುಖ್ಯ ರಸ್ತೆಗೆ ನೇರವಾದ ಸಂಪರ್ಕ ರಸ್ತೆ ಇರುವುದಿಲ್ಲ. ಸದರಿ ತೋಟಗಾರಿಕೆ ನಿವೇಶನವು ಮುಖ್ಯರಸ್ತೆಯಿಂದ 150 ಮೀ. ಒಳಭಾಗದಲ್ಲಿದೆ. ನಿವೇಶನಕ್ಕೆ ಹೊಂದಿಕೊಂಡಂತೆ ಖಾಸಗಿ ಬಡಾವಣೆ ನಿರ್ಮಿಸಿದ್ದು, ಬಡಾವಣೆಯಿಂದ ಮುಖ್ಯರಸ್ತೆಗೆ ಕೂಡು ರಸ್ತೆ ಲಭ್ಯವಿರುತ್ತದೆ. ಘಟಕದಿಂದ ಕೂಡು ರಸ್ತೆಗೆ ಸಂಪರ್ಕ ಕಲ್ಪಿಸುವಲ್ಲಿ ಖಾಸಗಿ ನಿವೇಶನಗಳು ಅಡ್ಡ ಬರುತ್ತಲಿವೆ. ನಿವೇಶನ 3810.00 ಚ.ಅಡಿ. ಇದ್ದು, ನಿವೇಶನದ ಮೌಲ್ಯ ರೂ.35.00 ಲಕ್ಷಗಳಾಗುತ್ತಿದ್ದು, ಕೂಡು ರಸ್ತೆ ನಿರ್ಮಿಸಲು ಸದರಿ ನಿವೇಶನವನ್ನು |

| | | | | |
|---|---|---|---|---|
| | | | | ಖರೀದಿಸಲು ಅನುಮೋದನೆಯಾಗಿದೆ. Approach road register ಮಾಡಿಸಿಕೊಂಡು 2019-20ನೇ ಸಾಲಿನಲ್ಲಿ ರೂ.6.00 ಕೋಟಿಗಳನ್ನು ಭರಿಸಿ ಹೊಸ ಡಿಪೋ ನಿರ್ಮಿಸಲು provision ಮಾಡಲಾಗಿದೆಯೆಂದು ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ಸಮಿತಿಯು ತೀರ್ಮಾನಿಸಿತು |
| 23 | 5864<br>ಚು.ರ.ಪ್ರ;552<br>ಶ್ರೀಮತಿ ತಾರಾಅನೂರಾಧ<br>ವಿಪನದಿ:25.11.2016 | ರಾಜ್ಯದಲ್ಲಿ ಪ್ರಯಾಣಿಕರ ಅನುಕೂಲಕ್ಕಾಗಿ ಬಸ್ಸುಗಳನ್ನು ಓಡಿಸಲು ಅನುಮತಿ ಪಡೆದ ಖಾಸಗಿಯವರು ಪರವಾನಗಿ ಇಲ್ಲದೆ ಓಡಿಸುತ್ತಿರುವ ಖಾಸಗಿ ಬಸ್ಸುಗಳ ಬಗ್ಗೆ. | ರಹದಾರಿದಾರರಿಗೆ ನೋಟೀಸ್ ನೀಡಲಾಗಿದೆ ಹಾಗೂ ಅಗತ್ಯ ಕಾನೂನು ರೀತ್ಯಾ ಕ್ರಮ ಜರುಗಿಸಲಾಗುತ್ತಿದೆ ಎಂದು ಸಾರಿಗೆ ಸಚಿವರು ತಿಳಿಸಿರು. | ದಿನಾಂಕ: 21.02.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು, ರಹದಾರಿ ನಿಯಮಗಳನ್ನು ಉಲ್ಲಂಘಿಸಿ ಸಂಚರಿಸುತ್ತಿರುವ ವಾಹನಗಳನ್ನು ಕಾಲಕಾಲಕ್ಕೆ ತನಿಖೆಗೆ ಒಳಪಡಿಸುವ ಪ್ರವರ್ತನ ಕಾರ್ಯವು ನಿರಂತರವಾಗಿ ಜಾರಿಯಲ್ಲಿದೆ, ಮಜಲು ವಾಹನಗಳು, ಒಪ್ಪಂದ ವಾಹನಗಳು ಮತ್ತು ಅಖಿಲ ಭಾರತ ಪ್ರವಾಸಿ ವಾಹನಗಳ ತಪಾಸಣೆ ಮಾಡಿ ತನಿಖಾ ವರದಿಗಳನ್ನು ನೀಡಿರುವ ವಾಹನಗಳ ರಹದಾರಿಗಳ ಮೇಲೆ ಇಲಾಖೆಯಿಂದ ಕಾನೂನು ರೀತ್ಯಾ ರಹದಾರಿಗಳನ್ನು ಅಮಾನತ್ತುಗೊಳಿಸುವ, ರಾಜೀದಂಡ ವಿಧಿಸುವಂತಹ ಕ್ರಮವನ್ನು ಕಾಲಕಾಲಕ್ಕೆ ತೆಗೆದುಕೊಳ್ಳಲಾಗುತ್ತಿದೆ.<br><br>2016-17ನೇ ಸಾಲಿನಿಂದ ಇದುವರೆವಿಗೂ ಸದರಿ ವಾಹನಗಳನ್ನು ತಪಾಸಣೆ ಮಾಡಿ ರಹದಾರಿ ನಿಯಮ ಉಲ್ಲಂಘನೆ ಮಾಡಿ ಸಂಚರಿಸುತ್ತಿರುವುದು ಕಂಡು ಬಂದು 7985 ಒಪ್ಪಂದ ವಾಹನಗಳ ಮೇಲೆ ಇಲಾಖಾ ಕ್ರಮ ಜರುಗಿಸಿ ಒಟ್ಟು ರೂ. 2,06,96,100/-ಗಳನ್ನು, 105111 ಮಜಲು ವಾಹನಗಳ ಮೇಲೆ ಕ್ರಮ ಜರುಗಿಸಿ ಒಟ್ಟು ರೂ. 2,05,72,500/-ಗಳನ್ನು ಹಾಗೂ 27511, ಅಖಿಲ ಭಾರತ |

| | | | | |
|---|---|---|---|---|
| | | | | ಪ್ರವಾಸಿ ವಾಹನಗಳ ಮೇಲೆ ಕ್ರಮ ಜರುಗಿಸಿ ಒಟ್ಟು ರೂ. 3,51,25,300/-ಗಳನ್ನು ದಂಡ ರೂಪದಲ್ಲಿ ವಸೂಲಿ ಮಾಡಲಾಗಿರುತ್ತದೆ 554 ಪ್ರಕರಣಗಳಲ್ಲಿ ರಹದಾರಿ ಗಳನ್ನು ಅಮಾನತ್ತುಗೊಳಿಸಲಾಗಿದೆ ಹಾಗೂ 58 ಪ್ರಕರಣಗಳಲ್ಲಿ ರಹದಾರಿಗಳನ್ನು ರದ್ದುಪಡಿಸಲಾಗಿದೆ. ರಹದಾರಿ ಇಲ್ಲದೇ ಸಂಚರಿಸುತ್ತಿರುವ ವಾಹನಗಳ ವಿರುದ್ಧ ನಿರಂತರ ಪ್ರವರ್ತನ ಕಾರ್ಯ ಜರುಗಿಸಲಾಗುತ್ತಿದ್ದು, ಕಾನೂನು ಉಲ್ಲಂಘನೆ ಮಾಡುವ ವಾಹನಗಳ ವಿರುದ್ಧ ಕ್ರಮ ಜರುಗಿಸಲಾಗುತ್ತಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಹಾಗೂ ಖಾಸಗಿ ಬಸ್‌ಗಳಲ್ಲಿಯೂ ಜಿ.ಪಿ.ಎಸ್. ಅಳವಡಿಸಲೇಬೇಕೆಂದು ಒಂದು ಸುತ್ತೋಲೆ ಹೊರಡಿಸಲು ಸೂಚಿಸಿ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ಸಮಿತಿಯು ತೀರ್ಮಾನಿಸಿತು. |
| 24 | 5865<br>ಚು.ಗು.ಪ್ರ: 1891<br>ಶ್ರೀ ಮಹಾಂತೇಶ ಶಿವಾನಂದ ಕೌಜಲಗಿ<br>ವಿಪನದಿ: 20.07.2015 | ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಬೆಳಗಾವಿ ವಿಭಾಗದ ಬೈಲಹೊಂಗಲ ಘಟಕದ ಬಸ್ ಸ್ಟ್ಯಾಂಡ್‌ನ್ನು ನವೀಕರಿಸಿ ಮಾಡುವ ಬದಲು ಮೂಲಭೂತ ಸೌಕರ್ಯಗಳನ್ನು ಒದಗಿಸುವ ಬದಲು ಸಾರ್ವಜನಿಕರಿಗೆ ಅನಾನುಕೂಲ ಮಾಡುತ್ತಿರುವ ಬಗ್ಗೆ. | 2015-16ನೇ ಸಾಲಿನ ವಿಶೇಷ ಅಭಿವೃದ್ಧಿ ಯೋಜನೆಯಡಿ ಬೈಲಹೊಂಗಲದಲ್ಲಿ ನೂತನ ಬಸ್ ಘಟಕವನ್ನು ನಿರ್ಮಿಸಲು ರೂ.250/- ಲಕ್ಷಗಳನ್ನು ಮೀಸಲಿರಿಸಲಾಗಿದೆ. ಮುಂದು ವರೆದು, ಬಸ್ ಘಟಕದ ಕಾಮಗಾರಿಯು ಪೂರ್ಣಗೊಂಡ ನಂತರ ಬೈಲಹೊಂಗಲದ ಬಸ್ ನಿಲ್ದಾವನ್ನು ನವೀಕರಿಸಲು ಕ್ರಮ ಕೈಗೊಳ್ಳಲಾಗುವುದು. ಪ್ರಯಾಣಿಕರ ಜನ ದಟ್ಟಣೆ ಆಧರಿಸಿ ಬೈಲಹೊಂಗಲ-ಬೆಂಗಳೂರು ಮಧ್ಯೆ ಹೆಚ್ಚಿನ ಲಕ್ಷುರಿ ವಾಹನಗಳನ್ನು ಕಾರ್ಯಾಚರಣೆ ಮಾಡುವ ಬಗ್ಗೆ | ದಿನಾಂಕ: 21.02.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು, ಬೆಳಗಾವಿ ವಿಭಾಗದ ಬೈಲಹೊಂಗಲದಲ್ಲಿ ನೂತನ ಬಸ್ ಘಟಕದ ಕಾಮಗಾರಿಯನ್ನು ವಿಶೇಷ ಅಭಿವೃದ್ಧಿ ಯೋಜನೆಯ ಅಡಿಯಲ್ಲಿ ಕೈಗೆತ್ತಿಕೊಳ್ಳಲಾಗಿದ್ದು, ಬಸ್ ಘಟಕ ನಿರ್ಮಿಸುವ ಯೋಜನೆಯ ಅಂತಿಮ ಹಂತದ ಕಾಮಗಾರಿಗಳು ಪ್ರಗತಿಯಲ್ಲಿರುತ್ತದೆ. ಮಾರ್ಚ್ ಅಂತ್ಯಕ್ಕೆ ಮುಕ್ತಾಯಗೊಳಿಸುವ ನಿರೀಕ್ಷೆ ಹೊಂದಲಾಗಿದೆ.<br><br>ಮುಂದುವರೆದು, 2019-20ನೇ ಸಾಲಿನ ವಿಶೇಷ ಅಭಿವೃದ್ಧಿ ಯೋಜನೆಯಡಿ ಬೈಲಹೊಂಗಲದಲ್ಲಿ ನೂತನ ಬಸ್ ನಿಲ್ದಾಣದ ಕಾಮಗಾರಿಯನ್ನು ಕೈಗೊಂಡು ಸಾರ್ವಜನಿಕ ಪ್ರಯಾಣಿಕರಿಗೆ ಮೂಲಭೂತ |

| | | | | |
|---|---|---|---|---|
| | | | ಪರಿಶೀಲಿಸ ಲಾಗುವುದು. ಬೈಲಹೊಂಗಲ–ಮುಂಬೈ ಬೈಲಹೊಂಗಲ ಪುಣೆ ಮಾರ್ಗದಲ್ಲಿ ಹೊಸದಾಗಿ ಲಕ್ಷುರಿ ಬಸ್ಸುಗಳ ಕಾರ್ಯಾಚರಣೆ ಮಾಡಲು ಮಹಾರಾಷ್ಟ್ರ ರಾಜ್ಯದೊಂದಿಗಿನ ಅಂತರರಾಜ್ಯ ಒಪ್ಪಂದ ಅಂತಿಮಗೊಂಡ ನಂತರ ಪರಿಶೀಲಿಸ ಲಾಗುವುದು ಎಂದು ಮಾನ್ಯ ಸಾರಿಗೆ ಸಚಿವರು ತಿಳಿಸಿದರು. | ಸೌಕರ್ಯಗಳನ್ನು ಒದಗಿಸಲು ಉದ್ದೇಶಿಸಲಾಗಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ಸಮಿತಿಯು ತೀರ್ಮಾನಿಸಿತು |
| 25 | 5866<br>ಚು.ಗು.ಪ್ರ : 4837<br>ಶ್ರೀ ಐವನ್ ಡಿ'ಸೋಜಾ<br>ವಿ.ಪ.ನ.ದಿ :<br>24–11–2017 | ಮಂಗಳೂರು ಪ್ರಾದೇಶಿಕ ಸಾರಿಗೆ ಕಚೇರಿಯಲ್ಲಿ ಜೆ.ಸಿ.ಟಿ ಹಾಗೂ ಆರ್.ಟಿ.ಓ ಹುದ್ದೆಗಳು ಖಾಲಿಯಿರುವುದು ಹಾಗೂ ಈ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ ಹಾಗೂ ಮಂಗಳೂರಿನ ಸೂರತ್ಕಲ್, ಬಂಟ್ವಾಳದಲ್ಲಿ ಪ್ರಾದೇಶಿಕ ಸಾರಿಗೆ ಕಚೇರಿಯ ಸ್ಥಾಪನೆ ಬಗ್ಗೆ. | ಪ್ರಸ್ತುತ ಇಲಾಖೆಯ ಅಧಿಕಾರಿ/ ನೌಕರರ ತೀವ್ರ ಕೊರತೆ ಎದುರಿಸುತ್ತಿರುವ ಹಿನ್ನಲೆಯಲ್ಲಿ ಮುಂದಿನ ದಿನಗಳಲ್ಲಿ ಪದೋನ್ನತಿ ಮೂಲಕ ಭರ್ತಿ ಮಾಡಲಾಗುವುದು. ಸದರಿ ಕಚೇರಿಗೆ ಅಧಿಕಾರಿ/ಸಿಬ್ಬಂದಿ ಹುದ್ದೆಗಳನ್ನು ಹೊಸದಾಗಿ ಸೃಜಿಸಿ ಮಂಜೂರಾತಿ ನೀಡುವಂತೆ ಹಾಗೂ ನೇರ ನೇಮಕಾತಿಗೆ ಅವಕಾಶವಿರುವ ಹುದ್ದೆಗಳಿಗೆ ನೇಮಕಾತಿ ಮಾಡಿಕೊಳ್ಳಲು ಕ್ರಮವಹಿಸಲಾಗುತ್ತಿದೆ ಎಂದು ಸಾರಿಗೆ ಸಚಿವರು ತಿಳಿಸಿದರು. | ದಿನಾಂಕ: 21.02.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು, ಮಂಗಳೂರು ಕಚೇರಿಯ ಉಪ ಸಾರಿಗೆ ಆಯುಕ್ತರು ಮತ್ತು ಹಿರಿಯ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಹುದ್ದೆಯು ಮುಂಬಡ್ತಿಯಿಂದ ತುಂಬಬಹುದಾದ ಹುದ್ದೆಯಾಗಿದ್ದು, ಮಾನ್ಯ ಸರ್ವೋಚ್ಛ ನ್ಯಾಯಾಲಯವು ಬಿ.ಕೆ. ಪವಿತ್ರ ಪ್ರಕರಣದಲ್ಲಿ ನೀಡಿರುವ ತೀರ್ಪಿನ ಹಿನ್ನಲೆಯಲ್ಲಿ ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳಿಗೆ ಮುಂಬಡ್ತಿ ನೀಡದಿರುವುದರಿಂದ ದೈನಂದಿನ ಆಡಳಿತ ನಿರ್ವಹಣೆಗೆ ಪರ್ಯಾಯ ಪ್ರಭಾರ ವ್ಯವಸ್ಥೆ ಮಾಡಲಾಗಿರುತ್ತದೆ.<br><br>ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳದಲ್ಲಿ ನೂತನವಾಗಿ ಸಹಾಯಕ ಪ್ರಾದೇಶಿಕ ಸಾರಿಗೆ ಕಚೇರಿ ಪ್ರಾರಂಭಿಸಲು ಹುದ್ದೆಗಳನ್ನು ಸೃಜನೆ ಮಾಡಿ ಮಂಜೂರಾತಿ ನೀಡಿದ್ದು, ಕಚೇರಿಯನ್ನು ದಿ: 03.03.2018ರಿಂದ ಕಾರ್ಯಾಚರಣೆಗೊಳಿಸಲಾಗಿದೆ.<br><br>ದಕ್ಷಿಣ ಕನ್ನಡ ಜಿಲ್ಲೆಯ ಸೂರತ್ಕಲ್‌ನಲ್ಲಿ ನೂತನವಾಗಿ ಪ್ರಾದೇಶಿಕ ಸಾರಿಗೆ ಕಚೇರಿ ಪ್ರಾರಂಭಿಸಲು ಹುದ್ದೆಗಳನ್ನು |

| | | | | |
|---|---|---|---|---|
| | | | | ಸೃಜನೆ ಮಾಡಿ ಮಂಜೂರಾತಿ ನೀಡಲಾಗಿದ್ದು, ಕಚೇರಿ ಪ್ರಾರಂಭಿಸಲು ಸೂಕ್ತ ಕಟ್ಟಡವನ್ನು ಬಾಡಿಗೆಗೆ ಪಡೆಯಲು ಪ್ರಯತ್ನಿಸಲಾಗುತ್ತಿದೆ ಹಾಗೂ ಕಚೇರಿಗೆ ಅಗತ್ಯವಿರುವ ಪ್ರವರ್ತನ/ಲಿಪಿಕ ಸಿಬ್ಬಂದಿ ವರ್ಗದ ಹುದ್ದೆಗಳನ್ನು ಭರ್ತಿ ಮಾಡಲು ಕರ್ನಾಟಕ ಲೋಕಸೇವಾ ಆಯೋಗಕ್ಕೆ ಬೇಡಿಕೆ ಪಟ್ಟಿ ಸಲ್ಲಿಸಿ ನೇಮಕಾತಿ ಮಾಡಿಕೊಳ್ಳಲು ಕ್ರಮವಹಿಸಲಾಗಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ಸಮಿತಿಯು ತೀರ್ಮಾನಿಸಿತು |
| 26 | 5867<br>ಚು.ಗು.ಪ್ರ:1261<br>ಶ್ರೀ ಇ. ಕೃಷ್ಣಪ್ಪ<br>ವಿಪನದಿ: 13.07.2015 | ಅನುಮತಿ ಪಡೆದ ಟ್ಯಾಕ್ಸಿ, ಕ್ಯಾಬ್ ಏಜೆನ್ಸಿಯವರು ನಿಯಮಗಳನ್ನು ಉಲ್ಲಂಘಿಸಿರುವ ಪ್ರಕರಣಗಳಲ್ಲಿ ಸರ್ಕಾರವು ಕೈಗೊಂಡಿರುವ ಕ್ರಮಗಳ ಬಗ್ಗೆ. | ಮೇರು ಕ್ಯಾಬ್ ಕಂಪನಿ, ಎ.ಎನ್.ಐ. ಟೆಕ್ನಾಲಾಜಿಸ್ (ಓಲಾ ಕ್ಯಾಬ್) ಈ ಕಂಪನಿಗಳು ಸಿಟಿ ಟ್ಯಾಕ್ಸಿ ನಿಯಮಗಳನ್ನು ಉಲ್ಲಂಘಿಸಿರುವುದರಿಂದ ಇವುಗಳ ವಿರುದ್ಧ ಕ್ರಮ ಕೈಗೊಳ್ಳಲು ದಿನಾಂಕ:13.07.2015 ರಂದು ನಡೆಯುವ ಬೆಂಗಳೂರು ನಗರ ಪ್ರಾದೇಶಿಕ ಸಾರಿಗೆ ಪ್ರಾಧಿಕಾರದ ಸಭೆಯ ಮುಂದೆ ವಿಷಯವನ್ನು ಮಂಡಿಸಲಾಗು ವುದೆಂದು ಮಾನ್ಯ ಸಾರಿಗೆ ಸಚಿವರು ತಿಳಿಸಿದರು. | ದಿನಾಂಕ: 21.02.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು, ಕರ್ನಾಟಕ ಸರ್ಕಾರವು ದಿ: 2.4.2016ರಂದು ಆ್ಯಪ್ ಆಧಾರಿತ ಟ್ಯಾಕ್ಸಿ ಸೇವೆ ಸಲ್ಲಿಸಲು ಕೇಂದ್ರ ಸರ್ಕಾರದ ಮಾರ್ಗಸೂಚಿಗಳು ಮತ್ತು ಮಹಿಳೆಯರು ಮತ್ತು ಮಕ್ಕಳ ಸುರಕ್ಷತೆಯನ್ನು ಗಮನದಲ್ಲಿಟ್ಟುಕೊಂಡು "The Karnataka on-demand Transportation Technology Aggregators Rules 2016" ನಿಯಮಾವಳಿಗಳನ್ನು ಜಾರಿಗೆ ತಂದಿರುತ್ತದೆ.<br><br>ಮೇರು ಕ್ಯಾಬ್ ಕಂಪನಿಗೆ ಸಂಬಂಧಿಸಿದಂತೆ ಪ್ರಾದೇಶಿಕ ಸಾರಿಗೆ ಪ್ರಾಧಿಕಾರ, ಬೆಂಗಳೂರು ನಗರ ರವರು ದಿ: 13.7.2015ರಂದು ನಡೆದ ಪ್ರಾದೇಶಿಕ ಸಾರಿಗೆ ಪ್ರಾಧಿಕಾರ ಸಭೆಯಲ್ಲಿ ಮಂಡಿಸಿದ್ದು, ಕಂಪನಿಯು ಮೋಟಾರು ವಾಹನ ಕಾಯ್ದೆ ಮತ್ತು ಸಿ.ಎಂ.ವಿ. ನಿಯಮಗಳನ್ನು ಹಾಗೂ ಸಿಟಿ ಟ್ಯಾಕ್ಸಿ ಸರ್ವಿಸ್ ಸ್ಕೀಮ್ 1998 ಇದರಲ್ಲಿ ರಚಿತವಾಗಿರುವ ನಿಬಂಧನೆಳನ್ನು ಸ್ಪಷ್ಟವಾಗಿ |

| | | | | |
|---|---|---|---|---|
| | | | | ಉಲ್ಲಂಘನೆ ಮಾಡರುವ ಕಾರಣ ಸಂಬಂಧಪಟ್ಟ ವ್ಯಾಪ್ತಿಯ ಉಪಸಾರಿಗೆ ಆಯುಕ್ತರು ಮತ್ತು ಹಿರಿಯ ಸಾರಿಗೆ ಅಧಿಕಾರಿಗಳು ಅಥವಾ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ಮೇರು ಕ್ಯಾಬ್ ಕಂಪನಿಯ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳುವಂತೆ ನಿರ್ಣಹಿಸಲಾಗಿರುತ್ತದೆ<br><br>ಅದರಂತೆ ಕಾರ್ಯದರ್ಶಿಗಳು, ಪ್ರಾದೇಶಿಕ ಸಾರಿಗೆ ಪ್ರಾಧಿಕಾರ, ಬೆಂಗಳೂರು ನಗರ ಇವರು ಮೇರು ಕ್ಯಾಬ್ ಟೆಕ್ನಾಲಜಿಸ್ ಇವರಿಗೆ ದಿ:0.08.2015ರಂದು ಷೋಕಾಸ್ ನೋಟಿಸ್ ಜಾರಿಗೊಳಿಸಿದ್ದು, ಸದರಿಯವರು ದಿ: 5.9.2015ರಂದು ವಿವರಣೆ ಸಲ್ಲಿಸಿ, ಸಾರಿಗೆ ಇಲಾಖೆ ಅಧಿಕಾರಿಗಳು ದಿ: 23.2.2015ರಂದು ದಿಢೀರ್ ಭೇಟಿ ನೀಡಿ ತಪಾಸಣೆ ಕೈಗೊಂಡಿದ್ದರಿಂದ ಸಂಸ್ಥೆಯ ವಾಹನಗಳಿಗೆ ಸಂಬಂಧಪಟ್ಟ ಎಲ್ಲಾ ದಾಖಲಾತಿಗಳನ್ನು ಸಲ್ಲಿಸು ಸಾಧ್ಯವಾಗಿರುವುದಿಲ್ಲವೆಂದು ವಿಷಾದ ವ್ಯಕ್ತಪಡಿಸಿ, ಸಂಸ್ಥೆಯ ಎಲ್ಲಾ ವಾಹನಗಳ ದಾಖಲಾತಿಗಳನ್ನು ಸಲ್ಲಿಸಲು ಸಿದ್ದರಿರುವುದಾಗಿ ತಿಳಿಸಿರುತ್ತಾರೆ.<br><br>ಮುಂದುವರೆದು, ಸಂಸ್ಥೆಗೆ ಸೇರಿದ ವಾಹನಗಳಲ್ಲಿ ಕಂಡು ಬಂದಿರುವ ನ್ಯೂನತೆಗಳ ಬಗ್ಗೆ ದಾಖಲಿಸಿದ ಪ್ರಕರಣಗಳಿಗೆ ಸಂಬಂಧಪಟ್ಟಂತೆ ಪ್ರಾದೇಶಿಕ ಸಾರಿಗೆ ಕಚೇರಿಗಳಲ್ಲಿ ದಂಡ ಪಾವತಿಸಿ ಮೊಕದ್ದಮೆಗಳನ್ನು ಮುಕ್ತಾಯಗೊಳಿಸಿರುತ್ತೇವೆಂದು ತಿಳಿಸಿ, ಅಗತ್ಯ ಮಾಹಿತಿಯೊಂದಿಗೆ ವಿವರಣೆಯನ್ನು ಸಲ್ಲಿಸಿರುವುದರಿಂದ ಪ್ರಕರಣವನ್ನು ಮುಕ್ತಾಯ ಗೊಳಿಸಲಾಗಿದೆ.<br><br>ಕರ್ನಾಟಕ ಸರ್ಕಾರವು, "The Karnataka on-demand Transportation Technology |

| | | | | |
|---|---|---|---|---|
| | | | | Aggregators Rules 2016" ನಿಯಮಾವಳಿಗಳನ್ನು ದಿ: 2.4.2016ರಿಂದ ಜಾರಿಗೆ ತಂದಿರುತ್ತದೆ. ಸದರಿ ನಿಯಮಾವಳಿಗಳಿಗೆ ಸಂಬಂಧಿಸದಿಂತೆ ಓಲಾ, ಉಬರ್ ಕಂಪನಿಯವರು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅಪೀಲು ಸಂಖ್ಯೆ: 4787 ರಿಂದ 4788/2016 & ರಿಟ್ ಅಪೀಲು ಸಂಖ್ಯೆ: 4789 ರಿಂದ 4792/2016 ದಾಖಲಿಸಿದ್ದು, ಪ್ರಕರಣಗಳು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಬಾಕಿಯಿರುತ್ತದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ಸಮಿತಿಯು ತೀರ್ಮಾನಿಸಿತು. |
| 27 | 5868<br>ಚು.ಗು.ಪ್ರ:1584<br>ಶ್ರೀ ಎಸ್.ವ್ಹಿ. ಸಂಕನೂರ<br>ವಿಪನದಿ: 13.07.2015 | ಗದಗ ಜಿಲ್ಲೆಯ ಮಲ್ಲಸಮುದ್ರ ವ್ಯಾಪ್ತಿಯಲ್ಲಿ ಸ್ಥಾಪಿತವಾಗಿರುವ ಜಿಲ್ಲಾ ಆಸ್ಪತ್ರೆಗೆ ಹೋಗಿ ಬರಲು ಸಾರಿಗೆ ವ್ಯವಸ್ಥೆ ಹಾಗೂ ಗದಗ–ಬೆಟಗೇರಿ ಅವಳಿ ನಗರದಲ್ಲಿ ಬೆಟಗೇರಿಯಿಂದ ಕುರಹಟ್ಟಿ ಪೇಟೆ ಹಾಗೂ ಹಾತಲಗೇರಿ ಮಾರ್ಗವಾಗಿ ಸಿದ್ದಲಿಂಗನಗರ, ಬಡಾವಣೆಗೆ ಸಂಚರಿಸಲು ಬಸ್ಸುಗಳ ಕೊರತೆ ಬಗ್ಗೆ. | ಜಿಲ್ಲಾ ಆಸ್ಪತ್ರೆಗೆ ಹೋಗಿ ಬರಲು ಮುಂಬರುವ ದಿನಗಳಲ್ಲಿ 9 ದಂಡು ಸರತಿಗಳ ಒಂದು ಅನುಸೂಚಿಯನ್ನು ಹೆಚ್ಚುವರಿಯಾಗಿ ಕಾರ್ಯಾಚರಣೆ ಮಾಡುವ ಯೋಜನೆ ಹಾಗೂ ಗದಗ–ಬೆಟಗೇರಿ ಅವಳಿ ನಗರದಲ್ಲಿ ಬೆಟಗೇರಿಯಿಂದ ಕುರಹಟ್ಟಿ ಪೇಟೆ ಹಾಗೂ ಹಾತಲಗೇರಿ ಮಾರ್ಗವಾಗಿ ಸಿದ್ದಲಿಂಗನಗರ, ಬಡಾವಣೆಯ ಮಾರ್ಗ ಸಮೀಕ್ಷೆ ಮಾಡಿಸಿದ್ದು ಮುಂದಿನ ಒಂದು ತಿಂಗಳಲ್ಲಿ ಈ ಮಾರ್ಗವಾಗಿ ಸಾರಿಗೆ ಸೌಲಭ್ಯ ಕಲ್ಪಿಸಲಾಗುವುದು ಎಂದು ಸಾರಿಗೆ ಸಚಿವರು ತಿಳಿಸಿದರು. | ದಿನಾಂಕ: 21.02.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು, ಗದಗ ವಿಭಾಗದಿಂದ ಜಿಲ್ಲಾ ಆಸ್ಪತ್ರೆಗೆ ಹೋಗಿ ಬರಲು ದಿ: 26.01.2017ರಿಂದ ಹೆಚ್ಚುವರಿಯಾಗಿ ಒಟ್ಟು 22 ದುಂಡು ಸರತಿಗಳನ್ನು ಕಾರ್ಯಾಚರಣೆ ಮಾಡಿ ಉತ್ತಮ ಸಾರಿಗೆ ವ್ಯವಸ್ಥೆ ಕಲ್ಪಿಸಲಾಗಿದೆ.<br><br>ಅದರಂತೆ, ದಿ: 26.01.2017ರಂದು ಮಾನ್ಯ ಸಾರಿಗೆ ಸಚಿವರ ನೇತೃತ್ವದಲ್ಲಿ ಗದಗ್–ಬೆಟಗೇರಿ ಅವಳಿ ನಗರದಲ್ಲಿ ಬೇಟಗೇರಿಯಿಂದ ಕುರಹಟ್ಟಿ ಪೇಟೆ ಹಾಗೂ ಹಾತಲಗೇರಿ ಮಾರ್ಗವಾಗಿ ಸಿದ್ದಲಿಂಗನಗರಕ್ಕೆ 12 ಸರತಿಗಳು ಹಾಗೂ ಅಬ್ದುಲ ಕಲಾಂ ಭವನದಿಂದ ಹಾತಲಗೇರಿ ನಾಕಾ ಮಾರ್ಗವಾಗಿ ಸಿದ್ದಲಿಂಗನಗರಕ್ಕೆ 24 ಸರತಿಗಳನ್ನು ಕಾರ್ಯಾಚರಣೆಗೊಳಿಸಲಾಗಿರುತ್ತದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ಸಮಿತಿಯು ತೀರ್ಮಾನಿಸಿತು |

| | | | | |
|---|---|---|---|---|
| 28 | 6312<br>ಚು.ಗು.ಪ್ರ : 3224<br>ಶ್ರೀ ಎಸ್. ನಾಗರಾಜ್ (ಸಂದೇಶ್‌ನಾಗರಾಜ್)<br>ವಿ.ಪ.ನ.ದಿ : 16-06-2017 | ಬೆಂಗಳೂರು ಅರಸೀಕೆರೆ, ಶಿವಮೊಗ್ಗ ಕಡೆಯಿಂದ ಬಸ್‌ನಲ್ಲಿ ಬರುವ ಪ್ರಯಾಣಿಕರು ಕೊಲಂಬಿಯ ಏಷಿಯಾ ಆಸ್ಪತ್ರೆಯ ಬಳಿಯಲ್ಲಿ, ಅದೇ ರೀತಿ ನಂಜನಗೂಡು, ತಿ.ನರಸೀಪುರ ಕಡೆಯಿಂದ ಬರುವವರು ಬಂಡಿಪಾಳ್ಯ, ಬನ್ನೂರು ರೋಡ್ ಬಳಿ, ಹುಣಸೂರು ಕಡೆಯಿಂದ ಬರುವ ಪ್ರಯಾಣಿಕರು ಹಿನಕಲ್ ಬಳಿ ಸಾಗುವ ರಿಂಗ್ ರೋಡ್ ಸ್ಟಾಪ್‌ಗಳಲ್ಲಿ ಇಳಿದು, ವರ್ತುಲ ರಸ್ತೆಗೆ ಹೊಂದಿ ಕೊಂಡಿರುವ ನಗರದ ವಿವಿಧ ಬಡಾವಣೆಗಳಿಗೆ ಸುಲಭವಾಗಿ ಹೋಗಲು ನಗರದೊಳಗಿನ ಪ್ರಯಾಣಿಕರ ಒತ್ತಡ, ಬಸ್‌ಗಳ ಒತ್ತಡ ಕಡಿಮೆ ಮಾಡಲು ಸಮಯದ ಉಳಿತಾಯ ಮಾಡಲು ವರ್ತುಲ ರಸ್ತೆಯಲ್ಲಿ ನಗರ ಬಸ್ ಸೌಲಭ್ಯ ಕಲ್ಪಿಸಲು ಕ್ರಮ ಜರುಗಿಸುವ ಬಗ್ಗೆ. | ಮೈಸೂರು ನಗರದ ವರ್ತುಲ ರಸ್ತೆಯ ಕೊಲಂಬಿಯಾ ಏಷ್ಯಾ ಆಸ್ಪತ್ರೆ-ರಾಯಲ್‌ಇನ್ ಹೋಟೆಲ್-ಜೆ.ಎಸ್.ಎಸ್. ಅರ್ಜುನ್‌ಹಾತ್ - ಭಾರತ್ ಕ್ಯಾನ್ಸರ್ ಆಸ್ಪತ್ರೆ - ಹಿನಕಲ್ ರಿಂಗ್‌ರೋಡ್ ಜಂಕ್ಷನ್ - ವಿಜಯನಗರ 4ನೇ ಹಂತ - ರಾಮಕೃಷ್ಣನಗರ ಸರ್ಕಲ್-ಶ್ರೀರಾಂಪುರ ವಾಟರ್ ಟ್ಯಾಂಕ್-ನಾಚನಹಳ್ಳಿಪಾಳ್ಯ ಮಾರ್ಗವಾಗಿ ನಂಜನಗೂಡು ರಿಂಗ್ ರೋಡ್ ಜಂಕ್ಷನ್‌ವರೆಗೆ ನೂತನ ಅನುಸೂಚಿಗಳನ್ನು ಪ್ರಾಯೋಗಿಕವಾಗಿ ಈ ಮಾಹೆಯ ಅಂತ್ಯಕ್ಕೆ ಕಾರ್ಯಾಚರಣೆ ಮಾಡಲು ಕ್ರಮಕೈಗೊಳ್ಳಲಾಗುವುದು ಎಂದು ಮಾನ್ಯ ಸಾರಿಗೆ ಸಚಿವರು ತಿಳಿಸಿದರು. | ದಿನಾಂಕ: 21.02.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು, ಮೈಸೂರು ನಗರದ ವರ್ತುಲ ರಸ್ತೆಯ ಕೊಲಂಬಿಯಾ ಏಷ್ಯಾ ಆಸ್ಪತ್ರೆ-ರಾಯನ್‌ಇನ್ ಹೋಟೆಲ್-ಜೆ.ಎಸ್.ಎಸ್. ಅರ್ಜುನ್‌ಹಾತ್-ಭಾರತ್ ಕ್ಯಾನ್ಸರ್ ಆಸ್ಪತ್ರೆ-ಹಿನಕಲ್ ರಿಂಗ್ ರೋಡ್ ಜಂಕ್ಷನ್-ವಿಜಯನಗರ 4ನೇ ಹಂತ-ರಾಮಕೃಷ್ಣನಗರ ಸರ್ಕಲ್-ಶ್ರೀರಾಂಪುರ ವಾಟರ್‌ಟ್ಯಾಂಕ್-ನಾಚನಹಳ್ಳಿಪಾಳ್ಯ ಮಾರ್ಗವಾಗಿ ನಂಜನಗೂಡು ರಿಂಗ್‌ರೋಡ್ ಜಂಕ್ಷನ್ ವರೆಗೆ ದಿ: 21.12.2017 ರಿಂದ 15.06.2018ರ ವರೆಗೆ ಎರಡು ಹಾಗೂ ದಿ: 21.12.2017ರಂದ 01.06.2018ರವರೆ 2 ಅನುಸೂಚಿಗಳನ್ನು ಒಟ್ಟು 4 ಅನುಸೂಚಿಗಳನ್ನು ಕಾರ್ಯಾಚರಣೆ ಮಾಡಲಾಗಿರುತ್ತದೆ. ಈ ಪ್ರದೇಶದ ಸುತ್ತಮುತ್ತ ವಸತಿ ಸಮುಚ್ಛಯಗಳು ಇಲ್ಲದಿರುವುದರಿಂದ ಪ್ರತಿನಿತ್ಯ ಸಂಚರಿಸುವವರ ಸಂಖ್ಯೆ ತೀರಾ ವಿರಳವಾಗಿರುವುದರ ಹಿನ್ನಲೆಯಲ್ಲಿ ಈ ಅನುಸೂಚಿಗಳನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ಸಮಿತಿಯು ತೀರ್ಮಾನಿಸಿತು |

| | | | | |
|---|---|---|---|---|
| 29 | 6313<br>ಚು.ಗು.ಪ್ರ : 4841<br>ಶ್ರೀಐವನ್ ಡಿ'ಸೋಜಾ<br>ವಿ.ಪ.ನ.ದಿ :<br>24–11–2017 | ಮಂಗಳೂರಿನ ಎಲೆಕ್ಟ್ರಾನಿಕ್ ಡ್ರೈವಿಂಗ್ ಸ್ಕೂಲ್ ಯೋಜನೆ ಯನ್ನು ಕಾರ್ಯಗತಗೊಳಿಸುವ ಬಗ್ಗೆ. | ಮಂಗಳೂರಿನಲ್ಲಿ ಸ್ವಯಂಚಾಲಿತ ಚಾಲನಾ ಪರೀಕ್ಷಾ ಪಥವನ್ನು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಮುಖಾಂತರ ಅನುಷ್ಠಾನ ಗೊಳಿಸಲಾಗುತ್ತಿದ್ದು, ಈ ಕಾಮಗಾರಿಯ ಅಂದಾಜುಪಟ್ಟಿಗೆ ಆಡಳಿತಾತ್ಮಕ ಮಂಜೂರಾತಿ ನೀಡುವ ವಿಷಯ ಸರ್ಕಾರದ ಪರಿಶೀಲನೆಯಲ್ಲಿದ್ದು, ಆದಷ್ಟು ಕೂಡಲೇ ಕಾರ್ಯಗತಗೊಳಿಸಲಾಗುವುದು ಎಂದು ಮಾನ್ಯ ಸಾರಿಗೆ ಸಚಿವರು ತಿಳಿಸಿದರು. | ದಿನಾಂಕ: 21.02.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು, ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರಿನ ಪಾಣೆ ಮಂಗಳೂರ ಹೋಬಳಿ, ಪಜೀರು ಗ್ರಾಮದಲ್ಲಿನ ಕೈಗಾರಿಕಾಭಿವೃದ್ಧಿ ಮಂಡಳಿ ಫ್ಲಾಟ್ ನಂ. 10ಸಿ ಯಲ್ಲಿನ 10 ಎಕರೆ ಜಮೀನಿನಲ್ಲಿ ಮಂಗಳೂರು ಸ್ವಯಂಚಾಲಿತ ಚಾಲನಾ ಪರೀಕ್ಷಾ ಪಥ ಸ್ಥಾಪನೆ ಕಾಮಗಾರಿಯ ರೂ.10.00 ಕೋಟಿಗಳ ಪರಿಷ್ಕೃತ ಅಂದಾಜು ಪಟ್ಟಿಗೆ ಅನುಮೋದನೆ ನೀಡಲಾಗಿದ್ದು, ಟೆಂಡರ್ ಪ್ರಕ್ರಿಯೆ ಜಾರಿಯಲ್ಲಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ಸಮಿತಿಯು ತೀರ್ಮಾನಿಸಿತು |
| 30. | 6314<br>ಚು.ಗು.ಪ್ರ : 4917<br>ಶ್ರೀ ರಾಮಚಂದ್ರಗೌಡ<br>ವಿ.ಪ.ನ.ದಿ :<br>24–11–2017 | ಹೊಸ ಮತ್ತು ಹಳೆಯ ವಾಣಿಜ್ಯ ವಾಹನಗಳಿಗೆ ಸ್ಪೀಡ್ ಗೌರ್ನರ್‌ಗಳನ್ನು ಅಳವಡಿಸುವ ಹಾಗೂ ವೆಚ್ಚದ ಬಗ್ಗೆ. | ಮಾನ್ಯ ಸದಸ್ಯರು ಹೇಳಿದಂತೆ ದರದಲ್ಲಿರುವ ವ್ಯತ್ಯಾಸವನ್ನು ಸರಿದೂಗಿಸಲು ಅವರನ್ನು ಕರೆಸಿ ಮಾತನಾಡಿ ಕಡಿಮೆ ಮಾಡುವಂತೆ ಹೇಳಿ ಅವರೊಡನೆ ಚರ್ಚೆ ಮಾಡುತ್ತಿದ್ದೇವೆ. ಜನರಿಗೆ ಸಹಾಯವಾಗುವಂತೆ ಲಾರಿ ಮಾಲೀಕರ ಸಂಘದವರೂ ಸಹ ಬಂದು ನಮ್ಮೊಡನೆ ಮಾತನಾಡಿದ್ದಾರೆ. ಅವರೂ ಸಹ ಒಪ್ಪಿಗೆ ನೀಡಿದ್ದಾರೆ. ಇದನ್ನು ಬಗೆಹರಿಸಿಕೊಡಲಾಗುತ್ತದೆ ಎಂದು ಮಾನ್ಯ ಸಾರಿಗೆ ಸಚಿವರು ತಿಳಿಸಿದರು. | ದಿನಾಂಕ: 21.02.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು, ಹೊಸ ಮತ್ತು ಹಳೆಯ ವಾಣಿಜ್ಯ ವಾಹನಗಳಿಗೆ ಸ್ಪೀಡ್ ಗೌರ್ನರ್‌ಗಳನ್ನು ಅಳವಡಿಸುವ ಸಂಬಂಧ ಕಂಪನಿಯವರೊಂದಿಗೆ ಚರ್ಚಿಸಿ ದರಗಳನ್ನು ಕೆಳಕಂಡಂತೆ ಕಡಿಮೆ ಮಾಡಲಾಗಿದೆ.<br><br>ಸಂಸ್ಥೆಗಳು ಕೇಂದ್ರ ಮೋಟಾರು ವಾಹನ ನಿಯಮಾವಳಿ, 1989ರ ನಿಯಮ 126ರಡಿ ನಿಗದಿತ ಟೆಸ್ಟಿಂಗ್ ಏಜೆನ್ಸಿ ಇವರಿಂದ ಪ್ರಯಾಣಿಕರಿಸಲ್ಪಟ್ಟ ಮಾದರಿಯ AIS-018 ಮತ್ತು AIS-<br><br>037ಮಾನದಂಡಕ್ಕೆ ಅನುಗುಣವಾಗಿ ತಯಾರಿಸಲ್ಪಟ್ಟ ಉತ್ತಮ ಗುಣಮಟ್ಟದ ಸ್ಪೀಡ್ ಗೌರ್ನರ್‌ಗಳನ್ನು ವಾಹನಗಳಿಗೆ ಅಳವಡಿಸಬೇಕಾಗುತ್ತದೆ. |

| SL. No. | Company | Type | Model | Previous Rate | Present Rate |
|---|---|---|---|---|---|
| 1 | Pricol | SLD Fuel Solenod Version | AGG-70320 RASG-706C 20R | 10,5000/- | 8,000/- |
| | | SLD Pedal Version | AGL-218-C20 | 13,500/- | 8,000/- |
| | | SLD Motn Version | SLD120/125R & SLD120/125 & SLD 120 | 15,5000/- | 10,500/- |
| 2 | ROSMERTA Autotech PL, Gurgaon, Haryana | Fuel Control type Spped Governor | MSG-WSC-09 | 10,500/- | 8,500/- |
| | | Cable Control type Speed Governor | MSG-WSC-09 | 10,500/- | 8,500/- |
| | | Fly Bywire Type Speed Governo | MSG-FBW-99 | 15,500/- | 9,500/- |

ಮೇಲ್ಕಂಡಂತೆ ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ಸಮಿತಿಯು ತೀರ್ಮಾನಿಸಿತು

## ಕಾರ್ಮಿಕ ಇಲಾಖೆ

| ಕ್ರ. ಸಂ. | ಆಶ್ವಾಸನೆ ಸಂಖ್ಯೆ | ಆಧಾರ ಮತ್ತು ದಿನಾಂಕ | ಆಶ್ವಾಸನೆ | ತೆಗೆದುಕೊಂಡ ಕ್ರಮ |
|---|---|---|---|---|
| 1 | 5846<br>ಚು.ಗು.ಪ್ರ : 3762<br>ಶ್ರೀ ರಮೇಶ್ ಬಾಬು<br>ವಿ.ಪ.ನ.ದಿ:<br>15–11–2017 | ರಾಜ್ಯ ಸರ್ಕಾರವು ಹಮಾಲಿಗಳ, ಬೀದಿ ವ್ಯಾಪಾರಿಗಳ ಮನೆ ಕೆಲಸಗಾರರ ಹಾಗೂ ದಿನಗೂಲಿಗಳ ಅನುಕೂಲಕ್ಕಾಗಿ ಅಪಘಾತ ವಿಮಾ ಯೋಜನೆಯನ್ನು ಮತ್ತು ಪ್ರಾವಿಡೆಂಟ್ ಫಂಡ್ ಯೋಜನೆಯನ್ನು ರಾಜ್ಯದಲ್ಲಿ ಜಾರಿಗೊಳಿಸಲು ರಾಜ್ಯ ಸರ್ಕಾರದಿಂದ ಹಣ ಬಿಡುಗಡೆ ಮಾಡಿರುವ ಬಗ್ಗೆ ಮತ್ತು ಇವರಿಗೆ ಸ್ಮಾರ್ಟ್‌ಕಾರ್ಡ್ ನೀಡುವ ಬಗ್ಗೆ. | ರಾಜ್ಯದಲ್ಲಿ ಹಮಾಲಿಗಳು, ಬೀದಿಬದಿ ವ್ಯಾಪಾರಿಗಳು, ಮನೆಕೆಲಸದವರು, ಚಿಂದಿ ಆಯುವವರು, ದರ್ಜಿ (ಟೈಲರ್)ಗಳು ಹಾಗೂ ಮೆಕ್ಯಾನಿಕ್‌ಗಳಿಗೆ ಅಪಘಾತ ಪರಿಹಾರ, ಸ್ಮಾರ್ಟ್‌ಕಾರ್ಡ್ ಹಾಗೂ ಭವಿಷ್ಯ ನಿಧಿ ಯೋಜನೆಯನ್ನು ಜಾರಿಗೊಳಿಸಲು ರೂಪರೇಷ ರಚಿಸಲಾಗುತ್ತಿದೆ ಎಂದು ಮಾನ್ಯ ಕಾರ್ಮಿಕ ಹಾಗೂ ಕೌಶಲ್ಯಾಭಿವೃದ್ಧಿ ಸಚಿವರು ತಿಳಿಸಿದರು. | ದಿನಾಂಕ: 06.06.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ. 2017–18ರ ಆಯವ್ಯಯ ಘೋಷಣೆ ಹಾಗೂ ತದನಂತರದ ಸರ್ಕಾರಿ ಆದೇಶ ಹಾಗೂ ಮಂಡಳಿಯ ಸಾಮಾನ್ಯ ಸಭೆಯ ನಿರ್ಣಯ ಇವೆಲ್ಲವುಗಳಿಗೆ ಅನುಗುಣವಾಗಿ ಹಮಾಲಿಗಳು, ಗೃಹ ಕಾರ್ಮಿಕರು, ಚಿಂದಿ ಆಯುವವರು, ಟೈಲರ್ಸ್ ಹಾಗೂ ಮೆಕ್ಯಾನಿಕ್ ಈ 5 ವರ್ಗಗಳ ಒಟ್ಟು 5 ಲಕ್ಷ ಕಾರ್ಮಿಕರಿಗೆ ಸ್ಮಾರ್ಟ್‌ಕಾರ್ಡ್ (ಗುರುತಿನ ಚೀಟಿ) ನೀಡಲು ಕ್ರಮ ಕೈಗೊಳ್ಳಲಾಗಿದ್ದು, ಈಗಾಗಲೇ ಸ್ಮಾರ್ಟ್‌ಕಾರ್ಡ್ ಮುದ್ರಿಸಿ ವಿತರಿಸುವ ಹೊಣೆಯನ್ನು ಮೆ: ಕಿಯೋನಿಕ್ಸ್ ಸಂಸ್ಥೆಗೆ ವಹಿಸಲಾಗಿದೆ. ಈ ಕುರಿತು 3 ಲಕ್ಷ ನೋಂದಣಿ ಅರ್ಜಿಗಳನ್ನು ಮುದ್ರಿಸಿ ಸಂಬಂಧಪಟ್ಟ ಸಂಘ/ಸಂಘಟನೆಗಳಿಗೆ ಹಾಗೂ ರಾಜ್ಯದಾದ್ಯಂತ ಕಾರ್ಮಿಕ ಇಲಾಖೆಯ ಅಧಿಕಾರಿಗಳಿಗೆ ಕಳುಹಿಸಲಾಗಿದೆ, ಈವರೆಗೆ ಮಂಡಳಿಯು 58,295 ಭರ್ತಿ ಮಾಡಿದ ಅರ್ಜಿಗಳನ್ನು ಸ್ವೀಕರಿಸಿದ್ದು, ಅವುಗಳಲ್ಲಿ 9360 ಸ್ಮಾರ್ಟ್‌ಕಾರ್ಡ್‌ಗಳನ್ನು ಮುದ್ರಿಸಿ ಕಾರ್ಮಿಕರಿಗೆ ವಿತರಿಸಲಾಗಿದೆ.<br><br>ಭವಿಷ್ಯ ನಿಧಿ ಸೌಲಭ್ಯಕ್ಕೆ ಸಂಬಂಧಿಸಿದಂತೆ, ಮೇಲ್ಕಂಡ ವಲಯಗಳ ಅಸಂಘಟಿತ ಕಾರ್ಮಿಕರೂ ಸೇರಿದಂತೆ ಎಲ್ಲಾ ವರ್ಗಗಳ ಅಸಂಘಟಿತ ಕಾರ್ಮಿಕರಿಗೆ 2018–19ನೇ ಸಾಲಿನ ಅಂತ್ಯದಲ್ಲಿ, ಕೇಂದ್ರ ಸರ್ಕಾರವು ಮಾಸಿಕ ಕನಿಷ್ಠ ರೂ.3000/– ಗಳ ನಿಶ್ಚಿತ ಪಿಂಚಣಿ ದೊರಕುವ “ ಪ್ರಧಾನ ಮಂತ್ರಿ ಶ್ರಮಯೋಗಿ ಮಾನ್–ಧನ್ (PM-SYM) ಯೋಜನೆ”ಯನ್ನು |

| | | | | |
|---|---|---|---|---|
| | | | | ಜಾರಿಗೆ ತಂದಿದ್ದು, ಸದರಿ ಯೋಜನೆಯಡಿ 18–40 ವಯೋಮಾನದ ಕಾರ್ಮಿಕರು ಸದರಿ ಸೌಲಭ್ಯವನ್ನು ಪಡೆಯಬಹುದಾಗಿದೆ. ಈ ಯೋಜನೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು, ಸರ್ಕಾರದ ಅಧಿಸೂಚನೆ ಸಂಖ್ಯೆ: LD 59 LET 2019 ದಿನಾಂಕ:15–02–2019 ರನ್ವಯ ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯ ಜಂಟಿ ಕಾರ್ಯದರ್ಶಿಯವರನ್ನು ಯೋಜನೆಯ ನೋಡಲ್ ಆಫೀಸರ್ ಆಗಿ ನೇಮಕ ಮಾಡಲಾಗಿದೆಯೆಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿದ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |
| 2 | 5847<br>ಚು.ಗು.ಪ್ರ : 3733<br>ಶ್ರೀ ಎನ್.ಅಪ್ಪಾಜಿಗೌಡ<br>ವಿ.ಪ.ನ.ದಿ:<br>15–11–2017 | ರಾಜ್ಯದಲ್ಲಿರುವ ಕಟ್ಟಡ ಮತ್ತು ಇತರ ಕಾರ್ಮಿಕರುಗಳಿಗೆ ಉಚಿತವಾಗಿ ಕಾರ್ಮಿಕ ಕಲ್ಯಾಣ ಮಂಡಳಿಯಿಂದ ಮನೆಗಳನ್ನು ನೀಡುವ ಯೋಜನೆ ಕುರಿತು. | ಪ್ರಸ್ತುತ ಜಾರಿಯಲ್ಲಿರುವ ವಸತಿ ಸೌಲಭ್ಯಕ್ಕೆ ಸಂಬಂಧಪಟ್ಟ ನಿಯಮಗಳಲ್ಲಿ ಕೆಲವೊಂದು ತೊಡಕುಗಳು ಇರುವ ಕಾರಣ ಸದರಿ ವಸತಿ ಸೌಲಭ್ಯದ ನಿಯಮಗಳಿಗೆ ತಿದ್ದುಪಡಿ ತರಲು ಕ್ರಮ ವಹಿಸಲಾಗುತ್ತಿದೆ ಎಂದು ಮಾನ್ಯ ಕಾರ್ಮಿಕ ಹಾಗೂ ಕೌಶಲ್ಯಾಭಿವೃದ್ಧಿ ಸಚಿವರು ತಿಳಿಸಿದರು. | ದಿನಾಂಕ: 06.06.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ. ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ (ಉದ್ಯೋಗದ ಕ್ರಮೀಕರಣ ಮತ್ತು ಸೇವಾ ಷರತ್ತುಗಳು) ಕಾಯ್ದೆ, 1996ರ ಕರ್ನಾಟಕ ನಿಯಮಗಳು 2006ರ ನಿಯಮ 42ಕ್ಕೆ ತಿದ್ದುಪಡಿ ತರುವ ಕುರಿತು ದಿನಾಂಕ: 03–05–2019 ರಂದು ನಡೆದ 'ತಜ್ಞರ ಸಮಿತಿ' (Expert Committee)ಯ ಸಭೆಯಲ್ಲಿ ಮಂಡಿಸಿದಾಗ ಬ್ಯಾಂಕ್‌ಗಳೊಂದಿಗೆ ಚರ್ಚಿಸಿ ಬಡ್ಡಿ ಆಧಾರಿತ ಸೌಲಭ್ಯವನ್ನು ನೀಡುವ ಬಗ್ಗೆ ಪುನರ್ ಅವಲೋಕನ ಮಾಡಲು ತೀರ್ಮಾನಿಸಲಾಗಿರುತ್ತದೆ. ಮುಂದುವರೆದು. ಸಾಲ/ ಮುಂಗಡ ನೀಡಿದಲ್ಲಿ ಅದನ್ನು ವಸೂಲು ಮಾಡಲು<br><br>ಕಷ್ಟವಾಗುವುದರಿಂದ ಫಲಾನುಭವಿಗಳು ಬ್ಯಾಂಕ್‌ನಿಂದ ಸಾಲ ಪಡೆದಲ್ಲಿ ರೂ. 2,00 ಲಕ್ಷ ಮೊತ್ತದ ಮೇಲೆ ವಿಧಿಸಲಾಗುವ ಬಡ್ಡಿಯನ್ನು ಮಂಡಳಿಯಿಂದ ಭರಿಸಬಹುದಾಗಿರುತ್ತದೆ (Interest Subvention) ಎಂದು |

| | | | | |
|---|---|---|---|---|
| | | | | ತೀರ್ಮಾನಿಸಲಾಗಿರುತ್ತದೆ. ಈ ಹಿನ್ನಲೆಯಲ್ಲಿ ದಿನಾಂಕ: 08–05–2019 ರಂದು ನಡೆದ ಮಂಡಳಿಯ 28ನೇ ಸಭೆಯಲ್ಲಿ ಸಮರ್ಪವಾದ ಯೋಜನೆಯನ್ನು ರೂಪಿಸಿ ಮಂಡಳಿಯ ಮುಂದಿನ ಸಭೆಯಲ್ಲಿ ಮಂಡಿಸಲು ತೀರ್ಮಾನಿಸಲಾಗಿರುತ್ತದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿದ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |
| 3 | 5849<br>ಚು.ಗು.ಪ್ರ : 3764<br>ಶ್ರೀ ವಿಜಯಸಿಂಗ್<br>ವಿ.ಪ.ನ.ದಿ:<br>15–11–2017 | ಬೀದರ್ ಜಿಲ್ಲೆಯಲ್ಲಿ ರೂಢಿಯಲ್ಲಿರುವ ಬಾಲ ಕಾರ್ಮಿಕರ ಪದ್ಧತಿಯನ್ನು ತಡೆಗಟ್ಟಲು ಕೈಗೊಂಡಿರುವ ಕ್ರಮದ ಬಗ್ಗೆ. | ಬಾಲ್ಯಾವಸ್ಥೆಯ ಹಾಗೂ ಕಿಶೋರಾವಸ್ಥೆಯ ಕಾರ್ಮಿಕರಿಗೆ ಉತ್ಕೃಷ್ಟ ಗುಣಮಟ್ಟದ ವಿದ್ಯಾಭ್ಯಾಸವನ್ನು ಒದಗಿಸುವ ದೃಷ್ಟಿಯಿಂದ ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆಯ ಸಹಯೋಗದೊಂದಿಗೆ ನೀಲನಕ್ಷೆಯನ್ನು ಅಭಿವೃದ್ಧಿಪಡಿಸಲು ಅಗತ್ಯ ಕ್ರಮ ಕೈಗೊಳ್ಳಲಾಗಿರುತ್ತದೆ ಎಂದು ಮಾನ್ಯ ಕಾರ್ಮಿಕ ಹಾಗೂ ಕೌಶಲ್ಯಾಭಿವೃದ್ಧಿ ಸಚಿವರು ತಿಳಿಸಿದರು. | ದಿನಾಂಕ: 06.06.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ. ಬಾಲ್ಯಾವಸ್ಥೆಯ ಹಾಗೂ ಕಿಶೋರಾವಸ್ಥೆಯ ಕಾರ್ಮಿಕರನ್ನು ಉದ್ಯೋಗದಿಂದ ವಿಮುಕ್ತಗೊಳಿಸಿ ಅವರಿಗೆ ಉತ್ತಮ ಗುಣಮಟ್ಟದ ಶೈಕ್ಷಣಿಕ ಪುನರ್ವಸತಿ ಕಲ್ಪಿಸಲು ಬೇಕಾಗುವ ನೀಲನಕ್ಷೆಯನ್ನು ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆಯು ಸಿದ್ಧಪಡಿಸಲಾಗಿದೆಯೆಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿದ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |
| 4 | 5852<br>ಚು.ಗು.ಪ್ರ : 3730<br>ಡಾ॥ ಜಯಮಾಲ ರಾಮಚಂದ್ರ<br>ವಿ.ಪ.ನ.ದಿ:<br>15–11–2017 | ಬಾಲ ಕಾರ್ಮಿಕ ಪದ್ಧತಿ (ನಿಷೇಧ ಮತ್ತು ನಿಯಂತ್ರಣ) ಕಾಯ್ದೆ 1986ಕ್ಕೆ 2015ರಲ್ಲಿ ಆಗಿರುವ ತಿದ್ದುಪಡಿಯನ್ನು ರಾಜ್ಯದಲ್ಲಿ ಸಮರ್ಪಕವಾಗಿ ಜಾರಿ ಮಾಡುವ ದಿಸೆಯಲ್ಲಿ ಸರ್ಕಾರ ತೆಗೆದುಕೊಂಡ ಕ್ರಮಗಳ ಬಗ್ಗೆ. | ಬಾಲ್ಯಾವಸ್ಥೆಯ ಹಾಗೂ ಕಿಶೋರಾವಸ್ಥೆಯ ಕಾರ್ಮಿಕ (ನಿಷೇಧ ಮತ್ತು ನಿಯಂತ್ರಣ) ಕಾಯ್ದೆ, 1986ರಡಿಯ ಕರ್ನಾಟಕ ನಿಯಮಗಳಿಗೆ ತಿದ್ದುಪಡಿಯ ಪ್ರಸ್ತಾವನೆಯು ರಾಜ್ಯ ಸರ್ಕಾರದ ಪರಿಶೀಲನೆಯಲ್ಲಿದೆ. | ದಿನಾಂಕ: 06.06.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ. ಬಾಲ್ಯಾವಸ್ಥೆಯ ಹಾಗೂ ಕಿಶೋರಾವಸ್ಥೆಯ (ನಿಷೇಧ ಮತ್ತು ನಿಯಂತ್ರಣ) ಕಾಯ್ದೆ. 1986ರಡಿಯ ಬಾಲಕಾರ್ಮಿಕ (ನಿಷೇಧ ಮತ್ತು ನಿಯಂತ್ರಣ) (ಕರ್ನಾಟಕ) ತಿದ್ದುಪಡಿ ನಿಯಮಗಳು–2017ಅನ್ನು ಕರ್ನಾಟಕ ಸರ್ಕಾರವು ಅಧಿಸೂಚನೆ ಸಂಖ್ಯೆ ಎಲ್ ಡಿ 113 ಸಿಎಲ್‌ಸಿ 2017(ಪಿ1) ಬೆಂಗಳೂರು, ದಿನಾಂಕ: 04/10/2018ರ ಮೂಲಕ ಕರ್ನಾಟಕ ರಾಜ್ಯಪತ್ರ ಸಂಪುಟ 153, ಸಂಚಿಕೆ 44 ದಿನಾಂಕ: 08/11/2018ರಲ್ಲಿ ಪ್ರಕಟಿಸಿರುತ್ತದೆ. |

| | | | | |
|---|---|---|---|---|
| | | | ಪರಿಷ್ಕೃತ ಕಾಯ್ದೆಯನ್ವಯ ಕಾಯ್ದೆಯ ಕಲಂ–14 ಬಾಲಕಾರ್ಮಿಕ ಹಾಗೂ ಕಿಶೋರ ಕಾರ್ಮಿಕ ಪುನರ್ವಸತಿ ನಿಧಿ" ಅನ್ನು ಆರಂಭಿಸಲು ಅವಶ್ಯವಿರುವ ಯೋಜನೆಯನ್ನು ರೂಪಿಸಲಾಗುತ್ತಿದೆ ಎಂದು ಮಾನ್ಯ ಕಾರ್ಮಿಕ ಮತ್ತು ಕೌಶಲ್ಯಾಭಿವೃದ್ಧಿ ಸಚಿವರು ತಿಳಿಸಿದರು. | ಪರಿಷ್ಕೃತ ಕಾಯ್ದೆಯನ್ವಯ ಕಾಯ್ದೆಯ ಕಲಂ 14ಬಿ "ಬಾಲಕಾರ್ಮಿಕ ಹಾಗೂ ಕಿಶೋರಕಾರ್ಮಿಕ ಪುನರ್ವಸತಿ ನಿಧಿ" ಅನ್ನು ಕರ್ನಾಟಕ ಸರ್ಕಾರವು ಅಧಿಸೂಚನೆ ಸಂಖ್ಯೆ: ಎಲ್.ಡಿ. 124 ಸಿಎಲ್‌ಸಿ 2016, ಬೆಂಗಳೂರು ದಿನಾಂಕ: 1.3.2019ನ್ನು ಹೊರಡಿಸಿರುತ್ತದೆಯೆಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿದ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |
| 5 | 5388<br>ಚು.ಗು.ಪ್ರ: 990<br>ಶ್ರೀ ಸಿ.ಎಚ್. ವಿಜಯಶಂಕರ್<br>ವಿಪನದಿ;9.07.2014 | ಬೆಂಗಳೂರು ಮಹಾನಗರದ ಸುತ್ತಮುತ್ತ ಹಾಗೂ ರಾಜ್ಯದ ಇತರೆ ಕೈಗಾರಿಕಾ ಪ್ರದೇಶಗಳ ಗಾರ್ಮೆಂಟ್ಸ್ ಮತ್ತು ಇತರೆ ಕಾರ್ಖಾನೆಗಳಲ್ಲಿ ಕಾರ್ಮಿಕರಾಗಿ ಕರ್ತವ್ಯ ನಿರ್ವಹಿಸು ತ್ತಿರುವ ಕೆಲಸದ ಸ್ಥಳಗಳಿಗೆ ಅವರ ಪಾಳಿ ಪದ್ಧತಿಗೆ ಅನುಗುಣ ವಾಗಿ ಬಂದು ಹೋಗಲು ಅವರ ಸುರಕ್ಷತೆ ಹಾಗೂ ಸಾರಿಗೆ ಅನುಕೂಲತೆ ಮಾಡಿಕೊಡುವ ಕ್ರಮದ ಬಗ್ಗೆ. | ಕೆ.ಎಸ್.ಆರ್.ಟಿ.ಸಿ.ಯವರಿಗೆ ಮತ್ತು ಕಂಪನಿಯ ಮಾಲೀಕರಿಗೆ ಏನು ಸಾಧ್ಯತೆಯಿದೆ ಮಹಿಳೆಯರಿಗೆ ಪ್ರತ್ಯೇಕವಾಗಿ ಕಾರ್ಖಾನೆ ಹೋಗಿ ವಾಪಸ್ಸು ಬರುವುದಕ್ಕೆ shift-wise ಸಾರಿಗೆ ಸಚಿವರ ಜೊತೆಯಲ್ಲಿ ಚರ್ಚೆ ಮಾಡಿ ನಾನು ಖಂಡಿತವಾಗಿ ಅದಕ್ಕೆ ವ್ಯವಸ್ಥೆಯನ್ನು ಮಾಡುವುದಕ್ಕೆ ಪ್ರಾಮಾಣಿಕವಾದಂತಹ ಪ್ರಯತ್ನವನ್ನು ಮಾಡುತ್ತೇನೆಂದು ತಮ್ಮ ಮುಖಾಂತರ ಅವರಿಗೆ ಹೇಳುತ್ತಿದ್ದೇನೆ. ಅಲ್ಲಿ ಏನು ಸೂಕ್ತವಾಗಿ ನಿರ್ವಹಣೆಯನ್ನು ಮಾಡುವುದಕ್ಕೆ ಸಾಧ್ಯವಿದೆ ಆ ಕೆಲಸವನ್ನು ಮಾಡುತ್ತೇನೆ ಎಂದು ಮಾನ್ಯ ಕಾರ್ಮಿಕ ಸಚಿವರು ತಿಳಿಸಿದರು. | ದಿನಾಂಕ: 06.06.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ,<br>1. ರಾತ್ರಿ ಪಾಳಿಯಲ್ಲಿ ಅಂದರೆ ಸಂಜೆ 7 ರಿಂದ ಬೆಳಗ್ಗೆ 6 ಗಂಟೆ ಅವಧಿಯಲ್ಲಿ ಕಾರ್ಯನಿರ್ವಹಿಸುವ ಮಹಿಳಾ ಕಾರ್ಮಿಕರಿಗೆ ಸಾರಿಗೆ ವ್ಯವಸ್ಥೆಯನ್ನು ಭದ್ರತೆಯೊಂದಿಗೆ ಒದಗಿಸುವ ಷರತ್ತುಗಳನ್ನು ವಿಧಿಸಿದ್ದು, ಈ ಅವಧಿಗಳಲ್ಲಿ ಕಾರ್ಯನಿರ್ವಹಿಸುವ ಮಹಿಳಾ ಕಾರ್ಮಿಕರಿಗೆ ಕಾರ್ಖಾನೆಗಳ ಮಾಲೀಕರು ಸಾರಿಗೆ ವ್ಯವಸ್ಥೆಗಳನ್ನು ಒದಗಿಸಿರುತ್ತಾರೆ.<br>2. ಬೆಂಗಳೂರು ನಗರದ ಹೊರ ವಲಯ, ದೂರದಿಂದ ಬರುವ ರಾಜ್ಯದ ಇತರೆ ಗಾರ್ಮೆಂಟ್ ಕಾರ್ಮಿಕರಿಗೆ ಕೆಲವು ಕಾರ್ಖಾನೆಗಳ ಆಡಳಿತ ವರ್ಗದವರು ತಮ್ಮ ವತಿಯಿಂದಲೇ ಸಾರಿಗೆ ವ್ಯವಸ್ಥೆಯನ್ನು ಉಚಿತವಾಗಿ ಒದಗಿಸುತ್ತಿರುವುದು ಸಹ ಇಲಾಖೆಯ ಗಮನಕ್ಕೆ ಬಂದಿರುತ್ತದೆ.<br>3. ಎಲ್ಲಾ ಸಿದ್ದ ಉಡುಪು ಕಾರ್ಖಾನೆಗಳ ಮಹಿಳಾ ಕಾರ್ಮಿಕರಿಗೆ ಸಾರಿಗೆ ಸಂಸ್ಥೆಯ ಮುಖಾಂತರ ಸೌಲಭ್ಯವನ್ನು ರಿಯಾಯಿತಿ ದರದಲ್ಲಿ ಒದಗಿಸುವ ಕುರಿತಂತೆ ಸಾರಿಗೆ ಸಂಸ್ಥೆ ಮತ್ತು ಕಾರ್ಖಾನೆಗಳ ಆಡಳಿತ ವರ್ಗದವರೊಂದಿಗೆ ಅನೇಕ |

| | | | | |
|---|---|---|---|---|
| | | | | ಬಾರಿ ಸಭೆಗಳನ್ನು ನಡೆಸಲಾಗಿದ್ದು, ದರಗಳನ್ನು ವಿಧಿಸುವ ಬಗ್ಗೆ ಸಭೆಗಳು ವಿಫಲವಾದ್ದರಿಂದ ಮಹಿಳಾ ಕಾರ್ಮಿಕರಿಗೆ ಸಾರಿಗೆ ಸೌಲಭ್ಯ ಒದಗಿಸಲು ಸಾಧ್ಯವಾಗಿರುವುದಿಲ್ಲ.<br><br>ಮೇಲ್ಕಂಡಂತೆ ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿದ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |
| 6 | 6683<br>ಚು.ಗು.ಪ್ರ : 904<br>ಶ್ರೀ ಅಶ್ವಥ್ ನಾರಾಯಣ<br>ವಿ.ಪ.ನ.ದಿ : 30-03-2016 | ಮೆ: ಬಾಷ್ ಲಿಮಿಟೆಡ್ ಕಂಪನಿ, ಆಡುಗೋಡಿ ಇಲ್ಲಿ ಕೆಲಸ ಮಾಡುತ್ತಿದ್ದ 263 ಜನ ಕಾರ್ಮಿಕರನ್ನು ಏಕಾ-ಏಕಿ ಕೆಲಸದಿಂದ ತೆಗೆದು 210ಕ್ಕೂ ಹೆಚ್ಚು ದಿನಗಳಾಗಿದ್ದು, ಆ ಕಾರ್ಮಿಕರು ಬೀದಿ ಪಾಲಾಗಿರುವ ಬಗ್ಗೆ. | ಆದಷ್ಟು ಶೀಘ್ರವಾಗಿ ಆಡಳಿತ ವರ್ಗ ಕಾರ್ಮಿಕ ಪ್ರತಿನಿಧಿಗಳು ಹಾಗು ಅಧಿಕಾರಿಗಳನ್ನು ಒಳಗೊಂಡಂತೆ ಜಂಟಿ ಸಭೆ ನಡೆಸಿ, ವಿವಾದವನ್ನು ಇತ್ಯರ್ಥಪಡಿಸಲು ಮತ್ತೊಂದು ಪ್ರಯತ್ನ ಮಾಡಲಾಗುವುದು ಎಂದು ಮಾನ್ಯ ಕಾರ್ಮಿಕ ರಾಜ್ಯ ಸಚಿವರು ತಿಳಿಸಿದರು. | ದಿನಾಂಕ: 06.06.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ. ವಿವಾದದ ಬಗ್ಗೆ ಉಪ ಕಾರ್ಮಿಕ ಆಯುಕ್ತರು ಪ್ರಾದೇಶಿಕ 2, ಬೆಂಗಳೂರು ಇವರಲ್ಲಿ ಜಂಟಿ ಹಾಗು ರಾಜೀ ಸಂಧಾನ ಸಭೆ ನಡೆದು ದಿನಾಂಕ: 08.02.2017 ರಂದು ಉಭಯ ಪಕ್ಷದವರ ನಡುವೆ ಸರ್ವ ಸಮ್ಮತವಾದ ಒಪ್ಪಂದ ಏರ್ಪಟ್ಟಿರುತ್ತದೆ. ರಾಜೀ ಸಂಧಾನದಲ್ಲಿ ಏರ್ಪಟ್ಟ ಈ ಒಪ್ಪಂದದನ್ವಯ ಆಡಳಿತ ವರ್ಗದವರು ಪ್ರತಿ ಕಾರ್ಮಿಕನಿಗೆ ರೂ.14 ಲಕ್ಷ ಮೊತ್ತವನ್ನು ಪ್ಯಾಕೇಜ್ ರೂಪದಲ್ಲಿ ನೀಡಿದ್ದು, ಕಾರ್ಮಿಕರು ಕೆಲಸಕ್ಕೆ ರಾಜೀನಾಮೆ ನೀಡಿ ವಿವಿಧ ನ್ಯಾಯಾಲಯ/ ಪ್ರಾಧಿಕಾರಗಳಲ್ಲಿ ಬಾಕಿ ಇರುವ ಎಲ್ಲಾ ವಿವಾದಗಳು/ಪ್ರಕರಣಗಳಲ್ಲಿ ವಾಪಸ್ ಪಡೆಯಲು ಒಪ್ಪುವ ಷರತ್ತಿಗೆ ಒಳಪಟ್ಟಿರುತ್ತದೆ.<br><br>263 ಕಾರ್ಮಿಕರ ಪೈಕಿ, ಒಟ್ಟು 262 ಮಂದಿ ಕಾರ್ಮಿಕರು ಒಪ್ಪಂದದ ಷರತ್ತುಗಳನ್ನು ಒಪ್ಪಿ ಪರಿಹಾರದ ಮೊತ್ತವನ್ನು ಪಡೆದಿರುತ್ತಾರೆ. ಉಳಿದಂತೆ ಮೃತನಾದ ಒಬ್ಬ ಕಾರ್ಮಿಕ ಶ್ರೀ ನಾಗೇಂದ್ರ ಕುಮಾರ್ ಎಸ್.ಎಂ. ಇವರ ಪತ್ನಿ ಶ್ರೀಮತಿ ಆಶಾರಾಣಿ ಇವರು ಒಪ್ಪಂದದ ಷರತ್ತಿನಂತೆ ಪರಿಹಾರದ ಮೊತ್ತವನ್ನು ಪಡೆದಿರುತ್ತಾರೆ ಹಾಗೂ ಸಂಸ್ಥೆಯು, ಗುತ್ತಿಗೆದಾರರಾದ ಮೆ: ಶ್ರೀದೇವಿ ಹಾಸ್ಪಿಟಾಲಿಟಿ ಸರ್ವಿಸಸ್ ಪ್ರೈ. ಲಿಮಿಟೆಡ್ ಇವರ ಮೂಲಕ ಉದ್ಯೋಗವನ್ನು ಸಹ ಒದಗಿಸಿರುತ್ತಾರೆ. ತ್ರಿಪಕ್ಷೀಯ ಒಪ್ಪಂದದಂತೆ, ಪರಿಹಾರ ಪಡೆದ 262 ಕಾರ್ಮಿಕರ ಪೈಕಿ ಒಟ್ಟು 5 |

| | | | | |
|---|---|---|---|---|
| | | | | ಮಂದಿ ಕಾರ್ಮಿಕರು ಸಂಸ್ಥೆಯು ತಮ್ಮನ್ನು ವಿನಾಕರಣ ಕೆಲಸದಿಂದ ತೆಗೆದು ಹಾಕಿರುವುದಾಗಿ ಆರೋಪಿಸಿ, ಪುನ: ಸಂಸ್ಥೆಯ ವಿರುದ್ಧ ಪ್ರತ್ಯೇಕವಾಗಿ ಕೈಗಾರಿಕಾ ವಿವಾದವೆತ್ತಿದ್ದರು. ಇವರುಗಳು ಪರಿಹಾರ ಪಡೆದಿದ್ದರೂ ಸಹ ವಿವಾದ ಎತ್ತಿರುವ ಬಗ್ಗೆ ಆಡಳಿತವರ್ಗದವರು ತೀವ್ರ ಆಕ್ಷೇಪ ಮಾಡಿದ್ದರು. ವಿವಾದವನ್ನು ಇತ್ಯರ್ಥ ಪಡಿಸಲು ರಾಜೀ ಸಂಧಾನ ಪ್ರಯತ್ನ ನಡೆಸಲಾಯಿತು. ರಾಜೀ ಸಂಧಾನ ಪ್ರಯತ್ನಗಳು ವಿಫಲವಾಗಿ, ಉಭಯತ್ರರಲ್ಲಿ ಒಮ್ಮತವೇರ್ಪಡದ ಕಾರಣ ವಿವಾದವನ್ನು ನ್ಯಾಯ ನಿರ್ಣಯಕ್ಕೆ ಶಿಫಾರಸ್ಸು ಮಾಡಿ 3ನೇ ಅಪರ ಕಾರ್ಮಿಕ ನ್ಯಾಯಾಲಯ, ಬೆಂಗಳೂರು ಇಲ್ಲಿಗೆ ಸರ್ಕಾರವು ಕಳುಹಿಸಿರುತ್ತದೆ. ಪ್ರಕರಣಗಳು 3ನೇ ಅಪರ ಕಾರ್ಮಿಕ ನ್ಯಾಯನಿರ್ಣಯಕ್ಕಾಗಿ ಬಾಕಿ ಇದ್ದು, ನ್ಯಾಯಾಲಯವು ನೀಡುವ ಐತೀರ್ಪಿಗೆ ಒಳಪಟ್ಟಿರುತ್ತದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿದ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |
| 7 | 6685<br>ಚು.ರ.ಪ್ರ 312<br>ಶ್ರೀ ರಘುನಾಥರಾವ್ ಮಲ್ಕಾಪೂರೆ<br>ವಿಪನದಿ:23.11.2016 | ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯಲ್ಲಿ ನೋಂದಣಿ ಯಾಗಿರುವ ಕಾರ್ಮಿಕರಲ್ಲಿ ಮೃತ ಪಟ್ಟ ಕಾರ್ಮಿಕರಿಗೆ ಪರಿಹಾರ ನೀಡುವ ಬಗ್ಗೆ. | ಕೆಲಸ ವೇಳೆ ಮೃತಪಟ್ಟಿರುವ 90 ಮಂದಿ ಕಾರ್ಮಿಕರಲ್ಲಿ 69 ಕಾರ್ಮಿಕರ ಅವಲಂಬಿತರಿಗೆ ರೂ. 91,50,000/– ಗಳಷ್ಟು ಪರಿಹಾರ ವನ್ನು ಮಂಡಳಿಯಿಂದ ನೀಡಲಾಗಿ ರುತ್ತದೆ. ಪರಿಹಾರ ಪಾವತಿಸಲು ಬಾಕಿ ಇರುವ ಉಳಿದ 21 ಪ್ರಕರಣ ಗಳಲ್ಲಿ ಫಲಾನುಭವಿ ಗಳಿಂದ ಸರಿಯಾದ ದಾಖಲೆ ಗಳನ್ನು ಪಡೆದುಕೊಳ್ಳಲು ಈಗಾಗಲೇ ಕ್ರಮ ಕೈಗೊಳ್ಳಲಾಗಿದೆ. ಫಲಾನುಭವಿ ಗಳಿಂದ ಕೋರಿರುವ ದಾಖಲೆಗಳು ಬಂದ ಕೂಡಲೇ ಪರಿಶೀಲಿಸಿ ಪರಿಹಾರವನ್ನು ಪಾವತಿಸಲು ಕ್ರಮ | ದಿನಾಂಕ: 06.06.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ. ಕೆಲಸದ ವೇಳೆ ಮೃತಪಟ್ಟರುವ ಉಳಿದ 21 ಪ್ರಕರಣಗಳಲ್ಲಿ 21 ಫಲಾನುಭವಿಗಳ ಅವಲಂಬಿತರಿಗೆ ರೂ.30,00,000/– ಮೊತ್ತದ ಪರಿಹಾರವನ್ನು ಈಗಾಗಲೇ ವಿತರಿಸಲಾಗಿರುತ್ತದೆಯೆಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿದ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |

| | | | | |
|---|---|---|---|---|
| | | | ಕೈಗೊಳ್ಳಲಾಗುವುದೆಂದು ಮಾನ್ಯ ಕಾರ್ಮಿಕ ಸಚಿವರು ತಿಳಿಸಿದರು. | |
| 8 | 6688<br>ಚು.ರ.ಪ್ರ 369<br>ಶ್ರೀ ಎನ್.ಎಸ್. ಬೋಸ್‌ರಾಜು<br>ವಿಪನದಿ:23.11.2016 | ರಾಯಚೂರು ನಗರದಲ್ಲಿ ಶ್ರಮಶಕ್ತಿ ಭವನ ನಿರ್ಮಾಣದ ಬಗ್ಗೆ . | ರಾಯಚೂರು ನಗರದಲ್ಲಿ ಶ್ರಮಶಕ್ತಿ ಭವನ ಎಂಬ ಹೆಸರಿನ ಕಟ್ಟಡ ನಿರ್ಮಾಣ ಮಾಡುವ ಪ್ರಸ್ತಾವನೆ ಕಾರ್ಮಿಕ ಇಲಾಖೆಯಲ್ಲಿ ಇರುವುದಿಲ್ಲ.<br><br>ಆದರೆ ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿ ಬೆಂಗಳೂರು ಇದರ ವತಿಯಿಂದ ರೂ. 5.00 ಕೋಟಿ (ರೂಪಾಯಿ ಐದು ಕೋಟಿ) ವೆಚ್ಚದಲ್ಲಿ ರಾಯಚೂರಿನ ನೀಲಕಂಠೇಶ್ವರ ನಗರದಲ್ಲಿರುವ 23 ಗುಂಟೆ ನಿವೇಶನದಲ್ಲಿ ಸಮುದಾಯ ಭವನ ಮತ್ತು ಕಚೇರಿ ಸಂಕೀರ್ಣ ನಿರ್ಮಿಸಲು<br>ದಿನಾಂಕ 29.2.16 ರಂದು ನಡೆದ ಸದರಿ ಮಂಡಳಿಯ 84ನೇ ಸಭೆಯಲ್ಲಿ ತೀರ್ಮಾನಿಸ ಲಾಗಿರುತ್ತದೆ. ಈ ವಿಷಯವು ಪರಿಶೀಲನೆ ಯಲ್ಲಿರುತ್ತದೆಯೆಂದು ಮಾನ್ಯ ಕಾರ್ಮಿಕ ಸಚಿವರು ತಿಳಿಸಿದರು. | ದಿನಾಂಕ: 06.06.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ. ರಾಯಚೂರು ನಗರದಲ್ಲಿ ಶ್ರಮಶಕ್ತಿ ಭವನ ಎಂಬ ಹೆಸರಿನ ಕಟ್ಟಡ ನಿರ್ಮಾಣ ಮಾಡುವ ಪ್ರಸ್ತಾವನೆ ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿಯ ಮುಂದೆ ಇರುವುದಿಲ್ಲ.<br><br>ಆದರೆ ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿ ಬೆಂಗಳೂರು ಇದರ ವತಿಯಿಂದ ರೂ.5.00 ಕೋಟಿ (ರೂಪಾಯಿ ಐದು ಕೋಟಿ) ವೆಚ್ಚದಲ್ಲಿ ರಾಯಚೂರಿನ ನೀಲಕಂಠೇಶ್ವರ ನಗರದಲ್ಲಿರುವ 23 ಗುಂಟೆ ನಿವೇಶನದಲ್ಲಿ ವಾಣಿಜ್ಯ ಸಂಕೀರ್ಣ ಕಟ್ಟಡವನ್ನು ನಿರ್ಮಿಸುವಂತೆ ದಿನಾಂಕ: 27.04.2017 ರಂದು ನಡೆದ 86ನೇ ಮಂಡಳಿಯ ಸಭೆಯಲ್ಲಿ ನಿರ್ಣಯಿಸಲಾಗಿದೆ. ಇದರನುಸಾರ ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ ವಿಭಾಗ, ರಾಯಚೂರು ಜಿಲ್ಲೆ ರವರಿಗೆ ನೀಲಿನಕ್ಷೆ ಹಾಗೂ ದರಪಟ್ಟಿ ನೀಡುವಂತೆ ದಿನಾಂಕ: 14.09.2017 ಮತ್ತು ದಿನಾಂಕ: 06.06.2018ರ ಪತ್ರದ ಮುಖೇನ ಕೋರಲಾಗಿತ್ತು.<br><br>ಇದರನುಸಾರ ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್ ರವರು ದಿನಾಂಕ: 27.05.2019ರ ಪತ್ರದಲ್ಲಿ ಈ ಕುರಿತಂತೆ ನಿರ್ದಿಷ್ಟವಾದ ಅಳತೆ ಮತ್ತು ನೀಲಿ ನಕ್ಷೆಯನ್ನು ಈಗಾಗಲೇ ಬೇರೆ ಜಿಲ್ಲೆಗಳಲ್ಲಿ ನಿರ್ಮಿಸಿರುವ ಬಗ್ಗೆ ಯಾವುದಾದರೂ ಮಾಹಿತಿ ತಮ್ಮಲ್ಲಿ ಲಭ್ಯವಿದ್ದಲ್ಲಿ ಅದನ್ನು ಕಳುಹಿಸಿಕೊಡುವಂತೆ ತಿಳಿಸಿರುತ್ತಾರೆ. ಅದರಂತೆ, ಕ್ರಮವಹಿಸಲಾಗುತ್ತಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿದ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |

**ಸಮಾಜ ಕಲ್ಯಾಣ ಇಲಾಖೆ**

| ಕ್ರಮ ಸಂಖ್ಯೆ | ಆಶ್ವಾಸನೆ ಸಂಖ್ಯೆ ಆಧಾರ ಮತ್ತು ದಿನಾಂಕ | ವಿಷಯ | ಆಶ್ವಾಸನೆ | ತಗೆದುಕೊಂಡ ಕ್ರಮ |
|---|---|---|---|---|
| 1 | 2146<br>ಚು.ಗು.ಪ್ರ: 741<br>ಶ್ರೀಮತಿ ವಿಮಲಾಗೌಡ<br>ವಿಪನದಿ: 11.07.2005 | ಸಮಾಜ ಕಲ್ಯಾಣ ಇಲಾಖೆಯಲ್ಲಿ ಎಸ್‌ಸಿ:ಎಸ್‌ಟಿ ವಿದ್ಯಾರ್ಥಿಗಳಿಗೆ ಕಂಪ್ಯೂಟರ್ ತರಬೇತಿ ಹೆಸರಿನಲ್ಲಿ ವ್ಯಾಪಕ ಭ್ರಷ್ಟಾಚಾರ/ಅವ್ಯವಹಾರದಲ್ಲಿ ಭಾಗಿಯಾಗಿರುವ ಅಧಿಕಾರಿ ಮತ್ತು ಕಂಪನಿಗಳ ಬಗ್ಗೆ. | ಸಮಾಜ ಕಲ್ಯಾಣ ಇಲಾಖೆಯಲ್ಲಿ ಪರಿಶಿಷ್ಠ ಜಾತಿ ಅಭ್ಯರ್ಥಿಗಳಿಗೆ ಕಂಪ್ಯೂಟರ್ ತರಬೇತಿ ಕಾರ್ಯಕ್ರಮದಡಿ ನೀಡಿರುವ ತರಬೇತಿ ಬಗ್ಗೆ ಮಾನ್ಯ ಲೋಕಾಯುಕ್ತರಿಂದ ವರದಿ ಬಂದಿದ್ದು ಸರ್ಕಾರದ ಪರಿಶೀಲನೆಯಲ್ಲಿದೆ ಎಂದು ಮಾನ್ಯ ಸಮಾಜ ಕಲ್ಯಾಣ ಸಚಿವರು ತಿಳಿಸಿದರು. | ದಿನಾಂಕ: 24.09.2018ರಂದು ನಡೆದ ಸಮಿತಿಯ ಸಭೆಯಲ್ಲಿ ಚರ್ಚಿಸಿದಾಗ, ಈ ವಿಷಯಕ್ಕೆ ಸಂಬಂಧಿಸಿದಂತೆ ಅಂದಿನ ಆಯುಕ್ತರಾದ ಶ್ರೀ ಕೆ.ಶಿವರಾಂ (ನಿವೃತ್ತ) ಐ.ಎ.ಎಸ್., ಅಧಿಕಾರಿ ಇವರ ವಿರುದ್ಧ ಮತ್ತು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯು ಇಲಾಖಾ ವಿಚಾರಣೆ ಜರುಗಿಸಿ, ವಿಚಾರಣೆಯಲ್ಲಿ ಆರೋಪಗಳು ಸಾಬೀತಾಗದ ಕಾರಣ ಸರ್ಕಾರದ ಆದೇಶ ಸಂಖ್ಯೆ: ಡಿಪಿಎಆರ್ 111: ಎಸ್‌ಎಎಸ್ 2005, ದಿನಾಂಕ: 21–01–2010 ರಲ್ಲಿ ಈ ಅಧಿಕಾರಿಯನ್ನು ದೋಷಮುಕ್ತರನ್ನಾಗಿ ಮಾಡಿ ಆದೇಶ ಹೊರಡಿಸಲಾಗಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿದ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |
| 2 | 2846<br>ನಿಯಮ 330<br>ಡಾ॥ ಚಂದ್ರಶೇಖರ್ ಬಿ. ಕಂಬಾರ<br>ವಿಪನದಿ: 25.07.2007 | ಕಮ್ಮಾರ ಜನಾಂಗವನ್ನು ಪರಿಶಿಷ್ಠ ವರ್ಗಕ್ಕೆ ಸೇರಿಸುವ ಬಗ್ಗೆ | ಅದರ ಬಗ್ಗೆ ಸಂಬಂಧಪಟ್ಟ ಸಚಿವರ ಜೊತೆಗೆ ಮಾತನಾಡಿ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. 1978ರಲ್ಲಿ Area Restrictional Removal Act ಈ ಕಾಯ್ದೆಗೆ ಏನು ತಿದ್ದುಪಡಿಯಾಗಿದೆ ಅದನ್ನು ತೆಗೆದು, ಆ ರೀತಿ ಮಾಡಿಕೊಳ್ಳುವುದಕ್ಕೆ ಅವಕಾಶ | ದಿನಾಂಕ: 24.09.2018ರಂದು ನಡೆದ ಸಮಿತಿಯ ಸಭೆಯಲ್ಲಿ ಚರ್ಚಿಸಿದಾಗ, ಕರ್ನಾಟಕ ರಾಜ್ಯದಲ್ಲಿ ಕಮ್ಮಾರ ಜಾತಿಯನ್ನು ದಕ್ಷಿಣ ಕನ್ನಡ ಜಿಲ್ಲೆ ಮತ್ತು ಚಾಮರಾಜನಗರ ಜಿಲ್ಲೆಯ ಕೊಳ್ಳೇಗಾಲ ತಾಲ್ಲೂಕಿಗೆ ಮಾತ್ರ ಅನ್ವಯವಾಗುವಂತೆ ಪರಿಶಿಷ್ಟ ಪಂಗಡದ ಪಟ್ಟಿಯಲ್ಲಿ ಕ್ರಮ ಸಂಖ್ಯೆ: 17ರಲ್ಲಿ ಸೇರ್ಪಡೆಯಾಗಿರುತ್ತದೆ.<br><br>ಈ ಪ್ರಾದೇಶಿಕ ನಿರ್ಬಂಧವನ್ನು ತೆಗೆದುಹಾಕುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ. |

| | | | | |
|---|---|---|---|---|
| | | | ವಿದ್ದರೆ ಸೂಚನೆ ನೀಡುತ್ತೇನೆಂದು ಸಮಾಜ ಕಲ್ಯಾಣ ಸಚಿವರ ಪರವಾಗಿ ಮಾನ್ಯ ತೋಟಗಾರಿಕೆ ಸಚಿವರು ತಿಳಿಸಿದರು. | |
| 3 | 3332<br>ಗಮನ ಸೆಳೆಯುವ ಸೂಚನೆ<br>ಶ್ರೀ ವಿ.ಎಸ್. ಉಗ್ರಪ್ಪ<br>ಶ್ರೀ ಎಸ್.ಎಂ. ಆನಂದ್<br>ಶ್ರೀ ವಿ.ಆರ್. ಸುದರ್ಶನ್<br>ಶ್ರೀ ನಸೀರ್ ಅಹಮದ್<br>ಶ್ರೀ ವೀರಕುಮಾರ್ ಅಪ್ಪಾಸೋ ಪಾಟೀಲ್<br>ವಿಪನದಿ: 29.07.2009 | ಹಾಲಕ್ಕಿ ಒಕ್ಕಲಿಗ, ಕುಣಬಿ, ಗೌಳಿ, ತಳವಾರ ಹಾಗೂ ಪರಿವಾರ ಜಾತಿಗಳನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸುವ ಬಗ್ಗೆ | ಉತ್ತರ ಕನ್ನಡ ಜಿಲ್ಲೆಯಲ್ಲಿ ಕಂಡು ಬರುವ ಹಾಲಕ್ಕಿ ಒಕ್ಕಲು ಜನಾಂಗವನ್ನು ಪರಿಶಿಷ್ಟ ಪಂಗಡದ ಪಟ್ಟಿಗೆ ಸೇರಿಸಲು ಆ ಜನಾಂಗದ ಕುಲಶಾಸ್ತ್ರೀಯ ಅಧ್ಯಯನ ನಡೆಸುವ ಕಾರ್ಯವನ್ನು ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ ಇವರಿಗೆ ವಹಿಸಲಾಗಿದ್ದು ಆ ವಿಶ್ವವಿದ್ಯಾನಿಲಯ ಸಲ್ಲಿಸಿರುವ ವರದಿಯು ಸರ್ಕಾರದ ಪರಿಶೀಲನೆಯಲ್ಲಿದೆ.<br>ಕುಣಬಿ/ಕುಡಬಿ ಜನಾಂಗದ ಕುಲಶಾಸ್ತ್ರೀಯ ಅಧ್ಯಯನ ನಡೆಸುವ ಕಾರ್ಯವನ್ನು ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ ಇವರಿಗೆ ವಹಿಸಲಾಗಿದ್ದು, ಅವರಿಂದ ವರದಿ ಸ್ವೀಕರಿಸಿದ ನಂತರ ಮುಂದಿನ ಕ್ರಮ ಜರುಗಿಸ ಲಾಗುವುದು ಎಂದು ಮಾನ್ಯ ಸಭಾನಾಯಕರು ತಿಳಿಸಿದರು.<br><br>ಕುಡುಬಿ ಜನಾಂಗವನ್ನು ಪರಿಶಿಷ್ಟ ಪಂಗಡದ ಪಟ್ಟಿಗೆ ಸೇರಿಸಬೇಕೆಂಬ | **ಹಾಲಕ್ಕಿ ಒಕ್ಕಲು** ಸಮುದಾಯವನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸುವಂತೆ ಸರ್ಕಾರದ ಪತ್ರ ಸಂಖ್ಯೆ: ಸಕಇ 27 ಎಸ್ಎಡಿ 2007, ದಿ: 27.102009ರಂದು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ.<br><br>**ಕುಣಬಿ** ಸಮುದಾಯವನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸುವಂತೆ ಸರ್ಕಾರದ ಪತ್ರ ಸಂಖ್ಯೆ: ಸಕಇ 185 ಎಸ್ಎಡಿ 2012, ದಿ: 10.10.2017ರಂದು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ.<br><br>**ಗೌಳಿ** ಸರ್ಕಾರದ ಆದೇಶ ಸಂಖ್ಯೆ: ಸಕಇ 45 ಎಸ್ಎಡಿ 2012, ದಿ: 14.08.2013ರಲ್ಲಿ ಗೌಳಿ, ಗೊಲ್ಲ ಮತ್ತು ದನಗರು ಜನಾಂಗದವರ ಕುಲಶಾಸ್ತ್ರೀಯ ಅಧ್ಯಯನ ನಡೆಸಲು ಸರ್ಕಾರದ ಮಂಜೂರಾತಿ ನೀಡಲಾಗಿದ್ದು, ಸದರಿ ಕುಲಶಾಸ್ತ್ರೀಯ ಅಧ್ಯಯನದ ವರದಿಯನ್ನು ನಿರೀಕ್ಷಿಸಲಾಗಿದೆ.<br><br>**ಪರಿವಾರ ಮತ್ತು ತಳವಾರ:** ಪರಿವಾರ ಮತ್ತು ತಳವಾರ ಜಾತಿಗಳನ್ನು ಪರಿಶಿಷ್ಟ ಪಂಗಡದ ನಾಯಕ ಜನಾಂಗದ ಪರ್ಯಾಯ ಪದಗಳೆಂದು ಸೇರಿಸುವ ಕುರಿತು ಸರ್ಕಾರದ ಪತ್ರ ಸಂಖ್ಯೆ: 25.02.2014ರಂದು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ. |

| | | | | |
|---|---|---|---|---|
| 4 | 3504<br>ಚು.ರ.ಪ್ರ: 78<br>ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ<br>ವಿಪನದಿ: 08.03.2010 | ಕುಡುಬಿ ಜನಾಂಗದವರನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸುವ ಪ್ರಕ್ರಿಯೆ ಕುರಿತು | ಕೋರಿಕೆ ಹಿನ್ನೆಲೆಯಲ್ಲಿ ಈ ಸಮುದಾಯದ ಕುಲಶಾಸ್ತ್ರೀಯ ಅಧ್ಯಯನ ನಡೆಸಲು ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಇವರಿಗೆ ಸರ್ಕಾರದ ಆದೇಶ ಸಂ:ಸಕಇ/113/,ಎಸ್‌ಎಡಿ/2007, ದಿನಾಂಕ:03.03.2009ರಲ್ಲಿ ಕಾರ್ಯಾದೇಶ ನೀಡಲಾಗಿದೆ. ಸದರಿಯವರಿಂದ ಕುಲಶಾಸ್ತ್ರೀಯ ಅಧ್ಯಯನ ವರದಿ ಬಂದ ನಂತರ ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂದು ಮಾನ್ಯ ಸಮಾಜ ಕಲ್ಯಾಣ ಸಚಿವರು ತಿಳಿಸಿದರು. | ಕುಡುಬಿ ಜನಾಂಗವನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸುವ ಬಗ್ಗ ಕುಲಶಾಸ್ತ್ರೀಯ ಅಧ್ಯಯನ ಮಾಡಿ ವರದಿ ಸಲ್ಲಿಸುವಂತೆ ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆ, ಮೈಸೂರು ಇವರನ್ನು ಕೋರಲಾಗಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿದ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |
| 5 | 2853<br>ಚು.ಗು.ಪ್ರ: 349<br>ಶ್ರೀ ಎಸ್. ಚಿಕ್ಕಮಾದು<br>ವಿಪನದಿ: 16.07.2007 | 2006–07ನೇ ಸಾಲಿನಲ್ಲಿ ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ ಕೊರೆಸಿರುವ 10,956 ಕೊಳವೆ ಬಾವಿಗಳ ಪೈಕಿ ವಿದ್ಯುದ್ದೀಕರಣ ಮಾಡಲಾದ ಕೊಳವೆ ಬಾವಿಗಳ ಬಗ್ಗೆ. | ಗಂಗಾ ಕಲ್ಯಾಣ ಯೋಜನೆ ಪ್ರಾರಂಭವಾದ ಮೇಲೆ ಇಡೀ ರಾಜ್ಯದಲ್ಲಿ ಇದುವರೆಗೆ ಒಟ್ಟು 52042 ಕೊಳವೆ ಬಾವಿಗಳನ್ನು ಕೊರೆಯಲಾಗಿದೆ. 44979 ಕೊಳವೆ ಬಾವಿಗಳಿಗೆ ವಿದ್ಯುದೀಕರಣವಾಗಿದೆ. ಈ ವರ್ಷದ ಗುರಿಯನ್ನು ಸಹ ಒಳಗೊಂಡಂತೆ ಇನ್ನು ಸುಮಾರು 15 ಸಾವಿರಕ್ಕೂ ಹೆಚ್ಚು ಕೊಳವೆ ಬಾವಿಗಳಿಗೆ ವಿದ್ಯುದೀಕರಣ ವಾಗಬೇಕಾಗಿದೆ. ಅದಕೋಸ್ಕರ | ದಿನಾಂಕ:24.09.2018ರಂದು ನಡೆದ ಸಮಿತಿಯ ಸಭೆಯಲ್ಲಿ ಚರ್ಚಿಸಿದಾಗ,<br><br><u>ಡಾ: ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ:–</u><br><br>ಗಂಗಾ ಕಲ್ಯಾಣ ಯೋಜನೆಯಡಿ 2006–07ನೇ ಸಾಲಿನಲ್ಲಿ ಕೊರೆಸಿದ 10956 ಕೊಳವೆ ಬಾವಿಗಳಿಗೆ ಪಂಪು ಮೋಟಾರು ಸರಬರಾಜು ಮಾಡಿ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದೆ.<br><br><u>ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ:–</u> |

<table>
<tr><td></td><td></td><td></td><td>ಈಗಾಗಲೇ ಇಂಧನ ಇಲಾಖೆ ಯೊಡನೆ ಚರ್ಚೆ ಮಾಡಿದ್ದು, ಅತೀ ಶೀಘ್ರದಲ್ಲಿಯೇ ವಿದ್ಯುದೀಕರಣವನ್ನು ಮಾಡಿ ಮುಗಿಸುವುದಾಗಿ ಮಾನ್ಯ ಸಮಾಜ ಕಲ್ಯಾಣ ಸಚಿವರು ತಿಳಿಸಿದರು.</td><td>2006–07ನೇ ಸಾಲಿನಲ್ಲಿ ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದಿಂದ ಒಟ್ಟು 4058 ಕೊಳವೆ ಬಾವಿಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿದ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು.</td></tr>
<tr><td>6</td><td>2848<br>ಚು.ಗು.ಪ್ರ: 665<br>ಶ್ರೀ ಶಶಿಲ್ ಜಿ. ನಮೋಶಿ<br>ವಿಪನದಿ: 23.07.2007</td><td>ಪರಿಶಿಷ್ಠ ಜಾತಿ: ಪರಿಶಿಷ್ಠ ವರ್ಗದ ವಿದ್ಯಾರ್ಥಿ ನಿಲಯಗಳಲ್ಲಿ ಮೂಲಭೂತ ಸೌಲಭ್ಯಗಳನ್ನು ಅಭಿವೃದ್ಧಿಪಡಿಸುವ ಬಗ್ಗೆ</td><td>ಇನ್ನು 150 ಹಾಸ್ಟೆಲುಗಳಿಗೆ ಕಟ್ಟಡ ಕಟ್ಟುವುದಕ್ಕೆ ಹಣಕಾಸು ಇಲಾಖೆಯ ಅನುಮತಿ ಕೋರಿದ್ದು, ಅನುಮೋದನೆ ಬಂದ ತಕ್ಷಣ ಪ್ರಾರಂಭ ಮಾಡುತ್ತೇವೆ. ಆದಷ್ಟು ಶೀಘ್ರದಲ್ಲಿ ಸರ್ಕಾರ ಕ್ರಮ ತೆಗೆದುಕೊಳ್ಳುವುದೆಂದು ಮಾನ್ಯ ಸಮಾಜ ಕಲ್ಯಾಣ ಸಚಿವರು ತಿಳಿಸಿದರು.</td><td>ದಿನಾಂಕ: 24.09.2018ರಂದು ನಡೆದ ಸಮಿತಿಯ ಸಭೆಯಲ್ಲಿ ಚರ್ಚಿಸಿದಾಗ,<br>2007–08ನೇ ಸಾಲಿನಿಂದ 2011–12ನೇ ಸಾಲಿನವರೆಗೆ ಕೆಳಕಂಡಂತೆ ವಿದ್ಯಾರ್ಥಿ ನಿಲಯಗಳ ಕಟ್ಟಡಗಳನ್ನು ನಿರ್ಮಿಸಲಾಗಿದೆ.<br><table><tr><th>ವರ್ಷ</th><th>ನಿರ್ಮಾಣ ಕೈಗೊಂಡ ಕಟ್ಟಡಗಳ</th><th>ಬಿಡುಗಡೆ ಯಾದ ಮೊತ್ತ</th><th>ನಿರ್ಮಾಣ ಏಜೆನ್ಸಿಗಳು</th></tr><tr><td>07–08</td><td>31</td><td>1949.86</td><td rowspan="5">KRIES, KRIDL, KARNIK</td></tr><tr><td>08–09</td><td>53</td><td>2191.00</td></tr><tr><td>09–10</td><td>106</td><td>6099.00</td></tr><tr><td>10–11</td><td>65</td><td>8100.00</td></tr><tr><td>11–12</td><td>71</td><td>3993.95</td></tr></table><br>ವಿದ್ಯಾರ್ಥಿ ನಿಲಯಗಳ ಕಟ್ಟಡ ನಿರ್ಮಾಣಕ್ಕಾಗಿ ನಿವೇಶನ ಲಭ್ಯತೆಯನ್ನು ಅನುಸರಿಸಿ ಸ್ವಂತ ಕಟ್ಟಡಗಳನ್ನು ನಿರ್ಮಿಸಲಾಗುತ್ತಿದೆ.</td></tr>
</table>

<table>
<tr>
<td></td>
<td></td>
<td></td>
<td></td>
<td>
2012–13 ಮತ್ತು 2013–14ನೇ ಸಾಲಿನಲ್ಲಿ ವಿದ್ಯಾರ್ಥಿ ನಿಲಯಗಳಿಗೆ ಸ್ವಂತ ಕಟ್ಟಡಗಳನ್ನು ನಿರ್ಮಾಣ ಮಾಡಲು ಬಿಡುಗಡೆ ಮಾಡಲಾಗಿರುವ ಅನುದಾನದ ವಿವರ ಈ ಕೆಳಕಂಡಂತಿರುತ್ತದೆ.
<table>
<tr><th>ವರ್ಷ</th><th>ನಿರ್ಮಾಣ ಕೈಗೊಂಡ ಕಟ್ಟಡಗಳ</th><th>ಬಿಡುಗಡೆ ಯಾದ ಮೊತ್ತ</th><th>ನಿರ್ಮಾಣ ಏಜೆನ್ಸಿಗಳು</th></tr>
<tr><td>12–13</td><td>62</td><td>11380.807</td><td rowspan="6">KRIES,<br>KRIDL,<br>KARNIK</td></tr>
<tr><td>13–14</td><td>25</td><td>4852.17</td></tr>
<tr><td>14–15</td><td>11</td><td>3359.28</td></tr>
<tr><td>15–16</td><td>89</td><td>16668.59</td></tr>
<tr><td>16–17</td><td>54</td><td>6540.00</td></tr>
<tr><td>17–18</td><td>40</td><td>15908.20</td></tr>
</table>
<u>ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ :</u>
</td>
</tr>
<tr>
<td>7</td>
<td>2859<br>ಚು.ಗು.ಪ್ರ: 30<br>ಕು. ಶೋಭಾ ಕರಂದ್ಲಾಜೆ<br>ವಿಪನದಿ: 01.08.2007</td>
<td>ರಾಜ್ಯದ ಮೂಲಭೂತ ಸೌಲಭ್ಯ ಕೊರತೆಯಿರುವ ಹಾಸ್ಟೆಲ್‌ಗಳ ಅಭಿವೃದ್ಧಿ ಬಗ್ಗೆ</td>
<td>ಹಾಸ್ಟೆಲ್‌ಗಳ ಅಭಿವೃದ್ಧಿಗೆ ಜಿಲ್ಲಾ ಮತ್ತು ರಾಜ್ಯ ವಲಯದಲ್ಲಿ ಲಭ್ಯವಿರುವ ಅನುದಾನವನ್ನು ಅನುಸರಿಸಿ ವಿದ್ಯಾರ್ಥಿ ನಿಲಯಗಳಿಗೆ ಮೂಲಭೂತ ಸೌಲಭ್ಯಗಳಾದ ವಿದ್ಯಾರ್ಥಿನಿಲಯಗಳ ರಿಪೇರಿ, ಸುಣ್ಣಬಣ್ಣ, ಶೌಚಾಲಯ ರಿಪೇರಿ,</td>
<td>ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖಾ ವತಿಯಿಂದ 255 ಸರ್ಕಾರಿ ಮೆಟ್ರಿಕ್ ಪೂರ್ವ ನಂತರದ ವಿದ್ಯಾರ್ಥಿ ನಿಲಯಗಳು ಕಾರ್ಯನಿರ್ವಹಿಸುತ್ತಿದ್ದು, ಇದರಲ್ಲಿ 149 ವಿದ್ಯಾರ್ಥಿ ನಿಲಯಗಳು ಸ್ವಂತ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿವೆ. ಉಳಿದ 106 ವಿದ್ಯಾರ್ಥಿ ನಿಲಯಗಳಲ್ಲಿ 48 ವಿದ್ಯಾರ್ಥಿನಿಲಯಗಳಿಗೆ ಸ್ವಂತ ಕಟ್ಟಡ ಕಾಮಗಾರಿ ಪ್ರಗತಿಯಲ್ಲಿದೆ, 5 ವಿದ್ಯಾರ್ಥಿ ನಿಲಯಗಳಿಗೆ ನಿವೇಶನ ಲಭ್ಯವಿದೆ. ಉಳಿದ 53 ವಿದ್ಯಾರ್ಥಿ ನಿಲಯಗಳಿಗೆ ನಿವೇಶನವನ್ನು ಪಡೆಯಬೇಕಾಗಿದೆ.</td>
</tr>
</table>

| | | | | |
|---|---|---|---|---|
| | | | ಕಾಂಪೌಂಡ್ ಗೋಡೆ ನಿರ್ಮಾಣ, ನೀರಿನ ಸೌಲಭ್ಯ, ಸೋಲಾರ್ ವಾಟರ್ ಹೀಟರ್, ಸೇಪ್ಟಿ ಟ್ಯಾಂಕ್ ನಿರ್ಮಾಣ, ಕೊಠಡಿಗಳಲ್ಲಿ ವಾರ್ಡ್‌ರೋಬ್ ಮತ್ತು ಸೆಲ್ಫ್‌ಗಳ ನಿರ್ಮಾಣ ಇತ್ಯಾದಿಗಳನ್ನು ಹಂತ ಹಂತವಾಗಿ ಕೈಗೊಳ್ಳಲಾಗುತ್ತಿದೆ ಎಂದು ಮಾನ್ಯ ಸಮಾಜ ಕಲ್ಯಾಣ ಸಚಿವರು ತಿಳಿಸಿದರು. | **<u>ಸಮಾಜ ಕಲ್ಯಾಣ ಇಲಾಖೆ :-</u>**<br><br>ಸಮಾಜ ಕಲ್ಯಾಣ ಇಲಾಖೆಯ ವ್ಯಾಪ್ತಿಯಲ್ಲಿರುವ ಹಾಸ್ಟೆಲ್‌ಗಳಿಗೆ ಕೆಳಕಂಡಂತೆ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗಿದೆ.<br><br>1. 2007-08ನೇ ಸಾಲಿನಲ್ಲಿ ರೂ. 806.80 ಲಕ್ಷಗಳ ವೆಚ್ಚದಲ್ಲಿ 292 ವಿದ್ಯಾರ್ಥಿ ನಿಲಯಗಳನ್ನು ದುರಸ್ಥಿಪಡಿಸಲಾಗಿದೆ.<br><br>2. 2008-09ನೇ ಸಾಲಿನಲ್ಲಿ ಪರಿಶಿಷ್ಟ ಜಾತಿ ಉಪಯೋಜನೆಯಡಿ ರೂ. 10.00 ಕೋಟಿ ವೆಚ್ಚದಲ್ಲಿ ರೂ. 135 ವಿದ್ಯಾರ್ಥಿ ನಿಲಯಗಳ ಕಟ್ಟಡಗಳ ದುರಸ್ತಿ/ನವೀಕರಣ ಮಾಡಲಾಗಿದೆ.<br><br>3. 2009-10ನೇ ಸಾಲಿನಲ್ಲಿ ರೂ.5.00 ಕೋಟಿಗಳಲ್ಲಿ 101 ವಿದ್ಯಾರ್ಥಿ ನಿಲಯಗಳ ದುರಸ್ತಿ/ನವೀಕರಣ ಮಾಡಲಾಗಿದೆ.<br><br>4. 2010-11ನೇ ಸಾಲಿನಲ್ಲಿ ರೂ.51.00 ಕೋಟಿಗಳನ್ನು 438 ಕಟ್ಟಡಗಳ ದುರಸ್ತಿ, ನವೀಕರಣ ಹಾಗೂ ಹೆಚ್ಚುವರಿ ಕಾಮಗಾರಿಗಳಿಗೆ ಬಿಡುಗಡೆ ಮಾಡಲಾಗಿದೆ.<br><br>5. 2012-13ನೇ ಸಾಲಿನಲ್ಲಿ ರೂ.60.00 ಕೋಟಿಗಳಲ್ಲಿ ಪ್ರತಿ ಜಿಲ್ಲೆಗೆ ರೂ.2.00 ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ.<br><br>6. 2013-14ನೇ ಸಾಲಿನಲ್ಲಿ ರೂ. 7650.319 ಲಕ್ಷಗಳ ವೆಚ್ಚದಲ್ಲಿ 270 ಸರ್ಕಾರಿ ವಿದ್ಯಾರ್ಥಿ ನಿಲಯಗಳಲ್ಲಿ ಹೆಚ್ಚುವರಿಯಾಗಿ 686 ವಾಸದ ಕೊಠಡಿಗಳು, 873 |

| | | | | |
|---|---|---|---|---|
| | | | | ಶೌಚಾಲಯಗಳು ಹಾಗೂ 883 ಸ್ನಾನದ ಗೃಹಗಳು ನಿರ್ಮಿಸಲಾಗಿದೆ.<br><br>7. 2014–15 ರಿಂದ 2017–18ನೇ ಸಾಲಿನವರೆಗೆ ದುರಸ್ಥಿ ಉನ್ನತೀಕರಣ ಕಾಮಗಾರಿಗಳನ್ನು ಕೈಗೊಳ್ಳಲು ಈ ಕೆಳಕಂಡಂತೆ ಅನುದಾನವನು ಬಿಡುಗಡೆ ಮಾಡಿದೆ. |

(ರೂ.ಲಕ್ಷಗಳಲ್ಲಿ)

| ವರ್ಷ | ಬಿಡುಗಡೆ/ ಮಂಜೂರು ಮಾಡಿದ ಮೊತ್ತ | ವಿ.ನಿ/ ಕಾಮಗಾರಿಗಳ ಸಂಖ್ಯೆ |
|---|---|---|
| 2014–15 | 14300.00 | 289 |
| 2015–16 | 10000.00 | 450 |
| 2016–17 | 9592.00 | 391 |
| 2017–18 | 13459.51 | 411 |

8. ಇದಲ್ಲದೇ ರೂ.2180.65 ಲಕ್ಷಗಳ ವೆಚ್ಚದಲ್ಲಿ 113 ಸರ್ಕಾರಿ ವಿದ್ಯಾರ್ಥಿ ನಿಲಯಗಳ ಕಟ್ಟಡಗಳ ದುರಸ್ತಿ ಹಾಗೂ ರೂ.2516.49 ಲಕ್ಷಗಳ ವೆಚ್ಚದಲ್ಲಿ 35 ಸರ್ಕಾರಿ ವಿದ್ಯಾರ್ಥಿ ನಿಲಯಗಳಲ್ಲಿ ಹೆಚ್ಚುವರಿ ಕಟ್ಟಡಗಳನ್ನು ನಿರ್ಮಾಣ ಮಾಡಲು ಕ್ರಮವಹಿಸಲಾಗಿದೆ.

9. ಒಟ್ಟಾರೆ ರೂ.12347.46 ಲಕ್ಷಗಳ ವೆಚ್ಚದಲ್ಲಿ ಇಲಾಖೆಯ ಸರ್ಕಾರಿ ವಿದ್ಯಾರ್ಥಿ ನಿಲಯಗಳ ಕಟ್ಟಡಗಳಲ್ಲಿ ಅಗತ್ಯ ಮೂಲಭೂತ ಸೌಲಭ್ಯಗಳನ್ನು ಒದಗಿಸಲು ಕ್ರಮವಹಿಸಲಾಗಿರುತ್ತದೆ.

| | | | | |
|---|---|---|---|---|
| | | | | <u>ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ :–</u><br><br>1. 2016–17ನೇ ಸಾಲಿನಲ್ಲಿ ವಿದ್ಯಾರ್ಥಿ ನಿಲಯಗಳ ರಿಪೇರಿ, ಸುಣ್ಣಬಣ್ಣ, ಶೌಚಾಲಯ ರಿಪೇರಿ, ಕಾಂಪೌಂಡ್ ಗೋಡೆ ನಿರ್ಮಾಣ ಮಾಡಲು ರೂ. 20.73 ಕೋಟಿಗಳನ್ನು ಮತ್ತು ಸೋಲಾರ್ ವಾಟರ್ ಹೀಟರ್, ಬೆಡ್ಸ್ ಮತ್ತು ಪಿಲ್ಲೋಸ್, ಡೈನಿಂಗ್ ಟೇಬಲ್ ವಿತ್ ಫೋಲ್ಡಿಂಗ್ ಸ್ಟೂಲ್ ಮತ್ತು ಟೂ ಟಯರ್ ಕಾಟ್ ವಿತ್ ಲಾಕರ್ಸ್‌ಗಳನ್ನು ಒದಗಿಸಲು ರೂ.11.40 ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ.<br><br>2. 2017–18ನೇ ಸಾಲಿನಲ್ಲಿ ವಿದ್ಯಾರ್ಥಿನಿಲಯಗಳ ರಿಪೇರಿ, ಸುಣ್ಣಬಣ್ಣ, ಶೌಚಾಲಯ ರಿಪೇರಿ, ಕಾಂಪೌಂಡ್ ಗೋಡೆ ನಿರ್ಮಾಣ ಮಾಡಲು ರೂ.36.10 ಕೋಟಿಗಳನ್ನು ಮತ್ತು ಸೋಲಾರ್ ವಾಟರ್ ಹೀಟರ್, ಬೆಡ್ಸ್ ಮತ್ತು ಪಿಲ್ಲೋಸ್, ಸಿ.ಸಿ.ಟಿ.ವಿ. ಕ್ಯಾಮರಾ, ಡೈನಿಂಗ್ ಟೇಬಲ್ ವಿಥ್ ಪೋಲ್ಡಿಂಗ್ ಸ್ಟೂಲ್, ಟೂ ಟಯರ್ ಕಾಟ್ ವಿತ್ ಲಾಕರ್ಸ್, ಜಮಾಖಾನ ಬೆಡ್ ಶೀಟ್ ಜಕಾರ್ಡ್ ಮತ್ತು ಬೆಡ್‌ಸ್ಪ್ರೆಡ್, ಸ್ಕೂಲ್ ಬ್ಯಾಗ್, ಡಿಸೇಲ್ ಜನರೇಟರ್ ಮತ್ತು ಪಾತ್ರೆ ಪರಿಕರಗಳು, ಎಲೆಕ್ಟ್ರಿಕ್ ಉಪಕರಣಗಳು ಹಾಗೂ ಆಟೋಪಕರಣಗಳನ್ನು ಒದಗಿಸಲು ರೂ. 23.69 ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ. |
| 8 | 2974<br>ಚು.ರ.ಪ್ರ: 451<br>ಶ್ರೀ ಎಸ್.ಎಂ. ಆನಂದ್<br>ವಿಪನದಿ: 28.07.2008 | ರಾಜ್ಯದಲ್ಲಿರುವ ಎಸ್.ಸಿ/ ಎಸ್.ಟಿ ಹಾಸ್ಟೆಲ್‌ಗಳಲ್ಲಿ ಸ್ವಚ್ಛತೆ ಕಾಪಾಡಲು ಹಾಗೂ ಮೂಲಭೂತ ಸೌಕರ್ಯ ಒದಗಿಸಲು ತೆಗೆದುಕೊಂಡಿರುವ ಕ್ರಮದ ಕುರಿತು. | ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿರುವ 87 ವಿದ್ಯಾರ್ಥಿ ನಿಲಯಗಳ ಪೈಕಿ 18 ವಿದ್ಯಾರ್ಥಿನಿಲಯಗಳಿಗೆ ಮೂಲಭೂತ ಸೌಕರ್ಯಗಳನ್ನೊಳಗೊಂಡ ಸ್ವಂತ ಕಟ್ಟಡ ನಿರ್ಮಾಣ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ. ಇನ್ನುಳಿದ ವಿದ್ಯಾರ್ಥಿಗಳಿಗೆ ಸೂಕ್ತ ನಿವೇಶನ ಪಡೆದು ಅನುದಾನ ಲಭ್ಯತೆ ಆಧರಿಸಿ ಹಂತಹಂತವಾಗಿ ಮೂಲಭೂತ ಸೌಕರ್ಯಗಳನ್ನೊಳಗೊಂಡ ಕಟ್ಟಡ | <u>ಸಮಾಜ ಕಲ್ಯಾಣ ಇಲಾಖೆ :</u><br><br>ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳ ಶೈಕ್ಷಣಿಕ ಅಭಿವೃದ್ಧಿಗಾಗಿ 1867 ಸರ್ಕಾರಿ ವಿದ್ಯಾರ್ಥಿ ನಿಲಯಗಳನ್ನು ನಡೆಸಲಾಗುತ್ತಿರುತ್ತದೆ. ಈ ಪೈಕಿ 1462 ವಿದ್ಯಾರ್ಥಿ ನಿಲಯಗಳು ಸ್ವಂತ ಕಟ್ಟಡದಲ್ಲಿ, 60 ವಿದ್ಯಾರ್ಥಿ ನಿಲಯಗಳು |

<table>
<tr>
<td></td>
<td></td>
<td></td>
<td>ನಿರ್ಮಾಣ ಕಾಮಗಾರಿಗಳನ್ನು ಕೈಗೊಳ್ಳಲಾಗುವುದು ಎಂದು ಮಾನ್ಯ ಸಮಾಜ ಕಲ್ಯಾಣ ಸಚಿವರು ತಿಳಿಸಿದರು</td>
<td rowspan="2">ಬಾಡಿಗೆ ರಹಿತ ಕಟ್ಟಡದಲ್ಲಿ ಹಾಗೂ 345 ವಿದ್ಯಾರ್ಥಿ ನಿಲಯಗಳು ಬಾಡಿಗೆ ಕಟ್ಟಡಗಳಲ್ಲಿ ನಡೆಯುತ್ತಿರುತ್ತದೆ. ಈ ಪೈಕಿ 187 ವಿದ್ಯಾರ್ಥಿ ನಿಲಯಗಳಿಗೆ ಈಗಾಗಲೇ ಸ್ವಂತ ಕಟ್ಟಡ ನಿರ್ಮಾಣ ಕಾಮಗಾರಿಗಳನ್ನು ಕೈಗೊಳ್ಳಲಾಗಿದ್ದು, ವಿವಿಧ ಹಂತಗಳಲ್ಲಿ ಪ್ರಗತಿಯಲ್ಲಿರುತ್ತವೆ. 34 ವಿದ್ಯಾರ್ಥಿ ನಿಲಯಗಳಿಗೆ ಸ್ವಂತ ಕಟ್ಟಡ ನಿರ್ಮಾಣ ಸಂಬಂಧವಾಗಿ ನಿವೇಶನಗಳನ್ನು ಪಡೆಯಲಾಗಿದ್ದು, 2018–19ನೇ ಸಾಲಿನಲ್ಲಿ ಸ್ವಂತ ಕಟ್ಟಡ ನಿರ್ಮಾಣ ಮಾಡಲು ಕ್ರಮ ಕೈಗೊಳ್ಳಲಾಗುವುದು. ಬಾಕಿ 184 ವಿದ್ಯಾರ್ಥಿ ನಿಲಯಗಳಿಗೆ ನಿವೇಶನಗಳನ್ನು ಪಡೆಯಬೇಕಾಗಿರುತ್ತದೆ.<br><br>2012–13 ಮತ್ತು 2013–14ನೇ ಸಾಲಿನಲ್ಲಿ ರೂ.23741.625 ಲಕ್ಷಗಳ ಅಂದಾಜು ವೆಚ್ಚದಲ್ಲಿ 87 ಸರ್ಕಾರಿ ವಿದ್ಯಾರ್ಥಿ ನಿಲಯಗಳಿಗೆ ಸ್ವಂತ ಕಟ್ಟಡಗಳನ್ನು ನಿರ್ಮಾಣ ಮಾಡಲು ಕ್ರಮವಹಿಸಲಾಗಿರುತ್ತದೆ.<br><br>2014–15 ರಿಂದ 2017–18ನೇ ಸಾಲಿನವರೆಗೆ ಸ್ವಂತ ಕಟ್ಟಡಗಳನ್ನು ನಿರ್ಮಾಣ ಮಾಡಲು ಈ ಕೆಳಕಂಡಂತೆ ಅನುದಾನ ಬಿಡುಗಡೆ ಮಾಡಲಾಗಿರುತ್ತದೆ.<br><br>(ರೂ.ಲಕ್ಷಗಳಲ್ಲಿ)
<table>
<tr><th>ವರ್ಷ</th><th>ಬಿಡುಗಡೆ/ ಮಂಜೂರು ಮಾಡಿದ ಮೊತ್ತ</th><th>ವಿ.ನಿ/ ಕಾಮಗಾರಿಗಳ ಸಂಖ್ಯೆ</th></tr>
<tr><td>2014–15</td><td>6303.49</td><td>11</td></tr>
<tr><td>2015–16</td><td>21671.60</td><td>83</td></tr>
<tr><td>2016–17</td><td>5940.00</td><td>54</td></tr>
<tr><td>2017–18</td><td>15908.20</td><td>40</td></tr>
</table>
</td>
</tr>
<tr>
<td>9</td>
<td>3320<br>ಚು.ರ.ಪ್ರ.: 128<br>ಶ್ರೀ ಮರಿತಿಬ್ಬೇಗೌಡ<br>ವಿಪನದಿ:13.07.2009</td>
<td>ರಾಜ್ಯದಲ್ಲಿರುವ ಮೆಟ್ರಿಕ್ ಪೂರ್ವ ಹಾಗೂ ಮೆಟ್ರಿಕ್ ನಂತರದ ಹಾಸ್ಟೆಲ್‌ಗಳಿಗೆ ಸ್ವಂತ ಕಟ್ಟಡ ನಿರ್ಮಿಸುವ ಬಗ್ಗೆ</td>
<td>ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ 129 ಮೆಟ್ರಿಕ್ ಪೂರ್ವ ಹಾಗೂ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳ ಕಟ್ಟಡ ನಿರ್ಮಾಣ ಕಾಮಗಾರಿ ಗಳು ಪ್ರಗತಿಯಲ್ಲಿರುತ್ತದೆ. 82 ವಿದ್ಯಾರ್ಥಿ ನಿಲಯಗಳಿಗೆ ನಿವೇಶನ ಲಭ್ಯವಿದ್ದು, ಇವುಗಳಿಗೆ 2009–10ನೇ ಸಾಲಿನ ಆಯವ್ಯಯದಲ್ಲಿ ಒಟ್ಟು ರೂ.90.00 ಕೋಟಿಗಳನ್ನು ಒದಗಿಸ ಲಾಗಿರುವ ಅನುದಾನದಿಂದ ಕಟ್ಟಡ ನಿರ್ಮಿಸಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ. ನಿವೇಶನ ಲಭ್ಯವಿಲ್ಲದ ವಿದ್ಯಾರ್ಥಿನಿಲಯಗಳಿಗೆ ಸ್ವಂತ ಕಟ್ಟಡ ನಿರ್ಮಿಸಲು ಸರ್ಕಾರಿ ನಿವೇಶನ ಇಲಾಖೆಗೆ ಪಡೆಯಲು ಹಾಗೂ ಸರ್ಕಾರಿ ನಿವೇಶನ ದೊರಕದ ಕಟ್ಟಡಗಳಲ್ಲಿ ಖರೀದಿಗೆ ಸ್ವಂತ ಕಟ್ಟಡ ನಿರ್ಮಿಸಲಾಗುತ್ತಿದೆ ಎಂದು ಮಾನ್ಯ ಸಮಾಜ ಕಲ್ಯಾಣ ಸಚಿವರು ತಿಳಿಸಿದರು.</td>
</tr>
</table>

| | | | | |
|---|---|---|---|---|
| | | | | ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ :–<br><br>1. 2016–17ನೇ ಸಾಲಿನಲ್ಲಿ ವಿದ್ಯಾರ್ಥಿ ನಿಲಯಗಳ ರಿಪೇರಿ, ಸುಣ್ಣಬಣ್ಣ, ಶೌಚಾಲಯ ರಿಪೇರಿ, ಕಾಂಪೌಂಡ್ ಗೋಡೆ ನಿರ್ಮಾಣ ಮಾಡಲು ರೂ. 20.73 ಕೋಟಿಗಳನ್ನು ಮತ್ತು ಸೋಲಾರ್ ವಾಟರ್ ಹೀಟರ್, ಬೆಡ್ಸ್ ಮತ್ತು ಪಿಲ್ಲೋಸ್, ಡೈನಿಂಗ್ ಟೇಬಲ್ ವಿತ್ ಫೋಲ್ಡಿಂಗ್ ಸ್ಟೂಲ್ ಮತ್ತು ಟೂ ಟಯರ್ ಕಾಟ್ ವಿತ್ ಲಾಕರ್ಸ್‌ಗಳನ್ನು ಒದಗಿಸಲು ರೂ.11.40 ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ.<br><br>2. 2017–18ನೇ ಸಾಲಿನಲ್ಲಿ ವಿದ್ಯಾರ್ಥಿನಿಲಯಗಳ ರಿಪೇರಿ, ಸುಣ್ಣಬಣ್ಣ, ಶೌಚಾಲಯ ರಿಪೇರಿ, ಕಾಂಪೌಂಡ್ ಗೋಡೆ ನಿರ್ಮಾಣ ಮಾಡಲು ರೂ.36.10 ಕೋಟಿಗಳನ್ನು ಮತ್ತು ಸೋಲಾರ್ ವಾಟರ್ ಹೀಟರ್, ಬೆಡ್ಸ್ ಮತ್ತು ಪಿಲ್ಲೋಸ್, ಸಿ.ಸಿ.ಟಿ.ವಿ. ಕ್ಯಾಮರಾ, ಡೈನಿಂಗ್ ಟೇಬಲ್ ವಿಥ್ ಪೋಲ್ಡಿಂಗ್ ಸ್ಟೂಲ್, ಟೂ ಟಯರ್ ಕಾಟ್ ವಿತ್ ಲಾಕರ್ಸ್, ಜಮಾಖಾನ ಬೆಡ್ ಶೀಟ್ ಜಕಾರ್ಡ್ ಮತ್ತು ಬೆಡ್‌ಸ್ಪ್ರೆಡ್, ಸ್ಕೂಲ್ ಬ್ಯಾಗ್, ಡಿಸೇಲ್ ಜನರೇಟರ್ ಮತ್ತು ಪಾತ್ರೆ ಪರಿಕರಗಳು, ಎಲೆಕ್ಟ್ರಿಕ್ ಉಪಕರಣಗಳು ಹಾಗೂ ಆಟೋಪಕರಣಗಳನ್ನು ಒದಗಿಸಲು ರೂ. 23.69 ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ |
| 10 | 3327<br>ಚು.ಪ್ರ.: 579<br>ಶ್ರೀ<br>ವೈ.ಎ.ನಾರಾಯಣಸ್ವಾಮಿ<br>ವಿಪನದಿ: 20.07.2009 | ರಾಜ್ಯದಲ್ಲಿ 2008ರಿಂದ ಇದುವರೆಗೆ ಮೆಟ್ರಿಕ್‌ಪೂರ್ವ ಹಾಗೂ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಿಗೆ ಸ್ವಂತ ಕಟ್ಟಡ ನಿರ್ಮಾಣದ ಕುರಿತು | ಈ ಹಾಸ್ಟೆಲ್‌ಗಳನ್ನು ಸರ್ಕಾರದ ಸ್ವಂತ ಕಟ್ಟಡಗಳಲ್ಲಿಯೇ ನಡೆಸಬೇಕು, ಖಾಸಗಿ ಕಟ್ಟಡಗಳಲ್ಲಿ ವಿದ್ಯಾರ್ಥಿ ನಿಲಯ ಗಳನ್ನೇನು ನಡೆಸಲಾಗುತ್ತಿದೆ ಅದನ್ನು ಸಾಧ್ಯವಾದಷ್ಟು ನಿಯಂತ್ರಣ ಮಾಡಬೇಕೆಂಬ ಉದ್ದೇಶವಿದ್ದು ಆ ಬಗ್ಗೆ ಸರ್ಕಾರ ಕ್ರಮ ತೆಗೆದುಕೊಳ್ಳುತ್ತಿದೆ ಎಂದು ಮಾನ್ಯ ಸಮಾಜ ಕಲ್ಯಾಣ ಸಚಿವರು ತಿಳಿಸಿದರು. | |
| 11 | 3815<br>ಚು.ರ.ಪ್ರ.: 250<br>ಶ್ರೀ ವೀರಣ್ಣ ಮತ್ತಿಕಟ್ಟಿ<br>ವಿಪನದಿ: 17.01.2011 | ರಾಜ್ಯದಲ್ಲಿ ಸಮಾಜ ಕಲ್ಯಾಣ ವತಿಯಿಂದ ನಡೆಯುತ್ತಿರುವ ಹಾಸ್ಟೆಲ್‌ಗಳಲ್ಲಿ ಮೂಲಭೂತ ಸೌಕರ್ಯಗಳ ಕೊರತೆ ಬಗ್ಗೆ. | ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ 2010–11ನೇ ಸಾಲಿನಲ್ಲಿ ಗಿರಿಜನ ಉಪಯೋಜನೆಯಡಿ ಕ್ರೋಢೀಕರಿಸಿದ ಅನುದಾನದಲ್ಲಿ ವಿದ್ಯಾರ್ಥಿ ನಿಲಯಗಳಿಗೆ ಮೂಲಭೂತ ಸೌಲಭ್ಯಗಳನ್ನು ಒದಗಿಸಲು ರೂ.5.00ಕೋಟಿಗಳನ್ನು ಹಂಚಿಕೆ ಮಾಡಿ ಬಿಡುಗಡೆ ಮಾಡಲಾಗಿದೆ ಸದರಿ ಅನುದಾನವನ್ನು ವಿದ್ಯಾರ್ಥಿ ನಿಲಯಗಳಿಗೆ ಮೂಲ ಸೌಲಭ್ಯಗಳನ್ನು ಒದಗಿಸಲು ಕ್ರಮ ಕೈಗೊಳ್ಳಲಾಗುವುದು. | |

| | | | | |
|---|---|---|---|---|
| | | | ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಅಯವ್ಯಯದ ಲಭ್ಯತೆ ಯನ್ನಾದರಿಸಿ ಹಂತ ಹಂತವಾಗಿ ಹಾಲಿ ಸ್ವಂತ ಕಟ್ಟಡಗಳಿರುವ ಕಡೆ ಹೆಚ್ಚುವರಿ ಕೊಠಡಿಗಳ ನಿರ್ಮಾಣ ಶೌಚಾಲಯ, ಸ್ನಾನಗೃಹಗಳ ರಿಪೇರಿ, ನಿವೇಶನಗಳು ಲಭ್ಯವಿರುವ ಕಡೆ ಸ್ವಂತ ಕಟ್ಟಡಗಳ ನಿರ್ಮಾಣ ಮತ್ತು ನಿವೇಶನ ಲಭ್ಯವಿಲ್ಲದ ಕಡೆ ನಿವೇಶನಗಳನ್ನು ಖರೀದಿಸಿ, ಸ್ವಂತ ಕಟ್ಟಡಗಳನ್ನು ನಿರ್ಮಾಣ ಮಾಡಿ ಮೂಲಭೂತ ಸೌಕರ್ಯ ಗಳನ್ನು ಒದಗಿಸಿ ಕೊಡಲು ಉದ್ದೇಶಿಸಲಾಗಿದೆ ಎಂದು ಮಾನ್ಯ ಸಮಾಜ ಕಲ್ಯಾಣ ಹಾಗೂ ಬಂಧಿಖಾನೆ ಸಚಿವರು ತಿಳಿಸಿದರು. | 2016–17 ಹಾಗೂ 2017–18ನೇ ಸಾಲಿನಲ್ಲಿ ಈ ಕೆಳಕಂಡ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗಿದೆ:–<br>1. 2016–17ನೇ ಸಾಲಿನಲ್ಲಿ ವಿದ್ಯಾರ್ಥಿ ನಿಲಯಗಳಿಗೆ ಹೆಚ್ಚುವರಿ ಕೊಠಡಿ ನಿರ್ಮಾಣ, ರಿಪೇರಿ, ಸುಣ್ಣಬಣ್ಣ, ಶೌಚಾಲಯ ರಿಪೇರಿ, ಕಾಂಪೌಂಡ್ ಗೋಡೆ ನಿರ್ಮಾಣ ಮಾಡಲು ರೂ.20.73 ಕೋಟಿ ಅನುದಾನ ಬಿಡುಗಡೆ ಮಾಡಲಾಗಿದೆ.<br><br>2. ಸೋಲಾರ್ ವಾಟರ್ ಹೀಟರ್, ಬೆಡ್ಸ್ ಮತ್ತು ಪಿಲ್ಲೋಸ್, ಡೈನಿಂಗ್ ಟೇಬಲರ್ ವಿತ್ ಫೋಲ್ಡಿಂಗ್ ಸ್ಟೂಲ್ ಮತ್ತು ಟೂ ಟಯರ್ ಕಾಟ್ ವಿತ್ ಲಾಕರ್ಸ್‌ಗಳನ್ನು ಒದಗಿಸಲು ರೂ.11.40 ಕೋಟಿ ಅನುದಾನ ಬಿಡುಗಡೆ ಮಾಡಲಾಗಿದೆ.<br><br>ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿದ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |
| 12 | 2851<br>ಚು.ರ.ಪ್ರ: 707<br>ಶ್ರೀ ಪ್ರಕಾಶ್ ಕೆ.ರಾಥೋಡ್<br>ವಿಪನದಿ: 23.07.2007 | ರಾಜ್ಯದಲ್ಲಿ ಕಳೆದ ವರ್ಷ ಹೊಸದಾಗಿ ಪ್ರಾರಂಭಿಸಿದ ಪರಿಶಿಷ್ಠ ಜಾತಿ, ಪಂಗಡ ಹಾಗೂ ಹಿಂದುಳಿದ ವರ್ಗಗಳ ವಿದ್ಯಾರ್ಥಿನಿಲಯಗಳು ಹಾಗೂ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಿಗೆ ಮೂಲಭೂತ ಸೌಕರ್ಯ ಒದಗಿಸುವ ಬಗ್ಗೆ | ಕಳೆದ ವರ್ಷ ಪ್ರಾರಂಭಿಸಿದ ವಿದ್ಯಾರ್ಥಿ ನಿಲಯಗಳನ್ನು ಪ್ರಸ್ತುತ ಬಾಡಿಗೆ ಕಟ್ಟಡದಲ್ಲಿ ನಡೆಸಲಾಗುತ್ತಿದ್ದು, ಸ್ಥಾನಿಕ ಪರಿಸ್ಥಿತಿ ಗನುಗುಣವಾಗಿ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಲಾಗಿದೆ. ಸ್ವಂತ ಕಟ್ಟಡ ನಿರ್ಮಾಣಕ್ಕಾಗಿ ನಿವೇಶನ ಪಡೆಯಲು ಕ್ರಮ ವಹಿಸಲಾಗುತ್ತಿದೆ. ನಿವೇಶನ ಪಡೆದ ನಂತರ ಮೂಲಭೂತ ಸೌಕರ್ಯಗಳುಳ್ಳ ಸುಸಜ್ಜಿತ ಸ್ವಂತ | ದಿನಾಂಕ:24.09.2018ರಂದು ನಡೆದ ಸಮಿತಿಯ ಸಭೆಯಲ್ಲಿ ಚರ್ಚಿಸಿದಾಗ,<br><br>ಅ) ರಾಜ್ಯದಲ್ಲಿ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಯ ಅಧೀನದಲ್ಲಿ ಪ.ಜಾ/ಪ.ವರ್ಗ, ಹಿಂದುಳಿದ ವರ್ಗಗಳ ಕಲ್ಯಾಣಕ್ಕಾಗಿ ಒಟ್ಟು 819 ವಸತಿ ಶಾಲೆ/ಕಾಲೇಜುಗಳ ಕಾರ್ಯನಿರ್ವಹಿಸುತ್ತಿವೆ. ಈ ವಸತಿ ಶಾಲೆಗಳ ಪೈಕಿ ಪ್ರಸ್ತುತ 407 ಸ್ವಂತ ಕಟ್ಟಡಗಳಲ್ಲಿ ಕಾರ್ಯ ನಿರ್ವಹಿಸುತ್ತಿವೆ. 158 ವಸತಿ ಶಾಲೆಗಳಿಗೆ ಸ್ವಂತ ಕಟ್ಟಡ ನಿರ್ಮಾಣ ಕಾಮಗಾರಿಯು ಪ್ರಗತಿಯಲ್ಲಿವೆ. 89 ವಸತಿ ಶಾಲೆಗಳಿಗೆ ನಿವೇಶನ ಲಭ್ಯವಿದ್ದು, ಅಂದಾಜು ಪಟ್ಟಿ ತಯಾರಿಕೆಯಲ್ಲಿದೆ. 165 ವಸತಿ ಶಾಲೆಗಳಿಗೆ |

| | | | | |
|---|---|---|---|---|
| | | | ಕಟ್ಟಡ ನಿರ್ಮಾಣ ಮಾಡಲು ಅನುದಾನ ಲಭ್ಯತೆ ಆಧರಿಸಿ ಹಂತ ಹಂತವಾಗಿ ಕ್ರಮ ಕೈಗೊಳ್ಳಲಾಗುವುದೆಂದು ಮಾನ್ಯ ಸಮಾಜ ಕಲ್ಯಾಣ ಸಚಿವರು ತಿಳಿಸಿದರು. | ನಿವೇಶನ ಪಡೆಯಲು ಕ್ರಮವಹಿಸಿದೆ. ಈಗಾಗಲೇ ಎಲ್ಲಾ ಜಿಲ್ಲಾಧಿಕಾರಿಗಳಿಗೆ, ಅಪರ ಮುಖ್ಯ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ ರವರು ನಿವೇಶನ ಒದಗಿಸಲು ಪತ್ರ ಬರೆದಿರುತ್ತಾರೆ. ಜಮೀನು ಹಾಗೂ ಅನುದಾನದ ಲಭ್ಯತೆ ಆಧಾರದ ಮೇಲೆ ಸ್ವಂತ ಕಟ್ಟಡಗಳನ್ನು ನಿರ್ಮಾಣ ಮಾಡಲು ಹಂತಹಂತವಾಗಿ ಕ್ರಮ ಕೈಗೊಳ್ಳಲಾಗುವುದು. |
| 13 | 3326<br>ಚು.ರ.ಪ್ರ.: 622<br>ಶ್ರೀ ಪ್ರಕಾಶ್ ಕೆ.ರಾಥೋಡ್<br>ವಿಪನದಿ: 20.07.2009 | ರಾಜ್ಯದ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಲ್ಲಿ ಮೂಲಭೂತ ಸೌಕರ್ಯಗಳ ಕೊರತೆ ಇರುವ ಬಗ್ಗೆ | ರಾಜ್ಯದಲ್ಲಿರುವ 385 ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಲ್ಲಿ 107 ವಸತಿ ಶಾಲೆಗಳಿಗೆ ಸ್ವಂತ ಕಟ್ಟಡವಿದ್ದು, ಉಳಿದ ಶಾಲೆಗಳು ಬಾಡಿಗೆ ಕಟ್ಟಡಗಳಲ್ಲಿ ಕಾರ್ಯನಿರ್ವಹಿಸುತ್ತಿವೆ. ಜಮೀನು ಹಾಗೂ ಅನುದಾನದ ಲಭ್ಯತೆ ಆಧಾರದ ಮೇಲೆ ಇತರೆ ಶಾಲೆಗಳಿಗೂ ಸ್ವಂತ ಕಟ್ಟಡ ನಿರ್ಮಿಸಲು ಹಂತ, ಹಂತವಾಗಿ ಕ್ರಮ ಕೈಗೊಳ್ಳಲಾಗುವುದು ಎಂದು ಮಾನ್ಯ ಸಮಾಜ ಕಲ್ಯಾಣ ಸಚಿವರು ತಿಳಿಸಿದರು. | ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಯ ಅಧೀನದಲ್ಲಿರುವ ಪ.ಜಾ/ಪ.ವರ್ಗ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣಕ್ಕಾಗಿ ಒಟ್ಟು 819 ವಸತಿ ಶಾಲೆ/ಕಾಲೇಜುಗಳು ಕಾರ್ಯನಿರ್ವಹಿಸುತ್ತಿವೆ. ಈ ವಸತಿ ಶಾಲೆಗಳ ಪೈಕಿ 407 ಸ್ವಂತ ಕಟ್ಟಡಗಳಲ್ಲಿ ಕಾರ್ಯನಿರ್ವಹಿಸುತ್ತಿವೆ. 158 ವಸತಿ ಶಾಲೆಗಳಿಗೆ ಸ್ವಂತ ಕಟ್ಟಡ ನಿರ್ಮಾಣ ಕಾಮಗಾರಿಯು ಪ್ರಗತಿಯಲ್ಲಿವೆ. 89 ವಸತಿ ಶಾಲೆಗಳಿಗೆ ನಿವೇಶನ ಲಭ್ಯವಿದ್ದು, ಅಂದಾಜು ಪಟ್ಟಿ ತಯಾರಿಕೆಯಲ್ಲಿದೆ.<br>165 ವಸತಿ ಶಾಲೆಗಳಿಗೆ ನಿವೇಶನ ಲಭ್ಯವಿರುವುದಿಲ್ಲ. ಜಮೀನು ಲಭ್ಯವಿಲ್ಲದ ವಸತಿ ಶಾಲೆಗಳಿಗೆ ಕೂಡಲೇ ಜಮೀನುಗಳನ್ನು ಒದಗಿಸುವಂತೆ ಜಿಲ್ಲಾಧಿಕಾರಿಗಳ ಸಮ್ಮೇಳನದಲ್ಲಿ ಮತ್ತು ಇತ್ತೀಚೆಗೆ ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ಜಿಲ್ಲಾಧಿಕಾರಿಗಳೊಂದಿಗೆ ಜರುಗಿಸಿದ ವಿಡಿಯೋ ಕಾನ್‌ಫರೆನ್ಸ್ ನಲ್ಲಿ ತಿಳಿಸಿರುತ್ತಾರೆ. |
| 14 | 3649<br>ಚು.ಗು.ಪ್ರ.: 261<br>ಶ್ರೀ ಹೆಚ್.ಸಿ.ನೀರಾವರಿ<br>ವಿಪನದಿ: 12.07.2010 | ರಾಜ್ಯದಲ್ಲಿರುವ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಿಗೆ ಸ್ವಂತ ಕಟ್ಟಡಗಳು ಇಲ್ಲದಿರುವ ಬಗ್ಗೆ | ಇನ್ನು ನೂರಕ್ಕೂ ಹೆಚ್ಚು ಕಟ್ಟಡಗಳು 395 ಶಾಲೆಗಳಲ್ಲಿ 120–130 ಶಾಲೆಗಳು ಸ್ವಂತ ಕಟ್ಟಡವನ್ನು ಹೊಂದಿವೆ. ಈಗಾಗಲೇ ಮುಗಿಯುವ ಹಂತದಲ್ಲಿವೆ. ಈ ವರ್ಷದ ಸುಮಾರು 300 ಕೋಟಿ ರೂಪಾಯಿಯಷ್ಟು ಹಣವನ್ನು ನಮ್ಮ | ರಾಯಚೂರು ಜಿಲ್ಲೆಯಲ್ಲಿ 36 ವಸತಿ ಶಾಲೆ/ಕಾಲೇಜುಗಳು ಕಾರ್ಯನಿರ್ವಹಿಸುತ್ತಿವೆ. ಈ ಪೈಕಿ 13 ಸ್ವಂತ ಕಟ್ಟಡಗಳಲ್ಲಿವೆ. 07 ವಸತಿ ಶಾಲೆಗಳಿಗೆ ಕಟ್ಟಡದ ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿದೆ. 11 ವಸತಿ ಶಾಲೆಗಳಿಗೆ ನಿವೇಶನ ಲಭ್ಯವಿದ್ದು, ಅಂದಾಜು ಪಟ್ಟಿ ತಯಾರಿಸಲಾಗುತ್ತಿದೆ. 5 ವಸತಿ ಶಾಲೆಗಳಿಗೆ |

| | | | | |
|---|---|---|---|---|
| | | | ಮೊರಾರ್ಜಿ ಶಾಲೆಗಳಿಗಾಗಿ ಇಟ್ಟುಕೊಂಡಿದ್ದೇವೆ. ಮುಂದಿನ ಮೂರು ವರ್ಷಗಳಲ್ಲಿ ಎಲ್ಲಾ ಶಾಲೆಗಳು ಸಹ ತಮ್ಮ ಸ್ವಂತ ಕಟ್ಟಡವನ್ನು ಹೊಂದುತ್ತವೆ ಎನ್ನುವ ಭರವಸೆಯನ್ನು ಈ ಸದನದ ಮೂಲಕ ನೀಡ ಬಯಸುತ್ತೇನೆ ಎಂದು ಮಾನ್ಯ ಸಮಾಜ ಕಲ್ಯಾಣ ಸಚಿವರು ತಿಳಿಸಿದರು. | ನಿವೇಶನ ಪಡೆಯಲು ಕ್ರಮವಹಿಸಿದೆ. ಜಮೀನು ಮತ್ತು ಅನುದಾನದ ಲಭ್ಯತೆ ಆಧಾರದ ಮೇಲೆ ಕಟ್ಟಡಗಳು ನಿರ್ಮಾಣವನ್ನು ಹಂತ ಹಂತವಾಗಿ ಕ್ರಮ ಕೈಗೊಳ್ಳಲಾಗುವುದು ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿದ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |
| 15 | 3325<br>ಚು.ಪ್ರ.:531<br>ಶ್ರೀ ಮನೋಹರ ಮಸ್ಕಿ<br>ವಿಪನದಿ: 20.07.2009 | ರಾಯಚೂರು ಜಿಲ್ಲೆಯಲ್ಲಿರುವ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಿಗೆ ಅಗತ್ಯ ಕಟ್ಟಡ ಮತ್ತು ಮೂಲಭೂತ ಸೌಲಭ್ಯಗಳು ಇಲ್ಲದಿರುವ ಬಗ್ಗೆ | 3 ವಸತಿ ಶಾಲೆಗಳು ಸ್ವಂತ ಕಟ್ಟಡ ಹೊಂದಿದ್ದು, 2 ವಸತಿ ಶಾಲೆಗಳಿಗೆ ಕಟ್ಟಡ ನಿರ್ಮಿಸಲಾಗುತ್ತದೆ. ಮಾನ್ಯ ಸದಸ್ಯರು ಸಲಹೆ ಕೊಟ್ಟಿರುವ ಪ್ರಕಾರ ನಾನೇ ಖುದ್ದಾಗಿ ಹೋಗಿ ಜಿಲ್ಲಾಧಿಕಾರಿಗಳ ಮತ್ತು ನಮ್ಮ ಇಲಾಖೆಯ ಅಧಿಕಾರಿಗಳ ಸಭೆ ಕರೆದು ಈ ಸಮಸ್ಯೆಯನ್ನು ಸರಿಪಡಿಸುವಲ್ಲಿ ಸೂಕ್ತ ತೀರ್ಮಾನ ತೆಗೆದುಕೊಳ್ಳುತ್ತೇವೆ ಎಂದು ಮಾನ್ಯ ಸಮಾಜ ಕಲ್ಯಾಣ ಸಚಿವರು ತಿಳಿಸಿದರು. | |
| 16 | 2855<br>ಚು.ಗು.ಪ್ರ: 12<br>ಶ್ರೀ ಮುಖ್ಯಮಂತ್ರಿ ಚಂದ್ರು<br>ವಿಪನದಿ: 01.08.2007 | ಬೆಂಗಳೂರಿನಿಂದ ಮಾಗಡಿಗೆ ಹೋಗುವ ರಸ್ತೆಯಲ್ಲಿರುವ ಸಮಾಜ ಕಲ್ಯಾಣ ಇಲಾಖೆ ಒಡೆತನದಲ್ಲಿದ್ದ ಭೂಮಿಯನ್ನು ಖಾಸಗಿ ವ್ಯಕ್ತಿಗಳು ವಶಪಡಿಸಿಕೊಂಡಿರುವ ಬಗ್ಗೆ. | ಸಮಾಜ ಕಲ್ಯಾಣ ಇಲಾಖೆಗೆ ಬಿಟ್ಟು ಬೇರೆಯವರಿಗೆ ಜಮೀನು ಕೊಡುವುದಿಲ್ಲ. ಆ ಜಮೀನನ್ನು ನಮ್ಮ ಇಲಾಖೆಯ ಹಾಸ್ಟಲ್‌ಗಾಗಿ ಉಪಯೋಗ ಮಾಡಿಕೊಳ್ಳುತ್ತೇವೆಂದು ನಾನು | ದಿನಾಂಕ: 24.09.2018ರಂದು ನಡೆದ ಸಮಿತಿಯ ಸಭೆಯಲ್ಲಿ ಚರ್ಚಿಸಿದಾಗ,<br><br>1. ಬೆಂಗಳೂರು ನಿರಾಶ್ರಿತರ ಪರಿಹಾರ ಕೇಂದ್ರಕ್ಕೆ ಸೇರಿದ 63.02ಎಕರೆ ಜಮೀನನ್ನು ಸರ್ಕಾರವು ಸುಮನಹಳ್ಳಿ ಕುಷ್ಠರೋಗಿಗಳ ಪುನರ್ವಸತಿ ಕೇಂದ್ರಕ್ಕೆ 1977ರಲ್ಲಿ 30 |

| | | | | |
|---|---|---|---|---|
| | | | ಸ್ಪಷ್ಟವಾದ ಭರವಸೆ ಕೊಡುತ್ತೇನೆ. ಭಿಕ್ಷುಕರಿಗೂ ಅಲ್ಲೆ ಡೆವಲಪ್ ಮಾಡುತ್ತೇವೆ. ಹಾಸ್ಟಲ್ ಜೊತೆ 25 ಎಕರೆಯನ್ನು ಡೆವಲಪ್ ಮಾಡುತ್ತೇವೆ ಎಂದು ಮಾನ್ಯ ಸಮಾಜ ಕಲ್ಯಾಣ ಸಚಿವರು ತಿಳಿಸಿದರು. | ವರ್ಷಗಳ ಗುತ್ತಿಗೆ ನೀಡಲಾಗಿತ್ತು. ಗುತ್ತಿಗೆಗೆ ನೀಡಲಾದ ಜಮೀನಿನ ಸರ್ವೆ ನಂಬರ್ 3ರಲ್ಲಿ 11.01 ಎಕರೆ ಜಮೀನಿನ ಪೈಕಿ ಸುಮಾರು 2.00 ಎಕರೆ ಜಮೀನನ್ನು ಶ್ರೀ ಕೆ. ವಿ. ಗೋವಿಂದರಾಜು ಎಂಬುವವರು ಅನಧಿಕೃತವಾಗಿ ಒತ್ತುವರಿ ಮಾಡಿಕೊಂಡಿದ್ದು, ಮಂಜೂರಾತಿ ಕೋರಿ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ 11714/1987ನ್ನು ಸಲ್ಲಿಸಿರುತ್ತಾರೆ. ಮಾನ್ಯ ಉಚ್ಚ ನ್ಯಾಯಾಲಯವು ರಿಟ್ ಅರ್ಜಿಯನ್ನು ದಿನಾಂಕ: 25–01–1996ರಲ್ಲಿ ವಜಾಗೊಳಿಸಿದೆ.<br><br>ಈ ಆದೇಶದ ವಿರುದ್ಧ ಶ್ರೀ. ಕೆ.ವಿ. ಗೋವಿಂದರಾಜು ರವರು ಸರ್ವೋಚ್ಚ ನ್ಯಾಯಾಲಯದಲ್ಲಿ ಎಸ್.ಎಲ್.ಪಿ. ಸಂಖ್ಯೆ: 20746/97ಯನ್ನು ಪರಿಶೀಲಿಸಿ, ದಿನಾಂಕ:21–08–1998ರಂದು ನೀಡಿರುವ ಆದೇಶದಲ್ಲಿ ಪ್ರಕರಣವನ್ನು ಮೂರು ತಿಂಗಳ ಒಳಗಾಗಿ ವಿಲೇವಾರಿ ಮಾಡಲು ಸೂಚಿಸಿರುತ್ತಾರೆ.<br><br>ತಹಶೀಲ್ದಾರ್ ಬೆಂಗಳೂರು ಉತ್ತರ ತಾಲ್ಲೂಕು ಇವರು ಮೇಲ್ಕಂಡ ಮನವಿಯನ್ನು ಪರಿಶೀಲಿಸಿ, ಶ್ರೀ ಕೆ.ವಿ.ಗೋವಿಂದರಾಜುರವರ ಕೋರಿಕೆಯನ್ನು ದಿ: 20.11.1998ರಂದು ತಿರಸ್ಕರಿಸಿರುತ್ತಾರೆ.<br><br>ಜಿಲ್ಲಾಧಿಕಾರಿಗಳು, ದಿನಾಂಕ:26–12–2017 ರಲ್ಲಿ ಬೆಂಗಳೂರು ನಿರಾಶ್ರಿತರ ಪರಿಹಾರ ಕೇಂದ್ರಕ್ಕೆ ಸೇರಿದ ಬೆಂಗಳೂರು ನಗರದ ರಾಜರಾಜೇಶ್ವರಿನಗರ ವಿಧಾನ ಸಭಾ ಕ್ಷೇತ್ರದ ಸಜ್ಜೇಪಾಳ್ಯ ಗ್ರಾಮದ ಸರ್ವೆ ನಂ.3 ರಲ್ಲಿರುವ 0.27 ಎಕರೆ ಜಮೀನನ್ನು ದಿ॥ ದೇವರಾಜ್ ಅರಸು ಕಾಲೋನಿ ಎಂದು ಅಧಿಸೂಚನೆ ಹೊರಡಿಸಿರುತ್ತಾರೆ. |

| | | | | |
|---|---|---|---|---|
| | | | | ಈ ಅಧಿಸೂಚನೆ ವಿರುದ್ಧ ಕೇಂದ್ರ ಪರಿಹಾರ ಸಮಿತಿಯು ಉಚ್ಚ ನ್ಯಾಯಾಲಯದಲ್ಲಿ ರಿಟ್ ಪಿಟಿಷನ್ ಸಂಖ್ಯೆ: 55797:2017ನ್ನು ಸಲ್ಲಿಸಿದ್ದು, ನ್ಯಾಯಾಲಯವು ದಿನಾಂಕ: 05-01-2018ರಂದು ಅಧಿಸೂಚನೆಗೆ ತಡೆಯಾಜ್ಞೆಯನ್ನು ನೀಡಿರುತ್ತದೆ.<br>2. ಬೆಂಗಳೂರು ನಿರಾಶ್ರಿತರ ಪರಿಹಾರ ಕೇಂದ್ರಕ್ಕೆ ಸೇರಿದ ಶ್ರೀಗಂಧದ ಕಾವಲು ಗ್ರಾಮದ ಸರ್ವೇ ನಂ. 68/1 ರಲ್ಲಿ 10 ಗುಂಟೆ ಜಮೀನು ಶ್ರೀ ಕೆ.ಎನ್. ದಯಾನಂದಮೂರ್ತಿ ಎಂಬುವರಿಂದ ಅನಧಿಕೃತವಾಗಿ ಒತ್ತುವರಿ ಮಾಡಿದ್ದು, ಈ ಸಂಬಂಧ ಸಲ್ಲಿಸಿದ ಓ.ಎಸ್. ನಂ. 8679/2007ನ್ನು ಸಿಟಿ ಸಿವಿಲ್ ನ್ಯಾಯಾಲಯವು ದಿನಾಂಕ: 03-11-2014ರಂದು ವಜಾ ಮಾಡಿರುತ್ತದೆ. ಈ ಆದೇಶದ ವಿರುದ್ಧ ಶ್ರೀ ಕೆ.ಎನ್. ದಯಾನಂದಮೂರ್ತಿ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಈ ಪ್ರಕರಣ ಕುರಿತು R.F.A: No:24/2015 ಸಲ್ಲಿಸಿದ್ದು, ಪ್ರಕರಣವು ಅಂತಿಮ ವಿಚಾರಣೆ ಹಂತದಲ್ಲಿದೆ. |
| 17 | 3926<br>ಚು.ರ.ಪ್ರ.: 518<br>ಶ್ರೀ ಅಶ್ವಥನಾರಾಯಣ<br>ವಿಪನದಿ: 12.12.2011 | ಬೆಂಗಳೂರು ಮಾಗಡಿ ರಸ್ತೆಯಲ್ಲಿರುವ ಸುಮನಹಳ್ಳಿ ಬಳಿ ಕುಷ್ಠ ರೋಗಿಗಳ ಪುನರ್ವಸತಿಗಾಗಿ ಕ್ರಿಶ್ಚಿಯನ್ ಮಿಷನ್‌ರಿಗೆ ಗುತ್ತಿಗೆ ಆಧಾರದ ಮೇಲೆ ಜಮೀನನ್ನು ನೀಡಿರುವ ಬಗ್ಗೆ. | ಸದರಿ ಸಂಸ್ಥೆಗೆ 1977 ರಿಂದ 30 ವರ್ಷಗಳ ಅವಧಿಗೆ ಗುತ್ತಿಗೆ ನೀಡಲಾಗಿರುತ್ತದೆ. 2007 ರಲ್ಲಿ ಈ ಗುತ್ತಿಗೆ ಅವಧಿ ಮುಕ್ತಾಯಗೊಂಡಿರುತ್ತದೆ. ಗುತ್ತಿಗೆ ನವೀಕರಿಸುವ ಬಗ್ಗೆ ಸರ್ಕಾರದ ಪರಿಶೀಲನೆಯಲ್ಲಿದೆ ಎಂದು ಮಾನ್ಯ ಸಮಾಜ ಕಲ್ಯಾಣ ಹಾಗೂ ಬಂದೀಖಾನೆ ಸಚಿವರು ತಿಳಿಸಿದರು. | ಸರ್ಕಾರದ ಆದೇಶ ಸಂಖ್ಯೆ: ಎಸ್‌ಡಬ್ಲ್ಯೂಎಲ್ 18 ಎಸ್‌ಟಿಆರ್ 77, ದಿ: 5.1.1977ರ ಪ್ರಕಾರ ಕುಷ್ಠರೋಗಿಗಳ ಚಿಕಿತ್ಸೆ ಮತ್ತು ಪುನರ್ವಸತಿಗಾಗಿ 63.02 ಎಕರೆ ಜಮೀನನ್ನು ಸರ್ಕಾರೇತರ ಸಂಸ್ಥೆಯಾದ ಸುಮನಹಳ್ಳಿ ಕುಷ್ಠರೋಗಿಗಳ ಪುನರ್ವಸತಿ ಕೇಂದ್ರಕ್ಕೆ 30 ವರ್ಷಗಳ ಗುತ್ತಿಗೆಗೆ ಮಂಜೂರು ಮಾಡಲಾಗಿತ್ತು. ಸದರಿ ಗುತ್ತಿಗೆ ಅವಧಿಯು 2007ರಲ್ಲಿ ಮುಕ್ತಾಯಗೊಂಡಿರುತ್ತದೆ.<br>ಸರ್ಕಾರದ ಆದೇಶ ಸಂಖ್ಯೆ: ಸಕಇ 28 ಎಸ್‌ಟಿಆರ್ 2013, ದಿ: 01.01.2018ರ ಪ್ರಕಾರ 50/25 ಎಕರೆ ಜಮೀನನ್ನು 2007ರಿಂದ 30 ವರ್ಷಗಳ ಕಾಲ ಗುತ್ತಿಗೆ ಅವಧಿ ಮೇಲೆ ಪ್ರತಿ ವರ್ಷ ಎಕರೆಯೊಂದಕ್ಕೆ ರೂ.1,000/-ರಂತೆ ಗುತ್ತಿಗೆ ದರವನ್ನು |

| | | | | |
|---|---|---|---|---|
| 18 | 5039<br>ಚು.ಗು.ಪ್ರ: 14/2014<br>ಶ್ರೀ ಅಶ್ವತ್‌ನಾರಾಯಣ<br>ವಿಪನದಿ: 23.06.2014 | ಬೆಂಗಳೂರು ನಗರ, ಮಾಗಡಿ ಮುಖ್ಯ ರಸ್ತೆ, ಸುಮನಹಳ್ಳಿಯಲ್ಲಿರುವ ಭಿಕ್ಷುಕರ ಕೇಂದ್ರದಲ್ಲಿರುವ ಜಮೀನನ್ನು ಗುತ್ತಿಗೆಗೆ ನೀಡಿದ್ದು. ಅದನ್ನು ಸರ್ಕಾರ ತನ್ನ ವ್ಯಾಪ್ತಿಗೆ ಪಡೆಯುವ ಕುರಿತು | ಸದರಿ ಜಾಗದ ಗುತ್ತಿಗೆ ಅವಧಿಯನ್ನು ಮುಂದುವರೆಸಬೇಕೋ ಬೇಡವೋ ಎಂಬ ಬಗ್ಗೆ ಕಾನೂನು ಇಲಾಖೆಯ ಸಲಹೆಯನ್ನು ಕೇಳುತ್ತಿದ್ದೇವೆ. ಸಾರ್ವಜನಿಕ ಹಿತಾಸಕ್ತಿಯ ಅರ್ಜಿಗಳೂ ಕೂಡ ಕೋರ್ಟಿನಲ್ಲಿ ಈ ಬಗ್ಗೆ ಎಲ್ಲಾ ಪ್ರಸ್ತಾಪವನ್ನೂ ಮಾಡಿದ್ದು, ಇನ್ನೂ ಪರಿಶೀಲನಾ ಹಂತದಲ್ಲಿರುವ್ಯದರಿಂದ ಈ ಬಗ್ಗೆ ಅಂತಿಮ ತೀರ್ಮಾನ ಕೈಗೊಂಡಿರುವುದಿಲ್ಲವೆಂದು ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ತಿಳಿಸಿರುತ್ತಾರೆ. | ನಿಗದಿಪಡಿಸಿ ಸುಮನಹಳ್ಳಿ ಕುಷ್ಠ ರೋಗಿಗಳ ಪುನರ್ವಸತಿ ಕೇಂದ್ರಕ್ಕೆ ನೀಡಿದೆ. ಅಲ್ಲದೇ, ಮೇಲ್ಕಂಡ ಆದೇಶದ ಪ್ರಕಾರ 5 ಎಕರೆ ಜಮೀನನ್ನು ನಾಡಪ್ರಭು ಕೆಂಪೇಗೌಡ ಅಭಿವೃದ್ಧಿ ಪ್ರಾಧಿಕಾರ ಇವರಿಗೆ ಪ್ರತಿ ವರ್ಷ ಎಕರೆಯೊಂದಕ್ಕೆ ರೂ.1,000/–ರಂತೆ ಗುತ್ತಿಗೆ ದರ ನಿಗಧಿಪಡಿಸಿ, 30 ವರ್ಷಗಳ ಕಾಲ ಗುತ್ತಿಗೆ ನೀಡಲು ಮಂಜೂರಾತಿ ನೀಡಿದೆಯೆಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿದ ಸಮಿತಿಯು ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |
| 19 | 3642<br>ಚು.ಗು.ಪ್ರ.: 109<br>ಶ್ರೀ ಕೆ.ಆರ್. ಮಲ್ಲಿಕಾರ್ಜುನಪ್ಪ<br>ವಿಪನದಿ: 05.07.2010 | ಪರಿವಾರ, ತಳವಾರ, ಮಾಲೇರು, ನಾಯಕ, ಕಾಡು ಕುರುಬ, ಜೇನು ಕುರುಬ, ಗೊಂಡಾ, ರಾಜಗೊಂಡ ಮುಂತಾದ ಜಾತಿಗಳನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸುವ ಬಗ್ಗೆ | ಪರಿವಾರ, ತಳವಾರ, ಜಾತಿಗಳು ನಾಯಕ, ಜನಾಂಗದ ಪರ್ಯಾಯ ಪದಗಳೆಂದು ಪರಿಗಣಿಸಿ ಪರಿಶಿಷ್ಟ ಪಂಗಡದ ಪಟ್ಟಿಗೆ ಸೇರಿಸಲು ಕೇಂದ್ರ ಸರ್ಕಾರಕ್ಕೆ ಅನೇಕ ಬಾರಿ ಶಿಫಾರಸ್ಸು ಮಾಡಲಾಗಿತ್ತು. ಆದರೆ ಕೇಂದ್ರ ಸರ್ಕಾರದಿಂದ ಪರಿವಾರ, ಮತ್ತು ತಳವಾರ ಜನಾಂಗ ದವರಲ್ಲಿ ಪರಿಶಿಷ್ಟ ಪಂಗಡದ ಯಾವುದೇ ಗುಣಲಕ್ಷಣಗಳನ್ನು | ದಿನಾಂಕ: 13.05.2019ರಂದು ನಡೆದ ಸಮಿತಿಯ ಸಭೆಯಲ್ಲಿ ಚರ್ಚಿಸಿದಾಗ,<br>1. ಪರಿವಾರ ಮತ್ತು ತಳವಾರ ಜಾತಿಗಳನ್ನು ಪರಿಶಿಷ್ಟ ಪಂಗಡದ ನಾಯಕ ಜನಾಂಗದ ಪರ್ಯಾಯ ಪದಗಳೆಂದು ಸೇರಿಸಲು ಸರ್ಕಾರದ ಪತ್ರ ಸಂಖ್ಯೆ: ಸಕಇ 23 ಎಸ್‌ಎಡಿ 2009, ದಿ: 25.2.2014ರಂದು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿತ್ತು. ಕೇಂದ್ರ ಸರ್ಕಾರ ಆಗಸ್ಟ್–2016ರಲ್ಲಿ ಕೆಲವೊಂದು ಪೂರಕ ಮಾಹಿತಿಗಳನ್ನೊಳಗೊಂಡ ಸ್ಪಷ್ಟೀಕರಣ ಕೇಳಿದ್ದು, ದಿ: 21.8.2017ರಲ್ಲಿ ಕೇಂದ್ರ ಸರ್ಕಾರಕ್ಕೆ ಮಾಹಿತಿಯನ್ನು ಕಳುಹಿಸಲಾಗಿದೆ |

| | | | | |
|---|---|---|---|---|
| | | | ಹೊಂದಿರುವುದಿಲ್ಲವೆಂದು ಪ್ರಸ್ತಾವನೆ ಹಿಂದಿರುಗಿಸಿರುತ್ತಾರೆ ಆದಾಗ್ಯೂ ಇನ್ನೊಮ್ಮೆ ಪರಿವಾರ, ಮತ್ತು ತಳವಾರ ಜನಾಂಗವನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸುವ ಕುರಿತಂತೆ ಮಾನವ ಶಾಸ್ತ್ರಜ್ಞರಿಂದ ಕುಲ ಶಾಸ್ತ್ರೀಯ ಅಧ್ಯಯನ ನಡೆಸಲು ಕ್ರಮ ಕೈಗೊಳ್ಳಲಾಗಿದೆ. ವಿಶ್ವವಿದ್ಯಾಲಯದಿಂದ ವರದಿ ಸ್ವೀಕರಿಸಿದ ನಂತರ ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂದು ಮಾನ್ಯ ಸಮಾಜ ಕಲ್ಯಾಣ ಸಚಿವರು ತಿಳಿಸಿದರು. | 2. ಮಲೇರು/ಮಾಲೇರು ಜನಾಂಗದ ಆಚಾರ ವಿಚಾರಗಳ ಬಗ್ಗೆ ಅಧ್ಯಯನ ನಡೆಸಿ ವರದಿ ಸಲ್ಲಿಸುವಂತೆ ದಿ: 2.8.2016ರಂದು ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆ, ಮೈಸೂರು ಇವರನ್ನು ಕೋರಲಾಗಿದೆ.<br><br>ಮಲೇರು, ನಾಯಕ, ಕಾಡು ಕುರುಬ, ಜೇನುಕುರುಬ, ಗೊಂಡಾ, ರಾಜಗೊಂಡ ಜಾತಿಗಳು ಈಗಾಗಲೇ ಪರಿಶಿಷ್ಟ ಪಂಗಡದ ಪಟ್ಟಿಯಲ್ಲಿ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ಸಮಿತಿಯು ತೀರ್ಮಾನಿಸಿತು. |
| 20 | 2967<br>ಚು.ಪ್ರ: 58<br>ಶ್ರೀ ಕೆ.ಸಿ. ಕೊಂಡಯ್ಯ<br>ವಿಪನದಿ: 01.08.2008 | ಕಳೆದ ಮೂರು ವರ್ಷಗಳಿಂದ ರಾಜ್ಯದಲ್ಲಿ ಪರಿಶಿಷ್ಟ ಜಾತಿ/ಪಂಗಡದ ವಿದ್ಯಾರ್ಥಿಗಳಿಗೆ ನಿರ್ಮಿಸುತ್ತಿರುವ ಹಾಗೂ ಇದುವರೆಗೆ ಪೂರ್ಣಗೊಳ್ಳದೆ ಬಾಕಿ ಉಳಿದಿರುವ ವಿದ್ಯಾರ್ಥಿ ನಿಲಯಗಳ ಬಗ್ಗೆ. | ಈ ವರ್ಷ ಆದ್ಯತೆ ಮೇಲೆ ಬಾಕಿಯಿರುವ ಹಾಸ್ಟೆಲ್‌ಗಳ ನಿರ್ಮಾಣವನ್ನು ಪೂರ್ಣಗೊಳಿಸ ಲಾಗುವುದು ಎಂದು ಮಾನ್ಯ ಸಮಾಜ ಕಲ್ಯಾಣ ಸಚಿವರು ತಿಳಿಸಿದರು. | ದಿನಾಂಕ: 13.05.2019ರಂದು ನಡೆದ ಸಮಿತಿಯ ಸಭೆಯಲ್ಲಿ ಚರ್ಚಿಸಿದಾಗ,<br><br>2007–08ನೇ ಸಾಲಿನಿಂದ 2010–11ನೇ ಸಾಲಿನವರೆಗೆ ಕೆಳಕಂಡಂತೆ ವಿದ್ಯಾರ್ಥಿ ನಿಲಯಗಳ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ.<br><br>(ರೂ. ಲಕ್ಷಗಳಲ್ಲಿ) |

| ವರ್ಷ | ನಿರ್ಮಾಣ | ಬಿಡುಗಡೆ | ನಿರ್ಮಾಣ |
|---|---|---|---|
| 2007–08 | 31 | 1949.86 | KRIES, KRIDL, N.K |
| 2008–09 | 53 | 2191.00 | |
| 2009–10 | 106 | 6099.00 | |
| 2010–11 | 65 | 8100.00 | |

| | | | | |
|---|---|---|---|---|
| | | | | **ಹೆಚ್ಚುವರಿ ಮಾಹಿತಿ:**<br><br>2011–12, 2012–13, 2013–14, 2014–15, 2015–16, 2016–17 ಮತ್ತು 2017–18ನೇ ಸಾಲಿನಲ್ಲಿ ವಿದ್ಯಾರ್ಥಿ ನಿಲಯಗಳಿಗೆ ಸ್ವಂತ ಕಟ್ಟಡಗಳನ್ನು ನಿರ್ಮಾಣ ಮಾಡಲು ಬಿಡುಗಡೆ ಮಾಡಲಾಗಿರುವ ಅನುದಾನದ ವಿವರ :–<br>(ರೂ.ಲಕ್ಷಗಳಲ್ಲಿ) |

| ವರ್ಷ | ನಿರ್ಮಾಣ | ಬಿಡುಗಡೆ | ನಿರ್ಮಾಣ |
|---|---|---|---|
| 2011–12 | 71 | 3993.95 | KRIES, KRIDL, N.K |
| 2012–13 | 62 | 11380.00 | |
| 2013–14 | 25 | 4852.17 | |
| 2014–15 | 11 | 6303.49 | |
| 2015–16 | 83 | 21671.60 | |
| 2016–17 | 54 | 5940.00 | |
| 2017–18 | 40 | 15908.20 | |
| 2018–19 | 50 | 25662.30 | |

2007–08 ರಿಂದ 2018–19ರವರೆಗೆ ಒಟ್ಟು 651 ವಿದ್ಯಾರ್ಥಿ ನಿಲಯಗಳ ಕಟ್ಟಡ ನಿರ್ಮಾಣ ಮಾಡಲು ಮಂಜೂರಾತಿ ನೀಡಲಾಗಿರುತ್ತದೆ. ಈ ಪೈಕಿ ಇದುವರೆವಿಗೂ 414 ವಿದ್ಯಾರ್ಥಿ ನಿಲಯಗಳ ಕಟ್ಟಡ ನಿರ್ಮಾಣ ಕಾಮಗಾರಿಗಳು ಪೂರ್ಣಗೊಂಡಿವೆ. 187 ವಿದ್ಯಾರ್ಥಿ ನಿಲಯಗಳ ಕಟ್ಟಡ ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿವೆ. 50 ಕಟ್ಟಡಗಳ ನಿರ್ಮಾಣ ಕಾಮಗಾರಿ ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದೆ.

| | | | | |
|---|---|---|---|---|
| | | | | **ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ:**<br>ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖಾ ವತಿಯಿಂದ 48 ವಿದ್ಯಾರ್ಥಿ ನಿಲಯಗಳಿಗೆ ಸ್ವಂತ ಕಟ್ಟಡ ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿದ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |
| 21 | 2968<br>ಚು.ಪ್ರ. 54<br>ಶ್ರೀ ಜಿ.ಕೆ. ಪಾಟೀಲ್<br>ವಿಪನದಿ: 01.08.2008 | ವಿಜಾಪುರ ಜಿಲ್ಲೆಯ ಸಮಾಜ ಕಲ್ಯಾಣ ಇಲಾಖೆಯಲ್ಲಿ ಅಧಿಕ ಹುದ್ದೆಗಳು ಖಾಲಿ ಇರುವುದರಿಂದ ವಸತಿ ನಿಲಯಗಳ ನಿರ್ವಹಣೆಯಲ್ಲಿ ಲೋಪಗಳು ಕಂಡು ಬರುತ್ತಿದ್ದು ಇವುಗಳ ನಿವಾರಣೆಗೆ ತಕ್ಷಣವೇ ಕ್ರಮ ಕೈಗೊಳ್ಳುವ ಬಗ್ಗೆ | ವಿದ್ಯಾರ್ಥಿ ನಿಲಯಗಳಲ್ಲಿ ಮೂಲಭೂತ ಸೌಲಭ್ಯದ ಕೊರತೆ ಸಮಸ್ಯೆ ಇಡೀ ರಾಜ್ಯದಲ್ಲಿ ಇದೆ. ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಜೊತೆಯಲ್ಲಿ ಮಾತನಾಡಲಾಗಿದೆ. ಮುಂದಿನ ದಿನಗಳಲ್ಲಿ ಈ ಎಲ್ಲಾ ಸಮಸ್ಯೆಗಳನ್ನು ನಿವಾರಿಸಲಾಗುತ್ತದೆ ಎಂದು ಮಾನ್ಯ ಸಮಾಜ ಕಲ್ಯಾಣ ಸಚಿವರು ತಿಳಿಸಿದರು. | ದಿನಾಂಕ: 13.05.2019ರಂದು ನಡೆದ ಸಮಿತಿಯ ಸಭೆಯಲ್ಲಿ ಚರ್ಚಿಸಿದಾಗ,<br>1. ಸಮಾಜ ಕಲ್ಯಾಣ ಇಲಾಖೆಯಲ್ಲಿ 2010ನೇ ಸಾಲಿನಲ್ಲಿ 282 ವಾರ್ಡನ್ ಹುದ್ದೆಗಳನ್ನು ಹಾಗೂ 27 ಸೀನಿಯರ್ ವಾರ್ಡನ್ ಹುದ್ದೆಗಳನ್ನು ಕೆ.ಪಿ.ಎಸ್.ಸಿ. ಮೂಲಕ ಭರ್ತಿ ಮಾಡಲಾಗಿದೆ.<br>2. ಕೆ.ಪಿ.ಎಸ್.ಸಿ ಮೂಲಕ ಆಯ್ಕೆಗೊಂಡ 443 ಅಭ್ಯರ್ಥಿಗಳ ಮೂಲ ದಾಖಲೆಗಳ ಪರಿಶೀಲನೆ ಮುಗಿದಿದ್ದು, ಸಿಂಧುತ್ವ/ಪೊಲೀಸ್ ವರದಿ/ವೈದ್ಯಕೀಯ ವರದಿ ಪಡೆಯಲಾಗುತ್ತಿದೆ. ಈ ಪ್ರಕ್ರಿಯೆ ಪೂರ್ಣಗೊಂಡ ನಂತರ ನೇಮಕಾತಿ ಆದೇಶ ಹೊರಡಿಸಲಾಗುವುದು.<br>3. ಜಿಲ್ಲಾ ಹಂತದಲ್ಲಿ ಗ್ರೂಪ್–ಡಿ ಹುದ್ದೆಗಳಾದ ಅಡುಗೆ ಸಹಾಯಕರ 885 ಮತ್ತು ಕಾವಲುಗಾರರ 879 ಒಟ್ಟು 1764 ಹುದ್ದೆಗಳನ್ನು ಭರ್ತಿ ಮಾಡಲು ಈಗಾಗಲೇ ಕ್ರಮವಹಿಸಲಾಗಿದೆ.<br>4. ವಿಜಯಪುರ ಜಿಲ್ಲೆಯಲ್ಲಿ ವಾರ್ಡನ್ ವೃಂದದಲ್ಲಿ ಮಂಜೂರು ಭರ್ತಿ ಮತ್ತು ಖಾಲಿ ಹುದ್ದೆಗಳ ವಿವರ ಕೆಳಕಂಡಂತಿದೆ : |

| | | | | |
|---|---|---|---|---|
| | | | | <table><tr><td>ಮಂಜೂರಾತಿ</td><td>ಭರ್ತಿ</td><td>ಖಾಲಿ</td></tr><tr><td>72</td><td>48</td><td>24</td></tr></table><br>5. ವಿಜಯಪುರ ಜಿಲ್ಲೆಯಲ್ಲಿ ಖಾಲಿ ಇರುವ 27 ಅಡುಗೆ ಸಹಾಯಕರ ಪೈಕಿ 18 ಹುದ್ದೆಗಳನ್ನು ಮತ್ತು 36 ಕಾವಲುಗಾರ ಹುದ್ದೆಗಳ ಪೈಕಿ 31 ಹುದ್ದೆಗಳಿಗೆ ಈಗಾಗಲೇ ನೇಮಕಾತಿ ಆದೇಶ ಹೊರಡಿಸಲಾಗಿದೆ.<br><br>ಮೇಲ್ಕಂಡಂತೆ ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿದ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |
| 22 | 2970<br>ಚು.ರ.ಪ್ರ: 88<br>ಶ್ರೀಮತಿ ವಿಮಲಾಗೌಡ<br>ವಿಪನದಿ: 01–08–2008 | ರಾಜ್ಯದಲ್ಲಿ ಸಮಾಜ ಕಲ್ಯಾಣ ಇಲಾಖೆ ವತಿಯಿಂದ ನಡೆಸುತ್ತಿರುವ ಸ್ವಂತ ಕಟ್ಟಡ ಇಲ್ಲದಿರುವ ವಿದ್ಯಾರ್ಥಿ ನಿಲಯಗಳಿಗೆ ಸ್ವಂತ ಕಟ್ಟಡ ನಿರ್ಮಿಸುವ ಬಗ್ಗೆ. | ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿರುವ ವಿದ್ಯಾರ್ಥಿ ನಿಲಯಗಳಿಗೆ ಸ್ವಂತ ಕಟ್ಟಡ ನಿರ್ಮಿಸಲು ಸರ್ಕಾರಿ ನಿವೇಶನವನ್ನು ಪಡೆದುಕೊಂಡು ಸರ್ಕಾರಿ ನಿವೇಶನ ಲಭ್ಯವಿಲ್ಲದ ಕಡೆ ಖಾಸಗಿಯವರಿಂದ ನಿವೇಶನ ಖರೀದಿಸಿ ಸ್ವಂತ ಕಟ್ಟಡವನ್ನು ನಿರ್ಮಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ ನಡೆಸುತ್ತಿರುವ 202 ವಿದ್ಯಾರ್ಥಿ ನಿಲಯಗಳ ಕಟ್ಟಡ ನಿರ್ಮಾಣ ಕಾರ್ಯ ಕೈಗೊಳ್ಳಲಾಗಿದ್ದು, ಉಳಿದ ಕಡೆಗಳಲ್ಲಿ ನಿವೇಶನಗಳನ್ನು ಪಡೆದು ಹಂತ ಹಂತವಾಗಿ ಎಲ್ಲಾ | ದಿನಾಂಕ: 13.05.2019ರಂದು ನಡೆದ ಸಮಿತಿಯ ಸಭೆಯಲ್ಲಿ ಚರ್ಚಿಸಿದಾಗ, ಸಮಾಜ ಕಲ್ಯಾಣ ಇಲಾಖೆಯಲ್ಲಿ 159 ಮೆಟ್ರಿಕ್ ಪೂರ್ವ ಮತ್ತು 200 ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳು ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿವೆ. ಈ ಪೈಕಿ 79 ಮೆಟ್ರಿಕ್ ಪೂರ್ವ ಮತ್ತು 76 ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳಿಗೆ ಸ್ವಂತ ಕಟ್ಟಡಗಳನ್ನು ನಿರ್ಮಿಸಲಾಗುತ್ತಿದೆ.<br><br>ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳ ಶೈಕ್ಷಣಿಕ ಅಭಿವೃದ್ಧಿಗಾಗಿ 1867 ಸರ್ಕಾರಿ ವಿದ್ಯಾರ್ಥಿ ನಿಲಯಗಳನ್ನು ನಡೆಸಲಾಗುತ್ತಿರುತ್ತದೆ. ಈ ಪೈಕಿ 1462 ವಿದ್ಯಾರ್ಥಿ ನಿಲಯಗಳು ಸ್ವಂತ ಕಟ್ಟಡದಲ್ಲಿ 60 ವಿದ್ಯಾರ್ಥಿ ನಿಲಯಗಳು ಬಾಡಿಗೆ ರಹಿತ ಕಟ್ಟಡದಲ್ಲಿ ಹಾಗೂ 345 ವಿದ್ಯಾರ್ಥಿ ನಿಲಯಗಳು ಬಾಡಿಗೆ ಕಟ್ಟಡಗಳಲ್ಲಿ ನಡೆಯುತ್ತಿರುತ್ತದೆ. ಈ ಪೈಕಿ 243 ವಿದ್ಯಾರ್ಥಿ ನಿಲಯಗಳೀಗೆ ಈಗಾಗಲೇ ಸ್ವಂತ ಕಟ್ಟಡ ನಿರ್ಮಾಣ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ. 69 ವಿದ್ಯಾರ್ಥಿ ನಿಲಯಗಳಿಗೆ ನಿವೇಶನಗಳನ್ನು ಗುರುತಿಸಿದ್ದು, 33 |

| | | | | |
|---|---|---|---|---|
| | | | ವಿದ್ಯಾರ್ಥಿನಿಲಯಗಳಿಗೆ ಸ್ವಂತ ಕಟ್ಟಡಗಳನ್ನು ನಿರ್ಮಿಸಲು ಕ್ರಮ ವಹಿಸಲಾಗುತ್ತಿದೆ ಎಂದು ಮಾನ್ಯ ಸಮಾಜ ಕಲ್ಯಾಣ ಸಚಿವರು ತಿಳಿಸಿದರು. | ವಿದ್ಯಾರ್ಥಿ ನಿಲಯಗಳಿಗೆ ನಿವೇಶನಗಳನ್ನು ಗುರುತಿಸಬೇಕಾಗಿದೆ.<br>2007–08 ರಿಂದ 2017–18ರವರೆಗೆ ಒಟ್ಟು 607 ವಿದ್ಯಾರ್ಥಿ ನಿಲಯಗಳು ಕಟ್ಟಡ ನಿರ್ಮಾಣ ಮಾಡಲು ಮಂಜೂರಾತಿ ನೀಡಲಾಗಿರುತ್ತದೆ. ಈ ಪೈಕಿ ಇದುವರೆವಿಗೂ 420 ವಿದ್ಯಾರ್ಥಿ ನಿಲಯಗಳ ಕಟ್ಟಡ ನಿರ್ಮಾಣ ಕಾಮಗಾರಿಗಳು ಪೂರ್ಣಗೊಂಡಿದ್ದು, ಬಾಕಿ 187 ವಿದ್ಯಾರ್ಥಿ ನಿಲಯಗಳ ಕಟ್ಟಡ ನಿರ್ಮಾಣ ಕಾಮಗಾರಿಗಳು ವಿವಿಧ ಹಂತಗಳಲ್ಲಿ ಪ್ರಗತಿಯಲ್ಲಿರುತ್ತದೆ.<br>**ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ:**<br>255 ಸರ್ಕಾರಿ ಮೆಟ್ರಿಕ್ ಪೂರ್ವ/ನಂತರದ ವಿದ್ಯಾರ್ಥಿ ನಿಲಯಗಳು ಕಾರ್ಯನಿರ್ವಹಿಸುತ್ತಿದ್ದು, ಈ ಪೈಕಿ 148 ವಿದ್ಯಾರ್ಥಿ ನಿಲಯಗಳು ಸ್ವಂತ ಕಟ್ಟಡದಲ್ಲಿವೆ. 107 ವಿದ್ಯಾರ್ಥಿ ನಿಲಯಗಳ ಪೈಕಿ 51 ವಿದ್ಯಾರ್ಥಿ ನಿಲಯಗಳಿಗೆ ಸ್ವಂತ ಕಟ್ಟಡ ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿದೆ. 5 ವಿದ್ಯಾರ್ಥಿ ನಿಲಯಗಳಿಗೆ ನಿವೇಶನ ಲಭ್ಯವಿದ್ದು, ಉಳಿದ 51 ವಿದ್ಯಾರ್ಥಿ ನಿಲಯಗಳಿಗೆ ನಿವೇಶನವನ್ನು ಪಡೆಯಬೇಕಾಗಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ಸಮಿತಿಯು ತೀರ್ಮಾನಿಸಿತು. |
| 23 | 3328<br>ಚು.ರ.ಪ್ರ.: 517<br>ಶ್ರೀ ಡಿ.ಎಸ್. ವೀರಯ್ಯ<br>ವಿಪನದಿ: 20.07.2009 | ಡಾ:ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮದಲ್ಲಿ ಹಿಂದಿನ ಅಧ್ಯಕ್ಷರುಗಳ ಅವಧಿಯಲ್ಲಿ ವಿಚಕ್ಷಣ ದಳ ಹಾಗೂ ವಸೂಲಾತಿ ದಳಗಳು ಕಡಿಮೆ ಸಾಲ ವಸೂಲಾತಿ ಮಾಡಿರುವ ಬಗ್ಗೆ | ವಸೂಲಾತಿ ಘಟಕವು ವಸೂಲಾತಿ ದಳಕ್ಕೆ ತಿಳುವಳಿಕೆ ನೀಡುತ್ತಿದ್ದು, ಬರುವ ದಿನಗಳಲ್ಲಿ ವಸೂಲಾತಿಯಲ್ಲಿ ಹೆಚ್ಚಿನ ಪ್ರಗತಿ ಉಂಟಾಗುವ ಸಾಧ್ಯತೆ ಇರುತ್ತದೆ. 2008–09ನೇ ಸಾಲಿನಲ್ಲಿ ಕಡಿಮೆ ವಸೂಲಾತಿ ಮಾಡಿರುವ 9 ಜಿಲ್ಲಾ ವ್ಯವಸ್ಥಾಪಕರು ಹಾಗೂ 46 | ದಿನಾಂಕ: 13.05.2019ರಂದು ನಡೆದ ಸಮಿತಿಯ ಸಭೆಯಲ್ಲಿ ಚರ್ಚಿಸಿದಾಗ,<br>**ಡಾ: ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ :–**<br>ವಸೂಲಾತಿ ಕಳಪೆ ಸಾಧನೆ ಮಾಡಿರುವ ಎಲ್ಲಾ 55 ಅಧಿಕಾರಿಗಳ ವಿರುದ್ಧ ಇಲಾಖಾ ವಿಚಾರಣೆ ನಡೆಸಲಾಗಿದೆ. ಆರೋಪ ಸಾಬೀತಾಗಿರುವ 29 ಅಧಿಕಾರಿಗಳಿಗೆ ದಂಡನೆ |

| | | | | |
|---|---|---|---|---|
| | | | ತಾಲ್ಲೂಕು ಅಭಿವೃದ್ಧಿ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಜರುಗಿಸಲು ನೋಟೀಸ್ ಜಾರಿಗೊಳಿಸಿ ಇಲಾಖಾ ವಿಚಾರಣೆ ನಡೆಸಲು ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಮಾನ್ಯ ಸಮಾಜ ಕಲ್ಯಾಣ ಸಚಿವರು ತಿಳಿಸಿದರು. | ವಿಧಿಸಲಾಗಿದೆ. ಸರ್ಕಾರವು ದಿ: 13.5.2013ರವರೆಗೆ ನಿಗಮದಿಂದ ಮಂಜೂರು ಮಾಡಿರುವ ಎಲ್ಲಾ ಸಾಲಗಳನ್ನು ಮನ್ನಾ ಮಾಡಲಾಗಿದೆ. ನಂತರ ನೀಡಿರುವ ಸಾಲಗಳನ್ನು ಮಾತ್ರ ವಸೂಲಿ ಮಾಡಲಾಗುತ್ತಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ಸಮಿತಿಯು ತೀರ್ಮಾನಿಸಿತು. |
| 24 | 3329<br>ಚು.ಪ್ರ.: 532<br>ಶ್ರೀ ವೈ.ಎಸ್.ವಿ. ದತ್ತ<br>ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ<br>ವಿಪನದಿ: 27.07.2009 | ಪೂರ್ವ ಮೆಟ್ರಿಕ್ ಹಾಸ್ಟೆಲ್‌ಗಳಿಗೆ ವಿದ್ಯಾರ್ಥಿಗಳನ್ನು ಆಯ್ಕೆ ಮಾಡತಕ್ಕಂತಹ ಸಂದರ್ಭಗಳಲ್ಲಿ ಈ ಹಿಂದೆ ತಾಲ್ಲೂಕ್ ಪಂಚಾಯತಿ ಅಧ್ಯಕ್ಷರು ಸಮಿತಿಯ ಅಧ್ಯಕ್ಷರಾಗಿದ್ದರು. ಈಗ ಈ ಸಮಿತಿಯಿಂದ ತೆಗೆದಿರುವ ಬಗ್ಗೆ. | ಸಂಬಂಧಪಟ್ಟ ತಾಲ್ಲೂಕು ಪಂಚಾಯತಿ ಅಧ್ಯಕ್ಷರನ್ನು ಸದಸ್ಯರನ್ನಾಗಿ ಮಾಡುವುದಕ್ಕೆ ಸರ್ಕಾರ ಪರಿಶೀಲನೆ ಮಾಡುತ್ತದೆ ಎಂದು ಮಾನ್ಯ ಸಮಾಜ ಕಲ್ಯಾಣ ಸಚಿವರು ತಿಳಿಸಿದರು. | ದಿನಾಂಕ:13.05.2019ರಂದು ನಡೆದ ಸಮಿತಿಯ ಸಭೆಯಲ್ಲಿ ಚರ್ಚಿಸಿದಾಗ, ಮೆಟ್ರಿಕ್ ಪೂರ್ವ ಸರ್ಕಾರಿ ವಿದ್ಯಾರ್ಥಿ ನಿಲಯಗಳಿಗೆ ವಿದ್ಯಾರ್ಥಿಗಳನ್ನು ಆಯಾ ಕ್ಷೇತ್ರದ ವಿಧಾನಸಭಾ ಸದಸ್ಯರ ಅಧ್ಯಕ್ಷತೆಯಲ್ಲಿರುವ ಸಮಿತಿಯ ಮೂಲಕ ಆಯ್ಕೆ ಮಾಡಲಾಗುತ್ತಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ಸಮಿತಿಯು ತೀರ್ಮಾನಿಸಿತು. |
| 25 | 3331<br>ಮಾನ್ಯ ಸಭಾಪತಿಯವರ ಅಪ್ಪಣೆ ಮೇರೆಗೆ ಚರ್ಚೆ<br>ಶ್ರೀ ಪ್ರತಾಪಚಂದ್ರ ಶೆಟ್ಟಿ<br>ವಿಪನದಿ: 28.07.2009 | ಸಂವಿಧಾನ ಶಿಲ್ಪಿ ಡಾ: ಬಿ.ಆರ್. ಅಂಬೇಡ್ಕರ್‌ರವರ ಭಾವಚಿತ್ರವನ್ನು ಸರ್ಕಾರದ ಎಲ್ಲಾ ಕಚೇರಿಗಳಲ್ಲಿ ಅಳವಡಿಸುವ ಬಗ್ಗೆ ಸರ್ಕಾರದ ಮಂದಗಾಮಿ ನಿಲುವಿನ ಕುರಿತು. | ಈ ತಿಂಗಳ 30ನೇ ತಾರೀಖಿನಂದು(30–07–2009) ಫೋಟೋವನ್ನು ಆಯ್ಕೆ ಮಾಡುವ ಬಗ್ಗೆ ಸಭೆ ನಡೆಯುತ್ತದೆ. ಅದರ ನಂತರ ಇದಕ್ಕೆ ಸಂಬಂಧಪಟ್ಟಂತೆ ಕಡತವನ್ನು ವಾರ್ತಾ ಇಲಾಖೆಗೆ ಕಳುಹಿಸಿ, ಮುದ್ರಣ ಮಾಡಿ ತಕ್ಷಣ ಎಲ್ಲಾ ವ್ಯವಸ್ಥೆಯನ್ನು ಮಾಡುತ್ತೇವೆ ಎಂದು ಮಾನ್ಯ ಸಮಾಜ ಕಲ್ಯಾಣ ಸಚಿವರು ತಿಳಿಸಿದರು. | ದಿನಾಂಕ:13.05.2019ರಂದು ನಡೆದ ಸಮಿತಿಯ ಸಭೆಯಲ್ಲಿ ಚರ್ಚಿಸಿದಾಗ, ಡಾ: ಬಿ.ಆರ್. ಅಂಬೇಡ್ಕರ್‌ರವರ ಭಾವಚಿತ್ರವನ್ನು ವಿಧಾನಸೌಧ, ವಿಕಾಸಸೌದದ ಸಚಿವರ ಕಚೇರಿಗಳು, ಸಚಿವಾಲಯಗಳು ಮತ್ತು ಬಹುಮಹಡಿ ಕಟ್ಟಡದಲ್ಲಿರವ ಎಲ್ಲಾ ಕಚೇರಿಗಳಲ್ಲಿ ಹಾಕಲಾಗಿದೆ. ಸರ್ಕಾರದ ಆದೇಶ ಸಂಖ್ಯೆ: ಸಕಇ 113 ಪಕಸೇ 2009, ದಿ: 17.02.2010ರ ಪ್ರಕಾರ ಜಿಲ್ಲಾ ಮತ್ತು ತಾಲ್ಲೂಕಿನ ಎಲ್ಲಾ ಸರ್ಕಾರಿ ಕಚೇರಿಗಳಲ್ಲಿ ಹಾಕುವಂತೆ ನಿರ್ದೇಶನ ನೀಡಲಾಗಿದೆ.<br>ಅದರಂತೆ, ಈವರೆವಿಗೆ 50,000 ಡಾ: ಬಿ.ಆರ್. ಅಂಬೇಡ್ಕರ್‌ರವರ ಭಾವಚಿತ್ರಗಳನ್ನು ಮುದ್ರಿಸಿ, 129 |

| | | | | |
|---|---|---|---|---|
| | | | | ಭಾವಚಿತ್ರಗಳಿಗೆ ಫ್ರೇಂ ಹಾಕಿಸಿ ವಿಧಾನಸೌಧ ಮತ್ತು ವಿಕಾಸ ಸೌಧದಲ್ಲಿರುವ ಕಚೇರಿಗಳಿಗೆ ವಿತರಿಸಲಾಗಿದೆ. 45,600 ಪ್ರತಿಗಳನ್ನು ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಸರ್ಕಾರಿ ಕಚೇರಿಗಳಲ್ಲಿ ಹಾಕಲು ಜಿಲ್ಲಾಧಿಕಾರಿಗಳಿ ವಿತರಿಸಲಾಗಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿದ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |
| 26 | 3333<br>ಚು.ಗು.ಪ್ರ : 91<br>ಶ್ರೀ ಸಿದ್ದರಾಜು<br>ವಿಪನದಿ: 21.12.2009 | ಪರಿವಾರ, ತಳವಾರ, ಮಾಲೇರು, ಬೆಸ್ತ,ಕೋಳಿ, ನಾಯಕ, ಕಾಡು ಕುರುಬ, ಜೇನುಕುರುಬ, ಗೊಂಡಾ, ರಾಜಗೊಂಡ, ಕೋಳಿಡೋರ ಮತ್ತು ಟ್ರೋಕ್ರಿಕೋಳಿ ಮುಂತಾದ ಜನಾಂಗದವರಿಗೆ ದೊರಕಬೇಕಾದ ನ್ಯಾಯಯುತ ಸೌಲಭ್ಯಗಳು ಸಿಗದಿರುವ ಬಗ್ಗೆ ಹಾಗೂ ಇವರುಗಳನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಲು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸುವ ಬಗ್ಗೆ | ಈ ವಿಷಯವಾಗಿ ಈಗಾಗಲೇ ಕುಲಶಾಸ್ತ್ರೀಯ ಅಧ್ಯಯನವನ್ನು ಹಂಪಿ ವಿಶ್ವವಿದ್ಯಾಲಯದವರು ಮಾಡುತ್ತಿದ್ದಾರೆ. ಅಧ್ಯಯನದ ವರದಿ ಬಂದ ಕೂಡಲೇ ಅದನ್ನು ಸಚಿವ ಸಂಪುಟದಲ್ಲಿಟ್ಟು ಅದನ್ನು ಶಿಫಾರಸ್ಸು ಮಾಡಿ ಕಳುಹಿಸಿಕೊಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆಂದು ಮಾನ್ಯ ಸಮಾಜ ಕಲ್ಯಾಣ ಸಚಿವರು ತಿಳಿಸಿದರು. | ದಿನಾಂಕ: 13.05.2019ರಂದು ನಡೆದ ಸಮಿತಿಯ ಸಭೆಯಲ್ಲಿ ಚರ್ಚಿಸಿದಾಗ,<br>1. ಪರಿವಾರ ಮತ್ತು ತಳವಾರ ಜಾತಿಗಳನ್ನು ಪರಿಶಿಷ್ಟ ಪಂಗಡದ ನಾಯಕ ಜನಾಂಗದ ಪರ್ಯಾಯ ಪದಗಳೆಂದು ಸೇರಿಸಲು ಸರ್ಕಾರದ ಪತ್ರ ಸಂಖ್ಯೆ: ಸಕಇ 23 ಎಸ್‌ಎಡಿ 2009, ದಿ: 25.02.2014ರಂದು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿತ್ತು. ಕೇಂದ್ರ ಸರ್ಕಾರ ಆಗಸ್ಟ್–2016ರಲ್ಲಿ ಕೆಲವೊಂದು ಪೂರಕ ಮಾಹಿತಿಗಳನ್ನೊಳಗೊಂಡ ಸ್ಪಷ್ಟೀಕರಣ ಕೇಳಿದ್ದು, ದಿ: 21.08.2017ರಲ್ಲಿ ಕೇಂದ್ರ ಸರ್ಕಾರಕ್ಕೆ ಮಾಹಿತಿಯನ್ನು ಕಳುಹಿಸಲಾಗಿದೆ.<br>2. ಮಲೇರು, ನಾಯಕ, ಕಾಡುಕುರುಬ, ಜೇನುಕುರುಬ, ಗೂಂಡಾ, ರಾಜಗೊಂಡ, ಕೋಳಿಡೋರ ಮತ್ತು ಟೊಕ್ರಿಕೋಳಿ ಜಾತಿಗಳು ಈಗಾಗಲೇ ಪರಿಶಿಷ್ಟ ಪಂಗಡದ ಪಟ್ಟಿಯಲ್ಲಿ ಸೇರ್ಪಡೆಯಾಗಿರುತ್ತದೆ.<br>3. ಮಲೇರು/ಮಾಲೇರು ಜನಾಂಗದ ಆಚಾರ ವಿಚಾರಗಳು ಬಗ್ಗೆ ಅಧ್ಯಯನ ನಡೆಸಿ ವರದಿ ಸಲ್ಲಿಸುವಂತೆ ದಿ: 02.08.2016ರಂದು ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋದನಾ ಸಂಸ್ಥೆ, ಮೈಸೂರು ಇವರನ್ನು ಕೋರಲಾಗಿದೆ |

| | | | | |
|---|---|---|---|---|
| | | | | ಮೇಲ್ಕಂಡಂತೆ ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ಸಮಿತಿಯು ತೀರ್ಮಾನಿಸಿತು. |
| 27 | 3334<br>ಚು.ಗು.ಪ್ರ.12<br>ಶ್ರೀಮತಿ ಮೋಟಮ್ಮ<br>ವಿಪನದಿ: 21.12.2009 | ಕರ್ನಾಟಕ ರಾಜ್ಯದಲ್ಲಿ ಸಮಾಜ ಕಲ್ಯಾಣ ಇಲಾಖೆ ಪದವೀಧರರಿಗಾಗಿ ನಡೆಸುತ್ತಿರುವ ನರ್ಸ್ ಟ್ರೈನಿಂಗ್, ಪೈಲೆಟ್ ಟ್ರೈನಿಂಗ್, ಗಗನ ಸಖಿಯರ ಟ್ರೈನಿಂಗ್ ಕುರಿತು | ಪೈಲೆಟ್ ತರಬೇತಿ ಬಗ್ಗೆ ಮುಂದಿನ ಸಾಲಿಗೆ ಪರಿಶೀಲನೆ ಮಾಡಿ ಕಾರ್ಯಕ್ರಮ ರೂಪಿಸಲು ಪ್ರಯತ್ನಿಸುತ್ತೇವೆ ಎಂದು ಮಾನ್ಯ ಸಮಾಜ ಕಲ್ಯಾಣ ಸಚಿವರು ತಿಳಿಸಿದರು. | ದಿನಾಂಕ: 13.05.2019ರಂದು ನಡೆದ ಸಮಿತಿಯ ಸಭೆಯಲ್ಲಿ ಚರ್ಚಿಸಿದಾಗ, 2004-05 ಮತ್ತು 2005-06ನೇ ಸಾಲಿನಲ್ಲಿ ಪೈಲೆಟ್ ಟ್ರೈನಿಂಗ್ ತರಬೇತಿ ಪೂರ್ಣಗೊಳಿಸಿದ 10 ಅಭ್ಯರ್ಥಿಗಳಲ್ಲಿ ಯಾವುದೇ ಅಭ್ಯರ್ಥಿ ಉದ್ಯೋಗ ಪಡೆಯದಿರುವುದರಿಂದ ನಂತರದ ವರ್ಷಗಳಲ್ಲಿ ತರಬೇತಿ ಕಾರ್ಯಕ್ರಮವನ್ನು ಅನುಷ್ಠಾನ ಗೊಳಿಸಿರುವುದಿಲ್ಲ.<br><br>ಗಗನಸಖಿ ತರಬೇತಿ ಕಾರ್ಯಕ್ರಮವನ್ನು 2005-06 ರಿಂದ 2009-10ನೇ ಸಾಲಿನವರೆಗೆ ಅನುಷ್ಠಾನ ಗೊಳಿಸಿದ್ದು, ತರಬೇತಿ ಪಡೆದ ಅಭ್ಯರ್ಥಿಗಳಿಗೆ ಉದ್ಯೋಗ ದೊರಕದ ಕಾರಣ ನಂತರದ ವರ್ಷಗಳಲ್ಲಿ ತರಬೇತಿ ಕಾರ್ಯಕ್ರಮವನ್ನು ಅನುಷ್ಠಾನ ಗೊಳಿಸಿರುವುದಿಲ್ಲ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ಸಮಿತಿಯು ತೀರ್ಮಾನಿಸಿತು. |
| 28 | 3336<br>ಚು.ಗು.ಪ್ರ.: 127<br>ಶ್ರೀ ಡಿ.ಎಸ್. ವೀರಯ್ಯ<br>ವಿಪನದಿ: 21.12.2009 | 2007-08, 2008-09 ಮತ್ತು 2009-10ನೇ ಸಾಲಿನಲ್ಲಿ ಡಾ:ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ ದಿಂದ ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ ಕೊಳವೆ ಬಾವಿ ಕೊರೆಯಲು ನಿಗಧಿಪಡಿಸಿದ ಗುರಿ, ವಿದ್ಯುದ್ಧೀಕರಣ ಹಾಗೂ | ನೂರಕ್ಕೆ ನೂರರಷ್ಟು ಕೆಲಸ ಮಾಡುತ್ತೇವೆ. ಯಾವುದೇ ಕೊಳವೆ ಬಾವಿಯನ್ನು ಲ್ಯಾಪ್ಸ್ ಮಾಡುವುದಿಲ್ಲ. ಪ:ಜಾ/ಪ:ಪಂ ದವರಿಗೆ ಏನು ಕೆಲಸ ಆಗಬೇಕಾಗಿದೆ ಆ ಕೆಲಸವನ್ನು ನೂರಕ್ಕೆ ನೂರರಷ್ಟು ಪ್ರಾಮಾಣಿಕವಾಗಿ ಮಾಡಿ ತೋರಿಸುತ್ತೇವೆ ಎನ್ನುವಂತಹ ಮಾತನ್ನು ಹೇಳುವುದಕ್ಕೆ | ದಿನಾಂಕ: 13.05.2019ರಂದು ನಡೆದ ಸಮಿತಿಯ ಸಭೆಯಲ್ಲಿ ಚರ್ಚಿಸಿದಾಗ,<br><br><u>ಡಾ: ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ:</u><br>2007-08, 2008-09 ಮತ್ತು 2009-10ನೇ ಸಾಲಿನಲ್ಲಿ ಪರಿಶಿಷ್ಟ ಜಾತಿಯ 22440 ಫಲಾನುಭವಿಗಳಿಗೆ ಕೊಳವೆ ಬಾವಿಗಳನ್ನು ಕೊರೆಸಿ, ಪಂಪ್ ಮೋಟಾರ್ ಅಳವಡಿಸಿ 22440 ಕೊಳವೆ ಬಾವಿಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಿ ಪೂರ್ಣಗೊಳಿಸಲಾಗಿದೆ. |

| | | | | |
|---|---|---|---|---|
| | | ಕೊಳವೆ ಬಾವಿಗಳಿಗೆ ನಿಗಧಿ ಗೊಳಿಸುವ ಹಣವನ್ನು ಹೆಚ್ಚಿಸುವ ಬಗ್ಗೆ | ಬಯಸುತ್ತೇನೆ ಎಂದು ಮಾನ್ಯ ಸಮಾಜ ಕಲ್ಯಾಣ ಸಚಿವರು ತಿಳಿಸಿದರು. | 2018–19ನೇ ಸಾಲಿನಲ್ಲಿ ಘಟಕ ವೆಚ್ಚವನ್ನು ಸರ್ಕಾರದ ಆದೇಶ ಸಂಖ್ಯೆ: ಸಕಇ 35 ಎಸ್‌ಡಿಸಿ 2018, ದಿ:5.9.2018ರಲ್ಲಿ ಪರಿಷ್ಕರಿಸಿದ್ದು, ಬೆಂಗಳೂರು ವಿಭಾಗದ ಬೆಂಗಳೂರು (ನಗರ), ಬೆಂಗಳೂರು (ಗ್ರಾಮಾಂತರ) ರಾಮನಗರ, ಚಿಕ್ಕಬಳ್ಳಾಪುರ, ಕೋಲಾರ ಮತ್ತು ತುಮಕೂರು ಜಿಲ್ಲೆಗಳಿಗೆ ಘಟಕ ವೆಚ್ಚವನ್ನು ರೂ.4.50 ಲಕ್ಷಗಳಿಗೆ ಹೆಚ್ಚಿಸಲಾಗಿದೆ. ಉಳಿದ 24 ಜಿಲ್ಲೆಗಳಿಗೆ ಘಟಕ ವೆಚ್ಚವನ್ನು ರೂ.3.00 ಲಕ್ಷದಿಂದ ರೂ.3.50 ಲಕ್ಷಕ್ಕೆ ಹೆಚ್ಚಿಸಲಾಗಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ಸಮಿತಿಯು ತೀರ್ಮಾನಿಸಿತು. |
| 29 | 3644<br>ಚು.ರ.ಪ್ರ.: 116<br>ಶ್ರೀ ಆರ್.ಕೆ. ಸಿದ್ದರಾಜು<br>ವಿಪನದಿ: 05.07.2010 | ರಾಜ್ಯದಲ್ಲಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಪಟ್ಟಿಗೆ ಸೇರಿಸಲು ವಿವಿಧ ಜಾತಿ ಮತ್ತು ಸಮುದಾಯಗಳಿಂದ ಬಂದಿರುವ ಮನವಿಗಳ ಬಗ್ಗೆ ಕೈಗೊಂಡ ಕ್ರಮದ ಕುರಿತು. | ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡಕ್ಕೆ ಸೇರಿಸುವಂತೆ ಒಟ್ಟು 55 ಸಮುದಾಯದ ಜನರಿಂದ ಮನವಿಗಳನ್ನು ಸ್ವೀಕರಿಸಲಾಗಿದೆ. ಈ ಕುರಿತಂತೆ ಸೂಕ್ತ ಎಂಬುದಾಗಿ ಕಂಡು ಬರುವ ಪ್ರಕರಣಗಳಲ್ಲಿ ಮಾತ್ರ ಕುಲ ಶಾಸ್ತ್ರಿಯ ಅಧ್ಯಯನ ನಡೆಸಲು ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಮಾನ್ಯ ಸಮಾಜ ಕಲ್ಯಾಣ ಸಚಿವರು ತಿಳಿಸಿದರು. | ದಿನಾಂಕ: 13.05.2019ರಂದು ನಡೆದ ಸಮಿತಿಯ ಸಭೆಯಲ್ಲಿ ಚರ್ಚಿಸಿದಾಗ,<br>ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ಪಟ್ಟಿಗೆ ಸೇರಿಸಲು ಕೋರಿ ಜನಪ್ರತಿನಿಧಿಗಳು, ವಿವಿಧ ಸಂಘ ಸಂಸ್ಥೆಗಳು ಮತ್ತಿತರುಗಳು ಸಲ್ಲಿಸಿರುವ ಮನವಿಗಳನ್ನು ಪರಿಶೀಲಿಸಿ, ಈ ಕೆಳಕಂಡಂತೆ ಕ್ರಮ ಕೈಗೊಳ್ಳಲಾಗಿದೆ.<br><br>1. **ಮಡಿವಾಳ** ಸಮುದಾಯವನ್ನು ಪರಿಶಿಷ್ಟ ಜಾತಿ ಪಟ್ಟಿವೆ ಸೇರಿಸುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿರುತ್ತದೆ.<br>**2. ದೊಂಬಿದಾಸ, ದಾಸರಿ, ದಾಸರು, ಡಂಗದಾಸರು, ಚಕ್ರವಾದ್ಯ ದಾಸರು** ಸಮುದಾಯವನ್ನು ಪರಿಶಿಷ್ಟ ಜಾತಿ ಪಟ್ಟಿಗೆ ಸೇರಿಸುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿರುತ್ತದೆ.<br>**3. ಹಾಲಕ್ಕಿ ಒಕ್ಕಲು** ಸಮುದಾಯವನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಲು ದಿ: 21.10.2009ರಂದು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿತ್ತು. ಕೇಂದ್ರ ಸರ್ಕಾರದ ಬುಡಕಟ್ಟು |

| | | | | |
|---|---|---|---|---|
| | | | | ವ್ಯವಹಾರಗಳ ಸಚಿವಾಲಯವು ದಿನಾಂಕ: 07.05.2013ರಲ್ಲಿ ರಿಜಿಸ್ಟ್ರಾರ್ ಜನರಲ್ ಆಫ್ ಇಂಡಿಯಾರವರು ವ್ಯಕ್ತಪಡಿಸಿರುವ ಎಲ್ಲಾ ಅಂಶಗಳನ್ನು ಅಧ್ಯಯನಕ್ಕೆ ಒಳಪಡಿಸುವ ಮೂಲಕ ಮತ್ತೊಮ್ಮೆ ಆಳವಾದ ಕುಲಶಾಸ್ತ್ರೀಯ ಅಧ್ಯಯನ ನಡೆಸಿ, ವಿವರವಾದ ವರದಿಯನ್ನು ದಿನಾಂಕ: 08.02.2017ರಂದು ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗಿದೆ.<br>**4.** **ಕುಡಬಿ** ಜನಾಂಗವನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸುವ ಕುರಿತು ಕುಲಶಾಸ್ತ್ರೀಯ ಅಧ್ಯಯನ ನಡೆಸಿ ವರದಿ ಸಲ್ಲಿಸುವಂತೆ ದಿ: 23.04.2015ರಂದು ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆ, ಮೈಸೂರು ಇವರಿಗೆ ಸೂಚಿಸಲಾಗಿದೆ. ಸದರಿಯವರಿಂದ ವರದಿ ನಿರೀಕ್ಷಿಸಲಾಗಿದೆ.<br>**5.** **ಕುಣಬಿ** ಸಮುದಾಯವನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸುವಂತೆ ಸರ್ಕಾರದ ಪತ್ರ ಸಂಖ್ಯೆ: ಸಕಇ 185 ಎಸ್‌ಎಡಿ 2012, ದಿನಾಂಕ: 10.10.2017ರಂದು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿತ್ತು. ಕೇಂದ್ರ ಸರ್ಕಾರದ ರಿಜಿಸ್ಟ್ರಾರ್ ಜನರಲ್ ಆಫ್ ಇಂಡಿಯಾ ರವರ ಪರಿಶೀಲನಾ ಅಂಶಗಳಿಗೆ ಸೂಕ್ತ ಸಮರ್ಥನೆಯನ್ನು ಸಹ ದಿನಾಂಕ: 21.02.2019ರಂದು ಕೇಂದ್ರ ಸರ್ಕಾರಕ್ಕೆ ಕಳುಹಿಸಲಾಗಿದೆ.<br>**6.** ಪರಿಶಿಷ್ಟ ಪಂಗಡಕ್ಕೆ ಸೇರಿದ ಕಣಿಯನ್ ಮತ್ತು ಕನಿಯನ್ ಜನಾಂಗದ ಪ್ರಾದೇಶಿಕ ನಿರ್ಬಂಧವನ್ನು ತೆಗೆದು ಹಾಕಿ ಚಾಮರಾಜನಗರ ಜಿಲ್ಲೆ ಕೊಳ್ಳೆಗಾಲ ತಾಲ್ಲೂಕಿನ ಹೊರಗೆ ಇರುವ ಕರ್ನಾಟಕದ ಕನಿಯನ್ ಮತ್ತು ಅದರ ಸಮಾನಂತಾರ ಜಾತಿಗಳಾದ ಕಣ್ಯನ್, ಕಣೆ, ಕಣೆಯ, ಕಣೆಯರು, ಕಣೆಯಾರ್, ಕಣನನ್ ಸಮುದಾಯಗಳನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಲು ಸರ್ಕಾರದ ಪತ್ರ ಸಂಖ್ಯೆ: |

| | | | | |
|---|---|---|---|---|
| | | | | ಸಕಇ 01 ಎಸ್‌ಎಡಿ 2009 ರನ್ವಯ ದಿನಾಂಕ: 04.03.2014 ರಂದು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿತ್ತು. ಕೇಂದ್ರ ಸರ್ಕಾರದ ರಿಜಿಸ್ಟ್ರಾರ್ ಜನರಲ್ ಆಫ್ ಇಂಡಿಯಾ ರವರ ಪರಿಶೀಲನಾ ಅಂಶಗಳಿಗೆ ಸೂಕ್ತ ಸಮರ್ಥನೆಯನ್ನು ಸಹ ದಿ: 17.10.2018ರಂದು ಕೇಂದ್ರ ಸರ್ಕಾರಕ್ಕೆ ಕಳುಹಿಸಲಾಗಿದೆ.<br>**7.** **ಕೊಡವ** ಸಮುದಾಯವನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸುವ ಕುರಿತು ಕುಲಶಾಸ್ತ್ರೀಯ ಅಧ್ಯಯನ ನಡೆಸಿ ವರದಿ ಸಲ್ಲಿಸುವಂತೆ ದಿ:02.11.2018 ರಂದು ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆ, ಮೈಸೂರು ಇವರಿಗೆ ಸೂಚಿಸಲಾಗಿದೆ.<br>**8.** **ಪರಿವಾರ ಮತ್ತು ತಳವಾರ** ಜಾತಿಗಳನ್ನು ಪರಿಶಿಷ್ಟ ಪಂಗಡದ ನಾಯಕ ಜನಾಂಗದ ಪರ್ಯಾಯ ಪದಗಳೆಂದು ಸೇರಿಸಲು ಸರ್ಕಾರದ ಪತ್ರ ಸಂಖ್ಯೆ: ಸಕಇ 123 ಎಸ್‌ಎಡಿ 2009, ದಿನಾಂಕ: 25.02.2014ರಂದು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿತ್ತು. ಕೇಂದ್ರ ಸರ್ಕಾರ ಆಗಸ್ಟ್ 2016ರಲ್ಲಿ ಕೆಲವೊಂದು ಪೂರಕ ಮಾಹಿತಿಗಳನ್ನೊಳಗೊಂಡ ಸ್ಪಷ್ಟೀಕರಣ ಕೇಳಿದ್ದು, ದಿನಾಂಕ: 21.08.2017ರಲ್ಲಿ ಕೇಂದ್ರ ಸರ್ಕಾರಕ್ಕೆ ಮಾಹಿತಿಯನ್ನು ಕಳುಹಿಸಲಾಗಿದೆ.<br>**9.** **ಗಂಗಾಮತ ಮತ್ತು ಅದರ ಉಪ ಜಾತಿಗಳನ್ನು** ಪರಿಶಿಷ್ಟ ಪಂಗಡಕ್ಕೆ ಸೇರಿಸಲು ಸರ್ಕಾರದ ಪತ್ರ ಸಂಖ್ಯೆ: ಸಕಇ 200 ಎಸ್‌ಎಡಿ 2011, ದಿನಾಂಕ: 03.03.2014ರನ್ವಯ ಸರ್ಕಾರಕ್ಕೆ ಅಕ್ಟೋಬರ್ 2018ರಲ್ಲಿ ಕೆಲವೊಂದು ಪೂರಕ ಮಾಹಿತಿಗಳನ್ನೊಳಗೊಂಡ ಸ್ಪಷ್ಟೀಕರಣ ಕೇಳಿದ್ದು, ನಿರ್ದೇಶಕರು, ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆ, ಮೈಸೂರುರವರಿಂದ ಸ್ಪಷ್ಟೀಕರಣ ಸ್ವೀಕೃತವಾದ ನಂತರ ಪರಿಶೀಲಿಸಿ, ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗುವುದು. |

| | | | | |
|---|---|---|---|---|
| | | | | 10. **ಕಾಡುಗೊಲ್ಲ** ಸಮುದಾಯವನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಲು ಸರ್ಕಾರದ ಪತ್ರ ಸಂಖ್ಯೆ: ಸಕಇ 89 ಎಸ್ಎಡಿ 2010, ದಿನಾಂಕ: 26.12.2014ರಂದು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿತ್ತು. ಕೇಂದ್ರ ಸರ್ಕಾರದ ರಿಜಿಸ್ಟ್ರಾರ್ ಜನರಲ್ ಆಫ್ ಇಂಡಿಯಾರವರ ಪರಿಶೀಲನಾ ಅಂಶಗಳಿಗೆ ಸೂಕ್ತ ಸಮರ್ಥನೆ/ ಅಭಿಪ್ರಾಯಗಳನ್ನು ನೀಡುವಂತೆ ದಿನಾಂಕ: 14.02.2017ರ ಪತ್ರದಲ್ಲಿ ಕೋರಿದ್ದು, ರಿಜಿಸ್ಟ್ರಾರ್ ಜನರಲ್ ಆಫ್ ಇಂಡಿಯಾ ರವರಿಗೆ ಪರಿಶೀಲನಾ ಅಂಶಗಳಿಗೆ ಸೂಕ್ತ ಸಮರ್ಥನೆ/ ಅಭಿಪ್ರಾಯಗಳನ್ನು ದಿ:28.09.2018ರಂದು ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಡಲಾಗಿದೆ.<br>11. **ಪಿಚ್ಚಿಗುಂಟ್ಲು/ ಹೆಳವ** ಸಮುದಾಯವನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.<br>12. **ಕೊಡಗು ಜಿಲ್ಲೆಯ ಹಾಲುಮತ** ಸಮುದಾಯವನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸುವ ಕುರಿತು ಸರ್ಕಾರದ ಪತ್ರ ಸಂಖ್ಯೆ:ಸಕಇ 07 ಎಸ್ಎಡಿ 2011, ದಿನಾಂಕ:25.05.2017ರಂದು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿತ್ತು. ಕೇಂದ್ರ ಸರ್ಕಾರ ಏಪ್ರಿಲ್–2018ರಲ್ಲಿ ಕೊಡಗು ಜಿಲ್ಲೆಯ ಹಾಲುಮತ ಜನಾಂಗದ ಕುಲಶಾಸ್ತ್ರೀಯ ಅಧ್ಯಯನ ವರದಿ ಕುರಿತಂತೆ ಸೂಕ್ತ ಸಮರ್ಥನೆಯನ್ನು ನೀಡಲು ತಿಳಿಸಿದ್ದು, ಸೂಕ್ತ ಸಮರ್ಥನಾ ವರದಿಯನ್ನು ಸಲ್ಲಿಸಲು ನಿರ್ದೇಶಕರು, ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆ, ಮೈಸೂರು ಇವರಿಗೆ ಸೂಚಿಸಿದ್ದು, ಸದರಿ ವರದಿಯನ್ನು ನಿರೀಕ್ಷಿಸಲಾಗಿದೆ.<br>13. **ಗೊಲ್ಲ, ಗೌಳಿ ಅದರ ಉಪಜಾತಿ ಮತ್ತು ಧನಗರ:** ಸಮುದಾಯಗಳ ಕುರಿತು ಸರ್ಕಾರದ ಆದೇಶ |

| | | | | |
|---|---|---|---|---|
| | | | | ಸಂಖ್ಯೆ:ಸಕಇ 45 ಎಸ್‌ಎಡಿ 2012, ದಿನಾಂಕ: 14.08.2013ರಲ್ಲಿ ಕುಲಶಾಸ್ತ್ರೀಯ ಅಧ್ಯಯನ ಮಾಡಿ ವರದಿ ನೀಡುವಂತೆ ಆದೇಶಿಸಲಾಗಿತ್ತು. ಸದರಿಯವರು ಕುಲಶಾಸ್ತ್ರೀಯ ಅಧ್ಯಯನ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿದ್ದು, ಸದರಿ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿರುತ್ತದೆ.<br>**14. ಬೆಟ್ಟಕುರುಬ:** ಸಮುದಾಯವನ್ನು ಪರಿಶಿಷ್ಟ ಪಂಗಡಕ್ಕೆ ಸೇರಿರುವ ಕುರಿತು ಸರ್ಕಾರದ ಪತ್ರ ಸಂಖ್ಯೆ: ಸಕಇ 209 ಎಸ್‌ಎಡಿ 2012, ದಿನಾಂಕ: 30.01.2019ರಂದು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ.<br><br>ಮೇಲ್ಕಂಡಂತೆ ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ, ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ಸಮಿತಿಯು ತೀರ್ಮಾನಿಸಿತು. |
| 30 | 3820<br>ಚು.ರ.ಪ್ರ:54<br>ಶ್ರೀ ಮರಿತಿಬ್ಬೇಗೌಡ<br>ವಿಪನದಿ: 06.06.2011<br>(ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ವರ್ಗಾವಣೆ) | ಸಮಾಜ ಕಲ್ಯಾಣ ಇಲಾಖೆ ಮತ್ತು ಹಿಂದುಳಿದ ವರ್ಗಗಳ ಇಲಾಖೆ ವತಿಯಿಂದ ನಡೆಸ ಲಾಗುತ್ತಿರುವ ವಿದ್ಯಾರ್ಥಿ ನಿಲಯಗಳ ವಿದ್ಯಾರ್ಥಿಗಳಿಗೆ ನೀಡಬೇಕಾಗಿರುವ ಬಾಕಿ ವಿದ್ಯಾರ್ಥಿ ವೇತನದ ಬಗ್ಗೆ | 2010–11ನೇ ಸಾಲಿನಲ್ಲಿ ಅನುದಾನ ಕೊರತೆಯಿಂದ ಬಾಕಿ ಇರುವ ರೂ.505.54 ಲಕ್ಷಗಳನ್ನು 2011–12ನೇ ಸಾಲಿನ ಅಯವ್ಯಯದಲ್ಲಿ ಒದಗಿಸಿದ ಅನುದಾನ ಹಾಗೂ ಗಿರಿಜನ ಉಪ ಯೋಜನೆಯಡಿ ಕ್ರೋಢೀಕರಿಸಿದ ಅನುದಾನದಿಂದ ವೆಚ್ಚ ಭರಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಮಾನ್ಯ ಸಮಾಜ ಕಲ್ಯಾಣ ಮತ್ತು ಬಂಧಿಖಾನೆ ಸಚಿವರು ತಿಳಿಸಿದರು. | ದಿನಾಂಕ: 13.05.2019ರಂದು ನಡೆದ ಸಮಿತಿಯ ಸಭೆಯಲ್ಲಿ ಚರ್ಚಿಸಿದಾಗ, ವಿಧ್ಯಾರ್ಥಿ ವೇತನ ಕೋರಿ ಬಂದಿದ್ದ, ಎಲ್ಲಾ ಅರ್ಜಿಗಳನ್ನು ಪರಿಗಣಿಸಿ, ವಿದ್ಯಾರ್ಥಿ ವೇತನ ಮಂಜೂರು ಮಾಡಲಾಗಿದೆಯೆಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ಸಮಿತಿಯು ತೀರ್ಮಾನಿಸಿತು. |

| | | | | |
|---|---|---|---|---|
| 31 | 3819<br>ಚು.ರ.ಪ್ರ.: 604<br>ಶ್ರೀ ಡಿ.ಎಸ್. ವೀರಯ್ಯ<br>ವಿಪನದಿ: 07.03.2011 | ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳ ಮೇಲಿನ ದೌರ್ಜನ್ಯ ಪ್ರಕರಣಗಳನ್ನು ಶೀಘ್ರ ವಿಲೇವಾರಿ ಮಾಡಲು ವಿಶೇಷ ನ್ಯಾಯಾಲಯವನ್ನು ಸ್ಥಾಪಿಸುವ ಬಗ್ಗೆ. | ಮೈಸೂರು, ಬೆಳಗಾಂ, ಬಿಜಾಪುರ, ರಾಯಚೂರು, ಕೋಲಾರ, ಗುಲ್ಬರ್ಗಾ ಮತ್ತು ತುಮಕೂರು ಜಿಲ್ಲೆಗಳಲ್ಲಿ ತಲಾ ಒಂದೊಂದು ವಿಶೇಷ ನ್ಯಾಯಾಲಯ ಸ್ಥಾಪಿಸಲಾಗಿದ್ದು, ಬೆಂಗಳೂರು (ಗ್ರಾಮಾಂತರ), ರಾಮನಗರ, ಚಿಕ್ಕಮಗಳೂರು, ಚಿಕ್ಕಬಳ್ಳಾಪುರ, ಹಾಸನ, ಕೊಡಗು ಮತ್ತು ಶಿವಮೊಗ್ಗ ಈ ಜಿಲ್ಲೆಗಳಲ್ಲಿ ಅಂತಹ ವಿಶೇಷ ನ್ಯಾಯಾಲಯಗಳನ್ನು ಸ್ಥಾಪಿಸುವುದರ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ ಎಂದು ಮಾನ್ಯ ಸಮಾಜ ಕಲ್ಯಾಣ ಹಾಗೂ ಬಂಧೀಖಾನೆ ಸಚಿವರು ತಿಳಿಸಿದರು. | ದಿನಾಂಕ: 13.05.2019ರಂದು ನಡೆದ ಸಮಿತಿಯ ಸಭೆಯಲ್ಲಿ ಚರ್ಚಿಸಿದಾಗ, ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳ ಮೇಲಿನ ದೌರ್ಜನ್ಯ ಪ್ರಕರಣಗಳನ್ನು ಶೀಘ್ರ ವಿಲೇವಾರಿ ಮಾಡಲು ಮೈಸೂರು, ಬೆಳಗಾವಿ, ವಿಜಯಪುರ, ರಾಯಚೂರು, ಕೋಲಾರ ಕಲಬುರಗಿ ಮತ್ತು ತುಮಕೂರು ಜಿಲ್ಲೆಗಳಲ್ಲಿ ವಿಶೇಷ ನ್ಯಾಯಾಲಯಗಳನ್ನು ಈಗಾಗಲೇ ಸ್ಥಾಪಿಸಲಾಗಿದೆ.<br><br>ಚಿಕ್ಕಬಳ್ಳಾಪುರ, ಹಾಸನ, ದಾವಣಗೆರೆ ದಕ್ಷಿಣಕನ್ನಡ, ಬಾಗಲಕೋಟೆ, ಹಾವೇರಿ ಮತ್ತು ಯಾದಗಿರಿ ಜಿಲ್ಲೆಗಳಲ್ಲೂ ವಿಶೇಷ ನ್ಯಾಯಾಲಯಗಳನ್ನು ಸ್ಥಾಪಿಸುವಂತೆ ದಿ: 14.2.2018ರಂದು ಕಾನೂನು ಇಲಾಖೆಯನ್ನು ಕೋರಲಾಗಿತ್ತು. ಆದರೆ, ಕಾನೂನು ಇಲಾಖೆಯು ಕರ್ನಾಟಕ ಉಚ್ಚ ನ್ಯಾಯಾಲಯ ಈ ಪ್ರಸ್ತಾವವನ್ನು ಒಪ್ಪಿರುವುದಿಲ್ಲವೆಂದು ತಿಳಿಸಿರುತ್ತದೆ.<br><br>ದೌರ್ಜನ್ಯ ಪ್ರಕರಣಗಳ ಶೀಘ್ರ ವಿಲೇವಾರಿ ಮಾಡಲು ವಿಶೇಷ ನ್ಯಾಯಾಲಯಗಳನ್ನು ಸ್ಥಾಪಿಸುವ ಅಗತ್ಯತೆ ಮತ್ತು ಅನಿವಾರ್ಯತೆಯನ್ನು ವಿವರಿಸಿ, ಮೇಲ್ಕಂಡ 07 ಜಿಲ್ಲೆಗಳಲ್ಲಿ ವಿಶೇಷ ನ್ಯಾಯಾಲಯಗಳನ್ನು ಸ್ಥಾಪಿಸಲು ಕ್ರಮವಹಿಸುವಂತೆ ಕಾನೂನು ಇಲಾಖೆಯನ್ನು ದಿ: 28.2.2019ರಂದು ಪುನ: ಕೋರಲಾಗಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ಸಮಿತಿಯು ತೀರ್ಮಾನಿಸಿತು. |
| 32 | 3925<br>ಚು.ರ.ಪ್ರ: 255<br>ಶ್ರೀ ದಯಾನಂದ<br>ವಿಪನದಿ: 05.12.2011 | ಬೆಂಗಳೂರು ನಗರ ಜಿಲ್ಲೆಯಲ್ಲಿರುವ ಎಸ್.ಸಿ/ಎಸ್.ಟಿ ಕಾಲೋನಿಗಳಿಗೆ ಮೂಲ | 2011–12ನೇ ಸಾಲಿಗೆ ಲಭ್ಯವಿರುವ ಅನುದಾನಕ್ಕೆ ಅನುಗುಣವಾಗಿ ಹಂತ ಹಂತವಾಗಿ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಕ್ರಮ | ದಿನಾಂಕ:13.05.2019ರಂದು ನಡೆದ ಸಮಿತಿಯ ಸಭೆಯಲ್ಲಿ ಚರ್ಚಿಸಿದಾಗ, 2011–12ನೇ ಸಾಲಿನಲ್ಲಿ ಪರಿಶಿಷ್ಟ ಜಾತಿ ಕಾಲೋನಿಗಳಲ್ಲಿ ಮೂಲಭೂತ ಸೌಕರ್ಯಗಳಾದ ಸಿಸಿ ರಸ್ತೆ ಮತ್ತು ಬಾಕ್ಸ್ ಚರಂಡಿ ಕಲ್ಪಿಸಲು ರೂ.1597.60 ಲಕ್ಷಗಳನ್ನು |

<table>
<tr>
<td></td>
<td></td>
<td>ಭೂತ ಸೌಕರ್ಯ ಗಳಿಲ್ಲದಿರುವ ಬಗ್ಗೆ.</td>
<td>ವಹಿಸಿಲಾಗುವುದು ಎಂದು ಮಾನ್ಯ ಸಮಾಜ ಕಲ್ಯಾಣ ಹಾಗೂ ಬಂದೀಖಾನೆ ಸಚಿವರು ತಿಳಿಸಿದರು.</td>
<td>ಬಿಡುಗಡೆ ಮಾಡಲಾಗಿದೆ. ಬೆಂಗಳೂರು ಉತ್ತರ ತಾಲ್ಲೂಕಿನಲ್ಲಿ 36 ಕಾಮಗಾರಿಗಳಿಗೆ ರೂ.84.00 ಲಕ್ಷಗಳನ್ನು ಬೆಂಗಳೂರು ಪೂರ್ವ ತಾಲ್ಲೂಕಿನಲ್ಲಿ 13 ಕಾಮಗಾರಿಗಳಿಗೆ ರೂ.154.00 ಲಕ್ಷಗಳನ್ನು ಬೆಂಗಲೂರು ದಕ್ಷಿಣ ತಾಲ್ಲೂಕಿನಲ್ಲಿ 15 ಕಾಮಗಾರಿಗಳಿಗೆ ರೂ.90.00 ಲಕ್ಷಗಳನ್ನು ಹಾಗೂ ಆನೇಕಲ್ ತಾಲ್ಲೂಕಿನಲ್ಲಿ 129 ಕಾಮಗಾರಿಗಳಿಗೆ ರೂ.869.60 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.<br><br>
2012-13ರಿಂದ 2018-19ನೇ ಸಾಲಿನವರೆಗೆ ಬೆಂಗಳೂರು ನಗರ ಜಿಲ್ಲಾ ವ್ಯಾಪ್ತಿಯಲ್ಲಿನ ಪರಿಶಿಷ್ಟ ಜಾತಿ ಕಾಲೋನಿಗಳಲ್ಲಿ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಲು ಈ ಕೆಳಕಂಡಂತೆ ಅನುದಾನವನ್ನು ಬಿಡುಗಡೆ ಮಾಡಲಾಗಿರುತ್ತದೆ.<br><br>
<table>
<tr><th>ವರ್ಷ</th><th>ಬಿಡುಗಡೆ ಮಾಡಿದ ಮೊತ್ತ</th></tr>
<tr><td>2012-13</td><td>1169.00</td></tr>
<tr><td>2013-14</td><td>1254.00</td></tr>
<tr><td>2014-14</td><td>360.00</td></tr>
<tr><td>2015-16</td><td>0.00</td></tr>
<tr><td>2016-17</td><td>955.00</td></tr>
<tr><td>2017-18</td><td>1790.00</td></tr>
<tr><td>2018-19 (ಪ್ರಗತಿ ಕಾಲೋನಿ ಮತ್ತು ಸಿಸಿ.ರಸ್ತೆ</td><td>500.00</td></tr>
</table>
<br>
<u>ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ:</u><br><br>
2011-12ನೇ ಸಾಲಿನಲ್ಲಿ ಬೆಂಗಳೂರು ನಗರ ಜಿಲ್ಲೆಯಲ್ಲಿರುವ ಪರಿಶಿಷ್ಟ ಪಂಗಡದ ಕಾಲೋನಿಗಳಿಗೆ ಮೂಲಭೂತ ಸೌಲಭ್ಯ</td>
</tr>
</table>

| | | | | |
|---|---|---|---|---|
| | | | | ಒದಗಿಸಲು ರೂ. 72.00 ಲಕ್ಷ ಅನುದಾನ ಮಂಜೂರು ಮಾಡಲಾಗಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ಸಮಿತಿಯು ತೀರ್ಮಾನಿಸಿತು. |
| 33 | 4092<br>ಚು.ಗು.ಪ್ರ: 488<br>ಶ್ರೀ ಕೆ.ಆರ್.ಮಲ್ಲಿಕಾರ್ಜುನಪ್ಪ<br>ವಿಪನದಿ: 23.07.2012 | ರಾಜ್ಯದಲ್ಲಿ ಪರಿಶಿಷ್ಟ ಜಾತಿ/ಪಂಗಡಗಳ ಕಾಲೋನಿಗಳ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ವಿಧಾನ ಪರಿಷತ್ತಿನ ಸದಸ್ಯರು ನೀಡುವಂತಹ ಪ್ರಸ್ತಾವನೆಯನ್ನು ಪರಿಗಣಿಸದೆ ಇರುವ ಬಗ್ಗೆ. | ಇದರ ಬಗ್ಗೆ ಪರಿಶೀಲನೆ ಮಾಡಿ ಕ್ರಮ ಕೈಗೊಳ್ಳಲಾಗುವುದೆಂದು ಸಮಾಜ ಕಲ್ಯಾಣ ಹಾಗೂ ಬಂಧೀಖಾನೆ ಸಚಿವರು ತಿಳಿಸಿದರು. | 2012–13ನೇ ಸಾಲಿನಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಕಾಲೋನಿಗಳಲ್ಲಿ ಮೂಲಭೂತ ಸೌಕರ್ಯಗಳಾದ ಸಿಸಿ ರಸ್ತೆ ಮತ್ತು ಬಾಕ್ಸ್ ಚರಂಡಿ, ಕುಡಿಯುವ ನೀರು, ಶೌಚಾಲಯ ಕಲ್ಪಿಸಲು ಮಾನ್ಯ ಸಚಿವರು/ಶಾಸಕರು/ವಿಧಾನ ಪರಿಷತ್ತಿನ ಸದಸ್ಯರುಗಳು ಸಲ್ಲಿಸಿರುವ ಪ್ರಸ್ತಾವನೆಗಳಿಗೆ ಅನುದಾನ ಬಿಡುಗಡೆಗೊಳಿಸಿ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಕ್ರಮ ವಹಿಸಲಾಗಿದೆ.<br><br>ವಿಧಾನಸಭಾ ಕ್ಷೇತ್ರ ಮಟ್ಟದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಕಾಲೋನಿಗಳು ಮತ್ತು ಕಾಮಗಾರಿಗಳ ಆಯ್ಕೆ ಸಮಿತಿಯಲ್ಲಿ ಆ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ವಿಧಾನ ಪರಿಷತ್ತಿನ ಸದಸ್ಯರು ಸಹ ಸಮಿತಿಯ ಸದಸ್ಯರಾಗಿರುತ್ತಾರೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ಸಮಿತಿಯು ತೀರ್ಮಾನಿಸಿತು. |
| 34 | 4195<br>ಚು.ರ.ಪ್ರ: 240<br>ಶ್ರೀ ಬಸವರಾಜ ಹೊರಟ್ಟಿ<br>ವಿಪನದಿ: 11.12.2012 | ಧಾರವಾಡದಲ್ಲಿ ವಸತಿ ನಿಲಯಗಳ ಕೊರತೆಯಿಂದಾಗಿ ವಿದ್ಯಾರ್ಥಿಗಳು ತೊಂದರೆ ಅನುಭವಿಸುತ್ತಿರುವ ಬಗ್ಗೆ. | 2012–13ನೇ ಸಾಲಿನಲ್ಲಿ ಧಾರವಾಡ ಟೌನ್‌ಗೆ ಮೆಟ್ರಿಕ್ ನಂತರದ ಬಾಲಕರ ವೃತ್ತಿಪರ ವಿದ್ಯಾರ್ಥಿನಿಲಯವನ್ನು ಮಂಜೂರು ಮಾಡಲಾಗಿದೆ. ಧಾರವಾಡ ಟೌನ್‌ಗೆ ಬಾಲಕ ಮತ್ತು ಬಾಲಕಿಯರ | ದಿನಾಂಕ: 13.05.2019ರಂದು ನಡೆದ ಸಮಿತಿಯ ಸಭೆಯಲ್ಲಿ ಚರ್ಚಿಸಿದಾಗ,<br><br>**ಸಮಾಜ ಕಲ್ಯಾಣ ಇಲಾಖೆ :** ಧಾರವಾಡ ಜಿಲ್ಲೆಯಲ್ಲಿ ಒಟ್ಟು 15 ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳನ್ನು ನಿರ್ವಹಿಸಲಾಗುತ್ತಿದೆ. |

| | | | | |
|---|---|---|---|---|
| | | | ವಿದ್ಯಾರ್ಥಿನಿಲಯಗಳನ್ನು ಮಂಜೂರು ಮಾಡುವ ಕುರಿತು ಪರಿಶೀಲಿಸಲಾಗುವುದು ಎಂದು ಮಾನ್ಯ ಸಮಾಜ ಕಲ್ಯಾಣ, ಬಂಧೀಖಾನೆ ಹಾಗೂ ಹಿಂದುಳಿದ ವರ್ಗಗಳ ಸಚಿವರು ತಿಳಿಸಿದರು. | 2016–17ನೇ ಸಾಲಿನಲ್ಲಿ ಧಾರವಾಡ ಜಿಲ್ಲೆಯ ಹುಬ್ಬಳ್ಳಿ ಟೌನ್‌ಗೆ 100 ಸಂಖ್ಯಾಬಲವುಳ್ಳ 01 ಸರ್ಕಾರಿ ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿ ನಿಲಯವನ್ನು ದಿ: 1.7.2017ರಿಂದ ಇಲಾಖೆಯ ಸ್ವಂತ ಕಟ್ಟಡದಲ್ಲಿ ಪ್ರಾರಂಭಿಸಲಾಗಿದೆ.<br><br>**<u>ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ</u> :** ಧಾರವಾಡ ಜಿಲ್ಲೆಯಲ್ಲಿ ಪರಿಶಿಷ್ಟ ವಗ್ದ 2 ಮೆಟ್ರಿಕ್ ನಂತರದ ಬಾಲಕರ ಮತ್ತು 1 ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿ ನಿಲಯಗಳನ್ನು ನಿರ್ವಹಿಸಲಾಗುತ್ತಿದೆ. ಸದರಿ ವಿದ್ಯಾರ್ಥಿ ನಿಲಯಗಳಲ್ಲಿ 275 ವಿದ್ಯಾರ್ಥಿಗಳಿಗೆ ಪ್ರವೇಶಾವಕಾಸ ಕಲ್ಪಿಸಲಾಗಿದೆ.<br>ಮೇಲ್ಕಂಡಂತೆ ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ಸಮಿತಿಯು ತೀರ್ಮಾನಿಸಿತು. |
| 35 | 4196<br>ಚು.ರ.ಪ್ರ: 242<br>ಶ್ರೀ ಬಸವರಾಜ ಹೊರಟ್ಟಿ<br>ವಿಪನದಿ: 11.12.2012 | ಮೊರಾರ್ಜಿ ವಸತಿ ಶಾಲೆಗಳಿಗೆ ಚಿತ್ರಕಲಾ ಶಿಕ್ಷಕರ ನೇಮಕಾತಿ ಬಗ್ಗೆ. | ನ್ಯಾಯಾಲಯದ ಆದೇಶವನ್ನು ಪರಿಶೀಲಿಸಿ ಆದಷ್ಟು ಜಾಗ್ರತೆಯಾಗಿ ಚಿತ್ರಕಲಾ ಶಿಕ್ಷಕರ ನೇಮಕಾತಿಯನ್ನು ಪೂರ್ಣಗೊಳಿಸಲು ಕ್ರಮಕೈಕೊಳ್ಳಲಾಗುವುದು ಎಂದು ಮಾನ್ಯ ಸಮಾಜ ಕಲ್ಯಾಣ, ಬಂದೀಖಾನೆ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ತಿಳಿಸಿದರು. | ದಿನಾಂಕ: 13.05.2019ರಂದು ನಡೆದ ಸಮಿತಿಯ ಸಭೆಯಲ್ಲಿ ಚರ್ಚಿಸಿದಾಗ, ಚಿತ್ರಕಲಾ ಶಿಕ್ಷಕರ ಹಿತದೃಷ್ಟಿಯಿಂದ ಸರ್ಕಾರದ ಆದೇಶ ಸಂಖ್ಯೆ: ಸಕಇ 70 ಮೊದೇಶಾ 2010, ದಿ: 17.06.2014ರ ಪ್ರಕಾರ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವೃಂದ ಮತ್ತು ನೇಮಕಾತಿ ನಿಯಮಗಳಿಗೆ ತಿದ್ದುಪಡಿ ತಂದು ಬಿ.ವಿ.ಎ. ಮತ್ತು ಬಿ.ಎಫ್.ಎ. ಪದವಿಗಳನ್ನು ಸೇರ್ಪಡಿಸಲಾಗಿದೆ. |

| | | | | |
|---|---|---|---|---|
| 36 | 4568<br>ಚು.ಗು.ಪ್ರ: 283<br>ಶ್ರೀ ವೈ.ಎ. ನಾರಾಯಣಸ್ವಾಮಿ<br>ವಿಪನದಿ: 27.01.2014 | ಸಮಾಜ ಕಲ್ಯಾಣ ಇಲಾಖೆಯ ವ್ಯಾಪ್ತಿಯ ಹಾಸ್ಟೆಲ್‌ಗಳ ಸಮರ್ಪಕ ನಿರ್ವಹಣೆಗಾಗಿ ಹಾಸ್ಟೆಲ್ ಪ್ರಾಧಿಕಾರ ರಚಿಸುವ ಕುರಿತು | ಅಗತ್ಯ ಇದ್ದರೆ ಖಂಡಿತ ಮಾಡೋಣ ಎಂದು ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ತಿಳಿಸಿದರು. | ಈ ಹುದ್ದೆಗಳನ್ನು ಭರ್ತಿ ಮಾಡಲು ಕೋರಿ ದಿ:03.11.2016ರಂದು ಕರ್ನಾಟಕ ಲೋಕಸೇವಾ ಆಯೋಗವನ್ನು ಕೋರಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ಸಮಿತಿಯು ತೀರ್ಮಾನಿಸಿತು. |
| 37 | 4197<br>ಚು.ಗು.ಪ್ರ: 412<br>ಶ್ರೀ ವೈ.ಎ.ನಾರಾಯಣಸ್ವಾಮಿ<br>ವಿಪನದಿ: 11.12.2012 | ರಾಜ್ಯದಲ್ಲಿರುವ ಎಲ್ಲಾ ವಿದ್ಯಾರ್ಥಿ ನಿಲಯಗಳ ಸಮರ್ಪಕ ನಿರ್ವಹಣೆಗೆ "ಹಾಸ್ಟೆಲ್ ಅಭಿವೃದ್ಧಿ ಪ್ರಾಧಿಕಾರ" ರಚನೆ ಬಗ್ಗೆ. | ಈ ಪ್ರಸ್ತಾವನೆಯನ್ನು ಪರಿಶೀಲಿಸಲಾಗುತ್ತಿದೆ ಎಂದು ಸಮಾಜ ಕಲ್ಯಾಣ, ಬಂದೀಖಾನೆ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ತಿಳಿಸಿದರು. | ದಿನಾಂಕ: 13.05.2019ರಂದು ನಡೆದ ಸಮಿತಿಯ ಸಭೆಯಲ್ಲಿ ಚರ್ಚಿಸಿದಾಗ, ಸಮಾಜ ಕಲ್ಯಾಣ ಇಲಾಖೆಯ ಪ್ರಮುಖ ಕಾರ್ಯಕ್ರಮ ಮತ್ತು ಧ್ಯೇಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ನಿಲಯಗಳನ್ನು ಸ್ಥಾಪಿಸುವುದು ಮತ್ತು ನಿರ್ವಹಿಸುವುದಾಗಿದೆ. ಇದರ ಉಸ್ತುವಾರಿಗಾಗಿ ವಾರ್ಡನ್, ಸಹಾಯಕ ನಿರ್ದೇಶಕರು ಮತ್ತು ಉಪ/ಜಂಟಿ ನಿರ್ದೇಶಕರು ವಿದ್ಯಾರ್ಥಿ ನಿಲಯಗಳ ಸಮರ್ಪಕ ನಿರ್ವಹಣೆಯ ಜವಾಬ್ದಾರಿಯನ್ನು ಹೊಂದಿ ಸಮರ್ಪಕವಾಗಿ ನಿರ್ವಹಿಸಿರುತ್ತಾರೆ. ಆದ್ದರಿಂದ, ಪ್ರತ್ಯೇಕ ಹಾಸ್ಟೆಲ್ ಅಭಿವೃದ್ಧಿ ಪ್ರಾಧಿಕಾರ ರಚನೆ ಮಾಡುವ ಅವಶ್ಯಕತೆ ಇರುವುದಿಲ್ಲವೆಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ಸಮಿತಿಯು ತೀರ್ಮಾನಿಸಿತು. |
| 38 | 4198<br>ಚು.ಗು.ಪ್ರ: 386<br>ಶ್ರೀ ಅಮರನಾಥ ಪಾಟೀಲ್<br>ವಿಪನದಿ: 11.12.2012 | ಕುಲಶಾಸ್ತ್ರೀಯ ಅಧ್ಯಯನ ವರದಿಯನ್ನು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡುವ ಬಗ್ಗೆ. | ಕುಲಶಾಸ್ತ್ರೀಯ ಅಧ್ಯಯನ ವರದಿ ಸರ್ಕಾರಕ್ಕೆ ಸಲ್ಲಿಸಿದ ನಂತರ, ಸರ್ಕಾರದ ಹಂತದಲ್ಲಿ ಪರಿಶೀಲಿಸ ಲಾಗುವುದು ಹಾಗೂ ಎಕ್ಸ್‌ಪರ್ಟ್‌ಕಮಿಟಿ ವರದಿ ಕೊಟ್ಟಿದ್ದು, ಮತ್ತೆ ಸಂಪೂರ್ಣ | ದಿನಾಂಕ: 13.05.2019ರಂದು ನಡೆದ ಸಮಿತಿಯ ಸಭೆಯಲ್ಲಿ ಚರ್ಚಿಸಿದಾಗ, ಗಂಗಾಮತ ಮತ್ತು ಅದರ ಉಪ ಜಾತಿಗಳನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಲು ಸರ್ಕಾರದ ಪತ್ರ ಸಂಖ್ಯೆ: ಸಕಇ 200 ಎಸ್‌ಎಡಿ 2011, ದಿ: 03.03.2014 ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿತ್ತು. ಕೇಂದ್ರ ಸರ್ಕಾರ ಅಕ್ಟೋಬರ್–2018ರಲ್ಲಿ ಕೆಲವೊಂದು ಪೂರಕ |

| | | | | |
|---|---|---|---|---|
| | | | ಫೈನಲ್ ವರದಿ ಕೊಡುವುದಕ್ಕೆ ಹಂಪಿ ವಿಶ್ವವಿದ್ಯಾಲಯಕ್ಕೆ ಕಳುಹಿಸಿಕೊಟ್ಟಿದ್ದೇವೆ. ಫೈನಲ್ ರಿಪೋರ್ಟ್ ಬಂದ ತಕ್ಷಣ ಸರ್ಕಾರ ಸೂಕ್ತ ಕ್ರಮ ತೆಗೆದುಕೊಳ್ಳುತ್ತದೆ ಎಂದು ಮಾನ್ಯ ಸಮಾಜ ಕಲ್ಯಾಣ, ಬಂದೀಖಾನೆ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ತಿಳಿಸಿದರು. | ಮಾಹಿತಿಗಳನ್ನೊಳಗೊಂಡ ಸ್ಪಷ್ಟೀಕರಣ ಕೇಳಿದ್ದು, ನಿರ್ದೇಶಕರು ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆ, ಮೈಸೂರು ಇವರಿಂದ ಸ್ಪಷ್ಟೀಕರಣ ಸ್ವೀಕೃತವಾದ ನಂತರ ಪರಿಶೀಲಿಸಿ, ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗುವುದು ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ಸಮಿತಿಯು ತೀರ್ಮಾನಿಸಿತು. |
| 39 | 4199<br>ಚು.ಗು.ಪ್ರ: 285<br>ಶ್ರೀ ವೈ.ಎ.ನಾರಾಯಣಸ್ವಾಮಿ<br>ವಿಪನದಿ: 12.02.2013 | 2012–13ನೇ ಸಾಲಿನಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ಪಾವತಿ ಆಗದೇ ಇರುವ ಕುರಿತು. | ಈ ಬಗ್ಗೆ ಅಧಿಕಾರಿಗಳಿಗೆ ಸೂಚನೆಯನ್ನು ನೀಡಿದ್ದೇನೆ. ಕೋಲಾರ ಜಿಲ್ಲೆಯಲ್ಲಿ ಸಿಬ್ಬಂದಿಯ ಕೊರತೆ ಇದೆ. ಹಾಗಾಗಿ ಈ ನ್ಯೂನತೆ ಗಮನಕ್ಕೆ ಬಂದಿದೆ. ಇಲ್ಲಿಗೆ ಸೂಕ್ತ ಸಿಬ್ಬಂದಿಯನ್ನು ನೇಮಕ ಮಾಡಿ ಕೆಲಸ ಕಾರ್ಯಗಳು ಸರಿಯಾಗಿ ಆಗುವ ಹಾಗೆ ನೋಡಿಕೊಳ್ಳುತ್ತೇನೆ ಎಂದು ಮಾನ್ಯ ಸಮಾಜ ಕಲ್ಯಾಣ, ಬಂದೀಖಾನೆ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ತಿಳಿಸಿದರು. | ದಿನಾಂಕ: 13.05.2019ರಂದು ನಡೆದ ಸಮಿತಿಯ ಸಭೆಯಲ್ಲಿ ಚರ್ಚಿಸಿದಾಗ, 2012–13ನೇ ಸಾಲಿನಲ್ಲಿ ಕೋಲಾರ ಜಿಲ್ಲೆಯಲ್ಲಿ ಮಂಜೂರಾತಿಯಾಗದೆ ಬಾಕಿ ಇರುವ ವಿದ್ಯಾರ್ಥಿ ವೇತನ ಅರ್ಜಿಗಳನ್ನು 2013–14ನೇ ಸಾಲಿನಲ್ಲಿ ಮಂಜೂರು ಮಾಡಲಾಗಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ಸಮಿತಿಯು ತೀರ್ಮಾನಿಸಿತು. |
| 40 | 4562<br>ಚು.ರ.ಪ್ರ: 820<br>ಶ್ರೀ ಪುಟ್ಟಣ್ಣ<br>ವಿಪನದಿ:<br>22–07–2013 | ರಾಜ್ಯದ ಮೊರಾರ್ಜಿದೇಸಾಯಿ ವಸತಿ ಶಾಲೆಗಳಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿದ್ದ ಶಿಕ್ಷಕರ ನೇಮಕಾತಿಗೆ | ಮಾನ್ಯ ಉಚ್ಚ ನ್ಯಾಯಾಲಯದ ತೀರ್ಪುಗಳು ಒಂದಕ್ಕೊಂದು ತದ್ವಿರುದ್ಧವಾಗಿದ್ದು, ಸದರಿ ತೀರ್ಪನ್ನು ಅನುಷ್ಠಾನಗೊಳಿಸಲು ಸಾಧ್ಯವಾಗದ ಕಾರಣ, ಸದರಿ | ದಿನಾಂಕ: 13.05.2019ರಂದು ನಡೆದ ಸಮಿತಿಯ ಸಭೆಯಲ್ಲಿ ಚರ್ಚಿಸಿದಾಗ, ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿದ್ದ ಬೋಧಕ ಸಿಬ್ಬಂದಿಗಳ ಸೇವೆಯನ್ನು ಸಕ್ರಮಗೊಳಿಸಲು ಕೋರಿ ಉಚ್ಚ ನ್ಯಾಯಾಲಯದಲ್ಲಿ ಸಲ್ಲಿಸಿದ ರಿಟ್ ಅರ್ಜಿ ಸಂಖ್ಯೆ: |

| | | | | |
|---|---|---|---|---|
| | | ಸಂಬಂಧಿಸಿದಂತೆ ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ಆದೇಶವನ್ನು ಜಾರಿಗೊಳಿಸಲು ತೆಗೆದುಕೊಂಡಿರುವ ಕ್ರಮಗಳ ಕುರಿತು. | ತೀರ್ಪಿನ ವಿರುದ್ಧ ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ಎಸ್.ಎಲ್.ಪಿ ದಾಖಲು ಮಾಡಲು ಕ್ರಮವಹಿಸಲಾಗಿದೆ. | 20204–20364/2011ನ್ನು ಪರಿಶೀಲಿಸಿ, ನ್ಯಾಯಾಲಯವು ದಿ:13.7.2012 ರಂದು ನೀಡಿರುವ ಆದೇಶದಲ್ಲಿ ಈ ಶಿಕ್ಷಕರಿಗೆ ಸೇವಾ ಕೃಪಾಂಕ ನೀಡಿ ಸೇವೆಯನ್ನು ಸಕ್ರಮಗೊಳಿಸಲು ಆದೇಶಿಸಿದೆ. ಈ ಆದೇಶದ ವಿರುದ್ಧ ಸಂಘದ ವತಿಯಿಂದ ರಿಟ್ ಅಪೀಲು ಸಂಖ್ಯೆ: 5127/2012ನ್ನು ಸಲ್ಲಿಸಿ ಮೇಲ್ಕಂಡ ಆದೇಶವನ್ನು ಪರಿಷ್ಕರಿಸಲು ಕೋರಲಾಗಿತ್ತು. ಆದರೆ, ನ್ಯಾಯಾಲಯವು ಈ ಅಪೀಲನ್ನು ದಿ:28.02.2013ರಂದು ವಜಾ ಮಾಡಿರುತ್ತದೆ.<br><br>ಈ ಆದೇಶದ ವಿರುದ್ಧ ಸರ್ವೋಚ್ಚ ನ್ಯಾಯಾಲಯದಲ್ಲಿ ಸಲ್ಲಿಸಿದ ಎಸ್.ಎಲ್.ಪಿ. ಸಂಖ್ಯೆ: ಸಿ.ಸಿ./15456/2013ನ್ನು ನ್ಯಾಯಾಲಯವು ದಿ: 09.09.2013ರಂದು ನೀಡಿರುವ ಆದೇಶದಲ್ಲಿ ಕರ್ನಾಟಕ ಉಚ್ಚ ನ್ಯಾಯಾಲಯ ದಿ: 13.7.2012ರಂದು ನೀಡಿರುವ ಆದೇಶವನ್ನು ಪುರಸ್ಕರಿಸಿರುತ್ತದೆ.<br><br>ಆದುದರಿಂದ, ಈ ವಿಷಯವನ್ನು ಸಂಘದ ಆಡಳಿತ ಮಂಡಳಿಯಲ್ಲಿ ಚರ್ಚಿಸಿ 572 ಬೋಧಕ ಸಿಬ್ಬಂದಿಗಳಿಗೆ ಸೇವಾ ಕೃಪಾಂಕವನ್ನು ನೀಡಿ ಅವರುಗಳ ಸೇವೆಯನ್ನು ಸಕ್ರಮಗೊಳಿಸಲಾಗಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ಸಮಿತಿಯು ತೀರ್ಮಾನಿಸಿತು. |
| 41 | 4563<br>ಚು.ಗು.ಪ್ರ:800<br>ಶ್ರೀ ಗಣೇಶ್‌ಕಾರ್ಣಿಕ್<br>ವಿಪನದಿ:<br>29–07–2013 | ರಾಜ್ಯದಲ್ಲಿರುವ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ ಮತ್ತು ಸಮಾಜ ಕಲ್ಯಾಣ ಇಲಾಖೆ ನಡೆಸುತ್ತಿರುವ ಎಲ್ಲಾ ವಸತಿ ಶಾಲೆಗಳಿಗೆ ಸ್ವಂತ ಕಟ್ಟಡವನ್ನು ಒದಗಿಸುವ | ನಿವೇಶನ ನೀಡುವ ಬಗ್ಗೆ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಿ, ಆದಷ್ಟು ಬೇಗ ವಸತಿ ಶಾಲೆಗಳಿಗೆ ಸ್ವಂತ ಕಟ್ಟಡ ಮತ್ತು ಮೂಲಭೂತ ಸೌಕರ್ಯಗಳನ್ನು ಒದಗಿಸಿ, ಮಕ್ಕಳಿಗೆ ಉತ್ತಮವಾದ ಶಿಕ್ಷಣ | ದಿನಾಂಕ: 13.05.2019ರಂದು ನಡೆದ ಸಮಿತಿಯ ಸಭೆಯಲ್ಲಿ ಚರ್ಚಿಸಿದಾಗ, ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ 68 ಸರ್ಕಾರಿ ಶಾಲೆಗಳು ಸ್ವಂತ ಕಟ್ಟಡದಲ್ಲಿ ಹಾಗೂ 05 ವಸತಿ ಶಾಲೆಗಳು ಬಾಡಿಗೆ ಕಟ್ಟಡಗಳಲ್ಲಿರುತ್ತವೆ. ಈ ಪೈಕಿ 02 ವಸತಿ ಶಾಲೆಗೆ ಸ್ವಂತ ಕಟ್ಟಡ ನಿರ್ಮಾಣ ಕಾಮಗಾರಿಯನ್ನು ಕೈಗೊಳ್ಳಲಾಗಿದ್ದು, ಬಾಕಿ 03 ವಸತಿ ಶಾಲೆಗಳಿಗೆ ಸೂಕ್ತ |

| | | | | |
|---|---|---|---|---|
| | | ಕುರಿತು. | ಒದಗಿಸಲು ಪ್ರಾಮಾಣಿಕವಾದ ಪ್ರಯತ್ನವನ್ನು ಮಾಡುವುದಾಗಿ ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ತಿಳಿಸಿದರು. | ನಿವೇಶನಗಳನ್ನು ಪಡೆದು ಸ್ವಂತ ಕಟ್ಟಡ ನಿರ್ಮಾಣ ಕಾಮಗಾರಿಗಳನ್ನು ಕೈಗೊಳ್ಳಲಾಗುವುದು.<br><br>ಮೂಲಭೂತ ಸೌಕರ್ಯಗಳ ಕೊರತೆಯಿರುವ ವಸತಿ ಶಾಲೆಗಳಿಗೆ 2016–17 ಮತ್ತು 2017–18ನೇ ಸಾಲುಗಳಲ್ಲಿ ಕಂಪ್ಯೂಟರ್ ಟೇಬಲ್ ಮತ್ತು ಚೇರ್‌ಗಳು, ಕಚೇರಿ ಟೇಬಲ್‌ಗಳು, ಎಸ್ ಮಾದರಿ ಛೇರ್‌ಗಳು, ಅಲ್ಮೇರಾಗಳು, ಮಂಚಗಳು, ಡೈನಿಂಗ್ ಟೇಬಲ್‌ಗಳು, ಡೆಸ್ಕ್ ಬೆಂಚ್‌ಗಳು, ಸಬ್ ಪಾತ್ರೆಗಳು, ತಟ್ಟೆಲೋಟಗಳು, ಗ್ರೈಂಡರ್‌ಗಳು, ಕ್ರೀಡಾ ಸಾಮಾಗ್ರಿಗಳು, ಪ್ರಯೋಗಾಲಯ ಸಾಮಗ್ರಿಗಳು, ಪೀಠೋಪಕರಣಗಳು, ಡೀಸೆಲ್ ಜನರೇಟರ್, ಸೆಟ್ ಸಂಗೀತ ಉಪಕರಣಗಳು, ಟ್ರಂಕ್‌ಗಳನ್ನು ಸರಬರಾಜು ಮಾಡಲಾಗಿದೆ.<br><br>ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖಾ ವತಿಯಿಂದ 119 ಆಶ್ರಮ ಶಾಲೆಗಳು ಕಾರ್ಯನಿರ್ವಹಿಸುತ್ತಿದ್ದು, ಈ ಪೈಕಿ 106 ಆಶ್ರಮ ಶಾಲೆಗಳು ಸ್ವಂತ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿವೆ. ಉಳಿದ 13 ಆಶ್ರಮ ಶಾಲೆಗಳಲ್ಲಿ 10 ಆಶ್ರಮ ಶಾಲೆಗಳಿಗೆ ಸ್ವಂತ ಕಟ್ಟಡ ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿದೆ.<br><br>**ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ:–**<br><br>ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಯ ಅಧೀನದಲ್ಲಿ 819 ವಸತಿ ಶಾಲೆ/ಕಾಲೇಜುಗಳು ಕಾರ್ಯನಿರ್ವಹಿಸುತ್ತಿವೆ. ಈ ಪೈಕಿ 430 ಸ್ವಂತ ಕಟ್ಟಡಗಳಲ್ಲಿ ಕಾರ್ಯನಿರ್ವಹಿಸುತ್ತಿವೆ. 137 ವಸತಿ ಶಾಲೆಗಳ ಕಟ್ಟಡ ನಿರ್ಮಾಣ ಕಾಮಗಾರಿಗಳು ಪ್ರಗತಿಯಲ್ಲಿವೆ. 74 ವಸತಿ ಶಾಲೆಗಳಿಗೆ ನಿವೇಶನಗಳು ಲಭ್ಯವಿದ್ದು. ಅಂದಾಜು ಪಟ್ಟಿ ತಯಾರಿಕೆಯಲ್ಲಿದೆ. 136 |

| | | | | |
|---|---|---|---|---|
| | | | | ವಸತಿ ಶಾಲೆಗಳಿಗೆ ನಿವೇಶನ ಪಡೆಯಲು ಕ್ರಮವಹಿಸಿದೆ. ನಿವೇಶನ ಮತ್ತು ಅನುದಾನ ಲಭ್ಯತೆಯನ್ವಯ ಕಟ್ಟಡಗಳನ್ನು ನಿರ್ಮಾಣ ಮಾಡಲು ಹಂತಹಂತವಾಗಿ ಕ್ರಮ ಕೈಗೊಳ್ಳಲಾಗುವುದು.<br><br>2016-17 ಮತ್ತು 2017-18ನೇ ಸಾಲಿನಲ್ಲಿ ಈ ವಸತಿ ಶಾಲೆ/ಕಾಲೇಜುಗಳಿಗೆ ಮೂಲಭೂತ ಸೌಕರ್ಯಗಳಾದ ಕಂಪ್ಯೂಟರ್, ಮೇಜು ಮತ್ತು ಕುರ್ಚಿಗಳು, ಕಚೇರಿ ಮೇಜುಗಳು, ಎಸ್ ಮಾದರಿ ಕುರ್ಚಿಗಳು, ಅಲ್ಮೇರಾಗಳು, ಮಂಚಗಳು, ಡೈನಿಂಗ್ ಟೇಬಲ್‌ಗಳು, ಡೆಸ್ಕ್ ಬೆಂಚ್‌ಗಳು, ಸೆಟ್ ಪಾತ್ರೆಗಳು, ತಟ್ಟೆಲೋಟಗಳು, ಗ್ರೈಂಡರ್‌ಗಳು, ಕ್ರೀಡಾ ಸಾಮಾಗ್ರಿಗಳು, ಪ್ರಯೋಗಾಲಯ ಸಾಮಾಗ್ರಿಗಳು, ಪೀಠೋಪಕರಣಗಳು, ಡೀಸೆಲ್ ಜನರೇಟರ್ ಸೆಟ್, ಸಂಗೀತ ಉಪಕರಣಗಳು ಟ್ರಂಕ್‌ಗಳನ್ನು ಸರಬರಾಜು ಮಾಡಲಾಗಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ಸಮಿತಿಯು ತೀರ್ಮಾನಿಸಿತು. |
| 42 | 4564<br>ಶೂನ್ಯ ವೇಳೆ ಪ್ರಸ್ತಾವನೆ<br>ಶ್ರೀ ಅರುಣ ಶಹಾಪುರ<br>ವಿಪನದಿ: 30.07.2013 | ದಿ: 25.7.2013ರ ವಿಜಯ ಕರ್ನಾಟಕ ದಿನ ಪತ್ರಿಕೆಯಲ್ಲಿ ಶಾಲೆಗಳು ಮತ್ತು ಮಕ್ಕಳು ಇಲ್ಲದಿದ್ದರೂ, ರಾಷ್ಟ್ರ-ರಾಜ್ಯ ನಾಯಕರ ಹೆಸರಿನಲ್ಲಿ ನಕಲಿ ಶಾಲೆಗಳು ಲಕ್ಷಾಂತರ ರೂಪಾಯಿಗಳ ವಿದ್ಯಾರ್ಥಿ ವೇತನ ವಂಚನೆ ಮಾಡಲಾಗಿದೆ ಎಂಬ ಶೀರ್ಷಿಕೆ ಬಗ್ಗೆ. | ಸಮಾಜ ಕಲ್ಯಾಣ ಇಲಾಖೆಯು ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನವನ್ನು 2012-13ನೇ ಸಾಲಿನಿಂದ ಗಣಕೀಕರಣ ಗೊಳಿಸಿರುವುದರಿಂದ ರಾಜ್ಯದ ಅಂಗೀಕೃತ ಶಾಲೆಗಳ ವಿವರದ ಪಟ್ಟಿಯನ್ನು ಡೈಸ್‌ಕೋಡಿ ನೊಂದಿಗೆ ಶಿಕ್ಷಣ ಇಲಾಖೆಯಿಂದ ಪಡೆದು ಸಮಾಜ ಕಲ್ಯಾಣ ಇಲಾಖೆಯ ತಂತ್ರಾಂಶಕ್ಕೆ ಅಳವಡಿಸಲಾಗಿದೆ. | ದಿನಾಂಕ: 13.05.2019ರಂದು ನಡೆದ ಸಮಿತಿಯ ಸಭೆಯಲ್ಲಿ ಚರ್ಚಿಸಿದಾಗ, ವಿಷಯದ ಬಗ್ಗೆ ಜಿಲ್ಲಾಧಿಕಾರಿಗಳಿಂದ ತನಿಖೆ ನಡೆಸಿ ವಿವಾದಿತ ಶಾಲೆಗಳ ಮುಖ್ಯಸ್ಥರ ವಿರುದ್ಧ ಕ್ರಿಮಿನಲ್ ಮೊಕದ್ದಮ್ಮೆ ದಾಖಲಿಸಲು ಜಿಲ್ಲಾಧಿಕಾರಿ ಮತ್ತು ಜಂಟಿ ನಿರ್ದೇಶಕರಿಗೆ ನಿರ್ದೇಶನ ನೀಡಲಾಗಿದೆ. ಅದರಂತೆ, ಕಲಬುರಗಿ ಸ್ಟೇಷನ್ ಬಜಾರ್ ಪೊಲೀಸ್ ಠಾಣೆ ಗುನ್ನೆ ಸಂಖ್ಯೆ: 57/2014ನ್ನು ದಾಖಲಿಸಲಾಗಿರುತ್ತದೆ.<br><br>ಈ ಪ್ರಕರಣವು ನ್ಯಾಯಾಲಯದಲ್ಲಿ ವಿಚಾರಣಾ ಹಂತದಲ್ಲಿದ್ದು, ದಿ: 14.5.2019ಕ್ಕೆ ಮುಂದೂಡಲಾಗಿರುತ್ತದೆ |

| | | | | |
|---|---|---|---|---|
| | | | ವಿವಾದಿತ ಶಾಲೆಗಳು<br>1. ಧರಂಸಿಂಗ್ ಆಂಗ್ಲ ಮಾಧ್ಯಮ ಪ್ರಾಥಮಿಕ, ಪ್ರೌಢ ಶಾಲೆ, ಅಂಬಿಕಾನಗರ.<br>2. ಶ್ರೀ ಮಾಪಣ್ಣ ಖರ್ಗೆ, ಪ್ರಾಥಮಿಕ ಶಾಲೆ, ತಾಜ್ ಸುಲ್ತಾನ್‌ಪುರ<br>3. ಇಂದಿರಾ ಸ್ಮಾರಕ ಪ್ರಾಥಮಿಕ ಶಾಲೆ, ಗಂಜ್.<br>4. ಲಕ್ಷ್ಮಣರಾವ್ ಗೋರೆ, ಪ್ರಾಥಮಿಕ ಶಾಲೆ, ಆಳಂದ ಕಾಲೋನಿ<br><br>ಪತ್ರಿಕೆಯಲ್ಲಿ ವರದಿ ಯಾಗಿರುವಂತೆ ವಿವಾದಿತ 04 ಶಾಲೆಗಳು ಶಿಕ್ಷಣ ಇಲಾಖೆಯಿಂದ ಮಾನ್ಯತೆ ಪಡೆದಿವೆಯೇ, ನಿಯಮನುಸಾರ ಡೈಸ್‌ಕೋಡ್‌ನ್ನು ಪಡೆದಿರುತ್ತಾರೆಯೇ, ಆ ಶಾಲೆಗಳಲ್ಲಿನ ವಿದ್ಯಾರ್ಥಿಗಳು ಪರಿಶಿಷ್ಟ ಜಾತಿ ಮತ್ತು ವರ್ಗಕ್ಕೆ ಸೇರಿದವರಾಗಿರುತ್ತಾರೆಯೇ ಇವರುಗಳಿಗೆ ನೀಡಲಾಗುತ್ತಿರುವ ವಿದ್ಯಾರ್ಥಿ ವೇತನವು ನಿಯಮಾನುಸಾರ ಇದೆಯೇ ಇತ್ಯಾದಿಗಳನ್ನು ಪರಿಶೀಲಿಸಲಾಗುತ್ತಿದೆ ಎಂದು | ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ಸಮಿತಿಯು ತೀರ್ಮಾನಿಸಿತು. |

| | | | | |
|---|---|---|---|---|
| | | | ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ತಿಳಿಸಿದರು. | |
| 43 | 4567<br>ಚು.ಗು.ಪ್ರ: 251<br>ಡಾ: ಎ.ಎಚ್. ಶಿವಯೋಗಿಸ್ವಾಮಿ<br>ವಿಪನದಿ: 27.01.2014 | ಏಕಲವ್ಯ ಮಾದರಿ ವಸತಿ ಶಾಲೆ ಹಾಗೂ ಅಲ್ಪಸಂಖ್ಯಾತರ ವಸತಿ ಶಾಲೆಗಳಲ್ಲಿ ಶಿಕ್ಷಕರಿಗೆ ಮತ್ತು ಬೋಧಕೇತರ ಸಿಬ್ಬಂದಿಗಳಿಗೆ ವೇತನ ಬಿಡುಗಡೆ ಮಾಡದಿರುವ ಹಾಗೂ ಸದರಿ ವಸತಿ ಶಾಲೆಗಳಿಗೆ ಸ್ವಂತ ಕಟ್ಟಡ ಹಾಗೂ ಮೂಲಭೂತ ಸೌಕರ್ಯಗಳು ಇಲ್ಲದಿರುವ ಕುರಿತು. | ವೇತನವನ್ನು ಬಿಡುಗಡೆ ಮಾಡಲು ಹಾಗೂ ಸ್ವಂತ ಜಾಗವಿರುವ ಕಡೆ ಸ್ವಂತ ಕಟ್ಟಡ ಕಟ್ಟುವುದಕ್ಕೆ ಪ್ರಾರಂಭ ಮಾಡುವುದಾಗಿ ಮಾನ್ಯ ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ತಿಳಿಸಿದರು. | ದಿನಾಂಕ: 13.05.2019ರಂದು ನಡೆದ ಸಮಿತಿಯ ಸಭೆಯಲ್ಲಿ ಚರ್ಚಿಸಿದಾಗ,<br>**ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ:** ಕೇಂದ್ರ ಸರ್ಕಾರವು ಪರಿಶಿಷ್ಟ ವರ್ಗಗಳ ಕಲ್ಯಾಣಕ್ಕಾಗಿ ರಾಜ್ಯಕ್ಕೆ ಒಟ್ಟು 12 ಏಕಲವ್ಯ ಮಾದರಿ ವಸತಿ ಶಾಲೆಗಳನ್ನು ಮಂಜೂರಾತಿ ಮಾಡಿದ್ದು, ಈ ಪೈಕಿ 10 ಏಕಲವ್ಯ ಮಾದರಿ ವಸತಿ ಶಾಲೆಗಳು ಕಾರ್ಯನಿರ್ವಹಿಸುತ್ತಿವೆ. ಈ ವಸತಿ ಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಖಾಯಂ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಗಳಿಗೆ ಶಿಕ್ಷಣ ಇಲಾಖೆಯ ಶಿಕ್ಷಕರುಗಳಿಗೆ ನಿಗದಿಪಡಿಸಿದ ವೇತನ ಶ್ರೇಣಿಯನ್ನು ಅಳವಡಿಸಕೊಂಡು ಪ್ರತಿ ಮಾಹೆ ವೇತನವನ್ನು ಹೆಚ್.ಆರ್.ಎಂ.ಎಸ್. ಮೂಲಕ ಸಕಾಲದಲ್ಲಿ ಪಾವತಿಸಲಾಗುತ್ತಿದೆ. ಹಾಗೆಯೇ ಏಜೆನ್ಸಿ ಮೂಲಕ ಹೊರಸಂಪನ್ಮೂಲದಿಂದ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ಸಹ ಸಕಾಲದಲ್ಲಿ ಪಾವತಿಸಲಾಗುತ್ತಿದೆ.<br>ಮಂಜೂರಾದ 12 ವಸತಿ ಶಾಲೆಗಳ ಪೈಕಿ 10 ವಸತಿ ಶಾಲೆಗಳಿಗೆ ಸ್ವಂತ ಕಟ್ಟಡ ನಿರ್ಮಾಣ ಮಾಡಿ ವಿದ್ಯಾರ್ಥಿಗಳ ಉಪಯೋಗಕ್ಕೆ ಬಿಟ್ಟು ಕೊಡಲಾಗಿದೆ ಹಾಗೂ ಅಗತ್ಯ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲಾಗಿದೆ. ಉಳಿದ 02 ವಸತಿ ಶಾಲೆಗಳ ಕಟ್ಟಡಗಳ ನಿರ್ಮಾಣ ಕಾಮಗಾರಿಯು ಪ್ರಗತಿಯಲ್ಲಿದ್ದು, ಸ್ವಂತ ಕಟ್ಟಡ ನಿರ್ಮಾಣವಾದ ನಂತರ ವಸತಿ ಶಾಲೆಗಳನ್ನು ಪ್ರಾರಂಭಿಸಲಾಗುವುದು ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿದ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |

| | | | | |
|---|---|---|---|---|
| 44 | 4569<br>ಚು.ಗು.ಪ್ರ: 259<br>ಶ್ರೀ ಆರ್.ಕೆ. ಸಿದ್ದರಾಮಣ್ಣ<br>ವಿಪನದಿ: 27.01.2014 | ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯಿಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಉದ್ದಿಮೆದಾರರು ಶೇ. 4ರ ಬಡ್ಡಿ ದರದಲ್ಲಿಯೇ ಸಾಲವನ್ನು ಪಡೆಯಲು ಹಾಗೂ ಸಾಲ ಮರುಪಾವತಿಯಲ್ಲಿ ಸುಸ್ತಿರಹಿತ ರಾಗಿರಬೇಕು ಎನ್ನುವ ಷರತ್ತನ್ನು ರದ್ದು ಮಾಡುವ ಹಾಗೂ ಪ್ರಸ್ತುತ ಇರುವ ಸದರಿ ಸಾಲದ ಅವಧಿಯನ್ನು 5 ವರ್ಷದಿಂದ 10 ವರ್ಷಕ್ಕೆ ವಿಸ್ತರಣೆ ಮಾಡುವ ಕುರಿತು. | ಈ ವಿಚಾರದಲ್ಲಿ ಸರ್ಕಾರ ತೀವ್ರವಾಗಿ ಚರ್ಚಿಸುತ್ತಿದ್ದು, ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು, ಹಣಕಾಸು ಇಲಾಖೆಯವರು, ಉದ್ದಿಮೆದಾರರು ಹಾಗೂ ಮಾನ್ಯ ಸದಸ್ಯರನ್ನು ಸಹ ಕರೆದು ವಿಚಾರ ಮಾಡಿ ಮುಂದಿನ ಸೂಕ್ತ ಕ್ರಮ ಕೈಗೊಳ್ಳಲಾಗುವುದೆಂದು ಮಾನ್ಯ ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ತಿಳಿಸಿದರು. | ದಿನಾಂಕ: 13.05.2019ರಂದು ನಡೆದ ಸಮಿತಿಯ ಸಭೆಯಲ್ಲಿ ಚರ್ಚಿಸಿದಾಗ, ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ ಹಾಗೂ ರಾಷ್ಟ್ರೀಕೃತ ಬ್ಯಾಂಕ್/ಅಪೆಕ್ಸ್ ಬ್ಯಾಂಕ್/ಡಿ.ಸಿ.ಸಿ ಬ್ಯಾಂಕ್‌ಗಳಿಂದ ಸಾಲ ಪಡೆಯುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಉದ್ಯಮಿಗಳಿಗೆ ಶೇ.4ರ ಬಡ್ಡಿ ದರದಲ್ಲಿ ಸಾಲ ನೀಡಲಾಗುತ್ತಿದೆ.<br><br>ಸರ್ಕಾರದ ಆದೇಶ ಸಂಖ್ಯೆ: ಸಕಇ 158 ಎಸ್‌ಎಲ್‌ಪಿ 2016, ದಿ: 25.6.2016 ಕೋಟಿವರೆಗಿನ ಸಾಲದ ಮರು ಪಾವತಿ ಅವಧಿಯನ್ನು 8 ವರ್ಷಕ್ಕೆ ಮತ್ತು ರೂ.5.00 ಕೋಟಿಯಿಂದ ರೂ. 10.00 ಕೋಟಿವರೆಗಿನ ಸಾಲದ ಮರುಪಾವತಿ ಅವಧಿಯನ್ನು 10 ವರ್ಷಗಳಿಗೆ ವಿಸ್ತರಿಸಲಾಗಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿದ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |
| 45 | 4570<br>ಚು.ರ.ಪ್ರ: 282<br>ಡಾ: ದೊಡ್ಡರಂಗೇಗೌಡ<br>ವಿಪನದಿ: 27.01.2014 | ಡಾ: ಅಂಬೇಡ್ಕರ್ ಅಭಿವೃದ್ಧಿ ನಿಗಮದಲ್ಲಿ ಕೆಲಸ ನಿರ್ವಹಿಸುತ್ತಿರುವ ಅಧಿಕಾರಿ/ನೌಕರರು ನಿಗಮದ ವಿವಿಧ ಯೋಜನೆಗಳಲ್ಲಿ ತಾವೇ ಫಲಾನುಭವಿಗಳಾಗಿ ಸಾಲ–ಸೌಲಭ್ಯ ಪಡೆದಿದ್ದು, ಅಂತಹವರುಗಳ ವಿರುದ್ಧ ಸರ್ಕಾರ ಕೈಗೊಳ್ಳುವ ಕ್ರಮಗಳ ಕುರಿತು. | ಈ ಬಗ್ಗೆ ಪರಿಶೀಲಿಸಿ, ನಿಯಮಾನುಸಾರ ಕ್ರಮವಹಿಸಲಾಗುವುದೆಂದು ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ತಿಳಿಸಿದರು. | ದಿನಾಂಕ: 13.05.2019ರಂದು ನಡೆದ ಸಮಿತಿಯ ಸಭೆಯಲ್ಲಿ ಚರ್ಚಿಸಿದಾಗ, ಡಾ: ಅಂಬೇಡ್ಕರ್ ಅಭಿವೃದ್ಧಿ ನಿಗಮದಲ್ಲಿ ಕೆಲಸ ನಿರ್ವಹಿಸುತ್ತಿರುವ ಯಾವುದೇ ಅಧಿಕಾರಿ/ನೌಕರರು ನಿಗಮದ ಯೋಜನೆಗಳಲ್ಲಿ ಸಾಲ–ಸೌಲಭ್ಯ ಪಡೆದಿರುವ ಪ್ರಕರಣಗಳು ಇರುವುದಿಲ್ಲ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿದ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |
| 46 | 4574<br>ನಿಯಮ 330ರ ಮೇರೆಗೆ<br>ಶ್ರೀ ಆರ್.ಕೆ. ಸಿದ್ದರಾಮಣ್ಣ<br>ವಿಪನದಿ:20.02.2014 | ಸರ್ಕಾರದಲ್ಲಿ ಹಲವಾರು ವರ್ಷಗಳಿಂದ ಪರಿಶೀಲನೆಯಾಗದೆ ಬಾಕಿ ಉಳಿದಿರುವ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ | ಮಡಿವಾಳ, ದೊಂಬಿದಾಸ, ದಾಸರಿ, ದಾಸರು, ಡಂಗದಾಸರು, ಚಕ್ರವಾದ್ಯ ದಾಸರು, ಜೋಗಿ, ಹಾಲಕ್ಕಿ ಒಕ್ಕಲಿಗ, ಕುಡುಬಿ, ಕುಣಬಿ, ಕಣಿಯನ್, ಕನಿಯನ್, ಪರಿವಾರ, | ದಿನಾಂಕ: 13.05.2019ರಂದು ನಡೆದ ಸಮಿತಿಯ ಸಭೆಯಲ್ಲಿ ಚರ್ಚಿಸಿದಾಗ,<br>1. ಮಡಿವಾಳ ಸಮುದಾಯವನ್ನು ಪರಿಶಿಷ್ಟ ಜಾತಿ ಪಟ್ಟಿಗೆ ಸೇರಿಸಲು ಕೋರಿರುವ ಪ್ರಸ್ತಾವನೆಯು ಪರಿಶೀಲನೆಯಲ್ಲಿರುತ್ತದೆ. |

| | | | | |
|---|---|---|---|---|
| | | ಪಟ್ಟಿಗೆ ಸೇರ್ಪಡೆ ಬಯಸಿ ಸಲ್ಲಿಸಲ್ಪಟ್ಟ ಮನವಿಗಳ ಮೇಲೆ ಯಾವುದೇ ಕ್ರಮ ಕೈಗೊಳ್ಳದಿರುವ ಬಗ್ಗೆ. | ತಳವಾರ, ಕೊಡವ, ಗಂಗಾಮತ ಮತ್ತು ಅದರ 38 ಉಪಜಾತಿಗಳು, ಕಾಡುಗೊಲ್ಲ, ಪಿಚ್ಚಿಗುಂಟ್ಲು/ಹೆಳವ, ಕೊಡಗು ಜಿಲ್ಲೆಯ ಹಾಲುಮತ, ಗೊಲ್ಲ, ಗೌಳಿ ಅದರ ಉಪಜಾತಿ ಮತ್ತು ಧನಗರ, ಬೆಟ್ಟಕುರುಬ, ಕೋಟೆಗಾರ, ಖಾಟಿಕ್ ಜಾತಿಗಳನ್ನು ಪರಿಶಿಷ್ಟ ಜಾತಿ/ಪಂಗಡದ ಪಟ್ಟಿಗೆ ಸೇರಿಸುವಂತೆ ಮನವಿಗಳು ಬಂದಿದ್ದು, ಅವುಗಳ ಪೈಕಿ ಮಡಿವಾಳ, ಜೋಗಿ, ಹಾಲಕ್ಕಿ ಒಕ್ಕಲಿಗ, ಕುಡುಬಿ ಮತ್ತು ಕುಣಬಿ, ಕಣಿಯನ್ ಮತ್ತು ಕನಿಯನ್, ಪರಿವಾರ ಮತ್ತು ತಳವಾರ, ಕೋಟೆಗಾರ, ಖಾಟಿಕ್ ಜಾತಿಗಳ ಕುರಿತು ಕುಲ ಶಾಸ್ತ್ರೀಯ ಅಧ್ಯಯನ ವರದಿಯನ್ನು ಸ್ವೀಕರಿಸಲಾಗಿದ್ದು, ಸದರಿ ಜಾತಿಗಳನ್ನು ಪರಿಶಿಷ್ಟ ಜಾತಿ/ಪಂಗಡಗಳ ಪಟ್ಟಿಗೆ ಸೇರಿಸುವ ಕುರಿತು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡುವ ಬಗ್ಗೆ ಸರ್ಕಾರದ ಪರಿಶೀಲನೆಯಲ್ಲಿರುತ್ತವೆ ಎಂದು ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ತಿಳಿಸಿದರು. | 2. ದೊಂಬಿದಾಸ, ದಾಸರಿ, ದಾಸರು, ಡಂಗದಾಸರು, ಚಕ್ರವಾದ್ಯ ದಾಸರು ಸಮುದಾಯವನ್ನು ಪರಿಶಿಷ್ಟ ಜಾತಿ ಪಟ್ಟಿಗೆ ಸೇರಿಸುವ ಪ್ರಸ್ತಾವನೆಯು ಪರಿಶೀಲನೆಯಲ್ಲಿರುತ್ತದೆ.<br><br>3. ಹಾಲಕ್ಕಿ ಒಕ್ಕಲು ಸಮುದಾಯವನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಲು ದಿ: 21.10.2009ರಂದು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿತ್ತು. ಕೇಂದ್ರ ಸರ್ಕಾರದ ಬುಡಕಟ್ಟು ವ್ಯವಹಾರಗಳ ಸಚಿವಾಲಯವು ದಿ: 7.5.2013ರಲ್ಲಿ ರಿಜಿಸ್ಟ್ರಾರ್ ಜನರಲ್ ಆಫ್ ಇಂಡಿಯಾರವರು ಸಲ್ಲಿಸಿದ ವರದಿಯನ್ನು ಸೂಕ್ತ ಸಮರ್ಥನೆಯೊಂದಿಗೆ ಸಲ್ಲಿಸಲು ಹಿಂದಿರುಗಿಸಿದ್ದು, ರಿಜಿಸ್ಟ್ರಾರ್ ಜನರಲ್ ಆಫ್ ಇಂಡಿಯಾರವರು ವ್ಯಕ್ತಪಡಿಸಿರುವ ಎಲ್ಲಾ ಅಂಶಗಳನ್ನು ಅಧ್ಯಯನಕ್ಕೆ ಒಳಪಡಿಸುವ ಮೂಲಕ ಮತ್ತೊಮ್ಮೆ ಆಳವಾದ ಕುಲಶಾಸ್ತ್ರೀಯ ಅಧ್ಯಯನ ನಡೆಸಿ, ವಿವರವಾದ ವರದಿಯನ್ನು ದಿ: 8.2.2017ರಂದು ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗಿದೆ.<br><br>4. ಕುಣಬಿ, ಕುಡಬಿ:<br><br>ಕುಡಬಿ ಸಮುದಾಯವನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸುವಂತೆ ಸರ್ಕಾರದ ಪತ್ರ ಸಂಖ್ಯೆ: ಸಕಇ 185, ಎಸ್ಎಡಿ 2012, ದಿ: 10.10.2017ರಂದು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿತ್ತು. ಕೇಂದ್ರ ಸರ್ಕಾರದ ರಿಜಿಸ್ಟ್ರಾರ್ ಜನರಲ್ ಆಫ್ ಇಂಡಿಯಾರವರ ಪರಿಶೀಲನಾ ಅಂಶಗಳಿಗೆ ಸೂಕ್ತ ಸಮರ್ಥನೆಯನ್ನು ಸಹ ದಿ: 21.02.2019ರಂದು ಕೇಂದ್ರ ಸರ್ಕಾರಕ್ಕೆ ಕಳುಹಿಸಲಾಗಿದೆ. |

| | | | | |
|---|---|---|---|---|
| | | | | ಕುಡುಬಿ: ಜನಾಂಗವನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸುವ ಕುರಿತು ಕುಲಶಾಸ್ತ್ರೀಯ ಅಧ್ಯಯನ ನಡೆಸಿ ವರದಿ ಸಲ್ಲಿಸುವಂತೆ ದಿ: 23.4.2015ರಂದು ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆ, ಮೈಸೂರು ಇವರಿಗೆ ಸೂಚಿಸಲಾಗಿದೆ ಸದರಿಯವರಿಂದ ವರದಿ ನಿರೀಕ್ಷಿಸಲಾಗಿದೆ.<br>5. ಪರಿಶಿಷ್ಟ ಪಂಗಡಕ್ಕೆ ಸೇರಿದ ಕಣಿಯನ್ ಮತ್ತು ಕನಿಯನ್ ಜನಾಂಗದ ಪ್ರಾದೇಶಿಕ ನಿರ್ಬಂಧವನ್ನು ತೆಗೆದುಕು ಹಾಕಿ ಚಾಮರಾಜನಗರ ಜಿಲ್ಲೆ ಕೊಳ್ಳೇಗಾಲ ತಾಲ್ಲೂಕಿನ ಹೊರಗೆ ಇರುವ ಕರ್ನಾಟಕದ ಕನಿಯನ್ ಮತ್ತು ಸಮಾನಾಂತರ ಜಾತಿಗಳಾದ ಕಣ್ಯನ್, ಕಣಿ, ಕಣೆಯ, ಕಣಿಯರು, ಕಣಿಯಾರ್, ಕಣಿಸನ್ ಸಮುದಾಯಗಳನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಲು ಸರ್ಕಾರದ ಪತ್ರ ಸಂಖ್ಯೆ: ಸಕಇ 01 ಎಸ್‌ಎಡಿ 2009ರನ್ವಯ ದಿ: 04.03.2014ರಂದು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿತ್ತು. ಕೇಂದ್ರ ಸರ್ಕಾರದ ರಿಜಿಸ್ಟ್ರಾರ್ ಜನರಲ್ ಆಫ್ ಇಂಡಿಯಾರವರ ಪರಿಶೀಲನಾ ಅಂಶಗಳಿಗೆ ಸೂಕ್ತ ಸಮರ್ಥನೆಯನ್ನು ಸಹ ದಿ: 17.10.2018ರಂದು ಕೇಂದ್ರ ಸರ್ಕಾರಕ್ಕೆ ಕಳುಹಿಸಲಾಗಿದೆ.<br><br>6. ಪರಿವಾರ ಮತ್ತು ತಳವಾರ ಜಾತಿಗಳನ್ನು ಪರಿಶಿಷ್ಟ ಪಂಗಡದ ನಾಯಕ ಜನಾಂಗದ ಪರ್ಯಾಯ ಪದಗಳೆಂದು ಸೇರಿಸಲು ಪತ್ರ ಸಂಖ್ಯೆ: ಎಸ್‌ಎಡಿ 2009, ದಿ: 25.02.2014ರಂದು ಕೇಂದ್ರ ಸರ್ಕಾರ ಆಗಸ್ಟ್–2016ರಲ್ಲಿ ಕೆಲವೊಂದು ಪೂರಕ ಮಾಹಿತಿಗಳನ್ನೊಳಗೊಂಡ ಸ್ಪಷ್ಟೀಕರಣ ಕೇಂದ್ರ ಸರ್ಕಾರಕ್ಕೆ ಮಾಹಿತಿ ಸಲ್ಲಿಸಲಾಗಿದೆ.<br><br>ಮೇಲ್ಕಂಡಂತೆ ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿದ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |

| | | | | |
|---|---|---|---|---|
| 47 | 4575<br>ಶೂನ್ಯವೇಳೆ ಪ್ರಸ್ತಾಪ<br>ಶ್ರೀ ಕೋಟ ಶ್ರೀನಿವಾಸ ಪೂಜಾರಿ<br>ವಿಪನದಿ: 26.02.2014 | ಉಡುಪಿ ಜಿಲ್ಲೆಯ ಬೈಂದೂರಿನಲ್ಲಿರುವ ಮೊರಾರ್ಜಿ ವಸತಿ ಶಾಲೆಯ ವಿದ್ಯಾರ್ಥಿನಿಯರು ಶಾಲೆಯ ಅವ್ಯವಸ್ಥೆಯನ್ನು ಸರಿಪಡಿಸಲು ಆಗ್ರಹಿಸಿ ಪ್ರತಿಭಟನೆ ನಡೆಸಿರುವ ಬಗ್ಗೆ. | ಬೈಂದೂರಿನಲ್ಲಿರುವ ಮೊರಾರ್ಜಿ ವಸತಿ ಶಾಲೆ ಬಾಡಿಗೆ ಕಟ್ಟಡದಲ್ಲಿದ್ದು, ಸ್ವಂತ ಕಟ್ಟಡ ಮಾಡುವುದಕ್ಕೆ ಈಗ ನಿವೇಶನ ಪಡೆಯುತ್ತಿದ್ದು, ಅಲ್ಲಿಗೆ ಶಿಫ್ಟ್ ಮಾಡುತ್ತೇವೆ. ಎಲ್ಲೆಲ್ಲಿ ಬಾಡಿಗೆ ಕಟ್ಟಡ ಇದೆಯೋ ಅಲ್ಲಿ ಈ ರೀತಿಯ ವ್ಯವಸ್ಥೆ ಮಾಡಿ ಸ್ಥಳಾಂತರ ಮಾಡುವ ವ್ಯವಸ್ಥೆ ಮಾಡಲಾಗುವುದು. ಪ್ರಸ್ತುತ ಕಟ್ಟಡದ ಬಾಡಿಗೆ ಕೊಡಿಸಿ ಅಲ್ಲಿ ಮಕ್ಕಳಿಗೆ ಯಾವುದೇ ತೊಂದರೆಯಾಗದಂತೆ ಉತ್ತಮವಾದ ವಾತಾವರಣ ನಿರ್ಮಾಣ ಮಾಡಿ ಗುಣಮಟ್ಟದ ಆಹಾರವನ್ನು ಒದಗಿಸುವುದಕ್ಕೆ ಸೂಚನೆ ಕೊಡುತ್ತೇವೆ ಎಂದು ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ತಿಳಿಸಿದರು. | ದಿನಾಂಕ: 13.05.2019ರಂದು ನಡೆದ ಸಮಿತಿಯ ಸಭೆಯಲ್ಲಿ ಚರ್ಚಿಸಿದಾಗ, ಉಡುಪಿ ಜಿಲ್ಲೆಯ ಕುಂದಾಪುರ ತಾಲ್ಲೂಕಿನ ಬೈಂದೂರಿನಲ್ಲಿ ಹಿಂದುಳಿದ ವರ್ಗದ ವಸತಿ ಶಾಲಾ ಸಂಕೀರ್ಣ ನಿರ್ಮಾಣವನ್ನು ರೂ. 551.86 ಲಕ್ಷಗಳಲ್ಲಿ ಕೈಗೆತ್ತಿಕೊಳ್ಳಲಾಗಿದ್ದು, ಈ ಕಟ್ಟಡ ನಿರ್ಮಾಣವನ್ನು ಪೂರ್ಣಗೊಳಿಸಿ ದಿ: 08.4.2015ರಂದು ಹಸ್ತಾಂತರಿಸಿರುತ್ತಾರೆ. ಈ ವಸತಿ ಶಾಲೆ ಸಂಕೀರ್ಣದಲ್ಲಿ ಶಾಲಾ ಕಟ್ಟಡ, ಬಾಲಕ ಮತ್ತು ಬಾಲಕಿಯರಿಗೆ ಪ್ರತ್ಯೇಕ ವಸತಿ ವಿದ್ಯಾರ್ಥಿ ನಿಲಯಗಳ ಕಟ್ಟಡ, ಭೋಜನಾ ಗೃಹಗಳನ್ನು ನಿರ್ಮಾಣ ಮಾಡಲಾಗಿದೆ. ಪ್ರಸ್ತುತ ಈ ವಸತಿ ಶಾಲೆಯು ನೂತನ ಸಂಕೀರ್ಣದಲ್ಲಿ ಕಾರ್ಯನಿರ್ವಹಿಸುತ್ತಿದೆ.<br><br>ಪ್ರಸಕ್ತ ಸಾಲಿನಲ್ಲಿ ಸದರಿ ಶಾಲಾ ಆವರಣದ ನಿರ್ಮಾಣ ಕಾಮಗಾರಿಯನ್ನು ರೂ.123.40 ಲಕ್ಷಗಳಲ್ಲಿ ಕೈಗೆತ್ತಿಕೊಳ್ಳಲು ದಿ: 24.12.2018ರಂದು ಗುತ್ತಿಗೆದಾರರಿಗೆ ಕಾರ್ಯಾದೇಶ ನೀಡಿದ್ದು, ಕಾಮಗಾರಿ ಪ್ರಗತಿಯಲ್ಲಿದೆ.<br><br>ಈ ವಸತಿ ಶಾಲೆಯ ಬೋಧಕ ಸಿಬ್ಬಂದಿಗಳಿಗೆ ವಸತಿ ಗೃಹಗಳನ್ನು ರೂ.550.40 ಲಕ್ಷಗಳಲ್ಲಿ ನಿರ್ಮಾಣ ಮಾಡಲು ದಿ: 08.03.2019ರಂದು ಗುತ್ತಿಗೆದಾರರಿಗೆ ಕಾರ್ಯಾದೇಶ ನೀಡಿದ್ದು, ಕಾಮಗಾರಿ ಪ್ರಗತಿಯಲ್ಲಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿದ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |

| | | | | |
|---|---|---|---|---|
| 48 | 4576<br>ಚು.ಗು.ಪ್ರ: 1446<br>ಶ್ರೀ ಆಚಾರ್ ಹಾಲಪ್ಪ ಬಸಪ್ಪ<br>ವಿಪನದಿ:24.2.2014 | ರಾಜ್ಯದಲ್ಲಿರುವ ಸಮಾಜ ಕಲ್ಯಾಣ ಇಲಾಖೆ ಅಧೀನದಲ್ಲಿರುವ ವಸತಿ ನಿಲಯಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪ್ರತಿ ಗಂಡು ಮಕ್ಕಳ ಕ್ಷೌರಕ್ಕಾಗಿ ಸರ್ಕಾರ ನೀಡುತ್ತಿರುವ ಅನುದಾನ ಕುರಿತು. | ಪ್ರತಿ ವಿದ್ಯಾರ್ಥಿಗಳ ವಾರ್ಷಿಕ ರೂ.150 ನೀಡಲಾಗುತ್ತಿದೆ. ಸಮಾಜ ಕಲ್ಯಾಣ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ಮೆಟ್ರಿಕ್ ಪೂರ್ವ ವಿದ್ಯಾರ್ಥಿಗಳ ಕ್ಷೌರದ ವೆಚ್ಚದ ದರಗಳ ಪರಿಷ್ಕರಣೆ ಸರ್ಕಾರದ ಪರಿಶೀಲನೆಯಲ್ಲಿದೆ ಎಂದು ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ತಿಳಿಸಿದರು. | ದಿನಾಂಕ: 13.05.2019ರಂದು ನಡೆದ ಸಮಿತಿಯ ಸಭೆಯಲ್ಲಿ ಚರ್ಚಿಸಿದಾಗ, ಸರ್ಕಾರದ ಆದೇಶ ದಿ: 28.11.2014ರಲ್ಲಿ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯದ ಬಾಲಕರ ವಾರ್ಷಿಕ ಕ್ಷೌರ ವೆಚ್ಚವನ್ನು ರೂ. 60 ರಿಂದ 150ಕ್ಕೆ ಹೆಚ್ಚಿಸಿ ಪರಿಷ್ಕರಿಸಲಾಗಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿದ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |
| 49 | 4577<br>ಚು.ಗು.ಪ್ರ: 1394<br>ಶ್ರೀ ಜಿ.ಎಸ್. ನ್ಯಾಮಗೌಡ<br>ವಿಪನದಿ: 24.2.2014 | ಸಮಾಜ ಕಲ್ಯಾಣ ಇಲಾಖೆಯಲ್ಲಿ 1985ರಿಂದ ಇಲ್ಲಿಯವರೆಗೆ ಅಂದರೆ 29 ವರ್ಷಗಳ ಕಾಲ ಸೃಜಿಸಲ್ಪಟ್ಟ ಹುದ್ದೆಗಳಿಗೆ ಅನುಗುಣವಾಗಿ ವೃಂದ ಮತ್ತು ನೇಮಕಾತಿ (ಸಿ ಮತ್ತು ಆರ್) ನಿಯಮಗಳನ್ನು ಪರಿಷ್ಕರಿಸುವ ಕುರಿತು. | ಪ್ರಸ್ತುತ ಇಲಾಖೆಯ ಪುನರ್ ಸಂಘಟನೆ (Re-Organisation) ಕುರಿತಂತೆ ಹುದ್ದೆಗಳ ಉನ್ನತೀಕರಣ ಹಾಗೂ ಹೊಸ ಹುದ್ದೆಗಳ ಸೃಜನೆ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ. ಈ ಬಗ್ಗೆ ಅಂತಿಮ ನಿರ್ಣಯ ಕೈಗೊಂಡ ನಂತರ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಸಮಗ್ರವಾಗಿ ಪರಿಷ್ಕರಿಸಲು ಕ್ರಮ ಜರುಗಿಸಲಾಗುವುದು ಎಂದು ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ತಿಳಿಸಿದರು. | ದಿನಾಂಕ: 13.05.2019ರಂದು ನಡೆದ ಸಮಿತಿಯ ಸಭೆಯಲ್ಲಿ ಚರ್ಚಿಸಿದಾಗ, ಸರ್ಕಾರದ ಆದೇಶ ಸಂಖ್ಯೆ: ಸಕಇ 424 ಪಕಸೇ 2012, ದಿ: 13.3.2015ರನ್ವಯ ಸಮಾಜಕಲ್ಯಾಣ ಇಲಾಖೆಯ ಪುನರ್‌ರಚನೆ ಆಗಿ ಇದರಲ್ಲಿ 1537 ಹುದ್ದೆಗಳನ್ನು ಹೊಸದಾಗಿ ಸೃಜಿಸುವುದರೊಂದಿಗೆ 209 ಹುದ್ದೆಗಳನ್ನು ಉನ್ನತೀಕರಿಸಲಾಗಿದೆ. 1985ರ ಮತ್ತು ನಂತರದಲ್ಲಿ ವೃಂದ ಮತ್ತು ನೇಮಕಾತಿ ನಿಯಮಗಳಿಗೆ ಆದ ತಿದ್ದುಪಡಿಗಳನ್ನು ಸಮಗ್ರವಾಗಿ ಪರಿಷ್ಕರಿಸಲು ಆರ್ಥಿಕ ಇಲಾಖೆಯನ್ನು ಕೋರಿದ್ದು, ಆ ಇಲಾಖೆಯು ಕೆಲವೊಂದು ಮಾರ್ಪಾಡುಗಳೊಂದಿಗೆ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಸಮಗ್ರವಾಗಿ ಪರಿಷ್ಕರಿಸಲು ಸಹಮತಿ ನೀಡಿರುತ್ತದೆ. ಈ ಪ್ರಸ್ತಾವವನ್ನು ಅಪರ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿರುವ ಸಮಿತಿಯ ಮುಂದೆ ಮಂಡಿಸಲು ಕ್ರಮ ವಹಿಸಲಾಗಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿದ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |

| | | | | |
|---|---|---|---|---|
| 50 | 5260<br>ಚು.ರ.ಪ್ರ: 1684<br>ಶ್ರೀ ಕೋಟಾ ಶ್ರೀನಿವಾಸ ಪೂಜಾರಿ<br>ವಿಪನದಿ:21.07.2014 | ಮಡಿವಾಳ ಸಮಾಜವನ್ನು ಅನ್ನಪೂರ್ಣಮ್ಮ ವರದಿಯಂತೆ ಪರಿಶಿಷ್ಟ ಜಾತಿಗೆ ಸೇರಿಸುವ ಬಗ್ಗೆ ಸಚಿವ ಸಂಪುಟದಲ್ಲಿಟ್ಟು ಕೇಂದ್ರಕ್ಕೆ ವರದಿ ಕಳುಹಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳ ಬಗ್ಗೆ. | ಸಚಿವ ಸಂಪುಟವು ಈ ವಿಷಯವನ್ನು ಅನಿರ್ದಿಷ್ಟಕಾಲ ಮುಂದೂಡಲಾಗಿದ್ದು, ಸದರಿ ವಿಷಯ ಸರ್ಕಾರದ ಪುನರ್ ಪರಿಶೀಲನೆಯಲ್ಲಿರುತ್ತದೆ ಎಂದು ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ತಿಳಿಸಿದರು. | ದಿನಾಂಕ: 13.05.2019ರಂದು ನಡೆದ ಸಮಿತಿಯ ಸಭೆಯಲ್ಲಿ ಚರ್ಚಿಸಿದಾಗ, ಮಡಿವಾಳ ಸಮುದಾಯವನ್ನು ಪರಿಶಿಷ್ಟ ಜಾತಿ ಪಟ್ಟಿಗೆ ಸೇರಿಸುವ ಪ್ರಸ್ತಾವನೆಯು ಪರಿಶೀಲನೆಯಲ್ಲಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿದ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |
| 51 | 5261<br>ಚು.ರ.ಪ್ರ: 1670<br>ಶ್ರೀ ಅಮರನಾಥ ಪಾಟೀಲ್<br>ವಿಪನದಿ:21.07.2014 | ರಾಜ್ಯದಲ್ಲಿರುವ ಮೊರಾರ್ಜಿ ದೇಸಾಯಿ ಮತ್ತು ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಗಳಲ್ಲಿ ಹೊಸ ನೇಮಕಾತಿ ಮಾಡಿಕೊಂಡಿರುವ ಚಿತ್ರಕಲಾ ಶಿಕ್ಷಕರ ಕುರಿತು ಸರ್ಕಾರ ತೆಗೆದುಕೊಂಡಿರುವ ಕ್ರಮದ ಬಗ್ಗೆ. | ಮಾನ್ಯ ಉಚ್ಚ ನ್ಯಾಯಾಲಯದ ಆದೇಶದಂತೆ ಹಿಂದಿನ ನೇಮಕಾತಿ ಪ್ರಕ್ರಿಯೆಯನ್ನು ರದ್ದುಪಡಿಸಿ, ಹೊಸದಾಗಿ ವೃಂದ ಮತ್ತು ನೇಮಕಾತಿಗೆ ಈಗಾಗಲೇ ತಿದ್ದುಪಡಿ ಆದೇಶ ಹೊರಡಿಸಿದ್ದು, ಅದರಂತೆ ನೇಮಕಾತಿ ಮಾಡಿಕೊಳ್ಳಲು ಕ್ರಮ ಕೈಗೊಳ್ಳಲಾಗುವುದು ಎಂದು ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ತಿಳಿಸಿದರು. | ದಿನಾಂಕ: 13.05.2019ರಂದು ನಡೆದ ಸಮಿತಿಯ ಸಭೆಯಲ್ಲಿ ಚರ್ಚಿಸಿದಾಗ, ಚಿತ್ರಕಲಾ ಶಿಕ್ಷಕರ ಹಿತದೃಷ್ಟಿಯಿಂದ ಸರ್ಕಾರದ ಆದೇಶ ಸಂಖ್ಯೆ: ಸಕಇ 70 ಮೊದೇಶಾ 2010, ದಿ: 17.06.2014ರ ಪ್ರಕಾರ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವೃಂದ ಮತ್ತು ನೇಮಕಾತಿ ನಿಯಮಗಳಿಗೆ ತಿದ್ದುಪಡಿ ತಂದು ಬಿ.ವಿ.ಎ. ಮತ್ತು ಬಿ.ಎಫ್.ಎ. ಪದವಿಗಳನ್ನು ಸೇರ್ಪಡಿಸಲಾಗಿದೆ.<br><br>ಈ ಹುದ್ದೆಗಳನ್ನು ಭರ್ತಿ ಮಾಡಲು ಕೋರಿ ದಿ: 3.11.2016ರಂದು ಕರ್ನಾಟಕ ಲೋಕಸೇವಾ ಆಯೋಗವನ್ನು ಕೋರಲಾಗಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿದ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |
| 52 | 5266<br>ಚು.ಗು.ಪ್ರ: 782<br>ಶ್ರೀಮತಿ ತಾರಾ ಅನುರಾಧ<br>ವಿಪನದಿ:15.12.2014 | ನಾಗರೀಕ ಹಕ್ಕು ಜಾರಿ ಸಂಸ್ಥೆಯ ಕಾರ್ಯ ವೈಖರಿ ಬಗ್ಗೆ. | ನಾಗರೀಕ ಹಕ್ಕು ಜಾರಿ ನಿರ್ದೇಶನಾಲಯದಲ್ಲಿ ಎಫ್.ಐ.ಆರ್.ನ್ನು ದಾಖಲು ಮಾಡುವ ಅಧಿಕಾರವಿಲ್ಲದೇ ಇರುವುದರಿಂದ ಈ ಘಟಕದ ಪೊಲೀಸ್ ಅಧಿಕಾರಿಗಳು ಸ್ಥಳೀಯ | ದಿನಾಂಕ: 13.05.2019ರಂದು ನಡೆದ ಸಮಿತಿಯ ಸಭೆಯಲ್ಲಿ ಚರ್ಚಿಸಿದಾಗ, ನಾಗರೀಕ ಹಕ್ಕು ಜಾರಿ ನಿರ್ದೇಶನಾಲಯದಲ್ಲಿ ಎಫ್.ಐ.ಆರ್.ನ್ನು ದಾಖಲಿಸಲು ಅಧಿಕಾರ ನೀಡುವಂತೆ ಕೋರಿ ಒಳಾಡಳಿತ ಇಲಾಖೆಗೆ ದಿನಾಂಕ: 01.01.2015 ರಂದು ಪತ್ರ ಬರೆಯಲಾಗಿದೆ. ಈ ವಿಷಯದಲ್ಲಿ ಒಳಾಡಳಿತ ಇಲಾಖೆ ನಿರ್ಣಯ ತೆಗೆದು ಕೊಳ್ಳಬೇಕಾಗಿರುತ್ತದೆ ಎಂದು |

| | | | | |
|---|---|---|---|---|
| | | | ಪೊಲೀಸ್ ಠಾಣೆಗಳನ್ನು ಸಂಪರ್ಕಿಸಿ ಮೊಕದ್ದಮೆಗಳನ್ನು ದಾಖಲಿಸಿ ನಂತರ ತನಿಖೆಯನ್ನು ಕೈಗೊಳ್ಳುತ್ತಿದ್ದಾರೆ. ಇದರಿಂದಾಗಿ ಈ ಘಟಕದ ಪೊಲೀಸ್ ಅಧಿಕಾರಿಗಳು ಸ್ಥಳೀಯ ಠಾಣಾಧಿಕಾರಿಗಳೊಂದಿಗೆ ಕೆಲವೊಂದು ಸಮಯದಲ್ಲಿ ಮುಜುಗರಕ್ಕೆ ಒಳಗಾಗುತ್ತಿದ್ದಾರೆ. ಆದ್ದರಿಂದ ಪೊಲೀಸ್ ಇಲಾಖೆಯ ಬಿ.ಎಂ.ಟಿ.ಎಫ್, ಐ.ಎಸ್.ಡಿ, ಸೈಬರ್ ಪೊಲೀಸ್‌ಠಾಣೆ ಹಾಗೂ ಬೆಸ್ಕಾಂ ವಿಚಕ್ಷಣಾ ದಳದಲ್ಲಿ ಇರುವಂತೆಯೇ ಈ ಘಟಕದಲ್ಲಿಯೂ ಸಹ ಎಫ್.ಐ.ಆರ್ ಅನ್ನು ದಾಖಲಿಸಿರುವ ಪೊಲೀಸ್ ಠಾಣೆಗಳಾಗಿ ಪರಿಗಣಿಸುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ ಎಂದು ಮಾನ್ಯ ಸಮಾಜ ಕಲ್ಯಾಣ ಸಚಿವರು ತಿಳಿಸದರು. | ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿದ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |
| 53 | 2969<br>ಚು.ಪ್ರ. 66<br>ಶ್ರೀ ಮುಖ್ಯಮಂತ್ರಿ ಚಂದ್ರು<br>ವಿಪನದಿ: 01.08.2008 | ಕೋಲಾರ ಜಿಲ್ಲೆಯ ಸಮಾಜ ಕಲ್ಯಾಣಾಧಿಕಾರಿಯನ್ನು ಅಮಾನತ್ತು ಮಾಡಲಾಗಿರುವ ಬಗ್ಗೆ. | ಇಲಾಖೆಯ ವಿವಿಧ ಕಾರ್ಯಕ್ರಮಗಳಿಗಾಗಿ ಬಿಡುಗಡೆ ಯಾದ ರೂ. 1,48,10,555/-ನ್ನು ದುರುಪಯೋಗ ಮಾಡಿಕೊಂಡಿರುವುದು ಮೇಲ್ನೋಟಕ್ಕೆ ಕಂಡು ಬಂದಿರುವ ಹಿನ್ನಲೆಯಲ್ಲಿ ದಿ: 03-07- | ದಿನಾಂಕ: 13.05.2019ರಂದು ನಡೆದ ಸಮಿತಿಯ ಸಭೆಯಲ್ಲಿ ಚರ್ಚಿಸಿದಾಗ, ಶ್ರೀ ಬಿ.ಆರ್. ಪಾಂಡುರಂಗ ಮೂಲತ: ತಾ.ಸ.ಕ.ಅ. ಮುಳಬಾಗಿಲು ಹಾಗೂ ಹೆಚ್ಚುವರಿ ಪ್ರಭಾರದಲ್ಲಿ ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿ, ಕೋಲಾರ ಜಿಲ್ಲೆ, ಇವರ ವಿರುದ್ಧ ಹಣಕಾಸಿನ ದುರುಪಯೋಗಕ್ಕೆ ಸಂಬಂಧಿಸಿದಂತೆ ಕೋಲಾರ ನಗರದ ಗಲ್ಲಿಪೇಟೆ ಪೊಲೀಸ್ ಪೇಟೆಯಲ್ಲಿ ಕ್ರಿಮಿನಲ್ ಮೊಕದ್ದಮೆ ಸಂಖ್ಯೆ: 56/2008ನ್ನು ದಾಖಲಿಸಿದ್ದು, |

| | | | | |
|---|---|---|---|---|
| | | | 2008ರಲ್ಲಿ ಅಮಾನತ್ತುಗೊಳಿಸಲಾಗಿರುತ್ತದೆ. ಸರ್ಕಾರವು ಜಂಟಿ ನಿರ್ದೇಶಕರ ವೃಂದದ ಅಧಿಕಾರಿಗಳನ್ನು ನೋಡೆಲ್ ಅಧಿಕಾರಿಗಳನ್ನಾಗಿ ನೇಮಕ ಮಾಡಿ ರಾಜ್ಯದಲ್ಲಿನ ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿ ಕಚೇರಿಗಳನ್ನು ಮತ್ತು ಇಲಾಖಾ ಸಂಸ್ಥೆಗಳನ್ನು ತಪಾಸಣೆ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ ಲೋಕಾಯುಕ್ತರಿಂದ ನಮಗೆ ಇದುವರೆಗೆ ಯಾವುದೇ ವರದಿ ಬಂದಿರುವುದಿಲ್ಲ ಬಂದ ತಕ್ಷಣ ಸಂಬಂಧಪಟ್ಟವರ ಬಗ್ಗೆ ಕಠಿಣ ಕ್ರಮ ತೆಗೆದುಕೊಳ್ಳುತ್ತೇನೆ ಎಂದು ಸಮಾಜ ಕಲ್ಯಾಣ ಸಚಿವರು ತಿಳಿಸಿದರು. | ಇದರ ಅಧಾರದ ಮೇಲೆ ಆರೋಪಿತರನ್ನು ಪೊಲೀಸ್ ವಶಕ್ಕೆ ನೀಡಲಾಗಿತ್ತು. ಕಾರಾಗೃಹ ಬಂಧನದ ಅವಧಿಯಲ್ಲಿ ದಿ: 8.7.2009ರಂದು ಸದರಿ ಅಧಿಕಾರಿ ಮರಣ ಹೊಂದಿರುತ್ತಾರೆ. ಆದುದರಿಂದ, ಕೋಲಾರದ ಎರಡನೇ ಹೆಚ್ಚುವರಿ ಮತ್ತು ಸತ್ರ ನ್ಯಾಯಾಲಯವು ದಿ: 27.7.2019ರಂದು abeted ಎಂದು ಪರಿಗಣಿಸಿರುತ್ತದೆ.<br><br>ಈ ಅಧಿಕಾರಿ ವಿರುದ್ಧ ಇದೇ ಆರೋಪದ ಮೇಲೆ ದಿನಾಂಕ: 2.3.2009ರಂದು ಇಲಾಖಾ ವಿಚಾರಣೆ ನಡೆಸಲು ನಿವೃತ್ತ ನ್ಯಾಯಾಧೀಶರಾದ ಶ್ರೀ ಎನ್. ಸುಬ್ಬರಾವ್ ರವರನ್ನು ವಿಚಾರಣಾಧಿಕಾರಿಗಳನ್ನಾಗಿ ನೇಮಿಸಲಾಗಿತ್ತು. ವಿಚಾರಣ ಸಮಯದಲ್ಲಿ ಆರೋಪಿತ ಅಧಿಕಾರಿ ದಿ: 8.7.2019ರಂದು ಮರಣ ಹೊಂದಿರುವುದರಿಂದ ವಿಚಾರಣಾಧಿಕಾರಿಗಳು 21.10.2019ರಂದು abeted ಎಂದು ಪರಿಗಣಿಸಿರುತ್ತಾರೆ.<br><br>ಈ ಪ್ರಕರಣದಲ್ಲಿ ಆರೋಪಿತ ಅಧಿಕಾರಿ ರೂ. 1,61,55,130.00ಗಳನ್ನು ದುರುಪಯೋಗ ಪಡಿಸಿಕೊಂಡು ಈ ಪೈಕಿ ರೂ. 33,70,323 ಗಳ ಮೌಲ್ಯದ ಚರ ಮತ್ತು ಸ್ಥಿರಾಸ್ತಿಗಳನ್ನು ವಶಪಡಿಸಿಕೊಳ್ಳಲಾಗಿರುತ್ತದೆ. ಇನ್ನು 1.27,84,807 ಗಳನ್ನು ಈ ಅಧಿಕಾರಿಯಿಂದ ವಸೂಲಿ ಮಾಡಬೇಕಾದ ಕಾರಣ ವಿಚಾರಣಾ ವರದಿಯನ್ನು ಒಪ್ಪದೇ, ಸರ್ಕಾರದ ಸುತ್ತೋಲೆ ಸಂಖ್ಯೆ: ಸಿಆಸುಇ 10 ಸೇಇವಿ 2003, ದಿ: 12.11.2003ರಂತೆ ವಿಚಾರಣೆಯನ್ನು ಮುಂದುವರಿಸಲು ದಿ: 8.3.2011ರಲ್ಲಿ ಆಯುಕ್ತರಿಗೆ ಸೂಚಿಸಲಾಗಿತ್ತು. ಅದರಂತೆ ಆಯುಕ್ತರು, ಸಮಾಜಕಲ್ಯಾಣ ಇಲಾಖೆ ಇವರು 3.5.2011ರಂದು ಶ್ರೀ ಎನ್. ಸುಬ್ಬರಾವ್, ನಿವೃತ್ತ ಜಿಲ್ಲಾ |

| | | | | |
|---|---|---|---|---|
| | | | | ನ್ಯಾಯಾಧೀಶರು ರವರಿಗೆ ವಿಚಾರಣೆ ನಡೆಸಿ ವರದಿ ಸಲ್ಲಿಸಲು ಸೂಚಿಸಿರುತ್ತಾರೆ. ಅದರಂತೆ, ವಿಚಾರಣಾಧಿಕಾರಿ ಮೃತರ ಪತ್ನಿ ಶ್ರೀಮತಿ ದುರ್ಗಾದೇವಿರವರಿಗೆ ವಿಚಾರಣಾ ನೋಟೀಸ್ ನೀಡಿರುತ್ತಾರೆ.<br><br>ಶ್ರೀಮತಿ ದುರ್ಗಾದೇವಿ ಕೋಂ: ಲೇಟ್: ಬಿ.ಆರ್. ಪಾಂಡುರಂಗ ಇವರು ಮೇಲ್ಕಂಡ ಕ್ರಮದ ವಿರುದ್ಧ ಕೆ.ಎ.ಟಿ. ಯಲ್ಲಿ ಅರ್ಜಿ ಸಂಖ್ಯೆ: 2146/2012ನ್ನು ಸಲ್ಲಿಸಿದ್ದು, ನ್ಯಾಯ ಮಂಡಳಿಯು ದಿ: 26.10.2017ರಂದು ನೀಡಿರುವ ಆದೇಶದಲ್ಲಿ ಇಲಾಖಾ ವಿಚಾರಣಾ ಆದೇಶಿಸಿರುವುದನ್ನು ಮತ್ತು ವಿಚಾರಣಾಧಿಕಾರಿಗಳು ನೋಟಿಸ್ ನೀಡಿರುವುದನ್ನು ರದ್ದುಪಡಿಸಿರುತ್ತದೆ. ಈ ಆದೇಶದ ವಿರುದ್ಧ ಮೇಲ್ಮನವಿ ಸಲ್ಲಿಸಲು ಇದು ಅರ್ಹ ಪ್ರಕರಣವಲ್ಲವೆಂದು ಸರ್ಕಾರಿ ವಕೀಲರು ಅಭಿಪ್ರಾಯಪಟ್ಟಿರುತ್ತಾರೆಂದು ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿದ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |
| 54 | 4642<br>ಚು.ಗು.ಪ್ರ: 270<br>ಶ್ರೀ ಅರುಣ ಶಹಾಪುರ<br>ವಿಪನದಿ: 27.01.2014<br>(ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ವರ್ಗಾವಣೆ) | ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಮಕ್ಕಳಿಗೂ 'ವಿದ್ಯಾಸಿರಿ' ಯೋಜನೆಯನ್ನು ವಿಸ್ತರಿಸುವ ಬಗ್ಗೆ. | ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ ಅನುಷ್ಠಾನಗೊಳಿಸಲಾಗುತ್ತಿರುವ ವಿದ್ಯಾಸಿರಿ ಯೋಜನೆ ಯನ್ನು ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೂ ಸಹ ವಿಸ್ತರಿಸುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ ಎಂದು ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ತಿಳಿಸಿದರು. | ದಿನಾಂಕ: 13.05.2019ರಂದು ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ವಿದ್ಯಾಸಿರಿ ಯೋಜನೆಯ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಲ್ಲಿ ಪ್ರವೇಶ ವಂಚಿತ ವಿದ್ಯಾರ್ಥಿಗಳಿಗೆ ಅನುಷ್ಠಾನಗೊಳಿಸುವ ಯೋಜನೆಯಾಗಿರುತ್ತದೆ.<br>ಸರ್ಕಾರದ ಆದೇಶ ಸಂಖ್ಯೆ:ಸಕಇ 87 ಸಮನ್ವಯ 2013, ದಿನಾಂಕ: 20.07.2013ರನ್ವಯ ವಿದ್ಯಾರ್ಥಿನಿಲಯಗಳಿಗೆ ಅರ್ಜಿ ಸಲ್ಲಿಸುವ ಎಲ್ಲಾ ಅರ್ಹ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶ ಕಲ್ಪಿಸುತ್ತಿದ್ದ ಕಾರಣ, ಈ ಯೋಜನೆಯನ್ನು ಸಮಾಜ ಕಲ್ಯಾಣ ಇಲಾಖೆಯಲ್ಲಿ ಅನುಷ್ಠಾನಗೊಳಿಸಿರುವುದಿಲ್ಲವೆಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿದ |

| | | | | |
|---|---|---|---|---|
| | | | | ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |
| 55 | 5041<br>ಚು.ಗು.ಪ್ರ: 31/2014<br>ಶ್ರೀ ಅಲ್ಲಮಪ್ರಭು ಪಾಟೀಲ್<br>ವಿಪನದಿ: 23.06.2014 | ಯಾದಗಿರಿ ಮತ್ತು ಕಲಬುರಗಿ ಜಿಲ್ಲೆಯ ಎಲ್ಲಾ ತಾಲ್ಲೂಕುಗಳಲ್ಲಿಯೂ ಹೆಚ್ಚಿನ ವಸತಿ ಶಾಲೆಗಳನ್ನು ತೆರೆಯಬೇಕೆಂಬ ಬಗ್ಗೆ | ಅಲ್ಲಿ ಹೋಬಳಿಗೆ ಒಂದು ವಸತಿ ಶಾಲೆಯಂತೆ ಅಲ್ಲಿ ಎಷ್ಟು ಬಾಕಿ ಇದೆ ಎನ್ನುವುದನ್ನು ನೋಡಿ, ಎಷ್ಟು ಅಗತ್ಯತೆ ಇದೆ ಎನ್ನುವುದನ್ನು ಕೂಡ ನೋಡಿಕೊಂಡು ಆ ಭಾಗಕ್ಕೆ ಹೆಚ್ಚಿನ ಆದ್ಯತೆಯನ್ನು ಕೊಟ್ಟು ಹೆಚ್ಚು ವಸತಿ ಶಾಲೆಗಳನ್ನು ಕೊಡುತ್ತೇವೆಂಬ ಭರವಸೆಯನ್ನು ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ತಿಳಿಸಿರುತ್ತಾರೆ. | ದಿನಾಂಕ: 13.05.2019ರಂದು ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ಯಾದಗಿರಿ ಜಿಲ್ಲೆಯಲ್ಲಿ ಒಟ್ಟು 21 ವಸತಿ ಶಾಲೆ/ಕಾಲೇಜುಗಳು ಕಾರ್ಯನಿರ್ವಹಿಸುತ್ತಿವೆ.<br>ಕಲಬುರಗಿ ಜಿಲ್ಲೆಯಲ್ಲಿ 2018-19ನೇ ಸಾಲಿನಲ್ಲಿ 41 ವಸತಿ ಶಾಲೆಗಳು ಕಾರ್ಯನಿರ್ವಹಿಸುತ್ತಿದ್ದು, 2019-20ನೇ ಸಾಲಿನಲ್ಲಿ ಕಲಬುರಗಿ ಜಿಲ್ಲೆಯ ಚಿತ್ತಾಪುರ ತಾಲ್ಲೂಕಿನಲ್ಲಿ ಈ ಕೆಳಕಂಡ 04 ವಸತಿ ಶಾಲೆಗಳನ್ನು ಪ್ರಾರಂಭಿಸಲು ಕ್ರಮ ವಹಿಸಲಾಗಿದೆ.<br>1. ಕಿತ್ತೂರು ರಾಣಿ ಚೆನ್ನಮ್ಮ (ಪ.ಜಾ) ವಾಡಿ.<br>2. ಮೊರಾರ್ಜಿ ದೇಸಾಯಿ ವಸತಿ ಶಾಲೆ (ಪ.ಜಾ), ವಾಡಿ<br>3. ಮೊರಾರ್ಜಿ ದೇಸಾಯಿ ವಸತಿ ಶಾಲೆ (ಪ.ಜಾ) ಚಿತ್ತಾಪುರ ಟೌನ್.<br>4. ಡಾ:ಬಿ.ಆರ್. ಅಂಬೇಡ್ಕರ್ ವಸತಿ ಶಾಲೆ, ವಾಡಿ.<br>ನಾಗಾವಿ ಗ್ರಾಮದ ಮೊರಾರ್ಜಿ ದೇಸಾಯಿ ವಸತಿ ಶಾಲೆಯನ್ನು ಪದವಿ ಪೂರ್ವ ಕಾಲೇಜನ್ನಾಗಿ ಮೇಲ್ದರ್ಜೆಗೇರಿಸಲಾಗಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿದ ಸಮಿತಿಯು, ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |
| 56 | 5042<br>ಚು.ಗು.ಪ್ರ: 21/2014<br>ಶ್ರೀ.ವೀರಕುಮಾರ್ ಅಪ್ಪಾಸೊ ಪಾಟೀಲ್<br>ವಿಪನದಿ: 23.06.2014 | ಬೆಳಗಾಂ ಜಿಲ್ಲೆಯಲ್ಲಿ ಹಾಲಿ ಇರುವ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಬಗ್ಗೆ | ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಿಗೆ ಅಗತ್ಯವಿರುವ ಮೂಲಭೂತ ಸೌಕರ್ಯಗಳ ಸಮೀಕ್ಷೆ ನಡೆಸಿದ್ದು, ಕೊರತೆ ಇರುವ ವಸತಿ ಶಾಲೆಗಳಿಗೆ ಮೂಲಭೂತ ಸೌಕರ್ಯಗಳ ಪೂರೈಕೆಗೆ ಕ್ರಮವಹಿಸಿದೆ ಎಂದು ಮಾನ್ಯ ಸಮಾಜ ಕಲ್ಯಾಣ ಹಾಗೂ | ದಿನಾಂಕ: 13.05.2019ರಂದು ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ಬೆಳಗಾವಿ ಜಿಲ್ಲೆಯಲ್ಲಿ 54 ವಸತಿ ಶಾಲೆ/ ಕಾಲೇಜುಗಳು ಕಾರ್ಯನಿರ್ವಹಿಸುತ್ತಿವೆ. ಈ ಪೈಕಿ 27 ಸ್ವಂತ ಕಟ್ಟಡಗಳಲ್ಲಿ ಕಾರ್ಯನಿರ್ವಹಿಸುತ್ತಿವೆ. 15 ವಸತಿ ಶಾಲೆಗಳ ಸ್ವಂತ ಕಟ್ಟಡ ನಿರ್ಮಾಣ ಕಾಮಗಾರಿಗಳು ಪ್ರಗತಿಯಲ್ಲಿವೆ. ಎರಡು ವಸತಿ ಶಾಲೆಗಳಿಗೆ ನಿವೇಶನ ಲಭ್ಯವಿದ್ದು, ಅಂದಾಜು ಪಟ್ಟಿ ತಯಾರಿಕೆಯಲ್ಲಿದೆ. 10 ವಸತಿ ಶಾಲೆಗಳಿಗೆ ನಿವೇಶನ ಮಂಜೂರಾತಿಗಾಗಿ ಜಿಲ್ಲಾಧಿಕಾರಿಯವರಿಗೆ ಪತ್ರ |

| | | | | |
|---|---|---|---|---|
| | | | ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ತಿಳಿಸಿರುತ್ತಾರೆ. | ಬರೆಯಲಾಗಿದೆ. ನಿವೇಶನ ಲಭ್ಯವಾದ ನಂತರ ಅನುದಾನದ ಲಭ್ಯತೆಗನುಗುಣವಾಗಿ ಕಟ್ಟಡ ನಿರ್ಮಾಣ ಮಾಡಲು ಹಂತ ಹಂತವಾಗಿ ಕ್ರಮವಹಿಸಲಾಗುವುದು.<br>ಬೆಳಗಾವಿ ಜಿಲ್ಲೆಯ ವಸತಿ ಶಾಲೆ/ ಕಾಲೇಜುಗಳಿಗೆ ಸುಸಜ್ಜಿತ ಕಟ್ಟಡ ಮತ್ತು ಇತರೆ ಮೂಲಭೂತ ಸೌಲಭ್ಯಗಳೊಂದಿಗೆ ಆಹಾರ, ಪಠ್ಯ ಪುಸ್ತಕ, ಲೇಖನ ಸಾಮಗ್ರಿ, ಸಮವಸ್ತ್ರ, ಶೂ, ಸಾಕ್ಸ್, ಶುಚಿ ಸಂಭ್ರಮ ಕಿಟ್ ಮುಂತಾದವುಗಳನ್ನು ಪೂರೈಸಲಾಗುತ್ತಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿದ ಸಮಿತಿಯು, ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |
| 57 | 5043<br>ನಿಯಮ 330 ರ ಮೇರೆಗೆ ಚರ್ಚೆ<br>ಶ್ರೀ ಮರಿತಿಬ್ಬೇಗೌಡ<br>ದಿನಾಂಕ:25.06.2014 | ಮೊರಾರ್ಜಿ ದೇಸಾಯಿ ಮತ್ತು ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಗಳ ಖಾಯಂ ಭೋಧಕ ಮತ್ತು ಬೋಧಕೇತರ ನೌಕರರುಗಳಿಗೆ ವೃಂದ ಮತ್ತು ನೇಮಕಾತಿ ನಿಯಮಾವಳಿಗಳ ರೀತ್ಯಾ ವೇತನ ಹಾಗೂ ಇತರೆ ಸೌಲಭ್ಯಗಳನ್ನು ಸಕಾಲದಲ್ಲಿ ಒದಗಿಸದಿರುವ ಬಗ್ಗೆ | ಸದರಿ ವಸತಿ ಶಾಲೆಗಳಲ್ಲಿ ಇರುವಂತಹ ನೌಕರರಿಗೆ ಕಾನೂನು ಬದ್ಧವಾಗಿ ಅವರಿಗೆ ಸಿಗಬೇಕಾಗಿರುವಂತಹ ಸೌಲಭ್ಯ/ ಸವಲತ್ತುಗಳನ್ನು ಖಂಡಿತವಾಗಿ ಕೊಡಲಾಗುವುದು ಹೆರಿಗೆ ಭತ್ಯೆಯನ್ನು ಸಹ ಈಗಲೇ ಕೊಡಬೇಕೆಂದು ನಾನು ಆದೇಶ ಮಾಡುತ್ತೇನೆ ಸೌಲಭ್ಯಗಳನ್ನು ಕೊಡುವುದರಲ್ಲಿ ವಿಳಂಬ ಮಾಡಿರುವಂತಹ ಅಧಿಕಾರಿಗಳು ಯಾರಿದ್ದಾರೆ. ಬೇಜವಾಬ್ದಾರಿ ತೋರಿದ್ದಾರೆ ಅವರ ಬಗ್ಗೆಯು ಸಹ ಪರಿಶೀಲನೆ ಮಾಡುತ್ತೇನೆ ಎಂದು ಮಾನ್ಯ ಸಮಾಜ ಕಲ್ಯಾಣ ಸಚಿವರು ತಿಳಿಸಿದರು. | ದಿನಾಂಕ: 13.05.2019ರಂದು ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವ್ಯಾಪ್ತಿಯಡಿ ಬರುವ ಮೊರಾರ್ಜಿ ದೇಸಾಯಿ ವಸತಿ ಶಾಲೆ, ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆ ಮತ್ತು ಇತರೆ ವಸತಿ ಶಾಲೆಯ ಶಿಕ್ಷಕರಿಗೆ ಶಿಕ್ಷಣ ಇಲಾಖೆ ನಿಗಧಿಪಡಿಸಿದ ವೇತನ ಶ್ರೇಣಿ ಮಾದರಿಯಲ್ಲಿಯೇ ನಿಗಧಿಪಡಿಸಿ ಹೆಚ್.ಆರ್.ಎಂ.ಎಸ್ ಮೂಲಕ ವೇತನವನ್ನು ಪಾವತಿಸಲಾಗುತ್ತಿದೆ.<br>ಸರ್ಕಾರವು ಕಾಲಕಾಲಕ್ಕೆ ನೀಡುವ ತುಟ್ಟಿಭತ್ಯೆ, ಮನೆ ಬಾಡಿಗೆ ಭತ್ಯೆ, ಸಣ್ಣ ಕುಟುಂಬ ಯೋಜನೆ ಭತ್ಯೆ, ವೈದ್ಯಕೀಯ ವೆಚ್ಚ ಮರುಪಾವತಿ, ಗಳಿಕೆ ರಜೆ ನಗಧೀಕರಣ ಸೌಲಭ್ಯಗಳನ್ನು ಪಾವತಿಸಲಾಗುತ್ತಿದೆ. ಸಂಘದ ವೃಂದ ಮತ್ತು ನೇಮಕಾತಿ ನಿಯಮದಡಿ ನಿವೃತ್ತಿ ಸೌಲಭ್ಯಗಳಾದ ಎನ್.ಪಿ.ಎಸ್ ಮತ್ತು ಗಳಿಕೆ ನಗಧೀಕರಣ, ಜೀವವಿಮಾ ಮುಂತಾದ ಸೌಲಭ್ಯಗಳನ್ನು ಕಲ್ಪಿಸಲಾಗಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿದ ಸಮಿತಿಯು, ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |

| | | | | |
|---|---|---|---|---|
| 58 | 5258<br>ಚು.ಗು.ಪ್ರ: 1673<br>ಶ್ರೀ ಘೋಟ್ನೇಕರ ಶ್ರೀಕಾಂತ ಲಕ್ಷ್ಮಣ<br>ವಿಪನದಿ:21.07.2014 | ಉತ್ತರ ಕನ್ನಡ ಜಿಲ್ಲೆಯ ಹಳಿಯಾಳ ತಾಲ್ಲೂಕಿನ ಬಾಣಸಗೇರಿ ಗ್ರಾಮದಲ್ಲಿರುವ ಮೊರಾರ್ಜಿ ವಸತಿ ಶಾಲೆಗೆ ಮೂಲಭೂತ ಸೌಕರ್ಯ ಕಲ್ಪಿಸುವ ಬಗ್ಗೆ. | ಶೈಕ್ಷಣಿಕ ಹಾಗೂ ವಸತಿ ನಿಲಯಗಳ ಕೊಠಡಿಗಳ ದುರಸ್ತಿ, ಕಟಕಿ ಬಾಗಿಲುಗಳ ದುರಸ್ತಿ, ಬಣ್ಣ ಬಳಿಯುವ ಬಗ್ಗೆ ಸಂಘದ ಅಭಿಯಂತರರಿಂದ, ಪರಿಶೀಲನೆ ನಡೆಸಿ, ಅಂದಾಜನ್ನು ತಯಾರಿಸಿ, ದುರಸ್ತಿ ಮಾಡಲು ತ್ವರಿತವಾಗಿ ಕ್ರಮ ಜರುಗಿಸಲಾಗುವುದು ಎಂದು ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖಾ ಸಚಿವರು ತಿಳಿಸಿದರು. | ದಿನಾಂಕ: 13.05.2019ರಂದು ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ಉತ್ತರ ಕನ್ನಡ ಜಿಲ್ಲೆಯ ಹಳಿಯಾಳ ತಾಲ್ಲೂಕಿನ ಬಾಣಸಗೇರಿ ಗ್ರಾಮದಲ್ಲಿರುವ ಮೊರಾರ್ಜಿ ದೇಸಾಯಿ ವಸತಿ ಶಾಲೆಯು ಸ್ವಂತ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿದೆ. ಈ ಕಟ್ಟಡದ ದುರಸ್ಥಿ ಕಾಮಗಾರಿಯನ್ನು ರೂ.56.98ಲಕ್ಷಗಳಲ್ಲಿ ಕೈಗೊಂಡು ದಿನಾಂಕ: 01.02.2019 ರಂದು ಪೂರ್ಣಗೊಳಿಸಲಾಗಿದೆ.<br>ಈ ವಸತಿ ಶಾಲೆಗೆ ಇತರೆ ಅಗತ್ಯ ಮೂಲಭೂತ ಸೌಲಭ್ಯಗಳನ್ನೂ ಸಹ ಒದಗಿಸಲಾಗಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿದ ಸಮಿತಿಯು, ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |
| 59 | 5259<br>ಚು.ರ.ಪ್ರ: 1672<br>ಶ್ರೀ ಘೋಟ್ನೇಕರ್ ಶ್ರೀಕಾಂತ್ ಲಕ್ಷ್ಮಣ<br>ವಿಪನದಿ:21.07.2014 | ಉತ್ತರ ಕನ್ನಡ ಜಿಲ್ಲೆಯ ದಟ್ಟ ಕಾಡುಗಳಲ್ಲಿ ವಾಸಿಸುವ ಕುಣಬಿ ಜನಾಂಗದ ಬಗ್ಗೆ. | ಸರ್ಕಾರಿ ಆದೇಶ ಸಂಖ್ಯೆ ಸಕಇ 185 ಎಸ್ಎಡಿ 2012 ದಿ:22.05.2014ರಲ್ಲಿ ಕುಣಬಿ ಜನಾಂಗದ ಕುಲಶಾಸ್ತ್ರೀಯ ಅಧ್ಯಯನವನ್ನು ಕುಲಸಚಿವರು ಮೈಸೂರು ವಿಶ್ವವಿದ್ಯಾಲಯ, ಮೈಸೂರು, ಇವರಿಂದ ಕೈಗೊಳ್ಳಲು ಆದೇಶಿಸಿದೆ. ಕುಲಶಾಸ್ತ್ರೀಯ ಅಧ್ಯಯನ ವರದಿಯು ಸರ್ಕಾರದಲ್ಲಿ ಸ್ವೀಕೃತವಾದ ನಂತರ ಪರಿಶೀಲಿಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂದು ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ತಿಳಿಸಿದರು. | ದಿನಾಂಕ: 13.05.2019ರಂದು ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ಕುಣಬಿ ಸಮುದಾಯವನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸುವಂತೆ ಸರ್ಕಾರದ ಪತ್ರ ಸಂಖ್ಯೆ:ಸಕಇ 185 ಎಸ್ಎಡಿ 2012, ದಿನಾಂಕ:10.10.2017 ರಂದು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿತ್ತು. ಕೇಂದ್ರ ಸರ್ಕಾರದ ರಿಜಿಸ್ಟ್ರಾರ್ ಜನರಲ್ ಆಫ್ ಇಂಡಿಯಾರವರ ಪರಿಶೀಲನಾ ಅಂಶಗಳಿಗೆ ಸೂಕ್ತ ಸಮರ್ಥನೆಯನ್ನು ಸಹ ದಿನಾಂಕ: 21.02.2019ರಂದು ಕೇಂದ್ರ ಸರ್ಕಾರಕ್ಕೆ ಕಳುಹಿಸಲಾಗಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿದ ಸಮಿತಿಯು, ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |

| | | | | |
|---|---|---|---|---|
| 60 | 5262<br>ನಿಯಮ 330<br>ಶ್ರೀ ಬಿ.ಜೆ. ಪುಟ್ಟಸ್ವಾಮಿ<br>ವಿಪನದಿ:24.07.2014 | ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಯೋಜನೆ ಅಡಿಯಲ್ಲಿ ಕಡುಬಡವರಿಗೆ ಮನೆಗಳು ಮಂಜೂರಾಗಿದ್ದರೂ ಸಹ ಮನೆಗಳ ನಿರ್ಮಾಣಕ್ಕೆ ಹಣ ಬಿಡುಗಡೆ ಮಾಡದಿರುವ ಕುರಿತು. | ಅಂಬೇಡ್ಕರ್ ಭವನ, ಜಗಜೀವನರಾಮ್ ಭವನ, ವಾಲ್ಮೀಕಿ ಭವನ ಇವೆಲ್ಲಾ ಕೊಡುವುದರಲ್ಲಿ ಯಾವ ನೀತಿಯನ್ನು, ಮಾನದಂಡವನ್ನು ಅನುಸರಿಸುತ್ತೇವೆಯೋ, ಅದೇ ಮಾನದಂಡವನ್ನು ಇವರಿಗೂ ಅನುಸರಿಸಿ, ವಿಳಂಬ ಆಗುವುದನ್ನು ತಪ್ಪಿಸಿ ಸಕಾಲದಲ್ಲಿ ಅವರ ಹಣವನ್ನು ಬಿಡುಗಡೆ ಮಾಡಲಿಕ್ಕೆ ಏನು ಬೇಕೋ ಆ ಎಲ್ಲಾ ಕ್ರಮವನ್ನು ಕೈಗೊಳ್ಳುತ್ತೇನೆ ಎಂದು ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ತಿಳಿಸಿದರು. | ದಿನಾಂಕ: 13.05.2019ರಂದು ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ಗ್ರಾಮೀಣ ವಸತಿ ನಿಗಮದ ಮೂಲಕ ವಿವಿಧ ಯೋಜನೆಗಳಡಿ ಮನೆಗಳನ್ನು ನಿರ್ಮಾಣ ಮಾಡಲಾಗುತ್ತಿದೆ. ಮನೆ ನಿರ್ಮಾಣದ ಪ್ರಗತಿಯ ಹಂತಗಳ ಆಧಾರದ ಮೇಲೆ ಫಲಾನುಭವಿಗಳ ಬ್ಯಾಂಕ್ ಖಾತೆಗೆ ನೇರ ವರ್ಗಾವಣೆ ಮೂಲಕ ಅನುದಾನ ಜಮೆ ಮಾಡಲಾಗುತ್ತಿದೆ.<br>2018–19ನೇ ಸಾಲಿನಲ್ಲಿ ಎಸ್.ಎಸ್.ಪಿ/ಟಿ.ಎಸ್.ಪಿ ಯೋಜನೆಯಡಿ ಡಾ:ಬಿ.ಆರ್. ಅಂಬೇಡ್ಕರ್ ವಸತಿ ಯೋಜನೆಗೆ ಹೆಚ್ಚುವರಿಯಾಗಿ ರೂ.500.00 ಕೋಟಿಗಳನ್ನು ನೀಡಲಾಗಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿದ ಸಮಿತಿಯು, ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |
| 61 | 5263<br>ಚು.ಗು.ಪ್ರ: 1263<br>ಶ್ರೀ ಟಿ. ಜಾನ್<br>ವಿಪನದಿ: 14.07.2014 | ಕೊಳವೆ ಬಾವಿ ಕೊರೆಯುವ ಮತ್ತು ಅವುಗಳಿಗೆ ವಿದ್ಯುತ್ ಸಂಪರ್ಕ ಒದಗಿಸುವ ಬಗ್ಗೆ. | ಇಲಾಖಾ ಮುಖ್ಯಸ್ಥರನ್ನು ಕರೆಯಿಸಿ ಎಲ್ಲೆಲ್ಲಿ ಕೊಳವೆ ಬಾವಿಗಳನ್ನು ಕೊರೆಯುವುದು ಬಾಕಿ ಇದೆ ಎನ್ನುವುದನ್ನು ಪರಿಶೀಲಿಸಿ, ಅವುಗಳನ್ನು ಎಷ್ಟು ಬೇಗ ಸಾಧ್ಯವಾಗುವುದೋ ಅಷ್ಟು ಬೇಗ ಮಾಡಿಕೊಡುತ್ತೇವೆ ಎಂದು ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ತಿಳಿಸಿದರು. | ದಿನಾಂಕ: 13.05.2019ರಂದು ಸಮಿತಿ ಸಭೆಯಲ್ಲಿ ಚರ್ಚಿಸಿದಾಗ,<br>**<u>ಡಾ:ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ:–</u>**<br>ಕೊಡಗು ಜಿಲ್ಲೆಯಲ್ಲಿ 2011–12, 2012–13 ಮತ್ತು 2013–14ನೇ ಸಾಲಿನಲ್ಲಿ 120 ಕೊಳವೆಬಾವಿಗಳನ್ನು ಕೊರೆಯಲು ಗುರಿ ಹಮ್ಮಿಕೊಂಡಿದ್ದು, ಈ ಪೈಕಿ 46 ಕೊಳವೆ ಬಾವಿಗಳನ್ನು ಕೊರೆಸಿ, ಪಂಪ್‌ಸೆಟ್ ಅಳವಡಿಸಿ ಎಲ್ಲಾ ಬಾವಿಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದೆ. ಕೊಡಗು ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿಯ ಹೆಚ್ಚಿನ ಫಲಾನುಭವಿಗಳಿಗೆ ಜಮೀನು ಇರುವುದಿಲ್ಲ. ಜಮೀನು ಇದ್ದರೂ ಸಹ 100 ಎಕರೆಗಿಂತ ಕಡಿಮೆ ಇರುತ್ತದೆ. ಇದರಿಂದ ಕೊಳವೆಬಾವಿ ಸೌಲಭ್ಯ ಕೋರಿ ಬರುವ ಅರ್ಜಿಗಳು ಸಹಾ ತುಂಬಾ ಕಡಿಮೆ. ಕೊಡಗು ಜಿಲ್ಲೆಯು ಗುಡ್ಡಗಾಡಿನಿಂದ |

<table>
<tr><td></td><td></td><td></td><td></td><td>ಕೂಡಿರುವ ಪ್ರದೇಶವಾಗಿದ್ದು, ಈ ಕಾರಣದಿಂದ ಪೂರ್ಣ ಗುರಿ ಸಾಧಿಸಲು ಸಾಧ್ಯವಾಗಿರುವುದಿಲ್ಲ. ಸಲ್ಲಿಸಿದ ಅರ್ಜಿಗಳಲ್ಲಿ ಸೌಲಭ್ಯ ಪಡೆಯಲು ಅರ್ಹತೆ ಹೊಂದಿದ್ದ ಎಲ್ಲಾ ಫಲಾಪೇಕ್ಷಿಗಳಿಗೂ ಕೊಳವೆಬಾವಿ ಕೊರೆಸಿ, ಪಂಪ್‌ಸೆಟ್ ಅಳವಡಿಸಿ, ವಿದ್ಯುತ್ ಸಂಪರ್ಕ ಕಲ್ಪಿಸಿ ಘಟಕ ಪೂರ್ಣಗೊಳಿಸಲಾಗಿದೆ. ಬಾಕಿ ಉಳಿದ 74 ಗುರಿಯನ್ನು ಬೇಡಿಕೆ ಇರುವ ಇತರೆ ಬೇರೆ ಜಿಲ್ಲೆಗಳಲ್ಲಿ ಕೊಳವೆಬಾವಿ ಕೊರೆಸಿ ಪೂರ್ಣಗೊಳಿಸಲಾಗಿದೆ.<br><br><u>ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ:–</u><br>2011–12 ರಿಂದ 2013–14ನೇ ಸಾಲಿನವರೆಗೆ ಮಡಿಕೇರಿ ಜಿಲ್ಲೆಯಲ್ಲಿ ಗಂಗಾ ಕಲ್ಯಾಣ ಯೋಜನೆಯಡಿ ಕೊಳವೆಬಾವಿ ಸೌಲಭ್ಯಕ್ಕಾಗಿ ಆಯ್ಕೆಯಾದ ಒಟ್ಟು 97 ಫಲಾನುಭವಿಗಳ ಜಮೀನಿನಲ್ಲಿ ಕೊಳವೆ ಬಾವಿಗಳನ್ನು ಕೊರೆದು, ಪಂಪ್ ಮೋಟರ್ ಅಳವಡಿಸಿ ವಿದ್ಯುತ್ ಸಂಪರ್ಕ ಕಲ್ಪಿಸುವ ಮೂಲಕ ಸೌಲಭ್ಯ ಕಲ್ಪಿಸಲಾಗಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿದ ಸಮಿತಿಯು, ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು.</td></tr>
<tr><td>62</td><td>5264<br>ಚು.ರ.ಪ್ರ: 1293<br>ಎಸ್. ನಾಗರಾಜ್<br>ವಿಪನದಿ: 14.07.2014</td><td>ನಾಗರಹೊಳೆ ಅಭಯಾರಣ್ಯ ಪ್ರದೇಶದಿಂದ ಸ್ಥಳಾಂತರಿಸಿ ಹುಣಸೂರು ತಾಲ್ಲೂಕು, ನಾಗಪುರ ಗಿರಿಜನ ಪುನರ್ವಸತಿ ಕೇಂದ್ರದಲ್ಲಿರುವವರಿಗೆ ಮನೆಗಳನ್ನು ನಿರ್ಮಿಸಿಕೊಡುವ ಹಾಗೂ ಭೂ ಒಡೆತನ ಹಕ್ಕುಪತ್ರ ನೀಡುವ ಬಗ್ಗೆ.</td><td>ನಾಗಾಪುರ ಘಟಕ–1 ರಿಂದ 6ರ ವರೆಗೆ ಪುನರ್ವಸತಿಗೊಂಡ 280 ಗಿರಿಜನ ಕುಟುಂಬಗಳ ಪೈಕಿ 2013–14ನೇ ಸಾಲಿನಲ್ಲಿ ಘಟಕ–1ರ 45 ಗಿರಿಜನ ಕುಟುಂಬಗಳಿಗೆ ಕಂದಾಯ ಇಲಾಖೆಯಿಂದ ಆರ್.ಟಿ.ಸಿ. ನೀಡಲಾಗಿರುತ್ತದೆ. ಘಟಕ–2 ಮತ್ತು 3 ರ ವ್ಯವಸಾಯ ಜಮೀನುಗಳ ಮೋಜಣಿ ಕಾರ್ಯ</td><td>ದಿನಾಂಕ: 13.05.2019ರಂದು ಸಮಿತಿ ಸಭೆಯಲ್ಲಿ ಚರ್ಚಿಸಿದಾಗ,<br><u>ಹುಣಸೂರು ತಾಲ್ಲೂಕಿನಲ್ಲಿ ಪುನರ್‌ವಸತಿಗೊಂಡ ಕುಟುಂಬಗಳು:–</u>
<table>
<tr><td>ಕ್ರ. ಸ</td><td>ಪುನರ್ ವಸತಿಯ ಹಾಡಿಯ ಹೆಸರು</td><td>ಪ್ರಾರಂಭ ಗೊಂಡ ವರ್ಷ</td><td>ಒಟ್ಟು ಕುಟುಂಬ ಗಳ ಸಂಖ್ಯೆ</td></tr>
<tr><td>1</td><td>ನಾಗಾಪುರ 1ನೇ ಬ್ಲಾಕ್</td><td>1999–2000</td><td>50</td></tr>
</table></td></tr>
</table>

<table>
<tr>
<td></td>
<td></td>
<td></td>
<td>ಪೂರ್ಣ ಗೊಂಡಿರುತ್ತದೆ. ಘಟಕ 4 ರಿಂದ 6ರ ವರೆಗಿನ ವ್ಯವಸಾಯ ಜಮೀನಿನ ಮೋಜಣಿ ಕಾರ್ಯ ಪ್ರಗತಿ ಹಂತದಲ್ಲಿರುತ್ತದೆ. ಮೋಜಣಿ ಕಾರ್ಯಮುಗಿದ ನಂತರ ಉಳಿದ 235 ಗಿರಿಜನ ಕುಟುಂಬಗಳಿಗೆ ಆರ್.ಟಿ.ಸಿ. ನೀಡಲು ಕ್ರಮವಹಿಸಲಾಗುವುದೆಂದು ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ತಿಳಿಸಿದರು.</td>
<td>
<table>
<tr><td>2</td><td>ನಾಗಾಪುರ<br>2ನೇ ಬ್ಲಾಕ್</td><td>2001–2002</td><td>45</td></tr>
<tr><td>3</td><td>ನಾಗಾಪುರ<br>3ನೇ ಬ್ಲಾಕ್</td><td>2000–2001</td><td>45</td></tr>
<tr><td>4</td><td>ನಾಗಾಪುರ<br>4ನೇ ಬ್ಲಾಕ್</td><td>2000–2001</td><td>55</td></tr>
<tr><td>5</td><td>ನಾಗಾಪುರ<br>5ನೇ ಬ್ಲಾಕ್</td><td>2000–2001</td><td>55</td></tr>
<tr><td>6</td><td>ನಾಗಾಪುರ<br>6ನೇ ಬ್ಲಾಕ್</td><td>2006–2007</td><td>30</td></tr>
<tr><td></td><td colspan="2">ಒಟ್ಟು</td><td>280</td></tr>
</table>
ಮೇಲ್ಕಂಡ 6 ಬ್ಲಾಕ್‌ಗಳಲ್ಲಿ ಅರಣ್ಯ ಇಲಾಖೆಯವರು ಹಂತ ಹಂತವಾಗಿ ಪುನರ್ ವಸತಿ ಕಲ್ಪಿಸಿದ್ದು, 1–5ನೇ ಬ್ಲಾಕ್‌ಗಳಲ್ಲಿ 250 ಕುಟುಂಬಗಳಿಗೆ ಪುನರ್ವಸತಿ ಸಲ್ಲಿಸಿ, 40 * 60 ಅಡಿ ವಿಸ್ತೀರ್ಣದ ನಿವೇಶನದಲ್ಲಿ ಮನೆಗಳನ್ನು ನಿರ್ಮಾಣ ಮಾಡಲಾಗಿರುತ್ತದೆ. ಪ್ರತಿ ಕುಟುಂಬಕ್ಕೆ ತಲಾ 5 ಎಕರೆ ಜಮೀನನ್ನು ಮಂಜೂರು ಮಾಡಿ, ಹಕ್ಕು ಪತ್ರವನ್ನು ವಿತರಿಸಲಾಗಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿದ ಸಮಿತಿಯು, ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು.
</td>
</tr>
<tr>
<td>63</td>
<td>5265<br>ಚು.ರ.ಪ್ರ: 1658<br>ಶ್ರೀ ಎಸ್. ನಾಗರಾಜು<br>(ಸಂದೇಶ್ ನಾಗರಾಜ್)<br>ವಿಪನದಿ:21.07.2014</td>
<td>ಅರಣ್ಯ ಹಕ್ಕು ಕಾಯಿದೆ ಅನ್ವಯ ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಯ ಗಿರಿಜನರ ಕಾಲೋನಿಗಳಲ್ಲಿ ಮನೆ ನಿರ್ಮಿಸಿಕೊಡಲು ಕ್ರಮ ಕೈಗೊಳ್ಳುವ ಬಗ್ಗೆ.</td>
<td>ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಮಾತ್ರ ಮೂಲ ನಿವಾಸಿ ಜೇನುಕುರುಬ ಜನಾಂಗದ ಕುಟುಂಬಗಳಿಗೆ ಕೆಳಕಂಡ ಕಾಲೋನಿಗಳಲ್ಲಿ 119 ಮನೆಗಳನ್ನು ನಿರ್ಮಿಸಲಾಗುತ್ತಿದೆ.</td>
<td>ದಿನಾಂಕ: 13.05.2019ರಂದು ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ಈಗಾಗಲೇ 119 ಮನೆಗಳನ್ನು ಪೂರ್ಣಗೊಳಿಸಿ ವಸತಿ ರಹಿತ ಜೇನುಕುರುಬ ಕುಟುಂಬಗಳಿಗೆ ಹಸ್ತಾಂತರಿಸಲಾಗಿದೆ. ಕಾಲೋನಿಗಳ ವಿವರ ಈ ಕೆಳಕಂಡಂತಿದೆ:–<br>ಹಾಡಿನ ಕಣಿವೆ–20, ಗುಡ್ಡೇಕೆರೆ–7, ಕಾರೇಮಾಳ–10, ಅಂಚಿನಹುಂಡಿ–7, ಹಗ್ಗದಹಳ್ಳಿ–10, ಲಕ್ಕಿಪುರ–7,</td>
</tr>
</table>

| | | | | |
|---|---|---|---|---|
| | | | ಹಾಡಿನ ಕಣಿವೆ–20, ಗುಡ್ಡೇಕೆರೆ–7, ಕಾರೇಮಾಳ–10, ಆಂಜಿನಹುಂಡಿ–7, ಹಗ್ಗದಹಳ್ಳಿ–10, ಲಕ್ಕಿಪುರ–7, ಮಗುವಿನಹಳ್ಳಿ–5, ಮುಕ್ತಿಕಾಲೋನಿ–12, ಮದ್ದೂಕಾಲೋನಿ–12 ಉಪಕಾರ ಕಾಲೋನಿ–29, ಇವುಗಳಲ್ಲಿ ಈಗಾಗಾಲೇ 72 ಮನೆಗಳು ಪೂರ್ಣಗೊಂಡಿದ್ದು, ಉಳಿದ 47 ಮನೆಗಳು ಮುಕ್ತಾಯ ಹಂತದಲ್ಲಿದೆ. ಆದಷ್ಟು ಬೇಗ ಪೂರ್ಣಗೊಳಿಸಲಾಗುವುದು ಎಂದು ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ತಿಳಿಸಿದರು. | ಮಗುವಿನಹಳ್ಳಿ–5, ಮುಕ್ತಿ ಕಾಲೋನಿ–12, ಮದ್ದೂಕಾಲೋನಿ–12, ಉಪಕಾರ ಕಾಲೋನಿ–29 ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿದ ಸಮಿತಿಯು, ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |

## ಪ್ರವಾಸೋದ್ಯಮ ಇಲಾಖೆ

| ಕ್ರಮ ಸಂಖ್ಯೆ | ಆಶ್ವಾಸನೆ ಸಂಖ್ಯೆ ಆಧಾರ ಮತ್ತು ದಿನಾಂಕ | ವಿಷಯ | ಆಶ್ವಾಸನೆ | ತಗೆದುಕೊಂಡ ಕ್ರಮ |
|---|---|---|---|---|
| 1 | 2888<br>ಚು.ರ.ಪ್ರ: 163<br>ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ<br>ವಿಪನದಿ: 24.07.2008 | ದಕ್ಷಿಣ ಕನ್ನಡ ಜಿಲ್ಲೆ ಬಡಗನೂರು ಗ್ರಾಮ ಪಂಚಾಯತಿ ವ್ಯಾಪ್ತಿಯ ಪಡುಮಲೆ ಪ್ರದೇಶವನ್ನು ಪ್ರವಾಸಿ ತಾಣವನ್ನಾಗಿ ಅಭಿವೃದ್ದಿ ಪಡಿಸುವ ಬಗ್ಗೆ | ಪಡುಮಲೆ ಬೆಟ್ಟ ಪ್ರದೇಶವನ್ನು ಪ್ರವಾಸಿ ಕೇಂದ್ರವನ್ನಾಗಿ ಅಭಿವೃದ್ದಿ ಪಡಿಸುವ ಬಗ್ಗೆ ದಕ್ಷಿಣ ಕನ್ನಡ ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ದಿ ಸಮಿತಿಯು ಸಮೀಕ್ಷೆ ನಡೆಸಿ ಯೋಜನಾ ವರದಿಯನ್ನು ತಯಾರಿಸುತ್ತಿದೆ. ಈ ವರದಿಯನ್ನು ಪರಿಶೀಲಿಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂದು ಪ್ರವಾಸೋದ್ಯಮ ಮತ್ತು ಮೂಲಭೂತ ಸೌಕರ್ಯಗಳ ಅಭಿವೃದ್ದಿ ಸಚಿವರು ತಿಳಿಸಿದರು. | ದಿನಾಂಕ: 27.6.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು, ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ತಾಲ್ಲೂಕಿನ ಬಡಗನೂರು ಗ್ರಾಮ ಪಂಚಾಯಿತಿಯ ಪಡುಮಲೆ ಬೆಟ್ಟವನ್ನು ರೂ.25.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಪ್ರವಾಸಿ ಕೇಂದ್ರವನ್ನಾಗಿ ಅಭಿವೃದ್ಧಿಪಡಿಸಲು 2012–13ನೇ ಸಾಲಿನಲ್ಲಿ ಪೂರ್ಣ ಅನುದಾನವನ್ನು ಜಿಲ್ಲಾಧಿಕಾರಿಗಳು, ದಕ್ಷಿಣ ಕನ್ನಡ ಜಿಲ್ಲೆ ರವರಿಗೆ ಬಿಡುಗಡೆ ಮಾಡಲಾಗಿದೆ. ಕೂಡು ರಸ್ತೆ ಹಾಗೂ ಕುಡಿಯುವ ನೀರಿನ ಸೌಲಭ್ಯ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಸಮಿತಿಯು ಒಪ್ಪಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಲಾಯಿತು. |
| 2 | 3045<br>ವಿಶೇಷ ಪ್ರಸ್ತಾವನೆ<br>ಶ್ರೀ ಖಾಜಿ ಅರಶದ್ ಆಲಿ<br>ವಿಪನದಿ: 24.06.2008<br>(ಮೂಲಸೌಲಭ್ಯ ಅಭಿವೃದ್ದಿ ಇಲಾಖೆಯಿಂದ ವರ್ಗಾವಣೆ)<br>(ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ವರ್ಗಾವಣೆ) | ಬೀದರ್ ನಗರದಲ್ಲಿ ನಡೆವ ಗುರುಗದ್ದಿ ದಿನಾಚರಣೆಗೆ ಆಗಮಿಸುವ ಯಾತ್ರಾರ್ಥಿಗಳಿಗೆ ನಾಗರೀಕ ಮೂಲ ಸೌಲಭ್ಯಗಳನ್ನು ಒದಗಿಸುವ ಬಗ್ಗೆ. | ಅಕ್ಟೋಬರ್–ನವೆಂಬರ್ ತಿಂಗಳಿನಲ್ಲಿ ನಡೆಯುವ ಈ ಸಮಾರಂಭಕ್ಕೆ ಏನೇನು ಪೂರ್ವ ತಯಾರಿಗಳನ್ನು ಕೈಗೊಳ್ಳಬೇಕೆನ್ನುವ ಬಗ್ಗೆ ಜಿಲ್ಲಾಧಿಕಾರಿಗಳು, ನಮ್ಮ ಸಂಸದರು ಮತ್ತು ಶಾಸಕ ಮಿತ್ರರ ಸಭೆಯೊಂದನ್ನು ನಡೆಸಿ, ಅದರ ವರದಿಯಂತೆ ಮುಂದಿನ ಕ್ರಮವನ್ನು ಸರ್ಕಾರ ಕೈಗೊಳ್ಳುತ್ತದೆಯೆಂದು ಮಾನ್ಯ ಸಭಾ ನಾಯಕರು ತಿಳಿಸಿದರು. | ದಿನಾಂಕ: 27.6.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು, ಗುರ್–ತಾ–ಗದ್ದಿ ಉತ್ಸವದ ಸಂದರ್ಭದಲ್ಲಿ ಬೀದರ್ ನಗರಕ್ಕೆ ಭೇಟಿ ನೀಡುವ ಸಿಖ್ ಯಾತ್ರಾರ್ಥಿಗಳ ಅನುಕೂಲಕ್ಕಾಗಿ ಬೀದರ್ ನಗರದಲ್ಲಿ ರಸ್ತೆ ಅಗಲೀಕರಣ, ರಸ್ತೆ ಸುಧಾರಣೆ ಡ್ರೇನ್ ನಿರ್ಮಾಣ, ಉದ್ಯಾನವನಗಳ ನಿರ್ಮಾಣ, ವಿದ್ಯುತ್ ಕಾಮಗಾರಿಗಳು, ಕಾಂಪೌಂಡ್ ನಿರ್ಮಾಣ, ತಾತ್ಕಾಲಿಕ ಏರ್ ಟರ್ಮಿನಲ್ ನಿರ್ಮಾಣ, ಕುಡಿಯುವ ನೀರು ಸರಬರಾಜು ಯೋಜನೆ, ಇಂಡೋರ್ ಸ್ಟೇಡಿಯಂ ನಿರ್ಮಾಣ ಹೊರ ವರ್ತುಲ ರಸ್ತೆ ನಿರ್ಮಾಣ ಮುಂತಾದ ಸೌಲಭ್ಯಗಳನ್ನು ಅಭಿವೃದ್ಧಿ ಪಡಿಸಲು ಜಿಲ್ಲಾಧಿಕಾರಿಗಳು, |

| | | | | |
|---|---|---|---|---|
| | | | | ಬೀದರ್ ಇವರಿಗೆ 2008–09 ರಿಂದ 2016–17ನೇ ಸಾಲಿನವರೆಗೆ ಹತ್ತು ಕಂತುಗಳಲ್ಲಿ ರೂ. 114.89 ಕೋಟಿ ಅನುದಾನವನ್ನು ಬಿಡುಗಡೆ ಮಾಡಲಾಗಿದೆ. ಈ ಪೈಕಿ ರೂ. 110.00 ಕೋಟಿಗಳು ವೆಚ್ಚವಾಗಿರುತ್ತದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಸಮಿತಿಯು ಒಪ್ಪಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಲಾಯಿತು. |
| 3 | 3050<br>ಚು.ರ.ಪ್ರ:23<br>ಶ್ರೀ ಶ್ರೀನಾಥ್<br>ವಿಪನದಿ: 19.02.2009 | ಉತ್ತರ ಕನ್ನಡ ಜಿಲ್ಲೆಯಲ್ಲಿ ಪ್ರವಾಸೋದ್ಯಮವನ್ನು ಅಭಿವೃದ್ಧಿಗೊಳಿಸುವ ಬಗ್ಗೆ | ಬಹುತೇಕ ಕಡಲ ತೀರದ ಉದ್ದಕ್ಕೂ ಪ್ರವಾಸೋದ್ಯಮವನ್ನು ಅಭಿವೃದ್ಧಿ ಪಡಿಸಲು ಕಾರ್ಯಕ್ರಮಗಳನ್ನು ಕೈಗೊಳ್ಳ ಲಾಗುತ್ತಿದೆ. ಆದಷ್ಟು ಬೇಗ ನಾವು ಈ ದಿಸೆಯಲ್ಲಿ ಗಮನಹರಿಸಿ ಸೂಕ್ತ ಕ್ರಮಗಳನ್ನು ಕೈಗೊಳ್ಳುತ್ತೇವೆ ಎಂದು ಮಾನ್ಯ ಸಭಾನಾಯಕರು ತಿಳಿಸಿದರು. | ದಿನಾಂಕ: 27.6.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು, ಉತ್ತರ ಕನ್ನಡ ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವ ಈ ಕೆಳಕಂಡ ತೀರಗಳಲ್ಲಿ ಪ್ರವಾಸಿ ಸೌಲಭ್ಯಗಳನ್ನು ಒದಗಿಸಲಾಗಿರುತ್ತದೆ (2014–15).<br><br>1. ಅಪ್ಸರಕೊಂಡ ಬೀಚ್ ಅಭಿವೃದ್ಧಿ ರೂ.284.11 ಲಕ್ಷಗಳು<br>2. ಕಾಸರಕೋಡ್ ಬೀಚ್ ಅಭಿವೃದ್ಧಿ ರೂ.200.53 ಲಕ್ಷಗಳು.<br>3. ಪಾವಿನ ಕುರ್ವೆ ಬೀಚ್ ಅಭಿವೃದ್ಧಿ ರೂ. 520.87 ಲಕ್ಷಗಳು<br>4. ಓಂ ಬೀಚ್ ಅಭಿವೃದ್ಧಿ 312.18 ಲಕ್ಷಗಳು<br>5. ಕೂಡ್ಲೆ ಬೀಚ್ ಅಭಿವೃದ್ಧಿ ರೂ. 314.15 ಲಕ್ಷಗಳು.<br>6. ಗೋಕರ್ಣ ಬೀಚ್ ಅಭಿವೃದ್ಧಿ 191.74 ಲಕ್ಷಗಳು<br>7. ಕುಮಟಾ ಬೀಚ್ ಅಭಿವೃದ್ಧಿ ರೂ. 505.16 ಲಕ್ಷಗಳು.<br>8. ಬೇಲಿಕೇರಿ ಬೀಚ್ ಅಭಿವೃದ್ಧಿ ರೂ. 482.81 ಲಕ್ಷಗಳು (ರೂ.192.03)<br>9. ಠ್ಯಾಗೋರ್ ಬೀಚ್ ಅಭಿವೃದ್ಧಿ ರೂ. 97.64 ಲಕ್ಷಗಳು<br>10. ಮಾಜಾಳಿ ಬೀಚ್ ಅಭಿವೃದ್ಧಿ ರೂ. 148.59 ಲಕ್ಷಗಳು.<br>11. ತೀಲಮಾತಿ ಬೀಚ್ ಅಭಿವೃದ್ಧಿ ರೂ. 67.50 ಲಕ್ಷಗಳು.<br>ಮೇಲ್ಕಂಡ ಬೀಚ್‌ಗಳ ಅಭಿವೃದ್ಧಿಗಾಗಿ ರೂ.2639.22 |

| | | | | |
|---|---|---|---|---|
| | | | | ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ. ಈ ಪೈಕಿ ಈವರೆಗೆ ರೂ.1959.46 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ. ಈ ಯೋಜನೆ ಅಡಿ ಬೀಚ್‌ಗಳಲ್ಲಿ Pedestrian seating, landscape walkway, High Mask Lighting, Solid waste Management, Parking facilities, signages approach road, Lifegurards watch tower, providing resque boats & Toilet facilities ಮುಂತಾದ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ. ಪ್ರಸ್ತುತ ಬೀಚ್‌ಗಳನ್ನು ಸಂಪರ್ಕಿಸುವ ರಸ್ತೆ ಅಭಿವೃದ್ಧಿ ಕಾಮಗಾರಿಗಳು ಪೂರ್ಣಗೊಂಡಿರುತ್ತವೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಸಮಿತಿಯು ಒಪ್ಪಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಲಾಯಿತು. |
| 4 | 3337<br>ಚು.ಗು,ಪ್ರ: 834<br>ಶ್ರೀ ಮರಿತಿಬ್ಬೇಗೌಡ<br>ವಿಪನದಿ: 23.07.2009 | ಚಾಮುಂಡಿ ಬೆಟ್ಟಕ್ಕೆ ಕೇಬಲ್ ಕಾರ್ ಅಳವಡಿಸುವ ಬಗ್ಗೆ ಹಾಗೂ ಗುರುತಿಸ ಲಾಗಿರುವ ಕೆಲವು ಪ್ರವಾಸಿ ತಾಣಗಳಲ್ಲಿ ಮೂಲಭೂತ ಸೌಕರ್ಯಗಳನ್ನು ನಿರ್ಮಿಸುವ ಬಗ್ಗೆ | ಪಬ್ಲಿಕ್ ಪ್ರೈವೇಟ್ ಪಾರ್ಟ್‌ನರ್‌ಶಿಪ್‌ನಲ್ಲಿ ಸುಮಾರು 495 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಇಂತಹ ವ್ಯವಸ್ಥೆಗಳು ಅಂದರೆ ಕೇಬಲ್ ಕಾರ್ ಇರಬಹುದು, ಸ್ಟಾರ್ ಹೋಟೆಲ್ ಇರಬಹುದು, ಇಂತಹ ಪ್ರಸ್ತಾವನೆಗಳು ನನ್ನ ಮುಂದೆ ಇದೆ. ಆದಷ್ಟು ಬೇಗ ನಾನು ಕೂಡ ಮಾನ್ಯ ಸದಸ್ಯರ ಜೊತೆಯಲ್ಲಿ ಇವತ್ತು ಪ್ರಸ್ತಾಪ ಮಾಡಿದಂತಹ ಎಲ್ಲಾ ಭಾಗಗಳಿಗೆ ಅಧಿವೇಶನ ಮುಗಿದ ಮೇಲೆ ಒಂದು ದಿನಾಂಕವನ್ನು ನಿಗಧಿಪಡಿಸಿಕೊಂಡು ಖುದ್ದಾಗಿ ಮಾನ್ಯ ಸದಸ್ಯರುಗಳ ಜೊತೆಯಲ್ಲಿ ಓಡಾಡಿ, ಚರ್ಚೆ ಮಾಡಿ | ದಿನಾಂಕ: 27.6.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು, ಮೈಸೂರು ನಗರದಲ್ಲಿರುವ ಚಾಮುಂಡಿ ಬೆಟ್ಟಕ್ಕೆ ಕೇಬಲ್ ಕಾರ್ ಅಳವಡಿಸುವ ಯೋಜನೆಯನ್ನು 2016–17ನೇ ಸಾಲಿನ ಮಾನ್ಯ ಮುಖ್ಯಮಂತ್ರಿಗಳ ಬಜೆಟ್ ಭಾಷಣದಲ್ಲಿ ಘೋಷಿಸಲಾಗಿದೆ.<br><br>ಈ ಯೋಜನೆಯ ಸಂಬಂಧ ಮೇ. ದಾರಾಶಾ, ಮುಂಬೈ ಸಂಸ್ಥೆಯ ಮೂಲಕ ರೂ. 83.88 ಕೋಟಿ ವೆಚ್ಚ ವಿವರವಾದ ಯೋಜನಾ ವರದಿಯನ್ನು ಸಿದ್ಧಪಡಿಸಿಕೊಳ್ಳಲಾಗಿದೆ.<br><br>ಸದರಿ ಜಮೀನು ಅರಣ್ಯ ಇಲಾಖೆಯ ವ್ಯಾಪ್ತಿಗೆ ಬರುವುದರಿಂದ ಹಾಗೂ ಯೋಜನೆಯ ಅನುಷ್ಠಾನಕ್ಕೆ |

| | | | | |
|---|---|---|---|---|
| | | | ಏನು ಆಗಬೇಕಾಗಿದೆ ಎನ್ನುವುದರ ಬಗ್ಗೆ ಖಂಡಿತವಾಗಿ ಮಾಡುತ್ತೇನೆ ಎಂದು ಮಾನ್ಯ ಪ್ರವಾಸೋದ್ಯಮ ಸಚಿವರು ತಿಳಿಸಿದರು. | ಪರಿಸರವಾದಿಗಳ ಆಕ್ಷೇಪಣೆ ಇರುವುದರಿಂದ ಯೋಜನೆಯನ್ನು ಕೈಬಿಡಲಾಗಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಸಮಿತಿಯು ಒಪ್ಪಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಲಾಯಿತು. |
| 5 | 3339<br>ಚು.ಗು.ಪ್ರ.201<br>ಶ್ರೀ ವೈ.ಎ. ನಾರಾಯಣಸ್ವಾಮಿ<br>ವಿಪನದಿ: 24.12.2009 | ದಾವಣಗೆರೆ ಜಿಲ್ಲೆಯ ಹರಿಹರ ದಲ್ಲಿರುವ ಹರಿಹರೇಶ್ವರ ದೇವಸ್ಥಾನವನ್ನು ಪ್ರವಾಸಿ ಕೇಂದ್ರವನ್ನಾಗಿ ರೂಪಿಸುವ ಬಗ್ಗೆ | ಜಿಲ್ಲಾಧಿಕಾರಿಗಳಿಂದ ಸ್ಥಳ ಪರಿಶೀಲನಾ ವರದಿ ಹಾಗೂ ನಿವೇಶನ ಲಭ್ಯತೆ ಬಗ್ಗೆ ವರದಿ ಬಂದ ನಂತರ ಮುಂದಿನ ಕ್ರಮ ವಹಿಸಲಾಗುವುದು ಎಂದು ಮಾನ್ಯ ಪ್ರವಾಸೋದ್ಯಮ ಮತ್ತು ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಸಚಿವರು ತಿಳಿಸಿದರು. | ದಿನಾಂಕ: 27.6.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು, ಹರಿಹರದಲ್ಲಿರುವ ಹರಿಹರೇಶ್ವರ ದೇವಾಲಯಕ್ಕೆ ಭೇಟಿ ನೀಡುವ ಪ್ರವಾಸಿಗರ/ಭಕ್ತಾದಿಗಳ ಅನುಕೂಲಕ್ಕಾಗಿ ಸದರಿ ದೇವಾಲಯದ ಸಮೀಪದಲ್ಲೇ ಇರುವಿ ಶ್ರೀ ರಾಘವೇಂದ್ರ ಮಠದ ಬಳಿ ರೂ. 50.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಯಾತ್ರಿ ನಿವಾಸ ನಿರ್ಮಿಸಿ ಪೂರ್ಣಗೊಳಿಸಲಾಗಿದೆ, ಪ್ರವಾಸಿಗರಿಗೆ ತೆರೆಯಲಾಗಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಸಮಿತಿಯು ಒಪ್ಪಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |
| 6 | 3506<br>ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವ<br>ಡಾ: ಶ್ರೀನಾಥ್<br>ವಿಪನದಿ: 04.03.2010 | ಕೆಮ್ಮಣ್ಣುಗುಂಡಿಯ ರಸ್ತೆಗಳ ದುರಸ್ಥಿ ಕುರಿತು | ಈಗಾಗಲೇ ಆ ಕೆಲಸ ಪ್ರಾರಂಭವಾಗಿರುವುದರಿಂದ ಮಳೆಗಾಲದೊಳಗೆ ಅದನ್ನು ಪೂರ್ಣಗೊಳಿಸುತ್ತೇವೆ ಎಂದು ಪ್ರವಾಸೋದ್ಯಮ ಮತ್ತು ಮೂಲ ಸೌಲಭ್ಯ ಅಭಿವೃದ್ಧಿ ಸಚಿವರು ತಿಳಿಸಿದರು. | ದಿನಾಂಕ: 27.6.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು, ಕೆಮ್ಮಣ್ಣುಗುಂಡಿ ಗಿರಿಧಾಮದ 19 ಕಿ.ಮೀ. ಉದ್ದದ ರಸ್ತೆಯನ್ನು ರೂ. 12.37 ಕೋಟಿಗಳ ವೆಚ್ಚದಲ್ಲಿ ಅಭಿವೃದ್ಧಿಪಡಿಸಲು ಲೋಕೋಪಯೋಗಿ ಇಲಾಖೆ, ಚಿಕ್ಕಮಗಳೂರು ರವರಿಗೆ ವಹಿಸಲಾಗಿರುತ್ತದೆ. ಈ ಪೈಕಿ ಮೂರು ಕಾಮಗಾರಿಗಳು ಪೂರ್ಣಗೊಂಡಿದ್ದು, ಉಳಿದ ಒಂದು ಭಾಗದ ರಸ್ತೆಯು ಭದ್ರಾ ಮೀಸಲು ಅರಣ್ಯ ವ್ಯಾಪ್ತಿಗೆ ಬರುತ್ತಿರುವುದರಿಂದ ಅರಣ್ಯ ಇಲಾಖೆಯ ಆಕ್ಷೇಪಣೆಯಿಂದ ಈ ಕಾಮಗಾರಿಯನ್ನು ಕೈಗೊಂಡಿರುವುದಿಲ್ಲ (2011–12) ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಸಮಿತಿಯು ಒಪ್ಪಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಲಾಯಿತು. |

| | | | | |
|---|---|---|---|---|
| 7 | 3508<br>ಶ್ರೀಮತಿ ಮೋಟಮ್ಮ<br>2010–2011ನೇ ಸಾಲಿನ ಆಯವ್ಯಯ ಅಂದಾಜುಗಳ ಮೇಲಿನ ಸಾಮಾನ್ಯ ಚರ್ಚೆ<br>ವಿಪನದಿ: 11.03.2010 | ಬಳ್ಳಾರಿಯಲ್ಲಿ ಹಂಪಿ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಲು ನಿಗದಿಪಡಿಸಲಾಗಿದ್ದ ಭೂಮಿಯಲ್ಲಿ ಪ್ರವಾಸೋದ್ಯಮವನ್ನು ಅಭಿವೃದ್ಧಿಪಡಿಸುವುದಕೋಸ್ಕ ರ ಅದನ್ನು ಥೀಮ್ ಪಾರ್ಕ್‌ಗೆ ನೀಡುತ್ತಿರುವ ಬಗ್ಗೆ | ಅಲ್ಲಿ ಪ್ರವಾಸೋದ್ಯಮ ಇಲಾಖೆಗೆ ಸೇರಿದ 200 ಎಕರೆ ಜಮೀನಿದೆ. ಆ ಜಮೀನಿನಲ್ಲಿ ಥೀಮ್ ಪಾರ್ಕ್ ಮಾಡಲು ಉದ್ದೇಶಿಸಲಾಗಿದೆ. ಈ 80 ಎಕರೆ ವಿಶ್ವವಿದ್ಯಾನಿಲಯದ ಜಮೀನೇನಿದೆ ಅದರಲ್ಲಿ ಶ್ರೀಕೃಷ್ಣದೇವರಾಯರ ಹೆಸರಿನಲ್ಲಿ ಒಂದು ಅಧ್ಯಯನ ಪೀಠ ಅಂದರೆ ರಿಸರ್ಚ್ ಸೆಂಟರ್ ಪ್ರಾರಂಭಿಸಲು ಉದ್ದೇಶಿಸಲಾಗಿದ್ದು ಅದು ವಿಶ್ವವಿದ್ಯಾನಿಲಯಕ್ಕೆ ಅವಶ್ಯಕತೆ ಇರುವಂತಹ ಒಂದು ಕೆಲಸ, ಆ 80 ಎಕರೆ ಜಮೀನಿನಲ್ಲಿಯೇ ಇಂಟರ್‌ನ್ಯಾಷನಲ್ ಸ್ಟ್ಯಾಂಡರ್ಡ್‌ನಲ್ಲಿ ಲಾಲ್‌ಬಾಗ್ ಮಾದರಿಯಲ್ಲಿ ಅತ್ಯಂತ ಅದ್ಭುತವಾದಂತಹ ಹೂವಿನ ತೋಟವೊಂದನ್ನು ಮಾಡುವಂತಹ ಉದ್ದೇಶವನ್ನು ಹೊಂದಿದ್ದೇವೆ. ಅದರ ಜೊತೆಗೆ ಸಂಶೋಧನಾ ಕೇಂದ್ರವೊಂದನ್ನು ಸಹ ಪ್ರಾರಂಭಸಿ ಅಲ್ಲಿ ಶ್ರೀಕೃಷ್ಣದೇವರಾಯರ ಒಂದು ಪುತ್ಥಳಿಯನ್ನು ಸ್ಥಾಪಿಸಲಾಗುತ್ತದೆ ಎಂದು ಮಾನ್ಯ ಪ್ರವಾಸೋದ್ಯಮ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು ತಿಳಿಸಿದರು. | ದಿನಾಂಕ: 27.6.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು, ಹಂಪಿಯಲ್ಲಿ ಹಮ್ಮಿಕೊಂಡಿದ್ದ ಥೀಮ್ ಪಾರ್ಕ್ ನಿರ್ಮಾಣ ಯೋಜನೆಯನ್ನು ವಿವಿಧ ಕಾರಣಗಳಿಂದಾಗಿ ರದ್ದುಗೊಳಿಸಲಾಗಿದೆ. ಹಂಪಿಯಲ್ಲಿ ಹಂಪಿ ವಿಶ್ವವಿದ್ಯಾಲಯದ ಹೆಸರಿನಲ್ಲಿರುವ ಜಮೀನನ್ನು ಥೀಮ್ ಪಾರ್ಕ ಸ್ಥಾಪಿಸಲು ಪ್ರವಾಸೋದ್ಯಮ ಇಲಾಖೆಗೆ ಪಡೆಯುವ ಯಾವ ಪ್ರಸ್ತಾವನೆಯು ಇಲಾಖೆಯ ಮುಂದೆ ಇರುವುದಿಲ್ಲ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಸಮಿತಿಯು ಒಪ್ಪಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಲಾಯಿತು. |

| | | | | |
|---|---|---|---|---|
| 8 | 3509<br>ಚು.ರ.ಪ್ರ 328<br>ಶ್ರೀ. ಮುಖ್ಯಮಂತ್ರಿ ಚಂದ್ರು<br>ವಿಪನದಿ: 11.03.2010 | ಶಿವಮೊಗ್ಗ ಜಿಲ್ಲೆ ಹೊಸನಗರ ತಾಲ್ಲೂಕಿನಲ್ಲಿರುವ ಪ್ರವಾಸಿತಾಣವಾದ ಬಿದನೂರು ಅಭಿವೃದ್ಧಿಗೆ ಪ್ರವಾಸೋದ್ಯಮ ಇಲಾಖಾವತಿಯಿಂದ ಹಮ್ಮಿಕೊಂಡಿರುವ ಯೋಜನೆಗಳ ಬಗ್ಗೆ | ಬಿದನೂರು ಪ್ರದೇಶವನ್ನು ಅಭಿವೃದ್ಧಿ ಪಡಿಸುವ ಬಗ್ಗೆ ಜಿಲ್ಲಾಧಿಕಾರಿಗಳು, ಶಿವಮೊಗ್ಗ ರವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ಸರ್ಕಾರವು ರಚಿಸಿರುತ್ತದೆ. ಅಲ್ಲದೆ ಶಿವಮೊಗ್ಗ ಜಿಲ್ಲೆಯ ಪ್ರವಾಸಿ ಸ್ಥಳಗಳ ಅಭಿವೃದ್ಧಿ ಕುರಿತು ಮಾಸ್ಟರ್ ಪ್ಲಾನ್ ತಯಾರಿಸ ಲಾಗುತ್ತಿದ್ದು ಇದನ್ನು ಅಂತಿಮ ಗೊಳಿಸಿದ ನಂತರ ಈ ಬಗ್ಗೆ ಕಾರ್ಯಕ್ರಮಗಳನ್ನು ರೂಪಿಸ ಲಾಗುವುದು ಎಂದು ಮಾನ್ಯ ಪ್ರವಾಸೋದ್ಯಮ ಮತ್ತು ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಸಚಿವರು ತಿಳಿಸಿದರು. | ದಿನಾಂಕ: 27.6.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು, ಶಿವಮೊಗ್ಗ ಜಿಲ್ಲೆಯ ಹೊಸನಗರ ತಾಲ್ಲೂಕಿನಲ್ಲಿರುವ ಬಿದನೂರು ಕೋಟೆಯು ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯ ವ್ಯಾಪ್ತಿಯಲ್ಲಿ ಬರುತ್ತದೆ. ಈ ಕೋಟೆಯ ಪ್ರದೇಶದಲ್ಲಿ ಪ್ರವಾಸಿ ಸೌಲಭ್ಯಗಳನ್ನು ಕಲ್ಪಿಸಬೇಕಾದರೆ ಎ.ಎಸ್.ಐ. ರವರ ಅನುಮೋದನೆ ಪಡೆಯುವುದು ಕಷ್ಟಸಾಧ್ಯವಾದ ವಿಚಾರವಾಗಿರುತ್ತದೆ. ಆದುದರಿಂದ ಸದರಿ ಯೋಜನೆಯನ್ನು ಕೈಬಿಡಲಾಗಿದೆಯೆಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಸಮಿತಿಯು ಒಪ್ಪಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಲಾಯಿತು. |
| 9 | 3510<br>ಚು.ರ.ಪ್ರ: 335<br>ಡಾ: ಮಲ್ಲನಗೌಡ ನಾಡಗೌಡ<br>ವಿಪನದಿ: 11.03.2010 | 2010ನೇ ಸಾಲಿನಲ್ಲಿ ಪ್ರವಾಸಿ ತಾಣ ಅಭಿವೃದ್ಧಿಗೆ ಹಾಕಿಕೊಂಡಿರುವ ರೂಪುರೇಷೆಗಳ ಬಗ್ಗೆ | ಪ್ರಸಕ್ತ ಸಾಲಿನಲ್ಲಿ ಇಲಾಖೆಯು ಕೈಗೊಂಡ ಪ್ರವಾಸಿ ಅಭಿವೃದ್ದಿ ಕಾಮಗಾರಿಗಳ ಜೊತೆಗೆ<br>1) ಖಾಸಗಿ ಸಹಭಾಗಿತ್ವದ ಯೋಜನೆಗಳನ್ನು ಹೆಚ್ಚಿಸುವುದು<br>2) ಹೆಲಿ ಟೂರಿಸಂ, ಕ್ರೂಸ್ ಟೂರಿಸಂ, ವೆಲ್‌ನೆಸ್ ಟೂರಿಸಂ ಇತ್ಯಾದಿ ವಿನೂತನ ಯೋಜನೆಗಳನ್ನು ರಾಜ್ಯದಲ್ಲಿ ಅಭಿವೃದ್ಧಿ ಪಡಿಸಲಾಗುವುದು<br>ಎಂದು ಮಾನ್ಯ ಪ್ರವಾಸೋದ್ಯಮ ಮತ್ತು ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಸಚಿವರು ತಿಳಿಸಿದರು. | ದಿನಾಂಕ: 27.6.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು, ಪ್ರವಾಸೋದ್ಯಮ ಇಲಾಖೆಯಿಂದ ಖಾಸಗಿ ಸಹಭಾಗಿತ್ವದಲ್ಲಿ ಹೆಲಿ ಟೂರಿಸಂ, ಕ್ರೂಸ್ ಟೂರಿಸಂ, ವೆಲ್‌ನೆಸ್ ಟೂರಿಸಂ ಇತ್ಯಾದಿ ವಿನೂತನ ಯೋಜನೆಗಳನ್ನು ಅಭಿವೃದ್ಧಿ ಪಡಿಸುವುದಕ್ಕೆ ಬದಲಾಗಿ ಕರ್ನಾಟಕ ಪ್ರವಾಸೋದ್ಯಮ ಇಲಾಖೆಯಿಂದ 2015–20ನೇ ಸಾಲಿನವರೆಗೆ ಚಾಲ್ತಿಯಲ್ಲಿರುವ ಪ್ರವಾಸೋದ್ಯಮ ನೀತಿಯಲ್ಲಿ ಕ್ರೂಸ್ ಟೂರಿಸಂ, ವೆಲ್‌ನೆಸ್ ಟೂರಿಸಂ, ಸಾಹಸ ಪ್ರವಾಸೋದ್ಯಮ ಹೊಟೇಲ್ ಮತ್ತು ರೆಸಾರ್ಟ್ಸ್, ಕ್ಯಾರವಾನ್ ಪಾರ್ಕ್ ಇತ್ಯಾದಿ 17 ಯೋಜನೆಗಳನ್ನು ಅಭಿವೃದ್ಧಿಪಡಿಸಲು ಆಸಕ್ತಿ ಹೊಂದಿರುವ ಹೂಡಿಕೆದಾರರಿಗೆ ನಿಯಮಾನುಸಾರ ರಿಯಾಯಿತಿಗಳನ್ನು ಪ್ರವಾಸೋದ್ಯಮ ಇಲಾಖೆಯಿಂದ ಒದಗಿಸಲಾಗುತ್ತಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಸಮಿತಿಯು ಒಪ್ಪಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಲಾಯಿತು. |

| | | | | |
|---|---|---|---|---|
| 10 | 3511<br>ಚು.ಗು.ಪ್ರ: 555<br>ಶ್ರೀ ವೈ.ಎ. ನಾರಾಯಣ ಸ್ವಾಮಿ<br>ವಿಪನದಿ:18.3.2010 | ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿನ ಪ್ರವಾಸಿ ಕೇಂದ್ರಗಳನ್ನು ಸೇರಿಸಿ ಪ್ರವಾಸೋದ್ಯಮ ಸರ್ಕೀಟ್ ಸ್ಥಾಪಿಸಲು ಕೈಗೊಂಡ ಕ್ರಮದ ಬಗ್ಗೆ | ಚಿಕ್ಕಬಳ್ಳಾಪುರ ಜಿಲ್ಲೆ ಹಾಗೂ ಸುತ್ತಮುತ್ತಲಿನ ಪ್ರವಾಸಿ ಸ್ಥಳಗಳಿಗೆ ಸಂಬಂಧಿಸಿದಂತೆ, ಕೇಂದ್ರ ಪ್ರವಾಸೋದ್ಯಮ ಮಂತ್ರಾಲಯದ ಆರ್ಥಿಕ ನೆರವು ಪಡೆಯಲು ಮೇಘಾ ಸರ್ಕ್ಯೂಟ್ ಯೋಜನೆಯೊಂದನ್ನು ತಯಾರಿಸಲು ಇಲಾಖೆಯ ಎಂಪ್ಯಾನಲ್ಡ್ ಆರ್ಕಿಟೆಕ್ಟ್ ಸಂಸ್ಥೆಯನ್ನು ಕೋರಲಾಗಿದೆ ಎಂದು ಮಾನ್ಯ ಪ್ರವಾಸೋದ್ಯಮ ಮತ್ತು ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಸಚಿವರು ತಿಳಿಸಿದರು. | ದಿನಾಂಕ: 27.6.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು, ಚಿಕ್ಕಬಳ್ಳಾಪುರ ಜಿಲ್ಲೆಯ ಪ್ರವಾಸಿ ವೃತ್ತದ ಅಡಿಯಲ್ಲಿ ದೇವನಹಳ್ಳಿ ಘಾಟಿಸುಬ್ರಮಣ್ಯ, ಗುಮ್ಮನಾಯಕನಪಾಳ್ಯ, ಶಿವಗಂಗೆಗಳಲ್ಲಿ ರೂ. 800.00 ಲಕ್ಷಗಳ್ಲಿ ಪ್ರವಾಸಿ ಸೌಲಭ್ಯಗಳನ್ನು ಕಲ್ಪಿಸಲು ಕೇಂದ್ರವು ಮಂಜೂರಾತಿ ನೀಡಿ, ರೂ.160.00 ಲಕ್ಷಗಳನ್ನು ಮೊದಲ ಕಂತಾಗಿ ಬಿಡುಗಡೆ ಮಾಡಿರುತ್ತದೆ. ಮೊದಲ ಕಂತಾಗಿ ಬಿಡುಗಡೆ ಮಾಡಿರುವ ಅನುದಾನವನ್ನು ಕೆಳಕಂಡ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಬಿಡುಗಡೆ ಮಾಡಲಾಗಿದೆ.<br><br>1. ಘಾಟಿ ಸುಬ್ರಮಣ್ಯ ದೇವಾಲಯಕ್ಕೆ ಸಂಪರ್ಕ ರಸ್ತೆ ಹಾಗೂ ಪರಿಷ್ಕರಣೆ ಅಭಿವೃದ್ಧಿ ರೂ.44.00 ಲಕ್ಷಗಳನ್ನು (ಪೂರ್ಣಗೊಂಡಿದೆ) (2015–16)<br><br>2. ಘಾಟಿ ಸುಬ್ರಮಣ್ಯ ದೇವಾಲಯದ ಬಳಿ ಪಾರ್ಕಿಂಗ್, ಆವರಣ ಗೋಡೆ, ಚರಂಡಿ ನಿರ್ಮಾಣ – ರೂ.50.00 ಲಕ್ಷಗಳು (ಪೂರ್ಣಗೊಂಡಿದೆ)(2015–16)<br>3. ಶಿವಗಂಗೆಯಲ್ಲಿ ಪಾರ್ಕಿಂಗ್ ಸೌಲಭ್ಯ – ರೂ.100.00 ಲಕ್ಷಗಳು (ಪೂರ್ಣಗೊಂಡಿದೆ)(2–15–16).<br><br>ಮೇಲ್ಕಂಡಂತೆ ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಸಮಿತಿಯು ಒಪ್ಪಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಲಾಯಿತು. |

| | | | | |
|---|---|---|---|---|
| 11 | 3821<br>ಚು.ರ.ಪ್ರ: 1035<br>ಶ್ರೀ ಬಿ.ರಾಮಕೃಷ್ಣ<br>ವಿಪನದಿ : 17.03.2011 | ಮಂಡ್ಯ ಜಿಲ್ಲೆ, ಮದ್ದೂರು ತಾಲ್ಲೂಕು ಕೊಕ್ಕರೆ ಬೆಳ್ಳೂರಿಗೆ ಬರುವಂತಹ ಪ್ರವಾಸಿಗರಿಗೆ ವಿಶ್ರಾಂತಿ ತೆಗೆದುಕೊಳ್ಳಲು ಯಾವುದೇ ಅನುಕೂಲ ಇಲ್ಲದಿರುವ ಬಗ್ಗೆ | ಅನುದಾನದ ಲಭ್ಯತೆಯನ್ನು ಆಧರಿಸಿ ಈ ತಾಣದ ಬಳಿ ಪ್ರವಾಸಿಗರಿಗೆ ವಿಶ್ರಾಂತಿ ತೆಗೆದುಕೊಳ್ಳಲು ಅನುಕೂಲ ಮಾಡಿಕೊಡುವ ಬಗ್ಗೆ ಪರಿಶೀಲಿಸಲಾಗುವುದು ಎಂದು ಮಾನ್ಯ ಪ್ರವಾಸೋದ್ಯಮ ಮತ್ತು ಮೂಲ ಭೂತ ಸೌಕರ್ಯಗಳ ಅಭಿವೃದ್ಧಿ ಹಾಗೂ ಯುವಜನ ಸೇವಾ ಸಚಿವರು ತಿಳಿಸಿದರು. | ದಿನಾಂಕ: 27.6.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು, ಮಂಡ್ಯ ಜಿಲ್ಲೆ ಮದ್ದೂರು ತಾಲ್ಲೂಕು ಕೊಕ್ಕರೆ ಬೆಳ್ಳೂರು ಪಕ್ಷಿಧಾಮ ಪ್ರದೇಶದಲ್ಲಿ ಕೆಳಕಂಡ ಸೌಲಭ್ಯಗಳನ್ನು ಅನುಷ್ಠಾನಗೊಳಿಸಲು ಕ್ರಮವಹಿಸಲಾಗಿದೆ.<br>1. ಮೈಸೂರು-ಬೆಂಗಳೂರು ರಸ್ತೆಯ ರುದ್ರಾಕ್ಷಿಪುರ ಗೇಟ್‌ನಿಂದ ಕೊಕ್ಕರೆ ಬೆಳ್ಳೂರಿಗೆ ಹೋಗುವ 9.15 ಕಿ.ಮೀ. ರಸ್ತೆಯನ್ನು ರೂ.440.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಅಭಿವೃದ್ಧಿಪಡಿಸಲಾಗಿದೆ.<br>2. ಕೊಕ್ಕರೆ ಬೆಳ್ಳೂರು ಪಕ್ಷಿಧಾಮದ ಪಕ್ಷಿಗಳು ವಿದ್ಯುತ್ ತಂತಿಗಳ ಮೇಲೆ ಕುಳಿತು ಸಾಯುವುದನ್ನು ತಪ್ಪಿಸಲು ರೂ. 49.08 ಲಕ್ಷಗಳ ಅಂದಾಜು ವೆಚ್ಚದಲ್ಲಿ 2015-15ನೇ ಸಾಲಿನಲ್ಲಿ ಎ.ಬಿ. ಕೇಬಲ್ ಅಳವಡಿಸಲಾಗಿದೆ. |
| 12 | 4613<br>ಚು.ಗು.ಪ್ರ: 287<br>ಶ್ರೀ ಬಿ.ರಾಮಕೃಷ್ಣ<br>ವಿಪನದಿ<br>26.07.2013 | ಮಂಡ್ಯ ಜಿಲ್ಲೆ, ಮದ್ದೂರು ತಾಲ್ಲೂಕಿನಲ್ಲಿರುವ ಕೊಕ್ಕರೆ ಬೆಳ್ಳೂರು ಪಕ್ಷಿಧಾಮವನ್ನು ಅಭಿವೃದ್ಧಿ ಪಡಿಸುವ ಬಗ್ಗೆ. | ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಪ್ರವಾಸಿಗರನ್ನು ಆಕರ್ಷಿಸಲು ಏನು ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಬೇಕು ಅದರ ಬಗ್ಗೆ ಪರಿಶೀಲಿಸಲಾಗುವುದು ಎಂದು ಮಾನ್ಯ ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರು ತಿಳಿಸಿದರು | 3. ಕೊಕ್ಕರೆ ಬೆಳ್ಳೂರು ಪಕ್ಷಿಧಾಮದಲ್ಲಿ ಶೌಚಾಲಯಗಳ ದುರಸ್ಥಿ ಸ್ನಾನ ಗೃಹಗಳ ನಿರ್ಮಾಣ, ಓಪನ್ ಏರ್ ಥಿಯೇಟರ್ ನವೀಕರಣ, ಮಕ್ಕಳ ಆಟಿಗೆ ಸಾಮಾಗ್ರಿಗಳ ಅಳವಡಿಕೆ, ಮರದಿಂದ ಬಿದ್ದ ಪಕ್ಷಿಗಳ ಆರೈಕೆ ಕೇಂದ್ರ ಸ್ಥಾಪನೆ, ಇಕೋ ಶೌಚಾಲಯ ಮುಂತಾದ ಸೌಲಭ್ಯಗಳನ್ನು ಒದಗಿಸಲು ರೂ.25.00 ಲಕ್ಷಗಳನ್ನು ಜಿಲ್ಲಾಧಿಕಾರಿಗಳು, ಮಂಡ್ಯ ರವರಿಗೆ ಬಿಡುಗಡೆ ಮಾಡಲಾಗಿದೆ. ಕಾಮಗಾರಿ ಪೂರ್ಣಗೊಂಡಿದೆ (2013-14).<br>4. ಕೊಕ್ಕರೆ ಬೆಳ್ಳೂರು ಗ್ರಾಮದ ಅಂತರಿಕ ರಸ್ತೆಯ ಅಭಿವೃದ್ಧಿಯನ್ನು ರೂ.221.00ಲಕ್ಷಗಳ ಅಂದಾಜು ವೆಚ್ಚದಲ್ಲಿ ಕೈಗೊಳ್ಳಲಾಗಿದೆ, ಈವರೆಗೆ ಎರಡು ಕಂತುಗಳಲ್ಲಿ |

| | | | | |
|---|---|---|---|---|
| | | | | ರೂ.207.00 ಲಕ್ಷಗಳನ್ನು ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಮಂಡ್ಯರವರಿಗೆ ಬಿಡುಗಡೆ ಮಾಡಲಾಗಿರುತ್ತದೆ. ಕಾಮಗಾರಿಯು ಪೂರ್ಣಗೊಂಡಿರುತ್ತದೆ.(ಆರ್.ಐ.ಡಿ.ಎಫ್–20) (2014–15).<br>5. 2018–19ನೇ ಸಾಲಿನಲ್ಲಿ ಕೊಕ್ಕರೆ ಬೆಳ್ಳೂರಿನ ಪ್ರವಾಸೋದ್ಯಮ ಇಲಾಖೆಯ ಜಮೀನಿನಲ್ಲಿ 5 ಕೊಠಡಿಗಳ ಯಾತ್ರಿನಿವಾಸ ಕೆಫೇಟೇರಿಯಾ, ಮಕ್ಕಳ ಉದ್ಯಾನವನ, ಪರಿಸರ ಪ್ರವಾಸೋದ್ಯಮ ಪಾರ್ಕ್ ಮುಂತಾದ ಪ್ರವಾಸಿ ಸೌಲಭ್ಯಗಳ ಅಭಿವೃದ್ಧಿಗಾಗಿ ರೂ.200.00 ಲಕ್ಷಗಳ ಕಾಮಗಾರಿಯನ್ನು ಕ್ರಿಯಾ ಯೋಜನೆಯಲ್ಲಿ ಅಳವಡಿಸಿಕೊಳ್ಳಲಾಗಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಸಮಿತಿಯು ಒಪ್ಪಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಲಾಯಿತು. |
| 13 | 3823<br>ಚು.ರ.ಪ್ರ: 948<br>ಶ್ರೀ ಮಹಾಂತೇಶ್ ಶಿವಾನಂದ ಕೌಜಲಗಿ<br>ವಿಪನದಿ: 10.03.2011<br>ಮಂಡಿಸಿದ ದಿ:17.03.2011 | ಬೆಳಗಾವಿ ಜಿಲ್ಲೆ, ಗೋಕಾಕ್ ತಾಲ್ಲೂಕಿನ ಹುಣಸ್ಯಾಳ ಪಿ.ಜಿ. ಗ್ರಾಮದ ಶ್ರೀ ಸಿದ್ದಲಿಂಗ ಕೈವಲ್ಯಾಶ್ರಮದಲ್ಲಿ ಪ್ರವಾಸಿಗರ ಅನುಕೂಲತೆಗಾಗಿ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಬಗ್ಗೆ. | ಈ ಬಗ್ಗೆ ಪರಿಶೀಲಿಸಿ ವರದಿ ನೀಡಲು ಕೋರಿ ಜಿಲ್ಲಾಧಿಕಾರಿ, ಬೆಳಗಾವಿ ಜಿಲ್ಲೆ ಇವರಿಗೆ ಪತ್ರ ಬರೆಯಲಾಗಿದೆ. ವರದಿ ಬಂದ ನಂತರ ಅಗತ್ಯವಿದ್ದಲ್ಲಿ, ಅನುದಾನ ಲಭ್ಯತೆಗನುಗುಣವಾಗಿ ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂದು ಮಾನ್ಯ ಪ್ರವಾಸೋದ್ಯಮ ಮತ್ತು ಮೂಲಭೂತ ಸೌಲಭ್ಯ ಹಾಗೂ ಯುವಜನ ಸೇವಾ ಸಚಿವರು ತಿಳಿಸಿದರು. | ದಿನಾಂಕ: 27.6.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು, ಬೆಳಗಾವಿ ಜಿಲ್ಲೆ, ಗೋಕಾಕ್ ತಾಲ್ಲೂಕಿನ ಹುಣಿಸ್ಯಾಳ್ ಪಿ.ಜಿ. ಗ್ರಾಮದ ಕೈವಲ್ಯಾಶ್ರಮ ಬಳಿ ರೂ.50.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಮೆ: ಕೆ.ಆರ್.ಐ.ಡಿ.ಎಲ್. ಸಂಸ್ಥೆಯ ಮೂಲಕ ಯಾತ್ರಿ ನಿವಾಸ ನಿರ್ಮಾಣವನ್ನು 2012–13ನೇ ಸಾಲಿನಲ್ಲಿ ಕೈಗೆತ್ತಿಕೊಂಡು ಪೂರ್ಣಗೊಳಿಸಲಾಗಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಸಮಿತಿಯು ಒಪ್ಪಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಲಾಯಿತು. |

| | | | | |
|---|---|---|---|---|
| 14 | 3969<br>ಚು.ಗು.ಪ್ರ:141<br>ಶ್ರೀ ಡಿ.ಎಸ್. ವೀರಯ್ಯ<br>ವಿಪನದಿ:15.12.2011 | ಪ್ರವಾಸೋದ್ಯಮ ಇಲಾಖೆಯಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳಿಗೆ ಹೆಚ್ಚುವರಿ ಧನ ಸಹಾಯ ನೀಡುವ ಸೌಲಭ್ಯಕ್ಕೆ ಸಂಬಂಧಿಸಿದಂತೆ 2009 ರಿಂದ 2014ರವರೆಗೆ ಇರುವ ಪ್ರವಾಸೋದ್ಯಮ ನೀತಿಗಳಲ್ಲಿ ಈ ವರ್ಗಗಳು ಹೆಚ್ಚುವರಿ ಸಹಾಯಧನ ಪಡೆಯಲು ಅವಕಾಶ ವಿಲ್ಲದಿರುವ ಬಗ್ಗೆ | ನಮ್ಮ ಈಗಿನ ಪ್ರವಾಸೋದ್ಯಮ ಪಾಲಿಸಿ 2009(14)ರಲ್ಲಿ ಹಿಂದೆ ಇದ್ದಂತಹ ಅವಕಾಶಗಳು ಈಗ ಇರುವುದಿಲ್ಲ, ಆದರೆ, ಕೆಎಸ್‌ಎಫ್‌ಸಿ.ನಲ್ಲಿ ಯಾವುದೇ ಒಬ್ಬ ವ್ಯಕ್ತಿ ಯಾವುದೇ ಒಂದು ಉದ್ದಿಮೆಯನ್ನು ಪ್ರಾರಂಭ ಮಾಡುವುದಿದ್ದರೆ 4% ಬಡ್ಡಿ ದರದಲ್ಲಿ 2 ಕೋಟಿ ರೂಪಾಯಿಗಳವರೆಗೆ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗದವರಿಗೆ ಸಾಲ ಕೊಡಲಿಕ್ಕೆ ಅವಕಾಶಗಳು ಇವೆ. ಅದನ್ನು ಇವರುಗಳು ಉಪಯೋಗ ಮಾಡಿಕೊಳ್ಳಬಹುದು. ಮಾನ್ಯ ಸದಸ್ಯರು ಹೇಳಿದ ರೀತಿಯಲ್ಲಿ ಹಿಂದೆ ಇದ್ದಂತಹ ಪಾಲಿಸಿಯನ್ನು ಮತ್ತೆ ತಂದರೆ ಇಂತಹ ಜನರಿಗೆ ಅನುಕೂಲವಾಗಬಹುದು ಎನ್ನುವ ಬಗ್ಗೆ ಮುಂದಿನ ದಿನಗಳಲ್ಲಿ ಪರಿಶೀಲನೆ ಮಾಡುತ್ತೇನೆ ಎಂದು ಮಾನ್ಯ ಮುಖ್ಯಮಂತ್ರಿಯವರು ತಿಳಿಸಿರುತ್ತಾರೆ. | ದಿನಾಂಕ: 27.6.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು, ನೂತನ ಪ್ರವಾಸೋದ್ಯಮ ನೀತಿ–2015–20ನ್ನು ಜಾರಿಗೊಳಿಸಲಾಗಿದ್ದು, ಪ್ರವಾಸೋದ್ಯಮ ಯೋಜನೆಗಳಲ್ಲಿ ಬಂಡವಾಳ ಹೂಡಲು ಮುಂದೆ ಬರುವ ಪರಿಶಿಷ್ಟ ಜಾತಿ/ಪಂಗಡಗಳಿಗೆ ಸೇರಿದ ಉದ್ಯಮಿಗಳಿಗೆ ಬಂಡಾವಳ ಹೂಡಿಕೆಯ ಮೇಲೆ ಹೆಚ್ಚುವರಿಯಾಗಿ ಶೇಕಡ 10ರಷ್ಟು ಅಥವಾ ಗರಿಷ್ಠ ರೂ.5.00 ಲಕ್ಷಗಳವರೆಗೆ ಹೆಚ್ಚುವರಿ ಸಹಾಯಧವನ್ನು ನೀಡಲು ನೂತನ ಪ್ರವಾಸೋದ್ಯಮ ನೀತಿಯಲ್ಲಿ ಅವಕಾಶ ಕಲ್ಪಿಸಲಾಗಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಸಮಿತಿಯು ಒಪ್ಪಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಲಾಯಿತು. |
| 15 | 4072<br>ಚು.ರ.ಪ್ರ: 270<br>ಶ್ರೀ ಬಿ.ರಾಮಕೃಷ್ಣ<br>ವಿಪನದಿ: 08.12.2011<br>(ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ವರ್ಗಾವಣೆ ದಿ:05.05.2015 ಸಮಿತಿಯ ಸಭೆಯಲ್ಲಿ ತೀರ್ಮಾನಿಸಿದಂತೆ) | ಮಂಡ್ಯ ಜಿಲ್ಲೆ, ಮದ್ದೂರು ತಾಲ್ಲೂಕು ಕೆ.ಹೊನ್ನಲಗೆರೆ ಗ್ರಾಮದ ಸುತ್ತ ಮುತ್ತ ಸುಮಾರು ಐತಿಹಾಸಿಕ ಗುಡ್ಡಗಳಿದ್ದು ಅವುಗಳನ್ನು ಪ್ರವಾಸಿ ತಾಣಗಳನ್ನಾಗಿ ಮಾಡುವ ಬಗ್ಗೆ. | ಆದ್ಯತೆ ಮೇಲೆ ರಾಜ್ಯದ ವಿವಿಧ ಪ್ರಮುಖ ಪ್ರವಾಸಿ ಸ್ಥಳಗಳನ್ನು ಅಭಿವೃದ್ಧಿಪಡಿಸಲಾಗುವುದು ಎಂದು ಮಾನ್ಯ ಮುಖ್ಯಮಂತ್ರಿಗಳು ತಿಳಿಸಿದರು. | ದಿನಾಂಕ: 27.6.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು, ಮಂಡ್ಯ ಜಿಲ್ಲೆಯ ಮದ್ದೂರು ತಾಲ್ಲೂಕಿನ ಕೆ.ಹೊನ್ನಲಗೆರೆ ಗ್ರಾಮದ ಶ್ರೀ ವೀರಭದ್ರೇಶ್ವರ ದೇವಾಲಯದ ಬಳಿ ರೂ.40.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಡಾರ್ಮಿಟರಿ ಸೌಲಭ್ಯ, ಬೆಂಚುಗಳು ಶೌಚಾಲಯ ಸೌಲಭ್ಯ ಹಾಗೂ ಕುಡಿಯುವ ನೀರಿನ ಸೌಲಭ್ಯಗಳ ನಿರ್ಮಾಣ ಕಾರ್ಯವನ್ನು 2014–15ನೇ ಸಾಲಿನಲ್ಲಿ ಪೂರ್ಣಗೊಳಿಸಿ ದೇವಾಲಯದ ಟ್ರಸ್ಟ್‌ಗೆ ನಿರ್ವಹಣೆಗಾಗಿ ಹಸ್ತಾಂತರಿಸಲಾಗಿದೆಯೆಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಸಮಿತಿಯು ಒಪ್ಪಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಲಾಯಿತು. |

| | | | | |
|---|---|---|---|---|
| 16 | 3722<br>ಚು.ರ.ಪ್ರ.664<br>ಶ್ರೀ ಮಹಾಂತೇಶ್ ಶಿವಾನಂದ ಕೌಜಲಗಿ<br>ವಿಪನದಿ:09.03.2011 ಮಂಡಿಸಿದ ದಿನಾಂಕ:16.03.2011<br>(ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ವರ್ಗಾವಣೆ ದಿ:05.05.2015 ಸಮಿತಿಯ ಸಭೆಯಲ್ಲಿ ತೀರ್ಮಾನಿಸಿದಂತೆ) | ಬೆಳಗಾವಿ ಜಿಲ್ಲೆ ಸವದತ್ತಿ ತಾಲ್ಲೂಕಿನ ಪ್ರವಾಸಿ ತಾಣವನ್ನು ವೀಕ್ಷಿಸಲು ಬರುವ ಪ್ರವಾಸಿಗಳ ಸಂಖ್ಯೆ ಹೆಚ್ಚುತ್ತಿರುವುದರಿಂದ ಇಲ್ಲಿ ಹೂದೋಟ, ಕುಡಿಯುವ ನೀರಿನ ವ್ಯವಸ್ಥೆ, ರಸ್ತೆ ಹಾಗೂ ಅಗತ್ಯವಿರುವ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಬಗ್ಗೆ. | ಇಲ್ಲಿರುವ ಮೂಲ ದೇವಸ್ಥಾನದ ಸಂರಕ್ಷಣೆ ಬಗ್ಗೆ ಸ್ಥಳ ಪರಿಶೀಲನೆ ಮಾಡಿ ಅಗತ್ಯ ಕ್ರಮ ವಹಿಸಲಾಗುವುದು, ಅದೇರೀತಿ ಮೂಲಭೂತ ಸೌಲಭ್ಯ ಒದಗಿಸುವ ಬಗ್ಗೆ ಪ್ರವಾಸೋಧ್ಯಮ ಇಲಾಖೆಯೊಂದಿಗೆ ಸಮಾಲೋಚಿಸಿ ಪರಿಶೀಲಿಸಲಾಗುವುದು ಎಂದು ಮಾನ್ಯ ಸಣ್ಣ ನೀರಾವರಿ ಕನ್ನಡ ಮತ್ತು ಸಂಸ್ಕೃತಿ ಹಾಗೂ ಜವಳಿ ಸಚಿವರು ತಿಳಿಸಿದರು. | ದಿನಾಂಕ: 27.6.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು,<br>1. ಸವದತ್ತಿ ತಾಲ್ಲೂಕಿನ ಶ್ರೀ ರೇಣುಕಾ ಯಲ್ಲಮ್ಮನ ದೇವಸ್ಥಾನದ ಬಳಿ ರೂ. 80.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಯಾತ್ರಿ ನಿವಾಸ ನಿರ್ಮಾಣ ಕಾಮಗಾರಿಯನ್ನು ಕೈಗೊಂಡು ಪೂರ್ಣಗೊಳಿಸಲಾಗಿದೆ. ನಿರ್ವಹಣೆಯನ್ನು ದೇವಾಲಯದ ಕಾರ್ಯನಿರ್ವಹಣಾಧಿಕಾರಿಗಳಿಗೆ ವಹಿಸಲಾಗಿದೆ (2011–12).<br>2. ಸವದತ್ತಿ ತಾಲ್ಲೂಕಿನ ಶ್ರೀ ರೇಣುಕಾದೇವಿ ಯಲ್ಲಮ್ಮನ ಗುಡ್ಡದಿಂದ ರಾಜ್ಯ ಹೆದ್ದಾರಿ 34ಕ್ಕೆ ಕೂಡು ರಸ್ತೆ (ಕಿ.ಮಿ. 0.00 ಇಂದ 2.00 ಕಿ.ಮೀ) ವರೆಗೆ ಅಭಿವೃದ್ಧಿಯನ್ನು ರೂ.210.47 ಲಕ್ಷಗಳ ಅಂದಾಜು ವೆಚ್ಚದಲ್ಲಿ ಕೈಗೊಂಡು ಪೂರ್ಣಗೊಳಿಸಲಾಗಿದೆ (2011–12)<br>3. ಸವದತ್ತಿ ತಾಲ್ಲೂಕು, ಸವದತ್ತಿ–ಹೆಬ್ಬಾಳ ಕ್ರಾಸ್ ರಸ್ತೆ (ವಯಾ ಯಲ್ಲಮ್ಮನ ಗುಡ್ಡ–ಹಂಚಿನಾಳ) 4.5 ರಿಂದ 13.00 ಕಿ.ಮೀ. ವರೆಗೆ) ರಸ್ತೆ ಅಭಿವೃದ್ಧಿಯನ್ನು ರೂ. 350.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಕೈಗೊಂಡು ಪೂರ್ಣಗೊಳಿಸಲಾಗಿದೆ.<br>4. 2018–19ನೇ ಸಾಲಿನಲ್ಲಿ ಸವದತ್ತಿ ತಾಲ್ಲೂಕಿನ ಶ್ರೀಕ್ಷೇತ್ರ ಯಲ್ಲಮ್ಮ ದೇವಸ್ಥಾನದ ಬಳಿ ರೂ. 800.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ತಂಗುದಾಣ, ಅಡುಗೆ ಮನೆ ಹಾಗೂ ಗದ್ದಿಗೆ ಒಳಗೊಂಡಂತೆ 20 ಜನ ಉಳಿಯುವ 40 ಕೊಠಡಿಗಳ ನಿರ್ಮಾಣ ಕಾಮಗಾರಿಯನ್ನು ಕೈಗೊಳ್ಳಲಾಗಿದೆ. ಮೊದಲ ಕಂತಾಗಿ ರೂ.400.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ |

| | | | | |
|---|---|---|---|---|
| | | | | 5. ಸವದತ್ತಿ ತಾಲ್ಲೂಕಿನ ಶ್ರೀ ಕ್ಷೇತ್ರ ಯಲ್ಲಮ್ಮ ದೇವಸ್ಥಾನದ ಜೋಗಳಬಾವಿಯ ಸಮೀಪ ರೂ.50.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ವಾಹನ ನಿಲ್ದಾಣ ಹಾಗೂ ಮೂಲ ಸೌಕರ್ಯ ಅಭಿವೃದ್ಧಿ ಕಾಮಗಾರಿಯನ್ನು ಕೈಗೊಳ್ಳಲಾಗಿದೆ. ಪೂರ್ಣ ಅನುದಾನವನ್ನು ಬಿಡುಗಡೆ ಮಾಡಲಾಗಿದೆ (2018–19).<br>6. ಸವದತ್ತಿಯಲ್ಲಿರುವ ಸಿದ್ದನಕೊಳ್ಳಕ್ಕೆ ತಡೆಗೋಡೆ ನಿರ್ಮಿಸಿ ನೀರು ಸಂಗ್ರಹಣೆ ಮಾಡಿ ಗಿಡಮರಗಳಿಗೆ ನೀರು ಪೂರೈಸುವ ಕಾಮಗಾರಿಯನ್ನು ರೂ.75.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಕೈಗೊಳ್ಳಲಾಗಿದೆ. ಪೂರ್ಣ ಅನುದಾನವನ್ನು ಬಿಡುಗಡೆ ಮಾಡಲಾಗಿದೆ.<br>7. ಬೆಳಗಾವಿ ಜಿಲ್ಲೆಯ ಸವದತ್ತಿ ತಾಲ್ಲೂಕಿನ ಶ್ರೀ ಕ್ಷೇತ್ರ ಯಲ್ಲಮ್ಮ ಗುಡ್ಡದಲ್ಲಿ ಸುಮಾರು 150 ನಾಲ್ಕು ಚಕ್ರಗಳ ವಾಹನಗಳು ಹಾಗೂ 500 ದ್ವಿಚಕ್ರ ವಾಹನಗಳಿಗೆ ಪಾರ್ಕಿಂಗ್ ಸೌಲಭ್ಯ ಕಾಮಗಾರಿಯನ್ನು ರೂ.200.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಕೈಗೊಳ್ಳಲಾಗಿದೆ. ಮೊದಲ ಕಂತಾಗಿ ರೂ.100.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ (2018–19)<br>8. ಬೆಳಗಾವಿ ಜಿಲ್ಲೆಯ ಸವದತ್ತಿ ತಾಲ್ಲೂಕಿನ ಶ್ರೀಕ್ಷೇತ್ರ ಯಲ್ಲಮ್ಮ ಗುಡ್ಡದಲ್ಲಿ 10 ಜನ ತಂಗುವ 20 ಕೊಠಡಿಗಳ ನಿರ್ಮಾಣ (ಎರಡು ಬ್ಲಾಕ್ ತಲಾ – ರೂ. 300.00 ಲಕ್ಷಗಳು) ಕಾಮಗಾರಿಯನ್ನು ರೂ.600.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಕೈಗೊಳ್ಳಲಾಗಿದೆ. ಮೊದಲ ಕಂತಾಗಿ ರೂ.300.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ (2018–19) |

| | | | | |
|---|---|---|---|---|
| | | | | 9. ಬೆಳಗಾವಿ ಜಿಲ್ಲೆಯ ಸವದತ್ತಿ ತಾಲ್ಲೂಕಿನ ಶ್ರೀ ಕ್ಷೇತ್ರ ಯಲ್ಲಮ್ಮ ಗುಡ್ಡದಲ್ಲಿ ಡಾರ್ಮಿಟರಿ ಸಾಮೂಹಿಕ ಶೌಚಾಲಯ ಹಾಗೂ ಸ್ನಾನಗೃಹಗಳು ಹಾಗೂ ಲಗೇಜ್ ಕೊಠಡಿ ನಿರ್ಮಾಣ ಕಾಮಗಾರಿಯನ್ನು ರೂ.500.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಕೈಗೊಳ್ಳಲಾಗಿದೆ. ಮೊದಲ ಕಂತಾಗಿ ರೂ.250.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ (2018-19).<br>10. ಬೆಳಗಾವಿ ಜಿಲ್ಲೆಯ ಸವದತ್ತಿ ತಾಲ್ಲೂಕಿನ ಶ್ರೀ ಕ್ಷೇತ್ರ ಯಲ್ಲಮ್ಮ ಗುಡ್ಡದಲ್ಲಿ ತಂಗುದಾಣ ಹಾಗೂ ಕುಡಿಯುವ ನೀರಿನ ಆರ್.ಓ. ಪ್ಲಾಂಟ್ ನಿರ್ಮಾಣ ಕಾಮಗಾರಿಯನ್ನು ರೂ.60.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಕೈಗೊಳ್ಳಲಾಗಿದೆ. ಪೂರ್ಣ ಅನುದಾನವನ್ನು ಬಿಡುಗಡೆ ಮಾಡಲಾಗಿದೆ (2018-19).<br>ಮೇಲ್ಕಂಡಂತೆ ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಸಮಿತಿಯು ಒಪ್ಪಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಲಾಯಿತು. |
| 17 | 3970<br>ಚು.ಗು.ಪ್ರ.427<br>ಡಾ: ದೊಡ್ಡರಂಗೇಗೌಡ<br>ವಿಪನದಿ: 15.12.2011 | ತುಮಕೂರು ಜಿಲ್ಲೆ ಮಧುಗಿರಿಯ ಏಕಶಿಲಾ ಬೆಟ್ಟವು ಐತಿಹಾಸಿಕ ಪ್ರವಾಸಿ ತಾಣವಾಗಿದ್ದು, ಇದಕ್ಕೆ ಮೂಲಭೂತ ಸೌಕರ್ಯಗಳು ಇಲ್ಲದಿರುವ ಬಗ್ಗೆ. | ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿಪಡಿಸಬೇಕು ಎನ್ನುವ ಇರಾದೆ ಸರ್ಕಾರಕ್ಕೆ ಇದೆ. ಸುಮಾರು 100 ಲಕ್ಷ. ರೂಪಾಯಿಗಳನ್ನು ಇದಕ್ಕಾಗಿ ಕಾಯ್ದಿರಿಸಿದೆ. ಈ ಸೂಕ್ತ ಪ್ರಸ್ತಾವವನ್ನು ಈಗಾಗಲೇ ಪುರಾತತ್ವ ಸರ್ವೇಕ್ಷಣಾ ಇಲಾಖೆಗೆ ನೀಡಿ ಅದನ್ನು ಕೈಗೆತ್ತಿಕೊಳ್ಳುವಂತಹ ಕೆಲಸ ಕಾರ್ಯಗಳನ್ನು ಮಾಡುತ್ತೇವೆ ಎಂದು ಮಾನ್ಯ ಮುಖ್ಯಮಂತ್ರಿಯವರು ತಿಳಿಸಿರುತ್ತಾರೆ. | ದಿನಾಂಕ: 27.6.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು, ಮಧುಗಿರಿ ಬೆಟ್ಟಕ್ಕೆ ಹೊಂದಿಕೊಂಡಿರುವ ಏಕಶಿಲಾ ಬೆಟ್ಟಕ್ಕೆ ಕೇಬಲ್ ಕಾರ್ ಅಳವಡಿಸುವ ಸಲುವಾಗಿ Consultant ಆಯ್ಕೆ ಮಾಡಲು ಬಿಡ್ಡುಗಳನ್ನು ಆಹ್ವಾನಿಸಲಾಗಿತ್ತು. ಇಲಾಖೆಯಲ್ಲಿ ಸ್ವೀಕೃತವಾಗಿದ್ದ ತಾಂತ್ರಿಕ ಹಾಗೂ ಆರ್ಥಿಕ ಬಿಡ್ಡುಗಳನ್ನು ಮೌಲ್ಯಮಾಪನ ಮಾಡಿ ವರದಿ ನೀಡಲು ಇಲಾಖೆಯ ಸಲಹಾ ಸಂಸ್ಥೆಯಾಗಿರುವ ಮೆ: ಕೆ.ಪಿ.ಎಂ.ಜಿ. ಸಂಸ್ಥೆಯನ್ನು ಕೋರಲಾಗಿತ್ತು. |

| | | | | |
|---|---|---|---|---|
| | | | | ಈ ಯೋಜನೆ ಸಂಬಂಧ ಎರಡು Consultant ಸಂಸ್ಥೆಗಳು ಮಾತ್ರ ಬಿಡ್ಡುಗಳನ್ನು ಸಲ್ಲಿಸಿದ್ದು, ಸದರಿ ಸಂಸ್ಥೆಗಳ ಗುಣಮಟ್ಟ ನಿರೀಕ್ಷಿತ ಮಟ್ಟದಲ್ಲಿ ಇಲ್ಲದೇ ಇರುವುದರಿಂದ ಬಿಡ್ ಪ್ರಕ್ರಿಯೆಯನ್ನು ಸ್ಥಗಿತಗೊಳಿಸಲಾಗಿದೆ.<br><br>ಈ ಯೋಜನೆಯ Feasibility ಸಹ ತುಂಬಾ ಕಡಿಮೆ ಇರುತ್ತದೆ ಎಂಬುದಾಗಿ ತಿಳಿದು ಬಂದಿರುವುದಿರಿಂದ ಈ ಯೋಜನೆಯನ್ನು ಕೈಬಿಡಲಾಗಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಸಮಿತಿಯು ಒಪ್ಪಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಲಾಯಿತು. |
| 18 | 3974<br>ಚು.ರ.ಪ್ರ: 526<br>ಶ್ರೀ ಎಂ. ಶ್ರೀನಿವಾಸ್<br>ವಿಪನದಿ: 09.02.2012 | ಹಂಪಿಯಲ್ಲಿನ ಅಪರೂಪದ ಸ್ಮಾರಕಗಳಿಗೆ ಧ್ವನಿ ಮತ್ತು ಬೆಳಕು ನೀಡುವ ಮೂಲಕ ಪ್ರವಾಸಿಗರನ್ನು ಆಕರ್ಷಿಸುವ ಹಂಪಿ ಬೈನೈಟ್ ಯೋಜನೆ ಯನ್ನು ಶೀಘ್ರ ಪೂರ್ಣಗೊಳಿಸಿ ಪ್ರವಾಸಿಗರನ್ನು ಸೆಳೆಯುವ ನಿಟ್ಟಿನಲ್ಲಿ ತೆಗೆದುಕೊಂಡಿರುವ ಕ್ರಮಗಳ ಬಗ್ಗೆ | ಸದರಿ ಯೋಜನೆ ಪೂರ್ಣಗೊಳ್ಳುವ ಹಂತದಲ್ಲಿದ್ದು, ಜರೂರಾಗಿ ಪೂರ್ಣಗೊಳಿಸಿ ಪ್ರವಾಸಿಗರ ವೀಕ್ಷಣೆಗೆ ಒದಗಿಸಲಾಗುವುದು ಎಂದು ಮಾನ್ಯ ಮುಖ್ಯಮಂತ್ರಿಗಳು ತಿಳಿಸಿದರು. | ದಿನಾಂಕ: 27.6.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು, ಆಯುಕ್ತರು, ಹಂಪಿ ವಿಶ್ವ ಪರಂಪರಾ ಪ್ರದೇಶ ನಿರ್ವಹಣಾ ಪ್ರಾಧಿಕಾರ ಹೊಸಪೇಟೆರವರ ಮೂಲಕ ಹಂಪಿ ಬಜಾರ್‌ನಲ್ಲಿರುವ ಎದುರು ಬಸವಣ್ಣ ಪ್ರದೇಶದಲ್ಲಿ ಹಾಗೂ ಕೋದಂಡರಾಮ ದೇವಾಲಯದ ಬಳಿ ಧ್ವನಿ ಮತ್ತು ಬೆಳಕು ಯೋಜನೆಯನ್ನು ಪೂರ್ಣಗೊಳಿಸಲಾಗಿದೆ. ಇದರ ಜೊತೆಗೆ 17 ವಿವಿಧ ಸ್ಮಾರಕಗಳಿಗೆ ದೀಪಾಲಂಕರ ಕಾಮಗಾರಿಗಳನ್ನು ಪೂರ್ಣ ಗೊಳಿಸಲಾಗಿದೆ. ಈ ಯೋಜನೆಯ ನಿರ್ವಹಣೆಗಾಗಿ ಕೆ.ಎಸ್.ಟಿ.ಡಿ.ಸಿ. ಸಂಸ್ಥೆಯ ವತಿಯಿಂದ ಟೆಂಡರ್ ಕರೆಯಲಾಗಿದ್ದು, ನಿರ್ವಹಣಾ ಸಂಸ್ಥೆಯನ್ನು ಆಯ್ಕೆ ಮಾಡಲಾಗಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಸಮಿತಿಯು ಒಪ್ಪಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಲಾಯಿತು. |

| | | | | |
|---|---|---|---|---|
| 19 | 4194<br>ಚು.ರ.ಪ್ರ: 187<br>ಶ್ರೀ ಕೆ.ವಿ. ನಾರಾಯಣಸ್ವಾಮಿ<br>ವಿಪನದಿ: 06.12.2012 | ರಾಜ್ಯದಲ್ಲಿ ಪ್ರವಾಸಿ ತಾಣಗಳಲ್ಲಿನ ಧ್ವನಿ ಮತ್ತು ಬೆಳಕು ಕಾರ್ಯಕ್ರಮದ ಮುಖ್ಯ ಉದ್ದೇಶ ಕುರಿತು. | ರಾಜ್ಯದ ಪ್ರಮುಖ ಐತಿಹಾಸಿಕ ಪ್ರವಾಸಿ ತಾಣಗಳಿಗೆ ಪ್ರವಾಸಿಗರನ್ನು ಆಕರ್ಷಿಸಲು ಆ ಪ್ರದೇಶಗಳ ಐತಿಹಾಸಿಕ ಪರಂಪರೆ, ಕಲೆ, ಸಂಸ್ಕೃತಿಗಳನ್ನು ಪ್ರವಾಸಿಗರಿಗೆ ಧ್ವನಿ ಮತ್ತು ಬೆಳಕಿನ ವಿನೂತನ ರೀತಿಯಲ್ಲಿ ಪರಿಚಯಿಸುವ ಮೂಲಕ ಪ್ರವಾಸೋದ್ಯಮವನ್ನು ಅಭಿವೃದ್ಧಿಪಡಿಸುವ ಉದ್ದೇಶವಿರುವುದಾಗಿ ಮಾನ್ಯ ಪ್ರವಾಸೋದ್ಯಮ ಸಚಿವರು ತಿಳಿಸಿದರು. | ದಿನಾಂಕ: 27.6.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು, ಸ್ಥಳಿಯ ಸ್ಮಾರಕಗಳ ಇತಿಹಾಸ, ಪ್ರಾಮುಖ್ಯತೆ ಭವ್ಯತೆಯನ್ನು ಶಬ್ದ ಮತ್ತು ಬೆಳಕಿನ ಮೂಲಕ ಪ್ರವಾಸಿಗರಿಗೆ ಪರಿಚಯಿಸುವುದು ಈ ಯೋಜನೆಯ ಪ್ರಮುಖ ಉದ್ದೇಶವಾಗಿರುತ್ತದೆ.<br><br>ಪ್ರಸ್ತುತ ಶ್ರೀರಂಗಪಟ್ಟಣ ಕೋಟೆ ಪ್ರದೇಶ ಮತ್ತು ಹಂಪಿಯಲ್ಲಿ ಯೋಜನೆಯ ನಿರ್ವಹಣೆಗಾಗಿ ಕೆ.ಎಸ್.ಟಿ.ಡಿ.ಸಿ. ಸಂಸ್ಥೆಯ ವತಿಯಿಂದ ಟೆಂಡರ್ ಮೂಲಕ ನಿರ್ವಹಣಾ ಸಂಸ್ಥೆಯನ್ನು ಆಯ್ಕೆ ಮಾಡಲಾಗಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಸಮಿತಿಯು ಒಪ್ಪಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಲಾಯಿತು. |
| 20 | 4628<br>ಚು.ರ.ಪ್ರ. 502<br>ಶ್ರೀ ಆಚಾರ್ ಹಾಲಪ್ಪ ಬಸಪ್ಪ<br>ವಿಪನದಿ: 29.11.2013 | ಕೊಪ್ಪಳ ಜಿಲ್ಲೆಯಲ್ಲಿ ಸಾರ್ವಜನಿಕರ ಅನುಕೂಲಕ್ಕಾಗಿ ಪ್ರವಾಸೋದ್ಯಮ ಸಹಾಯಕ ನಿರ್ದೇಶಕರ ಇಲಾಖೆಯ ಕಛೇರಿ ಸ್ಥಾಪಿಸುವ ಬಗ್ಗೆ. | ಸರ್ಕಾರದ ಪರಿಶೀಲನೆಯಲ್ಲಿದೆ ಎಂದು ಮಾನ್ಯ ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರು ತಿಳಿಸಿದರು. | ದಿನಾಂಕ: 27.6.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು, ಜಿಲ್ಲಾ ಕೇಂದ್ರವಾದ ಕೊಪ್ಪಳದಲ್ಲಿ ಪ್ರವಾಸಿಗರು ಹಾಗೂ ಸಾರ್ವಜನಿಕರ ಅನುಕೂಲಕ್ಕಾಗಿ ಪ್ರವಾಸೋದ್ಯಮ ಇಲಾಖೆಯ ಕಚೇರಿಯನ್ನು ತೆರೆಯಲಾಗಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಸಮಿತಿಯು ಒಪ್ಪಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಲಾಯಿತು. |
| 21 | 4629<br>ಚು.ಗು.ಪ್ರ: 151<br>ಶ್ರೀ ಜಿ. ರಘು ಆಚಾರ್<br>ವಿಪನದಿ: 24.01.2014 | ಚಿತ್ರದುರ್ಗ ಜಿಲ್ಲೆಯ ಪ್ರವಾಸಿ ತಾಣಗಳಲ್ಲಿ ಸರಿಯಾದ ಮೂಲಸೌಕರ್ಯ ಇಲ್ಲದೇ ಪರದಾಡುತ್ತಿದ್ದು, ಮುಂದಿನ ಆಯವ್ಯಯದಲ್ಲಿ ಈ ಪ್ರವಾಸಿ | ಚಿತ್ರದುರ್ಗ ಜಿಲ್ಲೆಯಲ್ಲಿ ಸಾಕಷ್ಟು ಪ್ರವಾಸಿ ತಾಣಗಳಿದ್ದು, ಇವುಗಳ ಅಭಿವೃದ್ಧಿಗೆ ಕೆಲವು ಕ್ರಮಗಳನ್ನು ಕೈಗೊಂಡಿದ್ದೇವೆ. ಸದರಿ ಜಿಲ್ಲೆಗೆ ಪ್ರವಾಸಿಗರು ಬರುವುದಕ್ಕೆ ಸಾಕಷ್ಟು ಅವಕಾಶಗಳು ಇರುವುದರಿಂದ ಎಲ್ಲೆಲ್ಲಿ | ದಿನಾಂಕ: 27.6.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು, ಚಿತ್ರದುರ್ಗ ಜಿಲ್ಲೆಗೆ ಸಂಬಂಧಪಟ್ಟಂತೆ 2014–15ನೇ ಸಾಲಿನಿಂದ 2018–19ನೇ ಸಾಲಿನವರೆಗೆ ರೂ.4378.07 ಲಕ್ಷಗಳ ಅಂದಾಜು ಮೊತ್ತದ 48 ವಿವಿಧ ಮೂಲ ಸೌಲಭ್ಯ ಅಭಿವೃದ್ಧಿ ಕಾಮಗಾರಿಗಳನ್ನು ಮಂಜೂರು |

| | | | | |
|---|---|---|---|---|
| | | ತಾಣಗಳಿಗೆ ಸ್ವಲ್ಪ ಹೆಚ್ಚಿನ ಹಣ ನೀಡುವ ವ್ಯವಸ್ಥೆ ಕುರಿತು. | ಮೂಲಭೂತ ಸೌಕರ್ಯಗಳನ್ನು ಒದಗಿಸುವುದಕ್ಕೆ ಸಾಧ್ಯವಿದೆಯೋ ಅಲ್ಲಿ ನಾವು ಎಲ್ಲಾ ರೀತಿಯಿಂದ ಪ್ರಯತ್ನಗಳನ್ನು ಮಾಡುತ್ತೇವೆಂದು ಮಾನ್ಯ ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರು ಭರವಸೆ ನೀಡಿದರು. | ಮಾಡಲಾಗಿದೆ. ಸದರಿ ಕಾಮಗಾರಿಗಳಿಗೆ ಈವರೆಗೆ ರೂ.2641.07 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ. ರೂ. 2641.07 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಸಮಿತಿಯು ಒಪ್ಪಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಲಾಯಿತು. |
| 22 | 4869<br>ಚು.ರ.ಪ್ರ 511<br>ಶ್ರೀ ಮಹಾಂತೇಶ್ ಶಿವಾನಂದ ಕೌಜಲಗಿ<br>ವಿಪನದಿ; 06.02.2015 | ಬೆಳಗಾವಿ ಜಿಲ್ಲೆ ಸವದತ್ತಿ ತಾಲ್ಲೂಕಿನ ಕೆಂಗೇರಿ–ಮುರಗೋಡದಲ್ಲಿ ಶ್ರೀ ಶಿವಚಿದಂಬರ ಮೂಲ ಪೀಠ ವೀಕ್ಷಣೆಗೆ ಬರುವ ಪ್ರವಾಸಿಗರಿಗೆ ಮೂಲಭೂತ ಸೌಕರ್ಯ ಒದಗಿಸುವ ಬಗ್ಗೆ. | ಈ ಬಗ್ಗೆ ಪರಿಶೀಲಿಸಲಾಗುತ್ತಿದೆ ಎಂದು ಮಾನ್ಯ ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರು ತಿಳಿಸಿದರು | ದಿನಾಂಕ: 27.6.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು, ಬೆಳಗಾವಿ ಜಿಲ್ಲೆ, ಸವದತ್ತಿ ತಾಲ್ಲೂಕು, ಕೆಂಗೇರಿ–ಮುರಗೋಡದ ಶ್ರೀ ಶಿವಚಿದಂಬರ ಮೂಲಪೀಠದ ಬಳಿ ರೂ.50.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಯಾತ್ರಿನಿವಾಸ ನಿರ್ಮಾಣ ಕಾಮಗಾರಿಯನ್ನು ಪೂರ್ಣಗೊಳಿಸಲಾಗಿದೆ (2015–16) ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಸಮಿತಿಯು ಒಪ್ಪಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಲಾಯಿತು. |
| 23 | 4870<br>ಚು.ರ.ಪ್ರ. 2021<br>ಶ್ರೀ ಐವನ್ ಡಿ' ಸೋಜಾ<br>ವಿಪನದಿ:20.03.2015<br>(ಮಂಡನೆಯಾದ ಪ್ರಶ್ನೆ) | ದಕ್ಷಿಣ ಕನ್ನಡ ಜಿಲ್ಲೆಯ ಬೀಚ್ ಅಭಿವೃದ್ಧಿ ಕಾರ್ಯಕ್ರಮಗಳು ಮತ್ತು ಪ್ರವಾಸಿ ಸ್ಥಳಗಳು ಕೂಡುವ ರಸ್ತೆಗೆ ಕಾಮಗಾರಿ ಪ್ರಾರಂಭಗೊಳ್ಳದೇ ಇರುವ ಬಗ್ಗೆ. | ದಕ್ಷಿಣ ಕನ್ನಡ ಜಿಲ್ಲೆಯ ಬೀಚ್‌ಗಳ ಅಭಿವೃದ್ಧಿ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಅನುಷ್ಠಾನ ಸಂಸ್ಥೆಗೆ ಅಂದಾಜು ಪಟ್ಟಿಗಳನ್ನು ತಯಾರಿಸಿ ಸಲ್ಲಿಸುವಂತೆ ಪತ್ರ ಬರೆಯಲಾಗಿದ್ದು, ಅಂದಾಜು ಪಟ್ಟಿಗಳು ಇಲಾಖೆಯಲ್ಲಿ ಸ್ವೀಕೃತವಾದ ನಂತರ ಆಡಳಿತಾತ್ಮಕ ಅನುಮೋದನೆ ನೀಡಿ, ಅನುದಾನ ಬಿಡುಗಡೆ ಮಾಡಿ ಕಾಮಗಾರಿ ಪ್ರಾರಂಭಿಸಲು ಕ್ರಮವಹಿಸಲಾಗುವುದು ಎಂದು ಪ್ರವಾಸೋದ್ಯಮ ಸಚಿವರು ತಿಳಿಸಿದರು. | ದಿನಾಂಕ: 27.6.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು, ಉತ್ತರ ಕನ್ನಡ, ಉಡುಪಿ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿರುವ ಪ್ರಮುಖ 23 ಕಡಲ ತೀರಗಳಲ್ಲಿ ರೂ.50.00 ಕೋಟಿ ಅಂದಾಜು ವೆಚ್ಚದಲ್ಲಿ ಪ್ರವಾಸಿ ಸೌಲಭ್ಯಗಳನ್ನು ಕಲ್ಪಿಸಲು ಕೇಂದ್ರವು ಮಂಜೂರಾತಿ ನೀಡಿ, ರೂ.10.00 ಕೋಟಿಗಳನ್ನು ಮಾತ್ರ ಮೊದಲ ಕಂತಾಗಿ ಬಿಡುಗಡೆ ಮಾಡಲಾಗಿತ್ತು. ಸದರಿ ರೂ.10.00 ಕೋಟಿಗಳನ್ನು ಉತ್ತರ ಕನ್ನಡ ಹಾಗೂ ಉಡುಪಿ ಜಿಲ್ಲೆಗಳ ಕಡಲ ತೀರಗಳಲ್ಲಿ ಸೌಲಭ್ಯಗಳನ್ನು ಕಲ್ಪಿಸಲು ವಿನಿಯೋಗಿಸಲಾಗಿದೆ. ನಂತರ ಪಿ.ಐ.ಡಿ.ಡಿ.ಸಿ. ಯೋಜನೆಯಡಿ ಮಂಜೂರಾಗಿದ್ದ ಎಲ್ಲಾ ಕಾಮಗಾರಿಗಳಿಗೆ ಕೇಂದ್ರವು ಅನುದಾನ ಬಿಡುಗಡೆ |

| | | | | |
|---|---|---|---|---|
| | | | | ಮಾಡುವುದನ್ನು ಸ್ಥಗಿತಗೊಳಿಸಿರುತ್ತದೆ. ಹೀಗಾಗಿ ಈ ಯೋಜನೆಗೂ ಬಾಕಿ ಇರುವ ರೂ. 40.00 ಕೋಟಿಗಳನ್ನು ಕೇಂದ್ರವು ಬಿಡುಗಡೆ ಮಾಡಿರುವುದಿಲ್ಲ. ಆದುದರಿಂದ ದಕ್ಷಿಣ ಕನ್ನಡ ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವ ಕಡಲ ತೀರಗಳಲ್ಲಿ ಪ್ರವಾಸಿ ಸೌಲಭ್ಯಗಳನ್ನು ಕಲ್ಪಿಸಲು ಸಾಧ್ಯವಾಗಿರುವುದಿಲ್ಲ.<br><br>ದಕ್ಷಿಣ ಕನ್ನಡ ಜಿಲ್ಲೆಗೆ 2014–15 ರಿಂದ 2018–19ರವರೆಗೆ ಪ್ರವಾಸಿ ಮೂಲಭೂತ ಸೌಲಭ್ಯಗಳನ್ನು ಒದಗಿಸುವ ಸಂಬಂಧ ಮಂಜೂರಾಗಿರುವ ಕಾಮಗಾರಿಗಳ ವಿವರಗಳನ್ನು **ಅನುಬಂಧ–3ರಲ್ಲಿ** ಒದಗಿಸಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಸಮಿತಿಯು ಒಪ್ಪಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಲಾಯಿತು. |
| 24 | 4871<br>ಚು.ರ.ಪ್ರ. 2022<br>ಶ್ರೀ ಐವನ್ ಡಿ' ಸೋಜಾ<br>ವಿಪನದಿ:20.03.2015<br>(ಮಂಡನೆಯಾದ ಪ್ರಶ್ನೆ) | ಮಂಗಳೂರು ಬಿಕರ್ಣಕಟ್ಟೆ ಇನ್‌ಫ್ಯಾಂಟ್ ಜೀಸಸ್ ಪುಣ್ಯ ಕ್ಷೇತ್ರಕ್ಕೆ ಆಗಮಿಸುವ ಭಕ್ತಾದಿಗಳಿಗೆ ಸೌಲಭ್ಯ ಒದಗಿಸಲು "ಯಾತ್ರಿನಿವಾಸ" ಸ್ಥಾಪಿಸುವ ಬಗ್ಗೆ. | ಈ ಪುಣ್ಯ ಕ್ಷೇತ್ರಕ್ಕೆ ಆಗಮಿಸುವ ಭಕ್ತಾದಿಗಳಿಗೆ ಸೌಲಭ್ಯ ಒದಗಿಸಲು ಅಲ್ಲಿಗೆ ಭೇಟಿ ನೀಡುವ ಪ್ರವಾಸಿಗರ ಸಂಖ್ಯೆ, ನಿವೇಶನ ಹಾಗೂ ಅನುದಾನದ ಲಭ್ಯತೆಯ ಅನುಗುಣವಾಗಿ ಯಾತ್ರಿನಿವಾಸ ನಿರ್ಮಿಸುವ ಬಗ್ಗೆ ಪರಿಶೀಲಿಸಿ ಕ್ರಮವಹಿಸಲಾಗುವುದು ಎಂದು ಪ್ರವಾಸೋದ್ಯಮ ಸಚಿವರು ತಿಳಿಸಿದರು. | ದಿನಾಂಕ: 27.6.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು, ದಕ್ಷಿಣ ಕನ್ನಡ ಜಿಲ್ಲೆಯ ಬಿಕರ್ಣಕಟ್ಟೆ ಬಾಲಯೇಸು ಪುಣ್ಯಸ್ಥಳದ ಬಳಿ ರೂ.42.70 ಲಕ್ಷಗಳ ಅಂದಾಜು ವೆಚ್ಚದಲ್ಲಿ ಯಾತ್ರಿನಿವಾಸ ನಿರ್ಮಾಣ ಕಾಮಗಾರಿ ಕೈಗೊಳ್ಳಲು ಕ್ರಮವಹಿಸಲಾಗಿದೆ. ಕಾಮಗಾರಿ ಪೂರ್ಣಗೊಂಡಿರುತ್ತದೆ (2015–16) ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಸಮಿತಿಯು ಒಪ್ಪಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಲಾಯಿತು. |
| 25 | 4872<br>ಚು.ಗು.ಪ್ರ. 216<br>ಶ್ರೀ ಸಂದೇಶ್ ನಾಗರಾಜ್<br>ವಿಪನದಿ:27.06.2014 | ಮಂಡ್ಯ ಜಿಲ್ಲೆಯ ಶಿಂಷಾ ಜಲಪಾತದಲ್ಲಿ (ಗಗನ ಚುಕ್ಕಿ, ಭರಚುಕ್ಕಿ) ಈಜು ಬರದೆ ಇರುವ ಅನೇಕ | ಶಿಂಷಾ ಬಗ್ಗೆ ಪ್ರಸ್ತಾಪ ಮಾಡಿದಂತ ಘಟನೆಗಳು ರಾಜ್ಯದಲ್ಲಿ ಹಲವಾರು ಕಡೆಗಳಲ್ಲಿ ಆಗುತ್ತಿದೆ. ಹಾಗಾಗಿ ಗ್ರೀನ್ ಪೊಲೀಸ್ ಕಾನ್ಸೆಪ್ಟ್ ತರಬೇಕೆಂದು ಪ್ರಯತ್ನ | ದಿನಾಂಕ: 27.6.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು, ಮಂಡ್ಯ ಜಿಲ್ಲೆಯ ಪ್ರವಾಸಿ ತಾಣಗಳಲ್ಲಿ ಎಚ್ಚರಿಕೆ ಫಲಕಗಳು, ಬ್ಯಾರಿಕೇಡ್ ನಿರ್ಮಾಣ, ವೀಕ್ಷಣಾ ಗೋಪುರ, ಸರ್ಚ್ ಲೈಟ್, ಜೀವರಕ್ಷಕ ಜಾಕೆಟ್ |

| | | | | |
|---|---|---|---|---|
| | | ಜನರು ಪ್ರಾಣ ಕಳೆದುಕೊಳ್ಳುತ್ತಿದ್ದು, ಇದನ್ನು ತಡೆಗಟ್ಟುವ ಸಲುವಾಗಿ ಪೊಲೀಸ್ ಅಥವಾ ಹೋಮ್‌ಗಾರ್ಡ್ಸ್‌ಗಳನ್ನು ಹಾಕುವುದರ ಜೊತೆಗೆ ಕನ್ನಡ, ಇಂಗ್ಲಿಷ್, ಹಿಂದಿ ಮತ್ತು ತಮಿಳು ಭಾಷೆಗಳ ಫಲಕಗಳನ್ನು ಹಾಕಿ ಈಜು ಬರವವರನ್ನು ಸ್ಥಳದಲ್ಲಿ ಇರುವಂತೆ ಮಾಡಿ ಅನಾಹುತಗಳನ್ನು ತಪ್ಪಿಸುವ ಬಗ್ಗೆ. | ಮಾಡುತ್ತಿದ್ದೇವೆ. ಹೋಮ್ ಗಾರ್ಡ್ಸ್‌ಗಳನ್ನು round the years spare ಮಾಡುವುದಕ್ಕೆ ಸಾಧ್ಯವಿಲ್ಲ ಎಂದು ಪೊಲೀಸ್ ಇಲಾಖೆ ಜೊತೆ ಚರ್ಚೆ ಮಾಡಿ ತಿಳಿದು ಬಂದ ನಂತರ ಖಾಸಗಿ ಏಜೆನ್ಸಿಯವರೊಡನೆ ಅವಶ್ಯಕತೆ ಇರುವಲ್ಲಿ ಸೆಕ್ಯೂರಿಟಿ ತೆಗೆದುಕೊಳ್ಳಬಹುದೆಂದು ಜಿಲ್ಲಾಧಿಕಾರಿಗಳಿಗೆ ಕಳುಹಿಸಲಾಗಿದೆ. ಮಾನ್ಯ ಸದಸ್ಯರ ಸಲಹೆಗಳನ್ನು ಗಮನದಲ್ಲಿಟ್ಟುಕೊಂಡು ಇವುಗಳೆಲ್ಲವನ್ನು ಅನುಷ್ಠಾನಕ್ಕೆ ತರಲು ಎಲ್ಲಾ ರೀತಿಯ ಪ್ರಯತ್ನವನ್ನು ಸರ್ಕಾರ ಮಾಡುತ್ತದೆ ಎಂದು ಭರವಸೆ ಕೊಡುತ್ತೇನೆ ಎಂದು ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರು ತಿಳಿಸಿದರು. | ಮುಂತಾದವುಗಳನ್ನು ರೂ.45.25 ಲಕ್ಷಗಳ ಅಂದಾಜು ವೆಚ್ಚದಲ್ಲಿ ಒದಗಿಸಲು ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು, ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿ, ಮಂಡ್ಯ ರವರಿಗೆ ಪೂರ್ಣ ಅನುದಾನವನ್ನು ಬಿಡುಗಡೆ ಮಾಡಲಾಗಿದೆ.<br><br>ಮಂಡ್ಯ ಜಿಲ್ಲೆಯಲ್ಲಿರುವ ಬಲಮುರಿ ಫಾಲ್ಸ್ ಪ್ರದೇಶದಲ್ಲಿ ಪ್ರವಾಸಿಗರ ಜೀವರಕ್ಷಣೆಯ HD-Floating Platform ಹಿತದೃಷ್ಟಿಯಿಂದ ಹಾಗೂ ಕಾವೇರಿ ನದಿ ತೀರದಲ್ಲಿ ಬರುವ ಪ್ರವಾಸಿ ತಾಣಗಳಾದ ಬಲಮುರಿ, ಎಡಮುರಿ, ಪಶ್ಚಿಮ ವಾಹಿನಿ, ಗೋಸಾಯಿ ಘಾಟ್, ನಿಮಿಷಾಂಬ, ಕರಿಘಟ್ಟ ಹಾಗೂ ಸಂಗಮ ಪ್ರದೇಶಗಳಲ್ಲಿ ಪ್ರವಾಸಿಗರ ಸುರಕ್ಷತೆ ದೃಷ್ಟಿಯಿಂದ ಎಚ್ಚರಿಕೆ ಫಲಕಗಳನ್ನು ಅಳವಡಿಸಲು ಜಿಲ್ಲಾಡಳಿತವು ಕ್ರಮ ವಹಿಸಿರುತ್ತದೆ.<br><br>ಮಂಡ್ಯ ಜಿಲ್ಲೆಯ ಪ್ರಮುಖ ಪ್ರವಾಸಿ ತಾಣಗಳಲ್ಲಿ ಪ್ರವಾಸಿಗರ ರಕ್ಷಣೆ ಹಾಗೂ ಸುರಕ್ಷತೆಯ ದೃಷ್ಟಿಯಿಂದ 20 ಹೋಮ್‌ಗಾರ್ಡ್ ಸಿಬ್ಬಂದಿಗೆ ಪ್ರವಾಸಿ ಮಿತ್ರ ತರಬೇತಿ ನೀಡಿ ಕರ್ತವ್ಯಕ್ಕೆ ನಿಯೋಜಿಸಲಾಗಿರುತ್ತದೆ (ಕೆ.ಆರ್.ಎಸ್–4, ಶ್ರೀರಂಗಪಟ್ಟಣ–4, ರಂಗನತಿಟ್ಟು–3, ಶಿವನಸಮುದ್ರ–3, ಸಂಗಮ–2, ಬಲಮುರಿ ಫಾಲ್ಸ್–1, ಕೊಕ್ಕರೆ ಬೆಳ್ಳೂರು–1, ಮುತ್ತತ್ತಿ–1, ಮೇಲುಕೋಟೆ–1) ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಸಮಿತಿಯು ಒಪ್ಪಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಲಾಯಿತು. |

| | | | | |
|---|---|---|---|---|
| 26 | 4873<br>ಚು.ಗು.ಪ್ರ. 296<br>ಶ್ರೀ ಆಚಾರ್ ಹಾಲಪ್ಪ ಬಸಪ್ಪ<br>ವಿಪನದಿ:27.06.2014 | ಕೊಪ್ಪಳ ಜಿಲ್ಲೆಯಲ್ಲಿ ಪ್ರವಾಸೋದ್ಯಮ ಇಲಾಖೆಯಲ್ಲಿ ವಿವಿಧ ಯೋಜನೆಗಳಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡುವುದರಲ್ಲಿ ವಿಳಂಬವಾಗುತ್ತಿರುವ ಬಗ್ಗೆ. | 2013–14ನೇ ಸಾಲಿನ ಅಪ್ಲಿಕೇಷನ್‌ಗಳನ್ನು ಪ್ರೊಸೆಸ್ ಮಾಡಲಾಗುತ್ತಿದೆ. ಅದನ್ನು ಆದಷ್ಟು ಬೇಗನೆ ಅಲೋಕೆಷನ್ ಮಾಡಲಾಗುವುದು. ಅಷ್ಟೆ ಅಲ್ಲದೆ ಕಳೆದ ವರ್ಷದಿಂದ 2012–13ನೇ ಸಾಲಿನವರೆಗೆ ಕೇವಲ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಮಾತ್ರ ಟ್ಯಾಕ್ಸಿ ಸಾಲ ಮತ್ತು ಸಬ್ಸಿಡಿಯನ್ನು ಕೊಡುವಂತಹ ವ್ಯವಸ್ಥೆ ಇತ್ತು. ಈಗ 2013–14ನೇ ಸಾಲಿನಿಂದ ಹಿಂದುಳಿದ ಜನರಿಗೆ ಮತ್ತು ಅಲ್ಪಸಂಖ್ಯಾತರರಿಗೂ ಸಹಾ ಈ ಒಂದು ಯೋಜನೆಯನ್ನು ವಿಸ್ತರಣೆ ಮಾಡಿದ್ದೇವೆ. ಇದರಿಂದ ಆ ಜನಾಂಗದ ನಿರುದ್ಯೋಗಿಗಳಿಗೂ ಕೂಡ ಅನುಕೂಲವಾಗುತ್ತದೆ. ಆದ್ದರಿಂದ, ಈ ಕಾರ್ಯಕ್ರಮವನ್ನು ಬಹಳ ನಿಷ್ಠೆಯಿಂದ ಅನುಷ್ಠಾನಗೊಳಿಸುವುದಕ್ಕೆ ನಾವು ಪ್ರಯತ್ನ ಮಾಡುತ್ತಿದ್ದೇವೆ. ಅದು ಕೊಪ್ಪಳದಲ್ಲಿ ಏನು ವಿಳಂಬವಾಗಿದೆ ಅದನ್ನು ಸರಿಪಡಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ ಎಂದು ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರು ತಿಳಿಸಿದರು. | ದಿನಾಂಕ: 27.6.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು, 2013–14ನೇ ಸಾಲಿನಿಂದ 2018–19ನೇ ಸಾಲಿನವರೆಗೆ ಒಟ್ಟು 336 ಪ್ರವಾಸಿ ಟ್ಯಾಕ್ಸಿಗಳನ್ನು ವಿತರಿಸಲು ಹಂಚಿಕೆ ಮಾಡಲಾಗಿದ್ದು, ಈ ಪೈಕಿ 299 ಪ್ರವಾಸಿ ಟ್ಯಾಕ್ಸಿಗಳನ್ನು ವಿತರಿಸಲಾಗಿದೆ. ಬಾಕಿ ಇರುವ 37 ಟ್ಯಾಕ್ಸಿಗಳನ್ನು ಜರೂರಾಗಿ ವಿತರಿಸಲು ಕ್ರಮ ವಹಿಸಲಾಗುವುದ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಸಮಿತಿಯು ಒಪ್ಪಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಲಾಯಿತು. |
| 27 | 4875<br>ಚು.ರ.ಪ್ರ. 226<br>ಶ್ರೀ ಆರ್.ಕೆ. ಸಿದ್ದರಾಮಣ್ಣ<br>ವಿಪನದಿ:27.06.2014 | ಶಿವಮೊಗ್ಗ ಜಿಲ್ಲೆ, ಹೊಸನಗರ ತಾಲ್ಲೂಕು, ಕೋಡೂರು ಜೇನುಕಲ್ಲಮ್ಮ ದೇವಸ್ಥಾನದ ಯೋಜನೆಯನ್ನು 2014–15ನೇ ಸಾಲಿನಲ್ಲಿ ಕೈಗೆತ್ತಿಕೊಳ್ಳುವ ಬಗ್ಗೆ. | ಅನುದಾನ ಲಭ್ಯತೆ ಹಾಗೂ ಸ್ಥಳದ ಅಗತ್ಯಕ್ಕನುಗುಣವಾಗಿ ಈ ಯೋಜನೆಯನ್ನು ಕೈಗೆತ್ತಿಕೊಳ್ಳಲು ಪರಿಶೀಲಿಸಲಾಗುವುದು ಎಂದು ಪ್ರವಾಸೋದ್ಯಮ ಸಚಿವರು ತಿಳಿಸಿದರು. | ದಿನಾಂಕ: 27.6.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು, ಶಿವಮೊಗ್ಗ ಜಿಲ್ಲೆ ಹೊಸನಗರ ತಾಲ್ಲೂಕು, ಕೋಡೂರು ಜೇನುಕಲ್ಲಮ್ಮ ದೇವಸ್ಥಾನದ ಬಳಿ ರೂ.60.00 ಲಕ್ಷಗಳ ಅಂದಾಜು ಮೊತ್ತದಲ್ಲಿ ಯಾತ್ರಿನಿವಾಸ ನಿರ್ಮಾಣ ಕಾಮಗಾರಿಯನ್ನು ಕೈಗೊಳ್ಳಲು 2014–15ನೇ ಸಾಲಿನಲ್ಲಿ ಮಂಜೂರಾತಿ ನೀಡಲಾಗಿದೆ ಹಾಗೂ ಕಾಮಗಾರಿ |

| | | | | |
|---|---|---|---|---|
| | | | | ಪ್ರಾರಂಭಿಸಲು ಮೊದಲ ಕಂತಾಗಿ ರೂ.25.00 ಲಕ್ಷಗಳನ್ನು ವ್ಯವಸ್ಥಾಪಕ ನಿರ್ದೇಶಕರು, ಕೆ.ಆರ್.ಐ.ಡಿ.ಎಲ್. ಬೆಂಗಳೂರು ರವರಿಗೆ ಅನುದಾನ ಬಿಡುಗಡೆ ಮಾಡಲಾಗಿದೆ. ಈ ದೇವಾಲಯವು ಅರಣ್ಯ ಪ್ರದೇಶದಲ್ಲಿರುತ್ತದೆ. ಹೀಗಾಗಿ ಯಾತ್ರಿನಿವಾಸ ನಿರ್ಮಿಸಲು ಸೂಕ್ತ ನಿವೇಶನವು ಈವರೆಗೂ ದೊರಕಿರುವುದಿಲ್ಲ. ಆದುದರಿಂದ ಈ ಕಾಮಗಾರಿಯನ್ನು ದಿನಾಂಕ:17.2.2018ರಂದು ಹೊರಡಿಸಿರುವ ಸರ್ಕಾರದ ಆದೇಶದಲ್ಲಿ ರದ್ದುಪಡಿಸ ಲಾಗಿದೆಯೆಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಸಮಿತಿಯು ಒಪ್ಪಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಲಾಯಿತು. |
| 28 | 4876<br>ಚು.ಗು.ಪ್ರ 415<br>ಶ್ರೀ ಟಿ.ಜಾನ್<br>ವಿಪನದಿ; 06.02.2015 | ಮಡಿಕೇರಿಯ ಪ್ರಸಿದ್ದ ಪ್ರವಾಸಿ ತಾಣವಾದ ರಾಜಾಸೀಟ್‌ನ್ನು ಸಮಗ್ರವಾಗಿ ಅಭಿವೃದ್ಧಿ ಪಡಿಸುವ ಬಗ್ಗೆ. | ರಾಜ್‌ಸೀಟ್ ಎನ್ನುವ ಪ್ರವಾಸಿ ತಾಣಕ್ಕೆ ಬೇಕಾಗಿರುವಂಥ 4.55.00.000ರೂ ಗಳ ಪ್ರಸ್ತಾವನೆಯನ್ನು ಒಪ್ಪಿ ಸರ್ಕಾರ ಆದೇಶವನ್ನು ಮಾಡಿದೆ ಮಡಿಕೇರಿಯ ರಾಜಾಸೀಟ್‌ನ್ನು ಕೈಗೊಳ್ಳುತ್ತೇನೆ ಎಂದು ಮಾನ್ಯ ಉನ್ನತ ಶಿಕ್ಷಣ ಹಾಗೂ ಪ್ರವಾಸೋದ್ಯಮ ಸಚಿವರ ಪರವಾಗಿ ಸಭಾನಾಯಕರು ತಿಳಿಸಿದರು. | ದಿನಾಂಕ: 27.6.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು, ಮಡಿಕೇರಿಯಲ್ಲಿರುವ ಪ್ರಸಿದ್ಧ ಪ್ರವಾಸಿ ತಾಣವಾದ ರಾಜಾಸೀಟ್ ಪ್ರದೇಶದಲ್ಲಿ Hard Scape Work, Soft Scape Work, Soft Scape Irrigation, Electrification ಮುಂತಾದ ಕಾಮಗಾರಿಗಳನ್ನು ರೂ. 455.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಅಭಿವೃದ್ಧಿಪಡಿಸಲು ದಿ: 26.3.2017ರಂದು ಸರ್ಕಾರದ ಆದೇಶ ಹೊರಡಿಸಲಾಗಿದೆ. ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ ರವರು ಕಾಮಗಾರಿಯನ್ನು ಅನುಷ್ಠಾನಗೊಳಿಸಿರುತ್ತಾರೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಸಮಿತಿಯು ಒಪ್ಪಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಲಾಯಿತು. |

| | | | | |
|---|---|---|---|---|
| 29 | 5495<br>ಚು.ಗು.ಪ್ರ: 628<br>ಶ್ರೀ ವಿ.ಎಸ್. ಉಗ್ರಪ್ಪ<br>ವಿಪನದಿ: 12/12/2014 | ತುಮಕೂರು ಜಿಲ್ಲೆಯ ಪಾವಗಡ ತಾಲ್ಲೂಕಿನ ನಿಡಗಲ್ ಸಂಸ್ಥಾನವನ್ನು ಪ್ರವಾಸಿ ತಾಣವಾಗಿ ರೂಪಿಸಲು ಕೈಗೊಂಡಿರುವ ಕ್ರಮಗಳ ಬಗ್ಗೆ. | ಪಾವಗಡ ತಾಲ್ಲೂಕಿನ ನಿಡಗಲ್ ಬೆಟ್ಟದಲ್ಲಿ ರೂ.40.00 ಲಕ್ಷಗಳಲ್ಲಿ ಪ್ರವಾಸಿ ಸೌಲಭ್ಯಗಳನ್ನು ಅಭಿವೃದ್ಧಿಪಡಿಸುವ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ. ಅಂದಾಜು ಪಟ್ಟಿ ತಯಾರಿಸಿ ಹಣ ಬಿಡುಗಡೆ ಮಾಡಲು ಕ್ರಮ ವಹಿಸಲಾಗಿದೆ ಎಂದು ಮಾನ್ಯ ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರು ತಿಳಿಸಿದರು. | ದಿನಾಂಕ: 27.6.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು, ಪಾವಗಡ ತಾಲ್ಲೂಕಿನ ನಿಡಗಲ್ ಬೆಟ್ಟದಲ್ಲಿ ರೂ.40.00 ಲಕ್ಷಗಳಲ್ಲಿ ಪ್ರವಾಸಿ ಸೌಲಭ್ಯಗಳನ್ನು ಅಭಿವೃದ್ಧಿ ಪಡಿಸುವ ಕಾಮಗಾರಿಯನ್ನು ರೂ.40.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಕೈಗೊಂಡು ಪೂರ್ಣಗೊಳಿಸಲಾಗಿದೆ (2014–15) ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಸಮಿತಿಯು ಒಪ್ಪಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಲಾಯಿತು. |
| 30 | 5586<br>ಚು.ರ.ಪ್ರ: 2049<br>ಶ್ರೀ ರಾಮಚಂದ್ರಗೌಡ<br>ವಿಪನದಿ: 25/07/2014 | ಕೆಮ್ಮಣ್ಣುಗುಂಡಿ ಗಿರಿಧಾಮ ಪ್ರವಾಸಿ ಕೇಂದ್ರವನ್ನು ಪ್ರವಾಸೋದ್ಯಮ ಇಲಾಖೆಯ ವತಿಯಿಂದ ನೂತನವಾಗಿ ನವೀಕರಣಗೊಳಿಸಿದ್ದು, ಇದನ್ನು ಪ್ರವಾಸಿಗರ ಬಳಕೆಗೆ ಉಪಯೋಗಿಸದಿರುವ ಬಗ್ಗೆ | ಕೆಮ್ಮಣ್ಣುಗುಂಡಿ ಗಿರಿಧಾಮದಲ್ಲಿರುವ ವಸತಿ ಗೃಹಗಳ ಉನ್ನತೀಕರಣ ಕಾಮಗಾರಿಗಳು ಪೂರ್ಣಗೊಂಡಿದ್ದು, ಸದರಿ ವಸತಿ ಗೃಹಗಳನ್ನು ತೋಟಗಾರಿಕೆ ಇಲಾಖೆಗೆ ಹಸ್ತಾಂತರಿಸಲು ಕ್ರಮವಹಿಸಲಾಗುತ್ತಿದೆ. ಈ ಸೌಲಭ್ಯಗಳನ್ನು ಪ್ರವಾಸಿಗರ ಬಳಕೆಗೆ ಒದಗಿಸಲು ಜರೂರಾಗಿ ಕ್ರಮವಹಿಸಲಾಗುತ್ತಿದೆ ಎಂದು ಮಾನ್ಯ ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರು ತಿಳಿಸಿದರು. | ದಿನಾಂಕ: 27.6.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು, ಕೆಮ್ಮಣ್ಣುಗುಂಡಿ ಗಿರಿಧಾಮದಲ್ಲಿ ಕೈಗೊಂಡಿರುವ ಕಾಮಗಾರಿಗಳನ್ನು ಪೂರ್ಣಗೊಳಿಸಿ ಮುಂದಿನ ನಿರ್ವಹಣೆ ತೋಟಗಾರಿಕೆ ಇಲಾಖೆಗೆ ದಿ:26.07.2014 ಹಾಗೂ 22.11.2014ಗಳಂದು ಹಸ್ತಾಂತರಿಸಲಾಗಿರುತ್ತದೆ.<br><br>ಸದರಿ ಸೌಲಭ್ಯಗಳನ್ನು ತೋಟಗಾರಿಕೆ ಇಲಾಖೆಯು ನಿರ್ವಹಿಸಿ ಅವುಗಳನ್ನು ಪ್ರವಾಸಿಗರ ಉಪಯೋಗಕ್ಕಾಗಿ ಒದಗಿಸಿರುತ್ತದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಸಮಿತಿಯು ಒಪ್ಪಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಲಾಯಿತು. |
| 31 | 5587<br>ಚು.ಗು.ಪ್ರ:1374<br>ಶ್ರೀ ರಘುನಾಥರಾವ್ ಮಲ್ಕಾಪೂರೆ<br>ವಿಪನದಿ:19.12.2014 | ಬೀದರ್ ನಗರದಲ್ಲಿ ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದ ಅಧೀನದಲ್ಲಿರುವ ಹೋಟೆಲ್ ಮಯೂರ ಬರೀದ್‌ಷಾಹಿ ಹೋಟೆಲನ್ನು | ಕರಾರು ಒಪ್ಪಂದವನ್ನು ರದ್ದುಗೊಳಿಸುವ ಕುರಿತಾದ ಪ್ರಕ್ರಿಯೆಯನ್ನು ಪ್ರಾರಂಭಿಸಿದ್ದು, ನಿಯಮಾವಳಿಗಳ ಪ್ರಕಾರ ಎಲ್ಲಾ ರೀತಿಯ ಸೂಕ್ತ ಕ್ರಮವನ್ನು ಕೈಗೊಳ್ಳಲಾಗುವುದು ಎಂದು ಮಾನ್ಯ ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರು ತಿಳಿಸಿದರು. | ದಿನಾಂಕ: 27.6.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು, ಸದರಿ ಘಟಕದ ಗುತ್ತಿಗೆದಾರರು ಕರಾರನ್ನು ಉಲ್ಲಂಘಿಸಿರುವ ಬಗ್ಗೆ ದೂರುಗಳು ದಾಖಲಾದ ಹಿನ್ನಲೆಯಲ್ಲಿ ತಹಶೀಲ್ದಾರ್ ಇವರಿಂದ ವರದಿಯನ್ನು ಪಡೆದು, ಸದರಿ ವರದಿಯ ಆಧಾರದ ಮೇಲೆ ನಿಗಮವು ಗುತ್ತಿಗೆ ಕರಾರನ್ನು ರದ್ದುಗೊಳಿಸುವ ಆದೇಶವನ್ನು ಜಾರಿ ಮಾಡಿದ ಪರಿಣಾಮ |

| | | | | |
|---|---|---|---|---|
| | | ಖಾಸಗೀ ವ್ಯಕ್ತಿಗೆ ಗುತ್ತಿಗೆ ಆಧಾರದ ಮೇಲೆ ನೀಡಿರುವ ಬಗ್ಗೆ ಮತ್ತು ಗುತ್ತಿಗೆ ನಿಯಮಗಳನ್ನು ಉಲ್ಲಂಘಿಸಿರುವ ಬಗ್ಗೆ. | | ಗುತ್ತಿಗೆದಾರರು ನಿಗಮದ ಆದೇಶವನ್ನು ಪ್ರಶ್ನಿಸಿ, ಹೈಕೋರ್ಟ್ ಮಧ್ಯಸ್ಥಿಕೆ ಕೇಂದ್ರದಲ್ಲಿ AA 77/1018 ರಂತೆ ದಾವೆಯನ್ನು ಹೂಡಿದ್ದು, ಈ ದಾವೆಯಲ್ಲಿ ದಿನಾಂಕ: 14.02.2019ರಂದು ಹೈಕೋರ್ಟ್‌ನ ಮಧ್ಯಸ್ಥಿಕೆ ಕೇಂದ್ರವು ಅರ್ಜಿದಾರರ ಪರವಾಗಿ ತೀರ್ಪು ನೀಡಿದ್ದು, ಈ ತೀರ್ಪನ್ನು ಪ್ರಶ್ನಿಸಿ ಹೈಕೋರ್ಟ್‌ನಲ್ಲಿ ಮೇಲ್ಮನವಿಯನ್ನು ಸಲ್ಲಿಸಲು ಕ್ರಮ ಜರುಗಿಸಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಸಮಿತಿಯು ಒಪ್ಪಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಲಾಯಿತು. |

## ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

| ಕ್ರಮ ಸಂಖ್ಯೆ | ಆಶ್ವಾಸನೆ ಸಂಖ್ಯೆ ಆಧಾರ ಮತ್ತು ದಿನಾಂಕ | ವಿಷಯ | ಆಶ್ವಾಸನೆ | ತೆಗೆದುಕೊಂಡ ಕ್ರಮ |
|---|---|---|---|---|
| 1 | 3490<br>ಚು.ಗು.ಪ್ರ: 253<br>ಶ್ರೀ ಕೆ.ಸಿ. ಕೊಂಡಯ್ಯ<br>ವಿ.ಪ.ನ.ದಿ: 12-03-2010 | ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಯೋಜನೆಯ ಅಡಿಯಲ್ಲಿ ಬೇನಾಮಿ ಜಾಬ್‌ಕಾರ್ಡ್ ಸೃಷ್ಟಿಸುವುದರ ಮೂಲಕ ಭ್ರಷ್ಟಾಚಾರ ನಡೆದಿರುವ ಬಗ್ಗೆ | ಇದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಭ್ರಷ್ಟಾಚಾರವನ್ನು ತಡೆಗಟ್ಟಲು ನಿಯಮಿತವಾಗಿ ಯೋಜನೆಯ ಅನುಷ್ಠಾನವನ್ನು ಪರಿವೀಕ್ಷಣೆಯನ್ನು ಶೇಕಡಾ 2ರಷ್ಟು ರಾಜ್ಯದ ವತಿಯಿಂದ, ಶೇಕಡಾ 10ರಷ್ಟು ಜಿಲ್ಲಾ ಪಂಚಾಯತಿಯಿಂದ ಮತ್ತು ಶೇಕಡಾ 100ರಷ್ಟು ತಾಲ್ಲೂಕು ಪಂಚಾಯತಿಗಳಿಂದ ಮಾಡಲಾಗುತ್ತಿದೆ. ಪರಿವೀಕ್ಷಣೆ ಮಾಡಿದ ಕೆಲವು ಪ್ರಕರಣಗಳಲ್ಲಿ ಸರ್ಕಾರವು ಕ್ರಿಮಿನಲ್ ಮೊಕದ್ದಮೆಗಳನ್ನು ಅಧಿಕಾರಿಗಳು/ನೌಕರರುಗಳ ವಿರುದ್ಧ ದಾಖಲಿಸಿದೆ ಎಂದು ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು ತಿಳಿಸಿದರು. | ದಿನಾಂಕ: 29.05.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯು ಕೇಂದ್ರ ಸರ್ಕಾರದ ಒಂದು ಮಹತ್ವಾಕಾಂಕ್ಷೆ ಯೋಜನೆಯಾಗಿರುತ್ತದೆ. ಈ ಯೋಜನೆಯಡಿ ಗ್ರಾಮ ಪಂಚಾಯಿತಿಗಳಲ್ಲಿ ಬೇನಾಮಿ ಉದ್ಯೋಗ ಚೀಟಿಗಳ ಸೃಜನೆ ಮತ್ತು ಅವ್ಯವಹಾರಗಳು/ಹಣ ದುರುಪಯೋಗ ಸೇರಿದಂತೆ ನಡೆದಿರುವ ಪ್ರಕರಣಗಳ ಬಗ್ಗೆ ಕೈಗೊಂಡಿರುವ ಕ್ರಮದ ಮಾಹಿತಿಯನ್ನು ದಿನಾಂಕ: 25.08.2013, 19.04.2014, 05.09.2014, 17.11.2014 ಮತ್ತು 30.5.2017ರಲ್ಲಿ ಈಗಾಗಲೇ ಭರವಸೆಗಳ ಸಮಿತಿಗೆ ಸಲ್ಲಿಸಿರುತ್ತಾರೆ.<br><br>ಇದಕ್ಕೆ ಸಂಬಂಧಿಸಿದಂತೆ ಹೆಚ್ಚುವರಿ/ಇತ್ತೀಚಿನ ಮಾಹಿತಿಯು ಈ ಕೆಳಕಂಡಂತೆ ಇರುತ್ತದೆ.<br>• ದೋಷಪೂರಿತ/ಬೋಗಸ್ ಉದ್ಯೋಗ ಚೀಟಿಗಳ ಪ್ರಕರಣಗಳು ಮತ್ತು ಅವ್ಯವಹಾರಗಳು/ಹಣ ದುರುಪಯೋಗ ಸೇರಿದಂತೆ ಈ ಯೋಜನೆಯಡಿಯಲ್ಲಿ ನಡೆದಿರುವಂತಹ ಅವ್ಯವಹಾರ ಪ್ರಕರಣಗಳಲ್ಲಿ ಸಾಬೀತಾದ 1451 ಪ್ರಕರಣಗಳಲ್ಲಿ ದುರುಪಯೋಗವಾಗಿರುವ ರೂ.2,37,96,085/-ಗಳ ಮೊತ್ತವನ್ನು ಸಂಬಂಧಪಟ್ಟವರಿಂದ ವಸೂಲಾತಿಯನ್ನು ಮಾಡಿ ಸರ್ಕಾರಕ್ಕೆ ಜಮೆ ಮಾಡಲಾಗಿದೆ. ಸಾಬೀತಾದ ಈ ಪ್ರಕರಣಗಳಲ್ಲಿ ಭಾಗಿಯಾದ ಸಂಬಂಧಪಟ್ಟ |

| | | | | |
|---|---|---|---|---|
| | | | | ತಪ್ಪಿತಸ್ಥರ ವಿರುದ್ಧ ಸೂಕ್ತವಾದ ಶಿಸ್ತು ಕ್ರಮಗಳನ್ನು ಕೈಗೊಂಡಿದ್ದು, ಇದುವರೆವಿಗೂ 956 ಅಧಿಕಾರಿ/ನೌಕರರ ವಿರುದ್ಧ ಇಲಾಖೆ ವಿಚಾರಣೆ ಕೈಗೊಂಡಿರುವುದು, 566 ಅಧಿಕಾರಿ/ನೌಕರರನ್ನು ಅಮಾನತ್ತುಪಡಿಸಿರುವುದು, 294 ಅಧಿಕಾರಿ/ನೌಕರರ ಮತ್ತು 149 ಅಧಿಕಾರೇತರರ ಮೇಲೆ (ಒಟ್ಟು 443) ಕ್ರಿಮಿನಲ್ ಮೊಕದ್ದಮೆಗಳನ್ನು ದಾಖಲಿಸಿರುವಂತಹ ಶಿಸ್ತು ಕ್ರಮಗಳನ್ನು ಕೈಗೊಳ್ಳಲಾಗಿದೆ. 726 ಪ್ರಕರಣಗಳಲ್ಲಿ ದಂಡ ವಸೂಲಾತಿ ಮಾಡಲಾಗಿರುತ್ತದೆ.<br>• ಈ ಯೋಜನೆಯ ಅನುಷ್ಠಾನದಲ್ಲಿ ಭ್ರಷ್ಟಾಚಾರ/ಅವ್ಯವಹಾರ ಕುರಿತಂತೆ ಸ್ವೀಕರಿಸಲಾದ ದೂರುಗಳನ್ನು ಕರ್ನಾಟಕ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ (ಕುಂದುಕೊರತೆ ನಿವಾರಣೆ) ನಿಯಮಗಳು-2009ರನ್ವಯ ಇತ್ಯರ್ಥಗೊಳಿಸ ಲಾಗುತ್ತಿದೆ. ಈ ಯೋಜನೆಯ ಸೌಲಭ್ಯಗಳ ಮಾಹಿತಿ ಪಡೆಯುವ ಬಗ್ಗೆ, ಉದ್ಯೋಗ ಚೀಟಿ, ಉದ್ಯೋಗ ಬೇಡಿಕೆ ಸೇರಿದಂತೆ ಕುಂದುಕೊರತೆಯ ದೂರುಗಳನ್ನು ದಾಖಲಿಸಲು ಅನುವಾಗುವಂತೆ ಸಾರ್ವಜನಿಕರು ಉಚಿತ ಸಹಾಯವಾಣಿ (1800 425 8666) ಮೂಲಕ ಪಡೆದುಕೊಳ್ಳಲು ದಿನಾಂಕ: 25.02.2013ರಂದು ಕಾಲ್ ಸೆಂಟರ್‌ನ್ನು ಪ್ರಾರಂಭಿಸಲಾಗಿರುತ್ತದೆ. ಅದರಂತೆ ಇದುವರೆವಿಗೂ ಕಾಲ್‌ಸೆಂಟರ್‌ಗೆ ಸ್ವೀಕೃತವಾಗಿದ್ದ 1,77,323 ಪ್ರಕರಣಗಳ ಪೈಕಿ 1,67,080 ಪ್ರಕರಣಗಳನ್ನು ಇತ್ಯರ್ಥ ಪಡಿಸಲಾಗಿದೆ.<br>• ಯೋಜನೆಯ ಬಗ್ಗೆ ಸಾಮೂಹಿಕ ತಿಳುವಳಿಕೆಗೆ ಪ್ರೋತ್ಸಾಹ ನೀಡುವ ಪಾರದರ್ಶಕತೆಗಾಗಿ ಗ್ರಾಮ ಸಭೆಗಳ ಮುಖಾಂತರ ಸಾಮಾಜಿಕ ಪರಿಶೋಧನೆಯನ್ನು ಕೈಗೊಳ್ಳಲಾಗುತ್ತಿದ್ದು, ರಾಜ್ಯಮಟ್ಟದಲ್ಲಿ ಪ್ರತ್ಯೇಕವಾದ ಸಾಮಾಜಿಕ |

| | | | | |
|---|---|---|---|---|
| | | | | ಪರಿಶೋಧನೆ ನಿರ್ದೇಶನಾಲಯವನ್ನು ಸ್ಥಾಪಿಸಲಾಗಿದೆ. ಈ ಯೋಜನೆಯ ಮಾರ್ಗಸೂಚಿಗಳನ್ವಯ ಪ್ರತಿ ಗ್ರಾಮ ಪಂಚಾಯಿತಿಯಲ್ಲಿ ವರ್ಷಕ್ಕೆ 2 ಬಾರಿ ಸಾಮಾಜಿಕ ಪರಿಶೋಧನೆಯನ್ನು ಕೈಗೊಳ್ಳಲಾಗಿದೆ. ಸಾಮಾಜಿಕ ಪರಿಶೋಧನಾ ವರದಿಗಳನ್ವಯ ಸೂಕ್ತ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.<br>• ಯೋಜನೆಯಡಿ ಜಿಲ್ಲಾ ಮಟ್ಟದಲ್ಲಿ ಸ್ವೀಕರಿಸಲಾಗುವ ದೂರುಗಳನ್ನು ಪರಿಗಣಿಸಿ, ವಿಲೇಗೊಳಿಸಲು ಜಿಲ್ಲೆಗಳಲ್ಲಿ ಓಂಬುಡ್ಸ್‌ಮನ್‌ಗಳನ್ನು ನೇಮಿಸಲಾಗಿರುತ್ತದೆ. ದಾಖಲಾಗಿದ್ದ 6397 ದೂರುಗಳ ಪ್ರಕರಣಗಳ ಪೈಕಿ ಇದುವರೆವಿಗೂ 5552 ಪ್ರಕರಣಗಳನ್ನು ವಿಲೇವಾರಿಗೊಳಿಸಿದ್ದು, ಓಂಬುಡ್ಸ್‌ಮನ್ ವರದಿಗಳನ್ವಯ ಸೂಕ್ತ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.<br>• ಯೋಜನೆಯಡಿ ಕೈಗೊಂಡ ಕಾಮಗಾರಿಗಳ ಗುಣಮಟ್ಟದ ಪರಿಶೀಲನೆ ಕೈಗೊಳ್ಳುವ ಸಲುವಾಗಿ ನಿವೃತ್ತ ಮುಖ್ಯ ಇಂಜನಿಯರ್/ಕಾರ್ಯಪಾಲಕ ಇಂಜನಿಯರ್ಸ್‌ಗಳನ್ನು ಅನುಕ್ರಮವಾಗಿ ರಾಜ್ಯ ಗುಣಮಟ್ಟ ನಿಯಂತ್ರಣ ಮಾನೀಟರ್ಸ್ ಮತ್ತು ಜಿಲ್ಲಾ ಗುಣಮಟ್ಟ ನಿಯಂತ್ರಣ ಮಾನಿಟರ್ಸ್‌ಗಳನ್ನಾಗಿ ನೇಮಕ ಮಾಡಿಕೊಂಡು ಅವರ ಸೇವೆಯನ್ನು ಬಳಸಿಕೊಳ್ಳಲಾಗುತ್ತಿದೆ. ಇದುವರೆವಿಗೂ 1447 ಗ್ರಾಮ ಪಂಚಾಯಿತಿಗಳಲ್ಲಿ ರಾಜ್ಯ/ಜಿಲ್ಲಾ ಗುಣ ನಿಯಂತ್ರಣ ಮಾನಿಟರ್‌ಗಳು ಪರಿವೀಕ್ಷಣೆ ಮಾಡಿದ್ದು, 13,384 ಕಾಮಗಾರಿಗಳನ್ನು ಪರಿಶೀಲಿಸಿರುತ್ತಾರೆ. ಸದರಿ ವರದಿಗಳನ್ವಯ ನಿಯಮಾನುಸಾರ ಸೂಕ್ತ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.<br>ಮೇಲ್ಕಂಡಂತೆ ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಸಮಿತಿಯು ಒಪ್ಪಿ ಭರವಸೆಯನ್ನು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |

<table>
<tr>
<td>2</td>
<td>3635<br>ಚು.ಗು.ಪ್ರ: 316<br>ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ<br>ವಿ.ಪ.ನ.ದಿ: 09-07-2010</td>
<td>ಕಳೆದ 02 ವರ್ಷದ ಅವಧಿಯಲ್ಲಿ ಉಡುಪಿ ಜಿಲ್ಲೆಯಲ್ಲಿ ಪಂಚಾಯತ್‌ರಾಜ್ ಇಲಾಖೆಯಲ್ಲಿ ಕರ್ತವ್ಯ ಲೋಪ, ಅವ್ಯವಹಾರ ಹಾಗೂ ಕ್ರಿಮಿನಲ್ ಆರೋಪಗಳನ್ನು ಎದುರಿಸುತ್ತಿರುವ ಸಿಬ್ಬಂದಿಗಳ ಮೇಲೆ ಶಿಸ್ತು ಕ್ರಮ ಕೈಗೊಳ್ಳುವ ಬಗ್ಗೆ.</td>
<td>ಒಟ್ಟು 20 ಜನರ ಮೇಲೆ ವಿಚಾರಣೆ ನಡೆಯುತ್ತಿದೆ. ವಿಚಾರಣೆಯನ್ನು ಶೀಘ್ರವಾಗಿ ಮಾಡುವ ಪ್ರಯತ್ನವನ್ನು ನಾವು ಮಾಡುತ್ತಿದ್ದೇವೆ. ತಪ್ಪು ಮಾಡಿರುವವರ ವಿರುದ್ಧ ಕ್ರಮ ತೆಗೆದುಕೊಳ್ಳುತ್ತೇವೆ. ಇದಕ್ಕೆ ಹಿಂದೇಟು ಹಾಕುವುದಿಲ್ಲ ಎಂದು ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಹಾಗೂ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಸಚಿವರು ತಿಳಿಸಿದರು.</td>
<td>ದಿನಾಂಕ: 29.05.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ಈ ಸಂಬಂಧ ಇಲಾಖಾ ವಿಚಾರಣೆಗಳನ್ನು ನಡೆಸಲಾಗಿದ್ದು, ಎಲ್ಲಾ ಪ್ರಕರಣಗಳು ಮುಕ್ತಾಯಗೊಂಡಿರುತ್ತವೆ. ಮುಕ್ತಾಯ ಗೊಂಡಿರುವ ಎಲ್ಲಾ ಪ್ರಕರಣಗಳಲ್ಲಿ ಸಂಬಂಧಪಟ್ಟ ತಪ್ಪಿತಸ್ಥರ ಸಿಬ್ಬಂದಿಗಳಿಗೆ ದಂಡನೆಗಳನ್ನು ವಿಧಿಸಿ ಆದೇಶಗಳನ್ನು ಹೊರಡಿಸಲಾಗಿರುತ್ತದೆ. ಇದರ ಜೊತೆಗೆ 3 ಸಿಬ್ಬಂದಿಗಳ ವಿರುಧ್ಧ ಕ್ರಿಮಿನಲ್ ಮೊಕದ್ದಮೆಗಳನ್ನು ಹೂಡಲಾಗಿದ್ದು, 1 ಪ್ರಕರಣದಲ್ಲಿನ ಕ್ರಿಮಿನಲ್ ಮೊಕದ್ದಮೆ ಪ್ರಕರಣವು ಮಾನ್ಯ ಉಚ್ಚ ನ್ಯಾಯಾಲಯದಿಂದ ರದ್ದಾಗಿದ್ದು, ಎರಡು ಪ್ರಕರಣಗಳಲ್ಲಿ ವಿಚಾರಣೆ ನ್ಯಾಯಾಲಯದ ಹಂತದಲ್ಲಿರುತ್ತದೆ. ಮೂರು ಪ್ರಕರಣಗಳಲ್ಲಿ ದುರುಪಯೋಗ ಪಡಿಸಿಕೊಂಡಿರುವ ಮೊತ್ತವನ್ನು ವಸೂಲಿ ಮಾಡುವ ಪ್ರಕ್ರಿಯೆ ಪ್ರಗತಿಯಲ್ಲಿದೆಯೆಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿದ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು.</td>
</tr>
<tr>
<td>3</td>
<td>4178<br>ಚು.ಗು.ಪ್ರ: 22<br>ಶ್ರೀಕೆ. ಮೋನಪ್ಪ ಭಂಡಾರಿ<br>ವಿ.ಪ.ನ.ದಿ: 05-12-2012</td>
<td>ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯಲ್ಲಿ ಪ್ರಸ್ತುತ ಖಾಲಿ ಇರುವ ವಿವಿಧ ದರ್ಜೆಯ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ.</td>
<td>ಇಲಾಖೆಯಲ್ಲಿ ಪ್ರಸ್ತುತ 8878 ವಿವಿಧ ದರ್ಜೆಯ ಹುದ್ದೆಗಳು ಖಾಲಿ ಇದ್ದು, ಹುದ್ದೆಗಳನ್ನು ತುಂಬಲು ಕರ್ನಾಟಕ ಲೋಕಸೇವಾ ಆಯೋಗವನ್ನು ಈಗಾಗಲೇ ಕೋರಲಾಗಿದೆ. ಆಯೋಗವು ಅರ್ಹ ಅಭ್ಯರ್ಥಿಗಳ ಪಟ್ಟಿಯನ್ನು ಸಲ್ಲಿಸಿದ ನಂತರ ಖಾಲಿ ಹುದ್ದೆಗಳನ್ನು ನಿಯಮಾನುಸಾರ ಭರ್ತಿ ಮಾಡಲು ಕ್ರಮ ಕೈಗೊಳ್ಳ ಲಾಗುವುದೆಂದು ಮಾನ್ಯ ಉಪ ಮುಖ್ಯಮಂತ್ರಿಗಳು ತಿಳಿಸಿದರು.</td>
<td>ದಿನಾಂಕ: 29.05.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ,<br><br>ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ
<table>
<tr><th>ಕ್ರ. ಸಂ.</th><th>ಮಂಜೂರಾದ ಹುದ್ದೆ</th><th>ಭರ್ತಿ ಮಾಡಲಾದ ಹುದ್ದೆ</th><th>ಖಾಲಿ ಹುದ್ದೆ</th><th>ಖಾಲಿ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ</th></tr>
<tr><td>1</td><td>3051</td><td>2030</td><td>1021</td><td>2012ರಿಂದೀಚೆಗೆ 748, ಹುದ್ದೆಗಳನ್ನು ವಿಶೇಷ ನೇಮಕಾತಿ ಹಾಗೂ ಕರ್ನಾಟಕ ಲೋಕಸೇವಾ ಆಯೋಗದ ನೇರ</td></tr>
</table>
</td>
</tr>
</table>

| | | | | | | | | | |
|---|---|---|---|---|---|---|---|---|---|
| | | | | | | | | ನೇಮಕಾತಿ ಕೋಟಾದ ಹುದ್ದೆಗಳನ್ನು ಭರ್ತಿ ಮಾಡಲಾಗಿದೆ. ಉಳಿದ ಹುದ್ದೆಗಳನ್ನು ತುಂಬುವ ಬಗ್ಗೆ ಆರ್ಥಿಕ ಇಲಾಖೆಗೆ ಸಹಮತಿ ಕೋರಿ ಪ್ರಸ್ತಾವನೆ ಸಲ್ಲಿಸಲಾಗಿದೆ. ಅಲ್ಲದೇ ಟಿ.ಡಿ.ಬಿ. ಮತ್ತು ಡಿ.ಆರ್.ಡಿ.ಎಸ್. ನಲ್ಲಿ ನೇಮಕಾತಿ ಹೊಂದಿ ಜಿಲ್ಲಾ ಪಂಚಾಯತ್ ಯಲ್ಲಿ ಮುಂದು ವರೆದಿದ್ದ ನೌಕರರ ಪೈಕಿ 614 ನೌಕರರನ್ನು ಪಂಚಾಯತ್ ರಾಜ್ ಇಂಜನಿಯರಿಂಗ್ ಇಲಾಖೆಯಲ್ಲಿ ವಿಲೀನಗೊಳಿಸಲಾಗಿದೆ. | |
| | | | | ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ | | | | | |
| | | | | | 2820 | 1458 | 1362 | ವೃಂದ ಮತ್ತು ನೇಮಕಾತಿ ನಿಯಮಗಳನ್ನು ರಚಿಸುವ ಪ್ರಕ್ರಿಯೆ ಜಾರಿಯಲ್ಲಿದ್ದು, ಅಂತಿಮವಾದ ನಂತರ ಖಾಲಿ ಹುದ್ದೆಗಳನ್ನು | |

| | | | | |
|---|---|---|---|---|
| | | | | ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುವುದು |
| ಕರ್ನಾಟಕ ಗ್ರಾಮೀಣ ರಸ್ತೆ ಅಭಿವೃದ್ಧಿ ಸಂಸ್ಥೆ | | | | |
| 3 | 954 | 569 | 385 | ತಾತ್ಕಾಲಿಕ ಹುದ್ದೆಗಳು |
| ಅಭಿವೃದ್ಧಿ ಶಾಖೆ ಮತ್ತು ಸ್ಥಳೀಯ ಆಡಳಿತ | | | | |
| 4 | 286 | 165 | 121 | ಕರ್ನಾಟಕ ಲೋಕ ಸೇವಾ ಆಯೋಗದ ಮೂಲಕ 25 ನೇರ ನೇಮಕಾತಿ ಹುದ್ದೆಗಳನ್ನು ಭರ್ತಿ ಮಾಡಲಾಗಿದೆ |
| ಗ್ರಾಮ ಪಂಚಾಯತ್ ಶಾಖೆ | | | | |
| 5 | 14615 | 11735 | 2880 | ಕರ್ನಾಟಕ ಲೋಕ ಸೇವಾ ಆಯೋಗ/ ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಮೂಲಕ 4727 ನೇರ ನೇಮಕಾತಿ ಹುದ್ದೆಗಳನ್ನು ಭರ್ತಿ ಮಾಡಲಾಗಿದೆ |
| ಜಿಲ್ಲಾ ಪಂಚಾಯತ್ ಮತ್ತು ತಾಲ್ಲೂಕು ಪಂಚಾಯತ್ | | | | |
| 6 | 4550 | 2093 | 2457 | ವೃಂದ ಮತ್ತು ನೇಮಕಾತಿ ನಿಯಮಗಳನ್ನು |

<table>
<tr>
<td></td>
<td></td>
<td></td>
<td></td>
<td>
<table>
<tr><td></td><td></td><td></td><td></td><td>ರಚಿಸುವ ಪ್ರಕ್ರಿಯೆ ಜಾರಿಯಲ್ಲಿದ್ದು, ಅಂತಿಮವಾದ ನಂತರ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುವುದು</td></tr>
<tr><td>ಒಟ್ಟು</td><td>26,276</td><td>18.050</td><td>8,226</td><td></td></tr>
</table>
<br>
2012ರಿಂದ ಈಚೆಗೆ ಕರ್ನಾಟಕ ಲೋಕಸೇವಾ ಆಯೋಗ, ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಹಾಗೂ ವಿಶೇಷ ನೇಮಕಾತಿ ನಿಯಮಗಳ ಮೂಲಕ ಒಟ್ಟು 5500 ವಿವಿಧ ವೃಂದದ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲಾಗಿದೆ. ಉಳಿದ ಹುದ್ದೆಗಳನ್ನು ಹಂತಹಂತವಾಗಿ ಭರ್ತಿ ಮಾಡಲು ಕ್ರಮವಹಿಸಲಾಗುವುದೆಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿದ ಸಮಿತಿಯು ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. (ವಿವರಗಳನ್ನು ಅನುಬಂಧ-1ರಲ್ಲಿ ಲಗತ್ತಿಸಿದೆ)
</td>
</tr>
</table>

| | | | | |
|---|---|---|---|---|
| 4 | 4180<br>ನಿಯಮ 330 ರಡಿಯಲ್ಲಿ<br>ಶ್ರೀ ಕೋಟ ಶ್ರೀನಿವಾಸ ಪೂಜಾರಿ<br>ಮತ್ತು ಇತರರು<br>ವಿ.ಪ.ನ.ದಿ: 06-06-2013 | ಶಾಸನ ಬದ್ಧ ಸ್ಥಳೀಯ ಸಂಸ್ಥೆಗಳಾದ ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಮತ್ತು ಗ್ರಾಮ ಪಂಚಾಯಿತಿ ಪ್ರತಿನಿಧಿಗಳ ಗೌರವಧನ, ಶಾಸನಬದ್ಧ ಅನುದಾನ ಹಾಗೂ ಹಕ್ಕುಗಳ ರಕ್ಷಣೆ ಬಗ್ಗೆ. | ಸ್ಥಳೀಯ ಸಂಸ್ಥೆಗಳಾದ ಜಿಲ್ಲಾ ಪಂಚಾಯಿತಿ ತಾಲ್ಲೂಕು ಪಂಚಾಯಿತಿ, ಗ್ರಾಮ ಪಂಚಾಯಿತಿಯ ಪ್ರತಿನಿಧಿಗಳ ಗೌರವಧನವನ್ನು ಹೆಚ್ಚಿಸುವ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರಿಗೆ ಮತ್ತೊಮ್ಮೆ ಮನವರಿಕೆ ಮಾಡಿಕೊಟ್ಟು ಏನು ಹೆಚ್ಚಳವನ್ನು ಮಾಡಲು ಸಾಧ್ಯವೋ ಅದರ ಬಗ್ಗೆ ಪರಿಶೀಲನೆ ಮಾಡುತ್ತೇನೆ. ಗ್ರಾಮ ಪಂಚಾಯಿತಿಗಳು ಪಾವತಿಸಬೇಕಾದ ವಿದ್ಯುಚ್ಛಕ್ತಿ ಬಾಕಿಯ ಬಾರವನ್ನು ಪಂಚಾಯಿತಿಗಳಿಗೆ ಕಡಿಮೆ ಮಾಡುವುದಕ್ಕೆ ಮಾನ್ಯ ಮುಖ್ಯಮಂತ್ರಿಗಳ ಜತೆ ಚರ್ಚೆ ಮಾಡಿ, ಸಂಪುಟದ ಸಭೆಯ ಮುಂದೆ ವಿಚಾರ ತೆಗೆದುಕೊಂಡು ಹೋಗಿ ಮುಂದೆ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ಮಾಡುತ್ತೇನೆ. ಗ್ರಾಮ ಪಂಚಾಯಿತಿ ಅಧ್ಯಕ್ಷರು, ಉಪಾಧ್ಯಕ್ಷರು, ಸದಸ್ಯರುಗಳ ಗೌರವಧನ ಹೆಚ್ಚಿಸುವ ಬಗ್ಗೆ ಪರಿಶೀಲನೆ ಮಾಡುತ್ತೇನೆ. ಹಾಗೂ ಗ್ರಾಮ ಪಂಚಾಯಿತಿಗಳ ಗ್ರಂಥಾಲಯಗಳನ್ನು ಪುನಃ ಶಿಕ್ಷಣ ಇಲಾಖೆಯಿಂದ ಪಂಚಾಯಿತಿಗೆ ನೀಡಬೇಕೆನ್ನುವುದು ಎಲ್ಲರ ಅನುಭವ ಮತ್ತು ಅನಿಸಿಕೆ. ಈ ವಿಷಯದ ಬಗ್ಗೆ | ದಿನಾಂಕ: 29.05.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, 2014-15ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಘೋಷಿಸಿರುವಂತೆ ಪಂಚಾಯತ್‌ರಾಜ್ ಸಂಸ್ಥೆಗಳ ಚುನಾಯಿತ ಪ್ರತಿನಿಧಿಗಳಿಗೆ ಪ್ರಸ್ತುತ ನೀಡುತ್ತಿರುವ ಮಾಸಿಕ ಗೌರವಧನವನ್ನು ದಿನಾಂಕ: 01.04.2014ರಿಂದ ಅನ್ವಯಿಸುವಂತೆ ಇಮ್ಮಡಿಗೊಳಸಲು ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 75 ಜಿಪಸ 2014, ಬೆಂಗಳೂರು ದಿ: 06.12.2014ರಂದು ಮಂಜೂರಾತಿ ನೀಡಿ ಆದೇಶಿಸಿದೆ. ಪರಿಷ್ಕೃತ ಗೌರವಧನ ಕೆಳಕಂಡಂತಿದೆ :- |
| 5 | 5064<br>ಚು.ರ.ಪ್ರ.: 734<br>ಶ್ರೀ ಜಿ. ರಘು ಆಚಾರ್<br>ವಿ.ಪ.ನ.ದಿ: 04-07-2014 | ರಾಜ್ಯದಲ್ಲಿರುವ ಗ್ರಾಮ ಪಂಚಾಯಿತಿಗಳ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಸದಸ್ಯರಿಗೆ ನೀಡಲಾಗುತ್ತಿರುವ ಮಾಸಿಕ ಗೌರವಧನ ಏರಿಸುವ ಪ್ರಸ್ತಾವನೆ ಕುರಿತು. | | |
| 6 | 5072<br>ಚು.ರ.ಪ್ರ: 1192<br>ಶ್ರೀ ಬಿ. ರಾಮಕೃಷ್ಣ<br>ವಿ.ಪ.ನ.ದಿ: 11-07-2014 | ಜಿಲ್ಲಾ ಪಂಚಾಯತಿ/ತಾಲ್ಲೂಕು ಪಂಚಾಯತಿ/ಗ್ರಾಮ ಪಂಚಾಯತಿಯ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಸದಸ್ಯರುಗಳಿಗೆ ಹಾಲಿ ನೀಡುತ್ತಿರುವ ಗೌರವಧನ ಹೆಚ್ಚಿಸುವ ಬಗ್ಗೆ. | | |

| | | | | |
|---|---|---|---|---|
| | | | ಶಿಕ್ಷಣ ಸಚಿವರ ಜೊತೆಯಲ್ಲಿ ಚರ್ಚೆಯನ್ನು ಮಾಡಿ ಸೂಕ್ತವಾದ ಬದಲಾವಣೆಯನ್ನು ಸರ್ಕಾರ ಮಾಡುತ್ತದೆ ಎಂದು ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ತಿಳಿಸಿದರು.<br>ಮಾನ್ಯ ಮುಖ್ಯ ಮಂತ್ರಿಗಳ 2014-15ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ 298ರಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳ ಚುನಾಯಿತ ಪ್ರತಿನಿದಿ. ಗಳಿಗೆ ಗೌರವ ಧನವನ್ನು ಇಮ್ಮಡಿಗೊಳಿಸಲಾಗುವುದು ಎಂದು ತಿಳಿಸಿರುವುದರಿಂದ ರಾಜ್ಯದ ಮೂರು ಹಂತದ ಎಲ್ಲಾ ಸದಸ್ಯರುಗಳಿಗೂ ಗೌರವ ಧನವನ್ನು ಇಮ್ಮಡಿಗೊಳಿಸುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆ ಯಲ್ಲಿದೆ ಎಂದು ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ತಿಳಿಸಿದರು.<br>2014-15ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಮಾನ್ಯ ಮುಖ್ಯಮಂತ್ರಿಯವರು ಪಂಚಾಯತ್ ರಾಜ್ ಸಂಸ್ಥೆಗಳ ಸದಸ್ಯರುಗಳ ಗೌರವಧನವನ್ನು ಇಮ್ಮಡಿಗೊಳಿಸುವುದಾಗಿ ಘೋಷಿಸಿರುತ್ತಾರೆ. ಇದರ ಬಗ್ಗೆ | |

| | | | | |
|---|---|---|---|---|
| | | | ಶೀಘ್ರದಲ್ಲಿ ಕ್ರಮವಹಿಸಲಾಗುವುದು ಎಂದು ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ತಿಳಿಸಿದರು. | |

(ರೂ.ಗಳಲ್ಲಿ)

| ಕ್ರ. ಸಂ | ಪಂಚಾಯತ್‌ರಾಜ್ ಸಂಸ್ಥೆ ಹೆಸರು | ಈ ಹಿಂದೆ ನೀಡುತ್ತಿದ್ದ ಗೌರವಧನ | | | ಪ್ರಸಕ್ತ ಸಾಲಿನಲ್ಲಿ ಹೆಚ್ಚಿಸಿದ ಗೌರವಧನ | | |
|---|---|---|---|---|---|---|---|
| | | ಅಧ್ಯಕ್ಷರು | ಉಪಾಧ್ಯಕ್ಷರು | ಸದಸ್ಯರು | ಅಧ್ಯಕ್ಷರು | ಉಪಾಧ್ಯಕ್ಷರು | ಸದಸ್ಯರು |
| 1. | ಜಿಲ್ಲಾ ಪಂಚಾಯಿತಿ | 3000 | 2250 | 1500 | 6000 | 4500 | 3000 |
| 2 | ತಾಲ್ಲೂಕು ಪಂಚಾಯಿತಿ | 2250 | 1500 | 750 | 4500 | 3000 | 1500 |
| 3 | ಗ್ರಾಮ ಪಂಚಾಯತಿ | 500 | 300 | 250 | 1000 | 600 | 500 |

ಹಾಗೂ 2017-18ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಘೋಷಿಸಿರುವಂತೆ ಪಂಚಾಯತ್ ರಾಜ್ ಸಂಸ್ಥೆಗಳ ಚುನಾಯಿತ ಪ್ರತಿನಿಧಿಗಳಿಗೆ ಪ್ರಸ್ತುತ ನೀಡುತ್ತಿರುವ ಮಾಸಿಕ ಗೌರವ ಧನವನ್ನು ದಿ: 01.04.2017ರಿಂದ ಅನ್ವಯಿಸುವಂತೆ ಹೆಚ್ಚಿಸಲು ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 116 ಜಿಪಸ 2017, ಬೆಂಗಳೂರು. ದಿ: 03.05.2017ರಂದು ಮಂಜೂರಾತಿ ನೀಡಿ ಆದೇಶಿಸಿದೆ. ಪರಿಷ್ಕೃತ ಗೌರವ ಧನ ಈ ಕೆಳಕಂಡಂತಿದೆ :-

(ರೂ.ಗಳಲ್ಲಿ)

| ಕ್ರ. ಸಂ | ಪಂಚಾಯತ್‌ರಾಜ್ ಸಂಸ್ಥೆ ಹೆಸರು | ಈ ಹಿಂದೆ ನೀಡುತ್ತಿದ್ದ ಗೌರವಧನ | | | ಪ್ರಸಕ್ತ ನೀಡುತ್ತಿದ್ದ ಗೌರವಧನ | | |
|---|---|---|---|---|---|---|---|
| | | ಅಧ್ಯಕ್ಷರು | ಉಪಾಧ್ಯಕ್ಷರು | ಸದಸ್ಯರು | ಅಧ್ಯಕ್ಷರು | ಉಪಾಧ್ಯಕ್ಷರು | ಸದಸ್ಯರು |
| 1. | ಜಿಲ್ಲಾ ಪಂಚಾಯಿತಿ | 6000 | 4500 | 3000 | 35000 | 15000 | 5000 |
| 2 | ತಾಲ್ಲೂಕು ಪಂಚಾಯಿತಿ | 4500 | 3000 | 1500 | 6000 | 4000 | 3000 |
| 3 | ಗ್ರಾಮ ಪಂಚಾಯತಿ | 1000 | 600 | 500 | 3000 | 2000 | 1000 |

ಮೇಲ್ಕಂಡಂತೆ ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು.

| | | | | |
|---|---|---|---|---|
| 7 | 4633<br>ಚು.ಗು.ಪ್ರ: 499<br>ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ)<br>ವಿ.ಪ.ನ.ದಿ: 19-07-2013 | ಕಳೆದ ಮೂರು ವರ್ಷಗಳಲ್ಲಿ ತುರುವೇಕೆರೆ ತಾಲ್ಲೂಕಿನ ರಸ್ತೆ ಕಾಮಗಾರಿಗಳು ಕಳಪೆ ಯಾಗಿದ್ದರೂ ಗುತ್ತಿಗೆದಾರರಿಗೆ ಹಣ ಪಾವತಿ ಮಾಡಿರುವ ಬಗ್ಗೆ. | ಒಂದು ವೇಳೆ ಕಳಪೆ ಕೆಲಸ ಆಗಿದ್ದಲ್ಲಿ ಪಾವತಿಸಬೇಕಾದ ಬಿಲ್ಲನ್ನು ತಡೆಹಿಡಿಯುತ್ತೇನೆ ಎನ್ನುವ ಭರವಸೆಯನ್ನು ನಾವು ನೀಡುತ್ತೇವೆ ಎಂದು ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು ತಿಳಿಸಿದರು. | ದಿನಾಂಕ: 29.05.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ತುಮಕೂರು ಜಿಲ್ಲೆ ತುರುವೇಕೆರೆ ತಾಲ್ಲೂಕಿನ 2010-11 ರಿಂದ 2012-13ನೇ ಸಾಲಿನವರೆಗೆ ವಿವಿಧ ಯೋಜನೆಗಳಡಿ ರಸ್ತೆ ಅಭಿವೃದ್ಧಿ ಕಾಮಗಾರಿಗಳಿಗಾಗಿ ಒಟ್ಟು ರೂ. 395.06 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.<br><br>ಮೂರು ಹಂತದ ಗುಣಮಟ್ಟದ ಪರೀಕ್ಷೆ ಸ್ಟೇಟ್ ಕ್ವಾಲಿಟಿ ಮಾನಿಟರ್ ತಪಾಸಣೆ, 3ನೇ ಪಾರ್ಟಿ ಪರಿಶೀಲನೆಗೊಳಪಡಿಸಿ ಸಮರ್ಪಕ ಗುಣಮಟ್ಟ ಕಾಯ್ದುಕೊಂಡು ಪೂರ್ಣಗೊಂಡಿರುವ ಕಾಮಗಾರಿಗಳಿಗೆ ಮಾತ್ರ ಹಣ ಪಾವತಿಸಿರುವುದಾಗಿ ಹಾಗೂ ಯಾವುದೇ ಅವ್ಯವಹಾರ ಪ್ರಕರಣಗಳು ನಡೆದಿರುವುದಿಲ್ಲವೆಂದು ವರದಿಯಾಗಿದೆಯೆಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿದ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |
| 8 | 4634<br>ಚು.ಗು.ಪ್ರ: 173<br>ಶ್ರೀ ಇ. ಕೃಷ್ಣಪ್ಪ<br>ವಿ.ಪ.ನ.ದಿ: 19-07-2013 | ಗ್ರಾಮೀಣ ಪ್ರದೇಶದಲ್ಲಿ ಪ್ರತಿ ಗ್ರಾಮ ಪಂಚಾಯತ್ ಆಡಳಿತದಿಂದ ಅನುಮತಿ ಪಡೆದು ಟೆಲಿಕಮ್ಯೂನಿಕೇಷನ್ ಗೋಪುರಗಳ ನಿರ್ಮಾಣದ ಬಗ್ಗೆ. | ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ 199ಕ್ಕೆ ಸೂಕ್ತ ತಿದ್ದುಪಡಿ ಮಾಡುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿರುತ್ತದೆ ಎಂದು ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು ತಿಳಿಸಿದರು. | ದಿನಾಂಕ: 29.05.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993ಕ್ಕೆ 2015ರಲ್ಲಿ ತಿದ್ದುಪಡಿ ತಂದು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್‌ರಾಜ್ ಅಧಿನಿಯಮ 1993ರ ಪ್ರಕರಣ 199 ಮತ್ತು ಅನುಸೂಚಿ-IVರಂತೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗ್ರಾಮಗಳಲ್ಲಿ ಅಳವಡಿಸಿರುವ ಪ್ರತಿ ಮೊಬೈಲ್ ಟವರ್‌ಗಳಿಗೆ ವಾರ್ಷಿಕವಾಗಿ ರೂ.12.000/- ತೆರಿಗೆ ವಿಧಿಸಲು ಅವಕಾಶ ಕಲ್ಪಿಸಲಾಗಿದೆ. |

| | | | | |
|---|---|---|---|---|
| 9 | 5066<br>ಚು.ರ.ಪ್ರ.: 246<br>ಶ್ರೀ ಇ. ಕೃಷ್ಣಪ್ಪ<br>ವಿ.ಪ.ನ.ದಿ: 27-06-2014 | ಪ್ರತಿ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಟೆಲಿಕಮ್ಯೂನಿಕೇಷನ್ ಗೋಪುರಗಳ ನಿರ್ಮಾಣಕ್ಕೆ ಸ್ಥಳೀಯಾಡಳಿತ ಸಂಸ್ಥೆಗಳಿಂದ ಪರವಾನಗಿ ಪಡೆಯದೆ ಟೆಲಿಕಮ್ಯೂನಿಕೇಷನ್ ಗೋಪುರಗಳ ನಿರ್ಮಾಣದಿಂದ ಪಂಚಾಯತ್‌ರಾಜ್ ಹಕ್ಕಿಗೆ ಧಕ್ಕೆಯಾಗುತ್ತಿರುವ ಬಗ್ಗೆ. | ಮಾನ್ಯ ಉಚ್ಛ ನ್ಯಾಯಾಲಯದ ವಿಭಾಗೀಯ ಪೀಠವು ರಿಟ್ ಅಪೀಲ್ ಸಂ: 551-552/2011ರಲ್ಲಿ ದಿನಾಂಕ: 23-11-2011ರಂದು ನೀಡಿರುವ ಆದೇಶದ ಹಿನ್ನೆಲೆಯಲ್ಲಿ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 13ರ ಪ್ರಕರಣ 199ಕ್ಕೆ ಸೂಕ್ತ ತಿದ್ದುಪಡಿ ಮಾಡುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿರುತ್ತದೆ ಎಂದು ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ತಿಳಿಸಿದರು. | ಕರ್ನಾಟಕ ಪಂಚಾಯತ್‌ರಾಜ್ (2ನೇ ತಿದ್ದುಪಡಿ) ವಿಧೇಯಕ, ದಿನಾಂಕ: 25.02.2016ರಂದು ಜಾರಿಗೆ ಬಂದಿರುತ್ತದೆ.<br><br>ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್‌ರಾಜ್ ಅಧಿನಿಯಮ, 1993ರ ಪ್ರಕರಣ 2(ಎ) ಪರಿಭಾಷೆಗಳು (Xi) ಕಟ್ಟಡ ಕಟ್ಟಡ ಎಂಬ ಪದದ ವ್ಯಾಖ್ಯೆಯಲ್ಲಿ ಮೊಬೈಲ್ ಟವರ್ ಪದವನ್ನು ಮತ್ತು 64ರಲ್ಲಿ ಕಟ್ಟಡಗಳ ನಿರ್ಮಾಣದ ಮೇಲೆ ಗ್ರಾಮ ಪಂಚಾಯಿತಿಯ ನಿಯಂತ್ರಣ ಎಂಬುವುದರಲ್ಲಿ ಮೊಬೈಲ್ ಟವರ್‌ಗಳನ್ನು ಸ್ಥಾಪಿಸಲು ಅನುಮತಿ ಪಡೆಯಬೇಕಾಗುತ್ತದೆ ಎಂದು ಸೇರಿಸಲಾಗಿದೆ.<br><br>ಸದರಿ ಅಧಿನಿಯಮ ಪ್ರಕರಣ 199 ಮತ್ತು ಅನುಸೂಚಿ-IVರಲ್ಲಿ ಗ್ರಾಮ ಪಂಚಾಯಿತಿಗಳು ವಾರ್ಷಿಕ ಎಲ್ಲಾ ರೀತಿಯ ಪ್ರತಿ ಮೊಬೈಲ್ ಟವರ್‌ಗಳ ಮೇಲೆ ರೂ. 12,000/= ತೆರಿಗೆ ವಿಧಿಸಲು ಅವಕಾಶ ಕಲ್ಪಿಸಲಾಗಿದೆಯೆಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿದ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |
| 10 | 4635<br>ಚು.ಗು.ಪ್ರ.: 310<br>ಶ್ರೀ ಆರ್.ಸಿದ್ಧರಾಮಣ್ಣ<br>ವಿ.ಪ.ನ.ದಿ:<br>26-07-2013 | ಶಿವಮೊಗ್ಗ ಜಿಲ್ಲಾ ವ್ಯಾಪ್ತಿಗೆ ಸೇರಿದ ಗ್ರಾಮ ಪಂಚಾಯಿತಿ ಗಳಿಂದ ಬಾಕಿ ಇರುವ ವಿದ್ಯುತ್ ಬಿಲ್ಲಿನ ಮೊತ್ತವನ್ನು ಮನ್ನಾ ಮಾಡುವ ಕುರಿತು. | ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಲಾಗಿದ್ದು, ವರದಿ ಬಂದ ನಂತರ ಈ ಬಗ್ಗೆ ಪರಿಶೀಲಿಸಲಾಗುವುದು ಎಂದು ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು ತಿಳಿಸಿದರು. | ದಿನಾಂಕ: 29.05.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ರಾಜ್ಯದ ಎಲ್ಲಾ ಗ್ರಾಮ ಪಂಚಾಯಿತಿಗಳ ಬೀದಿ ದೀಪಗಳು ಮತ್ತು ಕುಡಿಯುವ ನೀರಿನ ಸ್ಥಾವರಗಳಿಗೆ ಸಂಬಂಧಿಸಿದಂತೆ ದಿನಾಂಕ: 31.03.2015ರ (ಮಾರ್ಚ್ 2015ರ ಅಂತ್ಯಕ್ಕೆ) ಪೂರ್ವದ ವಿದ್ಯುತ್ ಬಿಲ್ಲಿನ ಮೊತ್ತದ ಮೇಲಿನ ಅಸಲು, ಬಡ್ಡಿ ಮತ್ತು ಸುಸ್ತಿ ಬಡ್ಡಿಯು ಸೇರಿದಂತೆ ಒಟ್ಟು ಮೊತ್ತ ರೂ. 3766.81 ಕೋಟಿಗಳನ್ನು ಮನ್ನಾ ಮಾಡಿ ಇಂಧನ ಇಲಾಖೆಯು ದಿ: 31.3.2017ರಂದು ಆದೇಶ ಹೊರಡಿಸಿರುತ್ತದೆ. |

| | | | | |
|---|---|---|---|---|
| | | | | ದಿನಾಂಕ: 01-04-215ರ ನಂತರ ರಾಜ್ಯದ ಎಲ್ಲಾ ಗ್ರಾಮ ಪಂಚಾಯಿತಿಗಳ ಬೀದಿ ದೀಪಗಳು ಮತ್ತು ಕುಡಿಯುವ ನೀರಿನ ಸ್ಥಾವರಗಳಿಗೆ ಸಂಬಂಧಿಸಿದಂತೆ ಚಾಲ್ತಿ ತಿಂಗಳುಗಳ ವಿದ್ಯುತ್ ಬಿಲ್ ಮೊತ್ತವನ್ನು ಎಸ್ಕ್ರೋ ಖಾತೆಯ ಮೂಲಕ ಪಾವತಿಸಲಾಗುತ್ತಿದೆಯೆಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿದ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |
| 11 | 4636<br>ಚು.ಗು.ಪ್ರ. : 616<br>ಶ್ರೀ ಅಲ್ಲಮಪ್ರಭು ಪಾಟೀಲ್<br>ವಿ.ಪ.ನ.ದಿ: 29-11-2013 | ರಾಜ್ಯದಲ್ಲಿರುವ ಗ್ರಾಮ ಪಂಚಾಯತ್‌ಗಳಲ್ಲಿ ಪಿ.ಡಿ.ಓ. ಗಳ ಕೊರತೆ ಇರುವ ಬಗ್ಗೆ. | ನಮ್ಮ ರಾಜ್ಯದಲ್ಲಿನ ತಾಲ್ಲೂಕು ಪಂಚಾಯಿತಿಗಳಲ್ಲಿ Executive Officer ಹುದ್ದೆಗಳು ಸಹ ಸರಿಯಾದ ಪ್ರಮಾಣದಲ್ಲಿ ಇರಲಿಲ್ಲ. ಈಗ ಎರಡು ತಾಲ್ಲೂಕು ಪಂಚಾಯಿತಿಗಳನ್ನು ಹೊರತುಪಡಿಸಿ ನಾವು ಎಲ್ಲೆಡೆ Executive Officerಗಳನ್ನು ಹಾಕಿದ್ದೇವೆ. ಆ ಹಿನ್ನೆಲೆಯಲ್ಲಿ ಪಿ.ಡಿ.ಓ.ಗಳನ್ನು ಸಹ ಮಾರ್ಚ್ ಅಂತ್ಯದೊಳಗೆ ಎಲ್ಲಾ ಕಡೆಗಳಲ್ಲಿ ನೇಮಕ ಮಾಡತಕ್ಕ ಪ್ರಯತ್ನವನ್ನು ಮಾಡುತ್ತೇವೆ ಎಂದು ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು ತಿಳಿಸಿದರು. | ದಿನಾಂಕ: 29.05.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ವೃಂದದ ನೇರ ನೇಮಕಾತಿ ಕೋಟಾದಡಿ ಖಾಲಿ ಇರುವ 815 ಹುದ್ದೆಗಳು ಮತ್ತು ಗ್ರಾಮ ಪಂಚಾಯಿತಿ ಕಾರ್ಯದರ್ಶಿ ಗ್ರೇಡ್-1 ವೃಂದದ ನೇರ ನೇಮಕಾತಿ ಕೋಟಾದಡಿ ಖಾಲಿ ಇರುವ 809 ಹುದ್ದೆಗಳಿಗೆ ನೇಮಕಾತಿ ಮಾಡಲಾಗಿದೆ.<br><br>ಮುಂಬಡ್ತಿ ಕೋಟಾದ ಹುದ್ದೆಗಳನ್ನು ನಿಯಮಾನುಸಾರ ಗ್ರೇಡ್-1 ಗ್ರಾಮ ಪಂಚಾಯಿತಿ ಕಾರ್ಯದರ್ಶಿ ವೃಂದದಿಂದ ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳೇ ಅರ್ಹ ನೌಕರರಿಗೆ ಮುಂಬಡ್ತಿ ನೀಡುವ ಮೂಲಕ ಭರ್ತಿ ಮಾಡುವರು. ಪ್ರಸ್ತುತ ಮಾನ್ಯ ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ಮುಂಬಡ್ತಿಗೆ ಸಂಬಂಧಿಸಿದಂತೆ ಬಿ.ಕೆ. ಪವಿತ್ರ ಪ್ರಕರಣದಲ್ಲಿ ಮುಂದಿನ ನಿರ್ದೇಶನದವರೆಗೆ ಯಥಾಸ್ಥಿತಿ ಕಾಪಾಡುವಂತೆ ನಿರ್ದೇಶನ ನೀಡಿರುವುದರಿಂದ ಯಾವುದೇ ಮುಂಬಡ್ತಿ/ಹಿಂಬಡ್ತಿ ಪ್ರಕ್ರಿಯೆ ಜರುಗಿಸದಂತೆ ಆದೇಶವಿರುವುದರಿಂದ ಮುಂಬಡ್ತಿ ನೀಡಿರುವುದಿಲ್ಲ. ಈ ಆದೇಶ ತೆರವಾದ ನಂತರ ಮುಂಬಡ್ತಿ ನೀಡಿರುವುದಿಲ್ಲ. ಈ ಆದೇಶ ತೆರವಾದ ನಂತರ ಮುಂಬಡ್ತಿ |

| | | | | |
|---|---|---|---|---|
| 12 | 5461<br>ಚು.ಗು.ಪ್ರ: 2059<br>ಶ್ರೀ ವಿ. ಸೋಮಣ್ಣ<br>ವಿ.ಪ.ನ.ದಿ: 25-07-2014 | ರಾಜ್ಯದಲ್ಲಿ ಖಾಲಿಯಿರುವ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳನ್ನು ಭರ್ತಿ ಮಾಡಿಕೊಳ್ಳುವಲ್ಲಿ ಸರ್ಕಾರ ಕೈಗೊಂಡಿರುವ ಕ್ರಮದ ಬಗ್ಗೆ. | ರಾಜ್ಯದಲ್ಲಿ ಪ್ರಸ್ತುತ 5629 ಗ್ರಾಮ ಪಂಚಾಯ್ತಿಗಳಿದ್ದು, 4264 ಪಂಚಾಯ್ತಿ ಅಭಿವೃದ್ಧಿ ಅಧಿಕಾರಿಗಳಿರುತ್ತಾರೆ. 3116 ನೇರ ನೇಮಕಾತಿ ಕೋಟಾದಡಿ ಆಯ್ಕೆಯಾದವರು 1148 ಪದೋನ್ನತಿ ಹೊಂದಿದವರಾಗಿರುತ್ತಾರೆ. 1365 ಗ್ರಾಮ ಪಂಚಾಯ್ತಿಗಳಲ್ಲಿ ಪಂಚಾಯ್ತಿ ಅಭಿವೃದ್ಧಿ ಅಧಿಕಾರಿ ಹುದ್ದೆಗಳು ಖಾಲಿ ಇರುತ್ತದೆ. ನೇರ ನೇಮಕಾತಿ ಕೋಟಾದಡಿ ಖಾಲಿಯಿರುವ 352 ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಹುದ್ದೆಗಳನ್ನು ಭರ್ತಿ ಮಾಡಲು ಅಗತ್ಯ ಕ್ರಮವಹಿಸಲಾಗುತ್ತಿದೆ ಎಂದು ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ತಿಳಿಸಿದರು. | ಮೂಲಕ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲಾಗುವುದು.<br><br>ಖಾಲಿ ಇರುವ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ ಹುದ್ದೆಗೆ ಆ ಗ್ರಾಮ ಪಂಚಾಯಿತಿಯಲ್ಲಿ ಗ್ರೇಡ್-1 ಕಾರ್ಯದರ್ಶಿ ಪೂರ್ಣಕಾಲಿಕವಾಗಿ ಕಾರ್ಯನಿರ್ವಹಿಸು ತ್ತಿದ್ದಲ್ಲಿ ಅವರಿಗೆ ಪ್ರಭಾರ ವಹಿಸಲು, ಪೂರ್ಣಕಾಲಿಕ ಗ್ರೇಡ್-1 ಕಾರ್ಯದರ್ಶಿ ಇಲ್ಲದಿದ್ದಲ್ಲಿ ನೆರೆಯ ಗ್ರಾಮ ಪಂಚಾಯಿತಿಯ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗೆ ಹೆಚ್ಚುವರಿ ಪ್ರಭಾರ ವಹಿಸಲು ವ್ಯವಸ್ಥೆ ಮಾಡಲಾಗಿದೆ. |
| 13 | 5462<br>ಚು.ರ.ಪ್ರ: 1977<br>ಶ್ರೀ ಅಲ್ಲಮಪ್ರಭು ಪಾಟೀಲ್<br>ವಿ.ಪ.ನ.ದಿ: 25-07-2014 | ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿರುವ ಗ್ರಾಮ ಪಂಚಾಯತ್‌ಗಳಿಗೆ ಕಾರ್ಯದರ್ಶಿ ಹುದ್ದೆಗಳು ಮಂಜೂರಾಗಿದ್ದು, ಸರ್ಕಾರ ಆ ಹುದ್ದೆಗಳನ್ನು ಭರ್ತಿ ಮಾಡದಿರುವ ಬಗ್ಗೆ. | ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಯಲ್ಲಿ ನೇರ ನೇಮಕಾತಿ ಕೋಟಾದಡಿ ಖಾಲಿ ಇರುವ ಗ್ರಾಮ ಪಂಚಾಯತಿ ಕಾರ್ಯದರ್ಶಿ ಗ್ರೇಡ್-1, ಗ್ರೇಡ್-2 ಹುದ್ದೆಗಳನ್ನು ಭರ್ತಿ ಮಾಡಲು ಅಗತ್ಯ ಕ್ರಮ ವಹಿಸಲಾಗುತ್ತಿದೆ.<br>ಬಡ್ತಿ ಕೋಟಾದಡಿ ಖಾಲಿ ಇರುವ ಹುದ್ದೆಗಳನ್ನು ಸದರಿ ವೃಂದದ ಅರ್ಹ ನೌಕರರು ಲಭ್ಯವಾದಂತೆ ಬಡ್ತಿ ಮೂಲಕ ನೇಮಿಸಲು ಕ್ರಮ ವಹಿಸಲಾಗುತ್ತಿದೆ ಎಂದು ಮಾನ್ಯ | ಗ್ರಾಮ ಪಂಚಾಯಿತಿ ಕಾರ್ಯದರ್ಶಿ ಗ್ರೇಡ್-2 ವೃಂದದ ಆಯ್ಕೆ ಮೂಲಕ ನೇರ ನೇಮಕಾತಿ ಮಾಡುವ ಹುದ್ದೆಗಳಿಗೆ ನೇಮಕಾತಿ ಪ್ರಾಧಿಕಾರ ಜಿಲ್ಲಾ ಪಂಚಾಯಿತಿಗಳ ಉಪ ಕಾರ್ಯದರ್ಶಿ (ಅಭಿವೃದ್ಧಿ) ಆಗಿದ್ದು, ಖಾಲಿ ಹುದ್ದೆಗಳಿಗೆ ಅರ್ಹ ನೌಕರರುಗಳಿಗೆ ನಿಯಮಾನುಸಾರ ಮಾಡಲು ತಿಳಿಸಲಾಗಿದೆ ಹಾಗೂ ಈ ಬಗ್ಗೆ ಸರ್ಕಾರದಿಂದ ಈಗಾಗಲೇ ನಿರ್ದೇಶನ ನೀಡಲಾಗಿದೆಯೆಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿದ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |

| | | | | |
|---|---|---|---|---|
| | | | ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ತಿಳಿಸಿದರು. | |
| 14 | 4637<br>ಚು.ಗು.ಪ್ರ: 1142<br>ಶ್ರೀ ಮಹಂತೇಶ್ ಶಿವಾನಂದ ಕೌಜಲಗಿ<br>ವಿ.ಪ.ನ.ದಿ: 06-12-2013 | ಗ್ರಾಮ ಪಂಚಾಯತಿಗಳ ಅನುದಾನವನ್ನು ಜನಸಂಖ್ಯೆ ಆಧಾರದ ಮೇಲೆ ಕೊಡಲು ಕ್ರಮ ಕೈಗೊಳ್ಳುವ ಕುರಿತು. | ಈ ಬಗ್ಗೆ ಪರಿಶೀಲಿಸಿ, ತೀರ್ಮಾನಿಸಲಾಗುವುದೆಂದು ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ತಿಳಿಸಿದರು. | ದಿನಾಂಕ: 29.05.2019ರಂದು ನಡೆದ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ, 2014-15ನೇ ಸಾಲಿನ ಆಯವ್ಯಯದಲ್ಲಿ ಗ್ರಾಮ ಪಂಚಾಯಿತಿಗಳಿಗೆ ಒದಗಿಸುತ್ತಿರುವ ಪ್ರಸಕ್ತ ವಾರ್ಷಿಕ ಅನುದಾನ ಮೊತ್ತವನ್ನು ಗ್ರಾಮ ಪಂಚಾಯಿತಿಗಳ ಜನಸಂಖ್ಯೆ ಆಧಾರದ ಮೇಲೆ ಘೋಷಿಸಲಾಗಿದೆ. 2011ರ ಜನಗಣತಿಯನ್ವಯ 3819 ಗ್ರಾಮ ಪಂಚಾಯಿತಿಗಳು 8000 (ಎಂಟು ಸಾವಿರಕ್ಕಿಂತ) ಕಡಿಮೆ ಜನಸಂಖ್ಯೆ ಹೊಂದಿದ್ದು, ಪ್ರತಿ ಗ್ರಾಮ ಪಂಚಾಯಿತಿಗೆ ವಾರ್ಷಿಕವಾಗಿ ನೀಡುತ್ತಿರುವ ಶಾಸನ ಬದ್ಧ ಅನುದಾನವನ್ನು ರೂ.10.00 ಲಕ್ಷಗಳಿಗೆ ನಿಗದಿ ಪಡಿಸಲಾಗಿದೆ. 8000ಕ್ಕಿಂತ ಹೆಚ್ಚಿಗೆ ಅಂದರೆ ಪ್ರತಿ ಒಂದು ಸಾವಿರ ಜನಸಂಖ್ಯೆ ಏರಿಕೆಗೆ ಅನುಗುಣವಾಗಿ ರೂ.1.00 ಲಕ್ಷ ಅನುದಾನವನ್ನು ಹೆಚ್ಚಿಸಲಾಗಿದೆ ಎಂದು ಇಲಾಖಾಧಿಕಾರಿಗಳು ನೀಡಿದ ಉತ್ತರವನ್ನು ಒಪ್ಪಿದ ಸಮಿತಿಯು ಸದರಿ ಭರವಸೆಯನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿತು. |

* * * * *

ಕೆ. ಸಿ. ಕೊಂಡಯ್ಯ
ವಿಧಾನ ಪರಿಷತ್ತು ಸದಸ್ಯರು
(ಮಾಜಿ ಸಂಸ ಸದಸ್ಯರು)
K. C. Kondaiah, M.L.C.
(Former Member of Parliament)

ಅನುಬಂಧ I

ದಿನಾಂಕ: 12.7.2019

ಮಾನ್ಯ ಶ್ರೀ ವಿಜಯಭಾಸ್ಕರ್ ರವರೇ,

ಕರ್ನಾಟಕ ವಿಧಾನ ಪರಿಷತ್ತಿನ ಭರವಸೆಗಳ ಸಮಿತಿಯು ಈ ಹಿಂದೆ ನಡೆದ ಸಮಿತಿ ಸಭೆಗಳಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಗೆ ಸಂಬಂಧಿಸಿದ ಬಾಕಿ ಭರವಸೆ ಸಂಖ್ಯೆ: 20/1998 "ಬೀದರ್ ಜಿಲ್ಲಾ ಪಂಚಾಯತ್‌ನಲ್ಲಿ ಕೋಟ್ಯಾಂತರ ರೂಪಾಯಿ ಹಣ ದುರುಪಯೋಗವಾಗಿರುವ ಬಗ್ಗೆ" ಚರ್ಚಿಸಿದ ಸಂದರ್ಭದಲ್ಲಿ, ಸದನದಲ್ಲಿ ಚರ್ಚೆಯಾಗಿ, ಸಚಿವರು ಸದನದಲ್ಲಿ ಭರವಸೆ ನೀಡಿ 20 ವರ್ಷಗಳಾದರೂ, ಅವ್ಯವಹಾರದಲ್ಲಿ ಭಾಗಿಯಾಗಿರುವ ಅಧಿಕಾರಿಗಳ ವಿರುದ್ಧ ಕ್ರಮ ಜರುಗಿಸಿ ಅವರಿಂದ ಆಗಿರುವ ಆರ್ಥಿಕ ನಷ್ಟ ಭರಿಸುವ ಕಾರ್ಯ ಆಗದಿರುವ ಅಂಶವನ್ನು ಸಮಿತಿಯು ಗಂಭೀರವಾಗಿ ಪರಿಗಣಿಸಿ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಸೂಚಿಸಿರುತ್ತದೆ.

ದಿನಾಂಕ:29.05.2019ರಂದು ನಡೆದ ಸಮಿತಿ ಸಭೆಗೆ ಇಲಾಖೆಯಿಂದ ಒದಗಿಸಲಾದ ಉತ್ತರ ಹಾಗೂ ಮೌಖಿಕ ಉತ್ತರದ ರೀತ್ಯಾ ಬೀದರ್ ಜಿಲ್ಲಾ ಪಂಚಾಯತ್‌ನಲ್ಲಿ 1995–96ನೇ ಸಾಲಿನಲ್ಲಿ ಸಾಮಗ್ರಿಗಳ ಖರೀದಿಯನ್ನು 5.0 ಕೋಟಿಗಳ ಸರ್ಕಾರಿ ಹಣ ದುರುಪಯೋಗವಾಗಿರುವ ಬಗ್ಗೆ ಸಿ.ಓ.ಡಿ. ಸಂಸ್ಥೆಯು ಸಲ್ಲಿಸಿದ ತನಿಖಾ ವರದಿಯನ್ನು ಆಧರಿಸಿ ಲೋಕೋಪಯೋಗಿ ಇಲಾಖೆಗೆ ಸೇರಿದ 3 ಜನ ಅಧಿಕಾರಿಗಳು ಹಾಗೂ ಆರ್ಥಿಕ ಇಲಾಖೆಗೆ ಸೇರಿದ ಇಬ್ಬರು ಅಧಿಕಾರಿಗಳ ವಿರುದ್ಧ ಇಲಾಖಾ ವಿಚಾರಣೆ ನಿವೃತ್ತ ನ್ಯಾಯಾಧೀಶರ ಮೂಲಕ ನಡೆಸಿ, ಸದರಿಯವರು ನೀಡಿದ ವರದಿಯಲ್ಲಿ ಆರೋಪಗಳು ಸಾಭೀತಾಗಿಲ್ಲವೆಂದು ಅಭಿಪ್ರಾಯಿಸಿರುತ್ತಾರೆ. ಆದರೆ, ಸದರಿಯವರ ವರದಿಯನ್ನು ಸರ್ಕಾರವು ಒಪ್ಪದೆ ಕರ್ನಾಟಕ ನಾಗರೀಕ ಸೇವಾ ನಿಯಮಗಳ ನಿಯಮ 11(ಎ) ಅಡಿಯಲ್ಲಿ ಪರಿಶೀಲಿಸಿ ಲಭ್ಯವಿರುವ ದಾಖಲೆಗಳ ಆಧಾರದ ಮೇಲೆ ಆರೋಪಗಳು ರುಜುವಾತಾಗಿವೆ ಎಂದು ಆರೋಪಿಸಿ, ಆರೋಪಿತ ಅಧಿಕಾರಿಗಳ ವಿರುದ್ಧ ದಾಖಲೆಗಳನ್ನು ಆಧರಿಸಿ ಸರ್ಕಾರದ ಹಂತದಲ್ಲಿ ಮುಂದಿನ ಕ್ರಮ ವಹಿಸಲು ಸಂಬಂಧಪಟ್ಟ ಮಾತೃ ಇಲಾಖೆಗಳಿಗೆ ಕೋರಲಾಗಿತ್ತು.

ಆದರಂತೆ, ಲೋಕೋಪಯೋಗಿ ಇಲಾಖೆಯು ದಂಡನೆಯನ್ನು ವಿಧಿಸಲು ಕ್ರಮ ಕೈಗೊಂಡಿರುತ್ತದೆ. ಮೂರು ಆರೋಪಿತ ಅಧಿಕಾರಿಗಳ ಪೈಕಿ ಇಬ್ಬರು ಅಧಿಕಾರಿಗಳು ನಿಧನ ಹೊಂದಿದ್ದು, ಶ್ರೀ ಎಸ್.ಎ. ಮಾನಕೇರಿ, ಸಹಾಯಕ ಇಂಜಿನಿಯಿರ್, ನಿವೃತ್ತ, ಇವರು ಕೆ.ಎ.ಟಿ.ನಲ್ಲಿ ಅರ್ಜಿ ಸಲ್ಲಿಸಿದ್ದು, ದಿನಾಂಕ:08.09.2016 ರಂದು ತಡೆಯಾಜ್ಞೆಯನ್ನು ನೀಡಿರುತ್ತದೆ. ಮುಂದುವರೆದು ಈ ಪ್ರಕರಣದಲ್ಲಿ ಭಾಗಿಯಾಗಿದ್ದ ಆರ್ಥಿಕ ಇಲಾಖೆಗೆ ಸಂಬಂಧಿಸಿದ ಅಧಿಕಾರಿಗಳು ಪ್ರಸ್ತುತ ನಿವೃತ್ತ ಹೊಂದಿದ್ದು, ಇವರುಗಳಿಗೆ ದಂಡನೆ ವಿಧಿಸುವ ಪ್ರಸ್ತಾವನೆಯನ್ನು ಆರ್ಥಿಕ ಇಲಾಖೆಗೆ ದಿನಾಂಕ:31.05.2014 ರಂದು ಕಳುಹಿಸಲಾಗಿತ್ತು. ಆರ್ಥಿಕ ಇಲಾಖೆಯು 1995–96ನೇ ಸಾಲಿನ ಆಡಿಟ್ ವರದಿ ಹಾಗೂ ಸದರಿ ಸಾಲಿನಲ್ಲಿ ಬಿಡುಗಡೆಯಾದ ಹಣ ಹಾಗೂ ಖರ್ಚು ಮಾಡಿದ ತಖ್ತೆಯನ್ನು ಪರಿಶೀಲಿಸಲಾಗಿ ಆರೋಪಿತರು ಯಾವುದೇ ಸರ್ಕಾರದ ಹಣ ದುರುಪಯೋಗಪಡಿಸಿಕೊಂಡಂತೆ ಕಂಡುಬರುತ್ತಿಲ್ಲ ಎಂದು ಅಂತಿಮ 'ಬಿ' ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದು, ನ್ಯಾಯಾಲಯವು ಸದರಿ 'ಬಿ' ವರದಿಯನ್ನು ಪುರಸ್ಕರಿಸಿರುತ್ತದೆ.

....2.

The Embassy, Flat No. 121, 15, Ali Asker Road, BANGALORE - 560 052 ★ Tel. : 2235 1351, 2235 1353, Fax : 2235 1352
32-A, Y. Nagesh Sastry Nagar, 1st Cross, BELLARY - 583 101 ★ Tel. : 08392-258333 / 258111 258444, Fax : 258222
Mobile : 94480 68886 ★ Email : kck.kondaiah@gmail.com

ಕೆ. ಸಿ. ಕೊಂಡಯ್ಯ
(ವಿಧಾನ ಪರಿಷತ್ತು ಸದಸ್ಯರು
ಮಾಜಿ ಸಂಸದ್ ಸದಸ್ಯರು)
K. C. Kondaiah, M.L.C.
(Former Member of Parliament)



ಆಡಿಟ್ ವರದಿಗಳಲ್ಲಿನ ಆಕ್ಷೇಪಣೆಗಳಲ್ಲಿ ಆರ್ಥಿಕ ನಷ್ಟಕ್ಕೆ ಲೋಕೋಪಯೋಗಿ ಇಲಾಖೆಯ ಕಾರ್ಯಪಾಲಕ ಅಭಿಯಂತರರನ್ನು ಹೊಣೆಗಾರರನ್ನಾಗಿ ಮಾಡಬಹುದಾಗಿದೆ ಹಾಗೂ ಸದರಿಯವರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಬಹುದಾಗಿದೆ ಎಂದು ಷರಾ ದಾಖಲಿಸಲಾಗಿದೆ. ಅಂತಿಮವಾಗಿ ಸಾಮಗ್ರಿಗಳ ಕೊರತೆಗೆ ಲೆಕ್ಕಾಧೀಕ್ಷಕರು ಹಾಗೂ ಲೆಕ್ಕ ಸಹಾಯಕರನ್ನು ಜವಾಬ್ದಾರಿಯನ್ನಾಗಿಸಲು ಸಾಧ್ಯವಿರುವುದಿಲ್ಲವೆಂದು ತೀರ್ಮಾನಿಸಿ ಇವರ ವಿರುದ್ಧದ ಆರೋಪಗಳಿಂದ ಮುಕ್ತರನ್ನಾಗಿಸಿ ದಿನಾಂಕ:21.05.2019 ರಂದು ಆದೇಶವನ್ನು ಹೊರಡಿಸಲಾಗಿರುತ್ತದೆ.

ದಿನಾಂಕ:29.05.2019ರಂದು ನಡೆದ ಸಮಿತಿ ಸಭೆಗೆ ಆರ್ಥಿಕ ಇಲಾಖೆಯವರು ಪುನ: ಕ್ರಮವಹಿಸಿ ದೋಷ ಮುಕ್ತರನ್ನಾಗಿಸಿ ನೀಡಿರುವ ವರದಿಯನ್ನು ಗಮನಿಸಿದಾಗ ಈ ಪ್ರಕರಣವು ಘಟಿಸಿ 20 ವರ್ಷಗಳಾಗಿದ್ದು, ಆರೋಪಿತರು ಬೀದರ್ ಜಿಲ್ಲಾ ಪಂಚಾಯತ್‌ನಲ್ಲಿ ಸಾಮಗ್ರಿಗಳನ್ನು ಖರೀದಿಸಿದಂತೆ 5.05ಕೋಟಿ ಗಳಷ್ಟು ಹಣ ದುರುಪಯೋಗವಾಗಿದ್ದು, ಈ ಪ್ರಕರಣದಲ್ಲಿ ಭಾಗಿಯಾಗಿದ್ದ ಎರವಲು ಸೇವೆಯ ಮೇಲಿನ ಅಧಿಕಾರಿಗಳು ಇಲಾಖಾ ವಿಚಾರಣೆಯಲ್ಲಿನ ವಿಳಂಬ ಹಾಗೂ ಇಲಾಖೆಗಳು ನಿರ್ವಹಿಸಿದ ಕ್ರಮಗಳ ನ್ಯೂನತೆಗಳಿಂದಾಗಿ ತಪ್ಪಿತಸ್ಥರು ಕಾನೂನಿನ ಹಿಡಿತದಿಂದ ಪಾರಾಗಲು ಪ್ರಯತ್ನಿಸಿರುವುದಲ್ಲದೆ ದೀರ್ಘಕಾಲ ವ್ಯಯವಾಗಿರುವುದರಿಂದ ಅಧಿಕಾರಿಗಳು ಸೇವೆಯಿಂದ ನಿವೃತ್ತಿ ಹಾಗೂ ಮರಣ ಹೊಂದಿರುವ ಹಿನ್ನಲೆಯಲ್ಲಿ ಅವರಿಂದ ಹಣವನ್ನು ವಸೂಲು ಮಾಡುವುದು ಸಹ ಕಷ್ಟಸಾಧ್ಯವಾಗುತ್ತಾ ಬಂದಿರುತ್ತದೆ.

ಇದಲ್ಲದೆ, ಎರವಲು ಸೇವೆ ಹಾಗೂ ಬೇರೆ ಇಲಾಖೆಗೆ ನಿಯೋಜನೆಗೊಂಡ ಅಧಿಕಾರಿ / ನೌಕರರಿಗೆ ಸಂಬಂಧಿಸಿದಂತೆ ಕರ್ನಾಟಕ ಸಿವಿಲ್ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಅಪೀಲು) ನಿಯಮಗಳೂ 1957ರ 15ರ ಪ್ರಕಾರ ಎರವಲು ಸೇವೆಯ ಮೇಲೆ ಕಾರ್ಯನಿರ್ವಹಿಸುತ್ತಿರುವ ಎರವಲು ಪಡೆದ ಪ್ರಾಧಿಕಾರವು ಎರವಲು ಕೊಟ್ಟ ಪ್ರಾಧಿಕಾರದ ಪೂರ್ವಾನುಮೋದನೆ ಪಡೆಯದೆ ಅಂಥ ಸರ್ಕಾರಿ ನೌಕರನ ವಿರುದ್ಧ ಶಿಸ್ತು ವ್ಯವಹರಣೆಗಳನ್ನು ಕೈಗೊಳ್ಳತಕ್ಕದ್ದಲ್ಲ ಅಥವಾ ಆತನನ್ನು ಅಮಾನತ್ತಿನಲ್ಲಿಡತಕ್ಕದ್ದಲ್ಲ ಎಂಬುದಾಗಿ ಸ್ಪಷ್ಟವಾಗಿದ್ದರೂ ಸಹ ಈ ನಿಯಮಗಳನ್ನು ಪಾಲಿಸದೆ ಇರುವ ಕಾರಣಕ್ಕಾಗಿ ಮಾನ್ಯ ನ್ಯಾಯಮಂಡಳಿಯು ಮಧ್ಯಂತರ ಆದೇಶವನ್ನು ನೀಡಿದ ಹಿನ್ನಲೆಯಲ್ಲಿ ದಂಡನೆ ವಿಧಿಸಿ ಆದೇಶಿಸಿರುವುದನ್ನು ಸಹ ಹಿಂಪಡೆಯಲು ಕಾರಣವಾಗಿರುತ್ತದೆ.

ನಿಯೋಜನೆ / ಎರವಲು ಸೇವೆಯ ಮೇಲೆ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ / ನೌಕರರುಗಳು ಅವ್ಯವಹಾರದಲ್ಲಿ ಭಾಗಿಯಾದಂತಹ ಪ್ರಕರಣ ಎರವಲು ಪಡೆದ ಪ್ರಾಧಿಕಾರವು ತನಿಖೆ ನಡೆಸಿ ಕೊಟ್ಟಂತಹ ವರದಿಯ ಆಧಾರದ ಮೇಲೆ ಎರವಲು ಕೊಟ್ಟ ಪ್ರಾಧಿಕಾರವು ತಪ್ಪದೆ ಕ್ರಮವಹಿಸಬೇಕೆಂದು ಸಮಿತಿಯ ಅಭಿಮತ.

......3.

The Embassy, Flat No. 121, 15, Ali Asker Road, BANGALORE - 560 052 ★ Tel. : 2235 1351, 2235 1353, Fax : 2235 1352
32-A, Y. Nagesh Sastry Nagar, 1st Cross, BELLARY - 583 101 ★ Tel. : 08392-258333 / 258111 258444, Fax : 258222
Mobile : 94480 68886 ★ Email : kck.kondaiah@gmail.com

ಕೆ. ಸಿ. ಕೊಂಡಯ್ಯ
ವಿಧಾನ ಪರಿಷತ್ತು ಸದಸ್ಯರು
(ಮಾಜಿ ಸಂಸದ್ ಸದಸ್ಯರು)
K. C. Kondaiah, M.L.C.
(Former Member of Parliament)



ಈ ರೀತಿ ನಿಯಮಗಳ ಉಲ್ಲಂಘನೆಯಿಂದಾಗಿ ವಿನಾಕಾರಣ ಪ್ರಕರಣವು ಯಾವುದೇ ಕ್ರಮಕ್ಕೆ ಒಳಪಡದೆ ಬಾಕಿ ಉಳಿಯುವುದರಿಂದ ತಪ್ಪಿತಸ್ಥರು ನಿರಾಯಾಸವಾಗಿ ಕಾನೂನಿನ ಚೌಕಟ್ಟಿನಲ್ಲಿ ಶಿಕ್ಷೆಗೆ ಒಳಗಾಗದೆ ಪಾರಾಗುತ್ತಿರುವುದನ್ನು ಸಮಿತಿಯು ಗಂಭೀರವಾಗಿ ಪರಿಗಣಿಸಿರುತ್ತದೆ. ಈ ರೀತಿ ತನಿಖಾ ಹಾದಿಯನ್ನು ತಪ್ಪಿಸುವ ಮೂಲಕ ಆರೋಪಿತ ಅಧಿಕಾರಿ / ನೌಕರರುಗಳಿಗೆ ಸಹಕರಿಸುತ್ತಿರುವ ಅಧಿಕಾರಿ / ನೌಕರರುಗಳ ಕೃತ್ಯವನ್ನು ಸಹ ಗಂಭೀರವಾಗಿ ಪರಿಗಣಿಸಬೇಕೆಂದು ಸಮಿತಿಯು ಬಯಸುತ್ತದೆ.

ಆದುದರಿಂದ, ತಾವು ಇಲಾಖಾ ವಿಚಾರಣೆ ಪ್ರಕರಣಗಳಲ್ಲಿ ರಿವ್ಯೂ ಮಾಡುವ ಸಂದರ್ಭದಲ್ಲಿ ಭರವಸೆಗಳ ಸಮಿತಿಯು ಗಮನಿಸಿ ಪ್ರಸ್ತಾಪಿಸಿರುವ ಅಂಶಗಳ ಆಧಾರದ ಮೇಲೆ ಪರಿಶೀಲಿಸಿ ವಿಳಂಬವಾಗದಂತೆ ತಪ್ಪಿತಸ್ಥರ ವಿರುದ್ಧ ಅಗತ್ಯ ಕಾನೂನು ಕ್ರಮಗಳನ್ನು ಜರುಗಿಸಬೇಕೆಂದು ಕೋರುತ್ತೇನೆ. ಸಮಿತಿಯ ಸಭೆಯ ನಡವಳಿಯ ಉದೃತ ಭಾಗ ಹಾಗೂ (ಡಿ.ಪಿ.ಎ.ಆರ್. ಮತ್ತು ಆರ್ಥಿಕ ಇಲಾಖೆಯು ನೀಡಿರುವ ಉತ್ತರದ ಪ್ರತಿಗಳನ್ನು ಈ ಪತ್ರದೊಂದಿಗೆ ಲಗತ್ತಿಸಲಾಗಿದೆ)

ವಂದನೆಗಳೊಂದಿಗೆ,

ತಮ್ಮ ನಂಬುಗೆಯ,

(ಕೆ.ಸಿ. ಕೊಂಡಯ್ಯ)
ಅಧ್ಯಕ್ಷರು,
ಸರ್ಕಾರಿ ಭರವಸೆಗಳ ಸಮಿತಿ,
ಕರ್ನಾಟಕ ವಿಧಾನ ಪರಿಷತ್ತು

ಶ್ರೀ ವಿಜಯಭಾಸ್ಕರ್, ಭಾ.ಆ.ಸೇ,
ಸರ್ಕಾರದ ಮುಖ್ಯ ಕಾರ್ಯದರ್ಶಿ,
ವಿಧಾನಸೌಧ,
ಬೆಂಗಳೂರು.

(1)
15.07.19
Office of the Chief Secretary
Government of Karnataka
Vidhana Soudha

The Embassy, Flat No. 121, 15, Ali Asker Road, BANGALORE - 560 052 ★ Tel. : 2235 1351, 2235 1353, Fax : 2235 1352
32-A, Y. Nagesh Sastry Nagar, 1st Cross, BELLARY - 583 101 ★ Tel. : 08392-258333 / 258111 258444, Fax : 258222
Mobile : 94480 68886 ★ Email : kck.kondaiah@gmail.com

ಕೆ. ಸಿ. ಕೊಂಡಯ್ಯ
ವಿಧಾನ ಪರಿಷತ್ತು ಸದಸ್ಯರು
(ಮಾಜಿ ಸಂಸದ್ ಸದಸ್ಯರು)
K. C. Kondaiah, M.L.C.
(Former Member of Parliament)

2836

ಸದಸ್ಯರು ಕರ್ನಾಟಕ ವಿಧಾನ ಪರಿಷತ್ತು

ಅನುಬಂಧ-II

ದಿನಾಂಕ: 18.1.2019
21

ಮಾನ್ಯ ಶ್ರೀ ವಿಜಯಭಾಸ್ಕರ್‌ರವರೆ,

ವಿಧಾನ ಪರಿಷತ್ತಿನ ಭರವಸೆಗಳ ಸಮಿತಿಯ ಮುಂದೆ ಪರಿಶೀಲನೆಗಾಗಿ ಬಂದ ಭರವಸೆಗಳ ಪೈಕಿ ಬಹುತೇಕ ಇಲಾಖೆಗಳಲ್ಲಿ ಕೋಟ್ಯಾಂತರ ರೂಪಾಯಿ ದುರ್ಬಳಕೆ, ಅವ್ಯವಹಾರ ನಡೆಸಿ ಆ ಪ್ರಕರಣ ಸದನದಲ್ಲಿ ಪ್ರಸ್ತಾಪಿಸಲಾದ ನಂತರ ಇಲಾಖಾಧಿಕಾರಿಗಳ ಗಮನಕ್ಕೆ ಬರುತ್ತಿದ್ದು, ತದನಂತರ ಬಹುತೇಕವಾಗಿ 10-15 ವರ್ಷಗಳಾದರೂ ತನಿಖೆಯನ್ನು ಕೈಗೊಳ್ಳದಿರುವುದರಿಂದ ತಪ್ಪಿತಸ್ಥರ ಮೇಲೆ ಯಾವುದೇ ಕ್ರಮ ಕೈಗೊಳ್ಳಲು ವಿಳಂಬವಾಗಿರುತ್ತದೆ. ನಿವೃತ್ತ ನೌಕರರ ವಿರುದ್ಧ ಕೆ.ಸಿ.ಎಸ್.ಆರ್. ನಿಯಮ 214(2)(ಬಿ)(2)ರನ್ವಯ ಇಲಾಖಾ ವ್ಯವಹರಣೆಗಳನ್ನು ನೌಕರರು ಸೇವೆಯಲ್ಲಿದ್ದಾಗ ಹೂಡದಿದ್ದರೆ ನಿವೃತ್ತಿ ಹೊಂದಿದ 4 ವರ್ಷದ ತರುವಾಯ ಹೂಡತಕ್ಕದಲ್ಲ ಎಂಬುದಾಗಿರುತ್ತದೆ. ಕೆ.ಸಿ.ಎಸ್.ಆರ್. ನಿಯಮ214(ಎ)ಪ್ರಕಾರ ನಿವೃತ್ತಿ ನೌಕರನ ವಿರುದ್ಧ ಶಿಸ್ತು/ನ್ಯಾಯಿಕ ನಡವಳಿಕೆಗಳು ಅಂತ್ಯವಾಗುವವರೆಗೆ ನಿವೃತ್ತಿ ಉಪದಾನವನ್ನು ಸಂದಾಯ ಮಾಡತಕ್ಕದಲ್ಲ. ಹೀಗಿದ್ದಾಗ್ಯೂ ನಿಯಮಗಳ ಪಾಲನೆಯಾಗದೆ ಮತ್ತು ತನಿಖೆಯಲ್ಲಿ ಆಗುತ್ತಿರುವ ವಿಳಂಬದಿಂದ ಸರ್ಕಾರದ ಹಣವನ್ನು ದುರುಪಯೋಗ ಪಡಿಸಿಕೊಂಡಿರುವ ತಪ್ಪಿತಸ್ಥ ಅಧಿಕಾರಿ /ನೌಕರರುಗಳು ಯಾವುದೇ ಶಿಕ್ಷೆ/ವಸೂಲಾತಿ ಇಲ್ಲದೆ ಅಪರಾಧಗಳಿಂದ ನಿರಾಯಾಸವಾಗಿ ಪಾರಾಗುತ್ತಿದ್ದಾರೆ. ಈ ನಿಟ್ಟಿನಲ್ಲಿ ಸಾರ್ವಜನಿಕರ ಹಣ ದುರ್ಬಳಕೆ ಆಗುತ್ತಿರುವುದನ್ನು ತಡೆಗಟ್ಟುವುದು ನಮ್ಮ-ನಿಮ್ಮೆಲ್ಲರ ಆದ್ಯ ಕರ್ತವ್ಯವಾಗಿರುತ್ತದೆ.

ಅವ್ಯವಹಾರ/ಹಣ ದುರುಪಯೋಗ ವಿಷಯಕ್ಕೆ ಸಂಬಂಧಿಸಿದಂತೆ, ಸಣ್ಣ ನೀರಾವರಿ ಇಲಾಖೆಯ ಭರವಸೆ ಸಂಖ್ಯೆ:313/1994 ಇದು ಸಮಿತಿಯ ಮುಂದೆ ಪರಿಶೀಲನೆಗೆ ಬಂದಾಗ 20 ವರ್ಷಗಳಷ್ಟು ಹಳೆಯ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಸಮಿತಿಯು ನೀಡಿದ ನಿರ್ದೇಶನದ ಮೇರೆಗೆ ಕ್ರಿಮಿನಲ್ ಕೇಸ್‌ಗಳನ್ನು ದಾಖಲಿಸಿ ಕ್ರಮ ಕೈಗೊಂಡಿರುವ ನಿದರ್ಶನವೂ ಇದೆ. ಇನ್ನು ಕೆಲವು ಪ್ರಕರಣಗಳಲ್ಲಿ, ಪ್ರಥಮ ತನಿಖಾ ವರದಿಯಲ್ಲಿ ಭ್ರಷ್ಟಾಚಾರ ಎಸಗಿರುವ ಆರೋಪ ಸಾಭೀತಾಗಿದ್ದರೂ ತದನಂತರ, ಲೋಕಾಯುಕ್ತ/ನ್ಯಾಯಾಲಯಗಳಲ್ಲಿ [illegible] ಪ್ರಕರಣಗಳಿಗೆ ಸಂಬಂದಪಟ್ಟಂತೆ ಇಲಾಖೆಯಿಂದ ಕಾಲಕಾಲಕ್ಕೆ ತನಿಖೆಗೆ ಬೇಕಾದ [illegible] ಮಾಹಿತಿಗಳನ್ನು ಒದಗಿಸದೆ ವಿಳಂಬ ನೀತಿಯನ್ನು ಅನುಸರಿಸುತ್ತಿರುವುದು ಮತ್ತು ನ್ಯಾಯಾಲಯದ ಮೊರೆ ಹೋಗಿ ತಡೆಯಾಜ್ಞೆ ತಂದಂತಹ ಪ್ರಕರಣಗಳಲ್ಲಿ ತಡೆಯಾಜ್ಞೆಯನ್ನು ತೆರವುಗೊಳಿಸಲು ಸೂಕ್ತ ಸಮಯದಲ್ಲಿ ಸೂಕ್ತ ಕ್ರಮ ಕೈಗೊಳ್ಳದೆ ಇರುವುದರಿಂದ ಆರೋಪಿತ ಅಧಿಕಾರಿ/ನೌಕರರುಗಳು ನಿರ್ದೋಷಿತರೆಂದು ಪರಿಗಣಿಸಲ್ಪಟ್ಟಿದ್ದು, ಕಾಲ ಕಾಲಕ್ಕೆ ಬಡ್ತಿ ಹಾಗೂ ನಿವೃತ್ತಿ ಹಾಗೂ ಸೇವಾ ಸೌಲಭ್ಯಗಳನ್ನು ಪಡೆದಿರುವುದನ್ನು ಸಮಿತಿಯು [illegible]

The Embassy, Flat No. 121, 15, Ali Asker Road, BANGALORE - 560 052 ★ Tel. : 2235 [illegible]
32-A, Y. Nagesh Sastry Nagar, 1st Cross, BELLARY - 583 101 ★ Tel. : 08392-258[illegible]

39



ಪರಿಗಣಿಸಿದೆ. ಇನ್ನೂ ಕೆಲ ಪ್ರಕರಣಗಳನ್ನು ಲೋಕಾಯುಕ್ತಕ್ಕೆ ವಹಿಸಲ್ಪಟ್ಟಿದೆ ಎಂದು ಹೇಳುತ್ತಾ ಹತ್ತಾರು ವರ್ಷಗಳನ್ನು ತಳ್ಳುತ್ತಾ, ತಪ್ಪಿತಸ್ಥರು ನಿವೃತ್ತಿ ಹೊಂದುವವರೆಗೂ ಕಾಲಹರಣ ಮಾಡುತ್ತಿರುವುದರ ಬಗ್ಗೆ ಸಹ ಸಮಿತಿಯು ಆತಂಕವನ್ನು ವ್ಯಕ್ತಪಡಿಸಿರುತ್ತದೆ.

ಆರೋಪ ಸಾಬೀತಾದಂತಹ ಪ್ರಕರಣಗಳಲ್ಲಿ ಭ್ರಷ್ಟಾಚಾರದ ಮೊತ್ತ ಕೋಟಿ ಕೋಟಿ ಇದ್ದರೂ ಸಹ ಕನಿಷ್ಠ ಶಿಕ್ಷೆ ವಿಧಿಸುವುದು, ಒಂದು ಅಥವಾ ಎರಡು ವಾರ್ಷಿಕ ಬಡ್ತಿಯನ್ನು ತಡೆಹಿಡಿದು ಬೇರೆಡೆಗೆ ವರ್ಗಾವಣೆ ಮಾಡುವುದು ಮತ್ತೆ ಅವರಿಗೆ ಬಡ್ತಿ ಸೌಲಭ್ಯ ನೀಡುವುದು ಕೆಲವೊಂದು ಪ್ರಕರಣಗಳಲ್ಲಿ ಕೆಳ ಹಂತದ ನೌಕರರಿಗೆ ಶಿಕ್ಷೆ ವಿಧಿಸಿ ಮೇಲಿನ ಹಂತದ ಅಧಿಕಾರಿಗಳಿಗೆ ಶಿಕ್ಷೆಯಾಗದಿರುವ ಅಂಶವನ್ನು ಸಹ ಸಮಿತಿ ಈಗಾಗಲೇ ತನ್ನ 46ನೇ ವರದಿಯಲ್ಲಿ ಉಲ್ಲೇಖಿಸಿರುತ್ತದೆ.

ಈ ಹಿನ್ನೆಲೆಯಲ್ಲಿ ದಿನಾಂಕ: 29.11.2018ರಂದು ಜಲ ಸಂಪನ್ಮೂಲ ಇಲಾಖೆಗೆ ಸಂಬಂಧಿಸಿದ ಬಾಕಿ ಭರವಸೆ ಬಗ್ಗೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ ಕಾರ್ಯದರ್ಶಿಯವರು ಹಾಜರಿದ್ದು, e-Governance ಮೂಲಕ Complete Disciplinary Enquiry Monitoring System Software ಅಭಿವೃದ್ಧಿ ಪಡಿಸಲಾಗಿದ್ದು, ಸರ್ಕಾರದಲ್ಲಿ ಅಭಿವೃದ್ಧಿ ಎಷ್ಟು ಮುಖ್ಯವೋ ಹಾಗೆಯೇ ಸಾರ್ವಜನಿಕರ ತೆರಿಗೆ ಹಣವನ್ನು ದುರುಪಯೋಗ ಪಡಿಸಿಕೊಳ್ಳುವುದು/ಸಾರ್ವಜನಿಕರ ಅಭಿವೃದ್ಧಿ ಕೆಲಸಕ್ಕಾಗಿ ಅವ್ಯವಹಾರ/ಲಂಚ ಪಡೆಯುವಂತಹ ಪ್ರಕರಣಗಳನ್ನು ತಡೆಯುವುದು/ನಿಗ್ರಹಿಸುವುದು ಸಹ ಅಷ್ಟೇ ಪ್ರಮುಖವಾದ ಮಹತ್ವದ ಕೆಲಸವಾಗಿರುತ್ತದೆ. ಇದನ್ನು ಇಷ್ಟರಲ್ಲೇ ಅಳವಡಿಸಿಕೊಳ್ಳಲಾಗುತ್ತಿದೆ ಎಂಬ ಅಂಶವನ್ನು ಸಮಿತಿಯ ಗಮನಕ್ಕೆ ತಂದಿರುವುದನ್ನು ಸಮಿತಿಯು ಸ್ವಾಗತಿಸಿರುತ್ತದೆ. ಭ್ರಷ್ಟಾಚಾರ, ಅವ್ಯವಹಾರದ ಪ್ರಕರಣಗಳಲ್ಲಿ ತ್ವರಿತವಾಗಿ ತನಿಖೆ ಪೂರ್ಣಗೊಳಿಸಿ, ತಪ್ಪಿತಸ್ಥರ ವಿರುದ್ಧ ಶಿಸ್ತು ಕ್ರಮ ಜರುಗಿಸುವಂತಾಗಲು ಎಲ್ಲಾ ಇಲಾಖಾ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿಯವರುಗಳು ಪ್ರತಿ ತಿಂಗಳಿಗೂ ಸಹ ಸಭೆಯನ್ನು ನಡೆಸಿ ಪ್ರಕರಣಗಳ ಪ್ರಗತಿಯನ್ನು ಪರಿಶೀಲಿಸಬೇಕು ಹಾಗೂ ಮುಖ್ಯ ಕಾರ್ಯದರ್ಶಿಯವರು ಪ್ರತಿ ಎರಡು ತಿಂಗಳಿಗೊಮ್ಮೆ ಇಲಾಖಾ ಮುಖ್ಯಸ್ಥರನ್ನು ಕರೆದು ವಿಳಂಬಕ್ಕೆ ಇರುವ ತಾಂತ್ರಿಕ ಕಾರಣಗಳನ್ನು ತಿಳಿದು ಅದಕ್ಕೆ ಪರಿಹಾರವನ್ನು ಕಂಡುಕೊಳ್ಳುವುದು ಸೂಕ್ತವಾಗಿರುತ್ತದೆ. ಇಂತಹ ಪ್ರಕರಣಗಳು ಮರುಕಳಿಸದಿರಲು ಈ ಸಂಬಂಧದಲ್ಲಿನ ತಂತ್ರಾಂಶವನ್ನು ಅಭಿವೃದ್ಧಿಪಡಿಸಿ ಅಳವಡಿಸಲು ಹೊರಟಿರುವುದಕ್ಕೆ ತಮಗೆ ಸಮಿತಿಯ ಅಧ್ಯಕ್ಷನಾಗಿ ಸಮಿತಿಯ ಪರವಾಗಿ ಶ್ಲಾಘನೆಯನ್ನು ವ್ಯಕ್ತಪಡಿಸುತ್ತೇನೆ. ಸಮಿತಿಯ 46ನೇ ವರದಿಯ ಮುನ್ನುಡಿಯಲ್ಲಿ ಉಲ್ಲೇಖಿಸಿರುವ ಲೋಕಾಯುಕ್ತ ಕಾಯಿದೆಗೆ ತಿದ್ದುಪಡಿ ತರುವ

. . .3

ಕೆ. ಸಿ. ಕೊಂಡಯ್ಯ
ವಿಧಾನ ಪರಿಷತ್ತು ಸದಸ್ಯರು
(ಮಾಜಿ ಸಂಸದ್ ಸದಸ್ಯರು)
K. C. Kondaiah, M.L.C.
(Former Member of Parliament)

40



ವಿಷಯವನ್ನೊಳಗೊಂಡಂತೆ ಎಲ್ಲ ಶಿಫಾರಸ್ಸುಗಳನ್ನು ಗಮನದಲ್ಲಿಟ್ಟುಕೊಂಡು ಕಾರ್ಯಪ್ರವೃತ್ತರಾಗಲು ಅನುವಾಗುವಂತೆ ಸದರಿ ಮುನ್ನುಡಿಯ ಪ್ರತಿಯನ್ನು ಸಹ ಇದರೊಂದಿಗೆ ಲಗತ್ತಿಸಿರುತ್ತೇನೆ.

ವಿಧಾನ ಪರಿಷತ್ತಿನ ಸರ್ಕಾರಿ ಭರವಸೆ ಸಮಿತಿಯ ಸದಸ್ಯನಾಗಿ ಅಧ್ಯಕ್ಷನಾಗಿಯೂ ಕರ್ತವ್ಯನಿರ್ವಹಿಸುತ್ತಿದ್ದು ನನ್ನ ಅನುಭವಕ್ಕೆ ಬಂದಿರುವ ಮೇಲ್ಕಂಡ ವಿಷಯಗಳನ್ನು ತಮ್ಮ ಗಮನಕ್ಕೆ ತರಲು ಇಚ್ಚಿಸಿ ಈ ಪತ್ರವನ್ನು ಬರೆದಿರುತ್ತೇನೆ. ಈ ಬಗ್ಗೆ ತಾವು ವೈಯಕ್ತಿಕ ಗಮನ ಹರಿಸಿ ಆದಷ್ಟು ಶೀಘ್ರವಾಗಿ ಇದನ್ನು ಜಾರಿಗೊಳಿಸಿದ್ದಲ್ಲಿ ಅವ್ಯವಹಾರ/ದುರ್ಬಳಕೆ ಪ್ರಕರಣಗಳನ್ನು ತಡೆಗಟ್ಟಬಹುದೆಂದು ಅಭಿಪ್ರಾಯಿಸುತ್ತೇನೆ.

ವಂದನೆಗಳೊಂದಿಗೆ,

ತಮ್ಮ ನಂಬುಗೆಯ,

(ಕೆ.ಸಿ.ಕೊಂಡಯ್ಯ)

ಶ್ರೀ ವಿಜಯಭಾಸ್ಕರ್ ಭಾ.ಆ.ಸೇ.,
ಸರ್ಕಾರದ ಮುಖ್ಯ ಕಾರ್ಯದರ್ಶಿ,
ಕರ್ನಾಟಕ ಸರ್ಕಾರ,
ವಿಧಾನ ಸೌಧ,
ಬೆಂಗಳೂರು.

ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಕಛೇರಿ
ಕಡತ / ಪತ್ರ / ಮನವಿ ಸ್ವೀಕರಿಸಲಾಗಿದೆ
ದಿನಾಂಕ 21.01.2019
@ 12:55 pm

6

The Embassy, Flat No. 121, 15, Ali Asker Road, BANGALORE - 560 052 ★ Tel. : 2235 1351, 2235 1353, Fax : 2235 1352
32-A, Y. Nagesh Sastry Nagar, 1st Cross, BELLARY - 583 101 ★ Tel. : 08392-258333 / 258111 258444, Fax : 258222
Mobile : 94480 68886 ★ Email : kck kondaiah@...

ಅನುಬಂಧ - III

ಕೆ.ಆರ್. ಮಹಾಲಕ್ಷ್ಮಿ
ಕಾರ್ಯದರ್ಶಿ(ಪ್ರ)
ಕರ್ನಾಟಕ ವಿಧಾನ ಪರಿಷತ್ತು
K.R. Mahalakshmi
Secretary (I/c)
Karnataka Legislative Council

TELEPHONE OFF : 080-22[illegible]0450
080-22033824 fax : 080-22[illegible]6892
TEL. RESI : 080-26791377 MOB : 9480[illegible]8095
E-mail : secyklcs@gmail.com
ಅಂಚೆ ಪೆಟ್ಟಿಗೆ ಸಂಖ್ಯೆ: 5079
ಕೊಠಡಿ ಸಂಖ್ಯೆ: 156-ಸಿ, 1ನೇ ಮಹಡಿ
ವಿಧಾನ ಸೌಧ, ಬೆಂಗಳೂರು - 560 001
P.B. No. 5079
Room No.156-C, 1st Floor
Vidhana Soudha, Bengaluru - 560 001

ದಿನಾಂಕ: 20.02.2019

ಸಂಖ್ಯೆ:ಕವಿಪ:ಭಸ:24:ಉಶಿ:2018

ಮಾನ್ಯ ಶ್ರೀ ಪ್ರಸಾದ್ ರವರೆ,

ಕರ್ನಾಟಕ ವಿಧಾನ ಪರಿಷತ್ತಿನ ಸರ್ಕಾರಿ ಭರವಸೆಗಳ ಸಮಿತಿಯು ದಿನಾಂಕ: 25.01.2019ರಂದು ಸಭೆ ಸೇರಿ ಉನ್ನತ ಶಿಕ್ಷಣ ಇಲಾಖೆಗೆ ಸಂಬಂಧಿಸಿದ ಭರವಸೆ ಸಂಖ್ಯೆ: 4834/2014-"**ರಾಜ್ಯದ ಪದವಿ ಕಾಲೇಜುಗಳಲ್ಲಿ ನಿವೃತ್ತಿ, ಮರಣ, ರಾಜಿನಾಮೆ ಇತ್ಯಾದಿ ಕಾರಣಕ್ಕಾಗಿ ತೆರವಾಗುವ ಕನ್ನಡ ಉಪನ್ಯಾಸಕರ ಹುದ್ದೆಗಳನ್ನು ಬೇರೆ ರಾಜ್ಯಗಳ ರೀತಿಯಲ್ಲಿ ವಿಶೇಷ ಕ್ರಮವಹಿಸಿ ತಕ್ಷಣ ಭರ್ತಿ ಮಾಡಿಕೊಳ್ಳಲು ಸರ್ಕಾರ ಕ್ರಮ ಕೈಗೊಳ್ಳುವ ಬಗ್ಗೆ**" ಚರ್ಚಿಸಿದ ಸಂದರ್ಭದಲ್ಲಿ ಉನ್ನತ ಶಿಕ್ಷಣ ಇಲಾಖೆಯ ಅಧಿಕಾರಿಗಳ ಉಪಸ್ಥಿತಿಯಲ್ಲಿ ಈ ಕೆಳಕಂಡ ನಿರ್ಣಯವನ್ನು ಕೈಗೊಂಡಿರುತ್ತದೆ.

<u>ಸಮಿತಿಯ ನಿರ್ಣಯ</u>

"ನಮ್ಮ ನೆರೆಯ ರಾಜ್ಯಗಳಾದ ಆಂಧ್ರಪ್ರದೇಶ ಮತ್ತು ತಮಿಳುನಾಡುಗಳಲ್ಲಿ ಕ್ರಮವಾಗಿ ತೆಲುಗು ಮತ್ತು ತಮಿಳು ವಿಷಯದ ಬೋಧಕ ಹುದ್ದೆ ಖಾಲಿಯಾದಂತಹ ಸಂದರ್ಭದಲ್ಲಿ ಹಣಕಾಸು ಇಲಾಖೆಯ ಅನುಮತಿಯನ್ನು ಪಡೆಯುವ ಅಗತ್ಯವಿಲ್ಲದೆ: ಹುದ್ದೆಯು ಖಾಲಿ ಆದ ತಕ್ಷಣ ಅದನ್ನು ಭರ್ತಿ ಮಾಡಿಕೊಳ್ಳುವುದಕ್ಕೆ ಅವಕಾಶವನ್ನು ಕಲ್ಪಿಸಲಾಗಿದೆ. ಅಂತೆಯೇ ಕರ್ನಾಟಕದಲ್ಲಿ ಕನ್ನಡ ಭಾಷೆ. ನೆಲ-ಜಲವನ್ನು ಉಳಿಸಲು ಹಾಗೂ ಬೆಳೆಸಲು ಕನ್ನಡ ವಿಷಯದ ಬೋಧಕರ ಹುದ್ದೆಯು ಅವಶ್ಯಕವಾಗಿರುತ್ತದೆ. ಆದುದರಿಂದ. ಕರ್ನಾಟಕ ರಾಜ್ಯದಲ್ಲಿಯೂ ಕನ್ನಡ ವಿಷಯದ ಬೋಧಕ ಹುದ್ದೆ ಖಾಲಿ ಆದ ತಕ್ಷಣ ಭರ್ತಿ ಮಾಡಿಕೊಳ್ಳಲು ಹಣಕಾಸು ಇಲಾಖೆಯ ಯಾವುದೇ ಪೂರ್ವಾನುಮತಿಯ ಅಗತ್ಯವಿಲ್ಲವೆಂದು ತೀರ್ಮಾನಿಸಿ. ಕನ್ನಡ ಬೋಧನೆಯಲ್ಲಿ ಯಾವುದೇ ವ್ಯತ್ಯಯವಾಗದಂತೆ ನಿರಂತರತೆಯನ್ನು ಕಾಯ್ದುಕೊಳ್ಳಲು ಬೋಧಕ ಹುದ್ದೆಯ ನೇಮಕಾತಿಗೆ ಅವಕಾಶ ಕಲ್ಪಿಸಬೇಕೆಂದು ಇಂದಿನ ಸಭೆಯು ನಿರ್ಣಯಿಸುತ್ತದೆ."

... 2

ರ್. ಮಹಾಲಕ್ಷ್ಮಿ
ಕಾರ್ಯದರ್ಶಿ (ಪ್ರ)
ಕರ್ನಾಟಕ ವಿಧಾನ ಪರಿಷತ್ತು
R. Mahalakshmi
Secretary (I/c)
Karnataka Legislative Council

TELEPHONE OFF : 080-22250450
080-22033824 fax : 080-22256892
TEL. RESI : 080-26791377 MOB : 9480198095
E-mail : secyklcs@gmail.com
ಅಂಚೆ ಪೆಟ್ಟಿಗೆ ಸಂಖ್ಯೆ: 5079
ಕೊಠಡಿ ಸಂಖ್ಯೆ: 156-ಸಿ, 1ನೇ ಮಹಡಿ
ವಿಧಾನ ಸೌಧ, ಬೆಂಗಳೂರು - 560 001
P.B. No. 5079
Room No.156-C, 1st Floor
Vidhana Soudha, Bengaluru - 560 001



ಮೇಲ್ಕಂಡ ನಿರ್ಣಯವನ್ನು ಕಾರ್ಯರೂಪಕ್ಕೆ ತರಲು ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಕೋರುತ್ತೇನೆ.

ವಂದನೆಗಳೊಂದಿಗೆ,

ತಮ್ಮ ನಂಬುಗೆಯ,

ಸಹಿ/-

ಶ್ರೀ ಐ.ಎಸ್.ಎನ್. ಪ್ರಸಾದ್, ಭಾ.ಆ.ಸೇ.,
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಆರ್ಥಿಕ ಇಲಾಖೆ,
ವಿಧಾನಸೌಧ,
ಬೆಂಗಳೂರು.

21/2/19

ಪ್ರತಿ: ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ, ಬಹು ಮಹಡಿಗಳ ಕಟ್ಟಡ, ಬೆಂಗಳೂರು - ಇವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿಕೊಡಲಾಗಿದೆ.

21/2/19

(ಕೆ.ಆರ್. ಮಹಾಲಕ್ಷ್ಮಿ)
ಕಾರ್ಯದರ್ಶಿ (ಪ್ರ)

ಕೆ.ಆರ್. ಮಹಾಲಕ್ಷ್ಮಿ
ಕಾರ್ಯದರ್ಶಿ(ಪ್ರ)
ಕರ್ನಾಟಕ ವಿಧಾನ ಪರಿಷತ್ತು
K.R. Mahalakshmi
Secretary (I/c)
Karnataka Legislative Council

TELEPHONE OFF : 080-222504
080-22033824 fax : 080-222568
TEL. RESI : 080-26791377 MOB : 94801980
E-mail : secyklcs@gmail.co
ಅಂಚೆ ಪೆಟ್ಟಿಗೆ ಸಂಖ್ಯೆ: 507
ಕೊಠಡಿ ಸಂಖ್ಯೆ: 156-ಸಿ, 1ನೇ ಮಹ
ವಿಧಾನ ಸೌಧ, ಬೆಂಗಳೂರು - 560 0
P.B. No. 507
Room No.156-C, 1st Flo
Vidhana Soudha, Bengaluru - 560 0

ದಿನಾಂಕ: 13/3/2019

ಡಾ: ಬಸವರಾಜು ರವರೆ,

ಕರ್ನಾಟಕ ವಿಧಾನ ಪರಿಷತ್ತಿನ ಭರವಸೆಗಳ ಸಮಿತಿಯ ದಿನಾಂಕ: 21.2.2019ರಂದು ನಡೆದ ಸಾರಿಗೆ ಇಲಾಖೆಗೆ ಸಂಬಂಧಿಸಿದಂತಹ ಭರವಸೆ ಸಂಖ್ಯೆ: 5578/2014 – "ರಾಜ್ಯದಲ್ಲಿ ಖಾಸಗಿ ಬಸ್ಸಿನ ಮಾಲೀಕರು ಹಬ್ಬದ ಸಂದರ್ಭಗಳಲ್ಲಿ ಪ್ರಯಾಣಿಕರಿಂದ ದುಬಾರಿ ದರವನ್ನು ಪಡೆದುಕೊಳ್ಳುತ್ತಿರುವ ಬಗ್ಗೆ" ಚರ್ಚಿಸುವ ಸಂದರ್ಭದಲ್ಲಿ ಈ ಕೆಳಕಂಡ ಅಂಶಗಳ ಬಗ್ಗೆ ಸುಧೀರ್ಘವಾಗಿ ಚರ್ಚಿಸಿತು:-

1) ಹಬ್ಬ ಹರಿದಿನಗಳು ಮತ್ತು ಜಾತ್ರೆ ಸಮಯದಲ್ಲಿ ಬಸ್ಸಿನ ಪ್ರಯಾಣ ದರವನ್ನು ಅವೈಜ್ಞಾನಿಕವಾಗಿ ಒಂದೂವರೆ ಪಟ್ಟು ಹೆಚ್ಚಿಸುವ ಮೂಲಕ ಪ್ರಯಾಣಿಕರಿಂದ ವಸೂಲಿ ಮಾಡುತ್ತಿರುವ ಕುರಿತು.
2) ಒಂದೇ ಪರ್ಮಿಟ್‌ನಲ್ಲಿ ಹಲವು ಬಸ್ಸುಗಳನ್ನು ಓಡಿಸುತ್ತಿರುವುದು.
3) ನಗರದ ಸಾರಿಗೆ ಸಂಸ್ಥೆಗಳ ಬಸ್ ನಿಲ್ದಾಣದಿಂದ, ಗ್ರಾಮೀಣ ಭಾಗಗಳ 200 ಮೀಟರ್ ವ್ಯಾಪ್ತಿಯ ಒಳಗೆ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ 500 ಮೀಟರ್ ವ್ಯಾಪ್ತಿಯೊಳಗೆ ಖಾಸಗಿ ಬಸ್ಸುಗಳಿಗೆ ನಿಷೇಧವಿದ್ದರೂ ಸಹ ನಿಯಮ ಪಾಲನೆ ಮಾಡುತ್ತಿಲ್ಲದಿರುವ ಕುರಿತು.
4) ಆಟೋ ರಿಕ್ಷಾಗಳು ಪ್ರಯಾಣಿಕರು ಕೋರಿದಡೆ ಬಾರದಿರುವ, ಮೀಟರ್ ಇದ್ದರೂ ಸಹ ಅದನ್ನು ಉಪಯೋಗಿಸದಿರುವ ಹಾಗೂ ದುಪ್ಪಟ್ಟು ದರ ವಸೂಲು ಮಾಡುತ್ತಿರುವ ಘಟನೆಗಳು ದಿನದಿಂದ ದಿನಕ್ಕೆ ಹೆಚ್ಚುತ್ತಿದ್ದು, ಇಂತಹವರನ್ನು ಕಡಿವಾಣ ಹಾಕುವ ಕುರಿತು.

ಈ ಮೇಲ್ಕಂಡ ವಿಷಯಗಳ ಬಗ್ಗೆ ಅನೇಕ ಮಾನ್ಯ ಸದಸ್ಯರುಗಳು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾ ಈ ನ್ಯೂನತೆಗಳನ್ನು ಸರಿಪಡಿಸಲು ಸೂಕ್ತ ನಿಯಮಾವಳಿಗಳನ್ನು ತರುವ ಬಗ್ಗೆ ಪ್ರಸ್ತಾಪಿಸಿರುತ್ತಾರೆ.

ಮುಂದುವರಿದಂತೆ, ಸಮಿತಿಯು ಹಬ್ಬ ಹರಿದಿನಗಳಲ್ಲಿ ಕೆ.ಎಸ್.ಆರ್.ಟಿ.ಸಿ. ಸಂಸ್ಥೆಯು ಯಾವ ಮಾನದಂಡದಡಿ ಪ್ರಯಾಣ ದರವನ್ನು ಹೆಚ್ಚಿಗೆಗೊಳಿಸುತ್ತದೆಯೋ, ಅದೇ ಮಾನದಂಡದಡಿ ಖಾಸಗಿ ಬಸ್ ಮಾಲೀಕರುಗಳೂ ಸಹ ಪ್ರಯಾಣ ದರವನ್ನು ನಿಗಧಿಪಡಿಸಿ, ಪ್ರಯಾಣಿಕರಿಂದ ಪಡೆಯಬೇಕು ಎಂದು ಸಲಹೆ ನೀಡಿ ತಪ್ಪಿದ್ದಲ್ಲಿ, ಅದು ಕಾನೂನು ರೀತ್ಯಾ ಅಪರಾಧವೆಂದು ಪರಿಗಣಿಸಿ, ಖಾಸಗಿ ಬಸ್ ಮಾಲೀಕರಿಗೆ ಹೆಚ್ಚಿನ ಮೊತ್ತದ ದಂಡ ವಸೂಲಿ ಮಾಡುವುದರೊಂದಿಗೆ, ಮಾರ್ಗದ ಪರ್ಮಿಟ್‌ನ್ನು ರದ್ದುಪಡಿಸುವ ಬಗ್ಗೆ ನಿಯಮಾವಳಿಗಳನ್ನು ಅನುಷ್ಠಾನ ತರುವುದರ ಮೂಲಕ, ಖಾಸಗಿ ಬಸ್ ಮಾಲೀಕರು ನಡೆಸುತ್ತಿರುವ ಮೇಲ್ಕಂಡ ನಿಯಮಬಾಹಿರ ಚಟುವಟಿಕೆಗಳನ್ನು ಪರಿಣಾಮಕಾರಿಯಾಗಿ ತಡೆಗಟ್ಟುವುದು ಸೂಕ್ತವೆಂದು ಸಮಿತಿಯು ಅಭಿಪ್ರಾಯಿಸಿರುತ್ತದೆ. (ದಿನಾಂಕ: 21.2.2019ರ ಸಭೆಯ ನಡವಳಿಯ ಉದ್ಧೃತ ಭಾಗವನ್ನು ಲಗತ್ತಿಸಿದೆ).

ಅದರಂತೆ, ಖಾಸಗಿ ಬಸ್‌ಗಳ ನಿಯಮಬಾಹಿರ ಚಟುವಟಿಕೆಗಳಿಗೆ ಕಡಿವಾಣ ಹಾಕುವಲ್ಲಿ ಸಮಿತಿಯು ಸೂಚಿಸಿರುವಂತೆ ಕೂಡಲೇ ಅಗತ್ಯ ಕ್ರಮ ತೆಗೆದುಕೊಳ್ಳುವ ಬಗ್ಗೆ ತಮ್ಮನ್ನು ಕೋರಲು ನಿರ್ದೇಶಿಸಲ್ಪಟ್ಟಿದ್ದೇನೆ.

ಆದರಗಳೊಡನೆ.

ತಮ್ಮ ವಿಶ್ವಾಸಿ,

ಡಾ: ಬಿ. ಬಸವರಾಜು, ಭಾ.ಆ.ಸೇ.,
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಸಾರಿಗೆ ಇಲಾಖೆ, ಬಹುಮಹಡಿಗಳ ಕಟ್ಟಡ,
ಬೆಂಗಳೂರು.

ಅನುಬಂಧ-V

ಕೆ. ಸಿ. ಕೊಂಡಯ್ಯ
ವಿಧಾನ ( ಷತ್ತು ಸದಸ್ಯರು
(ಮಾ ಂಸದ್ ಸದಸ್ಯರು)
K. C. Kondaiah, M.L.C.
(Former Member of Parliament)

ದಿನಾಂಕ: 5.3.2019

8/3/19

ಮಾನ್ಯ ಶ್ರೀ ವಿಜಯಭಾಸ್ಕರ್‌ರವರೆ,

ದಿನಾಂಕ 21.2.2019 ರಂದು ನಡೆದ ವಿಧಾನ ಪರಿಷತ್ತಿನ ಭರವಸೆಗಳ ಸಮಿತಿಯ ಸಭೆಯಲ್ಲಿ ಸಾರಿಗೆ ಇಲಾಖೆಗೆ ಸಂಬಂಧಿಸಿದ ಭರವಸೆ ಸಂಖ್ಯೆ 5856/2015 " ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳ ಗ್ರಾಮೀಣ ಪ್ರದೇಶಗಳಿಗೆ ಸರ್ಕಾರಿ ಬಸ್ ಸೌಲಭ್ಯ ಒದಗಿಸುವಲ್ಲಿ ವಿಳಂಬವಾಗುತ್ತಿರುವ ಬಗ್ಗೆ ಮತ್ತು ಭರವಸೆ ಸಂಖ್ಯೆ: 5863/2016 " ಮೈಸೂರು-ಚಾಮರಾಜನಗರ ಜಿಲ್ಲೆಯಲ್ಲಿ ಬಸ್ ಸೌಕರ್ಯಗಳಿಂದ ವಂಚಿತರಾಗಿರುವ ಗ್ರಾಮಗಳಿಗೆ ಕಾಲಮಿತಿಯಲ್ಲಿ ಬಸ್ ಸೌಕರ್ಯ ಒದಗಿಸುವ ಬಗ್ಗೆ" ಚರ್ಚಿಸಿದ ಸಂದರ್ಭದಲ್ಲಿ ಕಲಬುರಗಿ ಜಿಲ್ಲೆಯಲ್ಲಿ 37 ಗ್ರಾಮಗಳ ಪೈಕಿ 16 ಗ್ರಾಮಗಳು ಹಾಗೂ ಯಾದಗಿರಿ ಜಿಲ್ಲೆಯಲ್ಲಿ 10 ಗ್ರಾಮಗಳ ಪೈಕಿ 7 ಗ್ರಾಮಗಳು ಇದೇ ರೀತಿ ಮೈಸೂರು ಜಿಲ್ಲೆಯಲ್ಲಿ 1225 ಗ್ರಾಮಗಳ ಪೈಕಿ 41 ಗ್ರಾಮಗಳು ಸಾರಿಗೆ ಸೌಲಭ್ಯದಿಂದ ವಂಚಿತವಾಗಿರುವ ಬಗ್ಗೆ ಹಾಗೂ ಚಾಮರಾಜನಗರ ಜಿಲ್ಲೆಯಲ್ಲಿ ಒಟ್ಟು 582 ಗ್ರಾಮಗಳ ಪೈಕಿ ಇನ್ನೂ 29 ಹಳ್ಳಿಗಳು ಯೋಗ್ಯ ಸಂಪರ್ಕ ರಸ್ತೆ ಇಲ್ಲದ ಕಾರಣ ಸಾರಿಗೆ ಸೌಲಭ್ಯವನ್ನು ಒದಗಿಸಲಾಗಿಲ್ಲವೆಂಬ ಅಂಶವನ್ನು ಸಮಿತಿಯ ಗಮನಕ್ಕೆ ತಂದಿರುತ್ತಾರೆ.

ಸ್ವಾತಂತ್ರ್ಯ ಬಂದು 70 ವರ್ಷಗಳಾಗಿದ್ದರೂ ಸಹ ಇನ್ನೂ ಕೆಲವು ಹಳ್ಳಿಗಳಿಗೆ ಸಂಪರ್ಕ ರಸ್ತೆ ಕಲ್ಪಿಸದಿರುವುದು ವಿಷಾಧನೀಯವಾದುದು. ಸರ್ಕಾರದ ಯೋಜನೆಗಳು/ಮೂಲಭೂತ ಸೌಕರ್ಯಗಳು/ಸೌಲಭ್ಯಗಳು ಹಳ್ಳಿಯ ಮೂಲೆ ಮೂಲೆಗಳಲ್ಲಿರುವ ಪ್ರತಿಯೊಬ್ಬ ನಾಗರೀಕರಿಗೂ ದೊರಕಬೇಕೆನ್ನುವುದೇ ನಮ್ಮ ಮೂಲ ಉದ್ದೇಶ. ಅನುಬಂಧ-1 ಮತ್ತು 2 ರಲ್ಲಿ ವಿವರಿಸಿರುವ ಹಳ್ಳಿ/ಗ್ರಾಮಗಳಿಗೆ ಯಾವ ಯಾವ ಕಾರಣದಿಂದ ರಸ್ತೆ ಸಂಪರ್ಕವನ್ನು ನೀಡಿಲ್ಲ ಎಂಬುದನ್ನು ಪ್ರಥಮವಾಗಿ ತಿಳಿದುಕೊಳ್ಳಬೇಕಾಗಿರುವುದರಿಂದ ಸಂಬಂಧಪಟ್ಟ ಜಿಲ್ಲಾಧಿಕಾರಿಯವರೊಂದಿಗೆ ಸಭೆ ಕರೆದು ಹೆಚ್.ಕೆ.ಡಿ.ಬಿ. ಮತ್ತು ಗಡಿ ಅಭಿವೃದ್ಧಿ ಪ್ರಾಧಿಕಾರಗಳಿಂದ ವಿಶೇಷ ಅನುದಾನವನ್ನು ಪಡೆದು ತುರ್ತಾಗಿ ಸಂಪರ್ಕ ರಸ್ತೆಗಳನ್ನು ನಿರ್ಮಿಸುವುದರ ಜೊತೆಗೆ ಪ್ರತಿ ಹಳ್ಳಿಗೂ ತ್ವರಿತವಾಗಿ ಸಾರಿಗೆ ಸೌಲಭ್ಯವನ್ನು ಒದಗಿಸುವ ನಿಟ್ಟಿನಲ್ಲಿ ಕ್ರಮ ವಹಿಸಲು ಸಂಬಂಧಪಟ್ಟವರಿಗೆ ತಾವು ಸೂಕ್ತ ನಿರ್ದೇಶನ ನೀಡಬೇಕೆಂದು ಕೋರುತ್ತೇನೆ. (ರಸ್ತೆ ಸಂಪರ್ಕದಿಂದ ವಂಚಿತ ಹಳ್ಳಿಗಳ ಪಟ್ಟಿ ಹಾಗೂ ಸಮಿತಿಯ ನಡವಳಿಯ ಉದ್ಧೃತ ಭಾಗವನ್ನು ಇದರೊಂದಿಗೆ ಲಗತ್ತಿಸಲಾಗಿದೆ.)

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

(ಕೆ.ಸಿ.ಕೊಂಡಯ್ಯ)

ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಕಛೇರಿ
~~ಕಡತ~~ / ಪತ್ರ / ~~ಮನವಿ~~ ಸ್ವೀಕರಿಸಲಾಗಿದೆ
ದಿನಾಂಕ: 08-03-2019 ಸಹಿ
@ 11:18 Am

ಶ್ರೀ ವಿಜಯಭಾಸ್ಕರ್ ಭಾ.ಆ.ಸೇ.,
ಸರ್ಕಾರದ ಮುಖ್ಯ ಕಾರ್ಯದರ್ಶಿ,
ಕರ್ನಾಟಕ ಸರ್ಕಾರ, ವಿಧಾನ ಸೌಧ,

The Embassy, Flat No. 121, 15, Ali Asker Road, BANGALORE - 560 052 ★ Tel. : 2235 1351, 2235 1353, Fax : 2235 1352
32-A, Y. Nagesh Sastry Nagar, 1st Cross, BELLARY - 583 101 ★ Tel. : 08392-258333 / 258111 258444, Fax : 258222
Mobile : 94480 68886 ★ Email : kck.kondaiah@gmail.com

ಅನುಬಂಧ - VI

58

ಕೆ. ಸಿ. ಕೊಂಡಯ್ಯ
ವಿಧಾನ ಪ ತ್ತು ಸದಸ್ಯರು
(ಮಾಜಿ ಸಂಸದ್ ಸದಸ್ಯರು)
K. C. Kondaiah, M.L.C.
(Former Member of Parliament)

ಮಾನ್ಯ ಶ್ರೀ ವಿಜಯಭಾಸ್ಕರ್‌ರವರೆ,

ದಿನಾಂಕ:15.06.2019

ದಿನಾಂಕ:06.06.2019ರಂದು ನಡೆದ ಕರ್ನಾಟಕ ವಿಧಾನ ಪರಿಷತ್ತಿನ ಸರ್ಕಾರಿ ಭರವಸೆಗಳ ಸಮಿತಿಯ ಸಭೆಯಲ್ಲಿ ಸಣ್ಣ ನೀರಾವರಿ ಇಲಾಖೆಯ ಭರವಸೆ ಸಂಖ್ಯೆ:6292/2017 **"ಧಾರವಾಡ, ಗದಗ ಹಾಗೂ ಹಾವೇರಿ ಜಿಲ್ಲೆಗಳ ವ್ಯಾಪ್ತಿಯ ಕೆರೆಗಳಿಗೆ ನೀರುಣಿಸುವ ಯೋಜನೆಯನ್ನು ಪೂರ್ಣಗೊಳಿಸುವ ವಿಷಯಕ್ಕೆ ಸಂಬಂಧಿಸಿದಂತೆ"** ಧಾರವಾಡ, ಗದಗ ಮತ್ತು ಹಾವೇರಿ ಜಿಲ್ಲೆಗಳಲ್ಲಿರುವ ಕೆರೆಗಳಿಗೆ ಏತ ನೀರಾವರಿ ಯೋಜನೆಗಳ ಮೂಲಕ ನೀರು ತುಂಬಿಸುವ ಯೋಜನೆಯಡಿಯಲ್ಲಿ ಒಟ್ಟು 10 ಕಾಮಗಾರಿಗಳನ್ನು ರೂ.3783.00 ಲಕ್ಷಗಳಿಗೆ ಕೈಗೆತ್ತಿಕೊಂಡು ಇದುವರೆಗೆ 2 ಯೋಜನೆಗಳನ್ನು ಪೂರ್ಣಗೊಳಿಸಲಾಗಿದೆ ಹಾಗೂ ಇನ್ನುಳಿದ 8 ಕಾಮಗಾರಿಗಳು ಪ್ರಗತಿಯಲ್ಲಿರುವುದಾಗಿ. 3 ಕಾಮಗಾರಿಗಳಿಗೆ ತಾಂತ್ರಿಕ ಮಂಜೂರಾತಿ ನೀಡಬೇಕಾಗಿದೆಯೆಂದು ಕೆಲವು ಟೆಂಡರ್ ಪ್ರಕ್ರಿಯೆ ಹಂತದಲ್ಲಿ ಹಾಗೂ ಕಾರ್ಯದೇಶ ನೀಡಲು ಬಾಕಿ ಇದೆ ಎಂಬುದಾಗಿ ನೀಡಿರುವ ಉಚಿತ ಉತ್ತರವನ್ನು ಗಮನಿಸಿದ ಸಮಿತಿಯು ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿರುತ್ತದೆ.

ಈ ಹಿನ್ನಲೆಯಲ್ಲಿ ಏತ ನೀರಾವರಿ ಯೋಜನೆ ಅಡಿಯಲ್ಲಿ ಬಾಕಿ ಇರುವ ಎಲ್ಲ ಕಾಮಗಾರಿಗಳನ್ನು ನಿಗದಿತ ಅವಧಿಯೊಳಗೆ ಕೈಗೆತ್ತಿಕೊಂಡು ಮುಕ್ತಾಯಗೊಳಿಸುವುದರ ಜೊತೆಗೆ ಗುಣಮಟ್ಟದ ಕೆಲಸ ನಡೆಯುವಂತಾಗಬೇಕೆಂದು ಸಮಿತಿಯು ಅಪೇಕ್ಷಿಸಿರುತ್ತದೆ. ತನ್ಮೂಲಕ ಇಡೀ ರಾಜ್ಯದಲ್ಲಿರುವ ಎಲ್ಲಾ ಸಣ್ಣ ನೀರಾವರಿ ಕೆರೆಗಳನ್ನು ತುಂಬಿಸಿ ಅಂತರ್ಜಲ ವೃದ್ಧಿಸುವ ನಿಟ್ಟಿನಲ್ಲಿ ಸಣ್ಣ ಕೆರೆಗಳಿಗೆ ಮರುಜೀವ ನೀಡಲು ಆದ್ಯತೆ ಮೇರೆಗೆ ಅವಶ್ಯಕ ಕ್ರಮಗಳನ್ನು ಜರುಗಿಸಬೇಕಾಗಿರುತ್ತದೆ. ಇದರಿಂದ ರೈತಾಪಿ ವರ್ಗಕ್ಕೂ ಸಹ ಉಪಯೋಗವಾಗುವ ನಿಟ್ಟಿನಲ್ಲಿ ತಮ್ಮ ಹಂತದಲ್ಲಿ ಸಂಬಂಧಪಟ್ಟ ಇಲಾಖಾಧಿಕಾರಿಗಳ ಸಭೆಯನ್ನು ಕರೆದು ಈ ಎಲ್ಲಾ ಕಾರ್ಯಗಳನ್ನು ಶರವೇಗದಲ್ಲಿ ಪೂರ್ಣಗೊಳಿಸಲು ನಿರ್ದೇಶನ ನೀಡಬೇಕೆಂದು ಕೋರುತ್ತೇನೆ.

ವಂದನೆಗಳೊಂದಿಗೆ.

ತಮ್ಮ ವಿಶ್ವಾಸಿ.

(ಕೆ.ಸಿ.ಕೊಂಡಯ್ಯ)
ಅಧ್ಯಕ್ಷರು
ವಿಧಾನ ಪರಿಷತ್ತಿನ ಸರ್ಕಾರಿ ಭರವಸೆಗಳ ಸಮಿತಿ

**ಶ್ರೀ ಟಿ.ಎಂ.ವಿಜಯಭಾಸ್ಕರ್, ಭಾ.ಆ.ಸೇ.,**
ಸರ್ಕಾರದ ಮುಖ್ಯ ಕಾರ್ಯದರ್ಶಿ,
ಕರ್ನಾಟಕ ಸರ್ಕಾರ,
ವಿಧಾನ ಸೌಧ.

The Embassy, Flat No. 121, 15, Ali Asker Road, BANGALORE - 560 052 ★ Tel. : 2235 1351, 2235 1353, Fax : 2235 1352
32-A, Y. Nagesh Sastry Nagar, 1st Cross, BELLARY - 583 101 ★ Tel. : 08392-258333 / 258111 258444, Fax : 258222
Mobile : 94480 68886 ★ Email : kck kondaiah@gmail.com

ಕೆ. ಸಿ. ಕೊಂಡಯ್ಯ
ವಿಧಾನ ಪರಿಷತ್ತು ಸದಸ್ಯರು
(ಮಾಜಿ ಸಂಸದ್ ಸದಸ್ಯರು)

*K. C. Kondaiah*, M.L.C.
(Former Member of Parliament)

ಅನುಬಂಧ-VII

59

24.06.2019

ಸಂಖ್ಯೆ:ಕವಿಪ:ಭಸ:34/ಉಶಿ/2018

ಮಾನ್ಯ ಶ್ರೀ ವಿಜಯ ಭಾಸ್ಕರ್ ರವರೆ,

ಕರ್ನಾಟಕ ವಿಧಾನ ಪರಿಷತ್ತಿನ ಸರ್ಕಾರಿ ಭರವಸೆಗಳ ಸಮಿತಿಯು ದಿನಾಂಕ: 06.05.2019ರಂದು ಸಭೆ ಸೇರಿ ಉನ್ನತ ಶಿಕ್ಷಣ ಇಲಾಖೆಗೆ ಸಂಬಂಧಿಸಿದ ಭರವಸೆ ಸಂಖ್ಯೆ: 6207/2015-"**ರಾಜ್ಯದ ಶಾಲಾ ಕಾಲೇಜುಗಳಲ್ಲಿ ಎನ್.ಸಿ.ಸಿ. ಅಧಿಕಾರಿಯಾಗಿ ಸೇವೆ ಸಲ್ಲಿಸುತ್ತಿರುವ ಶಿಕ್ಷಕ ಹಾಗೂ ಉಪನ್ಯಾಸಕರುಗಳಿಗೆ ನೀಡುವ ಗೌರವ ಧನದ ಮೊತ್ತವನ್ನು ಪರಿಷ್ಕರಿಸುವ ಬಗ್ಗೆ**" ಚರ್ಚಿಸಿದ ಸಂದರ್ಭದಲ್ಲಿ ಅಯಾಯ ಕಾಲೇಜುಗಳಲ್ಲಿ ಮತ್ತು ಎಲ್ಲಾ ವಿಶ್ವವಿದ್ಯಾಲಯಗಳಲ್ಲಿ ಎನ್‌ಸಿಸಿ ಮತ್ತು ಎನ್‌ಎಸ್‌ಎಸ್ ಘಟಕಗಳನ್ನು ಪ್ರಾರಂಭ ಮಾಡಿದರೆ ಮಕ್ಕಳಲ್ಲಿ ರಾಷ್ಟ್ರೀಯ ಭಾವನೆ ಮೂಡುತ್ತದೆ. ಹೈಸ್ಕೂಲ್ ಮಟ್ಟದಲ್ಲೇ ಶಾಲೆಗಳಲ್ಲಿ ಎನ್‌ಸಿಸಿ ಘಟಕಗಳನ್ನು ತೆರೆಯುವುದರಿಂದ ಸಿಆರ್‌ಪಿಎಫ್ ಮತ್ತು ಪೋಲೀಸ್ ಇಲಾಖೆಗಳಲ್ಲಿ ವೃತ್ತಿಗೆ ಬೇಕಾದ ನೈಪುಣ್ಯತೆ ದೊರಕುತ್ತದೆ ಹಾಗೂ ಪ್ಯಾರಾ ಮಿಲಿಟರಿ ಪಡೆ ಮತ್ತು ರಕ್ಷಣಾ ಪಡೆಗಳಲ್ಲಿ ಹೆಚ್ಚು ಹೆಚ್ಚು ಉದ್ಯೋಗಾವಕಾಶಗಳು ಸೃಷ್ಟಿಯಾಗುವುದನ್ನು ಮನಗಂಡು ರಾಜ್ಯದ ಶಾಲಾ ಕಾಲೇಜುಗಳಲ್ಲಿ ಎನ್‌ಸಿಸಿ ಮತ್ತು ಎನ್‌ಎಸ್‌ಎಸ್ ಘಟಕಗಳನ್ನು ಪ್ರಾರಂಭ ಮಾಡುವ ಬಗ್ಗೆ ಸಮಿತಿಯು ಶಿಫಾರಸ್ಸು ಮಾಡುತ್ತಿದ್ದು ಈ ವಿಷಯವಾಗಿ ತ್ವರಿತವಾಗಿ ಅನುಷ್ಠಾನಗೊಳಿಸುವ ಬಗ್ಗೆ ಸೂಕ್ತ ಕ್ರಮ ಕೈಗೊಂಡು ಸಮಿತಿಯ ಗಮನಕ್ಕೆ ಕೈಗೊಂಡ ಕ್ರಮದ ಬಗ್ಗೆ ಮಾಹಿತಿಯನ್ನು ಒದಗಿಸಬೇಕೆಂದು ಕೋರುತ್ತೇನೆ.

ವಂದನೆಗಳೊಂದಿಗೆ.

ತಮ್ಮ ವಿಶ್ವಾಸಿ.

(ಕೆ.ಸಿ. ಕೊಂಡಯ್ಯ)
ಅಧ್ಯಕ್ಷರು,
ವಿಧಾನ ಪರಿಷತ್ತಿನ ಸರ್ಕಾರಿ ಭರವಸೆಗಳ ಸಮಿತಿ

ಶ್ರೀ ಟಿ.ಎಂ. ವಿಜಯ ಭಾಸ್ಕರ್. ಭಾ.ಆ.ಸೇ.,
ಸರ್ಕಾರದ ಮುಖ್ಯ ಕಾರ್ಯದರ್ಶಿ.
ಕರ್ನಾಟಕ ಸರ್ಕಾರ.
ವಿಧಾನಸೌಧ:
ಬೆಂಗಳೂರು.

The Embassy, Flat No. 121, 15, Ali Asker Road, BANGALORE - 560 052 ★ Tel. : 2235 1351, 2235 1353, Fax : 2235 1352
32-A, Y. Nagesh Sastry Nagar, 1st Cross, BELLARY - 583 101 ★ Tel. : 08392-258333 / 258111 258444, Fax : 258222
Mobile : 94480 68886 ★ Email : kck.kondaiah@gmail.com

ಕೆ. ಸಿ. ಕೊಂಡಯ್ಯ
ವಿಧಾನಪರಿಷತ್ತು ಸದಸ್ಯರು
(ಮಾಜಿ ಲೋಕಸಭಾ ಸದಸ್ಯರು)
K. C. Kondaiah, M.L.C.
(Former Member of Parliament)

60

ಅನುಬಂಧ-VIII

ಪ.ಸಂ:ಕೆಸಿಕೆ/364/2019

ಬಳ್ಳಾರಿ
04-07-2019

ಶ್ರೀ ಉಮಾಶಂಕರ್ ಭಾ.ಆ.ಸೇ ರವರೇ,

ಕರ್ನಾಟಕ ವಿಧಾನ ಪರಿಷತ್ತಿನ ಸರ್ಕಾರಿ ಭರವಸೆಗಳ ಸಮಿತಿಯು ದಿ:20.06.2019ರಂದು ನನ್ನ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆಗೆ ಸಂಬಂಧಿಸಿದ ಭರವಸೆ ಸಂ:5560/2014 ಅದಿ "ಶೈಕ್ಷಣಿಕ ವರ್ಷದ ಮಧ್ಯದಲ್ಲಿ ನಿವೃತ್ತರಾಗುವ ಅನುದಾನಿತ ಶಾಲಾ ಶಿಕ್ಷಕರನ್ನು ಮುಂದುವರೆಸುವ ಬಗ್ಗೆ" ಚರ್ಚಿಸುವ ಸಂದರ್ಭದಲ್ಲಿ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಶೈಕ್ಷಣಿಕ ವರ್ಷದ ಮಧ್ಯದಲ್ಲಿ ನಿವೃತ್ತರಾಗುವ ಶಿಕ್ಷಕರನ್ನು ಶೈಕ್ಷಣಿಕ ವರ್ಷದ ಕೊನೆಯವರೆಗೆ ಮುಂದುವರೆಸಲು ಸರ್ಕಾರದ ಅನುಮತಿ ಇರುತ್ತದೆ. ಅದೇ ರೀತಿ ಅನುದಾನಿತ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಶೈಕ್ಷಣಿಕ ವರ್ಷದ ಮಧ್ಯದಲ್ಲಿ ನಿವೃತ್ತರಾಗುವ ಶಿಕ್ಷಕರನ್ನು ಮುಂದುವರೆಸಬೇಕೆಂದು ಸಮಿತಿಯು ಈ ಮೂಲಕ ನಿರ್ದೇಶನವನ್ನು ನೀಡಿರುತ್ತದೆ. ಇದನ್ನು ಪಾಲಿಸಲು ಸೂಕ್ತ ಆಡಳಿತಾತ್ಮಕ ನಿರ್ದೇಶನ ನೀಡಬೇಕೆಂದು ವಿನಂತಿಸುತ್ತೇನೆ. ಸಮಿತಿಯ ನಡವಳಿಯ ಉದ್ಧೃತ ಭಾಗವನ್ನು ಇದರೊಂದಿಗೆ ಲಗತ್ತಿಸಲಾಗಿದೆ.

ಈ ಕುರಿತಂತೆ ಕೈಗೊಂಡ ಕ್ರಮದ ಬಗ್ಗೆ ಮಾಹಿತಿ ನೀಡಲು ವಿನಂತಿಸಲಾಗಿದೆ.
ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,
(ಕೆ.ಸಿ.ಕೊಂಡಯ್ಯ)

ಶ್ರೀ ಉಮಾಶಂಕರ್ ಭಾ.ಆ.ಸೇ,
ಪ್ರಧಾನ ಕಾರ್ಯದರ್ಶಿಗಳು,
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ,
ಕರ್ನಾಟಕ ಸರ್ಕಾರ, ಬೆಂಗಳೂರು.

The Embassy, Flat No. 121, 15, Ali Asker Road, BANGALORE - 560 052 ★ Tel. : 2235 1351, 2235 1353, Fax : 2235 1352
32-A, Y. Nagesh Sastry Nagar, 1st Cross, BELLARY - 583 101 ★ Tel. : 08392-258333 / 258111 258444, Fax : 258222

H9

ದಿನಾಂಕ 28.02.2019 ರಂದು ನಡೆಯಲಿರುವ ಕರ್ನಾಟಕ ವಿಧಾನ ಪರಿಷತ್ತಿನ ಸರ್ಕಾರಿ ಭರವಸೆಗಳ ಸಮಿತಿ ಸಭೆಗೆ ಮಾಹಿತಿ ಒದಗಿಸುವ ಕುರಿತು.

ಭರವಸೆ ಸಂಖ್ಯೆ: 4936 (ಕ್ರಮ ಸಂಖ್ಯೆ: 26)

| ಕ್ರಮ ಸಂಖ್ಯೆ | ಭರವಸೆ ಸಂಖ್ಯೆ | ಆಧಾರ ಮತ್ತು ದಿನಾಂಕ | ವಿಷಯ | ಆಶ್ವಾಸನೆ | ತೆಗೆದುಕೊಂಡ ಕ್ರಮದ ಬಗ್ಗೆ ಇತ್ತೀಚಿನ ಮಾಹಿತಿ |
|---|---|---|---|---|---|
| | 4936 | ಚುಗುಪ್ರ 74 ಶ್ರೀ ಬಸವರಾಜ ಹೊರಟ್ಟಿ ವಿಪಸ ದಿನಾಂಕ 03.02.2015ರ ತಡೆಹಿಡಿಯಲಾದ ಪ್ರಶ್ನೆ ದಿನಾಂಕ 10.02.2015 | ಲೋಕೋಪಯೋಗಿ ಇಲಾಖೆಯಲ್ಲಿ ದುರುಪಯೋಗ ಪಡಿಸಿಕೊಂಡ ಹಣವನ್ನು ವಸೂಲು ಮಾಡುವ ಬಗ್ಗೆ. | ತಪ್ಪಿತಸ್ಥರು ಯಾರಿದ್ದಾರ ಅವರ ಮೇಲೆ ಕೂಡಲೇ ತನಿಖೆ ಕೈಗೊಂಡು ಶಿಕ್ಷೆ ವಿಧಿಸಿ ಅವರಿಂದ ದುರುಪಯೋಗ ವಾಗಿರುವ ಹಣವನ್ನು ರಿಕವರಿ ಮಾಡುವ ಬಗ್ಗೆ ಸರ್ಕಾರ ತಪ್ಪದೇ ಕ್ರಮ ತೆಗೆದುಕೊಳ್ಳುತ್ತದೆ ಎಂದು ಮಾನ್ಯ ಲೋಕೋಪಯೋಗಿ ಸಚಿವರು ತಿಳಿಸಿದರು. | ಪ್ರಕರಣಗಳಿಗೆ ಸಂಬಂಧಿಸಿದಂತೆ ಇತ್ತೀಚಿನ ಮಾಹಿತಿಯನ್ನು ಅನುಬಂಧದಲ್ಲಿ ಒದಗಿಸಲಾಗಿದೆ. |

ಲೋಇ: 184 :ಸೇಇವಿ:2017

23/2/19

(ಡಾ: ಕೆ.ಎಸ್. ಕೃಷ್ಣಾರೆಡ್ಡಿ)
ಸರ್ಕಾರದ ಕಾರ್ಯದರ್ಶಿ,
ಲೋಕೋಪಯೋಗಿ, ಬಂದರು ಮತ್ತು
ಒಳನಾಡು ಜಲಸಾರಿಗೆ ಇಲಾಖೆ

ಅನುಬಂಧ-IX

# Official Vacancy Position in ULBs

Directorate of Municipal Administration

KMDS enabling municipal e Governance

ಅನುಬಂಧ-IX

Role: Report Viewer | Username: mrc_view

Reports Home    Logout

## Working strength of each category of posts

Corporation: Davanagere

GetReport

| Sl No | Cadre Name | Sanction Strength | Working Strength | Municipal Service | Deputation | Daily Wages | Total No of Vacant Post | Date of Last Updation |
|---|---|---|---|---|---|---|---|---|
| | | | | Grade A | | | | |
| 1 | Commissioner | 1 | 1 | 0 | 1 | 0 | 0 | 30/12/2017 |
| 2 | Additional Commissioner | 0 | 0 | | | | 0 | 30/12/2017 |
| 3 | Deputy Commissioner(Administration) | 1 | 1 | 0 | 1 | 0 | 0 | 30/12/2017 |
| 4 | Deputy Commissioner (Dev) | 1 | 1 | 0 | 1 | 0 | 0 | 30/12/2017 |
| 5 | Deputy Commissioner (Rev) | 1 | 1 | 0 | 1 | 0 | 0 | 30/12/2017 |
| 6 | Chief Accounts Officer | 1 | 1 | 0 | 1 | 0 | 0 | 30/12/2017 |
| 7 | Chief Audit Officer | 1 | 0 | 0 | 0 | 0 | 1 | 30/12/2017 |
| 8 | Town Planning Officer | 1 | 0 | 0 | 0 | 0 | 1 | 30/12/2017 |
| 9 | Executive Engineer (Electrical) | 1 | 1 | 0 | 1 | 0 | 0 | 30/12/2017 |
| 10 | Executive Engineer (Civil) | 1 | 1 | 0 | 1 | 0 | 0 | 30/12/2017 |
| 11 | Executive Engineer (WS & UGD) | 1 | 1 | 0 | 1 | 0 | 0 | 30/12/2017 |
| 12 | Law Officer | 1 | 0 | 0 | 0 | 0 | 1 | 30/12/2017 |
| 13 | Corporation Health Officer | 1 | 0 | 0 | 0 | 0 | 1 | 30/12/2017 |
| 14 | Council Secretary | 1 | 0 | 0 | 0 | 0 | 1 | 30/12/2017 |
| 15 | Public Relation Officer | 1 | 0 | 0 | 0 | 0 | 1 | 30/12/2017 |

| | | | | | | | | |
|---|---|---|---|---|---|---|---|---|
| 17 | Assistant Executive Engineer (Electrical) | 1 | 1 | 0 | 1 | 0 | 0 | 30/12/2017 |
| 18 | Assistant Executive Engineer (Civil) | 1 | 1 | 0 | 1 | 0 | 0 | 30/12/2017 |
| 19 | Assistant Executive Engineer (WS/UGD) | 3 | 3 | 0 | 3 | 0 | 0 | 30/12/2017 |
| 20 | Technical Assistant (Env) | 1 | 0 | 0 | 0 | 0 | 1 | 30/12/2017 |
| 21 | Technical Assistant (e-gov) | 1 | 1 | 0 | 0 | 1 | 0 | 30/12/2017 |
| 22 | Accounts Officer | 1 | 1 | 0 | 1 | 0 | 0 | 30/12/2017 |
| 23 | Health Officer | 1 | 0 | 0 | 0 | 0 | 1 | 30/12/2017 |
| 24 | Veterinary Officer | 1 | 1 | 0 | 1 | 0 | 0 | 30/12/2017 |
| 25 | Assistant Town Planning Officer | 1 | 0 | 0 | 0 | 0 | 1 | 30/12/2017 |
| 26 | Development Officer | 3 | 1 | 0 | 1 | 0 | 2 | 30/12/2017 |
| | **Total** | **31** | **17** | **0** | **16** | **1** | **14** | |
| | | | | **Grade B** | | | | |
| 27 | Assistant Council Secretary | 1 | 0 | 0 | 0 | 0 | 1 | 30/12/2017 |
| 28 | Estate Officer | 1 | 0 | 0 | 0 | 0 | 1 | 30/12/2017 |
| 29 | Office Assistant (Revenue) | 1 | 0 | 0 | 0 | 0 | 1 | 30/12/2017 |
| 30 | Assistant Engineer (Electrical) | 4 | 4 | 4 | 0 | 0 | 0 | 30/12/2017 |
| 31 | Assistant Engineer (Civil) | 4 | 4 | 4 | 0 | 0 | 0 | 30/12/2017 |
| 32 | Assistant Engineer (WS) | 4 | 2 | 0 | 2 | 0 | 2 | 30/12/2017 |
| 33 | Assistant Engineer (UGD) | 4 | 3 | 0 | 3 | 0 | 1 | 30/12/2017 |
| 34 | Environmental Engineer | 4 | 2 | 1 | 1 | 0 | 2 | 30/12/2017 |
| 35 | Inventory Engineer | 1 | 0 | 0 | 0 | 0 | 1 | 30/12/2017 |
| 36 | Office Assistant (Administration) | 1 | 0 | 0 | 0 | 0 | 1 | 30/12/2017 |
| 37 | Assistant Director (Statistics) | 1 | 1 | 0 | 1 | 0 | 0 | 30/12/2017 |
| 38 | Audit Officer | 1 | 0 | 0 | 0 | 0 | 1 | 30/12/2017 |

| | | | | | | | | |
|---|---|---|---|---|---|---|---|---|
| 40 | Revenue Officer | 3 | 2 | 1 | 1 | 0 | 1 | 30/12/2017 |
| 41 | Account Superintendent | 1 | 1 | 0 | 1 | 0 | 0 | 30/12/2017 |
| | Total | 32 | 19 | 10 | 9 | 0 | 13 | |
| | **Grade C** | | | | | | | |
| 42 | Community Affairs Officers | 3 | 2 | 0 | 2 | 0 | 1 | 30/12/2017 |
| 43 | Assistant Statistical Officer | 1 | 1 | 0 | 1 | 0 | 0 | 30/12/2017 |
| 44 | Office Manager | 15 | 8 | 8 | 0 | 0 | 7 | 30/12/2017 |
| 45 | Assistant Revenue Officer | 3 | 1 | 0 | 1 | 0 | 2 | 30/12/2017 |
| 46 | Committee Secretary | 4 | 0 | 0 | 0 | 0 | 4 | 30/12/2017 |
| 47 | Survey Supervisor | 2 | 0 | 0 | 0 | 0 | 2 | 30/12/2017 |
| 48 | Junior Engineer (electrical) | 4 | 3 | 3 | 0 | 0 | 1 | 30/12/2017 |
| 49 | Junior Engineer (Civil) | 14 | 10 | 8 | 2 | 0 | 4 | 30/12/2017 |
| 50 | Junior Engineer (WS) | 7 | 0 | 0 | 0 | 0 | 7 | 30/12/2017 |
| 51 | Junior Engineer (UGD) | 7 | 0 | 0 | 0 | 0 | 7 | 30/12/2017 |
| 52 | Assistant Planner | 2 | 0 | 0 | 0 | 0 | 2 | 30/12/2017 |
| 53 | Senior Health Inspector 9 | 7 | 0 | 0 | 0 | 0 | 7 | 30/12/2017 |
| 54 | Accountant | 5 | 2 | 1 | 0 | 1 | 3 | 30/12/2017 |
| 55 | Surveyor | 3 | 0 | 0 | 0 | 0 | 3 | 30/12/2017 |
| 56 | Water Supply Operator 1 | 0 | 0 | | | | 0 | 30/12/2017 |
| 57 | UGD Operator 7 | 0 | 0 | | | | 0 | 30/12/2017 |
| 58 | Storekeeper | 1 | 0 | 0 | 0 | 0 | 1 | 30/12/2017 |
| 59 | Record Keeper | 1 | 0 | 0 | 0 | 0 | 1 | 30/12/2017 |
| 60 | Junior Programmer | 5 | 3 | 0 | 0 | 3 | 2 | 30/12/2017 |
| 61 | Auditor | 2 | 0 | 0 | 0 | 0 | 2 | 30/12/2017 |

| | | | | | | | | |
|---|---|---|---|---|---|---|---|---|
| 63 | Food Inspector | 1 | 0 | 0 | 0 | 0 | 1 | 30/12/2017 |
| 64 | Stenographer | 24 | 0 | 0 | 0 | 0 | 24 | 30/12/2017 |
| 65 | FDA | 27 | 27 | 27 | 0 | 0 | 0 | 30/12/2017 |
| 66 | FGRI | 12 | 9 | 8 | 1 | 0 | 3 | 30/12/2017 |
| 67 | Horticulture Inspector | 3 | 2 | 2 | 0 | 0 | 1 | 30/12/2017 |
| 68 | Work Inspector | 30 | 1 | 0 | 1 | 0 | 29 | 30/12/2017 |
| 69 | Water Supply Inspector | 6 | 0 | 0 | 0 | 0 | 6 | 30/12/2017 |
| 70 | UGD Inspector | 6 | 0 | 0 | 0 | 0 | 6 | 30/12/2017 |
| 71 | Community Organiser | 12 | 5 | 3 | 2 | 0 | 7 | 30/12/2017 |
| 72 | Electrician Grade-I | 4 | 3 | 3 | 0 | 0 | 1 | 30/12/2017 |
| 73 | Junior Health Inspector 10 | 16 | 4 | 1 | 3 | 0 | 12 | 30/12/2017 |
| 74 | Data Entry Operator | 69 | 34 | 0 | 0 | 34 | 35 | 30/12/2017 |
| 75 | Horticulture Assistant | 3 | 2 | 2 | 0 | 0 | 1 | 30/12/2017 |
| 76 | Electrician Grade-II | 4 | 0 | 0 | 0 | 0 | 4 | 30/12/2017 |
| 77 | Assistant Water Supply Operator 2 | 0 | 0 | | | | 0 | 30/12/2017 |
| 78 | Chemist 6 | 0 | 0 | | | | 0 | 30/12/2017 |
| 79 | Driver 12 | 23 | 7 | 6 | 1 | 0 | 16 | 30/12/2017 |
| 80 | Office Driver | 40 | 36 | 0 | 0 | 36 | 4 | 30/12/2017 |
| 81 | SDA | 70 | 36 | 32 | 4 | 0 | 34 | 30/12/2017 |
| 82 | Bill Collector | 45 | 24 | 23 | 1 | 0 | 21 | 30/12/2017 |
| 83 | Asst UGD Operator | 15 | 0 | 0 | 0 | 0 | 15 | 30/12/2017 |
| 84 | Dafedar | 4 | 0 | 0 | 0 | 0 | 4 | 30/12/2017 |
| 85 | Plumber 3 | 15 | 0 | 0 | 0 | 0 | 15 | 30/12/2017 |
| 86 | Sanitary Supervisor 11 | 26 | 8 | 8 | 0 | 0 | 18 | 30/12/2017 |

| | | | | | | | | |
|---|---|---|---|---|---|---|---|---|
| 88 | Senior Valve man | 15 | 4 | 4 | 0 | 0 | 11 | 30/12/2017 |
| 89 | Senior UGD Helper | 15 | 0 | 0 | 0 | 0 | 15 | 30/12/2017 |
| | Total | 575 | 234 | 140 | 20 | 74 | 341 | |
| | **Grade D** | | | | | | | |
| 90 | Water Supply Helper 4 | 48 | 41 | 41 | 0 | 0 | 7 | 30/12/2017 |
| 91 | Watchman 5 | 9 | 10 | 0 | 0 | 10 | -1 | 30/12/2017 |
| 92 | UGD Helper 8 | 99 | 73 | 43 | 0 | 30 | 26 | 30/12/2017 |
| 93 | Cleaner 13 | 23 | 18 | 7 | 0 | 11 | 5 | 30/12/2017 |
| 94 | Office Watchman | 3 | 3 | 3 | 0 | 0 | 0 | 30/12/2017 |
| 95 | Pourakarmika 14 | 633 | 275 | 275 | 0 | 0 | 358 | 30/12/2017 |
| 96 | Attender | 50 | 38 | 38 | 0 | 0 | 12 | 30/12/2017 |
| 97 | Gardener | 21 | 36 | 36 | 0 | 0 | -15 | 30/12/2017 |
| 98 | Valve man | 99 | 86 | 37 | 0 | 49 | 13 | 30/12/2017 |
| 99 | Loader | 90 | 34 | 34 | 0 | 0 | 56 | 30/12/2017 |
| 100 | Burial Ground Watchman | 12 | 0 | 0 | 0 | 0 | 12 | 30/12/2017 |
| | **Total** | **1087** | **614** | **514** | **0** | **100** | **473** | |
| | **Total of all Grades** | | | | | | | |
| | | **1725** | **884** | **664** | **45** | **175** | **841** | |

**SaveAsExcel**

Powered by Municipal Reforms Cell

Release No.:2.2.0 This OVP Application can best viewed with the resolution 1024 * 768 using Internet Explorer 7.0 or above

## ಅನುಬಂಧ - X

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 74ಕ್ಕೆ ಸಂಬಂಧಿಸಿದಂತೆ ಭರವಸೆ ಸಂಖ್ಯೆ: 4936 ಕ್ಕೆ ಇತ್ತೀಚಿನ ಮಾಹಿತಿ

| ಕ್ರ. ಸಂ. | ಪ್ರಕರಣದ ವಿವರ | ಅಧಿಕಾರಿಗಳ ಹೆಸರು ಮತ್ತು ಹುದ್ದೆ | ದುರುಪಯೋಗ ಉಂಟಾಗಿದೆ ಎನ್ನಲಾದ ಮೊತ್ತದ ವಿವರ (ರೂ.ಗಳಲ್ಲಿ) | ಷರಾ |
|---|---|---|---|---|
| 1 | 2 | 3 | 4 | 5 |
| 1 | ರಾಮನಗರ ಆರೋಗ್ಯ ವಿಶ್ವ ವಿದ್ಯಾಲಯ ನಿರ್ಮಾಣ ಕಾಮಗಾರಿಗೆ ಸಂಬಂಧಿಸಿದಂತೆ ಗುತ್ತಿಗೆದಾರರಿಗೆ ಮುಂಗಡ ಹಣ ಪಾವತಿಸಿ ಹಣ ಪಾವತಿಸಿರುವ ಕುರಿತು | 1) ಶ್ರೀ ಕೆ.ಜಯಪ್ರಕಾಶ್, ಮುಖ್ಯ ಇಂಜಿನಿಯರ್<br>2) ಶ್ರೀ ಬಿ.ಎಲ್.ರವೀಂದ್ರ ಬಾಬು, ಅಧೀಕ್ಷಕ ಇಂಜಿನಿಯರ್<br>1) ಶ್ರೀ ಬಿ.ವಿ.ಕೃಷ್ಣಮೂರ್ತಿ, ಸ.ಕಾ.ಇಂ.<br>2) ಶ್ರೀ ಎಸ್.ಎಸ್.ರಮೇಶ್ ಬಾಬು, ಸಹಾಯಕ ಕಾರ್ಯಪಾಲಕ ಇಂಜಿನಿಯರ್<br>3) ಶ್ರೀ ಚೆಲುವಯ್ಯ, ಸಹಾಯಕ ಇಂಜಿನಿಯರ್<br>4) ಶ್ರೀ ಮೊಹಮ್ಮದ್ ಷಫೀ ಉಲ್ಲಾ, ಲೆಕ್ಕಾಧಿಕಾರಿ<br>5) ಶ್ರೀ ಟಿ.ಆರ್. ಗಂಗಾಧರಯ್ಯ, ದ್ವಿತೀಯ ದರ್ಜೆ ಲೆಕ್ಕ ಸಹಾಯಕ | ರೂ.2.13 ಕೋಟಿ | (ಕಡತ ಸಂಖ್ಯೆ: ಲೋಇ 193 ಸೇಇವಿ 2008)<br>3 ಜನ ಆಪಾದಿತ ಅಧಿಕಾರಿಗಳು ಸರ್ಕಾರದಿಂದ ಜಾರಿಗೊಳಿಸಲಾದ ದೋಷಾರೋಪಣಾ ಪಟ್ಟಿಗಳನ್ನು ಕರ್ನಾಟಕ ಆಡಳಿತ ನ್ಯಾಯಮಂಡಳಿಯ ಮುಂದೆ ಅರ್ಜಿ ಸಂಖ್ಯೆ: ಅರ್ಜಿ ಸಂಖ್ಯೆ: 2616/2009, 4613/2009 ಮತ್ತು 4629/2009 ರಲ್ಲಿ ಪ್ರಶ್ನಿಸಿದ್ದು ಕರ್ನಾಟಕ ಆಡಳಿತ ನ್ಯಾಯಮಂಡಳಿಯು ಈ ಎಲ್ಲಾ ಅರ್ಜಿಗಳನ್ನು ಒಟ್ಟುಗೂಡಿಸಿ ದಿನಾಂಕ 30.1.2012 ರಂದು ನೀಡಿರುವ ತೀರ್ಪಿನಲ್ಲಿ ಆಪಾದಿತ ಅಧಿಕಾರಿಗಳಿಗೆ ಜಾರಿಗೊಳಿಸಲಾಗಿದ್ದ ದೋಷಾರೋಪಣಾ ಪಟ್ಟಿಗಳನ್ನು ಅನೂರ್ಜಿತಗೊಳಿಸಿರುತ್ತದೆ.<br>ಸದರಿ ತೀರ್ಪಿನ ವಿರುದ್ಧ ಸರ್ಕಾರವು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ದಾಖಲಿಸಿದ್ದು ಪ್ರಕರಣ ಬಾಕಿ ಇರುತ್ತದೆ.<br>(ಕಡತ ಸಂಖ್ಯೆ: ಲೋಇ 197 ಸೇಇವಿ 2009) |

| | | | | |
|---|---|---|---|---|
| 2 | ವಿಕಾಸ ಸೌಧ ನಿರ್ಮಾಣ ಕಾಮಗಾರಿಯಲ್ಲಿ ಗುಣಮಟ್ಟ ಕಳಪೆಯಾಗಿರುವ ಬಗ್ಗೆ | 1) ಶ್ರೀ ಶಿವಕುಮಾರ್,ಸ.ಇಂ.<br>2) ಶ್ರೀ ಆರ್.ವಿ.ನರಸೇಗೌಡ, ಸ.ಕಾ.ಇಂ.<br>3) ಶ್ರೀ ಎಸ್.ಜಿ.ಗೌಡಯ್ಯ, ಕಾ.ಇಂ.<br>1) ಶ್ರೀ ಬಿ.ಕೆ.ಪವಿತ್ರ, ಅ.ಇಂ.<br>2) ಶ್ರೀ ಜಿ.ಎಸ್. ನರಸಿಂಹಮೂರ್ತಿ, ಕಾರ್ಯಪಾಲಕ ಇಂಜಿನಿಯರ್<br>3) ಶ್ರೀ ಜಿ. ಮುನಿನಾರಾಯಣಸ್ವಾಮಿ, ಮು.ಇಂ. (ನಿ)<br>4) ಶ್ರೀ ಸಿ.ಜಯರಾಮ್, ಅ.ಇಂ.<br>5) ಶ್ರೀ ಟಿ.ಡಿ.ಮನಮೋಹನ್, ಮುಖ್ಯ ಇಂಜಿನಿಯರ್ (ನಿ)<br>6) ಶ್ರೀ ಪಿ.ಸಿದ್ದಪ್ಪ,ಮು.ಇಂ.(ನಿ)<br>7) ಶ್ರೀ ಬಿ.ವಿ.ರಮೇಶ್, ಸ.ಕಾ.ಇಂ.<br>8) ಶ್ರೀ ಎಂ.ನಾಗರಾಜ್,ಕಾ.ಇಂ. | – | ಪ್ರಕರಣದ ಬಗ್ಗೆ ಇಲಾಖಾ ವಿಚಾರಣೆ ನಡೆಸಲು ಸರ್ಕಾರದ ಆದೇಶ ಸಂಖ್ಯೆ: ಲೋಇ 357 ಸೇಇವಿ 2008 ದಿನಾಂಕ 19.08.2015ರಲ್ಲಿ ಮಾನ್ಯ ಲೋಕಾಯುಕ್ತರಿಗೆ ವಹಿಸಲಾಗಿತ್ತು. ಪ್ರಸ್ತುತ ಮಾನ್ಯ ಲೋಕಾಯುಕ್ತರವರು ಇಲಾಖಾ ವಿಚಾರಣೆಯನ್ನು ನಡೆಸಿ ವಿಚಾರಣಾ ವರದಿ ಹಾಗೂ ದಂಡನಾ ಶಿಫಾರಸ್ಸನ್ನು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ. ಮಾನ್ಯ ಲೋಕಾಯುಕ್ತರವರ ಶಿಫಾರಸ್ಸಿನನ್ವಯ ಪ್ರಕರಣದಲ್ಲಿನ ಒಟ್ಟು 11 ಅಧಿಕಾರಿ / ನೌಕರರ ಪೈಕಿ 05 ಜನ ಅಧಿಕಾರಿ / ನೌಕರರ ವಿರುದ್ಧದ ಆರೋಪಗಳು ಸಾಬೀತಾಗದೇ ಇರುವುದರಿಂದ ದೋಷಮುಕ್ತಗೊಳಿಸಲು ಶಿಫಾರಸ್ಸು ಮಾಡಿರುತ್ತಾರೆ. ಉಳಿದ 06 ಜನ ಅಧಿಕಾರಿಗಳ ವಿರುದ್ಧದ ಆರೋಪಗಳು ಸಾಬೀತಾಗಿರುವು ದರಿಂದ 2ನೇ ಕಾರಣ ಕೇಳುವ ನೋಟೀಸನ್ನು ಜಾರಿಗೊಳಿಸಲು ಕ್ರಮವಹಿಸಲಾಗುತ್ತಿದೆ.<br>(ಕಡತ ಸಂಖ್ಯೆ: ಲೋಇ 357 ಸೇಇವಿ 2008) |
| 3 | ಲೋ.ಇ. ಉಪ ವಿಭಾಗ, ಧಾರವಾಡ, ಇಲ್ಲಿಯ ಉಗ್ರಾಣ ಸಾಮಗ್ರಿಗಳ ದುರುಪಯೋಗದ ಬಗ್ಗೆ | 1) ದಿ: ಪಿ.ಆರ್. ಮಣ್ಣೂರ್, ಸಹಾಯಕ ಕಾರ್ಯಪಾಲಕ ಇಂಜಿನಿಯರ್<br>2) ದಿ:ಎಸ್.ಎಂ.ಮುರಳಿಕೊಪ್ಪಿ, ಸಹಾಯಕ ಕಾರ್ಯಪಾಲಕ ಇಂಜಿನಿಯರ್<br>3) ಶ್ರೀ ಕೆ.ಕೆ. ಮೇಣಸಿಹಾಳ್, ಸಹಾಯಕ ಕಾರ್ಯಪಾಲಕ | 24,30,627/- | ವಸೂಲಾತಿಗಾಗಿ ಕ್ರಮ ಕೈಗೊಳ್ಳಲಾಗುತ್ತಿದೆ |

| | | | | |
|---|---|---|---|---|
| | | ಇಂಜಿನಿಯರ್ (ನಿ)<br>4) ಶ್ರೀ ಮೋಹನ್ ಬಿನ್ ಚನ್ನಬಸಪ್ಪ ಸಾಣಿಕೊಪ್ಪ, ಸಹಾಯಕ ಕಾರ್ಯಪಾಲಕ ಇಂಜಿನಿಯರ್(ನಿ) | | |
| 4 | ಜೀರಾದ್ ಸದಾಶಿವಘಡ ರಸ್ತೆ ಕಾಮಗಾರಿಯಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರದ ಕುರಿತು | 1)ಶ್ರೀ ಸಿ.ಆರ್.ಬಳ್ಳಾರಿ, ಕಾ.ಇಂ.<br>2)ಶ್ರೀ ಕೆ.ಜಿ.ಕಡೇಲಿ, ಸ.ಕಾ.ಇಂ.<br>3)ಶ್ರೀಮತಿ ನೂತನ್ ವೈದ್ಯ, ಸ.ಕಾ.ಇಂ. | 6,31,765/- | ಅಧೀಕ್ಷಕ ಇಂಜಿನಿಯರ್, ಲೋಕೋಪಯೋಗಿ ವೃತ್ತ, ಶಿವಮೊಗ್ಗ ಹಾಗೂ ವಿಚಾರಣಾಧಿಕಾರಿಗಳು ಇಲಾಖಾ ವಿಚಾರಣೆ ಕೈಗೊಂಡು ಆರೋಪ ಸಾಬೀತಾಗಿರುವುದಿಲ್ಲವೆಂದು ಸಲ್ಲಿಸಿದ ವಿಚಾರಣಾ ವರದಿಯ ಅನುಸಾರ ಸರ್ಕಾರದ ಆದೇಶ ಸಂಖ್ಯೆ: ಲೋಇ 18 ಸೇಇವಿ 2011 ದಿನಾಂಕ 24.06.2018ರಲ್ಲಿ ದೋಷಮುಕ್ತಗೊಳಿಸಲಾಗಿದೆ.<br>(ಕಡತ ಸಂಖ್ಯೆ: ಲೋಇ 18 ಸೇಇವಿ 2011) |
| 5 | ಲೋ.ಇ. ಉಪ ವಿಭಾಗ, ಸಿಂಧನೂರು, ಇಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿಯಲ್ಲಿ ಅವ್ಯವಹಾರ ಕುರಿತು | 1) ಶ್ರೀ ಹೆಚ್.ಬಿ.ಲಿಂಗಾರೆಡ್ಡಿ, ಸ.ಕಾ.ಇಂ.<br>2) ಶ್ರೀ ವೆಂಕಟ ಡಿ.ಶಿಂಧೆ, ಸ.ಇಂ.<br>3) ಶ್ರೀ ಕಾಡಪ್ಪ ಬಿರಾದಾರ್, ಕಿ.ಇಂ. | 10,19,805/- | ಕಳಪೆ ಕಾಮಗಾರಿಗಳು ರಾಯಚೂರು ಉಪ-ವಿಭಾಗ ಹಾಗೂ ಮಾನ್ವಿ ಉಪ-ವಿಭಾಗಗಳಿಗೆ ಸಂಬಂಧಿಸಿದ್ದು, ಸದರಿ ಉಪ-ವಿಭಾಗಗಳಿಗೆ ಸಂಬಂಧಿಸಿದ ಕಾಮಗಾರಿಗಳನ್ನು ನಿರ್ವಹಿಸಿದ ಇಂಜಿನಿಯರುಗಳ ವಿರುದ್ಧ ದೋಷಾರೋಪಣಾ ಪಟ್ಟಿ ಸಲ್ಲಿಸದೇ, ಸಿಂಧನೂರು ಉಪ-ವಿಭಾಗಕ್ಕೆ ಸಂಬಂಧಿಸಿದ 3 ಜನ ಇಂಜಿನಿಯರುಗಳ ವಿರುದ್ಧ ಮಾತ್ರ ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದರಿಂದ ರಾಯಚೂರು ಮತ್ತು ಮಾನ್ವಿ ಉಪ-ವಿಭಾಗಗಳಿಂದಲೂ ನಿರ್ವಹಿಸಲಾದ ಕಾಮಗಾರಿ ಗಳಿಗೆ ಸಂಬಂಧಿಸಿದಂತೆ ಅವ್ಯವಹಾರ ಎಸಗಿರುವ ಎಲ್ಲಾ ಅಧಿಕಾರಿಗಳ ವಿರುದ್ಧವೂ ದೋಷಾರೋಪಣಾ ಪಟ್ಟಿ ತಯಾರಿಸಿ ಸಲ್ಲಿಸುವಂತೆ ಪತ್ರ ಸಂಖ್ಯೆ: ಲೋಇ 60 ಸೇಇವಿ 2011 ದಿನಾಂಕ 22.05.2014, 05.08.2014, 16.03.2016ರ ಪತ್ರಗಳಲ್ಲಿ ಮುಖ್ಯ ಇಂಜಿನಿಯರ್, ಸಂಕ(ಉ) ಧಾರವಾಡ ಇವರನ್ನು ಕೋರಲಾಗಿದ್ದು ಇದುವರೆಗೂ |

53

| | | | | |
|---|---|---|---|---|
| | | | | ಸ್ವೀಕೃತವಾಗಿರುವುದಿಲ್ಲ. ನೆನಪೋಲೆ ಹೊರಡಿಸಲಾಗಿದೆ. ದಿನಾಂಕ: 21.08.2018 ಮತ್ತು 31.12.2018 ರಂದು ನೆನಪೋಲೆಯನ್ನು ಹೊರಡಿಸಲಾಗಿದೆ.(ಕಡತ ಸಂಖ್ಯೆ: ಲೋಇ 60 ಸೇಇವಿ 2011) |
| 6 | ಚಿಂಚೊಳ್ಳಿ ಲೋ.ಇ. ಉಪ ವಿಭಾಗದಲ್ಲಿ ರಸ್ತೆ ಕಾಮಗಾರಿಯಲ್ಲಿ ಅವ್ಯವಹಾರ ಎಸಗಿರುವ ಕುರಿತು | 1) ಶ್ರೀ ನಾಗರಾಜ ಶೆಟ್ಟಿ ಅಕ್ಕ, ಕಾ.ಇಂ.<br>2) ಶ್ರೀ ಬಸವರಾಜ್ ಸುಲಗಂಟಿ, ಸ.ಕಾ.ಇಂ.<br>3) ಶ್ರೀ ಕಲ್ಲಪ್ಪ, ಕಿ.ಇಂ. | 93,380/- | ಆಪಾದಿತ ಅಧಿಕಾರಿಗಳ ವಿರುದ್ಧ ಲೋಕಾಯುಕ್ತ ಸಂಸ್ಥೆಯಿಂದ ಕೈಗೊಳ್ಳಲಾದ ಇಲಾಖಾ ವಿಚಾರಣೆಯಲ್ಲಿ ಆರೋಪ ಸಾಬೀತಾಗಿದ್ದು ಮಾನ್ಯ ಉಪಲೋಕಾಯುಕ್ತರವರು ದಂಡನೆ ಶಿಫಾರಸ್ಸು ಮಾಡಲಾದಂತೆ ಶ್ರೀ ಕಾಳಪ್ಪ, ಹಿಂದಿನ ಕಿರಿಯ ಇಂಜಿನಿಯರ್, ಇವರಿಗೆ ದಿನಾಂಕ 17.01.2018ರ ಸರ್ಕಾರದ ಆದೇಶದಲ್ಲಿ ಎರಡು ವಾರ್ಷಿಕ ವೇತನ ಬಡ್ತಿಗಳನ್ನು ಸಂಚಿತ ಪರಿಣಾಮ ಸಹಿತ ತಡೆಹಿಡಿಯುವ ದಂಡನೆಯನ್ನು ವಿಧಿಸಿದೆ ಹಾಗೂ ಶ್ರೀ ನಾಗಶೆಟ್ಟಿ ಅಕ್ಕ, ಹಿಂದಿನ ಕಾಇಂ (ಹಾಲಿ ನಿಧನ) ಇವರ ವಿರುದ್ಧದ ಇಲಾಖಾ ವಿಚಾರಣೆಯನ್ನು ಕೈಬಿಟ್ಟು ಆದೇಶಿಸಿದೆ. ಇನ್ನುಳಿದಂತೆ ಶ್ರೀ ಬಸವರಾಜ ಸುಲಗಂಟಿ, ಹಿಂದಿನ ಸಕಾಇಂ ಇವರು ಸೇವೆಯಿಂದ ನಿವೃತ್ತಿ ಹೊಂದಿರುವುದರಿಂದ ಅವರ ನಿವೃತ್ತಿ ವೇತನದ ಶೇಕಡ 10ರಷ್ಟನ್ನು 10 ವರ್ಷಗಳ ಅವಧಿಗೆ ತಡೆಹಿಡಿಯುವ ದಂಡನೆ ವಿಧಿಸಿ ದಿನಾಂಕ: 20.09.2018 ರಂದು ಆದೇಶ ಹೊರಡಿಸಿದೆ. (ಕಡತ ಸಂಖ್ಯೆ: ಲೋಇ 288 ಸೇಇವಿ 2011) |
| 7 | ಬೆಳಗಾವಿಯಲ್ಲಿ ಅನಧಿಕೃತವಾಗಿ ಮರಳು ಸಾಗಾಣಿಕೆ ನಿಯಂತ್ರಣ ಕಾಯ್ದೆಯಡಿಯಲ್ಲಿ ಜಪ್ತಿ ಮಾಡಿದ ಮರಳು | 1) ಶ್ರೀ ಕೆ.ಬಿ ವೃಷಬೇಂದ್ರ ಮೂರ್ತಿ, ಸಹಾಯಕ ಕಾರ್ಯಪಾಲಕ ಇಂಜಿನಿಯರ್(ನಿ)<br>2) ಶ್ರೀ ಎಂ.ಎಸ್. ಕಾವಳೇಕರ್, ಸಹಾಯಕ ಇಂಜಿನಿಯರ್-2 | - | ಜಪ್ತಿ ಮಾಡಿ ಬೆಳಗಾವಿ ಸರ್ಕ್ಯೂಟ್ ಹೌಸ್‌ನಲ್ಲಿ ದಾಸ್ತಾನುಮಾಡಲಾಗಿದ್ದ ಮರಳನ್ನು ಸಂರಕ್ಷಿಸದೇ ಅವ್ಯವಹಾರ ಎಸಗಿ ದುರ್ನಡತೆ ಎಸಗಿರುವುದಕ್ಕೆ ಸಂಬಂಧಿಸಿದಂತೆ(1) ಶ್ರೀ ಕೆ.ಬಿ. ವೃಷಬೇಂದ್ರಮೂರ್ತಿ, ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಹಾಗೂ (2) ಶ್ರೀ ಎಂ.ಎಸ್. ಕವಳೇಕರ, ಸಹಾಯಕ |

5H

| | | | | |
|---|---|---|---|---|
| | ಕಾಣೆಯಾಗಿರುವ ಬಗ್ಗೆ | | | ಇಂಜಿನಿಯರ್, ಇವರ ವಿರುದ್ಧ ಇಲಾಖಾ ವಿಚಾರಣೆಯನ್ನು ನಡೆಸುವ ಸಲುವಾಗಿ ಸರ್ಕಾರದ ಆದೇಶ ಸಂಖ್ಯೆ:ಲೋಇ 78 ಸೇಇವಿ 2017 ದಿನಾಂಕ: 09.05.2017 ಮಾನ್ಯ ಉಪ ಲೋಕಾಯುಕ್ತ ರವರಿಗೆ ವಹಿಸಿದೆ. ಲೋಕಾಯುಕ್ತ ಸಂಸ್ಥೆಯಲ್ಲಿ ಇಲಾಖಾ ವಿಚಾರಣೆ ಬಾಕಿ ಇದೆ.<br>(ಕಡತ ಸಂಖ್ಯೆ: ಲೋಇ 78 ಸೇಇವಿ 2017) |
| 8 | ಸಿಂಧಗಿ ಲೋ.ಇ. ಉಪ ವಿಭಾಗ ವ್ಯಾಪ್ತಿಯಲ್ಲಿಯ ದೇವರಹಿಪ್ಪರಗಿ ತಾಳಿಕೋಟಿ ಜಿಲ್ಲಾ ಮುಖ್ಯ ರಸ್ತೆಯ ಅಭಿವೃದ್ಧಿ ಕಾಮಗಾರಿಗೆ ಮುಂಗಡ ಹಣ ಪಾವತಿಸಿ ಕರ್ತವ್ಯ ಲೋಪ ಎಸಗಿರುವ ಕುರಿತು | 1) ಶ್ರೀ ರಮೇಶ್ ಡಿ. ಕಟ್ಟಿಮನಿ, ಕಾ.ಇಂ.<br>2) ಶ್ರೀ ಅಮರಪ್ಪ ಈರಪ್ಪ ನಾಗೂರು, ಸ.ಕಾ.ಇಂ. | --- | ಕಾಮಗಾರಿ ನಿರ್ವಹಿಸದೆ ಗುತ್ತಿಗೆದಾರರಿಗೆ ರೂ.83,30,729--00 ಮುಂಗಡ ಪಾವತಿಸಿ ಹಣ ದುರುಪಯೋಗ ಪಡಿಸಿಕೊಂಡಿರುವುದಕ್ಕೆ ಸಂಬಂಧಿಸಿದಂತೆ ಸದರಿ ಅಧಿಕಾರಿಗಳ ವಿರುದ್ಧ ಸರ್ಕಾರದ ಆದೇಶ ಸಂಖ್ಯೆ: ಲೋಇ 380 ಸೇಇವಿ 2011 ದಿನಾಂಕ 26.05.2012ರಲ್ಲಿ ಅಭಿಯೋಜನಾ ಮಂಜೂರಾತಿ ನೀಡಿದ್ದು, ಪ್ರಕರಣ ನ್ಯಾಯಾಲಯದಲ್ಲಿ ಬಾಕಿ ಇದೆ<br>(ಕಡತ ಸಂಖ್ಯೆ: ಲೋಇ 380 ಸೇಇವಿ 2011) |
| 9 | ಬೀದರ್ ಜಿಲ್ಲೆ ಬಾಲ್ಕಿ ತಾಲ್ಲೂಕಿನಲ್ಲಿ ನಬಾರ್ಡ್ ಆರ್.ಐ.ಡಿ.ಎಫ್.2 ರಡಿ ಹಲಬರ್ಗಾ ಬಾವಗಿ ಕಮಟಾಣ್ ರಸ್ತೆ ಕಾಮಗಾರಿಯಲ್ಲಿ ಅವ್ಯವಹಾರ ಕುರಿತು | 1) ಶ್ರೀ ಮಂಡೋಲಿ ಮನೋಹರ್, ಸ.ಕಾ.ಇಂ.<br>2) ಶ್ರೀ ಸಿ.ಎಸ್.ಪಾಟೀಲ್, ಸ.ಕಾ.ಇಂ<br>3) ಶ್ರೀ ರಾಜಕುಮಾರ್ ವಡ್ಡೆ, ಕಿ.ಇಂ<br>4) ಶ್ರೀ ಮಲ್ಲಿಕಾರ್ಜುನ ಶಂಭೋ ಕಿ.ಇಂ<br>5) ಶ್ರೀ ಅಶೋಕ್ ಕುಮಾರ್ ಶೆಳ್ಳಗಿ. ಪ್ರ.ದ.ಸ.<br>6) ಶ್ರೀ ರಾಜು ಡಾಂಗೆ, ಸ.ಕಾ.ಇಂ | 4,91,808/-- | ಸರ್ಕಾರದ ಆದೇಶ ಸಂಖ್ಯೆ: ಲೋಇ 328 ಸೇಇವಿ 2015 ದಿನಾಂಕ 09.09.2015ರಲ್ಲಿ ಪ್ರಕರಣವನ್ನು ಇಲಾಖಾ ವಿಚಾರಣೆಗಾಗಿ ಮಾನ್ಯ ಉಪಲೋಕಾಯುಕ್ತರವರಿಗೆ ವಹಿಸಲಾಗಿತ್ತು. ಪ್ರಸ್ತುತ ವಿಚಾರಣಾ ವರದಿ ಸ್ವೀಕೃತವಾಗಿದ್ದು ಇಲಾಖಾ ವಿಚಾರಣೆಯಲ್ಲಿ ಇವರುಗಳ ವಿರುದ್ಧದ ಆರೋಪಗಳು ಸಾಬೀತಾಗದೇ ಇರುವುದರಿಂದ ದೋಷಮುಕ್ತಗೊಳಿಸುವಂತೆ ಶಿಫಾರಸ್ಸು ಮಾಡಿರುತ್ತಾರೆ. ಈ ಬಗ್ಗೆ ಕ್ರಮವಹಿಸಲಾಗುತ್ತಿದೆ.<br>(ಕಡತ ಸಂಖ್ಯೆ: ಲೋಇ 217 ಸೇಇವಿ 2012) |

55

| | | | | |
|---|---|---|---|---|
| 10 | ಯಲ್ಲಾಪುರ ಲೋ.ಇ. ಉಪ ವಿಭಾಗ ವ್ಯಾಪ್ತಿಯಲ್ಲಿ ಕೈಗೊಂಡಿರುವ ರಸ್ತೆ ಕಾಮಗಾರಿಗಳಲ್ಲಿ ಅವ್ಯವಹಾರಗಳ ಕುರಿತು | 1) ಶ್ರೀ ಕಾಂತರಾಜು, ಸ.ಇಂ<br>2) ಶ್ರೀ ಕೆ.ಸಿ.ಮೆಣಸಿ, ಸ.ಕಾ.ಇಂ<br>3) ಶ್ರೀ ವಿಜಯಕುಮಾರ್, ಕಾ.ಇಂ | 18,53,847/- | ಲೋಕಾಯುಕ್ತ ಸಂಸ್ಥೆಯಿಂದ ಇಲಾಖಾ ವಿಚಾರಣೆ ಕೈಗೊಂಡು ಸಲ್ಲಿಸಿದ ವಿಚಾರಣಾ ವರದಿಯನ್ನು ಪರಿಶೀಲಿಸಿ ಸರ್ಕಾರದ ಆದೇಶ ಸಂಖ್ಯೆ: ಲೋಇ 23 ಸೇಇವಿ 2013 ದಿನಾಂಕ: 11.05.2017ರಲ್ಲಿ<br>(1)ಶ್ರೀ ಕಾಂತರಾಜು, ಸಹಾಯಕ ಇಂಜಿನಿಯರ್, ಇವರಿಗೆ ಅವರು ಪಡೆಯುತ್ತಿರುವ ಕಾಲಿಕ ವೇತನ ಶ್ರೇಣಿಯಲ್ಲಿ ಒಂದು ಹಂತದಷ್ಟು ಒಂದು ವರ್ಷದ ಅವಧಿಗೆ ಕೆಳಗಿಳಿಸುವ ದಂಡನೆ ವಿಧಿಸಿದೆ.<br>(2)ಶ್ರೀ ವಿಜಯಕುಮಾರ್, ಕಾರ್ಯಪಾಲಕ ಇಂಜಿನಿಯರ್, ಇವರಿಗೆ ವಾಗ್ದಂಡನೆಯನ್ನು ವಿಧಿಸಿದೆ ಹಾಗೂ (3)ದಿನಾಂಕ 27.07.2017ರ ಆದೇಶದಲ್ಲಿ ಶ್ರೀ ಕೆ.ಸಿ. ಮೆಣಸಿ, ಸಕಾಇಂ ಇವರಿಂದ ರೂ.34,758/-ವಸೂಲು ಮಾಡಲು ಆದೇಶಿಸಿದೆ.<br>(ಕಡತ ಸಂಖ್ಯೆ: ಲೋಇ 23 ಸೇಇವಿ 2013) |
| 11 | ಬಳ್ಳಾರಿ ಲೋ.ಇ. ವಿಭಾಗ ದಲ್ಲಿ ಜಿಲ್ಲಾ ನ್ಯಾಯಾಲಯ ಆವರಣ ಕಾಮಗಾರಿಯಲ್ಲಿ ಹಣ ದುರುಪಯೋಗ ವಾಗಿರುವ ಬಗ್ಗೆ | ಶ್ರೀ ಖಾಜಾ ಹುಸೇನ್ ಸ.ಕಾ.ಇಂ (ನಿ) | 6,87,854/- | ದೋಷಾರೋಪಣಾ ಪಟ್ಟಿಯನ್ನು ಜಾರಿಗೊಳಿಸಿ, ಲಿಖಿತ ಸಮಜಾಯಿಷಿ ಹೇಳಿಕೆಯನ್ನು ಸಲ್ಲಿಸಿದ್ದು, ತಮ್ಮ ವಿರುದ್ಧದ ಆರೋಪಗಳನ್ನು ಅಲ್ಲಗಳೆದಿದ್ದ ಕಾರಣ ಈ ಬಗ್ಗೆ ಅಭಿಪ್ರಾಯ ನೀಡುವಂತೆ ಮುಖ್ಯ ಇಂಜಿನಿಯರ್, ಸಂಕ(ಉ) ಧಾರವಾಡ ಇವರನ್ನು ಪತ್ರ ಸಂಖ್ಯೆ: ಲೋಇ 93 ಸೇಇವಿ 2013 ದಿನಾಂಕ 23.02.2016ರಲ್ಲಿ ಕೋರಲಾಗಿದ್ದು ಇದುವರೆವಿಗೂ ಅಭಿಪ್ರಾಯ ಸ್ವೀಕೃತವಾಗಿರುವುದಿಲ್ಲ.<br>ಈ ಬಗ್ಗೆ ದಿ:22.6.18ರಂದು ನೆನಪೋಲೆ ಕಳುಹಿಸಲಾಗಿದೆ.<br>(ಕಡತ ಸಂಖ್ಯೆ: ಲೋಇ 90 ಸೇಇವಿ 2013) |
| 12 | ಗುಬ್ಬಿ ಲೋ.ಇ. ಉಪ ವಿಭಾಗದಲ್ಲಿ ನಾಗೇನಹಳ್ಳಿ | 1) ಶ್ರೀ ದೇವೇಂದ್ರಪ್ಪ ಮಾರುತಿ, ಸ.ಇಂ<br>2) ಶ್ರೀ ಹೆಚ್.ಎನ್. ಬಸವರಾಜ್, | 3,23,408/- | ಲೋಕಾಯುಕ್ತ ಕಚೇರಿಯಿಂದ ವಿಚಾರಣಾ ವರದಿ ಸ್ವೀಕೃತವಾಗಿ ಮಾನ್ಯ ಉಪಲೋಕಾಯುಕ್ತರವರ ಶಿಫಾರಸ್ಸಿನಂತೆ ಮೂರು ಜನ |

| | | | | |
|---|---|---|---|---|
| | ರಾಂಪುರ ರಸ್ತೆ ಕಾಮಗಾರಿ ಯಲ್ಲಿ ಹಣ ದುರುಪಯೋಗ ಆಗಿರುವ ಬಗ್ಗೆ | ಸ.ಕಾ.ಇಂ<br>3) ಶ್ರೀ ಬಿ.ಮಂಜುನಾಥ್, ಕಾ.ಇಂ | | ಆಪಾದಿತ ಅಧಿಕಾರಿಗಳಿಗೆ ಸರ್ಕಾರದ ಆದೇಶ ಸಂಖ್ಯೆ: ಲೋಇ 108 ಸೇಇವಿ 13 ರಲ್ಲಿ ಈ ಕೆಳಕಂಡಂತೆ ದಂಡನೆ ವಿಧಿಸಿ ಆದೇಶಿಸಲಾಗಿದೆ.<br>(1) ಶ್ರೀ ಹೆಚ್.ಎನ್. ಬಸವರಾಜು, ಇವರ ನಿವೃತ್ತಿ ವೇತನದ ಶೇಕಡ 5 ರಷ್ಟನ್ನು ಶಾಶ್ವತವಾಗಿ ತಡೆಹಿಡಿಯಲು ಹಾಗೂ ರೂ.1,21,278/- ಅವರ ನಿವೃತ್ತಿ ವೇತನ ಹಾಗೂ ನಿವೃತ್ತಿ ಸೌಲಭ್ಯಗಳಿಂದ ವಸೂಲು ಮಾಡಲು.<br>(2) ಶ್ರೀ ಬಿ. ಮಂಜುನಾಥ<br>ಇವರ ನಿವೃತ್ತಿ ವೇತನದ ಶೇಕಡ 5 ರಷ್ಟನ್ನು ಶಾಶ್ವತವಾಗಿ ತಡೆಹಿಡಿಯಲು ಹಾಗೂ ರೂ.80,852/- ಅವರ ನಿವೃತ್ತಿ ವೇತನ ಹಾಗೂ ನಿವೃತ್ತಿ ಸೌಲಭ್ಯಗಳಿಂದ ವಸೂಲು ಮಾಡಲು ಮತ್ತು<br>(3) ಶ್ರೀ ದೇವೇಂದ್ರಪ್ಪ ಮಾರುತಿ ಭಜಂತ್ರಿ,<br>ಇವರ ಒಂದು ವಾರ್ಷಿಕ ವೇತನ ಬಡ್ತಿಯನ್ನು ಶಾಶ್ವತವಾಗಿ ತಡೆಹಿಡಿಯಲು ರೂ.1,21,278/-) ಗಳನ್ನು ಅವರ ವೇತನದಿಂದ ವಸೂಲು ಮಾಡಲು ಆದೇಶಿಸಿದೆ.<br><br>(ಕಡತ ಸಂಖ್ಯೆ: ಲೋಇ 108 ಸೇಇವಿ 13) |
| 13 | ಇ.ಎಸ್.ಐ. ಹಲಸೂರು, ಇದರ ವಾರ್ಷಿಕ ನಿರ್ವಹಣೆ ಕಾಮಗಾರಿ ಯಲ್ಲಿ ಹಣ ದುರುಪಯೋಗವಾಗಿರುವ ಬಗ್ಗೆ | 1) ಶ್ರೀ ಕೆ.ರಾಜೇಂದ್ರಕುಮಾರ್, ಕಾ.ಇಂ.<br>2) ಶ್ರೀ ಹೆಚ್.ವಿ.ರಮೇಶ್, ಸ.ಇಂ | - | ಲೋಕಾಯುಕ್ತ ಕಛೇರಿಯಿಂದ ವಿಚಾರಣಾ ವರದಿ ದಿನಾಂಕ 23.01.2018 ರಂದು ಸ್ವೀಕೃತವಾಗಿದ್ದು, ಮಾನ್ಯ ಉಪಲೋಕಾಯುಕ್ತರವರು ದಂಡನೆ ಶಿಫಾರಸ್ಸು ಮಾಡಲಾದಂತೆ ಕ್ರಮ ಕೈಗೊಳ್ಳಲು ಪರಿಶೀಲಿಸಲಾಗುತ್ತಿದೆ.<br>ಆಪಾದಿತ ಅಧಿಕಾರಿಗಳಿಗೆ 2ನೇ ಕಾರಣ ಕೇಳುವ ನೋಟೀಸು ಜಾರಿಗೊಳಿಸಲಾಗಿದ್ದು, ಶ್ರೀ ಕೆ. ರಾಜೇಂದ್ರಕುಮಾರ್ ಇವರಿಂದ ಉತ್ತರ ನಿರೀಕ್ಷಿಸಲಾಗುತ್ತಿದೆ. |

| | | | | |
|---|---|---|---|---|
| | | | | (ಕಡತ ಸಂಖ್ಯೆ: ಲೋಇ 237 ಸೇಇವಿ 2013) |
| 14 | ಕೆ.ಆರ್.ನಗರ ಲೋ.ಇ. ಉಪ ವಿಭಾಗದ ವ್ಯಾಪ್ತಿಯಲ್ಲಿ ಕಳಪೆ ಮಟ್ಟದ ಕಾಮಗಾರಿ ನಿರ್ವಹಿಸಿ ಹಣ ದುರುಪಯೋಗ ಪಡಿಸಿಕೊಂಡಿರುವ ಬಗ್ಗೆ | 1) ಶ್ರೀ ಎಂ.ಎಸ್.ಮೋಹನ್, ಕಿ.ಇಂ.<br>2) ಶ್ರೀ ಹೆಚ್.ಸಿ.ರಮೇಂದ್ರ, ಕಾ.ಇಂ.<br>3) ಶ್ರೀ ವೆಂಕಟರಾಜು, ಲೆಕ್ಕಾಧೀಕ್ಷಕರು<br>4) ಶ್ರೀ ಬಿ.ಜಿ.ರಾಮಚಂದ್ರ, ಸ.ಕಾ.ಇಂ | - | ಲೋಕಾಯುಕ್ತ ಕಛೇರಿಯಿಂದ ಅಂತಿಮ ವಿಚಾರಣಾ ವರದಿ ಸ್ವೀಕೃತವಾಗಿದ್ದು,<br>(1) ಶ್ರೀ ಎಂ.ಎಸ್.ಮೋಹನ್,<br>(2) ಶ್ರೀ ಹೆಚ್.ಸಿ. ರಮೇಂದ್ರ,<br>(3) ಶ್ರೀ ವೆಂಕಟರಾಜು, (4) ಶ್ರೀ ಬಿ.ಜಿ.ರಾಮಚಂದ್ರಯ್ಯ ಇವರುಗಳು ಪ್ರಕರಣ ನಡೆದ ಸಂದರ್ಭದಲ್ಲಿ ಪಂರಾಇಂ ವಿಭಾಗ, ಕೆ.ಆರ್.ನಗರ ವ್ಯಾಪ್ತಿಯಲ್ಲಿ ಕರ್ತವ್ಯ ನಿರ್ವಹಿಸದೇ ಇರುವುದರಿಂದ ಮಾನ್ಯ ಉಪಲೋಕಾಯುಕ್ತ ರವರು ಶಿಫಾರಸ್ಸು ಮಾಡಿರುವ ದಂಡನೆಯನ್ನು ಕೈಬಿಟ್ಟು<br>ಸರ್ಕಾರದ ಆದೇಶ ಸಂಖ್ಯೆ: ಲೋಇ 242 ಸೇಇವಿ 2013 ದಿನಾಂಕ 27.03.2018 ರಲ್ಲಿ ಅವರುಗಳನ್ನು ದೋಷಮುಕ್ತರನ್ನಾಗಿಸಿದೆ.<br>(5)ಶ್ರೀ ಚಂದ್ರಕಾಂತಸ್ವಾಮಿ ಅಂದಿನಕಿರಿಯಇಂಜಿನಿಯರ್, ಪಂರಾಇಂ ಉಪ-ವಿಭಾಗ, ಕೆ.ಆರ್.ನಗರ<br>(6)ಶ್ರೀ. ಎಂ.ಜೆ.ಶಿವಸ್ವಾಮಿ, ಅಂದಿನ ಲೆಕ್ಕಾಧೀಕ್ಷಕರು, ಪಂರಾಇಂ ವಿಭಾಗ, ಕೆ.ಆರ್.ನಗರ<br>(7)ಶ್ರೀ ಎ.ಹೆಚ್. ಶ್ರೀಧರಮೂರ್ತಿ,ಅಂದಿನ ಲೆಕ್ಕ ಸಹಾಯಕರು, ಪಂರಾಇಂ ವಿಭಾಗ, ಕೆ.ಆರ್.ನಗರ<br>ಇವರುಗಳಿಗೆ ಮೂರು ವಾರ್ಷಿಕ ವೇತನ ಬಡ್ತಿಗಳನ್ನು ಶಾಶ್ವತವಾಗಿ ತಡೆಹಿಡಿಯುವ ದಂಡನೆ ವಿಧಿಸಿದೆ ಮತ್ತು<br>(8) ಶ್ರೀ ಪಿ. ಶ್ರೀರಂಗರಾಜು, ಅಂದಿನ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್, ಕೆ.ಆರ್. ನಗರ (ಹಾಲಿ ನಿವೃತ್ತ) ನಿವೃತ್ತಿ ವೇತನದ ಶೇಕಡ 5 ರಷ್ಟನ್ನು ಶಾಶ್ವತವಾಗಿ |

| | | | | |
|---|---|---|---|---|
| | | | | ತಡೆಹಿಡಿಯುವ ದಂಡನೆ ವಿಧಿಸಿದೆ.<br><br>(ಕಡತ ಸಂಖ್ಯೆ: ಲೋಇ 242 ಸೇಇವಿ 2013) |
| 15 | ಸಿದ್ದಾಪುರ ಲೋ.ಇ. ಉಪ ವಿಭಾಗದಡಿ ವಜಗಾರ್, ಕತ್ರಿ, ಕೋಡನಮನೆ, ಕರ್ಕಿ ಹಾಕ್ಯ ರಸ್ತೆ ಕಾಮಗಾರಿ ಯಲ್ಲಿ ಹಣ ದುರುಪಯೋಗ ಪಡಿಸಿಕೊಂಡಿರುವ ಬಗ್ಗೆ | 1)ಶ್ರೀ ನಾಗರಾಜ್ ಡಿ. ನಾಯಕ್, ಸ.ಇಂ.<br>2)ಶ್ರೀ ಅರವಿಂದ ಕಣಗಿಲ್, ಅ.ಇಂ<br>3)ಶ್ರೀ ಭೀಮಾ ನಾಯಕ್, ಸ.ಇಂ | 94,000/- | ಲೋಕಾಯುಕ್ತ ಕಚೇರಿಯಿಂದ ಇಲಾಖಾ ವಿಚಾರಣೆ ಕೈಗೊಂಡು ಸಲ್ಲಿಸಿದ ವಿಚಾರಣಾ ವರದಿ ಹಾಗೂ ಮಾನ್ಯ ಉಪಲೋಕಾಯುಕ್ತ ರವರ ಶಿಫಾರಸ್ಸಿನ ಅನುಸಾರ ಸರ್ಕಾರದ ಆದೇಶ ಸಂಖ್ಯೆ: ಲೋಇ 356 ಸೇಇವಿ 2013 ದಿನಾಂಕ 29.06.2016ರಲ್ಲಿ ಆರೋಪ ಸಾಬೀತಾದ (1) ಶ್ರೀ ನಾಗರಾಜ್ ಡಿ. ನಾಯಕ್. (2) ಶ್ರೀ ಭೀಮನಾಯಕ್, ಇವರುಗಳ ಮೂರು ವಾರ್ಷಿಕ ವೇತನ ಬಡ್ತಿಗಳನ್ನು ಶಾಶ್ವತವಾಗಿ ತಡೆಹಿಡಿಯುವ ದಂಡನೆಯನ್ನು ವಿಧಿಸಿದೆ.<br>(3)ಶ್ರೀ ಅರವಿಂದ ಕಣಗಿಲ್ ಇವರ ವಿರುದ್ಧ ಆರೋಪ ಸಾಬೀತಾಗಿರುವುದಿಲ್ಲ.<br>(ಕಡತ ಸಂಖ್ಯೆ: ಲೋಇ 356 ಸೇಇವಿ 2013) |
| 16 | ಶ್ರೀ ಆರ್.ಎಂ.ದಾಬಳೆ, ಪಾಠಕಾರಿ, ಇವರಿಗೆ ಕೆಲಸ ನಿರೀಕ್ಷಕರ ವೇತನ ನೀಡಿ ಆರ್ಥಿಕ ನಷ್ಟ ಉಂಟು ಮಾಡಿರುವ ಬಗ್ಗೆ | 1)ಶ್ರೀ ಎಲ್.ಸಿ.ಗಾಣಿಗೇರ್, ಸ.ಕಾ.ಇಂ.<br>2)ಶ್ರೀ ಬಿ.ವಿ.ತೀರ್ಥ, ಸ.ಇಂ<br>3)ಶ್ರೀ ಬಿ.ಎಸ್.ನಾಗೇಂದ್ರ ಪ್ರಸಾದ್, ಸ.ಕಾ.ಇಂ<br>4)ಶ್ರೀ ಬಿ.ಡಿ.ನಸಲಾಪುರ, ಸ.ಕಾ.ಇಂ.<br>5)ಶ್ರೀ ಜಿ.ಎಂ.ಹೂಗಾರ್, ಸ.ಕಾ.ಇಂ.<br>6)ಶ್ರೀ ಆರ್.ಎಂ.ಪಾಟೀಲ್, ಸ.ಕಾ.ಇಂ<br>7)ಶ್ರೀ ಕೆ.ಬಿ.ಬಬಲೇಶ್ವರ, ದ್ವಿ.ದ.ಸ. | 4,37,977/- | ವಿಚಾರಣಾಧಿಕಾರಿಗಳಿಂದ ವಿಚಾರಣಾ ವರದಿ ಸ್ವೀಕೃತವಾಗಿದ್ದು ಆರೋಪ ಸಾಬೀತಾಗದ ಕಾರಣ ಸರ್ಕಾರದ ಆದೇಶ ಸಂಖ್ಯೆ: ಲೋಇ 372 ಸೇಇವಿ 2013 ದಿನಾಂಕ 27.06.2015ರಲ್ಲಿ ದೋಷಮುಕ್ತಗೊಳಿಸಲಾಗಿದೆ.<br><br>(ಕಡತ ಸಂಖ್ಯೆ:ಲೋಇ 372 ಸೇಇವಿ 2013) |
| 17 | ಶ್ರೀ ಎಂ.ಆರ್.ಪಾಟೀಲ್, ಪಾಠಕಾರಿ, ಇವರಿಗೆ ಕೆಲಸ | 1)ಶ್ರೀ ಎಲ್.ಸಿ.ಗಾಣಿಗೇರ್, ಸ.ಕಾ.ಇಂ.<br>2)ಶ್ರೀ ಎಂ.ಬಿ.ಪಾಟೀಲ್, ಸ.ಇಂ | 1,23,778/- | ವಿಚಾರಣಾಧಿಕಾರಿಗಳಿಂದ ವಿಚಾರಣಾ ವರದಿ ಸ್ವೀಕೃತವಾಗಿದ್ದು ಆರೋಪ ಸಾಬೀತಾಗದ ಕಾರಣ ಸರ್ಕಾರದ ಆದೇಶ ಸಂಖ್ಯೆ: |

| | | | | |
|---|---|---|---|---|
| | ನಿರೀಕ್ಷಕರ ವೇತನ ನೀಡಿ ಆರ್ಥಿಕ ನಷ್ಟ ಉಂಟು ಮಾಡಿರುವ ಬಗ್ಗೆ | 3)ಶ್ರೀ ಜೆ.ಜೆ.ಚೌಗಲೆ, ಸ.ಇಂ.<br>4)ಶ್ರೀ ಎಸ್.ಜೆ.ಸರಶೆಟ್ಟಿ, ಸ.ಕಾ.ಇಂ.<br>5)ಶ್ರೀ ಜೆ.ವಿ.ಪಾಟೀಲ್, ಸ.ಕಾ.ಇಂ.<br>6)ಶ್ರೀ ಎ.ಜಿ.ದಾಬಳೆ, ದ್ವಿ.ದ.ಸ.<br>7)ಶ್ರೀ ಪಿ.ಎಸ್.ಹಿರೇಮಠ್, ದ್ವಿ.ದ.ಸ.<br>8)ಶ್ರೀ ಎಂ.ಎಂ.ಮಳ್ಳಿ, ದ್ವಿ.ದ.ಸ.<br>9)ಶ್ರೀ ಪಿ.ಎಂ.ಶಿಂಧೆ, ದ್ವಿ.ದ.ಸ. | | ಲೋಇ 373 ಸೇಇವಿ 2013 ದಿನಾಂಕ 03.03.2015ರಲ್ಲಿ ದೋಷಮುಕ್ತಗೊಳಿಸಲಾಗಿದೆ.<br>(ಕಡತ ಸಂಖ್ಯೆ: ಲೋಇ 373 ಸೇಇವಿ 2013) |
| 18 | ತುರುವೇಕೆರೆ ತಾಲ್ಲೂಕು ಕಲ್ಕೆರೆ, ಮಾರಪ್ಪಹಳ್ಳಿ, ಗೋವಿಂದ ಘಟ್ಟ ಮತ್ತು ಕೊಳಲು ಗ್ರಾಮಗಳಲ್ಲಿ ಎಸ್.ಸಿ./ಎಸ್.ಟಿ. ಕಾಲೋನಿಯ ಆರ್.ಸಿ. ರಸ್ತೆ ಕಾಮಗಾರಿಯಲ್ಲಿ ಹಣ ದುರುಪಯೋಗ ಪಡಿಸಿಕೊಂಡಿರುವ ಬಗ್ಗೆ | 1)ಶ್ರೀ ಬಿ.ಮಂಜುನಾಥ್, ಕಾ.ಇಂ<br>2)ಶ್ರೀ ಎಂ.ಎಸ್. ನಾರಾಯಣಸ್ವಾಮಿ, ಸ.ಇಂ.<br>3)ಶ್ರೀ ಇಮ್ರಾನ್ ಖಾನ್, ಸ.ಇಂ. | 2,41,663/-- | ಪ್ರಕರಣವನ್ನು ಸರ್ಕಾರದ ಆದೇಶ ಸಂಖ್ಯೆ: ಲೋಇ 17 ಸೇಇವಿ 2014 ದಿನಾಂಕ 23.01.2014 ರಲ್ಲಿ ಇಲಾಖಾ ವಿಚಾರಣೆಗಾಗಿ ಮಾನ್ಯ ಉಪಲೋಕಾಯುಕ್ತರವರಿಗೆ<br>ವಹಿಸಲಾಗಿದ್ದು, ಲೋಕಾಯುಕ್ತ ಕಚೇರಿಯಲ್ಲಿ ಬಾಕಿ ಇದೆ. ಪ್ರಸ್ತುತ ಹಂತದ ಕುರಿತು ಮಾಹಿತಿ ಕೋರಿ ಲೋಕಾಯುಕ್ತ ಕಛೇರಿಗೆ ದಿನಾಂಕ 21.06.2018ರಂದು ಪತ್ರ ಬರೆಯಲಾಗಿದೆ. ಲೋಕಾಯುಕ್ತ ಸಂಸ್ಥೆಯಲ್ಲಿ ಇಲಾಖಾ ವಿಚಾರಣೆ ಬಾಕಿ ಇದೆ.<br>(ಕಡತ ಸಂಖ್ಯೆ: ಲೋಇ 17 ಸೇಇವಿ 2014) |
| 19 | ಶ್ರೀ ಜಿ.ವಿ.ಬಂಬಲವಾಡ್, ಪಾಠಕಾರಿ, ಇವರಿಗೆ ಕೆಲಸ ನಿರೀಕ್ಷಕರ ವೇತನ ನೀಡಿ ಆರ್ಥಿಕ ನಷ್ಟ ಉಂಟು ಮಾಡಿರುವ ಬಗ್ಗೆ | 1)ಶ್ರೀ ಎಸ್.ರಮೇಶ್, ಸ.ಕಾ.ಇಂ.<br>2)ಶ್ರೀ ಪ್ರಕಾಸ್ ಶ್ರೀಹರಿ, ಸ.ಕಾ.ಇಂ<br>3)ಶ್ರೀ ಎಂ.ಎ.ಬುಜಪ್ಪ ಗೌಡ, ಸ.ಕಾ.ಇಂ<br>4)ಶ್ರೀ ಎ.ಜಿ.ದಾಬಳೆ, ದ್ವಿ.ದ.ಸ.<br>5)ಶ್ರೀ ಎಂ.ಎಂ.ಮಣ್ಣೂರ್, ದ್ವಿ.ದ.ಸ.<br>6)ಶ್ರೀ ಆರ್.ಎಸ್. ದೇವಗೇಕರ್, ದ್ವಿ.ದ.ಸ | 1,09,856/-- | ವಿಚಾರಣಾಧಿಕಾರಿಗಳಿಂದ ವಿಚಾರಣಾ ವರದಿ ಸ್ವೀಕೃತವಾಗಿದ್ದು ಆರೋಪ ಸಾಬೀತಾಗದ ಕಾರಣ ಸರ್ಕಾರದ ಆದೇಶ ಸಂಖ್ಯೆ: ಲೋಇ 51 ಸೇಇವಿ 2014 ದಿನಾಂಕ 23.03.2016ರಲ್ಲಿ ದೋಷಮುಕ್ತಗೊಳಿಸಲಾಗಿದೆ.<br>(ಕಡತ ಸಂಖ್ಯೆ: ಲೋಇ 51 ಸೇಇವಿ 2014) |

60

| | | | | |
|---|---|---|---|---|
| | | 7)ಶ್ರೀ ಎಸ್.ಎಂ.ಚಾಂದ್‌ಶಾ, ದ್ವಿ.ದ.ಸ.<br>8)ಶ್ರೀ ಜಿ.ವಿ.ಬಂಬಲವಾಡ್, ಪಾಟಕಾರಿ | | |
| 20 | ಶ್ರೀ ಕೌಜಲಗಿ, ಪಾಠಕಾರಿ, ಇವರಿಗೆ ಕೆಲಸ ನಿರೀಕ್ಷಕರ ವೇತನ ನೀಡಿ ಆರ್ಥಿಕ ನಷ್ಟ ಉಂಟು ಮಾಡಿರುವ ಬಗ್ಗೆ | 1)ಶ್ರೀ ಎಸ್.ರಮೇಶ್, ಸ.ಕಾ.ಇಂ.<br>2)ಶ್ರೀ ಪ್ರಕಾಸ್ ಶ್ರೀಹರಿ, ಸ.ಕಾ.ಇಂ<br>3)ಶ್ರೀ ಎಂ.ಎ.ಬುಜಪ್ಪ ಗೌಡ, ಸ.ಕಾ.ಇಂ<br>4)ಶ್ರಿ ಎ.ಜಿ.ದಾಬಳೆ, ದ್ವಿ.ದ.ಸ.<br>5)ಶ್ರೀ ಎಂ.ಎಂ.ಮಣ್ಣೂರ್, ದ್ವಿ.ದ.ಸ.<br>6)ಶ್ರೀ ಆರ್.ಎಸ್. ದೇವಗೇಕರ್, ದ್ವಿ.ದ.ಸ.<br>7)ಶ್ರೀ ಎಸ್.ಎಂ.ಚಾಂದ್‌ಶಾ, ದ್ವಿ.ದ.ಸ.<br>8)ಶ್ರೀ ಜಿ.ವಿ.ಬಂಬಲವಾಡ್, ಪಾಠಕಾರಿ | 2,16,645/- | ವಿಚಾರಣಾಧಿಕಾರಿಗಳಿಂದ ವಿಚಾರಣಾ ವರದಿ ಸ್ವೀಕೃತವಾಗಿದ್ದು ಆರೋಪ ಸಾಬೀತಾಗದ ಕಾರಣ ಸರ್ಕಾರದ ಆದೇಶ ಸಂಖ್ಯೆ: ಲೋಇ 52 ಸೇಇವಿ 2014 ದಿನಾಂಕ 22.03.2016ರಲ್ಲಿ ದೋಷಮುಕ್ತಗೊಳಿಸಲಾಗಿದೆ.<br><br>(ಕಡತ ಸಂಖ್ಯೆ: ಲೋಇ 52 ಸೇಇವಿ 2014) |
| 21 | ಶ್ರೀ ಮುಲ್ತಾನಿ, ಪಾಠಕಾರಿ, ಇವರಿಗೆ ಕೆಲಸ ನಿರೀಕ್ಷಕರ ವೇತನ ನೀಡಿ ಆರ್ಥಿಕ ನಷ್ಟ ಉಂಟು ಮಾಡಿರುವ ಬಗ್ಗೆ | 1)ಶ್ರೀ ಎಲ್.ಸಿ.ಗಾಣಿಗೇರ್, ಸ.ಕಾ.ಇಂ.<br>2)ಶ್ರೀ ಎಂ.ಬಿ.ಪಾಟೀಲ್, ಸ.ಕಾ.ಇಂ<br>3)ಶ್ರೀ ಜಿ.ಜಿ.ಚೌಗಲೆ, ಸ.ಕಾ.ಇಂ<br>4)ಶ್ರಿ ಎಸ್.ಜಿ.ಸರಶೆಟ್ಟಿ, ಸ.ಕಾ.ಇಂ.<br>5)ಶ್ರೀ ಜಿ.ವಿ.ಪಾಟೀಲ್, ಸ.ಕಾ.ಇಂ.<br>6)ಶ್ರೀ ಎ.ಜಿ.ದಾಬಳೆ, ದ್ವಿ.ದ.ಸ.<br>7)ಶ್ರೀ ಆರ್.ಎಸ್.ದೇವಗೇಕರ್, ದ್ವಿ.ದ.ಸ.<br>8)ಶ್ರೀ ವಿ.ಎಸ್.ಹಿರೇಮಠ್, ದ್ವಿ.ದ.ಸ.<br>9)ಶ್ರೀ ಎಲ್.ಎಂ.ಮಳ್ಳಿ, ದ್ವಿ.ದ.ಸ.<br>10)ಶ್ರೀ ವೈ.ಎಂ.ಶಿಂಧೆ,ದ್ವಿ.ದ.ಸ. | 5,65,699/- | ವಿಚಾರಣಾಧಿಕಾರಿಗಳಿಂದ ವಿಚಾರಣಾ ವರದಿ ಸ್ವೀಕೃತವಾಗಿದ್ದು ಆರೋಪ ಸಾಬೀತಾಗದ ಕಾರಣ ಸರ್ಕಾರದ ಆದೇಶ ಸಂಖ್ಯೆ: ಲೋಇ 361 ಸೇಇವಿ 2014 ದಿನಾಂಕ 03.03.2015ರಲ್ಲಿ ದೋಷಮುಕ್ತಗೊಳಿಸಲಾಗಿದೆ.<br><br>(ಕಡತ ಸಂಖ್ಯೆ: ಲೋಇ 361 ಸೇಇವಿ 2014) |

| | | | | |
|---|---|---|---|---|
| 22 | ಲೋ.ಇ. ಉಪ ವಿಭಾಗ, ಹುನಗುಂದ, ವ್ಯಾಪ್ತಿಯ ಹುನಗುಂದ ಸುರಪುರ ರಾಜ್ಯ ಹೆದ್ದಾರಿ-60ರ ಹಾಗೂ 133ರ ಕಾಮಗಾರಿಯಲ್ಲಿ ಅವ್ಯವಹಾರದ ಕುರಿತು | 1)ಶ್ರೀ ಎಂ.ಆರ್.ವಡ್ಡರ, ಕಾ.ಇಂ.<br>2)ಶ್ರೀ ವೈ.ಜಿ.ಹಳ್ಳೂರ, ಸ.ಕಾ.ಇಂ.<br>3)ಶ್ರೀ ಟಿ.ವಿ.ಬಳುಲದ, ಸ.ಕಾ.ಇಂ.<br>4)ಶ್ರೀ ಎನ್.ವಿ.ಉಪ್ಪಿನ, ಸ.ಇಂ.<br>5)ಶ್ರೀ ಎಸ್.ಎನ್.ಪಾಟೀಲ, ಸ.ಇಂ. | – | ಪ್ರಕರಣವನ್ನು ಸರ್ಕಾರದ ಆದೇಶ ಸಂಖ್ಯೆ: ಲೋಇ 177 ಸೇಇವಿ 2014 ದಿನಾಂಕ 06.06.2014 ರಲ್ಲಿ ಇಲಾಖಾ ವಿಚಾರಣೆಗಾಗಿ ಮಾನ್ಯ ಉಪಲೋಕಾಯುಕ್ತರವರಿಗೆ ವಹಿಸಲಾಗಿದ್ದು, ಲೋಕಾಯುಕ್ತ ಕಚೇರಿಯಲ್ಲಿ ಬಾಕಿ ಇದೆ. ಪ್ರಸ್ತುತ ಹಂತದ ಕುರಿತು ಮಾಹಿತಿ ಕೋರಿ ಲೋಕಾಯುಕ್ತ ಕಛೇರಿಗೆ ದಿನಾಂಕ 21.06.2018ರಂದು ಪತ್ರ ಬರೆಯಲಾಗಿದೆ. ವಿಚಾರಣಾ ವರದಿ ಸ್ವೀಕೃತವಾಗಿರುವುದಿಲ್ಲ.<br><br>(ಕಡತ ಸಂಖ್ಯೆ:ಲೋಇ 177 ಸೇಇವಿ 2014) |
| 23 | ಮಾಗಡಿ ಲೋ.ಇ. ಉಪ ವಿಭಾಗದಲ್ಲಿ 2012-13ನೇ ಸಾಲಿನಲ್ಲಿ ಕೈಗೊಂಡಿರುವ ಅಭಿವೃದ್ಧಿ ಕಾಮಗಾರಿಗಳಲ್ಲಿ ಹಣ ದುರುಪಯೋಗವಾಗಿರುವ ಬಗ್ಗೆ | 1) ಶ್ರೀ ಕೆ.ಬಿ.ದೇವರಾಜ್, ಹಿಂದಿನ ಕಾರ್ಯದರ್ಶಿ<br>2)ಶ್ರೀ ಗೋವಿಂದ ರಾಜ್, ಆಂ.ಆ.ಸ.<br>3)ಶ್ರೀ ಸದಾಶಿವ ರೆಡ್ಡಿ ಬಿ. ಪಾಟೀಲ್, ಮು.ಇಂ.<br>4)ಶ್ರೀ ಡಿ.ಉದಯಶಂಕರ್, ಅ.ಇಂ.<br>5)ಶ್ರೀ ಗಂಗಾಧರಯ್ಯ, ಕಾ.ಇಂ.<br>6)ಶ್ರೀ ಎ.ನಟರಾಜ್, ಸ.ಕಾ.ಇಂ.<br>7)ಶ್ರೀ ಹೆಚ್.ಎಸ್.ವೆಂಕಟೇಶ್, ಸ.ಇಂ.<br>8)ಶ್ರೀ ಕಾಂತರಾಜು, ಸ.ಇಂ.<br>9)ಶ್ರೀ ಹೆಚ್.ಆರ್.ಆನಂದ ಕುಮಾರ್, ಸ.ಇಂ.<br>10)ಶ್ರೀ ಕೆ.ಸಿ.ಪ್ರಭಾಕರ್, ಕಿ.ಇಂ.<br>11)ಶ್ರೀ ಜಿ.ಕೆ.ಚಂದ್ರಶೇಖರ್, ಕಿ.ಇಂ.<br>12)ಶ್ರೀ ಟಿ.ವಿ.ಮುಕುಂದನ್, ಕಿ.ಇಂ. | 56.07 ಕೋಟಿ | ರೂ.56.07 ಕೋಟಿ ದುರುಪಯೋಗವಾಗಿದ್ದು, ಇದರಲ್ಲಿ 12.26ಕೋಟಿಗಳನ್ನು ಸಂಬಂಧಿಸಿದ ಗುತ್ತಿಗೆದಾರರಿಂದ ವಸೂಲಿ ಮಾಡಲಾಗಿದೆ ಎಂದು ಮುಖ್ಯ ಇಂಜಿನಿಯರ್, ಸಂಕ(ದ) ಬೆಂಗಳೂರು ಇವರು ವರದಿ ಮಾಡಿರುತ್ತಾರೆ.<br><br>(ಕಡತ ಸಂಖ್ಯೆ: ಲೋಇ 241 ಸೇಇವಿ 2013)<br><br>ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯಲ್ಲಿ ಜಂಟಿ ಇಲಾಖಾ ವಿಚಾರಣೆ ಪ್ರಗತಿಯಲ್ಲಿರುತ್ತದೆ. |

62

| | | | | |
|---|---|---|---|---|
| 24 | ರಾಯಚೂರು ಲೋ.ಇ. ಉಪ ವಿಭಾಗದಲ್ಲಿ ಏಂಜಲ್ ಸ್ಕೂಲ್ ರಸ್ತೆ ಕಾಮಗಾರಿಯಲ್ಲಿ ಅವ್ಯವಹಾರ | 1)ಶ್ರೀ ಕೆ.ವಿ.ಶಂಕರಪ್ಪ, ಕಾ.ಇಂ.<br>2)ಶ್ರೀಅಮರ ಕೊಂಡಯ್ಯ, ಸ.ಇಂ.<br>3)ಶ್ರೀಭೀಮಾ ರೆಡ್ಡಿ, ಸ.ಕಾ.ಇಂ. | 5,56,650/- | ಪ್ರಕರಣವನ್ನು ಸರ್ಕಾರದ ಆದೇಶ ಸಂಖ್ಯೆ: ಲೋಇ 307 ಸೇಇವಿ 2014 ದಿನಾಂಕ 12.09.2014 ರಲ್ಲಿ ಇಲಾಖಾ ವಿಚಾರಣೆಗಾಗಿ ಮಾನ್ಯ ಉಪಲೋಕಾಯುಕ್ತರವರಿಗ<br>ವಹಿಸಲಾಗಿತ್ತು. ಪ್ರಸ್ತುತ ಮಾನ್ಯ ಉಪಲೋಕಾಯುಕ್ತರವರಿಂದ ವಿಚಾರಣಾ ವರದಿ ಹಾಗೂ ದಂಡನಾ ಶಿಫಾರಸ್ಸು ಸ್ವೀಕೃತವಾಗಿದ್ದು ವಿಚಾರಣಾ ವರದಿಯಲ್ಲಿ ಆರೋಪಿತರ ವಿರುದ್ಧದ ಆರೋಪಗಳು ಸಾಬೀತಾಗಿರುವುದರಿಂದ ಆರೋಪಿತ ಅಧಿಕಾರಿಗಳಿಗೆ ದಿನಾಂಕ: 14.02.2019 ರಂದು 2ನೇ ಕಾರಣ ಕೇಳುವ ನೋಟೀಸ್ ಜಾರಿ ಮಾಡಲಾಗಿದೆ.<br><br>(ಕಡತ ಸಂಖ್ಯೆ: ಲೋಇ 307 ಸೇಇವಿ 2014) |
| 25 | ದೇವದುರ್ಗ ಲೋ.ಇ. ಉಪ ವಿಭಾಗದಲ್ಲಿ ನಬಾರ್ಡ್ ಯೋಜನೆಯಡಿ ಮಸರ್ಕಲ್ ಗ್ರಾಮದಿಂದ ಶಿವಗಂಗೆ ರಸ್ತೆ ಕಾಮಗಾರಿ | 1)ಶ್ರೀ ಕೆ.ವಿ.ಶಂಕರಪ್ಪ, ಕಾ.ಇಂ.<br>2)ಶ್ರೀ ಆರ್.ಮುದ್ದುರಾಜ್, ಸ.ಇಂ.<br>3)ಶ್ರೀಜೆ.ಬಿ.ಕಟ್ಟಿಮನಿ, ಸ.ಕಾ.ಇಂ. | 80,722/- | ಪ್ರಕರಣವನ್ನು ಸರ್ಕಾರದ ಆದೇಶ ಸಂಖ್ಯೆ: ಲೋಇ 309 ಸೇಇವಿ 2014 ದಿನಾಂಕ 12.09.2014 ರಲ್ಲಿ ಇಲಾಖಾ ವಿಚಾರಣೆಗಾಗಿ ಮಾನ್ಯ ಉಪಲೋಕಾಯುಕ್ತರವರಿಗ<br>ವಹಿಸಲಾಗಿದ್ದು, ಲೋಕಾಯುಕ್ತ ಕಚೇರಿಯಲ್ಲಿ ಬಾಕಿ ಇದೆ. ಪ್ರಸ್ತುತ ಹಂತದ ಕುರಿತು ಮಾಹಿತಿ ಕೋರಿ ಲೋಕಾಯುಕ್ತ ಕಛೇರಿಗೆ ದಿನಾಂಕ 21.06.2018ರಂದು ಹಾಗೂ 23.07.2018 ರಂದು ಪತ್ರ ಬರೆಯಲಾಗಿದೆ. ಲೋಕಾಯುಕ್ತ ಸಂಸ್ಥೆಯಲ್ಲಿ ಇಲಾಖಾ ವಿಚಾರಣೆ ಬಾಕಿ ಇದೆ.<br><br>(ಕಡತ ಸಂಖ್ಯೆ: ಲೋಇ 309 ಸೇಇವಿ 2014) |
| 26 | ಮಾನ್ವಿ ಲೋ.ಇ. ಉಪ ವಿಭಾಗದಲ್ಲಿ ಕಳಪೆ | 1)ಶ್ರೀ ಪಾಂಡುರಂಗ ರಾವ್, ಕಿ.ಇಂ.<br>2)ಶ್ರೀ ಮಧುಸೂಧನಬಾಬು, ಸ.ಇಂ. | 55,60,517/- | ಪ್ರಕರಣವನ್ನು ಸರ್ಕಾರದ ಆದೇಶ ಸಂಖ್ಯೆ: ಲೋಇ 444 ಸೇಇವಿ 2014 ದಿನಾಂಕ 19.01.2015ರಲ್ಲಿ ಇಲಾಖಾ ವಿಚಾರಣೆಗಾಗಿ |

| | | | | |
|---|---|---|---|---|
| | ಅಭಿವೃದ್ಧಿ ಕಾಮಗಾರಿಗಳ ಬಗ್ಗೆ | 1) ಶ್ರೀ ಮ್ಮಸೂದ್ ಅಲಿ, ಕಿ.ಇಂ.<br>2) ಶ್ರೀ ಅನಿಲ್‌ರಾಜ್. ಸ.ಕಾ.ಇಂ.<br>3) ಶ್ರೀ ಹೆಚ್.ಯಮನೂರಪ್ಪ, ಕಾ.ಇಂ.<br>4) ಶ್ರೀ ಸುರೇಂದ್ರ ಬಾಬು ಬಿ., ಕಾ.ಇಂ.<br>5) ಶ್ರೀ ಹೆಚ್.ಡಿ.ಬೆಳ್ಳಿಗನೂರ, ಸ.ಕಾ.ಇಂ. | | ಮಾನ್ಯ ಉಪಲೋಕಾಯುಕ್ತರವರಿಗೆ ವಹಿಸಲಾಗಿದ್ದು, ಲೋಕಾಯುಕ್ತ ಕಚೇರಿಯಲ್ಲಿ ಬಾಕಿ ಇದೆ. ಪ್ರಸ್ತುತ ಹಂತದ ಕುರಿತು ಮಾಹಿತಿ ಕೋರಿ ಲೋಕಾಯುಕ್ತ ಕಛೇರಿಗೆ ದಿನಾಂಕ 21.06.2018ರಂದು ಹಾಗೂ 23.07.2018 ರಂದು ಪತ್ರ ಬರೆಯಲಾಗಿದೆ. ಲೋಕಾಯುಕ್ತ ಸಂಸ್ಥೆಯಲ್ಲಿ ಇಲಾಖಾ ವಿಚಾರಣೆ ಬಾಕಿ ಇದೆ.<br><br>(ಕಡತ ಸಂಖ್ಯೆ: ಲೋಇ 444 ಸೇಇವಿ 2014) |
| 27 | ಶಿವಮೊಗ್ಗ ಲೋ.ಇ. ಉಪ ವಿಭಾಗ ಕಚೇರಿಯಲ್ಲಿ ಉಗ್ರಾಣ ಸಾಮಗ್ರಿಗಳ ದುರುಪಯೋಗದ ಬಗ್ಗೆ | ತಪ್ಪಿತಸ್ಥ ಅಧಿಕಾರಿ / ನೌಕರರನ್ನು ಗುರುತಿಸಬೇಕಿದೆ | 12,14,030/- | ಶಿವಮೊಗ್ಗ ಲೋಇ ಉಪ-ವಿಭಾಗ ಕಛೇರಿ ಉಗ್ರಾಣದಲ್ಲಿ ಉಂಟಾಗಿರುವ ಟಿ ಅಂಡ್ ಪಿ ಸಾಮಗ್ರಿಗಳ ಕೊರತೆಗೆ ಸಂಬಂಧಿಸಿದಂತೆ ಮೂಲ ಕಾರಣರಾದ ಅಧಿಕಾರಿ : ನೌಕರರನ್ನು ಗುರ್ತಿಸಿ ಅವರ ವಿರುದ್ಧ ದೋಷಾರೋಪಣಾ ಪಟ್ಟಿ ತಯಾರಿಸಿ ಸಲ್ಲಿಸುವಂತೆ ಮುಖ್ಯ ಇಂಜಿನಿಯರ್, ಸಂಕ(ದ) ಬೆಂಗಳೂರು ಇವರನ್ನು ದಿನಾಂಕ 25.02.2016 ರಲ್ಲಿ ಕೋರಲಾಗಿರುತ್ತದೆ. ದಿನಾಂಕ 21.06.2018 ರಂದು ನೆನಪಿಸಲಾಗಿದೆ.<br>(ಕಡತ ಸಂಖ್ಯೆ: ಲೋಇ 94 ಸೇಇವಿ 2013) |
| 28 | ತುಮಕೂರು ಲೋ.ಇ. ವಿಭಾಗದಲ್ಲಿ ಕೆ.ಆರ್.ಡಿ.ಸಿ.ಎಲ್ ಪ್ಯಾಕೇಜ್ ಎ ಮತ್ತು ಇ ಕಾಮಗಾರಿ ಬಗ್ಗೆ | 1)ಶ್ರೀ ಆರ್.ಉಮೇಶಪ್ಪ, ಕಾರ್ಯಪಾಲಕ ಇಂಜಿನಿಯರ್<br>2)ಶ್ರೀ ಬಿ.ಮಂಜುನಾಥ್, ಕಾರ್ಯಪಾಲಕ ಇಂಜಿನಿಯರ್ | 161.94 ಲಕ್ಷಗಳು | ಶ್ರೀ ಬಿ. ಮಂಜುನಾಥ್, ಕಾರ್ಯಪಾಲಕ ಇಂಜಿನಿಯರ್, (ಹಾಲಿ ನಿವೃತ್ತ) ಹಾಗೂ ಶ್ರೀ ಆರ್. ಉಮೇಶಪ್ಪ, ಅಂದಿನ ಕಾರ್ಯಪಾಲಕ ಇಂಜಿನಿಯರ್ (ಹಾಲಿ ನಿವೃತ್ತ) ಇವರುಗಳ ನಿವೃತ್ತ ಜಿಲ್ಲಾ ನ್ಯಾಯಾಧೀಶರಿಂದ ಇಲಾಖಾ ವಿಚಾರಣೆ ಕೈಗೊಂಡಿದ್ದು, ಆರೋಪ ಸಾಬೀತಾಗದ ಕಾರಣ ಸರ್ಕಾರದ ಆದೇಶ ಸಂಖ್ಯೆ: ಲೋಇ 09 ಸೇಇವಿ 2014 ದಿನಾಂಕ 22.05.2017ರಲ್ಲಿ ದೋಷಮುಕ್ತರನ್ನಾಗಿಸಿದೆ. |

| | | | | |
|---|---|---|---|---|
| | | | | (ಕಡತ ಸಂಖ್ಯೆ: ಲೋಇ 09 ಸೇಇವಿ 2014) |
| 29 | ತುರುವೇಕೆರೆ ಉಪ ವಿಭಾಗ ವ್ಯಾಪ್ತಿಯಲ್ಲಿ ಬರುವ ಕಾಮಗಾರಿಗಳ ನ್ಯೂನತೆಗಳ ಬಗ್ಗೆ | 1)ಶ್ರೀ ಆರ್.ಉಮೇಶಪ್ಪ, ಕಾರ್ಯಪಾಲಕ ಇಂಜಿನಿಯರ್<br>2)ಶ್ರೀ ಎನ್.ಎಂ.ದಯಾನಂದ, ಸ.ಕಾ.ಇಂ.<br>3)ಶ್ರೀ ಎಂ.ಎಸ್. ನಾರಾಯಣಸ್ವಾಮಿ. ಸಹಾಯಕ ಇಂಜಿನಿಯರ್-2<br>4) ಶ್ರೀ ಕೆ.ವಿ.ಉಮೇಶ್, ಸಹಾಯಕ ಇಂಜಿನಿಯರ್ | 72.86 ಲಕ್ಷಗಳು | ಇಲಾಖಾ ವಿಚಾರಣೆಯನ್ನು ಕೈಗೊಳ್ಳಲು ಶ್ರೀ ವಸಂತ್ ಹೆಚ್ ಮುಳಸಾವಳಗಿ,<br>ನಿವೃತ್ತ ಸಿವಿಲ್ ನ್ಯಾಯಾಧೀಶರು (ಹಿರಿಯ ವಿಭಾಗ) ಇವರನ್ನು ಸರ್ಕಾರದ ಆದೇಶ ಸಂಖ್ಯೆ: ಲೋಇ 230 ಸೇಇವಿ 2010 ದಿನಾಂಕ 17.05.2014ರಲ್ಲಿ<br>ವಿಚಾರಣಾಧಿಕಾರಿಯನ್ನಾಗಿ ನೇಮಕ ಮಾಡಲಾಗಿದ್ದು, ವಿಚಾರಣಾ ವರದಿ ಇದುವರೆವಿಗೂ ಸ್ವೀಕೃತವಾಗಿರುವುದಿಲ್ಲ. ದಿ: 9.9.2014, 31.12.2014, 19.05.2015, 30.03.2016 ರಂದು ನೆನಪೋಲೆ ಕಳುಹಿಸಲಾಗಿದೆ.<br><br>(ಕಡತ ಸಂಖ್ಯೆ: ಲೋಇ 230 ಸೇಇವಿ 2010) |
| 30 | ಕಡೇಹಳ್ಳಿ-ಮದ್ದನಹಳ್ಳಿ ರಸ್ತೆ ಕಿ.ಮೀ.12.00 ರಿಂದ 14.00 ರವರೆಗೆ ಕಾಮಗಾರಿ ಉಸ್ತುವಾರಿ ಕೋಶ ಗುರುತಿಸಿರುವ ಕಳಪೆ ಕಾಮಗಾರಿಗೆ ಸಂಬಂಧಿಸಿದಂತೆ | 1)ಶ್ರೀ ಬಿ.ಮಂಜುನಾಥ್, ಕಾರ್ಯಪಾಲಕ ಇಂಜಿನಿಯರ್<br>2)ಶ್ರೀ ಎನ್.ಎಂ.ದಯಾನಂದ, ಸ.ಕಾ.ಇಂ.<br>3)ಶ್ರೀ ಕೆ.ವಿ.ಉಮೇಶ್, ಸಹಾಯಕ ಇಂಜಿನಿಯರ್<br>4)ಶ್ರೀ ಬಿ.ಕೆ.ದಯಾನಂದರಾವ್, ಸ.ಕಾ.ಇಂ<br>5)ಶ್ರೀ ಸಂಪತ್ ಕುಮಾರ್, ಸ.ಇಂ.<br>6)ಶ್ರೀಮತಿ ತನುಜಾ, ಕಿ.ಇಂ. | 52.24 ಲಕ್ಷಗಳು | ವಿಚಾರಣಾಧಿಕಾರಿಯವರಿಂದ ವಿಚಾರಣಾ ವರದಿ ಸ್ವೀಕೃತವಾಗಿದ್ದು, ಆರೋಪ ಸಾಬೀತಾಗಿಲ್ಲವಾದ ಕಾರಣ ಸರ್ಕಾರದ ಆದೇಶ ಸಂಖ್ಯೆ: ಲೋಇ 377 ಸೇಇವಿ 2011 ದಿನಾಂಕ 22.01.2018ರಲ್ಲಿ ಎಲ್ಲಾ ಆಪಾದಿತ ಅಧಿಕಾರಿ : ನೌಕರರನ್ನು ದೋಷಮುಕ್ತರನ್ನಾಗಿಸಿದೆ.<br>(ಕಡತ ಸಂಖ್ಯೆ: ಲೋಇ 377 ಸೇಇವಿ 2011) |
| 31 | ಮೈಸೂರು ರಸ್ತೆ – ಕೋಕೋ ಕೋಲಾ ಫ್ಯಾಕ್ಟರಿವರೆಗಿನ 3 ಕಿ.ಮೀ. | 1)ಶ್ರೀ ಗಂಗಾಧರಯ್ಯ, ಕಾ.ಇಂ.<br>2)ಶ್ರೀ ಕಿಶೋರ್ ಜಿ. ದೇಸಾಯಿ, ಸ.ಕಾ.ಇಂ. | 71,72,000/- | ವಿಚಾರಣಾಧಿಕಾರಿಯವರಿಂದ ವಿಚಾರಣಾ ವರದಿ ಸ್ವೀಕೃತವಾಗಿದ್ದು, ಆರೋಪ ಸಾಬೀತಾಗಿಲ್ಲವಾದ ಕಾರಣ ಸರ್ಕಾರದ ಆದೇಶ ಸಂಖ್ಯೆ: ಲೋಇ 93 ಸೇಇವಿ 2013 ದಿನಾಂಕ 18.03.2017ರಲ್ಲಿ ಎಲ್ಲಾ |

69

| | | | |
|---|---|---|---|
| | | | ದಿನಾಂಕ 21.06.2018ರಂದು ನೆನಪೋಲೆ ಹೊರಡಿಸಲಾಗಿದೆ.<br><br>(ಕಡತ ಸಂಖ್ಯೆ: 404 ಸೇಇವಿ 2012) |
| 41 ರಾಯಚೂರು ಲೋಕೋಪಯೋಗಿ ಇಲಾಖೆ ವಿಭಾಗಕ್ಕೆ ಸಂಬಂಧಿಸಿದ ಉಗ್ರಾಣ ಕೊರತೆ ಬಗ್ಗೆ | 1) ಶ್ರೀ ಜಿ.ಪಂಪಣ್ಣ, ಅಧೀಕ್ಷಕ ಇಂಜಿನೀಯರು (ನಿವೃತ್ತ)<br>2) ಶ್ರೀ ಸ್ಯಾಮುಯಲ್ ದೇವಾನಿಸನ್, ಪ್ರಥಮ ದರ್ಜೆ ಉಗ್ರಾಣ ಪಾಲಕ<br>3) ಶ್ರೀ ಅಬ್ದುಲ್‌ಗಫೂರ್, ಉಗ್ರಾಣ ಅಧೀಕ್ಷಕರು | 13,51,964/-- | ಮೂಲ ದಾವೆ ಹೂಡುವುದಕ್ಕೆ ಸಂಬಂಧಿಸಿದ ಪ್ರಶ್ನಾವಳಿ ಪಟ್ಟಿಯಲ್ಲಿ ವಿವರಗಳನ್ನು ನಮೂದಿಸಿ ಸೂಕ್ತ ಪ್ರಸ್ತಾವನೆಯನ್ನು ಸಲ್ಲಿಸುವಂತೆ ಕೋರಿ ಮುಖ್ಯ ಇಂಜಿನಿಯರ್, ಸಂಕ(ದ) ಬೆಂಗಳೂರು ಇವರಿಗೆ ಹಲವು ಪತ್ರಗಳು : ಅರೆ ಸರ್ಕಾರಿ ಪತ್ರಗಳನ್ನು ಬರೆಯಲಾಗಿದ್ದು, ದಿನಾಂಕ 21.06.2018ರಂದು ಪುನಃ ನೆನಪೋಲೆ ಹೊರಡಿಸಲಾಗಿದೆ.<br><br>(ಕಡತ ಸಂಖ್ಯೆ: ಲೋಇ 231 ಸೇಇವಿ 2003) |

ಲೋಇ 184 ಸೇಇವಿ 2017

23/2/19

(ಡಾ: ಕೆ.ಎಸ್. ಕೃಷ್ಣಾರೆಡ್ಡಿ)
ಸರ್ಕಾರದ ಕಾರ್ಯದರ್ಶಿ,
ಲೋಕೋಪಯೋಗಿ, ಬಂದರು ಮತ್ತು
ಒಳನಾಡು ಜಲಸಾರಿಗೆ ಇಲಾಖೆ